ನೆಮ್ಮದಿಯ ನಾಳೆ ನಮ್ಮದು

ಹೊಸತು



ಜನವರಿ ೨೦೧೨

ಬೆಲೆ : ರೂ. ೩೫



ಈಗ ನಿಮ್ಮ ಅನುಕೂಲಕ್ಕಾಗಿ ಕೆಎಸ್‌ಎಫ್‌ಸಿ ತಂದಿದೆ

ಇ - ಸ್ಟ್ಯಾಂಪಿಂಗ್ ಸೌಲಭ್ಯ

INDIA NON JUDICIAL
Government of Karnataka
e-Stamp

ಕರ್ನಾಟಕ ರಾಜ್ಯದ ಹೆಸರಾಂತ ಹಣಕಾಸು ಸಂಸ್ಥೆಯಾದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಇನ್ನೊಂದು ಸಾಧನೆಯನ್ನು ತನ್ನದಾಗಿಸಿಕೊಂಡಿದೆ. ಕೆಎಸ್‌ಎಫ್‌ಸಿಯು ಇ-ಸ್ಟ್ಯಾಂಪಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ಅಧಿಕೃತ ಸಂಗ್ರಹಣಾ ಕೇಂದ್ರ (Authorised Collection Centre) ಆಗಿದೆ.

ಇ-ಸ್ಟ್ಯಾಂಪಿಂಗ್ ವ್ಯವಸ್ಥೆಯು ಅನುಕೂಲಕರ, ವಿಶ್ವಾಸಾರ್ಹ, ಹಸ್ತಕ್ಷೇಪ ಮಾಡಲು ಅಸಾಧ್ಯವಾದ ಪರ್ಯಾಯ ಮುದ್ರಣ ವ್ಯವಸ್ಥೆಯ ಸ್ಟ್ಯಾಂಪ್ ಪೇಪರ್ ಇದಾಗಿದೆ.

ಈಗ ಇ-ಸ್ಟ್ಯಾಂಪಿಂಗ್ ಸೌಲಭ್ಯ ದೊರೆಯುವ ಕೆಎಸ್‌ಎಫ್‌ಸಿ ಅಧಿಕೃತ ಪಾವತಿ ಕೇಂದ್ರಗಳು :
ಪ್ರಧಾನ ಕಛೇರಿ, ರಾಜಾಜಿನಗರ -ಬೆಂಗಳೂರು, ಬಾಗಲಕೋಟೆ, ಗುಲ್ಬರ್ಗ, ಕೊಪ್ಪಳ, ಬೆಳಗಾವಿ, ಉಡುಪಿ, ಮಂಗಳೂರು, ಬಳ್ಳಾರಿ, ಮೈಸೂರು, ಮಂಡ್ಯ, ಮತ್ತು ಶಿವಮೊಗ್ಗ



ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಕೆಎಸ್‌ಎಫ್‌ಸಿ ಭವನ, ಸಂ. 1/1, ತಿಮ್ಮಯ್ಯ ರೋಡ್, ಬೆಂಗಳೂರು - 560 052.
ಫೋನ್: 080-2226 3322 / 2225 8496 ಫ್ಯಾಕ್ಸ್: 080-2225 0126
ಇ-ಮೇಲ್ : fsd@ksfc.co website : www.ksfc.in
ವಲಯ ಕಛೇರಿಗಳು: ಬೆಂಗಳೂರು, ಮೈಸೂರು, ಬೆಳಗಾವಿ, ಧಾರವಾಡ, ಗುಲ್ಬರ್ಗ, ಮಂಗಳೂರು, ದಾವಣಗೆರೆ
ಶಾಖಾ ಕಛೇರಿಗಳು: ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ



ನಿಮ್ಮ ಪ್ರಗತಿ ಪಥದ ಸಂಗಾತಿ



ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011

ದೂರವಾಣಿ ಸಂಖ್ಯೆ : 26632792, 26542307 ಫ್ಯಾಕ್ಸ್ : 26542308

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987ರಲ್ಲಿ ಕಂಪನಿಯ ಅಧಿನಿಯಮ 1956ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ನಿಗಮವು ಸಮಾಜದ ದುರ್ಬಲ ಹಾಗೂ ಅಸಹಾಯಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ನೆರವಾಗುವ ಈ ಕೆಳಕಾಣಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ದೇವದಾಸಿ ಪುನರ್ವಸತಿ ಯೋಜನೆ :

* ದೇವದಾಸಿ ಪದ್ಧತಿಯು ಒಂದು ಸಾಮಾಜಿಕ ಅನಿಷ್ಟ ಪದ್ಧತಿಯಾಗಿದ್ದು ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನಗೊಳಿಸಲು ಕ್ರಮವಹಿಸಲಾಗುತ್ತಿದೆ. ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಿ ಅವರ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ / ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.
* ಮಾಜಿ ದೇವದಾಸಿ ಮಹಿಳೆಯರಿಂದ ರಚಿಸಲ್ಪಟ್ಟಿರುವ ಸ್ವಸಹಾಯ ಗುಂಪುಗಳಿಗೆ ಕಿರು ಸಾಲ ಯೋಜನೆಯಡಿ 2010-11ನೇ ಸಾಲಿನಿಂದ ಆರ್ಥಿಕ ಸೌಲಭ್ಯ ಕಲ್ಪಿಸಲಾಗುತ್ತಿದೆ.

2. ಉದ್ಯೋಗಿನಿ ಯೋಜನೆ :

* ಉದ್ಯೋಗಿನಿ ಯೋಜನೆಯಲ್ಲಿ ಮಹಿಳೆಯರು ಸ್ವಯಂ ಉದ್ಯೋಗ ಹೊಂದಲು, ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಗರಿಷ್ಠ ರೂ. 1.00 ಲಕ್ಷ ಆರ್ಥಿಕ ನೆರವನ್ನು ಬ್ಯಾಂಕುಗಳ ವತಿಯಿಂದ ಸಾಲ ಹಾಗೂ ನಿಗಮದಿಂದ ಸಹಾಯಧನವನ್ನು ನೀಡಲಾಗುತ್ತಿದೆ.

3. ಮಹಿಳಾ ತರಬೇತಿ ಯೋಜನೆ :

* ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿಗಳಾದ ಕಂಪ್ಯೂಟರ್ ತರಬೇತಿ, ಬ್ಯೂಟಿ ಪಾರ್ಲರ್, ಹೊಲಿಗೆ ತರಬೇತಿ, ಆಹಾರ ಸಂಸ್ಕರಣೆ, ಇನ್ನೂ ಮುಂತಾದ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

4. ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ :

* ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಹಾದಿಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಲಿಂಗತಾರತಮ್ಯ ಕಾರ್ಯಾಗಾರ ಏರ್ಪಡಿಸುವುದು ಮತ್ತು ಮಹಿಳೆಯರಿಗೆ ಸ್ವ ಉದ್ಯೋಗ ಪ್ರಾರಂಭಿಸಲು ಸಲಹೆ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

5. ಸ್ವ ಉದ್ಯೋಗ ಮಾರ್ಗದರ್ಶನ ಸಹಾಯವಾಣಿ :

* ಮಹಿಳೆಯರು ಸ್ವಯಂ ಉದ್ಯೋಗ / ತರಬೇತಿ ಮತ್ತು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ನಿಗಮದ ಯೋಜನೆಗಳ ಬಗ್ಗೆ ವಿವರಗಳನ್ನು ಪಡೆಯಲು "ಸ್ವ ಉದ್ಯೋಗ ಮಾರ್ಗದರ್ಶನ ಸಹಾಯವಾಣಿ" (ಉಚಿತ ಕರೆ) 1800-4259550ನ್ನು ಸಂಪರ್ಕಿಸುವುದು.

6. ಮಾರುಕಟ್ಟೆ ನೆರವು ಯೋಜನೆ :

* ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸುವುದರ ಮೂಲಕ ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ವೇದಿಕೆಯನ್ನು ಕಲ್ಪಿಸುತ್ತದೆ.

7. ಎನ್.ಹೆಚ್.ಎಫ್.ಡಿ.ಸಿ. ಯೋಜನೆ :

* ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಚಾನಲೈಸಿಂಗ್ ಏಜೆನ್ಸಿಯಾಗಿ ಸರ್ಕಾರ ನೇಮಿಸಿರುತ್ತದೆ. ಈ ಯೋಜನೆಯಡಿ ಆರ್ಥಿಕ ನೆರವನ್ನು ಪಡೆದು ರಾಜ್ಯದ ಅಂಗವಿಕಲರಿಗೆ ಆದಾಯ ತರುವಂತಹ ಚಟುವಟಿಕೆಗಳನ್ನು ಪ್ರಾರಂಭಿಸಿ ಸ್ವ ಉದ್ಯೋಗಿಗಳಾಗಲು ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

8. ಸ್ವಸಹಾಯ / ಸ್ತ್ರೀಶಕ್ತಿ ಗುಂಪುಗಳ ಆರ್ಥಿಕ ಸ್ವಾವಲಂಬನೆಗಾಗಿ ಮೈಕ್ರೊ ಕ್ರೆಡಿಟ್ ಯೋಜನೆ (ವೈಯುಕ್ತಿಕ ಕಿರು ಸಾಲ ಯೋಜನೆ) :


* ಸ್ವಸಹಾಯ / ಸ್ತ್ರೀಶಕ್ತಿ ಗುಂಪುಗಳ ಆರ್ಥಿಕ ಹಾಗೂ ಸಾಮಾಜಿಕ ಸುಧಾರಣೆಗಾಗಿ ಶೇ. 6 ಬಡ್ಡಿದರದಲ್ಲಿ ಸಾಲ ದೊರಕಿಸಲು ಆಯ್ದ ಸ್ವಸಹಾಯ / ಸ್ತ್ರೀಶಕ್ತಿ ಗುಂಪುಗಳ ಪ್ರತಿ ಸದಸ್ಯರಿಗೆ ಕನಿಷ್ಠ ರೂ. 5,000/- ಗಳ ಸಾಲವನ್ನು ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಶೇ. 6ರಷ್ಟು ಬಡ್ಡಿದರದಲ್ಲಿ ಒದಗಿಸಲಾಗುವುದು.

9. ಬೀದಿ ವ್ಯಾಪಾರಿಗಳಿಗೆ ಕಿರುಸಾಲ ಯೋಜನೆ :


* ಬೀದಿ ವ್ಯಾಪಾರದಲ್ಲಿ ನಿರತರಾಗಿರುವ ಮಹಿಳೆಯರಿಗೆ ದೈನಂದಿನ ಬೇಡಿಕೆಯನ್ನು ಪರಿಗಣಿಸಿ ಸಾಲ ಸೌಲಭ್ಯ ಕಲ್ಪಿಸುವುದು. ಪ್ರಾಯೋಗಿಕವಾಗಿ ಮೈಸೂರು, ಶಿವಮೊಗ್ಗ, ಗದಗ ಪಟ್ಟಣಗಳಲ್ಲಿ ಅನುಷ್ಠಾನ.

ಸರೋಜಿನಿ ಭಾರದ್ವಾಜ್
ಅಧ್ಯಕ್ಷರು, ಕ.ರಾ.ಮ.ಅ. ನಿಗಮ

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ಮ.ಅ. ನಿಗಮ




ಅಂಕಿತ ಪುಸ್ತಕ




ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560 004
☎ : 2661 7100, 2661 7755


ಇತ್ತೀಚಿನ ನಮ್ಮ ಕೆಲವು ಪ್ರಮುಖ ಪ್ರಕಟಣೆಗಳು














































ತಿಂಗಳ ಪತ್ರಿಕೆ
ಹೊಸತು
ನೆಮ್ಮದಿಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಸಂಪುಟ-೧೩ ಸಂಚಿಕೆ-೬ ಜನವರಿ ೨೦೧೨

ಸಂಪಾದಕ

ಜಿ. ರಾಮಕೃಷ್ಣ

ಸಹಸಂಪಾದಕರು

ಸಿ. ಆರ್. ಕೃಷ್ಣರಾವ್
ಎನ್. ಗಾಯತ್ರಿ
ಕೆ. ಎಲ್. ಗೋಪಾಲಕೃಷ್ಣಯ್ಯ
ಕೆ. ಎಸ್. ಪಾರ್ಥಸಾರಥಿ
ಕೆ. ಪಿ. ಸ್ವಾಮಿ
ಎಸ್. ಸುರೇಂದ್ರ

ವ್ಯವಸ್ಥಾಪಕ

ಎ. ಆರ್. ಉಡುಪ

ಮುದ್ರಕ-ಪ್ರಕಾಶಕ

ಆರ್. ಎಸ್. ರಾಜಾರಾಮ್
ವ್ಯವಸ್ಥಾಪಕ ನಿರ್ದೇಶಕ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಮುದ್ರಣ

ನವಕರ್ನಾಟಕ ಪ್ರಿಂಟರ್ಸ್
೧೬೭ ಮತ್ತು ೧೬೮, ೧೦ನೇ ಮುಖ್ಯ ರಸ್ತೆ
೩ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ
ಬೆಂಗಳೂರು - ೫೬೦ ೦೫೮
ದೂರವಾಣಿ : ೨೮೩೯೭೪೨೬

ಹೊಸತು ಕಚೇರಿಯ ವಿಳಾಸ



ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
೧೫, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ. ಪೆ. ೫೧೮೯
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧
ದೂರವಾಣಿ : ೩೦೫೭೮೦೨೯, ೨೨೨೦೩೫೮೦
ಫ್ಯಾಕ್ಸ್ : ೩೦೫೭೮೦೨೩
e-mail : navakarnataka@gmail.com
hosathu@gmail.com
URL : www.navakarnataka.com
http://navakarnataka.blogspot.com
http://hosathu.blogspot.com



ಹದಿಮೂರು ವರ್ಷ ಮುಗಿದರೆ ಅಜ್ಞಾತವಾಸದ ಕೊನೆ. 'ಹೊಸತು' ಓದುಗರು, ಲೇಖಕರು, ಜಾಹಿರಾತುದಾರರು ಮತ್ತು ಬೆಂಬಲಿಗರು ಪತ್ರಿಕೆಯನ್ನು ವನವಾಸ-ಅಜ್ಞಾತವಾಸಗಳಿಗೆ ನೂಕದೆ ಸದಾ ಜ್ಞಾತವಾಗಿಯೇ ಇಟ್ಟಿದ್ದಾರೆ, ಜಾಗ್ರತಾವಸ್ಥೆಯಲ್ಲಿಯೇ ಉಳಿಸಿದ್ದಾರೆ. ಅವರಿಗೆಲ್ಲಾ ಪತ್ರಿಕೆಯು ಕೃತಜ್ಞತೆ ಸಲ್ಲಿಸುತ್ತದೆ. ನಮ್ಮೆಲ್ಲರ ಜಾಗ್ರತೆ ಇಂದಿನ ಸನ್ನಿವೇಶದಲ್ಲಿ ಅತ್ಯವಶ್ಯಕ. ಅದನ್ನು ಉಳಿಸಿಕೊಳ್ಳೋಣ, ಬೆಳೆಸಿಕೊಳ್ಳೋಣ ಮತ್ತು ವಿಸ್ತರಿಸಿಕೊಳ್ಳೋಣ. ಹೊಸ ವರ್ಷದ ಶುಭಾಶಯಗಳನ್ನು ಪರಸ್ಪರ ಹೇಳಿಕೊಳ್ಳೋಣವೆಂದರೆ ಹುಮ್ಮಸ್ಸು ಬರಲಾರದಂತಹ ಪರಿಸ್ಥಿತಿ ನಮ್ಮದಾಗಿದೆ. ಸುತ್ತಲೂ ಹೊಲಸು ಅಷ್ಟೊಂದು ಹೆಚ್ಚಾಗಿದೆ, ಹೆಚ್ಚುತ್ತಿದೆ. ಯಾರನ್ನೋ ದೂಷಿಸಿ ತಟಸ್ಥರಾಗಿ ಕುಳಿತಿರಲು ಸಾಧ್ಯವಿಲ್ಲ, ಏಕೆಂದರೆ ನಾವು ತಟದಲ್ಲಿಲ್ಲ. ಹೊಳೆಯಲ್ಲಿ ಮೀಯುತ್ತಿದ್ದೇವೆ, ಹರಿಯುತ್ತಿದ್ದೇವೆ ಮತ್ತು ಸುಳಿಯಿಂದ ತಪ್ಪಿಸಿಕೊಳ್ಳಲು ಕಾತುರರಾಗಿದ್ದೇವೆ. ಬರುವ ದಿನಗಳಲ್ಲಿ ಸ್ವಚ್ಛತೆಯ ಸಂಕಥೆ ಸಾಧ್ಯವಾಗುತ್ತದೆಂದು ಆಶಿಸೋಣ, ಸಂಕಲೆಯಿಂದ ಬಿಡಿಸಿಕೊಳ್ಳೋಣ, ಸಂಗಾತಿಗಳಾಗಿ ಸಂಗರದಲ್ಲಿ ಪಾಲ್ಗೊಳ್ಳೋಣ. ಇದೆಲ್ಲದರ ಸಂಕೇತವಾಗಿ ಪತ್ರಿಕೆಯ ಹದಿಮೂರನೆಯ ವರ್ಷದ ಹನ್ನೆರಡನೆಯ ವಿಶೇಷ ಸಂಚಿಕೆಯ ಮುಖಪುಟವನ್ನು ಶ್ರೀ. ವೆಂಕಟಾಚಲಪತಿ ಅವರ ಕಲಾಕೃತಿಯು ಅಲಂಕರಿಸಿದೆ. ಮೃದು ಸ್ವಭಾವದ ಈ ಕಲಾವಿದರು ಗಡುಸಾದ ಕಂಚಿನ ಮೂರ್ತಿಗಳನ್ನು ಮಾಡುವುದರಲ್ಲಿ ಪರಿಣತರು. ಪ್ರತಿಮೆ ಮಾಡಿ, ಎರಕ ಹೊಯ್ದು, ಸುಂದರವಾದ ಮತ್ತು ಬಹ್ವರ್ಥಗಳನ್ನುಳ್ಳ ಕಲಾಕೃತಿಗಳನ್ನು ನಿರ್ಮಿಸುತ್ತಾರೆ. ಶಿಲ್ಪಕಲೆಗೆ ಮೀಸಲಾದ ರಾಜ್ಯದ ಉನ್ನತ ''ಶಿಲ್ಪಿ ಜಕಣಾಚಾರಿ ಪ್ರಶಸ್ತಿ''ಯನ್ನು ಈ ಬಾರಿ ಮಾನ್ಯ ಶ್ರೀ. ವೆಂಕಟಾಚಲಪತಿ ಅವರಿಗೆ ನೀಡಲಾಗಿದೆ. ಅವರಿಗೆ 'ಹೊಸತು' ಅಭಿನಂದನೆಗಳನ್ನು ಸಲ್ಲಿಸುತ್ತದೆ ಮತ್ತು ಅವರ ಕಲಾಕೃತಿಯೊಂದನ್ನು ಪತ್ರಿಕೆಯ ಮುಖಪುಟದಲ್ಲಿ ಬಳಸಲು ಅನುಮತಿ ನೀಡಿದ್ದಕ್ಕೆ ವಂದನೆ ಸಲ್ಲಿಸುತ್ತದೆ. ಶ್ರೀಯುತರು ರಾಜ್ಯದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಅನನ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ಸು ಪಡೆದಿದ್ದುದನ್ನು ಪತ್ರಿಕೆಯು ಹರ್ಷದಿಂದ ನೆನೆಯುತ್ತದೆ.

* * *

ನಮ್ಮ ದೇಶದ ಕೆಲವು ರಾಜ್ಯಗಳಲ್ಲಿ ಶಾಸನ ಸಭೆಗಳಿಗೆ ಚುನಾವಣೆ ಘೋಷಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಚುನಾವಣೆಯು ಏಳು ಹಂತಗಳಲ್ಲಿ ನಡೆಯುತ್ತದೆಂದು ಚುನಾವಣಾ ಆಯೋಗವು ಪ್ರಕಟಿಸಿದೆ. ಒಂದು ರಾಜ್ಯದ ಚುನಾವಣೆ ಇಷ್ಟೊಂದು ಹಂತಗಳಲ್ಲಿ ಜರುಗ ಬೇಕಾದ ಸ್ಥಿತಿಯನ್ನು ಮುಟ್ಟಿದ್ದೇವೆಯೋ ಅಥವಾ ಆಯೋಗವು ಪರಿಸ್ಥಿತಿಯನ್ನು ಉತ್ಪ್ರೇಕ್ಷಿಸಿ ಗಾಬರಿ ಹೆಚ್ಚಿಸುತ್ತಿದೆಯೋ? ಹೀಗೆಯೇ ಮುಂದುವರಿದರೆ ಒಂದೊಂದು ಸ್ಥಾನಕ್ಕೆ ಒಂದೊಂದು ದಿನ ಚುನಾವಣೆ ನಡೆಯುವ ಘಟ್ಟ ಬಹಳ ದೂರವಿರಲಾರದು. ಇಷ್ಟು ಅಡಾವುಡಿಯ ನಂತರವೂ ಚುನಾವಣೆಯೇನೂ ಭ್ರಷ್ಟ ಹಾದಿಗಳನ್ನು

ಚಂದಾ ವಿವರಗಳು

ಬಿಡಿ ಸಂಚಿಕೆ	ರೂ. ೧೨/-
ವಿಶೇಷ ಸಂಚಿಕೆ	ರೂ. ೩೫/-
ವಾರ್ಷಿಕ ಚಂದಾ	ರೂ. ೧೫೦/-
ಮೂರು ವರ್ಷಕ್ಕೆ	ರೂ. ೩೫೦/-

ನವಕರ್ನಾಟಕ ಶಾಖೆಗಳು

೫ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - ೫೬೦ ೦೦೯
✆ : ೦೮೦-೨೨೨೫೧೩೮೨

ಕೆ. ಎಸ್. ಆರ್. ರಸ್ತೆ
ಮಂಗಳೂರು - ೫೭೫ ೦೦೧
✆ : ೦೮೨೪-೨೪೪೧೦೧೬

ರಾಮಸ್ವಾಮಿ ವೃತ್ತ
ಮೈಸೂರು - ೫೭೦ ೦೨೪
✆ : ೦೮೨೧-೨೪೨೪೮೯೪

ಸ್ಟೇಷನ್ ರಸ್ತೆ
ಗುಲ್ಬರ್ಗಾ - ೫೮೫ ೧೦೨
✆ : ೦೮೪೭೨-೨೨೪೩೦೨

ತಿಂಗಳ ಪತ್ರಿಕೆ
ಹೊಸತು
ನೆಮ್ಮದಿಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಸಂಪಾದಕೀಯ


ತುಳಿಯದೆಯೇ ನಡೆಯುವುದಿಲ್ಲ. ಮಾಯಾವತಿಯವರನ್ನು ಕೆಳಗಿಳಿಸಲು ರಾಹುಲ ಗಾಂಧಿಯೆಂಬ ಯುವಕ ನಾಟಕೀಯವಾಗಿ ಅನೇ ಕಸರತ್ತುಗಳನ್ನು ಮಾಡುತ್ತಿದ್ದಾನೆ, ಜನರ ಮಧ್ಯದವನು ತಾನೆಂದು ತೋರಿಸಿಕೊಳ್ಳುವ ತಂತ್ರ ಹೂಡಿದ್ದಾನೆ. ಜಾತಿ ರಾಜಕೀಯದ ಭಾಗವಾ ಅಜಿತ್ ಸಿಂಗ್ ಈಗ ಸೋನಿಯಾ ಗಾಂಧಿ ನೇತೃತ್ವದ ಸಂಯುಕ್ತ ರಂಗ ಸೇರಿ ಕೇಂದ್ರ ಸಚಿವನಾಗಿದ್ದಾನೆ. ಮಾಯಾವತಿ ಉತ್ತರ ಪ್ರದೇಶವ ನಾಲ್ಕು ರಾಜ್ಯಗಳಾಗಿ ವಿಂಗಡಿಸಲು ಹೊರಟಿದ್ದು ಸಹ ಚುನಾವಣೆಯ ಒಂದು ತಂತ್ರವೇ, ಆದರೆ ಕೇಂದ್ರವು ಅದನ್ನು ತಳ್ಳಿಹಾಕಿ ಹಾಗಾಗುತ್ತದೆಂದು ಆಕೆಗೆ ತಿಳಿದೇ ಇತ್ತು. ಈಗ ಮನಮೋಹನ ಸಿಂಗ್ ಸರ್ಕಾರವು ಮತೀಯ ಅಲ್ಪಸಂಖ್ಯಾತರಿಗೆ ಮೀಸಲಾತಿ ಕಲ್ಪಿಸುವುದಾ ಹೇಳಿರುವುದು ಅಂಥದೇ ಇನ್ನೊಂದು ತಂತ್ರ. ಪ್ರಾಥಮಿಕ ಶಿಕ್ಷಣವನ್ನು ಪಡೆಯಲಾರದೆ ಶಿಕ್ಷಣದಿಂದ ವಂಚಿತರಾಗಿರುವವರಿಗೆ ಎ ಮೀಸಲಾತಿ ಇದ್ದರೇನು! ಅದು ಗೊತ್ತಿದ್ದೂ ಮೀಸಲಾತಿಯ ಪರ ಮತ್ತು ವಿರೋಧವಾಗಿ ಚಳವಳಿಗಳನ್ನು ಹಮ್ಮಿಕೊಳ್ಳುವುದು ಕೂ ಚುನಾವಣೆಯ ಒಂದು ತಂತ್ರ. ಅಂದರೆ, ಜನರ ದಿನನಿತ್ಯದ ಸಮಸ್ಯೆಗಳನ್ನು, ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ನೀತಿಗಳನ್ನು, ಕುರಿ ಚರ್ಚಿಸಲು ಜನರೆದುರು ಹೋಗುವುದಕ್ಕೆ ಬದಲಾಗಿ ಕುತ್ಸಿತ ಅಪಮಾರ್ಗಗಳನ್ನು ಹಿಡಿಯಲಾಗುತ್ತಿದೆ. ಇದು ನಮ್ಮ ಘೋರ ದುರಂತ. ಏ ಹಂತದಲ್ಲಿ ನಡೆಸಿದರೂ ಅಷ್ಟೆ, ಎಪ್ಪತ್ತು ಹಂತಗಳಲ್ಲಿ ನಡೆಸಿದರೂ ಅಷ್ಟೆ, ಚುನಾವಣೆಯಲ್ಲಿ ದೇಶದ ಸಂಪತ್ತು, ಜನರ ಆಕಾಂಕ್ಷೆ, ಆಡಳಿತ ಭ್ರಷ್ಟತೆ, ಇವು ಆದ್ಯ ವಿಷಯಗಳಾಗಿ ಗಣನೆಗೆ ಬರದಿದ್ದರೆ ಹೆಸರಿಗೆ ಮಾತ್ರ ನಮ್ಮದು ಪ್ರಜಾಪ್ರಭುತ್ವವಾಗುತ್ತದೆ. ಮನಮೋಹನ ಸಿಂ ಸರ್ಕಾರವು ಈ ಮೂರು ವಿಷಯಗಳನ್ನೂ ಗುಂಡಿಗೆ ತಳ್ಳಿ ಮೇಲೆ ಕಲ್ಲುಚಪ್ಪಡಿ ಎಳೆದಿದೆ. ಜನರ ಆಕಾಂಕ್ಷೆ ದೇಶದೊಳಕ್ಕೆ ವಾಲ್‌ಮಾರ್ಟ್ ತರುವುದಲ್ಲ, ದೇಶದ ಸಂಪತ್ತು ಎಂದರೆ ಗೋದಾವರಿ ಪ್ರದೇಶದ ಅನಿಲವನ್ನು ಅಂಬಾನಿಗೆ ಕೊಡುವುದಲ್ಲ ಮತ್ತು ಆಡಳಿತದ ಭ್ರಷ್ಟತೆ ಎಂದ ತಿಪ್ಪೆ ಸಾರಿಸುವ ಲೋಕಪಾಲ ಮಸೂದೆಯಲ್ಲ. ಇಂತಹ ಬೇರೆ ಹತ್ತಾರು ಅಂಶಗಳನ್ನು ಪರಾಮರ್ಶೆ ಮಾಡಿಕೊಳ್ಳಬೇಕು.

ಇನ್ನೊಂದು ರೀತಿಯ ರಾಜಕೀಯ ಮುಲ್ಲೈಪೆರಿಯಾರ್ ಅಣೆಕಟ್ಟಿನ ಸಂದರ್ಭದಲ್ಲಿ ಜರುಗುತ್ತಿದೆ. ಕೇರಳದ ಜನರಿಗೆ ತಮಿಳುನಾಡಿನ ಕಿರುಕುಳ ಕೊಡುತ್ತಿರುವುದು ನಮ್ಮ ರಾಜ್ಯದ ಪತ್ರಿಕೆಗಳಲ್ಲಿ ವರದಿಯಾಗುತ್ತಿಲ್ಲ. ಕಾವೇರಿ ಸಂದರ್ಭದಲ್ಲಿ ಕರ್ನಾಟಕ - ತಮಿಳುನಾ ವಾತಾವರಣವನ್ನದು ನೆನಪಿಸುವಂತಿದೆ. ಈ ಶತಮಾನದಲ್ಲಿ ನೀರಿಗಾಗಿ ಎಲ್ಲೆಲ್ಲೂ ಕೋಲಾಹಲ ಉಂಟಾಗುತ್ತದೆಂದು ಹೇಳುತ್ತಾರೆ. ಬಿಕ್ಕಟ್ಟು ಪ್ರಮಾಣದ್ದು. ಒಂದು ಶತಮಾನಕ್ಕೂ ಹಿಂದೆ ನಿರ್ಮಿಸಿದ ಅಣೆಕಟ್ಟಿನ ಭದ್ರತೆಯ ಅವಧಿ ನಿರಂತರವಲ್ಲ. ಅದನ್ನು ಆಗಾಗ್ಗೆ ಪರೀಕ್ಷಿಸುವು ಅಗತ್ಯ. ಆದರೆ ನಮ್ಮ ಪದ್ಧತಿ ಏನಾಗಿಹೋಗಿದೆಯೆಂದರೆ ಕೇರಳದ ಪ್ರಕಾರ ಅದು ಇಂದೋ ನಾಳೆಯೋ ಒಡೆದುಹೋಗುತ್ತದೆ ಮ ತಮಿಳುನಾಡಿನ ದೃಷ್ಟಿಯಲ್ಲಿ ಅದು ಅಜರಾಮರ. ಪರಿಣತರು ಸಹ ಎಂಥದೋ ಪೂರ್ವಗ್ರಹದಿಂದ ಪರಿವೀಕ್ಷಣೆ ಮಾಡುತ್ತಿದ್ದಾರೇನೋ ಎಂ ಅನುಮಾನಕ್ಕೆ ಆಸ್ಪದವಿದೆ. ಮೂಲಭೂತ ಪ್ರಶ್ನೆ ಅಣೆಕಟ್ಟಿನ ಸುರಕ್ಷತೆಯಲ್ಲ, ಅದನ್ನು ಎರಡು ರಾಜ್ಯಗಳೂ ಮರೆಮಾಚುತ್ತಿವೆ. ನಿಜವಾ ವಿವಾದ ಇರುವುದು ನೀರಿನ ಹಂಚಿಕೆಯ ಬಗ್ಗೆ. ಒಂದು ಶತಮಾನದ ಹಿಂದಿನ ಕರಾರಿನ ಪ್ರಕಾರವೇ ಆಗಬೇಕೆಂದು ತಮಿಳುನಾ ಆಗ್ರಹಿಸುತ್ತಿದೆ; ಕಾವೇರಿ ಸಂದರ್ಭದಲ್ಲಿ ೧೯೨೪ರ ಅಸಮಾನ ಒಪ್ಪಂದದಂತೆಯೇ ಆಗಬೇಕೆಂದು ಹೇಳುವುದಿಲ್ಲವೆ, ಹಾಗೆ. ಹೊಸ ಅಣೆಕ ನಿರ್ಮಾಣವಾದರೆ ಹೊಸ ಒಪ್ಪಂದ ಸಾಧ್ಯವೆಂಬುದು ಕೇರಳದ ಲೆಕ್ಕಾಚಾರ. ವಾಸ್ತವಿಕ ವಿಷಯವನ್ನು ನೇರವಾಗಿ ಮತ್ತು ಮುಕ್ತವಾ ಪ್ರಸ್ತಾಪಿಸಲಾಗದಷ್ಟು ಜಟಿಲವಾಗಿದೆ ನಮ್ಮ ಫೆಡರಲ್ ವ್ಯವಸ್ಥೆ. ಅಲ್ಲೂ ಚುನಾವಣೆಯ ಪ್ರಜಾಪ್ರಭುತ್ವದ್ದೇ ಮೇಲುಗೈ. ನೀರಿನ ವೈಜ್ಞಾನಿಕ ಬಳ ಮತ್ತು ಅತ್ಯಧಿಕ ಉತ್ಪಾದನೆಗೆ ತಕ್ಕುದಾದ ಹಂಚಿಕೆ, ಇವನ್ನು ಗಣನೆಗೆ ತೆಗೆದುಕೊಳ್ಳಲಾಗದಷ್ಟು ಅನ್ಯಾಕ್ರಮಣಶೀಲತೆ ನಮ್ಮ ದೇಶದ ವ್ಯಾಪಿಸಿದೆ. ಇದನ್ನು ವಸ್ತುನಿಷ್ಠವಾಗಿ ಎದುರಿಸುವ ನಿಶ್ಚಿತ ಮನಸ್ಸು ಕೇಂದ್ರ ಸರ್ಕಾರಕ್ಕಿಲ್ಲ. ಅರ್ಥವತ್ತಾಗಿ ಚರ್ಚೆಗಳಲ್ಲಿ ಭಾಗವಹಿಸ ಜನಸಾಮಾನ್ಯರಿಗೆ ಅವಕಾಶ ಕಲ್ಪಿಸಿದ್ದರೆ ಸನ್ನಿವೇಶವು ಇಷ್ಟು ಸಂದಿಗ್ಧವಾಗುತ್ತಿರಲಿಲ್ಲ.

ಇಂತಹುದರಲ್ಲಿ ಅತ್ಯಂತ ಕೆಳಮಟ್ಟದ ರಾಜಕೀಯದಲ್ಲಿ ನಿರ್ಲಜ್ಜೆಯಿಂದ ಮುಳುಗುವುದರಲ್ಲಿ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಪ್ರಥಮ ಸ್ಥಾನದಲ್ಲಿದ್ದಾರೆ ಮತ್ತು ಮಾಧ್ಯಮಗಳು ಅವರಿಗೆ ಬೆಂಗಾವಲಾಗಿ ನಿಲ್ಲುತ್ತವೆ. ಯಾವ ಪುರಾವೆಯ ಅಗತ್ಯವೂ ಇಲ್ಲವೆಂಬಂತೆ ಅ ಇಲ್ಲಸಲ್ಲದ ಘೋರ ಆಪಾದನೆಗಳನ್ನು ಹೊರಿಸುತ್ತಲೇ ಇರುತ್ತಾರೆ. ಅದು ಕಮ್ಯುನಿಸ್ಟರ ವಿರೋಧವಾಗಿ ಎಂಬ ಒಂದೇ ಕಾರಣದಿಂ ಬಂಡವಾಳಶಾಹಿ ಮಾಧ್ಯಮಗಳು ಆಕೆಯೊಡನೆ ಥಕಥೈ ಮಾಡುತ್ತವೆ. ಆಕೆ ನಕ್ಸಲೀಯರ ಜೊತೆಯಾದಾಗಲೂ ಸೈ, ಅವರ ಬೇಟೆಯಾಡುವಾಗಲೂ ಸೈ : ಇದಲ್ಲವೆ ಮಾಧ್ಯಮಗಳ ವಸ್ತುನಿಷ್ಠತೆ! ಈಚಿನ ಆಕೆಯ ಒಂದು ಅತಿರೇಕವನ್ನು ನೋಡಿದರೆ ಅವಿವೇಕ ಮ ಬೇಜವಾಬ್ದಾರಿತನ ಯಾವ ಮಟ್ಟಕ್ಕೆ ಹೋಗಬಹುದೆಂಬುದು ತಿಳಿಯುತ್ತದೆ. ಕೊಲ್ಕತ್ತಾದ ಒಂದು ಆಸ್ಪತ್ರೆಯ ಬೆಂಕಿ ಅನಾಹುತದಲ್ಲಿ ಅಪಾ ಸಂಖ್ಯೆಯ ಜನ ಸುಟ್ಟುಹೋದರು. ಮಮತಾ ಏನೋ ಸ್ವತಃ ಅಲ್ಲಿದ್ದು ಸಾಂತ್ವನ ನೀಡಿದರು, ಪರಿಸ್ಥಿತಿಯನ್ನು ನಿಭಾಯಿಸಲು ನಿರ್ದೇಶ ನೀಡಿದರು. ಆಸ್ಪತ್ರೆಯು ಕಾರ್ಪೊರೇಟ್ ಸಂಸ್ಥೆಯ ಸ್ವರೂಪದ್ದೆಂದು ಅವರೇ ಹೇಳಿದರು, ಕೆಲವು ಕ್ರಮಗಳನ್ನು ಕೈಗೊಂಡರು. ಅದಾದ ಮೇ ಕಳ್ಳಭಟ್ಟಿ ಸಾರಾಯಿ ಕುಡಿದು ನೂರಾರು ಜನ ಪ್ರಾಣ ಕಳೆದುಕೊಂಡರು, ಅದೂ ರಾಜಧಾನಿಯಿಂದ ಕೇವಲ ಐವತ್ತು ಕಿಲೋಮೀಟ ದೂರದ ಊರಿನಲ್ಲಿ. ಎರಡು ದಿನಗಳ ನಂತರ ಅವರ ಕೀಳುಮಟ್ಟದ ಆರೋಪ ಬಂತು : ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತ ಸಾರಾಯಿಗೆ ಬೇಕೆಂದೇ, ಮಮತಾಗೆ ಅಪಕೀರ್ತಿ ತರಲೆಂದೇ, ವಿಷ ಬೆರೆಸಿದ್ದರು, ಎಂದು. ಕೇವಲ ಮೂರ್ಖತನದ ಮಾತಾಗಿದ್ದರೆ ಇದನ್ನು ಲಘುವಾಗಿ ತೆಗೆದುಕೊಳ್ಳಬಹುದಿತ್ತು, ಆದರೆ ರಾಜ್ಯದ ಮುಖ್ಯಮಂತ್ರಿಯವರ ಆರೋಪ ಇದು. ಮಾಧ್ಯಮಗಳು ಅದರ ತನಿಖೆ ಮಾಡಹೋಗಲಿಲ್ಲ, ಆಕೆ ಹೇಳಿದ್ದಕ್ಕೆ ಸುಮ್ಮನೆ ಅಡಿಟಿಪ್ಪಣಿ ಬರೆಯುವ ಕೆಲಸ ಮಾಡಿದವು. ಕಮ್ಯುನಿಸ್ಟರ ತಲೆಯ ಮೇಲೆ ಯಾರು ಬೇಕಾದರೂ ಕಲ್ಲು ಹಾಕಬಹುದು, ಅದು ಮಮತಾ – ಮಾಧ್ಯಮ ಜಂಟಿ ರಾಜಕೀಯ. ಪ್ರಜಾಪ್ರಭುತ್ವವು ಇದಕ್ಕಿಂತಲೂ ಹೆಚ್ಚು ಪತನಗೊಳ್ಳಲು ಶಕ್ಯವೆ ?

ನಮ್ಮ ರಾಜ್ಯದಲ್ಲಿ ನಿರಾನಿ ಎಂಬ ಮಂತ್ರಿ ಗದಗದಲ್ಲಿ





ಪೋಸ್ಕೋಗೆ ರತ್ನಗಂಬಳಿ ಹಾಸಿ ಕಾಯುತ್ತಿದ್ದಾರೆ, ಅದು ಬಂದರೆ ಸಾಕು ಶೀಘ್ರದಲ್ಲಿ ಕಾಲು ತೊಳೆಯಲು ಚಿನ್ನದ ತಂಬಿಗೆಯಲ್ಲಿ ನೀರು ತೆಗೆದುಕೊಂಡು ಧಾವಿಸಬೇಕೆಂದು. ರೈತರ ಭವಿಷ್ಯಕ್ಕಿಂತಲೂ ಪೋಸ್ಕೋ ಮಾಡುವ ಲೂಟಿಗೆ ಆದ್ಯತೆ. ಏತನ್ಮಧ್ಯೆ ತಮಗೂ ಒಂದಷ್ಟು ಎಕರೆಗಳ ಭೂಮಿ ಲಪಟಾಯಿಸಲು ಸಾಧ್ಯವಾಗಬಹುದೆಂಬ ಹುನ್ನಾರವೂ ಇದ್ದೀತು. ಅದು ತಿಳಿಯದು. ರೈತರು ಸ್ವಯಮಿಚ್ಛೆಯಿಂದ ಭೂಮಿ ಮಾರಲು ಮುಂದೆ ಬಂದಿದ್ದಾರೆಂಬುದು ಅವರ ಹೇಳಿಕೆ. ಹಾಗೆ ಬಂದಿದ್ದಾರೋ, ಬರುವಂತೆ ಮಾಡಲಾಗಿದೆಯೋ, ಅಥವಾ ಬರದೆಯೂ ಬಂದಿದ್ದಾರೆಂದು ಗುಲ್ಲೆಬ್ಬಿಸಲಾಗುತ್ತಿದೆಯೋ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಅದರಲ್ಲೂ ಮಾಧ್ಯಮಗಳು ನಿರ್ಲಿಪ್ತವಾಗಿ ಉಳಿದಿವೆ. ರೈತರು ಭೂಮಿ ಕಳೆದುಕೊಂಡು ನಾಳೆ ಭಿಕಾರಿಗಳಾಗಿಬಿಡುವ ದುರಂತ ಮಾತ್ರವಲ್ಲ, ಇದರಲ್ಲಿ ಕೃಷಿಗೆ ಭಾರಿ ಹೊಡೆತ ಬಿದ್ದು ಆಹಾರದ ಉತ್ಪಾದನೆಗೆ ಕುತ್ತು ಬರುವ ಆಪತ್ತೂ ಇದೆ. ಅದೇಕೋ, ಪೋಸ್ಕೋ ಎಂದರೆ ಕೇಂದ್ರ ಸರ್ಕಾರ, ಒಡಿಶಾ-ಕರ್ನಾಟಕ ಸರ್ಕಾರಗಳು. ಎಲ್ಲಾ ಸಾಷ್ಟಾಂಗ ನಮಸ್ಕಾರ ಮಾಡಲು ನುಗ್ಗುತ್ತಿವೆ. ಮನಮೋಹನ ಸಿಂಗ್ - ಅಹ್ಲುವಾಲಿಯ - ಆನಂದ ಶರ್ಮ ಭಾರತವನ್ನು ಮಾರಾಟಕ್ಕಿಟ್ಟಿದ್ದಾರೆ. ಪ್ರಜಾಪ್ರಭುತ್ವಕ್ಕೆ ಬಂದಿರುವ ಹೀನಾಯ ಗತಿ ಅದು.

ಇವೆಲ್ಲವುಗಳ ತದ್ರೂಪಗಳು ಒಂದೇ, ಎರಡೇ, ನೂರಾರಿವೆ. ಇದಕ್ಕೆಲ್ಲಾ ಇರುವುದು ಒಂದೇ ಮದ್ದು, ಅದು ತಮ್ಮ ಜನಲೋಕಪಾಲ ಮಸೂದೆ ಎಂಬಂತೆ ಮಾನ್ಯ ಅಣ್ಣಾ ಹಜಾರೆ ಮತ್ತು ಅವರ ಬಳಗ ಸಾರುತ್ತಿದೆ. ಇದನ್ನು ಬರೆಯುವಾಗ್ಗೆ ಅಣ್ಣಾ ಮೂರುದಿನ ಉಪವಾಸ ಮಾಡಲು ಮುಂಬೈಯಲ್ಲಿ ಏರ್ಪಾಟು ಮಾಡಿಕೊಂಡಿದ್ದವರು ಅದನ್ನು ಥಟಕ್ಕನೆ ನಿಲ್ಲಿಸ ರಾಲೇಗಾಂವ್‌ಗೆ ಹಿಂದಿರುಗಿದ್ದಾರೆ. ಲೋಕಸಭೆಯು ಒಂದು ಮಸೂದೆಯ ಚರ್ಚೆಯನ್ನು ಮುಗಿಸಿ ಅದನ್ನು ಅಂಗೀಕರಿಸಿತು. ಆದರೆ ಲೋಕಪಾಲರಿಗೆ ಸಂವಿಧಾನದಡಿ ಸ್ಥಿರ-ಸ್ವತಂತ್ರ ಸ್ಥಾನ ನೀಡಬೇಕೆಂಬ ಮಸೂದೆಯನ್ನು ತಿರಸ್ಕರಿಸಿತು. ನಂತರ ರಾಜ್ಯಸಭೆಯಲ್ಲಿ ಮಸೂದೆಯನ್ನು ಮಂಡಿಸಿ, ದಿನವಿಡೀ ಚರ್ಚೆಯನ್ನು ನಡೆಸಿದ ನಂತರ, ಏಕಾಏಕಿ ಸರ್ಕಾರವು ರಾಜ್ಯಸಭೆಯ ಸಭೆಯನ್ನು ಅನಿರ್ದಿಷ್ಟವಾಗಿ ಮುಂದೂಡಿತು. ಮಸೂದೆಗೆ ನೂರಕ್ಕೂ ಹೆಚ್ಚು ತಿದ್ದುಪಡಿಗಳನ್ನು ಸೂಚಿಸಲಾಗಿತ್ತು. ಆ ಸಬೂಬು ಮನಮೋಹನ ಸಿಂಗರ ಸಚಿವರಿಗೆ ರಕ್ಷಣಾ ಕವಚವಾಯಿತು. ಮಸೂದೆ ಬಿದ್ದುಹೋಗುವುದು ಖಚಿತವಾಗಿದ್ದುದರಿಂದ ಈ ಅಕ್ರಮಕ್ಕೆ ಗಂಟುಬಿದ್ದರೆಂಬುದು ಸ್ವತಸ್ಸಿದ್ಧ. ಸಿಂಗ್ ಸರ್ಕಾರಕ್ಕೆ ಪರಿಣಾಮಕಾರಿ ಲೋಕಪಾಲ ಬೇಡ. ಭಾರತೀಯ ಜನತಾ ಪಕ್ಷ ವಿರೋಧ ಪಕ್ಷವಾದ್ದರಿಂದ ಸ್ವಲ್ಪ ಉಸಿರೆತ್ತುತ್ತಿದೆ, ಇಲ್ಲವಾದರೆ ಆ ಪಕ್ಷಕ್ಕೂ ಪ್ರಬಲ ಲೋಕಪಾಲ ಬೇಡ. ಎರಡೂ ಪಕ್ಷಗಳ ಆರ್ಥಿಕ ನೀತಿ ಒಂದೇ ಆದ್ದರಿಂದ ಅನೀತಿಗಳನ್ನು ಮುಚ್ಚಿಟ್ಟು ಭ್ರಷ್ಟಾಚಾರದಲ್ಲಿ ಮುಳುಗುವುದು ಎರಡೂ ಪಕ್ಷಗಳ ಮೂಲಲಕ್ಷಣವೇ ಆಗಿದೆ. ಯಾವುದು ಸಾರ್ಥಕವೋ, ಯಾವುದು ನಿರರ್ಥಕವೋ ಎಂಬ ಶಂಕೆ ವಿಪರೀತ ಹೆಚ್ಚಾಗುತ್ತಿದೆ. ನ್ಯಾಯಾಂಗದ ಭ್ರಷ್ಟಾಚಾರದ ಬಗೆಗಿನ ಮಾತೇ ನಿಂತುಹೋಗಿದೆ. ಅದನ್ನೂ ತಹಬಂದಿಗೆ ತಾರದೆ ಯಾವ ಶಾಸನದಿಂದ ಎಂತಹ ಫಲ ಸಿದ್ಧಿಸೀತು! ಅದಕ್ಕೇ ಪ್ರತ್ಯೇಕವಾದ ಶಾಸನ ಬೇಕು, ಆದರೆ ಅದನ್ನು ಪರದೆಯ ಹಿಂದಕ್ಕೆ ತಳ್ಳಿಬಿಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಲೋಕಾಯುಕ್ತರ ತನಿಖೆಯ ಸೀಮಿತತೆಯನ್ನು ಕುರಿತಂತೆ, ಈ ಮುನ್ನ ತನಿಖಾಧಿಕಾರಿಯಾಗಿದ್ದ ಶ್ರೀ. ಮಧುಕರ ಶೆಟ್ಟಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಅವರು ಯಾರ ಮೇಲೂ ವೈಯ್ಯಕ್ತಿಕ ಭ್ರಷ್ಟಾಚಾರದ ಆರೋಪ ಹೊರಿಸಿಲ್ಲ. ಅವರ ಪ್ರಕಾರ ಅಪರಾಧಗಳನ್ನು ಸಾಬೀತು ಮಾಡಲು ಇನ್ನೂ ಎಷ್ಟೋ ದಾಖಲೆಗಳನ್ನು ವಶಪಡಿಸಿಕೊಳ್ಳುವ ಸಾಧ್ಯತೆ ಇತ್ತು, ತನಿಖೆಯನ್ನು ವಿಸ್ತರಿಸಬಹುದಿತ್ತು, ಆಪಾದನೆಗಳನ್ನು ನಿಖರಗೊಳಿಸಬಹುದಿತ್ತು. ಆದರೆ ಯಾವುದೋ ಕಾಣದ ಕೈಗಳು ಅದಕ್ಕೆ ನಿರ್ಬಂಧ ಹೇರಿವೆ. ಇದರ ಸತ್ಯಾಸತ್ಯತೆ ಏನೇ ಇರಲಿ, ನಮ್ಮ ಶಾಸನಗಳ ಮಿತಿಯನ್ನು ಅದು ಸ್ಪಷ್ಟಪಡಿಸುತ್ತಿದೆ. ಅಂದರೆ, ಹಜಾರೆ ತಂಡದ ಜನಲೋಕಪಾಲರು ಭ್ರಷ್ಟಾಚಾರಕ್ಕೆ ಧನ್ವಂತರಿ ಚಿಕಿತ್ಸೆ ನೀಡುವಷ್ಟು ಸಮರ್ಥರಲ್ಲ ಎಂದರ್ಥ. ''ಬೀದಿಗೆ ಬಂದ ಭ್ರಷ್ಟಾಚಾರ'' ಎಂಬ ಕಿರುಹೊತ್ತಿಗೆಯಲ್ಲಿ ಪ್ರೊ॥ ಬರಗೂರು ರಾಮಚಂದ್ರಪ್ಪನವರು ಇದರ ವಿಶ್ಲೇಷಣೆ ನೀಡಿ ಹಜಾರೆ ಹೋರಾಟದ ಶಕ್ತಿ ಮತ್ತು ಮಿತಿ ಎರಡನ್ನೂ ಗುರುತಿಸಬೇಕೆಂದು ವಿವರಿಸಿದ್ದಾರೆ. ಪ್ರಜಾಪ್ರಭುತ್ವವು ಗಟ್ಟಿಗೊಳ್ಳಲು ಜನತೆಯು ಈ ಹೋರಾಟದ ಶಕ್ತಿಯ ಜೊತೆ ಐಕ್ಯತೆ ಪ್ರದರ್ಶಿಸಬೇಕು ಮತ್ತು ಮಿತಿಯ ವಿರುದ್ಧ ತಾನೇ ಹೋರಾಟವನ್ನೂ ನಡೆಸಬೇಕು. ನಮ್ಮ ದೇಶದ ಬಂಡವಾಳಶಾಹಿಯು ರಾಷ್ಟ್ರೀಯ ಬಂಡವಾಳಶಾಹಿಯಾಗಿ ಉಳಿದಿಲ್ಲ; ಅದು ಸಾಮ್ರಾಜ್ಯಶಾಹಿಯ ಆಶ್ರಯ ಪಡೆದಿರುವ ಬಂಡವಾಳಶಾಹಿಯಾಗಿ ಮಾರ್ಪಟ್ಟಿದೆ. ಮನಮೋಹನ ಸಿಂಗ್ ಸರ್ಕಾರದ ಆರ್ಥಿಕ ನೀತಿಗಳು ಆ ಹಾದಿಯಲ್ಲಿ ಸಾಗಿವೆ. ಆದಾಗ್ಗ್ಯೂ ಜನತೆಯ ಹಾದಿ ಏಕಕಾಲದಲ್ಲಿ ಐಕ್ಯತೆ ಮತ್ತು ಹೋರಾಟಗಳೇ ಆಗಿದೆ. ಆಗೊಂದು ಈಗೊಂದು ರೊಟ್ಟಿ ತುಂಡನ್ನು ಎಸೆಯುವಂತಹ ತಥಾಕಥಿತ ಜನಪರ ಸುಧಾರಣೆಗಳನ್ನು ಜಾರಿಗೊಳಿಸಲು ಸತತವಾಗಿ ಶ್ರಮಿಸುವುದು ಒಂದು ಕಡೆ, ದೇಶದ ಸಂಪತ್ತು ಮತ್ತು ಸಾರ್ವಭೌಮತ್ವವನ್ನು ನಾಶಗೊಳಿಸುವ ನೀತಿಯ ವಿರುದ್ಧ ಉಗ್ರ ಹೋರಾಟ ಇನ್ನೊಂದು ಕಡೆ. ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಅದಕ್ಕೆ ಅರ್ಥ ತುಂಬಲು ಜನತೆಯ ಮುಂದಿರುವ ಸತ್ಪಥ ಇದೊಂದೇ. ೨೦೧೨ರಲ್ಲಿ ನಾವು ಈ ಹಾದಿಯನ್ನು ಶ್ರದ್ಧೆಯಿಂದ ತುಳಿಯೋಣ.

ಮುಗಿದ ೨೦೧೧ ಇನ್ನೊಂದು ಚಳವಳಿಯ ಸ್ಮೃತಿಯನ್ನು ಮರುಕಳಿಸಿತು. ಅದು ಪ್ರಗತಿಪರ ಸಾಹಿತ್ಯ ಚಳವಳಿ. ೧೯೩೬ರ ಏಪ್ರಿಲ್‌ನಲ್ಲಿ ಮುನ್ಷಿ ಪ್ರೇಮಚಂದ್‌ರ ನೇತೃತ್ವದಲ್ಲಿ ಈ ಚಳವಳಿಯ ಉದ್ಘಾಟನಾ ಸಮಾವೇಶವು ಲಕ್ನೋದಲ್ಲಿ ಜರುಗಿತ್ತು. ಕಮ್ಯುನಿಸ್ಟ್ ಪಕ್ಷದ ನೇತಾರ ಪಿ. ಸಿ. ಜೋಶಿ ಈ ಚಳವಳಿಯ ಸಂಘಟನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ೧೯೩೬ರ ಜಾಗತಿಕ ಸನ್ನಿವೇಶ ಹೀಗಿತ್ತು : ಜರ್ಮನಿಯಲ್ಲಿ ಹಿಟ್ಲರನ ಅಧಿಕಾರ ಮತ್ತು ಪಾತಕಗಳು, ಯೂರೋಪ್-ಅಮೆರಿಕಾಗಳಲ್ಲಿ ಆರ್ಥಿಕ ಬಿಕ್ಕಟ್ಟು, ವಿಶ್ವದಲ್ಲೆಲ್ಲಾ ವಸಾಹತುಶಾಹಿಯ ಲೂಟಿ ಮತ್ತು ದೌರ್ಜನ್ಯ. ಎಪ್ಪತ್ತೈದು ವರ್ಷಗಳ ನಂತರ ಜಾಗತಿಕ ಸನ್ನಿವೇಶದಲ್ಲಿ ಬದಲಾವಣೆಗಳಿವೆ. ಆದರೆ ಲೂಟಿ ಮತ್ತು ದೌರ್ಜನ್ಯ ಹೊಸ ರೂಪ ಧರಿಸಿವೆ. ಅಂದು ಪ್ರೇಮಚಂದ್ ಸಾಹಿತಿಗಳಿಗೆ ನೀಡಿದ ಕರೆ ಇಂದಿನ ಸಾಹಿತಿಗಳಿಗೆ ನೀಡಬಹುದಾದ ಕರೆಯೇ ಆಗಿದೆ. ಸಾಹಿತಿಗಳ ಜೊತೆಯಲ್ಲೇ ಮಹಾಜನತೆಯೂ ಆ ಕರೆಗೆ ಓಗೊಡಬೇಕಾಗಿದೆ. ಪ್ರೇಮಚಂದ್‌ರ ಕರೆ ಭಾಗಶಃ ಹೀಗಿದ್ದಿತು : ''ನಮ್ಮ ಸಾಹಿತ್ಯಾಭಿರುಚಿಯಲ್ಲಿ ಶೀಘ್ರಗತಿಯ ಬದಲಾವಣೆಗಳುಂಟಾಗುತ್ತಿವೆ. ಜೀವನದ ವಾಸ್ತವ ಸಂಗತಿಗಳಿಗೆ ಸಾಹಿತ್ಯವು ಸ್ಪಂದಿಸುತ್ತಿದೆ. ಸಮಾಜ, ಸಾಮಾಜಿಕ ಘಟಕವಾಗಿ ಮಾನವ, ಇವು ಅದರ ಇಂದಿನ ಆಸಕ್ತಿಯನ್ನು ಕೆರಳಿಸಿವೆ. ಪ್ರೇಮ, ವಿರಹಗಳಷ್ಟೇ ಅದರ ವಸ್ತುವಾಗುವ ಕಾಲ ಮೀರಿಹೋಗಿದೆ, ನಮ್ಮ ವಿಸ್ಮಯಗಳಷ್ಟೇ ವಸ್ತುವಾಗುವಂತೆಯೂ ಇಲ್ಲ. ನಮ್ಮ ಜೀವನದ ಎಲ್ಲ ಸಮಸ್ಯೆಗಳೂ ಅದರ ವಸ್ತು, ಸಾಮಾಜಿಕ ಮೌಲ್ಯ ಇರುವುವೆಲ್ಲಾ ಅದರ ಪರಿಧಿಗೆ ಬರುತ್ತವೆ. ...ಸೌಂದರ್ಯವನ್ನು ಅನುಭವಿಸುವ ಮನಸ್ಸು ಮತ್ತು ವಾಸ್ತವಿಕ ಜೀವನದ ಕರ್ಕಶ ಪರಿಸ್ಥಿತಿಯನ್ನು ನಿರ್ಧಾರಕವಾಗಿ ಎದುರಿಸುವ ಸ್ಥೈರ್ಯ, ಇವನ್ನು ಇಂದಿನ ಸಾಹಿತ್ಯ ತುಂಬಿಕೊಡಬೇಕು. ಅದನ್ನು ಮಾಡದ ಸಾಹಿತ್ಯವಿದ್ದೂ ವ್ಯರ್ಥ. ಇದನ್ನು ಸಾಹಿತ್ಯವೆಂದು ಕರೆಯುವುದು ಪರಿಹಾಸವಾದೀತು.'' ಸಾಹಿತ್ಯ ಸಮ್ಮೇಳನಗಳಲ್ಲಿ ಇದು ಅನುರಣಿತವಾದರೆ ಒಳಿತು; ಹಾಗಾಗದಿದ್ದರೆ ಅಳುಕು ಬೇಡ. ಜನತೆಯ ಮನಸ್ಸಿನ ಅಂತರಾಳದಲ್ಲಿ ಅದು ಪುಟಿದರೆ ಸಾಕು.



ಈ ತಿಂಗಳು

ನಮ್ಮ ರಾಜ್ಯದಲ್ಲಿ ತಲೆಬೇಟೆ ಆರಂಭವಾಗಿದೆ. ಮಧ್ಯಯುಗೀನ ಯೂರೋಪಿನ ದುಷ್ಕೃತ್ಯದಿಂದ ಬಂದಿದ್ದು 'ತಲೆಬೇಟೆ' ಎಂಬ ಪದ. ಇಂಗ್ಲಿಷಿನಲ್ಲಿ ಅದನ್ನು 'ವಿಚ್ ಹಂಟಿಂಗ್' ಎನ್ನುತ್ತಾರೆ. ಯಾರ ಮೇಲಾದರೂ ಗೂಬೆ ಕೂರಿಸಿ ಅವರನ್ನು ಸಾಯಿಸುವ ಹವಣಿಕೆ ಇದ್ದರೆ ಅವರನ್ನು, ವಿಶೇಷತಃ ಮಹಿಳೆಯರನ್ನು, 'ವಿಚ್' ಎಂದು ಕರೆದುಬಿಡುತ್ತಿದ್ದರು. ಅಂದರೆ ಮಾಟಗಾತಿ ಎಂದು. ಊರಿಗೇ ಮಾಟ ಮಾಡಿಸಿ ಬಿಡುತ್ತಾಳೆ ಅವಳು ಎಂಬ ಭಯ ಹಬ್ಬಿಸಿ ಜನರಿಂದಲೇ ಅವಳನ್ನು ಕೊಲ್ಲಿಸಿಬಿಡುವುದು ಎಂಥ ಪರಿಹಾರ! ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎಚ್. ನಾಗವೇಣಿಯವರ 'ಗಾಂಧಿ ಬಂದ' ಎಂಬ ಕಾದಂಬರಿಯನ್ನು ಪಠ್ಯಪುಸ್ತಕವನ್ನಾಗಿ ನೇಮಿಸಿದಾಗ ವಿಶ್ವಕರ್ಮರೆಲ್ಲರ ಪ್ರತಿನಿಧಿಗಳು ತಾವೆಂದು ಸ್ವಯಂ ಘೋಷಿಸಿಕೊಂಡ ಕೆಲವರು ಕಾದಂಬರಿಯಲ್ಲಿ ತಮ್ಮ ಜಾತಿಯವರನ್ನು ಹೀಯಾಳಿಸಲಾಗಿದೆಯೆಂದು ತಕರಾರೆಬ್ಬಿಸಿದರು. ಅದೇ ತಲೆಬೇಟೆಗೆ ನಾಂದಿ. ಅದನ್ನು ಸೂಚಿಸಿದವರು ಯಾರು, ಪೋಷಿಸಿದವರು ಯಾರು, ಪ್ರಯೋಜನ ಯಾರಿಗೆ, ಎಂಬುವೆಲ್ಲಾ ಅಷ್ಟೇನೂ ಗೂಢವಲ್ಲ. ತಾವೇ ಪ್ರತಿನಿಧಿಗಳೆಂದು ಹೇಳಿಕೊಂಡಿರುವ ವಿಶ್ವಕರ್ಮರ ಆಕ್ಷೇಪ ವಿನೋದವಾಗಿದೆ: ತಾವು ವೇದಕಾಲದಿಂದಲೂ ಬ್ರಾಹ್ಮಣರಿಗಿಂತ ಉನ್ನತ ಸ್ಥಾನದಲ್ಲಿರುವವರು, ಅಂಥವರನ್ನು ಶೂದ್ರರೆಂದು ಕರೆಯಬಹುದೆ, ಎಂಬುದು ಅವರ ಪ್ರಶ್ನೆ. ಯಾರನ್ನಾದರೂ 'ಶೂದ್ರ' ಎಂದು ಕರೆಯುವುದು ಹೀಯಾಳಿಕೆಯೆಂದು ಹೇಳಿದರೆ ಅದು ಶೂದ್ರರನ್ನು ಅಪಮಾನ ಮಾಡಿದಂತಲ್ಲವೆ? ಆ ಸೂಕ್ಷ್ಮವು ವಿಶ್ವಕರ್ಮ ಸಂಘಕ್ಕೆ ತಿಳಿಯಲಿಲ್ಲ. ವೇದದ ಕಾಲದಿಂದಲೂ ಶ್ರೇಷ್ಠರಾಗಿಯೇ ಇರುವವರನ್ನು ಈಗ ಹಿಂದುಳಿದ ಪಂಗಡದೊಳಗೆ ಸೇರಿಸಕೂಡದೆಂಬುದು ಒಂದು ಪ್ರತಿಕ್ರಿಯೆ. ಇನ್ನೊಂದು ಪ್ರತಿಕ್ರಿಯೆ ಇದು; ವಿಶ್ವಕರ್ಮರು ವೇದದಲ್ಲಿ ಒಂದು ಜಾತಿಯವರೆ? ಋಗ್ವೇದದ ಆದಿಕಾಲದಲ್ಲಿ ವರ್ಣವ್ಯವಸ್ಥೆ ಇರಲಿಲ್ಲವೆನ್ನುತ್ತಾರಲ್ಲ, ಇವರು ಹೇಗೆ ಉನ್ನತ ವರ್ಣದವರಾದರು? ವೇದದ ಕಾಲದಿಂದ ಇದ್ದ ಒಂದು ಗುಂಪು ಇನ್ನೂ ಹಿಂದುಳಿದಿರುವುದು ನಮ್ಮ ದೇಶಕ್ಕೆ ನಾಚಿಕೆಯ ವಿಷಯವಲ್ಲವೆ?

ನಿಜವಾದ ತಕರಾರು ಅದಲ್ಲ. ನಾಗವೇಣಿಯವರ ಪುಸ್ತಕ ಕೂಡದು ಎಂಬ ಪೂರ್ವಗ್ರಹವುಳ್ಳ ಯಾವುದೋ ಪರಿವಾರದ ಹುನ್ನಾರದ ಪರಿಣಾಮ ಇದು. ಸಮಾಜದ ವೈರುಧ್ಯಗಳ ವಿಶ್ಲೇಷಣೆ ಯುವಕರಿಗೆ ಸಲ್ಲದು ಎಂಬ ಭಾವನೆಯವರ ತಕರಾರು ಇದು. ಅದನ್ನೇ ತಲೆಬೇಟೆ ಎನ್ನುವುದು. ಅದು ಮಂಗಳೂರಿನ ಸಮಾಚಾರ. ಇನ್ನೊಂದು ಸಮಾಚಾರ ಹಂಪಿ ಕನ್ನಡ ವಿಶ್ವವಿದ್ಯಾಲಯದ್ದು. ಪ್ರಾಧ್ಯಾಪಕ-ಸಂಶೋಧಕ ಡಾ|| ಟಿ. ಆರ್. ಚಂದ್ರಶೇಖರ್ ಲೋಪವೆನ್ನಲಾಗದ ಒಂದು ಲೋಪ ಎಸಗಿದ್ದಾರೆ. ಯಾವುದೋ ಯೋಜನೆಯ ಸಲಹೆಗಾರರಾಗುವ ಮುನ್ನ ವಿಶ್ವವಿದ್ಯಾಲಯಕ್ಕೆ ಅದನ್ನು ತಿಳಿಸದಿದ್ದುದು ಆ ಲೋಪ. ಜೊತೆಗೆ, ಯೋಜನೆಯ 'ನೋಡಲ್ ಆಫೀಸರ್' ತಾವೇಎಂದು ಸ್ವಯಂ ಘೋಷಿಸಿಕೊಂಡಿದ್ದಾರೆಂದು ಹೇಳಲಾಗಿದೆ. ಇದು ಆಕ್ಷೇಪಾರ್ಹ ಎಂಬುದು ನಿಜ. ಆದರೆ ನಂತರದ ವರದಿಗಳಲ್ಲಿ ಆ ಕೆಲಸದ ಬಗ್ಗೆ ಮಾಹಿತಿ ನೀಡಿದ್ದಾರಂತೆ. ಆದರೆ ''ಪರವಾನಗಿ'' ಪಡೆದಿರಲಿಲ್ಲ. ಯೋಜನೆ ಆರಂಭವಾದ ನಂತರವೂ ಪರವಾನಗಿ ನೀಡಬಹುದಲ್ಲ. ಅಂತಹ ಪದ್ಧತಿ ಇದೆ. ಆದರೆ ಡಾ|| ಚಂದ್ರಶೇಖರ್ ಸರ್ಕಾರದ ಜನವಿರೋಧಿ ನೀತಿಗಳನ್ನು ಟೀಕಿಸುತ್ತಾರೆ, ಆದ್ದರಿಂದ ಅವರಿಗೆ ''ಬುದ್ಧಿ ಕಲಿಸಬೇಕು'' ಎನ್ನುವ ಮಂದಿ ಈ ಲೋಪವನ್ನು ಹಿಮಾಲಯದಷ್ಟು ದೊಡ್ಡದು ಮಾಡಿ ಶೈಕ್ಷಣಿಕ ಅನಾಹುತ ನಡೆದುಹೋಯಿತೆಂಬಂತೆ ವಾದಿಸಿದ್ದಾರೆ. ವಿಶ್ವವಿದ್ಯಾಲಯದ ಕುಲಪತಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವ ಅವಕಾಶ ಸಿಕ್ಕಿದರೆ ಸಿಂಡಿಕೇಟಿನಲ್ಲಿರುವ ''ಶಿಕ್ಷಣತಜ್ಞರು'' ಬಿಟ್ಟಾರೆಯೆ? ಇದು ವಿಶ್ವವಿದ್ಯಾಲಯದಲ್ಲಿ ತಲೆಯೆತ್ತುತ್ತಿರುವ ''ತಲೆಬೇಟೆ''. ಇದು ಆರೋಗ್ಯಕರವಲ್ಲ.

* * *

ಎ. ಕೆ. ರಾಮಾನುಜನ್ ಬರೆದ ''ಮುನ್ನೂರು ರಾಮಾಯಣಗಳು'' ಎಂಬುದರ ಬಗೆಗಿನ ರಾಮಾಯಣ ಮುಂದುವರಿದಿದೆ. ಆ ಪುಸ್ತಕದ ಪುನರ್ಮುದ್ರಣ ಮಾಡಲಾಗುವುದೆಂದು ಪ್ರಕಾಶನ ಸಂಸ್ಥೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ತಿಳಿಸಿದೆ. ದೆಹಲಿ ವಿಶ್ವವಿದ್ಯಾಲಯವಂತೂ ಮತೀಯ ಜಡ್ಡುತನಕ್ಕೆ ಶರಣಾಯಿತು. ಅದರ ನಂತರ ಕೇರಳದ ಕ್ಯಾಥೋಲಿಕ್ ಚರ್ಚ್ ತನ್ನ ಜಡ್ಡುತನವನ್ನು ಶಿಕ್ಷಣ ವ್ಯವಸ್ಥೆಯ ಮೇ ಹೇರಹೊರಟಿದೆ. ಅದರ ತಕರಾರು ಸಹ ಇತಿಹಾಸ ಬೋಧನೆಗೆ ಸಂಬಂಧಿಸಿ ಚರ್ಚಿನ ಇತಿಹಾಸ ಕ್ರೌರ್ಯದಿಂದ ತುಂಬಿದೆ. ಜೀಸಸ್ ಶಿಲುಬೆಗೇರಬೇಕಾ ಬಂದುದು ರೋಮನ್ ಚಕ್ರಾಧಿಪತ್ಯದ ಕ್ರೌರ್ಯದಿಂದಾಗಿ. ಬ್ರೂನೋ ಮ ಜೋನ್ ಜೀವಂತ ಸುಡಲ್ಪಟ್ಟಿದ್ದು ಚರ್ಚಿನ ಕ್ರೌರ್ಯದಿಂದ. ಕೇರಳದ ಚರ್ಚಿ ಆಗ್ರಹವೇನೆಂದರೆ ಮಧ್ಯಯುಗೀನ ಇತಿಹಾಸ ಬೋಧಿಸುವಾಗ ಚರ್ಚಿನ ಕ್ರೌರ್ಯ ಪ್ರಸ್ತಾಪಕ್ಕೆ ಬರಕೂಡದು, ಎಂದು. ಅದನ್ನು ಹೇಳದೆ ಯೂರೋಪಿನ ಚರಿತ್ರೆಯನ್ನು ಹೇ ಬೋಧಿಸಲು ಸಾಧ್ಯವೆಂದು ಕೇಳಿದರೆ ಚರ್ಚಿನ ಉತ್ತರ ಇದು: ಕ್ರೈಸ್ತ ಸಮುದಾಯವ ಅವಹೇಳನ ಮಾಡಲು ಚರಿತ್ರೆಯ ಆ ಭಾಗವನ್ನು ಬಳಸಲಾಗುತ್ತದೆ, ಆದ್ದರಿಂದ ಅ ಪಠ್ಯಪುಸ್ತಕದಲ್ಲಿ ಸೇರಕೂಡದು. ಈಗಿನ ಕೇರಳ ಸರ್ಕಾರವು ಒಂದು ಸಮಿತಿ ರಚಿಸಿ ಅದು ಹೇಳಿತು, ಚರ್ಚ್ ವಿರೋಧಿಸುತ್ತಿರುವ ಪಠ್ಯಪುಸ್ತಕದಲ್ಲಿ ಸತ್ಯಾಂಶಗಳಿವೆ ಅ ಅದರಲ್ಲಿ 'ಮಾರ್ಕ್ಸ್‌ವಾದದ ಪರವಾದ ಒಲವಿದೆ'ಯಾದ್ದರಿಂದ ಅದನ್ನು ತೆಗೆದುಹಾ ಬೇಕು, ಎಂದು. ಸತ್ಯಾಂಶಗಳಲ್ಲೆಲ್ಲಾ ಮಾರ್ಕ್ಸ್‌ವಾದದ ಪರವಾದ ಒಲವಿದೆಯೆನ್ನುವುದಾ ಮಾರ್ಕ್ಸ್‌ವಾದದ ಔನ್ನತ್ಯವನ್ನು ಅಂಗೀಕರಿಸಬೇಕಲ್ಲವೆ? ಕೇರಳದ ಕಾಂಗ್ರೆ ಸರ್ಕಾರವು ಮಧ್ಯಯುಗೀನ ಯೂರೋಪಿನ ಇತಿಹಾಸವನ್ನು ಚರ್ಚಿನ ಕ್ರೌರ್ಯ ಪ್ರಸ್ತಾಪವಿಲ್ಲದೆ ಬೋಧಿಸಬೇಕೆಂಬ ಮೂರ್ಖಮಾತಿಗೆ ಮಾನ್ಯತೆ ನೀಡಿದೆ. ಇ ಕಾಂಗ್ರೆಸ್ ಪಕ್ಷದ ಮತಧರ್ಮನಿರಪೇಕ್ಷತೆ ಅಥವಾ ಸೆಕ್ಯುಲರಿಸಂ!

* * *

ಕುಕ್ಕೆ ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಎಂಜಲೆಲೆಗಳ ಮೇಲೆ ಉರುಳುವ ಅಸ ಪರಂಪರೆಯನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ್ದಕ್ಕೆ ಕುಕ್ಕೆ ಪುಂಡರು ಮತ್ತು ಪಂಡರು ಶ್ರೀ ಕೆ. ಎಸ್. ಶಿವರಾಮು ಅವರ ಮೇಲೆ ಹಲ್ಲೆ ಮಾಡಿದರು. ಪೇಜಾವರ ಸ್ವಾಮಿಯಂಥವ ಯಾರೂ ಅದನ್ನು ಖಂಡಿಸಲಿಲ್ಲ, ವಿರೋಧಿಸಲಿಲ್ಲ. ಮೌಢ್ಯ ಮತ್ತು ಮಾನವೀಯತೆಗ ಪೈಕಿ ಅವರಿಗೆ ಪ್ರಿಯವಾದ್ದು ಮೌಢ್ಯ, ಏಕೆಂದರೆ ಜನರ ಮೌಢ್ಯವೇ ಸ್ವಾಮಿಗ ಬಂಡವಾಳ. ಅದಿಲ್ಲದಿದ್ದರೆ ಅವರ ಪಲ್ಲಕಿಯು ಕೊಚ್ಚೆಗೆ ಬೀಳುತ್ತದೆ. ಅದಾಗದಂ ಎಚ್ಚರ ವಹಿಸಲು ಎಂಜಲೆಲೆಯ ಮಹಾತ್ಮೆಯ ಬಗ್ಗೆ ಉಪದೇಶ ನೀಡುತ್ತಾರೆ: ಕುಕ್ಕೆ ಎಂಜಲೆಲೆಗೆ ಮಾತ್ರ ಅದ್ಭುತ ವೈದ್ಯಕೀಯ ಮಹತ್ವವಿದೆಯಂತೆ. ಅಲ್ಲಿ ಉರುಳಿದ ಚರ್ಮರೋಗವೆಲ್ಲಾ ಗುಣವಾಗುತ್ತದಂತೆ! ಹಾಗಿದ್ದರೆ ಬಟ್ಟೆಯೆಲ್ಲಾ ಬಿಚ್ಚಿ ಉರು ಬೇಕಲ್ಲ! ಚರ್ಮರೋಗವು ಕೆಳವರ್ಗದವರಿಗೆ ಮಾತ್ರ ಇರುತ್ತದೆಯೆ? ಮಾನಸಿ ರೋಗ ಇರುವ ಮೇಲ್ಜಾತಿಯವರಿಗೆ ಚರ್ಮರೋಗ ಇರುವುದಿಲ್ಲವೆ, ಅವರೇ ಉರುಳಿ ಗುಣಮುಖರಾಗುವುದಿಲ್ಲ? ಕುಕ್ಕೆ ಎಂಜಲೆಲೆ ಬದಲು ಕೆಂಟಕಿ ಫ್ರೈಡ್ ಚಿಕ ಅಂಗಡಿಯಲ್ಲಿ ಎಂಜಲನ್ನು ಮೈಗೆ ಬಳಿದುಕೊಂಡು ಮೇಲ್ಜಾತಿಯವರು ರೋಗಮು ರಾಗಲಿ, ಪೇಜಾವರರು ಅದಕ್ಕೆ ಉದ್ಘಾಟಕರಾಗಿ ಮೊದಲು ಎಂಜಲು ಮೆತ್ತಿಕೊಳ್ಳ ಯಾರಿಗೇನಂತೆ! ಹೀನ ಮೌಢ್ಯಗಳನ್ನು ಜನರ ಮನಸ್ಸಿಗೆ ತುಂಬಿ ಅವರ ಮೇಲೆ ಸವಾ ಮಾಡುವ ಕ್ಷುದ್ರ ಜಂತುಗಳಿಗಿರುವ ರೋಗದ ವ್ಯಾಪಕತೆ ಅಗಾಧವಾದ್ದು ಮತ ಪ್ರಾಚೀನವಾದ್ದು. ಬುದ್ಧ ಇದನ್ನು ಲೇವಡಿ ಮಾಡಿ ತರ್ಕಶುದ್ಧ ಚಿಂತನೆಗೆ ಒತ್ತುಕೊಟ್ಟ ಋಗ್ವೇದದ ಒಂದು ಮಂತ್ರದ ಪ್ರಕಾರ ಸಮಾಜದ ನಾಲ್ಕು ವರ್ಣದವರು ಕ್ರಮವಾ ಮುಖ, ಬಾಹು, ಊರು (ತೊಡೆ) ಮತ್ತು ಪಾದಗಳಿಂದ ಹುಟ್ಟಿದರಂತೆ. ಈ ಬ ಪ್ರಶ್ನಿಸಲಾಗಿ ಬುದ್ಧನು ಹೇಳಿದ್ದನ್ನು ವಾಸೆಟ್ಠ ಸುತ್ತದಲ್ಲಿ ಕಾಣುತ್ತೇವೆ. ಅವನೆಂದ ''ನೋಡಯ್ಯ, ಹಾಗೆಂದು ಹೇಳುವ ಆ ಬ್ರಾಹ್ಮಣರಿಗೆ ಕಣ್ಣು ಸರಿಯಿಲ್ಲ. ಕಣ್ಣಿಗೆ ಕಾಣು ಸಂಗತಿ ಅವರಿಗೆ ಬೇಡ. ಅವರ ತಾಯಂದಿರು ಗರ್ಭಿಣಿಯರಾಗುತ್ತಾರೆ, ಮಕ್ಕಳ ಹಡೆಯುತ್ತಾರೆ; ಅವರೇನೂ ಬಂಜೆಗಳಲ್ಲ. ಹಾಗಿರುವಾಗ ಮುಖದಿಂ ಹುಟ್ಟುವುದೆಂದರೆ ಏನರ್ಥ?'' ಅಂದರೆ, ಬುದ್ಧ ಐತಿಹ್ಯಗಳ ಭಂಜಕ. ಯಾವುದೋ ಕಾರಣಕ್ಕೆ, ಎಂದೋ ಹುಟ್ಟಿಕೊಂಡ ಈ ನಾಚಿಕೆಗೇಡಿನ ಮಡೆಸ್ನಾನವ ಸಮರ್ಥಿಸುವುದು ಅತ್ಯಂತ ನೀಚಬುದ್ಧಿ. ಅದನ್ನೇ ಬುದ್ಧನ ಸಂದೇಶವೆಂ ತಿಳಿಯಬೇಕು. ಮಿದುಳು ರೋಗವಿರುವ ಮೇಲ್ಜಾತಿಯ ಕೆಲವು ಧೂರ್ತ ಕೆಳಜಾತಿಯವರ ಚರ್ಮರೋಗ ನಿವಾರಿಸಲು ಅವರನ್ನು ಎಂಜಲೆಲೆಗಳ ಮೇ ಉರುಳಿಸುತ್ತಿದ್ದಾರೆ. ವೈಚಾರಿಕ ದೃಷ್ಟಿಯು ಅದನ್ನು ಉಗ್ರವಾಗಿ ಖಂಡಿಸುತ್ತದೆ.

* * *

ರಾಜ್ಯದ ಒಬ್ಬ ಸಚಿವರು ಕೊಪ್ಪಳದ ಅನುಭವದಿಂದ ಬಹಳ ವ್ಯಗ್ರರಾಗಿದ್ದಾರೆ. ಕನ್ನ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಜನ (ಸಾಹಿತಿಗಳು, ಗೋಷ್ಠಿಗಳ ಉಪನ್ಯಾಸಕಾರರು, ಭಾಷಣಗಳನ್ನು ಕೇಳಿದ ಜನ, ಸಾಹಿತ್ಯದ ಓದುಗರು, ಇತ್ಯಾದಿ) ಎ

ರಾಜ್ಯ ಸಚಿವರಿಗೆ ಚಾಮರ ಬೀಸಬೇಕಾಗಿತ್ತು. ಚಮರೀ ಮೃಗದ ಕೂದಲುಗಳಿಂದ ಮಾಡಿದ ಬೀಸಣಿಕೆಗೆ ಚಾಮರವೆನ್ನುತ್ತಾರೆ. ಆ ಮೃಗವನ್ನು ಎಲ್ಲಿ ಹುಡುಕುವುದು! ರಾಜ್ಯದಲ್ಲೆಲ್ಲಾ ಇರುವಂತೆ ಕೊಪ್ಪಳದಲ್ಲೂ ಕತ್ತೆಗಳಿವೆ. ಚಾಮರದ ಸೇವೆಯ ಬದಲು ಸಾಹಿತ್ಯ ಸಮ್ಮೇಳನದಲ್ಲಿ ಒದೆತದ ಸೇವೆಯು ಸಚಿವರಿಗೆ ಘಾಸಿಯುಂಟು ಮಾಡಿದೆ. ಹಣ ಕೊಟ್ಟು ಒದೆಸಿಕೊಂಡೆವಲ್ಲಾ ಎಂಬುದು ಸಚಿವರಿಗೆ ಕೋಪ ತಂದಿದೆ. ಅವರ ಸ್ವಂತದ ತಿಜೋರಿಯಿಂದ ತೆರೆದುಕೊಟ್ಟದ್ದಲ್ಲವೆ ಆ ಹಣ! ಸಂಸ್ಕೃತಿಯೇ ಜೀವಾಳ ತಮ್ಮದೆಂದು ಹೇಳುವ ಪಕ್ಷದ ಸಂಸ್ಕೃತಿ ಸಚಿವರು ರೋಸಿಹೋದದ್ದು ಸಹಜವೇ ಇರಬೇಕು. ಆದರೆ ಸಾರ್ವಜನಿಕವಾಗಿ ಜನ ಅವರನ್ನು ಟೀಕೆ ಮಾಡಿದ್ದಾರೆ, ಅವರು ಹಾಗೆನ್ನಬಾರದಿತ್ತೆಂದು ಬುದ್ಧಿ ಹೇಳಿದ್ದಾರೆ. ನೂರ್ಕಾಲ ಬುದ್ಧಿ ಹೇಳಿದರೂ ಅದು ನೀರ್ಗಲ್ಲೇ ಎಂದು ಈ ಮಹನೀಯರಿಗೆ ಅರಿವಿರಬೇಕಾಗಿತ್ತು. ಏಕೆಂದರೆ ಏಕಮೇವ ಚಿಂತನೆ, ಏಕಮೇವ ಘೋಷಣೆ ಮತ್ತು ಏಕಮೇವ ನಾಯಕ ಎನ್ನುವುದು ಅವರ ಮೂಲಲಕ್ಷಣ. ಅದು ಫ್ಯಾಸಿಸ್ಟ್ ವ್ಯಕ್ತಿತ್ವದ ಕುರುಹು. ಇದನ್ನು ತಿಳಿದುಕೊಳ್ಳದೆ ಅವರಿಗೆ ನೀತಿ ಪಾಠ ಹೇಳಹೊರಟಿರುವ ಸಾಹಿತಿಗಳ ತಿಳುವಳಿಕೆಗೆ ಏನೆನ್ನಬೇಕೋ!

* * *

ವಾಲ್‌ಮಾರ್ಟ್ ಸಂಬಂಧ ಪ್ರಧಾನಿ ಚಿತ್ತಾದರು. ಅವರ ಕಡೆಯ ಪಟ್ಟು ವಿಚಿತ್ರವಾಗಿತ್ತು: ''ನಾವು ದೇಶದ ನೀತಿಯೆಂದು ಅದನ್ನು ಮತ್ತು ಅಂಥವರನ್ನು ಒಳಗೆ ಬರಮಾಡಿಕೊಳ್ಳುವ ನೀತಿಯನ್ನು ಘೋಷಿಸುತ್ತೇವೆ; ಯಾವುದಾದರೂ ರಾಜ್ಯಕ್ಕೆ ಅದು ಅಪಥ್ಯವೆನಿಸಿದರೆ ಆ ರಾಜ್ಯದಲ್ಲಿ ಅವಕ್ಕೆ ಪ್ರವೇಶ ನೀಡದಿದ್ದರೆ ಆಯಿತು. ಹೀಗಿರುವಾಗ ಏನಿದು ಅರ್ಥವಿಲ್ಲದ ವಿರೋಧ?'' ಅದು ಯಾವುದೋ ಒಂದೆರಡು ರಾಜ್ಯಗಳ ಪ್ರಶ್ನೆಯಲ್ಲ, ಅದು ದೇಶದ ಪ್ರಶ್ನೆ. ಅದನ್ನು ಸಹ ತಿಳಿದು ಒಪ್ಪದಂತಹ ಪ್ರಧಾನಿಯನ್ನುಳ್ಳ ನಮ್ಮ ದೇಶದ ದೌರ್ಭಾಗ್ಯಕ್ಕೆ ಎಲ್ಲೆ ಎಲ್ಲಿ! ಅತ್ತ ವಾಲ್‌ಮಾರ್ಟ್ ದೇಶದಲ್ಲೇ ನಡೆದ ಸಂಗತಿ ಸುಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ್ದು. ಬೇರೆ ದೇಶಗಳಲ್ಲಿ ಮಾನವ ಹಕ್ಕು, ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರತಿಭಟನೆಗೆ ಮುಕ್ತ ಅವಕಾಶ ಇತ್ಯಾದಿಗಳನ್ನು ''ರಕ್ಷಿಸಲು'' ಅಮೆರಿಕಾ ತನ್ನ ಗೂಢಚಾರ ಸಂಸ್ಥೆಯನ್ನು ಬಳಸಿಕೊಳ್ಳುತ್ತದೆ, ಸೈನ್ಯವನ್ನು ನುಗ್ಗಿಸಿ ಆಕ್ರಮಣ ನಡೆಸುತ್ತಿದೆ. ಸ್ವಂತ ತನ್ನ ಮೂಗಿನಡಿ ನಡೆಯುವುದು ಯಾವಾಗಲೂ ಶ್ರೇಷ್ಠ, ಅದು ಪ್ರಜಾಪ್ರಭುತ್ವ ಎಂಬುದು ಅದರ ಬೊಗಳೆ. ಅದನ್ನು ನಂಬಿ ಪ್ರಚಾರ ಮಾಡುವ ಧೀಮಂತರು ನಮ್ಮ ದೇಶದಲ್ಲಿದ್ದಾರೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಆವರಣದಲ್ಲಿ (ಯಾರ್ಡ್‌ನಲ್ಲಿ ಎನ್ನುತ್ತಾರೆ ಅವರು) ''ವಾಲ್ ಸ್ಟ್ರೀಟ್ ಆಕ್ರಮಿಸಿ'' ಚಳುವಳಿಯ ಬೆಂಬಲಿಗರು ಒಂದು ಶಾಂತಿಯುತ ಪ್ರತಿಭಟನೆ ನಡೆಸಬೇಕೆಂದು ಆಯೋಜಿಸಿದ್ದರು. ಅವರೆಲ್ಲಾ ಅದೇ ಹಾರ್ವರ್ಡ್‌ನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು. ಅವರಿಗೆ ಅನುಮತಿ ನೀಡಲಿಲ್ಲ, ಯಾರ್ಡನ್ನು ಮುಚ್ಚಿಟ್ಟರು. ಅಲ್ಲಿ ವಿದ್ಯಾರ್ಥಿಗಳು ಹಾಕಿಕೊಂಡಿದ್ದ ಟೆಂಟ್‌ಗಳನ್ನು ಕಿತ್ತೆಸೆಯಲಾಯಿತು. ಪ್ರತಿಭಟನೆಯು ಅಧಿಕಾರಿಗಳಿಗೆ ಯಾವ ರೀತಿಯಲ್ಲೂ ತೊಂದರೆ ಕೊಡುವಂಥದಾಗಿರಲಿಲ್ಲ. ''ಆಕ್ರಮಿಸಿ'' ಎಂಬ ಚಳವಳಿಯು ಅಧಿಕಾರಾರೂಢರನ್ನೂ ಪ್ರಶ್ನಿಸುವ ಚಳವಳಿಯಾದ್ದರಿಂದ ಹಾರ್ವರ್ಡ್ ಅಧ್ಯಕ್ಷ ಡ್ರ್ಯೂ ಫೌಸ್ಟ್ ಕೆರಳಿದ, ಬೆದರಿದ. ಬೇರೆ ದೇಶಗಳಿಗೆ ಉಪದೇಶ ನೀಡುವ ಅಮೆರಿಕಾ ತನ್ನ ವ್ಯವಸ್ಥೆಗೆ ಕುತ್ತು ಬರುವುದನ್ನು ಸಹಿಸುವುದಿಲ್ಲ. ಆದರೆ ಬೇರೆ ದೇಶಗಳವರು ತಮ್ಮ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಇಚ್ಛಿಸುವವರನ್ನು ಸಹಿಸುವುದಿಲ್ಲ. ಹಾರ್ವರ್ಡ್‌ನ ಕಾನೂನು ವಿಭಾಗದ ಪ್ರಾಧ್ಯಾಪಕ ಡಂಕನ್ ಕೆನಿಡಿ ತನ್ನ ಅಧ್ಯಕ್ಷನಿಗೆ ಪತ್ರ ಬರೆದು ಛೀಮಾರಿ ಹಾಕಿದ. ಅದಕ್ಕೆಲ್ಲಾ ಮಣಿಯುವಷ್ಟು ಅಸಹಾಯಕತೆ ಹಾರ್ವರ್ಡ್ ಅಧ್ಯಕ್ಷನಿಗೆ ಎಲ್ಲಾದರೂ ಉಂಟೆ? ವಿಶ್ವಕ್ಕೆ ಅಮೆರಿಕಾ ಒಡೆಯ, ಅಮೆರಿಕಾದ ಬೌದ್ಧಿಕತೆಗೆ ಹಾರ್ವರ್ಡ್ ಅಧ್ಯಕ್ಷ ಒಡೆಯ!

* * *

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕೆಲವೊಮ್ಮೆ ಗಾಂಧೀಜಿ ಕೈಗೊಳ್ಳುತ್ತಿದ್ದ ಉಪವಾಸ ಅವರ ನಿಕಟವರ್ತಿಗಳಿಗೇ ಅರ್ಥವಾಗುತ್ತಿರಲಿಲ್ಲವಂತೆ. ಭ್ರಷ್ಟಾಚಾರದ ವಿರುದ್ಧ ಹೋರಾಟ, ಹಾರಾಟಗಳಲ್ಲಿ ತೊಡಗಿರುವ ಅಣ್ಣಾ ಹಜಾರೆ ಉಪವಾಸವೂ ಹಾಗೇ ಎನಿಸುತ್ತಿದೆ. ಭ್ರಷ್ಟಾಚಾರದ ವಿರುದ್ಧ ಜನರನ್ನು ಜಾಗೃತಗೊಳಿಸಲು, ಸರಕಾರವನ್ನು ಎಚ್ಚರಿಸಲು ಅಣ್ಣಾ ಬಳಗ ನಡೆಸಿರುವ ಹೋರಾಟ ಸ್ತುತ್ಯರ್ಹವೆ. ಆದರೆ ಅದು ಅತಿಯಾಗುತ್ತಿದೆಯೋ ಎಂಬ ಅನುಮಾನ ಬರತೊಡಗಿದೆ. ಪಾರ್ಲಿಮೆಂಟಿನಲ್ಲಿ ಸರಕಾರ ಮಸೂದೆ ಭಾಗಶಃ ಅಂಗೀಕರಿಸಿದ ಮೇಲೆಯೂ ಉಪವಾಸ ಕೂರುವ ಅಗತ್ಯವೇನಿತ್ತು? ಮುಂಬೈ ಹೈಕೋರ್ಟ್ ಎತ್ತಿದ್ದ ಈ ಪ್ರಶ್ನೆ ಸಮಂಜಸ. ಸೂಕ್ತ ಕಾನೂನಿಗಾಗಿ ಒತ್ತಡ ತರಬೇಕು ನಿಜ. ಆದರೆ ಎಂಥದ್ದಾಗಿರಬೇಕು ಎಂಬುದೇ ಪ್ರಶ್ನೆ. ಇಲ್ಲದಿದ್ದರೆ ಅದು ಬೆದರುಗೊಂಬೆ ಎಂದಾಗುತ್ತದೆ. ಕೇವಲ ಒಂದು ಪಕ್ಕಾ ಕಾನೂನಿನಿಂದ ಭ್ರಷ್ಟಾಚಾರ ತೊಲಗುವುದಿಲ್ಲ. ಈ ಪಿಡುಗಿನ ನಿವಾರಣೆಗೆ ನಿರಂತರ ಸಮರ ಅಗತ್ಯ. ಜನಜಾಗೃತಿಗೊಂಡರೆ ಮಾತ್ರ ಸಾಧ್ಯವಾದೀತು. ಅಂತೂ ೨೦೧೧ ಭ್ರಷ್ಟಾಚಾರದ ವರ್ಷವಾಯಿತು. ೨ಜಿ ಹಗರಣ, ಭೂಸ್ವಾಧೀನ ಹಗರಣ, ಗಣಿಗಾರಿಕೆ ಉಪಟಳ ಎಲ್ಲ. ಕೇಂದ್ರ ಹಾಗೂ ಕರ್ನಾಟಕದ ಸಚಿವರುಗಳು ಕಾರಾಗೃಹ ಸೇರಿದ್ದು ಎಲ್ಲ ಕಳೆದ ವರ್ಷದಲ್ಲೇ. ಗುಡ್‌ಬೈ ೨೦೧೧. ೨೦೧೨ರಲ್ಲಿ ಏನು ಕಾದಿದೆಯೋ!

* * *

ಅಂತೂ ಹಿಂದುತ್ವ ಉಗ್ರಪ್ರತಿಪಾದಕರಿಗೆ ಏನಾದರೂ ಕಾರಣ ಸಿಗುತ್ತಿರುತ್ತದೆ ಹಾರಾಡಲು. ನಮ್ಮ ಹಿರಿಯ ಸಾಂಸ್ಕೃತಿಕ ಪರಂಪರೆಗೆ ಕಳಂಕ ಹಚ್ಚುವ ಪ್ರಯತ್ನ ನಡೆಯುತ್ತಿದೆ. ನಮ್ಮ ದೇವತೆಗಳಿಗೆ ಅಪಮಾನವಾಗಿದೆ. ನಮ್ಮ ಪವಿತ್ರ ಗ್ರಂಥವನ್ನು ಅವಹೇಳನ ಮಾಡಿದ್ದಾರೆ ಎಂದು ಏನೆಲ್ಲ ಅಬ್ಬರಗಳನ್ನು ಮಾಡಲು ಭಾಜಪದವರು, ಸಂಘ ಪರಿವಾರದವರು ತುದಿಗಾಲ ಮೇಲೆ ನಿಂತಿರುತ್ತಾರೆ. ದಬಾದುಬಿ ಮಾಡುತ್ತಾರೆ. ಎ. ಕೆ. ರಾಮಾನುಜನ್ ರಾಮಾಯಣ ಮುಗಿಯುತ್ತಿದ್ದ ಹಾಗೆಯೇ ಸಿಕ್ಕಿದ್ದು ರಷ್ಯಾದಲ್ಲಿ ಭಗವದ್ಗೀತೆ ನಿಷೇಧಿಸುತ್ತಾರಂತೆ ಎಂಬ ಪ್ರಸಂಗ. ಇದರಿಂದ ನಮ್ಮ ದೇಶಕ್ಕೆ, ನಮ್ಮ ಪವಿತ್ರ ಗ್ರಂಥಕ್ಕೆ ಅಪಮಾನವಾಗಿದೆ ಎಂದು ಬೊಬ್ಬೆ. ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷದ ನಾಯಕ ಇದರ ಬಗ್ಗೆ ಗುಡುಗಿದರು, ಕಣ್ಣೀರು ಹರಿಸಲಿಲ್ಲ ಅಷ್ಟೆ! ಆದರೆ ಸರಕಾರ ಭಗವದ್ಗೀತೆಯನ್ನು ರಾಷ್ಟ್ರೀಯ ಪವಿತ್ರ ಗ್ರಂಥ ಎಂದು ಘೋಷಿಸಬೇಕೆಂದು ಹಲುಬಿದರು. ವಿದೇಶಾಂಗ ಸಚಿವ ಕೃಷ್ಣ ಗಾಬರಿಯಿಂದ ವಿಷಯ ತಿಳಿಯದೆ 'ಬೆಬೆಬೆ' ಎಂದರು. ನಿಜಸಂಗತಿ ಏನು ಗೊತ್ತೆ? ದೂರದ ಸೈಬೀರಿಯದಲ್ಲಿ 'ಇಸ್ಕಾನ್'ನ ಕೃಷ್ಣಭಕ್ತರ ಅವಾಂತರ ಹೆಚ್ಚಾಗಿದೆಯಂತೆ. ಅವರು ಪ್ರಕಟಿಸಿರುವ ಭಗವದ್ಗೀತೆಯ ವ್ಯಾಖ್ಯಾನದಲ್ಲಿ ಕೆಲವು ಆಕ್ಷೇಪಾರ್ಹ ಭಾಗಗಳಿವೆ. ಅದನ್ನು ಪ್ರಶ್ನಿಸಿ, ಪುಸ್ತಕವನ್ನು ನಿಷೇಧಿಸುವಂತೆ ನ್ಯಾಯಾಲಯದ ಮೊರೆ ಹೋಗಲಾಗಿದೆ. ನ್ಯಾಯಾಲಯವು ಅರ್ಜಿಯನ್ನು ತಳ್ಳಿ ಹಾಕಿದೆ. ರಷ್ಯಾದಲ್ಲಿ ಭಗವದ್ಗೀತೆ ಅನುವಾದ ೧೭೮೮ರಲ್ಲೇ ಪ್ರಕಟವಾಗಿದೆ. ಅಂತೂ ಕಾಲಿ ಗಲಾಟೆ ಮಾಡಲು ಸಂಘಪರಿವಾರದವರು ಸದಾಸಿದ್ಧ.

* * *

ಯಡಿಯೂರಪ್ಪ ಪರಪ್ಪನ ಅಗ್ರಹಾರದಿಂದ ಬಂದು ತಿಂಗಳ ಮೇಲಾಯಿತು. ಅಧಿಕಾರ ಕಳೆದುಕೊಂಡಿರುವ ಅವರು ಪಾಪ ಒದ್ದಾಡುತ್ತಿದ್ದಾರೆ. ದೇವಾಲಯಗಳೆಲ್ಲೆಡೆ ಸೇವೆ ಸಲ್ಲಿಸಿದ ಈತನ ಚಲನವಲನಗಳ ಬಗ್ಗೆ ಈಗಲೂ ಗುಮಾನಿ, ಯಾವ ಕ್ಷಣದಲ್ಲಿ ಏನು ಮಾಡುತ್ತಾರೋ ಎಂಬ ಅನುಮಾನ. ಬೆಂಬಲಿಗರಿಗೇನೂ ಕಮ್ಮಿ ಇಲ್ಲ ಎಂದು ತೋರಿಸಿಕೊಂಡಿದ್ದಾರೆ. ದೆಹಲಿಯಾತ್ರೆಯಲ್ಲಿ ಎಂಪಿಗಳನ್ನು ಕಲೆಹಾಕಿದ್ದು ಎಚ್ಚರಿಕೆ ಗಂಟೆ. ಪಕ್ಷದ ವರಿಷ್ಠರಿಗೆ ದುಂಬಾಲುಬಿದ್ದರು ಅಧಿಕಾರ ಯಾಚಿಸಿ. ಪ್ರಯೋಜನವಾಗದೆ ಬರಿಗೈಯಲ್ಲಿ ಹಿಂದಿರುಗಿಬಂದು ತಮ್ಮ ಆಪ್ತ ಸಚಿವೆ ಜೊತೆ ಯಾಗಮಾಡಿದರು ದುಷ್ಟ ಶಕ್ತಿಗಳನ್ನು ದೂರ ಇರಿಸಲು. ಅಂದಹಾಗೆ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಭಾಜಪ ಶಾಸಕರು ಮೂರು ಗುಂಪುಗಳಲ್ಲಿ, ಮೂವರು ನಾಯಕರ ನೇತೃತ್ವದಲ್ಲಿ ಬಂದು ಗೌಡರಿಗೆ ಮತ ಹಾಕಿದರು ಶಿಸ್ತಿನಿಂದ! ಆದರೂ ಐದು ಮತಗಳು ಅಸಿಂಧು. ಅತಿ ಬುದ್ಧಿವಂತ ಶಾಸಕನೊಬ್ಬ ಮತ ಚೀಟಿಯನ್ನು ನಿಷ್ಠೆಯಿಂದ ಮುಖ್ಯಮಂತ್ರಿಗೆ ತೋರಿಸಿ ಮುಖಕೆಡಿಸಿಕೊಂಡು ಪೆಚ್ಚಾದ!

* * *

ಅಂದಹಾಗೆ ಸಂದರ್ಭಸಾಧಕತನಕ್ಕೆ ಭಾಜಪ ಹೆಸರುವಾಸಿ. ಅಖಿಲ ಭಾರತ ಮಟ್ಟದಲ್ಲಿ ಅದನ್ನು ತೋರಿಸಿಕೊಂಡಿದ್ದಾರೆ. ಕರ್ನಾಟಕದಲ್ಲಂತೂ ನಾಲ್ಕು ವರ್ಷಗಳಿಂದ ನೋಡುತ್ತಿದ್ದೇವೆ. ಶಿಸ್ತಿನಪಕ್ಷವೆಂದು ಕರೆದುಕೊಳ್ಳುತ್ತಿದ್ದ ಭಾಜಪ ಜಾರತೊಡಗಿದ್ದು ಅಧಿಕಾರಲಾಲಸೆಯಿಂದ ಕುಮಾರಸ್ವಾಮಿ ಜೊತೆ ಕೈಜೋಡಿಸಿದಾಗ. ಮತ್ತೆ ಸ್ವಲ್ಪವೂ ನಾಚಿಕೆ ಇಲ್ಲದೆ ನಡೆಸಿದ 'ಆಪರೇಷನ್ ಕಮಲ' ಕಸರತ್ತು. ಬಳ್ಳಾರಿ ಉಪಚುನಾವಣೆಯಲ್ಲಿ ಸೋತು ಸುಣ್ಣವಾದ ಪಕ್ಷ, ಪಕ್ಷವಿರೋಧಿ ಚಟುವಟಿಕೆಯಲ್ಲಿ ತೊಡಗಿ ಬಹಿರಂಗವಾಗಿ ಪಕ್ಷದ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿದ ನಾಲ್ವರು ಶಾಸಕರನ್ನು ಈಶ್ವರಪ್ಪ ವೀರಾವೇಶದಿಂದ ಅಮಾನತುಗೊಳಿಸಿದರು. ಪರಿಷತ್ ಚುನಾವಣೆಯಲ್ಲಿ ಮತಗಳಿಸಲು ಬಾಲ ಮುದುರಿಕೊಂಡು ನಾಚಿಕೆಯಿಲ್ಲದೆ ಅಮಾನತನ್ನು ರದ್ದುಗೊಳಿಸಿದರು. ಒಳಗೊಳಗೇ ಅತೃಪ್ತರನ್ನು ಸಂಭಾಳಿಸಲು ಏನೇನು ಮಾಡಿದ್ದಾರೋ ಗೊತ್ತಿಲ್ಲ. ಅಧಿಕಾರ ಉಳಿಸಿಕೊಳ್ಳಲು ಭಾಜಪಗೆ ಏನೇ ಮಾಡಿದರೂ ಶ್ರೀರಾಮನ ಕೃಪೆ ಇದೆ. ಇನ್ನೆರಡು ವರ್ಷಗಳಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ಕನಸು ಕಾಣುತ್ತಿದ್ದಾರೆ. ಆರ್.ಎಸ್.ಎಸ್. ನಾಯಕ ಮೋಹನ್ ಭಾಗವತ್. ಜೈ ಶ್ರೀರಾಮ್! [illegible]

* * *

೧೭ನೇ ಪುಟಕ್ಕೆ

ಪರಿವಿಡಿ

ಪರಿವಿಡಿ

ಮುಖಚಿತ್ರ : ಶಿಲ್ಪಿ ಶ್ರೀ ವೆಂಕಟಾಚಲಪತಿ ಅವರ ಒಂದು ಶಿಲ್ಪಕೃತಿ

ವಿನ್ಯಾಸ : ನವಕರ್ನಾಟಕ ವಿನ್ಯಾಸ

ಈ ಸಂಚಿಕೆಯ ಚಿತ್ರಗಾರರು :
ಶ್ರೀಹರಿ, ಸಂಕೇತ್, ಸುವರ್ಣ, ಕಮಲಂ ಅರಸು, ಗೋಪಿ, ರಾಂಚಂದ್ರ ಕೊಪ್ಪಲು, ಡಿ. ಟಿ. ಲೋಹಿತ್, ಬಿ. ಎ. ಹಿರೇಮಠ, ಡಿ. ವಿಲ್ಸನ್, ಜಿ. ಎಂ. ಬೊಮ್ನಳ್ಳಿ

ಕಚೇರಿ ಸಹಕಾರ : ಜಿ. ವಿ. ತೇಜೋವತಿ









ಡಿಸೆಂಬರ್ ಸಂಚಿಕೆ

ಒಕ್ಕುಂದರವರ 'ಮತೀಯ ರಾಷ್ಟ್ರೀಯವಾದಿ ನೆಲೆ ಹಾಗೂ ಕುವೆಂಪು ಅವರ ಹಂಪೆಯ ಭೀಮ' ಎಂಬ ಲೇಖನ ಕುವೆಂಪು ಸಾಹಿತ್ಯ ಹಾಗೂ ಕನ್ನಡ ವಿಮರ್ಶೆಯ ಜಗತ್ತಿಗೆ ಹೊಸ ಹಾಯ್ ಬೆಳಕನ್ನು ಹರಿಸಿ, ಹೊಸ ಕೀಲಿಕೈ ಒದಗಿಸಿದೆ ಎನ್ನಬಹುದು. ಯುಗದ ಕವಿ ಜಗದ ಕವಿಯೂ ಸಹ ಚರಿತ್ರೆಯ ವಾಸ್ತವಕ್ಕೆ ಮಿಡಿಯುವ ದನಿಯಾಗುತ್ತಾರೆಂಬುದನ್ನು ಲೇಖಕರು ತುಂಬ ಸಂಯಮ ಹಾಗೂ ನಮ್ರತೆಯಿಂದಲೇ ಮನಗಾಣಿಸುತ್ತಾರೆ. ನವೋದಯ ಕಾಲಘಟ್ಟದ ದಾಸ್ಯವಿಮೋಚನೆಯ ಚಿಂತನೆಗೆ ಅಭಿವ್ಯಕ್ತಿ ನೀಡುವಲ್ಲಿ ಕುವೆಂಪು ಸಹ ಅಪ್ರಜ್ಞಾಪೂರ್ವಕವೆಂಬಂತೆ, ಹಿಂದೂ ಮತೀಯ ರಾಷ್ಟ್ರೀಯತೆಯತ್ತ ಒಲಿದಿರಬಹುದೆಂಬುದನ್ನು ಒಕ್ಕುಂದ ಅವರ ಲೇಖನ ಬಹು ಸೂಕ್ಷ್ಮವಾಗಿ ತೆರೆದು ತೋರಿಸುತ್ತದೆ ಮತ್ತು ಈ ನೆಲೆಯಿಂದ ಕುವೆಂಪು ಸಾಹಿತ್ಯವನ್ನು ಮರುಚಿಂತನೆಗೆ ಒಡ್ಡುವ ಸಾಧ್ಯತೆಯನ್ನೂ ಇದು ಸೂಚಿಸುತ್ತದೆ.

ಯಾಕೆಂದರೆ, ಡಾ॥ ಒಕ್ಕುಂದರ ಲೇಖನ ಗಮನಿಸಿದ ಮೇಲೆ, ಕುವೆಂಪು 'ಮದುಮಗಳು' ಕಾದಂಬರಿಯಲ್ಲಿ ಯಾಕೆ 'ಸಾಬರು'ಗಳನ್ನು ಅಷ್ಟು ಅಲಕ್ಷ್ಯದಿಂದ ಕಾಣುತ್ತಾರೆ ಎಂಬ ಪ್ರಶ್ನೆಗೂ ಉತ್ತರ ಸಿಕ್ಕಿತು ನನಗೆ. ಕುವೆಂಪು ಮತೀಯ ರಾಷ್ಟ್ರೀಯತೆಯ ಬಗ್ಗೆ ಹೀಗೆ ಮಾತನಾಡಿದಾಕ್ಷಣ ಆ ಮಹಾಕವಿ ಚೇತನಕ್ಕೆ ನಾವು ಅಪಚಾರ ಮಾಡಿದಂತೇನೂ ಅಲ್ಲ. ಮಿಕ್ಕಂತೆ, ಅವರ ಜಾತ್ಯತೀತ ವೈಚಾರಿಕ ಪ್ರಜ್ಞೆ, ವೈಜ್ಞಾನಿಕ ಮನೋಭಾವ ಅನನ್ಯ.ಆದರೆ ಇಂದಿನ ಪ್ರಜಾಪ್ರಭುತ್ವ ಮೌಲ್ಯವರ್ಧನೆಯ ದೃಷ್ಟಿಯಿಂದ ಒಕ್ಕುಂದ ಅವರ ಒಳನೋಟ ಅನುಕರಣೀಯ. ಇದೇ ಕೀಲಿಕೈ ಹಿಡಿದು ಹೊಸಗನ್ನಡ ಕವಿಗಳ ಸಾಹಿತ್ಯ ಭಂಡಾರದ ಮುದ್ರೆಯನ್ನು ಒಡೆದು ನೋಡುವುದೇ ಒಂದು ವಿಸ್ಮಯದ ಸಂಗತಿ ಎಂದು ನನಗನಿಸುತ್ತಿದೆ.

ಬೆಂಗಳೂರು **ಪ್ರೊ॥ ಶಿವರಾಮಯ್ಯ**

'ನಿಯತಿ'ಯ ವರ್ಣಚಿತ್ರವನ್ನು ಮುಖಪುಟದಲ್ಲಿ ಪ್ರಕಟಿಸುವುದರ ಮೂಲಕ ಎಂ. ವೈ. ಘೋರ್ಪಡೆಯವರನ್ನು ಸ್ಮರಿಸಿರುವುದು ಶ್ಲಾಘನೀಯ.

ಬೆಂಗಳೂರಿನಲ್ಲಿ ನಡೆದ ಕನ್ನಡ ಕ್ರಿಯಾ ಸಮಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ದಿ॥ ಎಂ. ವೈ. ಘೋರ್ಪಡೆಯವರು ತಾವೊಬ್ಬ ಮಾಜಿ ಮಂತ್ರಿಗಳು ಎನ್ನುವ ಹಮ್ಮುಬಿಮ್ಮಿಲ್ಲದೇ ನಮ್ಮೊಂದಿಗೆ ಬೆರೆತಾಗ ನಾನು ಚಕಿತನಾಗಿದ್ದೆ! ಅಂತಹ ಸಹೃದಯರು, ಅವರು!

ಕಾಕತಾಳೀಯವೋ ಎಂಬಂತೆ ಈ ಸಂಚಿಕೆಯಲ್ಲಿ ನಿಯತಿ ಎಂಬ ಕತೆ (ಮಹಾದೇವ ಹಡಪದ) ಕೂಡ ಪ್ರಕಟವಾಗಿದೆ. ಜೈಲರ್‌ನ ಮಾತು ಗಮನಾರ್ಹ. 'ಹದ ಹಿಡಿದು ಬಾಳೇವ್ ಕಟ್ಟಿಕೊಂಡರೆ ಎಲ್ಲರ ಬಾಳೂ ಚೆಂದವಾಗುತ್ತದಲ್ಲವೇ?' ಕಥಾ ತಂತ್ರ ಪರಿಣಾಮಕಾರಿಯಾಗಿದೆ!

ಭೂ ಸ್ವಾಧೀನದ ಹಿಂದಿರುವ ಕರಾಳ ಮುಖಗಳನ್ನು ಸಿ. ಯತಿರಾಜು ಅವರ (ಭೂ-ಪರಿಹಾರ ನಮಗೆ ಬೇಡ; ಲಾಭದ ಪಾಲು ಬೇಕೇ ಬೇಕು) ಲೇಖನ ಸೊಗಸಾಗಿ ಅನಾವರಣಗೊಳಿಸಿದೆ. ರಾಜಕಾರಣಿಗಳು ಮತ್ತು ಭೂ ಮಾಫಿಯಾದ ಡವಲಪರ್‌ಗಳಿಂದಾಗಿ ಭೂ ಕಬಳಿಕೆಯು ಅವ್ಯಾಹತವಾಗಿ ಸಾಗಿದೆ! ಇದೆಲ್ಲ ಸದ್ಯಕ್ಕೆ ನಿಲ್ಲುವ ಹಾಗೆ ಕಾಣುತ್ತಿಲ್ಲ.

ರಾಜಾಸ್ಥಾನ್ ಮೂಲದ ಹಲವು ಕಮ್ಮಾರ ಕುಟುಂಬಗಳು ಮೈಸೂರು ಜಿಲ್ಲೆಯ ಕೆ. ಆರ್. ನಗರದ ಆಸುಪಾಸು ಕೆಲಸ ಮಾಡುತ್ತಿದ್ದು, ಕೆ. ಜಿ. ಲೆಕ್ಕದಲ್ಲಿ ಉಪಕರಣಗಳನ್ನು ಕಬ್ಬಿಣ/ ಉಕ್ಕಿನಿಂದ ತಯಾರಿಸುವಲ್ಲಿ ನಿರತರಾಗಿದ್ದಾರೆ. ಮಣಭಾರದ ಸುತ್ತಿಗೆಯಲ್ಲಿ ಕಾದ ಲೋಹದ ತುಂಡನ್ನು ಹೆಣ್ಣು ಮಕ್ಕಳು ಬಡಿಯುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಪಾಪಿ ಹೊಟ್ಟೆ.. ಏನೇನೆಲ್ಲಾ ಮಾಡಿಸುತ್ತದೆ, ಅಲ್ಲವೇ! ವಾಮದೇವ ಕಾಗದಗಾರರ 'ಅಲೆಮಾರಿ ಕಮ್ಮಾರರ ಬದುಕು...'



ಲೇಖನ ನೋಡಿದಾಗ ಆ ದೃಶ್ಯ ಕಣ್ಮುಂದೆ ಬಂದಿತು.

ಮರೆತುಹೋದ ಮಹಾನುಭಾವ ಎಚ್. ದೇವೀರಪ್ಪನವರನ್ನು ನೆನಪಿಸಿದ ಡಾ॥ ಚನ್ನೇಶ್ ಹೊನ್ನಾಳಿಯವರ ಕೆಲಸ ಅಭಿನಂದನೀಯ.

ಮೈಸೂರು **ಕೋ. ಸು. ನರಸಿಂಹಮೂರ್ತಿ**

ಡಿ. ಅಂಜನಪ್ಪ ಅವರ 'ಭಾಷೆ: ಬಳಕೆ ಮತ್ತು ಸವಾಲು' ಎಂಬ ಲೇಖನವು ಉತ್ತಮವಾಗಿ ಮೂಡಿಬಂದಿದೆ. 'ಭಾಷೆ ಎಂಬ ಪರಿಕರವು ಆಯಾ ಕಾಲಘಟ್ಟದಲ್ಲಿ ಉತ್ಪಾದನಾ ವ್ಯವಸ್ಥೆಯಲ್ಲಿ ಅನೇಕ ರೀತಿಯ ಬದಲಾವಣೆಯನ್ನು ಕಂಡುಕೊಂಡಿದೆ. ಅದರಲ್ಲಿ 'ನೀಡುವವರು' ಈ ಪರಿಕರವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡರೆ, 'ಬೇಡುವವರು' ಈ ಪರಿಕರವನ್ನು ಕೂಲಿ ಗಳಿಸುವುದಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ. ಪ್ರಸ್ತುತ ನವ ವಸಾಹತುಶಾಹಿ ವ್ಯವಸ್ಥೆಯಲ್ಲಿ ಈ ಒಂದು ಪರಿಕರವನ್ನು ಪ್ರಖರವಾಗಿ ಬಳಸಲಾಗುತ್ತಿದ್ದು ಇದರಿಂದ ಇನ್ನಿತರ ಪ್ರಾಂತೀಯ, ನೇಟಿವ್ ಭಾಷೆಗಳು ಮೂಲೆಗುಂಪಾಗುತ್ತಿರುವುದು ಒಂದು ದುರಂತ. ಆದರೆ ನೀಡುವವರು ಬಲಯುತರಾಗಿ ಬೇಡುವವರು ಶಕ್ತಿ ಕಳೆದುಕೊಳ್ಳುತ್ತಾರೆ. ಆದುದರಿಂದಲೇ ಉಲ್ಯಾನೋವ್ ಲೆನಿನ್ ಒಂದೆಡೆ ಹೀಗೆ ಹೇಳಿದ್ದಾರೆ. ''ಬಂಡವಾಳಶಾಹಿಯು ತಮ್ಮ ಶ್ರಮಿಕರಿಗೆ ನೀಡುವ ಶಿಕ್ಷಣವು ಯಾವ ಮಟ್ಟದ್ದಾಗಿರುತ್ತದೆ ಎಂದರೆ, ಶ್ರಮಿಕನು ಉತ್ಪಾದನಾ ಕ್ರಿಯೆಯಲ್ಲಿ ಅದನ್ನು ಬಳಸಿ ಕೂಲಿ ಗಳಿಸುವಷ್ಟಕ್ಕೇ ಮೀಸಲಾಗಿರುತ್ತದೆ, ಅದಕ್ಕಿಂತ ಬಂಡವಾಳಶಾಹಿಯು ಉತ್ತಮ ಶಿಕ್ಷಣವನ್ನಾಗಲೀ ಭಾಷೆಯನ್ನಾಗಲಿ ಕೊಡಲಾರದು'' ಎಂದು.

ಬೆಂಗಳೂರು **ಭಾಷ...**

ಮೇ ೨೦೧೧ರ 'ಹೊಸತು' ಸಂಚಿಕೆಯಲ್ಲಿ ಶ್ರೀ ಗಂಗಾಧರ ಕೊಡ್ಲಿ 'ಸಂತಕವಿ ಕನಕದಾಸ' ಎಂಬ ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ''ಇತಿಹಾಸದ ಪುಟಗಳನ್ನು ತಿರುವಿದಾಗ ಕನಕದಾಸರ ಬದುಕಿನ ಕಾಲಾವಧಿ ೧೪೯೦ರಿಂದ ೧೫೮೦ ಎಂದು ನಿಖರವಾಗಿ ಗುರುತಿಸಲಾಗಿದೆ'' ಎಂದು ಬರೆದಿದ್ದಾರೆ. ಹೀಗೆಂದು ಗುರುತಿಸಿದವರು ಯಾರು? ನಾನು ''ಕನಕದಾಸ ಜೀವನ ವಿಚಾರ'' ಎಂಬ ಕೃತಿ ರಚಿಸಿರುವೆ. ಅದರಲ್ಲಿ ಅವರ ಜೀವಿತದ ಕಾಲಾವಧಿ ೧೪೮೮-೧೫೭೮ ಎಂದು ನಿರ್ಣಯಿಸಿರುವೆ. ತಮ್ಮ ಲೇಖನದಲ್ಲಿ ಜನನ ೧೪೯೧ ಎಂದೂ ಮರಣ ೧೫೮೦ ಎಂದೂ ಬರೆದಿರುವ ಲೇಖಕರು ಕನಕ ೯೦ ವರ್ಷಗಳ ತುಂಬು ಜೀವನ ನಡೆಸಿದ್ದರೆಂದೂ ಬರೆದಿದ್ದಾರೆ. ಇದು ಅಸಮಂಜಸವೆಂಬುದು ಸ್ಪಷ್ಟ.

ಬೆಳಗಾವಿ **ಪ್ರೊ॥ ಜ್ಯೋತಿ ಹೊಸೂ...**

ಸಂಸ್ಕೃತಿ ವರ್ಧಿತ ವಿಮರ್ಶೆಯಲ್ಲ

ಡಾ॥ ಎಂ. ಡಿ. ವಕ್ಕುಂದ ಅವರ 'ಮತೀಯ ರಾಷ್ಟ್ರೀಯವಾದಿ ನೆಲೆ ಹಾಗೂ ಕುವೆಂಪು ಅವರ ಹಂಪೆಯ ಭೀಮ' ಲೇಖನ ವಿಶಿಷ್ಟ ಒಳನೋಟಗಳಿಂದ ಕೂಡಿದ್ದರೂ ಕುವೆಂಪು ಮುಸ್ಲಿಂ ವಿರೋಧಿ (ಅದರ ಆಶಯ ಅದಲ್ಲದಿದ್ದರೂ) ಎಂಬ ಭಾವನೆಯನ್ನು ಮೂಡಿಸುತ್ತದೆ. ಇದು ರಾಜಕೀಯ ನೆಲೆಯ ಚಿಂತನೆಯೆ ಹೊರತು ಸಂಸ್ಕೃತಿವರ್ಧಿತ ವಿಮರ್ಶೆಯಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ತನ್ನ ದೇಶ, ತನ್ನ ಭಾಷೆ, ತನ್ನ ಸಂಸ್ಕೃತಿ, ತನ್ನ ಧರ್ಮ ಎನ್ನುವುದು ಒಂದು ಅನಿವಾರ್ಯವಾದ ಸ್ವಾಭಿಮಾನವನ್ನು ಕಾಪಾಡಿಕೊಳ್ಳುವ ಲೌಕಿಕ ಅಂಶಗಳೆ ಹೊರತು ಅವ...

ಡಿಸೆಂಬರ್ ಸಂಚಿಕೆ

''ಮತೀಯ ರಾಷ್ಟ್ರೀಯವಾದಿ ನೆಲೆ ಹಾಗೂ ಕುವೆಂಪು ಅವರ 'ಹಂಪೆಯ ಭೀಮ' '' ಎಂಬ ಲೇಖನದ ಪುಟ ಸಂಖ್ಯೆ ೨೩ರಲ್ಲಿಯ ಈ ಕೆಳಗಿನ ಸಾಲುಗಳು ಡಾ॥ ರಾಜೇಂದ್ರ ಚೆನ್ನಿಯವರ 'ನೆನಪಿನ ದೋಣಿಯಲ್ಲಿ ಕುವೆಂಪು – ಕೆಲವು ಪ್ರಶ್ನೆಗಳು' ಎಂಬ ಲೇಖನದಿಂದ ಉದ್ಧೃತವಾಗಿದ್ದು ಉದ್ಧೃತ ಚಿಹ್ನೆಯು ತಪ್ಪಿಹೋಗಿದೆ.

''ತಪನ್ ರಾಯ್ ಚೌಧರಿ, ವಿಲಿಯಂ ರ್‍ಯಾಡೀಸ್, ದೀಪೇಶ್ ಚಕ್ರವರ್ತಿ... ಇವುಗಳೇ ಈ ಚೌಕಟ್ಟಿಗೆ ಆಧಾರಗಳಾಗಿವೆ.'' ಈ ತಿದ್ದುಪಡಿಯನ್ನು ಗಮನಿಸಬೇಕಾಗಿ ವಿನಂತಿ.

– ಸಂಪಾದಕ

ಅಂತಿಮವಲ್ಲ. ಇದು ಕುವೆಂಪು ಅವರ ಇಡೀ ಸಾಹಿತ್ಯದ ನೆಲೆಯಾಗಿದೆ. ಅವರ 'ಬಾರಿಸು ಕನ್ನಡ ಡಿಂಡಿಮವ' ಎನ್ನುವ ಮಾತು ಈ ನೆಲೆಯದ್ದು. ಅದರಲ್ಲಿ ಬರುವ 'ಸತ್ತಂತಿಹರನು ಬಡಿದೆಚ್ಚರಿಸು' ಎನ್ನುವುದನ್ನು ಅನ್ಯರ ಮೇಲೆ ಧಾಳಿಗೆ ಪ್ರಚೋದಿಸುವಂಥದ್ದು ಎಂದು ವ್ಯಾಖ್ಯಾನಿಸ ಬಹುದಾದರೂ ಅವರ ಆ ಧ್ವನಿಯ ಎಚ್ಚರ ಸ್ವಾಭಿಮಾನ ವನ್ನು ಕಾಪಾಡಿಕೊಂಡು ಸಾರ್ಥಕತೆಯನ್ನು ಕಂಡುಕೊಳ್ಳ ಬೇಕೆಂಬ ಕರೆಯದ್ದು ಎಂಬುದನ್ನು ಮರೆಯಬಾರದು. 'ಹಂಪೆಯ ಭೀಮ' ಕೂಡ ಈ ನೆಲೆಯದು.

'ಈ ಶತಮಾನಗಳ ದೀರ್ಘಾವಧಿಯಲ್ಲಿ ಎರಡೂ ಜನರ ಸಂಸ್ಕೃತಿಗಳೂ ಯಮಳ ನದಿಗಳಂತೆ ಜೊತೆ ಜೊತೆಯಾಗಿ ಸಾಗಿಯೂ ಒಂದನ್ನೊಂದು ವರ್ಧಿಸದೆ, ಒಂದರ ಮುನ್ನಡೆಗೆ ಮತ್ತೊಂದು ನೆರವಾಗದೆ ಒಂದನ್ನೊಂದು ಸಂಗಮಿಸದೆ ಅಪರಿಚಿತರಂತೆ ಮಾರ್ಮಲೆತು ಮೊಗದಿರುಹಿ ದೂರದೂರವೆ ನಿಲ್ಲುವುದು ಅಸಾಧ್ಯವೆಂಬ ಮಾತು ಎಂತಹವರಿಗೂ ಸುಸಂವೇದ್ಯ... ಇಂದಿನ ಭರತಖಂಡದ ಸಂಸ್ಕೃತಿ ವಿಕಾಸಕ್ಕೆ ಪ್ರೇರಕ ಶಕ್ತಿ ಇಲ್ಲಿಯ ಹಿಂದೂ ಮುಸ್ಲಿಮಾದಿ ಎಲ್ಲ ಜನತೆಯ ಮಧುರ ಮೈತ್ರಿ ಸಹಕಾರಗಳೆಂಬುದರ ಅರಿವಿಲ್ಲದಿರುವುದೆ ನಮ್ಮ ಬೀಳಿಗೆ ಕಾರಣವಾಗಿದೆ' (ಇಸ್ಲಾಂ ಸಂಸ್ಕೃತಿ; ಕುವೆಂಪು ಸಮಗ್ರ ಗದ್ಯ ಸಂ.-೨; ಪುಟ-೭೬೭) ಎನ್ನುವ ಕುವೆಂಪು ಅವರ ಮಾತುಗಳು ಹಿಂದೂ-ಮುಸ್ಲಿಮರ ಮೈತ್ರಿ ಎಷ್ಟು ಗಾಢವಾದುದು ಎಂಬುದನ್ನು ಪ್ರತಿಪಾದಿಸುತ್ತವೆ. 'ನಾಡಗೀತೆ'ಯಲ್ಲಿಯೂ ಕುವೆಂಪು ಅವರು 'ಸರ್ವ ಜನಾಂಗದ ಶಾಂತಿಯ ತೋಟ... ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ' ಎಂದಿರುವುದು ಅವರು ಸರ್ವ ಜನಾಂಗವನ್ನು ಸಮಾನ ಹಾಗೂ ಗೌರವದಿಂದ ಪರಿಭಾವಿಸಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.


ಅಧ್ಯಾತ್ಮವನ್ನು ಕುರಿತು ಬಹಳಷ್ಟು ಲೇಖಕರಲ್ಲಿ ತಪ್ಪು ಕಲ್ಪನೆಯಿದೆ. ಕುವೆಂಪು ಅವರು ''ನನ್ನ ಸಾಹಿತ್ಯದಲ್ಲಿ ಅಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿ. ಅದು ನನ್ನ ಇಡೀ ಜೀವನವನ್ನೆಲ್ಲಾ ಆಕ್ರಮಿಸಿಕೊಂಡಿದೆ. ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸುವುದು ನನ್ನ ಉದ್ದೇಶವಲ್ಲ! ಅಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಆ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರ ಹೊಮ್ಮುತ್ತದೆ'' ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು 'ವಿಶ್ವಮಾನವತ್ವ'ವನ್ನು ತಮ್ಮ ಹೃದಯವಾಗಿಸಿಕೊಂಡವರು.

ಹಾಸನ — ಜಿ. ಹೊ. ನಾರಾಯಣಸ್ವಾಮಿ

ಈ ತಿಂಗಳು (೧೧ನೇ ಪುಟದಿಂದ)

ಮಾತೆತ್ತಿದರೆ ಭಾರತೀಯ [illegible] ಪಠಣಮಾಡುವ ಭಾಜಪದವರು [illegible] ಭಗವಂತನ ಮೊರೆ ಹೋಗುತ್ತಾರೆ. ಸಂಪ್ರದಾಯಸ್ಥರು. ಸತ್ಯನಾರಾಯಣ ವ್ರತ ಆಚರಿಸಿ ಭ್ರಷ್ಟಾಚಾರದಲ್ಲಿ ಮುಳುಗುವಂತೆಯೇ ಇವರೂ ಕೂಡ. ಲೋಕಾಯುಕ್ತ ನ್ಯಾಯಾಲಯದಲ್ಲಿ ಕಟಕಟೆ ಏರುತ್ತಿರುವ ಭಾಜಪ ಶಾಸಕರ ಪಟ್ಟಿ ಬೆಳೆಯುತ್ತಲೇ ಇದೆ. [illegible] ರವಿ, [illegible] ಶಾಸಕ [illegible] ಈಗ ಆರೋಪಿಗಳ [illegible]. [illegible] ಬಿಡುಗಡೆಯಾಗಿ ಬಂದಿರುವ ಕೃಷ್ಣ ಶೆಟ್ಟಿ 'ಮಹಾನ್ ದೈವಭಕ್ತ ಶಿರೋಮಣಿ'. ಸಚಿವನಾಗಿದ್ದಾಗಲೇ ವೈಕುಂಠ ಏಕಾದಶಿದಿನ ಲಾಡುಹಂಚಿ, ಶಿವರಾತ್ರಿಗೆ ಗಂಗಾಜಲ ಕುಡಿಸಿದ ಪುಣ್ಯಕಟ್ಟಿಕೊಂಡವ. ಈಗ ಈತ ತನ್ನ ಕ್ಷೇತ್ರದ ಭಕ್ತರಿಗೆ ಉಚಿತವಾಗಿ ಶಬರಿಮಲೈ ಐಯಪ್ಪನ ದರ್ಶನ ಮಾಡಿಸಲು ಮುಂದಾಗಿದ್ದಾರೆ. 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ' ಎನ್ನುವ ನುಡಿಗಟ್ಟಿಗೆ ಈತ ಹೇಳಿ ಮಾಡಿಸಿದ ವ್ಯಕ್ತಿ. ಏನೇ ಮಾಡಿದರೂ ಭ್ರಷ್ಟ ಭ್ರಷ್ಟನೇ ಅಲ್ಲವೆ ? ■

ಇದೆಂತಹ ಗಡಿಗಳು




ಇದೆಂತಹ ಗಡಿಗಳು
ಎಂತಹ ವಿಭಾಜಕ ರೇಖೆಗಳು ?
ಗಂಗೆಯ ತಟದಲಿ
ಕುಂಟಬಿಲ್ಲೆಯಾಡುತ್ತ ಎಲ್ಲರೊಂದಿಗೆ
ಕೂಡಿ ಬೆಳೆದವಳು ನಾನು
ಇಲ್ಲಿ ಮುಹಾಜಿರಳಾಗಿರುವೆ
ಎಂತಹ ವಿಚಿತ್ರ !
ಅಲ್ಲಿಮಾಮರಗಳ ಹತ್ತಿ
ಮರಕೋತಿ ಆಡಿದ್ದವಳು.
ನದಿ, ಬೆಟ್ಟ ಗಿಳಿ, ಕೋಗಿಲೆ
ಹಿಂಡು ಹಿಂಡು ಗೆಳತಿಯರು
ಅಲ್ಲಿಯೇ ಬಿಟ್ಟು ಬಂದಿರುವೆ
ಗಂಗೆಯ ತಟದಲ್ಲಿಯೇ
ಇಲ್ಲೇಕೆ ಒಂಟಿಯಾಗಿರುವೆ !
ನೋಟು ಬುಕ್ಕಿನ ಪುಟಗಳ ಮಧ್ಯೆ
ಬಚ್ಚಿಟ್ಟ ನವಿಲುಗರಿ
ಚಾಚಾನ ಪುಟ್ಟ ಮಗಳೀಗ
ಈಗ ಬೆಳೆದು ದೊಡ್ಡದಾಗಿರಬೇಕು
ಚಾಚಾನ ಪುಟ್ಟ ಮಗಳೀಗ
ಮರ್ಯಾದೆಯ ದುಪಟ್ಟಾ ಹೊದೆಯುತ್ತಿರಬೇಕು
ಅಲ್ಲಿಂದ ಬಿಟ್ಟು ಬರುವಾಗ
ಅವಳಿನ್ನೂ ಪುಟ್ಟಮಗು
ತೊಟ್ಟಿಲಲಿ ಒಂದೇ ಸಮ ಅಳುತ್ತಿದ್ದಳು
ಅಮ್ಮನ ಜಹಾಜಿನಾಕಾರದ
ಸುಂದರ ಪಾನ್‌ದಾನ್, ಉಗಾಲ್‌ದಾನ್‌ಗಳು
ಅಪ್ಪನ ಸುರಾಯಿ ಆಕಾರದ
ಸುಂದರ ಕುಸುರಿ ಕೆತ್ತನೆಯ
ಆ ಮುರಾದಾಬಾದಿ ಹುಕ್ಕಾಗಳು
ಅಲ್ಲಿಯೇ ಬಿಟ್ಟು ಬಂದಿದ್ದು
ಆ ಪಡಸಾಲೆ ನನಗಿನ್ನೂ ನೆನಪಿದೆ

ಛಪ್ಪರದಲ್ಲಿಯೇ ಬಿಟ್ಟು ಬಂದಿದ್ದ
ನನ್ನ ಆ ಪುಟ್ಟ ಚಪ್ಪಲಿಗಳು
ಒಮ್ಮೆಲೇ ಅದೇನಾಯಿತೋ ಗೊತ್ತಿಲ್ಲ
ದೇಶ ವಿಭಜನೆಯಾಗುತ್ತಿದೆಯೆಂದರು.
ಅಪ್ಪದಡ ದಡನೇ ರೈಲು ಹತ್ತಿಸಿದ್ದರು
ನನ್ನೊಡನೆ ಆಡುತ್ತಿದ್ದ ಗೆಳತಿಯರ
ಕೈ ಕೊಸರಿ ಅಪ್ಪನ ಕೈ ಹಿಡಿದಿದ್ದೆ
ರೈಲಿನ ಡಬ್ಬ ಹಿಡಿದು ಅಳುತ್ತಿದ್ದ
ಅಜ್ಜಿಯನ್ನು ಅಲ್ಲಿಯೇ ಬಿಟ್ಟು ಬಂದಿದ್ದೆ
ಅಮ್ಮಿ ಅಬ್ಬಾ ಭಯ್ಯಾನೊಂದಿಗೆ
ಕರಾಚಿಯ ರೈಲು ಹತ್ತಿದ್ದೆ
ಅಲ್ಲಿಂದ ಯಾರಾದರೂ ಬಂದರೆ ಸಾಕು

ನನ್ನ ಹಳೇ ನೆನಪಿನ ಬುತ್ತಿ ಬಿಚ್ಚಿಕೊಳ್ಳುವೆ
ಗಂಗೆಯ ತಟದ ಆ ಮನೆ ಕಿಟಕಿಯಲಿ
ಬಿಟ್ಟು ಬಂದಿರುವ ನನ್ನ ಪುಟ್ಟಗೊಂಬೆ
ಅಮ್ಮನ ಪಾನದಾನ, ಅಪ್ಪನ ಹುಕ್ಕಾ
ನೋಟುಬುಕ್ಕಿನ ನವಿಲುಗರಿ
ಗೆಳತಿಯ ದಂಡು, ಅವರ ಮದುವೆ,
ಮಕ್ಕಳು, ಇತರೇ ಕುಶಲ ವಿಚಾರಿಸುವೆ !

ಮೊಹರಂ ಬಂದಿತೆಂದರೆ ಸಾಕು
ನನ್ನೂರು ಮದುಮನೆಯಂತೆ ಕಂಗೊಳಿಸುತ್ತಿತ್ತು
ಹಿಮಾಲಯದಿಂದ ಹರಿಯುವ
ಪ್ರತಿಯೊಂದು ನದಿಯೂ ನನಗೆ
ವಜು ಮಾಡು ಬಾ ಎಂದು ಕರೆಯುತ್ತಿದ್ದವು
ಚಿನಾಬ್ ನದಿಯ ನೀರನ್ನು ಮುಟ್ಟದಿರು
ನೀನು ಮುಹಾಜಿರಳು ಎಂದಾಗ
ನೋವಿನಿಂದ ಮನಸು ಮಿಡಿಯುತ್ತಿತ್ತು
ಗಾಲಿಬ್, ಇಕ್ಬಾಲ್, ಸೂರ್, ಕಬೀರರ
ಗ್ರಂಥಗಳೆಲ್ಲ ಅಲ್ಲಿಯೇ ಇಟ್ಟಿರುವೆ
ನನ್ನ ಜೀವವೇ ಅಲ್ಲಿ ಬಿಟ್ಟುಬಂದಿರುವೆ
ದೇಹ ಮಾತ್ರ ಇಲ್ಲಿದೆ ಸುಮ್ಮನೆ
ಮನಸಿಗೆಂತಹ ಗಡಿಗಳು
ಎಂತಹ ವಿಭಾಜಕ ರೇಖೆಗಳು ?

ಡಾ|| ಕೆ. ಷರೀಫಾ
[illegible] ರಹಮತ್‌ನಗರ, ಬೆಂಗಳೂರು - ೩೨



ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ



ಕೌಶಲ್ಯ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 029
ದೂರವಾಣಿ ಸಂಖ್ಯೆ : 080-26644312/13/14/15 ಫ್ಯಾಕ್ಸ್ : 22453646
ವೆಬ್‌ಸೈಟ್ : www.karbuildingworkerswelfare.org.in
ಇ-ಮೇಲ್ : karbuildworkerswelfare@gmail.com

ನೋಂದಾಯಿಸಿದ ತಕ್ಷಣ ಫಲಾನುಭವಿಗೆ ಸಿಗುವ ಸೌಲಭ್ಯಗಳು

1. **ರೂ. 400/- ರಿಂದ ರೂ. 2,000/- ಒಳರೋಗಿ ಧನಸಹಾಯ:** ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುವುದಕ್ಕೆ.
2. **ರೂ. 50,000/- ಧನಸಹಾಯ : ಪ್ರಮುಖ ಕಾಯಿಲೆಗಳ ಚಿಕಿತ್ಸೆಗೆ : ಹೃದ್ರೋಗ ಆಪರೇಶನ್, ಕಿಡ್ನಿ ಜೋಡಣೆ, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಆಪರೇಶನ್, ಪಾರ್ಶ್ವವಾಯು ಚಿಕಿತ್ಸೆ, ಮೂಳೆ ಆಪರೇಶನ್, ಗರ್ಭಕೋಶದ ಆಪರೇಶನ್, ಅಸ್ತಮಾ ಚಿಕಿತ್ಸೆ, ಗರ್ಭಪಾತದ ಪ್ರಕರಣಗಳು, ಪಿತ್ತಕೋಶದ ತೊಂದರೆ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲು ತೆಗೆಯುವುದು, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ.**
3. **ರೂ. 1,00,000/- ಅಪಘಾತ ಪರಿಹಾರ** : ಫಲಾನುಭವಿ ಕೆಲಸ ಮಾಡುತ್ತಿದ್ದಾಗ ಮತ್ತು ಕೆಲಸದ ಸ್ಥಳದಿಂದ ಮನೆಗೆ ಹೋಗುವಾಗ ಅಥವಾ ಮನೆಯಿಂದ ಕೆಲಸಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ **ಅಪಘಾತ ಉಂಟಾಗಿ ತೀರಿಕೊಂಡಲ್ಲಿ** ಆತನ ಅವಲಂಬಿತರಿಗೆ **ಅಥವಾ** ಫಲಾನುಭವಿ ಕೆಲಸದ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾಗ ಅಪಘಾತಕ್ಕೀಡಾಗಿ **ಸಂಪೂರ್ಣ ಶಾಶ್ವತ ಅಂಗವಿಕಲರಾದಲ್ಲಿ.** ಅಲ್ಲದೇ **ಶಾಶ್ವತ ಭಾಗಶಃ ಅಂಗವಿಕಲರಾದಲ್ಲಿ** ಅಂಗವಿಕಲತೆಯ ಶೇಕಡವಾರು ಪ್ರಮಾಣಕ್ಕೆ ಅನುಗುಣವಾಗಿ **ರೂ. 1,00,000/-** ಮೊತ್ತದ ಶೇಕಡವಾರು ಅನುಪಾತದ ಪರಿಹಾರದ ಮೊತ್ತ (ಉದಾ : ಶೇ.40 ಅಂಗವಿಕಲತೆ ಉಂಟಾದಲ್ಲಿ ಅಂಥ ಫಲಾನುಭವಿಗೆ ರೂ.40,000/- ಪರಿಹಾರ ನೀಡಲಾಗುವುದು).
4. **ರೂ. 300/- ಮಾಹೆಯಾನ ಅಂಗವಿಕಲತೆ ಪಿಂಚಣಿ: ಕುಷ್ಠರೋಗ, ಕ್ಯಾನ್ಸರ್, ಪಾರ್ಶ್ವವಾಯು, ಟಿ.ಬಿ.** ಕಾಯಿಲೆಗಳಿಂದ **ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ,** ಅಲ್ಲದೆ **ರೂ. 5,000/- ಎಕ್ಸ್‌ಗ್ರೇಷಿಯಾ ಧನಸಹಾಯ:** ಅಂಗವಿಕಲತೆಯ ಪ್ರಮಾಣವನ್ನು ಆಧರಿಸಿ.
5. **ರೂ. 4,000/-** ಅಂತ್ಯಕ್ರಿಯೆಗಾಗಿ ಮತ್ತು **ರೂ. 15,000/- ಅನುಗ್ರಹ ರಾಶಿ:** ಮೃತನ ಕುಟುಂಬಕ್ಕೆ.
6. **ರೂ. 50,000/- ಎಕ್ಸ್‌ಗ್ರೇಷಿಯಾ ಪರಿಹಾರಧನ** : ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರು ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿತ ಅಪಘಾತದಿಂದಾಗಿ ಮೃತರಾದಲ್ಲಿ ಅವರ ಕುಟುಂಬಕ್ಕೆ. **ರೂ. 10,000/-** ರಿಂದ **ರೂ. 20,000/- ಎಕ್ಸ್‌ಗ್ರೇಷಿಯಾ ಪರಿಹಾರಧನ:** ಇಂಥ ಅಪಘಾತದಲ್ಲಿ ಗಂಭೀರ ಗಾಯಗೊಂಡ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ.

ಒಂದು ವರ್ಷ ಸದಸ್ಯತ್ವ ಪೂರ್ಣಗೊಂಡ ಫಲಾನುಭವಿಗೆ ದೊರಕುವ ಸೌಲಭ್ಯಗಳು

7. **ರೂ. 10,000/- ಮದುವೆಗೆ** : ಫಲಾನುಭವಿಗೆ ಅಥವಾ ಅವರ ಇಬ್ಬರು ಮಕ್ಕಳಿಗೆ.
8. **ರೂ. 6,000/- ಹೆರಿಗೆ ಸೌಲಭ್ಯ** : ಮಹಿಳಾ ಫಲಾನುಭವಿಗೆ ಎರಡು ಸಲ ಮಾತ್ರ.
9. **ಶೈಕ್ಷಣಿಕ ಧನಸಹಾಯ:** ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ: **8ನೇ ತರಗತಿ** ಓದುತ್ತಿರುವವರಿಗೆ **ರೂ.1,000/-; 9ನೇ ತರಗತಿ** ಓದುತ್ತಿರುವವರಿಗೆ **ರೂ. 1,000/-; ಎಸ್.ಎಸ್.ಎಲ್.ಸಿ.** ಪಾಸಾದವರಿಗೆ **ರೂ.3,000/-; ಪಿ.ಯು.ಸಿ. ಪ್ರಥಮ ಮತ್ತು ದ್ವಿತೀಯ** ಪರೀಕ್ಷೆ ಪಾಸಾದವರಿಗೆ ಪ್ರತಿ ವರ್ಷಕ್ಕೆ **ರೂ. 2,000/-; ಐಟಿಐ/ಡಿಪ್ಲೋಮಾ ಓದುತ್ತಿರುವವರಿಗೆ ರೂ. 3,600/-; ಪದವಿ** ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **ರೂ. 2,000/-; ಸ್ನಾತಕೋತ್ತರ ಪದವಿ** ಓದುತ್ತಿರುವವರಿಗೆ ಪ್ರತಿ ವರ್ಷಕ್ಕೆ **ರೂ.10,000/-; ವೈದ್ಯಕೀಯ, ಇಂಜಿನಿಯರಿಂಗ್** ಮುಂತಾದ ವೃತ್ತಿಪರ ವ್ಯಾಸಂಗ ಓದುತ್ತಿರುವವರಿಗೆ ಪ್ರತಿ ಸೆಮಿಸ್ಟರ್‌ಗೆ ರೂ.5,000/-

ಎರಡು ವರ್ಷ ಸದಸ್ಯತ್ವ ಪೂರ್ಣಗೊಳಿಸಿದ ಫಲಾನುಭವಿಗೆ ದೊರಕುವ ಸೌಲಭ್ಯ

10. **ರೂ. 5,000/- ಉಪಕರಣಗಳ ಖರೀದಿಗೆ** ಬಡ್ಡಿರಹಿತ ಸಾಲ.

ಐದು ವರ್ಷ ಸದಸ್ಯತ್ವ ಪೂರ್ಣಗೊಳಿಸಿದ ಫಲಾನುಭವಿಗೆ ದೊರಕುವ ಸೌಲಭ್ಯಗಳು

11. **ರೂ. 50,000.- ಸಾಲ: ಮನೆ ಕಟ್ಟುವುದಕ್ಕೆ / ಖರೀದಿಸುವುದಕ್ಕೆ:** ವಾರ್ಷಿಕ 5% ಬಡ್ಡಿ ದರದಲ್ಲಿ.
12. **ರೂ. 500/- ಪಿಂಚಣಿ ಮಾಹೆಯಾನ** : 50 ವರ್ಷ ಪೂರೈಸಿದ ಮಹಿಳೆ ಹಾಗೂ 55 ವರ್ಷ ಪೂರೈಸಿದ ಪುರುಷ ಫಲಾನುಭವಿಗಳಿಗೆ.

ಮುರಳೀಧರ

೨೦೧೧ ಸಂಘರ್ಷಗಳ ವರ್ಷಧಾರೆ

ಜಗತ್ತಿನ ಬಹುತೇಕ ರಾಷ್ಟ್ರಗಳನ್ನು ತಲ್ಲಣಗೊಳಿಸಿ ಮುಂಬರುವ ತೀವ್ರ ಸಂಘರ್ಷಗಳ ನಾಂದಿ ಗೀತೆಯ ಹಾಡಿ ಇತಿಹಾಸದ ಪುಟಗಳಲ್ಲಿ ರೋಚಕ ಸಾಲುಗಳ ಬರೆದು ನಿರ್ಗಮಿಸಿದೆ ವರ್ಷ ೨೦೧೧. ಇದನ್ನು ಆಕ್ರೋಶ ನಾಮ ಸಂವತ್ಸರವೆಂದು ಕರೆದಲ್ಲಿ ಹೆಚ್ಚು ಸಮಂಜಸವಾಗಬಹುದು. ಈ ವರ್ಷದ ಘಟನಾವಳಿಗಳಿಗೆ ಸ್ಪಂದಿಸಿದಲ್ಲಿ, ವಿಶ್ಲೇಷಿಸಿದಲ್ಲಿ ಮುಂದಿನ ದಿನಗಳಲ್ಲಿ ಭುಗಿಲೇಳುವ ಅಂತರರಾಷ್ಟ್ರೀಯ ಹೋರಾಟಗಳ ಸ್ಪಷ್ಟ ಚಿತ್ರಣ ಗೋಚರಿಸುತ್ತದೆ. ಎಲ್ಲರನ್ನು ದಂಗುಬಡಿಸಿ. ಎಲ್ಲರ ಕಲ್ಪನೆಯ ಮೀರಿ. ಎಲ್ಲರನ್ನು ಹಿಂದೆ ಸರಿಸಿ, ಚಂಡಮಾರುತದ ವೇಗದಿಂದ ಬೀಸುತ್ತಿರುವ ಬದಲಾವಣೆಯ ಗಾಳಿ ದೇಶ ದೇಶಗಳಿಗೆ ಹಬ್ಬುತ್ತಿದೆ, ಇದೊಂದು ಪರ್ವಕಾಲವೇ ಸರಿ. ಈಗ ಮಾನವ ಸಮಾಜಕ್ಕಿರುವ ಆಯ್ಕೆ ಸೀಮಿತ. ಮತ್ತೊಂದು ಜಗತ್ತು ಸಾಧ್ಯವೆಂಬ ಅಸ್ಪಷ್ಟ ಕಲ್ಪನೆಯ ಗಡಿ ದಾಟಿ ಸಮ-ಸಮಾಜದ ಸ್ಪಷ್ಟ ಆಕಾಂಕ್ಷೆ ಹೊತ್ತು ಸಾಗುತ್ತಿರುವ ಹೋರಾಟಗಳೀಗ ಜಾಗತೀಕರಣಗೊಂಡಿವೆ. ಪರಿವರ್ತನೆಯ ಹಂಬಲ ಇಂಬುಗೊಂಡಿದೆ.

ಸಿಡಿದ ಕಿಡಿ - ಹಬ್ಬಿದ ಜ್ವಾಲೆ

ಟ್ಯುನೀಷಿಯ ಹೆಚ್ಚು ಕೇಳರಿಯದ ಮಧ್ಯಪ್ರಾಚ್ಯದ ಒಂದು ದೇಶ. ಇಲ್ಲಿಯ ಓರ್ವ ಯುವಕ ಬೀದಿ ವ್ಯಾಪಾರಿ ಮುಹಮದ್ ಬಿವಾಜೀಜಿ ತನ್ನ ದೇಶದ ಕ್ರೂರ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ದಾಖಲಿಸಲು ಹಾಡುಹಗಲೇ ಎಲ್ಲರ ಕಣ್ಮುಂದೆ ಸಜೀವ ದಹನಗೊಂಡ. ತನ್ನ ಪ್ರತಿಭಟನೆಯ ಕಿಡಿ ಇಡೀ ಅರಬ್ ಸಮಾಜವನ್ನೇ ಅಲ್ಲೋಲ ಕಲ್ಲೋಲಗೊಳಿಸುವ ಜ್ವಾಲೆಯಾಗಬಹುದೆಂಬ ಕಲ್ಪನೆಯೂ ಅವನಿಗಿರಲಿಲ್ಲವೇನೋ. ಟ್ಯುನೀಷಿಯ ಜನತೆಯ ಭುಗಿಲೆದ್ದ ಆಕ್ರೋಶ ಆ ದೇಶದ ರಾಷ್ಟ್ರಾಧ್ಯಕ್ಷನಾಗಿ ಇಪ್ಪತ್ತಮೂರು ವರ್ಷ ಕ್ರೂರ ಆಳ್ವಿಕೆ ನಡೆಸಿದ್ದ ಬೆನ್ ಅಲಿಯನ್ನು ಪಕ್ಕದ ಸೌದಿ ಅರೆಬಿಯಾಕ್ಕೆ ಪರಾರಿಯಾಗಿಸಿತು. ಈ ಜ್ವಾಲೆಯ ಕಿಡಿ ಈಜಿಪ್ಟ್‌ಗೂ ಹಾರಿ ಮೂವತ್ತು ವರ್ಷ ದೇಶದ ಸರ್ವಾಧಿಕಾರಿಯಾಗಿ ಮೆರೆದ ಅಧ್ಯಕ್ಷ ಹೋಸ್ನಿ ಮುಬಾರಕ್‌ನನ್ನು ಪದಚ್ಯುತಗೊಳಿಸಿತು. ಈಗ ಈಜಿಪ್ಟ್‌ನ ಜನತೆ ನಂತರ ಅಧಿಕಾರ ಕಸಿದ ಮಿಲಿಟರಿ ಸರ್ಕಾರದ ವಿರುದ್ಧ ಸಮರ ನಡೆಸಿದೆ. ಟ್ಯುನೀಷಿಯ ಮತ್ತು ಈಜಿಪ್ಟ್‌ನ ಸಂಘರ್ಷಗಳಲ್ಲಿ ಆ ದೇಶಗಳ ಕಾರ್ಮಿಕ ವರ್ಗದ ಪಾತ್ರ ಮಹತ್ವದ್ದು. ಅರಬ್ ರಾಷ್ಟ್ರಗಳಲ್ಲಿ ಇದೊಂದು ಆಶಾದಾಯಕ ಬೆಳವಣಿಗೆ. ನಂತರ ಈ ಬದಲಾವಣೆಯ ಗಾಳಿ ಜೋರ್ಡಾನ್, ಯೆಮನ್, ಕುವೈಟ್, ಸಿರಿಯ ಇತ್ಯಾದಿ ರಾಷ್ಟ್ರಗಳಿಗೆ ಹಬ್ಬಿ ಅಲ್ಲಿಯ ಸರ್ವಾಧಿಕಾರಿಗಳು ಕೊಚ್ಚಿಹೋಗಿದ್ದಾರೆ. ಲಿಬಿಯಾ ದೇಶವನ್ನು ನಲವತ್ತು ವರ್ಷ ಆಳಿದ ಮುಹಮದ್ ಗಡಾಫಿ ಕೊಲ್ಲಲ್ಪಟ್ಟಿದ್ದಾನೆ. ರಾಜಕೀಯ ಚಂಡಮಾರುತ ಮಧ್ಯಪ್ರಾಚ್ಯದ ಎಲ್ಲ ರಾಷ್ಟ್ರಗಳನ್ನು ಅಸ್ತವ್ಯಸ್ತಗೊಳಿಸಿದೆ. ಕ್ರೂರ ಆಳ್ವಿಕೆ, ನಿರುದ್ಯೋಗ, ಆಹಾರ ಪದಾರ್ಥಗಳ ತೀವ್ರ ಬೆಲೆ ಏರಿಕೆ, ಅಸಮಾನತೆ ಹೀಗೆ ಹಲವಾರು ಸಮಸ್ಯೆಗಳು ಈ ರಾಷ್ಟ್ರಗಳ ಜನರನ್ನು ಕಾಡುತ್ತಿದೆ. ಈ ಸಮಸ್ಯೆಗಳನ್ನು ಸೃಷ್ಟಿಸಿದ ವ್ಯವಸ್ಥೆಯನ್ನು ಬದಲಾಯಿಸುವ ಕಾರ್ಯ ಸಾಗಿದೆ. ಹಾಗೆಯೇ ಅವುಗಳನ್ನು ಪರಿಹರಿಸುವ ಹೊಸ ಸಮಾಜ ವ್ಯವಸ್ಥೆಗಾಗಿ ಹೋರಾಟ ಅನಿವಾರ್ಯವಾಗಿದೆ.

ಯೂರೋಪ್‌ನ ಆರ್ಥಿಕ ಸುನಾಮಿ

ಇನ್ನೊಂದೆಡೆ ಆರ್ಥಿಕ ಸುನಾಮಿ ಯುರೋಪ್ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯನ್ನೇ ಅಲುಗಾಡಿಸುತ್ತಿದೆ. ಗ್ರೀಸ್ ದೇಶ ಈಗ ದಿವಾಳಿಯಂಚಿನಲ್ಲಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಆ ದೇಶವನ್ನು ಮಾರಾಟಕ್ಕಿಡಲಾಗುತ್ತದೆ ಎಂಬ ಮಾತು ಕೇಳಿಬರುತ್ತಿದೆ. ಕಳೆದ ವರ್ಷವಷ್ಟೇ ಯೂರೋಪಿಯನ್ ರಾಷ್ಟ್ರಗಳ ಒಕ್ಕೂಟ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ನೆರವಿನಿಂದ ಸ್ವಲ್ಪ ಚೇತರಿಸಿಕೊಂಡಂತೆ ಕಂಡರೂ, ೨೦೧೧ರಲ್ಲಿ ಆರ್ಥಿಕ ಪರಿಸ್ಥಿತಿ ತೀವ್ರ ಬಿಕ್ಕಟ್ಟಿನಲ್ಲಿದೆ. ಬಂಡವಾಳಶಾಹಿ ವ್ಯವಸ್ಥೆಯ ವೈಫಲ್ಯಕ್ಕೆ ಗ್ರೀಸ್ ದೇಶದ ದುಸ್ಥಿತಿಯೊಂದು ನಿದರ್ಶನ. ಈ ಗ್ರೀಕ್ ದುರಂತ ಈಗ ಇಟಲಿ. ಸ್ಪೇನ್. ಪೋರ್ಚುಗಲ್, ಫ್ರಾನ್ಸ್, ಮೊರೊಕ್ಕೊ. ಜರ್ಮನಿ. ಇಂಗ್ಲೆಂಡ್

ರಾಷ್ಟ್ರಗಳನ್ನಾವರಿಸಿದೆ. ಈಗಾಗಲೇ ಗ್ರೀಸ್ ದೇಶದ ಪ್ರಧಾನ ಮಂತ್ರಿಯಾಗಿದ್ದ ಜಾರ್ಜ್ ಪಾಪೆಂಡ್ರೊ, ಇಟಲಿಯ ಪ್ರಧಾನ ಮಂತ್ರಿಯಾಗಿದ್ದ ಸಿಲ್ವಿಯಾ ಬರ್ಲುಸ್ಕೊನಿ ಅಧಿಕಾರ ಕಳೆದುಕೊಂಡಿದ್ದಾರೆ. ಸ್ಪೇನ್ ದೇಶದ ಪ್ರಧಾನ ಮಂತ್ರಿ ಸಮಾಜವಾದಿ ಪಕ್ಷದ ರಾಡ್ರಿಗಸ್ ಜಪಟೇರೊ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸೋತು ಶರಣಾಗಿದ್ದಾರೆ. ಈ ಆರ್ಥಿಕ ಸುನಾಮಿಯಲ್ಲಿ ಇನ್ನೆಷ್ಟು ತಲೆಗಳು ಉರುಳುವುವೋ ಕಾದು ನೋಡಬೇಕು. ಈ ದೇಶಗಳ ಜನತೆ ನಿರುದ್ಯೋಗ, ಬೆಲೆ ಏರಿಕೆ, ನಶಿಸುತ್ತಿರುವ ಸಾಮಾಜಿಕ ಭದ್ರತೆಗಳು, ಪಿಂಚಣಿ ಯೋಜನೆಯ ಅವಸಾನ ಇತ್ಯಾದಿಗಳಿಂದ ಸಂತ್ರಸ್ತರಾಗಿದ್ದಾರೆ. ದಿನೇ ದಿನೇ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ ಸಾಮಾನ್ಯ ಜನರು ಈಗ ಬೀದಿ ಕಾಳಗಕ್ಕಿಳಿದಿದ್ದಾರೆ. ಕಾರ್ಮಿಕರು, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ನಿರುದ್ಯೋಗಿಗಳು ಹೋರಾಟಗಳ ಮುಂಚೂಣಿಯಲ್ಲಿದ್ದಾರೆ. ಯುರೋಪಿನ ಡೋಲಾಯಮಾನ ಅರ್ಥವ್ಯವಸ್ಥೆ ಇತರೆ ಬಂಡವಾಳಶಾಹಿ ರಾಷ್ಟ್ರಗಳನ್ನು ಆತಂಕಕ್ಕೀಡುಮಾಡಿದೆ. ಶ್ರೀಮಂತ ರಾಷ್ಟ್ರಗಳೆನಿಸಿ ಕೊಂಡಿರುವ ಯುರೋಪ್‌ನ ಈ ದೇಶಗಳು ಈಗ ಭಿಕ್ಷಾಪಾತ್ರೆ ಹಿಡಿದು ನಿಂತಿವೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರವಿಲ್ಲವೆಂಬುದು ಜನರಿಗೆ ಈಗ ಖಾತ್ರಿಯಾಗಿದೆ. ಪರ್ಯಾಯದ ದಾಹ ಹೆಚ್ಚುತ್ತದೆ.

ಅಮೆರಿಕಾ - ಆಕ್ರಮಣ

ಯಾವ ದೇಶಕ್ಕೆ ಯಾವಾಗ ಬೇಕಾದರೂ ನುಗ್ಗಿ ಯಾರನ್ನಾದರೂ ಕೊಲ್ಲುವ ಅಧಿಕಾರ ತಮಗೆ ದೈವದತ್ತವಾದದ್ದೆಂದು ಅಮೆರಿಕಾ ಸಾಮ್ರಾಜ್ಯಶಾಹಿಗಳ ನಂಬಿಕೆ. ಇವರ ಕೈಯಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ ಕಡಿಮೆಯೇನಲ್ಲ. ಇರಾಕ್‌ನ ಸದ್ದಾಂ ಹುಸೇನ್ ಹಾಗೂ ಇರಾಕ್‌ನ ಅಸಂಖ್ಯಾತ ಅಮಾಯಕ ಜನರು, ಲಿಬಿಯಾದ ಮುಹಮದ್ ಗಡಾಫಿ ಮತ್ತು ಲಿಬಿಯಾದ ಅಸಂಖ್ಯಾತ ಮುಗ್ಧ ಜನರು, ಉಗ್ರಗಾಮಿ ಒಸಾಮಾ ಬಿನ್ ಲಾಡೆನ್ ಇತ್ತೀಚೆಗೆ ಈ ಪಟ್ಟಿಗೆ ಸೇರಲ್ಪಟ್ಟವರು. ಯಾವ ಕಾರಣವನ್ನಾದರೂ ಒಡ್ಡಿ ಯಾವ ದೇಶವನ್ನಾದರೂ ಅಮೆರಿಕಾದ ಮತ್ತು ನ್ಯಾಟೋ ಸೈನ್ಯ ಆಕ್ರಮಿಸ ಬಹುದು. ಇರಾಕ್, ಆಫ್ಘಾನಿಸ್ತಾನ, ಲಿಬಿಯಾ, ಸೂಡಾನ್, ಕೊಲಂಬಿಯಾ ಇತ್ಯಾದಿ ರಾಷ್ಟ್ರಗಳು ಇದಕ್ಕೆ ನಿದರ್ಶನಗಳು. ಭಾರತವನ್ನು ಈ ಪಟ್ಟಿಗೆ ಸೇರಿಸ ಮನಮೋಹನ್ ಸಿಂಗ್ ತರಾತುರಿಯಲ್ಲಿದ್ದಾರೆ.

ಹೀಗೆ ಆಕ್ರಮಣಕ್ಕೆ ಕುಖ್ಯಾತವಾದ ಅಮೆರಿಕಾವನ್ನು ಈಗ ಅಲ್ಲಿಯ ಶೋಷಿ ಜನರು ಆಕ್ರಮಿಸಲು ಪ್ರಾರಂಭಿಸಿದ್ದಾರೆ. ೨೦೦೮ರ ದೀರ್ಘ ಆರ್ಥಿಕ ಕುಸಿತದಿಂ ಅಮೆರಿಕಾ ಇನ್ನೂ ಚೇತರಿಸಿಕೊಂಡಿಲ್ಲ. ನಶಿಸಿದ ಉದ್ಯೋಗಗಳಿಗೆ ಅನುಗುಣವಾ ಹೊಸ ಉದ್ಯೋಗಗಳು ಸೃಷ್ಟಿಯಾಗಿಲ್ಲ. ನಿರುದ್ಯೋಗ ಶೇ. ೧೦ರ ಆಸುಪಾಸಿನಲ್ಲಿ ಅಧ್ಯಕ್ಷ ಬರಾಕ್ ಒಬಾಮಾನ ಜನಪ್ರಿಯತೆ ಬಹಳಷ್ಟು ಇಳಿದಿದೆ. ಇತ್ತೀಚ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಸೋಲನ್ನನುಭವಿಸಿದೆ. ಡೆಮಾಕ್ರಟಿಕ್ ಪಕ್ ಬಹಳಷ್ಟು ಚುನಾಯಿತ ಶಾಸಕರು ಒಬಾಮಾ ಜನರಿಗೆ ಕೊಟ್ಟ ಚುನಾವಣಾ ಪೂರ್ವ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ವಿಫಲನಾಗಿದ್ದಾನೆಂದು ಬೇಸರಗೊಂಡಿದ್ದ ಇನ್ನೊಂದೆಡೆ ವಿರೋಧ ಪಕ್ಷವಾದ ರಿಪಬ್ಲಿಕನ್ ಪಕ್ಷದ ಸೆನೆಟರ್‌ಗಳು ಒಬಾಮ ಅಮೆರಿಕಾವನ್ನು ದಿವಾಳಿಯ ಅಂಚಿಗೆ ಕೊಂಡೊಯ್ದಿದ್ದಾನೆಂದು ಬೊ ಹೊಡೆಯುತ್ತಿದ್ದಾರೆ. ಇನ್ನು ಬಲಪಂಥೀಯ ಟೀ ಪಾರ್ಟಿ ರಿಪಬ್ಲಿಕನ್ ಪಕ್ಷದ ಇನ್ನೊಂ ಮುಖ. ಒಬಾಮಾನನ್ನು ವಾಚಾಮಗೋಚರ ನಿಂದಿಸುವುದೊಂದೇ ಇದ ನಿತ್ಯಕರ್ಮ. ಶ್ರೀಮಂತರಿಗೆ ಹೆಚ್ಚು ತೆರಿಗೆ ವಿನಾಯ್ತಿ ನೀಡಬೇಕು, ಖಾಸಗಿ ಕ್ಷೇತ್ರ ವ್ಯವಹಾರಗಳಲ್ಲಿ ಸರ್ಕಾರ ಮೂಗು ತೂರಿಸಬಾರದು, ಸಾಮಾಜಿಕ ಭದ್ರ ವೆಚ್ಚಗಳನ್ನು ಕಡಿತಗೊಳಿಸಬೇಕು ಇತ್ಯಾದಿಗಳು ಇವರ ನಿತ್ಯದ ಕೂಗು.

ಅಮೆರಿಕಾದ ಜನರ ಅಪೂರ್ವ ಹೋರಾಟ

ಅಮೆರಿಕಾದಲ್ಲೀಗ ಹೊಸ ಹೋರಾಟವೊಂದು ಪ್ರಾರಂಭವಾಗಿದೆ. ಅಲ್ಲಿ ಸಂತ್ರಸ್ತ ಜನತೆ ತಮ್ಮ ದೇಶದ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿ ಜನಸಂಖ್ಯೆಯ ಕೇವಲ ಶೇಕಡ ೧ರಷ್ಟು ಇರುವ ಕಾರ್ಪೊರೇಟ್ ಶ್ರೀಮಂತರು ಶೇಕ ೯೯ರಷ್ಟು ಜನರನ್ನು ಶೋಷಿಸುತ್ತಿರುವ ಸತ್ಯವನ್ನು ಜಾಹೀರುಗೊಳಿಸುತ್ತಿದ್ದಾರೆ. ನ್ಯೂಯಾರ್ಕ್ ಉದ್ಯಾನವನವೊಂದರಲ್ಲಿ ಪ್ರಾರಂಭವಾದ ''ವಾಲ್ ಸ್ಟ್ರೀಟ್ ಆಕ್ರಮಿಸು'' ಹೋರಾ

ಈಗ ವಾಷಿಂಗ್‌ಟನ್, ಶಿಕಾಗೊ, ಬಾಸ್ಟನ್, ಲಾಸ್‌ಏಂಜಲೀಸ್, ಫಿಲಡೆಲ್ಫಿಯಾ, ಸಿಯಟೆಲ್ ಇತ್ಯಾದಿ ಅಮೆರಿಕಾದ ೧೦೦ ನಗರಗಳಿಗೆ ಮಾತ್ರವಲ್ಲದೆ ಲಂಡನ್, ಮ್ಯಾಡ್ರಿಡ್, ಫ್ರಾಂಕ್‌ಫರ್ಟ್, ಪ್ಯಾರಿಸ್ ಇತ್ಯಾದಿ ಪ್ರಪಂಚದ ೧೫೦೦ ನಗರಗಳಿಗೆ ಹಬ್ಬಿಬಿಟ್ಟಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ ತಮ್ಮ ಹೋರಾಟವೆಂದು ಪ್ರತಿಭಟನಾಕಾರರು ಘೋಷಿಸಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯ ಪತನ ಅಮೆರಿಕಾದಿಂದಲೇ ಪ್ರಾರಂಭವಾಗುವ ಸೂಚನೆಗಳು ದಟ್ಟವಾಗುತ್ತಿವೆ. ''ವಾಲ್ ಸ್ಟ್ರೀಟ್ ಆಕ್ರಮಿಸು'' ಹೋರಾಟ ನ್ಯೂಯಾರ್ಕ್‌ನ ಜುಕ್ಕೋಟಿ ಪಾರ್ಕ್‌ನಲ್ಲಿ ಆರಂಭವಾದಾಗ ಇದರ ಬಗ್ಗೆ ಅಪಹಾಸ್ಯ ಮಾಡಿದ ಜನ ಇದರ ಬೇಡಿಕೆಗಳ ಸತ್ವ ಮತ್ತು ವ್ಯಾಪಕ ಬೆಳವಣಿಗೆಯಿಂದ ಗಾಬರಿಯಾಗಿದ್ದಾರೆ. ಟೀ ಪಾರ್ಟಿ ಜನರ ಸೊಲ್ಲಡಗಿದೆ. ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಹೆಚ್ಚಿದಂತೆಲ್ಲ ಅದರ ದಮನಕಾರಿ ಪ್ರವೃತ್ತಿಯೂ ಹೆಚ್ಚುವುದನ್ನು ಇತಿಹಾಸ ದಾಖಲಿಸಿದೆ. ಪ್ರಜಾಪ್ರಭುತ್ವದ ಮುಖವಾಡ ಕಳಚಿ ಬೀಳುತ್ತದೆ.

ಮನದಾಳ ಸೇರಿದ ಅಳಿಯದ ಛಲ

''ವಾಲ್ ಸ್ಟ್ರೀಟ್ ಆಕ್ರಮಿಸು'' ಈಗ ಎಲ್ಲ ಶೋಷಿತರ ಮನಸ್ಸನ್ನು ಆಕ್ರಮಿಸಿದೆ. ಪ್ರತಿಭಟನಾಕಾರರ ಮೇಲೆ ಪೊಲೀಸ್ ದಾಳಿ ನಡೆದಿದೆ. ಅದರೊಂದಿಗೆ ಪ್ರತಿಭಟನೆಯ ಸ್ವರೂಪ ಬದಲಾಗುತ್ತಿದೆ. 'ನಮ್ಮನ್ನು ಈ ಜಾಗದಿಂದ ಏಳಿಸಬಹುದು. ಆದರೆ ನಮ್ಮ ಮನದಾಳದಲ್ಲಿ ಪಲ್ಲವಿಸಿರುವ ಹೊಸ ಭಾವನೆಗಳನ್ನು ಇವರು ಅಳಿಸಲು ಸಾಧ್ಯವಿಲ್ಲ' ಎಂದು ಪ್ರತಿಭಟನಾಕಾರರು ಸವಾಲೆಸೆದಿದ್ದಾರೆ. ಯಾವ ಭಾಷೆ ಮತ್ತು ಘೋಷಣೆಗಳು ಅಮೆರಿಕಾ ಸಮಾಜದಲ್ಲಿ ಅಸಂಬದ್ಧ ಅಥವಾ ಅಸಮಂಜಸವೆನಿಸಿದ್ದವೋ ಆ ಭಾಷೆ ಮತ್ತು ಘೋಷಣೆಗಳೀಗ ಇವರ ಹೋರಾಟಗೀತೆಯ ಹೊಸ ಸಾಲುಗಳಾಗಿವೆ. ಅರಬ್ ರಾಷ್ಟ್ರಗಳ ಜನತೆಯ ಹೋರಾಟಗಳಿಂದ ಪ್ರೇರೇಪಿತ ''ವಾಲ್ ಸ್ಟ್ರೀಟ್ ಆಕ್ರಮಿಸು'' ಚಳುವಳಿ ಸ್ವಯಂ ಜನಿತ. ನಾಯಕತ್ವವಿಲ್ಲದ ಈ ಹೋರಾಟ ಎಷ್ಟು ದಿನ ಸಾಗುವುದೋ ಕಾದು ನೋಡಬೇಕು. ಆದರೆ ಒಂದಂತೂ ಖಚಿತ. ''ವಾಲ್ ಸ್ಟ್ರೀಟ್ ಆಕ್ರಮಿಸು'' ಒಂದು ಸಾಂಕೇತಿಕ ಪ್ರತಿಭಟನೆಯಲ್ಲ, ಇದು ಅಮೆರಿಕಾದ ಶೋಷಿತ ಜನರ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಆಕ್ರಮಿಸಿರುವುದಂತೂ ನಿಜ. ಅಮೆರಿಕಾದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಚರ್ಚೆಗಳಿಗೆ ಅದು ಹೊಸ ಆಯಾಮಕೊಟ್ಟಿದೆ. ಹಾಗಾಗಿ ಇದೊಂದು ಚರಿತ್ರೆಯ ಮಹತ್ವದ ಬೆಳವಣಿಗೆ. ಅಮೆರಿಕಾದ ಕಾರ್ಮಿಕ ವರ್ಗ ಈ ಹೋರಾಟಕ್ಕೆ ನೇತೃತ್ವ ಕೊಟ್ಟಲ್ಲಿ ಸಾಮಾಜಿಕ ಪರಿವರ್ತನೆಯ ಹರಿಕಾರನಾಗಬಹುದು. ಹಾಗಾಗಿ ೨೦೧೨ ನಿರೀಕ್ಷೆಯ ವರ್ಷ.

ಏಷ್ಯಾ ಖಂಡ – ಅಗ್ನಿಕುಂಡ

ಅಮೆರಿಕಾ ಸೈನ್ಯದ ಕಾರ್ಯಾಚರಣೆ ಕೇವಲ ಇರಾಕ್ ಮತ್ತು ಆಫ್ಘಾನಿಸ್ತಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಈಗ ಅದು ಲಿಬಿಯ ಮತ್ತು ಪಾಕಿಸ್ತಾನಕ್ಕೆ ಆವೃತಗೊಂಡಿದೆ. ಒಸಾಮಾ ಬಿನ್ ಲಾಡೆನ್‌ನನ್ನು ಅಮೆರಿಕಾದ ಸೈನ್ಯ ಕೊಂದದ್ದು ಪಾಕಿಸ್ತಾನದ ನೆಲದಲ್ಲೆ. ಇತ್ತೀಚೆಗೆ ನಡೆದ ಸೈನ್ಯದ ಕಾರ್ಯಾಚರಣೆಯಲ್ಲಿ ೨೪ ಪಾಕಿಸ್ತಾನಿ ಸೈನಿಕರನ್ನು ಕೊಂದು ಅಮೆರಿಕಾ ಈಗ ಪಾಕಿಸ್ತಾನದ ಜನತೆಯ ಕ್ರೋಧಕ್ಕೊಳಗಾಗಿದೆ. ಅಮೆರಿಕಾ - ಪಾಕಿಸ್ತಾನದ ಬಾಂಧವ್ಯ ದಿನೇ ದಿನೇ ಹದಗೆಡುತ್ತಿದೆ. ಮಿಲಿಟರಿ ಆಡಳಿತಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚುತ್ತಿವೆ. ಪಾಕಿಸ್ತಾನ-ಚೀನಾ-ರಷ್ಯ ಒಂದು ಬಣವಾಗಿ ಏಷ್ಯಾಖಂಡದ ಒಂದು ಶಕ್ತಿಕೇಂದ್ರವಾದರೆ, ಭಾರತ - ಅಮೆರಿಕಾ - ಜಪಾನ್ - ಆಸ್ಟ್ರೇಲಿಯ ಇನ್ನೊಂದು ಬಣವಾಗಿ ಈಗಾಗಲೇ ಮಿಲಿಟರಿ ಕಾರ್ಯಾಚರಣೆ ನಡೆಸಿದೆ. ಈ ಎಲ್ಲ ಬೆಳವಣಿಗೆಗಳು ಏಷ್ಯಾಖಂಡವನ್ನು ಆತಂಕಕ್ಕೀಡುಮಾಡಿದೆ. ಜಪಾನ್‌ನ ಅಣುಸ್ಥಾವರದ ದುರಂತ, ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಪ್ರಕೃತಿಯ ವಿಕೋಪ, ಮಯನ್ಮಾರ್‌ನ ರಾಜಕೀಯ ಬೆಳವಣಿಗೆ ಹೇಗೆ ಎಲ್ಲ ದೇಶಗಳೂ ದಿಕ್ಕೆಟ್ಟಿವೆ ಎಂಬುದಕ್ಕೆ ಸಾಕ್ಷಿಗಳಾಗಿವೆ. ಶಾಂತಿಪ್ರಿಯ ಸ್ಕಾಂಡಿನೇವಿಯ ರಾಷ್ಟ್ರಗಳಾದ ಸ್ವೀಡನ್ ಮತ್ತು ನಾರ್ವೆಯ ರಾಜಧಾನಿಗಳಲ್ಲಿ ನಡೆದ ಬಾಂಬ್ ಸ್ಫೋಟಗಳು ಜಗತ್ತಿನ ಉದ್ವೇಗದ ಪರಿಸ್ಥಿತಿಗೆ ನಿದರ್ಶನಗಳಾಗಿವೆ. ಬದಲಾವಣೆಯ ಚಂಡಮಾರುತ ರಷ್ಯವನ್ನೂ ತಲುಪಿದೆ. ಪುಟಿನ್‌ನ ರಾಜಕೀಯ ಪಕ್ಷ ತನ್ನ ವರ್ಚಸ್ಸನ್ನು ಕಳೆದುಕೊಂಡು ಇತ್ತೀಚಿನ ಚುನಾವಣೆಯಲ್ಲಿ ತನ್ನ ಹಿಡಿತವನ್ನು ಕಳೆದುಕೊಂಡಿದೆ. ರಷ್ಯದಾದ್ಯಂತ ಪ್ರತಿಭಟನೆ ಪ್ರಾರಂಭವಾಗಿದೆ. ರಷ್ಯಾದ ಕಮ್ಯುನಿಸ್ಟ್ ಪಕ್ಷ ಜನಮನವನ್ನು ಮತ್ತೆ ಸೆಳೆಯುತ್ತಿದೆಯೆಂದು ಇತ್ತೀಚಿನ ಚುನಾವಣೆ ಸಂಕೇತಿಸಿದೆ. ಒಟ್ಟಿನಲ್ಲಿ ಎಲ್ಲ ದೇಶಗಳಲ್ಲೂ ಈಗ ಸಾಮಾಜಿಕ ಮಂಥನ ನಡೆಯುತ್ತಿದೆ.

ಹೋರಾಟಮಯ ಭಾರತ

ಭಾರತದ ಪರಿಸ್ಥಿತಿ ಇತರೆ ರಾಷ್ಟ್ರಗಳಿಗಿಂತ ಭಿನ್ನವಾಗಿಲ್ಲ. ರಾಜಕೀಯ- ಸಾಮಾಜಿಕ ಆಂದೋಲನಗಳು ಎಲ್ಲೆಲ್ಲೂ ಪುಟಿದೇಳುತ್ತಿವೆ. ತಮ್ಮ ನೆಲವನ್ನು ಉಳಿಸಿಕೊಳ್ಳಲು ರೈತರು ದೇಶದ ವಿವಿಧ ಭಾಗಗಳಲ್ಲಿ ಅಪ್ರತಿಮ ಹೋರಾಟ ನಡೆಸಿದೆ. ಕಾರ್ಮಿಕ ವರ್ಗ ೨೦೧೧ರಲ್ಲಿ ರಾಷ್ಟ್ರವ್ಯಾಪಿ ಹೋರಾಟಗಳನ್ನು ನಡೆಸಿದೆ. ತಮಿಳುನಾಡಿನ ಕೂಡಂ ಕುಳಂನಲ್ಲಿ ಸ್ಥಾಪಿಸಬೇಕೆಂದಿರುವ ಅಣು ವಿದ್ಯುತ್ ಸ್ಥಾವರದ ವಿರುದ್ಧ ದೀರ್ಘ ಪ್ರತಿಭಟನೆ ನಡೆಯುತ್ತಿದೆ. ಮಾವೋವಾದಿ ನಾಯಕ ಕಿಶನ್‌ಜೀಯ ಹತ್ಯೆಯ ನಂತರ ಆತಂಕ ಹೆಚ್ಚಿದೆ. ಎಲ್ಲೆಲ್ಲೂ ಹಗರಣಗಳೆ. ಈ ಬೆಳವಣಿಗೆಗಳ ನಡುವೆಯೆ ಯು.ಪಿ.ಎ. ಸರ್ಕಾರ ದೇಶವನ್ನು ಹರಾಜಿಗಿಟ್ಟಿದೆ. ಸಗಟು ಮತ್ತು ಚಿಲ್ಲರೆ ವ್ಯಾಪಾರಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ರಂಗಸಜ್ಜಿಕೆ ನಡೆದಿದೆ. ವಾಲ್‌ಮಾರ್ಟ್, ಐಕಿಯಗಳಂತಹ ವಿದೇಶಿ ವ್ಯಾಪಾರಿ ಮಳಿಗೆಗಳು ಈ ದೇಶಕ್ಕೆ ಬಂದರೆ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುತ್ತವೆಯೆಂಬ ಸುಳ್ಳುಪ್ರಚಾರ ನಡೆಸಿದ್ದಾರೆ. ಭಾರತ ಸರ್ಕಾರ ಶ್ರಮ ಮಂತ್ರಾಲಯದ ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ ೨೦೦೯-೧೦ರ ವರದಿಯ ಪ್ರಕಾರ ದೇಶದ ನಗರ ಪ್ರದೇಶಗಳಲ್ಲಿ ಪ್ರತಿ ೧೦೦೦ ಉದ್ಯೋಗಸ್ಥರಲ್ಲಿ ೪೩೯ ಜನ ಸ್ವಯಂ ಉದ್ಯೋಗಸ್ಥರು. ಇದರಲ್ಲಿ ಬಹುಪಾಲು ಜನರು ಸಗಟು ಮತ್ತು ಚಿಲ್ಲರೆ ವ್ಯಾಪಾರಿ ಕ್ಷೇತ್ರದಲ್ಲಿರುವವರು. ವಾಲ್‌ಮಾರ್ಟ್‌ನಂತಹ ವ್ಯಾಪಾರಿ ಮಳಿಗೆಗಳು ಈಗಿರುವ ಪ್ರಮಾಣದ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಬದಲಾಗಿ ಇರುವ ಉದ್ಯೋಗಗಳನ್ನೇ ನಾಶಗೊಳಿಸುತ್ತವೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರಪಂಚದಾದ್ಯಂತ ನಿರುದ್ಯೋಗದ ಸಮಸ್ಯೆ ಭೀಕರಗೊಳ್ಳುವ ಬಗ್ಗೆ ಪೂರ್ವ ಸೂಚನೆಯನ್ನು ಈಗಾಗಲೇ ಕೊಟ್ಟಿದೆ. ವಿದೇಶಿ ಬಂಡವಾಳ ಹೂಡಿಕೆಯ ಬಗ್ಗೆ ತೀವ್ರ ಪ್ರತಿರೋಧ ಪ್ರಾರಂಭವಾಗಿದೆ.

ನೈತಿಕ ಅಧಃಪತನ

ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದ ಭಾರತೀಯ ಪ್ರಾಧ್ಯಾಪಕರೊಬ್ಬರು ಭಾರತದ ಭ್ರಷ್ಟಾಚಾರದ ಬಗ್ಗೆ ವ್ಯಾಖ್ಯಾನಿಸುತ್ತ ಭಾರತ ಸರ್ಕಾರ ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಸಂಪೂರ್ಣವಾಗಿ ಜಾರಿಗೊಳಿಸಲು ವಿಫಲರಾಗಿರುವುದೇ ಭ್ರಷ್ಟಾಚಾರ ಹೆಚ್ಚಲು ಕಾರಣವೆಂದು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾರೆ. ಈಗಾಗಲೇ ನಮ್ಮ ದೇಶವನ್ನಾಕ್ರಮಿಸಿರುವ ಅಂತರರಾಷ್ಟ್ರೀಯ ಕಂಪನಿಗಳು ಭ್ರಷ್ಟಾಚಾರದ ಮಟ್ಟವನ್ನು ಗಗನಕ್ಕೇರಿಸಿವೆ. ಅಣ್ಣಾ ಹಜಾರೆ ಮತ್ತು ಅವರ ಸಂಗಡಿಗರಿಗೆ ಭ್ರಷ್ಟಾಚಾರದ ಪಿಡುಗಿನ ಮೂಲಗಳ ಬಗ್ಗೆ ಕಾಳಜಿಯಿಲ್ಲ. ಅದರ ನಿವಾರಣೆಗೊಂದು ಔಷಧಿ ಕಂಡುಹಿಡಿದುಬಿಟ್ಟರೆ ಸಾಕು ಎಲ್ಲವೂ ನಿರಾಳವೆಂಬ ಭ್ರಮೆಯ ಚಲಾವಣೆಯೇ ಈಗ ಇವರ ಕಾಯಕವಾಗಿಬಿಟ್ಟಿದೆ. ಭಾರತದಲ್ಲಿ ಆಳುವ ವರ್ಗದ ನೈತಿಕ ಪತನ ಕಣ್ಣಿಗೆ ರಾಚುತ್ತಿದೆ. ಬಂಡವಾಳಶಾಹಿ ಪದ್ಧತಿಯ ಆರ್ಥಿಕ ಪತನ ಅದರ ನೈತಿಕ ಪತನದಿಂದ ಆರಂಭವಾಗುತ್ತದೆಯೆಂದು ರಷ್ಯದ ಸಾಹಿತಿ ನೊಬೆಲ್‌ಪ್ರಶಸ್ತಿ ವಿಜೇತ ಅಲೆಗ್ಸಾಂಡರ್ ಸೊಲ್ಜೆನಿಟ್ಸಿನ್ ಹೇಳಿದ ಮಾತು ನೆನಪಿಗೆ ಬರುತ್ತದೆ.

ಪುಟ್ಟ ರಾಷ್ಟ್ರಗಳ ದಿಟ್ಟ ಹೆಜ್ಜೆ

ಅಮೆರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ಲ್ಯಾಟಿನ್ ಅಮೆರಿಕಾ ದೇಶಗಳು ನಡೆಸುತ್ತಿರುವ ಹೋರಾಟ ಅಪೂರ್ವವಾದದ್ದು. ಕ್ಯೂಬ, ವೆನಿಜೂವೆಲ, ಬೊಲಿವಿಯ, ಅರ್ಜೆಂಟೈನಾ, ನಿಕಾರಾಗುವ, ಈಕ್ವೆಡಾರ್, ಕೊಲಂಬಿಯ ಇತ್ಯಾದಿ ರಾಷ್ಟ್ರಗಳು ಒಕ್ಕೂಟ ರಚಿಸಿಕೊಂಡು ಅಮೆರಿಕಾದ ದಬ್ಬಾಳಿಕೆಗೆ ಕೊನೆಮುಟ್ಟಿಸಲು ನಿರ್ಧರಿಸಿವೆ.

ಈ ಪುಟ್ಟ ರಾಷ್ಟ್ರಗಳ ದಿಟ್ಟ ಹೆಜ್ಜೆಗೆ ಹೆಜ್ಜೆ ಸೇರಿದಲ್ಲಿ ಹೊಸ ಹಾದಿಯೊಂದು ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ. ನಾವು ಪಡೆಯಬೇಕಾದ ಅರಿವೆಂದರೆ ಬಂಡವಾಳಶಾಹಿ ವ್ಯವಸ್ಥೆ, ಅದು ಸೃಷ್ಟಿಸಿದ ಸಮಸ್ಯೆಗಳಿಗೆ ಬಿಕ್ಕಟ್ಟಿಗೆ ಪರಿಹಾರ ಕೊಡಲು ಸಾಧ್ಯವಿಲ್ಲ. ಪರಿಹಾರಕ್ಕೆ ಹೋರಾಡುವವರು ಪರ್ಯಾಯ ವ್ಯವಸ್ಥೆಯ ಪರಿಕಲ್ಪನೆಯನ್ನೂ ಹೊಂದಿರಬೇಕು. ಇಲ್ಲದಿದ್ದಲ್ಲಿ ಹೋರಾಟ ಅಪೂರ್ಣ. ಎಲ್ಲ ಹೋರಾಟಗಾರರನ್ನು ''ಹೊಸತು'' ಅಭಿನಂದಿಸುತ್ತದೆ.

ಮುರಳೀಧರ
ವಕೀಲರು, ನಂ. ೮೩, ಮಲ್ಲೇಶ್ವರಂ ವೃತ್ತ, ಬೆಂಗಳೂರು -

೨೦೧೨ : ಆಶಾವಾದಿ ಬೆಳವಣಿಗೆಗಳ ವರ್ಷವಾದೀತೆ?

ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಧಾನ ಲಕ್ಷಣಗಳಲ್ಲೊಂದು ಐಶ್ವರ್ಯದ ಸಂಚಯನ ಕೆಲವೇ ಮಂದಿಯಿಂದ. ಇದು ದುರಾಸೆಯ ಮಟ್ಟ ತಲುಪಿದಾಗ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ. ಇದರಿಂದ ಶ್ರೀಮಂತ ಬಂಡವಾಳಗಾರರಿಗೇನೂ ತೊಂದರೆಯಾಗುವುದಿಲ್ಲ. ಅದರ ಪರಿಣಾಮಗಳನ್ನು ಅನುಭವಿಸುವವರು ಜನಸಾಮಾನ್ಯರು, ಅರ್ಥಾತ್ ಬಡಜನರು. ಅವರ ಜೀವನ ದುಸ್ತರವಾಗುತ್ತದೆ. ಶ್ರೀಮಂತರು ಮತ್ತು ಬಡವರ ನಡುವೆ ಕಂದಕ ಹಿಗ್ಗುತ್ತಾ ಹೋಗುತ್ತದೆಯೇ ಹೊರತು ಕುಗ್ಗುವುದಿಲ್ಲ. ಇದು ಇಂದಿನ ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ದಿನಗಳಲ್ಲಿ ಎದ್ದು ಕಾಣುತ್ತದೆ. ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ವಿಪರೀತ ಮಟ್ಟಕ್ಕೆ ಹೋಗಿದೆ. ಇಂಥ ವಿಪರ್ಯಾಸದ ವಿರುದ್ಧ ನವೀನ ರೀತಿಯಲ್ಲಿ ಜನಸಾಮಾನ್ಯರು ಪ್ರತಿಭಟನೆ ನಡೆಸಿದ್ದು ಕಳೆದ ವರ್ಷದ (೨೦೧೧ರ) ವಿಶೇಷಗಳಲ್ಲಿ ಒಂದು. ಇದು ಪ್ರಾರಂಭವಾದ್ದು ಕೂಡ ಪ್ರಪಂಚದಲ್ಲಿ ಅತಿ ಶ್ರೀಮಂತ ದೇಶ ಎನಿಸಿಕೊಂಡಿರುವ ಅಮೆರಿಕದಲ್ಲಿ. ಅದೇ ಅಮೆರಿಕದ ಹಣಕಾಸಿನ ವಹಿವಾಟಿನ ಕೇಂದ್ರ ನ್ಯೂಯಾರ್ಕ್ ನಗರದಲ್ಲಿ ನಡೆದ 'ವಾಲ್‌ಸ್ಟ್ರೀಟ್ ಆಕ್ರಮಣ' ಆಂದೋಳನ. ಅಂದರೆ ಹಣಕಾಸಿನ ಕೇಂದ್ರ ಹಾಗೂ ಷೇರುಮಾರುಕಟ್ಟೆಯ ಮುಂದೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಿತ್ತಿ ಪತ್ರಗಳನ್ನು ಹಿಡಿದು ಜನ ನಡೆಸಿದ ಪ್ರತಿಭಟನಾ ಪ್ರದರ್ಶನ. ಇದು ಕೇವಲ ಒಂದು ದಿನ ನಡೆದದ್ದಲ್ಲ, ಹಲವು ದಿನಗಳು ನಿರಂತರವಾಗಿ. ಕೆಲವೇ ದಿನಗಳಲ್ಲಿ ಈ ಪ್ರತಿಭಟನೆ ಎಲ್ಲ ಶ್ರೀಮಂತ ಬಂಡವಾಳ ದೇಶಗಳಿಗೂ ಹರಡಿತು. ಲಂಡನ್, ಫ್ರಾಂಕ್‌ಫರ್ಟ್, ಮ್ಯಾಡ್ರಿಡ್, ಪ್ಯಾರಿಸ್, ಬರ್ಲಿನ್, ಟೋಕಿಯೋ ಮೊದಲಾದ ಕಡೆಗಳಲ್ಲಿನ ಷೇರುಮಾರುಕಟ್ಟೆ ಮುಂದೆ ಪ್ರದರ್ಶನಗಳು ನಡೆದವು. ದಬ್ಬಾಳಿಕೆ, ಪೊಲೀಸು ಕಾರ್ಯಾಚರಣೆಗಳಿಂದ ಈ

ಸೀಯಾರ್ಕೆ

ಪ್ರತಿಭಟನೆಯನ್ನು ಬಗ್ಗು ಬಡಿಯಲಾಯಿತು. ಸ್ವಪ್ರೇರಣೆಯಿಂದ ಶುರುವಾದ ಈ ಜನಾಂದೋಳನ ನಿರ್ದಿಷ್ಟ ಗುರಿಯಿಲ್ಲದೆ ಚಳವಳಿಯ ರೂಪ ಪಡೆಯದೇ ಹೋಯಿತು. ಆದರೂ ಇದು ಒಂದು ಗಮನಾರ್ಹವಾದ ಬೆಳವಣಿಗ. ಮುಂದೆ ಇದು ಯಾವ ರೂಪ ಪಡೆದೀತು ಎನ್ನುವುದು ಕುತೂಹಲಕರ.

ಹಾಗೆ ನೋಡಿದರೆ, ಇಪ್ಪತ್ತೊಂದನೆ ಶತಮಾನದ ಎರಡನೇ ದಶಕದ ಮೊದಲ ವರ್ಷ ಯಾವ ರೀತಿಯಲ್ಲೂ ಆಶಾದಾಯಕವಾಗಿರಲಿಲ್ಲ ಎನ್ನಬೇಕು. ಬಂಡವಾಳಶಾಹಿ ಜಗತ್ತಿನಲ್ಲಿ ಆರ್ಥಿಕ ಹಿಂಜರಿತ ಮುಂದುವರಿಯುತ್ತಿದ್ದು ಆತಂಕ ಹೆಚ್ಚಿಸಿದೆ. ಇಳಿಯದ ನಿರುದ್ಯೋಗದ ಪ್ರಮಾಣ, ಹಣಕಾಸಿನ ಮುಗ್ಗಟ್ಟು,
ಬ್ಯಾಂಕುಗಳ ದಿವಾಳಿ, ಬೆಳವಣಿಗೆಯ ದರದ ಕುಸಿ
ಇವು ಮುಂದುವರಿದ ಬಂಡವಾಳಶಾಹಿ ದೇಶಗಳ
ಕಾಡುತ್ತಿವೆ. ಏನೇ ಶೃಂಗಸಭೆಗಳನ್ನು ನಡೆಸಿದರು
ಪರಿಹಾರ ಮಾತ್ರ ಮಾಯಾಮೃಗ. ಒಂದು ಹಂತದ
ಈ ರಾಷ್ಟ್ರಗಳು ಭಾರತ, ಬ್ರೆಜಿಲ್, ಚೀನಾ, ದಕ್ಷಿ
ಆಫ್ರಿಕಾ ದೇಶಗಳನ್ನು ಅಸೂಯೆಯಿಂದ ನೋಡುವಂ
ಮಾಡಿದವು. ಮುಂದುವರಿದ ಬಂಡವಾಳಶಾಹಿ ಮ
ಆಧುನಿಕ ಸಮಾಜದಲ್ಲಿ ದುಸ್ಥಿತಿಗೆ ಇಂಥವರೇ ಕಾರ
ಎಂದು ಗುರ್ತಿಸುವುದು ಕಷ್ಟ. ಹಲವು ಕಾರಣಗ
ಸೇರಿಕೊಂಡಿರುತ್ತವೆ. ವರ್ಷದಲ್ಲಿ ಆರ್ಥಿಕ ಮುಗ್ಗಟ್ಟಿ
ಪರಿಹಾರ ಕಾಣಲು ನಡೆದ ಜಿ-೨೦ ಶೃಂಗಸಭೆಗ
ವ್ಯರ್ಥಗೊಂಡಿವೆ. ಸದ್ಯದ ಪರಿಸ್ಥಿತಿ ನೋಡಿದ
ಬಿಕ್ಕಟ್ಟು ಮುಂದುವರಿಯುವ ಲಕ್ಷಣಗಳೇ ಹೆಚ್ಚು
ನೂರೈವತ್ತು ವರ್ಷಗಳ ಹಿಂದೆಯೇ ಕಾರ್ಲ್ ಮಾರ್
ಬಂಡವಾಳಶಾಹಿ ಜಗತ್ತಿನಲ್ಲಿ ಆಗಾಗ್ಗೆ ಸಂಭವಿಸು
ಆರ್ಥಿಕ ಮುಗ್ಗಟ್ಟನ್ನು ಕುರಿತು ನೀಡಿರುವ ಮುನ್ಸೂಚ
ಗಮನಾರ್ಹ. ಇದು ಕೊನೆಗೆ ಬಂಡವಾಳಶಾ
ವ್ಯವಸ್ಥೆಯ ಅವಸಾನಕ್ಕೆಡೆ ಕೊಡುತ್ತದೆ ಎಂದು ಅವ
ಹೇಳಿರುವುದು ಯಥೋಚಿತವಾಗಿದೆ. ಅದರಿಂದಲ
ಇಂದು ಬಂಡವಾಳಶಾಹಿ ಅರ್ಥಶಾಸ್ತ್ರಿಗಳು ಮಾರ್ಕ್ಸ
ಕೃತಿಗಳನ್ನು ಪುನರವಲೋಕನ ಮಾಡಬೇಕಾಗಿದ
ಸುಖೀಜೀವನದ 'ಅಮೆರಿಕದ ಕನಸು' ಎಂ
ನುಡಿಗಳು ಈಗ ಸವಕಲು ನಾಣ್ಯವಾಗುತ್ತಿ

ವಾಲ್‌ಸ್ಟ್ರೀಟ್ ಆಕ್ರಮಣ' ಪ್ರತಿಭಟನೆಯಲ್ಲಿ ಕಣ್ಣಿಗೆಬಿದ್ದ ಭಿತ್ತಿಪತ್ರ ಸೂಚ್ಯ : ''ಅಮೆರಿಕದ ಕನಸನ್ನು ಅನುಭವಿಸಲು ಏಕೈಕ ಮಾರ್ಗ ನಿದ್ರಿಸುತ್ತಿರುವಾಗ ಮಾತ್ರ.''

ಯೂರೋಪಿನ ಪುರಾತನ ಸಂಸ್ಕೃತಿಯ ನಾಡು ಗ್ರೀಸ್ ಒಲಿಂಪಿಕ್ ಪಂದ್ಯಗಳ ತವರು. ಈಗ ಆರ್ಥಿಕವಾಗಿ ದಿವಾಳಿಯಾಗಿರುವ ರಾಷ್ಟ್ರ. ಸಾಲ ಮರುಪಾವತಿ ಮಾಡಲಾಗದೆ ಗ್ರೀಕ್ ಸರಕಾರ ಕೈಯಾಡಿಸಿದಾಗ ಇಡೀ ಯೂರೋಪು ತತ್ತರಿಸಿತು. ಬ್ಯಾಂಕುಗಳು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಬಿದ್ದವು. ಐಎಂಎಫ್, ವರ್ಲ್ಡ್‌ಬ್ಯಾಂಕ್ ಪರಿಸ್ಥಿತಿಯನ್ನು ಸುಧಾರಿಸಲು ನಡೆಸಿದ ಪ್ರಯತ್ನವೆಲ್ಲ ವಿಫಲಗೊಂಡಿತು. ಹಾಗೆಯೇ ಜಿ-೨೦ ರಾಷ್ಟ್ರಗಳು ಶೃಂಗಸಭೆ ನಡೆಸಿದ್ದೂ ಪ್ರಯೋಜನವಾಗಲಿಲ್ಲ. ಇತರ ಬಂಡವಾಳಶಾಹಿ ದೇಶಗಳಲ್ಲಿನ ಬಿಕ್ಕಟ್ಟಿನಂತೆಯೇ ಗ್ರೀಸಿನಲ್ಲೂ ಆದಾಯಕ್ಕಿಂತ ದುಬಾರಿ ಖರ್ಚು, ಸಾಲದ ಹೊರೆಯ ಮೂಲ. ಇಡೀ ಬಂಡವಾಳಶಾಹಿ ಜಗತ್ತು ಆರ್ಥಿಕ ಮುಗ್ಗಟ್ಟಿನಲ್ಲಿ ತೊಳಲಾಡುತ್ತಿರುವಾಗ ಗ್ರೀಸ್ ಆಸರೆಗೆ ಯಾರೂ ಇಲ್ಲವಾಗಿದೆ. ಗ್ರೀಸಿನ ಸರಕಾರ ಬದಲಾದರೂ ಜನರ ಸಮಸ್ಯೆಗೆ ಪರಿಹಾರವೇನೂ ದೊರೆತಿಲ್ಲ.

ಗ್ರೀಸಿನ ಜೊತೆಗೆ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಕೊಂಡಿರುವ ಇನ್ನೆರಡು ಯೂರೋಪಿಯನ್ ರಾಷ್ಟ್ರಗಳು ಇಟಲಿ ಮತ್ತು ಸ್ಪೇನ್. ಇನ್ನು ಯೂರೋಪಿನ ಪ್ರಮುಖ ಕೈಗಾರಿಕಾ ರಾಷ್ಟ್ರಗಳಾದ ಫ್ರಾನ್ಸ್, ಜರ್ಮನಿ ಹಾಗೂ ಬ್ರಿಟನ್ನಿನ ಸ್ಥಿತಿ ಉತ್ತಮವಾಗೇನಿಲ್ಲ. ಹೆಚ್ಚುತ್ತಿರುವ ನಿರುದ್ಯೋಗ ಈ ರಾಷ್ಟ್ರಗಳಿಗೆ ತಲೆನೋವಾಗಿದೆ. ಇವೆಲ್ಲ ಯೂರೋಪಿಯನ್ ಒಕ್ಕೂಟದ ಭವಿಷ್ಯವನ್ನು ಆತಂಕಕ್ಕೀಡುಮಾಡಿದೆ. ಇಪ್ಪತ್ತೇಳು ರಾಷ್ಟ್ರಗಳ ಸದಸ್ಯತ್ವವನ್ನು ಹೊಂದಿರುವ ಈ ಒಕ್ಕೂಟ ಉಳಿಯುವುದೇ ಎನ್ನುವ ಪ್ರಶ್ನೆಗಿಂತ ಎಷ್ಟುಕಾಲ ಉಳಿದೀತು ಎನ್ನುವುದೇ ಮುಖ್ಯ ಎಂಬುದಾಗಿ ವ್ಯಾಖ್ಯಾನಕಾರರೊಬ್ಬರು ಹೇಳಿರುವುದು ಗಮನಿಸಬೇಕಾದ ಅಂಶ. ಮೊದಲಿನಿಂದಲೂ ಅಂಚಿನಲ್ಲೇ ಉಳಿದಿರುವ ಬ್ರಿಟನ್ ಈಗ ಇನ್ನಷ್ಟು ದೂರ ಸರಿದಿದೆ. ಇದರಿಂದಾಗಿ ಯೂರೋಪಿನ ಒಕ್ಕೂಟದಲ್ಲಿ ಬಿಕ್ಕಟ್ಟು ಇನ್ನಷ್ಟು ಉಲ್ಬಣಿಸಿದೆ.

ಅರಬ್ ರಾಷ್ಟ್ರಗಳಲ್ಲಿ ತಲೆದೋರಿದ ತಳಮಳ ಹೊಸ ವರ್ಷದಲ್ಲೂ ಮುಂದುವರಿದಿದೆ. ಉತ್ತರ ಆಫ್ರಿಕಾದ ಟ್ಯುನೀಷಿಯದಲ್ಲಿ ಕಳೆದ ವರ್ಷ ಪ್ರಾರಂಭವಾದ ಸರ್ವಾಧಿಕಾರಿ ಆಡಳಿತೆಯ ವಿರುದ್ಧ ಜನಾಂದೋಳನ ಕಾಡ್ಗಿಚ್ಚಿನಂತೆ ನೆರೆಯ ರಾಷ್ಟ್ರಗಳಿಗೂ ಹಬ್ಬಿತು ಬಹುಬೇಗ. ಮೂರು-ನಾಲ್ಕು ದಶಕಗಳಿಂದ ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದವರ ಕುರ್ಚಿ ಅಲುಗಾಡತೊಡಗಿತು. ಟ್ಯುನೀಷಿಯದಲ್ಲಿ ಸರ್ವಾಧಿಕಾರಿ ಆಡಳಿತ ಅಂತ್ಯಗೊಳ್ಳುತ್ತಿದ್ದಂತೆ ಈಜಿಪ್ಟ್‌ನಲ್ಲಿ ಮುಬಾರಕ್ ವಿರುದ್ಧ ಜನತೆಯ ಹೋರಾಟ ಪ್ರಾರಂಭವಾಯಿತು. ದಬ್ಬಾಳಿಕೆಯಿಂದ ಆಂದೋಳನವನ್ನು ಸದೆಬಡಿಯಲು ನಡೆಸಿದ ಎಲ್ಲ ಪ್ರಯತ್ನಗಳೂ ವಿಫಲಗೊಂಡು ಮುಬಾರಕ್ ಕೊನೆಗೂ ಅಧಿಕಾರ ತ್ಯಜಿಸಿದ. ಈಗ ಆರೋಪಿಯಾಗಿ ನ್ಯಾಯಾಲಯದಲ್ಲಿ ವಿಚಾರಣೆಗೀಡಾಗಿದ್ದಾನೆ. ಈ ಜನಾಂದೋಳನಗಳು ಸ್ವಯಂಪ್ರೇರಿತವಾಗಿದ್ದು, ಪೂರ್ವಸಿದ್ಧತೆ ಇಲ್ಲದೆ, ಸರಿಯಾದ ನಾಯಕತ್ವದ ಕೊರತೆಯಿಂದಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳ ಕುತಂತ್ರಗಳಿಗೆ ಬಲಿಯಾಗಿರುವುದು ವಿಷಾದನೀಯ. ಜನಸಾಮಾನ್ಯರ ಅಪೇಕ್ಷೆಗಳನ್ನು ಈಡೇರಿಸುವುದಕ್ಕಿಂತ ಮಿಗಿಲಾಗಿ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೇರುವ ಪಶ್ಚಿಮ ರಾಷ್ಟ್ರಗಳ ಪ್ರಯತ್ನಗಳಿಗೆ ಪೂರಕವಾಗಿರುವುದೇ ಈಗ ಸ್ಥಾಪನೆಗೊಂಡಿರುವ ಆಡಳಿತಗಳ ಮುಖ್ಯ ಗುರಿಯಾಗಿಬಿಟ್ಟಿದೆ.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲೇ ಪ್ರಾರಂಭವಾದ್ದು ಲಿಬಿಯಾ ಸರ್ವಾಧಿಕಾರಿ ಮಹಮ್ಮದ್ ಗಡಾಫಿ ವಿರುದ್ಧ ಜನತೆಯ ಹೋರಾಟ. ಪ್ರತಿಭಟನಾ ಪ್ರದರ್ಶನದಿಂದ ಮೊದಲ್ಗೊಂಡ ಜನತೆಯ ಈ ಹೋರಾಟ ಬೇಗನೆ ಸಶಸ್ತ್ರ ವಿಮೋಚನಾ ಚಳವಳಿಯಾಗಿ ರೂಪುಗೊಂಡಿತು. ಇದರ ಹಿಂದೆ ಪಶ್ಚಿಮ ರಾಷ್ಟ್ರಗಳ ಕೈವಾಡ ಎದ್ದು ಕಾಣುತ್ತಿತ್ತು. ಅಗತ್ಯವಾದ ಹಣಕಾಸು ಮತ್ತು ಆಯುಧ ಸಾಮಗ್ರಿಗಳನ್ನು ಒದಗಿಸುತ್ತಿದ್ದ 'ನ್ಯಾಟೋ' ಕೂಟ, ಗಡಾಫಿ ಪಡೆಯ ದಬ್ಬಾಳಿಕೆ ತೀವ್ರಗೊಳ್ಳುತ್ತಿದ್ದಂತೆ ನೇರ ಹಸ್ತಕ್ಷೇಪಕ್ಕೆ ತೊಡಗಿತು. ಮೊದಲಿನಲ್ಲಿ ಹೋರಾಟಗಾರರಿಗೆ ವಾಯುಸೇನೆಯ ಬೆಂಬಲ ನೀಡಿದ 'ನ್ಯಾಟೋ' ಪಡೆಗಳು ಅನಂತರ ನೇರವಾಗಿಯೇ ಹಸ್ತಕ್ಷೇಪ ನಡೆಸಿದುವು. ಗಡಾಫಿ ಮತ್ತು ಅವನ ಕುಟುಂಬದ ಸದಸ್ಯರು ಹಾಗೂ ಅನುಯಾಯಿಗಳ ಕಗ್ಗೊಲೆಯಲ್ಲಿ ಹೋರಾಟ ಅಂತ್ಯಗೊಂಡಿತು. ಪ್ರಪಂಚದಲ್ಲಿ ಅತ್ಯಧಿಕ ತೈಲ ನಿಕ್ಷೇಪ ಹೊಂದಿರುವ ಲಿಬಿಯಾ ಈಗ ವಸ್ತುಶಃ 'ನ್ಯಾಟೊ' ಕೂಟದ ಆಕ್ರಮಣದಲ್ಲಿದೆ. ಈಗಾಗಲೇ ಈ ರಾಷ್ಟ್ರಗಳು ಹೊಸ ತೈಲ ಒಪ್ಪಂದಗಳನ್ನು



ಮಾಡಿಕೊಂಡಿವೆ. ತೈಲೋತ್ಪಾದನಾ ರಾಷ್ಟ್ರಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಶಕ್ತಿ ಜಗತ್ತಿನ ಮೇಲೆ ಅಧಿನಾಯಕತ್ವ ಸ್ಥಾಪಿಸಲು ಸಮರ್ಥವಾಗಿರುತ್ತದೆ ಎನ್ನುವುದು ಅಂಬೋಣ. ಅಮೆರಿಕದ ಗುರಿ ಅದುವೆ ಆಗಿದೆ. ಇದಕ್ಕೆ ಅಡ್ಡಿಯಾಗಿರುವುದು ಈ ಪ್ರದೇಶದಲ್ಲಿ ಸಿರಿಯಾ ಮತ್ತು ಇರಾನ್ ಎರಡು ರಾಷ್ಟ್ರಗಳು. ಸಿರಿಯಾದಲ್ಲಿ ಸರ್ವಾಧಿಕಾರಿ ಆಡಳಿತ ನಡೆಸುತ್ತಿರುವ ಅಸ್ಸಾದ್ ವಿರುದ್ಧ ಜನ ಹೋರಾಟ ನಡೆಸುತ್ತಿದ್ದಾರೆ. ಪಶ್ಚಿಮ ರಾಷ್ಟ್ರಗಳು ಈಗಾಗಲೇ ಸಿರಿಯಾದ ಮೇಲೆ ಹಲವು ಬಗೆಯ ಆರ್ಥಿಕ ದಿಗ್ಬಂಧನವನ್ನು ಹೇರಿವೆ. ಅಸ್ಸಾದ್ ಆಳ್ವಿಕೆಯನ್ನು ಅಂತ್ಯಗೊಳಿಸಿ, ತಮಗೆ ಅನುಕೂಲವಾಗಿರುವ ಆಡಳಿತವನ್ನು ಸ್ಥಾಪಿಸುವುದು ಅಮೆರಿಕ ಮತ್ತು ಪಶ್ಚಿಮ ರಾಷ್ಟ್ರಗಳ ಏಕೈಕ ಗುರಿ. ದೇಶದಲ್ಲಿ ಅಂತರ್ಯುದ್ಧದ ಪರಿಸ್ಥಿತಿ ಉಂಟುಮಾಡಿ ಲಿಬಿಯಾದಲ್ಲಿ ಮಾಡಿದ ಹಾಗೆ ಹಸ್ತಕ್ಷೇಪ ನಡೆಸುವುದಕ್ಕೆ ಪ್ರಯತ್ನ ನಡೆದಿದೆ. ಇನ್ನು ಇರಾನ್ ಅಮೆರಿಕಗಳ ನಡುವೆ ವೈಮನಸ್ಸು ಇನ್ನಷ್ಟು ಹೆಚ್ಚಿದೆ. ಪಶ್ಚಿಮ ಏಶಿಯಾ ಮತ್ತು ಉತ್ತರ ಆಫ್ರಿಕಾದ ದೇಶಗಳ ಈಚಿನ ಬೆಳವಣಿಗೆಗಳಿಂದ ಉತ್ತೇಜಿತಗೊಂಡಿರುವ ಅಮೆರಿಕ ಇರಾನಿನ ಮೇಲೆ ದುರಾಕ್ರಮಣ ಎಸಗಲು ಮುಂದಾದೀತು. ಅದು ಯಾವಾಗ ಎನ್ನುವುದೇ ಪ್ರಶ್ನೆ. ಇರಾಕಿನಿಂದ ಸುಮಾರು ಒಂದು ದಶಕದ ನಂತರ ಅಧಿಕೃತವಾಗಿ ಅಮೆರಿಕದ ಆಕ್ರಮಣಕಾರಿ ಸೇನೆಯ ವಾಪಸಾತಿ. ಇರಾಕಿ ಜನರ ಜೀವನವನ್ನು ದುಸ್ತರಗೊಳಿಸಿ, ಮಾಡುವುದೆಲ್ಲ ಮಾಡಿ ಅಮೆರಿಕದ ಸೈನಿಕರು ವಾಪಸ್ಸಾಗುತ್ತಿದ್ದಾರೆ ಎಂಬ ವರದಿ. ನೆರೆಯ ಕುವೇತ್‌ನಲ್ಲಿದ್ದು ನಂತರ ಸ್ವದೇಶಕ್ಕೆ ಪಯಣ. ಅಮೆರಿಕದ ಹಿತಾಸಕ್ತಿ ಕಾಪಾಡಲು ಖಾಸಗಿ ಹಾಗೂ ಹೊಸ ಸೈನ್ಯ ಮಾತ್ರ ಹಾಗೇ ಇದೆ. ಯಾವಾಗ ಬೇಕಾದರೂ ಅವರು ಹಿಂದಿರುಗಬಹುದು ಅಗತ್ಯವಾದಲ್ಲಿ.

ಈ ಪ್ರದೇಶದ ಎಲ್ಲ ಬೆಳವಣಿಗೆಗಳಿಂದ ಹರ್ಷಗೊಂಡಿರುವುದು ಇಸ್ರೇಲ್ ಒಂದೇ. ಒಂದಾದ ಮೇಲೊಂದರಂತೆ ಅರಬ್ ರಾಷ್ಟ್ರಗಳು ಪಶ್ಚಿಮ ರಾಷ್ಟ್ರ ಪ್ರಭಾವ ವಲಯಕ್ಕೆ ಬರುವುದು ಇಸ್ರೇಲಿಗೆ ಸ್ವಾಗತಾರ್ಹ ಬೆಳವಣಿಗೆ. ಇಸ್ರೇಲಿನ ಮೊಂಡುತನ, ಅದಕ್ಕೆ ಮುಂದುವರಿಯುತ್ತಿರುವ ಅಮೆರಿಕದ ಬೆಂಬಲದಿಂದಾಗಿ ಪ್ಯಾಲಸ್ತೈನ್ ಸ್ವತಂತ್ರರಾಷ್ಟ್ರದ ಸ್ಥಾಪನೆ ಮುಂದೆ ಹೋಗುತ್ತಿದೆ. ಸ್ವಾಗತಾರ್ಹವಾದ ಒಂದು ಹೊಸ ಬೆಳವಣಿಗೆ ಎಂದರೆ, ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ 'ಯುನೆಸ್ಕೋ' (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ)ದ ಸದಸ್ಯತ್ವ ಇತ್ತೀಚೆಗೆ ಪ್ಯಾಲಸ್ತೈನಿಗೆ ಲಭಿಸಿದ್ದು, ಇದನ್ನು ಪ್ರಬಲವಾಗಿ ವಿರೋಧಿಸಿರುವ ಅಮೆರಿಕಾ 'ಯುನೆಸ್ಕೋ' ಸಂಸ್ಥೆಗೆ ತಾನು ನೀಡುತ್ತ ಬಂದಿದ್ದ ವಂತಿಗೆ ಹಣವನ್ನು ತಡೆಹಿಡಿದಿದೆ.

ಇನ್ನು ಭಾರತದ ನೆರೆ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ನೇಪಾಳ ಬೆಳವಣಿಗೆಗಳನ್ನು ಗಮನಿಸೋಣ. ೨೦೧೧ ನೇಪಾಳ ರಾಜ್ಯದ ಮಟ್ಟಿಗೆ ತೃಪ್ತಿಕರವಾದ ವರ್ಷ. ಅರಸೊತ್ತಿಗೆಯ ಅಂತ್ಯ, ಮಾವೋವಾದಿಗಳೊಂದಿಗೆ ಐತಿಹಾಸಿಕ ಒಪ್ಪಂದ, ಚುನಾವಣೆಗಳು ಇವೆಲ್ಲವುಗಳ ಮಧ್ಯೆ ಮುಖ್ಯವಾದ್ದು ಗಣರಾಜ್ಯದ ಸಂವಿಧಾನದ ರಚನೆ. ಇದು ಕಗ್ಗಂಟಾಗಿ ಕುಳಿತಿತ್ತು ಈವರೆಗೆ. ಇದಕ್ಕೆ [illegible] ಮಾವೋವಾದಿ ಸಶಸ್ತ್ರ ಪಡೆಯ ಭವಿಷ್ಯ. ಈಚೆಗೆ ಮಾವೋವಾದಿಗಳು ಮತ್ತು ಇತರ ಪಕ್ಷಗಳ ಮಧ್ಯೆ ಮಾತುಕತೆ ನಡೆದು ಮಾವೋವಾದಿ ಪಡೆಯ ಒಂದು ಭಾಗವನ್ನು ಸೇನೆಗೆ ಸೇರಿಸಿಕೊಳ್ಳಲು, ಇನ್ನುಳಿದವರ ಪುನರ್ವಸತಿಗಾಗಿ ಧನಸಹಾಯ ನೀಡಲು ಒಮ್ಮತಕ್ಕೆ ಬರಲಾಗಿದೆ. ಇದು ಕಾರ್ಯಗತವಾದರೆ ಸಂವಿಧಾನ ರಚನೆ ಸುಗಮಗೊಂಡು ಸುಭದ್ರ ರಾಜ್ಯ ಸ್ಥಾಪನೆಯಾಗುವ ನಿರೀಕ್ಷೆ ಹೆಚ್ಚಿದೆ.

ಪಾಕಿಸ್ತಾನದಲ್ಲಿ [illegible]

ಇದು ಒಂದು ರೀತಿಯಲ್ಲಿ ವಿಶ್ವಾಸ-ದ್ವೇಷಗಳ ಹೊಂದಿಕೆ. ಪಾಕಿಸ್ತಾನ ಸ್ಥಾಪನೆಯಾದಾಗಿನಿಂದಲೂ ಅಮೆರಿಕಾ ಅದನ್ನು ತನ್ನ ಆಶ್ರಿತರಾಷ್ಟ್ರ ಎಂಬಂತೆಯೇ ನಡೆಸಿಕೊಂಡಿದೆ. ಅಲ್ಲಿನ ಆಂತರಿಕ ಬೆಳವಣಿಗೆಗಳಲ್ಲಿ ತಲೆತೂರಿಸುವುದು ಅಮೆರಿಕದ ಮಟ್ಟಿಗೆ ಮಾಮೂಲು ವಿಷಯ. ಆದರೆ ಈಗ ಅಮೆರಿಕದ ವಿರುದ್ಧ ಜನರ ಆಕ್ರೋಶ ಮುಗಿಲು ಮುಟ್ಟಿದೆ. ಆಡಳಿತ ನಡೆಸುತ್ತಿರುವ ಅಲಿ ಜರ್ದಾರಿ ಸರಕಾರಕ್ಕೆ ಈಚಿನ ಬೆಳವಣಿಗೆಗಳು ನುಂಗಲಾರದ ತುತ್ತಾಗಿದೆ. ಒಂದಲ್ಲ ಎರಡು ಸಲ ಅಮೆರಿಕದ ಸೇನೆಯ ನೇರ ಕಾರ್ಯಾಚರಣೆ ಪಾಕಿಸ್ತಾನ ಸರಕಾರವನ್ನು ಪೇಚಿಗೆ ಸಿಕ್ಕಿಸಿದೆ, ನಿರ್ವೀರ್ಯ ಪ್ರತಿಭಟನೆಗೆ ದೂಡಿದೆ. ಈ ಮಧ್ಯೆ ನಾಗರಿಕ ಸರಕಾರ ಮತ್ತು ಸೇನೆಯ ನಡುವೆ ವಿರಸ ಹೆಚ್ಚಿದ್ದು ಸೇನಾಡಳಿತೆಯ ಭೀತಿ ಹೆಚ್ಚಿಸಿದೆ. 'ಮೆಮೊಗೇಟ್' ಪ್ರಕರಣ ಎಲ್ಲಿಗೆ ಮುಟ್ಟುವುದೋ ನೋಡಬೇಕು. ಭಯೋತ್ಪಾದನೆಯ ವಿರುದ್ಧ ಸಮರ ಸಾರಿದ ಹತ್ತು ವರ್ಷಗಳ ನಂತರ ಅಮೆರಿಕ ಪಾಕಿಸ್ತಾನದಲ್ಲಿ ಅಡಗಿದ್ದ ಅಲ್‌ಖೈದಾ ಸೂತ್ರಧಾರಿ ಒಸಾಮಾ ಬಿನ್ ಲಾಡೆನ್ ಅನ್ನು ತನ್ನ ಸೇನೆಯನ್ನು ನುಗ್ಗಿಸಿ ಹತ್ಯೆಗೈದು ಕೃತಾರ್ಥವಾಯಿತು. ಈ ದಾಳಿ ಪಾಕಿಸ್ತಾನದ ಸಾರ್ವಭೌಮತ್ವದ ಅತಿಕ್ರಮಣ ಹಾಗೂ ಎಲ್ಲ ಅಂತರರಾಷ್ಟ್ರೀಯ ನಿಯಮಗಳ ಉಲ್ಲಂಘನೆ. ಇನ್ನೊಂದು ಇದೇ ಬಗೆಯ ಅತಿಕ್ರಮಣ ನ್ಯಾಟೋ



ಉತ್ತರ ಕೊರಿಯಾದ ಹೊಸ ನಾಯಕ

ದೇಶಗಳ ಸೇನೆ ಪಾಕಿಸ್ತಾನದ ಗಡಿ ಉಲ್ಲಂಘಿಸಿ ತಾಲಿಬಾನ್‌ಗಳ ಮೇಲೆ ನಡೆಸಿದ ದಾಳಿಯಲ್ಲಿ ಇಪ್ಪತ್ತನಾಲ್ಕು ಮಂದಿ ಪಾಕ್ ಸೈನಿಕರನ್ನು ಹತ್ಯೆಗೈದದ್ದು. ಈ ಎರಡು ಪ್ರಕರಣಗಳೂ ಸಂಬಂಧಗಳನ್ನು ಹದಗೆಡಿಸಿವೆ. ಇದು ಎಲ್ಲಿಗೆ ಮುಟ್ಟೀತು ಎಂದು ಹೇಳುವುದು ದುಸ್ತರ.

ಈ ಎಲ್ಲ ಅಂತರರಾಷ್ಟ್ರೀಯ ಬೆಳವಣಿಗೆಗಳಲ್ಲೂ ಭಾರತ ಸರಕಾರ ಮೂಕಪ್ರೇಕ್ಷಕ. ಅಮೆರಿಕದ ಮರ್ಜಿ ಅನುಸರಿಸುವುದೇ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರದ ಪ್ರಧಾನ ಗುರಿಯಾಗಿಬಿಟ್ಟಿದೆ. ಸ್ವತಂತ್ರ ವಿದೇಶಾಂಗ ನೀತಿ ಅನುಸರಿಸುತ್ತಿದ್ದ ಕಾಲ ಮತ್ತೆ ಮರಳುವ ಸೂಚನೆಯಂತೂ ಇಲ್ಲ. ಅನ್ಯಾಯ, ಅತಿಕ್ರಮಗಳನ್ನು ಪ್ರತಿಭಟಿಸುವ ಶಕ್ತಿಯನ್ನು ಅಂತ ರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತ ಕಳೆದು ಕೊಂಡಿರುವು ಶೋಚನೀಯ. ವಿದೇಶಿ ಬಂಡವಾಳದ ಹರಿವಿ ಹೆಬ್ಬಾಗಿಲನ್ನು ತೆರೆಯುವುದರಲ್ಲಿಯೇ ಮನಮೋಹ ಸಿಂಗ್ - ಅಹ್ಲುವಾಲಿಯಾ ಗುಂಪು ಮಗ್ನವಾಗಿದೆ. ಇ ಬೇರೆಯದಕ್ಕೆ ಸಮಯವೆಲ್ಲಿ?

ವರ್ಷದ ಕೊನೆಯಲ್ಲಿ ಉತ್ತರ ಕೊರಿಯಾದ ಅಧ ಕಿಮ್ ಜೋಂಗ್-ಇಲ್ ಇವರ ನಿಧನ. ಅರವ ವರ್ಷಕ್ಕೂ ಹೆಚ್ಚು ಕಾಲದಿಂದ ಪ್ರಬಲ ರಾ ಅಮೆರಿಕವನ್ನು ಎದುರಿಸಿ ದಿಟ್ಟವಾಗಿ ನಿಂತಿರುವ ಪು ದೇಶ ಉತ್ತರ ಕೊರಿಯಾ. ಎರಡನೇ ಮಹಾಯುದ್ಧ ನಂತರ ಶೀತಯುದ್ಧ ಪ್ರಾರಂಭವಾದ ಮೇಲೆ ಜರುಗಿ ಮೊದಲ ಪ್ರಾದೇಶಿಕ ಯುದ್ಧ. ಕಮ್ಯುನಿಸಂ ವಿಸ್ತರ ತಡೆಗಟ್ಟುವ ಹೆಸರಿನಲ್ಲಿ ಅಮೆರಿಕ ಮಧ್ಯಪ್ರವೇಶಿಸಿ ಕೂಡ ಮೊದಲಿನದು ಕೊರಿಯಾ. ಸೋಲಿನ ಅಂಚ ತಲುಪಿದಾಗ ಅಮೆರಿಕ ಒಪ್ಪಂದಕ್ಕೆ ಬಂದಿತ ಪರಿಣಾಮ ಕೊರಿಯಾ ದೇಶ ಇಬ್ಭಾಗ - ಉತ್ತ ಕೊರಿಯಾ ಕಮ್ಯುನಿಸ್ಟ್ ಆಡಳಿತಕ್ಕೆ ಒಳಪಟ್ಟರೆ, ದಕ್ಷಿ ಕೊರಿಯ ಇನ್ನೂ ಅಮೆರಿಕದ ಆಶ್ರಯದಲ್ಲೇ ಇದೆ.


ಸೀಯಾರ್ಕೆ
'ಚೌಬೀನ', ನಂ. ೮೪೯, ೬ನೇ ಕ್ರಾಸ್, ಬನಶಂಕರಿ ೩ನೇ ಹಂತ, ೩ನೇ ಬ್ಲಾಕ್, ಕತ್ರಿಗುಪ್ಪೆ, ಬೆಂಗಳೂರು - ೫೬೦ ೦೮೫



ಕಿರಗೂರಿನ ಗಯ್ಯಾಳಿಗಳು









ಕುಸುಮಬಾಲೆ









ಅಣ್ಣನ ನೆನಪು








TECHSER®

THE TECHNICAL SERVICE PEOPLE SINCE 1988

Winner



Fuelling Innovation Powering Customer Satisfaction



EPT Series




TMP Series



TPS/APT Series




Salient Features of Online UPS
- Controlled
- IGBT
- Input Unity
  Low Harmonics
- Remote



Servo Stabiliser



Off-Line UPS/SG



Green Energy Solutions

- Online UPS
  - 20kVA-100kVA
  - TMP Series
  - TPS
  - APT Series
- 500VA-5kVA
- Solutions
- Stabiliser: 500VA-500kVA
- Customised Solutions

TECHSER POWER SOLUTIONS PVT LTD., an enterprising venture founded in 1988 by technocrats from the field of Power Electronics and Project Integration in India and abroad. TECHSER powers innovation by harnessing the strength of latest technology and people's creativity to bring out the best suited products for the Indian subcontinent backed-up with 24x7 after sale support across India.

TECHSER POWER SOLUTIONS PVT LTD.

Corporate Office: #652, III Floor, Dr Rajkumar Road, II Stage, Rajajinagar, Bengaluru-560 010. Karnataka, INDIA.
Tel: 080-23326606, 23328606, Fax 080-23520408 Email: bangalore@techser.com Url: www.techser.com

BUSINESS ENQUIRY SOLICITED



ಸಂದರ್ಶನ ಲೇಖನ : ಡಾ॥ ಜಿ. ರಾಮಕೃಷ್ಣ

ಚಿತ್ರಗಳು : ಕೆ. ಪಿ. ಸ್ವಾಮಿ

ವಿಜ್ಞಾನದ ವಿಪುಲ ಸಾಧ್ಯತೆಗಳು ನಿರಂತರ : ಪ್ರೊ॥ ಎಂ.ಆರ್.ಎನ್. ಮೂರ್ತಿ

ಪ್ರೊಫೆಸರ್ ಎಂ.ಆರ್.ಎನ್. ಮೂರ್ತಿ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಮಾಲಿಕ್ಯುಲರ್ ಬಯೋಫಿಸಿಕ್ಸ್ ಪ್ರಾಧ್ಯಾಪಕರು. ಅವರ ಪ್ರಧಾನ ಸಂಶೋಧನೆಗಳು ಎಕ್ಸ್-ರೆ ಕ್ರಿಸ್ಟಲಾಗ್ರಫಿ ಕ್ಷೇತ್ರದವು. ನಮ್ಮ ದೇಶದ ಒಬ್ಬ ವಿಜ್ಞಾನಿಗೆ ದೊರೆಯಬಹುದಾದ ಅತ್ಯುಚ್ಚ ಪ್ರಶಸ್ತಿ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ. ಭೌತಿಕವಿಜ್ಞಾನ ಕ್ಷೇತ್ರದಲ್ಲಿ ಅಮೂಲ್ಯ ಸಂಶೋಧನೆಗಾಗಿ ಮೂರ್ತಿಯವರಿಗೆ ಅದು ೧೯೯೩ರಲ್ಲಿ ಲಭಿಸಿತು. ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ಜನಿಸಿದ ಶ್ರೀಯುತರು ಅವರ ಊರಿನ ಸರ್ಕಾರಿ ಶಾಲೆಯಲ್ಲಿ ಕಲಿತವರು. ಶಿವಮೊಗ್ಗೆಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿ. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಬಿ.ಎಸ್ಸಿ.ಆನರ್ಸ್ ಪಡೆದು ಮದ್ರಾಸಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಆಮೇಲೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರೊಫೆಸರ್ ಕೆ. ವೆಂಕಟೇಶನ್ ಅವರ ಮಾರ್ಗದರ್ಶನದಲ್ಲಿ ಕ್ರಿಸ್ಟಲಾಗ್ರಫಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದರು. ಅಮೆರಿಕಾದ ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಎಂ. ಜಿ. ರಾಸ್‌ಮನ್ ಜೊತೆ ನಾಲ್ಕು ವರ್ಷ ಪೋಸ್ಟ್‌ಡಾಕ್ಟರಲ್ ಫೆಲೊ ಆಗಿದ್ದು ನಂತರ ಭಾರತೀಯ ವಿಜ್ಞಾನ ಸಂಸ್ಥೆಗೆ ಬಂದು ಪ್ರೊ॥ ಎಂ. ವಿಜಯನ್ ಅವರೊಡಗೂಡಿ ಮಾಲಿಕ್ಯುಲರ್ ಬಯೋಫಿಸಿಕ್ಸ್ ವಿಭಾಗದಲ್ಲಿ ಕ್ರಿಸ್ಟಲಾಗ್ರಫಿ ಕ್ಷೇತ್ರದ ಪರಿಣತ ಅಧ್ಯಯನಗಳಿಗೆ ತಕ್ಕುದಾದ

ಪ್ರಯೋಗಾಲಯವನ್ನು ಭಾರತದ ಮೊಟ್ಟಮೊದಲ ಘಟಕವನ್ನಾಗಿ ಸ್ಥಾಪಿಸಿದರು. ವೈರಸ್‌ಗಳ ಅಧ್ಯಯನದಲ್ಲಿ ಮಾನ್ಯ ಮೂರ್ತಿಯವರು ಅಂತರರಾಷ್ಟ್ರೀಯ ಖ್ಯಾತಿ ಹೊಂದಿದ್ದಾರೆ, ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಭಾರತದ ಎಲ್ಲ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಲ್ಲೂ ಸದಸ್ಯತ್ವ ಹಾಗೂ ಹತ್ತಾರು ಪ್ರಶಸ್ತಿಗಳಿಗೆ ಇವರು ಭಾಜನರು. ರುಸ್ತುಂ ಚೋಕ್ಸಿ ಪ್ರಶಸ್ತಿ (೨೦೦೨), ಜಿ. ಎನ್. ರಾಮಚಂದ್ರನ್ ಸ್ಮಾರಕ ಪ್ರಶಸ್ತಿ (೨೦೦೩), ಹರಿ ಓಂ ಆಶ್ರಮ ಟ್ರಸ್ಟ್ ಪ್ರಶಸ್ತಿ (೨೦೦೪), ಜಗದೀಶ ಚಂದ್ರ ಬೋಸ್ ಪ್ರಶಸ್ತಿ (೨೦೦೫), ಅಸ್ತ್ರ-ರ್ಝುನೆಕ ಪ್ರಶಸ್ತಿ (೨೦೦೫), ಮುಂತಾದವು ಅವುಗಳಲ್ಲಿ ಕೆಲವು ಮಾತ್ರ. ವೈರಸ್ ಮತ್ತು ಪ್ರೋಟೀನ್‌ಗಳ ಸಂಶೋಧನೆಯಲ್ಲಿ ಡಾ|| ಮೂರ್ತಿಯವರು ವಿಜ್ಞಾನಿಗಳ ಪೈಕಿ ಅತ್ಯುಚ್ಚ ಮಟ್ಟದವರೆಂಬ ಖ್ಯಾತಿ ಗಳಿಸಿದ್ದಾರೆ.

ಇತ್ತೀಚೆಗೆ ಫಿನ್ಲೆಂಡಿನ ಊಲು ವಿಶ್ವವಿದ್ಯಾಲಯದ ಪ್ರೊಫೆಸರ್ ರಿಕ್ ಕೆ. ವೀರೆಂಗ ಎಂಬುವವರ ಜೊತೆಗೂಡಿ ಕೆಲವು ಸಂಶೋಧನೆಗಳನ್ನು ನಡೆಸಿದ್ದಾರೆ. ಶ್ರೀಮತಿ. ಸಾವಿತ್ರಿ ಮೂರ್ತಿಯವರೊಟ್ಟಿಗೂ ಅನೇಕ ಸಂಶೋಧನೆಗಳನ್ನು ನಡೆಸಿದ್ದಾರೆ. ಅವನ್ನು ಬಿಟ್ಟರೆ ಅವರ ಸಂಶೋಧನೆಗಳೆಲ್ಲಾ ಸ್ವಂತ ನೆಲೆಯಲ್ಲೇ ನಡೆದಿವೆ.

'ಹೊಸತು' ಆರಂಭದ ದಿನಗಳಿಂದ ಪ್ರೊಫೆಸರ್ ಮೂರ್ತಿಯವರು ಅದರ ಬೆಂಬಲಕ್ಕೆ ನಿಂತವರು, ಅನೇಕ ಮೌಲಿಕ ವೈಜ್ಞಾನಿಕ ಲೇಖನಗಳನ್ನು 'ಹೊಸತು'ವಿನಲ್ಲಿ ಪ್ರಕಟಿಸಿರುವವರು. ಅಂತಹ ಶ್ರೇಷ್ಠಮಟ್ಟದ ವಿಜ್ಞಾನಿ ೨೦೧೨ರ ವಿಶೇಷ ಸಂಚಿಕೆಗೆ ಸಂದರ್ಶನ ನೀಡಿರುವುದು ಸಂತೋಷದ ವಿಷಯ. ಬೆಂಗಳೂರು ನ್ಯಾಷನಲ್ ಕಾಲೇಜಿನ ಸಸ್ಯಶಾಸ್ತ್ರ ಪ್ರಾಧ್ಯಾಪಕರು ಮತ್ತು ಹೆಸರಾಂತ ಸಂಶೋಧಕರಾದ ಡಾ|| ಎಚ್. ಗೋಕುಲ್ ಹಾಗೂ 'ಹೊಸತು' ಸಂಪಾದಕ ಡಾ|| ಜಿ. ರಾಮಕೃಷ್ಣ ಡಿಸೆಂಬರ್ ೮ರಂದು ಸಂದರ್ಶನ ನಡೆಸಿದ್ದಾರೆ. ಸಂದರ್ಶನ ಲೇಖನ ಜಿ.ಆರ್. ಅವರಿಂದ, ಚಿತ್ರಗಳು ಶ್ರೀ. ಕೆ. ಪಿ. ಸ್ವಾಮಿ ಅವರ ಕೊಡುಗೆ.

ಆರಂಭದಲ್ಲಿ ಪ್ರೊ|| ಮೂರ್ತಿಯವರು ತಮ್ಮ ವಿಭಾಗದ ಪ್ರಯೋಗಾಲಯಗಳಿಗೆ ಕರೆದೊಯ್ದು ಅಲ್ಲಿಯ ಉಪಕರಣಗಳು ಮತ್ತು ಸಂಶೋಧನಾ ವಿಧಾನಗಳನ್ನು 'ಹೊಸತು' ಪ್ರತಿನಿಧಿಗಳಿಗೆ ಪರಿಚಯಿಸಿದರು. ಅಪೂರ್ವವಾದ ಪ್ರಯೋಗಾಲಯ ಅದು. ಒಂದೊಂದೂ ಐದು ಕೋಟಿ ರೂಪಾಯಿ ಮೌಲ್ಯದ ನಾಲ್ಕಾರು ಅತ್ಯಾಧುನಿಕ ಸಂಶೋಧನಾ ಉಪಕರಣಗಳು ಅಲ್ಲಿವೆ, ಭಾರತದಲ್ಲಿ ಬೇರೆಲ್ಲೂ ಇರದಂತಹ ಸಂಶೋಧನಾ ಸೌಲಭ್ಯಗಳೂ ಇವೆ. ಉನ್ನತಮಟ್ಟದ ಸಂಶೋಧನೆಗಳಲ್ಲಿ ನಿರತರಾದ ಐದಾರು ಸಂಶೋಧಕ ವಿದ್ಯಾರ್ಥಿಗಳು ಪ್ರಸ್ತುತ ನಡೆಸುತ್ತಿರುವ ಸಂಶೋಧನೆಗಳ ಬಗ್ಗೆ ತಿಳಿಸಿ, ಪ್ರಯೋಗಾಲಯದ ಉಪಕರಣಗಳನ್ನು ಹೇಗೆ ಉಪಯೋಗಿಸುತ್ತಾರೆ ಎಂದು ವಿವರಿಸಿದ ಪ್ರೊ|| ಮೂರ್ತಿಯವರಿಂದಾಗಿ 'ಹೊಸತು' ಪ್ರತಿನಿಧಿಗಳು ಕಣ್ಣಿಗೆ ಕಾಣದ ಕ್ರಿಸ್ಟಲ್ ಪರಮಾಣುಗಳನ್ನು ನೋಡುವ ಅವಕಾಶ ಪಡೆದದ್ದು ಒಂದು ವಿಶೇಷ.

ಹೊಸತು : ನಮಗೆ ಸಂದರ್ಶನ ನೀಡಲು ಒಪ್ಪಿದ್ದಕ್ಕೆ ಕೃತಜ್ಞರು. ಮೊದಲಿಗೆ ನಿಮ್ಮ ಹಿನ್ನೆಲೆಯ ಬಗ್ಗೆ ಹೇಳುವಿರಾ ?

ಪ್ರೊ|| ಎಂ.ಆರ್.ಎನ್. ಮೂರ್ತಿ : ನಾನು ಶಿವಮೊಗ್ಗ ಜಿಲ್ಲೆಯ ಮತ್ತೂರಿನವನು.

ಹೊ : ಹಾಗಾದರೆ ನೀವು ಸಂಸ್ಕೃತದಲ್ಲಿ ಮಾತನಾಡುವವರು, ನಮಗೆ ಅದು ಬಾರದು.

ಮೂ : ನನಗೂ ಅಷ್ಟೆ. ನಾನು ಕನ್ನಡದಲ್ಲೇ ಮಾತನಾಡುವುದು. ನಮ್ಮೂರಿಗೆ ಹೇಗೋ ಒಂದು ಹೆಸರು ಬಂದುಬಿಟ್ಟಿದೆ, ಸಂಸ್ಕೃತದ ಊರು ಎಂದು. ಅಲ್ಲಿ ಎಲ್ಲರೂ ಸಂಸ್ಕೃತದಲ್ಲೇ ಮಾತನಾಡುವುದಿಲ್ಲ ಬಿಡಿ. ಆದರೇನು, ಕೆಲವು ಮಿತ್‌ಗಳು ಹುಟ್ಟಿವೆ. ಬೇರೆ ಕಡೆಗಳಲ್ಲಿ ಸಂಸ್ಕೃತ ಬಲ್ಲವರಿಗಿಂತಲೂ ನಮ್ಮೂರಲ್ಲಿ ಅವರು ಹೆಚ್ಚಾಗಿದ್ದಾರೆ ಎನ್ನಬಹುದು, ಅಷ್ಟೆ. ನಾನು ಚಿಕ್ಕವನಿದ್ದಾಗ ನಮ್ಮೂರಲ್ಲಿ ಬಸ್ಸು-ಕಾರು ಏನೂ ಇರಲಿಲ್ಲ, ಊರಿನ ಒಂದು ತುದಿಯಲ್ಲಿ ಶಾಲೆ, ಇನ್ನೊಂದು ತುದಿಯಲ್ಲಿ ದೇವಸ್ಥಾನ. ನಾನೊಬ್ಬ ವಿಜ್ಞಾನಿಯಾಗುತ್ತೇನೆಂಬ ಕಲ್ಪನೆಯೂ ಇರಲಿಲ್ಲ, ಪ್ರೌಢಶಾಲೆಗೆ ಬಂದಾಗ ವಿಜ್ಞಾನದ ಪುಸ್ತಕಗಳನ್ನು ನೋಡಿದೆ. ಕನ್ನಡದಲ್ಲಿ ಅಂತಹ ಪುಸ್ತಕಗಳೂ ಕಡಿಮೆಯೇ. ನಾನು ಜೆ. ಆರ್. ಲಕ್ಷ್ಮಣರಾವ್ ಬರೆದ 'ಪರಮಾಣು ವಿಜ್ಞಾನ' ಎಂಬ ಪುಸ್ತಕ ಓದಿ ಬಹಳ ಪ್ರಭಾವಿತನಾದೆ. ಈಗ ಆ ಪುಸ್ತಕ ದೊರೆಯುವುದಿಲ್ಲವೇನೊ ! ದೊರೆತರೂ ಅದನ್ನು ಸಮಕಾಲೀನವಾಗಿಸಲು ಬೇಕಾದಷ್ಟು ಪರಿಷ್ಕಾರ ಮಾಡಬೇಕಾಗುತ್ತದೆ. ಈ ಕೆಲಸ ಆಗುತ್ತಿರಬೇಕು. ಲಕ್ಷ್ಮಣರಾಯರು ಬರೆಯುವುದರಲ್ಲಿ ಸಿದ್ಧಹಸ್ತರು. ಅವರ ಪುಸ್ತಕ ಓದಿದಾಗ ನನಗೆ ರೋಮಾಂಚನ ಉಂಟಾಯಿತು, ವಿಜ್ಞಾನದಲ್ಲಿ ಆಸಕ್ತಿ ಮೂಡಿತು. ಆಮೇಲೆ ಬೆಂಗಳೂರು, ಮದ್ರಾಸ್‌ಗಳಲ್ಲಿ ವ್ಯಾಸಂಗ. ಭೌತಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ಕ್ರಿಸ್ಟಲಾಗ್ರಫಿ ಕಡೆಗೆ ಹೋಗುವ ನಿರೀಕ್ಷೆಯೇನೂ ಇರಲಿಲ್ಲ. ಎರಡನೆಯ ವರ್ಷದ ಎಂ.ಎಸ್ಸಿ.ಯಲ್ಲಿ ಐಚ್ಛಿಕವಾಗಿ ನಾಲ್ಕು ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು, ನಾನು ಊರಿನಿಂದ ಹೋಗುವ ವೇಳೆಗೆ ಉಳಿದಿದ್ದದ್ದು ಕ್ರಿಸ್ಟಲಾಗ್ರಫಿ ಮಾತ್ರ ! ಎಂಥ ಕಾಕತಾಳೀಯ ನೋಡಿ. ಅದು ೧೯೭೭ರಲ್ಲಿ, ನಂತರ ಪ್ರೊ|| ವೆಂಕಟೇಶನ್ ಅವರ ಬಳಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾದೆ. ನನ್ನ ರೊಟ್ಟಿ ಖಂಡಿತಕ್ಕೂ ತುಪ್ಪದಲ್ಲಿ ಜಾರಿದಂತಾಯಿತು. ನನಗೆ ಈ ಕ್ಷೇತ್ರದಲ್ಲಿನ ಕೆಲಸ ಅಪಾರ ತೃಪ್ತಿ ನೀಡಿದೆ. ಭೌತಶಾಸ್ತ್ರದಿಂದ ಸಾವಯವ ರಸಾಯನಶಾಸ್ತ್ರಕ್ಕೆ ಬಂದೆ. ಕಡೆಗೆ ಜೀವಶಾಸ್ತ್ರದಲ್ಲಿಯೂ ನಿರತನಾಗಿದ್ದೇನೆ. ಅದು ಪರ್ಡ್ಯೂಗೆ ಹೋದಾಗ ಉಂಟಾದ ಬೆಳವಣಿಗೆ.



ಹೊ : ನಿಮ್ಮ ಸಂಶೋಧನೆಯ ವ್ಯಾಪ್ತಿಯಲ್ಲಿ ಬರುವ ಫಲಿತಾಂಶಗಳಿಗೆ ಎಂತಹ ಅನ್ವಯದ ಸಾಧ್ಯತೆಗಳುಂಟು ?

ಮೂ : ನೇರವಾಗಿ ಅನ್ವಯದ ಕೆಲಸ ನಮ್ಮಲ್ಲಿ ಇರುವುದಿಲ್ಲ, ಈಚಿನ ದಿನಗಳಲ್ಲಿ ವ್ಯಾಪಾರದ ದೃಷ್ಟಿ ಹೆಚ್ಚಾಗಿದೆ, ಅನ್ವಯದ ಪ್ರಶ್ನೆ ಸಹಜವಾಗಿಯೇ ಬಂದಿದೆ. ನಮ್ಮ ಕ್ಷೇತ್ರವು ವಿಶೇಷವಾಗಿ ಔಷಧಿಗಳ ತಯಾರಿಕೆಯಲ್ಲಿ ಅನ್ವಯವಾಗುವಂಥದು. ನನ್ನ ವಿದ್ಯಾರ್ಥಿಯಾಗಿದ್ದ ಡಾ|| ಸುಬ್ರಹ್ಮಣ್ಯ ಎಂಬುವವರು ಒಂದು ಕಂಪನಿಯಲ್ಲಿ ಪ್ರಧಾನ ಸಂಶೋಧಕರಾಗಿದ್ದಾರೆ. ಕಳೆದ ವರ್ಷ ಆರು ಕೋಟಿ ರೂಪಾಯಿಗಳ ಲಾಭ ಗಳಿಸಿದ್ದಾರೆ. ಅವರು ಕಾಂಟ್ರಾಕ್ಟ್ ಪಡೆದು ವಿದೇಶಿ ಕಂಪನಿಗಳಿಗಾಗಿ ಸಂಶೋಧನೆ ನಡೆಸುವುದೂ ಉಂಟು. ಏನಿಲ್ಲವೆಂದರೂ ಹತ್ತು-ಹನ್ನೆರಡು ಮಂದಿ ಕ್ರಿಸ್ಟಲಾಗ್ರಫಿ ಪರಿಣತರು ಬೆಂಗಳೂರಿನ ಇಂತಹ ಒಂದೆರಡು ಕಂಪನಿಗಳಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ.

ಹೊ : ನಿಮ್ಮ ಈ ವಿಭಾಗ ಮೊದಲಿನಿಂದಲೂ ಇದ್ದದ್ದೊ ಅಥವಾ ಹೊಸದಾಗಿ ಆರಂಭವಾಯಿತೊ ?

ಮೂ : ಹೊಸದು, ಪ್ರೊ|| ಜಿ. ಎನ್. ರಾಮಚಂದ್ರನ್ ಅವರು ಆರಂಭಿಸಿದ್ದು, ಅವರು ಸಿ. ವಿ. ರಾಮನ್ ಅವರ ಜೊತೆಯವರು, ಆಗ್ಗೆ ಪಿಎಚ್.ಡಿ. ಮಾಡಿದವರು, ಅಗ್ರಗಣ್ಯ ಸಂಶೋಧಕರು. ನಮ್ಮ ದೇಶದಲ್ಲಿ ನೊಬೆಲ್ ಪಾರಿತೋಷಕ ಬರುವುದಿದ್ದರೆ ಅವರಿಗೆ ಬರಬೇಕಾಗಿತ್ತು, ಅಷ್ಟು ಪ್ರೌಢ ಸಂಶೋಧಕರು ಅವರು. ಜೈವಿಕ ಭೌತಶಾಸ್ತ್ರದಲ್ಲಿ ಎತ್ತಿದ ಕೈ. ಮದ್ರಾಸಿನಲ್ಲಿ ಹಿತವೆನಿಸದೆ ಇಲ್ಲಿಗೆ ಬಂದು ಬಹಳ ಮೌಲಿಕ ಕೆಲಸ ಮಾಡಿದ್ದಾರೆ. ಅಸಾಧಾರಣ ವಾತ್ಸಲ್ಯ ಅವರಿಗೆ ವಿದ್ಯಾರ್ಥಿಗಳನ್ನು ಕಂಡರೆ. ಒಂದು ರೀತಿಯ ಭಾವುಕಜೀವಿಯೂ ಆಗಿದ್ದರು. ಸುಸಂಸ್ಕೃತರು. ತಾವಾಯಿತು ತಮ್ಮ ಅಧ್ಯಯನ ಮತ್ತು ಸಂಶೋಧನೆ ಆಯಿತು ಎನ್ನುವಂತಹ ಗೌರವಾನ್ವಿತ ವ್ಯಕ್ತಿ. ಅವರ ಪ್ರಮುಖ ಸಂಶೋಧನೆಯೆಲ್ಲಾ ಐವತ್ತರ ವಯಸ್ಸಿಗೆ ಮುಂಚಿನದು, ಅದು ನೊಬೆಲ್ ಪ್ರಶಸ್ತಿಗೆ ತೀರಾ ಚಿಕ್ಕ ವಯಸ್ಸು. ಅಮೆರಿಕಾದಲ್ಲಿ ಒಬ್ಬ ಪ್ರಾಧ್ಯಾಪಕರ ಜೊತೆ ನಾನು ಕೆಲಸ ಮಾಡಿದೆ. ಪ್ರೊ|| ರಾಘವನ್ ಅಂತ ಅವರಿಗೆ ೮೨ರ ವಯಸ್ಸು, ಆದರೆ ಈಗಲೂ ಪ್ರಖರ ಸಂಶೋಧನಾ ಚಾತುರ್ಯ ಉಳಿಸಿಕೊಂಡಿದ್ದಾರೆ. ೨೫ರ ಯುವಕನ ಹುಮ್ಮಸ್ಸು ಅವರದು.



ಜೆ. ಆರ್., ಪ್ರೊ|| ಮೂರ್ತಿ ಮತ್ತು ಡಾ|| ಎಚ್. ಗೋಕುಲ್

ಹೊ : ಅವರನ್ನು ಕುರಿತ ಲೇಖನವೊಂದನ್ನು ನೀವು ಬರೆದಿದ್ದಿರಲ್ಲವೆ ?

ಮೂ : ಬರೆದಿದ್ದೆ, ನಮ್ಮ ಪತ್ರಿಕೆಗೂ ಅದನ್ನು ಕಳುಹಿಸಿದ್ದೇನೆ. ಅವರಿಗೆ ನೊಬೆಲ್ ಪ್ರಶಸ್ತಿ ಬಂದಿಲ್ಲ. [illegible]. ಇವರ ಬಗ್ಗೆಯೂ ಬರೆದಿದ್ದೆ. [illegible] ಅವರು, [illegible], ಒಬ್ಬ ವಿದ್ಯಾರ್ಥಿನಿಗೆ [illegible] ಆಗಿದ್ದೂ ಅವರಿಗೆ ನೊಬೆಲ್ ದೊರೆತಿರಲಿಲ್ಲ. ಆಮೇಲೆ ದೊರೆಯಿತು. [illegible] ಅವರು ಇವರಿಗಿಂತಲೂ ಕಡಿಮೆ ಪ್ರತಿಭೆಯವರಲ್ಲ. ಆದರೆ ಒಂದು ಬಗೆಯ ಭಾವುಕತೆ ಅವರದು.

ಹೊ : ಒಂದು ಬಹು ಚರ್ಚಿತ ವಿಷಯವಿದೆ. ವೈಜ್ಞಾನಿಕ ಮನೋಭಾವ ಅನ್ನುತ್ತೇವಲ್ಲ. ಹಾಗೆಂದರೆ ಖಚಿತವಾಗಿ ಏನು ? ಅದು ಅಷ್ಟು ಮುಖ್ಯ ಅಥವಾ ಅನಗತ್ಯ ಎನ್ನುವ [illegible] ಉಂಟೆ ?

ಮೂ : ಬುದ್ಧಿವಂತಿಕೆಯಿಂದ ಬದುಕುವುದು ಎಂಬುದು ಅದರರ್ಥ. [illegible] ಅಂತಹ ಮನೋಭಾವ ನಿಮಗಿರಬೇಕೆಂದು ಇಟ್ಟುಕೊಳ್ಳೋಣ. ಎಷ್ಟೋ ವಿಜ್ಞಾನಿಗಳಿಗೆ ಅದಿಲ್ಲದಿರಲು ಸಾಧ್ಯ. ಪ್ರಮಾಣಗಳನ್ನು ಆಧರಿಸಿದ ನಂಬಿಕೆ, ಏನು ಘಟಿಸಿದರೂ ಅದಕ್ಕೊಂದು ಕಾರಣವಿರಬೇಕೆಂಬ ತಿಳುವು. ಅದರ ಅಗತ್ಯದ ಬಗ್ಗೆ ಹೇಳಬೇಕಾದ್ದೇ ಇಲ್ಲ. ತಿಳಿವಿಲ್ಲದೆ ಬದುಕಬಹುದೆಂಬ ಕ್ಷೇತ್ರವಿದ್ದರೆ ಅದರಲ್ಲಿ ವೈಜ್ಞಾನಿಕ ಮನೋಭಾವ ಅಗತ್ಯವಲ್ಲವೇನೋ. ಸಾಹಿತ್ಯ, ಕಲೆಗಳಲ್ಲೂ ಆ ಮನೋಭಾವ ಅಗತ್ಯ. ಹೋಗಲಿ, ನೀವು ದುಡ್ಡು ಮಾಡಬೇಕಿದ್ದರೆ ಅದಕ್ಕೂ ಆ ಮನೋಭಾವ ಬೇಕಲ್ಲ!

ಹೊ : ಅದು ಅಷ್ಟು ಸಹಜವಾದದ್ದು ಎನ್ನುವುದಾದರೆ ಅವೈಜ್ಞಾನಿಕತೆ ಏಕಿದೆ ?

ಮೂ : ಅವೈಜ್ಞಾನಿಕವೆನ್ನುವುದೂ ವೈಜ್ಞಾನಿಕತೆಯೊಳಗೇ ಬರಬೇಕು. ನಮ್ಮ ಬದುಕಿಗೆ ಏನೋ ವಿಶೇಷವಾದ ಅರ್ಥವಿದೆಯೆಂದು ನಂಬಿಕೊಂಡಿದ್ದೇವೆ ಎಂದಿಟ್ಟುಕೊಳ್ಳಿ. ನಾವು ಸತ್ತಮೇಲೂ ಬದುಕಿರುತ್ತೇವೆಂಬ ಆಶಾಭಾವನೆ ಅನೇಕರಿಗೆ ಅಗತ್ಯ ಎನಿಸುತ್ತದೆ. ಆದರೆ ಇದರ ಬಗ್ಗೆ ಒಂದೊಂದು ಮತಧರ್ಮದ ನಂಬಿಕೆ



ಒಂದೊಂದು ಬಗೆಯದು. ನಮಗೆ ಪುನರ್ಜನ್ಮದ ಕಲ್ಪನೆ ಇದೆ, ಬೇರೆ ಕೆಲವರ ಅದಿಲ್ಲ. ಈ ಪುನರ್ಜನ್ಮದ ಉಗಮ ಎಲ್ಲಿ? ಪುರಾಣಗಳಲ್ಲಿ, ವೇದಕಾಲದ ಅದಿರಲಿಲ್ಲ. ಅದರಲ್ಲೂ ಅವಾಂತರಗಳಿವೆ, ಆಭಾಸಗಳಿವೆ. ಸ್ವರ್ಗ-ನರಕ ಇದ್ದರೆ ಅ ಹೋಗಿ, ಪಾಪ-ಪುಣ್ಯ ಎಲ್ಲಾ ನಶಿಸಿದ ನಂತರ ಪುನರ್ಜನ್ಮ ಬಂದರೆ, ಆಗ ಮ ಖಾಲಿ ಚೀಟಿಯಿಂದ ಶುರು. ಹೀಗಾಗಿ ಹಿಂದಿನ ಜನ್ಮದ ತಪ್ಪು ಈಗಿನ ಜನ್ಮದಲ್ಲಿ ಕ ಕೊಡಲಾರದು. ಕ್ರೈಸ್ತ ಮತ್ತು ಇಸ್ಲಾಂಗಳಲ್ಲಿ ಪುನರ್ಜನ್ಮವಿಲ್ಲ. ಅವರಿಗೆ ಶಾಶ್ವತ ನರ ಅಥವಾ ಸ್ವರ್ಗ. ಈ ನಂಬಿಕೆಗಳಿಗೆಲ್ಲಾ ಏನಾದರೂ ವೈಜ್ಞಾನಿಕ ಆಧಾರವುಂಟೆ ಮನುಷ್ಯನಿಗೆ 'ಮಿತ್'ಗಳನ್ನು ಸೃಷ್ಟಿಸಿಕೊಳ್ಳುವ ಪ್ರವೃತ್ತಿ ಇರುವುದು ಈ ಜೀವನಕ್ಕೇನೋ ವಿಶೇಷ ಅರ್ಥವಿದೆ ಎಂದು ನಂಬುವ ಬಯಕೆ ಇರುವುದರಿಂದ. ಅದರಿಂದಲೆ ನಂಬಿಕೆಗಳನ್ನು ಬಿಡುವುದು ಕಷ್ಟ. ಅವೈಜ್ಞಾನಿಕತೆಗೆ ಇದೇ ವೈಜ್ಞಾನಿಕ ಕಾರಣ.

ಹೊ : ಅದನ್ನು ನಿವಾರಿಸಬೇಕೆ, ಹಾಗಿದ್ದರೆ ಹೇಗೆ ?

ಮೂ : ಅದಕ್ಕೆ ವಿದ್ಯಾಭ್ಯಾಸವೊಂದೇ ಕ್ರಮ. ಅದು ಹೆಚ್ಚಬೇಕು. ನಮ್ಮ ವಿಜ್ಞಾ ಸಂಸ್ಥೆಯ ವಿದ್ಯಾರ್ಥಿಗಳು ವಿವಿಧ ಹಿನ್ನೆಲೆಯವರು, ಆದರೆ ಅವರಲ್ಲಿ ಭೇದಭಾ ಬರುವುದಿಲ್ಲ, ಜಾತಿಯ ಪಿಡುಗಿಲ್ಲ. ಯಾರೋ ಯಾರನ್ನೋ ಮದುವೆಯಾಗುತ್ತಾ ಸುಖವಾಗಿರುತ್ತಾರೆ. ತಂದೆ-ತಾಯಿಯರನ್ನು ಎದುರಿಸುತ್ತಾರೆ ಇಲ್ಲವೆ ಅವರನ ಒಪ್ಪಿಸುತ್ತಾರೆ. ಹೆಂಗಸರು ದುಡಿಮೆಗೆ ಬರುವುದು ಸಹ ಒಂದು ಪರಿಹಾರ. ಎಷ್ಟೋ ಪದ್ಧತಿಗಳು ಹಾಗೇ ಉಳಿದುಬಂದಿರುವುದಕ್ಕೆ ಹೆಂಗಸರಿಗೆ ವಿದ್ಯಾಭ್ಯಾಸದ ಅವಕಾ ಇಲ್ಲದಿರುವುದೂ ಒಂದು ಕಾರಣ. ಅವರು ದುಡಿಯುತ್ತಲೇ ಬಂದಿದ್ದಾರೆ, ಆದ ವಿದ್ಯಾಭ್ಯಾಸದ ಕೊರತೆಯಿಂದಾಗಿ ಸ್ವಂತಿಕೆ ಬೆಳೆದಿಲ್ಲ. ನಾಗಾಲ್ಯಾಂಡ್ ಅಂತಹ ಪ್ರದೇಶ ನೋಡಿ: ಅಲ್ಲಿ ದುಡಿಯುವವರು ಹೆಂಗಸರೇ. ಆಧುನಿಕ ವಿದ್ಯಾಭ್ಯಾ ಇದ್ದಿದ್ದರೆ ದುಡಿಮೆಯ ಜೊತೆ ಅವರಿಗೆ ಘನತೆ, ಸ್ವಂತಿಕೆ, ಎಲ್ಲಾ ಬರಬಹುದಿತ್ತು.

ಹೊ : ವಿಜ್ಞಾನದ ಪದ್ಧತಿ ಎನ್ನುತ್ತಾರಲ್ಲ, ಏನದು ? ಅದು ಈಗ ಸಂಕೀರ್ಣ ವಾಗಿದೆಯೆಂಬ ಮಾತೊಂದಿದೆ. ಇರಲಿ, ಆದರೆ ಆ ಪದ್ಧತಿಯ ಮೂಲಸೂತ್ರಗಳ ಯಾವುವು ?

ಮೂ : ಅದರಲ್ಲಿ ಹೊಸದಾಗಿ ಹೇಳುವಂಥದೇನೂ ಇಲ್ಲ. ಈ ಪ್ರಪಂಚ ಕೆಲವ ನಿಯಮಗಳನ್ನು ಅನುಸರಿಸುತ್ತದೆ. ಅವನ್ನು ಮೀರಿ ನಡೆಯುವ ಘಟನೆ ಯಾವುದೂ ಇಲ್ಲ. ಹಿರಿಯ ವಿಜ್ಞಾನಿಗಳು ಮಾಡುವುದೇನು ? ಈ ಮೂಲನಿಯಮಗಳನ ಅರಸುವುದು, ಆವಿಷ್ಕಾರ ಮಾಡುವುದು. ನಮ್ಮಲ್ಲಿ ಅಂಥವರಿರುವುದು ವಿರಳ. ನನ್ನಂತ ವಿಜ್ಞಾನಿಯು ಹೊಸತೇನನ್ನೂ ಆವಿಷ್ಕಾರ ಮಾಡುವುದಿಲ್ಲ. ಅದರಿಂದ ನನಗೇನೂ ದುಃಖವಿಲ್ಲ. ನಮ್ಮ ಪ್ರತಿಯೊಂದು ಪ್ರಯೋಗದಲ್ಲೂ ಅತ್ಯುನ್ನತ ವಿಜ್ಞಾನಿಗಳ ಮಂಡಿಸಿರುವ ಅವರ ಸಿದ್ಧಾಂತಗಳಿಗೆ ಪೂರಕವಾದ ಅಂಶಗಳಿರುತ್ತವೆ. ಉದಾಹರಣೆಗೆ ಡಾರ್ವಿನ್ ಸಿದ್ಧಾಂತ. ಅದಕ್ಕೆ ಇನ್ನಷ್ಟು ಬಲ ಬರುವುದು ನಮ್ಮಂಥವರ ಕೆಲಸದಿಂದ ವಿಜ್ಞಾನಕ್ಕೆ ಎರಡು ಮಾದರಿಗಳಿವೆ : ಒಂದು ಕಾರ್ಲ್ ಪಾಪರ್‌ನಂಥವರ ಮಾದರ ಕೆಲವರು ಮಾತ್ರ ವಿಜ್ಞಾನದಲ್ಲಿ ಮನ್ವಂತರ ಉಂಟುಮಾಡುವವರು. ಅಂಥವರು ಬರುವುದು ನಮ್ಮಂತಹ ಸಾವಿರಾರು ಜನರ ಕೆಲಸದ ಮೇಲೆ. ಒಂದು ಪ್ರ ಕೇಳುತ್ತಿರುತ್ತಾರೆ : ನಮ್ಮಲ್ಲೇಕೆ ನೊಬೆಲ್ ವಿಜೇತರು ಬರುವುದಿಲ್ಲ, ಎಂದು. ಅದಕ ಬೇಕಾದ ವಿಶಾಲ ತಳಹದಿ ನಮ್ಮಲ್ಲಿದೆಯೆ ಎನ್ನುವುದು ಪ್ರಶ್ನೆ. ಹತ್ತು ಸಾವಿರ ಉನ್ನ

ಟ್ಟದ ಸಂಶೋಧಕರಿದ್ದರೆ ಅವರಲ್ಲಿ ಒಂದಿಬ್ಬರು ನೊಬೆಲ್ ಮಟ್ಟಕ್ಕೇರುತ್ತಾರೆ. ಾವಿರುವುದೇ ನೂರು ಜನರಾದರೆ ನೊಬೆಲ್ ಎಲ್ಲಿಂದ ಬರಬೇಕು! ಇರಲಿ, ಮ್ಮ ಕೆಲಸ ವಿಜ್ಞಾನಕ್ಕೆ ಪೂರಕವಾದ್ದೇ ಹೌದು. ಅದಕ್ಕೆ ಹೆಚ್ಚಿನ ಸಮರ್ಥನೆ ದಗಿಸಿಕೊಡುತ್ತದೆ.

ಹೊ : 'ವಿಜ್ಞಾನ ಮಾಡುವುದು' (ಅಥವಾ ಅದರಲ್ಲೇ ತೊಡಗಿರುವುದು) ಂಬುದಿದೆ. ಅದಕ್ಕೂ ಬೇರೆ ವೈಜ್ಞಾನಿಕ ಸಂಶೋಧನೆಗಳಿಗೂ ವ್ಯತ್ಯಾಸವಿದೆಯೆ? ುದಾಹರಣೆಗೆ, ವಿಶ್ವವಿದ್ಯಾನಿಲಯಗಳ ಚಟುವಟಿಕೆ. ಅಲ್ಲಿಯ ಪಿಎಚ್.ಡಿ. ದ್ಯಾರ್ಥಿಯ ಸಂಶೋಧನೆಗೂ ನಿಮ್ಮದಕ್ಕೂ ಗುಣಾತ್ಮಕ ವ್ಯತ್ಯಾಸವೇನಾದರೂ ರುತ್ತವೆಯೆ?

ಮೂ : ಪರಿಮಾಣಾತ್ಮಕ ವ್ಯತ್ಯಾಸ ಇದೆ, ಗುಣಾತ್ಮಕ ವ್ಯತ್ಯಾಸ ಇಲ್ಲ. ಅದನ್ನು ೀಗೆನ್ನೋಣ: ನೀವು ಮಹಾಕಾವ್ಯ ಬರೆಯಬಹುದು ಇಲ್ಲವೆ ಒಂದೆರಡು ಕವನ ರೆಯಬಹುದು. ಎರಡರಲ್ಲೂ ಸೃಷ್ಟ್ಯಾತ್ಮಕ ಪ್ರಕ್ರಿಯೆ ಇದೆ. ಎಲ್ಲೋ ಸ್ವಲ್ಪ ಗುಣಾತ್ಮಕ ್ಯತ್ಯಾಸ ಉಂಟಾಗಬಹುದು. ದೂರದ ಒಂದು ಮೂಲೆಯ ವಿಶ್ವವಿದ್ಯಾನಿಲಯದಲ್ಲಿ ೆಂಗಳೂರು ವಿಶ್ವವಿದ್ಯಾಲಯದಲ್ಲಿ ಆಗುವಷ್ಟು ಆಗದಿರಬಹುದು. ಸೌಲಭ್ಯ, ುಪಕರಣಗಳು, ಆಸಕ್ತಿ ಇರುವ ಸಂಶೋಧಕರು, ಇವೆಲ್ಲಾ ವ್ಯತ್ಯಾಸಕ್ಕೆ ಕಾರಣ. ಆದರೆ ಎಲ್ಲರೂ ಮಾಡುವುದು ''ಡೂಯಿಂಗ್ ಸೈನ್ಸ್'' ಅಲ್ಲದೆ ಮತ್ತೇನು? ಎಲ್ಲರದೂ ಒಂದೇ ವಿಧಾನ. ಅದು ವೈಜ್ಞಾನಿಕ ವಿಧಾನ.

ಹೊ : ಈ ಹಿನ್ನೆಲೆಯಲ್ಲಿ ವಿಜ್ಞಾನದ ಶಿಕ್ಷಣದ ಬಗ್ಗೆ ಏನು ಹೇಳುತ್ತೀರಿ? ಿಜ್ಞಾನಕ್ಕಿಂತಲೂ ತಂತ್ರಜ್ಞಾನಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದಿದೆ ಎನ್ನುತ್ತಾರಲ್ಲ, ಅದರಿಂದ ೇನು ಪರಿಣಾಮ?

ಮೂ : ಮೂಲತಃ ಎಲ್ಲವೂ ಸಮಪ್ರಮಾಣದಲ್ಲಿ ಮುಂದುವರಿಯಬೇಕು. ೆಂಗಳೂರನ್ನು ಅಭಿವೃದ್ಧಿಪಡಿಸಿ ನಮ್ಮ ಹಳ್ಳಿಗಳನ್ನು ಹಿಂದಕ್ಕೆ ತಳ್ಳಲಾಗುತ್ತದಲ್ಲ, ಾಗಿರಕೂಡದು. ತಂತ್ರಜ್ಞಾನವು ಭೌತ - ರಸಾಯನ - ಜೀವಶಾಸ್ತ್ರಗಳಿಲ್ಲದೆಯೇ ೆಳೆಯುತ್ತದೆಯೆ? ಅವನ್ನು ಕಲಿಯುವವರಿಲ್ಲವಾದರೆ ನಾಳೆ ತಂತ್ರಜ್ಞಾನಕ್ಕೂ ಂಜರಿತ ತಪ್ಪಿದ್ದಲ್ಲ. ಅದು ನಮ್ಮ ದೇಶಕ್ಕೆ ಹಿತವಲ್ಲ. ಆರ್ಥಿಕ ವಲಯದ ಒತ್ತಡವನ್ನು ೀರುವುದು ಕಷ್ಟ. ಹಣದ ಸಂಪಾದನೆಗೆ ಮಾರುಹೋಗಿ ಪ್ರಾಯೋಗಿಕ ಅಧ್ಯಯನ, ಸಂಶೋಧನೆಗಳನ್ನು ಕಡೆಗಾಣಿಸಿದರೆ ಏನಾಗುತ್ತದೆ? ಇದು ೧೯೮೦ರ ಂತರದ ವಿದ್ಯಮಾನ. ಅಮೆರಿಕಾ, ಯೂರೋಪ್‌ಗಳಿಗೆ ಕಂಪ್ಯೂಟರ್ ಪ್ರೋಗ್ರಾಮ್ ಳನ್ನು ಬರೆದುಕೊಡಲಾರಂಭಿಸಿದೆವು. ಅದು ಬೌದ್ಧಿಕವಾಗಿ ಅಪಾರ ಸಾಧನೆಯಲ್ಲ, ಆದರೆ ಹಣ ಹೆಚ್ಚಾಗಿ ಸಿಕ್ಕುತ್ತಿತ್ತು. ಅದೂ ಈಗ ಸ್ವಲ್ಪ ಕಡಿಮೆಯಾಗುತ್ತಿದೆಯೆಂದು ೋರುತ್ತದೆ. ನೀವು ಸ್ವಯಮಿಚ್ಛೆಯಿಂದ ನಿವೃತ್ತಿ ಪಡೆದ ವೇಳೆಗೆ ನಿಮ್ಮ ವಿದ್ಯಾರ್ಥಿಗಳ ೇತನ ಎಷ್ಟಿರುತ್ತಿತ್ತು ಗೊತ್ತೆ? ಹಾಗಿರುವಾಗ ವಿಜ್ಞಾನದ ವ್ಯಾಸಂಗಕ್ಕೆ ಬನ್ನಿರೆಂದರೆ ೇಗೆ ಬರುತ್ತಾರೆ? ಸ್ವತಃ ನಾನು ಸದಾ ವಿಜ್ಞಾನದ ಅಧ್ಯಯನದ ಪರವಾಗಿ ಪ್ರಚಾರ ಾಡುತ್ತಿರುತ್ತೇನೆ. ಆದರೆ ಅಳುಕು ಅನಿವಾರ್ಯ. ವಿಜ್ಞಾನ ಓದಿ ಕರಟ ಹಿಡಿದು ೊಂಡು ಹೋಗಿ ಎಂದು ಹೇಳುವುದು ಸರಿಯೆ? ಈಗ ಕಂಪ್ಯೂಟರ್ ಜನಕ್ಕೂ ಕೆಲಸ ಷ್ಟು ಸುಲಭವಾಗಿ ಸಿಕ್ಕುತ್ತಿಲ್ಲ, ವೇತನವೂ ಸ್ವಲ್ಪ ಕುಸಿದಿದೆ. ಜೊತೆಗೆ, ವಿಜ್ಞಾನಕ್ಕೆ ಂಬಂಧಿಸಿದಂತೆ ಈಚೆಗೆ ಉದ್ಯಮಗಳು ಬೆಳೆಯುತ್ತಿವೆ. ಉದಾಹರಣೆಗೆ, ೆಂಗಳೂರಿನಲ್ಲಿ ಹಲವು ಬಯೋಟೆಕ್ ಸಂಸ್ಥೆಗಳು ಬಂದಿವೆ. ವಿಜ್ಞಾನ ಓದಿದವರಿಗೆ ುದ್ಯೋಗದ ಭರವಸೆ ಹೆಚ್ಚುತ್ತಿದೆ. ಜೊತೆಗೆ, ನಮ್ಮ ದೇಶದ ಬೆಳವಣಿಗೆ ೇಗಿದೆಯೆಂದರೆ ಏನು ವ್ಯಾಸಂಗ ಮಾಡಿದ್ದರೂ ಸರಿಯೆ, ಮೇಲ್ದರ್ಜೆಯ ದ್ಯಾರ್ಥಿಗಳಿಗೆ ಕೆಲಸದ ಅಭಾವವಿಲ್ಲ. ಆದರೆ ಇಂಜಿನಿಯರಿಂಗ್ ವಿಭಾಗದಲ್ಲಿ ್ರವೇಶ ದೊರಕಲಿಲ್ಲವೆಂದು ವಿಜ್ಞಾನ ಓದಲು ಬಂದ ವಿದ್ಯಾರ್ಥಿಗೆ ತೊಂದರೆ ಇದ್ದೇ ದೆ. ಭಾರತ ಸರ್ಕಾರದ ಒಂದು ಯೋಜನೆಯಡಿ ವಿಜ್ಞಾನ ಬೋಧಿಸುವ ಹತ್ತು ಳ್ಳೆಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಮೇಲ್ದರ್ಜೆಯ ವಿದ್ಯಾರ್ಥಿಗಳನ್ನು ಅವು ಕರ್ಷಿಸುತ್ತಿವೆ. ಭಾರತೀಯ ವಿಜ್ಞಾನ ಸಂಸ್ಥೆಯಲ್ಲೂ ಬಿ. ಎಸ್. ಪದವಿಗೆ ಪ್ರವೇಶ ಲ್ಪಿಸಲಾಗಿದೆ. ಇಲ್ಲೆಲ್ಲಾ ಅತ್ಯುತ್ತಮ ವಿದ್ಯಾರ್ಥಿಗಳು ಬರುತ್ತಿದ್ದಾರೆಂದು ಹೇಳಲಾಗದು, ಗಲೂ ಅಂಥವರು ಐ.ಐ.ಟಿ.ಗಳಿಗೇ ಹೋಗುತ್ತಾರೆ. ಅಲ್ಲೂ ದರ್ಜೆ ಸ್ವಲ್ಪ ಡಿಮೆಯಾಗಿದೆ. ಅಲ್ಲಿಯ ಪ್ರವೇಶ ಪರೀಕ್ಷೆಯ ಮಾದರಿ ಬದಲಾದದ್ದೂ ಒಂದು ರಣವೆಂದು ತೋರುತ್ತದೆ. ಎಲ್ಲೆಡೆ ತರಬೇತಿ ಶಾಲೆಗಳಿವೆ. ಆದರೆ ಕೋಲಾರ, ೀದರ್, ಮುಂತಾದ ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಸೌಲಭ್ಯಗಳಿವೆ?



ಜಾಖಾಉ ಕುದುರೆ!

ಟಕ್ ಟಕ್, ಟಕ್ ಟಕ್
ಠಕ್ ಠಕ್, ಠಕ್ ಠಕ್
ಕುದುರೆ ಓಡುತಿದೆ ನೋಡಿದಿರಾ ?!
ಹೊಸ ಕಸಿಯ 'ಜಾಖಾಉ' ಕುದುರೆಯಿದು
ಲಂಗು ಲಗಾಮಿಲ್ಲದೆ ನೆಗೆಯುವ ಕುದುರೆ
ಕಣ್ಣ ಪಟ್ಟಿಯನೂ ಕಿತ್ತೆಸೆಯುವ ಕುದುರೆ
ನಟ್ಟು, ಬೋಲ್ಟು, ಸ್ಪ್ರಿಂಗು, ಚೈನು
ತೊಟ್ಟ ಕುದುರೆಯಿದು ಬಲ್ಲಿರಾ ?!
ಇದು ತಿನ್ನೋದು ಹಣವನ್ನು ಮಾತ್ರ
ಕುಡಿಯೋದು ಪೆಟ್ರೋಲನ್ನು ಮಾತ್ರ
ತೇಗಿದರೆ ಧಗೆಯ ಹೊಗೆ ಮಾತ್ರ !
ಲದ್ದಿಯಲ್ಲೋ... ರೈತರ ಹೆಣ ಮಾತ್ರ!!
ಅಮೆರಿಕಾ, ರಷಿಯಾ, ಇಥಿಯೋಪಿಯಾ
ಭಾರತ, ಚೈನಾ, ಸೋಮಾಲಿಯಾ...
ದೇಶ ದೇಶವನೇ ತೊತ್ತಳ ತುಳಿಯುತ
ಕುದುರೆ ನೆಗೆಯುತಿದೆ ನೋಡಿದಿರಾ ?
ಎದುರು ಬಂದವರ ತಲೆಯನೆ ಕುಕ್ಕಿ
ಅಡ್ಡಡ್ಡ ಬಂದವರ ಹೆಡೆ ಮುರಿದಿಕ್ಕಿ
ಅಂತರಿಕ್ಷಕೂ ಕೇಕೆ ಹಾಕುತಾ
ಕುದುರೆ ಕೆಲೆಯುತಿದೆ ಕೇಳಿದಿರಾ ?
ಟಕ್ ಟಕ್, ಟಕ್ ಟಕ್
ಠಕ್ ಠಕ್, ಠಕ್ ಠಕ್
ಕುದುರೆ ಓಡುತಿದೆ ನೋಡಿದಿರಾ ?!
(ಕಣ್ಣಿಗೆ ಕಾಣದ ಜಾಗತೀಕರಣ,
ಖಾಸಗೀಕರಣ, ಉದಾರೀಕರಣದ ಕುದುರೆ !)

ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ (ಅಂಚೆ)
ಹಗರಿಬೊಮ್ಮನಹಳ್ಳಿ (ತಾ)
ಬಳ್ಳಾರಿ (ಜಿ) - ೫೮೩೨೧೨

ಎಸ್.ಎಸ್.ಎಲ್.ಸಿ.ಯಲ್ಲಿ ಸಹ ಜಿಲ್ಲೆಯಿಂದ ಜಿಲ್ಲೆಗೆ ಎಷ್ಟೊಂದು ವ್ಯತ್ಯಾಸಗಳಿವೆ, ನೋಡಿ. ಮೂಲಭೂತವಾಗಿ ಇದೆಲ್ಲಾ ವಿಜ್ಞಾನದ ಸಮಸ್ಯೆಯಲ್ಲ. ಅದು ಸಾಮಾಜಿಕ-ರಾಜಕೀಯ ಸಮಸ್ಯೆ. ವಿಜ್ಞಾನದ ವ್ಯಾಸಂಗಕ್ಕೆ ಕಡಿಮೆ ವಿದ್ಯಾರ್ಥಿಗಳು ಬರುವುದು ಸಹ ಅದೇ ಸಮಸ್ಯೆಯ ಒಂದು ಭಾಗ.

ಹೊ : ನಿಮ್ಮಲ್ಲಿ ಬಿ. ಎಸ್. ಆರಂಭವಾಗಿದೆಯಲ್ಲ, ಅದರ ಅನುಭವ ಏನೆನಿಸುತ್ತದೆ ?


ಮೂ : ವೈಯಕ್ತಿಕವಾಗಿ ನಾನು ಇದರ ಸಮರ್ಥಕನಲ್ಲ. ನಾನು ಹೇಳಿದೆನಲ್ಲ, ಬೇರೆ ಹತ್ತು ಸಂಸ್ಥೆಗಳು ಬಂದಿವೆಯೆಂದು. ಅವು ಬರುವ ಮುನ್ನ ಇದ್ದ ಯೋಚನೆ ಇದು, ನಮ್ಮಲ್ಲಿ ಬಿ. ಎಸ್. ಎಂಬುದು. ಹತ್ತು ವರ್ಷಗಳ ಹಿಂದೆಯೇ ಅಂತಹ ಯೋಚನೆ ಬಂದಿತ್ತು. ಅದಕ್ಕೆ ಕಾರಣ ವಿಜ್ಞಾನದ ವ್ಯಾಸಂಗಕ್ಕೆ ಪ್ರತಿಭಾವಂತರು ಬಾರದಿದ್ದರೆ ಕ್ರಮೇಣ ಅದು ರಾಷ್ಟ್ರೀಯ ಆಪತ್ತಿಗೆ ನಮ್ಮನ್ನು ಕೊಂಡೊಯ್ಯುತ್ತದೆ ಎಂಬುದು. ಬೇರೆ ಹತ್ತು ಸಂಸ್ಥೆಗಳು ಬಂದಿರುವಾಗ ನಮ್ಮಲ್ಲಿ ಅದು ದ್ವಿಗುಣಿತ ಅಥವಾ ನಕಲು ಎಂಬಂತಾಗಿದೆ.

ಹೊ : ಅಂದರೆ, ಅವರನ್ನೆಲ್ಲಾ ಸಂಶೋಧನೆಗೆ ತೊಡಗಿಸಲಾಗುವುದಿಲ್ಲವೆಂದೆ ?

ಮೂ : ಸಮಸ್ಯೆ ಅದಲ್ಲ. ನಮ್ಮಲ್ಲಿ ಎಷ್ಟು ಪ್ರತಿಭಾವಂತರಿದ್ದಾರೆ ನೋಡಿ, ಅವರಲ್ಲಿ ಹಲವರು ವಿದೇಶಗಳಿಗೆ ಹೋಗಬಹುದು. ಉಳಿಯುವವರು ಕೂಡ ಎಲ್ಲಿಂದ ಬಂದವರು? ನಗರಪ್ರದೇಶಗಳವರು, ಸ್ವಲ್ಪ ಪ್ರತಿಷ್ಠಿತ ವರ್ಗದಿಂದ ಬಂದವರು. ಸಾಮಾನ್ಯವಾದ ಗ್ರಾಮಾಂತರ ಪ್ರದೇಶಗಳವರಿಗೆ ಪ್ರವೇಶ ಸಾಧ್ಯವಾಗುವಂತಹ ತರಬೇತಿಯನ್ನು ಅವರಿಗೆ ನೀಡಿಲ್ಲದಿರುವುದು ನಮ್ಮ ದೊಡ್ಡ ಕೊರತೆ. ಅಲ್ಲೂ ಪ್ರತಿಭಾವಂತರಿದ್ದಾರೆ. ಆದರೆ ಸೌಲಭ್ಯ ಕಲ್ಪಿಸಲಾಗಿಲ್ಲವಾದ್ದರಿಂದ ಅವರಿಗೆ ಇಲ್ಲೆಲ್ಲಾ ಪ್ರವೇಶದ ಬಾಗಿಲು ತೆರೆದುಕೊಂಡಿಲ್ಲ. ನಮ್ಮ ಬಿ.ಎಸ್. ಬಗ್ಗೆ ಹೇಳುವುದಾದರೆ ಅದು ಅಪ್ರತಿಮವಂತೂ ಅಲ್ಲ. ನಮ್ಮದು ಮುಖ್ಯವಾಗಿ ಸಂಶೋಧನಾ ಸಂಸ್ಥೆ. ಪದವಿ ತರಗತಿಯ ಮಟ್ಟದಲ್ಲಿ ಅಧ್ಯಾಪನ ಮಾಡುವುದು, ಜೊತೆಗೆ ಉನ್ನತಮಟ್ಟದ ಸಂಶೋಧನೆ ನಡೆಸುವುದು, ಇವು ಸರಿ ಹೊಂದುವುದಿಲ್ಲ. ನನ್ನ ಮಾತು ಬಿಡಿ, ನಾನು ನಿವೃತ್ತಿ ಹೊಂದುತ್ತೇನೆ. ಯುವ ಸಂಶೋಧಕರ ಮೇಲೆ ಅಧ್ಯಾಪನ ಕೆಲಸವು ಭಾರವನ್ನು ಹೇರುತ್ತದೆ.

ಹೊ : ಬೆಂಗಳೂರು ವಿಶ್ವವಿದ್ಯಾನಿಲಯದ ಪರಿಧಿಯ ಮೂರು ಕಾಲೇಜುಗಳಲ್ಲಿ ಇದೇ ರೀತಿಯ ನಾಲ್ಕು ವರ್ಷಗಳ ಅವಧಿಯ ಬಿ.ಎಸ್. ತರಗತಿಗಳು ಆರಂಭವಾಗಿವೆ. ನಿಮ್ಮ ಸಂಸ್ಥೆಯ ಬಿ. ಎಸ್. ಪಠ್ಯ ವಿಷಯಗಳಿಗೂ ಕಾಲೇಜುಗಳ ಪಠ್ಯ ವಿಷಯಗಳಿಗೂ ಬಹಳ ಅಂತರವಿದೆ. ಇದೇಕೋ ವಿಪರ್ಯಾಸವೆನಿಸುತ್ತದೆ.

ಮೂ : ಹೀಗೆ ನೋಡಿ, ಇಲ್ಲಿಯ ಬಿ. ಎಸ್. ಮಾಡಿದವರು ಎಂ.ಎಸ್ಸಿ.ಗೆ ಹೋಗದೆ ನೇರವಾಗಿ ಪಿಎಚ್.ಡಿ.ಗೆ ತೆರಳಬಹುದು. ಇದು ಅಮೆರಿಕಾ



ವ್ಯವಸ್ಥೆಯ ಮಾದರಿಯೂ ಹೌದು. ಬಯೋಟೆಕ್ನಾ
ಬಿ.ಇ. ಮಾಡಿದವರು ಪಿಎಚ್.ಡಿ.ಗೆ ಬರಬಹುದ
ಹಾಗೆ. ಅವರೂ ನಾಲ್ಕು ವರ್ಷ ಅಭ್ಯಾಸ ಮಾಡಿರುತ್ತಾ
ಮತ್ತೆ ಎಂ.ಟೆಕ್.ಗೆ ಹೋಗಬೇಕಾಗಿಲ್ಲ. ನಮ್ಮ ದೇಶ
ಐ.ಐ.ಟಿ. ಪದವೀಧರರು ಅಮೆರಿಕಾದಲ್ಲಿ ನೇರವಾ
ಪಿಎಚ್.ಡಿ.ಗೆ ಹೋಗುತ್ತಾರೆ. ಹಾಗಿರಬೇಕೆಂಬು
ನಮ್ಮ ಬಿ.ಎಸ್. ಆಶಯ. ಆ ಮಟ್ಟದ ವ್ಯಾಸಂಗ ಇ
ನಿರೀಕ್ಷಿಸಲಾಗುತ್ತದೆ. ಬೇರೆ ಬಿ.ಎಸ್.ಗಳು ಇದ
ಸಮನಾಗಿರುತ್ತದೆಂದು ಭಾವಿಸಲಾಗದು.

ಹೊ : ಈಚಿನ ಒಂದು ವರದಿಯಂತೆ ಇ.
ಮುಂದೆ ಪ್ರಾಣಿಶಾಸ್ತ್ರ ಪ್ರಯೋಗಾಲಯಗಳಲ್ಲಿ ಪ್ರಾಣಿ

ಕಪ್ಪೆ, ಜಿರಲೆ ಇತ್ಯಾದಿ) ಭೇದ ಅನಗತ್ಯವಂತೆ. ಹಾಗೆಂದರೇನು ಸುತ್ತು ಅದು ಹೇಗೆ ಸಾಧ್ಯ? ಬೇರೇನೋ ತಂತ್ರಜ್ಞಾನ ಬಂದಿರು ವುದರಿಂದ ಅದು ಅನಗತ್ಯ ವಾಗುತ್ತದೆಯೆಂದೆ?

ಮೂ: ಇಲ್ಲ, ಇಲ್ಲ, ಅದೆಲ್ಲಾ ಬಾಲಿಶ ತೀರ್ಮಾನಗಳು. ಕೋಳಿ ಗಳನ್ನು ಸೈಕಲ್ಲುಗಳ ಮೇಲೆ ತಲೆಕೆಳಗಾಗಿ ನೇತುಹಾಕಿಕೊಂಡು ಹೋಗುವುದನ್ನು ನೋಡಿದ್ದೀರಾ? ಯಶವಂತಪುರ ಮಾರ್ಕೆಟ್ಟಿನಲ್ಲಿ ಅದನ್ನು ಕಾಣಬಹುದು. ಯಾರಾದರೂ ಆ ಕ್ರೌರ್ಯದ ಬಗ್ಗೆ ಚಕಾರವೆತ್ತಿದ್ದಾರೆಯೇ? ಪ್ರಯೋಗಾಲಯಗಳ ಪ್ರಾಣಿಗಳ ಬಗ್ಗೆ ಅವರಿಗೆ ಕಾಳಜಿ! ಪ್ರಾಣಿ ಹಿಂಸೆಯನ್ನು ತಡೆಗಟ್ಟುತ್ತಾರಂತೆ! ಟಿ.ವಿ. ಪರದೆಯ ಮೇಲೆ ನೋಡಿ ಡಿಸೆಕ್ಷನ್ ತಿಳಿದುಕೊಳ್ಳುವುದು ಹೇಗೆಂದು ಗೊತ್ತಿಲ್ಲ. ಪ್ರಾಣಿಗಳಿಗೆ ಹಿಂಸೆ ಕೊಡದೆಂಬುದು ನಮ್ಮೆಲ್ಲರ ಅಭಿಮತ. ಹಾಗೆಂದು ಅರ್ಥರಹಿತ ತೀರ್ಮಾನ ಗಳನ್ನು ತೆಗೆದುಕೊಳ್ಳಬಾರದು. ಆಲ್ಡಸ್ ಹಕ್ಸ್ಲಿ ಭಾರತಕ್ಕೆ ಬಂದಿದ್ದಾಗ ಇಲ್ಲಿ ಗೋವುಗಳಿಗೆ ನೀಡುವ ಹಿಂಸೆ ನೋಡಿ ಅಚ್ಚರಿಗೊಂಡಿದ್ದ. ಮೇವಿಲ್ಲ, ಸಾವೂ ಇಲ್ಲ ಇದೇನು ದಯೆ?

ಹೊ: ಕಠೋಪನಿಷತ್ತಿನ ಪೀತೋದಕಾ ಜಗ್ಧತೃಣಾ ಇದ್ದಂತೆ. ಆ ಗೋವುಗಳು ತಿನ್ನಬಹುದಾದ ಹುಲ್ಲನ್ನೆಲ್ಲಾ ಎಂದೋ ತಿಂದಿವೆ, ಕುಡಿಯಬಹುದಾದ ನೀರು ಎಂದೋ ಕುಡಿದು ಮುಗಿಸಿವೆ. ಈಗ ಮೇವೂ ಇಲ್ಲ, ನೀರೂ ಇಲ್ಲ. ಅದರಿಂದ ಕೃಶವಾಗಿವೆ. ಜೀವಚ್ಛವಗಳು ಅವು. ಅದಿರಲಿ, ಸಂಶೋಧನೆಯ ಮೇಲೆ ಅದರ ಪರಿಣಾಮವೇನಿರಬಹುದು?

ಮೂ: ಘೋರ ಎನ್ನಬೇಕು. ನಮ್ಮ ಬಹುತೇಕ ಸಂಶೋಧನೆಗಳು ಪ್ರಾಣಿಗಳನ್ನೇ ಆಶ್ರಯಿಸಿವೆ. ಹೊಸ ಔಷಧಿಗಳನ್ನು ಮನುಷ್ಯರ ಮೇಲೆ ಪ್ರಯೋಗಿಸಬೇಕೆ? ಹಿಟ್ಲರನ ಕಾಲದ ಜರ್ಮನಿಯಲ್ಲಿ ಅದು ನಡೆಯಿತು. ನಾವು ಪ್ರಾಣಿಗಳ ಮೇಲೆಯೇ ಪ್ರಯೋಗಿಸಬೇಕು. ಚಿಂಪಾಂಜಿ, ಗೊರಿಲ್ಲಾ ಮುಂತಾದ ಪ್ರಾಣಿಗಳೇ ಬೇರೆ ಮತ್ತು ಇಲಿ-ಕಪ್ಪೆ ಮುಂತಾದುವೇ ಬೇರೆ. ಗಿಡಗಳಿಗೂ ಜೀವವಿದೆಯೆಂದು ಅವನ್ನು ಎಷ್ಟು ಕರುಣೆಯಿಂದ ನಡೆಸಿಕೊಳ್ಳುತ್ತೀರಿ? ಜೀವರಾಶಿಯ ಏಣಿಯಲ್ಲಿ ಭಿನ್ನಭಿನ್ನ ಸ್ಥಾನಗಳಿವೆ, ಏನು ಮಾಡುವುದು? ಒಂದು ಗಿಡದ ಎಲೆಯನ್ನು ಚಿವುಟಿ ಹಾಕುವುದಕ್ಕೂ ಇಲಿಯ ತಲೆಯನ್ನು ಚಿವುಟಿಹಾಕುವುದಕ್ಕೂ ವ್ಯತ್ಯಾಸವಿದೆ. ಇಲಿಯ ಇಂದ್ರಿಯಗಳು ಹೆಚ್ಚು ಬೆಳೆದಿವೆಯಲ್ಲ! ವಿಕಾಸದ ಶ್ರೇಣಿಯಲ್ಲಿ ಯಾವುವು ಎಲ್ಲಿವೆ ಎಂಬುದು ಅಪ್ರಸ್ತುತವಲ್ಲ. ನೋವಿನ ಅನುಭವದಲ್ಲೂ ವ್ಯತ್ಯಾಸವಿರುತ್ತದಲ್ಲಾ.




ಹೊ: ವಿಜ್ಞಾನಿಗಳು ಇದರ ಬಗ್ಗೆ ಪ್ರತಿಕ್ರಿಯಿಸಿದ್ದಾರೆಯೆ?

ಮೂ: ನಮ್ಮಲ್ಲಿ ವಿಜ್ಞಾನಿಗಳು ಬಹಿರಂಗವಾಗಿ ಪ್ರತಿಕ್ರಿಯಿಸುವುದು ಕಡಿಮೆ. ಆದರೂ ಪ್ರತಿಕ್ರಿಯೆ ಇಲ್ಲದಿಲ್ಲ. ವಿಜ್ಞಾನ ಅಕಾಡೆಮಿಗಳು ಅಭಿಪ್ರಾಯ ವ್ಯಕ್ತಪಡಿಸಿವೆ. ವಿದೇಶಿ ಔಷಧಿ ಕಂಪನಿಗಳು ತಮ್ಮ ಹೊಸ ಔಷಧಿಗಳನ್ನು ಮನುಷ್ಯರ ಮೇಲೆ ಪ್ರಯೋಗ ಮಾಡಿನೋಡಲು ನಮ್ಮ ದೇಶದ ಜನರನ್ನು ಬಳಸಿಕೊಳ್ಳುತ್ತಾರಲ್ಲಾ ಅದಕ್ಕೇನು ಮಾಡಿದ್ದಾರೆ? ಟಾಕ್ಸಿಕಾಲಜಿಗೆ ಇದೆಲ್ಲಾ ಅವಶ್ಯಕ. ಪ್ರಯೋಗ ಇಲ್ಲದೆ ಔಷಧಿ ಹೇಗೆ ಬಂದೀತು? ಹಾಗೆ ಪ್ರಯೋಗ ನಡೆಸಿದಾಗ ಅಪಾಯ ಸಂಭವಿಸಿದರೆ ಅದಕ್ಕೆ ಹೆಚ್ಚಿನ ಪರಿಹಾರ ನೀಡಬೇಕು. ಪ್ರಯೋಗಕ್ಕೆ ಪ್ರಾಣಿಗಳನ್ನು ಬಳಸುವುದಕ್ಕಿಂತಲೂ ಹೆಚ್ಚು ಗಂಭೀರವಾದ ವಿಷಯ ಇದು.

ಹೊ: "ಎಂಡ್ ಆಫ್ ಸೈನ್ಸ್" ಎಂಬ ಒಂದು ಪುಸ್ತಕ ಈಗ ಎರಡು ಮೂರು ವರ್ಷಗಳ ಹಿಂದೆ ಬಂದಿತ್ತು. ನ್ಯೂಯಾರ್ಕ್ ಟೈಮ್ಸ್‌ನ ವಿಜ್ಞಾನ ವರದಿಗಾರ ಅನೇಕ ವರಿಷ್ಠ ವಿಜ್ಞಾನಿ ಗಳನ್ನು ಸಂದರ್ಶಿಸಿ ಬರೆದ ಪುಸ್ತಕ ಅದು. ಬೇರೆ ಬೇರೆ ವಿಭಾಗಗಳ ವರನ್ನು ಸಂದರ್ಶಿಸಿ ಅವರವರ ಕ್ಷೇತ್ರಗಳಲ್ಲಿ ಇನ್ನೂ ಹೊಸ ಜ್ಞಾನ ದೊರಕಿಸಿಕೊಳ್ಳುವ ಸಾಧ್ಯತೆ ಏನಾದರೂ ಉಂಟೆ ಎಂದು ಪ್ರಶ್ನಿಸಿದ್ದ. ಅವರಲ್ಲಿ ಹಲವರು ಅಂಥ ಸಾಧ್ಯತೆ ಇಲ್ಲವೆಂದಿದ್ದರು; ಮೂಲಭೂತವಾಗಿ ತಿಳಿಯಬಹುದಾದ್ದನ್ನೆಲ್ಲಾ ತಿಳಿದಾಗಿದೆ, ಇನ್ನೇನಿದ್ದರೂ ಮೇಲ್ಮೈ ತಿಳುವಳಿಕೆಗಳಷ್ಟೇ ಸಾಧ್ಯ ಎಂದಿದ್ದರು. ಇದಕ್ಕೆ ನೀವೇನು ಹೇಳುತ್ತೀರಿ?

ಮೂ: ಆ ಪುಸ್ತಕವನ್ನು ನಾನು ಓದಿದ್ದೇನೆ. ಅಲ್ಲಿಯ ಆಶಯ ಪೂರ್ತಿ ಅದಲ್ಲ. ತುಂಬ ಮುಖ್ಯವಾದ ವೈಜ್ಞಾನಿಕ ನಿಯಮಗಳನ್ನೆಲ್ಲಾ ಕಂಡುಕೊಂಡಾಗಿದೆ, ಇನ್ನು ಮುಂದೆ ಅವುಗಳ ಪರಿಷ್ಕರಣವಷ್ಟೇ ಉಳಿದಿದೆ, ಎಂಬುದು ಆ ವಿಜ್ಞಾನಿಗಳ ಅಭಿಪ್ರಾಯ. ಇಂಥ ಮಾತುಗಳಿಗೆ ಅಷ್ಟಾಗಿ ಮನ್ನಣೆ ಕೊಡಬೇಕಾಗಿಲ್ಲ. ಬೇಕಾದಷ್ಟು ತಿಳಿದಿದ್ದೇವೆ, ಆದರೆ ತಿಳಿಯಬಹುದಾದ್ದು ಇನ್ನೂ ಅಗಾಧವಾಗಿಯೇ ಇದೆ. ಎರಡನೆಯ ಮಹಾಯುದ್ಧದ ತರುವಾಯದಲ್ಲಿ (೧೯೪೫-೪೬) ಐದಾರು ವರ್ಷ ಅಮೆರಿಕಾದಲ್ಲಿ ವೈಜ್ಞಾನಿಕ ಸಂಶೋಧನೆ ಸ್ಥಗಿತವಾಗಿತ್ತು. ಆಗ ಸರ್ಕಾರವು ಹಿರಿಯ ವಿಜ್ಞಾನಿಗಳನ್ನು ಕೇಳಿತು: ನಾವು ಎಂತಹ ಸಂಶೋಧನೆಗೆ ಈಗ ಹಣ ಒದಗಿಸಬೇಕು, ಎಂದು. ಯಾವ ಕ್ಷೇತ್ರದಲ್ಲಿ ಪ್ರಗತಿಯ ನಿರೀಕ್ಷೆ ಇದೆಯೆಂಬುದನ್ನು ಗುರುತಿಸಲು ವಿಜ್ಞಾನಿಗಳನ್ನು ಕೇಳಲಾಯಿತು. ಅವರು ನೀಡಿದ ಸಲಹೆಗಳ ಪೈಕಿ ಮಾಲಿಕ್ಯುಲರ್ ಬಯಾಲಜಿ ಸೇರಿರಲಿಲ್ಲ. ಆದರೆ ೧೯೫೨-೫೩ರಲ್ಲಿ ವಾಟ್ಸನ್ ಮತ್ತು ಕ್ರಿಕ್ ಡಿ.ಎನ್.ಎ. ರಚನೆಯನ್ನು ತಿಳಿಸಿಕೊಟ್ಟರು. ನಂತರ ಖೊರಾನಾ ಮುಂತಾದವರ ಸಂಶೋಧನೆಗಳು ಬಂದುವು. ಜೀವಶಾಸ್ತ್ರದ ಇಡೀ ಕ್ಷೇತ್ರವೇ ಪೂರ್ತಿ ಬದಲಾಗಿ ಹೋಯಿತು. ೧೯೬೦-೭೦ರಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಲವಲೇಶದ ತಿಳಿವೂ ೧೯೫೦ರ ದಶಕದಲ್ಲಿರಲಿಲ್ಲ. ಸ್ವಿಫ್ಟ್‌ನ "ಗಲಿವರ್ಸ್ ಟ್ರಾವಲ್ಸ್" ಗೊತ್ತಲ್ಲ, ಅದರಲ್ಲಿ ಒಂದು ಜೋಕ್ ಇದೆ ವಿಜ್ಞಾನಿಗಳ ಬಗ್ಗೆ: ಗಾಳಿಯನ್ನು ಹಿಂಡಿ ಹಿಂಡಿ ನೀರು ಮಾಡುವ ನಿಪುಣರು ಅವರು, ಎಂದು. ಇನ್ನೊಂದೆಡೆ ಒಂದು ಅಕಾಡೆಮಿ ಬಗ್ಗೆ ಹೇಳುತ್ತಾನೆ: ಅಲ್ಲಿ ಮನೆಯನ್ನು ಮಾಳಿಗೆಯಿಂದ ಹಿಡಿದು ಕೆಳಕ್ಕೆ ಕಟ್ಟುತ್ತಾ ಬರುವ ಭೂಪರಿದ್ದಾರೆ, ಎಂದು. ಅವನು ಬರೆದ ಕೆಲವೇ ದಶಕಗಳ ನಂತರ ಗಾಳಿ ಹಿಂಡಿ ನೀರು ತೆಗೆಯುವ ನೈಪುಣ್ಯ ಸಿದ್ಧಿಸಿಯೇ ಬಿಟ್ಟಿತು, ಸ್ವಿಫ್ಟ್‌ಗೆ ತಮಾಷೆ ಎನಿಸಿದ್ದುದು ವಾಸ್ತವವಾಗಿ ನಡೆದು ಹೋಯಿತು. ಗಾಳಿಯ ದ್ರವೀಕರಣ ಅಸಾಧ್ಯವೆನಿಸಿತ್ತು, ಆದರೆ ಸಾಧ್ಯವಾಯಿತು. ಸ್ವಿಫ್ಟ್‌ನ ವ್ಯಂಗ್ಯ ಸೊಗಸಾಗಿದೆ. ಅದು ಬೇರೆ ವಿಷಯ. ಮುಖ್ಯವಾದ್ದು ವಿಜ್ಞಾನದ ವಿಪುಲ ಸಾಧ್ಯತೆಗಳು. ಜೀವಶಾಸ್ತ್ರದ ಕ್ಷೇತ್ರದಲ್ಲಿ ರೋಮಾಂಚನ ಉಂಟುಮಾಡುವ ಹೊಸ ಜ್ಞಾನದ ಆವಿಷ್ಕಾರವಾಗಲಿದೆ. ಇನ್ನೂ ಮುಂದೆ ಏನೇನು ಕಾದಿದೆಯೋ ಈಗಲೇ ಹೇಗೆ ಹೇಳುವುದು?



ಹೊ : ಹಾಗಿದ್ದರೆ ಆ ಪುಸ್ತಕದಲ್ಲಿ ಹೆಸರಿಸಿರುವ ವಿಜ್ಞಾನಿಗಳು ತಾಳಿದ ಅಭಿಪ್ರಾಯಕ್ಕೆ ವಿವರಣೆ ಏನು ?

ಮೂ : ಅದು ಕೆಲವರ ಅಭಿಪ್ರಾಯ, ಅಷ್ಟೆ. ಅದಕ್ಕೆ ಭಿನ್ನವಾಗಿ ಯೋಚಿಸುವವರೂ ಇದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ಭೌತಶಾಸ್ತ್ರದಲ್ಲಿ ಎಂತಹ ಕ್ರಾಂತಿ ಜರುಗಿ ಹೋಯಿತು, ನೋಡಿ. ನ್ಯೂಟನ್ ಪ್ರಕಾರ ವಿಶ್ವವು ಒಂದು ಗಡಿಯಾರವಿದ್ದಂತೆ. ಅದು ಸದಾ ನಡೆಯುತ್ತಲೇ ಹೋಗುತ್ತದೆ. ಅದೊಂದು ಯಾಂತ್ರಿಕ ಕ್ರಿಯೆ. ಎಲ್ಲವೂ ಒಂದು ರೀತಿ ಪೂರ್ವನಿರ್ಧಾರಿತ ರೀತಿಯಲ್ಲಿ ನಡೆಯುತ್ತದೆಂಬ ಭಾವ ಅಲ್ಲಿದೆ. ನಮಗೆ ಅದು ಹೇಗೆ ನಡೆಯುತ್ತದೆಂದು ಗೊತ್ತಿಲ್ಲದಿರಬಹುದು, ಆದರೆ ಆಗಲೇ ಅದು ನಿರ್ಧಾರವಾಗಿದೆ. ಅದನ್ನು 'ಡಿಟರ್ಮಿನಿಸ್ಟಿಕ್' ದೃಷ್ಟಿ ಎನ್ನುತ್ತಾರೆ. ಅಂದರೆ, ವಿಶ್ವದ ಆದಿಯಲ್ಲೇ ಮುಂದೆ ಏನೇನಾಗುತ್ತದೆಂದು ನಿರ್ಧಾರವಾಗಿಬಿಟ್ಟಿದ್ದಿತು ಎಂದರ್ಥ. ಈ ಕಲ್ಪನೆ ೨೦ನೆಯ ಶತಮಾನದಲ್ಲಿ ಪೂರ್ತಿಯಾಗಿ ಬದಲಾಯಿತು. ಕ್ವಾಂಟಂ ಮೆಕ್ಯಾನಿಕ್ಸ್ ಎಂಬ ಹೊಸ ಸಿದ್ಧಾಂತ ಬಂದಿತು. ಭವಿಷ್ಯ ಸರ್ವಥಾ ಅನಿರ್ಧಾರಿತ, ಅದನ್ನು ಹೇಳಬರುವುದಿಲ್ಲ, ಎಂಬ ಕಲ್ಪನೆ ಅದು. ಪ್ರಯೋಗವೊಂದರ ಫಲಿತಾಂಶ ಹಾಗೂ ಇರಬಹುದು, ಹೀಗೂ ಇರಬಹುದು, ಎಂಬ ಜ್ಞಾನ ದೊರೆಯಿತು. ಐನ್‌ಸ್ಟೈನ್‌ಗೆ ಅದು ಒಪ್ಪಿಗೆಯಾಗಿರಲಿಲ್ಲ. ''ದೇವರು ದಾಳ ಉರುಳಿಸುವುದಿಲ್ಲ'' ಎಂದು ಆತ ಹೇಳಿದ್ದ. ಆದರೆ ಮುಖ್ಯಾಂಶವೇನು ? ಭೌತ ನಿಯಮಗಳ ನಿಜವಾದ ಲಕ್ಷಣವನ್ನು ಹೇಳಲಾಗದು, ಎಂದು. ಅದು ನಿರ್ಧಾರಿತವೋ ಅನಿರ್ಧಾರಿತವೋ ಹೇಗೆ ಹೇಳುವುದು ? ''ಸ್ಟ್ರಿಂಗ್ ಸಿದ್ಧಾಂತ'' ಎಂಬುದೊಂದು ಬಂತು. ಅದು ಈ ಸಂಶಯವನ್ನು ನಿವಾರಿಸುತ್ತದೆ ಎಂದು ಬಗೆಯಲಾಗಿತ್ತು. ಆದರೆ ಅದಿನ್ನೂ ಸಾಧ್ಯವಾಗಿಲ್ಲ. ಉತ್ತರ ಬಂದಾಗ ಅದು ಏನಾಗಿರುತ್ತದೆಂಬುದನ್ನು ಬಲ್ಲವರಾರು ? ವಿಜ್ಞಾನದ ಭವಿಷ್ಯವನ್ನು ಮುಕ್ತವಾಗಿ ಇಡುವುದೇ ಉತ್ತಮ. ಮುಂದೇನೋ ಎಂಬುದನ್ನು ಕಾದುನೋಡುವುದು ಸರಿಯಾದ ವಿಧಾನ.

ಹೊ : ಈಚೆಗೆ ಒಂದು ವರದಿ ಬಂದಿತ್ತು : ಇಟಲಿಯ ಲಾಕ್ವಿಲಾದಲ್ಲಿ ಭೂಕಂಪ ಸಂಭವಿಸಿ ಸಾವುನೋವುಗಳು ಉಂಟಾಗಿದ್ದವು. ಅದು ೨೦೦೯ರ ಏಪ್ರಿಲ್ ೬ರಂದು ನಡೆದದ್ದು. ಆ ಊರಿನ ಜನ ಏಳು ಭೂಕಂಪನ ವಿಜ್ಞಾನಿಗಳ ಮೇಲೆ ಮೊಕದ್ದಮೆ



ಹೂಡಿದ್ದಾರೆ. ಭೂಕಂಪ ಸಂಭವಿಸಲಿದೆ ಎಂಬ ಎಚ್ಚರ ನೀಡಲಿಲ್ಲವೆಂದಲ್ಲ. ಅ... ಆಗಾಗ್ಗೆ ಭೂಕಂಪಕ್ಕೆ ತುತ್ತಾಗುವ ಪ್ರದೇಶ. ಭೂಕಂಪದ ಮುನ್ಸೂಚ... ನೀಡಲಾಗುವುದಿಲ್ಲವೆಂದು ಎಲ್ಲರಿಗೂ ಗೊತ್ತು. ಜನರ ಆಪಾದನೆ ಬೇ... 'ತಿಳಿಯದು, ಬೇಕಾದರೆ ಜಾಗ ಖಾಲಿ ಮಾಡಿ' ಎಂದು ಹೇಳುವ ಬದಲು ವಿಜ್ಞಾನಿಗಳು 'ಏನೂ ಭಯವಿಲ್ಲ, ಶಾಂತವಾಗಿರಿ' ಎಂದು ಹೇಳಿದರು. ಆದ್ದರಿಂ... ಜನ ಊರು ಬಿಡಲಿಲ್ಲ. ಭೂಕಂಪದಲ್ಲಿ ಮುನ್ನೂರು ಜನ ಸತ್ತರು. ''ಇದು ವಿಜ್ಞಾನ... ವಿರುದ್ಧದ ಹೋರಾಟವಲ್ಲ. ಈ ವಿಜ್ಞಾನಿಗಳು ನಮಗೆ ಸುಳ್ಳು ಆಶ್ವಾಸನೆ ಕೊಟ್ಟ... ಎಂಬುದು ಆಪಾದನೆ'' ಎಂದು ಜನ ಹೇಳಿದ್ದಾರೆ. ಈ ಪ್ರಸಂಗದ ಮೇ... ವ್ಯಾಖ್ಯಾನಿಸುತ್ತಾ ಸಮಾಜಶಾಸ್ತ್ರಜ್ಞ ಶಿವ ವಿಶ್ವನಾಥನ್ ಹೇಳಿದ್ದಾರೆ, ''ವೈಜ್ಞಾನಿಕ ಜ್ಞಾನ... ನಿಖರವಾಗಿ ಏನೂ ಹೇಳಲಾರದ ಘಟ್ಟವನ್ನು ಮುಟ್ಟಿದ್ದೇವೆ'' ಎಂದು. ವಿಜ್ಞಾನ ಮ... ಸಮಾಜದ ನಡುವಣ ಸಂಬಂಧದ ಬಗ್ಗೆ ಇದೊಂದು ಪ್ರಮುಖ ಪ್ರಶ್ನೆಯನ್ನೆತ್ತಿದೆ. ... ಬಗ್ಗೆ ನೀವೇನು ಹೇಳುತ್ತೀರಿ ?

ಮೂ : ವಿಜ್ಞಾನವು ಯಾವುದೋ ಘಟ್ಟವನ್ನು ಮುಟ್ಟಿದೆ ಎಂಬುದು ಸರಿಯಾ... ಮಾತಲ್ಲ. ಶಿವ ವಿಶ್ವನಾಥನ್ ಹೇಳುವ ಒಂದು ವಾಕ್ಯವನ್ನು ಮಾತ್ರವೇ ಕೇಂದ್ರೀಕರಿ... ವ್ಯಾಖ್ಯಾನ ಮಾಡುವುದು ಸರಿಯಲ್ಲ. ವಿಜ್ಞಾನವು ಇಂದಿನ ಸಂದರ್ಭದಲ್ಲಿ ಭೂಕಂ... ಎಲ್ಲಿ ಮತ್ತು ಯಾವಾಗ ಸಂಭವಿಸುತ್ತದೆಂದು ಹೇಳಲು ಸಮರ್ಥವಾಗಿಲ್ಲ. ಎಲ್ಲೋ... ಒಂದು ಪರಮಾಣು ರೀಯಾಕ್ಟರ್ ಕಟ್ಟುವ ಯೋಜನೆ ಇದೆಯೆನ್ನಿ. ಕೈ... ಸಂದರ್ಭದಲ್ಲಿ ಶಿವರಾಮ ಕಾರಂತರು ಅದನ್ನು ತೀವ್ರವಾಗಿ ವಿರೋಧಿಸಿದ್ದರು. ಅ... ಭೂಕಂಪ ಸಂಭವಿಸಿದರೆ ಏನು ಮಾಡಬೇಕು ? ಜಪಾನಿನಲ್ಲಿ ಸುನಾಮಿಯಿಂದಾ... ರೀಯಾಕ್ಟರ್ ಅಪಘಾತಕ್ಕೆ ಗುರಿಯಾಯಿತು. ನಿಮಗೆ ವಿದ್ಯುಚ್ಛಕ್ತಿ ಬೇಕು... ಕಲ್ಲಿದ್ದಲಿಗಿಂತಲೂ ಪರಮಾಣು ಇಂಧನವು ಹೆಚ್ಚು ಪರಿಸರ ಅವಿನಾಶಕಾರಿ ಎಂದ... ತಿಳಿದಿದೆ; ಆಗೇನು ಮಾಡುತ್ತೀರಿ ? ಅಪಘಾತವೇನೂ ಸಂಭವಿಸದಿದ್ದರೆ ಪರಮಾ... ರೀಯಾಕ್ಟರ್ ಸ್ವಾಗತಾರ್ಹ, ವಿದ್ಯುತ್ತಿನ ಬೆಲೆಯೂ ಹೆಚ್ಚಾಗುವುದಿಲ್ಲ. ಈಗ ಅದ... ಹೆಚ್ಚೇ ಇದೆ. ಅದು ಬೇರೆ ವಿಷಯ. ಈ ಹಿನ್ನೆಲೆಯಲ್ಲಿ ಆಯ್ಕೆ ನಡೆಯಬೇಕು. ಒಟ್ಟಿನ... ವಿಜ್ಞಾನವು ''ಭವಿಷ್ಯದ ಬಗ್ಗೆ ತಿಳುವಳಿಕೆ ನೀಡುವಲ್ಲಿ ಹೊಸ ಘಟ್ಟ ಮುಟ್ಟಿದೆ'' ಎಂಬುದ... ಸರಿಯಲ್ಲ. ಮೊದಲಿನಿಂದಲೂ ಕೆಲ ವಿಷಯಗಳಲ್ಲಿ ಅದು ಆ ಘಟ್ಟದಲ್ಲೇ ಇದ್ದಿತು... ಭೂಮಿಯ ಅಂತರಾಳದಲ್ಲಿ ಏನು ಘಟಿಸುತ್ತದೆಂದು ತಿಳಿಯಲು ಸಾಧ್ಯವಾಗಿಲ್ಲ. ಒ... ಅಸ್ಟರಾಯ್ಡ್ ಒಂದು ಬಂದು ಭೂಮಿಗೆ ಅಪ್ಪಳಿಸಿದರೆ ಎಷ್ಟು ಅನಾಹುತ ಸಂಭವಿ... ಬಹುದು ? ನೂರಿನ್ನೂರು ವರ್ಷಗಳಿಗೆ ಮುಂಚೆಯೇ ಇಂಥದಿನ ಅಂತಹ ಅಸ್ಟರಾಯ... ಬರಲಿದೆಯೆಂಬುದನ್ನು ತಿಳಿಯಲಾಗುವುದಿಲ್ಲವಲ್ಲ! ಬ್ರಹ್ಮಾಂಡದ ಚರಿತ್ರೆಯ... ಇನ್ನೂರು ವರ್ಷ ಏನೂ ಅಲ್ಲ, ಆದರೆ ನಮಗೆ ಅದು ದೀರ್ಘಕಾಲವೇ ಆಗಿದೆ.

ಹೊ : ಅದು ಸರಿ, ಆದರೆ ವಿಜ್ಞಾನ ಮತ್ತು ಸಮಾಜದ ಅಂತಸ್ಸಂಬಂಧವೇನು ?

ಮೂ : ಮುಂದೆ ಏನು ಸಂಭವಿಸಬಹುದೆಂಬುದು ನಿಖರವಾಗಿ ತಿಳಿದಿದ್ದಾ... ವಿಜ್ಞಾನವು ಅದನ್ನು ಸಮಾಜಕ್ಕೆ ತಿಳಿಸಬಹುದು. ಹುಚ್ಚಾಪಟ್ಟೆ ಆಶ್ವಾಸನೆಗಳನ... ನೀಡಲು ಆಗುವುದಿಲ್ಲ. ಇಲ್ಲಿ 'ನಿಖರ' ಎಂದಾಗ 'ಎಷ್ಟು ನಿಖರ' ಎಂಬ ಪ್ರಶ್ನೆಯು... ಬರುತ್ತದೆ. ಕುಡಂಕುಲಂ ಪರಮಾಣು ರಿಯಾಕ್ಟರ್ ವಿಷಯ ನೋಡಿ: ಅಲ್ಲಿ... ಪ್ರತಿಭಟನೆಗಳ ಹಿಂದೆ ಇರಹುದಾದ ಹುನ್ನಾರಗಳ ಮಾತು ಬೇಡ. ವಸ್ತುನಿಷ್ಠವಾಗಿ...



ರವಾಗಿ, ಹೇಳಬಹುದಾದ್ದೇನು ? ಪರಮಾಣು ಇಂಧನದಿಂದ ದೊರೆಯುವ ದ್ಯುತ್, ಪರಿಸರದ ವಿನಾಶವಿಲ್ಲದೆ ದೊರೆಯುವಂಥದು. ಆದರೆ ಅನಾಹುತ ಭವಿಸುವುದೇ ಇಲ್ಲವೆಂಬ ಆಶ್ವಾಸನೆ ಕೊಡಲಾದೀತೆ ? ಇಲ್ಲ. ಅಂದರೆ ಆಯ್ಕೆ ಮಗೆ ಬಿಟ್ಟದ್ದು, ವಿಜ್ಞಾನವು ಇಂಥದೇ ಆಯ್ಕೆ ಸರಿ ಎಂದು ಹೇಳಲಾರದು. ದಯದ ಸಮಸ್ಯೆ ಇದ್ದರೆ ಆಂಜಿಯೋಪ್ಲಾಸ್ಟಿ ಮಾಡಿಸಿಕೊಳ್ಳಬಹುದಲ್ಲವೆ ? ಆದರೆ ದರಿಂದ ಎಷ್ಟು ಕಾಲ ಪೂರ್ತಿ ಕ್ಷೇಮದಿಂದ ಇರುತ್ತೀರಿ ? ಇಪ್ಪತ್ತು ವರ್ಷ ಎನ್ನೋಣ. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದೆ ಬೇರೆ ಔಷಧಿಗಳನ್ನು ಸೇವಿಸುತ್ತಾ ಹೆಚ್ಚು ಕಡಿಮೆ ಅಷ್ಟೇ ರ್ಷಗಳ ಕಾಲ ಜೀವಿಸಿರಲು ಸಾಧ್ಯವೆಂದಾದರೆ ಆಗೇನು ಹೇಳುವುದು ? ಅಂದರೆ ಖರ'' ಎಂಬುದಕ್ಕೆ ಬೇಕಾದಷ್ಟು ಉಪಾಧಿಗಳಿವೆ. ತೀರ್ಮಾನ ನಿಮ್ಮದು, ಅಷ್ಟೆ. ಥದೇ ಇನ್ನೊಂದು ಸಮಸ್ಯೆ ಜಿ.ಎಂ. ಬೆಳೆಗಳದ್ದು. ಬದನೆಕಾಯಿ, ಹತ್ತಿ ಇತ್ಯಾದಿ. ದು ಕ್ಷೇಮವೆ ? ಹಿಂದೆ ಅದೇ ಹತ್ತಿ ಬೆಳೆಗಳಿಗೆ ಬೆಂಕಿ ಹಚ್ಚಿದ್ದರು, ಈಗ ಅದನ್ನೇ ಳೆಯಲಾಗುತ್ತಿರುವುದು. ನಾಳೆ ಅದಕ್ಕೆ ಇನ್ನೊಂದು ದೊಡ್ಡ ಪಿಡುಗು (ಸೂಪರ್ ಬಗ್) ರುವುದಿಲ್ಲವೆಂದು ಖಾತ್ರಿ ಏನೂ ಇಲ್ಲ. ಮೊದಲಿಗೆ ಪೆನಿಸಿಲಿನ್ ಕಂಡುಹಿಡಿದಾಗ ನುಷ್ಯರ ಖಾಯಿಲೆಗಳಿಗೆಲ್ಲಾ ಮದ್ದು ದೊರಕಿತೆಂಬ ಸಂಭ್ರಮವಿತ್ತು. ಆಮೇಲೇ ಯಿತೆಂಬುದು ತಿಳಿದೇ ಇದೆ. ಬೇರೆ ಬ್ಯಾಕ್ಟೀರಿಯಾಗಳು ಬಂದುವು. ಒಟ್ಟಿನಲ್ಲಿ ಸರು ತಮ್ಮದೇ ಆಯ್ಕೆ ಮಾಡಿಕೊಳ್ಳಬೇಕು. ಲಭ್ಯವಿರುವ ಜ್ಞಾನದ ಆಧಾರದ ಮೇಲೆ ರ್ಮಾನ ಕೈಗೊಳ್ಳಬೇಕು. ರಾಜಕೀಯ ತೀರ್ಮಾನಗಳನ್ನು ಸಹ ವೈಜ್ಞಾನಿಕ ಾರ್ಗದಲ್ಲಿ ಕೈಗೊಳ್ಳಬೇಕು ಎಂಬುದು ಇದರರ್ಥ. ಆಟಂಬಾಂಬುಗಳ ಪ್ರಶ್ನೆಗೂ ದೇ ಉತ್ತರ, ಅಲ್ಲವೆ ? ಅದು ಕೇವಲ ವೈಜ್ಞಾನಿಕ ಕ್ಷೇತ್ರದ ತೀರ್ಮಾನವಾಗಲಾರದು. ಜ್ಞಾನವು ಪರ-ವಿರೋಧ ಎರಡರ ಬಗೆಗೂ ತಿಳುವಳಿಕೆ ನೀಡುತ್ತದೆ. ಅದನ್ನು ತೂಕ ಾಡಿ ಸರಿಯಾದ ರಾಜಕೀಯ ತೀರ್ಮಾನ ತೆಗೆದುಕೊಳ್ಳಬೇಕು, ಅಷ್ಟೆ.

ಹೊ : ಭ್ರೂಣಮಟ್ಟದ ಸ್ಟೆಮ್ ಸೆಲ್ಸ್ ಆಧಾರದಿಂದ ಕಂಡುಕೊಂಡ ವಿಧಾನ ನ್ನು ಪೇಟೆಂಟ್ ಮಾಡಿಕೊಳ್ಳುವಂತಿಲ್ಲವೆಂದು ಯೂರೋಪಿನ ನ್ಯಾಯಾಲಯ ಳಿದೆಯೆಂಬ ವರದಿ ಬಂದಿದೆ. ಹಾಗೆಂದರೆ ಏನು ?

ಮೂ : ತಾಯಿಯ ಗರ್ಭದಲ್ಲಿ ರೂಪು ತಳೆಯುವಾಗ ಆರಂಭದಲ್ಲಿ ನಾವೆಲ್ಲಾ ದೇ ಸೆಲ್ ಹೊಂದಿರುವುದು. ಅದನ್ನು ಸ್ಟೆಮ್ ಸೆಲ್ ಎನ್ನುತ್ತಾರೆ. ಅದರ ಳವಣಿಗೆಯ ಸಾಧ್ಯತೆಗಳು ಅಪಾರ. ಅದರಿಂದ ದೇಹದ ಎಲ್ಲ ಭಾಗಗಳೂ ೂಡುತ್ತವೆ, ಅವುಗಳದೇ ಪ್ರತ್ಯೇಕ ಸೆಲ್‌ಗಳು ಉದ್ಭವಿಸುತ್ತವೆ; ಮಿದುಳು, ಕರುಳು, ತ್ಪಜನಕಾಂಗ, ಹೀಗೆ. ಸ್ಟೆಮ್ ಸೆಲ್‌ಗೆ 'ಟೋಟಿ ಪೋಟೆಂಟ್' (ಸಂಪೂರ್ಣ ಶಕ್ತಿ) ನ್ನುವುದು ಆ ಕಾರಣದಿಂದ. ಮಿದುಳಿನ ಒಂದು ಸೆಲ್ ವಿಭಜನೆಯಾದರೆ ಅದು ನ್ನೊಂದು ಮಿದುಳಿನ ಸೆಲ್, ಅಷ್ಟೆ. ಆದರೆ ಸ್ಟೆಮ್ ಸೆಲ್ ಎಂಬುದು ಬೇರೆಷ್ಟೋ ಧಗಳ ಸೆಲ್‌ಗಳಿಗೆ ಜನಕ. ಅದರ ತಂತ್ರ ತಿಳಿದರೆ ಸ್ಟೆಮ್ ಸೆಲ್‌ನಿಂದ ಶರೀರದ ೇರೆ ಯಾವುದೇ ಭಾಗದ ಸೆಲ್ ಪಡೆದುಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ. ್ಯಕೀಯವಾಗಿ ಇದಕ್ಕೆ ಅದ್ಭುತ ಸಾಧ್ಯತೆಗಳಿವೆ. ಯೂರೋಪಿನಲ್ಲಿ, ಅಮೆರಿಕಾದಲ್ಲಿ, ಸ್ತಧರ್ಮದ ಕೆಲವು ವಿಭಾಗಗಳು ಆ ಬಗೆಗಿನ ಸಂಶೋಧನೆಯನ್ನು ವಿರೋಧಿಸಿವೆ. ು ಸಂಕೀರ್ಣವಾದ ವಿಷಯ, ದ್ವಂದ್ವಗಳಿಂದ ತುಂಬಿದ ವಿಷಯ. ಕುಟುಂಬ



ಯೋಜನೆಗೆ ಅಡ್ಡಿಯಿಲ್ಲ, ಆದರೆ ಸ್ಟೆಮ್ ಸೆಲ್ ಸಂಶೋಧನೆ ಕೂಡದು, ಎಂಬುದು, ದೊಡ್ಡ ವಿರೋಧಾಭಾಸ. ಮತಧರ್ಮದ ನಂಬಿಕೆಗಳು ಅಡ್ಡಿಯುಂಟುಮಾಡಿದರೆ ವೈಜ್ಞಾನಿಕ ಶಿಕ್ಷಣ ಅದಕ್ಕೆ ಪರಿಹಾರ ನೀಡಬೇಕು. ನನ್ನ ಒಬ್ಬ ಕ್ರಿಶ್ಚಿಯನ್ ಸ್ನೇಹಿತ ಔಷಧಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಆತನ ಕಾರಣ ಅದನ್ನು ದೇವರು ಮಾಡಿದ್ದಲ್ಲ ಎಂಬುದು. ಆದರೆ ಔಷಧಿಯೊಳಗಿನ ಸಾಮಗ್ರಿಗಳನ್ನು ಮಾಡಿದ್ದು ದೇವರೇ ಅಲ್ಲವೆ ಎಂದರೆ ಏನು ಉತ್ತರ ನೀಡಿಯಾರು ? ಸ್ಟೆಮ್ ಸೆಲ್ ಮಾಡಿದ್ದು ದೇವರೇ ಆದ್ದರಿಂದ ಆದರ ಬಗೆಗಿನ ಸಂಶೋಧನೆ ಮತ್ತು ಬಳಕೆಯಲ್ಲಿ ತಪ್ಪೇನೂ ಇಲ್ಲವೆಂಬ ಕ್ರಿಶ್ಚಿಯನ್ನರೂ ಇದ್ದಾರೆ.

ಹೊ : ದುರುಪಯೋಗದ ಸಾಧ್ಯತೆ ಇದೆಯೆಂದೇನಾದರೂ ಅದನ್ನು ವಿರೋಧಿಸಿದ್ದಾರೆಯೆ ?

ಮೂ : ಎಲ್ಲದಕ್ಕೂ ಉಪಯೋಗ- ದುರುಪಯೋಗಗಳಿವೆ. ಅದಲ್ಲ ಅವರ ಪ್ರಶ್ನೆ. ಅವರಿಗೆ ಅದು ಮತಧರ್ಮದ ಪ್ರಶ್ನೆ, ನೈತಿಕ ಪ್ರಶ್ನೆ. ವಿಜ್ಞಾನವು ಆದಕ್ಕೆ ಉತ್ತರ ಕೊಡಲಾರದು. ಆಂತರಿಕ ಚರ್ಚೆಗಳಿಂದ ಜನ ಆದಕ್ಕೆ ಉತ್ತರ ಕಂಡುಕೊಳ್ಳಬೇಕು. ವಿಜ್ಞಾನಕ್ಕೆ ಇರುವ ಮೌಲ್ಯವೆಂದರೆ ಸತ್ಯ, ವಾಸ್ತವಿಕ ಪ್ರಪಂಚದ ಸತ್ಯ. ಪ್ರಾಮಾಣಿಕತೆ ಅದರ ಮೂಲ ಲಕ್ಷಣ .

ಹೊ : ಪ್ರಾಚೀನ ಕಾಲದಲ್ಲಿ ಭಾರತವು ಎಲ್ಲ ವೈಜ್ಞಾನಿಕ ಸತ್ಯಗಳನ್ನು ತಿಳಿದಿದ್ದಿತು, ಎಲ್ಲ ಸಾಧನಗಳನ್ನೂ ನಿರ್ಮಿಸಿಕೊಂಡಿತ್ತು, ಎನ್ನುತ್ತಾರಲ್ಲ!

ಮೂ : ನಮ್ಮ ದೇಶದ ಬಗ್ಗೆ ಹೆಮ್ಮೆ ಪಡಲು ಈ ರೀತಿಯ ದೃಷ್ಟಿ ಆಗತ್ಯವಲ್ಲ. ನಮಗೆ ವಿಮಾನವಿದ್ದಿರದಿದ್ದರೂ ಹೆಮ್ಮೆಗೆ ಬೇರೆ ನೂರಾರು ಅಂಶಗಳಿವೆ. ಋಗ್ವೇದದ ನಾಸದೀಯ ಸೂಕ್ತದ ದೃಷ್ಟಿ ಆರೋಗ್ಯಕರವಾದ್ದು, ಅದನ್ನು ಕರಗತ ಮಾಡಿಕೊಳ್ಳಬೇಕು. ಇಲ್ಲದ ಸಂಪತ್ತಿನಿಂದ ತೃಪ್ತಿ ಹೊಂದಬೇಕಾದ ಪ್ರಮೇಯ ನಮಗಿಲ್ಲ.

ಹೊ : ನಿಮ್ಮ ಸಂಶೋಧನೆಗಳಲ್ಲಿ ಪ್ರೊಟೀನ್, ಬ್ಯಾಕ್ಟೀರಿಯಾ, ವೈರಸ್, ಕ್ರಿಸ್ಟಲ್ ಹೀಗೆ ಎಲ್ಲವನ್ನೂ ಅಧ್ಯಯನ ಮಾಡಿದ್ದೀರಿ. ಬ್ಯಾಕ್ಟೀರಿಯಾಗಳ ಮೇಲೆ ಪ್ರಭುತ್ವ ಸಾಧಿಸಿರುವ ಇಂದಿನ ಕಾಲಘಟ್ಟದಲ್ಲಿ...

ಮೂ : ಇಲ್ಲ, ಎಲ್ಲ ಬ್ಯಾಕ್ಟೀರಿಯಾಗಳ ಮೇಲೆ ನಾವಿನ್ನೂ ಹಿಡಿತ ಸಾಧಿಸಿಲ್ಲ...

ಹೊ : ವೈರಸ್‌ಗಳನ್ನು ನಿಯಂತ್ರಿಸುವ ವಿಧಾನವೇನು ? ಅದರಲ್ಲೂ ಕ್ರಿಸ್ಟಲಾಗ್ರಫಿಯ ಪಾತ್ರವಿದೆಯೆ ?

ಮೂ : ಇದೆ, ನೇರವಾಗಿಯೇ ಇದೆ.


ಹೊ : ಹೇಗೆ ? ಅದರ ಸ್ವಭಾವವನ್ನು ಪರಿಷ್ಕರಿಸುವುದರಿಂದಲೇ (ಡೀ-ನೇಚರ್) ?

ಮೂ : ವೈರಸ್‌ಗಳಿಂದ ಉಂಟಾಗುವ ಎಲ್ಲ ಬಾಧೆಗಳಿಗೂ ಔಷಧಿ ಪಡೆಯುವುದರಲ್ಲಿ ಕ್ರಿಸ್ಟಲಾಗ್ರಫಿಯ ಪಾತ್ರ ಹಿರಿದಾಗಿದೆ.

ಹೊ : ಸಾಕಷ್ಟು ಸಮಯ ಕೊಟ್ಟು ಸಹಕರಿಸಿದ್ದೀರಿ. 'ಹೊಸತು' ನಿಮಗೆ ಆಭಾರಿಯಾಗಿದೆ.

ಸಂದರ್ಶನ ಲೇಖನ - **ಡಾ|| ಜಿ. ರಾಮಕೃಷ್ಣ**
[illegible], 'ಪವನ ಪರಂಜ್ಯೋತಿ', ೨೨/೧, ೪ನೇ ಕ್ರಾಸ್, ಕಾವೇರಿನಗರ
[illegible] ಬೆಂಗಳೂರು - ೫೬೦ ೦೮೫

ಹೊಸ ಪ್ರಕಟಣೆಗಳು



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೧. ಬಿಜಾಪುರ ಜಿಲ್ಲೆ : ಅಭಿವೃದ್ಧಿ ಮತ್ತು ದುಸ್ಥಿತಿ ಒಂದು ಅಧ್ಯಯನ — ೮೦.೦೦
ಡಾ. ಟಿ.ಆರ್. ಚಂದ್ರಶೇಖರ್

೨. ನಾಗಮಂಗಲ — ೧೨೦.೦೦
ಸಂ: ಡಾ. ಸಿ. ಮಹದೇವ

೩. ಬಳ್ಳಾರಿ ಜಿಲ್ಲೆಯ ಕೋಟೆಗಳು — ೧೨೦.೦೦
ಡಾ. ಎಂ. ಕೊಟ್ರೇಶ್

೪. **Karnataka Unification A Political Interpretation** — ೨೦೦.೦೦
Dr. K. Raghavendra Rao

೫. ಹಾಡುವಳ್ಳಿ : ಜೈನಶಾಸ್ತ್ರ, ವಾಸ್ತು-ಮೂರ್ತಿಶಿಲ್ಪ — ೧೨೦.೦೦
ಕೆ.ಜಿ. ಭಟ್‌ಸೂರಿ

೬. ಒಳಗನ್ನಡಿ (ಸಮಕಾಲೀನ ಸಮಾಜ ಮತ್ತು ಸಂಸ್ಕೃತಿ ಕುರಿತ ಕನ್ನಡ ಬರಹಗಳು) — ೧೨೦.೦೦
ಸಂ. ಎ.ಆರ್. ವಾಸವಿ

೭. ಹರದೇಶಿ-ನಾಗೇಶಿ ಕಲೆ ಮತ್ತು ಕಲಾವಿದರು : ಲಿಂಗ ಸಂಬಂಧಿ ಅಧ್ಯಯನ — ೨೦೦.೦೦
ಡಾ. ಶೈಲಜ ಹಿರೇಮಠ

೮. ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ ೧ ಮತ್ತು ಸಂಪುಟ ೨ — ೮೦೦.೦೦
ಸಂ : ಡಾ. ಸ.ಚಿ. ರಮೇಶ್

೯. ಹಕ್ಕು-ಹಂಗು : ಅಭಿವೃದ್ಧಿ ಅಧ್ಯಯನದ ಪ್ರಬಂಧಗಳು — ೧೬೦.೦೦
ಡಾ.ಟಿ.ಆರ್. ಚಂದ್ರಶೇಖರ

೧೦. ಸಾರ-ವಿಸ್ತಾರ — ೨೦೦.೦೦
ಡಾ. ಎಚ್. ನಾಗವೇಣಿ

೧೧. ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ — ೧೦೦.೦೦
ಡಾ. ಕರೀಗೌಡ ಬೀಚನಹಳ್ಳಿ

೧೨. ದೇವಾಲಯ ವಾಸ್ತು — ೧೦೦.೦೦
ಎಂ.ಎಸ್. ಪ್ರಭಾಕರ್

೧೩. **Selected Vacanas of Sarvajna** — ೬೦.೦೦
ಅನು. ಡಾ. ಬಸವರಾಜ ನಾಯ್ಕರ್

೧೪. **Selected Poems of Kuvempu** — ೨೦೦.೦೦
ಸಂ. ಡಾ. ದೇಜಗೌ, ಪ್ರಧಾನ ಗುರುದತ್ತ, ಡಾ. ಕರೀಗೌಡ ಬೀಚನಹಳ್ಳಿ

೧೫. ಹಸ್ತಪ್ರತಿ ವ್ಯಾಸಂಗ-೧೦ — ೧೨೦.೦೦
ಸಂ. ಡಾ. ಎಸ್.ಆರ್. ಚನ್ನವೀರಪ್ಪ

೧೬. ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ ಚರಿತ್ರೆ ಸಂಪುಟ ೧ — ೩೫೦.೦೦
ಸಂಪುಟ ಸಂಪಾದಕರು : ವಿಜಯ್ ಪೂಣಚ್ಚ ತಂಬಂಡ, ವಿರೂಪಾಕ್ಷಿ ಪೂಜಾರಹಳ್ಳಿ

೧೭. ಭಾರತ ಉಪಖಂಡದ ಆಧುನಿಕಪೂರ್ವ ಚರಿತ್ರೆ ಚರಿತ್ರೆ ಸಂಪುಟ ೨ — ೩೫೦.೦೦
ಸಂಪುಟ ಸಂಪಾದಕರು: ವಿಜಯ್ ಪೂಣಚ್ಚ ತಂಬಂಡ

೧೮. ಭಾರತ ಉಪಖಂಡದ ಆಧುನಿಕ ಚರಿತ್ರೆ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೩ — ೩೫೦.೦೦
ಸಂಪುಟ ಸಂಪಾದಕರು: ವಿಜಯ್ ಪೂಣಚ್ಚ ತಂಬಂಡ

೧೯. ಏಷ್ಯಾ: ಚರಿತ್ರೆಯ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೪ — ೩೫೦.೦೦
ಸಂಪುಟ ಸಂಪಾದಕರು: ಕೆ. ಮೋಹನ್‌ಕೃಷ್ಣ ರೈ

೨೦. ಯುರೋಪ್: ಚರಿತ್ರೆಯ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೫ — ೩೫೦.೦೦
ಸಂಪುಟ ಸಂಪಾದಕರು: ಕೆ. ಮೋಹನ್‌ಕೃಷ್ಣ ರೈ

೨೧. ಸಮಕಾಲೀನ ಕರ್ನಾಟಕ: ಚರಿತ್ರೆಯ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೬ — ೪೦೦.೦೦
ಸಂಪುಟ ಸಂಪಾದಕರು: ಎಸ್. ಚಿನ್ನಸ್ವಾಮಿ ಸೋಸಲೆ

೨೨. ಆಫ್ರಿಕಾ: ಚರಿತ್ರೆಯ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೭ — ೨೦೦.೦೦
ಸಂಪುಟ ಸಂಪಾದಕರು: ಎಸ್. ಚಿನ್ನಸ್ವಾಮಿ ಸೋಸಲೆ

೨೩. ಅಮೆರಿಕಾ: ಚರಿತ್ರೆಯ ವಿವಿಧ ಆಯಾಮಗಳು ಚರಿತ್ರೆ ಸಂಪುಟ ೮ — ೨೦೦.೦೦
ಸಂಪುಟ ಸಂಪಾದಕರು: ವಿರೂಪಾಕ್ಷಿ ಪೂಜಾರಹಳ್ಳಿ

೨೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧೦ ಬಿಜಾಪುರ ಜಿಲ್ಲೆ — ೬೦೦.೦೦
ಸಂಪುಟ ಸಂಪಾದಕರು: ಡಾ. ದೇವರಕೊಂಡಾರೆಡ್ಡಿ

೨೫. ಸಂಶೋಧನ ಜವಾಬ್ದಾರಿ ದ್ವಿತೀಯ ಮುದ್ರಣ — ೮೦.೦
ಎಂ. ಚಂದ್ರ ಪೂಜಾರಿ

೨೬. ಸಮಾಜ ಸಂಶೋಧನೆ ದ್ವಿತೀಯ ಮುದ್ರಣ — ೧೨೦.೦
ಎಂ. ಚಂದ್ರ ಪೂಜಾರಿ

೨೭. ಕೃಷಿ : ಪಾರಂಪರಿಕ ಜ್ಞಾನ — ೧೨೦.೦
ಸಂ: ಡಾ. ಸ.ಚಿ. ರಮೇಶ್

೨೮. ದಕ್ಷಿಣ ಭಾರತದ ಆಳ್ವಾರರು : ಒಂದು ಅವಲೋಕನ — ೬೦.೦
ಡಾ. ಎನ್.ಕೆ. ರಾಮಶೇಷನ್

೨೯. ದಳವಾಯಿ (ಕುರುಬ ಜನಾಂಗದ ಜೀವಂತ 'ದೇವರು' ಬೀರಪ್ಪ) — ೧೦೦.೦
ಡಾ. ಲಿಂಗದಹಳ್ಳಿ ಹಾಲಪ್ಪ

೩೦. ಕನ್ನಡ ಮೋಡಿಲಿಪಿ : ಸಂರಚನೆ ಮತ್ತು ಸಂವರ್ಧನೆ — ೮೦.೦
ಡಾ. ವೀರೇಶ ಬಡಿಗೇರ

೩೧. ಹಾಲುಮತ ವ್ಯಾಸಂಗ-೩ — ೨೦೦.೦
ಸಂ. ಡಾ. ಎಫ್.ಟಿ. ಹಳ್ಳಿಕೇರಿ

೩೨. ದಿನಕರ ದೇಸಾಯಿ ನೂರು : ನೆನಪು — ೮೦.೦
ಸಂ. ಡಾ. ಅಮರೇಶ ನುಗಡೋಣಿ

೩೩. ಅಧ್ಯಯನದ ವಿಧಿವಿಧಾನಗಳು ದ್ವಿತೀಯ ಮುದ್ರಣ — ೧೨೦.೦
ಸಂ. ಡಾ. ಕೆ. ರವೀಂದ್ರನಾಥ

೩೪. ಮಾತು ತಲೆಯೆತ್ತುವ ಬಗೆ : ಕನ್ನಡ ಸಾಹಿತ್ಯ ಮೀಮಾಂಸೆ ಮೂರನೇ ಮುದ್ರಣ — ೨೦೦.೦
ಸಂ. ರಹಮತ್ ತರೀಕೆರೆ

೩೫. ಓರಿಯರ ಓರಿತನ ಓಂದೇನಾಯಿತು — ೨೦೦.೦
ಡಾ. ವಿಜಯಕುಮಾರ ಎಂ. ಬೋರಟ್ಟಿ

೩೬. **Forest Blossoms and The concrete Jungle** — ೨೫೦.೦
Ed : Dr. K.M. Metry

೩೭. ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು — ೨೫೦.೦
ಸಂ : ಡಾ. ಎನ್. ಚಿನ್ನಸ್ವಾಮಿ ಸೋಸಲೆ

೩೮. ಅಲ್ಲಮಪ್ರಭು ವಚನಗಳು : ಸಾಂಸ್ಕೃತಿಕ ಮುಖಾಮುಖಿ — ೧೨೦.೦
ಸಂ : ಅಮರೇಶ ನುಗಡೋಣಿ

೩೯. ಕನ್ನಡ ಸಾರ್ವಭೌಮತ್ವ : ಕನಸಿನ ಆಯಾಮಗಳು — ೧೦೦.೦
ಸಂ : ಡಾ. ಮಂಜುನಾಥ ಬೇವಿನಕಟ್ಟಿ

೪೦. ಕುವೆಂಪು ಬಿಂಬಿಸಿದ ಆರ್ಥಿಕ ನೆಲೆಗಳು — ೬೦.೦
ಕೆ.ಸಿ. ಚನ್ನಮ್ಮ

೪೧. ಕುಣಬಿಯರು — ೧೦೦.೦
ಹಿ.ಚಿ. ಬೋರಲಿಂಗಯ್ಯ

೪೨. ಹೆಳವರು — ೧೦೦.೦
ಎ.ಎಸ್. ಪ್ರಭಾಕರ

೪೩. ಬುಂಡೆಬೆಸ್ತರು — ೮೦.೦
ಕೇಶವನ್ ಪ್ರಸಾದ್ ಕೆ.

೪೪. ಗೊಂದಲಿಗರು — ೧೨೫.೦
ಗಂಗಾಧರ ದೈವಜ್ಞ

೪೫. ಕರ್ನಾಟಕದ ಬುಡಕಟ್ಟು ಸಮುದಾಯಗಳು — ೧೦೦.೦
ಸಂ. ಡಾ. ತಾರಿಹಳ್ಳಿ ಹನುಮಂತಪ್ಪ

೪೬. ಸುಲಭ ಸಂಜೀವಿನಿ — ೮೦.೦
ಡಾ. ಸತ್ಯನಾರಾಯಣ ಭಟ್ ಪಿ

೪೭. ತುರುಗೋಳ್ ಸಂಕಥನ — ೮೦.೦
ಡಾ. ಡಿ.ವಿ. ಪರಮಶಿವಮೂರ್ತಿ

೪೮. ಕನ್ನಡ ಸಂಶೋಧನೆಯ ವೈಧಾನಿಕತೆಗಳು ಮರುಮುದ್ರಣ — ೧೬೦.೦
ಸಂ. ಡಾ. ಅಮರೇಶ ನುಗಡೋಣಿ

ಮಾರಾಟ ವಿಭಾಗ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ದೂರವಾಣಿ : ೦೮೩೯೪-೨೪೧೩೩೫

ಪುಸ್ತಕಗಳು ದೊರೆಯುವ ಸ್ಥಳ ಹಾಗೂ ಸಂಪರ್ಕ

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ ಮತ್ತು ಪ್ರಸಾರಾಂಗ ಪುಸ್ತಕ ಮಾರಾಟ ಮಳಿಗೆ
ನಂ. ೧ ಹಳೆಯ ಕಾನೂನು ಕಾಲೇಜು ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ, ಬೆಂಗಳೂರು ೫೬೦ ೦೦೯
ದೂರವಾಣಿ : ೦೮೦-೨೨೩೭೩೫೮೮

ಅಪಹರಣ

ಕುಂ. ವೀರಭದ್ರಪ್ಪ

ಅದೊಂದು ದೇಶ ಅಂದರೆ ದೇಶ, ಸಹಸ್ರ ವರ್ಷಗಳಿಂದ ಸ್ಥಗಿತ
ೂಂಡಿರುವ, ಇದ್ದಲ್ಲೆ ಇದ್ದು ಕೊಳೆಯುತ್ತಲೇ ಇರುವ ದೇಶ. ಹಿಂದೆ
ಂದವರನ್ನು ಒದೆಯದ, ಮುಂದೆ ಬಂದವರನ್ನು ಹಾಯದ
ೋಟ್ಯಾಂತರ ಅಮಾಯಕ ಪ್ರಜೆಗಳಿಂದ ತುಂಬಿ ಜೀಕರಿಸುತ್ತಿರುವ ದೇಶ.
ಾಕೆ ತಮ್ಮ ದೇಶಕ್ಕೆ ಈ ಸ್ಥಿತಿ ಒದಗಿರುವುದು ಎಂದು ಹಲವರು ಚಿಂತಿಸಿ
ಂಶೋಧಿಸಿ ಕೆಲವು ತೀರ್ಮಾನಗಳಿಗೆ ಬಂದು ನಿಡುಸುಯ್ದಿರುವುದೂ
ಂಟು. ಅವರೆಲ್ಲರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಹೇಳುವುದಾದರೆ
ೌಗೋಳಿಕವಾಗಿ ಬಡಗಣಕ್ಕಿರುವ ಎತ್ತರೆತ್ತರ ಪರ್ವತ ಸಾಲುಗಳು,
ಡುವಣ, ಮೂಡಣಕ್ಕಿರುವ ಹಲವು ದೇಶಗಳ ಮೇರೆಗಳು ಮತ್ತು
ಂಕಣಕ್ಕಿರುವ ಸಾಗರಗಳು ಸದರಿ ದೇಶ ಒಂದಿಂಚು ಕದಲದಂತೆ ನೋಡಿ
ೊಳ್ಳುತ್ತಿರುವವಂತೆ. ಇಂಥ ಹಲವು ಕಾರಣಗಳಿಂದಾಗಿ ಈ ದೇಶವು
ೌರ್ವಾತ್ಯ, ಪಶ್ಚಿಮಾತ್ಯ ದೇಶಗಳಿಂದ ಆಮದಾಗುವ ಸಮಾಜ ವಿರೋಧೀ
ಟಕ ಸದೃಶ ವಸ್ತುಗಳ ತ್ಯಾಜ್ಯ ಸಂಗ್ರಹಾಲಯವಾಗಿರುವುದಂತೆ, ತ್ಯಾಜ್ಯ
ಸ್ತುಗಳವಲಂಬನದಿಂದಾಗಿ ದೇಶದ ಪ್ರಜೆಗಳು ಸ್ವಾತಂತ್ರ್ಯೋತ್ತರವಾಗಿ
ಸ್ತುಸ್ಥಿತಿ ಕುರಿತಂತೆ ಚಿಂತಿಸದ, ಈ ಕ್ಷಣದ ಬದುಕನ್ನು ಮಾತ್ರ ಬದುಕು
ರುವರಂತೆ, ಹಲವು ಪ್ರಶ್ನೆಗಳಿಗೆ ಉತ್ತರವಾಗಿ ಕರ್ಮಣ್ಯೇವಾಧಿಕಾರಸ್ತೇ
ಂದು ಗೊಣಗುತ್ತಿರುವರಂತೆ. ಆಳುವ ಸರ್ಕಾರಗಳೂ ತಮ್ಮ ದೇಶದ
ಜೆಗಳ ಅಳಲನ್ನು, ಗೊಣಗನ್ನು, ಸ್ಥಗಿತ ಬದುಕನ್ನು ಬಂಡವಾಳವಾಗಿ
ರಿಸಿಕೊಂಡು ಬೇಳೆ ಬೇಯಿಸಿಕೊಳ್ಳುತ್ತಿರುವವಂತೆ, ತಮ್ಮ ಅಪಧಮನಿ,
ಭಿಧಮನಿಗಳು ತಮ್ಮ ಸ್ಥಿತಿಸ್ಥಾಪಕ ಗುಣ ಕಳೆದುಕೊಂಡಿರುವುದರ
ರಿಣಾಮದಿಂದಾಗಿ ದೇಶದಾದ್ಯಂತ ಶಾಖೋಪಶಾಖೆಯಾಗಿ ಹರಡಿರುವ
ಳಚರಂಡಿಗಳು ಸ್ಫೋಟಗೊಳ್ಳಲು ಸದವಕಾಶಕ್ಕೆ ಕಾಯುತ್ತಿರುವವಂತೆ,
ವು ತಮ್ಮ ಅಸ್ತಿತ್ವ ಕಾಪಾಡಿಕೊಳ್ಳುವ ಸಲುವಾಗಿ ದೇಶದ ರಾಜಕಾರಣಿಗಳ,
್ಯಾಪಾರಿಗಳ, ಸುಶಿಕ್ಷಿತರ, ಉದ್ದಿಮೆದಾರರ, ಗುತ್ತಿಗೆದಾರರೊಂದೇ

ಅಲ್ಲದೆ ಸದರಿ ದೇಶದಲ್ಲಿರುವ ಲೇಖಕರ, ಸಮಾಜ ಚಿಂತಕರ, [illegible] ದೇಹಗಳನ್ನು ಹುಡುಕಿಕೊಂಡು ವಲಸೆ ಹೋಗಲಾರಂಭಿಸಿರುವವಂತೆ. ಇಂಥ ಸಂಶೋಧನೆಗಳು ಎಷ್ಟು ಸುಳ್ಳೋ, ಎಷ್ಟು ನಿಜವೋ! ಆದರೆ ಒಂದಂತೂ ಸತ್ಯ, ವರ್ತಮಾನ ಸಂದರ್ಭವನ್ನು ಅವಲೋಕಿಸಿದರೆ ಅದನ್ನು ಪೂರ್ಣ ಸುಳ್ಳೆಂದು ನಿರಾಕರಿಸಲಿಕ್ಕಾಗದು. ಅವರೆಲ್ಲರು. ಇವರೆಲ್ಲರು ಪಯೋರಿಯಾ ಮತ್ತಿತರ ದುರ್ನಾತ ಸಂಬಂಧೀ ಖಾಯಿಲೆಗಳಿಂದ ತಾವು ನರಳುತ್ತಿರುವುದೊಂದೇ ಅಲ್ಲದೆ ತಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿನ ಆಹ್ಲಾದತೆಯನ್ನು ಒಕ್ಕಲೆಬ್ಬಿಸುತ್ತಿರುವುದನ್ನು ನೋಡಬಹುದಾಗಿದೆ.

ದೇಹದಾದ್ಯಂತ ಕುಷ್ಠರೋಗ ಹರಡಿರುವಾಗ ಬರೀ ಕೈಬೆರಳು ಆರೋಗ್ಯಕರವಾಗಿರುವುದು ಹೇಗೆ ಅಸಾಧ್ಯವೋ ಹಾಗೆಯೇ ದೇಶದಾದ್ಯಂತ ಒಳಹೊರಗು ಒಳಚರಂಡಿಗಳು ಉಲ್ಬಣಿಸಿರುವಾಗ, ಕೆರಳಿರುವಾಗ ಅದರ ಅಂಗೋಪಾಂಗಗಳೆನಿಸಿರುವ ರಾಜ್ಯಗಳು ಸುವಾಸನಾಯುಕ್ತವಾಗಿರಲು ಹೇಗೆ ಸಾಧ್ಯ! ದೇಶದ ಎಲ್ಲಾ ರಾಜ್ಯಗಳ ಕಥೆಗಳಿಗಿಂತ ತೆಂಕಣಕ್ಕಿರುವ ರಾಜ್ಯದ ಕಥೆಗೆ ಬರುವುದಾದರೆ! ಅದರ ಹೆಸರು ವಾತಾಪಿ ಎಂದಿರುವುದು, ಇದು ನಿಮಗೆ ವಿಚಿತ್ರವೆನ್ನಿಸಬಹುದು, ಇದು ಹೇಗೆ ಬಂತೆಂಬುದರ ಕುರಿತಂತೆ ಹಲವು ಮರೆತುಹೋದ ಕಥೆಗಳುಂಟು, ಅವುಗಳಲ್ಲಿ ಸಂಬಲರ್ಹವಾದುದೆಂದರೆ ಅದು ಹೀಗಿರುವುದು, ಪುರಾಣ ನಾಮ ಚೂಡಾಮಣಿ ಕಾಲದಲ್ಲಿ ಈ ಪ್ರದೇಶದ ಎಲ್ಲೋ ಒಂದು ಕಡೆ ವಾತಾಪಿ ಎಂಬ ಹೆಸರಿನ ರಾಕ್ಷಸನೊಬ್ಬನಿದ್ದನಂತೆ, ಅವನು ಇಲ್ವಲನ ಸಹೋದರ, ಅವನಿಗೆ ಇರುವ ಎಂಭತ್ನಾಲ್ಕು ಕೋಟಿ ಜೀವರಾಶಿಗಳ ವೇಷ ಧಾರಣ ಮಾಡುವುದು ದೈವಾನುಗ್ರಹದಿಂದ ತಿಳಿದಿತ್ತಂತೆ, ಒಮ್ಮೆ ಹಸಿದಿದ್ದ ಅವನು ಕುರಿಯೊಂದರ ವೇಷ ಧರಿಸಿ ಅನೇಕ ಮಂದಿ ರಾಕ್ಷಸರನ್ನು ತಿಂದು ತೇಗಿದನಂತೆ, ಮಾಂಸ ಮುದ್ದೆ ವೇಷ ಧರಿಸಿದ ಅವನನ್ನು ಮಾಂಸಾಹಾರವೆಂದೇ ಅಪಾರ್ಥ ಮಾಡಿಕೊಂಡ ಅಗಸ್ತ್ಯ ಮುನಿಯು ತಿಂದು ಜೀರ್ಣಿಸಿಕೊಂಡು ಹಸಿವೆಯನ್ನು ಪರಿಹರಿಸಿಕೊಂಡನಂತೆ. ಇಂಥ ಹಿನ್ನಲೆಯಿರುವ ವಾತಾಪಿ ರಾಜ್ಯದಲ್ಲಿನ ಬಹುಪಾಲು ಪ್ರಜಾನಿಕಕ್ಕೆ ಬಗೆಬಗೆಯ ವೇಷ ಧರಿಸಿರುವುದು ಹಾಲು ಕುಡಿದಷ್ಟೆ ಸುಲಭವಾಗಿರುವುದು, ವಂಚನೆ ಸಮಾಜದೊಳಗೆ ಎಷ್ಟೊಂದು ಹಾಸುಹೊಕ್ಕಾಗಿರುವುದೆಂದರೆ ಗಂಡನ ವೇಷದಲ್ಲಿ ಹೆಂಡತಿಯನ್ನು, ಹೆಂಡತಿ ವೇಷದಲ್ಲಿ ಗಂಡನನ್ನು, ಹೆತ್ತವರ ವೇಷದಲ್ಲಿ ಮಕ್ಕಳನ್ನು, ರಾಜಕಾರಣಿಗಳ ವೇಷದಲ್ಲಿ ಪ್ರಜೆಗಳನ್ನು, ಧರ್ಮಾಧೀಶರ ವೇಷದಲ್ಲಿ ಭಕ್ತರನ್ನು, ಗುತ್ತಿಗೆದಾರರ ವೇಷದಲ್ಲಿ ರಾಜ್ಯದ ಸಾರ್ವಜನಿಕ ರಸ್ತೆ, ಕಟ್ಟಡಗಳನ್ನು, ಲೇಖಕರ ವೇಷದಲ್ಲಿ ವಾಚಕರನ್ನು. ಇಂಥ ಎಷ್ಟೋ ಉದಾಹರಣೆಗಳನ್ನು ಕೊಡಬಹುದು.

ವಂಚನೆಗೊಳಗಾದವರೂ ವಂಚನೆಯನ್ನು ಅರಗಿಸಿಕೊಳ್ಳುವುದೂ ಮಾಮೂಲಾಗಿ ಇರುವುದು, ಹೀಗಾಗಿ ಸದರಿ ರಾಜ್ಯದಲ್ಲಿ ವಂಚನೆ ಸರ್ವವ್ಯಾಪಿಯಾಗಿರುವುದು, [illegible] ಇತ್ತೀಚೆಗಂತೂ ಆಡಳಿತಾರೂಢ ಪಕ್ಷಗಳಿಗೆ ರಾಜಕೀಯ ಶಕ್ತಿಯಾಗಿ ಪರಿಣಮಿಸಿರುವುದು. ಅದು ಕೇವಲ ರಾಜಕಾರಣಕ್ಕಷ್ಟೆ ಸೀಮಿತವಾಗಿರದೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ,

ಸಾಹಿತ್ಯಿಕ ಹೀಗೆ ಎಲ್ಲಾ ರಂಗಗಳಿಗೂ ವ್ಯಾಪಿಸಿರುವುದು. ಕಾಲಕ್ರಮೇಣ ಪ್ರಾಲ್ಯ ಗಳ್ಳರ ನಿಜಾವ್ರಭುತ್ವವೆಂಬ ಸುಂದರ ಬೆವರುಮೋಂಬ ಎಲ್ಲೆಂದರಲ್ಲಿ ಕಂಗೊಳಿಸು ತ್ತಿರುವುದು. 'ಅರೆ, ನಮ್ಮ ರಾಜ್ಯ ಹಲವು ಶತಮಾನಗಳ ಹಿಂದೆ ಎಲ್ಲಿತ್ತೋ ಅಲ್ಲಿಯೇ ಇರುವುದಲ್ಲ! ರಾಜ್ಯದ ಮುಗ್ಧಪ್ರಜೆಗಳು ಬಗೆಬಗೆಯ ಆಮಿಷಗಳಿಗೆ ಮರುಳಾಗುವುದನ್ನು ತಮ್ಮ ಬದುಕಿನ ಒಂದು ಭಾಗವನ್ನಾಗಿ ಮಾಡಿಕೊಂಡಿರುವರಲ್ಲ, ಇವರೊಳಗಿನ ಮುಗ್ಧತೆಯನ್ನು ಹೋಗಲಾಡಿಸದಿದ್ದಲ್ಲಿ ತಮ್ಮ ರಾಜ್ಯದ ಉದ್ಧಾರ ಸಾಧ್ಯವಿಲ್ಲ' ಎಂದು ಮುಂತಾಗಿ ಹಲವು ಮುತ್ಸದ್ದಿಗಳು, ಬುದ್ಧಿಜೀವಿಗಳು, ಲೇಖಕರು ಹಲುಬಿರುವುದೂ ಉಂಟು, ಹಲವು ರೀತಿಯಲ್ಲಿ ಸಂಘಟನೆಗೊಂಡು ವಾತಾಪಿ ಯಾದ್ಯಂತ ಹೋರಾಡಿರುವುದೂ ಉಂಟು. ವಂಚನೆಯನ್ನೇ ಜೀರ್ಣಿಸಿಕೊಂಡ ರಾಜಕಾರಣದ ಅಗಸ್ತ್ಯರುಗಳಿಗೆ ಈ ಜುಜುಬಿ ಹೋರಾಟಗಾರರು ಯಾವ ಲೆಕ್ಕ! ವಶೀಕರಣ ವಿದ್ಯೆಯಲ್ಲಿ ಪಾರಂಗತರೆನಿಸಿದ ಕೆಲವು ರಾಜಕಾರಣಿಗಳು ಹೋರಾಟಗಾರರ ಪೈಕಿ ಹಲವರನ್ನು ದೇದೀಪ್ಯಮಾನವಾಗಿ ಹೊಳೆವ ಕುರ್ಚಿಗಳ ಮೇಲೆ ಕೂಡ್ರಿಸಿದ್ದೂ ಅಲ್ಲದೆ ಅವರ ವಿಹಾರಾರ್ಥವಾಗಿ ಕೆಂಪು ತುರಾಯಿ ವಾಹನ ಸೌಲಭ್ಯಗಳನ್ನೂ ಕಲ್ಪಿಸಿ ಜನಪರ ಹೋರಾಟಗಳ ವೀರ್ಯೋತ್ಪಾದನೆಯನ್ನು ಕುಂಠಿತಗೊಳಿಸಿದರು. ಕಾಲಕಳೆದಂತೆ ವಾತಾಪಿಯಲ್ಲಿ ರಾಜಕಾರಣಿಗಳಿಗೂ ಗುತ್ತಿಗೆದಾರರಿಗೂ ನಡುವೆ ಇದ್ದ ಗೆರೆ ಅಳಿಸಿಹೋಯಿತು, ಚುನಾವಣೆ ಎಂಬ ಅಣಕು ವ್ಯವಸ್ಥೆ ಸೃಷ್ಟಿಯಾಯಿತು, ಮತದಾರರು ತಮ್ಮ ಮತಗಳನ್ನು ಚುನಾವಣೆಯ ಸಂದರ್ಭಗಳಲ್ಲಿ ಬಿಕರಿಗಿರಿಸಿ ವಾರೊಪ್ಪತ್ತಿನ ಜೀವನವನ್ನು ನಡೆಸಲಾರಂಭಿಸಿದ ಪರಿಣಾಮವಾಗಿ...

* * *

ಪರೀಕ್ಷಿಸಲಿಕ್ಕೆ ನಿನಗೆ ನಮ್ಮ ವಾತಾಪಿ ರಾಜ್ಯಾನೇ ಬೇಕಿತ್ತೇನು ಪ್ರಭುವೇ ಎಂದು ದೇವರೆದುರು ಪ್ರಜೆಗಳು ಮಮ್ಮಲನೆ ಮರುಗಲಾರಂಭಿಸಿದ್ದಕ್ಕೆ ಕಾರಣಗಳು ಒಂದೇ ಎರಡೇ! ಕಳೆದ ಕೆಲವು ದಿವಸಗಳಿಂದ ಜನರು ಪತ್ರಿಕೆಗಳಲ್ಲಿಣುಕುತ್ತಾರೆ ತಮ್ಮ ಮುಖ್ಯಮಂತ್ರಿಗಳ ನಗುಮುಖದ ಸುಳಿವಿಲ್ಲ. ದೂರದರ್ಶನದ ಪೆಟ್ಟಿಗೆಗಳೆದುರು ಮ್ಲಾನವದನರಾಗಿ ಕುಳಿತು ನಿಟ್ಟಿಸುತ್ತಾರೆ ತಮ್ಮ ಮುಖ್ಯಮಂತ್ರಿಗಳ ನಗುಮು[...] ಸುಳಿವಿಲ್ಲ. ನಮ್ಮ ಸದಾ ನಗುಮುಖದ ಮುಖ್ಯಮಂತ್ರಿಗಳ ಸುಳಿವಿಲ್ಲದಾಗಿರುವುದ[...] ಯಾಕೆಂಬುದು ನಿಮಗೇನಾದರೂ ಗೊತ್ತೇನು ಎಂದು ಅವರಿವರನ್ನು ಕೇಳುತ್ತ[...] ಯಾರಿಂದಲೂ ಸರಿಯಾದ ಮಾಹಿತಿ ದೊರಕುತ್ತಿಲ್ಲ. ನೋಡುನೋಡುತ್ತ, ಕೇ[...] ವಾತಾಪಿ ರಾಜ್ಯದ ಪ್ರಜೆಗಳು ಕಂಗೆಡುತ್ತಲೇ ಹೋದರು. ಇನ್ನು ಮೇಲಾದ[...] ತಮ್ಮೆಲ್ಲರ ಗಂಟುಮುಖಗಳು ಈ ನಿರುಪದ್ರವಿ ಮುಖ್ಯಮಂತ್ರಿಯಿಂದಲಾದ[...] ಸಡಿಲಗೊಳ್ಳಬಹುದೆಂದು ಭಾವಿಸಿ ನೆಮ್ಮದಿ ತಾಳಿದ್ದರು. ಒಂದಲ್ಲಾ ಒ[...] ವಾರ್ತಾಪತ್ರಿಕೆಗಳಲ್ಲಿ ರಾರಾಜಿಸುತ್ತಿದ್ದ ತಮ್ಮ ಹೊಸ ಮುಖ್ಯಮಂತ್ರಿಗಳ ಹಸನ್ಮುಖ[...] ನೋಡುತ್ತ ಮೃಷ್ಟಾನ್ನ ಉಂಡವರಂತೆ ನಿಧನಿಧಾನವಾಗಿ ನೆಮ್ಮದಿಯ ಉ[...] ಬಿಡಲಾರಂಭಿಸಿದ್ದರು, ಕೆಲವು ವರ್ಷಗಳಿಂದ ತಾವು ಯಾವ್ಯಾವ ಕ್ರಿಯೆಗಳ[...] ವಂಚಿತರಾಗಿದ್ದರೋ ಆ ಎಲ್ಲಾ ಕ್ರಿಯೆಗಳನ್ನು ಅನುಭವಿಸಲು ಯಾದೃಚ್ಛಿಕ[...] ಅನುಭವಿಸಲು ಉದ್ಯುಕ್ತರಾಗಿದ್ದರು, ಹೆಂಡತಿಯನ್ನು ತನ್ನ ಹೆಂಡತಿಯೇ ಎ[...] ಗಂಡನೂ, ಗಂಡ ತನ್ನ ಗಂಡನೇ ಎಂದು ಹೆಂಡತಿಯೂ, ಹೆತ್ತವರು ತಮ[...] ಹೆತ್ತವರೇ ಎಂದು ಮಕ್ಕಳೂ, ಮಕ್ಕಳು ತಮ್ಮ ಮಕ್ಕಳೇ ಎಂದು ಹೆತ್ತವರೂ, ಗೆಳೆ[...] ತಮ್ಮ ಗೆಳೆಯರೇ ಎಂದು ಗೆಳೆಯರೂ ನಿಧನಿಧಾನವಾಗಿ ಗುರುತಿಸಲಾರಂಭಿಸಿದ್ದ[...] ವಾತಾಪಿ ತಮ್ಮ ರಾಜ್ಯವೇ ಎಂದು ಸದರಿ ರಾಜ್ಯದ ಪ್ರಜೆಗಳು, ಅರೆ ಇ[...] ತಮ್ಮ ಸಮಾಜ, ಅರೆ ಇದೇ ತಮ್ಮ ನಗರ, ಊರು ಎಂಬ ವಗೈರೆಗಳನ್ನೂ ಸ[...] ಆದರೆ ಈ ತಮ್ಮೆಲ್ಲಾ ಅಭೀಪ್ಸೆಗಳ ಮೇಲೆ ಕಲ್ಲು ಚಪ್ಪಡಿ ಎಳೆಯೋಪಾದಿಯ[...] ಮುಖ್ಯಮಂತ್ರಿಗಳ ನಗುಮುಖದ ಸುಳಿವಿಲ್ಲ. ಎಲ್ಲೂ ಸುಳಿವಿಲ್ಲದಾಗಿರುವು[...] ಕೆಲವು ದಿವಸಗಳಿಂದ ಇನ್ನೇನು ಪುನರ್ ಸಂಘಟನೆಗೊಳ್ಳತೊಡಗಿದ್ದ ಭಾವನೆಗ[...] ಸಂವೇದನೆಗಳು ಪುನಃ ದಿಕ್ಕಾಪಾಲಾಗಲಾರಂಭಿಸಿದ್ದವು. ಆದರೆ ಈ ಎಲ್ಲ[...] ಭಾವನೆಗಳ ವಹಿವಾಟು ಕೇವಲ ಸಾಮಾಜಿಕರಿಗಷ್ಟೆ ಸೀಮಿತಗೊಂಡಿ[...] ಆಡಳಿತಾಂಗಕ್ಕೂ ವ್ಯಾಪಿಸಿತ್ತು.

ಅಯ್ಯೋ ಪ್ರಜೆಗಳು ದಿನಿಸು ಖರೀದಿಸುವ ಸಲುವಾಗಿ ತಮ್ಮಲ್ಲಿಗೆ ಬರುತ್ತಿಲ್ಲವ[...]


ಂದು ಪಡಿತರ ಅಂಗಡಿಗಳ ಮಾಲಕರೂ, ಅಯ್ಯೋ ಪಹಣಿ ವಗೈರೆಗಳ ಸಲುವಾಗಿ ಮ್ಮಲ್ಲಿಗೆ ಬರುತ್ತಿಲ್ಲವಲ್ಲಾ ಎಂದು ಕಂದಾಯ ಇಲಾಖೆಗಳ ಅಧಿಕಾರಿಗಳೂ, ಅಯ್ಯೋ ೋಗಗಳ ಚಿಕಿತ್ಸೆ ಸಲುವಾಗಿ ತಮ್ಮಲ್ಲಿಗೆ ಬರುತ್ತಿಲ್ಲವಲ್ಲಾ ಎಂದು ಆರೋಗ್ಯ ಲಾಖೆಯವರೂ, ಅಯ್ಯೋ ಸಣ್ಣಪುಟ್ಟ ದೂರುಗಳನ್ನು ನೀಡುವ ಸಲುವಾಗಿ ್ರಜೆಗಳು ತಮ್ಮಲ್ಲಿಗೆ ಬರುತ್ತಿಲ್ಲವಲ್ಲಾ ಎಂದು ಪೊಲೀಸ್ ಇಲಾಖೆಯವರೂ, ಅಯ್ಯೋ ಮಗೆ ಪುನರ್ವಸತಿ, ಗಂಜಿ ಇತ್ಯಾದಿ ಕಲ್ಪಿಸಿ ಎಂದು ಅಲವತ್ತುಕೊಳ್ಳುವ ಲುವಾಗಿಯಾದರೂ ತಮ್ಮಲ್ಲಿಗೆ, ತಮ್ಮ ವೃದ್ಧಾಪ್ಯ ಪಿಂಚಣಿ ಸಲುವಾಗಿ ತಮ್ಮಲ್ಲಿಗೆ, ಂಚ ನೀಡುವ ಸಲುವಾಗಿಯಾದರೂ ತಮ್ಮಲ್ಲಿಗೆ! ವಾತಾಪಿ ರಾಜ್ಯದ ಆಡಳಿತ ್ಯವಸ್ಥೆ ನಿಧನಿಧಾನವಾಗಿ ಸ್ಥಗಿತಗೊಳ್ಳಲಾರಂಭಿಸದೆ ಇರಲಿಲ್ಲ. ಆದರೆ ಚೂರುಪಾರು ಂವೇದನೆಗಳನ್ನು ಕಳೆದುಕೊಳ್ಳದ ಸೂಕ್ಷ್ಮಸಂವೇದನಾಶೀಲ ಮನಸ್ಸುಗಳು, ಲವು ಪತ್ರಿಕೆಗಳು, ಕೆಲವು ರಾಜಕಾರಣಿಗಳು, ಕೆಲವು ಲೇಖನಿಗಳು, ಕೆಲವು ಿಂತನಾಶೀಲರು, ಮನಶ್ಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಜನಪರ ಕಾಳಜಿ ಉಳ್ಳವರು ಾಜ್ಯದ ಹಲವು ಕಡೆ ಉಳಿದುಕೊಂಡಿದ್ದರಷ್ಟೆ. ತಾವು ಬದುಕುತ್ತಿರುವ ಸಮಾಜದಲ್ಲಿ ಯಾಕೋ ನಿರಾಸಕ್ತಿ ಗೋಚರಿಸುತ್ತಿರುವುದಲ್ಲ ಎಂದು ಸಂದೇಹ ತಾಳಿದರು. ತಮ್ಮಷ್ಟಕ್ಕೆ ಾವೆ ಹಗಲಿರುಳೆನ್ನದೆ ಶ್ರಮಿಸಿ ಸರ್ವೇ ನಡೆಸಿ ಒಂದು ನಿರ್ಣಯಕ್ಕೆ ಬಂದರು. ಮೊನ್ನೆ ಾನೆ ಸನ್ಮಾನ್ಯ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡಿರುವ ಶ್ರೀಯುತ ಕಮಲಾನಂದ ರ್ಕಿಕೋಡಿಯವರನ್ನು ನೆನಪು ಮಾಡಿಕೊಂಡರು. ಶ್ರೀಯುತರ ನೇರ ಪರಿಚಯ ಮಗಿಲ್ಲದಿದ್ದರೂ ಅವರ ಹಸನ್ಮುಖದ ಪರಿಚಯ ತಮಗಿಲ್ಲದಿಲ್ಲ. ಸೂತಕ ಂದರ್ಭವನ್ನೂ ನಗುನಗುತ್ತಲೇ ಆಸ್ವಾದಿಸುವ ಕಾರಣಕ್ಕೆ ಅವರು ಅಚ್ಚರಿಯ ಹಾಗೂ ಪರೂಪದ ವ್ಯಕ್ತಿ. ಅಧಿಕಾರದ ಚುಕ್ಕಾಣಿ ಹಿಡಿದೊಡನೆ ಪತ್ರಕರ್ತರು ಅವರನ್ನು ಾಜ್ಯದ ಜನತೆಗೆ ನಿಮ್ಮ ಸಂದೇಶವೇನು ಎಂದು ಕೇಳಿದ್ದಕ್ಕೆ ಅವರು ನಗುನಗುತ್ತಲೆ ನಮ್ಮ ಪ್ರಜೆಗಳು ಸದಾ ಸಂತೋಷದಿಂದ ನಗುನಗುತ್ತಿರಬೇಕೆನ್ನುವುದೇ ನನ್ನ ಆಸೆ, ಮ್ಮ ವಾತಾಪಿ ರಾಜ್ಯ ಹಲವು ಶತಮಾನಗಳ ಹಿಂದೆ ನಗುವುದಕ್ಕೆ ಹೆಸರಾಗಿತ್ತು, ಂತೋಷ ಇಲ್ಲಿಂದ ಇನ್ನಿತರೇ ರಾಜ್ಯಗಳಿಗೆ ರಫ್ತಾಗುತ್ತಿತ್ತು ಎನ್ನುವುದಕ್ಕೆ ತಿಹಾಸದುದ್ದಕ್ಕೂ ಪುರಾವೆಗಳಿವೆ, ಈ ಪ್ರದೇಶದಲ್ಲಿ ಸಂತೋಷ ಯಥೇಚ್ಛವಾಗಿದ್ದುದರಿಂದಾಗಿಯೇ ಬ್ರಿಟಿಷರು ತಮ್ಮ ವಸಾಹತನ್ನಿಲ್ಲಿ ಸ್ಥಾಪಿಸಿದರು ಂಬುದನ್ನು ಮರೆಯಬಾರದು. ತಮ್ಮ ಪಕ್ಷ ರಾಜ್ಯದಲ್ಲಿ ನಗೆಯನ್ನು, ಂತೋಷವನ್ನು ಪುನರುಜ್ಜೀವನ ಗೊಳಿಸಲು ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಮ್ಮಿಕೊಳ್ಳುವುದು'' ಎಂದು ಹೇಳಿದ್ದುಂಟು. ಅದರಿಂದ ತುಸು ನಕ್ಕ ತ್ರಕರ್ತನೋರ್ವ ''ಆದರೆ ಹಿಂದಿನ ಮುಖ್ಯಮಂತ್ರಿಗಳ ಆಡಳಿತಾವಧಿಯಲ್ಲಿ ಂತೋಷದ ಉತ್ಪಾದನೆ ಸಂಪೂರ್ಣ ಸ್ಥಗಿತಗೊಂಡಿರುವುದಲ್ಲವೆ! ಅದನ್ನು ಹೇಗೆ ರಿಪಡಿಸುವಿರಿ!'' ಎಂದು ಕೇಳಿದ್ದಕ್ಕೆ ಶ್ರೀಯುತರು ''ಎಲ್ಲಾ ಗೊತ್ತಿದ್ದೂ ಇಂಥ ಪ್ರಶ್ನೆ ೇಳುತ್ತಿರುವಿರಲ್ಲ! ನಮ್ಮ ಸನ್ಮಾನ್ಯ ಸಿದ್ದಪ್ಪಾಜಿಯವರು ಇದಕ್ಕೆ ಕಾರಣ ಹೇಗಾದಾರು, ಲ್ಲಿದ್ದಲು ಗಣಿಗಳಿರುವುದು ಪಕ್ಕದ ರಾಜ್ಯದಲ್ಲಿ ಎಂಬುದನ್ನು ಮರೆಯಬೇಡಿರಿ, ಲ್ಲಿಂದ ನಿಗದಿತ ವೇಳೆಗೆ ಸರಿಯಾಗಿ ಕಲ್ಲಿದ್ದಲು ಪೂರೈಕೆಯಾಗಿದ್ದಲ್ಲಿ ಸಂತೋಷದ ುತ್ಪಾದನೆಯಲ್ಲಿ ವ್ಯತ್ಯಯವಾಗುತ್ತಿರಲಿಲ್ಲ, ನಮ್ಮ ರಾಜ್ಯದ ಗಂಟು ಮುಖಕ್ಕೆ ರೋಧ ಪಕ್ಷದವರ ಷಡ್ಯಂತ್ರವೇ ಕಾರಣ, ಇದರ ಹಿಂದೆ ಕೇಂದ್ರ ಸರ್ಕಾರದ ತೂರೀಸೂ ಇದೆ'' ಎಂದು ದೆಹಲಿಯ ಮೇಲೆ ಹರಿಹಾಯ್ದರು. ಅದಕ್ಕೆ ಇನ್ನೊಬ್ಬ ಲಾಡಿ ಪತ್ರಕರ್ತ ''ಕೇಂದ್ರ ಸರ್ಕಾರ ನೆರವಿನ ಹಸ್ತ ಚಾಚದಿದ್ದಲ್ಲಿ ನಗೆಯ ುತ್ಪಾದನೆಗೆ ಯಾವ್ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳುವಿರಿ'' ಎಂದು ಕೇಳಿದ್ದಕ್ಕೆ ೀಯುತರು ''ಪ್ರಜೆಗಳ ಆತ್ಮವಿಶ್ವಾಸದ ಮೇಲೆ ನಮ್ಮ ಸರ್ಕಾರಕ್ಕೆ ನಂಬಿಕೆ ಇದೆ, ಗುವುದಕ್ಕೆ ಬಡವ ಬಲ್ಲಿದ ಎಂಬ ಭೇದ ಭಾವ ಇರಕೂಡದು, ಅದರಲ್ಲೂ ಷ್ಟದಲ್ಲಿದ್ದವರು ನಗಲಿಕ್ಕೆ ನಮ್ಮ ಸರ್ಕಾರ ಎಲ್ಲಾ ರೀತಿಯ ಸವಲತ್ತುಗಳನ್ನು ಕಲ್ಪಿಸಲಿದೆ, ಚ್ಚು ಸಂತೋಷದಲ್ಲಿರುವವರಿಗೆ, ನಗುವನ್ನು ಜನಪ್ರಿಯಗೊಳಿಸುವವರಿಗೆ ೂಕ್ತ ಬಹುಮಾನ ನೀಡಿ ಗೌರವಿಸುವ ಯೋಜನೆ ಸರ್ಕಾರದ ಮುಂದಿದೆ, ಾಧ್ಯಮ ಮಿತ್ರರ ಸಹಕಾರ ಮುಖ್ಯ'' ಎಂದು ಹೇಳಿ ಗಹಗಹಿಸದೆ ನಕ್ಕರು. ೆದೆರಡು ತಿಂಗಳ ತಮ್ಮ ಆಡಳಿತಾವಧಿಯಲ್ಲಿ ಮುಖ್ಯಮಂತ್ರಿಗಳು ನಗುವಿಗೆ ಂಬಂಧಿಸಿದಂತೆ ಹಲವು ಯೋಜನೆಗಳನ್ನು ಪ್ರಕಟಿಸಿದರು. ಎಲ್ಲಾ ಭಾಗಗಳಲ್ಲಿ ಶಸ್ತಿಗಳು ಇರುವವೆಂದ ಮೇಲೆ ನಗುವಿಗೂ ಒಂದು ಪ್ರಶಸ್ತಿ, ನಗುವನ್ನು ಂಕ್ರಾಮಿಕಗೊಳಿಸುವ ಸಲುವಾಗಿ, ವಿವಿಧ ನಗೆಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವ ಸಲುವಾಗಿ ಒಂದು ವಿಶ್ವವಿದ್ಯಾಲಯ ಯಾಕಿರಬಾರದೆಂದು ಯೋಚಿಸಿದ ಶ್ರೀಯುತರ ಜಾಣ್ಮೆಯನ್ನು ಪ್ರಶಂಸಿಸಲೇಬೇಕು. ತಾವು ನುಡಿದಂತೆ ನಡೆಯುವವರು ಎಂಬುದನ್ನು ನಿರೂಪಿಸುವ ಸಲುವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ನಗು ಅಧ್ಯಯನ ಪೀಠ ಸ್ಥಾಪಿಸಿದ್ದೂ ಅಲ್ಲದೆ ಒಂದು ಲಕ್ಷ ಮೌಲ್ಯದ 'ನಗೆ ರತ್ನ' ಎಂಬ ಹೆಸರಿನ ಪ್ರಶಸ್ತಿಯನ್ನೂ ಘೋಷಿಸದೆ ಇರಲಿಲ್ಲ ಶ್ರೀಯುತರು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಗೆಗೆ ಸಂಬಂಧಿಸಿದಂತೆ ಮುಮಂಗಳು ತಮ್ಮ ಪಕ್ಷದ ಭಿನ್ನಮತೀಯರಿಗೆಂದೇ ನಗೆಗೆ ಸಂಬಂಧಿಸಿದ ಸಚಿವಾಲಯವನ್ನು ಸ್ಥಾಪಿಸಿದರಾದರೂ ಆ ಖಾತೆಯನ್ನು ಅಲಂಕರಿಸಲಿಕ್ಕೆ ಯಾರೊಬ್ಬರೂ ಮುಂದೆ ಬರಲಿಲ್ಲ. ಅಂಗಲಾಚಿದ್ದಕ್ಕೆ ಭಿನ್ನಮತೀಯ ಮುಖಂಡ ಕೆಂಡಗಣ್ಣಪ್ಪ ''ಅದರಿಂದ ನಮಗೇನು ಲಾಭ ಸ್ವಾಮಿ, ಅದೇನು ಲೋಕೋಪಯೋಗಿ ಇಲಾಖೆಯೆ! ಪ್ರಜೆಗಳ ಸಂತೋಷಕ್ಕಿಂತ ಸಚಿವ ಸಂಪುಟದ ಸಹೋದ್ಯೋಗಿಗಳು ಸಂತೋಷವಾಗಿರುವಂತೆ ನೋಡಿಕೊಳ್ಳೋದು ಮುಖ್ಯಮಂತ್ರಿಗಳಾದ ನಿಮ್ಮ ಕರ್ತವ್ಯ ಸ್ವಾಮಿ'' ಎಂದು ಖಡಾಖಂಡಿತವಾಗಿ ನಿರಾಕರಿಸಿದ ವರದಿ ಮಾಧ್ಯಮಗಳಲ್ಲಿ ಪ್ರಕಟವಾಯಿತು.

ದೇವತೆಗಳು ಪ್ರೀತಿಪೂರ್ವಕವಾಗಿ ನೀಡಿದ ವಿಷವನ್ನು ತನ್ನ ಗಂಟಲಲ್ಲಿರಿಸಿಕೊಂಡು ಶಿವ ನೀಲಕಂಠನೆಂಬ ಅಭಿದಾನಕ್ಕೆ ಪಾತ್ರನಾದ ಉದಾಹರಣೆಯನ್ನೇ ಆದರ್ಶವಾಗಿ ಪರಿಗಣಿಸಿದ ಮುಮಂಗಳು ಹನ್ನೊಂದರ ಪೈಕಿ ಇನ್ನೊಂದಾಗಿ ಆ ಖಾತೆಯನ್ನೂ ತಮ್ಮ ಬಳಿ ಇರಿಸಿಕೊಂಡು ಜವಾಬ್ದಾರಿಯುತವಾಗಿ ನಿಭಾಯಿಸತೊಡಗಿದರು. ಆ ಯೋಜನೆ ನಾಡಿನಾದ್ಯಂತ ಜನಪ್ರಿಯಗೊಳ್ಳಲಿಕ್ಕೆ ಸ್ವತಃ ತಾವೇ ಕಾರಣ. ಅವರ ಬಾಡಿಲ್ಯಾಂಗ್ವೇಜೇ ಹಾಗಿತ್ತಲ್ಲವೆ! ಅವರು ಸ್ವತಃ ನಗುವುದು ಒತ್ತಟ್ಟಿಗಿರಲಿ, ಅವರನ್ನು ನೋಡಿದವರು ನಗದೆ ಇರುತ್ತಿರಲಿಲ್ಲ ಬೇರೆ. ಶ್ರೀಯುತರು ಕಳೆದೆರಡು ಮೂರು ತಿಂಗಳ ಅವಧಿಯಲ್ಲಿ ಸುಮಾರು ಎರಡು ನೂರಕ್ಕೂ ಹೆಚ್ಚು ಸಾರ್ವಜನಿಕ ಸಮಾರಂಭ ಗಳಲ್ಲಿ ಭಾಗವಹಿಸಿರಬಹುದು. ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ನಗೆಯನ್ನು ತಮ್ಮ ಮೂಲಕ ಸಾಂಕ್ರಾಮಿಕಗೊಳಿಸಿದ ಬಳಿಕವೇ, ಪ್ರಜೆಗಳು ನಗೆಗಡಲಲ್ಲಿ ಮುಳುಗಿ ಮೈಮರೆತಿರುವಾಗಲೇ ತಮ್ಮ ಭಾಷಣವನ್ನು ಚಿಕ್ಕದಾಗಿ ಚೊಕ್ಕವಾಗಿ ಮುಗಿಸಿ ಪ್ರಶಂಸೆಯನ್ನೂ, ಸುದೀರ್ಘ ಕರತಾಡನವನ್ನೂ ಗಿಟ್ಟಿಸದೆ ಇರುತ್ತಿರಲಿಲ್ಲ. ಮುಖ್ಯಮಂತ್ರಿಗಳಾಗುವುದಕ್ಕೂ ಮೊದಲು ಶ್ರೀಯುತ ಕರ್ಕಿಕೋಡಿಯವರ ಬಗ್ಗೆ ಆಡಳಿತ ಪಕ್ಷದವರಿಗಾಗಲೀ, ವಿರೋಧಿ ಪಕ್ಷದವರಿ ಗಾಗಲೀ ಸಕಾರಾತ್ಮಕ ಅಭಿಪ್ರಾಯವಿರಲಿಲ್ಲ. ಅಳುವ ಗಂಡಸನ್ನು ನಂಬಬಾರದು, ನಗುವ ಹೆಂಗಸನ್ನು ನಂಬಬಾರದು ಎಂಬ ಗಾದೆ ಮಾತಿನ ಮೇಲೆ ಅಪಾರ ನಂಬಿಕೆ ಇರಿಸಿದ್ದ ಶ್ರೀಯುತ ಸಿದ್ಧಾರೂಢರು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವಾಗ, ಅದನ್ನು

ಹಸ್ತಾಂತರಿಸುವಾಗ ಅವರ ಕಿವಿಯಲ್ಲಿ ತಮ್ಮ ಬಾಯಿಯನ್ನೂ, ಬಾಯಿಗೆ ತಮ್ಮೆಡಗೈಯನ್ನು ಇರಿಸಿ ತೀರಾ ಮೆಲ್ಲಗೆ "ರ್ರೀ ಕರ್ಕಿ... ನಮ್ಮ ಯೋಜನೆಗಳನ್ನು ಚಾಚೂ ತಪ್ಪದೆ ಜಾರಿಗೊಳಿಸಿ, ರಾಜ್ಯದ ಪ್ರಜೆಗಳ ಹುಬ್ಬುಗಳು ಅವರವರ ಕ್ರಾಪಿನಲ್ಲಿ ಅಂತರ್ಧಾನವಾಗಿರುವುದರ ನೇಪಥ್ಯದಲ್ಲಿ ನಮ್ಮ ಚಾಣಾಕ್ಷತನ ಮತ್ತು ನಾಡಿನ ಎಲ್ಲಾ ಮಠಾಧೀಶರ ಆಶೀರ್ವಾದವಿದೆ ಎಂಬುದನ್ನು ಮರೆಯಬೇಡಿ. ಅವು ಸಹಜ ಸ್ಥಿತಿಗೆ ತಲುಪದಂತೆ ನೋಡಿಕೊಳ್ಳುವ ಹೊಣೆ ನಿಮ್ಮದು, ಇನ್ನೊಂದು ಮುಖ್ಯವಾದ ಮಾತು, ನೀವು ನಿಮ್ಮ ಆಡಳಿತಾವಧಿಯಲ್ಲಿ ದುಃಖಕ್ಕೆ ಸಂಬಂಧಿಸಿದ ಸಂವೇದನೆಗಳನ್ನು ಎಷ್ಟು ಸಾಧ್ಯವೋ ಅಷ್ಟು ಸೃಷ್ಟಿಸುವುದು ಮುಖ್ಯ. ವಾತಾಪಿರಾಜ್ಯದ ಪ್ರಜೆಗಳು ಹಗಲಿರುಳು ನಮ್ಮನ್ನು ಕನವರಿಸುತ್ತಿರುವುದು ತೀರಾ ಮುಖ್ಯ, ಹ್ಞಾಂ! ಅಂದ ಹಾಗೆ ಇನ್ನೊಂದು ಮಾತು, ಯಾವುದೇ ಯೋಜನೆಯನ್ನು ಜಾರಿಗೊಳಿಸುವುದಕ್ಕೂ ಮುನ್ನ ನಮ್ಮ ಅನುಮತಿ ಪಡೆಯಬೇಕು ಎಂಬುದನ್ನು ಮರೆಯಬೇಡಿ, ಮರೆತಿರೆಂದರೆ ನಿಮ್ಮನ್ನ ಕಾಪಾಡಲು ನಾವೇ ಬರಬೇಕೇ ಹೊರತು ಯಾವ ದೇವರೂ ನಿಮ್ಮ ನೆರವಿಗೆ ಬರೋದಿಲ್ಲ" ಎಂದು ಮುಂತಾಗಿ ಸಲಹೆ ನೀಡದೆ ಇರಲಿಲ್ಲ.

ಹೌದು! ಕಡಿಮೆ ಓದಿಕೊಂಡಿರುವ ಅವರ ಆಶೀರ್ವಾದವಿರದಿದ್ದಲ್ಲಿ ಹೆಚ್ಚು ಓದಿಕೊಂಡಿರುವ ಇವರಿಗೆ ರಾಜ್ಯದ ಪ್ರಥಮ ಪ್ರಜೆಯ ಸ್ಥಾನಮಾನ ದೊರೆಯುತ್ತಿರಲಿಲ್ಲ. ಅಧಿಕಾರ ವಹಿಸಿಕೊಂಡ ಆರಂಭದ ದಿನಗಳಲ್ಲಿ ಶ್ರೀಯುತ ಕರ್ಕಿಕೋಡಿಯವರು ಯಾವುದೇ ಹೊಸ ಯೋಜನೆಗೆ ಶ್ರೀಕಾರ ಹಾಕುವ ಉಸಾಬರಿಗೆ ಹೋಗಿರಲಿಲ್ಲ, ಅಲ್ಲದೆ ತಮ್ಮ ಅಭಿಜಾತ ನಗುಮುಖವನ್ನು ಅಗತ್ಯಕ್ಕಿಂತ ಹೆಚ್ಚು ಹ್ರಸ್ವಗೊಳಿಸಿ



ಕೊಂಡಿದ್ದರು, ಆದರೆ ಮಾಜಿ ಮುಖ್ಯಮ ಸಿದ್ಧಾರೂಢರು ತಮ್ಮ ಕುಟುಂಬ ಸದಸ್ಯರ, ಮಠಾಧೀ ಇಚ್ಛೆಗೆ, ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಜೈಲು ಸೆ ಬೇಕಾಯಿತು. ಇದು ವರ್ತಮಾನ ರಾಜಕಾರ ವ್ಯಂಗ್ಯ, ದುರಂತ ಎಂದು ಪ್ರತಿಕ್ರಿಯಿಸಿದ ಕರ್ಕಿಯವ ಒಳಗೊಳಗೆ ಸಂತೋಷಿಸದೆ ಇರಲಿಲ್ಲ, ಅಲ್ಲದೆ ತ ಧರ್ಮಪತ್ನಿಯವರು ಆ ರಾತ್ರಿ...

"ನಮ್ಮ ರಾಜ್ಯದ ಪ್ರಜೆಗಳ ಮತ್ತು ನಿಮ್ಮ ಮು ನೋಡಿದರೆ ಅಯ್ಯೋ ಅನ್ಸುತ್ತೆ ಕಣ್ರೀ, ನೀ ಸಂತೋಷವಾಗಿರ್ರಿ, ಪ್ರಜೆಗಳನ್ನೂ ಸಂತೋಷವಾಗಿ ಹೇಗೋ ಪ್ರಾರಬ್ಧ ತುರಂಗವಾಸ ಅನುಭವಿಸುತ್ತಿ ವುದಲ್ಲ" ಎಂದು ಉಪಯುಕ್ತ ಸಲಹೆ ನೀಡಿದ್ದ ಅದು ಸರಿ ಎನ್ನಿಸಿ ಹಾಲಿಗಳು ಸನ್ಮಾನ್ಯ ಮಾಜಿಯವರ ಕಾರಾಗೃಹದಲ್ಲಿ ಭೆಟ್ಟಿ ಮಾಡಿ ಕೇಳಿದ್ದಕ್ಕೆ ಶ್ರೀಯುತರು...

"ನಿಮ್ಮ ತಲೇಲಿ ಬುದ್ಧಿ ಇದೆ ಏನ್ರಿ! ಪ್ರಜೆಗ ಸಂತೋಷವಾಗಿದ್ರೆ ನಮ್ಮ ಪಕ್ಷ ಐದು ವರ್ಷ ಆಡ ನಡೆಸೋದು ಅಸಾಧ್ಯ. ಅವರನ್ನು ಎ ಹೇಗಿಡಬೇಕೋ ಅಲ್ಲಲ್ಲಿ ಹಾಗೇ ಇಡಬೇಕು, ಅದಕ್ಕಾಗಿ ನಾವೂ, ನ ಸಹೋದ್ಯೋಗಿಗಳೂ, ನಾಡಿನ ಬಹುತೇಕ ಮಠಾಧೀಶರು ಎಷ್ಟು ಶ್ರ ವಹಿಸಿದ್ದೀವಂತ ನಿಮಗೇನು ಗೊತ್ತು! ಅಧಿಕಪ್ರಸಂಗತನವನ್ನು ಕೈಬಿಡಿ, ನಾ ಜೈಲಿನಲ್ಲಿರೋದರಿಂದ ರಾಜ್ಯದಾದ್ಯಂತ ಸೂತಕ ವಾತಾವರಣ ಇರುವ ನೋಡಿಕೊಳ್ಳಿ ಮೊದಲು" ಎಂದು ಖಾರವಾಗಿ ಹೇಳಿದರು. ಅದಕ್ಕೆ ಕರ್ಕಿಯವರು.

"ಹ್ಞ... ಹ್ಞ... ನಾನೀಗ ಮಾಡ್ತಿರೋದು ಅದನ್ನೆ ಸಾರ್" ಅಂದರು.

"ಮೊದಲು ನೀವು ನಗದೆ ಇರೋದು ಮುಖ್ಯ, ನಿಮ್ಮ ಮುಖದಲ್ಲೇ

ಂಚೂರು ಬೇಸರ ದುಃಖ ಇಲ್ವಲ್ರೀ'' ಎಂದು ಮಾಜಿಗಳು ದಿಟ್ಟಿಸಿ ನೋಡುತ್ತ ಳಿದ್ದಕ್ಕೆ ಹಾಲಿಯವರು...

''ನಗೋದು ನಮ್ಮ ಫ್ಯಾಮಿಲೀಲಿ ಬೇಸಿಕ್ ಇನ್‌ಸ್ಟಿಂಕ್ಟು ಸಾರ್, ಇದು ನನ್ಗೆ ಸ್ ಪಾಯಿಂಟೂ ಹೌದು, ಮೈನಸ್ ಪಾಯಿಂಟೂ ಹೌದು ಸಾರ್, ನನ್ನ ಮುಖದ ಕ್ಚರ್ರೇ ಹಾಗಿದೆ'' ಎಂದು ಹೇಳುತ್ತ ಮ್ಲಾನವದನರಾದರು. ಅದಕ್ಕೆ ಪ್ರತಿಯಾಗಿ ಾಜಿಯವರು ಕ್ಷಕಿರಣ ಬೀರಿದಾದ ಬಳಿಕ.

''ಅದ್ಕೆ ನೋಡಿ ನೀವಲ್ಲೇ ಇರೋದು. ನಾವಿಷ್ಟು ಮೇಲೆ ಬರೋದ್ಕೆ ಮ್ಮ ಗಂಟುಮುಖವೇ ಕಾರಣ ಕರ್ಕಿಯವರೆ. ನಮ್ಮ ಮುಖ ನೋಡಿದೊಡನೆ ನಮ್ಮ ಕ್ಷದವರೊಂದೇ ಅಲ್ಲ, ವಿರೋಧ ಪಕ್ಷದವರೂ ಹೆದರ್ತಾರೆ ನ್ರೇ, ಕೂಡಲೆ ನೀವು ಉಗಾಂಡಾಕ್ಕೋ, ಕ್ಯೂಬಾಕ್ಕೋ ಹೋಗಿ ಮುಖಕ್ಕೆ ಪ್ಲಾಸ್ಟಿಕ್ ರ್ಜರಿ ಮಾಡಿಸಿಕೊಂಡು ವಾಪಸ್ಸಾಗಿ'' ಎಂದರು. ಅದರಲ್ಲಿ ಎಚ್ಚರಿಕೆಯೂ, ಲಹೆಯೂ ಇಲ್ಲದೆ ಇರಲಿಲ್ಲ. ಅದಕ್ಕೆ ಪ್ರತಿಯಾಗಿ ಹಾಜಿಗಳು ''ಆಯ್ತು ಸಾರ್, ನನ್ನ ಗೂನ ಆಪೋಜಿಷನ್ ಮಿಸ್‌ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಳ್ಳುವ ಚಾನ್ಸಿದೆ, ಈ ನ್ನ ನೇಚರ್‌ನ ಸರಿಪಡಿಸಿಕೊಳ್ಳಲು ರಾಮ್‌ದೇವ್ ಅಥವಾ ಗುರೂಜಿ ಯವರ ಸಲಹೆ ಡೀತೀನಿ. ಅದಾಗಲಿಲ್ಲಾಂದ್ರೆ ತಮ್ಮ ಸಲಹೆಯನ್ನು ಶಿರಸಾ ವಹಿಸ್ತೀನಿ'' ಎಂದು ೇಳುತ್ತ ಅಲ್ಲಿಂದ ನಿರ್ಗಮಿಸುವ ಮೊದಲು ಜೈಲರ್‌ಗೆ, ಸಹಖೈದಿಗಳಿಗೆ ಸೂಕ್ತ ಲಹೆ ನೀಡಿ ಅಲ್ಲಿಂದ ನಿರ್ಗಮಿಸಿದರು.

ಮಾಧ್ಯಮಗಳ ಚುರುಕು ಕಾರ್ಯಾಚರಣೆಯಿಂದಾಗಿ ಹಾಜಿ ಮಾಲಿಗಳ ಡುವೆ ಸಂಭವಿಸಿದ ಈ ಮಾತುಕತೆಯು ಗುಟ್ಟುರಟ್ಟಾಗದೆ ಇರಲಿಲ್ಲ. ವಿರೋಧ ಕ್ಷದವರ, ಸಾರ್ವಜನಿಕರ ಒತ್ತಡದಿಂದಾಗಿಯೋ, ತಮ್ಮ ಬೇಸಿಕ್ ಇನ್‌ಸ್ಟಿಂಕ್ಟ್ ಬಿಂದಾಗಿಯೋ, ಕಾನೂನು ತಜ್ಞರು ನೀಡಿದ ಸೂಕ್ತ ಸಲಹೆಯಿಂದಾಗಿಯೋ, ಟ್ಟಾರೆ ಕರ್ಕಿಕೋಡಿಯವರು ನಗೆ, ಸಂತೋಷದ ಯೋಜನೆಯನ್ನು ರಿಣಾಮಕಾರಿಯಾಗಿ ಜಾರಿಗೊಳಿಸದೆ ಇರಲಿಲ್ಲ. ವಾತಾಪಿ ರಾಜ್ಯದ ಈ ಯೋಜನೆ ತಿಂಗಳು ಕಳೆಯುವಷ್ಟರಲ್ಲಿ ಇನ್ನಿತರೇ ರಾಜ್ಯಗಳಿಗೆ ಮಾದರಿ ಾಗದೆ ಇರಲಿಲ್ಲ. ನೆರೆಹೊರೆಯ ರಾಜ್ಯಗಳ ಮುಖ್ಯಮಂತ್ರಿಗಳ ನಿಯೋಗ ದರಿ ರಾಜ್ಯದಲ್ಲಿ ಸಂಚರಿಸಿ ನಗೆ ಕುರಿತಂತೆ ಅಧ್ಯಯನ ಕೈಗೊಳ್ಳದೆ ಇರಲಿಲ್ಲ. ಹಾಗೆಯೇ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಹ ಕರ್ಕಿಕೋಡಿಯವರ ಯೋಜನೆಗಳನ್ನು ನಕಲು ಮಾಡಲು ಕ್ರಮಕೈಕೊಳ್ಳದೆ ಇರಲಿಲ್ಲ. ಇದೆಲ್ಲ ಒಂದು ತೂಕವಾದರೆ ವಾತಾಪಿ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ಕ್ಷದ ಹೈಕಮ್ಯಾಂಡ್ ಕಸಿವಿಸಿಗೊಂಡಿದ್ದು ಇನ್ನೊಂದು ತೂಕವೆನ್ನಬಹುದು. ತಮ್ಮದು ೊದಲೆ ಶಿಸ್ತಿಗೆ ಹೆಸರಾದ ರಾಷ್ಟ್ರೀಯ ಪಕ್ಷ ಬೇರೆ, ತಮ್ಮ ಪಕ್ಷ ದಕ್ಷಿಣಾತ್ಯವಾಗಿ ಪರೂಪಕ್ಕೆ ಆಡಳಿತವಿರುವ ರಾಜ್ಯದ ಮುಖ್ಯಮಂತ್ರಿಗಳ ನಗು ಕುರಿತಂತೆ, ತಮ್ಮ ಾಜ್ಯದಲ್ಲಿನ ಪ್ರಜೆಗಳು ಬೇಕಾಬಿಟ್ಟಿ ನಗಾಡುತ್ತಿರುವುದರ ಕುರಿತಂತೆ ತನ್ನ ಹಿಂದೂ ಣೀತ ಮಸ್ತಿಷ್ಕವನ್ನು ಬಿಸಿ ಮಾಡಿಕೊಳ್ಳದೆ ಇರಲಿಲ್ಲ. ಅದರ ಹೈಕಮ್ಯಾಂಡಿನ ುಖ್ಯಸ್ಥರು ಕರ್ಕಿಕೋಡಿಯವರನ್ನು ನಾಸಿಕಕ್ಕೆ ಕರೆಸಿಕೊಂಡು ವಿವರಣೆ ಕೇಳದೆ ಇರಲಿಲ್ಲ. ಅದಕ್ಕೆ ಮುಖ್ಯಮಂತ್ರಿಗಳು ಯಾವ ಹೇಳಿಕೆ ನೀಡಿದರೆಂಬುದು ಸ್ಪಷ್ಟವಾಗಿ ಳಿಯದು. ಮಾಜಿ ಸಿದ್ಧಾರೂಢರಂತೆ ಹಾಲಿಯವರೂ ಸಹ ಸಂಘದ ಕಟ್ಟಾ ಸ್ವಯಂ ೇವಕರ, ಇಷ್ಟೆಲ್ಲಾ ವಿರೋಧ ಕಂಟಕಗಳ ನಡುವೆಯೂ...

ಅಂಥ ಮುಖ್ಯಮಂತ್ರಿಗಳ ನಗುಮುಖ ಮಾಧ್ಯಮಗಳಲ್ಲಿ ಗೋಚರಿಸುತ್ತಿಲ್ಲವಲ್ಲ! ಾತಾಪಿರಾಜ್ಯ ಒಂದು ವಾರದೊಳಗೆ ತನ್ನ ಚೆಹರೆಯನ್ನು ಆಮೂಲಾಗ್ರವಾಗಿ ದಲಿಸಿಕೊಂಡಿತು.

* * *

ಮುಖ್ಯಮಂತ್ರಿಗಳೆ ದಯವಿಟ್ಟು ತಮ್ಮ ಅಮೂಲ್ಯ ನಗುಮುಖವನ್ನು ಾರ್ವಜನಿಕವಾಗಿ ಒಂದೇ ಒಂದು ಸಲ ಪ್ರದರ್ಶಿಸಿ ರಾಜ್ಯದ ಜನತೆಯ ದುಗುಡ ನ್ನು ಶಮನಗೊಳಿಸಿ ಎಂಬ ಬೇಡಿಕೆ ರಾಜ್ಯದ ನಾಲ್ಮೂಲೆಯಿಂದ ಮಾರ್ದನಿಸ ಾರಂಭಿಸಿತು. ರಾಜ್ಯದ ಪ್ರಥಮ ಪ್ರಜೆಯ ನಗುಮುಖಕ್ಕಾಗಿ ಒತ್ತಾಯಿಸಿ ಎಲ್ಲೆಂದರಲ್ಲಿ ರತಾಳಗಳು, ಮುಷ್ಕರಗಳು, ಪಿಕೆಟಿಂಗುಗಳು ನಡೆಯತೊಡಗಿದವು. ಸೂತಕ ಾಯೆಯಿಂದ ನಾಡು ಕಪ್ಪಿಟ್ಟಿತು. ಶಾಸಕಾಂಗ ಭವನದೆದುರು ಆಮರಣಾಂತ ರಶನಗಳೂ ಆರಂಭಗೊಳ್ಳದೆ ಇರಲಿಲ್ಲ. ಇಷ್ಟೆಲ್ಲಾ ನಡೆಯುತ್ತಿದ್ದರೂ ಮುಮಂಗಳು ಯಾತ್ರ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಪರಿಣಾಮವಾಗಿ ರಾಜ್ಯದ ಸಂಕಟ ನೂರ್ಮಡಿಗೊಳ್ಳದೆ ಇರಲಿಲ್ಲ. ಕರ್ಕಿಕೋಡಿಯವರ ಆರೋಗ್ಯ ಕುರಿತಂತೆಯೂ ಊಹಾಪೋಹಗಳು ಕಾಣಿಸಿಕೊಂಡ ಪರಿಣಾಮವಾಗಿ ರಾಜ್ಯದಾದ್ಯಂತ ಹೋಮ ಹವನ, ಜಪತಪಗಳು, ಅಭಿಷೇಕ ರುದ್ರಾಭಿಷೇಕ ನಡೆಯಲಾರಂಭಿಸಿದರೂ ಮುಖ್ಯಮಂತ್ರಿಗಳ ನಗುಮುಖದ ಸುಳಿವಿಲ್ಲ. ಸನ್ಮಾನ್ಯರ ಈ ವರ್ತನೆಯಿಂದಾಗಿ ರಾಜ್ಯದ ಜನತೆಯ ಅಸಹನೆ ಹೆಚ್ಚಿದ ಪರಿಣಾಮವಾಗಿ ರಾಜ್ಯದ ಪ್ರಮುಖ ಬೀದಿಗಳಲ್ಲಿ ರಸ್ತಾರೋಖೋ, ಘೆರಾವ್, ಕಲ್ಲುತೂರಾಟ, ಸರ್ಕಾರಿ ವಾಹನಗಳಿಗೆ ಅಗ್ನಿಸ್ಪರ್ಶ, ಲಾಠಿಚಾರ್ಜ್ ಇವೇ ಮೊದಲಾದ ಅಹಿತಕರ ಘಟನೆಗಳು ಸಂಭವಿಸಿದವು. ಮುಖ್ಯಮಂತ್ರಿಗಳೇ ನೀವು ನಿಮ್ಮ ನಗುಮುಖವನ್ನು ಸಾರ್ವಜನಿಕವಾಗಿ ತೋರಿಸದಿದ್ದಲ್ಲಿ ತಾವು ಆತ್ಮಾಹುತಿ ಮಾಡಿಕೊಳ್ಳುವುದಾಗಿ ಅನೇಕ ಯುವಕರು ಮಾಧ್ಯಮಗಳೆದುರು ಘರ್ಜಿಸದೆ ಇರಲಿಲ್ಲ. ಈ ಗಲಭೆ, ಮುಷ್ಕರಗಳನ್ನು ಹತ್ತಿಕ್ಕುವ ಸಲುವಾಗಿ ಪೊಲೀಸರು ಅಲ್ಲಲ್ಲಿ, ತಡೆಯಲು ಬಂದ ಪೊಲೀಸರ ಮೇಲೆ ಮುಷ್ಕರಿಗಳು



ಅಲ್ಲಲ್ಲಿ, ಸರ್ಕಾರಿ ದವಾಖಾನೆಗಳಲ್ಲಿ ಪ್ರಥಮ ಚಿಕಿತ್ಸೆ ಪಡೆಯಲಾರಂಭಿಸಿದ ಪೊಲೀಸರೂ, ಚಳವಳಿಗಾರರೂ..

ವಿರೋಧಿ ಧುರೀಣರು ಇದನ್ನೆಲ್ಲ ಮೂಕಪ್ರೇಕ್ಷಕರಂತೆ ನೋಡುತ್ತ ಸುಮ್ಮನಿರಲಾಗುವುದೆ! ಅವರೊಂದಿಗೆ ಆಡಳಿತ ಪಕ್ಷದ ಸದಸ್ಯರೂ ಶಾಮೀಲಾದ ಪರಿಣಾಮವಾಗಿ ಪರಿಸ್ಥಿತಿ ಇನ್ನಷ್ಟು ಹದಗೆಡದೆ ಇರಲಿಲ್ಲ. ವಸ್ತುಸ್ಥಿತಿ ಹೀಗಿರುವಾಗ ವಿರೋಧ ಪಕ್ಷಗಳು ಒಕ್ಕೊರಲಿನಿಂದ ಶಾಸಕಾಂಗ ಸಭೆಯನ್ನು ಬಹಿಷ್ಕರಿಸಿದವಲ್ಲದೆ ಮುಖ್ಯಮಂತ್ರಿಗಳ ನಗುಮುಖಕ್ಕೆ ಸಂಬಂಧಿಸಿದಂತೆ ಶ್ವೇತಪತ್ರಕ್ಕೆ ಒತ್ತಾಯಿಸಲಾರಂಭಿಸಿದ ನಂತರವೇ ಘನವೆತ್ತ ರಾಜ್ಯಪಾಲರು ತಮ್ಮ ನೀಳನಾಸಿಕದ ಮೇಲೆ ವಜ್ರದ ಹರಳಿನ ಉಂಗುರವಿದ್ದ ಬೆರಳನ್ನಿರಿಸಿಕೊಂಡದ್ದು.

* * *

ಘನವೆತ್ತ ರಾಜ್ಯಪಾಲರಾದ ಸನ್ಮಾನ್ಯ ತುಷಾರಗುಪ್ತ ಅವರು ಹಿಂದಿನ ದಿವಸವಷ್ಟೆ ಹೃಷಿಕೇಶ, ಹರಿದ್ವಾರ ಯಾತ್ರೆ ಪೂರೈಸಿ ವಿಶೇಷ ವಿಮಾನದ ಮೂಲಕ ವಾತಾಪಿ ರಾಜ್ಯದ ರಾಜಧಾನಿ ತ್ಯಾಜ್ಯವಾಸ್ತುವಿಗೆ ಮರಳಿದ್ದರಷ್ಟೆ. ತಾವು ಆಚಾರ್ಯ ಸೀತಾಪತಿ ತಮ್ಮ ತುಪ್ಪಳದ ಶ್ರವಣೇಂದ್ರಿಯದ ಸನಿಹಕ್ಕೆ ಬಾಯಿ ತಂದು ಬೋಧಿಸಿದ್ದ ಮೃತ್ಯುಂಜಯ ಮಂತ್ರಗಳನ್ನು ಪಠಿಸಲು ಇನ್ನೇನು ತಾವು ಉದ್ಯುಕ್ತರಾಗಬೇಕೆನ್ನುವಷ್ಟರಲ್ಲಿ ಆಗಮಿಸಿದ ಗುಪ್ತಚರ ಇಲಾಖೆಯ ಮುಖ್ಯಸ್ಥ ಶ್ರೀವಾಸ್ತವ ರಾಜ್ಯದಲ್ಲಿ ಸಂಭವಿಸಿರುವ ಅಹಿತಕರ ಘಟನಾವಳಿ ಕುರಿತಂತೆ ಸಂಕ್ಷಿಪ್ತ ವರದಿ ನೀಡಿದರು. ಅದನ್ನು ಆಲಿಸಿದ ರಾಜ್ಯಪಾಲರು ತಮ್ಮ ದಿಗ್ಭ್ರಮೆಯನ್ನು ಬಹಿರಂಗ ಗೊಳಿಸದೆ ಅವರಿಗೆ ತೀರ್ಥಪ್ರಸಾದ ವಿತರಿಸಿದರು. ಬಳಿಕ ಶೋಕತಪ್ತರಾದವರಂತೆ ಕಂಡುಬಂದರು. ತಮ್ಮ ಅಭಿಪ್ರಾಯದಲ್ಲಿ ಶ್ರೀಯುತ ಕರ್ಕಿಕೋಡಿಯವರು ಮುಗುಳ್ನಗೆ ವಿಷಯದಲ್ಲಿ ಗಂಟುಮೋರೆಯ ಸಿದ್ಧಾರೂಢರಿಗಿಂತ ಸಾವಿರ ಪಾಲು ಮೇಲು. ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿ ಸಾಧ್ಯವಾದಷ್ಟು ಮುಗುಳ್ನಗುತ್ತಲೇ ಆಡಳಿತ ನಡೆಸಿ ಎಂದು ಹೇಳಿಯೇ ಪತ್ನಿಯೊಂದಿಗೆ. ಅದೂ ಆಕೆಯ

ಹರಕೆ ತೀರಿಸುವ ಸಲುವಾಗಿ ತೀರ್ಥಯಾತ್ರೆ ಕೈಗೊಂಡದ್ದು. ಆದರೆ ತಾವು ಮರ ಬರುವಷ್ಟರಲ್ಲಿ ವಾತಾಪಿ ರಾಜ್ಯದಾದ್ಯಂತ... ಛೇ ಛೆ!

ತಡಮಾಡದೆ, ವಿಶ್ರಾಂತಿ ಅಗತ್ಯವಿದೆ ಎಂಬ ವೈದ್ಯರ ಸಲಹೆಯನ್ನೂ ಲೆಕ್ಕಿಸ ಎಂದಿನಂತೆ ತಮ್ಮ ಪತ್ನಿಯವರ ಮೊಣಕಾಲುಗಳಿಗೆ ನೋವು ನಿವಾರಕ ಲೇಹ್ಯ ಲೇಪಿ ರಾಮನಾಮ ಮಾತ್ರ ಜಪಿಸುತ್ತಲೇ ಹೊರಟು ಪಾಂಚಾಲಿಗೃಹ ತಲುಪಿದ ಅವರಿವರು ತಮ್ಮನ್ನು ಸ್ವಾಗತಿಸಿದ್ದಾಯಿತು, ತಮ್ಮನ್ನು ನೇರವಾಗಿ ಕರ್ಕಿಕೋಡಿಯವ ಶಯನಗೃಹಕ್ಕೆ ಕರೆದೊಯ್ದುದ್ದೂ ಆಯಿತು. ನೋಡುತ್ತಾರೆ ರೇಶ್ಮೆಉತ್ತರೀಯದ ಮುಖ ಮರೆಮಾಚಿಕೊಂಡಿರುವ ಮುಖ್ಯಮಂತ್ರಿಗಳು! ಶ್ರೀಯುತರು ಅವಗುಂ ಮುಖೀಯರಾಗಿಯೇ ಕ್ಷೇಮಲಾಭ ವಿಚಾರಿಸಿದರಲ್ಲದೆ ಅಂತೂ ಕೃಷ್ಣಾನುಗ್ರಹದಿಂ ತಾವು ಮರಳಿ ಬಂದಿರಿ ಎಂದಷ್ಟೆ ಹೇಳಿದರು.

''ಶ್ರೀ ಮುಖ್ಯಮಂತ್ರೀಜಿ, ಯಾಕ್ರೀ ನಿಮ್ಮ ಮುಖಾನ ಮರೆಮಾಚಿ ಕೊಂಡಿರುವಿ ತೋರಿಸಿರಿ ಮೊದಲು'' ಎಂದು ಕೇಳಿದ್ದಕ್ಕೆ ರಾಜ್ಯದ ಪ್ರಥಮಪ್ರಜೆಯು ತ ಮುಖವನ್ನು ಪಕ್ಕಕ್ಕೆ ಹೊರಳಿಸಿ ''ನನ್ನ ದರಿದ್ರ ಮುಖವನ್ನು ಹೆಂಡತಿಗೇ ತೋರಿಸಿ ಸಾರ್, ತೀರ್ಥಯಾತ್ರೆ ಮುಗಿಸಿಕೊಂಡಿದೀಗ ಮರಳಿರುವ ನಿಮಗೇಗೆ ತೋರಿಸಲಿ'' ಎಂದು ಗದ್ಗದಿತ ರಾದರು. ಅಲ್ಲಿ ನೆರೆದಿದ್ದ ಸಚಿವ ಸಂಪುಟದ ಕೆಲ ಸದಸ್ಯ ಒತ್ತಾಯಿಸಿದರೂ ಕರ್ಕಿಯವರು ತಮ್ಮ ಮನಸ್ಸನ್ನು ಬದಲಿಸಲಿಲ್ಲ. ಕೊನೆಗೆ ಬೇಸರದಿಂ ರಾಜ್ಯಪಾಲರು ''ರಾಜ್ಯದ ರಾಜ್ಯಪಾಲನಾಗಿ ಕೇಳ್ತಿದ್ದೀನಿ, ಮರ್ಯಾದೆಯಿಂ ತೋರಿಸುವಿರೋ ಇಲ್ಲ ರಾಷ್ಟ್ರಪತಿ ಆಡಳಿತಾನ ಜಾರಿಗೊಳಿಸಿರೀಂತ ಕೇಂದ್ರ ಶಿಪಾರಸ್ಸು ಮಾಡಲೋ!'' ಎಂದು ಸಂವಿಧಾನಾತ್ಮಕ ರೀತಿಯಲ್ಲಿ ಒತ್ತಡ ಹೇರ ಇರಲಿಲ್ಲ. ಅದರಿಂದ ತುಸು ಗಲಿಬಿಲಿಗೊಂಡ ಮುಖ್ಯಮಂತ್ರಿಗಳು ತಮ್ಮ ಮುಖ ಮೇಲಿನ ಅವಗುಂಠನವನ್ನು ಮೆಲ್ಲಗೆ ಸರಿಸಿದೊಡನೆ!

ಎಲ್ಲರೂ ರೆಪ್ಪೆಯಾರಿಸದೆ ನೋಡುತ್ತಾರೆ ನಾಡಿನ ಮುಖ್ಯಮಂತ್ರಿಗಳ ಮುಖ ಮೇಲೆ ಔಷಧಕ್ಕೆ ಬೇಕೆಂದರೂ ಇನಿತಾದರೂ ನಗೆಯ ಎಸಳಿಲ್ಲವೇ ಇಲ್ಲ. ತಾ ನೋಡುತ್ತಿರುವುದು ತಮ್ಮ ಮುಖ್ಯಮಂತ್ರಿಗಳ ಮುಖವನ್ನೇನು ಎಂಬ ಅನುಮಾನ ಒಳಗಾಗದೆ ಇರಲಿಲ್ಲ ಎಲ್ಲರೂ. ಆ ಕ್ಷಣ ತಮ್ಮ ಕಣ್ಣುಗಳಿಗಡ್ಡ ಕರವಸ್ತ್ರವಿರಿಸಿಕೊಂಡ ರಾಜ್ಯಪಾಲರು ನಿಧನಿಧಾನವಾಗಿ ನೋಡುತ್ತ ''ಅಯ್ಯೋ ನಿಮ್ಮ ಮುಖ ನಗೆ ಇಲ್ಲ ಕಳಾಹೀನವಾಗಿರುವುದಲ್ಲ, ಯಾರು, ನಿಮ್ಮ ಅಭಿಜಾತ ನಗೆಯನ್ನು ಅಪಹರಿಸಿ ದುರುಳ ಯಾರು? ಅವರ ಮೇಲೆ ಎಫ್ಐಆರ್ ದಾಖಲಿಸುವಂತೆ ಗೃಹಖಾತೆ ಸೂಚಿಸುವೆನು'' ಎಂದು ಕೇಳುತ್ತ ಒದ್ದೆಗಣ್ಣುಗಳ ಮೇಲೆ ವಸ್ತ್ರವಿರಿಸಿಕೊಂಡರು.

''ಹೇಳಿ ಏನು ಪ್ರಯೋಜನ ಸಾರ್! ನಮ್ಮ ಮಾಜಿ ಮುಖ್ಯಮಂತ್ರಿಗ ಜೈಲಿನಲ್ಲಿದ್ದುಕೊಂಡೇ ನನ್ನ ಮುಖದ ಮೇಲಿನ ನಗೆಯನ್ನು ಅಪಹರಿಸಿದ್ದಾರೆ, ಅದ ಮಠಾಧೀಶರ ನೆರವಿನಿಂದ'' ಎಂದು ಹೇಳುತ್ತ ಪುನಃ ತಮ್ಮ ಮುಖದ ಮೇ ಉತ್ತರೀಯವನ್ನೆಳೆದುಕೊಂಡರು.

ಅಲ್ಲಿಯೇ ಇದ್ದ ಗೃಹಸಚಿವರು ರಾಜ್ಯಪಾಲರ ಕಿವಿಯನ್ನು ಬಾಯಿ ಮೂಲ ಸಮೀಪಿಸಿ ''ಜೈಲಿನಲ್ಲಿರುವ ಸಿದ್ಧಾರೂಢರು ಇನ್ನು ಕೆಲವೇ ತಿಂಗಳಲ್ಲಿ ಮುಖ್ಯಮಂ ಯಾಗ್ತೀನಿ, ಅದಕ್ಕೆ ಏನು ಮಾಡ್ತೀನಂತ ನೋಡ್ತಿರ್ರಿ ಎಂದು ಹೇಳುವುದರ ಮೂಲ ಕರ್ಕಿಕೋಡಿಯವರ ಸಂತೋಷವನ್ನು ಅಪಹರಿಸಿಬಿಟ್ಟಿರುವರು ಸಾರ್, ಅವರು ತ ಮೇಲಿರುವ ಕೇಸುಖಟ್ಲೆಗಳಿಂದ ಬಚಾವಾಗುವುದು ಕಷ್ಟ, ಹೆದರಬೇಡಿ ಎಂದರು ಇವರು ನಗುತ್ತಿಲ್ಲ, ವಿರೋಧಪಕ್ಷದವರು ಬೇರೆ ನಗೆಗೆ ಸಂಬಂಧಿಸಿದಂತೆ ಶ್ವೇತಪತ್ರ ಹೊರಡಿಸಿರಿ ಅಂತ ಗಲಾಟೇನ ಆರಂಭಿಸಿದ್ದಾರೆ'' ಎನ್ನುತ್ತ ಕೈಕೈ ಹಿಚುಗಿಕೊಂಡರು.

ಪಾಂಚಾಲಿಯಲ್ಲಿ, ಅದೂ ಮಧ್ಯರಾತ್ರಿಯಲ್ಲಿ ನಡೆದ ಈ ಮಾತುಕತೆ ಮಾಧ್ಯ ದವರ ಕುಟುಕು ಕಾರ್ಯಾಚರಣೆಯಿಂದಾಗಿ ಮಾರನೆ ದಿವಸವೇ ನಾಡಿನಾದ್ಯಂ ಸುದ್ದಿಯಾಗದೆ ಇರಲಿಲ್ಲ. ತತ್ಪರಿಣಾಮವಾಗಿ ಪ್ರಜೆಗಳು ''ಶ್ರೀ ಸಿದ್ಧಾರೂಢರೇ ಕರ್ಕಿಕೋಡಿಯವರ ಮುಖದಲ್ಲಿನ ನಗೆಯನ್ನು ಲೀಲಾಜಾಲವಾಗಿ ಅಪಹರಿಸಿರು ನೀವು ನಾಳೆ ಸಮಾಜದ ಸಂವೇದನೆಗಳನ್ನು ಅಪಹರಿಸುವುದಿಲ್ಲವೆನ್ನುವುದಕ್ಕೆ ಏನ ಗ್ಯಾರಂಟಿ ಸ್ವಾಮಿ, ಅವರ ಸ್ವತ್ತನ್ನು ಅವರಿಗೆ ಮರಳಿಸದಿದ್ದಲ್ಲಿ... '' ಎಂಬ ಎಚ್ಚರಿ ಮಾತುಗಳು ವಾತಾಪಿರಾಜ್ಯದಾದ್ಯಂತ...

ಕುಂ. ವೀರಭದ್ರಪ್ಪ
'ಅನ್ನಪೂರ್ಣ ನಿಲಯ', ಪೊಲೀಸ್ ಠಾಣೆ ಬಳಿ, ಕೊಟ್ಟೂರು - ೫೮೩ ೧೩೪, ಬಳ್ಳಾರಿ ಜಿಲ್ಲೆ

ಕರ್ನಾಟಕ ಅಭಿವೃದ್ಧಿ ಆಕೃತಿ–ವಿಕೃತಿ

ಡಾ|| ಟಿ. ಆರ್. ಚಂದ್ರಶೇಖರ

ವಿಶ್ವದಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮದಲ್ಲಿ ಸಾಕಷ್ಟು ...ದಲಾವಣೆಗಳಾಗುತ್ತಾ ಬಂದಿದೆ. ಈ ಚರ್ಚೆಯು ಅತ್ಯಂತ ಗತಿಶೀಲವಾದುದಾಗಿದೆ. ...ಮೂಚಾನವಾಗಿ ನಡೆದುಕೊಂಡು ಬಂದಿರುವ ಅಭಿವೃದ್ಧಿಯನ್ನು ವರಮಾನದ ...ಯಲ್ಲಿ ಅರ್ಥಮಾಡಿಕೊಳ್ಳುವ ಕ್ರಮದ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತಲಾಗಿದೆ. ...ವೃದ್ಧಿಯ ಅನುಭವವು ಅದನ್ನು ಕುರಿತ ಮರುಚಿಂತನೆಗೆ ದಾರಿ ಮಾಡಿಕೊಡುತ್ತಿದೆ. ...ವೃದ್ಧಿಯನ್ನು ನಾವು ಅನುಭವಿಸುತ್ತಿರುವ ಕ್ರಮಕ್ಕೂ ಮತ್ತು ಅದರ ಬಗ್ಗೆ ...ಾಂತಗಳು ಪ್ರತಿಪಾದಿಸುತ್ತಿರುವುದಕ್ಕೂ [illegible] ಅಂತರ ಉಂಟಾಗಿಬಿಟ್ಟಿದೆ. ...ವೃದ್ಧಿಯನ್ನು ಕುರಿತ ಮರುಚಿಂತನೆ ಎನ್ನುವುದು ವ್ಯಾಪಕವಾಗಿ ನಡೆಯುತ್ತಿದೆ ...ಯುದನ್ನು ಅದನ್ನು ಕುರಿತಂತೆ ಹುಟ್ಟಿಕೊಂಡಿರುವ ವಿವಿಧ ಪರಿಭಾಷೆಗಳ ...ಯಿಂದ [illegible]ಕೊಳ್ಳಬಹುದಾಗಿದೆ.

ವರಮಾನ ಅಭಿವೃದ್ಧಿ, ಸಹಭಾಗಿತ್ವ ಅಭಿವೃದ್ಧಿ(ಜನರನ್ನು ಒಳಗೊಳ್ಳುವ ಅಭಿವೃದ್ಧಿ), ಸುಸ್ಥಿರಗತಿ ಅಭಿವೃದ್ಧಿ, ಸ್ವಾತಂತ್ರ್ಯವಾಗಿ ಅಭಿವೃದ್ಧಿ, ಮಾನವ ಅಭಿವೃದ್ಧಿ, ವಿಸ್ತೃತ ಮಾನವ ಅಭಿವೃದ್ಧಿ, ಮಾನವ ಹಕ್ಕುಗಳಾಗಿ ಅಭಿವೃದ್ಧಿ, ಸಾಮಾಜಿಕ ನ್ಯಾಯವಾಗಿ ಅಭಿವೃದ್ಧಿ, ಲಿಂಗ ಸಂಬಂಧಿ ಅಭಿವೃದ್ಧಿ ಇತ್ಯಾದಿ ಇತ್ಯಾದಿ.

ಇಲ್ಲಿ ಒಂಬತ್ತು ವಿವಿಧ ಸೈದ್ಧಾಂತಿಕ ನೆಲೆಗಳುಳ್ಳ ಅಭಿವೃದ್ಧಿ ಧಾರೆಗಳನ್ನು ಪಟ್ಟಿ ...ಾಡಲಾಗಿದೆ. ಇದು ಅಂತಿಮವಾದುದೇನಲ್ಲ. ಅಭಿವೃದ್ಧಿಯನ್ನು ಕುರಿತ ಚರ್ಚೆ ಹೀಗೆ ...ಂದುವರಿಯುತ್ತಿರುತ್ತದೆ. ಅದಕ್ಕೆ ಕೊನೆ ಎಂಬುದು ಇರಲು ಸಾಧ್ಯವಿಲ್ಲ. ...ಿಯೊಂದು ಬಗೆಗೂ ತನ್ನದೇ ಪ್ರಸ್ತುತತೆ ಇರುತ್ತದೆ. ಈ ಪ್ರಬಂಧದಲ್ಲಿ ಕರ್ನಾಟಕದ ...ಭಿವೃದ್ಧಿ ಅನುಭವದ ಹಿನ್ನೆಲೆಯಲ್ಲಿ ಸಾಧಿಸಿಕೊಂಡಿರುವ ಅಭಿವೃದ್ಧಿಯ ಆಕೃತಿಯು ...ಾವ ಬಗೆಯದ್ದು ಮತ್ತು ಅದರಲ್ಲಿ ಉಂಟಾಗಿರುವ ವಿಕೃತಿಯ ಸ್ವರೂಪ ಯಾವ ...ೀನದ್ದು ಎಂಬುದನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ...ವು ಅಭಿವೃದ್ಧಿಯಲ್ಲಿ ಸಾಧಿಸಿಕೊಂಡಿರುವ ಸಂಗತಿಗಳಾವುವು? ಅದರಲ್ಲಿನ ...ಫಲ್ಯಗಳಾವುವು? ಅಭಿವೃದ್ಧಿಯಲ್ಲಿ ಉಂಟಾಗಿರುವ ವಿಕೃತಿಗಳು ಎಷ್ಟರ ಮಟ್ಟಿಗೆ ...ನವಿರೋಧಿಯಾಗಿವೆ, ಪರಿಸರ ವಿಮುಖವಾಗಿವೆ, ಒಳಗಣತನ ಮತ್ತು ಹೊರಗಣತನ ...ಗೆ ಏಕಕಾಲದಲ್ಲಿ ಸಂಭವಿಸುತ್ತಿವೆ, ಲಿಂಗ ಸಂಬಂಧಗಳನ್ನು ಆಧರಿಸಿದ ಸಮಾನತೆಯು ...ಾಕೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ, ನಾವು ಸಾಧಿಸಿಕೊಂಡಿರುವ ಅಭಿವೃದ್ಧಿಯು ...ಂದುಳಿದ ಪ್ರದೇಶಗಳ ಬಗ್ಗೆ ಯಾಕೆ ಔದಾಸೀನ್ಯ ತಳೆದಿದೆ – ಮುಂತಾದ ...ಗತಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ನಾವು ಸಾಧಿಸಿಕೊಂಡಿರುವ ...ಭಿವೃದ್ಧಿಯನ್ನು ಇಲ್ಲಿ ಆಕೃತಿಯೆಂದು ಕರೆಯಲಾಗಿದೆ ಮತ್ತು ಅದರ ಅಸಮಾನತೆಯ ...ತ್ತು ಜನವಿಮುಖಿ ಪರಿಣಾಮಗಳನ್ನು ವಿಕೃತಿಯೆಂದು ಕರೆಯಲಾಗಿದೆ. ನಮ್ಮ ...ಜ್ಯದ ವರಮಾನವೇನೋ ಕಳೆದ ಹತ್ತು ವರ್ಷಗಳಲ್ಲಿ ಏರಿಕೆಯಾಗಿದೆ. ಆದರೆ ...ನರ' ಬದುಕು ಉತ್ತಮಗೊಳ್ಳುತ್ತಿಲ್ಲ. ಇಲ್ಲಿ ಜನರು ಎಂಬುದನ್ನು ದುಡಿಮೆಗಾರರು, ...ಂಚಿತರು, ಕಡೆಯವರು, ಮಹಿಳೆಯರು, ದಲಿತರು, ಹಿಂದುಳಿದ ಪ್ರದೇಶಗಳಲ್ಲಿನ ...ನರು, ಅನಕ್ಷರಸ್ಥರು ಎಂಬ ಪರಿಯಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಮಹಿಳಾ ಸಬಲೀಕರಣ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿವೆ. ಸರ್ಕಾರಗಳು ಲಿಂಗ ಸಮಾನತೆಯ ಬಗ್ಗೆ ಹೆಚ್ಚು ಹೆಚ್ಚು ಮಾತನಾಡುತ್ತಿವೆ. ಆದರೆ ಅವರ ಮೇಲಿನ ಹಿಂಸೆ, ಅದನ್ನು ಸಂಪ್ರದಾಯದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವುದು ಕಂಡುಬರುತ್ತದೆ (ವಿಜಯಲಕ್ಷ್ಮಿ-ದರ್ಶನ್ ಪ್ರಕರಣ). ಇದು ಅಭಿವೃದ್ಧಿಯ ವಿಕೃತಿಯಾಗಿದೆ. ಇತ್ತೀಚಿನ ೨೦೧೧ರ ಜನಗಣತಿ ವರದಿಯು ನಾವು ಅನುಭವಿಸುತ್ತಿರುವ ಅನೇಕ ಅಭಿವೃದ್ಧಿ ವಿಕೃತಿಗಳನ್ನು ಬಹಿರಂಗಪಡಿಸಿದೆ.

ಈ ಪ್ರಬಂಧದಲ್ಲಿ ಒಟ್ಟು ಪ್ರಸ್ತಾವನೆ ಮತ್ತು ತಾತ್ಪರ್ಯಗಳನ್ನು ಬಿಟ್ಟು ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಕರ್ನಾಟಕದ ಅಭಿವೃದ್ಧಿಯ ಆಕೃತಿಯನ್ನು ಗುರುತಿಸಲಾಗಿದೆ. ಇಲ್ಲಿ ಅಭಿವೃದ್ಧಿಯನ್ನು ನಾವು ಪರಿಭಾವಿಸಿಕೊಂಡಿರುವ ಕ್ರಮ, ಅದನ್ನು ನಾವು ನಿರ್ವಹಿಸುತ್ತಿರುವ ಪರಿ, ಅದರಲ್ಲಿ ನಮ್ಮ ಸಾಧನೆಗಳು ಮುಂತಾದ ಸಂಗತಿಗಳನ್ನು ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ಮಾನವ ಅಭಿವೃದ್ಧಿಯಲ್ಲಿನ ನಮ್ಮ ಯಶಸ್ಸನ್ನು ಚರ್ಚೆ ಮಾಡಲಾಗಿದೆ. ಮೂರನೆಯ ಭಾಗದಲ್ಲಿ ಅಭಿವೃದ್ಧಿ ವಿಕೃತಿಗಳನ್ನು ಕುರಿತಂತೆ ಅನುಸಂಧಾನ ನಡೆಸಲಾಗಿದೆ. ಕೊನೆಯದಾಗಿ ತಾತ್ಪರ್ಯದಲ್ಲಿ ನಾವೇನು ಮಾಡಬಹುದು ಎಂಬ ಶೀರ್ಷಿಕೆಯಲ್ಲಿ ಕೆಲವು ಸಲಹೆ-ಸೂಚನೆಗಳನ್ನು ನೀಡಲಾಗಿದೆ.





ಭಾಗ-೧

ನಮ್ಮ ಅಭಿವೃದ್ಧಿ ಸಾಧನೆಗಳು

ಇಲ್ಲಿ ಚರ್ಚೆಗೆ ೨೦೦೧ರಿಂದ ೨೦೧೧ರ ಅವಧಿಯನ್ನು ಪರಿಗಣಿಸಲಾಗಿದೆ. ಕೆಲವು ಸಂಗತಿಗಳು ನಿರ್ದಿಷ್ಟ ಅವಧಿಗೆ ದೊರೆಯಲಿಕ್ಕಿಲ್ಲ. ಅಂತಹ ಸಂದರ್ಭದಲ್ಲಿ ೨೦೦೧-೨೦೧೧ ರೊಳಗಿನ ಅವಧಿಯನ್ನು ಪರಿಗಣಿಸಿ ಮಾಹಿತಿಯನ್ನು ಸಂಗ್ರಹಿಸಿ ಕೊಳ್ಳಲಾಗಿದೆ. ಕಳೆದ ಒಂದು ದಶಕದಲ್ಲಿ ನಮ್ಮ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ವರಮಾನ) ತೀವ್ರಗತಿಯಲ್ಲಿ ಮತ್ತು ಅಗಾಧ ಪ್ರಮಾಣದಲ್ಲಿ ಏರಿಕೆಯಾಗಿದೆ. ನಮ್ಮ ರಾಜ್ಯದ (ಚಾಲ್ತಿ ಬೆಲೆಗಳಲ್ಲಿ) ಒಟ್ಟು ವರಮಾನವು ೨೦೦೦-೨೦೦೧ರಲ್ಲಿ ರೂ. ೧,೦೪,೯೬೨ ಕೋಟಿಯ... ಇದು ೨೦೦೮-೨೦೦೯ರಲ್ಲಿ ರೂ. ೨,೬೯,೧೧೭ ಕೋಟಿಯಾಗಿ... ಈ ಅವಧಿಯಲ್ಲಿ ತಲಾ ವರಮಾನವು ರೂ. ೧೯,೯೩೫ರಿಂದ ರ... ೪೬,೨೮೫ರಷ್ಟಾಗಿದೆ. ಅಂದರೆ ಒಟ್ಟು ವರಮಾನದಲ್ಲಿ ೨.೫೭ ಪ... ಏರಿಕೆ ಯಾಗಿದ್ದರೆ (ಶೇ. ೨೫೭.೫೪) ತಲಾ ವರಮಾನದಲ್ಲಿ ೨.೩೨ ಪ... (ಶೇ. ೨೩೨.೧೭) ಏರಿಕೆಯಾಗಿದೆ. ಎರಡರಲ್ಲಿಯೂ ಸರಿಸುಮ... ಸಮವಾದ ಏರಿಕೆ ಉಂಟಾಗಿದೆ.

ನಮ್ಮ ರಾಜ್ಯದಲ್ಲಿ ಒಟ್ಟು ಸಾಕ್ಷರತೆಯು ೨೦೦೧ರಲ್ಲಿ ಶೇ. ೬೬. ...ರಷ್ಟಿದ್ದುದು ೨೦೧೧ರಲ್ಲಿ ಶೇ. ೭೫.೬೦ಕ್ಕೇರಿದೆ. ಮಹಿಳೆಯರ ಸಾಕ್ಷರ... ಪ್ರಮಾಣವು ೨೦೦೧ರಲ್ಲಿ ಶೇ. ೫೬.೮೭ರಷ್ಟಿತ್ತು. ಇದು ೨೦೧೧... ಶೇ. ೬೮.೧೩ಕ್ಕೇರಿದೆ. ನಮ್ಮ ರಾಜ್ಯವು ಕಳೆದ ದಶಕದಲ್ಲಿ ಜನಸಂಖ್ಯೆ... ಬೆಳವಣಿಗೆ ಪ್ರಮಾಣವನ್ನು ತೀವ್ರಗತಿಯಲ್ಲಿ ತಡೆಯುವುದರಲ್ಲಿ ಯ... ಯಾಗಿದೆ. ನಮ್ಮ ಜನಸಂಖ್ಯಾ ಬೆಳವಣಿಗೆ ಪ್ರಮಾಣ ೧೯೯೧-೨೦೦೧... ಶೇ. ೧೭.೫೧ರಷ್ಟಿದ್ದುದು ೨೦೦೧-೨೦೧೧ರಲ್ಲಿ ಅದು ಶೇ. ೧೫. ...ಕ್ಕಿಳಿದಿದೆ. ಜನಸಂಖ್ಯೆಯ ಒತ್ತಡದ ಬಹುಮುಖ್ಯ ಸೂಚಿಯಾದ ೦-... ವಯೋಮಾನದ ಮಕ್ಕಳ ಪ್ರಮಾಣ ೨೦೦೧ರಲ್ಲಿ ಶೇ. ೧೩.೫೯ರಷ್ಟಿದ್ದು... ೨೦೧೧ರಲ್ಲಿ ಶೇ. ೧೧.೨೧ಕ್ಕಿಳಿದಿದೆ. ಬಹಳ ಮುಖ್ಯವಾಗಿ ೦-... ವಯೋಮಾನದ ಮಕ್ಕಳ ಸಂಖ್ಯೆಯು ೨೦೦೧ರಲ್ಲಿ ೭೧.೮೨ ಲಕ್ಷವಿದ್ದು... ೨೦೧೧ರಲ್ಲಿ ಅದು ೬೮.೫೫ ಲಕ್ಷಕ್ಕಿಳಿದಿದೆ. ಚೀನಾ ದೇಶಕ್ಕೆ ಹೋಗಿ ಬಂದ ನ... ಮಾಜಿ ಮುಖ್ಯಮಂತ್ರಿಯೊಬ್ಬರು ನಮ್ಮಲ್ಲಿ ಜನಸಂಖ್ಯೆಯ ಬೆಳವಣಿಗೆಯ... ತಡೆಯಲು 'ಒಂದು ಮಗು ಕುಟುಂಬ'ವನ್ನು ಕಡ್ಡಾಯ ಮಾಡಬೇಕೆಂ... ಹೇಳಿದ್ದರು. ಅವರಿಗೆ ಪಾಠ ಕಲಿಸುವ ರೀತಿಯಲ್ಲಿ ಜನರು ಜನಸಂಖ್ಯೆ... ಬೆಳವಣಿಗೆಯನ್ನು ರಾಜ್ಯದಲ್ಲಿ ನಿಯಂತ್ರಿಸಿರುವುದು ಶ್ಲಾಘನೀ... ಸಂಗತಿಯಾಗಿದೆ. ಇದು ೨೦೧೧ರ ಜನಗಣತಿಯಲ್ಲಿ ದೃಢಪಟ್ಟಿದೆ.

ನಮ್ಮ ಜನಸಂಖ್ಯೆಯು ೨೦೦೧ರಲ್ಲಿ ೫೨೮.೫೦ ಲಕ್ಷವಿತ್ತು. ಇದು ೧೧ರಲ್ಲಿ ೬೧೧.೩೦ ಲಕ್ಷವಾಗಿದೆ. ಇಲ್ಲಿನ ನಿವ್ವಳ ಏರಿಕೆ ೮೨.೮೦ . ಈ ಏರಿಕೆಯಲ್ಲಿ ಗ್ರಾಮೀಣ ಪ್ರದೇಶದ ಕಾಣಿಕೆ ೨೬.೬೩ ಲಕ್ಷ ೩೨.೧೬)ದಷ್ಟಾದರೆ ನಗರ ಪ್ರದೇಶದ ಕಾಣಿಕೆ .೧೭ ಲಕ್ಷದಷ್ಟಾಗಿದೆ (ಶೇ. ೬೭.೮೪). ಜನಸಂಖ್ಯೆಯ ಏರಿಕೆಗೆ ೯೧-೨೦೦೧ರಲ್ಲಿ ಗ್ರಾಮೀಣ ಪ್ರದೇಶದ ಕಾಣಿಕೆಯು ಶೇ. .೫೧ರಷ್ಟಿತ್ತು. ಇದು ೧೯೮೧-೧೯೯೧ರಲ್ಲಿ ಶೇ. ೫೯.೪೬ರಷ್ಟಿತ್ತು. ು ಉಂಟುಮಾಡುತ್ತಿರುವ ವಿಕೃತಿ ಯಾವ ಬಗೆಯದು? ಇದು ನ್ನು ಸೂಚಿಸುತ್ತದೆ? ಈ ಬದಲಾವಣೆಯನ್ನು ನಾವು ರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

ಜೆಟ್ಟಿನ ಗಾತ್ರ

ನಮ್ಮ ರಾಜ್ಯದಲ್ಲಿ ಬಜೆಟ್ಟಿನ ಗಾತ್ರವನ್ನು ನಮ್ಮ ಸರ್ಕಾರವು ಧನೆಯ ಸಂಗತಿಯೆಂದು ಉಲ್ಲೇಖಿಸುತ್ತದೆ. ನಮ್ಮ ಸರ್ಕಾರದ ಯು ನಮ್ಮ ಬಜೆಟ್ಟಿನ ಗಾತ್ರವನ್ನು ಒಂದು ಲಕ್ಷ ೋಟಿಗೇರಿಸುವುದೆಂದು ಹೇಳಲಾಗುತ್ತಿದೆ. ಇಲ್ಲಿ ಬಜೆಟ್ಟಿನ ಗಾತ್ರವನ್ನು ಿವೃದ್ಧಿಯ ಸೂಚಿಯನ್ನಾಗಿ ಗುರುತಿಸಲಾಗುತ್ತಿದೆ. ನಮ್ಮ ರಾಜ್ಯದ ಜೆಟ್ಟಿನ ಗಾತ್ರವು ೨೦೦೬-೨೦೦೭ರಲ್ಲಿ ರೂ. ೪೪,೧೩೬.೯೬ ದ್ದುದು ೨೦೧೦-೨೦೧೧ರಲ್ಲಿ ಅದು ರೂ. ೬೦೦೦೦ ೋಟಿಯೆಂದು ಅಂದಾಜು ಮಾಡಲಾಗಿದೆ. ಇದನ್ನು ಒಂದು ಲಕ್ಷ ೋಟಿಗೇರಿಸುವುದರ ಬಗ್ಗೆ ಸರ್ಕಾರ ಹೇಳಿ ಕೊಳ್ಳುತ್ತಿದೆ. ಬಜೆಟ್ಟಿನ ತ್ರವು ಅಭಿವೃದ್ಧಿಯ ಸೂಚಿ ಹೇಗಾಗುತ್ತದೆ ಎಂಬುದನ್ನು ನಾವು ೋಚಿಸಬೇಕು. ಆದರೆ ಮಾಜಿ ಮತ್ತು ಹಾಲಿ ಮುಖ್ಯಮಂತ್ರಿಗಳು ನ್ನು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಮೆಹಬೂಬ್ ಉಲ್ ಹಕ್ ೯೦ರಲ್ಲಿ ಯುಎನ್‌ಡಿಪಿಯ ಮೊದಲ 'ಮಾನವ ಅಭಿವೃದ್ಧಿ ದಿ'ಯಲ್ಲಿ 'ವರಮಾನವೇ ಜನರ ಬದುಕಿನ ಮೊತ್ತವಲ್ಲ'ವೆಂದು ಪಡಿಸಿದ್ದಾರೆ. ಇಂದು ಥಳ-ಥಳಿಸೆ ಹೊಳೆಯುವ ರಸ್ತೆಗಳು ಿವೃದ್ಧಿಯ ಸೂಚಿಗಳಾಗಿವೆ. ಶ್ರೀ ಎನ್. ಆರ್. ನಾರಾಯಣಮೂರ್ತಿ ರಿಗೆ ಬೆಂಗಳೂರಿನಲ್ಲಿನ ಟ್ರಾಫಿಕ್ ಜಾಮನ್ನು ಸರಿಪಡಿಸುವುದೇ ಿವೃದ್ಧಿಯಾಗಿದೆ.

ಯಲ್ಲಿನ ಕ್ರೈಸಿಸ್

ನಮ್ಮ ರಾಜ್ಯದಲ್ಲಿ ವಾರ್ಷಿಕ ಸಾಗುವಳಿ ಪ್ರದೇಶ ೭೫ರಿಂದ ೮೦ ಹೆಕ್ಟೇರಿನಷ್ಟಿದೆ. ಇದರಲ್ಲಿ ತೀವ್ರ ಬದಲಾವಣೆಗಳು ಯುವುದಿಲ್ಲ. ಆದರೆ ಆಹಾರೋತ್ಪಾದನೆಯಲ್ಲಿ ತೀವ್ರಗತಿಯ ಪೇರುಗಳು ಸಂಭವಿಸುತ್ತಿವೆ. ಇದರಲ್ಲಿ ಸ್ಥಿರತೆಯನ್ನು ಧಿಸಿಕೊಳ್ಳುವುದು ನಮಗೆ ಕಳೆದ ಮೂರು ದಶಕಗಳಿಂದ (೧೯೮೦ ದ) ಸಾಧ್ಯವಾಗಿಲ್ಲ. ನಮ್ಮ ಆಹಾರೋತ್ಪಾದನೆಯು ೧೯೮೦-೮೧ ೬೨ ಲಕ್ಷ ಟನ್ನಿನಷ್ಟಿದ್ದುದು ೧೯೯೦-೧೯೯೧ರಲ್ಲಿಯೂ ೬೨ ಲಕ್ಷ ನಷ್ಟಿತ್ತು. ಮುಂದೆ ಅದು ೨೦೦೧-೨೦೦೨ರಲ್ಲಿ ೧೦೦ ಲಕ್ಷ ಟನ್ನು ಿತು. ಆದರೆ ೨೦೦೩-೦೪ರಲ್ಲಿ ಮತ್ತೆ ೬೫ ಲಕ್ಷ ಟನ್ನಿಗಿಳಿಯಿತು. ೨೦೦೮-೦೯ರಲ್ಲಿ ಅದು ೧೧೨ ಟನ್ನುಗಳಷ್ಟಾಗಿದೆ. ಆದರೆ ನಮ್ಮ ಮಾತ್ರ ೧೨೫ ಲಕ್ಷ ಟನ್ನುಗಳಿಗಿಂತ ಅಧಿಕವಾಗಿರುತ್ತದೆ. ಅದನ್ನು ಧಿಸಿಕೊಳ್ಳುವುದರಲ್ಲಿ ನಾವು ವಿಫಲರಾಗಿದ್ದೇವೆ. ನಮ್ಮಲ್ಲಿ ನೀರಾವರಿ ೇಶ ೨೦೦೯-೨೦೧೦ರಲ್ಲಿ ೩೪ ಲಕ್ಷ ಹೆಕ್ಟೇರುಗಳೆಂದು ಳಲಾಗಿದೆ. ಈ ೩೪ ಲಕ್ಷ ಹೆಕ್ಟೇರುಗಳಿಗೂ ನೀರು ಹರಿಯುತ್ತಿದೆಯೇ ದರೆ ಉತ್ತರವನ್ನು ಖಚಿತವಾಗಿ ನೀಡುವುದು ಕಷ್ಟ. ನಮ್ಮ ರ್ಕಾರವು ಇತ್ತೀಚೆಗೆ ಸಾವಯವ ಕೃಷಿಯ ಬಗ್ಗೆ ವ್ಯಸನದ ರೀತಿಯಲ್ಲಿ ತನಾಡುತ್ತಿದೆ. ಅದಕ್ಕಾಗಿ ನೂರಾರು ಕೋಟಿ ಹಣವನ್ನು ಯೋಗಿಸುತ್ತಿದೆ. ಆದರೆ ಇದರ ಬಗ್ಗೆ ಸರ್ಕಾರಕ್ಕೆ ವಿಶ್ವಾಸವಿದ್ದಂತೆ ಖುವುದಿಲ್ಲ. ಏಕೆಂದರೆ ಸಾವಯವ ಕೃಷಿಯ ಬಗ್ಗೆ ಮಾತನಾಡುವ ರ್ಕಾರ ಅದೇ ಉಸಿರಿನಲ್ಲಿ 'ಜಾಗತಿಕ ಕೃಷಿ ಬಂಡವಾಳ ಹೂಡಿಕೆಗಾರರ ಸಮಾವೇಶ'ದ ಬಗ್ಗೆಯೂ ಮಾತನಾಡುತ್ತಿದೆ. ನೀರಾವರಿಯ ಹುಚ್ಚು ಬಿಟ್ಟು ಒಣ ಭೂಮಿ ಬೇಸಾಯದ ಬಗ್ಗೆ ನಾವು ಹೆಚ್ಚು ಗಮನ ಹರಿಸದಿದ್ದರೆ ನಮ್ಮ ಕೃಷಿಯು ಕ್ರೈಸಿಸ್‌ನಿಂದ ಹೊರಬರುವುದು ಸಾಧ್ಯವಾಗುವುದಿಲ್ಲ. ಇದೀಗ ರೈತರು ಸರ್ಕಾರದ ಭೂಮಿ ಆಕ್ರಮಣ ನೀತಿಯಿಂದ ಬಸವಳಿದಿದ್ದಾರೆ. ಇನ್ನೊಂದು ಕಡೆ ಉದ್ದಿಮೆಗಾರರು ರಾಜ್ಯದಲ್ಲಿ ಒಂದು ಗುಡ್ಡವನ್ನೂ ಬಿಡದಂತೆ ನೆಲಸಮ ಮಾಡುತ್ತಿದ್ದಾರೆ. ಈ ಬೆಟ್ಟ-ಗುಡ್ಡಗಳನ್ನು ನೆಲಸಮ ಮಾಡುವ ಕ್ರಮದಿಂದ ನಮ್ಮ ಪರಿಸರದ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗುತ್ತದೆ ಎಂಬುದರ ಬಗ್ಗೆ ಯಾರಿಗೂ ಕಾಳಜಿಯಿದ್ದಂತೆ ಕಾಣುವುದಿಲ್ಲ. ಕೃಷಿಯ ದುಸ್ಥಿತಿ ಮತ್ತು ಪರಿಸರ ನಾಶಗಳ ನಡುವೆ ಸಂಬಂಧವಿದೆ.

ಕೈಗಾರಿಕಾ ರಂಗ

ನಮ್ಮ ಉದ್ದಿಮೆಗಾರರು, ಅರ್ಥಶಾಸ್ತ್ರಜ್ಞರು, ಸರ್ಕಾರ, ಯೋಜನಾ ಮಂಡಳಿಗಳು ಇನ್ನೂ 'ಕೈಗಾರಿಕೀಕರಣ ಇಲ್ಲವೇ ವಿನಾಶ' ಎಂಬ ಸರ್. ಎಂ. ವಿಶ್ವೇಶ್ವರಯ್ಯ ಅವರ ಘೋಷಣೆಯಲ್ಲಿ ಬದುಕುತ್ತಿರುವಂತೆ ಕಂಡುಬರುತ್ತದೆ. ಆದರೆ ಈಗಾಗಲೆ ಅದನ್ನು 'ಕೈಗಾರಿಕೀಕರಣ ಮತ್ತು ವಿನಾಶ' ಎಂಬ ಘೋಷಣೆಯಾಗಿ ಬದಲಾಯಿಸಿರುವುದು ಅವರಿಗೆ ತಿಳಿದಿಲ್ಲ. ಪೋಸ್ಕೊ, ಮಿತ್ತಲ್ ಮುಂತಾದ ಭಾರಿ ಬಂಡವಳಿಗರು ರಾಜ್ಯದ ಮೇಲೆ ದಾಳಿಯಿಡುತ್ತಿದ್ದಾರೆ. ಈ ಉದ್ದಿಮೆದಾರರಿಗೆ ನೂರು-ಸಾವಿರ ಹೆಕ್ಟೇರು ಭೂಮಿ ಸಾಕಾಗುವುದಿಲ್ಲ. ಇವರು ಹತ್ತಾರು ಸಾವಿರ ಹೆಕ್ಟೇರು ಭೂಮಿ ಆಕ್ರಮಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸರ್ಕಾರವು ಕುಮ್ಮಕ್ಕು ನೀಡುತ್ತಿದೆ. ಇಂದು ಉದ್ದಿಮೆಗಾರರೆಲ್ಲ ಉದ್ದಿಮೆಯ ಭಾಗವಾಗಿ (ಪ್ರತ್ಯೇಕವಾಗಿಯಲ್ಲ) ರಿಯಲ್ ಎಸ್ಟೇಟ್ ವ್ಯವಹಾರದಲ್ಲೂ ಬಂಡವಾಳ ತೊಡಗಿಸುತ್ತಿದ್ದಾರೆ. ಬಂಡವಾಳ ಹೂಡಿಕೆಯೇ ಅಭಿವೃದ್ಧಿ ಎನ್ನುವ ಇನ್ನೊಂದು ಭ್ರಮೆಯಲ್ಲಿ ನಮ್ಮ ಸರ್ಕಾರ ಹಾಗೂ ಅದರ ಬೆಂಬಲಿಗರು ಮುಳುಗಿರುವಂತೆ ಕಾಣುತ್ತಿದೆ.

ನಮ್ಮಲ್ಲಿ ಕೈಗಾರಿಕಾ ಉತ್ಪಾದನೆಯು ನಡೆಯುತ್ತಿರುವ ಪರಿಯನ್ನು ನೋಡಿದರೆ ಅದರ ವಿಧ್ವಂಸಕ ಸ್ವರೂಪದ ಪರಿಚಯವಾಗುತ್ತದೆ. ಇದನ್ನು ಕೋಷ್ಟಕದಲ್ಲಿ ಮಂಡಿಸಲಾಗಿದೆ.

ಕೋಷ್ಟಕ - ೧

ವಲಯವಾರು ಕೈಗಾರಿಕೋತ್ಪನ್ನದ ವಾರ್ಷಿಕ ಬೆಳವಣಿಗೆ ಸೂಚ್ಯಂಕ : ೨೦೦೧-೦೨ ರಿಂದ ೨೦೦೯-೨೦೧೦

ಕೈಗಾರಿಕಾ ವಲಯಗಳು	೨೦೦೧-೨೦೦೨	೨೦೦೭-೦೮	೨೦೦೯-೨೦೧೦	ಸಂಯುಕ್ತ ಸರಾಸರಿ ಬೆಳವಣಿಗೆ ಪ್ರಮಾಣ (೨೦೦೧-೨೦೧೦)
ಗಣಿಗಾರಿಕೆ	ಶೇ. ೨೧.೪೦	ಶೇ. ೧೭.೮೧	ಶೇ. ೩೭.೯೫	ಶೇ. ೧೩.೯೪
ತಯಾರಿಕೆ	ಶೇ. ೩.೩೦	ಶೇ. ೭.೭೬	ಶೇ. ೮.೪೭	ಶೇ. ೬.೧೮
ವಿದ್ಯುಚ್ಛಕ್ತಿ	ಶೇ. ೫.೫೪	ಶೇ. ೬.೨೩	ಶೇ. ೧೫.೭೮	ಶೇ. ೬.೪೮
ಒಟ್ಟು	ಶೇ. ೩.೭೪	ಶೇ. ೭.೩೫	ಶೇ. ೧೧.೪೭	ಶೇ. ೬.೬೭

ಮೂಲ : ಕರ್ನಾಟಕ ಸರ್ಕಾರ ೨೦೧೧. ಆರ್ಥಿಕ ಸಮೀಕ್ಷೆ ೨೦೧೦-೨೦೧೧. ಪು:೭೬. ಮೂಲ ವರ್ಷ : ೧೯೯೯-೨೦೦೦

'ಕೈಗಾರಿಕೀಕರಣ ಮತ್ತು ವಿನಾಶ' ಎರಡೂ ಏಕಕಾಲದಲ್ಲಿ ಹೇಗೆ ನಡೆಯುತ್ತಿದೆ ಎಂಬುದು ಕೋಷ್ಟಕದಲ್ಲಿನ ಗಣಿಗಾರಿಕೆ ಸಾಧಿಸಿರುವ ಬೆಳವಣಿಗೆ ಪ್ರಮಾಣದಿಂದ ತಿಳಿದುಕೊಳ್ಳಬಹುದು. ಒಟ್ಟಾರೆ ಕೈಗಾರಿಕೋತ್ಪನ್ನದ ಬೆಳವಣಿಗೆ ಪ್ರಮಾಣ ವಾರ್ಷಿಕ ಶೇ. ೬.೬೭ರಷ್ಟಿದ್ದರೆ ಗಣಿಗಾರಿಕೆಯ ಬೆಳವಣಿಗೆ ಪ್ರಮಾಣ ವಾರ್ಷಿಕ ಶೇ. ೧೩.೯೪ರಷ್ಟಿದೆ. ಈ ಗಣಿಗಾರಿಕೆಯು ಯಾವ ಯಾವ ಬಗೆಯ ವಿನಾಶವನ್ನು (ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ) ಉಂಟು ಮಾಡಿದೆ ಎಂಬುದನ್ನು ವಿವರಿಸುವ ಅಗತ್ಯವಿಲ್ಲ! ಭ್ರಷ್ಟಾಚಾರ, ಕೈಗಾರಿಕೀಕರಣ, ಪರಿಸರನಾಶ, ಮುಂದಿನ ತಲೆಮಾರಿನ ಬಗೆಗಿನ ಔದಾಸೀನ್ಯಗಳೆಲ್ಲವೂ ಏಕಕಾಲದಲ್ಲಿ ನಡೆಯುತ್ತಿವೆ. ಈ ವಿಕೃತಿಯ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ.

ಕರ್ನಾಟಕದಲ್ಲಿ ರಾಚನಿಕ ಪರಿವರ್ತನೆ

ಸಾಂಪ್ರದಾಯಿಕವಾಗಿ ಒಂದು ಆರ್ಥಿಕತೆಯ ಮೂರು ವಲಯಗಳ ಸಾಪೇಕ್ಷ ಸ್ಥಾನಮಾನಗಳಲ್ಲಿ ಉಂಟಾಗುವ ಪರಿವರ್ತನೆಯನ್ನು ಅಭಿವೃದ್ಧಿಯ ಮಾಪಕವಾಗಿ ಬಳಸುವುದು ರೂಢಿಯಲ್ಲಿದೆ. ಅಭಿವೃದ್ಧಿಯ ಆರಂಭದ ಹಂತದಲ್ಲಿ ಉದ್ಯೋಗವು ಪ್ರಾಥಮಿಕ ವಲಯ ಪ್ರಧಾನವಾಗಿರುತ್ತದೆ ಮತ್ತು ರಾಜ್ಯದ ಒಟ್ಟು ವರಮಾನದಲ್ಲಿ ಪ್ರಾಥಮಿಕ ವಲಯದ ಕಾಣಿಕೆಯು ಅಧಿಕವಾಗಿರುತ್ತದೆ. ಅಭಿವೃದ್ಧಿಯು ಉನ್ನತವಾದಂತೆ ಪ್ರಾಥಮಿಕ ವಲಯದ ಪ್ರಾಧಾನ್ಯತೆಯು ಕಡಿಮೆಯಾಗಿ ದ್ವಿತೀಯ ವಲಯದ

ಆರ್ಥಿಕತೆಯ ಬೆಳವಣಿಗೆಯ ವಲಯದ ಸ್ವರೂಪ ಪ್ರಾಮುಖ್ಯತೆಯನ್ನು ಗಳಿಸಿಕೊಂಡು [illegible] ಎಂಬ ರಾಜಕೀಯ ಪರಿವರ್ತನಾ ಸಿದ್ಧಾಂತ. ಈ ಪರಿವರ್ತನೆಯು ನಮ್ಮ ರಾಜ್ಯದಲ್ಲೂ ನಡೆಯುತ್ತಿದೆ. ಆದರೆ ಅದರ ಸ್ವರೂಪವು ಮುಂದುವರಿದ ದೇಶಗಳಲ್ಲಿನ ಅನುಭವಕ್ಕಿಂತ ಭಿನ್ನವಾಗಿದೆ. ನಮ್ಮ ರಾಜ್ಯದ ವರಮಾನದಲ್ಲಿ ಪ್ರಾಥಮಿಕ ವಲಯದ ಪ್ರಮಾಣ ತೀವ್ರಗತಿಯಲ್ಲಿ ಕುಸಿಯುತ್ತಿದೆ ಮತ್ತು ಪ್ರಾಥಮಿಕೇತರ ವಲಯಗಳ ಕಾಣಿಕೆಯು ಅಧಿಕವಾಗುತ್ತಿದೆ. ಉದಾಹರಣೆಗೆ ೧೯೯೯-೨೦೦೦ದಲ್ಲಿ ರಾಜ್ಯ ವರಮಾನಕ್ಕೆ ಪ್ರಾಥಮಿಕ ವಲಯದ ಕಾಣಿಕೆಯು ಶೇ. ೩೧.೩೨ರಷ್ಟಿದ್ದುದು ೨೦೦೯-೨೦೧೦ರಲ್ಲಿ ಶೇ. ೧೬.೮೩ಕ್ಕಿಳಿದಿದೆ. ಆದರೆ ಇದೇ ಅವಧಿಯಲ್ಲಿ ಪ್ರಾಥಮಿಕೇತರ ವಲಯದ ಕಾಣಿಕೆಯು ೧೯೯೯-೨೦೦೦ದಲ್ಲಿ ಶೇ. ೬೮.೬೮ ರಷ್ಟಿದ್ದುದು ೨೦೦೯-೨೦೧೦ರಲ್ಲಿ ಶೇ. ೮೩.೧೭ಕ್ಕೇರಿದೆ. ಇದು ರೂಢಿಯಂತೆ ಸರಿಯಾಗಿದೆ. ಆದರೆ ಇದೇ ಬಗೆಯ ಪರಿವರ್ತನೆಯು ದುಡಿಮೆಗಾರರ ವಲಯವಾರು ಅವಲಂಬನೆಯಲ್ಲಿ ನಡೆಯುತ್ತಿಲ್ಲ. ಇಂದಿಗೂ ನಮ್ಮ ರಾಜ್ಯದಲ್ಲಿ ಅರ್ಧದಷ್ಟು ದುಡಿಮೆಗಾರರು ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿದ್ದಾರೆ. ಇದನ್ನು ಕಡಿಮೆ ಮಾಡಬೇಕೆಂದು ಅರ್ಥಶಾಸ್ತ್ರಜ್ಞರು ವಾದಿಸುತ್ತಾರೆ. ಈ ವಾದದಲ್ಲಿ ಹುರುಳಿದೆಯೆಂದೆನಿಸುವುದಿಲ್ಲ. ಈ ಬಗೆಯ ಪರಿವರ್ತನೆಯು ಕೇವಲ ನಗರ ಪ್ರದೇಶದಲ್ಲಿ ಕೊಳಚೆ ಪ್ರದೇಶಗಳನ್ನು ಹುಟ್ಟು ಹಾಕಬಹುದು ಮತ್ತು ವಸತಿಯ, ಕುಡಿಯುವ ನೀರಿನ, ಟ್ರಾಫಿಕ್ಕಿನ ಸಮಸ್ಯೆಗಳನ್ನು ಅದು ಹೆಚ್ಚಿಸಬಹುದು. ಈ ಸಮಸ್ಯೆಯ ಒಂದು ಸೂಚನೆಯನ್ನು ೨೦೧೧ರ ಜನಗಣತಿಯು ಗ್ರಾಮೀಣ ಮತ್ತು ನಗರ ಪ್ರದೇಶದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣದಲ್ಲಿನ ಭಿನ್ನತೆಯಲ್ಲಿ ತೋರಿಸಿಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಜನಸಂಖ್ಯೆಯ ಬೆಳವಣಿಗೆಯು ೨೦೦೧-೨೦೧೧ರ ಅವಧಿಯಲ್ಲಿ ಶೇ. ೭.೬೩ರಷ್ಟಿದ್ದರೆ ನಗರ ಪ್ರದೇಶದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಇದೇ ಅವಧಿಯಲ್ಲಿ ಶೇ. ೩೧.೨೭ರಷ್ಟಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬದುಕು ಅಸಹನೀಯವಾದುದರ ಪರಿಣಾಮವಾಗಿ ಜನರು ಅಲ್ಲಿಂದ ನಗರ ಪ್ರದೇಶಗಳಿಗೆ ದುಡಿಮೆಯನ್ನು ಅರಸಿಕೊಂಡು ವಲಸೆ ಹೋಗುತ್ತಿದ್ದಾರೆ.

ಭಾಗ-೨

ಮಾನವ ಅಭಿವೃದ್ಧಿಯಲ್ಲಿ ನಮ್ಮ ಸಾಧನೆ

ಮೇಲೆ ವಿವರಿಸಿರುವ 'ವರಮಾನ ಅಭಿವೃದ್ಧಿ'ಯಲ್ಲಿ ಕರ್ನಾಟಕವು ಕ ದಶಕದಲ್ಲಿ ಯಶಸ್ಸನ್ನು ಕಂಡಿದೆ. ಆದರೆ ಸಮಸ್ಯೆಯಿರುವುದು ಏರಿಕೆಯ ವರಮಾನ, ಉತ್ಪಾದನೆ, ಬಂಡವಾಳ ಹೂಡಿಕೆ ಮುಂತಾದವು ಜ ಬದುಕಾಗಿ. ಜನರ ಅಕ್ಷರವಾಗಿ, ಜನರ ಆರೋಗ್ಯವಾಗಿ, ಜನರ ಆಹಾರವ ಪರಿವರ್ತನೆಗೊಂಡಿದೆಯೇ ಎಂಬುದಾಗಿದೆ. ಈ ಪರಿವರ್ತನೆಯನ್ನು ಅಮರ್ತ್ಯ 'ಮಾನವ ಅಭಿವೃದ್ಧಿ'ಯೆಂದು ಕರೆಯುತ್ತಾರೆ. ಸೆನ್ ಪ್ರಕಾರ ಅಭಿವೃ ಸಂಬಂಧಿಸಿದಂತೆ ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆಗಳೆಂದರೆ ಅರಿಸ್ಟಾಟ ಪರಿಭಾಷೆಯಲ್ಲಿ 'ಜನರ ಬದುಕು ಸಮೃದ್ಧವಾಗಿದೆಯೇ' ಎಂಬುದಾಗಿದೆ, ಜಾ ರಾಲ್ಸ್‌ನ ಪರಿಭಾಷೆಯಲ್ಲಿ ಏರಿಕೆಯಾದ ವರಮಾನ, ಉತ್ಪಾದನೆ, ಉದ್ಯೋಗ ಸಮಾಜದಲ್ಲಿನ ವಂಚಿತರಿಗೆ, ಮಹಿಳೆಯರಿಗೆ, ದಲಿತರಿಗೆ, ಹಿಂದುಳಿದವರಿಗೆ ಹೆಚ್ಚಾಗಿ ದೊರೆಯುತ್ತಿವೆಯೇ ಎಂಬುದಾಗಿದೆ. ಈ ಬಗೆಯ ಸಾಮಾಜಿಕ ವ್ಯವಸ್ಥೆಯ ಸಾಧ್ಯವಾಗಿಸುವ ಕ್ರಮವನ್ನು ರಾಲ್ಸ್ 'ಸಾಮಾಜಿಕ ನ್ಯಾಯ'ವೆಂದು ಕರೆಯುತ (ನೋಡಿ : 'ಎ ಥಿಯರಿ ಆಫ್ ಜಸ್ಟೀಸ್' - ೧೯೭೧). ನಮ್ಮ ರಾಜ್ಯದಲ್ಲಿ ವರಮಾ ಏರಿಕೆಗೆ, ಬಂಡವಾಳ ಹೂಡಿಕೆಗೆ, ಥಳ-ಥಳನೆ ಹೊಳೆಯುವ ರಸ್ತೆಗಳ ನಿರ್ಮಾ ವಿಮಾನ ನಿಲ್ದಾಣಗಳನ್ನು ಕಟ್ಟುವುದಕ್ಕೆ ನೀಡಿದಷ್ಟು ಗಮನವನ್ನು ವಂಚಿತ ಮಹಿಳೆಯರ, ದಲಿತರ, ಹಿಂದುಳಿದವರ ಬದುಕನ್ನು ವಿಶೇಷವಾಗಿ ಉತ್ತಮಪಡಿಸ ಬಗ್ಗೆ ನೀಡುತ್ತಿಲ್ಲ. ವರಮಾನವೇ ಜನರ ಬದುಕಿನ ಮೊತ್ತವಲ್ಲ ಎಂಬುದಕ್ಕೆ ಇ ನೋಡಿ ನಿದರ್ಶನ.

ವರಮಾನ ಅಭಿವೃದ್ಧಿ v/s ಮಾನವ ಅಭಿವೃದ್ಧಿ

ಬಳ್ಳಾರಿ ಜಿಲ್ಲೆಯ ತಲಾ ವರಮಾನ ೨೦೦೮-೨೦೦೯ರಲ್ಲಿ ರೂ. ೫೨,೧ ರಷ್ಟಿದ್ದರೆ ಉಡುಪಿ ಜಿಲ್ಲೆಯ ತಲಾ ವರಮಾನ ರೂ. ೫೩,೮೧೭. ವಿಜಾಪುರ ಜಿಲ್ ತಲಾ ವರಮಾನ ೨೦೦೮-೨೦೦೯ರಲ್ಲಿ ರೂ. ೨೯,೩೦೭ರಷ್ಟಾದರೆ ಹಾಸನ ಜಿಲ್

ತಾ ವರಮಾನ ರೂ. ೨೯,೮೯೧. ಕೊಪ್ಪಳ ಜಿಲ್ಲೆಯ ತಲಾ ವರಮಾನ ೨೦೦೮-೨೦೦೯ರಲ್ಲಿ ರೂ. ೨೭,೬೩೬ರಷ್ಟಾದರೆ ಹಾವೇರಿ ಜಿಲ್ಲೆಯ ತಲಾ ವರಮಾನ ರೂ. ೨೬,೪೨೮. ಇಲ್ಲಿ ನೀಡಿರುವ ಬಳ್ಳಾರಿ, ವಿಜಾಪುರ ಮತ್ತು ಕೊಪ್ಪಳ ಜಿಲ್ಲೆಗಳ ತಲಾ ವರಮಾನವು ಹೆಚ್ಚು ಕಡಿಮೆ ಕ್ರಮವಾಗಿ ಉಡುಪಿ, ಹಾಸನ ಮತ್ತು ಹಾವೇರಿ ಜಿಲ್ಲೆಗಳ ತಲಾ ವರಮಾನಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಸರಿಸಮವಾಗಿದೆ. ಆದರೆ ೨೦೧೧ರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮೊದಲ ಗುಂಪಿನ ಮೂರು ಜಿಲ್ಲೆಗಳ ಸೂಚ್ಯಂಕಗಳು ಕ್ರಮವಾಗಿ ೦.೬೧೭, ೦.೫೪೮ ಮತ್ತು ೦.೫೮೨ರಷ್ಟಿದ್ದರೆ ಎರಡನೆಯ ಗುಂಪಿನ ಜಿಲ್ಲೆಗಳ ಸೂಚ್ಯಂಕಗಳು ಕ್ರಮವಾಗಿ ೦.೭೧೪, ೦.೬೫೯ ಮತ್ತು ೦.೬೦೩ ಆಗಿದೆ. ಮೊದಲ ಗುಂಪಿನ ಜಿಲ್ಲೆಗಳಲ್ಲಿ ಸಾಕ್ಷರತೆಯು ೨೦೧೧ರಲ್ಲಿ ಕ್ರಮವಾಗಿ ಶೇ. ೬೭.೮೫, ಶೇ. ೬೭.೨೦ ಮತ್ತು ಶೇ. ೬೭.೨೮ರಷ್ಟಿದ್ದರೆ ಎರಡನೆಯ ಗುಂಪಿನ ಜಿಲ್ಲೆಗಳಲ್ಲಿ ಅದು ಕ್ರಮವಾಗಿ ಶೇ. ೮೬.೨೯, ಶೇ. ೭೫.೮೯ ಮತ್ತು ಶೇ. ೭೭.೬೦ರಷ್ಟಿದೆ. ಇದರ ಇಂಗಿತಾರ್ಥವಿಷ್ಟು: ವರಮಾನ ಕೆಳಮಟ್ಟದಲ್ಲಿರಲಿ ಅಥವಾ ಸಮವಾಗಿರಲಿ ಎರಡನೆಯ ಗುಂಪಿನ ಜಿಲ್ಲೆಗಳಲ್ಲಿ ಜನರ ಬದುಕು ಸಮೃದ್ಧವಾಗಿದೆ ಮತ್ತು ಸಮಾನತೆಯಿಂದ ಕೂಡಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಎರಡನೆಯ ಗುಂಪಿನ ಜಿಲ್ಲೆಗಳ ಸ್ಥಾನ ಮೊದಲನೆಯ ಗುಂಪಿನ ಜಿಲ್ಲೆಗಳ ಸ್ಥಾನಕ್ಕಿಂತ ಉತ್ತಮವಾಗಿದೆ. ಸಾಕ್ಷರತೆಯಲ್ಲಿ ಎರಡನೆಯ ಗುಂಪಿನ ಜಿಲ್ಲೆಗಳಿಗಿಂತ ಮೊದಲನೆಯ ಗುಂಪಿನ ಜಿಲ್ಲೆಗಳು ಬಹಳ ಹಿಂದುಳಿದಿವೆ. ಮೊದಲ ಗುಂಪಿನ ಜಿಲ್ಲೆಗಳಲ್ಲಿ ೨೦೦೧ರ ಜನಗಣತಿ ಪ್ರಕಾರ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಸರಾಸರಿ ಶೇ. ೧ರಷ್ಟಿದ್ದರೆ ಎರಡನೆಯ ಗುಂಪಿನ ಜಿಲ್ಲೆಗಳಲ್ಲಿ ಅದು ಸರಾಸರಿ ಶೇ. ೩೦ರಷ್ಟಿದೆ.

ವರಮಾನ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗಳ ನಡುವಿನ ಭಿನ್ನತೆಯನ್ನು ಕೋಷ್ಟಕ-೨ ಸ್ಪಷ್ಟವಾಗಿ ಮಂಡಿಸುತ್ತದೆ. ಇಲ್ಲಿ ವರಮಾನ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗಳ ನಡುವಿನ ಭಿನ್ನತೆಯನ್ನು ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದಂತೆ ವರಮಾನದಲ್ಲಿ ಉತ್ತಮವಾಗಿರುವ ಜಿಲ್ಲೆಗಳು ಮತ್ತು ಮಾನವ ಅಭಿವೃದ್ಧಿಯಲ್ಲಿ ಉತ್ತಮವಾಗಿರುವ ಜಿಲ್ಲೆಗಳ ನಡುವಿನ ಸಾಧನೆಗಳ ತುಲನೆಯಿಂದ ಅರಿತುಕೊಳ್ಳಬಹುದಾಗಿದೆ. ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು ೧೯೯೧-೨೦೦೧ರಿಂದ ೨೦೦೧-೨೦೧೧ರ ನಡುವೆ ಬಳ್ಳಾರಿ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಏರಿಕೆಯಾಗಿದೆ ಮತ್ತು ಇಂದು ಆ ಜಿಲ್ಲೆಗಳಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಅತ್ಯಂತ ಅಧಿಕ ಮಟ್ಟದಲ್ಲಿದೆ.

ಕೋಷ್ಟಕ-೨

ಜನಸಂಖ್ಯಾ ಬೆಳವಣಿಗೆ ಪ್ರಮಾಣ : ೧೯೯೧-೨೦೦೧ ಮತ್ತು ೨೦೦೧-೨೦೧೧

ದಶಕಗಳು	ಜನಸಂಖ್ಯೆಯ ದಶಕವಾರು ಬೆಳವಣಿಗೆ ಪ್ರಮಾಣ	
	೧೯೯೧-೨೦೦೧	೨೦೦೧-೨೦೧೧
ಕರ್ನಾಟಕ	ಶೇ. ೧೭.೫೧	ಶೇ ೧೫.೬೭
ಬಳ್ಳಾರಿ ಜಿಲ್ಲೆ	ಶೇ. ೨೨.೪೧	ಶೇ. ೨೪.೯೨
ವಿಜಾಪುರ ಜಿಲ್ಲೆ	ಶೇ. ೧೭.೫೧	ಶೇ. ೨೦.೩೮
ಕೊಪ್ಪಳ ಜಿಲ್ಲೆ	ಶೇ. ೨೪.೮೩	ಶೇ. ೧೬.೩೨
ಶಿವಮೊಗ್ಗ ಜಿಲ್ಲೆ	ಶೇ. ೧೩.೧೦	ಶೇ. ೬.೮೮
ಹಾಸನ ಜಿಲ್ಲೆ	ಶೇ. ೯.೬೮	ಶೇ. ೩.೧೭
ಹಾವೇರಿ ಜಿಲ್ಲೆ	ಶೇ. ೧೩.೩೯	ಶೇ. ೧೧.೦೮

ಮೂಲ : (೧) ಸೆನ್ಸಸ್ ಆಫ್ ಇಂಡಿಯಾ, ೨೦೦೧. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಡೈರೆಕ್ಟೊರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ. (೨) ಸೆನ್ಸಸ್ ಆಫ್ ಇಂಡಿಯಾ, ೨೦೧೧. ಪ್ರಾವಿಶಿನಲ್ ಪಾಪುಲೇಶನ್ ಟೋಟಲ್ಸ್. ಡೈರೆಕ್ಟೊರೇಟ್ ಆಫ್ ಸೆನ್ಸಸ್ ಆಪರೇಶನ್ಸ್, ಕರ್ನಾಟಕ.

ಆದರೆ ಮಾನವ ಅಭಿವೃದ್ಧಿಯಲ್ಲಿ ಉನ್ನತ ಸಾಧನೆ ಸಾಧಿಸಿಕೊಂಡಿರುವ ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಅದು ಇಳಿಮುಖವಾಗಿದೆ ಮತ್ತು ಕನಿಷ್ಠಮಟ್ಟವನ್ನು ತಲುಪಿದೆ. ಒಟ್ಟಾರೆ ವರಮಾನದಲ್ಲಿ ಉತ್ತಮವಾಗಿರುವ/ಸಮವಾಗಿರುವ ಮೊದಲ ಗುಂಪಿನ ಜಿಲ್ಲೆಗಳಿಗಿಂತ ಎರಡನೆಯ ಗುಂಪಿನ ಜಿಲ್ಲೆಗಳ ಸ್ಥಿತಿ [illegible] ದೃಷ್ಟಿಯಿಂದ ಉತ್ತಮವಾಗಿದೆ. ಆದರೆ ನಮ್ಮ ರಾಜ್ಯವು ಮಾನವ [illegible] ಹೆಚ್ಚಿನ ಆದ್ಯತೆಯನ್ನು ವರಮಾನ ಅಭಿವೃದ್ಧಿ ಮಾದರಿಗೆ [illegible]

ಪ್ರಾಥಮಿಕ ಶಿಕ್ಷಣ

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವೆಂದರೆ ಅದು ಒಂದು ಕೋಟಿ ಮಕ್ಕಳ ಭವಿಷ್ಯದ ಸಂಗತಿಯಾಗಿದೆ. ಒಂದರಿಂದ ಹತ್ತನೆಯ ತರಗತಿವರೆಗೆ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ೨೦೦೯-೨೦೧೦ರಲ್ಲಿ ೧೦೦.೩೫ ಲಕ್ಷ. ಇದರಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಶೇ. ೪೮.೨೩. ಒಟ್ಟು ಶಿಕ್ಷಕರ ಸಂಖ್ಯೆ ೩.೯೨ ಲಕ್ಷ. ಪ್ರಜಾಪ್ರಭುತ್ವದ, ಸಾಮಾಜಿಕ ನ್ಯಾಯದ, ಮಾನವ ಅಭಿವೃದ್ಧಿಯ ಬುನಾದಿ ಶಿಕ್ಷಣವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಸಮಸ್ಯೆಯನ್ನು ಮಾತ್ರ ಇಲ್ಲಿ ಚರ್ಚಿಸಬಯಸುತ್ತೇನೆ. ಸರ್ಕಾರದ ಅಂಕಿ-ಅಂಶಗಳ ಪ್ರಕಾರ ೨೦೦೫-೨೦೦೬ರಲ್ಲಿ ರಾಜ್ಯದಲ್ಲಿ ಒಂದನೆಯ ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆ ೧೨.೧೯ ಲಕ್ಷ. ಐದು ವರ್ಷಗಳ ನಂತರ, ಅಂದರೆ ೨೦೦೯-೨೦೧೦ರಲ್ಲಿ ಇವರೆಲ್ಲರೂ ಐದನೆಯ ತರಗತಿಯಲ್ಲಿರಬೇಕು. ಆದರೆ ೨೦೦೯-೨೦೧೦ರಲ್ಲಿ ಐದನೆಯ ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆ ೧೦.೮೩ ಲಕ್ಷ. ಅಂದರೆ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಸಂಖ್ಯೆ ೧.೩೬ ಲಕ್ಷ ಮತ್ತು ಮಕ್ಕಳ ಪ್ರಮಾಣ ಶೇ. ೧೨.೫೫. ಆದರೆ ಗುಲಬರ್ಗಾ ವಿಭಾಗದಲ್ಲಿ ಇದು ಶೇ. ೨೨.೭೬, ರಾಯಚೂರು ಜಿಲ್ಲೆಯಲ್ಲಿ ಶೇ. ೫೬.೮೬ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಶೇ. ೭೦.೨೩ರಷ್ಟಿದೆ. ಇದಕ್ಕೆ ಪ್ರತಿಯಾಗಿ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ಇದು ಕ್ರಮವಾಗಿ ಶೇ. ೬.೧೬, ಶೇ. ೧.೦೦ ಮತ್ತು ಶೇ. ೨.೧೧ರಷ್ಟಿದೆ. ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆಯು ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ತೀವ್ರವಾಗಿದೆ. ಆದರೆ ಇದನ್ನು ನಿರ್ವಹಿಸಲು ನಮ್ಮಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಿಂದುಳಿದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ ಎಂದರೆ ಉತ್ತರ 'ಇಲ್ಲ'. ಎಲ್ಲ ಜಿಲ್ಲೆಗಳಲ್ಲೂ ಇದ್ದಂತೆ ಹಿಂದುಳಿದ ಜಿಲ್ಲೆಗಳಲ್ಲೂ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವಂತಹ ಕಾರ್ಯಕ್ರಮವಿದೆಯೇ ವಿನಾ ಹಿಂದುಳಿದ ಜಿಲ್ಲೆಗಳಿಗೆ ವಿಶಿಷ್ಟವಾದ ಚಟುವಟಿಕೆಗಳಿಲ್ಲ. ಈ ಅಖಂಡವಾದಿ ಅಭಿವೃದ್ಧಿ ನೀತಿಯು ಅನೇಕ ವಿಕೃತಿಗಳಿಗೆ ಕಾರಣವಾಗಿದೆ. ಪ್ರದೇಶ-ನಿರ್ದಿಷ್ಟ ಅಭಿವೃದ್ಧಿ ನೀತಿಯೆಂಬುದು ನಮ್ಮಲ್ಲಿಲ್ಲ.

ಲಿಂಗ ಸಂಬಂಧಿ ಸಂಗತಿಗಳು

ವಿಶ್ವಸಂಸ್ಥೆಯ ೨೦೧೨ರ ವಿಶ್ವ ಅಭಿವೃದ್ಧಿ ವರದಿಯ ವಿಷಯ ವಸ್ತು 'ಲಿಂಗ ಸಮಾನತೆ ಮತ್ತು ಅಭಿವೃದ್ಧಿ'. ಇದರಲ್ಲಿ ಲಿಂಗ ಸಮಾನತೆಯನ್ನು 'ವ್ಯಾವಹಾರಿಕ ಅರ್ಥಶಾಸ್ತ್ರ' (ಸ್ಮಾರ್ಟ್ ಎಕಾನಾಮಿಕ್ಸ್) ಎಂದು ವಿವರಿಸಲಾಗಿದೆ. ಅಂದರೆ ಆರ್ಥಿಕ ದೃಷ್ಟಿಯಿಂದಲೂ ಅದು ಉಪಯುಕ್ತ ಮತ್ತು ಅಪೇಕ್ಷಣೀಯವೆಂದು ಹೇಳಲಾಗಿದೆ. ಲಿಂಗ ಸಮಾನತೆಯು ಅಭಿವೃದ್ಧಿಯ ದೃಷ್ಟಿಯಿಂದ ನಿರ್ಣಾಯಕ ಸಂಗತಿ ಎಂಬುದನ್ನು ಸದರಿ ವರದಿಯು ದೃಢಪಡಿಸಿದೆ. ಆದರೆ ನಮ್ಮ ರಾಜ್ಯದಲ್ಲಿ ಲಿಂಗ ಸಮಾನತೆಯನ್ನು 'ಅನುಕಂಪೆ'ಯ ಸಂಗತಿಯನ್ನಾಗಿ ಪರಿಭಾವಿಸಿಕೊಂಡಿರುವುದು ಕಂಡುಬರುತ್ತದೆ. ಇತ್ತೀಚೆಗೆ ನಡೆದ 'ವಿಜಯಲಕ್ಷ್ಮಿ-ದರ್ಶನ' ಪ್ರಕರಣದಲ್ಲಿ ನಾಡು ಹೇಗೆ ನಡೆದುಕೊಂಡಿತು ಮತ್ತು ನಾಡಿನ 'ಹಿರಿಯರು' ಹೇಗೆ ನಡೆದುಕೊಂಡರು ಎಂಬುದರಿಂದ ಮತ್ತು ಮಹಿಳೆಯರಿಗೆ ಉಚಿತ ಸೀರೆ ಹಂಚುವ ಸರ್ಕಾರದ ಕಾರ್ಯಕ್ರಮದಿಂದ ತಿಳಿದುಕೊಳ್ಳಬಹುದು. ಮಹಿಳೆಯರ ಸಬಲೀಕರಣವನ್ನು ತುಂಬ ಸರಳೀಕರಣಗೊಳಿಸಲಾಗಿದೆ.

ಲಿಂಗ ಅಸಮಾನತೆಯ ಕೆಲವು ಸೂಚಿಗಳು

* ರಾಜ್ಯದಲ್ಲಿ ಲಿಂಗ ಸಂಬಂಧಿ ಸಾಕ್ಷರತಾ ಅಂತರ ೨೦೦೧ರಲ್ಲಿ ಶೇ. ೧೯.೨೩ ರಷ್ಟಿದ್ದುದು ೨೦೧೧ರಲ್ಲಿ ಶೇ. ೧೪.೭೨ ಅಂಶಗಳಷ್ಟಾಗಿದೆ. ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಕನಿಷ್ಠ. ೨೦೧೧ರಲ್ಲಿ ಶೇ. ೪೧.೩೧ರಷ್ಟಿದೆ. ಅಲ್ಲಿ ಲಿಂಗ ಸಂಬಂಧಿ ಸಾಕ್ಷರತಾ ಅಂತರ ಶೇ. ೨೨.೦೨ ಅಂಶಗಳು.
* ನಮ್ಮ ರಾಜ್ಯದಲ್ಲಿ ೨೦೦೮ರಲ್ಲಿ ಗಂಡು ಶಿಶು ಮರಣ ಪ್ರಮಾಣ ೪೪ರಷ್ಟಿದ್ದರೆ ಹೆಣ್ಣು ಶಿಶು ಮರಣ ಪ್ರಮಾಣ ೪೬ರಷ್ಟಿದೆ. ಇಲ್ಲಿ ಲಿಂಗ ತಾರತಮ್ಯವಿದೆ.
* ನಮ್ಮ ರಾಜ್ಯದಲ್ಲಿ ೨೦೧೧ರ ಜನಗಣತಿ ಪ್ರಕಾರ ಕಾಣೆಯಾದ ಮಹಿಳೆಯರ ಸಂಖ್ಯೆ ೯.೮೫ ಲಕ್ಷ. ಅದರಂತೆ ೦-೬ ವಯೋಮಾನದ ಮಕ್ಕಳಲ್ಲಿ ಲಿಂಗ ಅನುಪಾತ ೨೦೦೧ರಲ್ಲಿ ೯೪೬ರಷ್ಟಿದ್ದುದು ೨೦೧೧ರಲ್ಲಿ ಅದು ೯೪೩ಕ್ಕಿಳಿದಿದೆ. ಲಿಂಗ ಅಸಮಾನತೆಯು ಉಲ್ಬಣಗೊಳ್ಳುತ್ತಿದೆ.

* ಸರ್ಕಾರದ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ ಶೇ. ೫೧.೫ರಷ್ಟು ಮಹಿಳೆಯರು ಅನಿಮಿಯಾದಿಂದ ನರಳುತ್ತಿದ್ದಾರೆ.
* ರಾಜ್ಯದಲ್ಲಿ ಒಂದರಿಂದ ಏಳನೆಯ ತರಗತಿಗಳಲ್ಲಿ ಮಹಿಳಾ ಶಿಕ್ಷಕಿಯರ ಪ್ರಮಾಣ ಶೇ. ೫೫.೫೨. ಆದರೆ ಇದರ ಪ್ರಮಾಣ ಯಾದಗಿರಿ ಜಿಲ್ಲೆಯಲ್ಲಿ ಶೇ. ೩೮.೪೪ ರಷ್ಟಿದ್ದರೆ ಉಡುಪಿ ಜಿಲ್ಲೆಯಲ್ಲಿ ಶೇ. ೬೧.೮೭ರಷ್ಟಿದೆ.
* ರಾಜ್ಯದ ಪ್ರೌಢಶಾಲೆಗಳಲ್ಲಿ ಮಹಿಳಾ ಶಿಕ್ಷಕಿಯರ ಪ್ರಮಾಣ ಶೇ. ೪೫.೬೫ರಷ್ಟಿದೆ. ಆದರೆ ಯಾದಗಿರಿ ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೨.೦೯ರಷ್ಟಿದ್ದರೆ ಉಡುಪಿ ಜಿಲ್ಲೆಯಲ್ಲಿ ಇದು ಶೇ. ೫೦.೯೨ರಷ್ಟಿದೆ.
* ರಾಜ್ಯಮಟ್ಟದಲ್ಲಿ ೧೮ ವರ್ಷ ತುಂಬುವುದಕ್ಕಿಂತ ಮೊದಲೇ ಮದುವೆಯಾಗುವ ಹೆಣ್ಣುಮಕ್ಕಳ ಪ್ರಮಾಣ ೨೦೦೮-೦೯ರಲ್ಲಿ ಶೇ. ೨೪.೯ರಷ್ಟಿದ್ದರೆ ಗುಲಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಇದು ಶೇ. ೪೦ಕ್ಕಿಂತ ಅಧಿಕವಿದೆ. ಇದಕ್ಕೆ ಪ್ರತಿಯಾಗಿ ಉಡುಪಿ ಮತ್ತು ಹಾಸನ ಜಿಲ್ಲೆಗಳಲ್ಲಿ ಇದು ಶೇ. ೫ಕ್ಕಿಂತ ಕಡಿಮೆಯಿದೆ.

ಲಿಂಗ ಅಸಮಾನತೆಯನ್ನು ಕುರಿತಂತೆ ವ್ಯಾಪಕ ಅಧ್ಯಯನಗಳನ್ನು ನಡೆಸಿರುವ ಅಮರ್ತ್ಯ ಸೆನ್ ಪ್ರಕಾರ ಲಿಂಗ ಅಸಮಾನತೆಯು ತನ್ನಷ್ಟಕ್ಕೆ ತಾನೇ ಅಭಿವೃದ್ಧಿಮಟ್ಟ ಉನ್ನತವಾದಂತೆ ನಿವಾರಣೆಯಾಗಿಬಿಡುವುದಿಲ್ಲ. ಈ ಸಮಸ್ಯೆಯನ್ನು ಸರ್ಕಾರ ಪ್ರಜ್ಞಾಪೂರ್ವಕವಾಗಿ ಎದುರಿಸಬೇಕಾಗುತ್ತದೆ. ಆದರೆ ನಮ್ಮ ಸರ್ಕಾರ ವರಮಾನದ ಏರಿಕೆಯೊಂದಿಗೆ, ಸಾಕ್ಷರತೆಯು ಉತ್ತಮಗೊಂಡಂತೆ, ಆಧುನೀಕರಣ ವಿಸ್ತರಿಸಿದಂತೆ ಲಿಂಗ ಅಸಮಾನತೆಯು ತನ್ನಷ್ಟಕ್ಕೆ ತಾನೇ ನಿವಾರಣೆಯಾಗುತ್ತದೆ ಎಂಬ ಸಂಗತಿಯಲ್ಲಿ ನಂಬಿಕೆಯಿಟ್ಟಿದೆ. ಈ ನಂಬಿಕೆಯು ಹುಸಿಯಾದುದು ಎಂಬುದನ್ನು ಸೆನ್ ಮತ್ತೆ ಮತ್ತೆ ತೋರಿಸಿಕೊಡುತ್ತಿದ್ದಾರೆ. ಇದರಿಂದ ನಮ್ಮ ಸರ್ಕಾರಗಳು ಪಾಠ ಕಲಿತಂತೆ ಕಾಣುವುದಿಲ್ಲ.

ಭಾಗ-೩

ಅಭಿವೃದ್ಧಿಯ ವಿಕೃತಿಗಳು

ಈಗಾಗಲೆ ನಿರ್ವಚಿಸಿರುವಂತೆ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯು ಉಂಟು ಮಾಡಿರುವ ಅಸಮಾನತೆ, ಅಸ್ಥಿರತೆ, ಅಸಮತೋಲನ, ಲಿಂಗ ತಾರತಮ್ಯ, ದಲಿ ನಿರ್ಲಕ್ಷ್ಯ ಮುಂತಾದ ಸಂಗತಿಗಳನ್ನು ಇಲ್ಲಿ 'ಅಭಿವೃದ್ಧಿ ವಿಕೃತಿ'ಗಳೆಂದು ಕರೆಯಲಾ ಮುಖ್ಯವಾಗಿ ಅಭಿವೃದ್ಧಿಯನ್ನು ನಾವು ಪರಿಭಾವಿಸಿಕೊಂಡಿರುವ ಕ್ರಮವೇ ಸರಿಯ ಅಭಿವೃದ್ಧಿಯ ಸಾಧನವಾದ ವರಮಾನದ ಏರಿಕೆಯನ್ನು ಅಭಿವೃದ್ಧಿಯೆ ತಿಳಿದಿದ್ದೇವೆ. ಆದರೆ ಅಭಿವೃದ್ಧಿಯ ಕರ್ತೃಗಳು, ಅದನ್ನು ಅನುಭವಿಸಬೇಕಾಗಿರುವ ಮತ್ತು ಅಭಿವೃದ್ಧಿಯ ಮೂಲದ್ರವ್ಯವಾದ ಜನರು ಮೂಲೆ ಗುಂಪಾಗಿದ್ದಾರೆ. ಜನ ಕೇವಲ ಸಂಪನ್ಮೂಲವೆಂದು ಪರಿಭಾವಿಸಿಕೊಳ್ಳಲಾಗಿದೆ. ಈ ಕಾರಣದಿಂದಾಗಿ ನಮ್ಮಲ್ಲಿ ಇಂದು ವಿಮಾನ ನಿಲ್ದಾಣಗಳ ಬಗ್ಗೆ, ಐಷಾರಾಮಿ ಸಾರಿಗೆ ಬಸ್ಸು ಬಗ್ಗೆ, ಬಜೆಟ್ಟನ್ನು ಒಂದು ಲಕ್ಷ ಕೋಟಿ ಮಾಡುವುದರ ಬಗ್ಗೆ, ಬೆಂಗಳೂ ಕರ್ನಾಟಕವೆಂದು ಭಾವಿಸುವುದರ ಬಗ್ಗೆ ಮಾತನಾಡಲಾಗುತ್ತಿದೆ. ಇ ಸಮಸ್ಯೆಗಳನ್ನು ಹುಟ್ಟು ಹಾಕಲಾಗುತ್ತಿದೆ. ಉದಾಹರಣೆಗೆ: ಗೋಹತ್ಯಾ ನಿಷ ಶಾಸನ, ಸಾರ್ವಜನಿಕ ಗುಡಿಗಳ ಖಾಸಗೀಕರಣ (ಗೋಕರ್ಣದ ಮಹಾಬಳೇ ದೇವಳ), ಶಾಲೆಗಳಲ್ಲಿ ಭಗವದ್ಗೀತೆಯ ಪಾಠ, ಮಂತ್ರಿ- ಮಹೋದಯರು ಎಗ್ಗಿ ಮಾಟ, ಮಂತ್ರ, ಯಜ್ಞ, ಯಾಗ, ಹೋಮಗಳಲ್ಲಿ ನಿರತರಾಗಿರುವ ಮುಂತಾದವು. ಅಭಿವೃದ್ಧಿಯ ಹೆಸರಿನಲ್ಲಿ ಗುಡಿಗಳಿಗೆ ಬಜೆಟ್ಟಿನಲ್ಲಿ ಹಣ ನೀಡುವು ಮೂಲಕ ಬಜೆಟ್ಟನ್ನು ಅರ್ಥರಹಿತವನ್ನಾಗಿ ಮಾಡಲಾಗಿದೆ. ಅಭಿವೃದ್ಧಿಯ ಪಾರಮಾರ್ಥೀಕರಣಗೊಳಿಸಲಾಗಿದೆ. ಇದು ಬಹು ದೊಡ್ಡ ವಿಕೃತಿ.

ಮಹಿಳೆಯರು ತಮಗೆ ಅಗತ್ಯವಾದ ಸೀರೆಗಳನ್ನು ತಮ್ಮ ಸ್ವಂತ ದುಡಿಮೆ ಮೇಲೆ ಕೊಂಡುಕೊಳ್ಳುವಂತಹ ಸಬಲೀಕರಣವನ್ನು ಸಾಧಿಸಿಕೊಳ್ಳುವುದಕ್ಕೆ ಪ್ರತಿಯ ಅವರಿಗೆ ಉಚಿತವಾಗಿ ಸರ್ಕಾರ ಸೀರೆ ಹಂಚುತ್ತಿದೆ. ಇದು ಹಂಗಿನ ಅಭಿವೃದ್ಧಿಯ ಬಹುದೇ ವಿನಾ ಹಕ್ಕಿನ ಅಭಿವೃದ್ಧಿಯಾಗುವುದಿಲ್ಲ. ನಿಮಗೆ ಯಾವುದು ಬೇ ಎಂಬುದನ್ನು ಆಯ್ಕೆಮಾಡಿಕೊಳ್ಳುವ ಕರ್ತೃತ್ವದ (ಏಜೆನ್ಸಿ) ಬಗ್ಗೆ ಸ ಮಾತನಾಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಕರ್ನಾಟಕವು ಹಂಗಿನ ಅಭಿವೃದ್ಧಿ

ಊಹೆಯಿಂದಲೆ ಹೊರಟಾಗ ಒಂದು ಹೆಜ್ಜೆಯಿಂದಲೆ

ಊಹೆಯಿಂದಲೆ ಹೊರಟಾಗ ಒಂದು ಹೆಜ್ಜೆಯಿಂದಲೆ ಕಾಶಿ ಕೇದಾರ
ಶ್ರೀಶೈಲ
ಮಕ್ಕಾ ಮದಿನಾ ಗಯಾ ಬೆತ್ಲಹೇಂ ಝೆರೂಸಲೇಂ ಆರಂಭವು ಮೂಲಕ್ಕೆ
ಮೂಲವು ಶಿಖರಕ್ಕೆ ಶಿಖರವು ಬಿಂದುವಿನಿಂದಲೆ ಸಿಂಧುವಾಗುವ
ಸಿಂಧುವಿನಿಂದಲೆ ಸತ್ತು ಸಮಾಧಿಯಾಗುವ ಮೇಲಿಂದಲೆ ಕೆಳಗೆಯು

ಕೆಳಗಿನಿಂದಲೆ ಮೇಲೆಯು ಆದಿಯಿಂದಲೆ ಅನಾದಿಯು ಅನಾದಿಯಿಂದಲೆ
ಆದಿಯು ಮಧ್ಯವು ಉದ್ದವು ಉದ್ದದಿಂದಲೆ ಊರ್ಧ್ವವು ಅನೂರ್ಧ್ವವು
ಬಯಲಿಂದಲೆ ನಿರ್ಬಯಲಾಗಲು ನಿರ್ಬಯಲಿಂದಲೆ ಬಯಲಾಗಲು
ಶೂನ್ಯದಿಂದಲೆ ನಿಶೂನ್ಯವು ನಿಶೂನ್ಯದಿಂದಲೆ ಶೂನ್ಯವು

ಹೌದಾಗಲು ಅಲ್ಲವು ಅಲ್ಲವಾಗಲು ಅಲ್ಲವು ಕಿಡಿ ಸಿಡಿಲಾಗಲು
ಸಿಡಿಲು ಕಿಡಿಯಾಗಲು ಬೂದಿ ಬಂಗಾರವಾಗಲು ಕಾಡು ನಾಡಾಗಲು
ನಾಡು ಕಾಡಾಗಲು ಹಗಲು ಇರುಳಾಗಲು ಇರುಳು ಹಗಲಾಗಲು
ಬೈಗು ಬೆಳಗಾಗಲು ಬೆಳಗು ಬೈಗಾಗಲು ಒಂದರೊಳಗೊಂದು

ಸೇರಿಕೊಳ್ಳಲು ಒಂದರೊಳಗೊಂದು ಕೂಡಿಕೊಳ್ಳಲು
ಉಳ್ಳಾಗಡ್ಡೆಯ ಪದರಿನ ಹಾಗೆ ಟೆಂಗಿನ ಪಟ್ಟೆಯೊಳಗಿರುವ

ನೀರಿನ ಹಾಗೆ ತೆಗೆದಾಗ ತಿಳಿಯಲು ಸುಲಿದಾಗ ಅರಿಯಲು
ಮಳೆ ಬಂದಾಗಲೆ ಬೆಳೆಯು ಬೆಳೆ ಬಂದಾಗಲೆ ಇಳೆಯು

ಇಳೆಯಾದಾಗಲೆ ಕಳೆಯು ಕಳೆಯಾದಾಗಲೆ ಕಲೆಯು
ಅಂದುವು ಅದೆಯಿರಲು ಇಂದುವು ಅದೆಯಿರಲು
ಮುಂದುವು ಅದೆಯಿರಲು ಎಂದುವು ಅದೆಯಿರಲು
ಪ್ರಕೃತಿಯ ಗುಣವೆ ಹೊಸತು ಹೊಸತು ಮಾಡುತ್ತಿರಲು



ಡಾ॥ ಚೆನ್ನಣ್ಣ ವಾಲೀಕಾರ, ಬಡೇಪುರ ಕಾಲೋನಿ, ವಿಶ್ವವಿದ್ಯಾನಿಲಯ ರಸ್ತೆ, ಗುಲಬರ್ಗಾ-585105

ಲದಲ್ಲಿ ಸಿಲುಕಿಕೊಂಡುಬಿಟ್ಟಿದೆ. ಅಲ್ಲಿ ಮಹಿಳೆಯರ ಕರ್ತೃತ್ವಕ್ಕೆ ಅವಕಾಶವಿಲ್ಲ. ದಲಿತರ ಭಿವೃದ್ಧಿಯೆನ್ನುವುದು ಹೇಳ-ಹೆಸರಿಲ್ಲದಂತಾಗಿದೆ. ಇಲ್ಲಿ ಹಕ್ಕಿನ ಮತ್ತು ಘನತೆಯಿಂದ ಡಿದ ಬದುಕಿನ ಬಗ್ಗೆ ಮಾತನಾಡುವುದಕ್ಕೆ ಪ್ರತಿಯಾಗಿ ಹಂಗಿನ, ಓಲೈಕೆಯ, ನುಕಂಪೆಯ ಮಾತನಾಡಲಾಗುತ್ತಿದೆ. ಬಡತನ, ಹಸಿವು, ಆಹಾರ ಅಭದ್ರತೆ, ಲಿಂಗ ಸಮಾನತೆ ಮುಂತಾದವು ಸಾಮಾಜಿಕ-ಆರ್ಥಿಕ ಸಮಸ್ಯೆಗಳು ಎಂಬ ಸತ್ಯವನ್ನು ರೆಮಾಚಿ ಇವು ವಿಧಿಲಿಪಿ–ಪ್ರಾರಬ್ಧ ಎನ್ನುವಂತೆ ವಿವರಣೆ ನೀಡಲಾಗುತ್ತಿದೆ. ಡಿಗಳಲ್ಲಿ ಪೂಜೆ, ಆರಾಧನೆ, ಆಚರಣೆಗಳನ್ನು ನಡೆಸುವುದರಿಂದ ನಾಡಿನಲ್ಲಿ ಳೆ-ಬೆಳೆಯಾಗುತ್ತಿದೆ ಎನ್ನುವ ಸರ್ಕಾರವು ಹಕ್ಕಿನ ಅಭಿವೃದ್ಧಿಯನ್ನು ನೀಡುವುದು ಧ್ಯವಿಲ್ಲ. ಅಲ್ಲಿ ಸ್ವತಂತ್ರವಾಗಿ ಅಭಿವೃದ್ಧಿ ಎನ್ನುವುದಕ್ಕೆ ಅರ್ಥವಿರುವುದಿಲ್ಲ.

ಜಾನ್ ರಾಲ್ಸ್‌ನ ಪ್ರಕಾರ ನ್ಯಾಯಯುತ ಸಮಾಜದಲ್ಲಿ ಅಭಿವೃದ್ಧಿಯ ಫಲಗಳು ಧಿಕಾಧಿಕವಾಗಿ ವಂಚಿತ ವರ್ಗಗಳಿಗೆ, ಅಂಚಿನಲ್ಲಿರುವವರಿಗೆ, ಮಹಿಳೆಯರಿಗೆ, ಲಿತರಿಗೆ ಹರಿಯಬೇಕು. ಅಸಮಾನತೆಯು ತೀವ್ರವಾಗಿದ್ದಾಗ ಅಭಿವೃದ್ಧಿಯ ಫಲಗಳು ಲ್ಲರಿಗೂ ಸಮನಾಗಿ ದೊರೆತರೆ ಅಲ್ಲಿ ಅಸಮಾನತೆಯು ನಿವಾರಣೆಯಾಗುವುದಿಲ್ಲ. ದು ಸಾಮಾಜಿಕ ನ್ಯಾಯದ ಸೂತ್ರ. ಈ ಸೂತ್ರದ ಪ್ರಕಾರ ಕರ್ನಾಟಕದಲ್ಲಿ ಭಿವೃದ್ಧಿಯಿಂದ, ಸಮೃದ್ಧತೆಯಿಂದ ವಂಚಿತರಾದ ವರ್ಗಗಳಿಗೆ ಹೆಚ್ಚು ಹೆಚ್ಚಾಗಿ ರಿಯುತ್ತಿದೆಯೇ ಎಂದರೆ ನಮಗೆ ಆಶಾದಾಯಕ ಉತ್ತರ ದೊರೆಯುವುದಿಲ್ಲ. ್ರದೇಶಿಕ ಅಸಮಾನತೆ, ಲಿಂಗ ತಾರತಮ್ಯ, ದಲಿತರ ದುಸ್ಥಿತಿ, ದುಡಿಮೆಗಾರರ ೋಷಣೆ ಮುಂತಾದವು ಸಾಮಾಜಿಕ ನ್ಯಾಯಕ್ಕೆ ಸವಾಲಾಗಿ ನಮ್ಮ ಮುಂದೆ ಂದು ನಿಲ್ಲುತ್ತದೆ.

ಕೃಷಿಯಲ್ಲಿ ನಡೆದಿರುವ ವಿಕೃತಿಯನ್ನು ಹೀಗೆ ವಿವರಿಸಬಹುದು: ಮೊದಲನೆಯದಾಗಿ ವಯವ ಕೃಷಿಯ ವ್ಯಸನ. ಈ ಬಗ್ಗೆ ಮಾತನಾಡುತ್ತಿರುವ ಸರ್ಕಾರಕ್ಕೆ ಅದರ ಬಗ್ಗೆ ಶ್ವಾಸವಿಲ್ಲ. ಇದಕ್ಕೆ ಅದು ಸಂಘಟಿಸುತ್ತಿರುವ 'ಜಾಗತಿಕ ಕೃಷಿ ಬಂಡವಾಳ ೂಡಿಕೆಗಾರರ ಸಮಾವೇಶ'ವೇ ಸಾಕ್ಷಿ. ಎರಡನೆಯದಾಗಿ ನಮ್ಮಲ್ಲಿ ಎಷ್ಟೇ ತಿಣುಕಾಡಿದರೂ ನೀರಾವರಿ ಪ್ರದೇಶವನ್ನು ೫೦ ಲಕ್ಷ ಹೆಕ್ಟೇರಿಗಿಂತ ಹೆಚ್ಚಿಗೆ ಮಾಡಲು ಸಾಧ್ಯವಿಲ್ಲ. ನಮ್ಮ ಕೃಷಿಯ ಅಭಿವೃದ್ಧಿ ಮತ್ತು 'ಆಹಾರ ಭದ್ರತೆ'ಗಳು ಮುಖ್ಯವಾಗಿ ಒಣ ಬೇಸಾಯದ ಬೆಳವಣಿಗೆಯನ್ನು ಅವಲಂಬಿಸಿದೆ. ಆದರೆ ಇದರ ಬಗ್ಗೆ ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆಯುತ್ತಿಲ್ಲ. ಈಗ ನಡೆದಿರುವ ಸಾವಯವ ಎನ್ನುವುದು ಕೇವಲ 'ರೆಟರಿಕ್' ಎಂಬುದನ್ನು ನಾವು ಮರೆಯಬಾರದು.

ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ

ಡಾ॥ ಡಿ. ಎಂ. ನಂಜುಂಡಪ್ಪ ಸಮಿತಿಯು ಪ್ರಾದೇಶಿಕ ಅಸಮಾನತೆ ಬಗ್ಗೆ ತನ್ನ ಅಧ್ಯಯನ ವರದಿಯನ್ನು ನೀಡಿ ಹತ್ತು ವರ್ಷಗಳಾಗುತ್ತಾ ಬಂದಿದೆ. ಆದರೆ ಅದನ್ನು ಅತ್ಯಂತ ವಿಕೃತಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

* ಸಮಿತಿಯು ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗೆ ರೂ. ೧೬,೦೦೦ ಕೋಟಿ ಹೆಚ್ಚುವರಿ ಹೂಡಿಕೆಯನ್ನು ಶಿಫಾರಸ್ಸು ಮಾಡಿತ್ತು. ಆದರೆ ಸರ್ಕಾರವು ಬಜೆಟ್ಟಿನ ಭಾಗವಾಗಿ ಹಣವನ್ನು ಇದಕ್ಕೆ ಒದಗಿಸುತ್ತಿದೆ.
* ತಾಲ್ಲೂಕುಗಳನ್ನು ಅಭಿವೃದ್ಧಿಯ ಘಟಕಗಳನ್ನಾಗಿ ಮಾಡಿಕೊಂಡು ಅನುದಾನ ಬಿಡುಗಡೆಗೆ ಸಮಿತಿಯು ಶಿಫಾರಸ್ಸು ಮಾಡಿದ್ದರೆ ಸರ್ಕಾರವು ರಾಜ್ಯಮಟ್ಟದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.
* ನಮಗೆ ೨೦೦೧ರಿಂದ ೨೦೧೧ರ ಅವಧಿಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ ಬಜೆಟ್ಟಿನಲ್ಲಿ ನಿಗದಿಯಾದ ರೂ. ೯,೧೬೧.೬೭ ಕೋಟಿಯಲ್ಲಿ ಖರ್ಚು ಮಾಡಿರುವುದು ಕೇವಲ ರೂ. ೫,೫೭೪.೧೪ ಕೋಟಿ (ನೋಡಿ : ಆರ್ಥಿಕ ಸಮೀಕ್ಷೆ : ೨೦೧೦-೨೦೧೧. ಪು : ೪೫೮, ಕರ್ನಾಟಕ ಸರ್ಕಾರ).
* ಸರ್ಕಾರವು ತನ್ನ 'ಪ್ರಾದೇಶಿಕ ಅಭಿವೃದ್ಧಿ ನೀತಿ'ಯನ್ನು ಘೋಷಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿತ್ತು. ಆದರೆ ಇದುವರೆಗೂ ಸರ್ಕಾರ ಅದನ್ನು ಘೋಷಿಸಿಲ್ಲ.
* ಅನುದಾನವನ್ನು ಹಿಂದುಳಿದಿರುವಿಕೆಗೆ ಅನುಗುಣವಾಗಿ ಒದಗಿಸ[illegible]

ಲಂಕೇಶ್ ಪ್ರಕಾಶನ

[illegible], [illegible]
ಬಸವನಗುಡಿ,
ಬೆಂಗಳೂರು-4
ಫೋನ್: [illegible]

ಶೀರ್ಷಿಕೆ	ಬೆಲೆ	ಮಾಧ್ಯಮ	ಲೇಖಕರು
[illegible]	150.00	ಕಾವ್ಯ ಸಂಕಲನ	ಪಿ. ಲಂಕೇಶ್
[illegible]	150.00	ಕಾವ್ಯ ಸಂಕಲನ	ಪಿ. ಲಂಕೇಶ್
[illegible]	[illegible]00.00	ಕಾವ್ಯ ಸಂಕಲನ	ಪಿ. ಲಂಕೇಶ್
[illegible]	90.00	ಕಾವ್ಯ ಸಂಕಲನ	ಪಿ. ಲಂಕೇಶ್
ಮರೆಯುವ ಮುನ್ನ-ಸಂಗ್ರಹ 1	150.00	ಸಮಕಾಲೀನ ಬರಹ	ಪಿ. ಲಂಕೇಶ್
ಮರೆಯುವ ಮುನ್ನ-ಸಂಗ್ರಹ 2	150.00	ಸಮಕಾಲೀನ ಬರಹ	ಪಿ. ಲಂಕೇಶ್
ಮರೆಯುವ ಮುನ್ನ-ಸಂಗ್ರಹ 3	150.00	ಸಮಕಾಲೀನ ಬರಹ	ಪಿ. ಲಂಕೇಶ್
[illegible]	150.00	ಪಾಶ್ಚಿಮಾತ್ಯ ಬರಹಗಳು	ಪಿ. ಲಂಕೇಶ್
ಈ ನರಕ ಈ ಪುಳಕ	125.00	ಸಿನಿಮಾ ಬರಹಗಳು	ಪಿ. ಲಂಕೇಶ್
[illegible]	150.00	ಕ್ರೀಡಾ ಬರಹಗಳು	ಪಿ. ಲಂಕೇಶ್
ಟೀಕೆ-ಟಿಪ್ಪಣಿ 1	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ಟೀಕೆ-ಟಿಪ್ಪಣಿ 2	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ಟೀಕೆ-ಟಿಪ್ಪಣಿ 3	200.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ಸಾಹಿತಿ-ಸಾಹಿತ್ಯ	300.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ರೂಪಕ ಲೇಖಕರು	70.00	ಪ್ರಸಿದ್ಧ ಲೇಖಕರ ಬದುಕು-ಬರಹ	ಪಿ. ಲಂಕೇಶ್
ಕಂಡದ್ದು ಕಂಡಹಾಗೆ	125.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ಪ್ರಸ್ತುತ	80.00	ಸಮಕಾಲೀನ ಬರಹಗಳು	ಪಿ. ಲಂಕೇಶ್
ಹುಳಿಮಾವಿನ ಮರ	250.00	ಆತ್ಮಕಥೆ	ಪಿ. ಲಂಕೇಶ್
ಮುಸ್ಸಂಜೆಯ ಕಥಾ ಪ್ರಸಂಗ	250.00	ಕಾದಂಬರಿ	ಪಿ. ಲಂಕೇಶ್
ಬಿರುಕು	60.00	ಕಾದಂಬರಿ	ಪಿ. ಲಂಕೇಶ್
ಅಕ್ಕ	80.00	ಕಾದಂಬರಿ	ಪಿ. ಲಂಕೇಶ್
ಮಂಜು ಕವಿದ ಸಂಜೆ	85.00	ಕಥಾ ಸಂಕಲನ	ಪಿ. ಲಂಕೇಶ್
ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ	70.00	ಕಥಾ ಸಂಕಲನ	ಪಿ. ಲಂಕೇಶ್
ಕಲ್ಲು ಕರಗುವ ಸಮಯ	125.00	ಕಥಾ ಸಂಕಲನ	ಪಿ. ಲಂಕೇಶ್
ನಾನಲ್ಲ	70.00	ಕಥಾ ಸಂಕಲನ	ಪಿ. ಲಂಕೇಶ್
ಕೆರೆಯ ನೀರನು ಕೆರೆಗೆ ಚೆಲ್ಲಿ	60.00	ಕಥಾ ಸಂಕಲನ	ಪಿ. ಲಂಕೇಶ್
ಉಲ್ಲಂಘನೆ	80.00	ಕಥಾ ಸಂಕಲನ	ಪಿ. ಲಂಕೇಶ್
ಪಾಪದ ಹೂಗಳು	60.00	ಕಾವ್ಯ ಸಂಕಲನ	ಪಿ. ಲಂಕೇಶ್
ಬಿರುಕು	40.00	ನಾಟಕ	ಪಿ. ಲಂಕೇಶ್
ಸಂಕ್ರಾಂತಿ	45.00	ನಾಟಕ	ಪಿ. ಲಂಕೇಶ್
ತೆರೆಗಳು	50.00	ನಾಟಕ	ಪಿ. ಲಂಕೇಶ್
ಈಡಿಪಸ್ ಮತ್ತು ಆಂಟಿಗೊನೆ	60.00	ನಾಟಕ	ಪಿ. ಲಂಕೇಶ್
ಓ! ಪ್ರಸನ್ನ ಗೃಹಸ್ಥಾಶ್ರಮ	35.00	ನಾಟಕ	ಪಿ. ಲಂಕೇಶ್
ಗುಣಮುಖ	30.00	ನಾಟಕ	ಪಿ. ಲಂಕೇಶ್
ಕ್ರಾಂತಿ ಬಂತು ಕ್ರಾಂತಿ	40.00	ನಾಟಕ	ಪಿ. ಲಂಕೇಶ್
[illegible]	[illegible]	ಅನುವಾದಿತ ಕತೆಗಳು	ಗೌರಿ ಲಂಕೇಶ್

ಶೀರ್ಷಿಕೆ	ಬೆಲೆ	ಮಾಧ್ಯಮ	ಲೇಖಕರು
ಕಂಡಹಾಗೆ - 1	125.00	ಸಮಕಾಲೀನ ಬರಹಗಳು	ಗೌರಿ ಲಂಕೇಶ್
ಕಂಡಹಾಗೆ - 2	150.00	ಸಮಕಾಲೀನ ಬರಹಗಳು	ಗೌರಿ ಲಂಕೇಶ್
ದರವೇಶಿ ಕತೆಗಳು	90.00	ಅನುವಾದಿತ ಕತೆಗಳು	ಗೌರಿ ಲಂಕೇಶ್
ಬಸವರಾಜಮಾರ್ಗ	40.00	ಲೇಖನಗಳು	ಸಂ: ಗೌರಿ ಲಂಕೇಶ್
ಬೆನಜೀರ್	25.00	ಜೀವನ ಚರಿತ್ರೆ	ಗೌರಿ ಲಂಕೇಶ್
ಆವರಣ ಎಂಬ ವಿಕೃತಿ	100.00	ವಿಮರ್ಶೆಗಳು	ಸಂ: ಗೌರಿ ಲಂಕೇಶ್
ಜೈಲಿಂ[illegible]	75.00	ಸೆರೆಗಳ ಒಂದಿನ ಸತ್ಯಗಳು	ಕುಮಾರ್ ಸಮತಳ
ವೇದಾಂತ ರೆಜಿಮೆಂಟ್	60.00	ವೈಚಾರಿಕ ಲೇಖನಗಳು	ಬಿ.ವಿ.ವೀರಭದ್ರಪ್ಪ
ಕಳೆದುಕೊಂಡವಳು	45.00	ಕತೆಗಳು	ಚಾಹ್ನಾ
ನೂರುಸ್ವರ	60.00	ಕತೆಗಳು	ಉಮಾ ರಾವ್
ಟ್ರೇನ್ ಟು ಪಾಕಿಸ್ತಾನ್	125.00	ಕಾದಂಬರಿ ಅನು: ಡಾ. ಎಂ.ಬಿ. ರಾಮಮೂರ್ತಿ	ಖುಷ್ವಂತ್ ಸಿಂಗ್
ಮಿಡತೆಗಳ ಬರವಿಗೆ....	100.00	ಅನು: ಸುಕನ್ಯಾ ಕಾನರಳ್ಳಿ	ಅರುಂಧತಿ ರಾಯ್
ಡಿಸೆಂಬರ್ 13	150.00	ಅನು: ಸುಕನ್ಯಾ ಕಾನರಳ್ಳಿ	ಅರುಂಧತಿ ರಾಯ್
ಮನುಸ್ಮೃತಿ	20.00	ಸಂಘಪರಿವಾರದ ಸಂವಿಧಾನ	ಏಕಲವ್ಯ
ರೈತರ ಆತ್ಮ-ಹತ್ಯೆ	10.00	ಸಮಕಾಲೀನ ರಾಜಕೀಯ	ಶಿವಸುಂದರ್
ಆರೋಗ್ಯ ಮತ್ತು ಜೀವನ	125.00	ವೈದ್ಯಕೀಯ ಸಾಹಿತ್ಯ	ಡಾ. ಎಂ.ಬಿ. ರಾಮಮೂರ್ತಿ
ದನವಂತ್ರಿ ಚಿಕಿತ್ಸೆ	50.00	ನಾಟಕ	ಬಿ.ಚಂದ್ರೇಗೌಡ
ಮುತ್ತುರಾಜನ ಮುತ್ತು	175.00	ಶಿವರಾಜ್‌ಕುಮಾರ್ ಆತ್ಮಕಥೆ	ಸದಾಶಿವ ಶೆಣೈ
ವಿಷ್ಣು-ನೂರೊಂದು ನೆನಪು	150.00	ವಿಷ್ಣುವರ್ಧನ್ ಆತ್ಮಕಥೆ	ಸದಾಶಿವ ಶೆಣೈ
ಓ ಈಳಂ	250.00	ಎಲ್‌ಟಿಟಿಇ ಕಥನ	ಕುಮಾರ್‌ಬುರಡಿಕಟ್ಟಿ
ಖೈರ್ಲಾಂಜಿ	200.00	ದಲಿತ ಭಾರತದ ಕಥನ	ಆನಂದ್ ತೇಲ್‌ತುಂಬ್ಡೆ
ಕಮಲಾ ದಾಸ್ ಕಥೆಗಳು	60.00	ಸಣ್ಣ ಕಥೆಗಳು	ಅನು: ಗಂಗಾಧರನ್
ಮಾಂಟೊ ಕಥೆಗಳು	80.00	ಸಣ್ಣ ಕಥೆಗಳು	ಅನು: ಜೆ.ಬಾಲಕೃಷ್ಣ
ಕೋಮುವಾದ	60.00	ವೈಚಾರಿಕ ಬರಹಗಳು	ರಾಮ ಪುನಿಯಾನಿ
ಜಾತಿ ಪದ್ಧತಿ	125.00	ವೈಚಾರಿಕ ಬರಹಗಳು	ರಾಮ್‌ಮನೋಹರ್ ಲೋಹಿಯಾ
ರಾಮಾಯಣ ವಿಷವೃಕ್ಷ	75.00	ವೈಚಾರಿಕ ಬರಹಗಳು	ಡಾ.ಬಂಜಗೆರೆ ಜಯಪ್ರಕಾಶ್
ಅರೇಬಿಯನ್ ನೈಟ್ಸ್	150.00	ಕಥೆಗಳು	ಪಂಜು ಗಂಗೊಳ್ಳಿ
ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00	ಕಥೆಗಳು	ಟಿ. ಎಸ್. ವಿವೇಕಾನಂದ
ಚೆಕ್‌ಪೋಸ್ಟ್	100.00	ಸಮಕಾಲೀನ ಬರಹಗಳು	ಪಾರ್ವತೀಶ್
Some-ಪದ	80.00	ಅನ್ಯಭಾಷಾ ಪದಗಳ ಪ್ರವಾಸ ಕಥನ	ಪಾರ್ವತೀಶ್
ಬಿಡಿಚಿತ್ರಗಳು	60.00	ಸಮಕಾಲೀನ ಬರಹಗಳು	ಪಾರ್ವತೀಶ್
ಗೋವು ಪವಿತ್ರ ಎಂಬ ಮಿಥ್ಯೆ	80.00	ವೈಚಾರಿಕ ಬರಹಗಳು	ಡಿ.ಎನ್.ಝಾ
ಕರ್ಕರೆಯನ್ನು ಕೊಂದವರಾರು?	200.00		ಎಸ್. ಎಂ. ಮುಶ್ರಿಫ್
ಅಸ್ಪೃಶ್ಯ ವಸಂತ	200.00	ಕಾದಂಬರಿ	ಕಲ್ಯಾಣ್ ರಾವ್
[illegible]	150.00	ವೈಚಾರಿಕ ಬರಹಗಳು	ಬಾಲಗೋಪಾಲ್



ಶಿಫಾರಸ್ಸು ಮಾಡಿದೆ. ಆದರೆ ಸರ್ಕಾರವು ಸಮಾನವಾಗಿ ಅನುದಾನವನ್ನು ಒದಗಿಸುವ ರೀತಿಯಲ್ಲಿ ವ್ಯವಹರಿಸುತ್ತಿದೆ.

ತ್ವಾರೆ ಎಂಟು ವರ್ಷಗಳ ನಂತರ ನಮ್ಮಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಾಗಿರುತ್ತದೆಯಾ ಎಂದು ಕೇಳಿದರೆ ಉತ್ತರ ಖಚಿತವಾಗಿ 'ಇಲ್ಲ'ಎಂಬುದೇ ಆಗಿರುತ್ತದೆ.

ಸ್ಮ ಪರಿಸರ

ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಬರಿದಾಗುವ ಮತ್ತು ಬರಿದಾಗದ ಎಂಬ ಎರಡು ವಿಧಗಳಿವೆ. ರಲ್ಲಿ ಬರಿದಾಗುವ ಸಂಪನ್ಮೂಲಗಳನ್ನು ಬಳಸುವಾಗ ನಾವು ಪ್ರಸಕ್ತ ತಲೆಮಾರಿನ ಗತ್ಯಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದರ ಜೊತೆಗೆ ಮುಂದಿನ ತಲೆಮಾರಿನ ಅಗತ್ಯಗಳ ಗ್ಗೆಯೂ ಗಮನ ನೀಡಬೇಕಾಗುತ್ತದೆ. ಇದನ್ನೇ 'ಅಂತರ ತಲೆಮಾರು ಸಮಾನತೆ' ಎಂದು ಯಲಾಗಿದೆ. ಪರಿಸರವನ್ನು ರಕ್ಷಿಸಬೇಕಾಗಿದ್ದ ಸಂಸ್ಥೆಗಳು, ಇಲಾಖೆಗಳು, ಅಧಿಕಾರಿಗಳು, ರ್ಕಾರ – ಹೀಗೆ ಎಲ್ಲವೂ ಇಂದು 'ಪರಿಸರ ನಾಶ'ದಲ್ಲಿ ನಿರತವಾಗಿವೆ. ಇಂದು ಕರ್ನಾಟಕದಲ್ಲಿ ಮಾನಾಂತರ ಆಡಳಿತ ವ್ಯವಸ್ಥೆಯನ್ನು ಕಟ್ಟಿ ಅದರ ಮೂಲಕ ಅಕ್ರಮ-ನಿಯಮಬಾಹಿರ ಣಗಾರಿಕೆ ನಡೆಸಲಾಗಿದೆಯೆಂದು ವರದಿಗಳ ಮೇಲೆ ವರದಿಗಳು ನುಡಿಯುತ್ತಿವೆ. ಆದರೂ ೂ ನಡೆದಿಲ್ಲವೆನ್ನುವಂತೆ ಸರ್ಕಾರವು ವರ್ತಿಸುತ್ತಿದೆ. ರಾಜ್ಯದ ಕಬ್ಬಿಣ ನಿಕ್ಷೇಪವಿರುವ ಡೂರು-ಬಳ್ಳಾರಿ-ಹೊಸಪೇಟೆ' ಗಣಿ ಪ್ರದೇಶದಲ್ಲಿ ಸರಿಪಡಿಸಲಾರದ ಪ್ರಮಾಣದಲ್ಲಿ ಸರ ನಾಶವಾಗಿದೆಯೆಂದು ಸುಪ್ರೀಮ್ ಕೋರ್ಟು ನೇಮಿಸಿದ್ದ ಪರಿಸರ ತಜ್ಞರ ಸಮಿತಿಯು ಳುತ್ತಿದೆ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿನ ಗಣಿ ಪ್ರದೇಶದ ಬಗ್ಗೆಯೂ ಸದರಿ ುತಿಯು ಇದೇ ಮಾತನ್ನು ಹೇಳಿದೆ. ಇಷ್ಟಾದರೂ ಸರ್ಕಾರ, ಅಧಿಕಾರಿ ವರ್ಗ ಚ್ಚೆತ್ತುಕೊಂಡಿಲ್ಲ. ಇದು ಸಾಮಾಜಿಕ ವೈಫಲ್ಯ. ಇದನ್ನೇ ಇಲ್ಲಿ ಅಭಿವೃದ್ಧಿ ವಿಕೃತಿ ಎಂದು ಕರೆದಿದೆ. ಸ್ಬಲ್ಲಿ ಗ್ರಾಮ ಪಂಚಾಯಿತಿಮಟ್ಟದಲ್ಲಿ ಬಡವರಿಗೆ ಮೀಸಲಿದ್ದ ನಿವೇಶನ-ಮನೆಗಳನ್ನು ಳ್ಳವರಿಗೆ ನೀಡುತ್ತಿದ್ದ ಘಟನೆಗಳು ಕೇಳಿಬರುತ್ತಿದ್ದವು. ಆದರೆ ಇಂದು ರಾಜ್ಯ ಸರ್ಕಾರ ಟ್ಟದಲ್ಲಿ ಸರ್ಕಾರಿ ನಿವೇಶನಗಳನ್ನು ಕಾನೂನು-ಬಾಹಿರವಾಗಿ ತಮ್ಮ ತಮ್ಮ ಕುಲಬಾಂಧವರಿಗೆ, ಸಂಬಂಧಿಗಳಿಗೆ ಮತ್ತು ಉದ್ದಿಮೆಗಾರರಿಗೆ ಹಣಕ್ಕಾಗಿ ನೀಡುತ್ತಿರುವುದು ಕಂಡುಬಂದಿದೆ. ಳ ವಿಚಿತ್ರವೆಂದರೆ ಉಳ್ಳವರಿಗೆ ತಮ್ಮ ವಿವೇಚನಾ ಕೋಟಾದಿಂದ ನಿವೇಶನ ನೀಡದ ರೇ ಬಡತನದ ನಿವಾರಣೆ ಬಗ್ಗೆ, ಬಡವರನ್ನು ಗುರುತಿಸುವುದರ ಬಗ್ಗೆ ಮಾತನಾಡುತ್ತಾರೆ. ು ಅಭಿವೃದ್ಧಿ ನೀತಿಯ ವಿಕೃತಿ.

ಗಣಿಗಾರಿಕೆಯು ಕರ್ನಾಟಕವನ್ನು ಭ್ರಷ್ಟಗೊಳಿಸಿದೆ. ಇದರಿಂದ ನಾವು ಪಾಠ ಕಲಿಯ ಕಾಗಿದೆ. ಗಣಿಗಾರಿಕೆಯು ಎಲ್ಲಿಯವರೆಗೆ ಖಾಸಗಿ ವಲಯದಲ್ಲಿರುತ್ತದೋ ಅಲ್ಲಿಯವರೆಗೆ ಸ್ಟಾಚಾರ, ಪರಿಸರ ನಾಶ, ಅಕ್ರಮ ಕಾನೂನು-ಬಾಹಿರ ಚಟುವಟಿಕೆಗಳು ನಡೆಯುತ್ತಿರುತ್ತವೆ. ಗಾರಿಕೆಯಲ್ಲಿ ಖಾಸಗಿ ಉದ್ದಿಮೆಯನ್ನು ನಿಷೇಧಿಸಬೇಕು. ಎಲ್ಲಿ ಪ್ರಾಕೃತಿಕ ಸಂಪನ್ಮೂಲಗಳಾದ ು, ಗಾಳಿ, ಅರಣ್ಯ, ಮಣ್ಣು ಮುಂತಾದ ಸಂಗತಿಗಳಿಗೆ ಸಂಬಂಧಿಸಿದ ಚಟುವಟಿಕೆ ರುತ್ತವೆಯೋ ಅವುಗಳನ್ನು ಖಾಸಗಿ ವಲಯಕ್ಕೆ ಬಿಟ್ಟುಕೊಡಬಾರದು. ಈ ದಿಶೆಯಲ್ಲಿ ನಮಗೆ ರೆ ಮಾರ್ಗವಿಲ್ಲ.

ಷ್ಕರ್ಷ-ಮುಖ್ಯಾಂಶಗಳು


ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯೇನೋ ನಡೆದಿದೆ. ವರಮಾನದಲ್ಲಿ ಏರಿಕೆ ಉಂಟಾಗಿದೆ. ಟ್ಟಿನ ಗಾತ್ರ ಅಧಿಕವಾಗುತ್ತಿದೆ. ಆದರೆ ಜನರ ಬದುಕು ಸಮೃದ್ಧವಾಗುತ್ತಿಲ್ಲ. ಉಳ್ಳವರ ಣೆ ತುಂಬಿ ತುಳುಕುತ್ತಿದ್ದರೆ ಉಳಿದವರ ಹೊಟ್ಟೆ ಖಾಲಿಯಾಗಿದೆ. ಅಭಿವೃದ್ಧಿ ಎಂಬುದು ಲ್ಲದಿರುವುದರ' ಸಮಸ್ಯೆಯಲ್ಲ; ಇರುವುದು ಜನರಿಗೆ ದೊರೆಯದಿರುವುದರ ಸಮಸ್ಯೆ ಬುದನ್ನು ಅಮರ್ತ್ಯ ಸೇನ್ ತನ್ನ 'ಪಾವರ್ಟಿ ಆಂಡ್ ಫ್ಯಾಮಿನ್ಸ್' (೧೯೮೧) ಕೃತಿಯಲ್ಲಿ ಪಾದಿಸಿದ್ದಾರೆ. ಆ ಕೃತಿಯ ಮೊದಲ ಸಾಲು ಹೀಗಿದೆ:

'ಹಸಿವು ಎನ್ನುವುದು ಕೆಲವರಿಗೆ ಆಹಾರ ದೊರೆಯದೆ ಇರುವುದರ ಲಕ್ಷಣವೇ ವಿನಾ ಅದು ರ ಹೊಟ್ಟೆತುಂಬಿಸಲು ಅಗತ್ಯವಾದ ಆಹಾರ ಇಲ್ಲದಿರುವುದರ ಸಮಸ್ಯೆಯಲ್ಲ.'

ಉದಾರೀಕರಣ, ಖಾಸಗೀಕರಣ, ಮಾರ್ಕೆಟ್ಟೀಕರಣಗಳ ದುಷ್ಪರಿಣಾಮಗಳ ಬಿಸಿ ನಮಗೆ ತಟ್ಟತೊಡಗಿದೆ. ಖಾಸಗೀಕರಣದಿಂದಾಗಿ ಭ್ರಷ್ಟಾಚಾರಕ್ಕೆ ದಿಡ್ಡಿ ಬಾಗಿಲು ತೆರೆದಂತಾಗಿದೆ. ಉತ್ಪಾದನೆಯು ಪ್ರಾಕೃತಿಕ ಸಂಪನ್ಮೂಲಗಳಿಗೆ ಸಂಬಂಧಿಸಿದೆಯೋ ಅಲ್ಲಿ ಖಾಸಗೀಕರಣವು ಡದು. ಉದಾಹರಣೆಗೆ ಗಣಿಗಾರಿಕೆ. ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ದಿರುವ ಅಕ್ರಮ ಮತ್ತು ಕಾನೂನು-ಬಾಹಿರ ಚಟುವಟಿಕೆಗಳ ಹಿನ್ನೆಲೆಯಲ್ಲಿ ಗಣಿಗಾರಿಕೆಯಲ್ಲಿ ಗಿಯವರಿಗೆ ಅವಕಾಶವನ್ನು ನಿಷೇಧಿಸುವುದು ಅಗತ್ಯ.

ಪ್ರಾದೇಶಿಕ ಅಸಮಾನತೆಯ ವಿರಾಟ್ ದರ್ಶನವನ್ನು ಇಲ್ಲಿನ ಪ್ರಬಂಧದಲ್ಲಿ ಮಾಡಿಸಲಾಗಿದೆ. ವಿಕೃತಿಯನ್ನು ಸರಿಪಡಿಸುವ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ.

ಜನಸಂಖ್ಯೆಯ ಸಮಸ್ಯೆ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆ, ಭೂರಹಿತ ದಿನಗೂಲಿ ದುಡಿಮೆಗಾರರ ಸಮಸ್ಯೆ, ವಲಸೆ, ಮಹಿಳಾ ದುಡಿಮೆಗಾರರ ಸಮಸ್ಯೆ ಮುಂತಾದವುಗಳ ನಿರ್ವಹಣೆಯಲ್ಲಿ ಪ್ರಾದೇಶಿಕ ದೃಷ್ಟಿಕೋನದ ಅಗತ್ಯವಿದೆ. ಆದರೆ ನಮ್ಮ ನೀತಿ-ನಿರ್ದೇಶನಗಳಲ್ಲಿ ಅದು ಕಾಣುತ್ತಿಲ್ಲ. ವರಮಾನದ ಏರಿಕೆಯ ಮಾತುಗಳನ್ನು ನಾವು ನಿಲ್ಲಿಸಿ ಬಿಡಬೇಕು. ಜನರ ಧಾರಣಾ ಸಾಮರ್ಥ್ಯವನ್ನು ವರ್ಧಿಸುವುದರ ಕಡೆಗೆ ಹೆಚ್ಚು ಗಮನ ನೀಡಬೇಕು. ಜಾನ್ ರಾಲ್ಸ್‌ನ 'ಡಿಫರೆನ್ಸ್ ನಿಯಮ'ವನ್ನು ಪಾಲಿಸುವ ದಿಶೆಯಲ್ಲಿ ನಾವು ಯೋಚಿಸಬೇಕು. ಸಾಮಾಜಿಕ ನ್ಯಾಯವೆನ್ನುವುದು ಕೇವಲ ಮೀಸಲಾತಿಗೆ ಸಂಬಂಧಿಸಿದ ಸಂಗತಿಯಲ್ಲ. ಅದು ಪ್ರಧಾನವಾಗಿ ಅಭಿವೃದ್ಧಿಯ ಸಂಗತಿ. ಅಭಿವೃದ್ಧಿಯ ಫಲಗಳು ಹೆಚ್ಚು ಹೆಚ್ಚಾಗಿ ಸಮಾಜದ ಅಂಚಿನಲ್ಲಿರುವವರಿಗೆ, ವಂಚಿತರಿಗೆ, ಮಹಿಳೆಯರಿಗೆ, ದಲಿತರಿಗೆ ದೊರೆಯುವಂತೆ ಮಾಡುವುದೇ ಸಾಮಾಜಿಕ ನ್ಯಾಯ. ಈ ಬಗೆಯ ಅಭಿವೃದ್ಧಿಯು ನಮ್ಮ ಗುರಿಯಾಗಿರಬೇಕು. ನಮ್ಮ ಅಭಿವೃದ್ಧಿಯು ದಲಿತರಿಗೆ, ಮಹಿಳೆಯರಿಗೆ, ದುಡಿಮೆಗಾರರಿಗೆ ಅಭಿಮುಖವಾಗಿರಬೇಕು. ಅಭಿವೃದ್ಧಿಯು ಮೂಲತಃ ಪ್ರಾಪಂಚಿಕವಾದುದೇ ವಿನಾ ಪಾರಮಾರ್ಥಿಕ ವಾದುದಲ್ಲ. ಇದುವರೆಗೂ ನಾವು 'ಆಹಾರ ಭದ್ರತೆ'ಯ ಬಗ್ಗೆ




"ನೀವೆಂಥಾ ರಿಯಲ್ ಎಸ್ಟೇಟ್ ಏಜೆಂಟು ರೀ,
ನೀರಿನ ಕೊರತೆ ಇಲ್ಲದ ಮನೆ ತೋರಿಸಿ ಅಂದರೆ ಹೀಗಾ ?"

ಮಾತನಾಡುತ್ತಿದ್ದೆವು. ಡಾ|| ಎಂ. ಎಸ್. ಸ್ವಾಮಿನಾಥನ್ ಪ್ರಕಾರ ನಮಗೀಗ ಅಗತ್ಯವಾಗಿರುವುದು 'ನೀರಿನ ಭದ್ರತೆ' ಮತ್ತು 'ಮಣ್ಣಿನ ಭದ್ರತೆ.' ರೈತರ ಭೂಮಿಯು ಇಂದು ಉದ್ದಿಮೆಗಾರರ ಆಕ್ರಮಣಕ್ಕೆ ತುತ್ತಾಗಿದೆ. ಪರಿಸರಕ್ಕೆ ಹಾನಿ ಮಾಡದಂತೆ ಮತ್ತು ರೈತರ ಬದುಕನ್ನು ನಾಶ ಮಾಡದಂತೆ ಅಭಿವೃದ್ಧಿಯನ್ನು ನಿರ್ವಹಿಸಬಹುದು. ಈ ಬಗ್ಗೆ ನಾವು ಯೋಚಿಸ ಬೇಕಾಗಿದೆ. 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' (ಅಮರ್ತ್ಯ ಸೇನ್), 'ಸಾಮಾಜಿಕ ನ್ಯಾಯವಾಗಿ ಅಭಿವೃದ್ಧಿ' (ಜಾನ್ ರಾಲ್ಸ್), 'ಮಾನವ ಹಕ್ಕುಗಳಾಗಿ ಅಭಿವೃದ್ಧಿ' (ಅರ್ಜುನ್ ಸೇನ್‌ಗುಪ್ತ) – ಈ ನೆಲೆಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ ಮತ್ತು ಅದನ್ನು ಅನುಷ್ಠಾನಗೊಳಿಸುವ ಅಗತ್ಯವಿದೆ. ಈ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ ಸಮಾಜ ವಿಜ್ಞಾನಿಗಳ ಪಾತ್ರ ಬಹಳ ಮುಖ್ಯವಾಗಿದೆ. ದುರದೃಷ್ಟದ ಸಂಗತಿಯೆಂದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಸಮಾಜ ವಿಜ್ಞಾನಿಗಳು ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿಲ್ಲ. ನಮ್ಮಲ್ಲಿನ ಅಭಿವೃದ್ಧಿ ವಿಕೃತಿಗಳನ್ನು ಸರಿಪಡಿಸುವ ದಿಶೆಯಲ್ಲಿ ಸಮಾಜ ವಿಜ್ಞಾನಿಗಳು ನಿರ್ಣಾಯಕ ಪಾತ್ರ ನಿರ್ವಹಿಸಬೇಕಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಆಕೃತಿ ಯಾವುದು ಮತ್ತು ವಿಕೃತಿ ಯಾವುದು ಎಂಬುದನ್ನು ಸಮಾಜ ವಿಜ್ಞಾನಿಗಳು ಅಧ್ಯಯನ-ಚಿಂತನೆಯ ಆಧಾರದ ಮೇಲೆ ಜನರಿಗೆ ತಿಳಿಸಬೇಕು ಮತ್ತು ಅದರ ಬಗ್ಗೆ ಚರ್ಚೆ ನಡೆಸಬೇಕು.

ಡಾ|| ಟಿ. ಆರ್. ಚಂದ್ರಶೇಖರ

ಆರ್. ಎಸ್. ಶರ್ಮಾ (1920-2011)



ಮೊನ್ನೆಮೊನ್ನೆ ನಮ್ಮನ್ನು ಅಗಲಿದ ರಾಮ್ ಶರಣ ಶರ್ಮಾ ಅವರು ಮೇರು ಶ್ರೇಣಿಯ ಇತಿಹಾಸಕಾರರು. ತೊಂಭತ್ತೊಂದು ವರ್ಷದ ದೀರ್ಘ ಜೀವನದ ಕೊನೆಯ ಒಂದೆರಡು ವರ್ಷಗಳನ್ನು ಮಾತ್ರ ಮುಪ್ಪಿನ ವಿಶ್ರಾಂತಿಯಲ್ಲಿ ಕಳೆದ ಅವರು ಭಾರತದ ಇತಿಹಾಸದ ವಸ್ತು, ರಚನೆ, ವಿಶ್ಲೇಷಣೆಗಳಲ್ಲಿ ರೂಢಿಯಾದ ಜಡತನವನ್ನು ಕಳೆದು ಹೊಸತನವನ್ನು ಸೃಷ್ಟಿಸಿದವರು. ಇತಿಹಾಸದ ಗ್ರಹಿಸುವಿಕೆಯಲ್ಲಿ ಮತ್ತು ರಚನೆಯಲ್ಲಿ ನಿರ್ದಿಷ್ಟ ಸೈದ್ಧಾಂತಿಕತೆಯನ್ನು ಅಳವಡಿಸಿ, ಅದರಲ್ಲಿ ಹುಟ್ಟಿದ ಸಮಾಜಕ್ಕೆ ಪ್ರಸ್ತುತವಾಗುವ ನಿಖರ ಪ್ರಶ್ನೆಗಳನ್ನೆತ್ತಿ, ಅವುಗಳಿಗೆ ಸಂಭಾವ್ಯ ಉತ್ತರಗಳನ್ನು ಇತಿಹಾಸದ ವಿವಿಧ ಆಕರಗಳಲ್ಲಿ ಹುಡುಕಿ ನೀಡುವ ಧೈರ್ಯ ಮಾಡಿದ ರಾಮ ಶರಣ ಶರ್ಮಾ ಇಪ್ಪತ್ತನೇ ಶತಮಾನದ ಐವತ್ತನೇ ದಶಕದಲ್ಲೇ ಭಾರತದ ಇತಿಹಾಸ ರಚನಾವಲಯಗಳಲ್ಲಿ ಒಂದು ಹೊಸ ಉದ್ವೇಗವನ್ನು, ನವೀನ ಸಾಧ್ಯತೆಗಳನ್ನು ಹುಟ್ಟುಹಾಕಿದರು. ಅವುಗಳಿಂದ ಪ್ರೇರಿತರಾದ ಅನೇಕ ಇತಿಹಾಸಕಾರರು ಶರ್ಮಾ ಅವರ ಸಿದ್ಧಾಂತಗಳನ್ನು, ಅಥವಾ ಒಳ ಹೊಳಹುಗಳನ್ನು ಆಧರಿಸಿ ಅಥವಾ ಅನುಸರಿಸಿ ಹೊಸ ದಾರಿಗಳನ್ನು ಅರಸಿ ಅಧ್ಯಯನದ ಹರವು, ಮಜಲುಗಳನ್ನು ವಿಸ್ತಾರಗೊಳಿಸಿದರು. ಅವರ ವಿಚಾರಗಳನ್ನು ಒಪ್ಪದ ಮಂದಿ ಒಮ್ಮೊಮ್ಮೆ ರಾಜಕೀಯ ಪ್ರೇರಣೆಯಿಂದ, ಕೆಲವೊಮ್ಮೆ ಕೇವಲ ಪೂರ್ವಾಗ್ರಹದಿಂದ, ಇನ್ನು ಕೆಲವೊಮ್ಮೆ ಸೈದ್ಧಾಂತಿಕ ಅಭಿಪ್ರಾಯ ಭೇದಗಳಿಂದ, ಅಥವಾ ಸಂಶೋಧನೆಯಲ್ಲಿ ಕಂಡುಬಂದ ತೊಡಕುಗಳಿಂದ ತಮ್ಮ ವಿಚಾರಗಳನ್ನು ಮುಂದಿಟ್ಟು ಅನೇಕ ಚರ್ಚೆಗಳಿಗೆ ಕಾರಣರಾದರು. ಇವು ಭಾರತದ ಇತಿಹಾಸ ರಚನೆ ಮತ್ತು ಸಾಮಾಜಿಕ ಸಂವೇದನೆಗಳ ಮೇಲೆ ಬಹಳಷ್ಟು ಪ್ರಭಾವವನ್ನು ಬೀರಿದುವು. ಇದರೊಳಗೆ ರಾಜಕೀಯದ ತುಂಟ ಅಲೆಗಳೂ ಸೇರಿದ್ದುಂಟು. ಇತಿಹಾಸದ ಗಂಭೀರ ವಿಶ್ಲೇಷಣೆಗಳಲ್ಲಿಯೂ ರಾಜಕೀಯವನ್ನು ಸಂಪೂರ್ಣವಾಗಿ ಹೊರಗಿಡುವುದು ಅಸಾಧ್ಯವೆಂಬ ಭಾವನೆ ಕಠೋರ ವಾಸ್ತವತೆಯನ್ನು ಪ್ರತಿಬಿಂಬಿಸುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎರಡು ಬಗೆಯ ಇತಿಹಾಸ ಸಂವೇದನೆಗಳು ಕಂಡು ಬಂದುವು. ಮೊದಲನೆಯದಾಗಿ ರಾಷ್ಟ್ರೀಯತೆಯ ಹುಮ್ಮಸ್ಸು, ವಸಾಹತುಶಾಹಿಯನ್ನು ಕೊನೆಗೊಳಿಸಿದ ವಿಜಯದ ಸಂಭ್ರಮ ಹಾಗೂ ಮುಕ್ತ ಭಾರತದ ಇತಿಹಾಸವನ್ನು ಮುಕ್ತವಾಗಿ, ನಾವು ನಮಗಾಗಿಯೇ ಬರೆಯುವ ತವಕ. ಇಷ್ಟರವರೆಗೆ ಬ್ರಿಟಿಷರು ನಮ್ಮ ಇತಿಹಾಸದ ಬಗ್ಗೆ ನಮಗೆ ಪಾಠ ಹೇಳಿದ್ದು, ಅಲ್ಲಿಯ ತನಕ ಈ ವಿಚಾರದಲ್ಲಿ ನಮ್ಮ ಅನಾಸಕ್ತಿ, ದಡ್ಡತನದ ಕುರಿತು ಲೇವಡಿ ಮಾಡಿದ್ದು, ಅದರ ಬಗ್ಗೆ ಅವಮಾನಿತರಾಗಿ ಅದನ್ನು ಮೌನವಾಗಿ ಸಹಿಸಿಕೊಂಡಿದ್ದು, ಇದೆಲ್ಲಾ ಗತಕಾಲಕ್ಕೆ ಸಂದದ್ದು. ಈಗ ನಾವು ಸ್ವತಂತ್ರರು; ಇದು ನಮ್ಮದೇ ಕಾಲ. ನಮ್ಮ ಇತಿಹಾಸವನ್ನು ನಾವೇ, ಯಾರ ಹಂಗಿರದೆ ಬರೆಯಲು ಶಕ್ತರು. ನಾವದನ್ನು ಬರೆದು ತೋರಿಸುತ್ತೇವೆ, ಎಂಬ ಹುಮ್ಮಸ್ಸು. ಆದರೆ ನವಯುಗದ ಹೊಸ ಹುರುಪಿನಲ್ಲಿ ಬಳುವಳಿಯಾಗಿ ಬಂದ ಹಳೆ ಚೌಕಟ್ಟನ್ನು ಬದಿಗೊತ್ತಲು ಹಲವರಿಗೆ ನೆನಪಾಗಲಿಲ್ಲ, ಅಥವಾ ಮನಸ್ಸೊಪ್ಪಲಿಲ್ಲ. ವಸಾಹತುಶಾಹಿ ಇತಿಹಾಸವನ್ನು ರಾಷ್ಟ್ರೀಯವಾದಿ [illegible] ಅದೆಷ್ಟು ಮೂದಲಿಸಿದರೂ ಈ ಪ್ರಕ್ರಿಯೆ ಸಾಮಾನ್ಯವಾಗಿ ನಡೆದದ್ದು ಅದೇ [illegible], ರೂಢಿಯಾದ ಚೌಕಟ್ಟಿನಲ್ಲಿ. ರಾಷ್ಟ್ರೀಯ ಇತಿಹಾಸವು ವಸಾಹತುಶಾಹಿ ಪರಂಪರೆಯೊಳಗೆ ಹುಟ್ಟಿ ಅದನ್ನು [illegible] ಅವರದ್ದೇ [illegible] ಮಾಡಿ. ಸಾಮ್ರಾಜ್ಯದ [illegible] ಸಂಭ್ರಮದ ವಿವರಣೆ. ಅದರ ರಾಜಕೀಯ ಇತಿಹಾಸ, ರಾಜರ, ರಾಜಮನೆತನಗಳ ವಂಶಾವಳಿಗಳು ಹಾಗೂ ಅವರ ಧೀರ ಕಥಾ[illegible] ಅಥವಾ ಘಟನಾವಳಿಗಳ ಕಾಲನಿರ್ಧಾರದ ಬಗ್ಗೆ ಅತೀವ ಕಾಳಜಿ ಹಾಗೂ ಅದರ[illegible] ಹುಟ್ಟಿದ ಚೌಕಾಸಿ-ಜಗಳಗಳು, ಸಮಾಜದ, ಧರ್ಮದ, ಆರ್ಥಿಕತೆಯ, ಸಂಸ್ಕೃತಿ[illegible] ಬೆಳವಣಿಗೆಗಳೆಲ್ಲವೂ ರಾಜರ ಅಥವಾ ರಾಜಕೀಯದ ಆದೇಶ, ನಿರ್ಧಾರ, ದಿಸೆಯ[illegible] ಅನುಸರಿಸುತ್ತವೆ ಎಂಬ ಗಾಢವಾದ ಮುಗ್ಧ ನಂಬಿಕೆ, ಇವೆಲ್ಲವೂ ವಸಾಹತು ಇತಿಹಾ[illegible] ರಚನಾಕಾರರಿಂದ ಬಂದ ಬಳುವಳಿ. ಇದನ್ನು ಅಳವಡಿಸಿಕೊಂಡೇ ಇದರ [illegible] ಆರೋಪಗಳನ್ನು ಖಂಡಿಸಿ ತಮ್ಮ ಗತಕಾಲದ ಹಿರಿಮೆಯನ್ನು ಸ್ಥಾಪಿಸಲು ಹೊರಟವ[illegible] ರಾಷ್ಟ್ರೀಯ ಇತಿಹಾಸಕಾರರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ಹಂ[illegible] ತೀವ್ರವಾಯಿತು, ಅಬಾಧಿತವಾಯಿತು. ಸ್ವತಂತ್ರ ಭಾರತಕ್ಕೆ ಸ್ವತಂತ್ರ ಇತಿಹಾಸ[illegible] ನೀಡುವ ಹುಮ್ಮಸ್ಸನ್ನು ಹಳೆಯ ವಿವರಣಾ ಚೌಕಟ್ಟಿನಲ್ಲಿ ಯಥೇಚ್ಛ[illegible] ತೋರಲಾಯಿತು. ಆರ್. ಸಿ. ಮಜುಮ್ದಾರರ ನೇತೃತ್ವದಲ್ಲಿ ರಚಿತವಾದ 'ಹಿಸ್ಟರಿ ಎ[illegible] ಕಲ್ಚರ್ ಆಫ್ ಇಂಡಿಯನ್ ಪೀಪಲ್ಸ್'ನ ಶೀರ್ಷಿಕೆಯ ಅಡಿಯಲ್ಲಿ ಬಂದ ಬೃ[illegible] ಸಂಪುಟಗಳು ಇದಕ್ಕೆ ಉದಾಹರಣೆ. ಹೇರಳವಾದ ವಿವರಗಳನ್ನು ಒಳಗೊಂಡ[illegible] ಸಂಪುಟಗಳು ದೇಶದ ವಿವಿಧ ಘಟಕಗಳಿಗೆ ಇತಿಹಾಸದ ಮರ್ಯಾದೆಯನ್ನು ನೀಡು[illegible] ಶಕ್ತವಾಯಿತು. ಅದರೊಡನೆ ರಾಷ್ಟ್ರೀಯತೆಯ ಹಲಕೆಲವು ವಿಲಕ್ಷಣ ಸಂಕುಚಿ[illegible] ಅಸಹನೆಗಳನ್ನೂ ಇತಿಹಾಸ ರಚನೆಯಲ್ಲಿ ಒಳಗೂಡಿಸಿಕೊಂಡಿತು. ಅನೇಕ ವಿಚಾರಗ[illegible] ಉಪಯುಕ್ತ ಸಂಪುಟಗಳಾದರೂ ಇವು ಇತಿಹಾಸವನ್ನು ನೋಡುವಲ್ಲಿ ಹ[illegible] ದೃಷ್ಟಿಯನ್ನಾಗಲೀ, ರಚನೆಯಲ್ಲಿ ಹೊಸ ಚೌಕಟ್ಟನ್ನಾಗಲೀ ಅಳವಡಿಸಿಕೊಳ್ಳ[illegible] ರಮ್ಯತೆಯ ಗುಂಗಿನಲ್ಲಿ ಗತಕಾಲದ ಬಗ್ಗೆ ಹೆಗ್ಗಳಿಕೆ-ತೆಗಳಿಕೆಗಳನ್ನು ಪಾಂ[illegible] ಪೂರ್ವಕವಾಗಿ ರೂಢಿಸಿಕೊಂಡಷ್ಟು ಇತಿಹಾಸದ ಸ್ವರೂಪ, ಅದು ತೋ[illegible] ಚಾಲನಾ ಶಕ್ತಿ ಅಥವಾ ಸಮಾಜದೊಡನೆ ಅದು ಮೇಳೈಸುವ ಕ್ರಮವನ್ನು ಈ ಸಂಪುಟ[illegible] ಪರಿಗಣಿಸಲಿಲ್ಲ. ಹಾಗೇನಾದರೂ ಮಾಡುವುದು ಇತಿಹಾಸದ ಪರಿಹಾಸ[illegible] ಆದೀತು, ಅದರ ವಸ್ತುನಿಷ್ಠ ವ್ಯವಸಾಯ ಅಲ್ಲ, ಎಂಬ ಭಾವನೆಯನ್ನೂ ಮುಂದಿಟ್ಟ[illegible]

ಹಾಗೆಂದು ಸ್ವಾತಂತ್ರ್ಯ ಲಾಭವು ದೇಶದ ಇತಿಹಾಸ ಚಿಂತನೆಯ ಮೆ[illegible] ಇನ್ನೊಂದು ರೀತಿಯಲ್ಲೂ ಪರಿಣಾಮವನ್ನು ಬೀರಿತು. ವಸಾಹತುಶಾಹಿ ಸಂಭ್ರ[illegible] ಕೊನೆಗೊಂಡು ಸಾಮ್ರಾಜ್ಯ ಸೂರ್ಯನು ಕೊನೆಗೂ ಅಸ್ತಂಗತನಾದ ನ[illegible] ಸಾಮ್ರಾಜ್ಯದ ಬಗ್ಗೆ ವಿದಾಯದ ಭಾವುಕತೆಯನ್ನು ಪ್ರಕಟಿಸಬಹುದೇ ಹೊರತು ಅ[illegible] ನಿರ್ಲಜ್ಜ ಸಮರ್ಥನೆ ಸುಲಭವಾಗಿರಲಿಲ್ಲ. ಮುಂದೆ ಇವುಗಳ ಸೂಕ್ಷ್ಮ ಸಮ್ಮಿಳನ[illegible] ನವೀನ ಸೈದ್ಧಾಂತಿಕ ಪರಿಭಾಷೆಗಳಲ್ಲಿ ಪ್ರಸ್ತುತಗೊಂಡವು, ಸಾಕಷ್ಟು ಚರ್ಚೆ[illegible] ಗ್ರಾಸವಾದುವು. ಹಾಗೆಯೇ ಸ್ವತಂತ್ರ ಭಾರತದಲ್ಲಿ ಇತಿಹಾಸವು ಗತಕಾಲದ ಸು[illegible] ವೈಭವೀಕರಣವನ್ನು ಮೀರಿ ರಾಷ್ಟ್ರದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀ[illegible] ಆಶಯಗಳನ್ನು ಪ್ರತಿಬಿಂಬಿಸಿ ನೆರವೇರಿಸುವತ್ತ ಮನಮಾಡಿತು. ಇತಿಹಾ[illegible]

ಡಾ॥ ಬಿ. ಸುರೇಂದ್ರ ರಾವ್

ಗತಕಾಲದ ಕಥನಾವಳಿಯಾದರೂ ಅದರೊಳಗೆ ಇಂದು-ನಾಳೆಗಳು ಪ್ರಖರವಾಗಿ ಪ್ರಕಟಗೊಳ್ಳುತ್ತವೆ. ನಾವು ನಡೆದುಬಂದ ದಾರಿಯನ್ನು ನೋಡಿ ವಿಶ್ಲೇಷಿಸುವುದು ಭವಿಷ್ಯದ ನಿರ್ದಿಷ್ಟ ಪರಿಕಲ್ಪನೆಗಳನ್ನಿಟ್ಟುಕೊಂಡಿರುವ ವರ್ತಮಾನಗಳೇ. ಇದು ಇತಿಹಾಸದಲ್ಲಿ ಯಾವುದು ಮುಖ್ಯ ಯಾವುದು ಗೌಣ, ಯಾವುದು ಅಪ್ಯಾಯಮಾನ ಯಾವುದು ತಿರಸ್ಕಾರಯೋಗ್ಯ ಎಂಬುದನ್ನು ತಿಳಿಸುವುದಷ್ಟೇ ಅಲ್ಲ, ಇತಿಹಾಸದ ಒಟ್ಟು ಪರಿಕಲ್ಪನೆಯನ್ನೂ ನಿರ್ಧರಿಸುತ್ತದೆ. ಇದರಿಂದ ಸೈದ್ಧಾಂತಿಕತೆಯನ್ನು ಹೊರದಬ್ಬಲು ಸಾಧ್ಯವೇ ಇಲ್ಲ. ಅದರ ಆಯ್ಕೆ ಮಾತ್ರ ನಮಗೆ ಸೇರಿದ್ದು. ಈ ಸಂದರ್ಭದಲ್ಲಿ ಡಿ.ಡಿ. ಕೋಸಾಂಬಿಯವರ ಎಡಪಂಥೀಯ ಇತಿಹಾಸ ಚಿಂತನೆಗಳು ಹೊಸ ಮಾರ್ಗದತ್ತ ಬೆರಳು ತೋರಿದುವು. ಇತಿಹಾಸವನ್ನು ಚಾರಿತ್ರಿಕ ಭೌತಿಕವಾದದ ಬುನಾದಿಯಲ್ಲಿ, ಆರ್ಥಿಕ ಹಾಗೂ ಸಾಮಾಜಿಕ ಸನ್ನಿವೇಶಗಳ ಪರಸ್ಪರ ದ್ವಂದ್ವ, ಬದಲಾವಣೆಗಳ ಚೌಕಟ್ಟಿನೊಳಗೆ ಅರ್ಥೈಸುವುದು ಅವಶ್ಯ; ಹಾಗಾದರಷ್ಟೇ ಇತಿಹಾಸದ ನಿಜ ಸ್ವರೂಪ ಹಾಗೂ ಮನುಷ್ಯನ ಬದುಕು ಆಶಯಗಳಿಗೆ ಅದರ ನೈಜ ಸಾಂದರ್ಭಿಕತೆಯನ್ನು ನೀಡಲು ಸಾಧ್ಯ. ಇಲ್ಲವಾದರೆ ಇತಿಹಾಸವು ಒಂದು ಅಸಂಗತ ಕಥಾನಕವಷ್ಟೇ ಆಗಲು ಸಾಧ್ಯ ಎಂದು ಪ್ರತಿಪಾದಿಸಿದರು. ಕೋಸಾಂಬಿಯವರ ಬರವಣಿಗೆಗಳು ಬಹುತೇಕ ಪಂಥೀಯ ನೆಲೆಯಲ್ಲಿ ಚರ್ಚಿತವಾಯಿತು. ಸಾಂಪ್ರದಾಯಿ ಮಾರ್ಕ್ಸಿಸ್ಟರು ಇವರ ತೀಕ್ಷ್ಣ ಸೈದ್ಧಾಂತಿಕತೆಯ ಬಗ್ಗೆ ತೀವ್ರ ಅಸಹನೆಯನ್ನು ತೋರಿದರೆ ಬಲಪಂಥೀಯರು ತಮ್ಮ ವಾಡಿಕೆಯಂತೆ ಇದನ್ನು ಆಮದಾದ ಅ-ಭಾರತೀಯ ಸೈದ್ಧಾಂತಿಕತೆ ಎಂದು ನಿರಾಕರಿಸಿದರು. ಇತಿಹಾಸ ಚಿಂತನೆ, ವಿಶ್ಲೇಷಣೆಗಳ ಶಕ್ತಿ, ಪ್ರಸ್ತುತತೆಗಳು ಅವುಗಳ ಹಣೆಪಟ್ಟಿಗಳ ಬಣ್ಣ-ಬರವಣಿಗೆಗಳ ಮೇಲೆ ನಿಂತಿಲ್ಲ. ನಮ್ಮ ಸಮಾಜವನ್ನು ನಾವು ಹೇಗೆ ರೂಪಿಸಲು ಬಯಸಿದ್ದೇವೆ, ಅದಕ್ಕೆ ನಮ್ಮ ಸನ್ನಾಹಗಳೇನು, ಎಂಬುದರ ಮೇಲೆ ನಿಂತಿದೆ. ಸಮಾಜವು ಅಸಮಾನತೆಯ ಗೂಡಾಗಿರುವ ತನಕ ಅದರ ಬದಲಾವಣೆಯು ಏಕೆ, ಹೇಗೆ ಆಗಬೇಕು ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಇದರಲ್ಲಿ ಒಮ್ಮತವಿಲ್ಲದಿದ್ದರೆ ಆಶ್ಚರ್ಯವೇನೂ ಇಲ್ಲ.



"ಇನ್ನೂ ಲೋಕಪಾಲ್ ಬಿಲ್ ಜಾರೀನೆ ಆಗಿಲ್ಲ, ಇಷ್ಟು ಬೇಗ ನಮ್ಮ ಫ್ಯಾಕ್ಟರಿ ಲೈಸೆನ್ಸ್ ನಂಬರ್ ಬಂದುಬಿಡ್ತಾ ?"
"ಅದು ಲೈಸೆನ್ಸ್ ನಂಬರ್ ಅಲ್ಲಾ ಸಾರ್, ಎಷ್ಟು ಲಂಚ ಕೊಡಬೇಕು ಅಂತ ಬರೆದು ಕಳಿಸಿದಾರೆ ಅಷ್ಟೇ . . . !!"

ಕೋಸಾಂಬಿಯವರ ಆಶಯ-ಚಿಂತನೆಗಳಿಂದ ಪ್ರೇರಣೆ ಹೊಂದಿ ಇತಿಹಾಸವನ್ನು ಹೊಸ ದೃಷ್ಟಿಯಲ್ಲಿ ನೋಡಿ, ರಚಿಸಿದವರು ಹಲವರು. ಅವರಲ್ಲಿ ಭಾರತದ ಪ್ರಾಚೀನ ಇತಿಹಾಸದ ರಚನೆಗೆ ಹೊಸ ಆಯಾಮವನ್ನು ನೀಡಿದವರಲ್ಲಿ ಆರ್. ಎಸ್. ಶರ್ಮಾ ಪ್ರಮುಖರು. ತಮ್ಮ ತಾರುಣ್ಯದಲ್ಲಿ ಪಂಡಿತ ರಾಹುಲ ಸಾಂಕೃತ್ಯಾಯನ, ಪಂಡಿತ ಕಾರ್ಯಾನಂದ ಶರ್ಮಾ ಹಾಗೂ ರೈತ ಚಳುವಳಿಯ ಸುಪ್ರಸಿದ್ಧ ನೇತಾರ ಸಹಜಾನಂದ ಸರಸ್ವತಿ ಮೊದಲಾದವರ ಸಂಪರ್ಕದೊಳಗೆ ಬಂದು ಅವರಿಂದ ಮತ್ತು ಎಡ ಪಂಥೀಯ ವಿಚಾರಗಳಿಂದ ಪ್ರಭಾವಿತರಾದರು. ಪಟ್ನಾ ಕಾಲೇಜಿನಲ್ಲಿ ಇತಿಹಾಸ ಅಧ್ಯಯನ ಮಾಡಿ, ಸ್ವಲ್ಪ ಕಾಲ ಅಧ್ಯಾಪನವನ್ನೂ ನಡೆಸಿ, ಮುಂದೆ ಪಟ್ನಾ ಮತ್ತು ದೆಹಲಿ ವಿಶ್ವವಿದ್ಯಾಲಯಗಳ ಇತಿಹಾಸ ವಿಭಾಗಗಳ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದಷ್ಟೇ ಅಲ್ಲ 'ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟೋರಿಕಲ್ ರಿಸರ್ಚ್' ಸಂಸ್ಥೆಯ ಮೊದಲ ಅಧ್ಯಕ್ಷರಾಗಿ ಅದರ ಕಾರ್ಯವ್ಯಾಪ್ತಿ, ವೈಖರಿಗಳನ್ನು ರೂಪಿಸಿದರು. 'ಇಂಡಿಯನ್ ಹಿಸ್ಟರಿ ಕಾಂಗ್ರೆಸ್'ನ ಕ್ರಿಯಾಶೀಲ ಸದಸ್ಯರಾಗಿ ಅದರ ಜಾತ್ಯತೀತ ಆದರ್ಶವನ್ನು ಹಾಗೂ ಇತಿಹಾಸ ರಚನೆಯಲ್ಲಿ ವೈಜ್ಞಾನಿಕತೆಯನ್ನು ಕಾಪಾಡಿಕೊಂಡು ಬರುವಲ್ಲಿ ಮಹತ್ತರದ ಪಾತ್ರವನ್ನು ವಹಿಸಿದರು. ಇತಿಹಾಸ ಸಂಶೋಧನೆ ಹಾಗೂ ಅದರ ಸಾಂಸ್ಥಿಕ ವ್ಯವಸ್ಥೆಯನ್ನು ನಿರ್ದಿಷ್ಟ ಸ್ವರೂಪದಲ್ಲಿ ಅಣಿಗೊಳಿಸುವಲ್ಲಿ, ಅವುಗಳು ಸವಾಲುಗಳನ್ನು ಎದುರಿಸಿದಾಗ ಅವುಗಳನ್ನು ನಿಗ್ರಹಿಸುವಲ್ಲಿ ಕ್ರಿಯಾಶೀಲರಾಗಿದ್ದರು. ಅವರ ಇತಿಹಾಸ ಚಿಂತನೆಗಳು ಅನೇಕ ಇತಿಹಾಸಕಾರರನ್ನು ಪ್ರೇರೇಪಿಸಿದ್ದಷ್ಟೇ ಅಲ್ಲ ಅವು ಹಲವು ಮೌಲಿಕ, ಕ್ರಿಯಾತ್ಮಕ ಚರ್ಚೆಗಳನ್ನು ಹುಟ್ಟುಹಾಕಿ ಭಾರತದ ಇತಿಹಾಸ ರಚನೆಯ ಮಜಲುಗಳನ್ನು ಶ್ರೀಮಂತಗೊಳಿಸಿದುವು.

ಶರ್ಮಾರವರ ಎಡಪಂಥೀಯ ಒಲವು ಅವರನ್ನು ಭಾರತದ ಸಾಮಾಜಿಕ ಇತಿಹಾಸದ ಈ ತನಕ ಅನಾವರಣಗೊಳ್ಳದ ಒಳಸ್ತರದ ಒಳಪದರುಗಳನ್ನು ಹುಡುಕಿ ವಿಶ್ಲೇಷಿಸುವತ್ತ ಒಯ್ಯಿತು. ನಮ್ಮ ಸಮಾಜದ ಮೇಲೆ ಅನೇಕ ರಮ್ಯ, ಉದಾತ್ತ ಗುಣಗಳನ್ನು ಆರೋಪಿಸಿ ನಮ್ಮಲ್ಲೇ ನಾವು ಬೀಗುವುದು ಹವ್ಯಾಸವಾಗಿದ್ದ ಸಮಯದಲ್ಲಿ ಅದರ ಕೆಲವು ಹೆಮ್ಮೆಪಡಲಾಗದ ಅಂಶಗಳನ್ನು ಎತ್ತಿ ತೋರಿಸಿದರು. ಸಮಾಜದ ಶ್ರೇಣೀಕೃತ ವ್ಯವಸ್ಥೆ, ಅದರೊಳಗೆ ಕೆಳಜಾತಿಯವರ ಬವಣೆ, ಅಲ್ಲಿ ಬೇರುಬಿಟ್ಟ ಶೋಷಣೆ, ಹಾಗೂ ಇದನ್ನೆಲ್ಲಾ ಸಮರ್ಥಿಸಿಕೊಳ್ಳುವ ಶಾಸ್ತ್ರ ಅಂಗೀಕೃತ ಸೈದ್ಧಾಂತಿಕತೆಗಳು ನಮ್ಮ ಸಮಾಜವನ್ನು ಪ್ರಗತಿಶೀಲವೆಂದು ಚಿತ್ರಿಸಲು ಸಾಧ್ಯವಿಲ್ಲ. ಈ ಕುರೂಪವನ್ನು ನಿರಾಕರಿಸುವುದಕ್ಕಿಂತ ಹೋಗಲಾಡಿಸುವುದು ಮುಖ್ಯ. ಈ ಸಾಮಾಜಿಕ ಕಳಕಳಿ ಮತ್ತು ಸಂವೇದನೆಯು ಶರ್ಮಾರನ್ನು ಪ್ರಾಚೀನ ಭಾರತದಲ್ಲಿ ಕೆಳವರ್ಗದ ಕುರಿತು ಸಂಶೋಧನೆ ನಡೆಸಲು ಪ್ರೇರೇಪಿಸಿತು. ಇದನ್ನು ಅವರು ಲಂಡನ್ನಿನ ಸ್ಕೂಲ್ ಆಫ್ ಒರಿಯಂಟಲ್ ಎಂಡ್ ಆಫ್ರಿಕನ್ ಸ್ಟಡೀಸ್‌ನಲ್ಲಿ ಪೂರೈಸಿ ಡಾಕ್ಟರೇಟ್ ಪದವಿಯನ್ನು (೧೯೫೬) ಪಡೆದುದಷ್ಟೇ ಅಲ್ಲ ಅದನ್ನು 'ಶೂದ್ರಾಸ್ ಇನ್ ಏನ್ಶಿಯಂಟ್ ಇಂಡಿಯಾ' ಎಂಬ ಶೀರ್ಷಿಕೆಯಲ್ಲಿ ಪುಸ್ತಕವಾಗಿ ಪ್ರಕಟಿಸಿದರು (೧೯೫೮). ಈ ಗ್ರಂಥವು ಭಾರತದ ಇತಿಹಾಸ ರಚನೆಯಲ್ಲಿ ಒಂದು ಹೊಸ ಮೈಲುಗಲ್ಲು ಎಂದು ಪರಿಗಣಿಸಲಾಗಿದೆ. ವೇದಕಾಲದಿಂದ ಗುಪ್ತಯುಗದ ತನಕದ ದೀರ್ಘ ಕಾಲಘಟ್ಟದಲ್ಲಿ ಭಾರತದ ಸಮಾಜವು ಹೇಗೆ, ಯಾಕಾಗಿ ಶ್ರೇಣೀಕೃತಗೊಂಡಿತು, ಅದರೊಳಗೆ ಹೇಗೆ ಶೂದ್ರರ ಹಾಗೂ ಶೂದ್ರತ್ವದ ಸೃಷ್ಟಿಯಾಯಿತು, ಅದು ಸಮಾಜದ ಆರ್ಥಿಕತೆ ಮತ್ತು ಬದಲಾವಣೆಗಳಲ್ಲಿ ಯಾವ ಪಾತ್ರವನ್ನು ವಹಿಸಿತು ಎಂಬ ವಿಚಾರಗಳ ಬಗ್ಗೆ ವಿಸ್ತೃತ, ತೀಕ್ಷ್ಣ ವಿಶ್ಲೇಷಣೆ ಮಾಡಿದ್ದಾರೆ. ಭಾರತದಲ್ಲಿ ಗುಲಾಮಗಿರಿಯು ಇತ್ತೇ, ಅದಿದ್ದರೆ ಅದರ ಸ್ವರೂಪಗಳೇನು, ಅದನ್ನು ನಮ್ಮ ಆರ್ಥಿಕ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಲಾಯಿತು ಅಥವಾ ಅದು ನಮ್ಮ ಅಧಿಕಾರಶಾಹಿಯನ್ನು ಕಾಲಕಾಲಕ್ಕೆ ಹೇಗೆ ರೂಪಿಸಿತು, ಎಂಬುದನ್ನು ಚರ್ಚಿಸಿದ್ದಾರೆ. ಮಾರ್ಕ್ಸ್‌ನ ಚಾರಿತ್ರಿಕ ಭೌತವಾದದ ಸ್ಥೂಲ ಚೌಕಟ್ಟಿನಲ್ಲಿ, ಆದರೆ ಅದಕ್ಕೆ ತೀರಾ ಕಟ್ಟುಬೀಳದೆ ತಮ್ಮ ವಿಚಾರವನ್ನು ಬೆಳೆಸಿಕೊಂಡರು. ಮಾರ್ಕ್ಸ್‌ನ ಏಶಿಯಾಟಿಕ್ ಉತ್ಪಾದನಾ ವ್ಯವಸ್ಥೆಯೊಳಗೆ ಯುರೋಪಿನಲ್ಲಿದ್ದ ಕ್ರಿಯಾಶೀಲತೆ ಇಲ್ಲ. ಪಾಶ್ಚಾತ್ಯರ ಕಲ್ಪನೆಯಲ್ಲಿ ಪ್ರಾಚ್ಯಜಗತ್ತು ನಿರಂಕುಶ ಪ್ರಭುತ್ವದ ಶೃಂಖಲೆಯಲ್ಲಿ ಸಿಕ್ಕಿ ಕ್ರಿಯಾಶೀಲತೆಯನ್ನು ಕಳೆದುಕೊಂಡು ತನ್ನ ಕಕ್ಷೆಯಲ್ಲೇ ಗಿರಕಿ ಹೊಡೆಯುತ್ತಿತ್ತು. ಪ್ರಗತಿಯು ಅದಕ್ಕೆ ಅಪರಿಚಿತವಾಗಿತ್ತು. ಇದೇ ಕಲ್ಪನೆಯ ಹೊರೆಯನ್ನು ಮಾರ್ಕ್ಸ್‌ನೂ ಹೊತ್ತುಕೊಂಡಿದ್ದ. ಆದರೆ ಅವನು ಅಂದುಕೊಂಡಂತೆ ಭಾರತದ ಸಮಾಜ ಮತ್ತು ಆರ್ಥಿಕತೆ ಎಂದೂ ಜಡವಾಗಿರಲಿಲ್ಲ. ಬದಲಾವಣೆಯು


ಪ್ರಕ್ರಿಯೆಗಳಿಗೆ ಒಡ್ಡಿಕೊಂಡ ಸಮಾಜದಲ್ಲಿ ಕೆಲವು ಜಾತಿಗಳು ಊರ್ಜಿತಗೊಂಡರೆ ಅದಕ್ಕೆ ಕೆಲವೊಂದು ಜಾತಿಗಳು ಬೆಲೆ ತೆರಬೇಕಾಗಿ ಬಂತು. ಅದರಿಂದ ಅಸಮಾನತೆ ಉತ್ಪನ್ನಗೊಂಡಿತು. ಆದರೆ ಅದನ್ನು ಒಪ್ಪಿ ಸ್ವೀಕರಿಸುವಂಥಾ ವ್ಯವಸ್ಥೆ, ವಿಚಾರ ಮಂಡಲಗಳನ್ನು, ತರ್ಕವ್ಯೂಹಗಳನ್ನು ಸೃಷ್ಟಿಸಲಾಯಿತು. ಈ ಬಗೆಯ ಚಿತ್ರಣವನ್ನು ಶರ್ಮಾರವರು ಹೊರಗೆಡವಿದ್ದು ಪ್ರಾಚೀನ ಸಾಹಿತ್ಯ ಸಮೂಹಗಳ ಗಾಢ ಹಾಗೂ ತೀಕ್ಷ್ಣ ಅಧ್ಯಯನದಿಂದ. ಅವರ ಸಂಸ್ಕೃತ ಪಾಂಡಿತ್ಯದೊಂದಿಗೆ ಅವರು ಎತ್ತಿದ ಸಮಾಜಮುಖೀ ಪ್ರಶ್ನೆಗಳು ಪ್ರಾಚೀನ ಭಾರತದ ಇತಿಹಾಸಕ್ಕೆ ಒಂದು ಹೊಸ ಸ್ವರೂಪವನ್ನು ನೀಡಲು ಸಾಧ್ಯವಾಯಿತು. ಇವರ ಸಂಶೋಧನೆಯ ಹೊಸ ಹೊಳಹುಗಳು ಅನೇಕರಿಗೆ ದಾರಿ ದೀವಿಗೆಯಾಯಿತು.

ಮಾನವನ ವಸ್ತುಜನ್ಯ ಸಂಸ್ಕೃತಿಯು ಸಾಮಾಜಿಕ ವ್ಯವಸ್ಥೆಯನ್ನು ಹಾಗೂ ಅದರ ಬದಲಾವಣಾ ಗತಿಯನ್ನು ಸೂಚಿಸುವುದಷ್ಟೇ ಅಲ್ಲ, ಸಂಕೀರ್ಣವಾಗಿ ಅವು ರಾಜ್ಯದ ಸ್ವರೂಪವನ್ನೂ ನಿರ್ಧರಿಸುತ್ತವೆ. ರಾಜ್ಯವು ಶ್ರೇಣೀಕೃತ ಸಮಾಜದ ಪ್ರತಿಬಿಂಬ, ಅಥವಾ ಅದನ್ನು ನೆರವೇರಿಸುವ ಸಾಧನ. ಆದರೆ ಕೆ. ಪಿ. ಜಯಸ್ವಾಲ್, ರಾಧಾ ಕುಮುದ್ ಮುಖರ್ಜಿ ಮೊದಲಾದ ರಮ್ಯ ರಾಷ್ಟ್ರೀಯವಾದಿ ಇತಿಹಾಸಕಾರರು ರಾಜ್ಯ, ರಾಜತ್ವಗಳನ್ನು ಸ್ವಾಯಂಭುವಿನಂತೆ ಪರಿಗಣಿಸಿದರು: ಹುಟ್ಟುವಾಗಲೇ ಕವಚ ಕುಂಡಲಗಳಿಂದ ಶೋಭಿಸಿದಂತೆ ಚಿತ್ರಿಸಿದರು. ಅವುಗಳ ಹುಟ್ಟು, ವಿಕಾಸ, ಅದಕ್ಕೆ ಬುನಾದಿಯಾದ ಅಥವಾ ಪ್ರೇರಣೆಯಾದ ಭೌತಿಕ ಸಂದರ್ಭಗಳ ಬಗ್ಗೆ ಹೆಚ್ಚೇನೂ ಗಮನ ಹರಿಸಲಿಲ್ಲ. ಪರಾಕ್ರಮಿ ಮಹಾರಾಜರ ಭುಜಬಲ ಕೀರ್ತಿಬಲಗಳೇ ಇವೆಲ್ಲವನ್ನೂ ವಿವರಿಸುತ್ತವೆ ಎಂದು ನಂಬಿದರು. ಇದನ್ನು ಟೀಕಿಸಿ ರಾಜ್ಯದ ಬೆಳವಣಿಗೆಯನ್ನು ವಸ್ತುಜನ್ಯ ಸಂದರ್ಭಗಳಿಗೆ ಜೋಡಿಸಿ, ಸಮಾಜದ ಉತ್ಪಾದನಾ ವ್ಯವಸ್ಥೆ ಮತ್ತು ಸಂಬಂಧಗಳೊಡನೆ ಪೋಣಿಸಿ, ಅವುಗಳು ಕಂಡ ಬದಲಾವಣೆಗಳನ್ನು ವಿವರಿಸಿ ವಿಶ್ಲೇಷಿಸಿದರು. ಅವರ 'ಆಸ್ಪೆಕ್ಟ್ಸ್ ಆಫ್ ಪೊಲಿಟಿಕಲ್ ಐಡಿಯಾಸ್ ಎಂಡ್ ಇನ್‌ಸ್ಟಿಟ್ಯೂಶನ್ಸ್ ಆಫ್ ಏನ್ಶ್ಯಂಟ್ ಇಂಡಿಯಾ' (೧೯೫೯) ಎಂಬ ಪುಸ್ತಕವು ಪ್ರಾಚೀನ ಭಾರತದಲ್ಲಿ ರಾಜ್ಯ ಮತ್ತು ರಾಜತ್ವದ ಉಗಮ ಹಾಗೂ ಬೆಳವಣಿಗೆಗಳನ್ನು ವಿಸ್ತೃತವಾಗಿ ಚರ್ಚಿಸಿತು. ಮುಂದೆ ಇದರ ಪರಿಷ್ಕೃತ ಆವೃತ್ತಿಗಳೂ ಹೊರ ಬಂದು ಇದೇ ವಿಷಯವನ್ನು ಅವರು ತಮ್ಮ 'ಒರಿಜಿನ್ ಆಫ್ ದಿ ಸ್ಟೇಟ್ ಇನ್ ಇಂಡಿಯ (೧೯೮೯) ಹಾಗೂ 'ದಿ ಸ್ಟೇಟ್ ಎಂಡ್ ವರ್ಣ ಫಾರ್ಮೇಶನ್ಸ್ ಇನ್ ದಿ ಮಿ ಗಂಗಾ ಪ್ಲೇನ್ಸ್: ಎನ್ ಎತ್ನೋಆರ್ಕಿಯಲೋಜಿಕಲ್ ವ್ಯೂ' (೧೯೯೬) ಎ ಪುಸ್ತಕಗಳಲ್ಲೂ ಚರ್ಚಿಸಿದ್ದಾರೆ. ಸಂಸ್ಕೃತಿಯ ಮೂಲಭೂತ ಮಜಲುಗಳನ್ನು ಭೌ ನೆಲೆಯಲ್ಲಿ ಹುಡುಕದಿದ್ದರೆ ಅದರ ಅರ್ಥೈಸುವಿಕೆಯು ಅಸ್ಪಷ್ಟವೂ ಅಸಹಜ ಆಗಬಹುದಷ್ಟೆ. ಸಂಸ್ಕೃತಿಯು ಸಮಾಜದೊಳಗಿನ ಬದುಕಿನ ವಿವಿಧ ಅಭಿವ್ಯಕ್ತಿಗ ಅವೆಲ್ಲವೂ ಉತ್ಪಾದನಾ ವ್ಯವಸ್ಥೆ ಹಾಗೂ ಸಂಬಂಧಗಳ ಕ್ರಿಯಾತ್ಮಕ ದ್ವ ಮೀಮಾಂಸೆಯೊಳಗೆ ಸೇರಿವೆ. ಆರ್ಥಿಕ ಚೌಕಟ್ಟುಗಳು ಬದಲಾಗುತ್ತಲೇ ಸಮಾ ವ್ಯವಸ್ಥೆ-ಸಂಬಂಧಗಳು ಬದಲಾಗುತ್ತಾ ರೂಪುಗೊಳ್ಳುತ್ತವೆ. ಅವುಗಳು ರಾಜ್ಯ ಹಾ ರಾಜತ್ವಗಳ ಸ್ವರೂಪವನ್ನು ನಿರ್ಧರಿಸುತ್ತವೆ. ಇದನ್ನು ಇತಿಹಾಸವು ಅನಾವ ಗೊಳಿಸುತ್ತದೆ. ಇದನ್ನು ಗ್ರಹಿಸಲು ಪುರಾತತ್ವ ಶಾಸ್ತ್ರ, ಸಮಾಜಶಾಸ್ತ್ರ, ಮಾ ಶಾಸ್ತ್ರಗಳ ಹೊಳಹು, ಸಹಕಾರ ಅವಶ್ಯ. ಅದನ್ನು ಪ್ರಾಗೈತಿಹಾಸದಲ್ಲಿ ಗೋರ್ಡ ಚೈಲ್ಡ್ ಮೊದಲಾದವರು ಬಳಸಿದ್ದಾರೆ. ಆರ್. ಎಸ್. ಶರ್ಮಾರವರು ವೇದಕಾ ಪಶುಪಾಲನಾ ಯುಗದಿಂದ ಹೇಗೆ ಕೃಷಿ ಕೇಂದ್ರಿತ ಆರ್ಥಿಕತೆ ಮತ್ತು ಸಮಾಜ ಹೇಗೆ ವಿಕಸನಗೊಂಡಿತು, ಅದರಲ್ಲಿ ಕಬ್ಬಿಣದ ಬಳಕೆ ಹೇಗೆ ನಿರ್ಣಾಯಕ ಪಾತ್ರವ ವಹಿಸಿತು, ಈ ಬದಲಾದ ಸನ್ನಿವೇಶದಲ್ಲಿ ಹೇಗೆ ವರ್ಣ, ವರ್ಗ, ಜಾತಿ ವ್ಯವಸ್ಥೆ ಹುಟ್ಟಿಕೊಂಡು, ಆರ್ಥಿಕ, ಸಾಮಾಜಿಕ ಅಸಮಾನತೆ ಶೋಷಣೆಗಳ ಸಂಸ್ಥೀಕರಿಸಿದುವು, ಇದನ್ನೆಲ್ಲಾ ರಾಜ್ಯ ಮತ್ತು ರಾಜತ್ವಗಳು ತಮ್ಮೊಳಗೆ ಯಾ ಬಗೆಯಲ್ಲಿ ರೂಢಿಸಿಕೊಂಡುವು ಎಂಬುದನ್ನು ತಮ್ಮ 'ಮೆಟೀರಿಯಲ್ ಕಲ್ಚರ್ ಎ ಸೋಶಿಯಲ್ ಫೊರ್ಮೇಶನ್ಸ್ ಇನ್ ಏನ್ಶಿಯಂಟ್ ಇಂಡಿಯಾ' (೧೯೮೩) ಪ್ರತಿಪಾದಿಸಿದ್ದಾರೆ. ಕ್ರಿಸ್ತಪೂರ್ವ ಆರನೇ ಶತಮಾನದಲ್ಲಿ, ಅಂದರೆ ಬು ಕಾಲಕ್ಕಾಗುವಾಗ ಗಂಗಾ ಬಯಲು ಪ್ರದೇಶದ ಪೂರ್ವ ದಿಕ್ಕಿನಲ್ಲಿ ನಗರೀಕರ ಪ್ರಕ್ರಿಯೆಗಳು ನಡೆದು ಗಣಸಂಘಗಳು, ಹಾಗೂ ಅನುಕೂಲ ಪರಿಸ್ಥಿತಿಗಳಲ್ಲಿ ರಾ

ೇಂದ್ರಿತ ಆಳ್ವಿಕೆಗಳು ಹುಟ್ಟಿಕೊಂಡುವು. ನಗರೀಕರಣ ಹಾಗೂ ಹೆಚ್ಚುತ್ತಿರುವ ವಣಿಕ ಪ್ರಭಾವವು ವೈದಿಕ ಧರ್ಮವನ್ನು ವಿರೋಧಿಸಿದ ಅಸಂಪ್ರದಾಯೀ ಚಿಂತನೆ ಮತ್ತು ಧರ್ಮಗಳ ಉಗಮವನ್ನು ಪ್ರೇರೇಪಿಸಿತು. ಜೈನ ಮತ್ತು ಬುದ್ಧಧರ್ಮಗಳನ್ನು ಕೇವಲ ವ್ಯಕ್ತಿ ಕೇಂದ್ರಿತವಾಗಿ ನೋಡದೆ ಅವುಗಳು ಯಾವ ಆರ್ಥಿಕ-ಸಾಮಾಜಿಕ ಸನ್ನಿವೇಶಗಳಲ್ಲಿ ಹುಟ್ಟಿಕೊಂಡುವು ಎಂದು ಚರ್ಚಿಸಿದರು. ಧರ್ಮಗಳನ್ನು ಅವುಗಳ ಪ್ರವರ್ತಕರ ನೆಲೆಯಲ್ಲಿ ನೋಡುವುದು ವಾಡಿಕೆ. ಆದರೆ ಅವರ ವಿಚಾರಗಳು ಜನತೆಗೆ ಯಾಕೆ ಹಿತವಾಯಿತು, ಅವರು ಅವುಗಳನ್ನು ಏಕೆ ಅಂಗೀಕರಿಸಿದರು ಎಂಬುದನ್ನು ತಿಳಿಯಲು ಅವುಗಳನ್ನು ಅವು ಭೌತಿಕ ಸನ್ನಿವೇಶಗಳೊಡನೆ ಸೇರಿಸಿ ನೋಡುವ ಅವಶ್ಯಕತೆ ಇದೆ. ಅದಷ್ಟೇ ಅಲ್ಲ, ಇತಿಹಾಸದಲ್ಲಿ ಧಾರ್ಮಿಕ ಮಜಲುಗಳನ್ನು ಅದರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅನುಭವಗಳಿಂದ ಹೊರಗಿಡಲು ಸಾಧ್ಯವಿಲ್ಲ. ಅವುಗಳನ್ನು ಪ್ರತ್ಯೇಕವಾಗಿಯೂ ನೋಡಲು ಅಸಾಧ್ಯ.

ಚಾರಿತ್ರಿಕ ಭೌತವಾದವನ್ನು ಬೆನ್ನತ್ತಿಹೋದ ಶರ್ಮಾರವರ ವಿಚಾರಗಳು ಹಲವು ಸಾಂಪ್ರದಾಯೀ ಮನಸ್ಸುಗಳನ್ನು ವ್ಯಗ್ರವಾಗಿಸಿದ್ದುಂಟು. ವೇದಕಾಲವು ಪರಿಪೂರ್ಣತೆಯ ಯುಗವೆಂದುಕೊಂಡ ಅದನ್ನು ಪಶುಪಾಲನಾಯುಗ ಎನ್ನುವುದು, ವೇದಕಾಲದ 'ರಾಜನ್' ಒಬ್ಬ ಸಂಪೂರ್ಣನಾದ ಅರಸನೆಂದುಕೊಂಡವರಿಗೆ ಆತನೊಬ್ಬ ಬಣದ ಮುಖಂಡನಷ್ಟೇ ಎನ್ನುವುದು, ರಾಜ್ಯದ ಅಥವಾ ರಾಜತ್ವದ ಅಪೂರ್ಣತೆಯನ್ನು ಸಾರುವುದು ಆಕರ್ಷಕ ಚಿತ್ರಣವನ್ನಾಗಲಿ, ಸಾಂತ್ವನವನ್ನಾಗಲಿ ನೀಡುವುದಿಲ್ಲ. ಆದರೆ ಯಥಾರ್ಥವಾಗಿ ಇತಿಹಾಸದಲ್ಲಿ ಮಾನವನು ಸರಳ ಮುಗ್ಧತೆಯಿಂದ ಸಂಕೀರ್ಣತೆಯತ್ತ ಮುಂದುವರಿಯುತ್ತಾನೆ, ಈ ಪ್ರಕ್ರಿಯೆಯಲ್ಲಿ ಆತನ ಆರ್ಥಿಕ ಹಾಗೂ ಸಾಮಾಜಿಕ ನೆಲೆಗಳೂ ಸಂಕೀರ್ಣಗೊಳ್ಳುತ್ತವೆ, ಎಂದು ಒಪ್ಪಿಕೊಂಡರೆ ನಮ್ಮ ಪೂರ್ವಜರ ತಲೆಯ ಮೇಲೆ ಆಧುನಿಕತೆಯ ಕಿರೀಟವನ್ನು ಇಟ್ಟು ಸಂಭ್ರಮಿಸುವುದು ಆಭಾಸವಾಗಬಹುದು. ಚಾರಿತ್ರಿಕ ಭೌತಿಕವಾದವು ಸಮಾಜದ ಬೆಳವಣಿಗೆಯಲ್ಲಿ ಕಬ್ಬಿಣದ ಪಾತ್ರವನ್ನು ಅತಿರೇಕವಾಗಿಯೇ ಚಿತ್ರಿಸಿದೆ ಎಂದು ಕೆಲವರು ಆಕ್ಷೇಪಿಸಿದ್ದುಂಟು. ಇದೊಂದು ತಾಂತ್ರಿಕ ನಿಯತಿವಾದ ಎಂದದ್ದುಂಟು. ಆದರೆ ಚಾರಿತ್ರಿಕ ಭೌತಿಕವಾದವು ವಸ್ತುಜನ್ಯ ಸನ್ನಿವೇಶಗಳನ್ನು ಒತ್ತಿ ಹೇಳುತ್ತವೆಯಾದರೂ ಉಳಿದ ಅಂಶಗಳನ್ನು ಕಡೆಗಣಿಸುವುದಿಲ್ಲ. ಈ ಬಗೆಯ ಚಿಂತನೆಯು ಕೇವಲ ಭಾವನಾತ್ಮಕವಾಗಿ ನಡೆಯದೆ ವೈಚಾರಿಕ, ವೈಜ್ಞಾನಿಕ ಹಾಗೂ ತಾರ್ಕಿಕ ನೆಲೆಗಳಲ್ಲಿ ನಡೆಯುತ್ತದೆ. ಇತಿಹಾಸವನ್ನು ಗ್ರಹಿಸಬಹುದಾದ ವೈಚಾರಿಕ ಸಾಧ್ಯತೆಯನ್ನು ಭೌತಿಕವಾದವು ಸೂಚಿಸುತ್ತದೆ. ಇದು ನಮಗೆ ಸಂಪೂರ್ಣ ತೃಪ್ತಿಯನ್ನು ನೀಡದಿರಬಹುದು. ಆದರೆ ಇದನ್ನು ಸಾರಾಸಗಟಾಗಿ ನಿರಾಕರಿಸುವ ಮುನ್ನ ಇದಕ್ಕಿಂತ ಉತ್ಕೃಷ್ಟವಾದ, ವೈಜ್ಞಾನಿಕವಾದ, ಮನದಟ್ಟಾಗುವ ಚೌಕಟ್ಟನ್ನು ಗುರುತಿಸಿ ಆಯ್ದುಕೊಳ್ಳುವುದು ಅವಶ್ಯ.

ಭಾರತದ ಇತಿಹಾಸ ರಚನೆ ಮತ್ತು ವಿಶ್ಲೇಷಣೆಯಲ್ಲಿ ಊಳಿಗಮಾನ್ಯ ವ್ಯವಸ್ಥೆ ಮತ್ತು ಪರಂಪರೆಯ ಬಗ್ಗೆ ನಡೆದ ಚರ್ಚೆ ಬಹಳ ವಿಸ್ತೃತವೂ, ಗಂಭೀರವೂ ಹಾಗೂ ಸಾಮಾಜಿಕ ಪ್ರಸ್ತುತತೆಯ ದೃಷ್ಟಿಯಿಂದ ಅತಿ ಮಹತ್ವದ್ದೂ ಆಗಿದೆ. ಇದರ ಅತಿ ದೊಡ್ಡ ಪ್ರೇರಣೆ ಶರ್ಮಾರ 'ಇಂಡಿಯನ್ ಫ್ಯೂಡಲಿಸಮ್' (೧೯೬೫). ಊಳಿಗಮಾನ್ಯ ಪದ್ಧತಿಯು ಇತಿಹಾಸದ ಬೆಳವಣಿಗೆಯ ನಿರ್ದಿಷ್ಟ ಘಟ್ಟ, ಸಾಂಪ್ರದಾಯಿಕ ಗುಲಾಮ ಪದ್ಧತಿಯನ್ನು ಮೀರಿ ಬೆಳೆದ, ಬಂಡವಾಳಶಾಹಿ ಯುಗದ ಭ್ರೂಣರೂಪವನ್ನು ಧರಿಸಿದ ಸಾಮಾಜಿಕ-ಆರ್ಥಿಕ ವ್ಯವಸ್ಥೆ ಎಂದು ಮಾರ್ಕ್ಸ್‌ನು ಗುರುತಿಸಿದ್ದು ಯುರೋಪಿನ ಐತಿಹಾಸಿಕ ಅನುಭವದ ಸಂದರ್ಭದಲ್ಲಿ. ಅಂದರೆ ಆತನು ಇತಿಹಾಸದ ಗತಿ-ಪ್ರಗತಿ, ಕ್ರಿಯಾಶೀಲತೆಯನ್ನು ಯುರೋಪಿನಲ್ಲಿ ಕಂಡಂತೆ ಭಾರತದಂಥ ಪೌರ್ವಾತ್ಯ ಸಮಾಜದಲ್ಲಿ ಕಾಣಲಿಲ್ಲ. ಅದಕ್ಕೊಂದು ಜನ್ಮಜಾತ ಜಡತ್ವವಿದೆ; ಅದು ಪ್ರಗತಿಗೆ ವಿಮುಖವಾದದ್ದು; ಅಲ್ಲಿ ಯುರೋಪಿನಲ್ಲಿ



ಏನೆಂದು ಕರೆಯಲಿ ನಿನ್ನ ?

ಏನೆಂದು ಕರೆಯಲಿ ನಿನ್ನ ?

ನಕ್ಷತ್ರದ ನಗು ಎನ್ನಲೆ ?
ನಗುವಿನ ಮಗು ಎನ್ನಲೆ ?
ಮಗುವಿನ ಮಿಂಚು ಎನ್ನಲೆ ?
ಮಿಂಚಿನ ಕನಸು ಎನ್ನಲೆ ?
ಕನಸಿನ ಮನಸು ಎನ್ನಲೆ ?
ಮನಸಿಗೆ ಮತ್ತೊಂದು ಹೆಸರು ಎನ್ನಲೆ ?
ಹೆಸರೇ ಇಲ್ಲದ ಉಸಿರು ಎನ್ನಲೆ ?

ಏನೆಂದು ಕರೆಯಲಿ ನಿನ್ನ ?

ಮುಳ್ಳುಗಳ ಮೊನೆಯಲ್ಲಿ
ಅರಳಿದ ಹೂವು
ಸುಳ್ಳುಗಳ ಮನೆಯಲ್ಲಿ
ನರಳಿದ ನೋವು
ಭಾವ ಬೀಜದ ಜೀವ
ಚಿತ್ತಾರ ಚೆಲುವು
ಸರಿಸಾಟಿಯಿಲ್ಲದ ನೋಟ
ಒತ್ತಾಸೆ ಒಲವು

ಏನೆಂದು ಕರೆಯಲಿ ನಿನ್ನ ?

ಅರಳುಗಣ್ಣಿನ ಆಳದೊಳಗೆ
ರೂಪದೊಳಗಿನ ತಾಪದೊಳಗೆ
ಸುಣ್ಣ ಬಿರಿಯುವ ನೀರಿನೊಳಗೆ
ಬಣ್ಣ ಬದುಕಿನ ಸೂರಿನೊಳಗೆ
ಕಳೆದುಹೋಗದ ನೀನು
ಭೂಮಿ ತೂಕದ ಬಾನು !

ಏನೆಂದು ಕರೆಯಲಿ ನಿನ್ನ ?

ದೇಹದೊಳಗಿನ ದಾಹ
ಮಾಯೆಯೊಳಗಿನ ಮೋಹ
ಸುಡುತ ಸುಳಿಯುವ ಸ್ನೇಹ
ಉರಿವ ವಿಷಾದ ವಿರಹ
ಒಳಗೆ ಕುಣಿಯುವ ಕಲಹ
ನೀರ ಮೇಲಿನ ಬರಹ !

ಏನೆಂದು ಕರೆಯಲಿ ನಿನ್ನ ?

ಭವದ ಅನುಭವದಲ್ಲಿ ಮನಸು ಮಾಗಿ
ಯೋಗ ಭೋಗದ ತುಮುಲ ತೆಪ್ಪವಾಗಿ
ತಳಮಳದ ತವರಲ್ಲಿ ತಾಳಿಕೆಯ ತಿಳಿವಾಗಿ
ಉರಿಯ ಉಯ್ಯಾಲೆಯಲ್ಲಿ ತಂಗಾಳಿ ತೂಗಿ
ಕರುಳ ಕಣ್ಣೀರ ಗುಪ್ತಗಾಮಿನಿ
ಸುಖದ ಪನ್ನೀರ ಸುಪ್ತ ಯಾಮಿನಿ
ಅನನ್ಯ ಆಸೆಗಳ ಚೈತನ್ಯದಾಯಿನಿ !

ಏನೆಂದು ಕರೆಯಲಿ ನಿನ್ನ ?

ಕಣ್ಣಿನಾಳದಲಿ ಕನಸಿನ ಕವಿತೆ
ಎದೆಯ ಎಣ್ಣೆಯಲಿ ಪ್ರೀತಿಯ ಹಣತೆ
ಹೆಜ್ಜೆಯಿಟ್ಟ ಕಡೆ ಗೆಜ್ಜೆಯ ಗುರುತು
ನಾದ ನೃತ್ಯಗಳು ಒಟ್ಟಿಗೆ ಬೆರೆತು
ನಿಲ್ಲದೆ ಸಾಗಿದೆ ಕಾಣದ ಕುಣಿತ
ಬೆಳಕಿನ ಹಾದಿ ಬೆಂಕಿಯ ಸಹಿತ !

ಏನೆಂದು ಕರೆಯಲಿ ನಿನ್ನ ?
ಮಾತಿಗೆ ನಿಲುಕದ ಬಾಳನ್ನ
ಕರೆಯಹೋದರೆ ನಿನ್ನ
ಕರೆದುಕೊಂಡಂತೆ ನನ್ನ !

ಪ್ರೊ॥ ಬರಗೂರು ರಾಮಚಂದ್ರಪ್ಪ

ಕಾಣಬರುವ ಪ್ರಗತಿಶೀಲ ಐತಿಹಾಸಿಕ ಕಾಲಘಟ್ಟಗಳಿಲ್ಲ; ಊಳಿಗಮಾನ್ಯ, ಬಂಡವಾಳ ಶಾಹಿಗಳ ಗೋಜಿಗೆ ಅದು ಹೋಗಿಲ್ಲ; ಅಲ್ಲಿರುವುದು ನಿರಂಕುಶ ಪ್ರಭುತ್ವವನ್ನು ಸಾಕಿ ಸಲಹುವ ಏಶಿಯಾಟಿಕ್ ಉತ್ಪಾದನಾ ವಿಧಾನ ಮಾತ್ರ, ಎಂಬ ವಿಚಾರವನ್ನು ಮಾರ್ಕ್ಸ್‌ನು ಪ್ರತಿಪಾದಿಸಿದ. ಇದನ್ನು ಕೆಲವು ಮಾರ್ಕ್ಸ್‌ವಾದಿಗಳು ಪ್ರಶ್ನಿಸಿದರು. ಪಾಶ್ಚಾತ್ಯರು ಪೌರ್ವಾತ್ಯರ ಬಗ್ಗೆ ತಳೆದ ಒಂದು ಹಳೇ ಪೂರ್ವಗ್ರಹವು ಮಾರ್ಕ್ಸ್‌ನಿಗೂ ತಟ್ಟಿತ್ತು. ಇದನ್ನು ಯಾವನೋ ಧರ್ಮ ಪ್ರವರ್ತಕನ ಬಗ್ಗೆ ತೋರುವ ನಿಷ್ಠೆಯ ಹೆಸರಿನಲ್ಲಿ ನಾವು ಒಪ್ಪಬೇಕೆಂದಿಲ್ಲ. ಮಾರ್ಕ್ಸ್‌ವಾದವು ಒಂದು ಆಲೋಚನಾ ಕ್ರಮಕ್ಕೆ ನೀಡುವ ವೈಚಾರಿಕ ಸೂಚನೆ; ಅದು ಸ್ವಂತಿಕೆಯನ್ನು ಪೂರಾ ಕಸಿದುಕೊಳ್ಳುವ ಹೇರಿಕೆಯಲ್ಲ. ಅದು ಹಾಗಾಗಿದ್ದರೆ ಮಾರ್ಕ್ಸ್‌ವಾದದೊಳಗೆ ಬೆಳೆದು ಬಂದ, ಈಗಿರುವಷ್ಟು ಹೇರಳವಾದ, ಸಂಕೀರ್ಣವಾದ, ಶ್ರೀಮಂತವಾದ ಚರ್ಚೆ ಜಿಜ್ಞಾಸೆಗಳು ಇರುತ್ತಲೇ ಇರಲಿಲ್ಲ.

ಯುರೋಪಿನ ಹೊರಗೂ ಊಳಿಗಮಾನ್ಯ ವ್ಯವಸ್ಥೆಯು ಬೆಳೆಯುವುದು ಸಾಧ್ಯ ಎಂಬ ವಿಚಾರವನ್ನು ಫ್ರಾನ್ಸಿನ ಇತಿಹಾಸಕಾರ ಮಾರ್ಕ್ ಬ್ಲೋಕ್ ತನ್ನ ಶ್ರೇಷ್ಠ ಕೃತಿ 'ಫ್ಯೂಡಲ್ ಸೊಸೈಟಿ' (೧೯೩೯-೧೯೪೦; ಇಂಗ್ಲಿಷ್ ಭಾಷಾಂತರ ೧೯೬೧)ಯಲ್ಲಿ ಹೇಳಿದ್ದ. ಜಪಾನಿನಲ್ಲಿ ಬೆಳೆದು ದೃಢಗೊಂಡ ಮಾದರಿಯನ್ನೂ ವಿವರಿಸಿದ್ದ. ಬೇರೆ ಸಮಾಜದಲ್ಲಿ ಬೆಳೆಯುವ ಮಾದರಿಗಳು ಯುರೋಪಿನ ನಕಲುಪ್ರತಿಗಳಾಗಬೇಕಿಲ್ಲ. ಅವುಗಳಲ್ಲಿ ಕೆಲವು ನಿರ್ದಿಷ್ಟ ಗುಣ ವಿಶೇಷಗಳಿದ್ದರಷ್ಟೇ ಸಾಕು. ಭಾರತದ ಸಂದರ್ಭದಲ್ಲಿ ಈ ವ್ಯವಸ್ಥೆಯನ್ನು ಭೂಪೇಂದ್ರನಾಥ ದತ್ತಾರವರು ನಲ್ವತ್ತರ ದಶಕದಲ್ಲಿ ಗುರುತಿಸಿದ್ದರೂ, ಅದರ ಬಗ್ಗೆ ಹೆಚ್ಚು ಗಮನ ಸೆಳೆದದ್ದು ಕೋಸಾಂಬಿಯವರ ಬರೆವಣಿಗೆಗಳಿಂದಾಗಿ. ಅವರ ಪ್ರಕಾರ ಭಾರತದಲ್ಲಿ ಊಳಿಗಮಾನ್ಯ ಪದ್ಧತಿ ಎರಡು ರೀತಿಯಲ್ಲಿ, ಎರಡು ಹಂತಗಳಲ್ಲಿ ಬೆಳೆಯಿತು : ಮೊದಲನೆಯದಾಗಿ ಅದು ರಾಜಕೀಯ ಬೆಳವಣಿಗೆಗಳಿಂದ ಅಥವಾ ನಿರ್ಧಾರಗಳಿಂದ ಮೇಲಿಂದ ಕೆಳಕ್ಕೆ ಹೇರಲ್ಪಟ್ಟಿತು. ಎರಡನೆಯದಾಗಿ ಅದು ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳನ್ನು ಅನುಸರಿಸಿ ಕೆಳಗಿನಿಂದ ಮೇಲಕ್ಕೆ ಬೆಳೆದು ಪ್ರಕಟಗೊಂಡಿತು. ಕೋಸಾಂಬಿಯವರ ವಿಚಾರವು ಭಾರತದ ಇತಿಹಾಸ ವಿವರಣೆಗೆ ಹೊಸ ಆಯಾಮವನ್ನು ನೀಡಿತು. ಅದರೊಂದಿಗೆ ಇತಿಹಾಸವು ಸೂಚಿಸಬಲ್ಲ ಹಾಗೂ ಹಿಡಿದಿಟ್ಟುಕೊಳ್ಳಬಲ್ಲ ಸಾಮಾಜಿಕ ಸಂವೇದನೆಗಳಿಗೂ ಶಕ್ತಿ ನೀಡಿತು.

ಶರ್ಮಾರವರು ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಉಗಮ ಮತ್ತು ಬೆಳವಣಿಗೆಯನ್ನು ಭಿನ್ನವಾಗಿ ಕಂಡವರು. ಅವರ ಅಭಿಪ್ರಾಯದಂತೆ ಜಮೀನನ್ನು ಬ್ರಾಹ್ಮಣರಿಗೆ, ದೇಗುಲಗಳಿಗೆ ಹಾಗೂ ಮಠಮಾನ್ಯಗಳಿಗೆ ಉಂಬಳಿ ನೀಡುವ ವಾಡಿಕೆಯು ಕ್ರಮೇಣ ರಾಜತ್ವವನ್ನು ಕ್ಷೀಣಿಸಿ ಊಳಿಗಮಾನ್ಯ ಪದ್ಧತಿಯನ್ನು ಬಲಪಡಿಸಿತು. ಮೇಲ್ನೋಟಕ್ಕೆ ಹಾಗೂ ಘೋಷಿತ ಆದರ್ಶದೊಳಗೆ ಇದನ್ನು ಪುಣ್ಯಕಾರ್ಯ ಎಂದುಕೊಂಡರೂ, ವಾಸ್ತವವಾಗಿ ಜಮೀನನ್ನು ಉಂಬಳಿ ನೀಡುವಾಗ ಅದರೊಡನೆ ಕಂದಾಯ, ತಳವಾರಿಕೆ ಹಾಗೂ ನ್ಯಾಯಾಂಗದ ವ್ಯಾಪ್ತಿಯೇ ಮೊದಲಾದ ಹಲವು ಅಧಿಕಾರದ ಸೆಲೆಗಳನ್ನು ಕಳೆದುಕೊಳ್ಳುತ್ತಾರೆ. ಇದನ್ನು ದಾನ ಶಾಸನಗಳು ವ್ಯಕ್ತವಾಗಿ ಅಲ್ಲದಿದ್ದರೂ ಸೂಚ್ಯವಾಗಿ ತಿಳಿಸುತ್ತವೆ. ಶಾತವಾಹನರ ಆಳ್ವಿಕೆಯಿಂದ (ಕ್ರಿ. ಪೂ. ೧ನೇ ಶತಮಾನ) ಮೊದಲಾಗಿ ಗುಪ್ತರ ಯುಗದ ತನಕ ದಾನ ಶಾಸನಗಳ ಸಂಖ್ಯೆ ವಿಪುಲಗೊಳ್ಳುವುದನ್ನು ಕಾಣುತ್ತೇವೆ. ಇದನ್ನು ಆಳರಸರ ಧಾರ್ಮಿಕತೆಯ ದ್ಯೋತಕ ಎನ್ನುವುದಕ್ಕಿಂತ ಬದಲಾಗುತ್ತಿರುವ ದೇಶದ ಆರ್ಥಿಕ ಸ್ಥಿತಿ ಹೇಗೆ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಯಿತೆಂದು ಅರುಹುತ್ತದೆ ಎನ್ನುವುದು ಹೆಚ್ಚು ಅರ್ಥಪೂರ್ಣ, ಎಂಬುದು ಶರ್ಮಾರವರ ಪ್ರತಿಪಾದನೆ. ಆರ್ಥಿಕತೆ ಸಂಕುಚಿತಗೊಂಡು, ಹಣದ ಅಭಾವ ತಲೆದೋರಿದಾಗ, ನಾಣ್ಯ ಚಲಾವಣೆ ಕುಂಠಿತಗೊಂಡಾಗ, ಮಾಡುವ ಪಾವತಿ, ತೋರುವ ಔದಾರ್ಯಗಳನ್ನು ಭೂದಾನಗಳಲ್ಲಿ ಪ್ರಕಟಿಸಲಾಯಿತು. ಅದಕ್ಕೆ ಧಾರ್ಮಿಕತೆಯ ಸುವರ್ಣ ಲೇಪವನ್ನೂ ನೀಡಲಾಯಿತು. ಅಂತಹ ಕಾಯಕಗಳು ಪುಣ್ಯದಾಯಕ, ಮೋಕ್ಷದಾಯಕವೆಂದೂ ಘೋಷಿಸಲಾಯಿತು. ಅದನ್ನು ಶಾಸನಗಳಲ್ಲಿ ಕೆತ್ತಿಸಿ ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಲಾಯಿತು. ಮುಂದೆ ಭೂದಾನಗಳು ಯೋಧ ಜನಗಳಿಗೂ ತಲುಪಿ ಅವುಗಳ ವ್ಯಾಪ್ತಿ ಇನ್ನಷ್ಟು ವಿಸ್ತಾರವಾಯಿತು. ಉಂಬಳಿ ಸಂಸ್ಕೃತಿಯು ಸಮಾಜದ ಇತರ ಪ್ರತಿಷ್ಠಿತರಿಗೂ ಪಸರಿಸಿ ನೆಲೆಗೊಂಡಿತು.

ಭೂದಾನ ಪರಂಪರೆಯು ಸಮಾಜದಲ್ಲಿ ಒಂದು ಹೊಸ ಪ್ರಭಾವೀ ಮಧ್ಯವರ್ತಿಗಳನ್ನು ಸೃಷ್ಟಿಸಿತು ಎಂದು ಶರ್ಮಾರವರು ಪ್ರತಿಪಾದಿಸಿದರು. ಇವರು ಸಮಾಜದ ಹಲವು ಸ್ತರಗಳಲ್ಲಿ ಸಂಪನ್ಮೂಲಗಳನ್ನು ತಮ್ಮದಾಗಿಸಿಕೊಂಡು ಅಧಿಕಾರ ಚಲಾಯಿಸಲು ಶಕ್ತರಾದರು; ಭೂಮಿಯ ಮಿಗತೆಯ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿ

ೊಂಡರು; ರೈತ ಜನಗಳನ್ನು ಶೋಷಿಸಿ ಮೆರೆದರು; ರಾಜಕೀಯ ಪ್ರಭಾವವನ್ನು ೋರಿದರು. ಇವುಗಳೆಲ್ಲಾ ಊಳಿಗಮಾನ್ಯ ವ್ಯವಸ್ಥೆ ಹಾಗೂ ಸಂಸ್ಕೃತಿಯ ವಿವಿಧ ಕಟಣೆಗಳು. ಗುಪ್ತರ ಆಳ್ವಿಕೆ ಕೊನೆಗೊಳ್ಳುವ ಸಮಯಕ್ಕೆ ಈ ಬೆಳವಣಿಗೆ ಸರಿಯಾಗಿ ಣಿಸಿಕೊಂಡಿತು. ಪುರಾಣಗಳಲ್ಲಿ ವ್ಯಕ್ತವಾದ ಕಲಿಯುಗದ ಕಲ್ಪನೆ, ವರ್ಣಸಂಕರದ ೀತಿ ಮೊದಲಾದ ಅಂಶಗಳು ಬದಲಾದ ಸಮಾಜವನ್ನು ಹೇಗೆ ಪ್ರತಿಬಿಂಬಿಸಿದೆ ಂದು ಶರ್ಮಾರವರು ಚರ್ಚಿಸಿದ್ದಾರೆ. ರಾಜತ್ವದ ಪ್ರಬಲ ಚೌಕಟ್ಟುಗಳು ಹಾಗೂ ರಿಕಲ್ಪನೆಗಳು ಕ್ಷೀಣಿಸಿ ಕುಸಿಯುವ ಈ ವಿದ್ಯಮಾನಗಳನ್ನು ಗುಪ್ತರ ಸುವರ್ಣ ಯುಗದ ಲ್ಪನೆಯೊಡನೆ ಹೇಗೆ ರೂಢಿಸಲು ಸಾಧ್ಯ ಎಂಬ ಪ್ರಶ್ನೆ ಕೋಸಾಂಬಿಯವರನ್ನು ಡಿಸಿದಂತೆಯೇ ಶರ್ಮಾರವರನ್ನೂ ಕಾಡಿಸಿದ್ದು ಸಹಜ. ಇದು ಗುಪ್ತರ ಮೇಲಿನ ೂರ್ವಾಗ್ರಹದಿಂದ ನಡೆದದ್ದಲ್ಲ, ಅಥವಾ ರಾಷ್ಟ್ರೀಯತೆಯ ಉನ್ಮಾದದ ಸಂತೋಷವನ್ನು ಿದು ಕೆಡಿಸುವ ಕ್ರೌರ್ಯ ವಿಕಾರವೇನಲ್ಲ. ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ದಲಾವಣೆಗಳು ಗುಪ್ತರ ಕಾಲದ ರಮ್ಯ ಚಿತ್ರಣವನ್ನು ಆಧರಿಸುವುದಿಲ್ಲ ಎಂದಷ್ಟೇ ವರ ಅರಿಕೆ. ಇದನ್ನು ಸಮರ್ಥಿಸಲು ಶರ್ಮಾರವರು ಪ್ರಾಕ್ತನ ಶಾಸ್ತ್ರವು ಒದಗಿಸಿದ ನೇಕ ಮಾಹಿತಿ ಹಾಗೂ ಪುರಾವೆಗಳನ್ನು ಎತ್ತಿ ತೋರಿಸಿದರು. ೧೯೮೭ರಲ್ಲಿ ಪ್ರಕಟವಾದ ಅರ್ಬನ್ ಡಿಕೇ ಇನ್ ಇಂಡಿಯಾ ಕ್ರಿ. ಶ. ೪೦೦-೧೦೦೦' ಎಂಬ ಪುಸ್ತಕದಲ್ಲಿ ರ್ಮಾರವರು ಸುಮಾರು ೧೪೦ ಪುರಾತತ್ವ ನಿವೇಶನಗಳನ್ನು ಪರಿಶೀಲಿಸಿ ಅವುಗಳಲ್ಲಿ ೇಗೆ ನಗರೀಕರಣದ ಪ್ರಕ್ರಿಯೆಗಳು ವಿಮುಖವಾದುವು ಅಥವಾ ಕ್ಷೀಣಗೊಂಡುವು ಂದು ಪ್ರತಿಪಾದಿಸಿದರು. ಇದು ಕೃಶಗೊಂಡ ವಾಣಿಜ್ಯ ವ್ಯಾಪಾರಗಳನ್ನು ್ರತಿಬಿಂಬಿಸುವುದಷ್ಟೇ ಅಲ್ಲ ನಾಣ್ಯಗಳ ಚಲಾವಣೆಯು ಈ ಕಾಲಘಟ್ಟದಲ್ಲಿ ತೀರ ಡಿಮೆಯಾಯಿತು. ಇದು ಗ್ರಾಮೀಣೀಕರಣವನ್ನು ಸೂಚಿಸುವುದಲ್ಲದೆ ಊಳಿಗಮಾನ್ಯ ್ಯವಸ್ಥೆಯ ಆವಾಹನೆಗೆ ಪೂರಕವಾಯಿತು. ತಮ್ಮ ವಾದಗಳನ್ನು ಶರ್ಮಾರವರು ತಮ್ಮ ಅರ್ಲಿ ಮಿಡೀವಲ್ ಇಂಡಿಯನ್ ಸೊಸೈಟಿ: ಎ ಸ್ಟಡಿ ಇನ್ ಫ್ಯೂಡಲಿಸಮ್' ೨೦೦೧)ನಲ್ಲಿ ಮುಂದುವರಿಸಿದ್ದಾರೆ.

ಶರ್ಮಾರವರ ಊಳಿಗಮಾನ್ಯ ಪ್ರಮೇಯವನ್ನು ಟೀಕಿಸಿದವರು ಅನೇಕರಿದ್ದಾರೆ. ಲವರು ಅದು ಎಡಪಂಥೀಯ ವಿಚಾರವೆಂದು ತಿರಸ್ಕರಿಸಿದರೆ ಇನ್ನು ಕೆಲವರು ಅದು ಅಪೂರ್ಣ ಆಕರಗಳನ್ನು ನೆಚ್ಚಿ ರೂಪಿಸಿದ ವಾದಸರಣಿ ಎಂದು ವಿರೋಧಿಸಿದ್ದಾರೆ. ುರೋಪಿನ ಐತಿಹಾಸಿಕ ಅನುಭವವನ್ನು ಭಾರತಕ್ಕೆ ಆರೋಪಿಸುವುದು ಅಸಮಂಜಸವಷ್ಟೇ ಅಲ್ಲ, ಇಲ್ಲಿಯ ವಿಶೇಷಗಳು ಅವುಗಳನ್ನು ಅನುಮೋದಿಸುವುದಿಲ್ಲ. ಗರಗಳು ಶಿಥಿಲಗೊಂಡು ನೇಪಥ್ಯಕ್ಕೆ ಸರಿದದ್ದೂ ಗಟ್ಟಿ ಅನುಮಾನವೇನಲ್ಲ. ಾಸನಗಳಲ್ಲಿ, ಸಂಸ್ಕೃತ ಕಾವ್ಯ ನಾಟಕಗಳಲ್ಲಿ ನಗರಗಳ ವಿವರಣೆಗಳು ಯಥೇಚ್ಛವಾಗಿ ುರುತ್ತವೆ ಎಂಬುದು ಟೀಕಾಕಾರರ ವಾದ. ಇತಿಹಾಸ ರಚನೆಯಲ್ಲಿ ಏಕಮತ ಹುಟ್ಟುವುದು ಅಸಹಜವೆನ್ನುವಷ್ಟು ಅಪರೂಪ. ಆದರೆ ಶರ್ಮಾರವರ ಸಂಶೋಧನೆಗಳು ಮತ್ತು ಚಾರಗಳು ಅನೇಕ ಹೊಸ ಸಂಶೋಧನೆಗಳಿಗೆ ಪ್ರೇರಣೆಯಾಯಿತು. ಬಿ. ಎನ್. ಸ್. ಯಾದವ, ಡಿ. ಎನ್. ಝಾ, ಆರ್. ಎನ್. ನಂದಿ, ಅಥವಾ ದಕ್ಷಿಣ ಭಾರತದಲ್ಲಿ ಮ್. ಜಿ. ಎಸ್. ನಾರಾಯಣ್, ಕೇಶವನ್ ವೆಳುತ್ತಾಟ್, ರಾಜನ್ ಗುರುಕ್ಕಲ್ ೊದಲಾದವರು ಊಳಿಗಮಾನ್ಯ ವ್ಯವಸ್ಥೆಯ ಬೆಳವಣಿಗೆ, ಪರಿಣಾಮ ಹಾಗೂ ುಹತ್ವದ ಬಗ್ಗೆ ಹೆಚ್ಚಿನ ಸಂಶೋಧನೆ ಮತ್ತು ವಿಶ್ಲೇಷಣೆಗಳನ್ನು ಮಾಡಿದರು. ದರಿಂದ ದೇಶದ ಆರ್ಥಿಕ ಮತ್ತು ಸಾಮಾಜಿಕ ಇತಿಹಾಸದ ಅನೇಕ ಪದರುಗಳು ಅನಾವರಣಗೊಂಡವು. ಇವೆಲ್ಲವೂ ಸೈದ್ಧಾಂತಿಕತೆಯ ಏಕತಾನತೆಯನ್ನು ನುಡಿಸುತ್ತವೆ ಂದು ಟೀಕಾಕಾರರು ಗೊಣಗಿದರೂ ಇವರಲ್ಲಿ ಅನೇಕ ಸ್ವಂತಿಕೆಗಳು ಪ್ರಕಟಗೊಂಡದ್ದನ್ನು ಇತಿಹಾಸದ ಗಂಭೀರ ವಿದ್ಯಾರ್ಥಿಗಳು ಗಮನಿಸುವುದು ಸಾಧ್ಯವಿದೆ. ಅರವತ್ತರ ದಶಕದ ಂತರ ವಿಜೃಂಭಿಸತೊಡಗಿದ ಪಾಶ್ಚಾತ್ಯದಿಂದ ಆಮದಾದ ಸಿದ್ಧಾಂತಗಳು ಮತ್ತು ಇತಿಹಾಸ ರಚನಾ ವರಸೆಗಳೊಡನೆ ಸಮರ್ಥವಾಗಿ ಸಂವಾದ ನಡೆಸಲು ಈ ವೈಚಾರಿಕ ಹಾಗೂ ಶೈಕ್ಷಣಿಕ ವಲಯಕ್ಕೆ ಸಾಧ್ಯವಾಯಿತು. ದೇಶದ ಆರ್ಥಿಕ ಹಾಗೂ ಸಾಮಾಜಿಕ ಇತಿಹಾಸವನ್ನು ವಿವಿಧ ಪುರಾವೆಗಳ ಹಾಗೂ ಸೈದ್ಧಾಂತಿಕ ಪ್ರಸ್ತುತತೆಯ ಗಟ್ಟಿ ಬುನಾದಿಯ ಮೇಲೆ ರಚಿಸಲು ಸಾಧ್ಯವಾಯಿತು. ಅದು ಹುಟ್ಟುಹಾಕಿದ ಚರ್ಚೆಗಳು ಇತಿಹಾಸ ರಚನೆಯನ್ನು ಕ್ರಿಯಾಶೀಲಗೊಳಿಸಿ ಹೊಸ ದಾರಿಯನ್ನು ಹುಡುಕಲು ಪ್ರೇರೇಪಿಸಿತು.

ಪ್ರಾಚೀನ ಭಾರತದ ಇತಿಹಾಸದ ರಚನಾವಿಧಿಯಲ್ಲೂ ಶರ್ಮಾರವರು ಕೆಲವು ುಖ್ಯವಾದ ಹೊಸತನವನ್ನು ಅಳವಡಿಸಿದರು. ತಮಗೆ ಬಳುವಳಿಯಾಗಿ ಬಂದ ಅಧ್ಯಯನದ ಸಂಪ್ರದಾಯವು ಪ್ರಾಕ್ತನ ಶಾಸ್ತ್ರದ ಮಾಹಿತಿ, ಶಾಸನಗಳು ತಿಳಿಸುವ ವರಗಳು ಅಥವಾ ಸಾಹಿತ್ಯ ಸಂಬಂಧೀ ಪುರಾವೆಗಳನ್ನು ಪ್ರತ್ಯೇಕವಾಗಿ ಆಧರಿಸಿದಷ್ಟು ಅವುಗಳನ್ನು ಕ್ರೋಡೀಕರಿಸುವ ಕೆಲಸವನ್ನು ಹೆಚ್ಚಾಗಿ ಮಾಡಲಿಲ್ಲ. [illegible] ಅವ್ಯಕ್ತ ಅಪನಂಬಿಕೆಗಳು ಇದಕ್ಕೆ ಕಾರಣವಿರಬಹುದು. [illegible] ಮಾನವನ ನೈಜ ಬದುಕನ್ನು, ಅದರ ಕಷ್ಟ-ಸುಖಗಳನ್ನು [illegible] ಓರಣವಾಗಿಸಿ ಅಥವಾ ಶೃಂಗಾರಗೊಳಿಸಿ ಮಂಟಪಕ್ಕೆ ಕರೆತಂದವರಲ್ಲ. ಆದುದರಿಂದ ಅವರಿಗೆ ಇತಿಹಾಸದ ಎಲ್ಲಾ ಆಕರಗಳನ್ನು ಕಲೆಹಾಕಿ ಅವುಗಳಿಂದ [illegible] ಚಿತ್ರಣವನ್ನು ಪ್ರಸ್ತುತಪಡಿಸಲು ಸಾಧ್ಯವಾಯಿತು. ಇದನ್ನು ಕೋಸಾಂಬಿಯವರು ಮಾಡಿದ್ದರು. ಅದನ್ನೇ ಇನ್ನೂ ನಿರ್ದಿಷ್ಟವಾಗಿ, ವೃತ್ತಿಪರವಾಗಿ ಶರ್ಮಾರವರು ಮುಂದುವರಿಸಿದರು.

ಶಾಸನಗಳನ್ನು ಅಧ್ಯಯನ ಮಾಡುವಲ್ಲೂ ಶರ್ಮಾರವರು ಹೊಸತನವನ್ನು ತೋರಿದರು. ಸಾಂಪ್ರದಾಯಿಕವಾಗಿ ಶಾಸನಗಳ ಪ್ರಶಸ್ತಿ ಭಾಗಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಿ, ಅವುಗಳಲ್ಲಿನ ರಾಜರ ಅಥವಾ ಅವರ ವಂಶದ ಬಗ್ಗೆ ತಿಳಿಸುವ ವಿವರಗಳನ್ನು, ಅವರ ಉಗಮದ ಕುರಿತು ಪೋಣಿಸಲ್ಪಟ್ಟ ಪುರಾಣ ಕಥೆಗಳನ್ನು, ಅವರು ತಮಗೆ ತಾವೇ ನೀಡಿದ ಬಿರುದಾವಳಿಗಳನ್ನು, ತಮ್ಮ ಸಾಹಸದ, ವಿಜಯದ ಗಾಥೆಗಳನ್ನು, ತಮ್ಮ ಔದಾರ್ಯದ ಲಕ್ಷಣಗಳನ್ನು ಅಥವಾ ಒಟ್ಟು ರಾಜಕೀಯ ಇತಿಹಾಸವನ್ನು ದೇಶ-ಕಾಲದ ಚೌಕಟ್ಟಿನಲ್ಲಿ ರೂಪಿಸುವ ಕೆಲಸಕ್ಕೆ ದುಡಿಸಿಕೊಳ್ಳಲಾಗುತ್ತಿತ್ತು. ದಾನ ಶಾಸನಗಳನ್ನು ದೊಡ್ಡವರ ಉದಾರತೆಯನ್ನೋ, ಧರ್ಮಪರತೆಯನ್ನೋ ತಿಳಿಸುವ ಸಾಧನಗಳಾಗಿ ತಿಳಿಯಲಾಗುತ್ತಿತ್ತು. ಆದರೆ ಶರ್ಮಾ ಅವುಗಳಿಂದ ಕೆಲವು ಮಹತ್ವದ ಸೂಚ್ಯಾರ್ಥಗಳನ್ನು ಹೊರಗೆಡಹಿದರು. ಭೂದಾನಗಳ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳನ್ನು ರಾಜತ್ವದ ಕ್ಷೀಣಿಸುವಿಕೆಯಲ್ಲಿ ಹಾಗೂ ವಿಕೇಂದ್ರೀಕರಣದಲ್ಲಿ, ಊಳಿಗಮಾನ್ಯ ಪದ್ಧತಿಯನ್ನು ಸೃಷ್ಟಿಸುವಲ್ಲಿ, ರೈತಜನರ ಶೋಷಣಾ ವ್ಯವಸ್ಥೆಯ ದಕ್ಷತೆಯನ್ನು ಹೆಚ್ಚಿಸುವಲ್ಲಿ, ಶ್ರೇಣೀಕೃತ ಸಮಾಜವನ್ನು ದೃಢಗೊಳಿಸುವಲ್ಲಿ ಗುರುತಿಸಿದರು. ಇದು ನಮ್ಮ ಪ್ರಾಚೀನ ಇತಿಹಾಸದ ರಮ್ಯತೆಯನ್ನು ಮಸುಕಾಗಿಸಿದರೂ ಸಮಾಜದ ಸ್ಥಿತಿ-ಗತಿಗಳನ್ನು ಗ್ರಹಿಸುವಲ್ಲಿ ಸಹಾಯಕವಾಯಿತು.

ಶರ್ಮಾರವರು ಇತಿಹಾಸಕಾರರಾಗಿ ಹೊಸದಾರಿಯನ್ನು ಹುಡುಕಿದ್ದಷ್ಟೇ ಅಲ್ಲ, ಅದರೊಡನೆ ಒದಗಿದ ಹೋರಾಟದ ಸಂದರ್ಭಗಳಿಂದಲೂ ವಿಮುಖರಾಗಲಿಲ್ಲ. ದೇಶದಲ್ಲಿ ಕೋಮುವಾದವನ್ನು ರಾಷ್ಟ್ರಪ್ರೇಮದೊಡನೆ ಸಮೀಕರಿಸುವ ಪ್ರಯತ್ನ ನಡೆದಾಗ, ಜಾತ್ಯತೀತ ನಿಲುವನ್ನು ದೂಷಿಸುವ ರಾಷ್ಟ್ರವ್ಯಾಪಿ ಯೋಜನೆಗಳನ್ನು ಹಮ್ಮಿಕೊಂಡಾಗ ಅವರು ಅದನ್ನು ಖಂಡಿಸುವಲ್ಲಿ ಮೊದಲಿಗರಾದರು. ೧೯೭೭ರಲ್ಲಿ ತುರ್ತುಪರಿಸ್ಥಿತಿಯು ಕೊನೆಗೊಂಡ ನಂತರ ಎನ್.ಸಿ.ಇ.ಆರ್.ಟಿ.ಯು ರೂಪಿಸಿದ ಪಠ್ಯ ಪುಸ್ತಕಗಳನ್ನು, ಅದರೊಳಗೆ ಅವರ 'ಏನ್ಶಿಯಂಟ್ ಇಂಡಿಯಾ'ವನ್ನೂ ಸೇರಿಸಿ ನಿಷೇಧಿಸುವ ಪ್ರಸ್ತಾವ ಬಂದಾಗ ಅದನ್ನು ವಿರೋಧಿಸುವುದನ್ನು ಸಂಘಟಿಸಿದ್ದು ಮಾತ್ರವಲ್ಲ, ತಾವೇ 'ಇನ್ ಡಿಫೆನ್ಸ್ ಆಫ್ ಏನ್ಶಿಯಂಟ್ ಇಂಡಿಯಾ' (೧೯೭೮) ಎಂಬ ಕಿರು ಹೊತ್ತಗೆಯನ್ನೂ ಬರೆದು ಪ್ರಕಟಿಸಿದರು. ಮುಂದೆ ಬಾಬ್ರಿ ಮಸೀದಿಯನ್ನು ಕೆಡವಿ ಹಿಂದೂ ಧರ್ಮದ ಪುನರುತ್ಥಾನವನ್ನು ಸಾಧಿಸುವ ರಾಜಕೀಯ ಚಳುವಳಿಯು ಶುರುವಾಗಿ ಅದರಲ್ಲಿ ಇತಿಹಾಸಕಾರರ ಹಾಗೂ ಪ್ರಾಕ್ತನ ಶಾಸ್ತ್ರಜ್ಞರ ಅಭಿಮತವನ್ನು ಸಂಯೋಜಿಸುವ ಪ್ರಯತ್ನ ನಡೆದಾಗ ಶರ್ಮಾರವರು 'ಕಮ್ಯೂನಲ್ ಹಿಸ್ಟರಿ ಎಂಡ್ ರಾಮಾಸ್ ಅಯೋಧ್ಯ' ಎಂಬ ಚಿಕ್ಕ ಪುಸ್ತಕವನ್ನು ಬರೆದದ್ದಲ್ಲದೆ ಅವರ ಕೆಲವು ಸಹೋದ್ಯೋಗಿಗಳನ್ನು ಕೂಡಿ 'ರಾಮಜನ್ಮಭೂಮಿ-ಬಾಬ್ರಿ ಮಸ್ಜಿದ್ : ಎ ಹಿಸ್ಟೋರಿಯನ್ಸ್ ರಿಪೋರ್ಟ್ ಟು ದಿ ನೇಷನ್' (೧೯೯೧) ಅನ್ನು ಪ್ರಕಟಿಸಿದರು. ಇತಿಹಾಸದ ಸತ್ಯಗಳು ಧರ್ಮದ ನಂಬಿಕೆಗಳೊಡನೆ, ಅದರಲ್ಲೂ ರಾಜಕೀಯದ ಮಹತ್ವಾಕಾಂಕ್ಷೆ - ಹುನ್ನಾರಗಳೊಡನೆ, ಹಾಗೂ ಭಾವೋನ್ಮತ್ತ ಸಮಾಜವನ್ನು ನಿರ್ಮಿಸುವ ಸಂದರ್ಭದಲ್ಲಿ ಹೇಗೆ ಅರ್ಥಪೂರ್ಣ ಸಂವಾದವನ್ನು ನಡೆಸಬಹುದು ಎಂಬುದು ಗಂಭೀರವಾದ ಪ್ರಶ್ನೆಯೇ. ಇತಿಹಾಸದ ಸತ್ಯಾಸತ್ಯತೆಗಳ ಚರ್ಚೆ ನಿಷ್ಕರ್ಷೆಗಳು ವಿಷಯ ಪಾಂಡಿತ್ಯದೊಳಗೆ ನಡೆಯಬೇಕಾದದ್ದು. ಶರ್ಮಾರವರು ಮಾಡಿದ್ದು ಅದೇ ಚೌಕಟ್ಟಿನಲ್ಲಿ. ಅದನ್ನು ಮೀರಿ ಇತಿಹಾಸವನ್ನು ಬೀದಿಗೆಳೆದು ದುರುಪಯೋಗ ಮಾಡಿದಾಗ ಸಮಾಜದ ಮನಃಸ್ಥಿತಿಯು ಎಷ್ಟು ಉದ್ವೇಗಕ್ಕೊಳಗಾಗುತ್ತದೆ, ಕಲುಷಿತಗೊಳ್ಳುತ್ತದೆ ಎಂಬುದನ್ನು ಅವರು ತಿಳಿಸಿದರು. ಅದರ ಅನುಭವ ನಮಗೆ ಸಾಕಷ್ಟು ಆಗಿದೆ. ಇತಿಹಾಸ ನಮಗೆ ಪಾಠ ಹೇಳುತ್ತದೆ ಎಂದು ನಾವೆಲ್ಲಾ ಸಾಮಾನ್ಯವಾಗಿ ನಂಬಿದ್ದೇವೆ. ಆದರೆ ಆ ಪಾಠಗಳು ಯಾವುವು ಎಂಬುದರ ಬಗ್ಗೆ ನಮ್ಮ ಜಗಳ ಇನ್ನೂ ಜಾರಿಯಲ್ಲಿದೆ.

ಉನ್ಮಾದ ರಾಷ್ಟ್ರೀಯತೆಯು ಇತಿಹಾಸದೊಡನೆ ಸರಸವಾಡುವುದಾಗಲೀ ಕುಹಕ ವಾಡುವುದಾಗಲೀ ಅಪರೂಪವೇನಲ್ಲ. ಇದರೊಳಗೆ ಉಗ್ರ ದೇಶೀಯತೆ ಹಾಗೂ

ಆಗಂತುಕ ಭೀತಿಯು ಸಾಮಾನ್ಯವಾಗಿ ಪ್ರಕಟಗೊಳ್ಳುತ್ತವೆ. ಇದನ್ನು ಸಮರ್ಥಿಸಿಕೊಂಡು ಸೈದ್ಧಾಂತಿಕವಾಗಿ ರೂಢಿಸಿಕೊಳ್ಳಲು ಇತಿಹಾಸದ ಮೊರೆ ಹೋಗಬೇಕಾಗುತ್ತದೆ. ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರು, ಲಗ್ಗೆ ಇಟ್ಟವರು ಎಂಬ ವಿಚಾರ ಹಿಂದುಗಳಲ್ಲದವರು ಮಾತ್ರ ಹೊರಗಿನವರು ಎಂಬ ಉಗ್ರ ದೇಶೀಯ ವಾದಕ್ಕೆ ತೀವ್ರ ಅನಾನುಕೂಲವನ್ನು ಉಂಟುಮಾಡಿದ್ದು ಸಹಜ. ಇದನ್ನು ಇತಿಹಾಸದಲ್ಲಿ ಸರಿಪಡಿಸಲು ಆರ್ಯರು ನಮ್ಮವರೇ, ಇಲ್ಲಿಯವರೇ. ಅವರು ಹೊರಗಿನವರಲ್ಲ; ಹರಪ್ಪಾ ಸಂಸ್ಕೃತಿಯನ್ನು ರೂಪಿಸಿದವರೂ ಅವರೇ, ಎಂಬ ವಿಚಾರದ ವ್ಯಾಪಕ ಪ್ರತಿಪಾದನೆ ನಡೆಯಿತು. ಹರಪ್ಪಾ ಸಂಸ್ಕೃತಿಗೆ ಆ ತನಕ ಪರಿಚಯವಿಲ್ಲದಿದ್ದ ಕುದುರೆಯೂ ಆವಿಷ್ಕಾರಗೊಂಡಿತು. ಇದನ್ನು ಹಲವು ಪ್ರಾಕ್ತನ ಶಾಸ್ತ್ರಜ್ಞರು ಹಾಗೂ ಇತಿಹಾಸಕಾರರು ಖಂಡಿಸಿದರು. ಆರ್ಯರು ಒಂದು ನಿರ್ದಿಷ್ಟ ಜನಾಂಗವನ್ನು ಪ್ರತಿನಿಧಿಸಿರಲಿಲ್ಲ, ಬದಲಾಗಿ ಒಂದು ಭಾಷೆಯನ್ನು ಮಾತನಾಡುವ ಜನರಾಗಿದ್ದರು ಎಂಬ ವಿಚಾರದ ಬಗ್ಗೆ ಇತಿಹಾಸಕಾರರು ಹೆಚ್ಚಿನ ಒಲವನ್ನು ಇತ್ತೀಚೆಗೆ ತೋರಿದ್ದಾರೆ. ಅವರು ಭಾರತಕ್ಕೆ ಆಕ್ರಮಣಕಾರರಾಗಿ ಬಂದವರೆಂಬುದಕ್ಕೂ ಖಚಿತ ಪುರಾವೆಗಳಿಲ್ಲ. ಹೊರಗಿನಿಂದ ಬಂದವರೆಲ್ಲರೂ ಆಕ್ರಮಣಕಾರರಾಗಿಯೇ ಇರಬೇಕೆಂದಿಲ್ಲ. ಅನೇಕ ಪ್ರಾಕ್ತನ ಶಾಸ್ತ್ರಜ್ಞರ ಅಭಿಪ್ರಾಯ ಅವರು ಪಶುಪಾಲನಾ ಸಮೂಹಗಳಿಗೆ ಸೇರಿದ್ದು, ಮಧ್ಯ ಏಷ್ಯಾ, ಅಫಘಾನಿಸ್ತಾನ ಪ್ರದೇಶಗಳಿಂದ ಅಲ್ಲಿನ ಚಳಿಗಾಲದಲ್ಲಿ ದುರ್ಲಭವಾದ ಮೇವನ್ನು ಅರಸಿಕೊಂಡು ಈ ಕಡೆಗೆ ಬಂದವರು. ಋತು ಪ್ರಶಸ್ತವಾದಾಗ ಕೆಲವರು ಹಿಂದೆ ಹೋದರೆ ಇನ್ನು ಕೆಲವರು ಇಲ್ಲೇ ಉಳಿದರು. ಕಾಲಕ್ರಮೇಣ ಈ ಪಂಗಡಗಳ ನೆಲೆಯು ಇಲ್ಲಿ ಏರ್ಪಟ್ಟು ಸಮಾಜವು ರೂಪುಗೊಂಡಿತು. ಈ ಚಿತ್ರಣವು ಆಕ್ರಮಣದ ಕಥಾನಕದಷ್ಟು ರೋಚಕವಾಗಿಲ್ಲ, ಅಥವಾ ಮುಜುಗರಗೊಳಿಸುವಂಥಾದ್ದೂ ಅಲ್ಲ. ಭಾರತದ ಒಳಗೆ-ಹೊರಗೆ ಎಂಬ ಪರಿಕಲ್ಪನೆಯೂ ಇತಿಹಾಸ ಸಂದರ್ಭದಲ್ಲಿ ವರ್ತಮಾನದ ಆಭಾಸದ ಹೊರೆಯಾಗಿ ಪರಿಣಮಿಸಬಹುದು. ಶರ್ಮಾರವರು ಇದನ್ನು ತಮ್ಮ 'ಲುಕಿಂಗ್ ಫಾರ್ ದಿ ಆರ್ಯನ್ಸ್' (೧೯೯೫) ಮತ್ತು 'ಎಡ್ವೆಂಟ್ ಆಫ್ ದಿ ಆರ್ಯನ್ಸ್ ಇನ್ ಇಂಡಿಯಾ' (೧೯೯೯)ಗಳಲ್ಲಿ ಸೂಚಿಸಿದರು. ಆರ್ಯರ ವೃತ್ತಾಂತ ಹಾಗೂ ಅವರ ಸ್ಥಾನ-ಮಾನಗಳನ್ನು ಇತಿಹಾಸದಲ್ಲಿ ಪರಿಷ್ಕರಣಗೊಳಿಸ ಉತ್ಸಾಹೀ ಕಾಯಕದೊಳಗೆ ಅಡಗಿದ ರಾಜಕೀಯವನ್ನೂ ಹೊರಗೆಡಹಿದರು.

ಇತಿಹಾಸದ ಓದು, ಅಧ್ಯಯನಗಳು ಸಂಭ್ರಮದ ಆತ್ಮರತಿಗೋಸ್ಕರ ಎ ತಪ್ಪು ಕಲ್ಪನೆಯಿದೆ. ಹಾಗಿದ್ದರೆ ಅದರ ಬಳಕೆಯಲ್ಲಿ ಪರಿಮಿತಿಯೂ ಇದೆ, ಅಪಾಯ ಇದೆ. ಇತಿಹಾಸದ ಅಧ್ಯಯನವಿರುವುದು ನಮ್ಮ ಸಮಾಜವನ್ನು, ತನ್ಮೂಲಕ ನಮ ಅರ್ಥಮಾಡಿಕೊಳ್ಳಲೋಸ್ಕರ. ಇದರೊಳಗೆ ನಮ್ಮ ಸಾಮಾಜಿಕ ಪ್ರಜ್ಞೆ, ಆಶಯ ಹಾಗೂ ಅವುಗಳನ್ನು ಸಾಧಿಸುವ ಯೋಜನೆಗಳೂ ಅಡಕವಾಗಿರುತ್ತವೆ. ಇಲ್ಲಿ ಏಕ ಇರಬೇಕೆಂದಿಲ್ಲ. ಸಮಾಜದಲ್ಲಿ ಅಸಮಾನತೆ ಇರುವ ತನಕ ಅಲ್ಲಿನ ಆಶಯಗ ಬೇರೆಬೇರೆಯಾಗಿರುತ್ತವೆ; ಅದನ್ನು ಹೋಗಲಾಡಿಸುವ ಯೋಜನೆಗಳೂ ಒಂ ಆಗಿರುವುದಿಲ್ಲ. ಹಾಗಾಗಿ ಇದರೊಳಗೆ ರಾಜಕೀಯದ ಪ್ರವೇಶವು ಆಗದೇ ಇರ ಸಾಧ್ಯವಿಲ್ಲ. ಆದುದರಿಂದಲೇ ಇತಿಹಾಸ ರಚನೆಯಲ್ಲಿ ಸೈದ್ಧಾಂತಿಕ ರಾದ್ಧಾಂತ ನಡೆಯುತ್ತಲೇ ಇರುತ್ತವೆ. ಇತಿಹಾಸವು ವಸ್ತುನಿಷ್ಠವಾದದ್ದು, ಸೈದ್ಧಾಂತಿಕತೆಗೆ ಮೀರ ಎಂಬ ವಾದ ಆಪ್ಯಾಯಮಾನವಾದರೂ ವಾಸ್ತವಕ್ಕೆ ದೂರವಾದದ್ದು. ಬದ ನಮಗೆಸೆಯುವ ಸವಾಲು ಆಯ್ಕೆಯದ್ದು. ಅದನ್ನು ಸ್ವೀಕರಿಸದೆ ಗತ್ಯಂತರವೇ ಇ ಅದು ನಮ್ಮ ಇತಿಹಾಸ ಸಂವೇದನೆಗೂ ಅನ್ವಯಿಸುತ್ತದೆ.

ಆರ್. ಎಸ್. ಶರ್ಮಾ ನಮ್ಮನ್ನು ಅಗಲಿದ್ದಾರೆ. ಆದರೆ ಅವರ ಸಂಶೋಧನೆ ಮತ್ತು ವಿಚಾರಗಳು ಹಾಗೂ ಸಮಾಜಮುಖೀ ಇತಿಹಾಸ ರಚನೆಗಳು ನಮ್ಮನ್ನು ಅ ಹೋಗಲು ಸಾಧ್ಯವೇ ಇಲ್ಲ. ಅವರ ಇತಿಹಾಸ ಚಿಂತನೆಗಳನ್ನು ಅಥ ರಚನಾಕ್ರಮಗಳನ್ನು ಒಪ್ಪಿ ಅನುಸರಿಸುವ ಮಂದಿ ಈಗ ಅನೇಕರಿದ್ದಾರೆ. ಅವುಗ ಒಪ್ಪದವರೂ ಶರ್ಮಾರನ್ನು ಕಡೆಗಣಿಸಲು ಸಾಧ್ಯವೇ ಇಲ್ಲ.

ಡಾ॥ ಬಿ. ಸುರೇಂದ್ರ ರಾವ್
ಇತಿಹಾಸ ಪ್ರಾಧ್ಯಾಪಕರು (ನಿವೃತ್ತ)
'ಅಮೃತವರ್ಷಿಣಿ', ಅಸೈಗೋಳಿ, ಕೊಣಾಜೆ - ೫೭೪ ೧೯೯

ಪ್ರೊ॥ ಜೆ. ಆರ್. ಲಕ್ಷ್ಮಣ ರಾವ್

...ಕೃತಿಚೌರ್ಯಕ್ಕೆ ಈಡಾದ ಪ್ರತಿಭಾನ್ವಿತ ವಿಜ್ಞಾನಿ

ಜಗದೀಶ್ ಚಂದ್ರ ಬೋಸ್



ಜಗದೀಶ್ ಚಂದ್ರ ಬೋಸ್ ಅವರು ತಂತ್ರವಿದ್ಯಾ ಕೃತಿಚೌರ್ಯಕ್ಕೆ ಈಡಾಗದೆ ನ್ಯಾಯವಾಗಿ ಅವರಿಗೆ ಸಲ್ಲಬೇಕಾಗಿದ್ದ ನೊಬೆಲ್ ಪಾರಿತೋಷಿಕವನ್ನು ಪಡೆದಿದ್ದರೆ ಅವರು ಏಷ್ಯಾದ ಮೊತ್ತಮೊದಲ ನೊಬೆಲ್ ಪ್ರಶಸ್ತಿ ವಿಜೇತರಾಗಿರುತ್ತಿದ್ದರು. ನೊಬೆಲ್ ಪಾರಿತೋಷಿಕವನ್ನು ನಿರ್ಧರಿಸುವವರು ಈ ಹಿನ್ನೆಲೆ ಕಥೆಯನ್ನು ಅರಿಯದೆಯೇ ಮಾರ್ಕೊನಿಯ ಪೇಟೆಂಟ್‌ನಿಂದ ಮತ್ತು ಅಪಾರ ಪ್ರಚಾರಕ್ಕೊಳಗಾಗಿದ್ದ ಆತನ ಸಾಗರಾಂತರ ರೇಡಿಯೋ ಪ್ರಸಾರದಿಂದ ಪ್ರಭಾವಿತರಾಗಿ, 1909ರ ಭೌತವಿಜ್ಞಾನದ ನೊಬೆಲ್ ಪಾರಿತೋಷಿಕವನ್ನು ಮಾರ್ಕೊನಿಗೆ ನೀಡಿದರು.

ಜಗದೀಶ್ ಚಂದ್ರ ಬೋಸ್ ಅವರು ಜನಿಸಿದುದು ನೂರೈವತ್ತು ವರ್ಷಗಳಿಗೂ ಹಿಂದೆ. ...೫೮ರ ನವೆಂಬರ್ ೩೦ರಂದು, ಈಗ ಬಂಗ್ಲಾ ದೇಶದಲ್ಲಿರುವ ಮೈಮೆನ್ಸಿಂಗ್ ಎಂಬಲ್ಲಿ. ಅವರು ...ಮ್ಮ ಪ್ರಾರಂಭ ಶಿಕ್ಷಣವನ್ನು ಅಲ್ಲಿ ಮುಗಿಸಿ ಕೊಲ್ಕತ್ತೆಗೆ ಬಂದು ಸೇಂಟ್ ಕ್ಸೇವಿಯರ್ ಕಾಲೇಜಿಗೆ ಸೇರಿ ...ಲ್ಕತ್ತ ವಿಶ್ವವಿದ್ಯಾಲಯದ ಪದವೀಧರರಾದರು. ಉನ್ನತ ಶಿಕ್ಷಣಕ್ಕಾಗಿ ಅವರು ಇಂಗ್ಲೆಂಡ್‌ಗೆ ತೆರಳಿ, ...ಲ್ಲಿ ಕೇಂಬ್ರಿಡ್ಜ್‌ನ ಕ್ರೈಸ್ಟ್ ಕಾಲೇಜಿಗೆ ಸೇರಿ ಟ್ರೈಪಾಸ್ ಗಳಿಸಿದರು. ೧೮೮೪ರಲ್ಲಿ ಅವರು ಭಾರತಕ್ಕೆ ...ಂದಿರುಗಿದಾಗ ಕೊಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿ ...ಮಕಗೊಂಡರು.

ಆಗ ಆ ಕಾಲೇಜಿನಲ್ಲಿ ಸಂಶೋಧನೆ ನಡೆಸಲು ಸ್ಥಳ, ಸಾಧನೋಪಕರಣಗಳು, ಹಣ ಮುಂತಾದವು ...ಂಬ ಸೀಮಿತವಾಗಿದ್ದುವಾದರೂ ಬೋಸ್ ಅವರು ಹಿಂಜರಿಯದೆ, ಆಗ್ಗೆ ಸ್ವಲ್ಪ ಕಾಲದ ಮುಂಚೆ ...ಡುಹಿಡಿಯಲಾಗಿದ್ದ ಹರ್ಟ್ಸ್ ತರಂಗಗಳನ್ನು (Hertzian waves) ಕುರಿತು ಸಂಶೋಧನೆಯಲ್ಲಿ ...ಡಗಿದರು. ಹರ್ಟ್ಸ್ ತರಂಗಗಳ ಕಥೆ ನಮ್ಮನ್ನು ಕ್ಲರ್ಕ್ ಮ್ಯಾಕ್ಸ್‌ವೆಲ್ (೧೮೩೧ - ೧೮೭೯)ನ ಕಾಲಕ್ಕೆ ...ಂಡೊಯ್ಯುತ್ತದೆ.

ವಿದ್ಯುತ್ತು ಮತ್ತು ಕಾಂತತ್ವ – ಎರಡಕ್ಕೂ ಬೇರ್ಪಡಿಸಲಾಗದಂಥ ನಿಕಟ ಸಂಬಂಧವಿದೆ ಎಂದು ...ೀರಿಸಿದವನು ಕ್ಲರ್ಕ್ ಮ್ಯಾಕ್ಸ್‌ವೆಲ್. ಎಲ್ಲಾದರೊಂದೆಡೆ ಒಂದು ವಿದ್ಯುದಾವೇಶ ...ನೆದಾಡತೊಡಗಿದರೆ ಅಲ್ಲಿ ಒಂದು ಕಾಂತಕ್ಷೇತ್ರ ಉತ್ಪತ್ತಿಯಾಗಿ ಅದು ಅಲ್ಲಿಂದ ಒಂದು ನಿರ್ದಿಷ್ಟ ...ಗದಿಂದ ಸಾಗುವುದೆಂದೂ ಆ ವೇಗವನ್ನು ಲೆಕ್ಕ ಹಾಕಬಹುದೆಂದೂ ಅವನು ಗಣಿತದ ...ವಿನಿಂದ ತೋರಿಸಿದ. ಆ ವೇಗವನ್ನು ಲೆಕ್ಕ ಹಾಕಲಾಗಿ ಅದು ಒಂದು ಸೆಕೆಂಡಿಗೆ ೩೦೦,೦೦೦ ...ೋಮೀಟರ್ ಎಂದು ಗೊತ್ತಾಯಿತು. ಅದು ಕರಾರುವಾಕ್ಕಾಗಿ ಆ ವೇಳೆಗಾಗಲೇ ಗೊತ್ತಿದ್ದ ಬೆಳಕಿನ ...ಗಕ್ಕೆ ಸಮ. ಆಗ ಮ್ಯಾಕ್ಸ್‌ವೆಲ್, ಬೆಳಕು ಸಹ ತೊನೆದಾಡುವ ವಿದ್ಯುದಾವೇಶದಿಂದ ...ತ್ಪತ್ತಿಯಾದ ವಿದ್ಯುತ್ಕಾಂತ ತರಂಗವೇ ಇರಬೇಕೆಂದು ತೀರ್ಮಾನಿಸಿದ. ಬಹುಶಃ ವಿವಿಧ ...ಂಗಾಂತರಗಳಿರುವ ಬಗೆಬಗೆಯ ವಿದ್ಯುತ್ಕಾಂತ ತರಂಗಗಳಿವೆ, ಅವುಗಳ ಪೈಕಿ ಬೆಳಕು ಒಂದು ...ೆ ಎಂದೂ ತೀರ್ಮಾನಿಸಿದ. ಆಗ್ಗೆ ಐದಾರು ವರ್ಷಗಳ ಹಿಂದೆ ಸೂರ್ಯರಶ್ಮಿಯ ರೋಹಿತವನ್ನು ...ೀಕ್ಷಿಸುತ್ತಿದ್ದ ಬ್ರಿಟಿಷ್ ವಿಜ್ಞಾನಿ ಸರ್ ವಿಲಿಯಮ್ ಹರ್ಷಲ್ ಸೌರ ರೋಹಿತದ ಕೆಂಪು ತುದಿಯ ...ಚೆ ಅವಕೆಂಪು ಕಿರಣಗಳು (infrared rays) ಎಂಬ ಉಷ್ಣ ತರಂಗಗಳನ್ನು ಗುರುತಿಸಿದ್ದುದೂ ...ಂತರ ಕೆಲವು ವರ್ಷಗಳ ತರುವಾಯ ವಿಲ್ಹೆಲ್ಮ್ ರಿಟ್ಟರ್ ಎಂಬಾತ ರೋಹಿತದ ನೇರಳೆ ತುದಿಯ ...ಚೆ ರಾಸಾಯನಿಕ ಪರಿಣಾಮ ಉಂಟುಮಾಡಬಲ್ಲ ನೇರಳಾತೀತ ಕಿರಣಗಳನ್ನು (ultra violet ...ys) ಗುರುತಿಸಿದ್ದುದೂ ಮ್ಯಾಕ್ಸ್‌ವೆಲ್‌ನ ತೀರ್ಮಾನಕ್ಕೆ ಪುಷ್ಟಿ ನೀಡಿದುವು.

ದೃಶ್ಯ ಬೆಳಕಿನ, ಅಂದರೆ ಕಣ್ಣಿಗೆ ಕಾಣಿಸುವ ಬೆಳಕಿನ ತರಂಗ ದೂರಗಳು ಕೆಂಪು ತುದಿಯಲ್ಲಿ ...೦೦ ಆಂಗ್‌ಸ್ಟ್ರಾಮ್‌ಗಳೂ (ಆಂಗ್‌ಸ್ಟ್ರಾಮ್ ಎಂದರೆ ಮಿಲಿಮೀಟರಿನ ಕೋಟಿಯಲ್ಲೊಂದು ...ಗ) ನೇರಳೆ ತುದಿಯಲ್ಲಿ ೭೦೦೦ ಆಂಗ್‌ಸ್ಟ್ರಾಮ್‌ಗಳೂ ಇರುತ್ತವೆ. ಹೈನ್‌ರಿಕ್ ಹರ್ಟ್ಸ್ (೧೮೫೭ - ...೯೪) ಒಂದು ಸೆಂಟಿಮೀಟರ್‌ನಿಂದ ಒಂದು ಮೀಟರ್ ತರಂಗ ದೂರಗಳಿರುವ ವಿದ್ಯುತ್ಕಾಂತ ...ಂಗಗಳೂ ಇರಬೇಕೆಂದು ಯೋಚಿಸಿ ಅವುಗಳನ್ನು ಉತ್ಪತ್ತಿ ಮಾಡಲು ಒಂದು ವಿಧಾನವನ್ನು ...ೂಪಡಿಸಿದ.

ಬೋಸ್ ಅವರು ಆ ಹರ್ಟ್ಸ್ ತರಂಗಗಳನ್ನು ಕುರಿತ ಸಂಶೋಧನೆಯನ್ನು ಕೈಗೆತ್ತಿಕೊಂಡಾಗ ಆ ...ಂಗಗಳನ್ನು ನಿಸ್ತಂತು ಸಂಪರ್ಕಕ್ಕೆ ಉಪಯೋಗಿಸಿಕೊಳ್ಳಬಹುದೆಂದು ಯೋಚಿಸಿದರು. ತಂತಿಯ ...ವಿನಿಂದ ಸಂಪರ್ಕ ಸಾಧಿಸಬಲ್ಲ ಟೆಲಿಗ್ರಾಫ್, ಟೆಲಿಫೋನ್‌ಗಳು ಮಾತ್ರ ಗೊತ್ತಿದ್ದ ಆ ಕಾಲದಲ್ಲಿ

ಅವರ ಯೋಚನೆ ಕೇವಲ ಗಾಳಿಗೋಪುರದಂತಿತ್ತು. ಬೋಸ್ ಅವರು ಪ... ಆತ್ಮವಿಶ್ವಾಸದಿಂದ ಮುಂದುವರಿದು, ತಮಗೆ ಆಗಬೇಕಾಗಿದ್ದುದೇನಿದ್ದ... ದೂರದಿಂದ ಹರ್ಟ್ಸ್ ತರಂಗಗಳ ರೂಪದಲ್ಲಿ ಬರುತ್ತಿರುವ ಸಂದೇಶವನ್ನು ಗ್ರಹಿಸ... ಒಂದು ಉಪಕರಣ ಅಷ್ಟೆ ಎಂದು ತೀರ್ಮಾನಿಸಿದರು. ೧೮೯೫ರ ವೇಳೆಗೆ ಅ... ಒಂದು ಉಪಕರಣವನ್ನು ಅವರು ನಿರ್ಮಿಸಿದರು. 'ಕೊಹಿರರ್' ಎಂ... ಕರೆಯಲಾಗಿರುವ ಆ ಉಪಕರಣ ತುಂಬ ಸರಳವಾದುದು; ಲೋಹದ ಪುಡಿಯ... ಅಳ್ಳಕವಾಗಿ ತುಂಬಿರುವ ಒಂದು ಡಬ್ಬಿ, ಅಷ್ಟೆ. ಅದು ವಿದ್ಯುದ್ವಾಹಕವಾಗಿ ಅಷ್ಟೇ... ಸಮರ್ಪಕವಾಗಿ ಕೆಲಸ ಮಾಡುವುದಿಲ್ಲ. ಹರ್ಟ್ಸ್ ತರಂಗಗಳು ಅದರ ಮೇಲೆ ಬಿದ... ಅದು ಒಂದು ಸಮರ್ಪಕ ವಿದ್ಯುದ್ವಾಹಕದಂತೆ ವರ್ತಿಸುತ್ತದೆ.

ಅದನ್ನು ಅವರು ಕಂಡುಹಿಡಿದ ವರ್ಷವೇ ಅವರು ಕೊಲ್ಕತ್ತೆಯಲ್ಲಿ ನೀ... ಒಂದು ಸಾರ್ವಜನಿಕ ಉಪನ್ಯಾಸದಲ್ಲಿ ಅದನ್ನು ಪ್ರದರ್ಶಿಸಿದರು. ಉಪನ... ಮಂದಿರದಲ್ಲಿ ಅವರಿಟ್ಟುಕೊಂಡಿದ್ದ ರೇಡಿಯೇಟರ್‌ನಿಂದ ಅವರು ಕಳುಹಿಸಿದ ಹ... ತರಂಗಗಳನ್ನು ೭೫ ಅಡಿ ದೂರದಲ್ಲಿದ್ದ ಇನ್ನೊಂದು ಕೊಠಡಿಯಲ್ಲಿ ಅವರು ಇ... ಕೊಹಿರರ್ ಉಪಕರಣವು ಗ್ರಹಿಸಿ ಒಂದು ಗಂಟೆಯನ್ನು ಬಾರಿಸಿತು, ಒಂ... ಪಿಸ್ತೂಲು ಗುಂಡನ್ನು ಹಾರಿಸಿತು.

ಅವರು ತಮ್ಮ ಸಂಶೋಧನೆಯನ್ನು ಮುಂದುವರಿಸಿ ಆ ಉಪಕರಣ... ಉತ್ತಮಪಡಿಸುವುದರಲ್ಲಿ ನಿರತರಾಗಿದ್ದಾಗ ಅವರು ಇಂಗ್ಲೆಂಡಿಗೆ ಹೋಗಬೇ... ಬಂದಿತು. ಬ್ರಿಟಿಷ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ... ಸೈನ್ಸ್‌ನವರು ಆ ವರ್ಷ ಲಿವರ್‌ಪೂಲ್ ನಗರದಲ್ಲಿ ಏರ್ಪಡಿಸಿದ್ದ ಅಧಿವೇಶನ... ಭಾಗವಹಿಸಲು ಅವರನ್ನು ಆಹ್ವಾನಿಸಿದ್ದರು. ಅಲ್ಲಿ ಅವರು ತಮ್ಮ ಸಂಶೋಧನೆ... ಒಂದು ವರದಿಯನ್ನು ಮಂಡಿಸಿದರು. ಅದನ್ನು ಅಪಾರವಾಗಿ ಮೆಚ್ಚಿಕೊಂಡ ಲಾಡ... ಕೆಲ್ವಿನ್ (೧೮೨೪-೧೯೦೭) ಅವರು ಬೋಸ್ ಅವರ ಸಾಧನೆಯ... ಕೊಂಡಾಡಿದ್ದಲ್ಲದೆ, ಎಂಬತ್ತು ವರ್ಷದ ಆ ವೃದ್ಧ ಕುಂಟುತ್ತಾ ಮಹಡಿ ಹತ್ತಿ ಹೋ... ಮಹಿಳೆಯರ ಗ್ಯಾಲರಿಯಲ್ಲಿದ್ದ ಶ್ರೀಮತಿ ಬೋಸ್ ಅವರನ್ನು ಕಂಡು ತಮ್ಮ ಎರ... ಕೈಗಳಿಂದಲೂ ಅವರ ಕೈ ಕುಲುಕಿ ಆಕೆಯ ಪತಿಯ ಪ್ರತಿಭೆಯನ್ನು ಶ್ಲಾ... ಅಭಿನಂದಿಸಿದರು.

ಬೋಸ್ ಅವರ ಯುಗ ಪ್ರವರ್ತಕ ಸಾಧನೆಯನ್ನು ಇಂಗ್ಲೆಂಡಿನ ಲಾರ್ಡ್ ರ್‍ಯಾ... (೧೮೪೨ - ೧೯೧೯) ಅವರು ೧೮೯೭ರ ಮಾರ್ಚ್ ೬ ರಂದು ಲಂಡನ್ನಿನ ರಾಯ... ಸೊಸೈಟಿಗೆ ತಿಳಿಸಿದರು. ಅದೇ ವರ್ಷ ಏಪ್ರಿಲ್ ೨೭ರಂದು ನಡೆದ ರಾಯ... ಸೊಸೈಟಿಯ ಸಭೆಯಲ್ಲಿ ಅದನ್ನು ಮಂಡಿಸಲಾಯಿತು.

ಕೆಲವು ತಿಂಗಳುಗಳ ತರುವಾಯ ೧೯೦೧ರಲ್ಲಿ ರಾಯಲ್ ಇಟ್ಯಾಲಿಯ... ನೌಕಾ ದಳದ ಲೆಫ್ಟಿನೆಂಟ್ ಸೊಲಾರಿ ಎಂಬುವನ ಕೈಗೆ ಆ ಉಪಕರಣ ಹೇಗ... ಸಿಕ್ಕಿತು. ಅವನು ಅದನ್ನು ಪ್ರಯೋಗಿಸಿ ನೋಡಿ, ತನ್ನ ಬಾಲ್ಯದ ಸ್ನೇಹಿತ, ಮಾರ್ಕೊ... ಎಂಬಾತನಿಗೆ ಉಡುಗೊರೆಯಾಗಿ ಕೊಟ್ಟ. ಮಾರ್ಕೊನಿ, ಕೂಡಲೇ ಅ... ಪೇಟೆಂಟ್ ಪಡೆದುಕೊಂಡುದಲ್ಲದೆ, ರೇಡಿಯೊ ತರಂಗಗಳನ್ನು ಬ್ರಿಟನ್ನಿನ... ಅಮೆರಿಕಕ್ಕೆ ಕಳುಹಿಸಲು ಪ್ರಯತ್ನಿಸಿ, ಅದರಲ್ಲಿ ಯಶಸ್ವಿಯಾದ. ನೊಬ... ಪಾರಿತೋಷಿಕವನ್ನು ನಿರ್ಧರಿಸುವವರು ಈ ಹಿನ್ನೆಲೆ ಕಥೆಯನ್ನು ಅರಿಯದೆ... ಮಾರ್ಕೊನಿಯ ಪೇಟೆಂಟ್‌ನಿಂದ ಮತ್ತು ಅಪಾರ ಪ್ರಚಾರಕ್ಕೊಳಗಾಗಿದ್ದ ಅ... ಸಾಗರಾಂತರ ರೇಡಿಯೋ ಪ್ರಸಾರದಿಂದ ಪ್ರಭಾವಿತರಾಗಿ, ೧೯೦... ಭೌತವಿಜ್ಞಾನದ ನೊಬೆಲ್ ಪಾರಿತೋಷಿಕವನ್ನು ಮಾರ್ಕೊನಿಗೆ ನೀಡಿದರು.

ಜಗದೀಶ್ ಚಂದ್ರ ಬೋಸ್ ಅವರು ಈ ಬಗೆಯ ತಂತ್ರವಿದ್ಯಾ ಕೃತಿಚೌರ್ಯ... ಈಡಾಗದೆ ನ್ಯಾಯವಾಗಿ ಅವರಿಗೆ ಸಲ್ಲಬೇಕಾಗಿದ್ದ ನೊಬೆಲ್ ಪಾರಿತೋಷಿಕವ... ಪಡೆದಿದ್ದರೆ ಅವರು ಏಷ್ಯಾದ ಮೊತ್ತಮೊದಲ ನೊಬೆಲ್ ಪ್ರಶಸ್ತಿ ವಿಜ... ರಾಗಿರುತ್ತಿದ್ದರು. ರವೀಂದ್ರನಾಥ ಟ್ಯಾಗೂರರು ಸಾಹಿತ್ಯದ ನೊಬೆಲ್ ಪ್ರಶಸ್ತಿಯ... ಪಡೆದುದು ೧೯೧೩ರಲ್ಲಿ; ಸಿ. ವಿ. ರಾಮನ್ ಅವರು ಭೌತವಿಜ್ಞಾನದ ನೊಬ... ಪ್ರಶಸ್ತಿಯನ್ನು ಪಡೆದುದು ೧೯೩೦ರಲ್ಲಿ.

ಪ್ರೊ॥ ಜೆ. ಆರ್. ಲಕ್ಷ್ಮಣ ರಾವ್
'ಮೈತ್ರಿ', ನಂ. ೨೩೪, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು - [illegible]

ಪ್ರಪಂಚಕ್ಕೆ ಮುತ್ತಿಗೆ ಹಾಕಬೇಕು

– ನೋಮ್ ಚೋಮ್‌ಸ್ಕಿ

ಹವರ್ಡ್ ಜಿನ್

[illegible]

ಹವರ್ಡ್ ಜಿನ್ ತೀರಿಕೊಂಡು ಒಂದು ವರ್ಷ. ಆತ ಅಮೆರಿಕಾದ ಪ್ರಸಿದ್ಧ ಇತಿಹಾಸಕಾರ, ರಾಜಕೀಯ ಕಾರ್ಯಕರ್ತ. "ಅಮೆರಿಕಾದ ಚರಿತ್ರೆ: ಜನತೆಯ ದೃಷ್ಟಿಯಿಂದ" ಎಂಬುದು ಆತನ ಅಮೂಲ್ಯ ಗ್ರಂಥ. ಅಮೆರಿಕಾದ ರಾಜಕೀಯದ ಸಮರ್ಥ ವಿಶ್ಲೇಷಕ ಮತ್ತು ಜನಪರ ಚಿಂತಕ ಜಿನ್ ಸಾಮ್ರಾಜ್ಯಶಾಹಿಯ ಕಟುವಿರೋಧಿ. ಚೋಮ್‌ಸ್ಕಿಯ ಸ್ನೇಹಿತ. ಪ್ರಸ್ತುತ ಆತನ ಚಿಂತನೆಗೆ ವಿಶೇಷ ಮಹತ್ವವಿದೆ.

ದಿನೇಶ್ ಹಾಸನ್

ವೆಲ್ಲದರ ಜತೆಗೆ ನವ ವ್ಯವಸ್ಥೆಯ ಶಾಸನಗಳು ಶ್ರಮಿಕರ ನ್ಯಾಯಯುತ ಸ್ವಾರ್ಥಗಳಿಗೆ ಸ್ಪಂದಿಸುತ್ತಿದ್ದವು. ಒಟ್ಟಿನಲ್ಲಿ, ಆಗಿನ ಆರ್ಥಿಕ ಹಿನ್ನಡೆ ಒಂದು ಗಾಮಿ ನಡಾವಳಿ ಎನ್ನುವ ನಂಬಿಕೆ ಎಲ್ಲರಲ್ಲಿ ಇತ್ತು.

ಈಗಿನ ಸಮಾಚಾರ ಬೇರೆ. ಕ್ಷೋಭೆ, ನಿರಾಸೆಗಳು ಅಮೆರಿಕದ ಕೆಲಸಗಾರರ ಜನಸದಲ್ಲಿ ನೆಲೆಗೊಂಡಿವೆ. ೧೯೩೦ರ ಆಸುಪಾಸಿನಲ್ಲಿ ನಿರುದ್ಯೋಗಿಗಳಿಗೆ ಮತ್ತೆ ಸ ದೊರಕುವ ಬಗ್ಗೆ ರಿಯಲಿಸ್ಟಿಕ್ ನಿರೀಕ್ಷೆಗಳು ಇದ್ದವು. ಆಗಿದ್ದ ನಿರುದ್ಯೋಗತನ ಚಿ ಸರಿಸುಮಾರಿಗೆ ಈಗಿರುವಂಥದ್ದೆ. ಮುಖ್ಯ ವ್ಯತ್ಯಾಸ ಏನೆಂದರೆ, ಪುನರುದ್ಯೋಗ ದ ಒಂದು ಮರೀಚಿಕೆ. ಈ ಕರುಳು ಹಿಂಡುವ ಬದಲಾವಣೆ ಶುರುವಾಗಿದ್ದು ಎಪ್ಪತ್ತರ ಕದಲ್ಲಿ. ಆರ್ಥಿಕ ವಿಶ್ಲೇಷಕ ರಾಬರ್ಟ್ ಬರ್ನಾರ್ಡ್ ಹೇಳುವಂತೆ ಇದಕ್ಕೆ ಕಾರಣ ಭವಂತಿಕೆಯ ಕೆಳಗಿಳಿಯುವಿಕೆ. ಎಳುನೂರು ವರ್ಷಗಳ ಕೈಗಾರಿಕಾ ಮುಂದುವರಿಕೆ ತ್ತು ಬೆಳವಣಿಗೆ ತಲೆಕೆಳಗಾಯಿತು. ನಿಷ್ಕೈಗಾರಿಕೀಕರಣ ಮತ್ತು ಅನಭಿವೃದ್ಧಿ ನಮ್ಮ ಂತ್ರಗಳಾದವು. ಯಾಂತ್ರಿಕ ಉತ್ಪಾದನೆ - ಶ್ರಮಿಕರ ದೆವ್ವ, ಬಂಡವಳಿಗರ ಗ್ಯಲಕ್ಷ್ಮಿ - ಮಾಯವಾಗಲಿಲ್ಲ, ಆದರೆ ಅದು ಹೊರದೇಶಗಳಿಗೆ ರಫ್ತಾಯಿತು. ತೆಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುವುದರ ಬದಲು ಬಂಡವಾಳ ಷಣೆಯತ್ತ ಮುಖ ಮಾಡಿದ್ದರಿಂದ ಆರ್ಥಿಕ ವ್ಯವಸ್ಥೆ ವ್ಯಾಪಾರೀಕರಣದ ನಾನ್ಸಿಯಲೈಸೇಷನ್) ಕೈಗೊಂಬೆಯಾಯಿತು.

ಎಪ್ಪತ್ತರ ಮುಂಚೆ ಬ್ಯಾಂಕುಗಳು ಬ್ಯಾಂಕುಗಳಾಗಿದ್ದವು. ಬಂಡವಾಳವಾದಿ ಅರ್ಥ ವಸ್ಥೆಯಲ್ಲಿ ಜನ ಕೂಡಿಟ್ಟ ದುಡ್ಡನ್ನು ವಿವೇಕವಾಗಿ ಹೂಡಿ, ಬಂದ ಲಾಭವನ್ನು ಮನೆ, ಕಟ್ಟಿಕೊಳ್ಳಲು, ಮಕ್ಕಳ ವಿದ್ಯಾಭ್ಯಾಸ ಮುಂದುವರಿಸಲು ಸಾರ್ವತ್ರಿಕ ಉಪಯೋಗಕ್ಕೆ ನಕಾಶ ಮಾಡಿಕೊಡುವುದು ಅವುಗಳ ಮುಖ್ಯೋದ್ದೇಶವಾಗಿತ್ತು. ದುರಾಸೆಯಿಂದ ವು ರಾಹುಗ್ರಸ್ತವಾಗಿರಲಿಲ್ಲ. ವಾಸ್ತವವಾಗಿ ಆರ್ಥಿಕ ಬೆಳವಣಿಗೆಯಲ್ಲಿ ಅದೊಂದು ರ್ಣಯಕ ಕಾಲ. ಎಲ್ಲ ವರ್ಗಗಳ ಜನ ನಿರಾತಂಕವಾಗಿ ಬದುಕು ನಡೆಸುತ್ತಿದ್ದಂಥ ಕಾಲ.

೧೯೬೦ರ ಸಾಮಾಜಿಕ ಕ್ರಿಯಾಶೀಲತೆ ಅಮೆರಿಕದ ನಿವಾಸಿಗಳಲ್ಲಿ ಸಜ್ಜನಿಕೆಯ ಜ ಬಿತ್ತಿತು. ಆ ಬೀಜ ಮರವಾಗಿ ಬೆಳೆದು ಯಾವುದೇ ಸಿಡಿಲು, ಗುಡುಗು, ರುಗಾಳಿಗಳನ್ನು ಎದುರಿಸಿ ನಿಲ್ಲುವ ಶಕ್ತಿ ಪಡೆದಿದೆ. ದುರದೃಷ್ಟವಶಾತ್, ಎಪ್ಪತ್ತರ ಕದಲ್ಲಿ ಉತ್ಪಾದನೆಯ ಘಟಕಗಳನ್ನು ಹೊರದೇಶಗಳಿಗೆ ರಫ್ತು ಮಾಡಿದ್ದರಿಂದ, ದೇಶದಲ್ಲಿ ಅಡೆತಡೆಗಳಿಲ್ಲದೆ ಬೆಳೆದವು ವಾಣಿಜ್ಯ ಸಂಸ್ಥೆಗಳು ಮಾತ್ರ. ಅವುಗಳು ಹತ್ತಿರುವ ವಿಷ ಅಮೆರಿಕದ ಸಾರ್ವಜನಿಕ ಬದುಕಿಗೆ ದೊಡ್ಡ ಅಪಾಯವಾಗಿ ಣಮಿಸಿದೆ. ದೇಶದ ಸಂಪತ್ತು ಈಗ ವಾಣಿಜ್ಯ ಸಂಸ್ಥೆಗಳ ಕೈಗಾಲಲ್ಲಿ ೀಡೀಕೃತವಾಗಿದೆ. ಈ ಬೆಳವಣಿಗೆಯಿಂದ ಅರ್ಥ ವ್ಯವಸ್ಥೆಗೆ ಯಾವ ಅನುಕೂಲವೂ ಲ್ಲ. ಸಂಪತ್ತಿನ ಕ್ರೋಢೀಕರಣ ಪ್ರತಿಫಲ ಶಕ್ತಿಯ (ಪವರ್) ಕ್ರೋಢೀಕರಣ. ಈ ರ್ಥಕಾರಿ ಪ್ರವೃತ್ತಿ ಜನತೆಯ ಇಚ್ಛಾಶಕ್ತಿಯನ್ನು ದುರ್ಬಲಗೊಳಿಸಿ ಎಲ್ಲ ಜಕೀಯ ಶಕ್ತಿಯನ್ನು ಧನಬಲವಿರುವ ಪ್ರತಿಗಾಮಿ ಸಂಸ್ಥೆಗಳಲ್ಲಿ, ಪ್ರತಿನಿಧಿಗಳಲ್ಲಿ ಂದ್ರೀಕರಿಸುತ್ತದೆ. ಹೀಗಾಗಿ ಪ್ರಜಾಪ್ರತಿನಿಧಿಗಳೆಂದು ನಾಮಕರಣ ಪಡೆದವರು ಣಿಜ್ಯ ಸಂಸ್ಥೆಗಳಿಗೆ, ಅವುಗಳ ಮಾಲೀಕರಿಗೆ ಅನುಕೂಲವಾಗುವಂಥ ಶಾಸನಗಳನ್ನು ರೂಪಿಸುತ್ತಾರೆ. ದೇಶದ ಶೇಕಡ ೯೯ರಷ್ಟು ಸಂಪತ್ತನ್ನು [illegible] ಶೇಕಡ ಒಂದು ಮಂದಿ ತೆರಿಗೆ ಕೊಡದೆ ಸರ್ವ ಸೌಲಭ್ಯಗಳನ್ನು ಪಡೆಯುತ್ತಾರೆ. ತೆರಿಗೆ ಕಟ್ಟುವ ದುಡಿಮೆಗಾರರು ತಮ್ಮ ದೈನಂದಿನ ಬದುಕು ಕಷ್ಟಕರವಾಗುವುದನ್ನು ನಿಸ್ಸಹಾಯಕರಾಗಿ ಪ್ರೇಕ್ಷಿಸುತ್ತಾರೆ. ಅವರು ಈಗ ಎರಡು ಮೂರು ಕೆಲಸಗಳನ್ನು ಹೊಂದಬೇಕು ಅಥವಾ ಹೆಚ್ಚು ಗಂಟೆಗಳನ್ನು ತಮ್ಮ ಕೆಲಸಕ್ಕೆ ಸಮರ್ಪಿಸಬೇಕು. ಅವರು ಕಷ್ಟಪಟ್ಟು ಕೂಡಿಟ್ಟ ಹಣ ಮಾಯವಾಗುತ್ತಿದ್ದಂತೆ, ಕ್ರೆಡಿಟ್ ಕಾರ್ಡ್‌ಗಳ ಮಾಯಾವಿತನಕ್ಕೆ ಮರುಳಾಗಿ ಬಂಡವಾಳಶಾಹಿ ಬ್ಯಾಂಕ್‌ಗಳ ದಾಸರಾಗುತ್ತಾರೆ. ಈ ನಿಸ್ಸಹಾಯಕತೆ, ಈ ಅನ್ಯಾಯ ಕ್ರೋಧವಾಗಿ ಪರಿವರ್ತಿತವಾದಾಗ ಆಕ್ಯುಪೈ ವಾಲ್ ಸ್ಟ್ರೀಟ್‌ನಂಥ ಪ್ರತಿಕ್ರಿಯೆಗಳು ಜನ್ಮ ತಾಳುತ್ತವೆ.

ಕ್ಷಣ ಕ್ಷಣಕ್ಕೆ ಗಟ್ಟಿಯಾಗುತ್ತಿರುವ ಜನಸಾಮಾನ್ಯರನ್ನು ಪ್ರತಿಭಟನೆಗೆ ನಿರ್ವೀರ್ಯ ಗೊಳಿಸಲು ವಾಷಿಂಗ್‌ಟನ್‌ನ ತಂತ್ರಗಾರರು ನಿರ್ಮಿಸಿರುವ ಗುಂಡಿಯ ಹೆಸರು : ದಿ ಡೆಫಿಸಿಟ್ ಕಮಿಷನ್. ಶ್ರೀ ಸಾಮಾನ್ಯನಿಗೆ ರಾಷ್ಟ್ರದ ಹಣ ಕೊರತೆಗಿಂತ ಲಾಭದಾಯಕ, ನೆಮ್ಮದಿಯ ಕೆಲಸವಿರುವಿಕೆ ಮುಖ್ಯ. ಆದರೆ ಇಲ್ಲಿ ಜಾಬ್‌ಲೆಸ್ ಕಮಿಷನ್ ಇಲ್ಲ. ಖಜಾನೆಯ ಖೋತಾ ಕಡಿಮೆ ಮಾಡಲು ಮುಖ್ಯವಾಗಿ ಅನುಸರಿಸಬೇಕಾದ ವಿಧಾನ ಎಂದರೆ ಹಣವುಳ್ಳವರ ಮೇಲೆ ಅವರು ಎಷ್ಟು ಕೊಡಲು ಸಾಧ್ಯವೋ ಅಷ್ಟೆ ತೆರಿಗೆ ಹೇರುವುದು. ಅವರ ವಿಲಾಸಿ, ವೈಭೋಗದ ಹೊರೆಯನ್ನು ಸಾಧಾರಣ ಶ್ರಮಿಕರು ಯಾಕೆ ಹೊರೆಯಬೇಕು ಎನ್ನುವ ಪ್ರಶ್ನೆ ಜನ ಎಲ್ಲೆಡೆ ಕೇಳಬೇಕು.

(ಭಾಷಾಂತರಿಯ ಟಿಪ್ಪಣಿ : ಅಮೆರಿಕದ ಶ್ರೀಮಂತರಿಗೆ ಇಂಬು ಕೊಡುತ್ತಿರುವಲ್ಲಿ ಕ್ರಿಶ್ಚಿಯನ್ ಮೂಲಭೂತವಾದಿಗಳಿಗೆ ಅಗ್ರಸ್ಥಾನ: ಶ್ರೀಮಂತರನ್ನು ಸೃಷ್ಟಿಸುವವ ಭಗವಂತ; ಅವರನ್ನು ಟೀಕಿಸುವುದು ಪರಮಾತ್ಮನಿಗೆ ಅವಮಾನ ಮಾಡಿದಂತೆ.)

ಅಮೆರಿಕವನ್ನು ಮೂವತ್ತು ವರ್ಷಗಳಿಂದ ಕಾಡುತ್ತಿರುವ ಈ ದೀರ್ಘ ದುಸ್ವಪ್ನವನ್ನು ಆ್ಯಡಮ್ ಸ್ಮಿತ್‌ನಂತಹ ಅರ್ಥಶಾಸ್ತ್ರಜ್ಞರು ಶತಮಾನಗಳ ಹಿಂದೆಯೇ ನಿರೀಕ್ಷಿಸಿದ್ದರು. ಸ್ಮಿತ್ ಹೇಳುವುದು ಇಂಗ್ಲೆಂಡಿನ ವರ್ತಕರು ಮತ್ತು ಉದ್ಯಮಿಗಳು ತಮ್ಮ ವ್ಯವಹಾರಗಳನ್ನು ವಸಾಹತುಗಳಿಗೆ ಸ್ಥಳಾಂತರಿಸಿದರೆ, ಅವರ ಲಾಭಾಂಶ ನಿರ್ವಿವಾದವಾಗಿ ಅಧಿಕಗೊಳ್ಳುತ್ತದೆ. ಆದರೆ ದೇಶಕ್ಕೆ ನಷ್ಟ ಎಂದು. ಇದೇ ಅಮೆರಿಕದಲ್ಲಿರುವ ವಸ್ತುಸ್ಥಿತಿ. ಜಾಗತೀಕರಣ ಶ್ರೀಮಂತರನ್ನು ಅತಿ ಶ್ರೀಮಂತರನ್ನಾಗಿಸಿದೆ. ಬಡವರನ್ನು ಇನ್ನಷ್ಟು ಬಡವರನ್ನಾಗಿಸಿದೆ. ಇದೆಲ್ಲದರ ಕಣ್ಣಿಗೆ ರಾಚುವ ಪರಿಣಾಮ ಅಂದರೆ ''ಪ್ರಿಕೇರಿಯಟ್'' ಎನ್ನುವ ಒಂದು ಸಂಪೂರ್ಣ ಹೊಸವರ್ಗದ ಉದಯ. ಪ್ರಿಕೇರಿಯಟ್‌ಗಳು ಬದುಕಿನ ಅಂಚಿನಲ್ಲಿ ಸಾವರಿಸಿಕೊಂಡು ಹೋಗುವ ಜನ. ದೊಡ್ಡ ಉದ್ಯಮಗಳು, ವಾಣಿಜ್ಯ ಸಂಸ್ಥೆಗಳು ಮುಳುಗುತ್ತಿರುವಾಗ ಅವರನ್ನು ಮೇಲೆತ್ತಲು ಪ್ರಿಕೇರಿಯಟ್ ತರಹ ತೆರಿಗೆ, ದುಡಿಮೆ ಬೇಕು. ಅವರೇ ಮುಳುಗುತ್ತಿರುವಾಗ ದುಡ್ಡಿದ್ದವರ ಸರಕಾರಕ್ಕೆ ಯಾವ ಮುಜುಗರವೂ ಇಲ್ಲ.

ಕೆಲಸಗಾರರ ಉಳಿವು ಉದ್ದೇಶಪೂರ್ವಕವಾಗಿ ಉದ್ಯಮಗಳನ್ನು ನಿಷ್ಕ್ರಿಯಗೊಳಿಸುವ ಬಂಡವಾಳಶಾಹಿಗಳನ್ನು ಎದುರಿಸುವುದೇ ಆಗಿದೆ. ನಷ್ಟದಲ್ಲಿ ನಡೆಯುತ್ತಿರುವ, ಮುಚ್ಚುತ್ತಿರುವ ಪ್ರಾಥಮಿಕ ಉತ್ಪನ್ನ ಕಾರ್ಖಾನೆಗಳನ್ನು ಉದ್ಯೋಗಿಗಳೇ ನಡೆಸಬೇಕು. ವಾಹನ ನಿರ್ಮಾಣ ಕೇಂದ್ರಗಳನ್ನು ಮತ್ತು ಬ್ಯಾಂಕ್‌ಗಳನ್ನು ಸರ್ಕಾರದ ವತಿಯಿಂದ ಒಬಾಮಾ ಉದಾಹರಿಸಿದ್ದಾರೆ. ಆ ಉದ್ಯಮಗಳ ಒಡೆಯರು ಕಾರ್ಮಿಕರೇ ಆಗಿರಬಹುದಿತ್ತು.

ಅತ್ಯಂತ ಶಕ್ತಿವಂತ, ಶ್ರೀಮಂತ ರಾಷ್ಟ್ರವೆನಿಸುವ ಅಮೆರಿಕದಲ್ಲೇ ಸಂಗತಿ ಹೀಗಿರುವಾಗ, ಉಳಿದ ದೇಶಗಳ ಪರಿಸ್ಥಿತಿಯನ್ನು ಊಹಿಸಿಕೊಳ್ಳುವುದು ಕಷ್ಟವೇನಲ್ಲ. ನಮಗೆದುರಾಗಿರುವ ಸಮಸ್ಯೆಗಳನ್ನು ನಾವು ಪ್ರಾಪಂಚಿಕವಾಗಿ ಎದುರಿಸಬೇಕು. ಕಾರ್ಲ್ ಮಾರ್ಕ್ಸ್ ಹೇಳಿದಂತೆ, ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ ಅದನ್ನು ಬದಲಿಸುವುದು ಮುಖ್ಯ. ನಾವು ಯಾವ ದಿಕ್ಕಿನಲ್ಲಿ ಮುಂದುವರಿಯ ಬೇಕೆಂದು ತೀರ್ಮಾನಿಸುವುದೂ ಅಷ್ಟೇ ಮುಖ್ಯ. ಆರ್ಥಿಕ ಮತ್ತು ಮಾನಸಿಕ ಭದ್ರತೆಗೆ ಈ ಚಳುವಳಿಯ ವ್ಯಾಪ್ತಿ ಅಮೆರಿಕದಿಂದ ಪೂರ್ಣ ಪ್ರಪಂಚಕ್ಕೆ ಹಬ್ಬಬೇಕು.

(ಇತ್ತೀಚೆಗೆ ಅಮೆರಿಕದ ಸುಪ್ರಸಿದ್ಧ ಭಾಷಾ ವಿಜ್ಞಾನಿ ಮತ್ತು ಚಿಂತಕ ನೋಮ್ ಚೋಮ್ಸ್ಕಿ ನ್ಯೂಯಾರ್ಕ್‌ನಲ್ಲಿ ಮಾಡಿದ ಹವರ್ಡ್ ಜಿನ್ ಸ್ಮಾರಕ ಉಪನ್ಯಾಸದ ಸಂಕ್ಷಿಪ್ತ ಭಾಷಾಂತರ.)

ದಿನೇಶ್ ಹಾಸನ್
ನಂ. ೮೨೨, ಸ್ಟಬ್ಸ್ ಮಿಲ್ಸ್ ರೋಡ್, ಲೆಬನಾನ್, ಒಹಾಯೊ - ೪೫೦೩೬ ಯು.ಎಸ್.ಎ



ಬಿಡುವಿಲ್ಲದ ಕೋರ್ಟುಗಳು

ತುಂಬುತಿದೆ ವೇಗದಲಿ ತಿಹಾರ ಜೈಲು ಜನ ನಾಯಕರಿಂದ,
ದೂರವಿಲ್ಲ ಆ ದಿನ ಪರಪ್ಪನ ಅಗ್ರಹಾರವೂ ತುಳುಕುವುದು ಪುಢಾರಿಗಳಿಂದ !
ಪಾರ್ಟಿಗಳು ಒಬ್ಬರ ಮೇಲೊಬ್ಬರು ರಾಡಿ ಎರಚುತ್ತ ಕಳೆಯುತ್ತಿವೆ ಕಾಲ,
ಕೋರ್ಟುಗಳಿಗೆ ಬಿಡುವೇ ಇಲ್ಲ, ಬೆಳೆಯುತ್ತಿದೆ ಕೇಸುಗಳ ಬಾಲ !!

ಡಿ. ಟಿ. ಲೋಟಿತ್

ಸಿ. ಆರ್. ಕೃಷ್ಣರಾವ್

ನ್ಯಾಯಾಧೀಶ, ವಕೀಲ, ಪತ್ರಕರ್ತ, ಸಾಹಿತಿ, ಪ್ರಗತಿಪರ ಚಿಂತಕ ಕೋ. ಚೆನ್ನಬಸಪ್ಪ ಅವರದು ಸಾರ್ಥಕ ಬದುಕು. 'ಕೋಚೆ' ಎಲ್ಲರಿಗೂ ಪರಿಚಿತವಾಗಿರುವ ತೊಂಬತ್ತರ ಹರೆಯದವರು. ಇವರ ಜೀವನೋತ್ಸಾಹ, ಜನಪರ ಚಳವಳಿಗಳಲ್ಲಿ ತೋರುವ ಆಸಕ್ತಿ, ಸರಕಾರದ ಜನವಿರೋಧಿ ನೀತಿಗಳಿಗೆ ಪ್ರತಿಕ್ರಿಯಿಸುವ ರೀತಿ, ಕನ್ನಡ ಭಾಷೆ ಬಗ್ಗೆ ಕಾಳಜಿ, ಸ್ನೇಹಪರತೆ ಆದರ್ಶಪ್ರಾಯ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಅಂದಿನ ಬ್ರಿಟಿಷ್ ಸಾಮ್ರಾಜ್ಯದ ಆಡಳಿತೆಯ ಮದರಾಸು ಪ್ರಾಂತದ ಕಟ್ಟಕಡೆಯ ಕುಗ್ರಾಮ ಆಲೂರಿನಲ್ಲಿ ಜನಿಸಿದ (೧೯೨೨) ಇವರು ಜಿಲ್ಲೆಯ ರಾಜಕೀಯ, ಸಾಂಸ್ಕೃತಿಕ ಜೀವನದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದು ರಾಜಧಾನಿ ಬೆಂಗಳೂರಿಗೆ ಸೆಷನ್ಸ್ ನ್ಯಾಯಾಧೀಶರಾಗಿ ಬಂದು ನೆಲೆಸಿ ಹತ್ತಿರ ಹತ್ತಿರ ಅರ್ಧ ಶತಮಾನ. ಈಗಲೂ ಕ್ರಿಯಾಶೀಲರಾಗಿರುವ ಕೋ. ಚೆನ್ನಬಸಪ್ಪ ಅವರನ್ನು 'ಹೊಸತು' ವಿಶೇಷ ಸಂಚಿಕೆಗಾಗಿ ಸಂದರ್ಶಿಸಲಾಯಿತು. ಸಂದರ್ಶನದಲ್ಲಿ ಸಂಪಾದಕರಾದ ಡಾ|| ಜಿ. ರಾಮಕೃಷ್ಣ, ಸಹ ಸಂಪಾದಕರುಗಳಾದ ಸಿ. ಆರ್. ಕೃಷ್ಣರಾವ್, ಕೆ. ಪಿ. ಸ್ವಾಮಿ ಭಾಗವಹಿಸಿದ್ದರು.



ಕನ್ನಡ ಶಾಲೆಗಳನ್ನು ಉಳಿಸಲು ಕನ್ನಡ ಜನ ಮುಂದೆ ಬರಬೇಕು

– ಹಿರಿಯ ಮುತ್ಸದ್ದಿ ಕೋ. ಚೆನ್ನಬಸಪ್ಪ

ಹೊಸತು : ನಿಮ್ಮ ಬಳ್ಳಾರಿ ದಿನಗಳ ಬಗ್ಗೆ ತಿಳಿಸಿ.

ಕೋ. ಚೆನ್ನಬಸಪ್ಪ: ನನ್ನ ಪ್ರಾಥಮಿಕ ವಿದ್ಯಾಭ್ಯಾಸವೆಲ್ಲ ಬಳ್ಳಾರಿಯ ಸರಕಾರಿ ಶಾಲೆಯಲ್ಲಿ, ತೆಲುಗುಮಾಧ್ಯಮ ಶಾಲೆಯಾದರೂ ಕನ್ನಡ ತರಗತಿಗಳಿದ್ದವು. ಇಂಟರ್ ಓದಿದ್ದು ಅನಂತಪುರದಲ್ಲಿ. ಬಳ್ಳಾರಿಯಲ್ಲಿ ಕಾಲೇಜು ಇರಲಿಲ್ಲ. ಲಾ ಓದಿದ್ದು ಬೆಳಗಾವಿಯಲ್ಲಿ. ಅಲ್ಲಿ ಇಂಟರ್ ಓದಿದ್ದರೆ ಲಾ ಓದಲೂ ಅವಕಾಶವಿತ್ತು. ಬೇರೆಕಡೆಗಳಲ್ಲಿ ಪದವೀಧರರಾಗಿರಬೇಕಿತ್ತು. ನನಗೆ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಎಂ.ಎ ಮುಗಿಸಲು ಅನುಕೂಲವಿತ್ತು. ಅನಂತಪುರದಲ್ಲಿ ಇಂಟರ್ ಓದುತ್ತಿರುವಾಗ ನಾನು ವಿದ್ಯಾರ್ಥಿ ಫೆಡರೇಶನ್ನಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಲಾ ಮುಗಿಸಿದ ಮೇಲೆ ಬಳ್ಳಾರಿಗೆ ಹಿಂದಿರುಗಿ ವಕೀಲಿ ವೃತ್ತಿ ಪ್ರಾರಂಭಿಸಿದೆ. ನಮ್ಮ ಮನೆಮಾತು ಕನ್ನಡ. ಬಳ್ಳಾರಿಯಲ್ಲಿದ್ದಾಗ ತೆಲುಗು ಮಾತಾಡಲು ಬರುತ್ತಿತ್ತು , ಅನಂತಪುರಕ್ಕೆ ಹೋದಮೇಲೆ ತೆಲುಗು ಓದಲು, ಬರೆಯಲು ಕಲಿತೆ. ಬಳ್ಳಾರಿಯಲ್ಲಿ ವ್ಯವಹಾರವೆಲ್ಲ ಕನ್ನಡದಲ್ಲೆ.

ಹೊ : ನೀವು ರೈತ ಪತ್ರಿಕೆ ಪ್ರಾರಂಭಿಸಿದ್ದು ಯಾವಾಗ ? ಪತ್ರಿಕೆ ಪ್ರಾರಂಭಿಸಿದ್ದರ ಉದ್ದೇಶವೇನು ?

ಕೋ. ಚೆ. : ರೈತ ವಾರಪತ್ರಿಕೆ ಪ್ರಾರಂಭಿಸಿದ್ದು ೧೯೪೮ರಲ್ಲಿ. ರೈತರ ಸಮಸ್ಯೆಗಳನ್ನು ಪ್ರಚುರಪಡಿಸುವುದು, ರೈತರ ಹಿತ ಕಾಪಾಡುವುದು ನನ್ನ ಉದ್ದೇಶವಾಗಿತ್ತು. ಅಂಥ ಪತ್ರಿಕೆ ಯಾವುದೂ ಇರಲಿಲ್ಲ. ಮುಂಬಯಿ ಸರಕಾರ 'ಒಕ್ಕಲಿಗ' ಎನ್ನುವ ರೈತ ಮಾಸಪತ್ರಿಕೆ ಪ್ರಕಟಿಸುತ್ತಿತ್ತು. ನಾನು ವೃತ್ತಿಯಲ್ಲಿ ವಕೀಲನಾಗಿದ್ದುದರಿಂದ ನೇರವಾಗಿ ಸಂಪಾದಕ, ಪ್ರಕಾಶಕ ಎಂದು ಘೋಷಿಸಿಕೊಳ್ಳಲಾಗಲಿಲ್ಲ. ಇನ್ನೊಂದು ವೃತ್ತಿ ಮಾಡುವುದಕ್ಕೆ ಕಾನೂನಿನ ಅಡ್ಡಿ ಇತ್ತು. ಈಗಲೂ ಇದೆ. ಹಾಗಾಗಿ ನಾನು ಗೌರವ ಸಂಪಾದಕ, ಪ್ರಕಾಶಕ ಎಂದು ಕರೆದುಕೊಳ್ಳಬೇಕಾಯಿತು. ಪತ್ರಿಕೆ ೧೯೬೨ರವರೆಗೆ ನಡೆಯಿತು. ರೈತರ ಸಮಸ್ಯೆಗಳ ಜೊತೆಗೆ, ಪತ್ರಿಕೆ ಕರ್ನಾಟಕ ಏಕೀಕರಣ ಚಳವಳಿಗೆ ಸಾಕಷ್ಟು ಪ್ರಚಾರ ನೀಡಿತು.

ಹೊ : ನೀವು ನ್ಯಾಯಾಂಗ ಪ್ರವೇಶಿಸಿದ್ದು ಯಾವಾಗ ?



ಕೋ. ಚೆ. : ೧೯೬೨ರಲ್ಲಿ ನಾನು ಬಳ್ಳಾರಿ ಜಿಲ್ಲೆಯ ಪಬ್ಲಿಕ್ ಪ್ರಾಸಿಕ್ಯೂಟರ್ ... ನೇಮಕಗೊಂಡೆ. ಆನಂತರ ೧೯೬೫ರಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ನ್ಯಾಯಾಧೀಶನ... ನೇಮಕವಾಗಿ ಬೆಂಗಳೂರಿಗೆ ಬಂದು ನೆಲೆಸಿದೆ. ಹನ್ನೆರಡು ವರ್ಷಗಳು ನಾ... ನ್ಯಾಯಾಂಗದಲ್ಲಿ ಸೇವೆ ಸಲ್ಲಿಸಿದೆ. ಈಗಿನಂತೆ ಆಗ ಪರೀಕ್ಷೆಗಳಿರಲಿಲ್ಲ. ... ನ್ಯಾಯಾಲಯ ಪ್ರಕಟನೆಗೆ ಅರ್ಜಿ ಸಲ್ಲಿಸಿದರೆ ಸಾಕಾಗಿತ್ತು. ವಕೀಲಿ ವೃತ್ತಿಯಲ್ಲಿ ಸಲ್ಲಿ... ಸೇವೆ ಜೊತೆಗೆ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿ ನೀಡಿರುವ ಕಾಣಿಕೆಯನ್ನು ಪರಿಗ... ನ್ಯಾಯಾಂಗದಲ್ಲಿ ನೇಮಕ ಮಾಡಿಕೊಳ್ಳಲಾಗಿತ್ತು.

ಹೊ : ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು ಯಾವಾಗ ?

ಕೋ. ಚೆ. : ನಾನು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳವಳಿಯ... ಭಾಗವಹಿಸುತ್ತಿದ್ದೆ. ವಿದ್ಯಾರ್ಥಿ ಫೆಡರೇಶನ್ನಿನಲ್ಲಿ ಕನ್ನಡದವರು ಹೆಚ್ಚಾಗಿ ಭಾಗವಹಿ... ತ್ತಿದ್ದರು. ಬೇರೆ ವಿದ್ಯಾರ್ಥಿ ಸಂಘಟನೆಗಳಿರಲಿಲ್ಲ. ಬೆಳಗಾವಿಯಲ್ಲೂ ವಿದ್ಯಾ... ಫೆಡರೇಶನ್ನಿನಲ್ಲಿ ಚಟುವಟಿಕೆಗಳು ಮುಂದುವರಿದುವು. ೧೯೩೯ರಿಂದ ನಾ... ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದೆ. ಆಗ ಅಧಿಕಾರದಲ್ಲಿದ್ದ ಕಾಂಗ್ರೆ... ಅಧಿಕಾರ ತ್ಯಾಗ ಮಾಡಿತು. ಅನಂತಪುರದ ಕಾಲೇಜಿನಲ್ಲಿ ಓದುತ್ತಿರುವಾ... ವಿದ್ಯಾರ್ಥಿಗಳು ಮುಷ್ಕರ, ಹೋರಾಟ ನಡೆಸುತ್ತಿದ್ದರು. ಬೆಳಗಾವಿಗೆ ಹೋ... ಮೇಲೂ ಸಹ ವಿದ್ಯಾರ್ಥಿ ಚಳವಳಿಯಲ್ಲಿ ಭಾಗವಹಿಸುತ್ತಿದ್ದೆ. ಕಯ್ಯೂರಿನ ರೈ... ಹೋರಾಟದಲ್ಲಿ ಬಂಧಿತರಾಗಿ ಮರಣದಂಡನೆಗೆ ಗುರಿಯಾಗಿದ್ದ ರೈತರಿಗೆ ಬೆಂಬ... ಸೂಚಿಸಿ ಮುಷ್ಕರ ನಡೆದಿತ್ತು. ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದ... ಪಿ. ಸಿ. ಜೋಶಿಯವರು ಭಾಷಣ ಮಾಡಿದ್ದರು ಆಗ ಬೆಳಗಾವಿಯಲ್ಲಿ. ಆಗಿನಿಂದಲ... ನನಗೆ ಜನಪರ ಹೋರಾಟಗಳೊಂದಿಗೆ ಸಂಪರ್ಕ ಇತ್ತು.

ಹೊ : ಬಳ್ಳಾರಿಯ ಕನ್ನಡ ನಂಟು ಮತ್ತು ಕರ್ನಾಟಕದಲ್ಲಿ ಅದರ ಸೇರ್ಪ... ಬಗ್ಗೆ ತಿಳಿಸಿ.

ಕೋ. ಚೆ. : ಬಳ್ಳಾರಿಯಲ್ಲಿ ಪ್ರತಿವರ್ಷವೂ ನಾಡಹಬ್ಬ ಆಚರಿಸಲಾಗುತ್ತಿತ್ತು. ... ಕನ್ನಡನಾಡಿನ ಸಾಹಿತಿಗಳು ಬಂದು ಭಾಗವಹಿಸುತ್ತಿದ್ದರು. ಅ. ನ. ಕೃಷ್ಣರಾಯ... ಜಿ. ಪಿ. ರಾಜರತ್ನಂ ಮೊದಲಾದವರು ಬರುತ್ತಿದ್ದರು. ಬಳ್ಳಾರಿ, ಮದರಾ... ಪ್ರಾಂತದಲ್ಲಿದ್ದರೂ ಕರ್ನಾಟಕದೊಂದಿಗೆ ಸಾಂಸ್ಕೃತಿಕವಾಗಿ ನಿಕಟಸಂಬ... ಹೊಂದಿತ್ತು. ೧೯೨೧ರಿಂದಲೇ ಬಳ್ಳಾರಿ ಕಾಂಗ್ರೆಸ್ ಕರ್ನಾಟಕಕ್ಕೆ ಸೇರ್ಪಡೆಯಾಗಿ... ಆಗ ಕಾಂಗ್ರೆಸ್ ಸಂಘಟನೆಯನ್ನು ಭಾಷಾವಾರು ಆಧಾರದ ಮೇಲೆ ರಚಿಸಿದಾ... ಕೇಳ್ಕರ್ ಸಮಿತಿ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಸೂಚಿಸಿತ್ತು... ಆದರೆ ಕರ್ನಾಟಕದ ಒತ್ತಾಯದಿಂದ ಅದು ಕರ್ನಾಟಕ ಪ್ರದೇಶ ಕಾಂಗ್ರೆ... ಸುಪರ್ದಿಗೆ ಬಂತು. ದಿವಾಕರ ರಂಗರಾಯರು, ಹರ್ಡೀಕರ್ ಮಂಜಪ್ಪನವ... ಮೊದಲಾದವರು ಇದಕ್ಕಾಗಿ ಶ್ರಮಿಸಿದ್ದರು. ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗ... ಮದರಾಸು ಪ್ರಾಂತದ ಆಡಳಿತಕ್ಕೊಳಪಟ್ಟಿದ್ದರೂ ರಾಜಕೀಯವಾಗಿ, ಸಾಂಸ್ಕೃತಿಕವಾ... ಕರ್ನಾಟಕದೊಂದಿಗೆ ಸಂಬಂಧ ಇರಿಸಿಕೊಂಡಿದ್ದುವು. ಬಳ್ಳಾರಿ ಜಿಲ್ಲೆ ಆಂಧ್ರ... ಸೇರಬೇಕೆಂದು ಮೊದಲಿನಿಂದಲೂ ಒತ್ತಾಯ ಇತ್ತು. ಇದಕ್ಕೆ ಆಂಧ್ರದವ... ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಹಿನ್ನೆಲೆಯನ್ನು ನೀಡಿದ್ದರು. ೧೯೨೮ರ... ಸೈಮನ್ ಕಮೀಶನ್ ಬಂದಿದ್ದಾಗ ಆಂಧ್ರಪ್ರದೇಶ ಸ್ಥಾಪನೆಗೆ ಮನವಿ ಸಲ್ಲಿಸಿದಾ...

...ಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಹೇಳಿದ್ದರು. ...ಳ್ಳಾರಿಯಲ್ಲಿ ಆಂಧ್ರ ಮಹಾಸಭೆಯ ಶಾಖೆಯನ್ನು ...ದಿದ್ದರು. ಕರ್ನಾಟಕದಲ್ಲೇ ಬಳ್ಳಾರಿ ಇರಬೇಕೆಂಬ ...ಗು ಬಲವಾಗಿಯೇ ಇತ್ತು. ಕರ್ನಾಟಕ ...ೀಕರಣಕ್ಕಾಗಿ ಚಳವಳಿಯೂ ನಡೆಯುತ್ತಿತ್ತು. ರಾಜ್ಯ ...ನರ್ವಿಂಗಡಣಾ ಆಯೋಗಕ್ಕೆ ಬಳ್ಳಾರಿ ಜನರ ...ರವಾಗಿ, ಅದು ಕರ್ನಾಟಕಕ್ಕೇ ಸೇರಬೇಕು ಎಂದು ...ನವಿ ನೀಡಲಾಗಿತ್ತು. ಬಳ್ಳಾರಿಯ ಮೂರು ...ಲ್ಲೂಕುಗಳಾದ ಆಲೂರು, ಅದವಾನಿ, ...ಯದುರ್ಗಗಳನ್ನು ಆಂಧ್ರಕ್ಕೆ ಸೇರಿಸಿದ್ದು ಅನ್ಯಾಯ. ...ತೂ ಬಳ್ಳಾರಿ ಕನ್ನಡನಾಡಿನಲ್ಲಿ ಸೇರ್ಪಡೆಯಾದ್ದು ...ಮಗೆಲ್ಲ ಸಂತೋಷ.

ಹೊ: ನೀವು ಪ್ರಗತಿಶೀಲ ಸಾಹಿತ್ಯಕ್ಷೇತ್ರ ...ವೇಶಿಸಿದ್ದು ಯಾವಾಗ ?

ಕೋ. ಚೆ. : ನಾನು ಹೈಸ್ಕೂಲಿನಲ್ಲಿರುವಾಗಲೇ ...ರೆಯತೊಡಗಿದ್ದೆ ೧೯೩೬ರಲ್ಲಿ. ಅನಂತಪುರದಲ್ಲಿ ...ವಾಗಲೆ ನಾನು ಏಕೀಕರಣದ ವಿಚಾರದಲ್ಲಿ ಆಸಕ್ತಿ ...ರಿದ್ದೆ. ಹಿಂದೂಪುರ, ಮಡಕಶಿರ, ಉರುವಕೊಂಡ, ...ತ್ತಿ ಮೊದಲಾದ ಕಡೆಗಳಲ್ಲಿ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿದ್ದರು. ನಾಡಹಬ್ಬದ ...ದರ್ಭಗಳಲ್ಲಿ ಕನ್ನಡ ಸಾಹಿತಿಗಳು ಭಾಗವಹಿಸುತ್ತಿದ್ದರು. ಕನ್ನಡ ಸಾಹಿತ್ಯ ...ಸ್ನೃತಿಗಳ ಕುರಿತು ಮಾಸ್ತಿಯವರು, ಅ. ನ. ಕೃಷ್ಣರಾಯರು ಮೊದಲಾದವರು ...ದು ಭಾಷಣ ಮಾಡುತ್ತಿದ್ದರು. ಹಿರಣ್ಣಯ್ಯನವರ ತಂಡದ ನಾಟಕಗಳನ್ನು ...ಳ್ಳಾರಿಗೆ ಕರೆಸಲಾಗಿತ್ತು. 'ಶರಣ ಸಂದೇಶ' ಎಂಬ ಪತ್ರಿಕೆಯನ್ನು ಹರ್ಡೀಕರ್ ...ಜಪ್ಪನವರು ಪ್ರಕಟಿಸುತ್ತಿದ್ದರು. ಬಳ್ಳಾರಿಯಲ್ಲಿ 'ನವ ಸಂದೇಶ' ಎಂಬ ಪತ್ರಿಕೆ ...ಟವಾಗುತ್ತಿತ್ತು. ನಾನು ಈ ಪತ್ರಿಕೆಗಳಲ್ಲಿ ಬರುತ್ತಿದ್ದ ಲೇಖನಗಳಿಂದ ಪ್ರಭಾವಿತನಾದೆ. ... ಕತೆಗಳನ್ನು ಬರೆಯತೊಡಗಿದೆ. ೧೯೪೫ರಲ್ಲಿ ನಾನು ಪ್ರಗತಿಶೀಲ ಸಾಹಿತ್ಯದ ...ಪರ್ಕಕ್ಕೆ ಬಂದೆ. ಬಸವರಾಜ ಕಟ್ಟೀಮನಿ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ...ಷಾ' ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಅವರು ನನಗೆ ತುಂಬ ಪ್ರೋತ್ಸಾಹ ...ಡಿದರು. ನನ್ನ ಕತೆಗಳನ್ನು ಅವರು ಪ್ರಕಟಿಸಿದ್ದರು. ನಾನು ವೀರ ಸಾವರ್ಕರ್ ...ಗದಿಂದ ತುಂಬ ಪ್ರಭಾವಿತನಾಗಿದ್ದೆ. ಅವರ ಬಗ್ಗೆ ಲೇಖನಗಳನ್ನು ಓದಿದ್ದೆ. ...ಂದು ಕಾಲಘಟ್ಟ. ಅನಂತಪುರದಲ್ಲಿದ್ದಾಗ ಓದಲು ತುಂಬ ಪುಸ್ತಕಗಳು ...ರೆಯುತ್ತಿದ್ದುವು. ಕುವೆಂಪು ಅವರ ಕೃತಿಗಳು, ವಿವೇಕಾನಂದರ ಕೃತಿಗಳು ನನ್ನ ...ಲೆ ಪ್ರಭಾವ ಬೀರಿದ್ದುವು. ಅವು ಒಂದು ರೀತಿಯಲ್ಲಿ ನನಗೆ ಓದುವ ಆಸಕ್ತಿ ...ಸಿದುವು. ಕುವೆಂಪು ಅವರ 'ಪಾಂಚಜನ್ಯ' ತುಂಬ ಪ್ರಭಾವ ಬೀರಿತು. ಬ್ರಿಟಿಷ್



ಗದ್ದಲದಿಂದ ಪ್ರಯೋಜನವಿಲ್ಲ... ಗುದ್ದಾಟ ನಡೆಸಿದ್ರೆ ಮೈ ಚಳಿಯಾದ್ರು ಬಿಡ್ತಿತ್ತು.

ಕಮ್ಯುನಿಸ್ಟ್ ಪಾರ್ಟಿಯ ರಜನಿ ಪಾಮೆ ದತ್ ಬರೆದಿದ್ದ 'ಇಂಡಿಯಾ ಟುಡೇ' ಓದಿ ಪ್ರಭಾವಿತನಾಗಿದ್ದೆ. ಆಂಧ್ರ ಕಮ್ಯುನಿಸ್ಟ್ ನಾಯಕ ರಾಜೇಶ್ವರ ರಾವ್ ... ಅದನ್ನು ಕೊಟ್ಟಿದ್ದರು. ಅದರ ಜೊತೆಗೆ ರಷ್ಯ ಕುರಿತು ಹಲವು ಪುಸ್ತಕಗಳನ್ನು ನೀಡಿದ್ದರು. ಇವೆಲ್ಲ ನನ್ನ ಸಾಹಿತ್ಯಕೃಷಿಗೆ ಪ್ರೇರಕವಾದುವು.

ಹೊ : 'ಬೇಡಿ ಕಳಚಿತು, ದೇಶ ಒಡೆಯಿತು' ಬೃಹತ್ ಕಾದಂಬರಿ ರಚನೆಗೆ ಪ್ರೇರಣೆ ಏನು ?

ಕೋ. ಚೆ. : ೧೯೯೭ರಲ್ಲಿ ಸ್ವಾತಂತ್ರ್ಯೋತ್ಸವದ ಸುವರ್ಣ ಮಹೋತ್ಸವವನ್ನು ದೇಶಾದ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಆಗ ಪಾರ್ಲಿಮೆಂಟಿನಲ್ಲಿ ಹಲವು ಸದಸ್ಯರು ಭಾಷಣ ಮಾಡಿದರು. ಆದರೆ ಅವರಲ್ಲಿ ಯಾರೂ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದವರೂ ಅಲ್ಲ, ಅದರ ಬಗ್ಗೆ ತಿಳಿದುಕೊಂಡವರೂ ಅಲ್ಲ. ಗಾಂಧಿಮಂತ್ರ ಪಠಣ ಮಾಡಿ ಬರೀ ಬುರುಡೆ ಭಾಷಣಗಳಾಗಿದ್ದುವು. ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರ ಕಾಣಿಕೆ ಕುರಿತು ಯಾರೊಬ್ಬರೂ ಸೊಲ್ಲೆತ್ತಲಿಲ್ಲ. ಸಹಸ್ರ ಸಹಸ್ರ ಸಂಖ್ಯೆಯ ಜನಸಾಮಾನ್ಯರ ತ್ಯಾಗ ಬಲಿದಾನಗಳನ್ನು ಸ್ಮರಿಸಿಕೊಳ್ಳುವವರು ಯಾರೂ ಇರಲಿಲ್ಲ. ಅಂಥ ಜನಸಾಮಾನ್ಯರ, ವಂದೇ ಮಾತರಂ ಬಸಕ್ಕನಂಥವರ ತ್ಯಾಗವನ್ನು ಚಿತ್ರಿಸಬೇಕೆನ್ನಿಸಿತು. ಅದಕ್ಕಾಗಿ ಸಾಕಷ್ಟು ಟಿಪ್ಪಣಿ ಮಾಡಿಕೊಂಡೆ. ಬೇಕಾದಷ್ಟು ಆಕರ ಗ್ರಂಥಗಳನ್ನು ಓದಿದೆ. ಈ ಟಿಪ್ಪಣಿಗಳನ್ನು ದಾಖಲೆಯಾಗಿರಿಸಲೇಬೇಕೆಂದು ಗೆಳೆಯರು ಸೂಚಿಸಿದ್ದಾರೆ. ಅದನ್ನು ಮೈಕ್ರೋಫಿಲಂ ಮಾಡಬೇಕೆಂದು ಹೇಳಿದ್ದಾರೆ. ಕಾದಂಬರಿ ರೂಪದಲ್ಲಿ ಬರೆದಿರುವ ಈ 'ಬೇಡಿ ಕಳಚಿತು...' ಪುಸ್ತಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಾಮಾನ್ಯ ಜನರ ಕಾಣಿಕೆಯನ್ನು ಎತ್ತಿ ತೋರಿಸಲು ಪ್ರಯತ್ನಿಸಿದ್ದೇನೆ.

ಹೊ : ನೀವು ನ್ಯಾಯಾಧೀಶರಾಗಿದ್ದಾಗ ನಿಮ್ಮ ಅನುಭವಕ್ಕೆ ಬಂದ ಒಂದೆರಡು ಸ್ವಾರಸ್ಯಕರ ಪ್ರಕರಣಗಳನ್ನು ಕುರಿತು ಹೇಳುತ್ತೀರಾ ?

ಕೋ. ಚೆ. : ನಾನು ಸೆಷನ್ಸ್ ನ್ಯಾಯಾಧೀಶನಾಗಿ ನೇಮಕಗೊಂಡಿರುವ ವಿಷಯವನ್ನು ನನ್ನ ತಾಯಿಯವರಿಗೆ ತಿಳಿಸಿದೆ. ಆಗ ಅವರು ಹೇಳಿದರು, ನೀನು ಅಮಾಯಕರನ್ನು ರಕ್ಷಿಸಿ, ನ್ಯಾಯದ ಪರವಾಗಿ ವಾದಿಸುವುದನ್ನು ಬಿಟ್ಟು ಜನರನ್ನು ಕಾರಾಗೃಹಕ್ಕೆ ಕಳಿಸುತ್ತೀಯ ಎಂದು ಅಸಮಾಧಾನ ವ್ಯಕ್ತಗೊಳಿಸಿದರು. ಮತ್ತೆ ಜಾನಪದ ಗೀತೆಯ ನಾಲ್ಕು ಸಾಲುಗಳನ್ನು ಹೇಳಿ ಮಾನವೀಯ ದೃಷ್ಟಿಯಿಂದ ನ್ಯಾಯದಾನ ಮಾಡಬೇಕು ಎಂದು ಹೇಳಿದರು. ಅವರ ಮಾತುಗಳನ್ನು ನಾನು ತುಂಬ ಯೋಚಿಸಿ ಒಂದು ತೀರ್ಮಾನಕ್ಕೆ ಬಂದೆ. ಆರೋಪಿಯು ಅಪರಾಧ ಎಸಗಿದ್ದಾನೆ ಎಂದು ಸ್ವಲ್ಪವೂ




ಸಂದೇಹವಿಲ್ಲದೆ ಮನವರಿಕೆ ಆಗುವವರೆಗೆ ಶಿಕ್ಷೆ ವಿಧಿಸುವುದಿಲ್ಲ ಎನ್ನುವ ತೀರ್ಮಾನಕ್ಕೆ ಬಂದೆ. ಆಗಲ್ಲ ಸೆಷನ್ಸ್ ನ್ಯಾಯಾಲಯದ ಮುಂದೆ ಬರುತ್ತಿದ್ದುದು ಕ್ರಿಮಿನಲ್ ಪ್ರಕರಣಗಳೇ ಹೆಚ್ಚು. ಈಗಲೂ ಹಾಗೆಯೇ. ಆಗ ವಿಚಾರಣೆಯನ್ನು ಪ್ರತಿದಿನ ನಿರಂತರವಾಗಿ ನಡೆಸಿ ಒಂದು ಪ್ರಕರಣ ಮುಗಿಸುತ್ತಿದ್ದೆವು. ಈಗ ಪರಿಸ್ಥಿತಿ ಬದಲಾಗಿದೆ. ನಾನು ನಿಮಗೆ ಎರಡು ಪ್ರಕರಣಗಳನ್ನು ಕುರಿತು ಹೇಳಬಯಸುತ್ತೇನೆ. ಮೊದಲನೆಯದು ಬೆಂಗಳೂರು-ಗಾಂಧೀನಗರ ಸಬ್ ಪೋಸ್ಟ್‌ಮಾಸ್ಟರ್ ಪ್ರಕರಣ. ಇನ್ನೊಂದು ಬಡವಿಯೊಬ್ಬಳ ಆತ್ಮಹತ್ಯೆ ಪ್ರಯತ್ನದ ಪ್ರಕರಣ.

ಈ ಪೋಸ್ಟ್‌ಮಾಸ್ಟರ್ ಪ್ರಕರಣ ವಿಚಿತ್ರವಾದ್ದು. ಈತ ಉದ್ದೇಶಪೂರ್ವಕವಾಗಿ ಅಪರಾಧ ಎಸಗಿದವನಲ್ಲ, ಆದರೆ ಸಂದರ್ಭಕ್ಕೆ ಸಿಲುಕಿ ಹಾಗೆ ಮಾಡಿದ್ದ. ಈತ ಹಿಂದೆ ಯಾವತ್ತೂ ಹಾಗೆ ಮಾಡಿರಲಿಲ್ಲ. ಈತನ ಸುಪರ್ದಿನಲ್ಲಿ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಬಾಂಡುಗಳಿದ್ದವು. ಅದರ ವ್ಯವಹಾರ ನೋಡಿಕೊಳ್ಳುತ್ತಿದ್ದ. ಯಾವುದೋ ಸಂದರ್ಭದಲ್ಲಿ ಈತ ಬೆಲೆಬಾಳುವ ಎರಡು ಬಾಂಡ್‌ಗಳನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಅಡಮಾನ ಇಟ್ಟು ಹಣಪಡೆದುಕೊಂಡಿದ್ದ. ಸಿಕ್ಕಿಬಿದ್ದು ಈಗ ಅಪರಾಧಿಸ್ಥಾನದಲ್ಲಿ ನನ್ನ ಕೋರ್ಟಿನ ಕಟಕಟೆಯಲ್ಲಿ ನಿಂತಿದ್ದ. ಪಾಪದ ಮನುಷ್ಯ ಇವನ ಪರವಾಗಿ ವಾದಿಸಲು ವಕೀಲರು ಇರಲಿಲ್ಲ. ನಾನೇ ಅವನಿಗೆ ಪ್ರಶ್ನೆಗಳನ್ನು ಹಾಕಿದೆ. ಅವನು ತಾನು ಮಾಡಿದ ಅಪರಾಧವನ್ನು ಒಪ್ಪಿಕೊಂಡ. ಅದೂ ಬಹಿರಂಗ ಕೋರ್ಟಿನಲ್ಲಿ. ನನ್ನ ಮನಸ್ಸು ಇದಕ್ಕೆ ಒಪ್ಪಲಿಲ್ಲ. ಅವನನ್ನು ಛೇಂಬರಿಗೆ ಕರೆಸಿಕೊಂಡು ನಿನ್ನ ಅಪರಾಧದ ಪರಿಣಾಮವೇನು ನಿನಗೆ ಗೊತ್ತೇ ? ಗೊತ್ತು ಸ್ವಾಮಿ. ಶಿಕ್ಷೆಯಾಗುತ್ತೆ ಎಂದ. ನೀನು ಕೆಲಸ ಕಳೆದುಕೊಳ್ಳುತ್ತೀಯ. ಯೋಚಿಸಿನೋಡು ಎಂದು ಹೇಳಿ ಮರುದಿನ ಹಾಜರಾಗುವಂತೆ ಹೇಳಿದೆ. ಮರುದಿನವೂ ಪರಿಸ್ಥಿತಿ ಏನೂ ಉತ್ತಮಗೊಳ್ಳಲಿಲ್ಲ. ಇಬ್ಬರು ಸಾಕ್ಷಿದಾರರನ್ನು ಕರೆಸಿ ವಿಚಾರಣೆ ನಡೆಸಿದೆ. ಪೋಸ್ಟಲ್ ಇಲಾಖೆಯಲ್ಲಿ ಆತನ ರಿಕಾರ್ಡ್ ಚೆನ್ನಾಗಿತ್ತು. ಆದರೂ ಅಪರಾಧ ಎಸಗಿದ್ದ. ಅವನ ಸಂದರ್ಭ ಕುರಿತು ವಿಚಾರಣೆ ನಡೆಸಿದೆ. ಅವನಿಗೆ ಶಿಕ್ಷೆ ವಿಧಿಸದೇ ಬೇರೆ ದಾರಿ



ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಉದ್ಯೋಗ ಕಳೆದುಕೊಳ್ಳುವುದು ಘೋರ ಶಿಕ್ಷೆ ಆಗ ಇದಕ್ಕೆ ಪರಿಹಾರವೇನು ಎಂದು ಯೋಚಿಸಿದೆ. ಪ್ರಾಸಿಕ್ಯೂಟರ್‌ಗೆ ಕಠಿಣ ಶಿಕ್ಷೆ ಸಬೇಕೆಂದು ವಾದಿಸದಿರಲು ಕೇಳಿಕೊಂಡೆ. ವಿಚಾರಣೆ ಮುಗಿಯಿತು. ತೀರ್ಪು ನ ಅವನಿಗೆ ಒಂದು ತಿಂಗಳ ಸಜೆ ವಿಧಿಸಿದೆ. ಅಪರಾಧ ಎಸಗಿದ್ದ ಸಂದರ್ಭ ಸೂಕ್ಷ್ಮದ್ದಾಗಿದ್ದು, ಆತನ ಸರ್ವೀಸ್ ರಿಕಾರ್ಡ್ ಗಮನಿಸಿದ ಮೇಲೆ, ಅಪರಾ ಉಗ್ರಶಿಕ್ಷೆ ನೀಡಿಕೆ ಸರಿಯಾಗದು.ಅವನು ಕೆಲಸ ಕಳೆದುಕೊಳ್ಳುವುದೇ ಕ ಶಿಕ್ಷೆಯಾದೀತು ಎಂದು ಹೇಳಿ ದಂಡ ಏನೂ ವಿಧಿಸದೆ ಕೊನೆಯಲ್ಲಿ ಮಾನವೀ



ಮೋಕ್ಷ

ಕಾಲದ ಬರಸಿಡಿಲು ಬಡಿದು
ಸುಟ್ಟ ಮರದೆದುರು ಕುಳಿತಿದ್ದೇನೆ
ಎಲ್ಲೋ ಒಂದಿಷ್ಟು ಉಸಿರು ಉಳಿದಿರಬಹುದು
ಹಸಿರ ಹಸಿ ಒಳಗಿರಬಹುದು
ಚಿಟ್ಟೆಯೊಂದರ ಮೊಟ್ಟೆ ತಪ್ಪಿ ಉಳಿದಿರಬಹುದು
ಅರೆಪಕ್ಕದ ಹಕ್ಕಿ ಗೂಡಿಗಾಗಿ ಹುಡುಕುತಿರಬಹುದು

ಈ ಸನಾತನದ ಮರದ ಎದೆಯೊಳಗೆ
ಬಿದ್ದ ಗೊರಲಿಯ ಮಣ್ಣೇ ಈಗ
ಇದರ ವಂಶದ ಕನಸಾಗಿರಬಹುದು
ಆಶಯ,ಅನ್ವೇಷಣೆ ಎಲ್ಲ ಆಗಲೂಬಹುದು
ಹದ್ದು ಹಾರಾಡುತ ಬಂದು ಉಚ್ಚೆ ಹೊಯ್ದರೂ
ಮತ್ತೆ ಹಸುರಾಗಬಹುದೇ ಮರ ?
ಹೀಗೆ ಕರುಣಿಸಬಹುದೇ
ಕರುಣಾಳು ಭಗವಂತ ಒಂದು ವರ ?

ಮರ ಸುಟ್ಟಿದೆ ಭಯವಿಲ್ಲ, ಆದರೆ
ಅಯ್ಯೋ
ನಿಂತ ನೆಲದ ಹಸಿಗೆ ಅಭಯವಿಲ್ಲ

ನಾನು ಹೀಗೆಯೇ ಕುಳಿತಿರುತ್ತೇನೆ
ಕನಿಷ್ಠ ಕನಿಷ್ಠ
ಈ ದೇಶದ ಕೋಟಿ ಕೋಟಿ
ಹೆಣ ಹೊತ್ತೊಯ್ದು ಮೋಕ್ಷ ಕಾಣಿಸಿದ ಗಂಗೆ
ಒಂದು ದಿನ ದಾರಿ ತಪ್ಪಿ ಬಂದು
ಈ ಮರವನ್ನು ಹೊತ್ತೊಯ್ದು
ಯಾವುದೋ ಯಜ್ಞಕುಂಡಕ್ಕೆ
ಆಹುತಿಯಾಗಿಸಿ ಮೋಕ್ಷ ನೀಡುವವರೆಗೆ

ಡಾ|| ರಾಜಶೇಖರ ಮಠಪತಿ

...ಷ್ಟರಿಂದ ಆತನನ್ನು ಕೆಲಸಕ್ಕೆ ಪುನರ್ನೇಮಕ ಮಾಡಿಕೊಳ್ಳಲು ಇಲಾಖೆಗೆ ...ಚಿಸಿದೆ. ಈ ಪ್ರಕರಣ ಮುಗಿದ ಎಷ್ಟೋ ವರ್ಷಗಳ ಮೇಲೆ ಯಾವುದೋ ಪುಸ್ತಕ ...ಗೆಯಲ್ಲಿ ಆತನನ್ನು ಆಕಸ್ಮಾತ್ ಭೇಟಿಯಾದೆ. ಆತ ಅತ್ಯಂತ ವಿನಯದಿಂದ ನಾನು ...ಂಡಿದ್ದ ಪುಸ್ತಕವನ್ನು ತಂದು ಕಾರಿನ ಬಳಿಗೆ ಬಂದು ಕೈಮುಗಿದ. ಪರಿಚಯ ...ಡಿಕೊಂಡ. ಪೋಸ್ಟ್ ಮಾಸ್ಟರ್ ಎಂದು ಗೊತ್ತಾಯಿತು. ಪುನರ್ನೇಮಕ ...ಗಿದೆಯೇ ಎಂದು ಕೇಳಿದೆ. ನಮ್ರತೆಯಿಂದ ಹೌದೆಂದ. ಪ್ರಾಯಶಃ ಶಿಕ್ಷೆಗೆ ...ರಿಯಾಗಿದ್ದ ಅಪರಾಧಿಯೊಬ್ಬ ಸರಕಾರಿ ಉದ್ಯಮದಲ್ಲಿ ಪುನರ್ನೇಮಕಗೊಂಡ ...ರಣ ಇದೊಂದೇ ಇರಬೇಕು ಎಂದುಕೊಂಡೆ.

ಇನ್ನೊಂದು ಪ್ರಕರಣ ಬಡ ಹೆಣ್ಣೊಬ್ಬಳ ಗೋಳಿನ ಕತೆ. ಈಕೆ ತನ್ನ ಮಗುವನ್ನೇ ...ಂದ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದಳು. ಈಕೆ ತೀರಾ ಬಡತನದಲ್ಲಿದ್ದಳು. ...ಡು ಮಕ್ಕಳ ತಾಯಿ. ಆತ್ಮಹತ್ಯೆಗೆ ಪ್ರಯತ್ನಿಸಿದ್ದ ಈಕೆ ಬಚಾವಾಗಿದ್ದಳು. ಒಂದು ...ಗು ಮಾತ್ರ ಬಾವಿಯಲ್ಲಿ ಮುಳುಗಿ ಅಸುನೀಗಿತ್ತು. ಇದೂ ಉದ್ದೇಶಪೂರ್ವಕವಾಗಿ ...ಗಿದ ಅಪರಾಧವಲ್ಲ. ಆತ್ಮಹತ್ಯೆ ಪ್ರಯತ್ನ ಮೊದಲನೆ ಅಪರಾಧ. ಶಿಶುವಿನ ಹತ್ಯೆ ...ಲೆ ಪ್ರಕರಣ. ಏನು ಮಾಡಬೇಕು. ಈಕೆಯನ್ನು ಪ್ರಕರಣ ಕುರಿತು ಪ್ರಶ್ನಿಸಿದರೆ ...ಗಿದ ಅಪರಾಧ ಒಪ್ಪಿಕೊಳ್ಳುತ್ತಿದ್ದಾಳೆ. ಈಕೆಯ ಪರವಾಗಿ ವಾದಿಸಲು ...ಯಾಲಯದಿಂದಲೇ ವಕೀಲರನ್ನು ನೇಮಿಸಲಾಯಿತು. ನನ್ನ ಮನಸ್ಸಿಗೆ ಆಕೆಯನ್ನು ...ಗೆ ಗುರಿಪಡಿಸುವುದು ಸರಿಯಲ್ಲ ಎನಿಸಿತ್ತು. ಆದರೆ ಪರಿಸ್ಥಿತಿಯನ್ನು ಹೇಗೆ ...ಾಯಿಸುವುದು. ಬಡತನ ಏನೇನು ಮಾಡುತ್ತೆ ನೋಡಿ. ಆಕೆಯ ಪರ ವಾದಿಸಲು ...ಮಕಗೊಂಡಿದ್ದ ವಕೀಲರನ್ನು ಕರೆಸಿಕೊಂಡು ಇಡೀ ಪ್ರಕರಣವನ್ನು ಅಪಘಾತ ...ದು ವಾದಿಸುವಂತೆ ತಿಳಿಸಿ, ಆಕೆ ನಿರಪರಾಧಿ ಎಂದು ಸಾಬೀತು ಮಾಡಬೇಕೆಂದು ...ಚಿಸಿದೆ. ಪ್ರಕರಣ ಹಾಗೇ ಮುಗಿಯಿತು.

ಹೊ : ಕನ್ನಡ ಶಾಲೆಗಳನ್ನು ಮುಚ್ಚುವ ಸರಕಾರದ ನಿರ್ಧಾರ ಕುರಿತು ನಿಮ್ಮ ...ಸಿಕೆ ಏನು ?

ಕೋ. ಚಿ. : ಸರಕಾರದ ಈ ನಿರ್ಧಾರ ನಿಜಕ್ಕೂ ಖಂಡನೀಯ. ಇದು ಇಂಗ್ಲಿಷ್ ಶಾಲೆಗಳಿಗೆ ಅನುವು ಮಾಡಿಕೊಡುವ ಹುನ್ನಾರ. ಒಬ್ಬನೇ ವಿದ್ಯಾರ್ಥಿ ಇದ್ದರೂ ಕೂಡ ಶಾಲೆ ನಡೆಸುವುದು ಸರಕಾರದ ಜವಾಬ್ದಾರಿ ಹಾಗೂ ಕರ್ತವ್ಯ. ಬಳ್ಳಾರಿಯಲ್ಲಿ ನಾನು ಓದುತ್ತಿರುವಾಗಲೇ ಬ್ರಿಟಿಷರ ಆಳ್ವಿಕೆಯಲ್ಲಿ ಅಂಥ ನೀತಿ ಇತ್ತು. ಒಬ್ಬನೇ ಕನ್ನಡ ವಿದ್ಯಾರ್ಥಿ ಇದ್ದರೂ ಕೂಡ ಆಗ ಒಬ್ಬನಿಗೇ ತರಗತಿ ನಡೆಸುತ್ತಿದ್ದರು. ಇಂಗ್ಲಿಷಿನ ವ್ಯಾಮೋಹ ನೌಕರಿ ದೊರಕಿಸಿಕೊಳ್ಳುವ ಉದ್ದೇಶದಿಂದ. ಆದರೆ ಶಿಕ್ಷಣದ ಉದ್ದೇಶ ಅದಲ್ಲ. ಉತ್ತಮ ನಾಗರಿಕನನ್ನಾಗಿ ಮಾಡುವುದು ಗುರಿಯಾಗಬೇಕು.

ಬಳ್ಳಾರಿಯ ಹೆಣ್ಣುಮಕ್ಕಳ ಪ್ರೌಢಶಾಲೆಯಲ್ಲಿ ೧೯೪೫ರಲ್ಲಿ ಕನ್ನಡ ವಿಭಾಗ ಇರಲಿಲ್ಲ. ಶಿಕ್ಷಣ ಇಲಾಖೆಯಲ್ಲಿ ವಿಚಾರಿಸಿದಾಗ ಕನಿಷ್ಠ ೧೬ ವಿದ್ಯಾರ್ಥಿನಿಯರು ಕನ್ನಡ ಕಲಿಯುವುದಿದ್ದರೆ ಕನ್ನಡ ವಿಭಾಗ ಪ್ರಾರಂಭಿಸಲು ಅಡ್ಡಿಯಿಲ್ಲ ಎಂದರು. ಆಗಲೇ ಅಲ್ಲಿ ಇಂಗ್ಲಿಷ್ ವ್ಯಾಮೋಹ ತಲೆಹಾಕಿತ್ತು. ಎಲ್ಲರೂ ಇಂಗ್ಲಿಷ್ ಮೀಡಿಯಮ್‌ಗೇ ಮಾರು ಹೋಗಿದ್ದರು. ಆಗ ನಾವು ಕೆಲವರು ಮನೆಮನೆಗೆ ಹೋಗಿ ಹೆಣ್ಣು ಮಕ್ಕಳಿಗ ಕನ್ನಡ ಕಲಿಸಲು ವಿನಂತಿ ಮಾಡಿಕೊಂಡೆವು. ಕನಿಷ್ಠ ಹೆಣ್ಣು ಮಕ್ಕಳಿಗೆ ದಾಸರ ಪದಗಳು, ವಚನಗಳನ್ನು ಓದಲಾದರೂ ಕನ್ನಡ ಕಲಿಸಬೇಕಲ್ಲವೆ ಎಂದು ಒತ್ತಾಯ ಮಾಡಿ, ಕೊನೆಗೂ ೧೬ ಬಾಲಕಿಯರನ್ನು ಕಲೆಹಾಕಿದೆವು. ತರಗತಿ ಪ್ರಾರಂಭಿಸಿ ಕನ್ನಡ ಶಿಕ್ಷಕರನ್ನೂ, ಪಠ್ಯಪುಸ್ತಕಗಳನ್ನೂ ಒದಗಿಸುವವರೆಗೆ ಬಿಡಲಿಲ್ಲ. ಇವತ್ತು ಕರ್ನಾಟಕದಲ್ಲಿ ಅಂಥ ಕೆಲಸ ಆಗಬೇಕಾಗಿದೆ. ಸರಕಾರದ ಕೆಲಸ ಸರಕಾರ ಮಾಡಲಿ. ನಾವು ನಮ್ಮ ಕೆಲಸ ಮಾಡಬೇಕು. ಮಕ್ಕಳಿಗೆ ಕನ್ನಡ ಶಿಕ್ಷಣ ನೀಡಿಕೆಯ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಬೇಕು. ಅದಕ್ಕಾಗಿ ಜನ ಮುಂದೆ ಬರಬೇಕು. ಕನ್ನಡ ಉಳಿಸಬೇಕಾದರೆ ಈ ಕೆಲಸ ಆಗಲೇಬೇಕು.

ಪಿ. ಆರ್. ಕೃಷ್ಣರಾವ್
'ಚೌಬೀನ', ೮೪೯, ೬ನೇ ಕ್ರಾಸ್, ಬನಶಂಕರಿ ೩ನೇ ಹಂತ, ೩ನೇ ಬ್ಲಾಕ್, ಕತ್ರಿಗುಪ್ಪೆ, ಬೆಂಗಳೂರು - ೮೫

ಸುಸ್ತಾದ ಭಾರತ ! ಭ್ರಷ್ಟಾಚಾರದ ತಾಯಿಬೇರು ಚುನಾವಣೆ ಪ್ರಕ್ರಿಯೆಗಳಲ್ಲಿ !

ವಿಷ್ಣು ನಾಯ್ಕ




ನಮ್ಮ ಸಂವಿಧಾನದ ೩೨೪ರಿಂದ ೩೨೯ರವರೆಗಿನ ವಿಧಿಗಳು ುನಾವಣಾ ಆಯೋಗ ಮತ್ತು ಅದರ ನೀತಿ-ನಿಯಮಗಳ ಬಗ್ಗೆ ವರಿಸುತ್ತವೆ. ಚುನಾವಣೆಯಲ್ಲಿ ಕಾರ್ಯಾಂಗದ ಹಸ್ತಕ್ಷೇಪವನ್ನು ೂದಲೇ ಊಹಿಸಿದ ಸಂವಿಧಾನ ಸಭೆಯ ಕೆಲವು ಸದಸ್ಯರು, ಹಾಗೆ ಸ್ತಕ್ಷೇಪ ಮಾಡಿದಲ್ಲಿ ಅದು ಮೂಲಭೂತ ಹಕ್ಕುಗಳ ಉಲ್ಲಂಘನೆ ಂದು ಭಾವಿಸುವಂತೆ ಸಲಹೆ ಮಾಡಿದ್ದರು. ದುರ್ದೈವದಿಂದ ಜ್ಯಾಂಗ ಸಭೆಯಲ್ಲಿದ್ದ ಅಂದಿನ ಕೆಲವು ಪ್ರಭಾವೀ ಸದಸ್ಯರು ಆ ಲಹೆಯನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅದರ ಪರಿಣಾಮವಾಗಿ ಲವು ಎಡಪಂಥೀಯ ಸದಸ್ಯರ ಅಂದಿನ ಈ ಪ್ರಸ್ತಾವನೆಗೆ ಬೆಲೆ, ನ್ನಣೆ ಸಿಗಲಿಲ್ಲ. ಆ ಅಂದಿನ ಸಂವಿಧಾನ ಸಭೆಯ ತಪ್ಪು ನಿರ್ಧಾರಕ್ಕೆ ಾರತ ಈಗಾಗಲೇ ಸಾಕಷ್ಟು ಬೆಲೆ ತೆತ್ತಾಗಿದೆ. ಈಗಂತೂ ಅದು ರಾಕಾಷ್ಠೆಯ ನೆಲೆಗೆ ಬಂದು ನಿಂತಿದೆ.

ಒಂದು ಕಾಲ ಇತ್ತು: ಪ್ರತಿ ೫ ವರ್ಷಗಳಿಗೊಮ್ಮೆ ಚುನಾವಣೆಗಳು ದುರಾಗುತ್ತಿದ್ದವು. ಲೋಕಸಭೆಗೂ ವಿಧಾನಸಭೆಗೂ ಸೇರಿಯೇ ಕಕಾಲಕ್ಕೆ ಚುನಾವಣೆಗಳು ನಡೆಯುತ್ತಿದ್ದವು. ಕಳೆದ ಸುಮಾರು ೩ ಶಕಗಳ ಚಿತ್ರವೇ ಬೇರೆ. ಮಹಾಚುನಾವಣೆಗಳನ್ನು ಮುಗಿಸಿ ಬೆವರನ್ನು ರೆಸಿಕೊಳ್ಳುವುದರೊಳಗಾಗಿ ಮತ್ತೆಲ್ಲೋ ಉಪ-ಚುನಾವಣೆಗಳು ಣೆಸಿಕೊಳ್ಳುತ್ತವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಬೇರೆ ನಿಭಾಯಿಸಬೇಕು. ಅನೇಕ ತಾತ್ಕಾಲಿಕ ಲಾಭದ ಬೆಳವಣಿಗೆಗಳು ('ಆಪರೇಶನ್ ಕಮಲ'ದಂಥ) ವೇಳೆಯಲ್ಲದ ವೇಳೆಯಲ್ಲಿ ಪಾರ್ಲಿಮೆಂಟಿಗೂ, ವಿಧಾನಸಭೆಗೂ ಮತ್ತೆ ಮತ್ತೆ ಚುನಾವಣೆಗಳು ಎದುರಾಗುವಂತೆ ಮಾಡುತ್ತವೆ.

ಈ ದೇಶ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಇಂದಿಗೆ ಅರವತ್ತು ವರ್ಷಗಳೇ ಕಳೆದವು. ಈ ಅವಧಿಯ ಪೂರ್ವಾರ್ಧವೆಲ್ಲ ಏಕಪಕ್ಷೀಯ ಆಡಳಿತ ಕಂಡಾಗಿದೆ. ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಮಾತ್ರ ಚಿತ್ರ ತುಸು ಭಿನ್ನವಾಗಿತ್ತೆಂಬುದನ್ನು ಬಿಟ್ಟರೆ, ಉಳಿದಂತೆಲ್ಲ ಕಾಂಗ್ರೆಸ್ ಪಕ್ಷದ್ದೇ ದರಬಾರು. ವಿರೋಧೀ ಪಾಳಯದಲ್ಲಿ ಜಗತ್ತಿಗೇ ಮಾದರಿ ಎಂಬಂಥ ರಾಜಕೀಯ ಮುತ್ಸದ್ದಿಗಳು ಇದ್ದರು. ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಪಂಚವನ್ನೇ ಬೆರಗುಗೊಳಿಸಬಲ್ಲಂಥ ಮುತ್ಸದ್ದಿಗಳೂ ಅವರಲ್ಲಿದ್ದರು. ಆದರೆ ಇಂಥ ಮುತ್ಸದ್ದಿಗಳು ಕಟ್ಟಿಕೊಂಡ ರಾಜಕೀಯ ಪಕ್ಷಗಳೂ ಅತ್ತ ದೇಶದಲ್ಲಿ, ಇತ್ತ ರಾಜ್ಯಗಳಲ್ಲಿ ಶೇಕಡ ೧೦ರಷ್ಟು ಪ್ರಮಾಣದಲ್ಲೂ ಇಲ್ಲದಿರುವುದು ದೊಡ್ಡ ಹಿನ್ನಡೆಯಾಗಿತ್ತು. ಈಗ ಕೇಂದ್ರದಲ್ಲಿ ಅತಿದೊಡ್ಡ ವಿರೋಧಿ ಪಕ್ಷ ಅನ್ನಿಸಿಕೊಂಡ ಮತ್ತು ಎನ್.ಡಿ.ಎ. ಎಂಬ ಕೂಟ ಕಟ್ಟಿಕೊಂಡು ಸುಮಾರು ಆರು ವರ್ಷಗಳ ಕಾಲ ಅಧಿಕಾರದ ರುಚಿಯನ್ನೂ ನೋಡಿದ ಬಿ.ಜೆ.ಪಿ.ಯಲ್ಲಿ (ಅಂದಿನ ಜನಸಂಘ) ಸಂಸತ್ತನ್ನು ಪ್ರತಿನಿಧಿಸಿದವರ ಸಂಖ್ಯೆ ಎರಡೋ ಮೂರೋ ಇದ್ದ ಕಾಲ ಅದು. ಸಮಾಜವಾದಿಗಳಲ್ಲೂ, ಸಮತಾವಾದಿಗಳಲ್ಲೂ ಎರಡು ಬಣಗಳಿದ್ದವು. ಈ ಎಲ್ಲ ಕಾರಣಗಳಿಂದಾಗಿ ಕಾಂಗ್ರೆಸಿಗೆ ಪರ್ಯಾಯ ಪಕ್ಷವೇ ಈ ದೇಶದಲ್ಲಿ ಇಲ್ಲ ಎಂಬ ವಾತಾವರಣ ಸೃಷ್ಟಿಯಾಯಿತು. ಪರಿಣಾಮವಾಗಿ ವಿರೋಧಿಗಳ ಸದ್ದಡಗಿಸುವ ಹುನ್ನಾರಾಗಿ ೧೯೭೫ರ ವೇಳೆಗೆ ಈ ದೇಶ ಆಂತರಿಕ ತುರ್ತು ಪರಿಸ್ಥಿತಿ ಕಂಡಿತು! ದೇಶಾದ್ಯಂತ ಇರುವ ಲಕ್ಷಾವಧಿ ವಿರೋಧೀ ಪಕ್ಷದ ಸದಸ್ಯರು ಜೈಲುವಾಸ ಅನುಭವಿಸುವಂತಾಯಿತು. ಭ್ರಷ್ಟಾಚಾರ ನಿರ್ಮೂಲನೆಗೆ ಪಣತೊಟ್ಟ ಲೋಕನಾಯಕ ಜಯಪ್ರಕಾಶ ನಾರಾಯಣ ಅವರ ಕಳಕಳಿಯಿಂದಾಗಿ ಜೈಲಿನಲ್ಲೇ ಜನತಾ ಪಕ್ಷವೆಂಬ ಹೊಸ ರಾಜಕೀಯ ಶಕ್ತಿಯ ಉದಯವಾದದ್ದು ಈಗ ಇತಿಹಾಸ.

ಜನತಾ ಪಕ್ಷದಲ್ಲಿ ಕಮ್ಯುನಿಷ್ಟರ ಹೊರತಾಗಿ ಉಳಿದೆಲ್ಲ ರಾಜಕೀಯ ಪಕ್ಷಗಳು ಸೇರಿಕೊಂಡ ಪರಿಣಾಮವಾಗಿ ೧೯೭೭ರಲ್ಲಿ ಮುರಾರ್ಜಿ ದೇಸಾಯಿ ನೇತೃತ್ವದ ಆಡಳಿತವೇ ಅಧಿಕಾರಕ್ಕೆ ಬಂದದ್ದು ಕಾಂಗ್ರೆಸ್ ಪಕ್ಷಕ್ಕೆ ಬಿದ್ದ ಭಾರೀ ಹೊಡೆತವಾಗಿತ್ತು. ಇಡೀ ದೇಶದ ಪ್ರಜೆಗಳು ಹೊಸ ರಾಜಕೀಯ




ಮನ್ವಂತರದ ಕನಸು ಕಂಡಿದ್ದ ಸಂದರ್ಭ ಅದು. ಆದರೆ ಆದದ್ದೇನು ?... ಜನತಾ [illegible] ಪಟ್ಟುಹಿಡಿದ ಮೂಲ ಜನಸಂಘದ ಮಂದಿ, [illegible] ಹೊರಬಂದುದಲ್ಲದೆ 'ಭಾರತೀಯ ಜನತಾ ಪಕ್ಷ'ವೆಂಬ ಹೊಸ ರಾಜಕೀಯ ಶಕ್ತಿಯನ್ನು ಹುಟ್ಟುಹಾಕಿದ್ದರು. ಈ ಒಡಕಿನ ಕಥೆ ಅಲ್ಲಿಗೇ ನಿಲ್ಲಲಿಲ್ಲ. ಅತ್ತ ಮೂಲ ಜನತಾ ಪಕ್ಷದಲ್ಲಿ ಕೂಡ ಲೋಕದಳದ ಗುಂಪು, ಸಂಸ್ಥಾ ಕಾಂಗ್ರೆಸ್ ಗುಂಪು, ಸಮಾಜವಾದಿ ಗುಂಪುಗಳ ನಡುವೆ ಹಗ್ಗ ಜಗ್ಗಾಟ ನಡೆದು, ಜನತಾದಳ, ಲೋಕಶಕ್ತಿ, ಬೀಜೂ ಜನತಾದಳ, ಜಾತ್ಯತೀತ ಜನತಾದಳ – ಹೀಗೆ ಒಂದೇ ದಶಕದಲ್ಲಿ ನಾಲ್ಕಾರು ಹೋಳುಗಳಾದವು. ವಿರೋಧೀ ಪಕ್ಷಗಳ ಈ ದೌರ್ಬಲ್ಯದ ಪರಿಣಾಮವಾಗಿ ಕಾಂಗ್ರೆಸ್ ಪಕ್ಷದ ಕೈಯಲ್ಲಿ ಮತ್ತೆ ಅಧಿಕಾರ! ಇಲ್ಲಿದ್ದ ಕೆಲವರು ಅಲ್ಲಿಗೂ ಹೋದರು. ಅತ್ತ ಕಾಂಗ್ರೆಸ್ ಪಕ್ಷ ಕೂಡ ಸಣ್ಣಪುಟ್ಟ ಇತರೇ ಪಕ್ಷಗಳ ಸಹಕಾರವಿಲ್ಲದೇ ಸ್ವತಂತ್ರವಾಗಿ ಆಡಳಿತ ನಡೆಸುವ ಶಕ್ತಿ ಕಳಕೊಂಡಿತ್ತು. ಚುನಾವಣೆ ಬಂದಾಗ, "ಇನ್ನೆಂದೂ ಜಗಳಾಡುವುದಿಲ್ಲ" ಎಂದು ಒಂದಾಗುವುದು, ಚುನಾವಣೆಯ ನಂತರ ಜಗಳಾಡುವುದಕ್ಕೆಂದೇ ತಾವು ಹುಟ್ಟಿದವರೆಂಬಂತೆ ವರ್ತಿಸುವುದು ಜನರಿಗೆ ತಮಾಷೆಯ ಸಂಗತಿಯಾಗಿ ಕಂಡವು. ಈ ಬೆಳವಣಿಗೆಯ ಪರಿಣಾಮವಾಗಿ ದೇಶದ ಮತದಾರರಲ್ಲಿ ಹೆಚ್ಚೂ ಕಡಿಮೆ ಎಲ್ಲ ರಾಜಕೀಯ ಪಕ್ಷಗಳ ಬಗ್ಗೆ ಭ್ರಮನಿರಸನ ಉಂಟಾಯಿತು.

೨

ಇಂದು ಭಾರತವೆಂಬ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶದ ಚುನಾವಣೆಗಳಲ್ಲಿ ಜಗತ್ತೇ ಬೆರಳುಮಾಡಿ ತೋರಿಸುವಷ್ಟು ಭ್ರಷ್ಟಾಚಾರ ತುಂಬಿಕೊಂಡಿರುವುದಕ್ಕೆ ಪುರಾವೆಗಳಿವೆ. ಚುನಾವಣೋತ್ತರ ದಿನಗಳಲ್ಲಿ ಒಳಮಾರ್ಗದಿಂದ ದುಡ್ಡು ಕೂಡಿಹಾಕದೇ ಇರುವ ಸರಕಾರ ಇಂದು ನಮಗೆ ಕಾಣಲು ಸಿಗುತ್ತಿಲ್ಲ, ಯಾಕೆ ಚುನಾವಣೆಯ ಬಗೆಗೆ ಜನರು ಇಂದು ಹೊಂದಿರುವ ಹೊಸ ಪರಿಕಲ್ಪನೆ ಹೇಸಿಗೆಯದಾಗಿದೆ. 'ಭ್ರಷ್ಟಾಚಾರದ ತಾಯಿಬೇರು ಅಲ್ಲೇ ಅಡಗಿ ಕೂತಿ ಆಯ್ಕೆಯಾಗಿ ಹೋದವರೆಲ್ಲ 'ದ್ವೀಪಸಂಸ್ಕೃತಿ'ಯನ್ನು ಬೆಳೆಸಿ ಕೊಂಡ ಕಾ ವೇಳೆಯಲ್ಲದ ವೇಳೆಯಲ್ಲಿ ಎಷ್ಟೋ ಕಡೆ ಸರಕಾರಗಳು ಬಿದ್ದುಹೋದವು. ಹೊಸ ಚುನಾವಣೆಗಳನ್ನು ನೋಡಿ ನೋಡಿ ಬೇಸತ್ತ ಮತದಾರನೂ ಕೂಡ "ಯ ರಾಜಾ ತಥಾ ಪ್ರಜಾ" ಎಂಬ ದಾರಿಯನ್ನು ಹಿಡಿದ. ಪಕ್ಷದ ಮಟ್ಟದಲ್ಲೇ ಅಭ್ಯರ್ಥಿ ಆಯ್ಕೆಗಾಗಿ ದುಡ್ಡು ಕೊಡಬೇಕಾದ ದುರಂತ ಕಂಡಾಯಿತು. ನಾಮಪತ್ರ ಸಲ್ಲಿ ಅಗತ್ಯವಿರುವ 'ಬಿ' ಫಾರ್ಮ ಪಡೆಯುವಲ್ಲಿ ಮತ್ತೆ ದುಡ್ಡು ಹಿಂತೆಗೆದುಕೊಳ್ಳುವುದಕ್ಕೂ ದುಡ್ಡು! ಪ್ರಚಾರ ಕಣದಲ್ಲಿ ಪ್ರತಿ ಕುಟುಂಬದ ಮತದಾರನಿಗೆ ದುಡ್ಡು! ಗೆದ್ದುಬಂದ ಮೇಲೆ ಸಚಿವ ಸ್ಥಾನದ ಪೈಪೋಟಿಗಾಗಿ ದುಡ್ಡು ಅಂತಸ್ತು ಹೆಚ್ಚಿಸಿಕೊಳ್ಳಲು ಹೊಸ ಕಾರು, ಹೊಸ ಸೈಟು, ಹೊಸ ಬಂಗಲೆಗಳಿಗೆ ದುಡ್ಡು! – ಹೀಗೆ ಆದಿಯಿಂದ ತುದಿಯವರೆಗೆ ಎಲ್ಲದಕ್ಕೂ ದುಡ್ಡು ಚೆಲ್ಲಿ ಜನಪ್ರತಿನಿಧಿಗಳೇ ಶೇಕಡ ೯೦ರಷ್ಟು!!... ಮಾರ್ಕ್ಸ್‌ವಾದಿಗಳ ಹೊರತಾಗಿ (ಅ ಕೆಲವು ಕರಡಿ ಗಳಿವೆಯೆಂದು ಕೇಳಿದ್ದೇನೆ) ಎಲ್ಲ ಪಕ್ಷಗಳಲ್ಲಿ ನೀಚರು-ನಿರ್ಲಜ್ಜರ ಮೆಜಾರಿಟಿ. ಒಂದು ಲೋಕಸಭಾ ಸ್ಥಾನದ ಅಭ್ಯರ್ಥಿ ೫೦ರಿಂದ ಐದುನೂ ಕೋಟಿಯವರೆಗೆ ಖರ್ಚು ಮಾಡಿದ ವರದಿಗಳಿವೆ. ಒಂದು ವಿಧಾನಸಭಾ ಸ್ಥಾ ನೂರಿನ್ನೂರು ಕೋಟಿಯವರೆಗೂ ಚೆಲ್ಲಿದ ಉದಾಹರಣೆಗಳಿವೆ! ಇಷ್ಟರಮೇ ಸದಸ್ಯತ್ವ ಐದು ವರ್ಷಗಳವರೆಗೆ ಅಬಾಧಿತವಾಗಿ ಇರುತ್ತದೆ ಎಂಬ ಗ್ಯಾರ ಇಲ್ಲ. ಈ ಅಭದ್ರ ಭಾವವೇ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇ

ಡ್ಡನ್ನು ದೋಚಿಕೊಳ್ಳುವಂತೆ ಜನಪ್ರತಿನಿಧಿಗಳನ್ನು ತ್ರಾಯಿಸಿದ್ದು. ಗೆದ್ದು ಬರಲೆಂದು ತಾನು ಚೆಲ್ಲಿದ ೀಟ್ಯಾವಧಿ ಹಣ ಮೂರೇ ತಿಂಗಳಲ್ಲಿ ಮರಳಿ ರಬೇಕು. ಮುಂದಿನ ಚುನಾವಣೆಗಾಗಿ ಮತ್ತೆ ರಾರು ಕೋಟಿ ಕೂಡಿಹಾಕಬೇಕು! ಎಲ್ಲಿಂದ ರುತ್ತದೆ ?...

ರೇಶನ್ ಅಂಗಡಿಯವನೂ ಲಂಚ ಕೊಡಬೇಕು. ಗುತ್ತಿಗೆದಾರನೂ ಕೊಡಬೇಕು. ವರ್ಗಾವಣೆಗಾಗಿ ಡಬೇಕು. ಬಡತಿಗಾಗಿ ಕೊಡಬೇಕು. ಮಂಜೂರಿಗಾಗಿ ಡಬೇಕು. ಆದೇಶ ಪತ್ರ ಪಡೆಯಲೂ ಕೊಡಬೇಕು! ತಗಿಸಿ ಇಡಲು ಕೊಡಬೇಕು. ಕೇಳಿದರೆ ಎಲ್ಲರೂ ೀಳುವುದೊಂದೇ, ''ನಾವು ಮೇಲಿನವರಿಗೆ ಕೊಡ ೀಕಾಗುತ್ತದೆ!''... ಯಾರು ಈ ಮೇಲಿನವರು ?... ೀಗೆ ಇಂಚಿಂಚೂ ಭ್ರಷ್ಟತೆಯಲ್ಲಿ ಮುಳುಗಿ ೋಗಿರುವ ದೇಶ ಸುಸ್ತಾಗಿದೆ, ನಿಜಕ್ಕೂ ಸುಸ್ತಾಗಿದೆ!



ದುರಂತವೆಂದರೆ, ಈ ದೇಶದಲ್ಲಿ ಕಾರ್ಯಾಂಗವು ನಿರ್ವಹಿಸಬೇಕಾಗಿದ್ದ ೂಣೆಗಾರಿಕೆಯಲ್ಲಿ ಸರಿ ಸುಮಾರು ಅರ್ಧದಷ್ಟನ್ನು ನಮ್ಮ ಕೋರ್ಟುಗಳು ತಾವೇ ರ್ವಹಿಸುತ್ತಿರುವಂತೆ ಭಾಸವಾಗಹತ್ತಿದೆ. ಕಾರ್ಯಾಂಗ ಮತ್ತು ನ್ಯಾಯಾಂಗದ ಮಧ್ಯೆ ೀರ ಸಂಘರ್ಷ ಉಂಟಾಗಿ ಸಾಂವಿಧಾನಿಕ ಬಿಕ್ಕಟ್ಟು ಹುಟ್ಟಿಕೊಳ್ಳಬಹುದಾದ ಆತಂಕ ಡ ಇದೆ. ಇದಕ್ಕೆ ಕಾರಣ, ನಮ್ಮ ಕಾರ್ಯಾಂಗದ ಶೈಲಿ! ಅದು ತನ್ನ ಸಂವಿಧಾನದತ್ತ ರ್ತವ್ಯದಲ್ಲಿ ಎಡವಿದ್ದರಿಂದ ಈ ಗೋಳು! ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳೂ ಗ ನ್ಯಾಯಾಲಯಕ್ಕೆ ಯಾವ ಪ್ರಮಾಣದಲ್ಲಿ ಬರುತ್ತಿವೆಯೆಂದರೆ ನಮ್ಮ ನ್ಯಾಯಾಂಗ ವಸ್ಥೆಯಲ್ಲಿ ಅದಕ್ಕಾಗಿಯೇ ಒಂದು ಪ್ರತ್ಯೇಕ ವಿಭಾಗ ಆರಂಭವಾದರೆ ಅಚ್ಚರಿ ಡಬೇಕಾಗಿಲ್ಲ. ಕವಿ ನಾಗಚಂದ್ರನ ಕಾವ್ಯದಲ್ಲಿ, ''ಕಾಯುವವರೆ ಕಣೆಗೊಂಡರೆ ಕ್ಷಿಸುವವರು ಯಾರು ?''... ಎಂಬ ಮಾತೊಂದು ಬರುತ್ತದೆ. ಈ ದೇಶದ ಕಾರ್ಯಾಂಗಕ್ಕೆ ೀರವಾಗಿ ಅನ್ವಯಿಸುವ ಮಾತಿದು. ಪ್ರತಿನಿತ್ಯವೂ ಪ್ರಜಾಕೋಟಿಯ ಕಣ್ಣಿಂದ ಕ್ತಹರಿಸುವ ಕೆಲಸ ಕಾರ್ಯಾಂಗದ ನೇತಾರರ ತಪ್ಪು ನಿರ್ಧಾರಗಳಿಂದ ಆಗುತ್ತಿದೆ.

ಈ ದೇಶವನ್ನು ಆಳುವವರಿಗೆ ಬಹುದೊಡ್ಡ ಸಮಸ್ಯೆಯಾಗಿ ತೋರುವ ನಕ್ಸಲೈಟ್ ಂದೋಲನಕ್ಕೆ ಇನ್ನೊಂದು ಮಗ್ಗುಲಿದೆ ಅನ್ನುವುದನ್ನು ನಮ್ಮ ಸರ್ಕಾರಗಳು ಿದಂತಿಲ್ಲ. ಭಯೋತ್ಪಾದನೆಯ ಸಮಸ್ಯೆ, ಜಗತ್ತನ್ನೇ ಕಾಡಿದರೂ ವಾಸ್ತವಿಕವಾಗಿ ಂಡಿಯಾವನ್ನು ಕಾಡಬೇಕಾಗಿರಲಿಲ್ಲ. ಆದರೆ ಅನೇಕ ಸಂದರ್ಭಗಳಲ್ಲಿ, ನಮ್ಮ ರ್ಯಾಂಗ ತೆಗೆದುಕೊಳ್ಳುವ ತಪ್ಪು ನಿರ್ಧಾರಗಳು ಭಾರತದಲ್ಲೂ ಭಯೋತ್ಪಾದನೆಯ ತಂಕ ಹುಟ್ಟುಹಾಕಿದವು. ಒಂದು ಸರಳ ಪ್ರಶ್ನೆಗೆ ಈ ದೇಶವನ್ನು ಆಳುವ ಜನ – ವರು ಯಾವ ಪಕ್ಷದವರೇ ಇರಲಿ, ಉತ್ತರ ಕಂಡುಕೊಳ್ಳದೇ ಇರುವುದು ಯೋತ್ಪಾದನೆಯೆಂಬ ರಕ್ತಬೀಜಾಸುರ ಇಂಡಿಯಾದಲ್ಲಿ ಕಾಣಿಸಿಕೊಳ್ಳುವುದಕ್ಕೆ ಕಾರಣ ಾಗಿದೆ. ೧೯೯೦ನೇ ದಶಕಕ್ಕಿಂತ ಪೂರ್ವದಲ್ಲಿ ಒಂದೇ ಒಂದು ಭಯೋತ್ಪಾದಕ ಟನೆ ಈ ದೇಶವನ್ನು ಕಾಡಿದ್ದಿತ್ತೇ ?... ಹಾಗಿದ್ದರೆ ೧೯೯೦ರ ದಶಕಾರಂಭದಿಂದಲೇ ಾಕೆ ಈ ಆತಂಕ ಆರಂಭವಾಯಿತು ?... 'ಸೆಕ್ಯುಲರ್' ಅನ್ನುವ ಪದಕ್ಕೆ ಈ ನೆಲದಲ್ಲಿ ್ಯಾಯ ಸಿಕ್ಕಿದ್ದರೆ ಈಗ ಇಷ್ಟು ಹೈರಾಣಾಗುವಂಥ ಸ್ಥಿತಿ ನಮಗೆ ಇರಲಿಲ್ಲ. ಲಾಲ್‌ಕೃಷ್ಣ ದವಾನಿಯಂಥವರೂ ಕೂಡ ಒಂದೆರಡು ಬಾರಿ 'ಬಾಬರಿ ಮಸೀದಿ ಬಿದ್ದದ್ದು ೋಪಿನ ಸಂಗತಿ' ಎಂದು ಹೇಳಿದ್ದಿದೆ. ಆಗ ಉತ್ತರ ಪ್ರದೇಶದಲ್ಲಿ ಇದ್ದುದು ಒಂದು ಕ್ಷದ ಸರಕಾರವಿದ್ದರೆ, ರಾಮ ಮಂದಿರವನ್ನು ಕಟ್ಟಲೆಂದು ಹೊರಟವರು ಮುಖ್ಯವಾಗಿ ನ್ನೊಂದು ಪಕ್ಷದ ಮಂದಿ. ಅಂದರೆ ಬಾಬರಿ ಮಸೀದಿ ನೆಲಸಮವಾದುದರ ನೈತಿಕ ೂಣೆಗಾರಿಕೆಯನ್ನು ಈ ಎರಡೂ ಪಕ್ಷಗಳು ಹೊತ್ತುಕೊಳ್ಳಬೇಕಾಗಿಲ್ಲವೇ ?... ಈ ೀಶದ ಪ್ರಜ್ಞಾವಂತ ಓದುಗರಿಗೆ ನೆನಪಿರಲಿಕ್ಕೆ ಸಾಕು. ಆ ಘಟನೆ ನಡೆದಾಗ ಜಗತ್ತಿನ ನೇಕ ಮುಸ್ಲಿಂ ರಾಷ್ಟ್ರಗಳ ಸಂಘಟನೆಗಳು ''ಡಿಸೆಂಬರ್ ೬ರಂದು ನೆಲಕಚ್ಚಿದ್ದು ಾಬರಿ ಮಸೀದಿಯಲ್ಲ ನಮ್ಮ ಸ್ವಾಭಿಮಾನ; ಇದರ ಪ್ರತೀಕಾರ ಎದುರಿಸಲೇ ೀಕಾಗುತ್ತದೆ'' ಅಂದುದರ ವರದಿ ಬಂದವು! ಭಾರತದಲ್ಲಿ ಅದು ಮುಸ್ಲಿಂ ಯೋತ್ಪಾದನೆ ಇರಲಿ, ಹಿಂದೂ ಭಯೋತ್ಪಾದನೆ ಇರಲಿ, ನಕ್ಸಲೈಟ್‌ಗಳ ಯೋತ್ಪಾದನೆ ಇರಲಿ, ಉತ್ತರದ ಗಡಿರಾಜ್ಯಗಳ ಅವಾಂತರಗಳೇ ಇರಲಿ, ನಮ್ಮ ಕಾರ್ಯಾಂಗದ ನೇತಾರರ [illegible] ಕೊರತೆಯೇ ಈ ಎಲ್ಲ ಅಹಿತಕರ ಬೆಳವಣಿಗೆಗೆ ಕಾರಣವಾಗಿದೆಯೆನಿಸುವುದಿಲ್ಲವೇ ?...

ಇಷ್ಟೂ ಸಾಲದೆಂಬಂತೆ ಇಂದು ''ಚುನಾವಣೆ'' ಎಂಬ ಹೆಸರೇ ದಿಗಿಲು ಹುಟ್ಟಿಸುವಂತೆ ಭಯೋತ್ಪಾದಕರ ಆಡುಂಬೊಲವಾಗಿದೆ. ಅದನ್ನೊಂದು ಮಾರ್ಕೆಟ್ಟಾಗಿ ಪರಿವರ್ತಿಸಲಾಗಿದೆ. 'ಬಹುಸಂಖ್ಯೆಯ ಮತದಾರರು ತೂಕಕ್ಕಿಟ್ಟ ರದ್ದಿಗಳಂತೆ ನೋಟಿಗಾಗಿ ಮಾರಾಟವಾಗುತ್ತಿದ್ದಾರೆ'. ಹೀಗೆ ಮಾರಿಕೊಂಡವರು ತಮ್ಮ ನೆಲಕ್ಕಾದ ಅನ್ಯಾಯದ ವಿರುದ್ಧ ತಮ್ಮ ಜನಪ್ರತಿನಿಧಿಗಳ ಬಳಿ ಯಾವ ಮುಖ ತೆಗೆದುಕೊಂಡು ಮಾತನಾಡಬಲ್ಲರು ?... ಇದು ಒಂದೆರಡು ಕಡೆಯ ಚಿತ್ರಣವಲ್ಲ. ದೇಶಕ್ಕೆ ದೇಶವೇ ಸುಸ್ತು ಹೊಡೆದು ಹೋಗಿದೆ! ಮಂತ್ರಿ ಮಹೋದಯರನ್ನೊಳಗೊಂಡು ಪ್ರಭಾವೀ ರಾಜಕಾರಣಿಗಳು ಸಾಲು ಸಾಲಾಗಿ ಜೈಲಿಗೆ ಹೋಗುತ್ತಿದ್ದಾರೆ! ಹೋಗದಿದ್ದವರೂ ರಾತ್ರಿ ನಿಶ್ಚಿಂತ ನಿದ್ದೆ ಮಾಡುತ್ತಿದ್ದಾರೆಂದು ಭಾವಿಸಿದ್ದೀರಾ ?... ಎಲ್ಲಿ ನೋಡಿದರೂ ಗಲೀಜು ವ್ಯವಹಾರ. ಜೈಲಿಗೆ ಹೋದರೂ ಜಯಘೋಷ! ಬಿಡುಗಡೆಯಾದರೂ ಜಯಘೋಷ!!

ವಿಚಿತ್ರವೆಂದರೆ, ಭ್ರಷ್ಟಾಚಾರದ ವಿರುದ್ಧ ಕೊರಳೆತ್ತಿದ ಅಣ್ಣಾ ಹಜಾರೆಯವರ ಹೆಸರಿಂದ ಹುಟ್ಟಿಕೊಂಡ ಈ ದೇಶದ ಕೋಟಿ ಕೋಟಿ ಬಿಳಿ ಟೋಪಿಗಳೂ ತಿಂಗಳೊಪ್ಪತ್ತಿನಲ್ಲಿ ತಮ್ಮ ನಿಜ ಬಣ್ಣ ಬಯಲು ಮಾಡಿಕೊಂಡವು! 'ಈ ದೇಶದ ಯುವ ಪಡೆ ಮೈಕೊಡವಿಕೊಂಡು ಭ್ರಷ್ಟಾಚಾರದ ವಿರುದ್ಧ ಎದ್ದು ನಿಂತಿತಲ್ಲ!' ಎಂಬುದಾಗಿ ಒಂದು ಹಂತದಲ್ಲಿ ನಿರಾಳತೆಯ ಅನುಭವಕ್ಕೆ ಒಳಗಾದ ಪ್ರಜ್ಞಾವಂತ ಮನಸುಗಳಿಗೆ ಅಷ್ಟೇ ವೇಗವಾಗಿ ನಿರಾಶೆ ಕವಿದದ್ದು ಮರೆಯಲಾಗದ ಚೋದ್ಯ! ''ಭ್ರಷ್ಟರನ್ನು ಹಿಡಿದು ಒಳಗೆ ಹಾಕಿ'' ಎಂದು ಒಕ್ಕೊರಲಿನಿಂದ ಎದ್ದುನಿಂತ ನಮ್ಮ ನೆಲದ ಯುವ ಪಡೆಯೇ ''ಒಳಗಿಟ್ಟ ಭ್ರಷ್ಟರನ್ನು ಬಿಡುಗಡೆ ಮಾಡಿ'' ಎಂದು 'ಬಂದ್' ಆಚರಿಸಿಲ್ಲವೇ ?... ಸಾರ್ವಜನಿಕ ಆಸ್ತಿ-ಪಾಸ್ತಿ ಕೆಡಿಸಿಲ್ಲವೇ ?... ಅಣ್ಣಾ ಹಜಾರೆಯಂಥವರಿಗೆ ಈಗ ಪಾಪ, ಈ ಬೆಂಬಲಿಗರ ನಿಜಬಣ್ಣ ಕಂಡು ಏನಾಗಿರಬೇಡ!

ಈ ಭ್ರಷ್ಟ ವ್ಯವಸ್ಥೆಯ ಕುರಿತು ಎಷ್ಟು ಸುತ್ತಿನ ಚರ್ಚೆ ಮಾಡಿದರೂ ಮುಗಿಯಿತೆಂಬುದಿಲ್ಲ. ಆರಂಭದಲ್ಲೇ ಹೇಳಿರುವಂತೆ ಪವಿತ್ರ ಪ್ರಜಾಪ್ರಭುತ್ವದ ಹೆಸರಿನಲ್ಲಿ ಏರ್ಪಡುವ ಚುನಾವಣೆಗೆ ಸ್ಪರ್ಧಿಸುವವರಲ್ಲೇ ಕಾನೂನುಗಳನ್ನೆಲ್ಲ ಮೆಟ್ಟಿನಿಂತು ವಿಜೃಂಭಿಸುವ ಭ್ರಷ್ಟಾಚಾರಿಗಳಿದ್ದಾರೆ. ಇದಕ್ಕೆ ಪರಿಹಾರ ಇಲ್ಲವೆಂಬ ಹತಾಶೆ ಬೇಡ. ಸಂವಿಧಾನಕ್ಕೆ ಒಂದೆರಡು ತಿದ್ದುಪಡಿ ತಂದರೂ ಸಾಕು. ಈ ಕೆಟ್ಟ ವ್ಯವಸ್ಥೆಗೆ ಕಡಿವಾಣ ಹಾಕಬಹುದು; ಕಾಲಕ್ರಮೇಣ ನಿರ್ನಾಮ ಮಾಡಬಹುದು. ಮೊದಲನೆಯದಾಗಿ, ಚುನಾವಣೆಯ ವೆಚ್ಚಕ್ಕೆ ಮಿತಿ ಹಾಕಿದರೆ ಸಾಲದು; ಎಷ್ಟೇ ಆರ್ಥಿಕ ಸಮಸ್ಯೆ ಇದ್ದರೂ ಸಹಿಸಿಕೊಂಡು ಚುನಾವಣೆಗೆ ಸ್ಪರ್ಧಿಸುವವರಿಗೆ ನಿಗದಿಪಡಿಸಿದ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಎರಡನೆಯದಾಗಿ, ನಾಮಪತ್ರ ಹಿಂತೆಗೆದುಕೊಂಡು ಅಧಿಕೃತ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾದ ಒಂದೇ ವಾರದಲ್ಲಿ ಮತದಾನ ಪ್ರಕ್ರಿಯೆ ನಡೆಯಬೇಕು. ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಈಗ ಸಾಕಷ್ಟಿರುವುದರಿಂದ ಕುಟುಂಬಕ್ಕೊಂದಾದರೂ ಓದಿದ ತಲೆ ಇದ್ದುದರಿಂದ, ಕಣದಲ್ಲಿರುವ ಸ್ಪರ್ಧಾಳುಗಳಲ್ಲಿ ಲಾಯಕ್ಕಾದವರಾರು ? ನಾಲಾಯಕ್ಕಾದವರು ಯಾರು ? ಎಂಬುದನ್ನು ಗ್ರಹಿಸಿ ಒಂದು ತೀರ್ಮಾನಕ್ಕೆ ಬರಲು ಯಾವ ಕುಟುಂಬಕ್ಕೂ ಇಂದು ಸಮಸ್ಯೆ ಇಲ್ಲ. ಮೂರನೆಯದಾಗಿ, ಒಮ್ಮೆ ಆಯ್ಕೆಯಾದವನು ಯಾವುದೇ ಕಾರಣಕ್ಕೆ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಇತ್ತಲ್ಲಿ ಕನಿಷ್ಠಪಕ್ಷ ಮುಂದಿನ ಒಂದು ಅವಧಿಯವರೆಗೆ ಮತ್ತೆ ಸ್ಪರ್ಧೆಗೆ ಅನರ್ಹನಾಗುತ್ತಾನೆಂಬ ಕಾನೂನು ಬೇಕು. ಇಂಥ ಕಟ್ಟುನಿಟ್ಟಿನ ಕ್ರಮ ಜರುಗಿಸದೇ ಹೋದರೆ ಪವಿತ್ರ ಪ್ರಜಾಪ್ರಭುತ್ವದ ಹೆಸರಿನಲ್ಲೇ ಅಪವಿತ್ರವಾದ ನೀಚ ಕೆಲಸಗಳು ನಿರಾತಂಕವಾಗಿ ಮುಂದುವರಿಯುವುದನ್ನು ಸಹಿಸಲಾಗದು.

ವಿಷ್ಣು ನಾಯ್ಕ
'ಪರಿಮಳ', ಅಂಬಾರಕೊಡ್ಲ, ಅಂಕೋಲಾ (ಉತ್ತರ ಕನ್ನಡ)





ಜನ್ಮಾಷ್ಟಮಿಯಂದು ಜನಿಸಿದ ಮ್ಯಾಥ್ಯೂ

ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಯಾವ ಸಂಬಂಧ ಎಂಬ ಒಂದು ನಾಣ್ಣುಡಿ ನಮ್ಮಲ್ಲಿ ಪ್ರಚಲಿತದಲ್ಲಿದೆ. ಇತ್ತೀಚೆಗೆ ನಾನು ಆ ಸಂಬಂಧವನ್ನು ಕಂಡುಕೊಳ್ಳುವಲ್ಲಿ ಸಫಲನಾಗಿದ್ದೇನೆ.

ಮ್ಯಾಥ್ಯೂ ಎಂಬ ನನ್ನ ಕಿರಿಯ ಸ್ನೇಹಿತನೊಬ್ಬನಿದ್ದಾನೆ. ಅವನು ಮೂಲತಃ ಕೇರಳದವನು. ಹೆಸರೇ ಸೂಚಿಸುವಂತೆ ಅವನು ಕ್ರೈಸ್ತ ಧರ್ಮಕ್ಕೆ ಸೇರಿದವನು. ಅಂದಮಾತ್ರಕ್ಕೆ ಅವನು ಯಾವುದೇ ಧರ್ಮದ ಅನುಯಾಯಿಯಲ್ಲ. ಅವನೊಬ್ಬ ಕಟ್ಟಾ ಜಾತ್ಯತೀತ, ಎಡಪಂಥೀಯ ಚಿಂತಕ; ತುಂಬಾ ಬುದ್ಧಿವಂತ. ಈ ಕಾರಣಗಳಿಗಾಗಿಯೇ ನಾನು ಅವನನ್ನು ತುಂಬಾ ಇಷ್ಟಪಡುತ್ತೇನೆ. ಮ್ಯಾಥ್ಯೂ ನನ್ನ ವಿದ್ಯಾರ್ಥಿ ಅಲ್ಲದಿದ್ದರೂ ಅವನು ಮಾತ್ರ ನನ್ನನ್ನು ತನ್ನ ಆಪ್ತ ವೃಂದದಲ್ಲಿ ಗುರುತಿಸುತ್ತಾನೆ; ಪ್ರೀತಿ ವಿಶ್ವಾಸಗಳಿಂದ ಆದರಿಸುತ್ತಾನೆ.


ಮ್ಯಾಥ್ಯೂ ಹುಟ್ಟಿದ್ದು ಕೃಷ್ಣ ಜನ್ಮಾಷ್ಟಮಿಯ ದಿನ. ಅವನು ಹುಟ್ಟಿದ ತಾರೀಖು ಯಾವುದೋ ತಿಳಿಯದು. ಅಂತೂ ಜನ್ಮಾಷ್ಟಮಿ ದಿನ ಅವನಿಗೆ ಫೋನ್ ಮಾಡಿ ಹುಟ್ಟುಹಬ್ಬದ ಶುಭಾಶಯಗಳನ್ನು ಹೇಳುತ್ತೇನೆ. ನನ್ನ ಫೋನ್ ಕರೆ ಅವನಿಗೆ 'ಖುಷಿ' ಕೊಡುತ್ತದೆ. ತುಂಬ ಸಂತೋಷದಿಂದ ನನ್ನ ಮತ್ತು ನನ್ನ ಹೆಂಡತಿಯ ಕ್ಷೇಮ ಸಮಾಚಾರಗಳನ್ನು ವಿಚಾರಿಸಿಕೊಳ್ಳುತ್ತಾನೆ.

ಮ್ಯಾಥ್ಯೂ ಮತ್ತು ನಾನು ಮಣಿಪಾಲದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ ಅವನು ನನಗೆ ಕೇರಳದ ಬಗೆಗೆ ಹಲವು ಕುತೂಹಲಕಾರಿ ವಿವರಗಳನ್ನು ಹೇಳುತ್ತಿದ್ದ. ಅಂತಹ ಒಂದು ಸಂಗತಿ ನನಗೆ ತುಂಬಾ 'ರಿವೀಲಿಂಗ್' ಆಗಿ ತೋರಿಬರುತ್ತದೆ. ಮ್ಯಾಥ್ಯೂ ಹುಟ್ಟಿದ ನಂತರದಲ್ಲಿ ಕೇರಳ ಸರ್ಕಾರ ಭೂ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸಿತು. ಆ ಕಾನೂನಿನ ಅನ್ವಯ ಕೇರಳದ ಬಹುಪಾಲು ಮೇಲ್ವರ್ಗದ ಜನರು ಅವರ ಕೆಲವು ಪಾಲು ಆಸ್ತಿಗಳನ್ನು ಕಳೆದುಕೊಂಡರು. ಹಾಗೆ ಕಳೆದುಕೊಂಡವರಲ್ಲಿ ಮ್ಯಾಥ್ಯೂವಿನ ಸಂಬಂಧಿಗಳೂ ಇದ್ದಾರೆ – ಅವರಲ್ಲಿ ಮುಖ್ಯರು ಅವನ ಸೋದರಮಾವಂದಿರು, ಎಂದರೆ ಅವನ ತಾಯಿಯ ಅಣ್ಣತಮ್ಮಂದಿರು.

ಮ್ಯಾಥ್ಯೂ ನನಗೆ ಹೇಳಿದ ಸಂಗತಿಯೆಂದರೆ ಅವನ ಸೋದರಮಾವಂದಿರು ಆತನನ್ನು ತುಂಬಾ ದ್ವೇಷಿಸುತ್ತಾರಂತೆ. ಅದಕ್ಕೆ ಕಾರಣ ಏನು ಗೊತ್ತೆ? ಕೃಷ್ಣ ತ[illegible] ಅವನ ಸೋದರಮಾವ ಕಂಸನನ್ನು ಸಾಯಿಸಿದ. ಅಂತೆಯೇ ಕೃಷ್ಣ ಜನ್ಮಾಷ್ಟಮಿ[illegible] ಜನಿಸಿದ ಮ್ಯಾಥ್ಯೂ ಕೂಡ ತಮಗೆ ಅನಿಷ್ಟಗಳನ್ನುಂಟುಮಾಡುವಲ್ಲಿ ಕಾರಣನಾ[illegible] ಎಂದು ಅವನ ಸೋದರಮಾವಂದಿರು ಭಾವಿಸುತ್ತಾರಂತೆ. ಮ್ಯಾಥ್ಯೂ [illegible] ವಿಚಾರವನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಮ್ಯಾಥ್ಯೂ[illegible] ಸೋದರಮಾವಂದಿರು ಮಾತ್ರ ತಮ್ಮ ಕಷ್ಟನಷ್ಟಗಳಿಗೆ ಮ್ಯಾಥ್ಯೂನ ಜನನವ[illegible] ಹೊಣೆಯಾಗಿಸಿದ್ದಾರೆ.

ಮ್ಯಾಥ್ಯೂನ ಸೋದರಮಾವಂದಿರಾಗಲೀ, ಇಮಾಂ ಸಾಬಿಯಾಗಲೀ ನ[illegible] ಸಾಂಸ್ಕೃತಿಕ ಚೌಕಟ್ಟು, ಪರಂಪರೆ, ನಂಬಿಕೆಗಳಿಗೆ ಹೊರತಾಗಿ ಬದುಕಲಾರ[illegible] ಎನ್ನುವ ಸತ್ಯವನ್ನು ನಾವು ಮರೆಯಬಾರದು. ಇದಕ್ಕೆ ಒಂದು ಮನೋವೈಜ್ಞಾ[illegible] ವಿವರಣೆಯನ್ನೂ ಕಂಡುಕೊಳ್ಳಬಹುದು. ಮೊದಲಿಗೆ ಸಿಗ್ಮಂಡ್ ಫ್ರಾಯ[illegible] ಅನುಯಾಯಿಯಾಗಿದ್ದು ನಂತರದಲ್ಲಿ ತನ್ನದೇ ಸಿದ್ಧಾಂತಗಳನ್ನು ಪ್ರತಿಪಾದಿ[illegible] ಕಾರ್ಲ್ ಯೂಂಗ್ ಎಂಬ ಮನೋವಿಜ್ಞಾನಿ 'ಸಮಷ್ಟಿ ಸುಪ್ತಪ್ರಜ್ಞೆ' ಎ[illegible] ಪರಿಕಲ್ಪನೆಯನ್ನು ನಿರೂಪಿಸಿದ್ದಾನೆ. ಇದು ವ್ಯಕ್ತಿಯ ಸ್ವಂತ ಅನುಭವಗಳ ಆಧಾ[illegible] ಮೇಲೆ ರೂಪುಗೊಳ್ಳುವುದಿಲ್ಲ. ಇದು ವ್ಯಕ್ತಿಯೊಬ್ಬನ ಸುಪ್ತಪ್ರಜ್ಞೆಯ[illegible] ಅಂತರ್ಗತವಾಗಿರುವ ಪೂರ್ವಜರ ಅಥವಾ ಮಾನವಕುಲದ ಮಾನಸಿಕ ಅಂಶಗಳ[illegible] ಒಳಗೊಂಡಿರುತ್ತದೆ. ಇವನ್ನು ಯೂಂಗ್ 'ಆರ್ಕಿಟೈಪ್' ಎಂದು ಕರೆಯುತ್ತಾ[illegible] ಇವನ್ನು ಆನುವಂಶಿಕವಾಗಿ ಹಾಗೂ ಪರಂಪರಾಗತವಾಗಿ ಹರಿದುಕೊಂಡು ಬ[illegible] ಸಮಾನ ಪ್ರತಿಮೆಗಳು, ಕಲ್ಪನೆಗಳು, ಸಂಕೇತಗಳು ಎಂದು ಅರ್ಥೈಸಬಹುದ[illegible] ಮ್ಯಾಥ್ಯೂನ ಸೋದರಮಾವಂದಿರ ನಂಬಿಕೆಗಳನ್ನು ಬಹುಶಃ ಯೂಂಗನ 'ಸಮ[illegible] ಸುಪ್ತಪ್ರಜ್ಞೆ'ಯ ಅಭಿವ್ಯಕ್ತಿಗಳೆಂದು ಪರಿಗಣಿಸಬಹುದು.

ಎಚ್. ಎಸ್. ಈಶ್ವರ
ನಂ. ಹೆಚ್. ಐ. ಜಿ. ೧೧, ಕೆ. ಹೆಚ್. ಬಿ. ಕಾಲೋನಿ
ಮೊದಲನೇ ಹಂತ, ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯



ನ್ಯಾಯಾಂಗದ ಪಾರದರ್ಶಕತೆ ಮತ್ತು ಉತ್ತರದಾಯಿತ್ವ

ಹೇಮಲತಾ ಮಹಿಷಿ





೨೦೧೦-೧೧ನ್ನು ಹಗರಣಗಳ ವರ್ಷ ಎಂದೇ ಹೇಳಬಹುದು. ಈ ಲದಲ್ಲಿ ಸರ್ಕಾರದ, ಅಧಿಕಾರಸ್ಥ ವ್ಯಕ್ತಿಗಳ ಅನೇಕ ಕಪ್ಪು ಕೃತ್ಯಗಳು ರಬಂದು ಪ್ರಕರಣಗಳು ನ್ಯಾಯಾಲಯದ ಮೆಟ್ಟಲೇರಿದವು. ತಮ್ಮ ೃತ್ಯಗಳನ್ನು ಮುಚ್ಚಿಡಲು ಭಂಡತನದಿಂದ, ಹಗರಣಗಳನ್ನು ಹೊರಗೆಳೆದ ವೈಧಾನಿಕ – ಕಾನೂನಾತ್ಮಕ ಸಂಸ್ಥೆಗಳನ್ನು ದೂಷಿಸಲಾಯಿತು. ಅವುಗಳನ್ನು ್ಮ ಪರವಾಗಿ ಬಳಸಿಕೊಳ್ಳಲು ರಾಜಕೀಯದ ಪ್ರಭಾವವನ್ನು ಇನ್ನಿಲ್ಲದಂತೆ ರುಪಯೋಗಪಡಿಸಿಕೊಳ್ಳಲಾಯಿತು. ಆದರೂ, ನ್ಯಾಯಾಲಯಗಳ ಬಿಗಿ ುದಿಂದಾಗಿ ಪ್ರಕರಣಗಳು ದಾಖಲಾದವು, ಅನೇಕರು ಸೆರೆಮನೆ ಸೇರಿದರು ಇದರಲ್ಲಿ ಮಂತ್ರಿಗಳಿದ್ದಾರೆ, ಸಂಸತ್ ಸದಸ್ಯರಿದ್ದಾರೆ, ರಾಜಕೀಯ ಯಕರಿದ್ದಾರೆ, ಹಿರಿಯ ಅಧಿಕಾರಿಗಳಿದ್ದಾರೆ. ಕಾರ್ಪೊರೇಟ್ ಗಳಿದ್ದಾರೆ. ಇವರಿಗಿಂತಾ ನಾವೇನು ಕಡಿಮೆ ಎಂಬಂತೆ ಪೈಪೋಟಿಯಲ್ಲಿ ಯಾಂಗದ ಹಗರಣಗಳೂ ಹೊರಬಿದ್ದಿವೆ. ವಿಚಾರಣೆಗೆ ಒಳಗಾದ ಉಚ್ಚ ಯಾಲಯದ ನ್ಯಾಯಾಧೀಶರು, ಮುಖ್ಯ ನ್ಯಾಯಮೂರ್ತಿಯೊಬ್ಬರು ಹಾಭಿಯೋಗವನ್ನು ಎದುರಿಸಬೇಕಾದ ಸಂದರ್ಭ ಉಂಟಾಗಿದ್ದು, ನೆಯ ಗಳಿಗೆಯಲ್ಲಿ ರಾಜಿನಾಮೆ ಕೊಟ್ಟು ಹೊರ ನಡೆದಿದ್ದಾರೆ. ಮತ್ತೊಬ್ಬ ರ್ೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಯ ಯ ಮೇಲೆ ಭ್ರಷ್ಟಾಚಾರದ ವಿಚಾರಣೆಯ ಕತ್ತಿ ತೂಗಾಡುತ್ತಿದೆ. ಹೀಗೆ, ಯಾಂಗ, ಶಾಸಕಾಂಗ, ನ್ಯಾಯಾಂಗ – ನಮ್ಮ ಪ್ರಜಾತಂತ್ರ ಆಡಳಿತ ಸ್ಥೆಯ ಮೂರು ಮುಖ್ಯ ಅಂಗಗಳು ಇಂದು ಭ್ರಷ್ಟಾಚಾರದ ಸುಳಿಯಲ್ಲಿ ಕಿ ದುರ್ಬಲಗೊಂಡಿವೆ, ನಿಷ್ಕ್ರಿಯಗೊಳ್ಳುತ್ತಿವೆ. ಭ್ರಷ್ಟಾಚಾರವೆಂಬ ಲು ಹುಳ ಪ್ರಜಾತಂತ್ರ ವ್ಯವಸ್ಥೆಯನ್ನು ಒಳಗಿನಿಂದ ಸಣ್ಣಗೆ ಕೊರೆಯುತ್ತಾ ಕೊರೆಯುತ್ತಾ ದುರ್ಬಲಗೊಳಿಸುತ್ತಿದೆ. ಇಡೀ ವ್ಯವಸ್ಥೆ ಅದರಿಂದಾಗಿ ಯುವ ಭಯ ಉಂಟಾಗಿದೆ.


'ಪ್ರಜಾಪ್ರಭುತ್ವ' ಎಂದರೆ, ಪ್ರಭುತ್ವವಿರುವುದು ಜನರಿಂದಾಗಿ, ಜನರಿಗಾಗಿ ್ತು ಜನರ ಮೂಲಕವಾಗಿ. ಆದರೆ, ಜನರ ಹೆಸರಿನಲ್ಲಿ ನಡೆದಿರುವ ಕೋಟ್ಯಂತರ ಪಾಯಿಗಳ ಹಗರಣಗಳನ್ನು ಕಂಡು, ಅದೇ ಜನ ಕಂಗಾಲಾಗಿದ್ದಾರೆ, ೕಸಿಹೋಗಿದ್ದಾರೆ. ತಮ್ಮ ದಿನನಿತ್ಯದ ಒಂದು ಸಣ್ಣ ಕೆಲಸ ಮಾಡಿಸಿಕೊಳ್ಳಲೂ ದಾಡಬೇಕಾಗಿ ಬಂದ ಜನ, ಲಂಚ ಕೊಡದೆ ಒಂದು ಹುಲ್ಲು ಕಡ್ಡಿಯೂ ಗಲಾಗದ ಪರಿಸ್ಥಿತಿಯನ್ನು ಅಸಹಾಯಕರಾಗಿ ಎದುರಿಸುತ್ತಿರುವ ಜನ ಈ ರಣಗಳ ಸರಮಾಲೆಯನ್ನು ಕಂಡು ದಿಗ್ಭ್ರಾಂತರಾಗಿದ್ದಾರೆ. ಸಾಲು-ಸಾಲಾಗಿ ಯಕರುಗಳು ಜೈಲಿಗೆ ಹೋಗುತ್ತಿರುವುದನ್ನು ಕಂಡು ಸಂತಸಪಡುತ್ತಿದ್ದಾರೆ. ಾಗಿಯೇ, ಅಣ್ಣಾ ಹಜಾರೆ ಎಂಬೊಬ್ಬ ಗಾಂಧೀಜಿಯವರನ್ನು ನೆನಪಿಸುವ ವ್ಯಕ್ತಿ ಷ್ಟಾಚಾರವನ್ನು ವಿರೋಧಿಸಿ ಶಾಂತಿಯುತ ಆಂದೋಳನವನ್ನು ಆರಂಭಿಸಿದಾಗ ್ಕೆ ದೇಶದ ಮೂಲೆ-ಮೂಲೆಯಿಂದ ಬೆಂಬಲ ವ್ಯಕ್ತವಾಯಿತು. ಲಕ್ಷಾಂತರ ರು ಅವರ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ನಮ್ಮ ದೇಶದ ವ್ಯವಸ್ಥೆ, ರಾಜಕೀಯ ನಾಯಕತ್ವದ ಬಗ್ಗೆ ಸಿಡಿದೆದ್ದರು.

ರಾಷ್ಟ್ರವ್ಯಾಪಿ ಭ್ರಷ್ಟಾಚಾರ ನಿರ್ಮೂಲನೆಗೆ ಒಂದು ಬಲಿಷ್ಠವಾದ ಜನಲೋಕಪಾಲ ು ಸ್ವತಂತ್ರ ದೂರು ವಿಚಾರಣಾ ಸಂಸ್ಥೆ ಬೇಕು, ಅದರ ಅಧಿಕಾರ ವ್ಯಾಪ್ತಿಯಡಿ ಾನ ಮಂತ್ರಿಗಳಿಂದ ಹಿಡಿದು ಹಿರಿಯ ಅಧಿಕಾರಿಗಳು, ಸಂಸತ್ ಸದಸ್ಯರು, ಯಾಧೀಶರು ಎಲ್ಲರೂ ಬರಬೇಕು, ಕೇಂದ್ರದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ

ಬಿ.ಐ.ನಂತಹ ಸಂಸ್ಥೆಗಳು, ರಾಜ್ಯಗಳಲ್ಲಿರುವ ಲೋಕಾಯುಕ್ತ ಸಂಸ್ಥೆಗಳೂ ಅದರ ಭಾಗವಾಗಿ ಕಾರ್ಯ ರ್ವಹಿಸಬೇಕು ಎನ್ನುವುದು ಅಣ್ಣಾ ಹಜಾರೆಯವರ ವಿಚಾರ. ಆದರೆ, ಇಂತಹ ಬಲಿಷ್ಠ ಸಂಸ್ಥೆಯೇ ನಾಳೆ ರ ತಲೆಯ ಮೇಲೆ ಕುಳಿತು ಸವಾರಿ ಮಾಡುವ ಸಂಭವವಿರುವುದರಿಂದ, ಹಾಗೂ ನಿರುಪಾಧಿಕ ಅಧಿಕಾರ ಾವತ್ತೂ ಅದರಲ್ಲಿರುವವರನ್ನು ನಿರಂಕುಶಮತಿಗಳಾಗಿಸಿ, ಭ್ರಷ್ಟಾಚಾರದತ್ತ ಎಳೆಯುವ ಾಯವಿರುವುದರಿಂದ ಈ ಬಲಿಷ್ಠ ಜನಲೋಕಪಾಲ ಸಂಸ್ಥೆಯ ಬಗ್ಗೆ ಸಹಜವಾಗಿಯೇ ವಿರೋಧವಿದೆ. ದರಲ್ಲಿ ಒಂದು ಬಲವಾದ ವಿರೋಧವೆಂದರೆ, ನ್ಯಾಯಾಂಗ ಅದರ ವ್ಯಾಪ್ತಿಯಲ್ಲಿ ಬರಬಾರದು, ದಕ್ಕಾಗಿ ಬೇರೆಯದೇ ವ್ಯವಸ್ಥೆಯೊಂದು ಬೇಕು, ಎಂಬುದು.

ನಮ್ಮ ಸಂವಿಧಾನದಲ್ಲಿರುವ ಆಡಳಿತ ವ್ಯವಸ್ಥೆ ಎಂದರೆ, ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯಾಂಗ, ಸಕಾಂಗ ಮತ್ತು ನ್ಯಾಯಾಂಗ ಬೇರೆ ಬೇರೆಯಾಗಿ ಸ್ವತಂತ್ರವಾಗಿಯೂ ಹಾಗೂ ಒಂದಕ್ಕೊಂದು ಯಂತ್ರಣಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತವೆ, ಆ ಮೂಲಕ ಆಡಳಿತದಲ್ಲಿ ಸಮತೋಲನವನ್ನು ಪಾಡುತ್ತವೆ. ಶಾಸಕಾಂಗ ಮಾಡಿದ ಕಾನೂನುಗಳನ್ನು ಕಾರ್ಯಾಂಗ ಕಾರ್ಯಗತಗೊಳಿಸುತ್ತದೆ, ಆ ನೂನುಗಳು ಸಂವಿಧಾನಬದ್ಧವಾಗಿದೆಯೇ, ಕಾನೂನಿನ ಜಾರಿ ಸಮರ್ಪಕವಾಗಿದೆಯೇ ಎನ್ನುವುದನ್ನು ಯಾಂಗ ನಿರ್ಧರಿಸುತ್ತದೆ. ತಾತ್ವಿಕವಾಗಿ ಮೂರೂ ಅಂಗಗಳು ಸಮಾನವೆಂದರೂ ತನ್ನ ರ್ಯಚಟುವಟಿಕೆಯ ರೀತಿ ಹಾಗೂ ಪರಿಣಾಮದಿಂದಾಗಿ ನ್ಯಾಯಾಂಗ ಉಳಿದೆರಡು ಅಂಗಗಳಿಗಿಂತ ೇಲಿನ ಸ್ಥಾನದಲ್ಲಿದೆ. ಕಾರ್ಯಾಂಗವನ್ನು ಹತೋಟಿಯಲ್ಲಿಡುವ, ಅದಕ್ಕೆ ನಿರ್ದೇಶನ ನೀಡುವ, ಸಕಾಂಗದಿಂದ ಜಾರಿಗೊಂಡ ಕಾನೂನನ್ನು ಸಂವಿಧಾನಬಾಹಿರ ಎಂದು ರದ್ದುಗೊಳಿಸುವ, ಕಾನೂನನ್ನು ರ್ಥೈಸುವ ಅಧಿಕಾರ ನ್ಯಾಯಾಂಗಕ್ಕಿದೆ. ಇಂತಹ ವಿಶೇಷ ಹಾಗೂ ಪ್ರಭಾವಿ ಅಧಿಕಾರ ಹೊಂದಿರುವ ಚ್ಚ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಭ್ರಷ್ಟರಾದಲ್ಲಿ ಅದನ್ನು ವಿಚಾರಣೆ ಡುವವರು, ನಿಯಂತ್ರಿಸುವವರು ಯಾರು ಎಂಬ ಪ್ರಶ್ನೆ ಏಳುತ್ತದೆ.

ನಮ್ಮ ಸಂವಿಧಾನದಡಿ ಉಚ್ಚ-ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಭ್ರಷ್ಟರಾದಲ್ಲಿ ಅವರನ್ನು ದುಹಾಕಲು ಇರುವ ಏಕೈಕ ವ್ಯವಸ್ಥೆ ಎಂದರೆ, ಮಹಾಭಿಯೋಗ (Impeachment) ಒಂದೇ. ಅನುಚ್ಛೇದ ಳಿರಂತೆ ಯಾವುದೇ ಉಚ್ಚ-ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಬರವಣಿಗೆಯಲ್ಲಿ ಷ್ಟ್ರಪತಿಗಳಿಗೆ ತಮ್ಮ ರಾಜಿನಾಮೆಯನ್ನು ಕೊಟ್ಟು ಹೊರಬರಬಹುದು ಅಥವಾ ಸಂಸತ್ತಿನ ಉಭಯ ದನಗಳಲ್ಲಿ, ಆ ಸದನದ ಒಟ್ಟು ಸದಸ್ಯರ ಸಂಖ್ಯೆಯ ಬಹುಮತ ಹಾಗೂ ಹಾಜರಿದ್ದು ಮತ ನೀಡಿದ ದಸ್ಯರ ಸಂಖ್ಯೆಯ ೨/೩ ಸದಸ್ಯರ ಬಹುಮತದಿಂದ ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಷ್ಟ್ರಪತಿಗಳು ಅವರನ್ನು, ಸಾಬೀತುಗೊಂಡ ದುರ್ನಡತೆ ಅಥವಾ ಅಸಮರ್ಥತೆ ಗಾಗಿ, ಆ ಹುದ್ದೆಯಿಂದ ದುಹಾಕಬಹುದು. ದುರ್ನಡತೆ ಅಥವಾ ಅಸಮರ್ಥತೆಯನ್ನು ಸಾಬೀತು ಗೊಳಿಸಲು ಮತ್ತು ತನಿಖೆ ಡಲು ಮತ್ತು ಶಿಫಾರಸ್ಸು ಮಾಡಲು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಕ್ರಮಬದ್ಧಗೊಳಿಸಲು ಸತ್ತಿಗೆ ಕಾನೂನು ಮಾಡುವ ಅಧಿಕಾರವಿದ್ದು, ಆ ಪ್ರಕಾರವೇ ಸಂಸತ್ ಈಗಾಗಲೇ ನ್ಯಾಯಾಧೀಶರ ಚಾರಣೆ) ಅಧಿನಿಯಮ, ೧೯೬೮ನ್ನು ಜಾರಿಗೆ ತಂದಿದೆ. ಮೇಲಿನ ನ್ಯಾಯಾಧೀಶರ ವಿಚಾರಣೆಯನ್ನು ಗೂ ಅವರ ವಜಾಗೊಳಿಸುವಿಕೆಯ ಪ್ರಕ್ರಿಯೆಯನ್ನು ಇಷ್ಟು ಕಠಿಣಗೊಳಿಸಲು ಕಾರಣ, ನ್ಯಾಯಾಂಗ ಾವುದೇ ಬೆದರಿಕೆ, ಅಂಜಿಕೆಗೆ ಒಳಗಾಗದೇ ಸ್ವತಂತ್ರವಾಗಿ, ಧೈರ್ಯವಾಗಿ ಕಾರ್ಯ ನಿರ್ವಹಿಸಬೇಕು ನ್ನುವುದೇ ಆಗಿದೆ. ಅವರ ವಿರುದ್ಧ ಜನಸಾಮಾನ್ಯರು ಬೇಕಾಬಿಟ್ಟಿ ದೂರು ನೀಡಬಾರದು, ಬಲವಾದ ರಣವಿಲ್ಲದೇ ಅವರ ವಿರುದ್ಧ ವಿಚಾರಣೆ ನಡೆಯಬಾರದು, ಸಂಸತ್ ಸದಸ್ಯರು ಬಹು ಜವಾಬ್ದಾರಿಯಿಂದ ರ್ವಹಿಸಬೇಕಾದ ಕೆಲಸ ಇದು ಎಂಬುದು ನ್ಯಾಯಾಂಗಕ್ಕೆ ನೀಡಿರುವ ಸಂವೈಧಾನಿಕ ರಕ್ಷಣೆಯ ನಿಜವಾದ ರ್ಥ. ಸಂವಿಧಾನ ಜಾರಿಗೆ ಬಂದು ೬೧ ವರ್ಷಗಳಾದರೂ ಈ ದೀರ್ಘಾವಧಿಯಲ್ಲಿ ಈವರೆಗೆ ಕೇವಲ ಡು ಪ್ರಸಂಗಗಳು ಮಹಾಭಿಯೋಗದ ಪ್ರಕ್ರಿಯೆಗೆ ಒಳಗಾಗಿವೆ ಎನ್ನುವುದು ನಮ್ಮ ನ್ಯಾಯಾಂಗದ ಕ್ಷತೆಯನ್ನು ತೋರಿಸುತ್ತದೆಯೋ ಅಥವಾ ಮಹಾಭಿಯೋಗದ ವಿಫಲತೆಯನ್ನು ತೋರಿಸುತ್ತದೆಯೋ ನ್ನುವುದು ವಿವಾದಾತ್ಮಕ ವಿಷಯ. ಉಳಿದ ಅಂಗಗಳಿಗೆ ಹೋಲಿಸಿದಾಗ ನ್ಯಾಯಾಂಗ ಇದುವರೆಗೆ ಜನರ ಂಬಿಕೆ-ವಿಶ್ವಾಸವನ್ನು ಉಳಿಸಿಕೊಂಡು ಬಂದಿರುವ ಸಂಸ್ಥೆಯಾಗಿದೆ. ಅಲ್ಲಲ್ಲಿ ಆಗಾಗ್ಗೆ ಕರಿಕುರಿಗಳು ಕಾಣಿಸಿ ಂಡಿದ್ದರೂ, ವ್ಯವಸ್ಥೆಯಲ್ಲಿನ ಒಳ ಒತ್ತಡದಿಂದಾಗಿ ಅವರು ರಾಜಿನಾಮೆ ಸಲ್ಲಿಸಿ ಹೊರಹೋಗಿದ್ದಾರೆ, ಆ ಮೂಲಕ ನ್ಯಾಯಾಂಗದ ಘನತೆಯನ್ನು ಕಾಪಾಡಿದ್ದಾರೆ. ಆದರೆ, ಇತ್ತೀಚಿನ ನ್ಯಾ॥ ದಿನಕರನ್ ಪ್ರಕರಣ ಹಾಗೂ ನ್ಯಾ॥ ಸೌಮಿತ್ರ ಸೇನ್ ಪ್ರಕರಣ ನ್ಯಾಯಾಂಗದ ಮೇಲಿರುವ ವಿಶ್ವಾಸವನ್ನೇ ಅಲುಗಾಡಿಸುವಂತಿದೆ. ಕೊನೆಯ ನಿಮಿಷದವರೆಗೂ ರಾಜಿನಾಮೆ ನೀಡಲು ನಿರಾಕರಿಸಿ, ಮಹಾಭಿಯೋಗದ ಪ್ರಕ್ರಿಯೆಯನ್ನೂ ಆರಂಭಿಸುವಂತೆ ಮಾಡಿ ವ್ಯವಸ್ಥೆಯನ್ನು ಧಿಕ್ಕರಿಸಿ ನಿಂತ ನಿಲುವು ಆತಂಕಕಾರಿಯಾದುದು. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿದ್ದವರೂ ಭ್ರಷ್ಟಾಚಾರದ ಆರೋಪ ಹೊತ್ತ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಮುಂಬಡ್ತಿ ನೀಡಲು ಮುಂದಾದುದು, ರಕ್ಷಣೆ ನೀಡಲು ಪ್ರಯತ್ನಿಸಿದುದು ನ್ಯಾಯಾಂಗದ ಸ್ವಚ್ಛತೆಯನ್ನು ಮಸುಕುಗೊಳಿಸಿದೆ. ಅಲ್ಲದೆ, ಮಹಾಭಿಯೋಗದ ಪ್ರಕ್ರಿಯೆ ನಡೆದಾಗಲೂ, ಹಿಂದೆ ನ್ಯಾ॥ ರಾಮಸ್ವಾಮಿ ಅವರ ಪ್ರಕರಣದಲ್ಲಿ ಹಾಗೂ ಇಂದಿನ ನ್ಯಾ॥ ದಿನಕರನ್ ಅವರ ಪ್ರಕರಣದಲ್ಲಿ ಎದ್ದ ಪ್ರಾಂತೀಯತೆ, ಜಾತೀಯತೆಯ ರಾಜಕಾರಣವನ್ನು ಕಂಡಾಗ ಮಹಾಭಿಯೋಗದ ವಿಫಲತೆಯೂ ಅರಿವಿಗೆ ಬರುತ್ತದೆ. ಹಾಗಾಗಿ, ಈಗ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು, ಅದರ ಉತ್ತರದಾಯಿತ್ವವನ್ನು ಹಾಗೂ ಅದರ ನೈತಿಕ ಮಟ್ಟವನ್ನು ಸಾಧಿಸುವುದು ಹೇಗೆ ಎನ್ನುವುದು ದೇಶದ ಮುಂದಿರುವ ಸವಾಲಾಗಿದೆ. ಈಗಿರುವ ಮಹಾಭಿಯೋಗದ ಪ್ರಕ್ರಿಯೆಯಲ್ಲಿ ಜನಸಾಮಾನ್ಯರ ಪಾತ್ರವಿಲ್ಲ, ನ್ಯಾಯಾಂಗವು ಜನತೆಗೆ ಉತ್ತರ ನೀಡಬೇಕಾಗಿಲ್ಲ, ಅವರ ಆಸ್ತಿ-ಪಾಸ್ತಿಗಳ ವಿವರ ಬಹಿರಂಗ ಪಡಿಸಬೇಕಾಗಿಲ್ಲ, ಯಾರಾದರೂ ಆಧಾರಸಹಿತವಾಗಿ ನ್ಯಾಯಾಧೀಶರ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿದರೂ ನ್ಯಾಯಾಲಯ ನಿಂದನೆ ಪ್ರಕರಣ ದಾಖಲಿಸಿ ಅವರ ಬಾಯಿ ಮುಚ್ಚಿಸಬಹುದು, ಮಾಹಿತಿ ಹಕ್ಕು ಕಾನೂನು ತಮಗೆ ಅನ್ವಯಿಸುವುದಿಲ್ಲವೆಂದು ಮಾಹಿತಿ ನೀಡಲು ನಿರಾಕರಿಸಬಹುದು. ಇದು ನ್ಯಾಯಾಂಗದಲ್ಲಿನ ಭ್ರಷ್ಟಾಚಾರವನ್ನು ಮುಚ್ಚಿಹಾಕುವುದಲ್ಲದೆ, ಅದರಲ್ಲಿ ತೊಡಗಿರುವವರಿಗೆ ರಕ್ಷಣೆಯನ್ನು ಕೊಡುತ್ತದೆ, ಅದನ್ನು ಮುಂದುವರಿಸಲು ಧೈರ್ಯ ತುಂಬುತ್ತದೆ ಎನ್ನುವುದು ವಿಚಾರವಂತರ ಕಾಳಜಿಯಾಗಿದೆ. ಇತ್ತೀಚಿಗಿನವರೆಗೆ ಸರ್ವೋಚ್ಚ ನ್ಯಾಯಾಂಗದ ಮುಖ್ಯ ನ್ಯಾಯಮೂರ್ತಿಗಳಾಗಿದ್ದವರು, ನ್ಯಾಯಾಧೀಶರು ತಮ್ಮ ಆಸ್ತಿ-ಪಾಸ್ತಿ ವಿವರ ನೀಡುವುದನ್ನು ವಿರೋಧಿಸುತ್ತಿದ್ದರೂ, ಹಲವು ನ್ಯಾಯಾಧೀಶರು ಅದನ್ನು ವಿರೋಧಿಸಿ ಸ್ವಯಂ ಪ್ರೇರಿತರಾಗಿ ವೆಬ್‌ಸೈಟ್‌ಗಳಲ್ಲಿ ತಮ್ಮ ಆಸ್ತಿ-ಪಾಸ್ತಿಗಳ ವಿವರ ಪ್ರಕಟಿಸಿದರು. ಕರ್ನಾಟಕದಲ್ಲಿ ಹಿಂದೆ ಲೈಂಗಿಕ ಹಗರಣದಲ್ಲಿ ನ್ಯಾಯಾಧೀಶರನೇಕರ ಹೆಸರು ಪ್ರಸ್ತಾಪಿತವಾಗಿ, ಮಾಧ್ಯಮಗಳಲ್ಲಿ ಬಹುಚರ್ಚಿತ ವಿಷಯವಾಗಿದ್ದರೂ, ನ್ಯಾಯಾಂಗ ನಿಂದನೆಯ ಆಯುಧ ಪ್ರಯೋಗಿಸಿ ಅದನ್ನು ನಿಗ್ರಹಿಸಲಾಯಿತು. ಇತ್ತೀಚಿನ ಕರ್ನಾಟಕ ಲೋಕಾಯುಕ್ತರ ನೇಮಕಾತಿಯ ಸಂಬಂಧವಾಗಿ ಹಲವಾರು ವಿಷಯಗಳು ಹೊರ ಬೀಳುತ್ತಿದ್ದು, ಆ ಸ್ಥಾನಕ್ಕೆ ಕಳಂಕರಹಿತ ವ್ಯಕ್ತಿಗಳು ಸಿಗುವುದೇ ಕಷ್ಟವಾಗುತ್ತಿದೆ, ಎಂದು ಭಾಸವಾಗುತ್ತಿದೆ. ನ್ಯಾಯಾಂಗ ಬಡಾವಣೆಯ ಪ್ರಕರಣ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಇದ್ದಾಗ, ಆಗಿದ್ದ ಒಬ್ಬ ನ್ಯಾಯಾಧೀಶ ಆ ಪ್ರಕರಣದ ವಿಚಾರಣೆ ನಡೆಸಲು ಶಕ್ತರಾಗಿರಲಿಲ್ಲ, ಏಕೆಂದರೆ, ಪ್ರತಿಯೊಬ್ಬರೂ ಆ ಆಪಾದನೆ ಎದುರಿಸುತ್ತಿದ್ದರು. ಹಾಗಾಗಿ, ಚೆನ್ನೈ ನ್ಯಾಯಾಲಯದಿಂದ ಕರ್ನಾಟಕಕ್ಕೆ ವರ್ಗಾವಣೆಗೊಂಡು ಬಂದಿದ್ದ ನ್ಯಾಯಾಧೀಶರೊಬ್ಬರು, ಬೇರೆ ಪ್ರಕರಣ ನಡೆಸಲು ಇಲ್ಲಿಗೆ [illegible]



ಹೋದರೂ, ಈ ಪ್ರಕರಣದ ವಿಚಾರಣೆ ನಡೆಸುವ ಸಲುವಾಗಿಯೇ ಇಲ್ಲಿಗೆ ಬರುತ್ತಿದ್ದರು, ಪ್ರಕರಣ ವಜಾಗೊಂಡಿತು. ಹಲವಾರು ಇಂತಹ ಹತ್ತು ಪ್ರಕರಣಗಳು ಜನಸಾಮಾನ್ಯರಲ್ಲಿ ನ್ಯಾಯಾಂಗದ ಬಗ್ಗೆಯೂ ಸಂದೇಹವನ್ನು ಹುಟ್ಟುಹಾಕಿವೆ. ನ್ಯಾಯಾಂಗವೂ ಕಾರ್ಯಾಂಗ ಶಾಸಕಾಂಗದಂತೆ ಜನರಿಗೆ ಉತ್ತರದಾಯಿತ್ವ ಹೊಂದಿರಬೇಕು. ಅದರ ಕಾರ್ಯಚಟುವಟಿಕೆಗಳು, ನ್ಯಾಯಾಧೀಶರ ಆಸ್ತಿ-ಪಾಸ್ತಿ ವಿವರಗಳು ಪಾರದರ್ಶಕವಾಗಿರಬೇಕು, ಜನಸಾಮಾನ್ಯರಿಗೆ ಮಾಹಿತಿ ಹಕ್ಕಿನ ಅಧಿನಿಯಮದಡಿ ಯಾವುದೇ ಮಾಹಿತಿ ದೊರಕುವಂತಿರಬೇಕು, ದೂರು ನೀಡಲು, ದೂರಿನ ವಿಚಾರಣೆ ನಡೆಸಲು ನೊಂದವರಿಗೆ ಸುಲಭವಾಗಿ ಸಿಗುವ ವ್ಯವಸ್ಥೆಯೊಂದಿರಬೇಕು ಎನ್ನುವುದು ಜನಾಂದೋಳನದ ಕರೆಯಾಗಿದೆ. ಕಾಲದ ಕರೆಗೆ ಸ್ಪಂದಿಸಿದ ಕೇಂದ್ರ ಸರ್ಕಾರ ನ್ಯಾಯಾಂಗದ ನೈತಿಕ ಮಟ್ಟ ಮತ್ತು ಉತ್ತರದಾಯಿತ್ವ ಮಸೂದೆ, ೨೦೧೦ಅನ್ನು ದಿನಾಂಕ ೩೦-೦೮-೨೦೧೧ರಂದು ರಾಜ್ಯಸಭೆಯಲ್ಲಿ ಮಂಡಿಸಿದೆ ಹಾಗೂ ಅದೇ ದಿನದಂದು ಲೋಕಸಭೆಯ ಮುಂದೆಯೂ ಇಟ್ಟಿದೆ. ಅದರೊಂದಿಗೆ ಸರ್ಕಾರೇತರ ಸಂಸ್ಥೆಗಳ, ಕಾನೂನು ಪರಿಣತರ, ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಿದ ಸಂಬಂಧಿಸಿದ ಸಮಿತಿಯು ಈ ಮಸೂದೆಯ ಬಗ್ಗೆ ತನ್ನ ಶಿಫಾರಸುಗಳನ್ನೂ ಸಲ್ಲಿಸಿದೆ.

ಈ ಮಸೂದೆಯು ನ್ಯಾಯಾಂಗದಲ್ಲಿರುವ ಭ್ರಷ್ಟಾಚಾರವನ್ನು ನಿವಾರಿಸಲು ಹಲವಾರು ಮಹತ್ವದ ಅಂಶಗಳನ್ನು ಹೊಂದಿದೆ. ೨ನೇ ಅಧ್ಯಾಯವು ಉಚ್ಚ / ಸರ್ವೋಚ್ಚ ನ್ಯಾಯಾಂಗದ ನ್ಯಾಯಾಧೀಶರು ಅನುಸರಿಸಬೇಕಾದ ನ್ಯಾಯಿಕ ನಡತೆಯ ಬಗ್ಗೆ ತಿಳಿಸುತ್ತದೆ. ಜಾಗತಿಕವಾಗಿ ಒಪ್ಪಿತವಾದ ನ್ಯಾಯಿಕ ಜೀವನದ ಮೌಲ್ಯಗಳನ್ನು ಪ್ರತಿಯೊಬ್ಬ ನ್ಯಾಯಾಧೀಶರೂ ಅನುಸರಿಸಬೇಕೆಂದು ಹೇಳುತ್ತದೆ. ಅವುಗಳಲ್ಲಿ ಕೆಲವೊಂದು ಹೆಸರಿಸಿರುವ ನಡವಳಿಕೆ ಎಂದರೆ, ಯಾವ ನ್ಯಾಯಾಧೀಶರೂ –

(೧) ಕಾನೂನು ಅಥವಾ ನ್ಯಾಯಾಲಯಕ್ಕೆ ಸಂಬಂಧಿಸಿರುವುದನ್ನು ಹೊರತುಪಡಿಸಿ ಮತ್ತಾವುದೇ ಕ್ಲಬ್, ಸೊಸೈಟಿ ಅಥವಾ ಸಂಘ-ಸಂಸ್ಥೆಗಳ ಪದಾಧಿಕಾರಿಯಾಗಲು ಚುನಾವಣೆಯಲ್ಲಿ ಭಾಗವಹಿಸಬಾರದು;

(೨) ವಕೀಲ ವೃಂದದ, ಅದರಲ್ಲೂ ನಿರ್ದಿಷ್ಟವಾಗಿ ಅವರು ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿರುವ ನ್ಯಾಯಾಲಯದಲ್ಲಿ ವಕೀಲರಾಗಿ ಭಾಗವಹಿಸುವ ಯಾವ ವಕೀಲರೊಂದಿಗೂ ಹತ್ತಿರದ ಸಂಪರ್ಕವಿಟ್ಟುಕೊಳ್ಳಬಾರದು;

(೩) ಹೆಂಡತಿ/ಗಂಡ, ಮಗ, ಮಗಳು, ಅಳಿಯ, ಸೊಸೆ ಅಥವಾ ಮತ್ತಾವ ಹತ್ತಿರದ ಸಂಬಂಧಿಕರನ್ನೊಳಗೊಂಡಂತೆ ಅವರ ಕುಟುಂಬದ ಸದಸ್ಯ ಯಾರಾದರೂ ವಕೀಲರಾಗಿದ್ದಲ್ಲಿ, ಅವರಿಗೆ ತಮ್ಮ ಮುಂದೆ ವಾದಿಸಲು ಸ ಕೊಡಬಾರದು ಅಥವಾ ಅವರ ಮುಂದಿರುವ ಮೊಕದ್ದಮೆಯೊಂ ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರಲು ಅನುಮತಿಸಬಾರದು;

(೪) ತಮ್ಮ ಕುಟುಂಬದ ಯಾರೇ ಸದಸ್ಯರು, ಹತ್ತಿರದ ಸಂಬಂಧಿ ಅಥವಾ ಮಿತ ಸಂಬಂಧ ಹೊಂದಿರುವ ಪ್ರಕರಣಗಳ ವಿಚಾರಣೆ ನಡೆಸಬಾರದು, ಅದ ತೀರ್ಮಾನಿಸಬಾರದು.

(೫) ಯಾವುದೇ ರಾಜಕೀಯ ವಿಷಯದ ಬಗ್ಗೆ ಅಥವಾ ತಮ್ಮ ಮು ವಿಚಾರಣೆಯಲ್ಲಿರುವ ಅಥವಾ ವಿಚಾರಣೆಗೆ ಬರಬಹುದಾದ ವಿಷಯದ ಸಾರ್ವಜನಿಕ ಚರ್ಚೆಗಳಲ್ಲಿ ಭಾಗವಹಿಸಬಾರದು ಅಥವಾ ಸಾರ್ವಜನಿಕ ಅಭಿಪ್ರಾಯ ವ್ಯಕ್ತಪಡಿಸಬಾರದು. ಆದರೆ, ವೈಯಕ್ತಿಕವಾಗಿ, ಸಾರ್ವಜ ಹಿತಾಸಕ್ತಿಯ ವಿಷಯದ ಬಗ್ಗೆ, ಖಾಸಗಿ ಸಭೆ ಅಥವಾ ಅಕ್ಯಾಡೆ ಸಭೆಯಲ್ಲಿ ವ್ಯಕ್ತಪಡಿಸುವ ಅಭಿಪ್ರಾಯಗಳಿಗೆ ಇದು ಅನ್ವಯಿಸುವುದಿಲ್ಲ. ರೀತಿ, ನ್ಯಾಯಾಲಯದ ಆಡಳಿತ ಅಥವಾ ಸಮರ್ಥ ಕಾರ್ಯನಿರ್ವಹ ಸಂಬಂಧಿಸಿದಂತೆ ವ್ಯಕ್ತಪಡಿಸುವ ಅಭಿಪ್ರಾಯಗಳೂ ಇದರಲ್ಲಿ ಬರುವುದಿಲ್ಲ

(೬) ತಾವು ವಿಚಾರಣೆ ನಡೆಸಿದ ಯಾವುದೇ ಪ್ರಕರಣದಲ್ಲಿ ನೀಡಿದ ಯಾವು ತೀರ್ಪು/ಆದೇಶ/ನಿರ್ದೇಶನದ ಬಗ್ಗೆ ಮಾಧ್ಯಮದವರಿಗೆ ಸಂದರ್ಶ ನೀಡಬಾರದು;

(೭) ತಮ್ಮ ಸಂಬಂಧಿಕರನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಕೊಡುಗೆಯ ಅಥವಾ ಆತಿಥ್ಯವನ್ನು ಸ್ವೀಕರಿಸಬಾರದು;

(೮) ತಾವು ಅಥವಾ ತಮ್ಮ ಕುಟುಂಬದ ಯಾರೇ ಸದಸ್ಯರು ಶೇರುಗಳು ಅಥ ಹಿತಾಸಕ್ತಿ ಹೊಂದಿರುವ ಕಂಪನಿ ಅಥವಾ ಸೊಸೈಟಿ ಅಥವಾ ಟ್ರಸ್ಟ್‌ಗೆ ಸಂಬ ಸಿದ ಪ್ರಕರಣವನ್ನು ಅಂತಹ ಶೇರುಗಳು ಅಥವಾ ಹಿತಾಸಕ್ತಿಯ

ಬಹಿರಂಗಪಡಿಸಿ, ಆ ಪ್ರಕರಣದ ಬಗ್ಗೆ ವಿಚಾರಣೆ ಮಾಡಲು, ತೀರ್ಮಾನ ನೀಡಲು ಆಕ್ಷೇಪಣೆ ಇಲ್ಲದ ಹೊರತು, ವಿಚಾರಣೆ ಕೈಗೆತ್ತಿಕೊಳ್ಳುವಂತಿಲ್ಲ, ತೀರ್ಮಾನ ನೀಡುವಂತಿಲ್ಲ;

) ಸೆಕ್ಯೂರಿಟಿಗಳು ಮತ್ತು ಇನ್‌ಸೈಡ್ ಟ್ರೇಡಿಂಗ್‌ನಂತಹ ಚಟುವಟಿಕೆ ನಡೆಸುವಂತಿಲ್ಲ;

) ತಾವೊಬ್ಬರೇ ಅಥವಾ ಇತರರೊಂದಿಗೆ ಸೇರಿಕೊಂಡು ಯಾವುದೇ ವ್ಯಾಪಾರ, ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ/ಪರೋಕ್ಷವಾಗಿ ಭಾಗವಹಿಸುವಂತಿಲ್ಲ; ಆದರೆ, ಕಾನೂನು ಪ್ರಬಂಧದ ಮುದ್ರಣ ಅಥವಾ ಹವ್ಯಾಸಿ ಚಟುವಟಿಕೆ, ವ್ಯಾಪಾರ/ವ್ಯವಹಾರ ಎನಿಸುವುದಿಲ್ಲ.

) ಸ್ಪಷ್ಟವಾಗಿ ಲಭ್ಯಗೊಳಿಸಿದ್ದ ಹೊರತು ಅಥವಾ ಕೊಟ್ಟಿದ್ದ ಹೊರತು, ನ್ಯಾಯಾಧೀಶ ಹುದ್ದೆಗೆ ಸಂಬಂಧಿಸಿದ ಮತ್ತಾವುದೇ ಆನುಷಂಗಿಕ ಲಾಭ ಅಥವಾ ವಿಶೇಷ ಸೌಕರ್ಯಗಳಂತಹ ಆರ್ಥಿಕ ಫಲಾನುಭವವನ್ನು ನಿರೀಕ್ಷಿಸಬಾರದು;

೦) ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ಭೇದಭಾವ ತೋರುವ ಯಾವುದೇ ಸಂಸ್ಥೆಯ ಸದಸ್ಯತ್ವ ಹೊಂದಿರಬಾರದು;

೧) ಇದೇ ಕಾರಣದ ಮೇಲೆ ತಮ್ಮ ನ್ಯಾಯಿಕ ಕಾರ್ಯದಲ್ಲಿ ಪಕ್ಷಪಾತ ಧೋರಣೆ ಹೊಂದಿರಬಾರದು ಅಥವಾ ತೀರ್ಪು ನೀಡಬಾರದು.

ಈ ಮೇಲ್ಕಂಡ ನೀತಿಸಂಹಿತೆ ನ್ಯಾಯಾಧೀಶರಾಗಿರುವವರು ಹೇಗೆ ಉಚ್ಚಮಟ್ಟದ ಕ ಮೌಲ್ಯಗಳನ್ನು ಕಾಪಾಡಿಕೊಂಡು, ಸಂದೇಹಾತೀತರಾಗಿ, ಸೀಸರ್‌ನ ಡತಿಯಂತೆ, ಇರಬೇಕೆಂಬುದನ್ನು ಹೇಳುತ್ತದೆ.

೩ನೇ ಅನುಚ್ಛೇದ, ಪ್ರತಿಯೊಬ್ಬ ನ್ಯಾಯಾಧೀಶರೂ, ತಾವು ನ್ಯಾಯಾಧೀಶರಾಗಿ ಮಾಣ ವಚನ ಸ್ವೀಕರಿಸಿದ ೩೦ ದಿನದೊಳಗೆ ಹಾಗೂ ಈಗಾಗಲೇ ಆ ದ್ದೆಯಲ್ಲಿದ್ದರೆ, ಈ ಕಾನೂನು ಜಾರಿಗೆ ಬಂದ ೩೦ ದಿನದೊಳಗೆ, ತಮ್ಮ ಪತಿ/ ತ್ನಿಯ ಹಾಗೂ ಅವಲಂಬಿತ ಮಕ್ಕಳ ಆಸ್ತಿ-ಪಾಸ್ತಿಯ ಬಗ್ಗೆ ಮತ್ತು ಹಣಕಾಸಿನ ಜವಾಬ್ದಾರಿಗಳ ಬಗ್ಗೆ ನಿರ್ದಿಷ್ಟ ಅಧಿಕಾರಿಗೆ ತಿಳಿಸಬೇಕೆಂದು ಹೇಳುತ್ತದೆ. ಅದೇ ರೀತಿ, ಂದೆ, ಪ್ರತಿವರ್ಷದ ಜುಲೈ ೩೧ರೊಳಗೆ, ಆ ವರ್ಷದ ಮಾರ್ಚ್ ೩೧ರೊಳಗಿನ ಮ್ಮ ಹಾಗೂ ಇತರರ ಆಸ್ತಿ-ಪಾಸ್ತಿ, ಹಣಕಾಸಿನ ಜವಾಬ್ದಾರಿಗಳ ಬಗ್ಗೆ ರಿಟರ್ನ್ ಖಲಿಸಬೇಕು. ಆ ಅಧಿಕಾರಿಯು ಆ ಮಾಹಿತಿಯನ್ನು ಉಚ್ಚ ನ್ಯಾಯಾಲಯದ/ ರ್ವೋಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು ಹಾಗೂ ಆ ಖಲಾತಿಗಳನ್ನು ಅವಶ್ಯಕವಿರುವ ಸಮಯದವರೆಗೆ ಭದ್ರ ಸುಪರ್ದಿನಲ್ಲಿ ಟ್ಟುಕೊಳ್ಳತಕ್ಕದ್ದು ಎಂದೂ ಹೇಳುತ್ತದೆ. ಇದುವರೆಗೆ ನಿವೃತ್ತ ನ್ಯಾಯಮೂರ್ತಿ ಶ್ರೀ ಲಕೃಷ್ಣನ್ ಅವರು ವಿರೋಧಿಸುತ್ತಾ ಬಂದ ಹಾಗೂ ಹಲವಾರು ನ್ಯಾಯಾಧೀಶರು ಇಚ್ಛೆಯಿಂದ ಮಾಹಿತಿ ನೀಡುತ್ತಾ ಬಂದ ವಿವಾದಕ್ಕೆ ಇದು ಕಾನೂನಾತ್ಮಕ ತ್ತರವನ್ನು ಕೊಡುತ್ತದೆ, ನ್ಯಾಯಾಂಗದ ಪಾರದರ್ಶಕತೆ ನ್ಯಾಯದಾನದ ಪ್ರಕ್ರಿಯೆಯಲ್ಲಿ ಬಿಕೆಯನ್ನು ಬಲಗೊಳಿಸುತ್ತದೆ ಎನ್ನುವುದು ಇದರ ಹಿಂದಿನ ಉದ್ದೇಶ.

ಮುಖ್ಯವಾಗಿ, ಈ ಕಾನೂನು ಹೊಂದಿರುವ ಕ್ರಾಂತಿಕಾರಿ ಅಂಶವೆಂದರೆ, ೪ನೇ ್ಯಾಯದಲ್ಲಿ ದೂರು ನೀಡಲು ಅವಕಾಶಕೊಟ್ಟಿರುವ ಅಂಶ. ಅದರಂತೆ, ವುದೇ ನ್ಯಾಯಾಧೀಶರ ದುರ್ನಡತೆ ಅಥವಾ ಅಸಮರ್ಥತೆಯ ಬಗ್ಗೆ ದೂರು ಡಲು ಬಯಸುವ ಯಾರೇ ವ್ಯಕ್ತಿ ತನ್ನ ದೂರನ್ನು ಈ ಕಾನೂನಿನಡಿಯಲ್ಲಿ ಮಕಗೊಳ್ಳುವ ''ಮೇಲ್ವಿಚಾರಣಾ ಸಮಿತಿ'' (oversight committee)ಗೆ ಲ್ಲಿಸಬಹುದು. ಅದರಲ್ಲಿ ಅಂತಹ ದೂರಿನ ವಿವರಗಳನ್ನು, ಆ ದೂರಿನ ಧಾರಗಳನ್ನು ನಿರ್ದಿಷ್ಟ ನಮೂನೆಯಲ್ಲಿ ಸಲ್ಲಿಸಬೇಕಾಗುತ್ತದೆ.

ಕೇವಲ ಸಂಸತ್ ಸದಸ್ಯರಿಗೆ ಮಾತ್ರವಲ್ಲದೆ ಮಾಹಿತಿ ಹೊಂದಿರುವ ಯಾರೇ ಕ್ತಿಗಳೂ ನ್ಯಾಯಾಧೀಶರ ದುರ್ನಡತೆ/ಅಸಮರ್ಥತೆ ಬಗ್ಗೆ ದೂರು ನೀಡಲು ಕಾಶವಿರುವುದು ಇದರ ವಿಶೇಷತೆ. ಅವರು ವಕೀಲರಾಗಿರಬಹುದು, ಕಕ್ಷಿದಾರರಿರ ಬಹುದು ಅಥವಾ ಬೇರೆ ಜನಸಾಮಾನ್ಯರೂ ಇರಬಹುದು ಎನ್ನುವುದು ಇದರ ವಿಶೇಷತೆ.

ಆಯಾಯಾ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ೕ ಅಧ್ಯಾಯದಡಿ ನೇಮಿಸಲಾಗುವ ಸೂಕ್ತ ದೂರು ಪರಿಶೀಲನಾ ಪ್ಯಾನಲ್ mplaints scrutiny panel)ಗೆ ಇಂತಹ ದೂರನ್ನು ಪರಿಶೀಲನೆಗೆ ಸಲಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ಪ್ಯಾನಲ್‌ನಲ್ಲಿ ಆ ನ್ಯಾಯಾಲಯದ ವೃತ್ತ ಮುಖ್ಯ ನ್ಯಾಯಮೂರ್ತಿಗಳು ಮತ್ತು ಹಾಲಿ ಮುಖ್ಯ ನ್ಯಾಯಮೂರ್ತಿಗಳು

ನೆಲಾನುಂಗಿದ ಮ್ಯಾಲ

ಭೂಮಿ ನುಂಗ್ಯಾರೋ ಭೂಮ್ಯಾನ ಅದಿರ ನುಂಗ್ಯಾರೋ
ತಿನ್ನೂದೆಲ್ಲಾ ತಿಂದ ಮ್ಯಾಗ ವೇಷಾ ಹಾಕ್ಯಾರೋ
ದೇವರಿಗಿ ಟೊಪಿಗಿ ಇಟ್ಟಾರೋ।

ಸಾಚಾ ಆಗ್ಯಾರೋ ದಾನಾಧರ್ಮಕ ನಿಂತಾರೋ
ಬಡ್ತನ ಅಂದಾರೋ ಬವಣಿ ಉಂಡೇ ಬಂದೇವೋ
ಕಿಚ್ಚಿಲೆ ತಂದೇವೋ ಕಾಪ್ಟರ ಹತ್ತೇಬಿಟ್ಟೇವೋ।

ಹರಕ ಅಂಗಿ ತ್ಯಾಪಿಚಣ್ಣ ಉಟಗೊಂಡ ತಿರುಗೇವೋ
ಬೆಲ್ಲದ ಕರಿ ಚಾ ಕುಡದ ಚಿಣಿಫಣಿ ಆಡೇವೋ
ಅದಕs ನೋಟಿಲೆ ಅರಮನಿಕಟ್ಟೇವೋ ಬಂಗಾರಸಿಂಹಾಸನ
ಏರೇವೋ।

ಮಣ್ಣತಿಂದೇವೋ ಬ್ರಹ್ಮಾಂಡ ಬಾಯಾಗ ಹಿಡದೇವೋ
ಅವ್ವನ ಪಾದಕ ಉಧೋ... ಉಧೋ... ಅಂದೇವೋ
ಬಿದ್ದೂ ಎದ್ದೂ ಬಯಲಾಟ ಮಾಡೇವೋ।

ಮುದ್ದಿಸಕ್ರಿ ಹಂಚೇವೋ ಊದ ಬಾನಾ ಹಾಕೇವೋ
ಬಣ್ಣದಗರಿ ತೆಲಿಮ್ಯಾಲಾಡಿಸಿ ಥೂ...ಲಾ... ಆಡೇವೋ
ಮ್ಯಾಕ ಗುಲಾಲ್ ತೂರೇವೋ।

ಕಣ್ಣ ಒರಿಸ್ಯಾರೋ ಕಣ್ಣಾನ ಧೂಳ ಊದ್ಯಾರೋ
ಹೀರೋ ಹೋಗಿ ಜೋಕರ ಆಗಿ ಝೀರೋ ಮಾಡ್ಯಾರೋ
ಸೀದಾ ಅಲ್ಲಿಗೇ ಕಳಿಸ್ಯಾರೋ
ಚಕ್ಕೆ ತಿರುವಾಕ ಹಚ್ಯಾರೊ ಬುದ್ಧೀಕಲಿಸ್ಯಾರೋ।



ಹಣಮಂತ ತಾಸಗಾಂವಕರ
'ಸುದನ್ವ', ಸೆಕ್ಟರ ನಂ.೧೮/೨೫, ನವನಗರ, ಬಾಗಲಕೋಟ - ೫೮೭ ೧೦೩

ನೇಮಿಸಿದ ಇಬ್ಬರು ಹಾಲಿ ನ್ಯಾಯಾಧೀಶರು ಸದಸ್ಯರಾಗಿರುತ್ತಾರೆ.

ಪ್ರತಿ ಉಚ್ಚ ನ್ಯಾಯಾಲಯದ ಪ್ಯಾನಲ್‌ನಲ್ಲಿ ಆ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು, ಹಾಲಿ ಮುಖ್ಯ ನ್ಯಾಯಾಧೀಶರು ನೇಮಿಸಿದ ಅದೇ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರು ಸದಸ್ಯರಾಗಿರುತ್ತಾರೆ.

ಆದರೆ ಈ ಮಸೂದೆಯ ಬಗ್ಗೆ ಸಮಿತಿಯ ಮುಂದೆ ಹಾಜರಾಗಿ ಅಭಿಪ್ರಾಯ ವ್ಯಕ್ತಪಡಿಸಿದ ಅನೇಕರು ಇದನ್ನು ಒಪ್ಪಿಲ್ಲ. ಅದೇ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಬದಲು ಬೇರೆ-ಬೇರೆ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ಸದಸ್ಯರಾಗಿ ನೇಮಿಸಬೇಕೆಂದು ಸೂಚಿಸಿದ್ದಾರೆ. ಅದನ್ನು ಸಮಿತಿಯೂ ಒಪ್ಪಿ ಅದೇ ರೀತಿ ಶಿಫಾರಸ್ಸು ಮಾಡಿದೆ. ಇದರಿಂದ ಪ್ಯಾನಲ್ ಸದಸ್ಯರು ಹೆಚ್ಚು ವಸ್ತುನಿಷ್ಠವಾಗಿ, ಯಾವುದೇ ಮುಜುಗರ, ಸಂಕೋಚಕ್ಕೆ ಒಳಗಾಗದೆ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎನ್ನುವುದು ಅದರ ಹಿಂದಿರುವ ವಿಚಾರ. ಏಕೆಂದರೆ ಅವರು ತಮ್ಮದೇ ನ್ಯಾಯಾಲಯದ ಜೊತೆಯ ನ್ಯಾಯಾಧೀಶರ ವಿರುದ್ಧದ ದೂರನ್ನು ಪರಿಶೀಲಿಸಬೇಕಾಗುತ್ತದೆ.

೫ನೇ ಅಧ್ಯಾಯದಲ್ಲಿ ಹೇಳಿರುವಂತೆ ಈ ದೂರು ಪರಿಶೀಲನಾ ಪ್ಯಾನಲ್ ದೂರಿನ ಪರಿಶೀಲನೆಯ ನಂತರ ಆ ನ್ಯಾಯಾಧೀಶರ ವಿರುದ್ಧ ವಿಚಾರಣೆ ಮುಂದುವರಿಯಲು ಸಾಕಷ್ಟು ಕಾರಣಗಳಿವೆ ಎಂದು ಕಂಡುಕೊಂಡಲ್ಲಿ, ತನ್ನ ನಿರ್ಣಯವನ್ನು ಕಾರಣಗಳೊಂದಿಗೆ ಮೇಲ್ವಿಚಾರಣಾ ಸಮಿತಿಗೆ ವರದಿಯ ರೂಪದಲ್ಲಿ ಸಲ್ಲಿಸುತ್ತದೆ. ಆದರೆ, ದೂರಿಗೆ ಆಧಾರವಿಲ್ಲವೆಂದು, ಅದು ಕ್ಷುಲ್ಲಕವಾಗಿದೆ ಎಂದು, ಅದನ್ನು ಸದಭಿಪ್ರಾಯದಿಂದ ಮಾಡಲಾಗಿಲ್ಲ ಎಂದು ಕಂಡುಬಂದಲ್ಲಿ, ಅಥವಾ ಅದು ನ್ಯಾಯಾಧೀಶರ ತೀರ್ಪಿನ ಸತ್ಯಾಸತ್ಯತೆಯ ಬಗ್ಗೆ ಅಥವಾ ಪ್ರಕ್ರಿಯಾತ್ಮಕ ಆದೇಶದ ಬಗ್ಗೆ ಮಾತ್ರ ಸಂಬಂಧಪಟ್ಟಿದೆ ಎಂದು ಕಂಡುಬಂದಲ್ಲಿ, ಪ್ಯಾನಲ್, ಸಮಿತಿಗೆ ಆ ಬಗ್ಗೆ ವರದಿ ಕಳಿಸಿ ವಿಚಾರಣೆಯನ್ನು ಮುಂದುವರಿಸದೆ ಅಲ್ಲಿಗೇ ಮುಗಿಸಲು ಶಿಫಾರಸ್ಸು ಮಾಡಬಹುದು. ಈ ರೀತಿ ಪ್ಯಾನಲ್ ವಿಚಾರಣೆ ಮಾಡಿ ವರದಿ ಒಪ್ಪಿಸಲು ಅದಕ್ಕೆ ೩ ತಿಂಗಳ ಕಾಲಾವಧಿ ಇರುತ್ತದೆ. ಈ ಪ್ಯಾನೆಲ್‌ಗೆ ದೂರನ್ನು ಪರಿಶೀಲಿಸಲು ಸಿವಿಲ್ ನ್ಯಾಯಾಲಯಕ್ಕೆ ಒಂದು ಮೊಕದ್ದಮೆಯನ್ನು ವಿಚಾರಣೆ ಮಾಡಲು ಸಿವಿಲ್ ಪ್ರಕ್ರಿಯೆ ಸಂಹಿತೆಯಲ್ಲಿರುವ ಎಲ್ಲಾ ಅಧಿಕಾರಗಳೂ ಇರುತ್ತವೆ, ಹಾಗೆಯೇ ತಕ್ಕ ಸಿಬ್ಬಂದಿಯ ಸಹಾಯವೂ ಇರುತ್ತದೆ. ಆದರೆ, ಪರಿಶೀಲನೆಯ ನಂತರ, ಒಂದು ದೂರ[illegible] ವಿನಾಕಾರಣ, ಕ್ಷುಲ್ಲಕ ಕಾರಣಕ್ಕೆ ಅಥವಾ ಯಾರೇ ನ್ಯಾಯಾಧೀಶರನ್ನು ಬೆದರಿಸ[illegible] ಅವರ ಹೆಸರು ಕೆಡಿಸಲು ನೀಡಲಾಗಿದೆ ಎಂಬ ತೀರ್ಮಾನಕ್ಕೆ ಪ್ಯಾನಲ್ ಬಂದರೆ, [illegible] ಅದರ ಬಗ್ಗೆ ದೂರು ಕೊಟ್ಟವರ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲು ಪ್ರಕರಣ[illegible] ಮೇಲ್ವಿಚಾರಣಾ ಸಮಿತಿಗೆ ಒಪ್ಪಿಸಬಹುದಾಗಿದೆ.

ರಾಷ್ಟ್ರಮಟ್ಟದಲ್ಲಿ, ಕೇಂದ್ರ ಸರ್ಕಾರವು, ಒಂದು ರಾಷ್ಟ್ರೀಯ ನ್ಯಾಯ[illegible] ಮೇಲ್ವಿಚಾರಣಾ ಸಮಿತಿಯ ನೇಮಕ ಮಾಡಬೇಕೆಂದು ೬ನೇ ಅಧ್ಯಾಯ[illegible] ತಿಳಿಸುತ್ತದೆ. ರಾಷ್ಟ್ರಪತಿಯವರು ಭಾರತದ ಮುಖ್ಯ ನ್ಯಾಯಮೂರ್ತಿಯ[illegible] ಅಭಿಪ್ರಾಯ ಪಡೆದು ವಿಶ್ರಾಂತರಾದ ಭಾರತದ ಮುಖ್ಯ ನ್ಯಾಯಮೂರ್ತಿಯೊಬ್ಬರ[illegible] ಇದಕ್ಕೆ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ. ಭಾರತದ ಮುಖ್ಯ ನ್ಯಾಯಮೂರ್ತಿಯವ[illegible] ಸರ್ವೋಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರನ್ನು ಒಬ್ಬ ಸದಸ್ಯರಾಗಿ, ಹಾಗ[illegible] ಉಚ್ಚ ನ್ಯಾಯಾಲಯವೊಂದರ ಮುಖ್ಯ ನ್ಯಾಯಾಧೀಶರೊಬ್ಬರನ್ನು ಮತ್ತೊ[illegible] ಪದನಿಮಿತ್ತ ಸದಸ್ಯರಾಗಿ ನೇಮಿಸುತ್ತಾರೆ. ಭಾರತದ ಅಟಾರ್ನಿ ಜನರಲ್ ಪದನಿ[illegible] ಸದಸ್ಯರಾಗಿರುತ್ತಾರೆ ಹಾಗೂ ರಾಷ್ಟ್ರಪತಿಗಳು ಒಬ್ಬರು ಗೌರವಾನ್ವಿತ ವ್ಯಕ್ತಿಯ[illegible] ಮತ್ತೊಬ್ಬ ಸದಸ್ಯರಾಗಿ ನೇಮಕ ಮಾಡುತ್ತಾರೆ. ಇದರಲ್ಲಿರುವ ನ್ಯಾಯಾಧೀ[illegible] ಮೇಲೆಯೇ ದೂರುಗಳಿದ್ದಲ್ಲಿ ಬೇರೆಯೇ ನ್ಯಾಯಾಧೀಶರನ್ನು ಅವರ ಸ್ಥಳ[illegible] ನೇಮಿಸಲು ಅವಕಾಶವಿದೆ. ಈ ಸಮಿತಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀ[illegible] ರೊಬ್ಬರ ವಿರುದ್ಧ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊ[illegible] ವಿರುದ್ಧ ದೂರು ಬಂದಲ್ಲಿ ಅದು ಮೂರು ತಿಂಗಳೊಳಗೆ ಅದನ್ನು ಪರಿಶೀಲಿಸ[illegible] ಸರ್ವೋಚ್ಚ ನ್ಯಾಯಾಲಯದ ಪರಿಶೀಲನಾ ಪ್ಯಾನಲ್‌ಗೆ ಕಳಿಸತಕ್ಕದ್ದು. ಅದೇ ರೀ[illegible] ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವಿರುದ್ಧದ ದೂರನ್ನು ಅದೇ ಉ[illegible] ನ್ಯಾಯಾಲಯದ ಪರಿಶೀಲನಾ ಪ್ಯಾನೆಲ್‌ಗೆ ಕಳಿಸತಕ್ಕದ್ದು. ಆದರೆ, ಭಾರತದ ಮು[illegible] ನ್ಯಾಯಮೂರ್ತಿಯವರ ವಿರುದ್ಧವೇ ದೂರಿದ್ದಲ್ಲಿ ಅದನ್ನು ಮೇಲ್ವಿಚಾರ[illegible] ಸಮಿತಿಯೇ ಪರಿಶೀಲಿಸತಕ್ಕದ್ದು.

ಪರಿಶೀಲನಾ ಪ್ಯಾನಲ್, ದೂರಿನ ಪರಿಶೀಲನೆಯ ನಂತರ, ಒಬ್ಬ ನ್ಯಾಯಾಧೀ[illegible]

ುದ್ಧ ದುರ್ನಡತೆಯ ಬಗ್ಗೆ ವಿಚಾರಣೆಯನ್ನು ಮುಂದುವರಿಸಲು ಸಾಕಷ್ಟು ಣಗಳಿವೆ ಎಂದು ವರದಿ ನೀಡಿದಲ್ಲಿ, ಮೇಲ್ವಿಚಾರಣಾ ಸಮಿತಿಯು ವಿಚಾರಣೆಯನ್ನು ುಂದುವರಿಸಲು ಗರಿಷ್ಠ ೩ ಸದಸ್ಯರಿರುವ ಒಂದು ತನಿಖಾ ಸಮಿತಿಯನ್ನು ಿಸುತ್ತದೆ. ಆ ಸದಸ್ಯರು ಯಾರಿರಬೇಕೆಂದು ಸಮಿತಿಯು ನಿರ್ಧರಿಸುತ್ತದೆ. ಅನೇಕ ರುಗಳಿದ್ದರೆ ಪ್ರತಿ ದೂರಿಗೂ ಬೇರೆ ಬೇರೆ ತನಿಖಾ ಸಮಿತಿಗಳನ್ನು ರಚಿಸಬಹುದು. ಸಮಿತಿಗಳಿಗೂ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳಿರುತ್ತವೆ.

ತನಿಖಾ ಸಮಿತಿಯು ನೋಟೀಸ್ ಕಳಿಸಿದಾಗ ಆರೋಪಿತ ನ್ಯಾಯಾಧೀಶರು ಜರಾಗಲು, ತನಿಖೆಗೆ ಸಹಕಾರ ನೀಡಲು ಒಪ್ಪದಿದ್ದರೆ, ಆಗ ಸಮಿತಿಯು ಪಕ್ಷೀಯವಾಗಿ ತನಿಖೆಯನ್ನು ನಡೆಸುತ್ತದೆ. ಈ ಸಮಿತಿಯು ದೂರಿಗೆ ಸಂಬಂಧಿಸಿದ ರೆ ಯಾರೇ ವ್ಯಕ್ತಿಯ ನಡವಳಿಕೆ, ಚಟುವಟಿಕೆಯ ಬಗ್ಗೆಯೂ, ಅವರಿಗೂ ತಕ್ಕಷ್ಟು ಳಿಕೆಯ ಅವಕಾಶ ನೀಡಿ, ತನಿಖೆ ನಡೆಸಬಹುದು. ತನಿಖೆ ಮುಗಿದ ನಂತರ ೬ ಗಳೊಳಗೆ ಈ ಸಮಿತಿಯು ಮೇಲ್ವಿಚಾರಣಾ ಸಮಿತಿಗೆ ತನ್ನ ವರದಿಯನ್ನು ಿಸುತ್ತದೆ. ಅದರ ವಿಧಿ-ವಿಧಾನಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಶ್ಯಕತೆ ಇದ್ದಲ್ಲಿ ತನಿಖೆಗೆ ಮತ್ತೆ ಆರು ತಿಂಗಳಿಗೆ ಕಾಲಾವಧಿಯನ್ನು ರಿಸಬಹುದು. ತನಿಖಾ ಸಮಿತಿಯಲ್ಲಿ ನ್ಯಾಯಾಧೀಶರ ವಿರುದ್ಧ ಪ್ರಕರಣ ನಡೆಸಲು ಂದ್ರ ಸರ್ಕಾರ ಒಬ್ಬ ವಕೀಲರನ್ನು ನೇಮಿಸಬಹುದು.

ದೂರಿನ ಪರಿಶೀಲನೆ, ತನಿಖೆ ಮತ್ತು ವಿಚಾರಣೆ ನಿಷ್ಪಕ್ಷಪಾತವಾಗಿ ನಡೆಯಲು, ಖಾ ಸಮಿತಿಯ ಮುಂದೆ ವಿಚಾರಣೆ ಜಾರಿಯಲ್ಲಿರುವಾಗ, ಮೇಲ್ವಿಚಾರಣಾ ುತಿಯು ಸಂಬಂಧಿಸಿದ ಆರೋಪಿತ ನ್ಯಾಯಾಧೀಶರು ನ್ಯಾಯಿಕ ಕೆಲಸದಿಂದ ರವಿರುವಂತೆ, ಅವರ ಮುಂದೆ ತೀರ್ಮಾನಕ್ಕಾಗಿ ಯಾವ ಮೊಕದ್ದಮೆಯನ್ನೂ ಕದಂತೆ ಶಿಫಾರಸ್ಸು ಮಾಡಬಹುದು.

ದೂರಿನಲ್ಲಿ ಹುರುಳಿಲ್ಲವೆಂದು ಅದು ಕ್ಷುಲ್ಲಕವಾಗಿದೆ ಎಂದು ತನಿಖಾ ಸಮಿತಿಯು ದಿ ಮಾಡಿದರೆ ಮೇಲ್ವಿಚಾರಣಾ ಸಮಿತಿಯು ದೂರನ್ನು ವಜಾ ಮಾಡುತ್ತದೆ. ಗೆಯೇ, ದೋಷಾರೋಪಣೆ ನಿಜವಾಗಿದೆ ಎಂದು ವರದಿಯಾದಾಗಲೂ, ಯಾಧೀಶರನ್ನು ಕೆಲಸದಿಂದ ವಜಾ ಮಾಡುವಷ್ಟು ಅದು ಗಂಭೀರವಾಗಿಲ್ಲದಿದ್ದಲ್ಲಿ ೇಲ್ವಿಚಾರಣಾ ಸಮಿತಿ ಕೇವಲ ಅವರಿಗೆ ಆದೇಶದ ಮೂಲಕ ಬುದ್ಧಿಮಾತನ್ನು ಳಬಹುದು ಅಥವಾ ಎಚ್ಚರಿಕೆಯನ್ನು ಕೊಡಬಹುದು.

ಆದರೆ ತನಿಖಾ ವರದಿಯಿಂದ ನ್ಯಾಯಾಧೀಶರು ಯಾವುದೇ ಕಾನೂನಿನಡಿ ಪರಾಧವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬಂದಲ್ಲಿ, ಆಗ, ಮೇಲ್ವಿಚಾರಣಾ ುತಿಯು ಕಾನೂನಿನಡಿ ಆ ನ್ಯಾಯಾಧೀಶರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲು ಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು. ತನಿಖೆ/ವಿಚಾರಣೆ ನಡೆದಿರುವಾಗ ಬಂಧಿಸಿದ ನ್ಯಾಯಾಧೀಶರು ಹುದ್ದೆ ತ್ಯಾಗ ಮಾಡಿದ್ದರೂ, ಆಪಾದನೆ ಭೀರವಾಗಿದ್ದಲ್ಲಿ, ಮೇಲ್ವಿಚಾರಣಾ ಸಮಿತಿಯು ತನಿಖೆಯನ್ನು ಮುಂದುವರಿಸಿ, ನಿರ್ಣಯಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿ, ಆ ನ್ಯಾಯಾಧೀಶರ ವಿರುದ್ಧ ಂದಿನ ಕ್ರಮ ಕೈಗೊಳ್ಳಲು ಕೇಳಬಹುದು.

ನ್ಯಾಯಾಧೀಶರ ದುರ್ನಡತೆ ಅಥವಾ ಅಸಮರ್ಥತೆ ಸಾಬೀತಾಗಿರುವ ಬಗ್ಗೆ ೇಲ್ವಿಚಾರಣಾ ಸಮಿತಿಗೆ ಮನದಟ್ಟಾಗಿದ್ದಲ್ಲಿ ಹಾಗೂ ಆರೋಪ ಗಂಭೀರವಾಗಿದ್ದು ಯಾಧೀಶರನ್ನು ವಜಾಗೊಳಿಸಲು ಅರ್ಹವಾಗಿದೆ ಎನಿಸಿದಲ್ಲಿ ಆ ಸಮಿತಿಯು ಬಂಧಿಸಿದ ನ್ಯಾಯಾಧೀಶರಿಗೆ ಸ್ವ-ಇಚ್ಛೆಯಿಂದ ರಾಜಿನಾಮೆ ಸಲ್ಲಿಸಲು ಳಬಹುದು. ಅವರು ಹಾಗೆ ಮಾಡದಿದ್ದಲ್ಲಿ ಅವರನ್ನು ವಜಾಗೊಳಿಸುವಂತೆ ಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡಬಹುದು. ಆಗ, ರಾಷ್ಟ್ರಪತಿಗಳು ಆ ಯವನ್ನು ಸಂಸತ್ತಿಗೆ ಉಲ್ಲೇಖ ಮಾಡಬೇಕಾಗುತ್ತದೆ. ಹಾಗೆಯೇ, ದೂರಿನಲ್ಲಿ ರುಳಿಲ್ಲ ಅದನ್ನು ದುರುದ್ದೇಶದಿಂದ ಕೊಡಲಾಗಿದೆ ಎಂದು ಹೇಳಿ ಪರಿಶೀಲನಾ ನಲ್ ಮೇಲ್ವಿಚಾರಣಾ ಸಮಿತಿಗೆ ಪ್ರಕರಣವನ್ನು ಒಪ್ಪಿಸಿದಾಗ, ಪ್ಯಾನಲ್‌ನೊಂದಿಗೆ ು ಸಹಮತಿಸಿದಲ್ಲಿ ವಿಚಾರಣಾ ಸಮಿತಿಯು ದೂರುದಾರನ ಮೇಲೆ ಸೂಕ್ತ ಯಾಲಯದಲ್ಲಿ ಕ್ರಿಮಿನಲ್ ಕ್ರಮ ಜರುಗಿಸಲು ಅನುಮತಿ ನೀಡಬಹುದು.

ವಿಚಾರಣೆ ನಡೆದಿರುವ ಹಂತದಲ್ಲಿ ನ್ಯಾಯಾಧೀಶರ ವಿರುದ್ಧ ಅನಾವಶ್ಯಕವಾಗಿ ಪ್ರಚಾರ ನಡೆಯದಿರಲು ಈ ಮಸೂದೆಯಲ್ಲಿ ಗಮನ ಹರಿಸಲಾಗಿದೆ. ಎಲ್ಲಾ ಾರಣೆಗಳೂ ನಾಲ್ಕು ಗೋಡೆಗಳ ಮಧ್ಯೆ (In camera) ನಡೆಯುವುದಲ್ಲದೆ ದರಲ್ಲಿ ಭಾಗವಹಿಸುವ ಯಾರೊಬ್ಬರೂ ತಮ್ಮ ಹೆಸರು, ನ್ಯಾಯಾಧೀಶರ ಹೆಸರು, ದೂರಿನ ವಿವರ, ದಾಖಲೆಗಳ ಪ್ರಕ್ರಿಯೆಯ ವಿವರಗಳ ಬಗ್ಗೆ, ಮಾಧ್ಯಮವನ್ನೂ ಸೇರಿದಂತೆ ಯಾರೊಬ್ಬರಿಗೂ, ಮೇಲ್ವಿಚಾರಣಾ ಸಮಿತಿಯ ಬರವಣಿಗೆಯಲ್ಲಿರುವ ಅನುಮತಿಯಿದ್ದ ಹೊರತು, ಬಹಿರಂಗಪಡಿಸಬಾರದಾಗಿ ಕಟ್ಟುಪಾಡು ವಿಧಿಸಲಾಗಿದೆ. ಕೇಳಿಕೊಂಡಲ್ಲಿ ದೂರುದಾರನ ಹೆಸರನ್ನು ಎಲ್ಲರಿಂದ, ಸಂಬಂಧಿಸಿದ ನ್ಯಾಯಧೀಶ ರಿಂದಲೂ ಗೋಪ್ಯವಾಗಿಡುವುದಲ್ಲದೆ ಅವರಿಗೆ ಸೂಕ್ತ ರಕ್ಷಣೆ ಕೊಡಲಾಗುತ್ತದೆ. ದೂರಿನ ಪರಿಶೀಲನೆ ಆರಂಭಗೊಂಡನಂತರ ಅದಕ್ಕೆ ಸಂಬಂಧಿಸಿದಂತೆ ದೂರುದಾರನ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣವನ್ನೂ ದಾಖಲಿಸಲಾಗದು ಅಥವಾ ಮುಂದುವರಿಸಲಾಗದು. ಆದರೆ, ಕ್ರಿಮಿನಲ್ ಹೊಣೆಗಾರಿಕೆಯನ್ನು ಅದು ತಡೆಗಟ್ಟುವುದಿಲ್ಲ. ಮಾಹಿತಿ ಹಕ್ಕು ಅಧಿನಿಯಮದಲ್ಲಿ ಏನೇ ಇದ್ದರೂ, ನ್ಯಾಯಾಧೀಶರ ವಿರುದ್ಧದ ದೂರಿನ ಪರಿಶೀಲನೆ, ತನಿಖೆ, ವಿಚಾರಣೆಗೆ ಸಂಬಂಧಿಸಿದ ದಾಖಲೆಗಳು, ಕಾಗದ-ಪತ್ರಗಳಿಗೆ ಅದು ಅನ್ವಯಿಸುವುದಿಲ್ಲ, ಏಕೆಂದರೆ, ಅವು ಗೋಪ್ಯವಾಗಿಡತಕ್ಕ ದಾಖಲೆಗಳು ಹಾಗೂ ಮೇಲ್ವಿಚಾರಣಾ ಸಮಿತಿಯ ನಿರ್ದೇಶನವಿಲ್ಲದೆ ಅವುಗಳನ್ನು ಯಾವ ವ್ಯಕ್ತಿಯೂ ಎಲ್ಲಿಯೂ ಹಾಜರುಪಡಿಸುವಂತಿಲ್ಲ.

ತನಿಖಾ ಸಮಿತಿಯು ಕೈಗೊಂಡ ನಿರ್ಣಯ ಹಾಗೂ ಮೇಲ್ವಿಚಾರಣಾ ಸಮಿತಿಯ ಆದೇಶದಂತೆ ನ್ಯಾಯಾಧೀಶರಿಗೆ ಬುದ್ಧಿವಾದ ಅಥವಾ ಎಚ್ಚರಿಕೆ ನೀಡಿದಾಗ ಅದನ್ನು ಬಹಿರಂಗಗೊಳಿಸಬಹುದು.

ರಾಷ್ಟ್ರಪತಿಯುವರು ಮೇಲ್ವಿಚಾರಣಾ ಸಮಿತಿಯಿಂದ ಕ್ರಮ ಜರುಗಿಸಲು ಶಿಫಾರಸ್ಸು ಪಡೆದನಂತರ, ಅವರು ಸಮಿತಿಯ ನಿರ್ಣಯಗಳನ್ನು ಸಂಬಂಧಿಸಿದ ವಸ್ತುವಿಷಯಗಳೊಂದಿಗೆ ಸಂಸತ್ತಿನ ಮುಂದೆ ಮಂಡಿಸಲು ಸರ್ಕಾರಕ್ಕೆ ಕಳಿಸ ಬೇಕಾಗುತ್ತದೆ. ಮುಂದೆ, ಸಂವಿಧಾನದಲ್ಲಿರುವಂತೆ ಸಂಸತ್ ಸದನಗಳಲ್ಲಿ ಮಹಾಭಿಯೋಗದ ಪ್ರಕ್ರಿಯೆ ಆರಂಭವಾಗುತ್ತದೆ.

ಸಂಸತ್ ಸದಸ್ಯರಿಗೂ ಈ ಮಸೂದೆಯಲ್ಲಿ ಅಂತಹ ನ್ಯಾಯಾಧೀಶರ ವಿರುದ್ಧ ಮಹಾಭಿಯೋಗದ ಪ್ರಕ್ರಿಯೆ ಆರಂಭಿಸಲು ಅವಕಾಶವಿದೆ. ಲೋಕಸಭೆಯ ಕನಿಷ್ಠ ೧೦೦ ಸದಸ್ಯರು ಅಥವಾ ರಾಜ್ಯಸಭೆಯ ೫೦ ಸದಸ್ಯರು ಅಂತಹ ನ್ಯಾಯಾಧೀಶರನ್ನು ವಜಾಗೊಳಿಸುವಂತೆ ರಾಷ್ಟ್ರಪತಿಯವರನ್ನು ಉದ್ದೇಶಿಸಿ ಮನವಿ ಸಲ್ಲಿಸಿದಾಗ, ಸ್ಪೀಕರ್/ಸಭಾಧ್ಯಕ್ಷರು ಅದನ್ನು ಪರಿಶೀಲಿಸಿ ಒಪ್ಪಿಗೆ ಕೊಟ್ಟಲ್ಲಿ, ಆ ಮನವಿಯನ್ನು ಹಾಗೇ ಉಳಿಸಿ ಕೊಂಡು ವಿಷಯವನ್ನು ಮೇಲ್ವಿಚಾರಣಾ ಸಮಿತಿಗೆ ತನಿಖಾ ಸಮಿತಿಯನ್ನು ನೇಮಿಸಲು ಉಲ್ಲೇಖಿಸಲಾಗುತ್ತದೆ. ತನಿಖಾ ಸಮಿತಿಯು ವಿಚಾರಣೆಯನ್ನು ನಡೆಸಿ ಸಲ್ಲಿಸಿದ ವರದಿಯನ್ನು ಮೇಲ್ವಿಚಾರಣಾ ಸಮಿತಿಯು ಸ್ಪೀಕರ್/ಸಭಾಧ್ಯಕ್ಷರಿಗೆ ಹಿಂತಿರುಗಿ ಕಳಿಸುತ್ತದೆ.

ಯಾವುದೇ ದೈಹಿಕ ಅಥವಾ ಮಾನಸಿಕ ಕಾರಣದಿಂದಾಗಿ ನ್ಯಾಯಾಧೀಶರೊಬ್ಬರು ಕಾರ್ಯ ನಿರ್ವಹಿಸಲು ಅಸಮರ್ಥರಾದಾಗ, ಹಾಗೂ ಆ ಆಪಾದನೆಯನ್ನು ಆ ನ್ಯಾಯಾಧೀಶರು ನಿರಾಕರಿಸಿದಲ್ಲಿ, ವಿಚಾರಣಾ ಸಮಿತಿಯು, ಸ್ಪೀಕರ್/ಸಭಾಧ್ಯಕ್ಷರು ನೇಮಿಸಿದ ವೈದ್ಯಕೀಯ ಮಂಡಳಿಯ ಮೂಲಕ ಆ ನ್ಯಾಯಾಧೀಶರ ವೈದ್ಯಕೀಯ ತಪಾಸಣೆಯನ್ನು ನಡೆಸಲು ವ್ಯವಸ್ಥೆ ಮಾಡುತ್ತದೆ. ಆ ವೈದ್ಯಕೀಯ ಮಂಡಳಿ ತನಿಖಾ ಸಮಿತಿಗೆ ಆ ನ್ಯಾಯಾಧೀಶರ ಅಸಮರ್ಥತೆ ಕಾರ್ಯ ನಿರ್ವಹಿಸಲು ಅಡ್ಡಿಯಾಗುವು ದರಿಂದ ಆ ಹುದ್ದೆಯಲ್ಲಿ ಮುಂದುವರಿಯಲು ತಕ್ಕ ವ್ಯಕ್ತಿ ಅವರಾಗಿಲ್ಲವೆಂದು ವರದಿ ಕೊಟ್ಟಲ್ಲಿ ಅಥವಾ ನ್ಯಾಯಾಧೀಶರು ವೈದ್ಯಕೀಯ ಪರೀಕ್ಷೆಗೆ ಒಳಪಡಲು ನಿರಾಕರಿಸಿದಲ್ಲಿ, ಆಗ ಮೇಲ್ವಿಚಾರಣಾ ಸಮಿತಿಯು ಅವರ ಅಸಾಮರ್ಥ್ಯದ ಬಗ್ಗೆ ಸಂಸತ್‌ಗೆ ವರದಿ ಸಲ್ಲಿಸುತ್ತದೆ. ಅದೇ ರೀತಿ, ಅವರ ದುರ್ನಡತೆಯ ಬಗ್ಗೆಯೂ ವರದಿ ಸಲ್ಲಿಸುತ್ತದೆ. ಆಗ, ಸಂಸತ್ ಪುನಃ ಕಾದಿರಿಸಿದ್ದ ಮನವಿಯನ್ನು ವರದಿಯೊಂದಿಗೆ ಕೈಗೆತ್ತಿಕೊಂಡು ಸಂವಿಧಾನದ ೧೨೪ ಮತ್ತು ೨೧೮ನೇ ಅನುಚ್ಛೇದದಡಿ ಪ್ರತಿಸದನದಲ್ಲಿ ಮಹಾಭಿಯೋಗದ ಕ್ರಮ ಕೈಗೊಂಡು ಮತದಾನ ನಡೆಸಿ ನಿರ್ದಿಷ್ಟ ಬಹುಮತವಿದ್ದಲ್ಲಿ ರಾಷ್ಟ್ರಪತಿಯವರಿಗೆ ನ್ಯಾಯಾಧೀಶರನ್ನು ವಜಾ ಮಾಡಲು ಶಿಫಾರಸ್ಸು ಮಾಡುತ್ತದೆ, ತನಿಖಾ ವರದಿಯಂತೆ ನ್ಯಾಯಾಧೀಶರ ದುರ್ನಡತೆ/ಅಸಾಮರ್ಥ್ಯ ಸಾಬೀತಾಗಿಲ್ಲ ದಿದ್ದಲ್ಲಿ ಸಂಸತ್ತಿಗೆ ಆ ವಿಷಯದಲ್ಲಿ ಮುಂದುವರಿಯಲು ಅವಕಾಶವಿರುವುದಿಲ್ಲ.

ಈ ಮಸೂದೆಯಡಿ ಹಲವಾರು ಅಪರಾಧಗಳನ್ನು ಶಿಕ್ಷಾರ್ಹವಾಗಿ ಮಾಡಲಾಗಿದೆ. ಕಾರ್ಯ ನಿರ್ವಹಣೆಯಲ್ಲಿರುವ ಪರಿಶೀಲನಾ ಸಮಿತಿ, ತನಿಖಾ ಸಮಿತಿ ಅಥವಾ ಮೇಲ್ವಿಚಾರಣಾ ಸಮಿತಿಯನ್ನು ಅಥವಾ ಅದರ ಸದಸ್ಯರನ್ನು ಉದ್ದೇಶಪೂರ್ವಕವಾಗಿ ಅವಹೇಳನ ಮಾಡುವುದು ಅಥವಾ ಅವರ ಕಾರ್ಯದಲ್ಲಿ ಅಡ್ಡಿಯುಂಟುಮಾಡುವುದು ಒಂದು ಅಪರಾಧವಾಗಿದ್ದು, ಅದಕ್ಕೆ ೬ ತಿಂಗಳವರೆಗಿನ ಸೆರೆವಾಸ ಅಥವಾ ದಂಡ

ವಾ ಎರಡನ್ನೂ ವಿಧಿಸಬಹುದಾಗಿದೆ. ಈಗ ಹಲವಾರು ಇಂತಹ ವಿಚಾರಣಾ ಸ್ಥೆಗಳ (ಉದಾಹರಣೆ: ಲೋಕಾಯುಕ್ತ) ವಿರುದ್ಧ ನಡೆಯುತ್ತಿರುವ ವಾಗ್ದಾಳಿಗಳನ್ನು ೇಡಿದಾಗ ಇಂತಹ ಕಾನೂನಿನ ಅವಶ್ಯಕತೆಯ ಅರಿವಾಗುತ್ತದೆ. ಅದೇ ರೀತಿ, ಈ ಸೂದೆಯಲ್ಲಿ ಗೌಪ್ಯವಾಗಿಡುವಂತೆ ವಿಧಿಸಿರುವ ವಿಷಯಗಳನ್ನು ಬಹಿರಂಗ ಸುವುದು ಶಿಕ್ಷಾರ್ಹ ಅಪರಾಧವಾಗಿದ್ದು ಅದಕ್ಕೆ ಒಂದು ತಿಂಗಳವರೆಗಿನ ಸೆರೆವಾಸ, ೦ ರೂ.ವರೆಗಿನ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

ಆದರೆ, ಒಂದು ಮಹತ್ವದ ಅಂಶ, ಹೆಚ್ಚಿನ ಜನರ ಟೀಕೆಯನ್ನು ಎದುರಿಸಿದ ಶವೆಂದರೆ, ಯಾವುದಾದರೂ ವ್ಯಕ್ತಿ ಕೊಟ್ಟ ದೂರು ಹುರುಳಿಲ್ಲದ್ದು, ನ್ಯಾಯಾಧೀಶರ ರು ಕೆಡಿಸಲು ಅಥವಾ ಅವರನ್ನು ಬೆದರಿಸಲು ಮಾಡಿರುವುದು ಎಂಬುದಾಗಿ ಯೆಯ ನಂತರ ಕೊನೆಯಲ್ಲಿ ಕಂಡುಬಂದಲ್ಲಿ ಅಂತಹ ವ್ಯಕ್ತಿಗೆ ೫ ರ್ಗಳವರೆಗಿನ ಸೆರೆವಾಸ ಮತ್ತು ೫ ಲಕ್ಷ ರೂ.ಗಳವರೆಗಿನ ದಂಡವನ್ನು ಈ ೂನಿನಲ್ಲಿ ವಿಧಿಸಬಹುದಾಗಿದೆ. ಈ ಶಿಕ್ಷೆ ಬಹಳ ಕಠಿಣವಾಗಿದೆ, ಇದರಿಂದ ವಾಗಿ ದೂರು ನೀಡುವವರೂ ಹಿಂಜರಿಯುತ್ತಾರೆ. ಶಿಕ್ಷೆಯ ತೀವ್ರತೆಯನ್ನು ಕಡಿಮೆ ಡಬೇಕು ಎಂದು ಸಂಸತ್ತಿನ ಸಮಿತಿಯು ಸೂಚಿಸಿದೆ. ಮೊದಲೇ ದೂರು ಡುವವರು ಬಹಳಷ್ಟು ವಿಚಾರಮಾಡಿ ಧೈರ್ಯದ ಹೆಜ್ಜೆ ಇಡಬೇಕಾಗುತ್ತದೆ. ಈ ಯ ಶಿಕ್ಷೆಯ ಭಯವಿದ್ದಲ್ಲಿ ಯಾರೂ ನ್ಯಾಯಾಧೀಶರ ವಿರುದ್ಧ, ನಿಜವಾಗಿದ್ದರೂ, ರು ನೀಡಲು ಮುಂದೆ ಬರುವುದಿಲ್ಲ ಎನ್ನುವ ವಾದದಲ್ಲಿ ಸತ್ಯಾಂಶವಿದೆ.

''ದುರ್ನಡತೆ'' ಎಂದರೇನು ಎಂಬುದನ್ನು ಈ ಕಾನೂನು ವಿವರಿಸಿದೆ. ನ್ಯಾಯಾಂಗಕ್ಕೆ ರವವನ್ನು ಅವಮರ್ಯಾದೆಯನ್ನು ತರುವ ನಡತೆ, ನ್ಯಾಯಾಧೀಶರ ಕರ್ತವ್ಯವನ್ನು ರ್ಹಿಸುವಲ್ಲಿ ನಿರಂತರವಾಗಿ ಅಥವಾ ಇಚ್ಛಾಪೂರ್ವಕವಾಗಿ ವಿಫಲರಾಗುವಂತಹ ತೆ, ತಮ್ಮ ನ್ಯಾಯಿಕ ಹುದ್ದೆಯನ್ನು ಇಚ್ಛಾಪೂರ್ವಕವಾಗಿ ದುರ್ಬಳಕೆ ಮಾಡಿ ಳ್ಳುವುದು, ಭ್ರಷ್ಟಾಚಾರ, ಅಪ್ರಾಮಾಣಿಕತೆ, ಬೇರೆಯ ಹೊರಗಿನ ಕಾರಣಗಳಿಗಾಗಿ ರ್ಪು ನೀಡುವುದು, ಯಾವುದೇ ಕಾರ್ಯ ನಿರ್ವಹಿಸಲು, ಅಥವಾ ತೀರ್ಪು ನೀಡಲು ದ/ವಸ್ತುವಿನ ರೂಪದ ಪ್ರತಿಫಲ ನಿರೀಕ್ಷಿಸುವುದು, ನೈತಿಕ ಅಧಃಪತನ ಸೂಚಿಸುವ ರಾಧ ಮಾಡುವುದು, ಈ ಕಾನೂನಿನಲ್ಲಿ ತಮ್ಮ ಆಸ್ತಿ-ಪಾಸ್ತಿ ಮತ್ತು ಋಣಗಳ ವಿವರ ಗಿಸದಿರುವುದು ಅಥವಾ ಅದರಲ್ಲಿ ಬೇಕೆಂದೇ ಸುಳ್ಳು ಮಾಹಿತಿ ಒದಗಿಸುವುದು, ದ್ದೆಗೆ ಬರುವ ಮೊದಲು ಅಥವಾ ಆನಂತರ ಅವರ ಪ್ರಾಮಾಣಿಕತೆಗೆ ಸಂಬಂಧಿಸಿದ ವುದೇ ಮುಖ್ಯ ವಿಷಯವನ್ನು ಬೇಕೆಂದೇ ಮುಚ್ಚಿಡುವುದು ಹಾಗೂ ಬೇಕೆಂದೇ ಯಿಕ ನೈತಿಕಮಟ್ಟದ ಉಲ್ಲಂಘನೆ ಮಾಡುವುದು – ದುರ್ನಡತೆ ಎಂದಾಗುತ್ತದೆ.

ನ್ಯಾಯಾಂಗದ ಬಗ್ಗೆ, ನ್ಯಾಯಾಧೀಶರ ನಡವಳಿಕೆಯ ಬಗ್ಗೆ ಬಹಿರಂಗವಾಗಿ ತನಾಡುವುದೇ ಒಂದು ಅಪರಾಧ ಎನ್ನುವ ಕಾಲ ಮುಗಿದಿದ್ದು, ಈಗ ಎಲ್ಲರೂ, ಲ್ಲ ಸಂಸ್ಥೆಗಳೂ ತಮ್ಮ-ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪಾರದರ್ಶಕವಾಗಿರ ು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾದ ಪ್ರಭುಗಳಾದ ಜನರಿಗೆ ಅವರು ರದಾಯಿತ್ವ ಹೊಂದಿರಬೇಕು, ಜನರಿಗೆ ಅವರನ್ನು ಪ್ರಶ್ನಿಸುವ ಅಧಿಕಾರ ಅವರ ದ್ಧ ದೂರು ನೀಡುವ ಅಧಿಕಾರ, ಅವರ ಬಗ್ಗೆ ಮಾಹಿತಿ ಪಡೆಯುವ ಕಾರವಿರಬೇಕು, ಆಗಲೇ ಆ ಸಂಸ್ಥೆಗಳು ಬಲಗೊಳ್ಳಲು ಪ್ರಾಮಾಣಿಕವಾಗಿ ಕರ್ತವ್ಯ ರ್ಹಿಸಲು ಸಾಧ್ಯ ಎನ್ನುವುದರ ಬಗ್ಗೆ ಎರಡನೆಯ ಮಾತಿಲ್ಲ. ಪಾರದರ್ಶಕತೆಯನ್ನು, ರದಾಯಿತ್ವವನ್ನು ವಿರೋಧಿಸಿದರೆ, ಅಲ್ಲಿ ಎಲ್ಲವೂ ಸರಿಯಾಗಿ ನಡೆದಿಲ್ಲ ಎನ್ನುವ ಮಾನ ಸಹಜವಾಗಿ ಮೂಡುತ್ತದೆ.

ಆದರೆ, ಬಹಳಷ್ಟು ಜನ ಈ ಮಸೂದೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಾಗ, ನ್ಯಾಯಾಧೀಶರ ನೇಮಕಾತಿಯ ವಿಷಯದಲ್ಲಿ ಏನನ್ನೂ ಹೇಳುವುದಿಲ್ಲ ಎಂದು ಸಿದ್ದಾರೆ. ನ್ಯಾಯಾಧೀಶರು ಭ್ರಷ್ಟಾಚಾರಿಗಳಾದಾಗ ಕ್ರಮ ಕೈಗೊಳ್ಳಲು ಅವಕಾಶ ವುದು ಸ್ವಾಗತಾರ್ಹವಾದರೂ, ನ್ಯಾಯಾಧೀಶರಾಗಿ ನೇಮಕಗೊಳ್ಳುವ ವ್ಯಕ್ತಿಯೇ ಷ್ಟಾಚಾರಿಯಾಗಿದ್ದಲ್ಲಿ ಇಂತಹ ಕಾನೂನುಗಳ ಉಪಯುಕ್ತತೆ ಎಷ್ಟರಮಟ್ಟಿಗೆ ತ್ತದೆ ಎನ್ನುವ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ನ್ಯಾಯಾಧೀಶರ ನೇಮಕಾತಿಯ ಯೆಯೂ ಪಾರದರ್ಶಕವಾಗಿರಬೇಕು, ನೇಮಕ ಮಾಡುವ ವ್ಯಕ್ತಿಯನ್ನು ರಿಕಾದಲ್ಲಿರುವಂತೆ ತನಿಖೆಯ ಪ್ರಕ್ರಿಯೆಗೆ ಒಳಪಡಿಸಬೇಕು, ಯಾವುದೇ ಹಣ, ಕೀಯ, ಧಾರ್ಮಿಕ, ಜಾತೀಯತೆಯ ಮುಲಾಜಿಗೆ ಒಳಗಾಗದೆ ಪ್ರಾಮಾಣಿಕ ಯ ಶೋಧನೆ ಮಾಡಿ ನ್ಯಾಯಾಧೀಶರನ್ನು ನೇಮಕ ಮಾಡಬೇಕು. ಒಬ್ಬ ಕಾಯುಕ್ತರ ನೇಮಕಾತಿಯ ಬಗ್ಗೆ ಇಷ್ಟೊಂದು ಎಚ್ಚರ ವಹಿಸುವಾಗ ಜನರ ಹಕ್ಕುಗಳನ್ನು, ನ್ಯಾಯಾನ್ಯಾಯಗಳನ್ನು ತೀರ್ಮಾನಿಸುವ ನ್ಯಾಯಾಧೀಶರ ನೇಮಕವನ್ನು ಮಾತ್ರ ಅಷ್ಟೇಕೆ ರಹಸ್ಯವಾಗಿ ಮಾಡಬೇಕು? ಅಪರಾಧಿಕ, ಅನೈತಿಕ ಹಿನ್ನೆಲೆ ಹೊಂದಿರುವ ವ್ಯಕ್ತಿಗಳು ನ್ಯಾಯಾಧೀಶರಾಗಿ ನೇಮಕಗೊಂಡಲ್ಲಿ ಮುಂದೆ ಅವರನ್ನು ವಜಾ ಮಾಡಲು ಸಂವಿಧಾನದಡಿಯ ಕಠಿಣ, ತೊಡಕಿನ ಮಹಾಭಿಯೋಗದ ಪ್ರಕ್ರಿಯೆಯಲ್ಲದೆ ಬೇರೆ ದಾರಿಯೇ ಇಲ್ಲ. ಅದು ಎಂದಿಗೂ ಸುಲಭದ ಹಾದಿಯಲ್ಲ.


ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶ್ರೀಮತಿ ರುಮಾ ಪಾಲ್ ಅವರು ದೆಹಲಿಯಲ್ಲಿ ಮಾಡಿದ ಇತ್ತೀಚಿನ ಭಾಷಣವೊಂದರಲ್ಲಿ, ಉಚ್ಚ/ಸರ್ವೋಚ್ಚ ನ್ಯಾಯಾಲಯಗಳನ್ನು ಬಾಧಿಸುತ್ತಿರುವ ೭ ''ಪಾಪ''ದ ಬಗ್ಗೆ ಹೀಗೆ ವಿವರಿಸಿದ್ದಾರೆಂದು ಹಿರಿಯ ವಕೀಲರಾದ ಶ್ರೀ ಸೋಲಿ ಸೋರಾಬ್ಜಿಯವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ. ಅವುಗಳೆಂದರೆ –

೧. ಕಾರ್ಪೆಟ್ ಕೆಳಗೆ ಎಲ್ಲವನ್ನೂ ಸರಿಸಿಬಿಡುವುದು ಮತ್ತು ಜೊತೆಯ ನ್ಯಾಯಾಧೀಶರು ಅನ್ಯಾಯದ ಕಾರ್ಯ ಮಾಡುತ್ತಿದ್ದಾರೆಂದು ಗೊತ್ತಿದ್ದಾಗಲೂ ಕುರುಡರಾಗಿರುವುದು, ಅವರನ್ನು ಆ ಬಗ್ಗೆ ಪ್ರಶ್ನಿಸದೇ ಇರುವುದು.
೨. ಬೇರೆಯವರಿಗೆ ನೀವೆಷ್ಟೇ ಎತ್ತರದ ಸ್ಥಾನದಲ್ಲಿದ್ದರೂ ಕಾನೂನು ನಿಮಗಿಂತ ಮೇಲಿದೆ ಎಂದು ಹೇಳುತ್ತಲೇ, ತಾವು ಮಾತ್ರ ರಸ್ತೆ ಸಂಚಾರ ನಿಯಮದಂತಹ ನಿಯಮಗಳನ್ನು ಯಾವುದೇ ಹಿಂಜರಿಕೆ ಇಲ್ಲದೆ ಮುರಿಯುವುದು. ವಾಹನ ದಟ್ಟಣೆ ಇದ್ದಾಗ ಪೊಲೀಸ್ ಕನಿಷ್ಠ ಬಿಲ್ಲೆ ಒಬ್ಬ ನ್ಯಾಯಾಧೀಶರ ಕಾರನ್ನು ನಿಲ್ಲಿಸಬೇಕಾಗಿ ಬಂದಾಗ, ಆ ಬಡಪಾಯಿಯ ಮೇಲೆ ನ್ಯಾಯಾಂಗ ನಿಂದನೆಯ ನೋಟೀಸ್ ಜಾರಿಗೊಳಿಸುವುದು ನ್ಯಾಯಿಕ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುವ ಒಂದು ಉದಾಹರಣೆ ಎಂದು ಅವರು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿಯೂ ನ್ಯಾಯಾಧೀಶರೊಬ್ಬರು ಕಾರಿನಲ್ಲಿ ಹೋಗುವಾಗ ದಾರಿಯಲ್ಲಿ ವ್ಯಕ್ತಿಯೊಬ್ಬನಿಗೆ ಹೊಡೆದು ಅಪಘಾತವಾಗಿ ಆ ವ್ಯಕ್ತಿಗೆ ಪೆಟ್ಟಾಗಿದ್ದರೂ ಕಾರನ್ನು ನಿಲ್ಲಿಸದೆ, ಅವನನ್ನು ಆಸ್ಪತ್ರೆಗೆ ಸೇರಿಸದೆ ಹಾಗೇ ಪ್ರಯಾಣ ಮುಂದುವರಿಸಿದ ಉದಾಹರಣೆ ಇದೆ. ಅದಕ್ಕೆ ಅವರು ಕೊಟ್ಟ ಕಾರಣ, ಹಾಗೆ ಮಾಡಿದಲ್ಲಿ ಅವರ ಕಾರ್ಯಕ್ರಮಕ್ಕೆ ತಡವಾಗುತ್ತಿತ್ತು ಎನ್ನುವುದು. ಬೇರೆಯವರು ಇದನ್ನೇ ಮಾಡಿದಾಗ, ಅದೇ ನ್ಯಾಯಾಧೀಶರು ಕಟುವಾಗಿ ಟೀಕಿಸಿ, ದಂಡ ಹಾಕುತ್ತಾರೆ. ಇದರಲ್ಲಿ ಬೆಂಗಳೂರಿನ ನ್ಯಾಯಾಂಗ ಬಡಾವಣೆಯ ನಿವೇಶನದ ಹಂಚಿಕೆಯ ಉದಾಹರಣೆಗಳನ್ನು ನೆನಪಿಸಿಕೊಳ್ಳಬಹುದು.
೩. ಗೌಪ್ಯತೆ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯ ಪ್ರಕ್ರಿಯೆಯ ವಿಷಯ, ಅವರನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಮುಂಬಡ್ತಿ ಮಾಡುವ ಪ್ರಕ್ರಿಯೆಯ ವಿಷಯ ದೇಶದಲ್ಲೇ ಅತ್ಯಂತ ಗೂಢವಾಗಿ ಕಾಪಾಡಿಕೊಂಡು ಬಂದಿರುವ ರಹಸ್ಯ ಎಂದು ಅವರು ಹೇಳುತ್ತಾರೆ.
೪. ತಮ್ಮ ಬುದ್ಧಿಮತ್ತತೆ ಮತ್ತು ಸ್ಥಾನ-ಮಾನದ ಕಾರಣದಿಂದಾಗಿ ಹುಟ್ಟುವ ನ್ಯಾಯಿಕ ಅಹಂಭಾವದಿಂದ ಉಂಟಾಗುವ ನ್ಯಾಯಿಕ ಅಶಿಸ್ತನ್ನು ನ್ಯಾಯಿಕ ಸ್ವಾತಂತ್ರ್ಯವೆಂಬುದಾಗಿ ಸಮೀಕರಿಸುವುದು.
೫. ಮುಖ್ಯವಾದ ಪಾಪವೆಂದರೆ, ಕಕ್ಷಿದಾರರೊಂದಿಗೆ ಅಲ್ಲದೆ ವಕೀಲರೊಂದಿಗೆ ದೂರವನ್ನು ಕಾಯ್ದುಕೊಳ್ಳದಿರುವುದು.
೬. ನ್ಯಾಯಾಧೀಶರು ಖಾಸಗಿ ಕಂಪನಿಯ ಅಥವಾ ಸಾರ್ವಜನಿಕ ವಲಯದ ಕಂಪನಿಗಳ ಅತಿಥಿಗೃಹದಲ್ಲಿ ರಜೆ ಕಳೆಯುವುದು, ಮುಖ್ಯಮಂತ್ರಿಗಳ ಕೃಪಾಕಟಾಕ್ಷದಲ್ಲಿರುವ ನಿವೇಶನ/ಭೂಮಿ ಮಂಜೂರಾತಿ ಮಾಡಿಸಿಕೊಳ್ಳುವುದು.
೭. ಕಕ್ಷಿದಾರರ ''ಮುಖಬೆಲೆ''ಯ ಆಧಾರದ ಮೇಲೆ ನ್ಯಾಯನಿರ್ಣಯ ಮಾಡುವುದು.



ಸಾರ್ವಜನಿಕರ ವಿಶ್ವಾಸ - ನಂಬಿಕೆಯೇ ನ್ಯಾಯಾಂಗದ ಸ್ವಾತಂತ್ರ್ಯದ ಅಡಿಗಲ್ಲು, ಪಾಪಗಳೆಂದು ಹೇಳಿರುವ ನಡವಳಿಕೆ ತಪ್ಪೆಂದು ಒಪ್ಪಿಕೊಂಡಲ್ಲಿ ಖಂಡಿತ ಅನೇಕರು ಗಂಗಾನದಿಯಲ್ಲಿ ಹಲವಾರು ಬಾರಿ ಆಳವಾಗಿ ಮುಳುಗೇಳಬೇಕಾಗುತ್ತದೆಂದು ಶ್ರೀ ಸೋಲಿ ಸೋರಾಬ್ಜಿ ಹೇಳುತ್ತಾರೆ. ನ್ಯಾಯಾಂಗ ಸ್ವತಂತ್ರವಾಗಿರಬೇಕಾದರೆ ಮೊದಲು ನ್ಯಾಯಾಧೀಶರು ತಮ್ಮ-ತಮ್ಮ ರಾಗ-ದ್ವೇಷಾದಿಗಳಿಂದ ಹೊರಬರಬೇಕು, ನಂತರವಷ್ಟೇ ಹೊರಪ್ರಭಾವಗಳಿಂದ ಮುಕ್ತರಾಗಲು ಸಾಧ್ಯ ಎನ್ನುತ್ತಾರವರು. ನಿಜವಾದ ಸ್ವಾತಂತ್ರ್ಯವೆಂದರೆ ನನ್ನಿಂದ ನೀನು ಮುಕ್ತನಾಗುವುದು ಎನ್ನುವುದೇ ಅಂತಿಮ ಸತ್ಯ!

ಹೇಮಲತಾ ಮಹಿಷಿ
ವಕೀಲರು, 'ಶಶಿಕಿರಣ್ ಅಪಾರ್ಟ್‌ಮೆಂಟ್ಸ್', ೨೧೯, ೧೮ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - [illegible]

ಸಿವಿಜಿ ಇಂಡಿಯಾ



ಹನುಮಂತ ಹಾಲಿಗೇರಿ

ಅಭಿವೃದ್ಧಿ

ಡೊಳ್ಳು ಹೊಟ್ಟೆಯ ಸಾಹೇಬರುಗಳು ಉಸ್ ಉಸ್ ಉಸಿರು ಬಿಟಕೋತ, ರಕ್ಕಾಗಿ ಏರುಗುಡ್ಡಕ್ಕೆ ಕೈ ಊರಕೋತ, ಗುಡ್ಡ ಏರುತ್ತಿದ್ದುದನ್ನು ನೋಡಿದ ಗರು ದಂಗುಬಡಿದು ನಿಂತರು. ಗಾಳೆಪ್ಪನ ಗುಡ್ಡದಲ್ಲಿ ಗಾಳಿ ಪಂಕಾ ಕುಂದರಸ್ತಾರ ಆಗಾಗ ಕೇಳಿ ಬರುತ್ತಿದ್ದ ಗಾಳಿ ಮಾತಿಗೆ ಈಗ ಜೀವ ಬರಿಸುವ ಮಾಂತ್ರಿಕರಂತೆ ರು ಭಾಸವಾದರು.

ದರೆಗಟ್ಟಿ, ವಜ್ರಮಟ್ಟಿ, ಗುಡಿಹಾಳ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳ ಜನರ ಕಿನಲ್ಲಿ ಈ ಗುಡ್ಡ ಅವಿಭಾಜ್ಯ ಅಂಗವಾಗಿತ್ತು. ಸೂರ್ಯಕಿರಣ ಭೂಮಿಗೆ ದಷ್ಟು ದಟ್ಟ ಗಿಡಮರಗಳು ಮತ್ತು ಕ್ರೂರ ಪ್ರಾಣಿಗಳಿರುವ ಸಿನೆಮಾದಲ್ಲಿ ಬರುವ ನಕವಾದ ಕಾಡೇನಲ್ಲ ಅದು. ಅಲ್ಲೊಂದು ಇಲ್ಲೊಂದು ಕುರುಚಲು ಗಿಡಗಳು, ಗಲ್ಲುಗಳು, ಉಗುಳು ನೆಲಕ್ಕೆ ಬೀಳದಷ್ಟು ದಟ್ಟ ಕಾಡುಹುಲ್ಲು ತುಂಬಿಕೊಂಡ ಯತೆಯ ತಾಣ ಅದಾಗಿತ್ತು. ಆದರೆ ಗುಡ್ಡದ ನೆತ್ತಿಯ ಮೇಲೆ ಮಾತ್ರ ಎಂಟೆದೆ ರನ್ನು ಓಲಾಡಿಸುವ ಕರ್ಣ ಕಠೋರ ಗಾಳಿ ಬೀಸುತ್ತಲೆ ಇರುತ್ತದೆ. ಇಲ್ಲಿ ಇಷ್ಟೊಂದು ಗಾಳಿ ಇದ್ದುದರಿಂದಲೋ ಏನೋ, ಗುಂಡಕಲ್ಲುಗಳ ಗೋಡೆ ಕಟ್ಟಿ, ಅದರ ಮೇಲೆ ಮೂರ್ನಾಲ್ಕು ಹಾಸುಗಲ್ಲುಗಳನ್ನು ಹೊಚ್ಚಿದ ಹಳೆಯ ಗುಡಿಯೊಂದಿದ್ದು, ಅದಕ್ಕೆ ಗಾಳೆಪ್ಪಜ್ಜನ ಗುಡಿ ಎಂದು ಕರೆಯಲಾಗುತ್ತಿದೆ. ಸುತ್ತಲಿನ ಹಳ್ಳಿಗರಿಗೆ ಈ ಗುಡ್ಡವು ಮೇವು, ತೊಪ್ಪಲು, ಜೇನುತುಪ್ಪ, ವನೌಷಧಿ ಹೀಗೆ ದಿನನಿತ್ಯದ ಬೇಡಿಕೆಗಳನ್ನು ಪೂರೈಸುವ ಆಶ್ರಯದಾತವಾಗಿತ್ತು. ಜೊತೆಗೆ ಯುವ ಪ್ರೇಮಿಗಳು ಕದ್ದಾಡುವ ಪ್ರಣಯದಾಟಕ್ಕೆ, ಶಾಲಾ ಮಕ್ಕಳ ಪಿಕನಿಕ್‌ಗೆ, ವೃದ್ಧಜೀವಿಗಳು ಹೊತ್ತುಗಳೆಯಲಿಕ್ಕೆ, ಕುರಿ-ದನಗಾಹಿಗಳ ಕೇಕೆಗೆ, ಬೇಟೆಗಾರರ ತಂತ್ರಗಳಿಗೆ ದಿನನಿತ್ಯವೂ ಸಾಕ್ಷಿಯಾಗುತ್ತಿತ್ತು. ಒಮ್ಮೊಮ್ಮೆ, ಜೀವ ಕಳೆದುಕೊಳ್ಳುವವರಿಗೆ ಕೆಲವೊಮ್ಮೆ ಜೀವ ತೆಗೆಯುವವರಿಗೂ ಕೂಡ ನಿರುಮ್ಮಳಭಾವದಲ್ಲಿ ಜಾಗ ಕೊಡುತ್ತಿತ್ತು.

ಇಷ್ಟೆ ಅಲ್ಲದೆ ಹತ್ತಾರು ಕಾಡುಗೊಲ್ಲರ ಕುಟುಂಬಗಳನ್ನು ತನ್ನೊಳಗೆ ಈ ಗಾಳಿಗುಡ್ಡ ಸಾಕಿಕೊಂಡಿತ್ತು. ದಿನಾಲು ಬೆಳ್ಳಿ ಚುಕ್ಕೆ ಮೂಡುವ ಹೊತ್ತಿಗೆ ದೊಡ್ಡಿಯ ಬಾಗಿಲು ಬಿಚ್ಚಿ ಎಮ್ಮೆಗಳನ್ನು ಹೊರಬಿಟ್ಟು, ದೊಡ್ಡಿ ಸ್ವಚ್ಛ ಮಾಡಿ, ಕಾಡುಹುಲ್ಲು ಕೊಯ್ದು ತರುವಲ್ಲಿ ನಿರತರಾಗುವುದು ಸೂರ್ಯ ಭುಜದಷ್ಟು ಮೇಲೇರಿದಾಗ. ಎಮ್ಮೆಯ ಕೊರಳಗಂಟೆ ನಾದವನ್ನು ಹುಡುಕಿಕೊಂಡು ಹೋಗಿ ಹೊಡಕೊಂಡು ಬರುವುದು, ಕೊಡಗಟ್ಟಲೆ ಹಾಲು ಹಿಂಡಿಕೊಂಡು ಗುಡ್ಡವಿಳಿದು ಬಂದು ಸೈಯದ್‌ನ ಹಾಲಿನ ಗಾಡಿಗೆ ಕಾಯ್ದು ನಿಲ್ಲುವುದು ಅವರ ಖಾಯಂ ಪಾಲಿಸಿಕೊಂಡು ಬಂದ ಪರಿಪಾಠವಾಗಿತ್ತು.



ದೂರದಲ್ಲಿ ಹಾರ್ನ್ ಕೇಳಿದರೆ ಸೈದಪ್ಪ ಬಂದನೆಂದೇ ಅರ್ಥ. ಆಗ ಇವರು ಎಚ್ಚರಗೊಂಡು ತಮ್ಮ ತಮ್ಮ ಕೊಡ ಎತ್ತಿಕೊಂಡು ರೋಡಿಗೆ ಬಂದು ಸೈದಪ್ಪನ ಕ್ಯಾನ್‌ಗೆ ಹಾಲು ಅಳೆದು ಹಾಕುವರು. ''ಇವತ್ತು ನೀರು ಬೆರೆಸೀರಿ ಹಾಲು ತೆಳ್ಳಗೈತಿ'' ಎಂದು ಸೈದಪ್ಪ ಆರೋಪಿಸುವುದು, ಅದಕ್ಕೆ ''ನಿಂದು ದಿನಾ ಇದೆ ಹಾಡು'' ಎಂದು ಗೊಲ್ಲರು ಪ್ರತ್ಯಾರೋಪಿಸಿ ಹಾಲು ಹಾಕುವುದು ದಿನದ ರೂಢಿ. ತನ್ನ ಹಳೆಯ ಎಂಎಟಿ ಬೈಕ್‌ನ ಆ ಕಡೆ ಈ ಕಡೆ ಎರಡೆರಡು ಕ್ಯಾನು ಕಟ್ಟಿಕೊಂಡುಬರುವ ದರೇಗಟ್ಟಿಯ ಸೈದುಸಾಬ್‌ನ ಹೆಸರು ಗೊಲ್ಲರ ಬಾಯಲ್ಲಿ ಸೈದಪ್ಪ, ಊರ ಹಿರಿಯರ ಬಾಯಲ್ಲಿ ಸೈದ್ಯಾ, ಹೆಂಗಸರ ಬಾಯಲ್ಲಿ ಸೈದಪ್ಪಣ್ಣ ಎಂದು ದಿನವೂ ಹಲವಾರು ರೂಪ ಪಡೆಯುತ್ತಿರುತ್ತದೆ. ಒಂದು ಮುಂಜಾನೆ ಎಂದಿನಂತೆ ಹೀಗೆ ಹಾಲು ಹಾಕಿ ತಮ್ಮ ಹಟ್ಟಿಗೆ ಹಿಂದಿರುಗುತ್ತಿರುವಾಗಲೆ ಡೊಳ್ಳುಹೊಟ್ಟೆಯ ಸಾಹೇಬರುಗಳನ್ನು ಹಟ್ಟಿಯವರು ನೋಡಿ ಗಾಬರಿಗೊಂಡದ್ದು.

* * *

''ಗಾಳಿ ಪಂಕಾ ಕೂಡ್ರಿಸಲು ಗುಡ್ಡವನ್ನು ಅಳತೆ ಮಾಡಾಕ ಹತ್ಯಾರ'' ಎಂಬ ಸುದ್ದಿ ಗಾಳಿಯಂತೆ ಗಾಳಿಗುಡ್ಡದ ಸುತ್ತಮುತ್ತ

ಊರುಗಳಲ್ಲೆಲ್ಲ ಹರಡಿತು. ದರೆಗಟ್ಟೆಯ ಮಾಜಿ ಶಾಸಕ ದೇವಪ್ಪ, ಮಠದ ಪಡದಯ್ಯಜ್ಜಾರು, ಗ್ರಾಮ ಪಂಚಾಯತಿ ಪದಾಧಿಕಾರಿಗಳು, ಊರ ಯುವಕ ಸಂಘದ ಹುಡುಗರು, ಜಿಲ್ಲೆಯ ಪತ್ರಕರ್ತರು, ಟಿವಿ ಚಾನೆಲ್‌ಗಳವರು ಎಚ್ಚೆತ್ತುಕೊಂಡು ಗುಡ್ಡದ ವಿಷಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಕಾತರರಾದರು. ಇವರೆಲ್ಲ ಈ ಗುಡ್ಡವನ್ನು ಪವನ್ ಕಂಪೆನಿಗೆ ಬಿಟ್ಟುಕೊಡುವುದು ಬೇಡ ಎನ್ನುವವವರೆ, ಆದರೆ ಯಾವ ತಂತ್ರದ ಮೂಲಕ ಪ್ರತಿಭಟನೆಗೆ ಇಳಿದರೆ ತಮಗೆ ಲಾಭವಾಗಬಹುದು ಎಂಬ ಚಿಂತೆಯಲ್ಲಿ ಚಡಪಡಿಸತೊಡಗಿದರು. ಪ್ರತಿಭಟನೆಯ ಮೂಲಕ ರಾಜ್ಯ ಮುಖಂಡರ ಗಮನ ಸೆಳೆದು ಮತ್ತೊಮ್ಮೆ ಶಾಸಕನಾಗುವ ಕನಸಿನ ಮಾಜಿ ಶಾಸಕ ದೇವಪ್ಪ, ಲಿಂಗಪೂಜೆಗೆ ಮಾತ್ರ ಸೀಮಿತವಲ್ಲ, ಸಂದರ್ಭ ಬಂದರೆ ಜನರ ಪರವಾಗಿ ಬೀದಿಗಿಳಿಯಲು ಸಿದ್ಧ ಎಂಬ ಹಪ ಹಪಿಯ ಪಡದಯ್ಯಜ್ಜಾರು, ಊರ ಹುಡುಗಿಯರ ಕಣ್ಣಲ್ಲಿ ಹೀರೋ ಆಗುವ ಹುಚ್ಚಿನ ಯುವಕ ಸಂಘದ ಹುಡುಗರು, ಮುಖಪುಟದಲ್ಲಿ ಬರುವಂತಹ ಲೇಖನ ಬರೆದು ಪ್ರಮೋಷನ್ ಪಡೆಯುವ ಕನಸಿನ ಸ್ಟ್ರಿಂಜರ್ ಪತ್ರಕರ್ತರು, ಪವನ್ ಕಂಪೆನಿಗೆ ಗುಡ್ಡ ಬಿಟ್ಟುಕೊಡುವುದರಿಂದ ಈ ಭಾಗದ ಜನರ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ರಾಜಕೀಯ ಪಲ್ಲಟಗಳ ಬಗ್ಗೆ ಪಿಎಚ್ಡಿ ಮಾಡಬೇಕೆಂಬ ಮಹತ್ವಾಕಾಂಕ್ಷೆಯ ಉದಯೋನ್ಮುಖ ಸಾಹಿತಿಗಳು ಮುಂತಾದವರೆಲ್ಲರೂ ತಾವು ನಂಬಿದ ಹನುಮದೇವರೆ ಪವನ್ ಕಂಪನಿಯ ರೂಪದಲ್ಲಿ ತಮಗೆ ವರ ನೀಡಿದ್ದಾನೆ ಎಂದು ಕೈ ಮುಗಿಯುವವರೆ.

ಇನ್ನು ಆಳುವ ಪಕ್ಷದ ಶಾಸಕ ಮತ್ತು ಗ್ರಾಮ ಪಂಚಾಯತಿಯ ಮೆಂಬರ್‌ಗಳು ಎಲ್ಲಿ ಈ ಬಡ್ಡಿಮಕ್ಕಳು ಪ್ರತಿಭಟನೆ ಮಾಡಿ ಕಂಪೆನಿಯಿಂದ ಬರುವ ತಮ್ಮ ಪಾಲಿಗೆ ಕಲ್ಲು ಹಾಕುತ್ತಾರೆಯೋ ಎಂದು ಒಳಗೊಳಗೆ ಸಂಕಟಪಟ್ಟುಕೊಂಡು ಇವರ ಪ್ರತಿಭಟನೆಗೆ ಕಲ್ಲು ಹಾಕುವ ಪ್ರತಿತಂತ್ರವನ್ನು ರೂಪಿಸುವಲ್ಲಿ ತಲೆ ಬಿಸಿ ಮಾಡಿಕೊಳ್ಳತೊಡಗಿದರು.

ನಿಜವಾಗಿಯೂ ಆತಂಕಕ್ಕೆ ಬಿದ್ದವರು ಗುಡ್ಡವನ್ನೆ ತಮ್ಮ ಬದುಕಾಗಿಸಿಕೊಂಡಿದ್ದ ಗೌಳಿಗರು ಮತ್ತು ಹಾಲು ತುಂಬುವ ಸೈದಪ್ಪ. ಒಂದು ಸಂಜೆ ಸೈದಪ್ಪ ತನ್ನ ಎಂಎಟಿಯನ್ನು ಗಾಳೆಪಜ್ಜನ ಗುಡಿ ಮುಂದೆ ತರುಬಿಸಿ ಗಾಳೆಪಜ್ಜನಿಗೆ ಕೈ ಮುಗಿದು ಅಂಗಾರ ಹಚ್ಚಿಕೊಂಡು ಗುಡ್ಡವೇರಿದ. ಗೌಳ್ಯರ ಹಟ್ಟಿಗೆ ಹೋಗಿ ಅವರನ್ನೆಲ್ಲ ಒಂ ಕಡೆ ಸಭೆ ಸೇರಿಸಿದ. ಗೌಳ್ಯಾರು ಕೂಡ ಬಹಳಷ್ಟು ಚಿಂತಿತರಾಗಿದ್ದರು. "ನಮ ಮುತ್ಯಾರಿಂದ ಈ ಗುಡ್ಡದಾಗ ಬದುಕಾಕ ಹತ್ತೀವಿ, ಈ ಗುಡ್ಡದಾಗ ಹುಟ್ಟಿವಿ, ಗುಡ್ಡದಾಗ ಸಾಯಿತಿವಿ. ನಾವೇನು ಸರಕಾರದವರಿಂದ ಮನೆ ಕೇಳಿಲ್ಲ, ಹ ಕೇಳಿಲ್ಲ. ನಮ್ಮನ್ನ ನಮ್ಮ ಪಾಡಿಗೆ ಯಾಕ ಬದುಕಾಕ ಬಿಡಬಾರದು" ಎಂದು ಅ ಸೈದಪ್ಪನ ಮುಂದೆ ಬಡಬಡಿಸಿದರು. ಸೈದಪ್ಪನಾದರೂ ಏನು ಹೇಳಿಯಾ ಅವನಿಗೂ ಇದು ಬಗೆಹರಿಯದ ಸಮಸ್ಯೆಯಾಗಿತ್ತು, ಆದರೂ ಏನಾದ ಮಾಡಬೇಕಿತ್ತು. ಈ ಗಾಳಿಯಂತ್ರದ ಯೋಜನಾನ ಮಾಜಿ ಶಾಸಕ ದೇವಪ್ಪನೋ ವಿರೋಧ ಮಾಡ್ತಾರೆ ಅನ್ನೋದು ಅವನಿಗೂ ಗೊತ್ತಿತ್ತು. ಅವರ ಮನೆ ಬಾಗಿ ಹೋಗಿ ನೀವೆ ದಿಕ್ಕು ಎಂದರೆ ಹೇಗೆ ಎಂಬ ವಿಚಾರ ಹೊಳೆಯಿತು. "ದೇವಪ್ಪನೋ ವಾಡೆಕ ಬರ್ರಿ. ಅವರಿಗೆ ನಮ್ಮ ಸಮಸ್ಯೆ ತಿಳಿಸೋನು" ಎಂದ. ಏನೇನೋ ಸಮಾಧಾ ಹೇಳುತ್ತ ಅಲ್ಲಿಯೆ ಎಷ್ಟೋ ಹೊತ್ತು ಕುಳಿತ.

* * *

ಮರುದಿನ ಗೊಲ್ಲರು ತಮ್ಮ ದನಕರುಗಳ ಕೆಲಸ ಮುಗಿಸಿ ಶಾಸಕರ ಬಂ ಹೋಗಲು ಗುಡ್ಡವಿಳಿಯುತ್ತಿದ್ದವರಿಗೆ ಗಾಳೆಪ್ಪನ ಗುಡಿಯ ಹತ್ತಿರ ಜೀಪೊಂ ನಿಂತಿದ್ದು ಕಂಡಿತು. ದೂರದಲ್ಲಿ ತಲೆಗೆ ಕ್ಯಾಪು, ಕೈಯಲ್ಲಿ ಟೇಪು ಹಿಡಿದುಕೊಂ ಐದಾರು ಜನ ಇಡಿ ಗುಡ್ಡವನ್ನು ಅಳತೆಮಾಡಿ ಗುರುತು ಹಾಕಿಕೊಳ್ಳುವ ಕೆಲಸ ನಿರತರಾಗಿದ್ದರು. ಅವರನ್ನು ನೋಡಿದ ಗೊಲ್ಲರು ಗಾಬರಿಗೊಂಡು ಮತ್ತ ಅವಸರವಾಗಿ ಮಾಜಿ ಶಾಸಕರ ಮನೆಯತ್ತ ಹೆಜ್ಜೆ ಹಾಕಿದರು.

ಆ ಭಾಗದಲ್ಲಿ ಜನನೇತಾರರೆನಿಸಿಕೊಂಡಿದ್ದ ದೇವಪ್ಪನೋರು ಗೊಲ್ಲ ಒಳಕರೆದು ಕುಳ್ಳಿರಿಸಿಕೊಂಡರು. ಈ ಹಿಂದೆಂದೂ ಗೊಲ್ಲರು ದೇವಪ್ಪನ ಬಾಗಿಲು ತುಳಿದವರಲ್ಲ. ಗೊಲ್ಲರಿಗೆ ಓಟಿನ ಚೀಟಿಯೂ ಇರದಿದ್ದರಿ ದೇವಪ್ಪ ಕೂಡ ಗುಡ್ಡ ಹತ್ತಿ ಅವರಿಗೆ ಕೈ ಮುಗಿದವರಲ್ಲ. ಹಾಗೆ ನೋಡಿದರೆ ಗೊಲ್ಲ ಊರ ಕಡೆ ಮುಖ ಮಾಡುವುದೆ ಕಡಿಮೆ. ಯಾವಾಗಲೋ ಒಮ್ಮೊಮ್ಮೆ ಬೆಣ್ಣೆ, ತು

ಸರು, ಜೇನುತುಪ್ಪದಂಥವುಗಳನ್ನು ಮಾರಲು ರ ಓಣಿಗಳಲ್ಲಿ ಅಲೆದಾಡಿದ್ದುಂಟು. ತಾವು ದ್ದನ್ನು ಮಾರಿ ತಮಗೆ ಬೇಕಾದುದನ್ನು ಕೊಂಡು ತ್ತೆ ಗುಡ್ಡದ ದಾರಿ ಹಿಡಿಯುತ್ತಿದ್ದರು.

ಸಮಸ್ಯೆಯ ಗಂಭೀರತೆಯನ್ನು ಕೇಳಿ ಪಪ್ಪನೋರು ಸ್ವಲ್ಪ ಹೊತ್ತು ದಿವ್ಯ ನಿರ್ಲಕ್ಷ್ಯ ಸಿದರು. ಊರವರ ಕಷ್ಟಗಳನ್ನು ಆಲಿಸಲು ಚಾವಡಿ ಹೋಗಿದ್ದ ತಮ್ಮ ಹಿರಿಯ ಮಗ ಮತ್ತು ಆ ಭಾಗದ ವ ನೇತಾರ ಶೇಖರನನ್ನು ಕರೆಸಿಕೊಂಡರು. ತಾವು ಕರಾಗಿದ್ದಾಗ ಹೆಚ್ಚಾಗಿ ಜಿಲ್ಲಾ ಕೇಂದ್ರದಲ್ಲಿ ಮತ್ತು ಗಳೂರಿನಲ್ಲಿ ಸಮಯ ಕಳೆದಿದ್ದುದರಿಂದ ಅವರಿಗೆ ರ ಕಡೆಯ ಸಂಪರ್ಕ ಕಡಿದುಹೋದಂತಾಗಿತ್ತು ತ್ತ ಅವರಿಗೆ ವಯಸ್ಸಾಗಿ ಕಿವಿ ಕಣ್ಣುಗಳು ಈ ದಲಿನಂತೆ ಸಹಕರಿಸುತ್ತಿರಲಿಲ್ಲವಾದದ್ದರಿಂದ ದೆಲ್ಲ ಮುಗಿಯಿತು, ಇನ್ನು ಮಗನ ರಾಜಕೀಯ ಯನ್ನು ಭದ್ರ ಮಾಡಬೇಕೆಂಬುದು ಅವರ ಯಾಗಿತ್ತು. ಜೊತೆಗೆ ಊರ ಜನರೊಂದಿಗೆ ಸಕ್ರಿಯ ರ್ಕವನ್ನು ಇಟ್ಟುಕೊಂಡಿದ್ದ ಶೇಖರ ಈಗಾಗಲೆ ತಹ ಹಲವಾರು ಸಂದರ್ಭಗಳಲ್ಲಿ ಪ್ರತಿಭಟನೆಗಳಿಗೆ ರನ್ನು ಸೇರಿಸುವುದರಲ್ಲಿ ನಿಷ್ಣಾತನಾಗಿದ್ದ. ಆದ್ದರಿಂದ ಇಂತಹ ವಿಷಯಗಳಿಗೆಲ್ಲ ರನೆ ಸೂಕ್ತ ವ್ಯಕ್ತಿಯೆಂದು ದೇವಪ್ಪ ತಮ್ಮ ಮಗನನ್ನು ಕರೆಸಿಕೊಂಡಿದ್ದರು.

ಗಾಳಿಗುಡ್ಡವನ್ನು ಉಳಿಸಿಕೊಳ್ಳುವುದು ದೇವಪ್ಪ ತಮ್ಮ ಅಸ್ತಿತ್ವದ ಪ್ರಶ್ನೆಯಾಗಿಸಿ ಡರು. ತಂದೆಯ ಮುಖಭಾವವನ್ನು ಅರ್ಥಮಾಡಿಕೊಂಡ ಮಗ ಶೇಖರ ಊರ ರನ್ನು ಪ್ರತಿಭಟನೆಗೆ ಸಜ್ಜುಮಾಡುವುದಾಗಿ ತಂದೆಗೆ ಆತ್ಮವಿಶ್ವಾಸ ತುಂಬಿದ. ವಪ್ಪನೋರು ಆಗಲೇ ತಮ್ಮ ಕಾರಿನಲ್ಲಿ ನಾಲ್ಕಾರು ಗೌಳಿಗರನ್ನು ಕೂಡ್ರಿಸಿಕೊಂಡು ದಯ್ಯಜ್ಜಾರ ಮಠಕ್ಕೆ ಹೊರಟರು.

* * *

ಮಠದ ಜಮೀನಿನಲ್ಲಿ ವಿದೇಶೀಯ ಮಿಡಿ ಸವತೆಬಳ್ಳಿಯನ್ನು ಆಳುಮಕ್ಕಳಿಂದ ಟ್ಟಿಸುವ ಕೆಲಸದಲ್ಲಿ ನಿರತರಾಗಿದ್ದ ಪಡದಯ್ಯಜ್ಜನವರಿಗೆ ದೂರದಲ್ಲಿಯೆ ಮಾಜಿ ಲ್‌ಎ ಕಾರು ಕಾಣಿಸಿ ತಾವು ಕಾರು ತೆಗೆದುಕೊಳ್ಳಬೇಕೆಂಬ ತಮ್ಮ ಹಳೆಯ ಯು ನೆನಪಾಗಿ ಮನಸ್ಸು ಹಳಹಳಿಸಿತು. ಬಹಳ ದಿನಗಳ ನಂತರ ತಮ್ಮ ಮಠದ ತುಳಿದಿದ್ದ ದೇವಪ್ಪನನ್ನು ನೋಡಿ ಅಜ್ಜಾರು ಗಂಭೀರ ವಿಷಯವೆ ಇರಬೇಕೆಂದು ಡರಾದರೂ ಅದೇನು ಎಂಬುದು ಅವರ ತಲೆಗೆ ಹೊಳೆಯಲಿಲ್ಲ. ಆದರೆ ಪ್ಪನ ಕಾರಿನಲ್ಲಿ ಗೌಳಿಗರನ್ನು ನೋಡಿದ ಮೇಲೆ ಅಜ್ಜಾರಿಗೆ ವಿಷಯ ವಾಯಿತು. ಸ್ವಾಮೀಜಿ ಕಂಡೊಡನೆ ಸೈದಪ್ಪ ಮತ್ತು ಗೌಳಿಗರು ನಿಂತಲ್ಲಿಯೆ ಬಿದ್ದರು. ಅಜ್ಜಾವ್ರು ಗೌಳಿಗರನ್ನು ಅಲ್ಲಿಯೆ ಬಿಟ್ಟು ದೇವಪ್ಪನನ್ನು ತಮ್ಮ ಖಾಸಗಿ ಮಿನೊಳಕ್ಕೆ ಕರೆದೊಯ್ದರು.

ಗಾಳಿಗುಡ್ಡವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಲೇಬೇಕೆಂದು ಅಜ್ಜಾರು ತ್ತಿ ದೇವಪ್ಪ ನಿರ್ಧರಿಸಿಬಿಟ್ಟರು. ಒಂದು ಹಂತದಲ್ಲಿ ದೇವಪ್ಪನವರ ಮಾತಿನಿಂದ ರ್ತಿಗೊಂಡ ಭಕ್ತಪಾಲಕರಾದ ಅಜ್ಜಾರು ತಾವು ಗಾಳಿಗುಡ್ಡಕ್ಕಾಗಿ ತಮ್ಮ ಪ್ರಾಣವನ್ನೇ ಡಲು ಸಿದ್ಧ ಎಂದರು. ಈ ಮಾತಿಗಾಗಿಯೆ ಕಾಯುತ್ತ ಕುಳಿತವರಂತಿದ್ದ ಪ್ಪ ''ಸ್ವಾಮೇರ ನೀವೇನು ಪ್ರಾಣ ಕೊಡೋದು ಬ್ಯಾಡ. ಆದ್ರ ನೀವು ಗುಡ್ಡಕ್ಕಾಗಿ ವಾಸ ಕುಳಿತರೆ ಹ್ಯಾಂಗ? ಈ ಭಾಗದ ಜಾಗೃತ ಮಠದ ಸ್ವಾಮೇರು ಉಪವಾಸ ತಾರಂದ್ರ ನಿಮಗ ಜನಬೆಂಬಲ ಸಾಗರದಂಗ ಹರಿದು ಬರತದ. ಆಗ ರದೋರು ಗ್ಯಾರಂಟಿಯಾಗಿ ಈ ಯೋಜನಾ ಕೈ ಬಿಡಬೇಕಾಕ್ಕೈತಿ'' ಎಂದು ಇಂಗಿತವನ್ನು ಹೇಳಿದರು.

ಸ್ವಾಮೇರು ಈಗ ನಿಜವಾಗಲೂ ಸಂದಿಗ್ಧಕ್ಕೆ ಸಿಲುಕಿಕೊಂಡರು. ''ಎಷ್ಟೋತ್ತು ವಾಸ ಇರಬೇಕಾಗತ್ತೈತಿ'' ಎಂದರು. 'ಬಾಳಂದ್ರ ಮೂರ್‍ನಾಲ್ಕು ದಿನ ಅಗಬೌದು ೇರ' ಎಂದು ದೇವಪ್ಪನೋರು ಅಜ್ಜಾವ್ರಿಗೆ ಧೈರ್ಯ ತುಂಬಲು ಹವಣಿಸಿದರು.

'ಹ್ಹಹ್ಹ, ಹಂಗಂದ್ರ ನಮ್ಮನ್ನು ನಿಜವಾಗಲೂ ಶಿವನ ಪಾದ ಸೇರಿಸಬೇಕಂತ ನೀವು ತೀರ್ಮಾನಿಸಿದಂಗ ಕಾಣತ್ತೈತಿ.'' ತಮ್ಮ ಮಾತಿನಿಂದ ತಮಗೆ ಅವಮಾನವಾದಂತಾಗಿ ಅಜ್ಜಾವ್ರು ದೇವಪ್ಪನವರ ಮುಖ ನೋಡಿದರು.

''ಹಂಗ ಅನಕೋ ಬ್ಯಾಡ್ರಿ. ನಿಮಗ ಮನಸ್ಸಿಲ್ಲಾಂದ್ರ ಬ್ಯಾಡ'' ಎಂದು ದೇವಪ್ಪನೋರು ಹುಳ್ಳಹುಳ್ಳಗೆ ನಕ್ಕರು.

''ನಾನೇನು ಉಪವಾಸ ಕೂಡತಿದ್ದೆ. ಆದ್ರ ಬಿಪಿ ಶುಗರ್‍ರು ಸೇರಕೊಂಡು ಮೈ ಹಣ್ಣ ಹಣ್ಣು ಮಾಡ್ಯಾವ. ಬಾಳಂದ್ರ ಅರ್ಧ ದಿನ, ಅಬ್ಬಬ್ಬಾ ಅಂದ್ರ ಒಂದು ದಿನ ಕೂಡಬಹುದು. ಅದಕ್ಕಿಂತ ಜಾಸ್ತಿ ಕೂತಗೊಂಡ್ರ ಖಾಯಂ ಆಗಿ ಅಲ್ಲೆ ಕೂಡಬೇಕಾಗತದ'' ಎಂದು ಸ್ವಾಮೇರು ತಾವು ನಗುತ್ತಾ ದೇವಪ್ಪನೋರನ್ನು ನಗಿಸಿದರು.

''ಅಲ್ಲ ನೀವು ಯಾಕ ಉಪವಾಸ ಕೂಡಬಾರದು ಅಂತೀನಿ'' ಎಂದು ಸ್ವಾಮೇರು ದೇವಪ್ಪನವರಿಗೆ ತಿರುಮಂತ್ರ ಉಪಯೋಗಿಸಿದರು.

''ಹೆಹ್ಹೆಹ್ಹೆ ನಂದೂ ಅದ ಪರಿಸ್ಥಿತಿ ಸ್ವಾಮೇರ. ನಾನು ಉಪವಾಸ ಕೂಡತೇನಂದ್ರೂ ದೇಹ ಅದಕ್ಕೆ ಸ್ಪಂದಿಸೋದಿಲ್ಲ. ವಯಸ್ಸಾತು ನೋಡ್ರಿ'' ಎಂದ.

ಇಬ್ಬರು ಗಣ್ಯರೂ ಸಮಾಜಕ್ಕಾಗಿಯೇ ತಮ್ಮ ಬದುಕನ್ನು ಮೀಸಲಿಟ್ಟವರು. ಉಪವಾಸ ಕೂಡ್ರಲೂ ಇಬ್ಬರಿಗೂ ಮನಸ್ಸಿದೆ. ಪ್ರತಿಭಟಿಸಲು ಉಪವಾಸವೇ ದೊಡ್ಡ ಆಯುಧ ಎಂದು ಇಬ್ಬರಿಗೂ ಗೊತ್ತು. ಆದರೆ ಉಪವಾಸ ಕುಳಿತು ತಮ್ಮ ಬದುಕಿಗೆ ಆಪತ್ತು ಬಂದರೆ ಮುಂದೆ ಸಮಾಜ ಸೇವೆಯನ್ನು ಮಾಡೋರ್‍ಯಾರು? ಕೊನೆಗೆ ಗೌಳಿಗರನ್ನೆ ಉಪವಾಸ ಕೂಡ್ರಿಸುವ ಚರ್ಚೆಯಾಗಿ ಅದೇ ನಿಕ್ಕಿಯಾಯಿತು.

ಹೊಟ್ಟೆಗೆ ಊಟವಿಲ್ಲದೆ ಆಗಾಗ ಉಪವಾಸ ಬಿದ್ದು ರೂಢಿಯಿದ್ದ ಗೌಳಿಗರು ತಮ್ಮ ಗುಡ್ಡ ಉಳಿಯುವುದಾದರೆ ಖುಷಿಯಿಂದಲೆ .ಉಪವಾಸ ಇರುವುದಾಗಿ ಒಪ್ಪಿಕೊಂಡರು. ಪ್ರತಿಭಟನೆಯ ದಿನಾಂಕವೊಂದನ್ನು ನಿಗದಿ ಮಾಡಿ ಈ ಬಗ್ಗೆ ನಾಳೆ ಸುದ್ದಿಗೋಷ್ಠಿ ನಡೆಸಲು ತಾಲೂಕು ಕೇಂದ್ರಕ್ಕೆ ನೀವೆಲ್ಲರೂ ಬರಬೇಕು ಎಂದು ಗೊಲ್ಲರಿಗೆ ದೇವಪ್ಪನವರು ತಾಕೀತು ಮಾಡಿದರು.

ಲುಂಗಿ, ಮಂಡಂಗಿ ಮ್ಯಾಲೊಂದು ಟಾವೆಲ್ಲು ಹಾಕಿಕೊಂಡು ಸುದ್ದಿಗೋಷ್ಠಿಗೆ ಬಂದಿದ್ದ ಗೊಲ್ಲರು ಈ ಪ್ರಪಂಚಕ್ಕೆ ಮೊದಲ ದಿನ ಕಾಲಿಟ್ಟವರಂತೆ, ಸೋಜಿಗದಿಂದ ಅತ್ತಿತ್ತ ತಮ್ಮ ಕ್ಷೀಣ ನೋಟ ಬೀರುತ್ತ ನಿಂತುಕೊಂಡಿದ್ದರು. ಒಂದಿಬ್ಬರು ತಮ್ಮ ಕ್ಯಾಮರಾದೊಳಕ್ಕೆ ಕಣ್ಣಿಟ್ಟುಕೊಂಡು ಕ್ಲಿಕ್ ಎಂದು ಇವರ ಮೇಲೆ ಬೆಳಕು ಚೆಲ್ಲಿ ಇವರಿಗೆ ಮತ್ತಷ್ಟು ಗೊಂದಲವನ್ನುಂಟುಮಾಡುತ್ತಿದ್ದರು. ಗೌಳಿಗ ಹೆಂಗಸರಿಗಂತೂ ಅಷ್ಟೊಂದು ಜನರ ಎದುರಿಗೆ ನಿಲ್ಲಲು ಭಯವಾಗಿ ಗುಡ್ಡ ಬೇಡ ಏನೂ ಬೇಡ ಅಲ್ಲಿಂದ ತಪ್ಪಿಸಿಕೊಂಡರೆ ಸಾಕು ಎನಿಸತೊಡಗಿತು. ಇವರ ಪಕ್ಕದಲ್ಲಿಯೆ ದೇವಪ್ಪ ಮತ್ತು ಸ್ವಾಮಿಗಳು ಖುರ್ಚಿಗಳಲ್ಲಿಯೆ ಆಸೀನರಾಗಿದ್ದರು.

ದೇವಪ್ಪ ಎದ್ದುನಿಂತು ''ಈಗಿನ ಸರಕಾರದ ದುರಾಡಳಿತದಿಂದ ಬಡವರ ಬದುಕು ತುಟ್ಟಿಯಾಗ್ಯದ. ಹೊಲಮನೆ ಇಲ್ಲದೆ ಸರಕಾರದ ಯಾವ ಹಂಗಿರದ ಗುಡ್ಡದ ಮ್ಯಾಗ ಬದುಕುತ್ತಿದ್ದ ಗೌಳಿಗರನ್ನು ಒಕ್ಕಲೆಬ್ಬಿಸುವ ಕೆಲಸ ಸರಕಾರ ಮಾಡಾಕ ಹತ್ತೈದ. ಇಷ್ಟು ದಿನ ಎಸ್‌ಇಜಡ್ ಹೆಸರಿನಲ್ಲಿ ಸಾವಿರಾರು ಎಕರೆಗಳನ್ನು ನುಂಗಿ ನೀರು ಕುಡಿದಿರುವ ಸರಕಾರ ಈಗ ಗುಡ್ಡಕ್ಕೆ ಕೈ ಹಚ್ಚಿದೆ. ಯಾವ ಮುನ್ಸೂಚನೆಯನ್ನೂ ನೀಡದೆ, ಗೌಳಿಗರಿಗೆ ಪುನರ್ವಸತಿಯನ್ನು ಕಲ್ಪಿಸದೆ ಗುಡ್ಡವನ್ನು ಪವನ್ ಕಂಪೆನಿಗೆ ನೀಡಿದ್ದು ಖಂಡನೀಯ. ಇದನ್ನು ವಿರೋಧಿಸಿ ನಾಳೆಯಿಂದ ತಾಲ್ಲೂಕು ಕಚೇರಿ ಎದುರು ಗೌಳಿಗರು ಆಮರಣಾಂತ ಉಪವಾಸ ಕೂಡ್ರುತ್ತಿದ್ದಾರೆ'' ಎಂದು ಇನ್ನೂ ಏನೇನೋ ಹೇಳಿ ಕುಳಿತುಕೊಂಡ. ಅಜ್ಜಾವ್ರು ಅವರ ಮಾತಿಗೆ ಧ್ವನಿಗೂಡಿಸಿದರು.

* * *

ಇತ್ತ ಇವರು ಉಪವಾಸಕ್ಕೆ ಸಿದ್ಧಗೊಳ್ಳುತ್ತಿರುವಾಗಲೆ ಅತ್ತ ಗಾಳಿಯಂತ್ರಗಳನ್ನು ಕೂಡ್ರಿಸಲು ಪವನ್ ಕಂಪನಿ ಸಕಲ ರೀತಿಯಲ್ಲಿ ಸಜ್ಜುಗೊಳ್ಳುತ್ತಿತ್ತು. ಗಾಳಿಯಂತ್ರದ ಬೃಹತ್ ರೆಕ್ಕೆಗಳನ್ನು ಹೊತ್ತುಕೊಂಡಿದ್ದ ೩೦ ಅಡಿ ಉದ್ದದ ಟ್ರಕ್ಕುಗಳು ಏರಿಗಟ್ಟಿಯ

ಬಸ್ ನಿಲ್ದಾಣದವರೆಗೆ ಬಂದು ಗುಡ್ಡದ ದಾರಿಯಲ್ಲಿ ಹೋಗಲು ಸಾಧ್ಯವಿಲ್ಲದ್ದರಿಂದ ಬುಸುಗುಡುತ್ತ ನಿಂತುಕೊಂಡಿದ್ದವು. ಊರ ಜನರೆಲ್ಲ ಟ್ರಕ್ ಮೇಲೆ ಠೀವಿಯಿಂದ ಆಸೀನವಾಗಿದ್ದ ರೆಕ್ಕೆಗಳನ್ನು ಅನ್ಯಗ್ರಹದಿಂದ ಬಿದ್ದ ಅಪರಿಚಿತ ವಸ್ತುವನ್ನು ನೋಡುವಂತೆ ಅತ್ಯಾಶ್ಚರ್ಯದಿಂದ ನೋಡುತ್ತ ಸುತ್ತುವರಿದಿದ್ದರು.

ಊರಿಗೆಲ್ಲ ಒಂದು ಚಿಂತೆಯಾಗಿದ್ದರೆ ಟ್ರಕ್ ಚಾಲಕರಿಗೆ ತಮ್ಮ ಹೊಟ್ಟೆಯ ಚಿಂತೆ. ಬೆಳಗ್ಗೆಯಿಂದ ಏನನ್ನೂ ತಿಂದಿರದ ಅವರನ್ನು ಹುಡುಗನೊಬ್ಬ ಕಿರಾಣಿ ಅಂಗಡಿ ಕೊಟ್ರಪ್ಪನಲ್ಲಿಗೆ ಕರೆತಂದ. ಅಂಗಡಿಯ ಜೊತೆ ಪರ ಊರಿನಿಂದ ಬರುವವರಿಗೆ ಊಟ ಹಾಕುವ ಅರೆಕಾಲಿಕ ಖಾನಾವಳಿಯನ್ನು ಕೊಟ್ರಪ್ಪ ನಡೆಸುತ್ತಿದ್ದ. ಬಂದವರನ್ನು ಮಾತಿಗೆ ಕೂಡ್ರಿಸಿಕೊಂಡು ತನ್ನ ಹೆಂಡತಿಗೆ ಊಟ ತಯಾರಿಸಲು ಹೇಳಿದ. ಅಲ್ಲಿಯೆ ಕುಳಿತು ತನ್ನ ಎಸ್ಸೆಸ್ಸೆಲ್ಸಿ ಪರೀಕ್ಷೆಗಾಗಿ ತಯಾರಿ ನಡೆಸುತ್ತಿದ್ದ ಕೊಟ್ರಪ್ಪನ ಮಗಳು ಓದುವುದನ್ನು ಬಿಟ್ಟು ಬಂದವರನ್ನು ಬೆರಗುಗಣ್ಣುಗಳಿಂದ ನೋಡುವಲ್ಲಿ ಮೈಮರೆತಳು. ಇದನ್ನು ಕಂಡ ಕೊಟ್ರಪ್ಪ ಬಿರುಗಣ್ಣಿಂದ ಮಗಳಿಗೆ ಒಳಗೆ ಹೋಗಲು ಸೂಚಿಸಿದ.

ಪವನ್ ಕಂಪೆನಿಯ ಮ್ಯಾನೇಜರ್ ಟ್ರಕ್‌ಗಳು ಗುಡ್ಡದ ಕಡೆ ಹೋಗುವ ದಾರಿಗೆ ಅಡ್ಡವಾಗಿದ್ದ ಗಿಡಮರಗಳನ್ನು ಚಂಡಾಡಿ ದಾರಿಯನ್ನು ಸುಗಮಗೊಳಿಸುವ ಕೆಲಸವನ್ನು ಮಾಡಿಸುತ್ತಿದ್ದ. ಆ ಕೆಲಸಕ್ಕೆ ಬಂದಿದ್ದ ಆಳುಗಳಿಗೆ ಮುನ್ನೂರು ರೂಪಾಯಿ ದಿನಗೂಲಿ ಕೊಟ್ಟು ಮರುದಿನ ಗುಡ್ಡದಲ್ಲಿ ಗಾಳಿಯಂತ್ರಕ್ಕೆ ಗುಂಡಿ ತೋಡಲು ಇನ್ನಷ್ಟು ಹೆಣ್ಣಾಳು - ಗಂಡಾಳುಗಳನ್ನು ಕರೆದುಕೊಂಡು ಬರಬೇಕೆಂದು ಹೇಳಿ ಕಳುಹಿಸಿದ. ತಮ್ಮ ಜೀವಮಾನದಲ್ಲಿಯೆ ಒಂದು ದಿನಕ್ಕೆ ಇಷ್ಟೊಂದು ಸಂಬಳ ಕಾಣದ ಆಳುಗಳು ಅಂದು ರಾತ್ರಿ ಪವನ್ ಕಂಪನಿಯ ಒಳ್ಳೇತನವನ್ನು ಊರಲ್ಲೆಲ್ಲ ಪ್ರಚಾರ ಮಾಡಿ ಕೆಲಸಕ್ಕೆ ರೆಡಿ ಮಾಡಿದರು.

ಇತ್ತ ಯುವ ನೇತಾರ ಶೇಖರ ನಾಳೆಯ ಪ್ರತಿಭಟನೆಗೆ ಜನರಿಗಾಗಿ ಊರಲ್ಲಿ ಹುಡುಕಾಡತೊಡಗಿದ. ಮೊದಲೆಲ್ಲ ಉಪ್ಪಿಟ್ಟಿನ ಆಸೆಗೆ ಪುಕ್ಕಟ್ಟೆಯಾಗಿ ಬರುತ್ತಿದ್ದ ಊರ ಜನ ಈಗ ಪವನ್ ಕಂಪೆನಿಯಿಂದ ದಿನಕ್ಕೆ ಮುನ್ನೂರು ರೂಪಾಯಿ ಪಗಾರ

ಸಿಗುವುದನ್ನು ಬಿಟ್ಟು ಬರಲಿಕ್ಕೆ ತಯಾರಿರಲಿಲ್ಲ. ಅದು ಶೇಖರನಿಗೂ ಗೊತ್ತಾಯಿ ಆತ ಮುಂದೆ ತಾನು ಎಮ್ಮೆಲ್ಲೆ ಆದಾಗ ತಮಗೆ ಬೇಕಾದ ಸೌಲಭ್ಯ ಕೊಡುವುದಾ ಭರವಸೆ ಹುಟ್ಟಿಸಿ ಮತ್ತು ಖರ್ಚಿಗೆ ೧೦೦ ರೂಪಾಯಿ ಮುಂಗಡ ಕೊಟ್ಟು ಅಂತ ಇಂತೂ ಪ್ರತಿಭಟನೆಗೆ ಒಂದಿಷ್ಟು ಜನರನ್ನು ತಯಾರುಗೊಳಿಸಿದ.

* *

ಬಸ್ ನಿಲ್ದಾಣದಿಂದ ತಾಲ್ಲೂಕು ಕಚೇರಿಯವರೆಗೆ ಮೆರವಣಿಗೆ ಹೊರ ತಾಲ್ಲೂಕು ಕಚೇರಿ ಎದುರು ಹಾಕಲಾಗಿದ್ದ ಪೆಂಡಾಲಿನಲ್ಲಿ ಗೌಳಿಗರು ಪ್ರತಿಭಟನ ಕುಳಿತರು. ಪ್ರತಿಭಟನೆಯ ಪೆಂಡಾಲಿನಲ್ಲೆಲ್ಲ ಸೈದಪ್ಪ ಓಡಾಡಿದ್ದೇ, ಓಡಾಡಿದ ಪ್ರಾರಂಭದಲ್ಲಿ ಮಾತ್ರ ದೇವಪ್ಪ ಮತ್ತು ಅಜ್ಜಾವ್ರು ಬಂದು ಬೇಡಿಕೆ ಈಡೇರು ವರೆಗೆ ಪ್ರತಿಭಟನೆಯಿಂದ ಹಿಂದೆ ಸರಿಯಬೇಡಿರಿ ಎಂದು ಧೈರ್ಯ ಹ ಹೋಗಿದ್ದರು. ಆದರೆ ಅನಂತರದಲ್ಲಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡುವ ವಿ ಸಂಘಟನೆಗಳ ಮುಖಂಡರಿಗೆ ಮತ್ತು ಪತ್ರಿಕೆಗಳವರಿಗೆ ತನಗೆ ತಿಳಿದಮಟ್ಟ ಸಾದ್ಯಂತವಾಗಿ ಮಾಹಿತಿ ನೀಡುವ ಕೆಲಸವನ್ನು ಸೈದಪ್ಪ ಮಾಡುತ್ತಿದ್ದ. ಉಪವಾ ಕುಳಿತಿದ್ದ ಗೌಳಿಗರು ತಮ್ಮ ದನಕರುಗಳ ಕೆಲಸವನ್ನು ತಮ್ಮ ಹೆಂಡತಿ ಮಕ್ಕಳಿಗೆ ಒ ಬಂದಿದ್ದರು. ಸೈಯ್ಯದ್ ಸಹ ತನ್ನ ಎಂಎಟಿಯನ್ನು ತನ್ನ ತಮ್ಮ ಅಲ್ಲಾಭಕ್ಷಿಗೆ ಒಪ್ಪಿಸಿದ ಪೆಂಡಾಲಿನಲ್ಲಿ ಉಳಿದುಕೊಂಡುಬಿಟ್ಟಿದ್ದ.

ಪೆಂಡಾಲಿಗೆ ಯಾರ್‍ಯಾರೊ ಬರುತ್ತಿದ್ದರು. ಎಲ್ಲರೂ ಬಿಳಿ ಬ ಹಾಕಿಕೊಂಡಿರುತ್ತಿದ್ದುದರಿಂದ ಯಾರ್‍ಯಾರು ಎಷ್ಟೆಷ್ಟು ಗಣ್ಯರು ಎಂದು ಸೈದಪ್ಪ ಗೊತ್ತಾಗುತ್ತಿರಲಿಲ್ಲ. ಬಂದವರೆಲ್ಲ ಮೈಕು ಹಿಡಿದು ಬಾಯಿಗೆ ಬಂದಂತೆ ಚೀರಿ, ಅನಿಸಿಕೊಂಡು, ಉಪವಾಸ ಕುಳಿತವರ ಕೈ ಕುಲುಕಿ ಬಂದಷ್ಟೆ ವೇಗದ ಮಾಯವಾಗುತ್ತಿದ್ದರು. ಈ ಮಧ್ಯೆ ಖಾದಿ ಜುಬ್ಬಾ ಧರಿಸಿದ ಯುವಕನೊ ಸೈಯದ್‌ನ ಗಮನ ಸೆಳೆದ. ''ಎಲ್ಲ ಬಕ್ವಾಸ್ ನನ್ನ ಮಕ್ಕಳು, ಈ ಪ್ರತಿಭಟನೆಯಿಂ ಏನೂ ಅಗುವುದಿಲ್ಲ. ಇನ್ನೆರಡು ದಿನ ಕಾದು ಈ ನಂಬರಿಗೆ ಫೋನು ಮಾಡ ನಮ್ಮದೊಂದು ರಾಷ್ಟ್ರಮಟ್ಟದ ಸಂಘಟನೆ ಇದೆ, ನಾವು ನಿಮ್ಮ ಬೆನ್ನಿಗಿರತೆವಿ'' ಎಂ ಧೈರ್ಯ ತುಂಬಿ ಹೋಗಿದ್ದ.

ಎರಡು ದಿನಗಳವರೆಗೆ ಯಾವ ಬದಲಾವಣೆಯೂ ನಡೆಯದೆ ''ಬೇಕೆಬೇ ನ್ಯಾಯ ಬೇಕು'' ಎಂಬ ಕೂಗು ಕ್ಷೀಣವಾಗತೊಡಗಿತು. ದಿನಕ್ಕೊಮ್ಮೆ ದೇವಪ್ಪ ಮ ಅಜ್ಜಾವ್ರು ಬಂದು ಹೋಗುತ್ತಿದ್ದರು. ಎರಡು ದಿನದಿಂದ ಉಪವಾಸ ಮಾಡಿ ಗೌಳಿಗರು ನಿತ್ರಾಣ ಬಿದ್ದಿದ್ದರು.

ಇತ್ತ ಗುಡ್ಡದಲ್ಲಿ ಗಾಳಿಯಂತ್ರ ಕೂಡಿಸುವ ಕೆಲಸದಲ್ಲಿ ಹತ್ತಾರು ಬುಲ್ಡೋಜರುಗ ನೂರಾರು ಆಳುಗಳು ಯಮಸಾಹಸ ಪಡುತ್ತಿದ್ದರು. ತಾಲ್ಲೂಕಿನ ಜಲಾನಯ ಇಲಾಖೆ ಅನುದಾನದಡಿ ತಮ್ಮೂರಿನ ಸರಹದ್ದಿನಲ್ಲಾಗುವ ಕೃಷಿಹೊಂಡ ಬದು ಕೆಲಸಕ್ಕಾಗಿ ಬಾಡಿಗೆ ಕೊಡಲು ಬೇಕಾಗುತ್ತದೆ ಎಂದು ದೇವಪ್ಪನವರು ಒಂದೆರ ಬುಲ್ಡೋಜರ್ ಇಟ್ಟುಕೊಂಡಿದ್ದರು. ಅವರ ಮಗ ಶೇಖರ ಅವುಗಳನ್ನು ಪವ ಕಂಪನಿಯ ಕೆಲಸಕ್ಕೆ ಕಳುಹಿಸಿ ತಾನೂ ತನ್ನೂರಿನ ಜನರನ್ನು ಕರೆದುಕೊಂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ. ಶೇಖರನೊಂದಿಗೆ ಪ್ರತಿಭಟನೆಗೆ ಹೋಗುತ್ತಿ ಗಂಡಸರು ಕೂಡ ತಮ್ಮ ಮನೆಯ ಹೆಂಗಸರನ್ನು ಪವನ್ ಕಂಪನಿಯ ಗುಂ ತೋಡುವ ಕೆಲಸಕ್ಕೆ ಕಳುಹಿಸುತ್ತಿದ್ದರು. ಇವರಿಬ್ಬರ ಮಧ್ಯೆ ರೋಣಿ ಮಳೆ ಬ ಭೂಮಿ ಹದಕ್ಕೆ ತಿರುಗಿದ್ದರೂ ಆಳುಗಳು ಸಿಗದೆ ಕಮತದಾರ ರೈತರ ಭೂಮಿ ಬೀಜಗಾಣಿಸುವುದಾಗದೆ ದಿಕ್ಕೆಟ್ಟು ಕುಳಿತಿದ್ದರು.

ಕೊಟ್ರಪ್ಪನಿಗೆ ಕಿರಾಣಿ ಅಂಗಡಿಗೆ ಈಗ ಫುಲ್ ಬಿಜನೆಸ್ಸು, ಅವನ ಅರೆಕಾ ಖಾನಾವಳಿ ಈಗ ಫುಲ್ ಟೈಮ್ ಖಾನಾವಳಿಯಾಗಿತ್ತು. ಕೆಲವೊಮ್ಮೆ ಮಧ್ಯಾಹ್ನ ಪವ ಕಂಪೆನಿಯ ಅಧಿಕಾರಿಗಳಿಗೆ ಊಟದ ಕ್ಯಾರಿಯರ್ ಒಯ್ದು ಕೊಡುತ್ತಿದ್ದುದರಿ ಸಂಚಾರಿ ಖಾನಾವಳಿಯೂ ಆಗುತ್ತಿತ್ತು. ರಾತ್ರಿ ಸೆರೆ ಪಾಕೀಟು, ಮತ್ತು ಬಾಟ ಸಿಗುತ್ತಿದ್ದುದರಿಂದ ಬಾರ್ ಅಂಗಡಿಯಾಗಿಯೂ ಮಾರ್ಪಾಡಾಗುತ್ತಿತ್ತು.

ಈ ನಡುವೆ ಶೇಖರನಿಗೆ ಅದೇನು ಹುಮ್ಮಸ್ಸು ಬಂದಿತ್ತೊ ಗೊತ್ತಿ ಯಾವಾಗಲೂ ಪೆಂಡಾಲಿನಲ್ಲಿಯೆ ಉಳಿದುಕೊಂಡು ಭಾಷಣ ಬಿಗಿಯುತ್ತಿ ಹೀಗೊಮ್ಮೆ ಭಾಷಣ ಬಿಗಿಯುತ್ತಿದ್ದಾಗಲೆ ''ಆಡಳಿತ ಪಕ್ಷದ ರಾಜ್ಯಾಧ್ಯಕ್ಷರು ತಾಲ್ಲೂ ಬಂದಾರ. ನಿಮ್ಮನ್ನು ಕರಿಯಾಕ ಹತ್ಯಾರ'' ಎಂದೊಬ್ಬ ಮರಿ ಪುಡಾರಿ ಶೇಖರ ಕಿವಿಯಲ್ಲಿ ಉಸುರಿದ. ಶೇಖರ ''ನಾನು ರಾಜ್ಯಾಧ್ಯಕ್ಷರ ಯಾವ ಆಮಿಷಕ

ಗುವುದಿಲ್ಲ'' ಎಂದು ಭರವಸೆ ನೀಡಿ ತನ್ನ ಇಂಡಿಕಾ ಕಾರಿನಲ್ಲಿ ರಾಜ್ಯಾಧ್ಯಕ್ಷರನ್ನು ಟಿ ಮಾಡಲು ಐಬಿ ಕಡೆ ಮುಖ ಮಾಡಿದ.

ಒಳಗಡೆ ಗಂಭೀರ ಚರ್ಚೆಗಳಾದವು. ಐಬಿಯ ಹೊರಗಡೆ 'ಭಾವಿ ಶಾಸಕ ರ ಅವರಿಗೆ ಜೈ' ಎಂದು ಘೋಷಣೆಗಳನ್ನು ಕೂಗುತ್ತಿದ್ದರು. ತಾಸೆರಡು ತಾಸು ಗಡೆ ಗಂಭೀರ ಚರ್ಚೆಯಾದ ಮೇಲೆ ಕೊನೆಗೊಮ್ಮೆ ಶೇಖರ ಐಬಿಯಿಂದ ರಬಂದ. ಶೇಖರನ ಮುಖದ ಮೇಲಿನ ಖುಷಿ ಕಂಡ ಅವನ ಅನುಯಾಯಿಗಳು ತ್ತಾದ ಹೂಮಾಲೆ ಹಾಕಿ ಅವನನ್ನು ಸ್ವಾಗತಿಸಿದರು. ಅಲ್ಲಿಂದ ನೇರವಾಗಿ ಯ ಕಡೆ ತನ್ನ ಇಂಡಿಕಾ ಕಾರನ್ನು ಓಡಿಸಿದ. ಶೇಖರ್ ಮನೆ ಒಳಗಿನ ಖಾಸಗಿ ಣೆಗೆ ಹೋಗಿ ತಂದೆ ದೇವಪ್ಪನೊಂದಿಗೆ ಚರ್ಚೆ ನಡೆಸಿದ. ಒಳಗಡೆ ಇಬ್ಬರ ವೆ ಗಲಾಟೆಯಾಗುತ್ತಿರುವುದು ಸ್ಪಷ್ಟವಾಗುತ್ತಿತ್ತಾದರೂ ಏನು ಎತ್ತ ಎಂದು ರನ ಅನುಯಾಯಿಗಳಿಗೆ ಕೇಳಿಸುತ್ತಿರಲಿಲ್ಲ. ಕೊನೆಗೆ ಅಲ್ಲಿಂದ ರಬಂದ ಶೇಖರ ಮಠದತ್ತ ಇಂಡಿಕಾ ಓಡಿಸಿದ. ಪಡದಯ್ಯರೊಂದಿಗೆ ಜಾ ಕೊಠಡಿಯಲ್ಲಿ ತಾಸುಗಟ್ಟಲೆ ಮಾತನಾಡಿದ. ಕೊನೆಗೆ ಜ್ಜಾವ್ರನ್ನೆ ಕರೆದುಕೊಂಡು ತಾಲ್ಲೂಕಿನ ಪೆಂಡಾಲ ಹತ್ತಿರ ಬಂದ. ರ ಮತ್ತು ಅಜ್ಜಾವ್ರನ್ನು ನೋಡಿದ ಉಪವಾಸ ನಿರತರ ನಿಸ್ತೇಜ ಖದಲ್ಲಿ ಕಳೆ ಕಂಡಿತು. ಶೇಖರ ಮೈಕ್ ತೆಗೆದುಕೊಂಡು ರಡು ದಿನದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಖುದ್ದಾಗಿ ನಮ್ಮ ಸ್ಯೆಯನ್ನು ತಿಳಿದುಕೊಳ್ಳಲು ತಾಲ್ಲೂಕಿಗೆ ಬರುತ್ತಿದ್ದಾರೆ. ಲ್ಲರೊಂದಿಗೆ ಸಭೆ ನಡೆಸಿ ನಮ್ಮ ಸಮಸ್ಯೆಗೆ ಸೂಕ್ತವಾಗಿ ದಿಸುವುದಾಗಿ ತಿಳಿಸಿದ್ದಾರೆ. ನಮ್ಮ ಸಮಸ್ಯೆಯನ್ನು ಬಗೆಹರಿಸದಿದ್ದರೆ ಂದಿನ ದಿನಗಳಲ್ಲಿ ಮತ್ತಷ್ಟು ಉಗ್ರವಾಗಿ ಹೋರಾಟ ನಡೆಸಬೇಕಾಗುತ್ತದೆ ಬ ಎಚ್ಚರಿಕೆಯೊಂದಿಗೆ ಗೌಳಿಗರು ತಮ್ಮ ಉಪವಾಸವನ್ನು ಈಗ ಹಿಂದಕ್ಕೆ ದುಕೊಂಡಿದ್ದಾರೆ ಎಂದು ಘೋಷಿಸಿದಾಗ ಜನ ಎಲ್ಲ ಜೋರು ಚಪ್ಪಾಳೆ ಡೆದರು. ಸೈಯದ್ ಶೇಖರರ ಹತ್ತಿರ ಹೋಗಿ ''ಅಣ್ಣಾರ, ಉಪವಾಸ ಲೋ ಮುಂಚೆ ದೇವಪ್ಪ ಅಪ್ಪಾರನ್ನು ಒಂದು ಮಾತು ಕೇಳಬೇಕಾಗಿತ್ತು'' ಎಂದ.

''ಈಗಾಗಲೆ ನನ್ನ ತಂದೆಗೆ ತಿಳಿಸಿಯೇ ಇಲ್ಲಿಗೆ ಬಂದಿನಿ. ಅವರು ತೋಷದಿಂದ ಒಪ್ಪಿಕೊಂಡು ಮೊದಲು ಆ ಗೌಳಿಗರ ಉಪವಾಸ ಸು ಎಂದಿದ್ದಾರೆ. ನನ್ನ ತಂದೆಯವರೆ ಇಲ್ಲಿಗೆ ಬರೋರಿದ್ರು. ರೆ ಅವರಿಗೆ ಹುಷಾರಿಲ್ಲ'' ಎಂದ ಶೇಖರ. ಜನ ಅದಕ್ಕೂ ಪ್ಪಾಳೆ ಹೊಡೆದರು.


ಅಜ್ಜಾವ್ರು ಸ್ವತಃ ತಮ್ಮ ಕೈಯಿಂದ ಮೂರು ದಿನ ಉಪವಾಸ ದಿದ್ದ ಗೌಳಿಗರಿಗೆ ಜ್ಯೂಸ್ ಕುಡಿಸಿದರು. ಮಠದ ಅಜ್ಜಾರು, ಖರಪ್ಪ, ದೇವಪ್ಪನೋರ ಪುಣ್ಯದಿಂದ ಬೆಟ್ಟದಂತಹ ತಮ್ಮ ಸ್ಯೆ ಸಲೀಸಾಗಿ ಸರಿದುಹೋಯಿತು ಎಂದು ಖುಷಿಯಿಂದ ಳಿಗರು ಜ್ಯೂಸ್ ಕುಡಿದರು. ಅಜ್ಜಾರ ಕಾಲ ಮೇಲೆ ಬಿದ್ದು ರಳಾಡಿದರು. ಶೇಖರಪ್ಪನವರನ್ನು ತೆಕ್ಕೆಬಿದ್ದು ಅತ್ತರು.

ಅನಾಥಪಾಲಕ, ಬಡವರ ಬಂಧು ಎಂಬ ಬಿರುದುಗಳಿಗೆ ರೂಪದಂತಿದ್ದ ಮುಖ್ಯಮಂತ್ರಿಗಳು ತಾವು ಕೊಟ್ಟ ಮಾತಿಗೆ ಪದೆ ಸರಿಯಾಗಿ ಎರಡು ದಿನಕ್ಕೆ ತಾಲೂಕು ಕಚೇರಿಗೆ ಬಂದು ಶೇಖರ, ದೇವಪ್ಪ, ಜ್ಜಾರನ್ನು ಸಭೆಗೆ ಕರೆದರು. ದೇವಪ್ಪ ಕಾರಣಾಂತರದಿಂದ ಸಭೆಗೆ ಹೋಗಲಿಲ್ಲ. ುದ್ ಗೌಳಿಗರನ್ನು ಸಭೆಗೆ ಕರಕೊಂಡು ಬರ್ತಿನಿ ಎಂದಾಗ, ಶೇಖರ ''ಪಾಪ ರು ದುಡಿಯೊ ಜನ. ಅವರ ಹೊಟ್ಟಿ ಮ್ಯಾಲ ಕಲ್ಲು ಹಾಕೋದು ಬ್ಯಾಡ. ನಾವೆಲ್ಲ ೇವಲ್ಲ, ಅವರ ಪರವಾಗಿ'' ಎಂದ.

ಮುಖ್ಯಮಂತ್ರಿ ಸಮಸ್ಯೆಯ ಆಳವನ್ನು ಕೂಲಂಕಷವಾಗಿ ಚರ್ಚಿಸಿದರು. ಳಿಗರನ್ನು ಒಕ್ಕಲೆಬ್ಬಿಸುವ ಕುರಿತು ಅವರು ನಿಜಕ್ಕೂ ಸಂಕಟಪಟ್ಟರು. ಆದರೆ ಜ್ಯದ ವಿದ್ಯುತ್ ಸಮಸ್ಯೆ ಪರಿಹರಿಸಬೇಕಾದರೆ ಗೌಳಿಗರು ತ್ಯಾಗ ಮಾಡಲೇಬೇಕು ಬುದು ಅವರಿಗೆ ಮನದಟ್ಟಾಗಿತ್ತು.

ಹಾಗೆಂದು ಉದಾರವಾದಿಗಳಾದ ಮುಖ್ಯಮಂತ್ರಿಗಳು ಗೌಳಿಗರನ್ನು ಅನಾಥರಂತೆ ಲಿ ಕೈಯಲ್ಲಿ ಒಕ್ಕಲೆಬ್ಬಿಸುತ್ತಿಲ್ಲ. ಒಕ್ಕಲೇಳುವ ಪ್ರತಿ ಗೌಳಿಗ ಕುಟುಂಬವು ಬೇರೊಂದು ಡ್ಡಕ್ಕೆ ಹೋಗಿ ಗುಡಿಸಲು ಕಟ್ಟಿಕೊಳ್ಳಲು ೧೦ ಸಾವಿರ ರೂಪಾಯಿಗಳನ್ನು ಪರಿಹಾರಧನ ಘೋಷಿಸಿದರು. ಜೊತೆಗೆ ಪವನ್ ಕಂಪೆನಿಯ ನಿರ್ದೇಶಕರಿಗೆ ಫೋನು ಮಾಡಿಸಿ ಗೌಳಿಗ ಕುಟುಂಬಗಳಲ್ಲಿ ಓದಿಕೊಂಡಿದ್ದ ಹುಡುಗರಿದ್ದರೆ ಅವರಿಗೆ ಕೆಲಸ ಕೊಡಬೇಕು ಎಂದು ಆದೇಶಿಸಿದರು. ಮುಖ್ಯಮಂತ್ರಿಗಳ ಉದಾರತನವನ್ನು ಕಂಡು ಸ್ವತಃ ಶೇಖರನೆ ಅವರ ಕೈ ಕುಲುಕಿ ಅಭಿನಂದಿಸಿದ.

ಮುಖ್ಯಮಂತ್ರಿಗಳ ಈ ಘೋಷಣೆಯನ್ನು ತಿಳಿದ ಗೌಳಿಗರಿಗೆ ದಿಕ್ಕೇ ತೋಚದಂತಾಯಿತು. ಗುಡ್ಡದಲ್ಲಿ ಗಾಳಿಯಂತ್ರಗಳನ್ನು ಕೂಡ್ರಿಸುವ ಕೆಲಸ ನಿರಂತರವಾಗಿ ಮುಂದುವರಿದಿತ್ತು. ಇನ್ನು ಬೇರೆ ದಾರಿಯೇ ಇಲ್ಲವೆಂಬಂತೆ ತಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಳ್ಳುವುದರಲ್ಲಿ ಕೆಲವು ಗೌಳಿಗರು ನಿರತರಾಗಿದ್ದರು. ಆದರೆ ಗೌಳಿಗರ ಬಿಸಿರಕ್ತದ ಹುಡುಗರು ''ಯಾಂವ



ಬರತಾನೋ ಬರಲಿ ನಾವು ಮಾತ್ರ ಈ ಗುಡ್ಡ ಬಿಟ್ಟು ಕದಲೋದಿಲ್ಲ'' ಎಂದು ರೋಷಾವೇಶದಿಂದ ಮಾತಾಡುತ್ತ ಹಲ್ಲು ಕಟಕಟಿಸುತ್ತಿದ್ದರು. ''ಇಲ್ಲಿಂದ ಬ್ಯಾರೆ ಗುಡ್ಡಕ್ಕ ಹೋಗಿ ಬಿಡೋನು ಬರ್ರಿ'' ಎಂದು ಅಳಕೋತ ಬುದ್ಧಿ ಹೇಳಲು ಬರುತ್ತಿದ್ದ ಅವರ ಹೆಂಡಂದಿರ ಮೈಮೇಲೆ ಬಾಸುಂಡೆ ಬರುವ ಹಾಗೆ ಬಡಿದು ''ಬ್ಯಾರೆ ಗುಡ್ಡಕ್ಕೆ ಹೋದರೆ ಅಲ್ಲಿಗೂ ಈ ಸರಕಾರದೋರು ಬೆನ್ನುಹತ್ತಿ ಬರೋದಿಲ್ಲ ಅಂತ ಏನು ಗ್ಯಾರಂಟಿ'' ಎಂದು ಒದರುತ್ತಿದ್ದರು.

ಈ ಎಲ್ಲ ಗದ್ದಲದ ನಡುವೆ ಓಡಾಡಿ ನಿಜಕ್ಕೂ ಸೈಯದ್ ಬಹಳಷ್ಟು ಸೊರಗಿಹೋಗಿದ್ದ. ಅವನಿಗೆ ಸಂಘರ್ಷ ವೇದಿಕೆಯ ಜುಬ್ಬಾದಾರಿ ಹುಡುಗನ ಮಾತುಗಳು ನೆನಪಾಗತೊಡಗಿದವು. ಆದರೆ ಈ ಕುತಂತ್ರದಲ್ಲಿ ದೇವಪ್ಪನೋರು ಭಾಗಿಯಾಗಿರಲಿಕ್ಕಿಲ್ಲ ಎಂದು ಅವನ ಒಳಮನಸ್ಸು ಹೇಳುತ್ತಿದ್ದುದರಿಂದ ಅವರನ್ನೊಮ್ಮೆ ಭೇಟಿಯಾಗಿ ಮಾತಾಡಿದ. ಆದರೆ ಅವರು ತಮಗೆ ಮೈಯಲ್ಲಿ ಹುಷಾರಿಲ್ಲವೆಂದು

ಇತ್ತೀಚಿನ ಬೆಳವಣಿಗೆಗಳು ಗೊತ್ತಿಲ್ಲವೆಂದು ಜಾಣತನದಿಂದ ಉತ್ತರಿಸಿದರು. ಸೈಯದ್ ವಿಧಿಯಿಲ್ಲದೆ ತಾನು ಪರಿಸರ ಸಂಘರ್ಷ ಸಮಿತಿ ಸಂಪರ್ಕಿಸಿ ಹೋರಾಟ ಮುಂದುವರಿಸುತ್ತೇನೆ ಎಂದ. ಸಂಘರ್ಷ ಸಮಿತಿಯ ಶಬ್ದ ಕೇಳಿ ಹುಬ್ಬುಗಂಟಿಕ್ಕಿದ ದೇವಪ್ಪನೋರು ''ಬ್ಯಾಡ, ಸಮಸ್ಯೆ ಇನ್ನೂ ಕೋಪಕ್ಕ ಹೋಗತದ'' ಎಂದು ಬುದ್ಧಿ ಹೇಳಿದರು.

ಅಂದು ರಾತ್ರಿ ಸೈಯದ್ ಉಪ್ಪಾರ ಭೀಮಣ್ಣನೊಂದಿಗೆ ಗೌಳೆರ ಹಟ್ಟಿಗೆ ಹೋದ. ಗೌಳೆರ ಹೆಣ್ಣುಮಕ್ಕಳು ಸೈದಪ್ಪನನ್ನು ಕಾಣುತ್ತಲೆ ಬೋರಾಡಿ ಅತ್ತರು. ಗಂಡಸರು ಮೂಕರಂತೆ ಕುಳಿತುಬಿಟ್ಟದ್ದರು. ''ನಾನು ನಾಳೆಯೆ ಬೆಂಗಳೂರಿಗೆ ಹೋಗಿ ಪರಿಸರ ಸಂಘರ್ಷ ಸಮಿತಿಗೆ ವಿಷಯ ಮುಟ್ಟಿಸಿತಿನಿ. ದೊಡ್ಡ ಮಟ್ಟದಲ್ಲಿ ಹೋರಾಟ ಮಾಡೋಣ. ಗೆಲುವು ನಮ್ದೆ'' ಎಂದು ಧೈರ್ಯ ಹೇಳಿದ.

ಆತ ಗಾಳೆಪ್ಪನ ಗುಡಿ ಬಳಸಿಕೊಂಡು ಗುಡ್ಡದಿಂದ ಕೆಳಗಿಳಿಯುವಾಗ ಎಲ್ಲಿಂದಲೋ ಕಲ್ಲುಗಳು ಬೀಳತೊಡಗಿದವು. ಸೈಯದ್ ಗಾಡಿ ತರುಬಿಸಿ ''ಯಾರ‍್ರಲೆ ಅವ್ರು ಧೈರ್ಯ ಇದ್ದರೆ ಮುಂದ ಬರ‍್ರಿ'' ಎಂದು ಒದರುವದಕ್ಕೂ ಗುಡ್ಡದಿಂದ ಓಡಿ ಬಂದ ಮೂರ‍್ನಾಲ್ಕು ಜನ ಸೈಯದ್‌ನ ಮೇಲೆ ದಾಳಿ ನಡೆಸುವುದಕ್ಕೂ ಸರಿ ಹೋಯಿತು. ಸೈಯದ್ ಬಲಗಾಲು ಮುರಿದಿದ್ದರಿಂದ ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಯಿತು. ಸತತ ೬ ತಿಂಗಳಗಳವರೆಗೆ ಸೈಯದ್ ಆಸ್ಪತ್ರೆಯಲ್ಲಿ ಆರೈಕೆಗೊಂಡು ಊರಿಗೆ ಮರಳಿದ. ಅವತ್ತು ರಾತ್ರಿಯೇ ತನ್ನ ಹಳೆ ಎಂಎಟಿ ಹೊರತೆಗೆದು ಗುಡ್ಡದ ಕಡೆ ಓಡಿಸಿದ.

*   *   *

ಗುರುತು ಸಿಗಲಾರದಷ್ಟು ಗುಡ್ಡ ಬದಲಾಗಿತ್ತು. ಗುಡ್ಡದಲ್ಲಿನ ಅನಾರ್ಯರು ಎಂಬ ಗಿಡಗಳ ಮೇಲೆ ಆರ್ಯರೆಂಬ ಗಾಳಿಪಂಕಾಗಳು ದಾಳಿ ನಡೆಸಿ ಗಿಡಗಳನ್ನು ನಾಶಪಡಿಸಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿಕೊಂಡು ವಿಜಯ ಚಕ್ರದಂತೆ ತಿರುಗುತ್ತಿದ್ದವು. ಗಾಳೆಪ್ಪಜ್ಜನ ಗುಡಿಯ ಎರಡು ಬದಿ ಕೊರೆದು ರಸ್ತೆ ಮಾಡಲಾಗಿತ್ತು. ನಡುಗಡ್ಡೆಯ ಮೇಲಿದ್ದ ಗುಡಿ ಅನಾಥವಾಗಿ ಧೂಳು ತಿಂದು ಗಾಯಗೊಂಡ ಯುದ್ಧಖೈದಿಯಂತೆ ಕಾಣುತ್ತಿತ್ತು.

ಈಗಾಗಲೆ ಅರ್ಧ ಗುಡ್ಡದ ಮೇಲೆ ಪಂಕಾಗಳ ರೆಕ್ಕೆಗಳು ಪ್ರಳಯಚಕ್ರ ತಿರುಗುತ್ತಿದ್ದವು. ಹತ್ತಾರು ಬುಲ್ಡೋಜರುಗಳು ಗುಡ್ಡದ ಮುಂದಕ್ಕೆ ಮತ್ತಷ್ಟು ಗ ತೋಡುವುದರಲ್ಲಿ, ರಸ್ತೆ ನಿರ್ಮಾಣದಲ್ಲಿ ತೊಡಗಿದ್ದವು.

ಗೌಳೆರು ವಾಸಿಸುತ್ತಿದ್ದ ಹಟ್ಟಿ ಮತ್ತಷ್ಟು ಭಯಾನಕವಾಗಿತ್ತು. ಮುರಿದು ಗುಡಿಸಲುಗಳು, ಅರೆತೆರೆದ ದನದ ದೊಡ್ಡಿಯ ಬಾಗಿಲುಗಳು, ಹಿಂದೊಮ್ಮೆ ಮ ವಾಸದ ಕುರುಹು ಸಾರುವ ಹಳೆ ಬಟ್ಟೆ, ಹರಿದ ಗೋಣಿಚೀಲ. ಮುಗಿ ನೋಡುತ್ತಿದ್ದ ಒಲೆಗಲ್ಲುಗಳು, ಒಡೆದ ಮಡಿಕೆಗಳು. ಒಂದು ನರಪಿಳ್ಳೆಯ ಸು ಇಲ್ಲ. ಸೈಯದ್ ಕಣ್ಣುಗಳು ತೇವಗೊಂಡು ಮಸುಕಾದವು. ಆ ಮಸುಕ ಕಣ್ಣಿಗೆ ಕಾಡುಗಳ್ಳ ವೀರಪ್ಪಣ್ಣನಂತಹ ವಿಚಿತ್ರ ಡ್ರೆಸ್ಸು ಧರಿಸಿಕೊಂಡು ಅ ಆಕೃತಿಯೊಂದು ಕಂಡು ಅದು ಇವನ ಕಡೆಯೇ ಬರುತ್ತಿತ್ತು. ಸಮೀಪ ಬ ಆಕೃತಿ ಸೈಯದ್‌ನನ್ನು ಕಂಡು ನಕ್ಕು ತಾನು ಉಪ್ಪಾರ ಭೀಮಣ್ಣನೆ ಪರಿಚಯಿಸಿಕೊಂಡಿತು. ಹೊಟ್ಟೆ ಹೊರೆಯುವುದಕ್ಕಾಗಿ ಇಲ್ಲಿ ಸೆಕ್ಯೂರಿಟಿ ಕ ಮಾಡುತ್ತಿರುವುದಾಗಿ ಭೀಮಣ್ಣ ಹೇಳಿದ.

''ನೀನು ದೊಡ್ಡಾಸ್ಪತ್ರೆ ಸೇರಿಕೊಂಡ ಮೇಲೆ ಪೊಲೀಸರನ್ನು ಕರೆಸಿ ಗೌಳಿಗ ಗುಡಿಸಲಿನಿಂದ ಹೊರಗೆಳೆದು ಖಾಲಿ ಮಾಡಿಸಲಾಯಿತು. ಹೋಗುವ ಮುನ್ನ ನ ಮಕ್ಕಳಿಗೆ ಕೆಲಸವನ್ನಾದರೂ ಕೊಡಿ ಎಂದು ಕಣ್ಣೀರುಗರೆದರು. ಆದರೆ ಅ ಮಕ್ಕಳು ಶಾಲೆಯ ಮುಖವನ್ನೆ ನೋಡದಿದ್ದುದರಿಂದ ಕೆಲಸ ಸಿಗಲಿಲ್ಲ. ಅವರು ತ ದನಗಳೊಂದಿಗೆ ಗಂಟುಮೂಟೆ ಕಟ್ಟಿಕೊಂಡು ಅಗೋ ಅಲ್ಲಿ ಕಾಣುತ್ತಿದೆಯಲ್ಲ ಗುಡ್ಡಕ್ಕೆ ಹೋಗಿದ್ದಾರೆ. ಆದರೆ ಅ ಗುಡ್ಡದಲ್ಲಿಯೂ ಮುಂದಲ ವರ್ಷ ಗಾಳಿ ಪ ಕೂಡಿಸ್ತಾರಂತೆ'' ಎಂದು ಭೀಮಣ್ಣ ತನಗೆ ತಿಳಿದ ಮಾಹಿತಿಯನ್ನು ಹೇಳಿದ.

''ಗೌಳಿಗರನ್ನು ಖಾಲಿ ಮಾಡಿಸುವಾಗ ಅಜ್ಜಾವ್ರು ಮತ್ತು ಶೇಖರಪ್ಪ ಊ ಇರಲಿಲ್ಲವೆ'' ಎಂದು ಸೈಯದ್ ಕುತೂಹಲದಿಂದ ಕೇಳಿದ.

''ಅವರು ಊರಾಗಿದ್ರು ಗುಡ್ಡಕ್ಕೆ ಬರಲಿಲ್ಲ. ಅವರಿಬ್ರು ಪವನ್ ಕಂಪನಿ ಜ ಶಾಮೀಲಾಗಾರಂತ ಊರಜನ ಮಾತಾಡ್ತಾರೆ. ಶೇಖರ ತಮ್ಮ ಪಕ್ಷ ಬಿಟ್ಟು ಆಡ ಪಕ್ಷಕ್ಕೆ ಪಕ್ಷಾಂತರ ಆದ್ರು. ಆಡಳಿತ ಪಕ್ಷದೋರು ಮುಂದಿನ ಚುನಾವಣೆಗೆ ಟಿಕ ಕೊಡ್ತಾರಂತ. ಶೇಖರಪ್ಪ ಎಮ್ಮೆಲ್ಲೆ ಆಗೋದು ಖಾತ್ರಿ ಆಗೇತಿ. ಈಗಲಿಂದಲೆ ಪ್ರಚಾರ ಶುರು ಮಾಡ್ಯಾನ. ಅಜ್ಜಾರು ಹೊಸಾ ಕಾರು ತೊಗೊಂಡಾರ. ಈ ಸ ಮಠದ ಜಾತ್ರಿಗೆ ಹೊಸ ತೇರು ಮಾಡಸಾಕ ಹಾಕ್ಯಾರ. ಯುವಕ ಸಂಘದ ಹುಡುಗ ಸಂಘಕ್ಕೆ ಹೊಸ ಕೋಲಿ ಕಟ್ಟಸಾಕ ಹತ್ಯಾರ. ಗುಡ್ಡದಾಗಿದ್ದ ಗಾಳೆಪ್ಪನ ಗುಡಿಯ ಹೊಸದಾಗಿ ಕಟ್ಟಸಾಕ ಹತ್ಯಾರ. ಇವೆಲ್ಲ ಕೆಲಸಕ್ಕ ಪವನ್ ಕಂಪೆನಿಯ ಶೇಖರಪ್ಪ ರೊಕ್ಕ ಇಸಿದುಕೊಟ್ಟಾನಂತ ಊರಾಗೆಲ್ಲ ಮಾತಾಡ್ತಾರ'' ಎಂದು ಭೀಮ ೬ ತಿಂಗಳಲ್ಲಿ ಆದ ಅಭಿವೃದ್ಧಿಗಳನ್ನು ತಣ್ಣಗಿನ ಧ್ವನಿಯಲ್ಲಿ ವಿವರಿಸಿದ.

ಅಲ್ಲೊಬ್ಬ ಧೂಳು ಬಟ್ಟೆಯ, ಬಡಕಲು ಶರೀರದ ಗಡ್ಡದ ಮುದುಕ ಗುಡ ನೆತ್ತಿಯ ಮೇಲೆ ಕುಳಿತು, ರಸ್ತೆಯ ಕಡೆಗೆ ಕಣ್ಣು ನೆಟ್ಟಿದ್ದ. ಸೈಯದ್ ಅತ್ತ ನೋ ಅವನ್ಯಾರು ಎಂದು ಸನ್ನೆ ಮಾಡಿದ.

''ಅಂವ ನಮ್ಮ ಕಿರಾಣಿ ಅಂಗಡಿ ಕೊಟ್ರಪ್ಪ ಕಾಕಾ. ಈ ಗಾಳಿ ಪಂಕಾಗಳ ಊರಿಗೆಲ್ಲ ಒಳ್ಳೆದಾದ್ರು, ಈ ಕಾಕಾಗ ಮಾತ್ರ ಬಾಳ ಮೋಸ ಆತು. ಇಂವನ ಒ ಮಗಳು ದಿನಾಲೂ ಇಂವನ ಮನಿಗೆ ಊಟಕ್ಕೆ ಬರುತ್ತಿದ್ದ ಪವನ್ ಕಂಪೆನಿ ಕೆಲಸಗಾರನೊಂದಿಗೆ ಓಡಿಹೋದ್ಲು. ಅದೂ ಹಂಗ ಅಲ್ಲ, ಮನಿಯೊಳಗಿನ ದು ಬಂಗಾರ ತೊಗೊಂಡು. ಅವತ್ತಿನಿಂದ ಕೊಟ್ರಪ್ಪ ಕಾಕಾ ಮಂಕಾಗಿ ಆ ತನ್ನ ಮಗ ಹೊಳ್ಳಿ ಬಂದಾಳು ಅಂತ ಇಲ್ಲಿ ಬಂದು ಕಾಯಕೋತ ಕೂಡತಾನು. ಊರ ಜ ಕೊಟ್ರಪ್ಪಗ ಹುಚ್ಚ ಹಿಡಿದ್ಯೆತಿ ಅಂತ ಮಾತಾಡ್ತಾರ'' ಎಂದು ಭೀಮಣ್ಣ ಕೊಟ್ರಪ್ಪನ ಹೇಳಿ ಮುಗಿಸುವುಷ್ಟರಲ್ಲಿಯೆ ಸೈಯದ್ ಎದ್ದುಹೋಗಿ ಅವುಡುಗಚ್ಚಿಕೊಂ ಹಿಡಿಗಲ್ಲು ಆರಿಸಿಕೊಂಡು ತಿರುಗುತ್ತಿರುವ ಗಾಳಿ ಪಂಕಾಗಳಿಗೆ ಬೀಸತೊಡಗಿದ. ಗಾ ಎಂದಿನಂತೆ ಬೀಸುತ್ತಿತ್ತು.

ಹನುಮಂತ ಹಾಲಿಗೇರಿ
ರಿಪೋರ್ಟರ್, 'ವಾರ್ತಾಭಾರತಿ ಕನ್ನಡ ದಿನಪತ್ರಿಕೆ', ಹಮೀದ್ ಷಾ ಕಾಂಪ್ಲೆಕ್ಸ್
ಕಬ್ಬನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು - ೫೬೦ ೦೦೨

HONDA


The Power of Dreams

Seasons Greetings!

from

Karnataka's No.1* Dealer for
Honda Power Products







Portable Generators from 0.4 KVA to 6.5 KVA, Farmers'Agriculture Equipments are on display at 5000 sft. mega showroom



EU 30 *is*
Inverter Generator



EXK 2800
Super Silent Generator



WBK 30 FF
Pumpsets



UMK 435
Brush Cutter

*Generators Segment

HONDA
POWER PRODUCTS




Estd. 1981


R. S. POWER CONTROLS PVT. LTD.


No. 14, Opp. Bharth Petrol Bunk
J. C. Road, Bangalore – 560 002
Phone : 22244980, 22243994, 22244643
Mobile : 9844000722, 9886401701


Branch : 652/B, Dr. Rajkumar Road
Rajajinagar, Near Navarang Circle
Bangalore – 560 010
Phone : 23321083 Mob : 9844021885


e-mail : rspowercontrols@gmail.com


ಸ್ಪೋಕನ್
ಇಂಗ್ಲೀಷ್



ಸ್ಪೋಕನ್
ಇಂಗ್ಲೀಷ್



ಸ್ಪೋಕನ್
ಇಂಗ್ಲೀಷ್
Speakers of
Kannada


29/-
English
Grammar
Guide
for all
ಕನ್ನಡ


SPOKEN ENGLISH
स्पोकन
इंग्लिश


ஸ்போக்கன்
இங்கிலீஷ்
30 Days Course in Spoken English



Tips for
MONEY
MANAGEMENT


Tips for
STRESS
MANAGEMENT



TIPS FOR
ANGER
MANAGEMENT


A Handbook
for your
Sure Success in
Interviews
Remove interview fears
Get the job you want


You can
Speak
English
Level-ONE



GUIDE TO
GOOD
MANNERS
AND
ETIQUETTE
FOR YOU
Shivam



Tips for
HR
Interview


TIPS FOR
INTERVIEW-
BODY
LANGUAGE



TIPS FOR
TIME
MANAGEMENT



Building Healthy Families
Tips for
Parents
You're
a Better Parent
than you
think



Your
Personality
Can Pack
a Punch
Too!



YOUR KEY TO
SUCCESS
WHAT
YOU
NEED
TO KNOW



TIPS
to your
Sure Success
Placement
in IT Companies



Tips for Teachers
Essentials in Teaching
101 Things
You Can Do In The
First 3 Weeks Of Class
You can be a
Successful
Teacher



TIPS
HIGH
MARKS
EXAMS


Advanced
Computer
Related
Abbreviations
and Acronyms



Shortcut
Keys for
MS-Office
2003 & 2007


Take The
Road to
Happiness


Tips for Teachers
Essentials in Teaching
101 Things
You Can Do In The
First 3 Weeks Of Class
You can be a
Successful
Teacher


Idioms
and
Phrases

ಕಯ್ಯಿ ಬಾಯಿ ಸುದ್ದ ಇದ್ದವನ ಕತೆ



ಎಚ್. ಎಲ್. ಕೇಶವಮೂರ್ತಿ

ಜೇನು ಬಿಚ್ಚಿದವನು ಕೈ ನೆಕ್ಕಲೇಬೇಕು ಕನಯ್ಯ. ಹಂಗೆ ಮಾಡಿದ್ರೆ ಕಯ್ಯೂ
ನ್ ಆಯ್ತದೆ, ಬಾಯಿಗೂ ರುಚಿ ಹತ್ತದೆ' ಅಂತಾವ ಕೆಲವು ಹಿತೈಷಿಗಳು ಗ್ರಾಮ
ಚಾಯಿತ್ತಿ ಅಧ್ಯಕ್ಷ ಸಕುನಿ ಮಹಾಶಯರಿಗೆ ಮನವರಿಕೆ ಮಾಡಿಕೊಟ್ಟಿದ್ದರು.
ು ತಿನ್ನದೆ ಇದ್ರೆ ಬ್ಯಾರೆಯೋರು ತಿನ್ನಾಕಿಲ್ವ... ಅವರೇ ನಿನ್ನ ಪಾಲಿಂದೂ
ಾಕ್ತಾರೆ' ಅಂತಾನೂ ತಿಳುವಳಿಕೆ ಹೇಳಿದ್ದರು. 'ಅಷ್ಟೊ ಇಷ್ಟೊ ತಗಬೇಕು
ಯ್ಯ. ತಗಳ್ಳಿಲ್ಲ ಅನ್ನು. ನಿನಗೇನು ಕಿರೀಟ ಹಾಕಿ ಸನ್ಮಾನ ಮಾಡಾರಾ' ಅಂತೆಲ್ಲ
ಸಿದ್ದರು. 'ಯಾರೋ ತಿಂದು ನಿನ್ನ ಮೇಲೆ ಗೂಬೆ ಕೂರುಸ್ತಾರೆ ನೋಡು'
ವ ಬೆದರಿಕೇನೂ ಹಾಕಿ ನೋಡಿದರು. 'ಕಯ್ಯಿ ಬಾಯಿ ಸುದ್ದ ಇದ್ರೆ ಯಾವ
ನೂ ಏನೂ ಮಾಡಲಾರ' ಎಂಬ ಅವರ ನಿಲುವು ಮಾತ್ರ ಅಚಲವಾಗಿತ್ತು.

ಜನ ನೆಮ್ಮದಿಯಾಗಿರಬೇಕು. ಯಾವ ತೊಂದರೆಯೂ ಅವರಿಗೆ ಬರಬಾರದು.
ರೆ ತಕ್ಷಣ ಅದನ್ನು ದೂರಮಾಡಲು ಗ್ರಾಮಪಂಚಾಯಿತಿ ಪ್ರಯತ್ನಿಸಬೇಕು
ವುದು ಅಧ್ಯಕ್ಷರ ಆಶಯ ಆಗಿತ್ತು.

ನೆಮ್ಮದಿ ಕೆಡಿಸುವ ಸಂಗತಿಗಳಿಗೇನು ಕಡಿಮೆಯೆ ?

ೀರು ಸರಬರಾಜು ಮಾಡುತ್ತಿದ್ದ ಪಂಪ್ ಕೆಟ್ಟು ನಿಂತಿತು :

ಊರಿನವರು ಗ್ರಾಮಪಂಚಾಯಿತಿ ಕಛೇರಿಗೆ ಮುತ್ತಿಗೆ ಹಾಕಿದರು.

ಮೂರು ದಿನದಿಂದ ಕೆಟ್ಟು ನಿಂತದೆ. ರಿಪೇರಿ ಮಾಡಿಸಿಲ್ವಲ್ಲ. ಹೊಟ್ಟೆಗೇನು
ಯಯ್ಯಾ' ಅಂತ ಸೆಕ್ರೆಟರೀನ ತರಾಟೆಗೆ ತಗೊಂಡರು.

ಪಾಪ ಅವನದ್ದೇನೂ ತಪ್ಪಿರಲಿಲ್ಲ. ಮೂರು ದಿವಸಗಳಿಂದ ಮೆಕ್ಯಾನಿಕ್ ಹಿಂದೆ ಅಲೆದಿದ್ದ
ನ್ಸ್ ಕೊಡದೆ ಅವನು ರಿಪೇರಿ ಮಾಡಲು ಒಪ್ಪಿರಲಿಲ್ಲ. ಕೊಡಬಹುದಾಗಿತ್ತು.
ೆ ಕೊಡಲು ಆ ಸ್ಕೀಮಿನಲ್ಲಿ ಹಣವಿಲ್ಲ! ಬೇರೆ ಸ್ಕೀಮಿನಲ್ಲಿತ್ತು. ಆದರೆ ಅದನ್ನು
ಕ್ಕೆ ಬಳಸುವಂತಿಲ್ಲ. ಹಾಗೆ ಮಾಡಿದರೆ ಆಡಿಟ್ ಅಬ್ಜೆಕ್ಷನ್ ! ಈ ಭಯ ಸೆಕ್ರೆಟರಿಗೆ.

ಸ್ಕೀಮು ಯಾವುದಾದರೇನು ? ಜನರ ಉಪಯೋಗಕ್ಕೆ ತಾನೆ ಇವೆಲ್ಲ ಇರುವುದು ?
ಬಾಯಿ ಸುದ್ದ ಇದ್ದರೆ ಯಾವ ಆಡಿಟ್ಟೂ ಏನೂ ಮಾಡಲಾರದು ಎನ್ನುವುದು
ಕ್ಷರ ನಿಲುವು.

ಅಂತೂ ಪಂಪು ರಿಪೇರಿ ಆಯಿತು.

* * *

ಸೆಕ್ರೆಟರಿ ಮೊಬೈಲ್ ರಿಂಗು.

'ಯಾರು ಮಾತಾಡ್ತಿರೋದು ?'

'ಯಾರಾನ ಆಗ್ಲಿ. ಪಂಚಾಯ್ತಿ ಅದೋ ಸತ್ತೋಗದೊ ? ಊರೆಲ್ಲ ಗಬ್ಬನಾತ ಹೊಡೀತಿದೆ.'

ಗರ್ಕಳ್ಳಿಯ ರಸ್ತೆಯಲ್ಲಿ ನಾಯಿ ಸತ್ತು ಬಿದ್ದು ಮೂರು ದಿನ ಆಗಿತ್ತಂತೆ. ಗಬ್ಬು ವಾಸನೆ ಹೊಡೆಯುತ್ತಿತ್ತಂತೆ. ಮನುಸ್ರಾದೋರು ಇರೋಕಾಯ್ತದ ಅನ್ನುವುದು ಅವನ ಪ್ರಶ್ನೆ. ಸುತ್ತ ಮುತ್ತ ಓಡಾಡುತ್ತಿದ್ದವರು ಮೂಗು ಮುಚ್ಚಿ ಓಡಾಡುತ್ತಿದ್ದಾರಂತೆ. ಊರಿನವರೇ ಅದನ್ನು ಎತ್ತಿಹಾಕಬಾರದೆ ಅಂದರೆ ಗ್ರಾಮಪಂಚಾಯತಿ ಇರುವುದು ಯಾತಕ್ಕೆ ಅನ್ನುವ ಪ್ರಶ್ನೆ ಬೀಳುತ್ತಿದೆ. ಅವರಾದರೂ ತೆಗೆಸಬಾರದೆ ಅಂದರೆ ತೆಗೆಸಬಹುದಾಗಿತ್ತು. ದುಡ್ಡು ಕೊಡದೆ ಎತ್ತಲ್ಲ ಅಂತಾವ ಜಾಡಮಾಲಿಗಳೂ ಕುಂತವ್ರೆ. ಸೆಕ್ರೆಟರಿಗೆ ಆಡಿಟ್ ಚಿಂತೆ. ಹಿಂಗಿಂಗೆ ಕಣ್ರಯ್ಯ ಅಂದರೆ 'ನಿಮ್ಮ ಅಧ್ಯಕ್ಷನ್ನೇ ಕಳ್ಸು ಎತ್ತಾಕ್ಲಿ' ಅಂದ್ರೂ ಅನ್ನೋವೇಯ. ಅಧ್ಯಕ್ಷರದ್ದೇ ಬೇರೆ ಯೋಚನೆ. ಅದನ್ನೆ ಸೆಕ್ರೆಟರಿಗೆ ಹೇಳಿದರು. 'ನಾಯಿ ಅಂದ್ರೆ ಏನನ್ಕಂಡಿದೀಯ ಸೆಕೆಟ್ರಿ. ನಾರಾಯಣ ಕನಯ್ಯ. ಆ ನಾರಾಯಣನ ಮಣ್ಣು ಮಾಡ್ಸಯ್ಯ ಪುಣ್ಯ ಬತ್ತದೆ' ಅಂದ್ರು. ಯಾವುದಾದರೂ ಸ್ಕೀಂನಿಂದ ದುಡ್ಡ ಹಾಕಿ ಈ ಗೋಳ ತಪ್ಪಿಸು ಅಂತಾಲೂ ಆಡ್ರು ಮಾಡಿದ್ರು. ಅವನಿಗೋ ಆಡಿಟ್ ಭೂತ ಕಾಡ್ತಿತ್ತಲ್ಲ, 'ಆಡಿಟ್ ಅಬ್ಜೆಕ್ಷನ್ ಬತ್ತದೆ ಸಾ' ಅಂದ. 'ಕಯ್ಯಿ ಬಾಯಿ ಸುದ್ದ ಇದ್ರೆ ಯಾವ ಆಡಿಟ್ಟು ಏನು ಕಿತ್ಕತ್ತದೆ. ಮಾಡ್ಸು' ಅಂದ್ರು ಅಧ್ಯಕ್ಷರು.

* * *

'ನಮ್ಮಟ್ಟೀಲಿ ಹೆಂಗಸ್ರು ಮಕ್ಳು ಓಡಾಡ್ದಂಗೆ ಆಗದೆ' ಗ್ರಾಮಪಂಚಾಯಿತಿ ಸದಸ್ಯೆ ಚೌಡಮ್ಮನ ದೂರು.

ಅಲ್ಲೂ ಏನಾರ ನಾಯಿ ಗೀಯಿ ಸತ್ತು ಬಿದ್ದಿದ್ದಾತಾ ?

ಇಲ್ವಂತೆ. ಹಾಗೇನಾದರೂ ಆಗಿದ್ದರೆ ಸದಸ್ಯೆಯೇ ಎಳೆದುಹಾಕುತ್ತಿದ್ದಳಂತೆ. ಇಲ್ಲಿ ಇರುವುದು ಸತ್ತ ನಾಯಿ ಕಾಟ ಅಲ್ಲ. ಜೀವಂತ ಕೋತಿಗಳ ಕಾಟ. 'ಮನೆ ಒಳಕ್ಕೇ ನುಗ್ಗಿ ಮಕ್ಳ ಕೈನ ರೊಟ್ಟೀನೆ ಕಿತ್ಕೊಂಡೋಯ್ತವೆ. ಹಾಳು ಬಸ್ತೀವ ಹಿಡಿಸಾರ ಹಾಕು ಚೌಡಿ' ಅಂತ ಅಟ್ಟಿಯೋರೆಲ್ಲ ಜೀವ ಹಿಂಡ್ತಾ ಅವ್ರಂತೆ.

'ಹಿಡ್ಸಾನ ಬುಡು ಚೌಡಮ್ಮ. ಸೆಕೆಟ್ರಿ... ಕೋತಿ ಕಾಟ ಅಂತೆ, ಅದೇನ್ ನೋಡು.'

ಸೆಕ್ರೆಟರಿಗೆ ಮೈ ಪರಚಿಕೊಳ್ಳುವ ಹಾಗಾಯಿತು. ಕೋತಿ ಹಿಡಿಯುವವರಿಗೆ ಅಡ್ವಾನ್ಸ್ ಕೊಡಬೇಕು! ಯಾವುದೋ ಸ್ಕೀಂ ದುಡ್ಡು ಬಳಸಬೇಕು. ಸೆಕ್ರೆಟರಿಗೆ ಆಡಿಟ್ ಚಿಂತೆ. ಅಧ್ಯಕ್ಷರಿಗೆ ಹೇಳಿದರೆ 'ಕಯ್ಯಿ ಬಾಯಿ ಸುದ್ದ...' ಮಂತ್ರ ಪಠಿಸುತ್ತಾರೆ!

* * *

'ಕಯ್ಯಿ ಬಾಯಿ ಸುದ್ದ ಇದ್ದರೆ...' ಅಧ್ಯಕ್ಷರ ಬಗ್ಗೆ ಜನಾಭಿಪ್ರಾಯ ಏನೇ ಇರಲಿ. ಸದಸ್ಯರ ಅಭಿಪ್ರಾಯ ಏನಿತ್ತು? ಕೆಲವು ಸದಸ್ಯರ ಪ್ರಕಾರ 'ತಾನೂ ತಿನ್ನ, ತಿನ್ನೋರ್ನೂ ಬುಡ.'

ಎಂತಹ ದುರಂತ ಸನ್ನಿವೇಶ!

ಈಗಲೇ ಉದ್ಯೋಗ ಖಾತರಿ ಯೋಜನೆ ಬಂದದೆ. ಮನೆ ಬಾಗಿಲಿಗೆ ಬಂದ ಲಕ್ಷ್ಮೀನ 'ಬಾರವ್ವ' ಅನ್ನಾನ ಅಂದ್ರೆ ಇಂತೋನು ಅಧ್ಯಕ್ಷ ಗಾದಿಗೆ ವಕ್ಕರಿಸಿದ್ದಾನೆ!

ಈ ಪೀಡೆ ತೊಲಗಿಸಬೇಕು.

ಅಧ್ಯಕ್ಷ ಹಠಾವೋ ಯೋಜನೆ ರೂಪಿತ ಆಯಿತು.

'ಕಯ್ಯಿ ಬಾಯಿ ಸುದ್ದ ಇದ್ದರೆ...' ಅಧ್ಯಕ್ಷ ಹಣ ತಿಂದಿರಲಿಲ್ಲ. ಆದರೆ ಯಾವುದೋ ದುಡ್ಡ ಇನ್ನು ಯಾವುದಕ್ಕೋ ಬಳಸಿದ್ದ!


ಇಷ್ಟು ಸಾಕಲ್ಲಾ.

ಲೆಕ್ಕಪತ್ರಗಳ ಸೀಸ ಆಯಿತು.

ಅಧ್ಯಕ್ಷರ ಕೈಗೆ ಕೋಳ ಬಿತ್ತು!

ಇದರಲ್ಲಿ ಸೆಕ್ರೆಟರಿ ಪಾಲೂ ಇರಲಿಲ್ಲವೆ ?

ಇತ್ತು. ಅವನು ಹೈಕೋರ್ಟಿನಿಂದ ನಿರೀಕ್ಷಣಾ ಜಾಮೀನು ತಂದಿದ್ದ.



ಇವರೂ ತರಬಹುದಾಗಿತ್ತಲ್ಲ ಅಂದರೆ 'ಕಯ್ಯಿ ಬಾಯಿ ಸುದ್ದ ಇದ್ರೆ ಯಾರು ಏ... ಮಾಡ್ತಾರೆ' ಅಂತಾನೋ ಏನೋ ತಂದಿರಲಿಲ್ಲ!

ಪ್ರೊ|| ಎಚ್. ಎಲ್. ಕೇಶವಮೂರ್ತಿ
ನಂ. ೧೩, ಹೌಸಿಂಗ್ ಬೋರ್ಡ್ ಅಪಾರ್ಟ್‌ಮೆಂಟ್ಸ್, (ಫೈರ್ ಎಂಜಿನ್ ಸ್ಟೇಷನ್ ಎದುರು)
ಗುತ್ತಲು ಅಂಚೆ, ಮಂಡ್ಯ - ೫೭೧ ೪೦೩

ವಚನಕಾರರು ಮತ್ತು ಬಂಡಾಯ

• ಅಲ್ಲಮಪ್ರಭು ಬೆಟ್ಟದೂರು

ಬಂಡಾಯವೆಂದರೇನು ? ಬಂಡಾಯವೆಂದರೆ ಪ್ರತಿಭಟನೆ. ಪ್ರತಿಭಟನೆ ಯಾರ ವಿರುದ್ಧ? ಯಾವ ವ್ಯಕ್ತಿಗಳ ವಿರುದ್ಧವೂ ಅಲ್ಲ, ಜಡ ವ್ಯವಸ್ಥೆಯ ವಿರುದ್ಧ. ೧೨ನೆಯ ಶತಮಾನದ ವಚನಕಾರರು ವಿವಿಧ ಕಾಯಕಗಳನ್ನು ಮಾಡುವವರಾಗಿದ್ದರು. ಕಾಯಕಕ್ಕೆ, ಕಾಯಕ ಮಾಡುವ ವ್ಯಕ್ತಿಗಳಿಗೆ ಸಮಾಜದಲ್ಲಿ ಮಾನ್ಯತೆಯಿರಲಿಲ್ಲ. ಈಗಾದರೂ ಅದೇ ಪರಿಸ್ಥಿತಿಯೇ. ಕಾಯಕ ಜೀವಿಗಳ ಚಳುವಳಿಯನ್ನು ನಾಶ ಮಾಡುವ ಕುತಂತ್ರ ಅಂದು ನಡೆದರೆ ಇಂದು ರೈತ ಚಳುವಳಿಯನ್ನು, ಕಾರ್ಮಿಕ ಚಳುವಳಿಯನ್ನು ಒಟ್ಟಾರೆ ದುಡಿಯುವ ವರ್ಗದ ಚಳುವಳಿಗಳನ್ನು ಬಗ್ಗು ಬಡಿಯುವ ಕುತಂತ್ರವನ್ನು ಈ ದೇಶದ ವರ್ಣ ವ್ಯವಸ್ಥೆಯ ನೇತಾರರು ಮಾಡತೊಡಗಿದ್ದಾರೆ. ಜನರು ಒಂದು ಹಂತದವರೆಗೆ ತಾಳಿಕೊಂಡು ಬಾಳುತ್ತಾರೆ. ಶೋಷಣೆ ಮಿತಿಮೀರಿದಾಗ ಹೋರಾಟ ಪ್ರಾರಂಭವಾಗುತ್ತದೆ.

೧೨ನೆಯ ಶತಮಾನದ ಹೊತ್ತಿಗೆ ವರ್ಣಾಶ್ರಮ ಧರ್ಮದ ಕಿರುಕುಳ ಅತಿಯಾಗಿತ್ತು. ವರ್ಣಾಶ್ರಮದ ಶಿಶುವಾದ ಜಾತಿವ್ಯವಸ್ಥೆ ಎಲ್ಲೆಡೆ ತನ್ನ ಬೇರುಗಳನ್ನು ಪಸರಿಸಿತ್ತು. ಚತುರ್ ವರ್ಣಗಳ ಜೊತೆ ಪಂಚಮ ವರ್ಣವೂ ಬಂದು ಸೇರಿತ್ತು. ಮೇಲಿನ ವರ್ಣಗಳವರು ಕೆಳಗಿನ ವರ್ಣಗಳವರನ್ನು ಶೋಷಿಸುವದರ ಜೊತೆಗೆ ಚತುರ್ ವರ್ಣಗಳವರೆಲ್ಲ ಸೇರಿ ಪಂಚಮ ವರ್ಣೀಯರನ್ನು ಶೋಷಿಸುವದು ಅತಿಯಾಗಿತ್ತು. ಶರಣರು ಸಂಘಟಿತರಾಗಿ ಅನುಭವ ಮಂಟಪ ಕಟ್ಟಿಕೊಂಡು ಚರ್ಚೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡರು.

ಶರಣರು ತಮ್ಮ ಅಭಿವ್ಯಕ್ತಿಗೆ ಜನಭಾಷೆಯಾಗಿದ್ದ ಕನ್ನಡವನ್ನು ಬಳಸುತ್ತ ಬೆಳೆಸಿದರು. ಅಧ್ಯಾತ್ಮದ ವಿಚಾರಗಳನ್ನು ದೇವಭಾಷೆಯೆಂದು ಕರೆಸಿಕೊಂಡ ಸಂಸ್ಕೃತದಲ್ಲಿ ಹೇಳುವ ಪದ್ಧತಿ ರೂಢಿಯಲ್ಲಿತ್ತು. ಅದನ್ನು ಹೊಡೆದುಹಾಕಿ ಜನಭಾಷೆಯಾದ ಕನ್ನಡದಲ್ಲಿ ತಮ್ಮ ಲೌಕಿಕ, ಅಧ್ಯಾತ್ಮದ ಅನುಭವಗಳನ್ನು ಅತ್ಯಂತ ಸರಳವಾಗಿ ಹೇಳಿ ಜನಮನವನ್ನು ಮುಟ್ಟುವಲ್ಲಿ - ತಟ್ಟುವಲ್ಲಿ ಯಶಸ್ವಿಯಾದರು.

ಶರಣರು ಪ್ರತಿಪಾದಿಸಿದ ಕೆಲವು ವಿಚಾರಗಳನ್ನು ಗಮನಿಸಿದರೂ ಅವರ ಬಂಡಾಯ ಮನೋಧರ್ಮ ಗೊತ್ತಾಗುತ್ತದೆ. ಜನ ಸಾಮಾನ್ಯರು ದೇವರನ್ನು ಪೂಜಿಸದೇ ಮನೋಬಲ ಉಳಿಸಿಕೊಳ್ಳಲಿಕ್ಕಾಗದವರು. ಶೂದ್ರ ವರ್ಣದಲ್ಲಿ ಶೂದ್ರಾತಿಶೂದ್ರರೆಂದು ಕರೆಸಿಕೊಂಡ ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶಾವಕಾಶವಿರಲಿಲ್ಲ. ಶರಣರು ಅವರಿಗೆ ಲಿಂಗದೀಕ್ಷೆಯನ್ನು ನೀಡಿ ಇಷ್ಟಲಿಂಗ ಪೂಜಿಸಲು ಅನುವುಮಾಡಿಕೊಟ್ಟರು. ಇಷ್ಟಲಿಂಗವು ಸಮಾನತೆಯನ್ನು ತರಲು ಬಳಕೆಯಾಯ್ತು. ಒಮ್ಮೆ ಶಿವದೀಕ್ಷೆ ಪಡೆದ ದಾಸಿಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಒಳ ಬಂದಮೇಲೆ ಶಿವಶರಣರು ಅವರನ್ನು ತಮ್ಮವರೆಂದೇ ಭಾವಿಸುತ್ತಿದ್ದರು.

ಹರಳಯ್ಯ, ಮಧುವಯ್ಯ ಲಿಂಗದೀಕ್ಷೆ ಪಡೆದ ಮೇಲೆ ತಮ್ಮವರಾದರು ಎಂದು ಅವರಿಬ್ಬರ ಮಕ್ಕಳ ಲಗ್ನವನ್ನು ಗೊತ್ತುಪಡಿಸಿದರು. ವರ್ಣ ವ್ಯವಸ್ಥೆಯನ್ನು ನಂಬುವವರು ಹರಳಯ್ಯ ಅಸ್ಪೃಶ್ಯ, ಮಧುವಯ್ಯ ಬ್ರಾಹ್ಮಣ ಎಂದೇ ಭಾವಿಸಿದರು. ಶರಣರು ವರ್ಣ ಸಂಕರ ಮಾಡಿ ತಮ್ಮ ಜಾತಿಯನ್ನು ಹೊಲೆಗೆಡಿಸುತ್ತಿದ್ದಾರೆಂದು ವೈದಿಕರು ಸಿಟ್ಟಿಗೆದ್ದು, ವರ್ಣಾಶ್ರಮ ಧರ್ಮ ಕಾಪಾಡುವದು ರಾಜನ ಕರ್ತವ್ಯ ವೆಂದು ಬಿಜ್ಜಳನನ್ನು ಪುಸಲಾಯಿಸಿ ಹರಳಯ್ಯ-ಮಧುವಯ್ಯ ಗಳಿಗೆ ಎಳೆಹೂಟೆಯ ಶಿಕ್ಷೆಯನ್ನು ಕೊಡಿಸಿ ವರ್ಣ ವ್ಯವಸ್ಥೆಯನ್ನು ಕಾಪಾಡಿಕೊಂಡರು. ಇವತ್ತಿನವರೆಗೂ ಅವರು ಅಂತರ್ ಜಾತಿ ವಿವಾಹವನ್ನು ವಿರೋಧಿಸುತ್ತ, ಮತಾಂತರವನ್ನು ವಿರೋಧಿಸುತ್ತ ಭಾರತೀಯ ಸಮಾಜವನ್ನು ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ತಳ್ಳಿದ ಅಪಕೀರ್ತಿಗೆ ಒಳಗಾಗಿದ್ದಾರೆ. ಜಾತಿ ವ್ಯವಸ್ಥೆ ಉಳಿಯಲು ಲಗ್ನವೇ ಮೂಲ ಕಾರಣವೆಂದು ಅಂಬೇಡ್ಕರರೂ ಹೇಳಿದ್ದರು. ಸ್ವಜಾತಿ, ಸ್ವಗೋತ್ರ, ಒಳ ಪಂಗಡಗಳಲ್ಲೇ ಕನ್ಯೆಯನ್ನು ಹುಡುಕುವದು ಇಂದಿಗೂ ರೂಢಿಯಲ್ಲಿದೆ. ಶರಣ ಪರಂಪರೆಯಲ್ಲಿ ಬೆಳೆದು ಬಂದ ವೀರಶೈವರೂ ಈ ಪದ್ಧತಿಯಿಂದ ದೂರ ಉಳಿದಿಲ್ಲ. ಲಗ್ನದ ಮೂಲಕ ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯನ್ನು ಹೊಡೆದು ಹಾಕಲು ಶರಣರು ದಿಟ್ಟ ಹೆಜ್ಜೆಯನ್ನಿಟ್ಟರು. ಅಲ್ಲಲ್ಲಿ ಅಂತರ್‌ಜಾತಿ ವಿವಾಹಗಳು ನಡೆದರೂ ಇಂದಿಗೂ ಅದೊಂದು ಮಹಾ ಪ್ರವಾಹವಾಗಿಲ್ಲ. ವ್ಯವಸ್ಥಿತ ಮದುವೆಗಳು ಜಾತಿ, ಗೋತ್ರ, ಉಪಪಂಗಡಕ್ಕೆ ಅಂಟಿಕೊಂಡಿವೆ. ವೀರಶೈವರಾದರೂ ಈ ದಿಸೆಯಲ್ಲಿ ದಿಟ್ಟ ಹೆಜ್ಜೆಗಳನ್ನಿಡಬೇಕು.

ಮಹಿಳೆಯರನ್ನು ಅಡಿಯಿಂದ ಮುಡಿಯವರೆಗೆ ವರ್ಣಿಸುವ ಪದ್ಧತಿಯಿರುವ ದೇಶದಲ್ಲಿ ಆಕೆ ವಸ್ತುವಾಗಿದ್ದಾಳೆ ಹೊರತು ವ್ಯಕ್ತಿಯಾಗಿ ಅವಳನ್ನು ನೋಡಲು ನಮ್ಮ ಬಹುಪಾಲು ಧರ್ಮಗಳಿಗೆ ಸಾಧ್ಯವಾಗಿಲ್ಲ. ಬುದ್ಧನೂ ಕೂಡ ಕೆಲವು ದಿನಗಳವರೆಗೆ ಸಂಘದಲ್ಲಿ ಮಹಿಳೆಯರನ್ನು ಕರೆದುಕೊಳ್ಳಲಿಲ್ಲ. ಹೆಣ್ಣನ್ನು ಮಾಯೆಯೆಂದೂ, ತಮ್ಮ ಸಿದ್ಧಿ ಸಾಧನೆಗೆ ಅಡ್ಡ ಬರುವವಳೆಂದೂ ಅನೇಕ ಧರ್ಮಗಳು ಭಾವಿಸಿದ್ದವು. ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಎಂದು ಶರಣರು ಸಾರಿ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಅವಕಾಶ ನೀಡಿ, ಮೊಲೆ ಮೂಡಿಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಎಂದು ಹೇಳಿ ಸ್ತ್ರೀ-ಪುರುಷರಲ್ಲಿ ಸಮಾನತೆ ತಂದರು. ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ, ಶೌಚಾಚಮನಕ್ಕೆ ನೀರೊಂದೆ, ತನ್ನತಾ ಅರಿದವಂಗೆ ಕುಲವೊಂದೆ ಎಂದು ಹೇಳುವುದರ ಮೂಲಕ ಸರ್ವ ಮಾನವ ಸಮಾನತೆಯನ್ನು ಶರಣರು ಸಾರಿದರು.

ಗುಡಿ ಗುಂಡಾರಗಳನ್ನು ನಿರಾಕರಿಸಿದ ಶರಣರು ತೀರ್ಥಕ್ಷೇತ್ರ ತಿರುಗುವದನ್ನು ನಿಷೇಧಿಸಿದರು. ಕ್ಷುದ್ರ ದೇವತೆಗಳ ಆರಾಧನೆಯಿಂದ ಜನ ಸಾಮಾನ್ಯರಲ್ಲಿ ಏಳಿಗೆಯಾಗಲಿಲ್ಲ. ವೈದಿಕರು ಯಜ್ಞಗಳಲ್ಲಿ ಪ್ರಾಣಿ ಬಲಿ ಕೊಡುತ್ತಿರುವದನ್ನು ಅನುಕರಿಸಿ ಮಾರೆಮ್ಮ, ದುರಗಮ್ಮ, ಎಲ್ಲಮ್ಮ, ಸುಂಕಲಮ್ಮ ಮುಂತಾದ ಶಕ್ತಿ ದೇವತೆಗಳಿಗೆ ಪ್ರಾಣಿ ಬಲಿಕೊಡುವದನ್ನು

ರೂಢಿಸಿಕೊಂಡರು. 'ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ' ಎಂದು ಹೇಳಿ ಬಹುದೇವ ಉಪಾಸನೆಯನ್ನು ನಿಲ್ಲಿಸಿ ಏಕ ದೇವೋಪಾಸನೆಯಕಡೆ ಜನರನ್ನು ತಿರುಗಿಸಿದರು. ಶ್ರೀಮಂತರು ದೇವಾಲಯ ಕಟ್ಟುತ್ತಾರೆ. ನಾವು ಬಡವರು. ಆದ್ದರಿಂದ ನಮ್ಮ ದೇಹವೇ ನಮಗೆ ದೇವಾಲಯ. ನಮ್ಮ ತಲೆಯೇ ಬಂಗಾರದ ಕಳಶ ಎಂದು ಹೇಳುವುದರ ಮೂಲಕ ದೇವಾಲಯಗಳನ್ನು ನಿರಾಕರಿಸಿ ಇಷ್ಟಲಿಂಗ ಪೂಜೆಗೆ ಅವಕಾಶ ಮಾಡಿಕೊಟ್ಟರು.

ವೈದಿಕರಲ್ಲಿ ಜ್ಞಾನಕ್ಕೆ ಪ್ರಾಧಾನ್ಯತೆಯಿದ್ದರೆ ಶರಣರಲ್ಲಿ ಕ್ರಿಯೆಗೆ ಪ್ರಾಧಾನ್ಯತೆಯಿದೆ. ಕ್ರಿಯೆಯಿಲ್ಲದ ಜ್ಞಾನದಿಂದ ಪ್ರಯೋಜನವಿಲ್ಲ. ದಿಟವ ನುಡಿವುದು; ನುಡಿದಂತೆ ನಡೆವುದು ಎಂಬುದು ಅವರ ನೇರ ನಡೆ ನುಡಿಯನ್ನು ಎತ್ತಿ ತೋರಿಸುತ್ತದೆ.

ಶರಣರು ತಮ್ಮ ವಿಚಾರಧಾರೆಗಳುಳ್ಳ ಮೊತ್ತವನ್ನು ಧರ್ಮವೆಂದು ಕರೆಯದೆ ಮಾರ್ಗವೆಂದು ಕರೆದರು. ಮಾರ್ಗವೆಂದರೆ ದಾರಿ. ದಾರಿಯಲ್ಲಿ ಯಾರು ಬೇಕಾದರೂ ಸಂಚರಿಸಬಹುದು. ಅಂತೆಯೇ ಶರಣ ಮಾರ್ಗದಲ್ಲಿ ಯಾವ ಕಾಯಕ ಮಾಡುವವರೂ ನಡೆಯಬಹುದಾಗಿತ್ತು. ಶರಣರ ಈ ಮೂಲ ವಿಚಾರಧಾರೆಯನ್ನು ನಾವು ಇಂದು ಅರ್ಥೈಸಿಕೊಂಡು ಕೆಳವರ್ಣ, ವರ್ಗಗಳಿಂದ ಬರುವವರನ್ನು ಆತ್ಮೀಯತೆಯಿಂದ ಸ್ವಾಗತಿಸಬೇಕು. ವೈದಿಕರು ಮತಾಂತರವನ್ನು ಯಾಕೆ ವಿರೋಧಿಸುತ್ತಾರೆಂದರೆ ತಮ್ಮ ಮತಕ್ಕೆ ಯಾರನ್ನೂ ಸ್ವಾಗತಿಸುವಂತಹ ವ್ಯವಸ್ಥೆ ಅವರಲ್ಲಿಲ್ಲ. ಅದೊಂದು ಮುಚ್ಚಿದ ಬಾಗಿಲಿದ್ದಂತೆ. ಅದು ತೆರೆಯುವದೇ ಇಲ್ಲ.

ಇಲ್ಲಿ ಕೋಟಿ ಕೋಟಿ ಜನ ಮತಾಂತರಕ್ಕೆ ಒಳಗಾಗಿದ್ದಾರೆ. ಅನೇಕ ಕೆಳವರ್ಣಗಳ ಜನ ವೀರಶೈವ ಮಾರ್ಗಕ್ಕೆ ಬಂದರು. ಇಂದಿನ ವೀರಶೈವರು ಹಿಂದೆ ಯಾವುದೋ ಕೆಳವರ್ಣದ ಜಾತಿಗೆ ಸೇರಿದವರೆಂಬ ವಸ್ತುಸ್ಥಿತಿಯನ್ನು ಅವರು ತಿಳಿಯಬೇಕು. ಉಪಪಂಗಡಗಳನ್ನು ಗಟ್ಟಿಗೊಳಿಸಿಕೊಳ್ಳುವದೆಂದರೆ ವರ್ಣ ವ್ಯವಸ್ಥೆಯನ್ನು, ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಿಕೊಂಡಂತೆಯೇ. ವೀರಶೈವರು ಶರಣರು ಮಾಡಿದ ಪ್ರಯೋಗಗಳನ್ನು ಈಗ ಮಾಡಲು ಕಾಲ ಪಕ್ವವಾಗಿದೆ. ತಮ್ಮ ಒಳಪಂಗಡಗಳಲ್ಲಿ ಯಾವುದೂ ಶ್ರೇಷ್ಠವಲ್ಲ, ಯಾವುದೂ ಕನಿಷ್ಠವಲ್ಲ ಎಂದು ಭಾವಿಸಿ ಕನ್ಯೆ ಕೊಡು-

ತೆಗೆದುಕೊಳ್ಳುವ ಪರಿಪಾಠ ಬೆಳೆಸಿಕೊಳ್ಳಬೇಕು. ಮುಂದೊಂದು ದಿನ ಜಾತಿ ವ್ಯ ಹೋಗಿ ವರ್ಗವ್ಯವಸ್ಥೆ ಬರುತ್ತದೆ. ಬಡವರು-ಶ್ರೀಮಂತರು-ಮಧ್ಯಮ ವರ್ಗದವ ತಮ್ಮ ತಮ್ಮ ವರ್ಗಗಳಲ್ಲಿ ಸಂಬಂಧ ಬೆಳೆಸುವಂತಹ ಕಾಲ ಬಂದೇ ಬರುತ್ತದೆ.

ಈ ದೇಶದಲ್ಲಿ ಬುದ್ಧಿವಂತ ವರ್ಗಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯ ದೊರಕಿದೆ. ಈ ಬ್ರಾ ವರ್ಗ ಅಂದು ರಾಜ ಪ್ರಭುತ್ವದೊಡನೆ ಸಖ್ಯ ಬೆಳೆಸಿ ತನ್ನ ಬೇಳೆ ಬೇಯಿಸಿಕೊಂಡ ಇಂದೂ ಅದೇ ಕೆಲಸ ಮಾಡುತ್ತಿದೆ. ಶರಣರು ಎಲ್ಲ ಕಾಯಕಗಳನ್ನು ಸಮಾನವ ಕಂಡದ್ದರಿಂದ ವೇದ ಓದಿದವರಿಗೆ ಪೆಟ್ಟುಬಿತ್ತು. ಕಾಸಿ ಕಮ್ಮಾರನಾದ, ಬ ಮಡಿವಾಳನಾದ, ವೇದವನೋದಿ ಹಾರುವನಾದ ಎಂದು ಶರಣರು ಶ್ರ ಜೀವಿಗಳನ್ನು, ಬುದ್ಧಿಜೀವಿಗಳನ್ನು ಒಂದೇ ಎಂದು ಭಾವಿಸಿದ್ದು ವೈದಿಕರಿಗೆ ಸರಿಬರಲಿ

ಶರಣರು ಇಡೀ ವ್ಯವಸ್ಥೆಯನ್ನು ಬದಲಾಯಿಸಲು ಯತ್ನಿಸಿದರು. ಆ ಎಲ್ಲಾ ವಿಚಾರ ವಚನಗಳಲ್ಲಿ ಕಾಣಿಸಿಕೊಂಡಿವೆ. ೨೦೦೦೦ದಷ್ಟು ವಚನಗಳನ್ನು ಉಳಿಸಿಕೊ ಬರಲಾಗಿದೆ. ಅವುಗಳನ್ನು ಗಂಭೀರವಾಗಿ ಅಧ್ಯಯನ ಮಾಡಿ ಇವತ್ತಿನ ಕಾಲಕ್ಕೆ ಪ್ರ ವಾದವುಗಳನ್ನು ಜನಸಾಮಾನ್ಯರ ಮುಂದಿಟ್ಟು ಅವರನ್ನು ಜಾಗೃತಗೊಳಿಸಬೇಕಾಗಿದೆ.

ಮತ ಮಾನ್ಯಗಳು ಜಡವಾಗಿವೆ. ಜನರು ಗುಡಿ ಗುಂಡಾರದ ಗುಲಾಮರಾಗುತ್ತಿದ್ದಾರೆ. ತಮ್ಮ ಕಷ್ಟಕ್ಕೆ ಪರಿಹಾರವನ್ನು ದೇವಾಲಯಗಳಿಂದ ಕಾಣ ಯತ್ನಿಸುತ್ತಿದ್ದಾರೆ. ಕಾಯಕ ಮಾಡುವುದರಿಂದ ದೈಹಿಕ, ಮಾನಸಿಕ ಆರೋ ಸರಿಯಿರುತ್ತದೆ. ಆರ್ಥಿಕ ಕೊರತೆ ಉಂಟಾಗದು. ಸ್ವಾಭಿಮಾನದಿಂದ ಬದುಕಬಹು ಎಂಬುದನ್ನು ಮತ್ತೆ ಶರಣರ ಕಾಯಕ ಸಿದ್ಧಾಂತದ ಹಿನ್ನೆಲೆ ಹೇಳಿ ರಾಷ್ಟ್ರ ನಿರ್ಮಾಣ ಜನರನ್ನು ಅಣಿಗೊಳಿಸಬೇಕಾಗಿದೆ.

ಕೆಲವರು ಇತ್ತೀಚೆಗೆ ತಿಳಿದೋ ತಿಳಿಯದೆಯೋ ಶರಣರ ವಿಚಾರಧಾರೆಯ ತಿರುಚಲು ಹೊರಟಿದ್ದಾರೆ. ಮಾತೆ ಮಹಾದೇವಿ ಬಸವಣ್ಣನವರ ವಚನಾಂಕಿತವ ಲಿಂಗದೇವ ಎಂದು ತಿದ್ದಿದ್ದರೆ ಡಾ|| ಎಂ. ಚಿದಾನಂದ ಮೂರ್ತಿಯವರು ವೀರಶೈ ಲಿಂಗಾಯತರು ಹಿಂದೂಗಳೆಂದು ವಾದಿಸುತ್ತಿದ್ದಾರೆ. ಇವತ್ತು ಯಾವುದನ್ನು 'ಹಿಂದ ಎಂದು ಕರೆಯಲಾಗುತ್ತಿದೆಯೋ ಅದು ವೈದಿಕ ಧರ್ಮವಾಗಿದೆ. ಶರಣರು ವೈ ಧರ್ಮದ ವರ್ಣಾಶ್ರಮ ಧರ್ಮ ವ್ಯವಸ್ಥೆ, ಅಸಮಾನತೆ ಅದರಲ್ಲಿರುವ ಲಿಂಗಭೇ ಮಡಿ, ಮೈಲಿಗೆ, ಯಜ್ಞ, ಪ್ರಾಣಿಬಲಿ, ಅಸ್ಪೃಶ್ಯತೆ, ಗುಡಿ ಗುಂಡಾರ, ಪೂಜಾ ತೀರ್ಥಯಾತ್ರೆ ಮುಂತಾದವುಗಳನ್ನು ಖಂಡಿಸಿದ ಮೇಲೆ ವೀರಶೈವ ಹಿಂದುಗಳಾಗುವದಾದರೂ ಹೇಗೆ? ಇವತ್ತಿನ ವೀರಶೈವರನ್ನು ನೋಡಿಕೊಂ ನಿರ್ಣಯಕ್ಕೆ ಬರುವುದು ತಪ್ಪು. ಶರಣರ ವಿಚಾರಧಾರೆ ಏನಿತ್ತು ಎಂಬು ಸ್ಪಷ್ಟವಾಗಿರುವಾಗ ಚಿದಾನಂದ ಮೂರ್ತಿಯಂಥವರು ಹಿಂದೆ ವೀರಶೈವರು ಲಿಂ ಬ್ರಾಹ್ಮಣರೆಂದು ವಾದ ಮಾಡಿದ್ದರಿಂದ, ಅವರು ಹಿಂದೂಗಳೆಂದು ವಾದಿಸುವ ತಪ್ಪು. ಕೆಲವು ವೀರಶೈವರು ತಿಳಿದೋ ತಿಳಿಯದೆಯೋ ಹಿಂದೂ ಮತೀ ಪಕ್ಷವೊಂದರಲ್ಲಿ ಸೇರಿದ್ದಾರೆ. ಅಷ್ಟು ಮಾತ್ರದಿಂದ ನಾವು ಹಿಂದುಗಳೆಂದು ವ ಮಾಡುವುದು ತಪ್ಪು.

ಶರಣ ಚಳುವಳಿಯ ಆಶಯಗಳನ್ನು ವಿರೋಧಿಸುವವರನ್ನು ಕ್ಷಮಿಸಬಹು ಆದರೆ, ಶರಣ ಚಳುವಳಿಯ ಆಶಯ ತಿಳಿದೂ ಯಾವುದೋ ಆಮಿಷಕ್ಕೆ ಬಲಿಯಾ ಚಿ. ಮೂ. ಅಂಥವರನ್ನು ಕ್ಷಮಿಸಲಾಗದು.

ಬಂಡಾಯಗಾರರು ಸಂಪ್ರದಾಯವಾದಿಗಳು ಒಂದೆಡೆ ಇರಲಾಗದು. ಶ ಚಳುವಳಿಯಲ್ಲಿ ಬಂದವರು ಎಂದಿಗೂ ಮತೀಯತೆಯನ್ನು ಗೌರವಿಸಲಾ ಶರಣರದು ಸ್ವಾಭಿಮಾನದ ಚಳುವಳಿ. ಕೋಮುವಾದಿಗಳದು ವರ್ಣ ವ್ಯ ಗಟ್ಟಿಗೊಳಿಸುತ್ತ ಅಧಿಕಾರ ಪಡೆಯುವ ಚಳುವಳಿ ಅದು. ಈ ಸಂದರ್ಭ ಅನ್ವಯಿಸಿಕೊಂಡು ವಚನ ಸಾಹಿತ್ಯ ನೋಡದಿದ್ದರೆ, ನಾವು ಸ್ಥಾವರವಾದ ಶರಣರು ಚಲನಶೀಲ ಜಂಗಮವಾಗಲು ನಮಗೆ ಕಲಿಸಿದ್ದಾರೆ. ನಿಜವ ಚಲನಶೀಲತೆಯೇ ಬಂಡಾಯ. ಆ ಚಲನಶೀಲತೆ ಉಳಿಸಿಕೊಳ್ಳಲು ಶ್ರಮಿಸಬೇಕು.

ಅಂತರ್‌ಜಾತಿ, ಅಂತರ್‌ಪಂಗಡ ವಿವಾಹ ಮಾಡುವದನ್ನು ಪ್ರೋತ್ಸಾಹಿಸಿ ಶ ಸಾಹಿತ್ಯ ಸಮ್ಮೇಳನ ಜ್ಞಾನ ಮತ್ತು ಕ್ರಿಯೆಗಳನ್ನು ಮೈಗೂಡಿಸಿಕೊಂಡು ಜಾತಿವಿನಾ ಕಾರಣವಾಗಲಿ. ಬಂಡಾಯಕ್ಕೆ ಬೆನ್ನೆಲುಬಾಗಲಿ.

ಅಲ್ಲಮಪ್ರಭು ಬೆಟ್ಟದೂರು
ಅಮರ ಚೇತನ, ತಳವಗೇರಿ ಕಾಲೋನಿ, ಕಿನ್ನಾಳ ರಸ್ತೆ, ಕೊಪ್ಪಳ-೫೮೩ ೨೩೧

೨೦೧೨ರ ಮುನ್ನೋಟ


ನಾವಲೋಕನ

ಆಕಾಶದತ್ತ ತಿರುಗಿ ನೋಡುವ ಹವ್ಯಾಸ ಉಳಿಸಿಕೊಂಡಿರುವ ಹಲವಾರು "ಹೊಸತು" ಓದುಗರಿಗೆ ಹೊಸ ವರ್ಷದ ಶುಭಾಶಯಗಳು. ಈ ವರ್ಷವೂ ಹಲವಾರು ಖಗೋಳ ಕೌತುಕಗಳು ಕಣ್ಣಿಗೆ (ಕ್ಯಾಮರಾಕ್ಕೆ) ಹಬ್ಬ ಒದಗಿಸಲಿವೆ. ಅತಿ ಮುಖ್ಯವಾದುದು ಜೂನ್ ತಿಂಗಳಲ್ಲಿ ನಡೆಯುವ ಶುಕ್ರಗ್ರಸ್ತ ರ್ಯಗ್ರಹಣ - ಶುಕ್ರ ಗ್ರಹ ಸೂರ್ಯನ ಮುಂದೆ ಹಾದು ಚುಕ್ಕೆಯಂತೆ ಕಾಣುವ ಅಪೂರ್ವ ಘಟನೆ. ಈ ರ ೨೦೦೪ರ ಜೂನ್‌ನಲ್ಲಿ ಇದು ನಡೆದಿತ್ತು ದು ಹಲವರಿಗೆ ನೆನಪಿರಬಹುದು. ಆ ರ್ಭದಲ್ಲಿ ನಾನು ಶುಕ್ರ ಸಂಕ್ರಮಣ ಪದವನ್ನು ಬಳಸಿದ್ದೆ. ಹಿರಿಯರಾದ ಜಿ. ಟಿ ನಾರಾಯಣರಾಯರು ಮ ಎಂಬ ಪದ ಸೂಕ್ತ ು ಸೂಚಿಸಿದ್ದರು. ತದ ರದಲ್ಲಿ ನನಗೆ ಚಿಂತಾಮಣಿ ನಾಥಾಚಾರಿ ಬರೆದ ೪ರಲ್ಲಿ ಪ್ರಕಟವಾದ ಕ ಸಿಕ್ಕಿತು. ಆ ಪುಸ್ತಕಕ್ಕೆ ಖಪುಟವೇ ಇಲ್ಲವಾದರೂ ರ ಶೀರ್ಷಿಕೆ "ಶುಕ್ರಗ್ರಸ್ತ ರ್ಯಗ್ರಹಣವು" ಎಂದು ಬೇಕು ಎಂದು ತಿಳಿಯಬಹುದು. ು ಬಹಳ ಒಪ್ಪವಾಗಿದೆ ಎಂದು ೆ ಅನ್ನಿಸುತ್ತದೆ. ಇದು ಈ ಸಾನದ ವಿಶೇಷ ಎನ್ನಬಹುದು. ಈ ಯಾವುದೇ ಸೂರ್ಯ ಅಥವಾ ದ್ರಗ್ರಹಣಗಳು ನಮಗೆ ಕಾಣುವಂತಿಲ್ಲ ದ್ದರಿಂದ ಈ ಘಟನೆಯಿಂದ ಮಾತ್ರ ಪಡಬೇಕು.



೨೬ರ ಸಂಜೆ ಶುಕ್ರ ಮತ್ತು ಚಂದ್ರ

ಎರಡು ವರ್ಷಗಳಿಂದ ತಟಸ್ಥನಾಗಿ ಕುಳಿತು ವಿಜ್ಞಾನಿಗಳ ತಲೆನೋವಿಗೆ ಕಾರಣನಾಗಿದ್ದ ಸೂರ್ಯ ಈಗ ಕಲೆಗಳಿಂದ ಶೃಂಗರಿಸಿಕೊಳ್ಳಲು ಆರಂಭಿಸಿದ್ದಾನೆ. ಆದ್ದರಿಂದ ೨೦೧೨ರಲ್ಲಿ ದೊಡ್ಡ ದೊಡ್ಡ ಕಲೆಗಳು ಕಾಣಬಹುದು. ದೂರದರ್ಶಕ ಇರುವವರು ಸೂರ್ಯನ ಬಿಂಬವನ್ನು ತೆರೆಯ ಮೇಲೆ ಮೂಡಿಸುವ ಪ್ರಯೋಗವನ್ನು ಸಿದ್ಧಿಮಾಡಿಕೊಂಡಲ್ಲಿ ಶುಕ್ರಗ್ರಸ್ತ ಸೂರ್ಯಗ್ರಹಣವನ್ನು ತೋರಿಸಲು / ಚಿತ್ರ ತೆಗೆಯಲು ಅನುಕೂಲವಾಗುವುದು.



ಕಲೆಗಳಿಲ್ಲದಿದ್ದರೆ ಇಲ್ಲ ಚಿಂತೆ ಏಕೆ ? ಈ ಪ್ರಶ್ನೆ ಸ್ವಾಭಾವಿಕ. ಆದರೆ ಇದಕ್ಕೆ ಗಹನವಾದ ಅರ್ಥ ಉಂಟು. ಈ ಕಲೆಗಳು ಹನ್ನೊಂದು ವರ್ಷಗಳಿಗೊಮ್ಮೆ ಗರಿಷ್ಠವನ್ನು ಮುಟ್ಟುವ ನಿಯತಕಾಲಿಕತೆಯನ್ನು ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಕಂಡುಹಿಡಿಯಲಾಯಿತು. ಅದರ ಪರಿಣಾಮಗಳನ್ನು ಬಂಡೆಗಳಲ್ಲಿ, ಮರಗಳ ಕಾಂಡಗಳಲ್ಲಿ ಗುರುತಿಸುವುದು ಸಾಧ್ಯವಿದೆ. ಇಂತಹ ಅಧ್ಯಯನಗಳಿಂದ ತಿಳಿದುಬಂದ ಹೊಸ ವಿಷಯವೆಂದರೆ ಕೆಲವು ನಿರ್ದಿಷ್ಟ ಅವಧಿಗಳಲ್ಲಿ ಒಂದೇ ಒಂದು ಕಲೆಯೂ ಕಾಣಲಿಲ್ಲ, ಇದನ್ನು ಮಾಂಡರ್ ಮಿನಿಮಂ ಎಂದು ಕರೆಯುತ್ತಾರೆ. ಹಾಗಾದರೆ ಬಿಸಿಲು ಬಹಳ ಪ್ರಖರವಾಗಿದ್ದಿರಬೇಕು ಎಂದು ಊಹಿಸುವುದಾದರೆ ಸೂರ್ಯ ಒಂದು ರಹಸ್ಯ ಎಂದಾಗುತ್ತದೆ. ಏಕೆಂದರೆ ಈ ಅವಧಿಯಲ್ಲಿ ಚಳಿಗಾಲದಲ್ಲಿ ಬಹಳ ಕೊರೆತ ಇತ್ತು, ಸಾಮಾನ್ಯಕ್ಕಿಂತ ಹೆಚ್ಚು ಎನ್ನಬಹುದು. ಮಧ್ಯ ಯೂರೋಪಿನವರೆಗೂ ಹಿಮಪಾತವಾಗಿ ಹಿಮದ ಹಾಸುಗಳು ವಿಸ್ತರಿಸಿದ್ದವು. ಇದನ್ನು ಐಸ್ ಏಜ್ (ಹಿಮಯುಗ) ಎಂದು ಕರೆಯುತ್ತಾರೆ.

ಭೂಗೋಳದ ಮೇಲೆ ಜೀವಿಗಳು ಇದ್ದಕ್ಕಿದ್ದಂತೆ ಕಣ್ಮರೆಯಾಗಲು ಈ ಐಸ್ ಏಜ್‌ಗಳು ಕಾರಣ ಎಂಬುದೊಂದು ಸಿದ್ಧಾಂತವಿದೆ. ಹಾಗಿದ್ದಲ್ಲಿ ಈಗ ಎರಡು ವರ್ಷದ ಹಿಂದೆ ಬರಬೇಕಾಗಿದ್ದ ಕಲೆಗಳು ಬಾರದಿದ್ದುದಕ್ಕೆ ನಿಜವಾಗಿಯೂ ಚಿಂತೆಯೇ ಆಗಿತ್ತು. ನಾವು ಹೊಸ ಹಿಮಯುಗಕ್ಕೆ ಕಾಲಿಡುತ್ತಿದ್ದೇವೆಯೇ, ಎಂಬ ಪ್ರಶ್ನೆ ಎದ್ದಿತ್ತು. ಪ್ರಳಯ ಎಂದು ಸುದ್ದಿ ಮಾಡುತ್ತಿದ್ದವರಿಗೆ ಹೊಸದೊಂದು ಜಾಡು ಸಿಕ್ಕಿಬಿಟ್ಟಿತ್ತು. ಇದೀಗ ಪುನಃ ಕಲೆಗಳು ಕಾಣಿಸಿಕೊಂಡಿವೆ. ಸ್ವಲ್ಪ ತಡವಾಗಿದೆ; (ಅದೇಕೆ ಎಂದು ತಲೆಕೆಡಿಸಿಕೊಳ್ಳುವುದನ್ನು ವಿಜ್ಞಾನಿಗಳಿಗೆ ಮೀಸಲಿಡೋಣ) ಕಲೆಗಳಂತೂ ಕಾಣಿಸುತ್ತಿವೆ. ಆದ್ದರಿಂದ ಹಿಮಯುಗ ಮುಂದಕ್ಕೆ ಹೋಗಿದೆ. ಬೀಸುವ ದೊಣ್ಣೆ ತಪ್ಪಿದೆ.

ಪ್ರಳಯ ಎಂದು ಬೊಬ್ಬೆ ಎಬ್ಬಿಸಲು ಒಂದು ಚಲನಚಿತ್ರವೂ ಕಾರಣವಾಗಿತ್ತು. ಯಾವುದೋ ಅಜ್ಞಾತಕಾಯವೊಂದು ಭೂಮಿಗೆ ಅಪ್ಪಳಿಸುವುದನ್ನು ೨೦೧೨ಕ್ಕೆ ಗಂಟುಹಾಕಿ ನಮ್ಮ ಸರ್ವನಾಶ ಖಚಿತ ಎಂಬ ಭೀತಿ ಮೂಡಿಸುವಲ್ಲಿ ಇದು ಬಹಳ ಯಶಸ್ವಿಯಾಗಿತ್ತು. ಹೀಗೆ ಭೂಮಿಯನ್ನು ಅಪ್ಪಳಿಸಬಲ್ಲ ಕಾಯಗಳದೊಂದು ದೊಡ್ಡ ಪಟ್ಟಿಯೇ ಇಂಟರ್‌ನೆಟ್‌ನಲ್ಲಿ ಲಭ್ಯವಿದೆ. ನಿಯತಕಾಲಿಕವಾಗಿ ಸೂರ್ಯನನ್ನು ಸುತ್ತುವ ಈ ಕಾಯಗಳು ಭೂಮಿಯನ್ನು ಎಂದು ಮತ್ತು ಎಷ್ಟು ಸಮೀಪ (ದೂರ ?)ದಿಂದ ಹಾದುಹೋಗುವುವು ಎಂಬ ವಿವರಗಳು ಅಲ್ಲಿ ದೊರಕುತ್ತವೆ. ಈ ಪ್ರಕಾರ ಮೇ ೨೧,

ಜೂನ್ ೨೧, ನವೆಂಬರ್ ೫ ಮತ್ತು ಡಿಸೆಂಬರ್ ೧೨ ಈ ತಾರೀಖುಗಳಲ್ಲಿ ಸಣ್ಣ ಕಾಯಗಳು ಭೂಮಿಗೆ ಸಮೀಪವಾಗಿ ಹಾದು ಹೋಗುವುವು. ಆಗ ಅಂತರ ಎಷ್ಟಿರಬಹುದು? ಚಂದ್ರ - ಭೂಮಿ ಅಂತರದ ೦.೦೩ರಷ್ಟು ಅಂದರೆ ಸುಮಾರು ೧೦೦,೦೦೦ ಕಿ.ಮೀ.ಗಳು. ಈ ದೂರ ಸುರಕ್ಷಿತ ಎನ್ನಬಹುದಾದ್ದರಿಂದ ಈ ಘಟನೆಗಳು ಯಾವುದೇ ಅಘಾತ ಉಂಟುಮಾಡಲಾರವು.

ಸರ್ವೇಸಾಧಾರಣವಾಗಿ ನಡೆಯುವ ಯುತಿ - ವಿಯುತಿಗಳು ಈ ವರ್ಷವೂ ನಡೆದೇ ನಡೆಯುತ್ತವೆ. ಮಾರ್ಚ್ ತಿಂಗಳಲ್ಲಿ ನಡೆಯುವ ಮಂಗಳ ಗ್ರಹದ ವಿಯುತಿ ಎಂದಿನಂತೆ ವಿಶೇಷವೇ. ಸಂಜೆಯ ಆಕಾಶದಲ್ಲಿ ಪ್ರಕಾಶಮಾನವಾಗಿ ಬೆಳಗುವ ಈ ಕಿತ್ತಲೆ ಬಣ್ಣದ ಚುಕ್ಕೆ ಸಹಜವಾಗಿ ಎಲ್ಲರನ್ನೂ ಆಕರ್ಷಿಸುತ್ತದೆ.

ಜನವರಿಯ ವಿಶೇಷಗಳೆಂದರೆ ಕ್ವಾಡ್ರಾಂಟಿಡ್ಸ್ ಉಲ್ಕಾವೃಷ್ಟಿ. ಸಂಜೆಯ ಆಕಾಶದಲ್ಲಿ ಶುಕ್ರ, ಗುರು ಪ್ರಖರವಾಗಿ ಬೆಳಗುವುವು. ಬೆಳಗಿನ ಜಾವ ಮಂಗಳ, ಶನಿ ಕಾಣುವುವು.

ನೆತ್ತಿಯ ಮೇಲೆ ಮೀನ ರಾಶಿಯಲ್ಲಿ ಗುರು, ಪಶ್ಚಿಮದ ಅಂಚಿನ ಕುಂಭರಾಶಿಯಲ್ಲಿ ಶುಕ್ರ ಕಾಣುವುವು. ನಕುಲ (ಪೆಗಸಸ್), ರಾಜಹಂಸ (ಸಿಗ್ನಸ್), ದಕ್ಷಿಣ ಮೀನ, ಬಕ, ಈ ಪುಂಜಗಳನ್ನು ಗುರುತಿಸಬಹುದು. ಉತ್ತರದಲ್ಲಿ ಕುಂತಿ (ಕ್ಯಾಸಿಯೋಪಿಯಾ), ಪಾರ್ಥ (ಪರ್ಸಿಯುಸ್) ಇವುಗಳು ಅಲ್ಲದೆ ವಿಜಯಸಾರಥಿ (ಆರಿಗಾ) ಮತ್ತು ಮಿಥುನ - ಇವುಗಳನ್ನೂ ಕಾಣಬಹುದು. ಪೂರ್ವದಲ್ಲಿ ಕಾಣುವ ವೃಷಭ ಮತ್ತು ಮಹಾವ್ಯಾಧ - ಇವುಗಳ ಜೊತೆ ಅತಿ ಪ್ರಖರ ನಕ್ಷತ್ರ ಸಿರಿಯಸ್ (ಲುಬ್ಧಕ)ವನ್ನೂ ಗುರುತಿಸಬಹುದು. ಮಹಾವ್ಯಾಧನ ದಕ್ಷಿಣದಿಂದ ಹೊರಡುವ ವೈತರಣೀ ನದಿಯನ್ನು ಅದರ ತುದಿಯಲ್ಲಿ ಪ್ರಖರ ನಕ್ಷತ್ರ ವೈತರಣೀ ಮುಖವನ್ನು ಗುರುತಿಸಲು ಈಗ ಸದವಕಾಶ. ಅದರ ಪಕ್ಕದಲ್ಲಿದೆ ಕ್ಷೀಣ ಪುಂಜ ಫೀನಿಕ್ಸ್.

೫ರಂದು ಭೂಮಿ-ಸೂರ್ಯರ ಅಂತರ ಕನಿಷ್ಠವಾಗುವುದು.

ಖಗೋಳ ದಿನಚರಿ

೧ ಚಾಂದ್ರಮಾಸದ ಮೊದಲ ಪಾದ; ಚಂದ್ರಾಸ್ತ ಮಧ್ಯರಾತ್ರಿಗೆ.
೨ ಚಂದ್ರ ಭೂಮಿ ನಡುವೆ ಗರಿಷ್ಠ ಅಂತರ
೩ ಸಂಜೆ ಗುರು ಮತ್ತು ಚಂದ್ರ ಜೋಡಿ *
೪ ಕ್ವಾಡ್ರಾಂಟಿಡ್ಸ್ ಉಲ್ಕಾ ವೃಷ್ಟಿ
೫ ಭೂಮಿ-ಸೂರ್ಯ ನಡುವೆ ಕನಿಷ್ಠ ಅಂತರ
೯ ಹುಣ್ಣಿಮೆ ೧೩:೦೦ಕ್ಕೆ
೧೪ ಮುಂಜಾವು ಮಂಗಳ, ಚಂದ್ರ ಜೋಡಿ *
೧೬ ಚಾಂದ್ರಮಾಸದ ಕೊನೆಯ ಪಾದ; ಚಂದ್ರೋದಯ ಮಧ್ಯ ರಾತ್ರಿಗೆ
೧೭ ಬೆಳಗಿನ ಜಾವ ಶನಿ ಮತ್ತು ಚಂದ್ರ ಜೋಡಿ *; ಚಂದ್ರ-ಭೂಮಿ ನಡುವೆ ಕನಿಷ್ಠ ಅಂತರ
೨೨ ಬುಧ - ಚಂದ್ರ ಜೋಡಿ
೨೩ ಅಮಾವಾಸ್ಯೆ ೧೩:೦೯ಕ್ಕೆ
೨೫ ಮಂಗಳದ ಹಿನ್ನಡೆ ಆರಂಭ
೨೬ ಸಂಜೆ ಶುಕ್ರ ಮತ್ತು ಚಂದ್ರ ಜೋಡಿ *
೩೦ ಸಂಜೆ ಗುರು ಮತ್ತು ಚಂದ್ರ ಜೋಡಿ *; ಚಂದ್ರ - ಭೂಮಿ ನಡುವೆ ಗರಿಷ್ಠ ಅಂತರ
೩೧ ಚಾಂದ್ರಮಾಸದ ಮೊದಲ ಪಾದ; ಚಂದ್ರಾಸ್ತ ಮಧ್ಯ ರಾತ್ರಿಗೆ.

(* ಛಾಯಾಗ್ರಹಣಕ್ಕೆ ಉತ್ತಮ ಅವಕಾಶ)

ಡಾ|| ಬಿ. ಎಸ್. ಶೈಲಜಾ
ಜವಾಹರಲಾಲ್ ನೆಹರು ತಾರಾಲಯ, ಹೈಗ್ರೌಂಡ್ಸ್, ಬೆಂಗಳೂರು - ೫೬೦ ೦೦೧



ನಗರ ವಸಾಹತುಗಳ ಮೋಹ

ಎಂ. ಬಿ. ಲಾಲ್



ಗಾಧ ನಗರೀಕರಣವು ಬಹುರಾಷ್ಟ್ರೀಯ ಂಪನಿಗಳ ಕೈವಾಡವು ಮಿತಿಮೀರಿ ಳೆಯುವಂತೆ ಮಾಡುತ್ತಿದೆ. ಅಷ್ಟೋ ಷ್ಟೋ ಗಳಿಸಿದ ಹಣವನ್ನೆಲ್ಲಾ ಬಡವರು ುರಿಯುವುದು ಇವುಗಳ ಹೊಲಸು ಾಯೊಳಕ್ಕೆ. ಅವುಗಳ ಉತ್ಪನ್ನಗಳನ್ನು ೊಂಡು ಈ ಬಡವರು ಆ ಕಂಪನಿಗಳಿಗೆ ುಕ್ಕಟೆ ದುಡಿಯುವ ಶ್ರಮ ನೀಡುತ್ತಿದ್ದಾರೆ. ೀಗಿರುವಾಗ ಜನ ತಟಸ್ಥರಾಗಿ ುಳಿಯುವುದು ಸಾಧುವೆ ? ದಿ ಸ್ಟೇಟ್ಸ್‌ಮನ್' ಪತ್ರಿಕೆಯ ದೆಹಲಿ ಆವೃತ್ತಿಯ ನಿವೃತ್ತ ಸಹ-ಸಂಪಾದಕರು ಒಂದು ವಿವೇಚನೆ ನಡೆಸಿದ್ದಾರೆ.

ನಮ್ಮ ಮನೆಯ ನೆರೆಯಲ್ಲಿ ನಂದಿ ಎಂಬ ಮನೆಕೆಲಸದಾಕೆ ಇದ್ದಾಳೆ. ಆಕೆಯ ಮಗಳು ರೇಖಾ. ಜುಲೈ ೨೦೧೧ರಲ್ಲಿ ಅವಳು ದೆಹಲಿ ವಿಶ್ವವಿದ್ಯಾಲಯದ ಒಂದು ಕಾಲೇಜಿನಲ್ಲಿ ಪ್ರವೇಶ ಪಡೆದಾಗ ನಮಗೆಲ್ಲಾ ಖುಷಿಯೋ ಖುಷಿ. ಕಾಲೇಜುಗಳ ಪ್ರವೇಶಕ್ಕೆ ನಿಗದಿಯಾಗಿದ್ದ ಕನಿಷ್ಠ ಅಂಕಗಳು ಶೇಕಡ ೮೦. ಈ ಹುಡುಗಿ ಅದಕ್ಕಿಂತಲೂ ಹೆಚ್ಚು ಅಂಕಗಳನ್ನು ಹೊಂದಿದ್ದಳೆಂಬುದು ಹೆಮ್ಮೆಯ ವಿಷಯ. ನವಂಬರ್ ಮೊದಲ ವಾರದ ಒಂದು ಬೆಳಿಗ್ಗೆ ಅವಳು ನಮ್ಮ ಮನೆಗೆ ಬಂದಿದ್ದಳು: ಕ್ರಾಪ್ ಕೂದಲನ್ನು ಹೆರಳೆ ಹಾಕಿಕೊಂಡಿದ್ದಳು. ಮುಂಚೆ ಅವಳಿಗಿದ್ದುದನ್ನು 'ಕುದುರೆಮರಿ ಬಾಲ' ಎಂದು ಕರೆಯುತ್ತಿದ್ದರು. ಇಂಗ್ಲಿಷಿನಲ್ಲಿ 'ಪೋನಿ ಟೇಲ್' ಎಂದರೆ ಲಕ್ಷಣವಾಗಿ ಕೇಳುತ್ತದೆ. ಒಬ್ಬ ಮಹಿಳಾ ಕೇಶಾಲಂಕಾರ ಪಟುವಿನ ಬಳಿ ಹೋಗಿ ಇವಳು ಆ ಬಾಲವನ್ನು ಕತ್ತರಿಸಿಹಾಕಿಸಿ, ಹೊಸ ಕೇಶ ಸೌಂದರ್ಯ ಪಡೆದುಕೊಂಡಿದ್ದಳು. ಅದು ಹೆಚ್ಚು ಆಧುನಿಕ ಮತ್ತು ಆಕರ್ಷಣೀಯ ಅಲ್ಲವೆ ! ಅಲ್ಲಿಂದ ಆರಂಭವಾಯಿತು ನಮ್ಮ ನಂದಿಯ ಹೊಸ ಕೆಲಸ. ಅದನ್ನವಳು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾಳೆ : ರೇಖಳಿಗೆ ಒಬ್ಬ ಸೂಕ್ತ ಹುಡುಗನನ್ನು ಅರಸಿ ಶೀಘ್ರವಾಗಿ ಮದುವೆ ಮಾಡಿಬಿಡಬೇಕೆಂಬುದು ಅವಳ ತರದೂದು. ಅಂದರೆ, ರೇಖಳ ವಿದ್ಯಾಭ್ಯಾಸಕ್ಕೆ ಇತಿಶ್ರೀ ಹಾಡಿದಂತೆಯೇ ಎಂದರ್ಥ.

ನಂದಿಯದೂ ಒಂದು ಕತೆ. ಅವಳು ವಿವಾಹ ವಿಚ್ಛೇದನ ಪಡೆದಿರುವ ಮಹಿಳೆ.' ಮೂರು ಹೆಣ್ಣುಮಕ್ಕಳು. ದೊಡ್ಡ ಮಗಳು ರೇಖಾ ಹೀಗೆ ಓದಿ, ತಲೆ ಕತ್ತರಿಸಿಕೊಂಡು, ದಾರಿತಪ್ಪಿದರೆ ಏನು ಗತಿ ! ಅವಳ ದೂರು ಅಸಂಗತವಲ್ಲ: ''ನೋಡಿ, ಈ ರೇಖಳ ಮೊಬೈಲ್ ಫೋನು ಯಾವಾಗಲೂ ಹೊಡೆದುಕೊಳ್ಳುತ್ತಿರುತ್ತದೆ. ಕಾಲೇಜಿನ ಹುಡುಗ-ಹುಡುಗಿಯರು ಯಾವಾಗಲೂ ಇವಳಿಗೆ ಕರೆ ಮಾಡುತ್ತಿರುತ್ತಾರೆ, ಆದರೆ ಒಂದು ವಿಷಯ ಇದೆ. ಅಂಕ ಗಳಿಸುವುದರಲ್ಲಿ ಅವರೊಡನೆ ಸ್ಪರ್ಧೆಗಿಳಿದು ನಮ್ಮ ರೇಖಾ ವಿಜಯಿಯಾದಾಳು, ಆದರೆ ಈ ಮೊಬೈಲು ಗಿಬೈಲು ಇವೆಯಲ್ಲ, ಅದರಲ್ಲಿ ಅವಳು ಗೆಲ್ಲಲಾರಳು. ಅವಳನ್ನು ಹುಡುಕಿಕೊಂಡು ಅವಳ ಸ್ನೇಹಿತರು ಕಾರುಗಳಲ್ಲಿ ಬರುತ್ತಾರೆ, ಅದೂ ಡ್ರೈವರ್‌ಗಳನ್ನಿಟ್ಟುಕೊಂಡಿರುವ ಮಂದಿ. ಹುಡುಗರಾದರೆ ಮೋಟಾರ್ ಸೈಕಲ್ಲುಗಳಲ್ಲಿ ಬರುತ್ತಾರೆ. ಅವಳನ್ನು ಕಾಣಲು ಬರುವ ಹುಡುಗಿಯರ ವೇಷಭೂಷಣಗಳು ಅತ್ಯಾಧುನಿಕ, ಬಣ್ಣಬಣ್ಣದವು. ನಿಮ್ಮ ಮನೆ ಹುಡುಗಿಯರ ಬಳಿ ಅಂತಹ ಬಟ್ಟೆಗಳೇ ಇಲ್ಲ, ಬಿಡಿ. ಒಳ್ಳೆ ಇಂಗ್ಲಿಷ್ ಮೇಮ್ ಸಾಹೇಬರೇ ಥೇಟ್ ! ಅವರೆಲ್ಲರ ಬಳಿಯೂ ಕಂಪ್ಯೂಟರ್‌ಗಳಿವೆ. ಇನ್ನೂ ಏನೇನೋ ಇಟ್ಟುಕೊಂಡಿದ್ದಾರೆ, ಅವನ್ನೆಲ್ಲಾ ತರುತ್ತಾರೆ. ನನ್ನ ಮಗಳಿಗೆ ನಾನಿವೆಲ್ಲಾ ತೆಗೆಸಿಕೊಡಬಲ್ಲೆನೆ ! ಅಷ್ಟೇ ಅಲ್ಲ, ಅವರು ತಿನ್ನುವ ತಿನಿಸುಗಳು, ಕುಡಿಯುವ ಪೇಯಗಳು ರೇಖಾಗೆ ಎಲ್ಲಿಂದ ಬಂದಾವು ? ಅದೇನೋ ಬರ್ಗರ್ರು, ಪೆಪ್ಸಿ-ಕೋಕ್, ಇವೆಯಲ್ಲಾ ಅವೆಲ್ಲಾ ಯಾವಾಗಲೂ ಇರುತ್ತವೆ ಅವರ ಕೈಗಳಲ್ಲಿ. ಸಿನಿಮಾಗಳಿಗೆ ಬೇರೆ ಹೋಗುತ್ತಾರೆ. ಒಮ್ಮೆ ಹೋದರೆ ೨೦೦ ರೂಪಾಯಿ ಟಿಕೆಟ್ಟಂತೆ. ಇದೆಲ್ಲಾ ಬೇಕೆಂದರೆ ರೇಖಳಿಗೆ ಎಲ್ಲಿಂದ ತಂದುಕೊಡಲಿ ?''

ಅವಳ ಕೊರತೆ ನಿಜವಾದ್ದು. ಒಂದೆರಡು ಮನೆಗಳಲ್ಲಿ ಕೆಲಸ ಮಾಡಿ ತಿಂಗಳಿಗೆ ಆರೇಳು ಸಾವಿರ ರೂಪಾಯಿ ಸಂಪಾದಿಸುತ್ತಾಳೆ, ಜೊತೆಗೆ ವಿಚ್ಛೇದನದ ಬಾಬ್ತು ಮೂರು ಸಾವಿರ ಬರುತ್ತದೆ. ಹತ್ತು ಸಾವಿರದಲ್ಲಿ ದೆಹಲಿಯಲ್ಲಿ ನಾಲ್ಕು ಜನ ಜೀವನ ಸಾಗಿಸುವುದು ಹೇಗೆ, ಮಕ್ಕಳನ್ನು ಶಾಲಾ-ಕಾಲೇಜಿಗೆ ಕಳಿಸುವುದು ಹೇಗೆ ? ಅವಳು ಕೆಲಸ ಮಾಡುವ ಮನೆಗಳ ಒಡತಿಯರಿಂದ ಪಡೆಯುತ್ತಲೇ ಇರುವ ಸಾಲದ ಮೊತ್ತ ಹೆಚ್ಚುತ್ತಲೇ ಇರುತ್ತದೆ. ಹಾಗಿದ್ದರೂ ನಂದಿ ಸ್ವಲ್ಪ



ಸಾಗರ್ ಪ್ರಕಾಶನ


ಪುಟ: 456
ಬೆಲೆ: 250-00


ಪುಟ: 572
ಬೆಲೆ: 320-00


ಪುಟ: 744
ಬೆಲೆ: 390-00


ಪುಟ: 184
ಬೆಲೆ: 90-00


ಪುಟ: 488
ಬೆಲೆ: 260-00


ಪುಟ: 712
ಬೆಲೆ: 380-00


ಪುಟ: 810
ಬೆಲೆ: 430-00


ಪುಟ: 144
ಬೆಲೆ: 75-00


ಪುಟ: 480
ಬೆಲೆ: 240-00


ಪುಟ: 408
ಬೆಲೆ: 230-00


ಪುಟ: 576
ಬೆಲೆ: 300-00


ಪುಟ: 616
ಬೆಲೆ: 340-00


ಪುಟ: 112
ಬೆಲೆ: 50-00


ಪುಟ: 360
ಬೆಲೆ: 200-00


ಪುಟ: 754
ಬೆಲೆ: 375-00



ಕಾದಂಬರಿ ಸಾರ್ವಭೌಮ ಅ.ನ.ಕೃ.ರವರ ಎಲ್ಲಾ ಕೃತಿಗಳು ಮರುಮುದ್ರಣವಾಗಿವೆ.

e-mail : sagarprakashana@gmail.com

ಅದೃಷ್ಟವಂತಳು, ಏಕೆಂದರೆ ಅವಳಿಗೆ ತನ್ನದೇ 'ಮನೆ' ಇದೆ. ಹತ್ತಡಿ ಉದ್ದ, ಹತ್ತಡಿ ಅಗಲ. ನಮ್ಮ ಕಾಲನಿಗೆ ಬಹಳ ಹತ್ತಿರದ ಕೊಳಚೆ ಪ್ರದೇಶದಲ್ಲಿದೆ ಆ ಮನೆ. ಮನೆಯಾಚೆಗೆ ಅವರ ಬಚ್ಚಲು ಮನೆ. ಅದು ಸನಿಹದ ನಾಲ್ಕು ಕುಟುಂಬಗಳಿಗೂ ಒಂದೇ. ಅವಳಿಗೆ ಈ ಮನೆ ಇರಲಿಲ್ಲವೆನ್ನಿ, ಆಗ ರೇಖಳು ಕಾಲೇಜಿಗೆ ಹೋಗುವ ಬದಲು ಯಾರದೋ ಮನೆಗೆ ಕೆಲಸಕ್ಕೆ ಹೋಗಬೇಕಾಗಿರುತ್ತಿತ್ತು. ಅದರಿಂದ ನಾಲ್ಕು ಸಾವಿರ ಬಂದಿದ್ದೀತು ಮತ್ತು ಅದು ಬಾಡಿಗೆಗೆ ಸರಿಹೋಗುತ್ತಿತ್ತು. ಅವಳಂತೆ ಸಿಬಿಎಸ್‌ಇ ೧೨ನೇ ಇಯತ್ತೆಯಲ್ಲಿ ತೇರ್ಗಡೆಯಾಗಿರುವ ಎಷ್ಟೋ ಹೆಣ್ಣುಮಕ್ಕಳು ಹಾಗೆ ಮನೆ ಬಾಡಿಗೆ ದುಡಿಯಲು ಮನೆಗೆಲಸಗಳಿಗೆ ಹೋಗುತ್ತಿರುವುದನ್ನು ನಮ್ಮ ಕಾಲನಿಯಲ್ಲಿ ಒಂದು ಸುತ್ತು ಬಂದರೆ ಸಾಕು, ತಿಳಿಯುತ್ತದೆ. ಅದರಿಂದ ಅವರ ಮುಖದಲ್ಲಿ ವ್ಯಸನವೇನೂ ಸುಳಿಯುವುದಿಲ್ಲ, ಹೋಗಲಿ ಒಂದಿಷ್ಟು ಪ್ರಸಾಧನ ಸಾಮಗ್ರಿ ಕೊಳ್ಳಬಹುದಲ್ಲಾ ಎಂದು ಸಮಾಧಾನ ಮಾಡಿಕೊಳ್ಳುತ್ತಾರೆ.



ರೇಖಳ ವಿಷಯವು ನನಗೆ ಭೋಲುವನ್ನು ನೆನಪಿಸಿತು. ಅವನದು ಬಹಳ ಹಿಂದಿನ ಪರಿಚಯ. ೧೯೩೮ರಲ್ಲಿ ನಮ್ಮ ಕುಟುಂಬದ ಅಡುಗೆಯವನಾಗಿದ್ದ ಬಿಶೇನ್ ಮಿಶ್ರನ ಮಗ ಅವನು. ನಮ್ಮ ಮನೆಯ ಹಿಂದೆಯೇ ಇದ್ದ ಒಂದು ಕೋಣೆಯಲ್ಲಿ ಬಿಶೇನ್ ಕುಟುಂಬದ ವಾಸ. ಆಗ್ಗೆ ಅವನ ಸಂಬಳ ತಿಂಗಳಿಗೆ ಒಂಭತ್ತು ರೂಪಾಯಿಗಳು. ಭೋಲು ಮತ್ತು ನಾನು ಒಂದೇ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೆವು, ಯಾವಾಗಲೂ ಜೊತೆಯಲ್ಲೇ ಹೋಗಿ ಬಂದು ಮಾಡುತ್ತಿದ್ದೆವು. ಶಾಲೆ ಒಂದು ಮೈಲಿ ದೂರದಲ್ಲಿತ್ತು ಮತ್ತು ನಾವು ನಡೆದೇ ಹೋಗುತ್ತಿದ್ದೆವು. ನಮ್ಮ ಶಾಲೆಯಲ್ಲಿ ಸಮವಸ್ತ್ರ ಎಂಥದೂ ಇರಲಿಲ್ಲ. ಚೆಡ್ಡಿ ಮತ್ತು ಅಂಗಿ ಧರಿಸುತ್ತಿದ್ದೆವು. ಅಂಗಿಯ ಜೇಬಿನಲ್ಲಿ ಒಂದು ದಮ್ಮಡಿಯೂ ಇರುತ್ತಿರಲಿಲ್ಲ. ಸುತ್ತ ನೋಡಿದರೆ ಬಾಯಲ್ಲಿ ನೀರೂರುತ್ತಿತ್ತು. ಎಲೆಯ ದೊನ್ನೆಯಲ್ಲಿ ಮಸಾಲೆಪುರಿ ಹಾಕಿ ಮಾರುತ್ತಿದ್ದ ಒಬ್ಬ ಮುದುಕನಿದ್ದ. ರಸ್ತೆಯ ಬದಿಯಲ್ಲಿ ಅವನ ವ್ಯಾಪಾರ. ಒಂದು ದೊನ್ನೆಗೆ ಒಂದು ಬಿಡಿಕಾಸು, ಆದರೆ ಆ ಬಿಡಿಕಾಸು ನಮ್ಮ ಜೇಬುಗಳಲ್ಲಿ ಇರುತ್ತಿರಲಿಲ್ಲ. ನಮ್ಮ ತಂದೆ ಎಂದೂ ಅದಕ್ಕೆಂದು ಕಾಸು ಕೊಟ್ಟವನಲ್ಲ.

ಈ ಎರಡು ಕತೆಗಳು ಈಗೇಕೆನ್ನುತ್ತೀರಾ ? ರೇಖಾ ಮತ್ತು ಭೋಲುಗಳ ಪ್ರಪಂಚ ಎಷ್ಟು ಭಿನ್ನ ಎಂಬುದನ್ನು ತಿಳಿಯಲು, ಅಷ್ಟೆ. ಅಂದು ಬಿಶೇನ್ ಮಿಶ್ರ ಮತ್ತು ಅವನ ಮಗ ಭೋಲು ಇಂದಿನ ರೇಖಳಿಗಿಂತಲೂ ನಿಸೂರಾಗಿ ಜೀವನ ನಡೆಸುತ್ತಿದ್ದರು, ಕೇವಲ ಒಂಭತ್ತು ರೂಪಾಯಿಗಳಲ್ಲಿ. ಒಂಭತ್ತು ಸಾವಿರ ರೂಪಾಯಿಯಿಂದ ನಂದಿ ಮತ್ತು ರೇಖಾ ಅಂತಹ ಜೀವನ ನಡೆಸುವುದು ತೀರಾ ಅಶಕ್ಯ. ನಮ್ಮ ದೇಶದ ಬಡಜನರಿಗೆ ದೇಶದ ಸ್ವಾತಂತ್ರ್ಯ ಏನಾದರೂ ತಂದುಕೊಟ್ಟಿತೆ ? ಓಹೋ, ತಂದುಕೊಟ್ಟಿದೆ, ಎನ್ನುತ್ತಾರೆ. ಆದರೆ ನಿಜಕ್ಕೂ ಅವರಿಗೆ ಲಭಿಸಿರುವುದೇನು ? ಒಟ್ಟಾಗಿ ನೋಡಿದಾಗ ಆ ವರ್ಗದ ಜನ ಅಂದು ಬಾಳುತ್ತಿದ್ದರಲ್ಲ, ಆ ಕಾರ್ಪಣ್ಯದ ಜೀವನವೇನಾದರೂ ಇಲ್ಲವಾಗಿದೆಯೆ ? ಎಪ್ಪತ್ತು ವರ್ಷಗಳಲ್ಲಿ ಇದೇಯೇನು ನಮ್ಮ ಸಾಧನೆ ! ಭಾರತದ ನಗರಗಳಲ್ಲಿ ವಾಸಿಸುವ ನಂದಿ ಮತ್ತು ರೇಖಾಳಂತಹವರೆಲ್ಲರ ಜೀವನದ ಮಾದರಿ ಇದೇ. ಕತ್ತಿ ಅಲುಗಿನ ಮೇಲಿನ ಜೀವನ ಅವರದು. ಸದಾ ಸರಿದೂಗಿಸುವ ಹೋರಾಟ, ಸದಾ ಖಿನ್ನತೆ; ಅವರಿಗೆ ಶಾಂತಿಯಿಂದ ನಿದ್ದೆ ಮಾಡಿ ಕನಸು ಕಾಣುವ ಸೌಭಾಗ್ಯವೂ ಇಲ್ಲ. ಬಿಶೇನ್ ಮತ್ತು ಭೋಲು ಏನಿಲ್ಲವೆಂದರೂ ನಿದ್ದೆ ಮಾಡಿ ಕನಸು ಕಾಣಬಹುದಾಗಿತ್ತು.



ಈ ಬಿಶೇನ್ ಇದ್ದನಲ್ಲಾ, ಅವನು ಬ್ರಾಹ್ಮಣ ಜಾತಿಯವನು. ನಮ್ಮ ಮನೆಯಿದ್ದ ಓಣಿಯ ಬೇರೆ ಎರಡು-ಮೂರು ಮನೆಗಳಲ್ಲಿ ಬಿಶೇನ್‌ನಂತೆ ಕೆಲಸಗಳಲ್ಲಿದ್ದವರು ಮಧ್ಯಾಹ್ನದ ವೇಳೆ ಬಿಶೇನ್ ಬಳಿ ಒಂದು ಹರಟೆ ಮಹಾಸಭೆಯಲ್ಲಿ ನಿರತರಾಗುತ್ತಿದ್ದರು. ಈ ಸಭೆಗಳಿಗೆ ಅಧ್ಯಕ್ಷ ಯಾವಾಗಲೂ ಬಿಶೇನನೇ. ಏಕೆಂದರೆ ಅವನು ಬ್ರಾಹ್ಮಣ ತಾನೆ, ಅದಕ್ಕೆ. ಎಲ್ಲರೂ ಸೇರಿ ಹುಕ್ಕಾ ಸೇದುತ್ತಿದ್ದರು, ಆದರೆ ಆಯಾ ಜಾತಿಯವರದು ಆಯಾ ಜಾತಿಯವರಿಗೆ. ಹೀಗಾಗಿ, ಬಿಶೇನನದು ಯಾವಾಗಲೂ ಅವನಿಗೆ ಮಾತ್ರ. ಇವರ ಹರಟೆಯ ಸಭೆಗಳಲ್ಲಿ ನಾನೂ ಆಗಾಗ್ಗೆ ತೂರಿಕೊಂಡುಬಿಡುತ್ತಿದ್ದೆ.

ಭೋಲು ಇದ್ದನಲ್ಲ, ಅವನದು ನಿಶ್ಚಿಂತೆಯ ಸ್ವಭಾವ. ಸ್ನೇಹಿತರೊಡನೆ ಬೀದಿಗಳಲ್ಲಿ ಆಟವಾಡಿಕೊಂಡಿರುತ್ತಿದ್ದ. ಭವಿಷ್ಯದ ಬಗ್ಗೆ ಅವನಿಗೇನೂ ಯೋಚನೆ ಇರಲಿಲ್ಲವೆನಿಸುತ್ತದೆ. ಬಾಬು ಪದವಿಗೇರದಿರಬಹುದು, ಆದರೆ ಯಾವುದಾದರೂ ಕಚೇರಿಯಲ್ಲಿ ಜವಾನನ ಕೆಲಸಕ್ಕೇನೂ ಮೋಸವಿಲ್ಲವಲ್ಲ ಎಂಬ ಖಾತರಿ ಅವನಿಗೆ. ಅದೇನು ಅಷ್ಟು ಕೆಟ್ಟ ಅಥವಾ ಹೀನಾಯ ಕೆಲಸವೆ ? ಜೀವನ ಸಾಗಿಸಲು ಕೊರತೆ ಇರುವುದಿಲ್ಲ, ಸಾಕಷ್ಟು ಆರಾಮದಿಂದಲೇ ಬಾಳಬಹುದಲ್ಲ, ಎಂಬುದು ಅವನ ಆಶಯ.

ಸ್ವಾತಂತ್ರ್ಯಕ್ಕೆ ಈಗ ೬೫ ವರ್ಷ. ಬಡವರ್ಗದವರಿಗೆ ಅದು ತಂದುಕೊಟ್ಟಿರುವ ಮಹಾನ್ ಬಳುವಳಿ ಎಂಥದು ?

ಒಂದೆರಡು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳೋಣ : ರೇಖಾ ಒಬ್ಬ ಹುಡುಗಿ, ಭೋಲಾ ಒಬ್ಬ ಹುಡುಗ. ಇಬ್ಬರೂ ಬಡಕುಟುಂಬಗಳವರೇ. ಆದರೆ ಬಡತನವನ್ನು ಮಹಿಳಾ ವಿಮೋಚನೆಯ ಜೊತೆ ಕಲಬೆರಕೆ ಮಾಡಿ ನೋಡುವುದು ಬೇಡ. ಅದು ಬೇರೆಯೇ ವಿಚಾರ. ಚಾರಿತ್ರಿಕವಾಗಿ ಬೆಳೆದುಬಂದಿರುವ ಸಾಮಾಜಿಕ ಕಟ್ಟುಪಾಡುಗಳ ಒಂದು ಭಾಗ ಅದು. ಭೋಲಾ ಹುಡುಗ, ಹುಡುಗಿಯಲ್ಲ, ಎಂಬ ಕಾರಣದಿಂದ ಅವನು ನಿಶ್ಚಿಂತೆಯಿಂದಿದ್ದ ಎಂದು ಭಾವಿಸುವುದು ಸರಿಯಲ್ಲ. ನಮ್ಮ ದೇಶದ ಎಲ್ಲ ಆರ್ಥಿಕ ವ್ಯವಸ್ಥೆಗಳಡಿಯಲ್ಲೂ ಮಹಿಳೆಯರು ಅನಿವಾರ್ಯವಾಗಿ ಸಂಕಟಕ್ಕೆ ಸಿಲುಕಿದ್ದಾರೆ; ಆದರೆ ಬಿಡುಗಡೆಯ ಹಾದಿಯಲ್ಲಿ ಒಂದೊಂದೇ ಹೆಜ್ಜೆ ಇಡುತ್ತಲೂ ಬಂದಿದ್ದಾರೆ. ಬ್ರಿಟಿಷರ ಕಾಲದಲ್ಲಿ ಇದರ ಬೀಜ ಬಿತ್ತಲಾಯಿತು. ಕ್ರಮೇಣ ಸನ್ನಿವೇಶ ಬದಲಾಗುತ್ತಾ ಬಂದಿದೆ ಮತ್ತು ಎಂದಿದ್ದರೂ ಮಹಿಳೆಯು ಸಮಾಜದಲ್ಲಿ ಗೌರವ ಸ್ಥಾನ ಪಡೆದೇ ತೀರುತ್ತಾಳೆ. ಅದು ಅವಳ ಹಕ್ಕು. ಹಿಂದಿನ ಕಾಲದಲ್ಲಾಗಿದ್ದರೆ ವಿವಾಹ ವಿಚ್ಛೇದನ ಪಡೆದ ನಂದಿ ಏನು ಮಾಡಬೇಕಾಗುತ್ತಿತ್ತು? ಮೂರು ಹೆಣ್ಣುಮಕ್ಕಳ ಒಡಗೂಡಿ ಭಿಕ್ಷಾಟನೆಯಲ್ಲಿ ತೊಡಗಿರಬೇಕಾಗುತ್ತಿತ್ತು. ಆದರೆ ಇಂದು

[illegible] ವರ್ಗದ ನಡುವೆ ಸಾಕಷ್ಟು ಮರ್ಯಾದೆಯ ಸ್ಥಾನ ಪಡೆದು [illegible]ತ್ತಿದ್ದಾರೆ. ಅಂದರೆ, ಸಾಮಾಜಿಕವಾಗಿ ಅವರ ಸ್ಥಿತಿ ಸ್ವಲ್ಪ ಸುಧಾರಿಸಿದೆ.

ಆದರೆ ಆರ್ಥಿಕವಾಗಿ ಅವರ ಸ್ಥಿತಿ ಹೇಗಿದೆ ? ಅದಕ್ಕೆ ಉತ್ತರ ನೀಡುವಾಗ ಎರಡು ಅಭಿಪ್ರಾಯಗಳ ಮಧ್ಯೆ ಘರ್ಷಣೆ ನಡೆದಿದೆ. ಒಂದು ಬಣದವರ ಪ್ರಕಾರ ದೇಶವು ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತಿರುವಾಗ ಎಂಥ ಬಡವನಿಗೂ ಏನೋ ಒಂದಷ್ಟು [illegible] ಭಾಗ ಸಿಕ್ಕೇ ಸಿಕ್ಕುತ್ತದೆ. ನಮ್ಮಲ್ಲಿಯೂ ನೂರಾರು ಅಭಿವೃದ್ಧಿ ಯೋಜನೆಗಳಿವೆ. ನಗರಗಳು ಶೀಘ್ರವಾಗಿ ಮತ್ತು ಅಗಾಧವಾಗಿ ವಿಸ್ತರಿಸಿಕೊಳ್ಳುತ್ತಿರುವುದು ಕೂಡ ಅಂತಹ ಅಭಿವೃದ್ಧಿಯ ಭಾಗವಾಗಿಯೇ. ಇದರಿಂದಾಗಿ ಬಡವರಿಗೂ ಅಷ್ಟೋ ಇಷ್ಟೋ ಹೊಸಹೊಸ ನೌಕರಿಗಳು ಸಿಗುತ್ತಿವೆ. ಹಾಗಿಲ್ಲದಿದ್ದಿದ್ದರೆ ಅವರೆಲ್ಲಾ ಅವರವರ ಹಳ್ಳಿಗಳಲ್ಲೇ ಉಳಿದು ಸತ್ತು ಸುಣ್ಣವಾಗಿರುತ್ತಿದ್ದರು. ಆಗ ಅವರಿಗೆ ಆಹಾರವೂ ಇರುತ್ತಿರಲಿಲ್ಲ. ಮುಂದಿನ ದಿನಗಳ ಬಗ್ಗೆ ಭರವಸೆಯೂ ಇರುತ್ತಿರಲಿಲ್ಲ. ಆದ್ದರಿಂದ ಅಭಿವೃದ್ಧಿ ಒಳ್ಳೆಯದನ್ನೇ ಮಾಡಿದೆ ಎನ್ನಬೇಕಲ್ಲವೆ ? ಈ ಪ್ರಾಥಮಿಕ ಸೂಚನೆ ಅಥವಾ ತಿಳಿವನ್ನು ಯಾರೂ ತಳ್ಳಿಹಾಕುವುದಿಲ್ಲ. ಆದರೆ ಒಂದು ವಿಷಯ ನೆನಪಿನಲ್ಲಿಡೋಣ : ಇದೇನೂ ಹೊಚ್ಚಹೊಸ ಪ್ರಕ್ರಿಯೆಯಲ್ಲ. ಇತಿಹಾಸದುದ್ದಕ್ಕೂ ನಡೆದುಬಂದಿರುವ ಸಂಗತಿ ಇದು. ಊಳಿಗಮಾನ್ಯ ವ್ಯವಸ್ಥೆ ಇರಲಿ, ಸಾಮ್ರಾಜ್ಯಶಾಹಿ ವ್ಯವಸ್ಥೆ ಇರಲಿ, ಇಂತಹ ಬೆಳವಣಿಗೆ ಯಾವಾಗಲೂ ಘಟಿಸುತ್ತಲೇ ಬಂದಿದೆ. ಆರ್ಯರ ಸಮಾಜವನ್ನೇ ನೋಡಿ : ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಣದವರು ಪ್ರತಿಷ್ಠಿತ ಸ್ಥಾನದಲ್ಲಿ ಕೂಡುವಂತಹ ವ್ಯವಸ್ಥೆಯನ್ನು ರಚಿಸಿಕೊಂಡರು; ಅವರ ಸೇವೆ ಮಾಡಲು ವೈಶ್ಯ ಮತ್ತು ಶೂದ್ರರನ್ನು ನಿಯಮಿಸಿಕೊಂಡರು. ಇವರಿಗೆ ಪ್ರಜೆಗಳ ಸ್ವಾಭಾವಿಕ ಹಕ್ಕುಗಳು ಕೂಡ ಇರಲಿಲ್ಲ. ಇತಿಹಾಸ ಪೂರ್ವದ ಗ್ರೀಸ್, ರೋಮ್ ಮತ್ತು ಈಜಿಪ್ಟಿನ ಸಾಮ್ರಾಜ್ಯಗಳು ಆಫ್ರಿಕದ ವಿವಿಧೆಡೆಗಳಿಂದ ಕರಿಯ ಜನರನ್ನು ಎಳೆತಂದು ಗುಲಾಮರನ್ನಾಗಿ ನೇಮಿಸಿಕೊಂಡವು. ಎಳೆತಂದಿದ್ದು ಕೆಲವರನ್ನು, ತಾವಾಗಿಯೇ ಸ್ವಯಮಿಚ್ಛೆಯಿಂದ ಬಂದವರು ಇನ್ನು ಕೆಲ ಮಂದಿ. ಬ್ರಿಟಿಷ್ ಸಾಮ್ರಾಜ್ಯ ಮಾಡಿದ್ದೂ ಅದನ್ನೇ: ಜನರನ್ನು ಎರಡು ಅಂತಸ್ತಿನವರೆಂದು ವಿಭಜಿಸುವ ಪದ್ಧತಿಯನ್ನು



ಆರ್ಯರು ಅನುಷ್ಠಾನಕ್ಕೆ ತಂದಿದ್ದರಲ್ಲ ಹಾಗೆ, ಬ್ರಿಟಿಷರು ವಿಶ್ವದ ಬೇರೆಡೆಗ ಸ್ಥಾಪಿಸಿಕೊಂಡಿದ್ದ ತಮ್ಮ ವಸಾಹತುಗಳಿಗೆ ಭಾರತದಿಂದ ಜನರನ್ನು ಸೆಳೆದೊಯ್ಯು ಎರಡು ಅಂತಸ್ತಿನ ಜನರನ್ನೂ ಒಯ್ದರು. ಭಾರತದ ವೈದ್ಯರು, ವ್ಯಾಪಾರಿಗ ಶಿಕ್ಷಕರು, ಬಾಬುಗಳು ಒಂದು ಕಡೆ; ಸಾಮಾನ್ಯ ಸೇವಕರಂತೆ ದುಡಿಯುವ ಇನ್ನೊಂದು ಕಡೆ. ಉತ್ತರ ಮತ್ತು ದಕ್ಷಿಣ ಅಮೆರಿಕಾಗಳಲ್ಲಿ ನೆಲೆಸಿದ ಬಿಳಿಯ ಆಫ್ರಿಕದ ಗುಲಾಮರನ್ನು ಅರಬ್ಬೀ ವ್ಯಾಪಾರಿಗಳಿಂದ ಕೊಂಡು ತಂದರು. ಅ ಲಕ್ಷಗಟ್ಟಲೆ ಸಂಖ್ಯೆಯಲ್ಲಿ. ಗುಲಾಮರನ್ನು ಹಿಡಿದು ಮಾರಾಟ ಮಾಡುತ್ತಿದ್ದ ಅರಬ್ಬ ಅದು ಸುಗ್ಗಿಯ ಕಾಲ. ಈ ಗುಲಾಮರ ಕೆಲಸ ಏನಾಗಿತ್ತು? ಹತ್ತಾರು ಅಭಿ ಯೋಜನೆಗಳಲ್ಲಿ ದುಡಿಯುವುದು. ಅದಕ್ಕೆ ಅವರಿಗೇನಾದರೂ ಕೂಲಿ ದೊರೆಯ ಸುತರಾಂ ಇಲ್ಲ. ಅಮೆರಿಕಾಗಳು ಇಂದು ಸಮೃದ್ಧವಾಗಿರುವುದಕ್ಕೆ ಅದೇ ಕಾರಣ.

ಭಾರತದಲ್ಲಿ 'ಗುಲಾಮಿ ದುಡಿಮೆಗಾರರು' ಎಂದು ಕರೆಯುದಿದ

ಂತಹದ್ದೊಂದು ತಂಡವನ್ನು ಆರ್ಯರ ಕಾಲದಿಂದಲೂ ಲಕ್ಷಣವಾಗಿ ಳೆಸಿಕೊಂಡು ಬರಲಾಗಿದೆ. ಹಾಗೆ ಮಾಡಲು ನಮಗೆ ಬೇರೆಯವರಿಂದ ಾರವೇನೂ ಬೇಕಾಗಿರಲಿಲ್ಲ. ಸಾಮಾನ್ಯ ಮನುಷ್ಯಜೀವಿಗಳನ್ನು ಸದಾ ಭಾರ ೊರುವ ಕತ್ತೆಗಳನ್ನಾಗಿ ಮಾಡಿಕೊಳ್ಳುವ ಬರ್ಬರ ಪದ್ಧತಿ ನಮ್ಮಲ್ಲಿ ಅನೂಚಾನವಾಗಿ ಡೆದುಬಂದಿದೆ. ಆಧುನಿಕ ಲೇಪ ಬಳಿದು ಅದನ್ನು ಇಂದಿನ ಸನ್ನಿವೇಶಕ್ಕೆ ಹೇಗೆ ಗ್ಗಿಸಿಕೊಂಡಿದ್ದೇವೆ ಎಂಬುದಷ್ಟೇ ನಾವಿಂದು ಹೊಸದಾಗಿ ಅಭ್ಯಾಸ ಮಾಡಿ ವಿಶ್ಲೇಷಣೆ ಾಡಿಕೊಳ್ಳಬೇಕಾಗಿರುವುದು : ಅದೇ ದುರುಳ ವ್ಯವಸ್ಥೆ, ಅದೇ ಅಗಾಧ ವ್ಯಾಪಕ ೋಷಣೆ, ಅದೇ ಅಪಾರ ಉತ್ಪಾದನೆ ಮತ್ತು ಲಾಭ, ಅದೇ ಅಸಹಾಯಕ ೂಲಿಯಾಳುಗಳು ಮತ್ತು ಅದೇ ಕನಿಷ್ಠ ಕೂಲಿ; ಆದರೆ ನವೀನ ಕುತಂತ್ರ ಾಧನಗಳು, ನೂತನ ಆರ್ಥಿಕ ಸಿದ್ಧಾಂತಗಳು ಮತ್ತು ಆಧುನಿಕ ತಂತ್ರಜ್ಞಾನ. ಅಷ್ಟೇ ್ತ್ಯಾಸ. ಇಂದು ನಮ್ಮ ದೇಶದಲ್ಲಿ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಈ ದಿಕ್ಕಿನಲ್ಲಿ ಭಸದಿಂದ ಸಾಗುತ್ತಿದ್ದೇವೆ. ಕಟ್ಟಕಡೆಯ ತೀವ್ರ ಹೆಜ್ಜೆಗಳು ಮಾತ್ರ ಬಾಕಿ ಉಳಿದಿವೆ. ಾಮಾಜಿಕ ಉತ್ಪಾತವೊಂದು ಅದನ್ನು ತಡೆಯದಿದ್ದರೆ ಕರಾಳ ಭವಿಷ್ಯ ಕಾದಿದೆ.

ಹೋಗಲಿ, ೧೯೩೦ರ ದಶಕದಲ್ಲಿ ನಂದಿಯಂತೆ ಮನೆಗೆಲಸ ಮಾಡುತ್ತಿದ್ದವರಿಗಿಂತ ಂದಿನ ನಂದಿಯಂಥವರು ಸಾವಿರಪಟ್ಟು ಹೆಚ್ಚು ಕೂಲಿ ಪಡೆಯುತ್ತಿದ್ದಾರಲ್ಲ, ದನ್ನವರು ವೆಚ್ಚ ಮಾಡುವುದು ಹೇಗೆ ? ಅರ್ಧಕ್ಕೂ ಹೆಚ್ಚು ಅವರ ತಿಂಡಿ, ಊಟ, ರಿಗೆ, ಸೀಮೆಯೆಣ್ಣೆ, ಅನಿಲ, ಇವಕ್ಕೆ ಬೇಕು. ಮನೆಯಿಲ್ಲದವರಿಗೆ ಅದು ನ್ನೊಂದು ಬಾಬ್ತು. ಇವರ ಖರ್ಚಿನ ಎಲ್ಲ ಬಾಬ್ತುಗಳಲ್ಲೂ ಆಧುನಿಕ ನಾಗರಿಕತೆಯ ಂಶಗಳಿವೆ; ಅವುಗಳ ಪ್ರಮುಖ ಫಲಾನುಭವಿಗಳು ಕಂಟ್ರಾಕ್ಟುದಾರರು : ಮನೆ ಟ್ಟಿಸುವವರು, ಸಿಮೆಂಟ್ ಉತ್ಪಾದಕರು, ಉಕ್ಕು ತಯಾರಕರು, ಇತ್ಯಾದಿ. ವುಗಳಿಂದಲ್ಲವೆ ದೊಡ್ಡ ನಗರಗಳ ನಿರ್ಮಾಣ ಸಾಧ್ಯವಾಗುವುದು ? ಎಲ್ಲ ೀವನಾವಶ್ಯಕ ವಸ್ತುಗಳ ವಿತರಣೆಯೂ ಅವರ ಕೈಯ್ಯಲ್ಲಿರುತ್ತದೆ : ನೀರು, ವಿದ್ಯುತ್, ರಿಗೆ, ವ್ಯಾಪಾರ, ಸಿನಿಮಾ, ಹೊಟೇಲ್, ಅನಿಲ, ಹೀಗೆ ಎಲ್ಲವೂ ಅವರ ಯಂತ್ರಣದಲ್ಲೇ. ಇವೆಲ್ಲಾ ಹೇಗೋ ''ಅವಶ್ಯಕ'' ಎಂಬುದರಡಿ ಸೇರಿಬಿಟ್ಟಿವೆ. ಈ ವಶ್ಯಕ ವಸ್ತುಗಳ ಸರಬರಾಜು ನಿಜಕ್ಕೂ ಲಾಭ ಉಂಟುಮಾಡುವುದು ಶ್ರೀಮಂತರಿಗೆ. ಗರಗಳಲ್ಲಿ ಜೀವನವು ಒಂದು ರೀತಿಯಲ್ಲಿ ರೈಲ್ವೆ ಪ್ರಯಾಣವಿದ್ದಂತೆ. ಬಡವರು ಲಿನ ಚಾವಣಿಯ ಮೇಲೆ ಮತ್ತು ಏನಾದರೂ ಅಪಘಾತವುಂಟಾದರೆ ಅದಕ್ಕೆ ಅವರೇ ವಾಬ್ದಾರರು. ರೈಲಿನ ಮೇಲಿನಿಂದ ಅವರು ಉರುಳಿಬೀಳದಂತೆ ತಡೆಯಲು ಾವಣಿಯ ಸುತ್ತ ಕಂಬಿಗಳಿಲ್ಲ, ಮುಂದೆ ಸೇತುವೆಯೋ ಸುರಂಗವೋ ಬರಲಿದೆ ಂದು ಎಚ್ಚರ ನೀಡುವ ವ್ಯವಸ್ಥೆಯೂ ಇಲ್ಲ. ಮೊದಲೇ ತಿಳಿದರೆ ತಲೆಯನ್ನು ಗ್ಗಿಸಿಯಾದರೂ ಕೂಡಬಹುದೇನೊ, ಆದರೆ ಅಂತಹ ಸೂಚನೆ ಇರುವುದಿಲ್ಲ. ಗರದ ವ್ಯವಸ್ಥೆಯಲ್ಲಿ ಏನಾದರೊಂದು ಹೊಸ ''ಸೌಲಭ್ಯ'' ಕಲ್ಪಿಸಿದರೆ ಬಡವರ ೕಲೆ ಶ್ರೀಮಂತರು ಹೇರುವ ಹೊರೆ ಇನ್ನಷ್ಟು ಹೆಚ್ಚುತ್ತದೆ. ಯಾವುದೇ ಸೌಕರ್ಯ ಂದರೂ ಅದನ್ನು ಕಿತ್ತುಕೊಂಡು ತಮ್ಮದನ್ನಾಗಿಸಿಕೊಳ್ಳಲು ಹಾತೊರೆಯುವ ಪ್ರತಿಷ್ಠಿತರ ಂದು ವರ್ಗ ಹಠಾತ್ತನೆ ತಲೆಯೆತ್ತುತ್ತದೆ; ಅದರಿಂದಾಗಿ ಬಡವರು ಇನ್ನೂ ಹೆಚ್ಚು ತ್ತಲೆಯ ಮೂಲೆಗೆ ತಳ್ಳಲ್ಪಡುತ್ತಾರೆ. ಕಡೆಗೆ ನಗರದ ಹೊರವಲಯದಲ್ಲಿರಬಹುದಾದ ಂದು ಕೊಂಪೆಗೋ ಕೊಳೆಗೇರಿಗೋ ತೊಲಗಬೇಕು, ಅಷ್ಟೆ. ಹಾಗಾದಾಗ ಅವರ ರಿಗೆ ವೆಚ್ಚ ವಿಪರೀತ ಹೆಚ್ಚಾಗುತ್ತದೆ, ಪ್ರಯಾಣದ ಸಮಯ ಹೆಚ್ಚುತ್ತದೆ, ೂಕುನುಗ್ಗಲಿನ ಬಸ್ಸುಗಳಲ್ಲಿ ಇನ್ನಷ್ಟು ನೋವು ಬರಿಸಿಕೊಳ್ಳುತ್ತಾರೆ. ಸಂಪಾದನೆಗಾಗಿ ೕಸಲಾದ ಸಮಯದಲ್ಲಿ ಕಡಿತ ಉಂಟಾಗಿ ಸಂಪಾದನೆಯೂ ಕುಗ್ಗುತ್ತದೆ. ಕೂಲಿ ಡಿಮೆಯಾಯಿತು, ವೆಚ್ಚ ಜಾಸ್ತಿಯಾಯಿತು. ಕತ್ತರಿಯ ಮಧ್ಯೆ ಸಿಲುಕಿದ್ದು ಸಾಲದೆ !

ಇಷ್ಟೆಲ್ಲಾ ಕಷ್ಟಗಳ ನಡುವೆಯೂ ಮನೆಗೆಲಸದ ಮಹಿಳೆಯರು ಮತ್ತು ಅವರ ರೀಕರಾದ ಪುರುಷರು ಶ್ರೀಮಂತರನ್ನು ಅನುಕರಿಸಲೆಂದೇ ತಮ್ಮ ವರಮಾನದ ಕಾಲು ಗದಷ್ಟನ್ನಾದರೂ ವ್ಯಯ ಮಾಡುತ್ತಾರೆ. ನಾನು ವಾಸಿಸುವ ಕಾಲನಿಯ ಆಸುಪಾಸಿನಲ್ಲಿ ರುವ ಮೂವತ್ತು ಅಥವಾ ಅದಕ್ಕಿಂತಲೂ ಕಡಿಮೆ ವಯಸ್ಸಿನ ಮನೆಗೆಲಸದ ಹಿಳೆಯರ ಪೈಕಿ ಸೌಂದರ್ಯವರ್ಧನೆಗಾಗಿ 'ಪಾರ್ಲರ್'ಗಳಿಗೆ ಹೋಗದವರು ಲ್ಲವೇ ಇಲ್ಲ ಎನಿಸುತ್ತದೆ. ಸ್ವತಃ ನನ್ನ ಮನೆಯಲ್ಲಿ ಕೆಲಸ ಮಾಡುವಾಕೆ ಅನೇಕ ಸಾಧನ ಸಾಮಗ್ರಿಗಳನ್ನು ತನ್ನ ಸ್ನಾನದ ಕೋಣೆಯಲ್ಲಿ ತುಂಬಿಕೊಂಡಿದ್ದಾಳೆ. ಆಕೆಯ ಸ, ಊಟೋಪಚಾರ, ಎಲ್ಲಾ ನಮ್ಮ ಮನೆಯಲ್ಲೇ ಆದ್ದರಿಂದ ಅವನ್ನು ಇಲ್ಲೇ ಇರಿಸಿ ಳ್ಳುವುದು ಅನಿವಾರ್ಯ. ಆ ಪ್ರಸಾಧನಗಳ ಪರಿಚಯ ಆಕೆಗಾಗುವುದು ಟಿ.ವಿ. ಜಾಹಿರಾತುಗಳಿಂದ. ಯಾರಾದರೂ ನೋಡಿದರೆ ಅವೆಲ್ಲಾ ನಮ್ಮ ಮನೆಯವರದೇ ಪ್ರಸಾಧನ ಸಾಮಗ್ರಿಗಳು ಎಂದುಕೊಳ್ಳಲು ಅಡ್ಡಿ ಇಲ್ಲ. ಒಂದು ವರ್ಷದ ಹಿಂದೆ ಆಕೆಯ ಖರ್ಚು ಅನಿರೀಕ್ಷಿತವಾಗಿ ಹಲ್ಲುಗಳ ರಕ್ಷಣೆಗೆ ಹೋಯಿತು. ಮುಂದಿನ ಹಲ್ಲುಗಳನ್ನು ಸ್ವಲ್ಪ ಹಿಂದಕ್ಕೆ ತಳ್ಳಿಸಿಕೊಳ್ಳಲು ಎಂದಳಾಕೆ. ಎರಡು ತಿಂಗಳ ಪೂರ್ತಿ ಸಂಬಳ ಅದಕ್ಕೆ ಹೋಯಿತು. ಆಕೆಯ ರಜಾ ದಿನಗಳಲ್ಲಿ ಆಕೆಗೆ ನಮ್ಮ ಮನೆಯ ಊಟ ಬೇಡ; ಸ್ನೇಹಿತರ ಜೊತೆ ಎಲ್ಲಾದರೂ ರೆಸ್ಟೊರೆಂಟ್‌ಗೆ ಹೋಗಿಬರುತ್ತಾಳೆ. ಅದರಿಂದ ನನಗೇನೂ ಅಸಮಾಧಾನವಿಲ್ಲ, ಆದರೆ ಆಕೆಯ ಬೇರೆ ಅಗತ್ಯಗಳ ಪೂರೈಕೆಗ ಮುಗ್ಗಟ್ಟು ತಪ್ಪಿದ್ದಲ್ಲವೆಂದು ನನಗೆ ಸದಾ ಗೋಚರಿಸುತ್ತಿರುತ್ತದೆ.

ನಮ್ಮ ಮನೆಯ ಸುತ್ತಮುತ್ತ ಇರುವ ಮನೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಯಾರೂ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳಿಸುತ್ತಿಲ್ಲ. ನಾಯಿಕೊಡೆಗಳಂತೆ ಎದ್ದಿರುವ ಖಾಸಗಿ ಶಾಲೆಗಳಿಗೆ ಸುರಿಮಳೆ. ಸಾರ್ವಜನಿಕ ಅಗತ್ಯ ಪೂರೈಸಲು ಅವನ್ನು ಸ್ಥಾಪಿಸಲಾಗುತ್ತಿದೆ ಎನ್ನುತ್ತಾರೆ. ಹೀಗೆ ಖಾಸಗಿ ಶಾಲೆಗಳಲ್ಲಿ ಮಕ್ಕಳು ತಮಗಿಂತಲೂ ಮೇಲಿನ ವರ್ಗದ ಮಕ್ಕಳ ಚಟಗಳನ್ನು ಹಚ್ಚಿಕೊಳ್ಳುತ್ತಾರೆ : ಚಾಕೊಲೇಟ್, ಕೋಕ್,



ನೀರಿನ ಬಾಟಲ್, ಐಸ್ ಕ್ರೀಂ, ಪೀತ್ಸ, ಇತ್ಯಾದಿ. ಕೆಲಸದಾಕೆ ಈ ಖರ್ಚನ್ನು ಹೇಗೆ ನಿಭಾಯಿಸಬೇಕು ? ಮಕ್ಕಳು ಉನ್ನತ ಶಿಕ್ಷಣ ಪಡೆಯುವ ಹಂತ ಮುಟ್ಟಿದಾಗ ಮುಗ್ಗಟ್ಟು ಇನ್ನೂ ಹೆಚ್ಚಿನದು. ಆ ಖಾಸಗಿ ಕಾಲೇಜುಗಳು ಈ ವರ್ಗದ ಕೈಗೆ ಎಟುಕಬಲ್ಲವೆ ? ಮನೆಯಲ್ಲಿ ಯಾರಿಗಾದರೂ ಅನಾರೋಗ್ಯ ತಟ್ಟಿದರೆ ಅವರು ಖಾಸಗಿ ವೈದ್ಯರ ಬಳಿಯೇ ಹೋಗಬೇಕು; ಸರ್ಕಾರಿ ಆಸ್ಪತ್ರೆಗಳಿಲ್ಲ, ಇದ್ದರೂ ಅಲ್ಲಿಗೆ ಹೋಗಲು ಇಚ್ಛೆ ಬಾರದು. ಇವರಿಗೆ ಅನಾರೋಗ್ಯ ಅಪರೂಪವಲ್ಲ, ಏಕೆಂದರೆ ಅವರ ಜೀವನ ಕಲುಷಿತ ಪರಿಸರದಲ್ಲೇ ಸಾಗಬೇಕು.

ಅಗಾಧ ನಗರೀಕರಣದ ಈ ಇಡೀ ಪ್ರಕರಣದಲ್ಲಿ ಯಾರೂ ಅಷ್ಟಾಗಿ ಗಮನಿಸಲು ಹೋಗದ ಒಂದಂಶವಿದೆ : ಬಹುರಾಷ್ಟ್ರೀಯ ಕಂಪನಿಗಳ ಕೈವಾಡ ಎಂಬುದೇ ಆ ಅಂಶ. ಅಷ್ಟೋ ಇಷ್ಟೋ ಗಳಿಸಿದ ಹಣವನ್ನೆಲ್ಲಾ ಬಡವರು ಸುರಿಯುವುದು ಇವುಗಳ ಹೊಲಸು ಬಾಯೊಳಕ್ಕೆ. ಅವುಗಳ ಉತ್ಪನ್ನಗಳನ್ನು ಕೊಂಡು ಈ ಬಡವರು ಅವರಿಗಾಗಿ ಪುಕ್ಕಟೆ ದುಡಿಮೆಯ ಶ್ರಮ ನೀಡುತ್ತಿದ್ದಾರೆ. ಆ ಕಂಪನಿಗಳು ಮತ್ತು ಅವುಗಳ ಅಧೀನ ದಲ್ಲಿರುವ ಭಾರತೀಯ ಕಂಪನಿಗಳು ನಗರ ಎನಿಸಿಕೊಂಡ ದೊಡ್ಡ ಊರಿನ ಎಲ್ಲ



ಸಾಮಗ್ರಿಗಳನ್ನೂ ತಯಾರಿಸುತ್ತವೆ, ಮಾರಾಟ ಮಾಡುತ್ತವೆ. ಇದನ್ನೆಲ್ಲ ಸಾರ್ವಜನಿಕ ವಲಯದಡಿ ಸರ್ಕಾರವೇ ಮಾಡಬೇಕಿತ್ತು, ಆದರೆ ಅದೆಲ್ಲವನ್ನೂ ಖಾಸಗಿ ಕ್ಷೇತ್ರದ ಸುಪರ್ದಿಗೆ ವರ್ಗಾಯಿಸಿಬಿಟ್ಟಿದ್ದಾರೆ.

ಒಂದೊಂದು ನಗರ ದೊಡ್ಡದಾದಾಗಲೂ ಉನ್ನತ ವರ್ಗವು ಅದರ ಮೇಲಿನ ಹಿಡಿತವನ್ನು ಹೆಚ್ಚಿಸಿಕೊಳ್ಳುತ್ತದೆ, ವ್ಯಾಪಕಗೊಳಿಸಿಕೊಳ್ಳುತ್ತದೆ, ತನ್ನ ಸಂಪತ್ತನ್ನು ಪ್ರದರ್ಶನಕ್ಕಿಡುತ್ತದೆ. ಒಂದೊಂದು ಬೀದಿಯಲ್ಲೂ ದೊಡ್ಡ ವ್ಯಾಪಾರಿ ಮಳಿಗೆಗಳು. ಅವನ್ನು 'ಶಾಪಿಂಗ್ ಮಾಲ್' ಎನ್ನುತ್ತಾರೆ. ಬೆಂಕಿಪೊಟ್ಟಣ, ಉಪ್ಪು, ಸಕ್ಕರೆ, ಗೋಧಿ ಹಿಟ್ಟು, ಎಲ್ಲಕ್ಕೂ ಈ ಮಾಲ್‌ಗಳ ಸರಪಳಿಯ ಅಂಗಡಿಗಳೇ. ಅವುಗಳ ಮಾಲೀಕರು ಬಿರ್ಲಾಗಳು, ಅಂಬಾನಿಗಳು, ಇತ್ಯಾದಿ. ಹೀಗಿರುವಾಗ ಚಿಕ್ಕ ಖಾಸಗಿ ಅಂಗಡಿಗಳಿಗೆ ಉಳಿಗಾಲವೆಲ್ಲಿ? ಅವರು ದಿನನಿತ್ಯದ ಅಗತ್ಯಗಳ ಪೂರೈಕೆಗೆ ಸರಕುಗಳನ್ನು ಉತ್ಪಾದಿಸಲಾಗಲಿ, ಮಾರಾಟ ಮಾಡುವುದಾಗಲಿ, ಸಾಧ್ಯವಿಲ್ಲವಾಗಿಹೋಗಿದೆ. ಇತ್ತೀಚೆಗಷ್ಟೆ ನಡೆದ ಪ್ರಸಂಗ ಇದು : ಭಾರತದ ಅತಿದೊಡ್ಡ ಕಂಪನಿ, ಸಿಹಿ ಮತ್ತು ಖಾರ ತಿಂಡಿಗ[ಳನ್ನು] ಮಾಡಿ ಮಾರುಕಟ್ಟೆಗೆ ತುಂಬಿಸುತ್ತಿದ್ದ ಕಂಪನಿ, ಮೊನ್ನೆ ಮೊನ್ನೆ ಒಂದು ಬಹುರಾಷ್ಟ್ರೀ[ಯ] ಕಂಪನಿಯ ಅಧೀನಕ್ಕೊಳಗಾಯಿತು. ಈ ಕಂಪನಿಯು ಈಗಾಗಲೇ ಕೃಷಿ ಕ್ಷೇ[ತ್ರಕ್ಕೆ] ಕಾಲಿಟ್ಟಿದೆ. ಹೂವು-ಹಣ್ಣು ಉತ್ಪಾದಿಸಲಿದೆ, ದವಸ-ಧಾನ್ಯ ಬೆಳೆಯುತ್ತದೆ. ನಗ[ರ] ನಿವಾಸಿಗಳಿಗೆ ಈ ಕಂಪನಿಯ ಉತ್ಪನ್ನಗಳೇ ಪ್ರಿಯ; ನಾಜೂಕಾಗಿ ಪ್ಯಾಕ್ ಮಾ[ಡು]ತ್ತಾರಲ್ಲಾ ಅದಕ್ಕೆ. 'ಆಹಾ' ಎನ್ನಬೇಕಾದರೆ ನೋಟ ಸೊಗಸಾಗಿರಬೇಕಲ್ಲವೆ!


ಸಣ್ಣ ವ್ಯಾಪಾರಿ, ರೈತ, ಉದ್ಯಮಿ, ಎಲ್ಲರೂ ಹೊರದೂಡಲ್ಪಡುತ್ತಿ[ದ್ದಾರೆ]. ಅವರೊಂದಿಗಿರುತ್ತಿದ್ದ ಮಧ್ಯಮ ವರ್ಗಕ್ಕೆ ಅಡಗಿಕೊಳ್ಳಲು ಬೇರೆ ತಾಣ ದೊರೆ[ಯು]ವಂತಿಲ್ಲ, ಅವರೂ ಸದ್ಯದಲ್ಲೇ ಒಂದು ದಿನ ಯಾವುದಾದರೂ ಕೊಳಚೆ ಪ್ರದೇ[ಶದ] ಮುರುಕಲು ಸೂರಿನಡಿ ತಲೆಮರೆಸಿಕೊಳ್ಳಬೇಕು, ಅಷ್ಟೆ. ನೀವಿದನ್ನು ನಂಬಬಲ್ಲಿ[ರಾ?] ಕಳೆದ ಐವತ್ತು ವರ್ಷಗಳಲ್ಲಿ ದೆಹಲಿಯ ಮನೆ ನಿವೇಶನಗಳ ಬೆಲೆ ಒಂದು ಲಕ್ಷ[...] ಹೆಚ್ಚಿದೆ, ಗೊತ್ತೆ? ಚೆನ್ನಾಗಿ ಸಂಯೋಜಿಸಲ್ಪಟ್ಟ ಕಾಲನಿಗಳಲ್ಲಿ ನಿವೇಶನಗಳ[...] ಒಂದು ಕಾಲಕ್ಕೆ ಚದರ ಮೀಟರ್‌ಗೆ ೧೦ ರೂಪಾಯಿಗಳಷ್ಟಿತ್ತು; ಅದೇ ಈಗ [...] ಮೀಟರ್‌ಗೆ ಹತ್ತು ಲಕ್ಷ ರೂಪಾಯಿಗಳಿಗೇರಿದೆ. ಅಲ್ಲಿ ಯಾರು ವಾಸಿಸಬೇ[ಕು?] ಅತ್ಯಂತ ಶ್ರೀಮಂತರಲ್ಲದವರಿಗೆ ಅಲ್ಲಿ ನಿವೇಶನ ಕೊಳ್ಳಲಾದೀತೆ? ಅಂ[...] ಪ್ರಜ್ಞಾಪೂರ್ವಕವಾಗಿ ನಾವಿಂದು ಶ್ರೀಮಂತರು ಮಾತ್ರವೇ ಬಾಳುವೆ ನಡೆಸಲು [...]ವಾಗುವಂತಹ ಸಮಾಜ ನಿರ್ಮಿಸುತ್ತಿದ್ದೇವೆ. ಅವರಿಗೆ ಮಾತ್ರ ಜೀವಿಸುವ ತಾ[...] ಬಡಜನರ ಭಾರಿ ಸಮುದಾಯವು ಆ ಶ್ರೀಮಂತ ವರ್ಗದ ಸೇವೆಯಲ್ಲಿ ಹಿಂದಿನ ಕಾ[ಲದ] ಶೂದ್ರರಂತೆ ಜೀವ ಸವೆಸಬೇಕು : ಅವರಿಗೆ ಯಾವ ಹಕ್ಕುಗಳೂ ಇಲ್ಲ, ಅ[...] ನಿರೀಕ್ಷೆಯೂ ಕೂಡದು. ಸಂವಿಧಾನವು ಬೇಕಾದ್ದು ಹೇಳಿಕೊಳ್ಳಲಿ, ನಮ್ಮದು ವ[...] ಪ್ರಭುತ್ವವಾದಿ ಕಾನೂನು ಎಂದು ಎಷ್ಟು ಬೇಕಾದರೂ ಅರಚಿಕೊಳ್ಳಲಿ, ಕಟು ವಾ[ಸ್ತವ] ಇದೇ ಆಗಲಿದೆ. ಹಾಗಾಗಲು ಬಿಟ್ಟು ನಾವು ತಟಸ್ಥರಾಗಿ ಉಳಿಯುವುದು ಸಾಧುವೆ?

ಎಂ. ಬಿ. ಲಾಲ್
'ದಿ ಸ್ಟೇಟ್ಸ್‌ಮನ್' ಪತ್ರಿಕೆ ಮಾಜಿ ಸಹ-ಸಂಪಾದಕ, ಡಿ-೩೦, ಪ್ರೆಸ್ ಎನ್‌ಕ್ಲೇವ್, ಸಾಕೇತ್, ನವದೆಹಲಿ -

ಕ್ರಿಸ್ತಕಾವ್ಯ – ಅವಲೋಕನ

ವಿಲಿಯಂ ಸಾಗರ ಅವರು ಸ್ವಲ್ಪವೂ ಸದ್ದಿಲ್ಲದೆ ಸಾಹಿತ್ಯ ಕೃಷಿ ಮಾಡುತ್ತಿರುವವರು. ಡಾ|| ನಾ. ಡಿಸೋಜರವರ ಒಡನಾಟದಿಂದ ಅವರ ಸಾಹಿತ್ಯ ಪ್ರೀತಿ ವಿಸ್ತಾರಗೊಂಡಿದೆ.

ಜಾತಿ-ಮತ-ಧರ್ಮ-ಪಂಥಗಳ ಹೆಸರಿನಲ್ಲಿ ನಾನಾ ರೀತಿಯ ಸಂಘರ್ಷ ಅತಿಯಾಗಿ ನಮ್ಮ ಸಮಾಜವನ್ನು ಕಾಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ಭಾವನೆಗಳನ್ನು ಶುದ್ಧೀಕರಿಸುವ ಪವಿತ್ರ ಕೆಲಸವನ್ನು ಈ ಗ್ರಂಥ ಮಾಡಬಲ್ಲದ್ದಾಗಿದೆ. ಮೊದಲಿಗೆ ವಿಲಿಯಂ ಅವರು ಬಹು ಮೌಲಿಕವಾದ ಪ್ರಸ್ತಾವನೆ ರೂಪದ ಪ್ರಬಂಧ ಬರೆದಿದ್ದಾರೆ. ಈ ಮುನ್ನುಡಿಯ ಅಪಾರವಾದ ವಿದ್ವತ್ತನ್ನು ಡಾ|| ಯು. ಆರ್. ಅನಂತಮೂರ್ತಿ ಮೆಚ್ಚಿಕೊಂಡು ಬೆನ್ನುಡಿ ಬರೆದಿದ್ದಾರೆ.



ಮಹಾತ್ಮ ಗಾಂಧೀಜಿ ಕುರಿತ ಸಂಕಲನ 'ಅಮರನಾದೈ ತಂದೆ' ಕವನ ಸಂಕಲನದ ನಂತರ ಬಂದ ಏಕವ್ಯಕ್ತಿ, ಏಕವಸ್ತು ಕುರಿತು ಬಂದ 'ಕ್ರಿಸ್ತಾಂಜಲಿ' (೧೯೭೩) ತಮ್ಮ ಮೇಲೆ ಬೀರಿದ ಪ್ರಭಾವದ ಕುರಿತು ವಿಲಿಯಂ ಬರೆದಿದ್ದಾರೆ.

ಇಡೀ ಸಂಕಲನ ೭ ಭಾಗಗಳಿಂದ ಕೂಡಿದೆ. ಮೊದಲ ಭಾಗ 'ಕಾವ್ಯ ಕಥಾ ಮಾಲೆ'. ಕನ್ನಡ ಕಾವ್ಯಲೋಕಕ್ಕೆ ಕ್ರಿಸ್ತನ ಪ್ರವೇಶವಾದದ್ದು ೧೮ನೇ ಶತಮಾನದ ಪೂರ್ವದಲ್ಲಿ. ನಿಘಂಟುಕಾರನಾಗಿ ಬಹು ಜನಪ್ರಿಯನಾಗಿರುವ ಕ್ರೈಸ್ತ ಮಿಶನರಿ ಜರ್ಮನಿಯ ರೆವರೆಂಡ್ ಫರ್ಡಿನೆಂಡ್ ಕಿಟೆಲ್. ಈ ವಿದ್ವಾಂಸರ, ಕಾವ್ಯ ರಚನಾಶಕ್ತಿ ಪಾಂಡಿತ್ಯ ಬೆರಗುಮಾಡುವಷ್ಟು ಅದ್ಭುತವಾಗಿದೆ. ಈ 'ಕಥಾಮಾಲೆ' ಕ್ರೈಸ್ತ ವಾಙ್ಮಯದ ಏಕಮೇವ ಖಂಡಕಾವ್ಯವಾದ ಈ ಕಥಾಮಾಲೆಯ ಸಾರಾಂಶವನ್ನು ಈ ಸಂಕಲನದಲ್ಲಿ ನೀಡಲಾಗಿದೆ. ಭಾಮಿನಿ, ವಾರ್ಧಕ ಷಟ್ಪದಿಗಳು, ಪೂರ್ವಿ ರಾಗದ ಕೀರ್ತನೆಗಳು ಕ್ರಿಸ್ತನ ಮಹಿಮೆಯ ಜೊತೆಗೆ ಕಿಟೆಲ್‌ರ ಅಗಾಧ ಪ್ರತಿಭೆ, ಪರಿಶ್ರಮ, ಕನ್ನಡಕ್ಕಾಗಿ ಮಾಡಿರುವ ಕೆಲಸಗಳು ಕಣ್ಣಿಗೆ ಕಟ್ಟುತ್ತವೆ.

ಈ ಕಥಾಮಾಲೆಯ ದೇಶೀಯತೆಯಿಂದಾಗಿ ಅದು ಪರದೇಶಿ ಅನ್ನಿಸುವುದಿಲ್ಲ. ಬಳಸಿರುವ ರಾಗ, ತಾಳ, ಷಟ್ಪದಿಗಳ ಬಳಕೆ ಇದೂ ನಮ್ಮದೇ ಕಾವ್ಯ ಎನಿಸುವಂತೆ ಮಾಡಿದೆ. ೧೩ ಜನ ಕವಿಗಳ ಕಥಾಮಾಲೆ ಈ ಭಾಗದಲ್ಲಿದೆ. ಉದಾಹರಣೆಗೆ ಮುಲ್ಕಿ ಕವಿ ರಾಮಕೃಷ್ಣಯ್ಯನವರ ''ಯೇಸುಕ್ರಿಸ್ತನ ಜನನ ಚೌಪದನಗಳು'' ನೋಡಬಹುದು. ರಾಗ ಚೌಪದಿ, ಉಡಾಪಿ ಝಂಪೆ ತಾಳದಲ್ಲಿ ನಿಬದ್ಧವಾಗಿರುವ ಈ ಚೌಪದನಗಳು ಸರಳವಾಗಿವೆ. ಹಿರಿಯರೂ, ಕಿರಿಯರೂ ಹಾಡಲು ಸುಲಭವಾಗಿದೆ.

ಎರಡನೇ ಭಾಗ 'ಮಹಾ' ಕಾವ್ಯಮಾಲೆ ಆರು ಕವಿಗಳ ರಚನೆಗಳನ್ನು ಒಳಗೊಂಡಿದೆ. ಮೊದಲ ಕವನ ನಮ್ಮ ಮೊದಲ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಪ್ರಸಿದ್ಧ ರಚನೆ 'ಗೊಲ್ಗೊಥಾ' ಅಥವಾ 'ಯೇಸುವಿನ ಕಡೆಯ ದಿನ'. ಈ ಕವನದ ಪ್ರಾರಂಭವೇ ಮನ ಕಲಕುವ ಹಾಗಿದೆ :

ಕೋಳಿ ಮೂರನೇ ಬಾರಿ ಕೂಗಿ ಯೇಸುವ ಕೊಲ್ಲ
ಲೆಳೆಸಿದ ಯಹೂದ್ಯರ ಮನಸಾಕ್ಷಿಯೊಲು ಸುಮ್ಮ
ನಾಗೆ ....

– ಹೀಗೆ ಮುಂದುವರಿಯುತ್ತಾ,

ಗಡಗಡನೆ ಪೊಡವಿ ನಡುಗಿತು, ದುಃಖವಾರ್ತೆಯಂ
ಜಗಕೆಲ್ಲ ಕೇಳಿಸುವ ಮೃತಕದುಂದುಭಿಯಂತೆ.

ಎನ್ನುವಾಗ ಓದುಗರ ದುಃಖವೂ ಮಡುಗಟ್ಟುತ್ತದೆ.

ಈ ಭಾಗದ ಇನ್ನೊಂದು ರಚನೆ ಡಾ|| ಲತಾ ರಾಜಶೇಖರ್ ಅವರ 'ಯೇಸು ಮಹಾದರ್ಶನ'ದಿಂದ ಆಯ್ದದ್ದು. ತಲೆಬರಹವೇ 'ಏರಿಸಿದರಿಂತು ಸತ್ಯವನು ಶಿಲುಬೆಗೆ!' ಶಿಲುಬೆಗೆ ಏಸುವನ್ನು ಮೊಳೆ ಹೊಡೆದು ನೋಯಿಸಿದ, ಸಾಯಿಸಿದ ಕ್ರೌರ್ಯ ಶತಶತಮಾನಗಳಿಂದ ಕವಿ ಹೃದಯಗಳನ್ನು ತಲ್ಲಣಗೊಳಿಸಿದೆ. ಅದಕ್ಕೆ ದೇಶ-ಭಾಷೆ- ಕಾಲಗಳ ಹಂಗಿಲ್ಲ.

ಮೂರನೇ ಭಾಗ 'ಬಿಡಿ ಕವನಮಾಲೆ'. ೭೯ ಕವನಗಳ ಈ ದೀರ್ಘ ಭಾಗ ಹಲವಾರು ಕಾರಣಗಳಿಂದ ಆಕರ್ಷಕವಾಗಿದೆ, ಮಹತ್ವದ್ದಾಗಿದೆ. ನಮ್ಮ ಕನ್ನಡದ ಎಲ್ಲ ಮಹತ್ವದ ಕವಿಗಳ ಪಾಲಿಗೆ 'ಏಸು'ವಿನ ಜೀವನ ಅವನ ದುರಂತ ಅಂತ್ಯ ಮನತಟ್ಟುವಂತಾಗಿದೆ. ಹಿರಿಯ ಕವಿಗಳಾದ ಮಂ. ಗೋವಿಂದ ಪೈ, ಕುವೆಂಪು, ಬೇಂದ್ರೆ, ಜಿ. ಎಸ್. ಶಿವರುದ್ರಪ್ಪನವರ ಕೆಲವಾರು ಕವನಗಳಿವೆ. 'ಅಮೆರಿಕದಲ್ಲಿ ಕ್ರಿಸ್‌ಮಸ್' ಎಂಬ ಸುಧಾ ಅವರ ಕವನವಿದೆ, ಪುಟ್ಟ ಬಾಲಿಕೆ ಮುದ್ದು ತೀರ್ಥಹಳ್ಳಿಯ 'ಕ್ಷಮಿಸಬಿಡು' ಕವನವೂ ಇದೆ.

ನಮ್ಮ ಪ್ರೀತಿಯ ಕವಿ ಕೆ. ಎಸ್. ನರಸಿಂಹಸ್ವಾಮಿಯವರ 'ಡಿಸೆಂಬರಲ್ಲವೆ ಈಗ ?'

ಡಿಸೆಂಬರಲ್ಲವೇ ಈಗ ? .
ಇರುಳು ಚೆಲ್ಲಿದ ಹಾಲು ಬೆಳ್ದಿಂಗಳಲ್ಲಿ
ನಕ್ಷತ್ರಗಳ ಕೆಳಗೆ ಸಾಗುವಾಗ
ಕಣ್ಣಿಗೆ ಬೀಳುವುದಿಲ್ಲವೆ
ಬೆಳೆದ ಮರಗಳ ತುದಿಯ ಬೆಳ್ಳಿಯೆಲೆಗಳ ಮೇಲೆ
ಗೋಪುರದಲ್ಲಿ ಶಿಲುಬೆ ?

ಈ ಭಾಗದ ಎಲ್ಲ ಕವನಗಳೂ ಮತ್ತೆ ಮತ್ತೆ ಮೆಲುಕು ಹಾಕುವಂತಿವೆ. ನಮ್ಮ ಕನ್ನಡದ ಎಲ್ಲ ಮಹತ್ವದ ಕವಿಗಳನ್ನೂ 'ಏಸು' ಸೆರೆ ಹಿಡಿದಿರುವುದು ಒಂದು ದಿವ್ಯ ಅನುಭವ.

ಕುವೆಂಪು –

ಭವತಾರಿಣಿ ಜಗದಂಬೆಯ ಜಗನ್ ಮಾತೃಲೀಲೆ
ಭುವನ ಶಿಶುವನೆದೆಗೆ ಒತ್ತಿ ದೀಕ್ಷೆ ನಿಂತವೋಲೆ
ಕ್ರಿಸ್ತ ಶಿಶುವನೆತ್ತಿಕೊಂಡ ತಾಯಿತನವೆ ಮೇರಿ
ನಿಂತಿಹಳದೋ ತೇರಿನಂತೆ ಕೃಪೆಯ ತವರ ತೋರಿ

– ಎಂದು ಮೇರಿ - ಏಸುವನ್ನು ನಮ್ಮ ಕಣ್ಣ ಮುಂದೆ ಕಡೆದು ನಿಲ್ಲಿಸಿದರೆ, ಅಂಬಿಕಾತನಯದತ್ತರು (ಬೇಂದ್ರೆ)- 'ಗುರುವೆ' ಎಂಬ ಕವನದಲ್ಲಿ:

ಹೆಗಲ ಮೇಲಿರಲಿ ನಿನ್ನ ಕೈ ಗುರುವೆ
ನಿನ್ನ ಶೂಲಕ್ಕೆ, ನನ್ನ ಕೈ

ಎಂದು ದ್ರೋಹಿಗಳಾಗುವ ಜುದಾಸನಂಥ ಶಿಷ್ಯರನ್ನು ಸೂಚ್ಯವಾಗಿಯೇ ಗುರುತಿಸುತ್ತಾರೆ.

ನಾಲ್ಕನೇ ಭಾಗ ಅನುವಾದ ಮಾಲೆ. ಈ ಭಾಗ ಪ್ರಾರಂಭವಾಗುವುದು ಬ್ರೆಕ್ಟ್‌ನ ಅನುವಾದಿತ ಕವನವೊಂದರಿಂದ. ಅನುವಾದ ಮಾಡಿರುವವರು ಡಾ|| ಯು. ಆರ್ ಅನಂತಮೂರ್ತಿ. 'ಏಸುವಿನ ಜನನ' ಎಂಬ ಈ ಕವನ

ಅವನು ಜನಿಸಿದ್ದು ರಣ ಚಳಿಯ ಕಾಲದಲ್ಲಾದರೂ

ವಿಜಯಾ ಶ್ರೀಧರ್

ಅಷ್ಟೇನೂ ತೊಂದರೆಯಾಗಲಿಲ್ಲ,

ಕೊಟ್ಟಿಗೇಲಿ ಹೊರಗಿನಷ್ಟು ಚಳಿಯಿರಲಿಲ್ಲ

– ಈ ಸಾಲುಗಳು ಏಕಕಾಲದಲ್ಲಿ ಡಿಸೆಂಬರ್‌ನ ಚಳಿ, [illegible] ಜನ್ಮಸ್ಥಾನದ ಚಿತ್ರಣವನ್ನು ನೀಡುತ್ತವೆ. ತಮಿಳು ಕವಿ ಡಾ|| ಜಿ. ಸೌಂದರರಾಜ ಅವರ 'ಏಕೆ?' ಎಂಬ ಪುಟ್ಟ ಕವನವನ್ನು ಡಾ|| ಆರ್. ರಾಮಕೃಷ್ಣ ಎಷ್ಟು ಸುಂದರವಾಗಿ ಅನುವಾದಿಸಿದ್ದಾರೆ :

ಮರಗಳು
ತಮ್ಮಲ್ಲಿ
ಗೂಡುಗಟ್ಟುವವು
ಈ ಮಾನವರು-
ನಮ್ಮಿಂದ
ಅನೇಕ ಶಿಲುಬೆಗಳನ್ನು
ತಯಾರಿಸುತ್ತಾರೆ...
ಆದರೆ
ಅವರ ಪೈಕಿ
ಒಬ್ಬ ಕ್ರಿಸ್ತನನ್ನಾದರೂ
ತಯಾರಿಸಲು
ಇನ್ನೂ ಅಸಮರ್ಥರಾಗಿದ್ದಾರಲ್ಲ!
ಏಕೆ ?

ಐದನೇ ಭಾಗ ಯಕ್ಷ ಕವನಮಾಲೆ. ಈ ಭಾಗದ ಕವನಗಳು ಕೆಲವು ಕಾರಣಗಳಿಂದ ಗಮನಾರ್ಹವಾಗಿವೆ. ಶಾಸ್ತ್ರಿ ಟಿ. ಪರದೇಶ್ಶೆಯ್ಯನವರಿಂದ ರಚಿತವಾದ ಈ ಕವನ ೧೯೧೭ನೇ ಇಸ್ವಿಯಲ್ಲಿ ಮಲೆಮಹದೇಶ್ವರನ ದೀಪಾವಳಿ ಜಾತ್ರೆಯಲ್ಲಿ ಕಾಲರಾ ವ್ಯಾಧಿಯಿಂದ ಆದ ಅನಾಹುತ ಕಾಲದ ಪ್ರಾರ್ಥನಾ ಪದ್ಯ.

ಶರಣು ಶರಣು ಸದಾ ಯೆಹೋವಗೆ /
ಶರಣು ಸರ್ವಪಾಲಕ ದೇವಗೆ//

ಎಂದು ಸೌರಾಷ್ಟ್ರ ರಾಗದಲ್ಲಿ ತ್ರಿಪುಟ ತಾಳದಲ್ಲಿ ರಚಿಸಲ್ಪಟ್ಟಿದೆ.

ಆರನೇ ಭಾಗ ಇತ್ತೀಚೆಗೆ ಬಹು ಜನಪ್ರಿಯವಾಗಿರುವ ಹನಿಗವನಗಳ ರೂಪದ್ದು. ನಮ್ಮ ಚುಟುಕು ಕವಿಗಳನ್ನೂ 'ಏಸು' ಹೇಗೆ ಪ್ರಭಾವಿಸಿದ್ದಾನೆ ಎಂದು 'ಹನಿಕವನ ಮಾಲೆ'ಗಳಲ್ಲಿ ನೋಡಬಹುದು.

ಜರಗನಹಳ್ಳಿ ಶಿವಶಂಕರ್ ಅವರ ಹನಿಗವನ 'ಚರ್ಚ್'ಯನ್ನು ನೋಡಬಹುದು.

ಚರ್ಚ್ !


ದೇಗುಲ ಎಂದರೆ
ಏಸು ಮಾತ್ರ ಇರುವ ಚರ್ಚೇ ?
ಅಥವಾ ಅಲ್ಲಿ ಕೂಡ
ಶಿವ ರಾಮಕೃಷ್ಣ ಅಲ್ಲಾ
ಎಲ್ಲರು ಇಲ್ಲವೆ !
ಎನ್ನುವವೆ ತೀರದ ಚರ್ಚ್!

೭ನೇ ಅನುಬಂಧ ಮಾಲೆಯಲ್ಲಿ ಹಾಡಲು ಅನುಕೂಲವಾಗಿರುವ ಒಂದೆರಡು ರಚನೆಗ[ಳನ್ನು] ರಾಗ-ತಾಳ ಸಹಿತ ನೀಡಿದ್ದು, ಕೆಲವು ಕುತೂಹ[ಲ] ರಚನೆಗಳನ್ನು ನೀಡಿದೆ.

ಸುರುಟಿ ರಾಗದ 'ಯೇಸುವನ್ನು ಕಂಡಿರ್ರ್ಯಾ' [illegible] ದಾಸರ 'ಕೂಸಿನ್ನಾ ಕಂಡಿರ್ರ್ಯಾ' ಎಂಬ [illegible] ಸಂವಾದಿಯಾದ ರಚನೆ! ಬಾಲ ಯೇಸು [illegible] 'ಜೋಗಳಾಷ್ಟಕ' ರೆವೆರೆಂಡ್ ಇ. ಪಿ. ರೈ[illegible] 'ಅರುಣೋದಯ' ಪತ್ರಿಕೆಯಿಂದ ಆಯ್ದುಕೊಂ[illegible] ಆಕರ ಗ್ರಂಥಗಳ ದೊಡ್ಡ ಪಟ್ಟಿಯನ್ನೇ ಏಲಿ[illegible] ಅವರು ನೀಡಿದ್ದಾರೆ.

ಸಂಪಾದನೆ ತುಂಬ ಕಷ್ಟ! ಹಣ, ಆಸ್ತಿ, ಸ[illegible] ಕೀರ್ತಿ ಸಂಪಾದನೆಗಳು ಕಷ್ಟಸಾಧ್ಯ. ಈ ಮಾದ[illegible] ಗ್ರಂಥ ಸಂಪಾದನೆ ತುಂಬ ಏಕಾಗ್ರತೆ, ಪರಿಶ್ರಮ, ಬೇಡುವಂತಹದ್ದು. ಇಂಥ ಮೌಲಿಕ ಗ್ರಂ[illegible] ಸಂಪಾದಕರನ್ನು ಅಭಿನಂದಿಸೋಣ. ಜೊತೆಗೆ ಕ್ರಿಸ್‌ಮಸ್‌ನಲ್ಲಿ ಈ 'ಕ್ರಿಸ್ತಕಾವ್ಯ'ವನ್ನು ಅವಲೋ[ಕಿಸಿ] ಮನಸ್ಸನ್ನು ವಿಶಾಲಗೊಳಿಸಿಕೊಳ್ಳೋಣ.

ವಿಜಯಾ ಶ್ರೀಧರ್
ಕೋಂ ಡಾ|| ಕೆ. ಆರ್. ಶ್ರೀಧರ್, ೧ನೇ ಮುಖ್ಯರಸ್ತೆ,
ರಾಜೇಂದ್ರನಗರ,
ಶಿವಮೊಗ್ಗ - ೫೭೭೨೦೪



ನವೀಕರಿಸಬಹುದಾದ ಇಂಧನ ಬಳಸಿ ಪರಿಸರ ಉಳಿಸಿ

ದೈನಂದಿನ ಬದುಕಿಗೆ ಅತಿಮುಖ್ಯ ಮೂಲಭೂತ ಸೌಕರ್ಯ ವಿದ್ಯುತ್. ದಿನೇ ದಿನೇ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಸ್ಪಂದಿಸಲು ಹಾಗೂ ಬರಿದಾಗುತ್ತಿರುವ ಇಂಧನ ಕೊರತೆ ನೀಗಿಸಲು ಪ್ರಕೃತಿಯಲ್ಲಿ ಉಚಿತವಾಗಿ ಹಾಗೂ ಅಗಾಧ ಪ್ರಮಾಣದಲ್ಲಿ ಲಭ್ಯವಿರುವ ನವೀಕರಿಸಬಹುದಾದ ಶಕ್ತಿ ಮೂಲಗಳ ಸಂಪೂರ್ಣ ಪ್ರಯೋಜನ ಪಡೆದು ಸ್ವಾವಲಂಬನೆ ಸಾಧಿಸಿ ಪರಿಸರವನ್ನು ಕಾಪಾಡುವ ಹೊಣೆ ನಮ್ಮೆಲ್ಲರದು. ಈ ಉದ್ದೇಶದಿಂದ ನವೀಕರಿಸಬಹುದಾದ ಇಂಧನಗಳ ಸದ್ಬಳಕೆ ಹಾಗೂ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ನೀಡುವ ಸಹಾಯವನ್ನು ಸಮರ್ಥವಾಗಿ ಬಳಸಿಕೊಳ್ಳುವುದರಿಂದ ಪರಿಸರನಾಶವನ್ನು ತಡೆಗಟ್ಟಲು ನಾವೆಲ್ಲರೂ ಅಳಿಲು ಸೇವೆ ಮಾಡಿದಂತಾಗುತ್ತದೆ.

ದಿನೇಶ್ ಕುಮಾರ್ ಡಿ.ಕೆ.

ದೈನಂದಿನ ಬದುಕಿಗೆ, ಆಹಾರ, ವಸತಿ, ಕುಡಿಯುವ ನೀರು ಹೇಗೆ ಮುಖ್ಯವೋ ಅದೇ ರೀತಿ ವಿದ್ಯುತ್ ಕೂಡ ಅತಿ ಮುಖ್ಯವಾಗಿದೆ. ದೇಶದ ಎಲ್ಲಾ ಚಟುವಟಿಕೆಗಳು ವಿದ್ಯುತ್‌ಅನ್ನು ಅವಲಂಬಿಸಿರುತ್ತವೆ. ಯಾವುದೇ ದೇಶದ ಅಭಿವೃದ್ಧಿಯು ಬಹುತೇಕವಾಗಿ ಆ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಇಂಧನ ಶಕ್ತಿ ಹಾಗೂ ಅದರ ಪೂರೈಕೆಯನ್ನು ಅವಲಂಬಿಸಿದೆ.

ಪ್ರಸಕ್ತ ಸನ್ನಿವೇಶದಲ್ಲಿ ವಿದ್ಯುಚ್ಛಕ್ತಿಯನ್ನು ಕಲ್ಲಿದ್ದಲು, ಡೀಸಲ್, ಅನಿಲ ಇತ್ಯಾದಿ ಮರಳಿ ಪಡೆಯಲು ಸಾಧ್ಯವಾಗದ ಸಾಂಪ್ರದಾಯಿಕ ಮೂಲಗಳಿಂದ ಪಡೆಯಲಾಗುತ್ತಿದೆ. ಇಂಧನ ಕಡಿಮೆಯಾಗುವ ಮೂಲಗಳನ್ನು ಹೆಚ್ಚಾಗಿ ಅವಲಂಬಿಸಿದ್ದು, ಅವುಗಳು ಕ್ರಮೇಣವಾಗಿ ನಶಿಸಿಹೋಗಲಾರಂಭಿಸಿವೆ. ಇಂಧನಗಳ ಉತ್ಪಾದನೆ ಹಾಗೂ ಬಳಕೆಯಲ್ಲಿ ಅಗಾಧ ವ್ಯತ್ಯಾಸವಿದ್ದು ಇಂಧನ ಶಕ್ತಿ ಸಮಸ್ಯೆಯು ದಿನೇ ದಿನೇ ಜಟಿಲವಾಗುತ್ತಿದೆ. ಸಾಂಪ್ರದಾಯಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆಯಿಂದ ಪರಿಸರ ಮಾಲಿನ್ಯ, ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯಿಂದ ಪರಿಸರ ಕಲುಷಿತಗೊಳ್ಳುತ್ತಿದೆ.

ವಿದ್ಯುತ್ ಕ್ಷೇತ್ರದಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಲು, ವಿದ್ಯುತ್ ಕೊರತೆಯನ್ನು ನೀಗಿಸಲು ಪರಿಸರಸ್ನೇಹಿಯಾದ ಅಸಾಂಪ್ರದಾಯಿಕ ಶಕ್ತಿ ಮೂಲಗಳ ವಿದ್ಯುತ್ ಬಳಕೆ ಇಂದಿನ ಅವಶ್ಯಕತೆಯಾಗಿದೆ. ಉಷ್ಣವಲಯವಾದ ನಮ್ಮ ದೇಶದಲ್ಲಿ ಅಪಾರವಾಗಿ ಸಿಗುವ ಸೌರಶಕ್ತಿಯು, ಇಂಧನ ಕೊರತೆಯನ್ನು ನೀಗಿಸುವ ಬಹುಮುಖ್ಯ ಸಾಧನವಾಗಬಹುದಾಗಿದೆ. ಸೌರಶಕ್ತಿಯ ಜೊತೆಗೆ ಜಲಶಕ್ತಿ, ಗಾಳಿಶಕ್ತಿ, ಜೈವಿಕಶಕ್ತಿ ಹಾಗೂ ಇತರೆ ನವೀಕರಿಸಬಹುದಾದ ಇಂಧನ ಮೂಲಗಳತ್ತ ಗಮನ ಹರಿಸುವುದು ಅತಿ ಮುಖ್ಯವಾಗಿರುತ್ತದೆ. ಈ ಮೂಲಗಳಿಂದ ವಿದ್ಯುತ್ ಉತ್ಪಾದಿಸುವುದರಿಂದ ಪರಿಸರಕ್ಕೆ ಹಾನಿಯಾಗುವುದನ್ನು ತಡೆಗಟ್ಟಬಹುದಾಗಿದೆ.



೨೦೦೯ನೇ ವರ್ಷದ ಕೋಪನ್ ಹೆಗನ್‌ನಲ್ಲಿ ಸೇರಿದ್ದ ಜಾಗತಿಕ ಹವಾಮಾನ ಬದಲಾವಣೆ ನಿಯಂತ್ರಣದ ಬಗ್ಗೆ ನಡೆದ ಸಮಾವೇಶದಂತೆ ೩೦ನೇ ಜೂನ್ ೨೦೦೮ರಂದು ಪ್ರಧಾನ ಮಂತ್ರಿಗಳು ನ್ಯಾಷನಲ್ ಆಕ್ಷನ್ ಪ್ಲಾನ್ ಫಾರ್ ಕ್ಲೈಮೆಟ್ ಚೇಂಜ್ ಬಿಡುಗಡೆಗೊಳಿಸಿದರು. ಪರಿಸರದ ದೃಷ್ಟಿಯಿಂದ ಭಾರತ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಇದರಲ್ಲಿ ಅಡಕವಾಗಿರುವಂತೆ. ದಿನಾಂಕ ೧೧ನೇ ಜನವರಿ ೨೦೧೦ ರಂದು ಜವಹರ್‌ಲಾಲ್ ರಾಷ್ಟ್ರೀಯ [illegible]

ಮಿಷನ್ ಎಂಬ ಕಾರ್ಯಕ್ರಮವನ್ನು ದೇಶಕ್ಕೆ ಸಮರ್ಪಿಸಿದರು. ಈ ಮಿಷನ್‌ನ ಧ್ಯೇಯ, ಉದ್ದೇಶ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಒತ್ತು ಕೊಡುವುದು ಹಾಗೂ ೨೦,೦೦೦ ಮೆ.ವ್ಯಾ ಗ್ರಿಡ್ ಸಂಪರ್ಕ ನೀಡುವ ವಿದ್ಯುತ್ ಹಾಗೂ ೨,೦೦೦ ಮೆ.ವ್ಯಾ ಮನೆಗಳ ಛಾವಣಿಯ ಮೇಲೆ ಸೋಲಾರ್ ಪ್ಯಾನಲ್‌ನಿಂದ ವಿದ್ಯುತ್ ಉತ್ಪಾದನೆಯನ್ನು ಮಾಡುವ ಗುರಿಯನ್ನು ಹಾಗೂ ಸೋಲಾರ್ ವಾಟರ್ ಹೀಟರ್/ ಥರ್ಮಲ್‌ನಿಂದ ಒಟ್ಟು ೨೦ ಮಿಲಿಯನ್ ಸ್ಕ್ವೇರ್ ಮೀಟರ್ ಗುರಿಯನ್ನು ೨೦೨೨ ವರ್ಷದ ಒಳಗೆ ಸಾಧಿಸಲು ನಿಗದಿಪಡಿಸಿ ಕೊಂಡಿರುತ್ತಾರೆ. ಹಾಗೂ ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನವ ಮತ್ತು ನವೀಕರಿಸ ಬಹುದಾದ ಇಂಧನ ಮಂತ್ರಾಲಯದ ಜವಹರ್‌ಲಾಲ್ ರಾಷ್ಟ್ರೀಯ ಸೋಲಾರ್‌ಮಿಷನ್ ಅಡಿಯಲ್ಲಿ ಸಹಾಯಧನವನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಮನೆ, ಕಛೇರಿ, ಕೈಗಾರಿಕೆಗಳ ಛಾವಣಿಯ ಮೇಲೆ ೧ ಕಿ ವ್ಯಾ ಸಾಮರ್ಥ್ಯದ ಸೋಲಾರ್ ಪ್ಯಾನಲ್ ಅಳವಡಿಸಿದಲ್ಲಿ ರೂ ೯೦,೦೦೦/- ಸಹಾಯಧನ ನೀಡಲಾಗುತ್ತಿದೆ.

ಸೋಲಾರ್ ವಾಟರ್ ಹೀಟರ್‌ಗಳನ್ನು ಅಳವಡಿಸಿಕೊಂಡಲ್ಲಿ ಗರಿಷ್ಠ ಶೇ ೩೦ ರಷ್ಟು ಸಹಾಯಧನ ಹಾಗೂ ಸಂಬಂಧಿಸಿದ ಎಸ್ಕಾಂಗಳು ಪ್ರತಿಯೂನಿಟ್‌ಗೆ ೦.೪೦ ಪೈಸೆಯಂತೆ ಗರಿಷ್ಠ ರೂ. ೫೦ನ್ನು ಮಾಸಿಕ ಬಿಲ್‌ನ ಕಡಿತಗೊಳಿಸುತ್ತವೆ.



ಸೂರ್ಯನ ಬೆಳಕನ್ನು ಉಪಯೋಗಿಸಿಕೊಂ[ಡು] ದೊಡ್ಡ ಪ್ರಮಾಣದಲ್ಲಿ ಅಡುಗೆ ತಯಾರಿಸು[ವ] ಸೋಲಾರ್ ಥರ್ಮಲ್ ಕುಕ್ಕಿಂಗ್ ಯೋಜನೆ[ಯ] ಅನುಷ್ಠಾನಕ್ಕೆ ಶೇ. ೩೦ರಷ್ಟು ಯೋಜನೆವೆಚ್ಚ[ವನ್ನು] ಕೇಂದ್ರ ಸರ್ಕಾರ ಭರಿಸುತ್ತಿದೆ.

ಮನೆಯ ಮೇಲೆ ಸಣ್ಣ ಪ್ರಮಾಣದ ಹೈಬ್ರಿ[ಡ್] (ಸೋಲಾರ್ ಮತ್ತು ಗಾಳಿಯಂತ್ರ) ೧ ಕಿ.[ವ್ಯಾ] ಸಾಮರ್ಥ್ಯವನ್ನು ಸ್ಥಾಪಿಸಿದಲ್ಲಿ ಸರ್ಕಾರಿ ಸಂಸ್ಥೆಗ[ಳಿಗೆ] ರೂ. ೧.೫೦ ಲಕ್ಷ ಹಾಗೂ ಸರ್ಕಾರೇ[ತರ] ಸಂಸ್ಥೆಗಳಿಗೆ ಅಥವಾ ಸಾರ್ವಜನಿಕರಿಗೆ ರೂ. ೧ ... ಸಹಾಯ ಧನವನ್ನು ನೀಡಲಾಗುತ್ತಿದೆ.

ಬ್ಯಾಟರಿ ಚಾಲಿತ ಎರಡು ಚಕ್ರದ ವಾಹನ[ಕ್ಕೆ] ರೂ. ೪,೦೦೦/- ಮೂರು ಚಕ್ರದ ವಾಹನಕ್ಕೆ ರೂ. ೬೦,೦೦೦/- ನಾಲ್ಕು ಚಕ್ರದ ಕಾರಿಗೆ ರೂ. ೧ ... ಹಾಗೂ ಮಿನಿ ಬಸ್‌ಗೆ ರೂ. ೪ ಲಕ್ಷ ಸಹಾ[ಯ] ಧನವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿ[ದೆ].

ಭಾರತ ಸರ್ಕಾರದ ಬ್ಯೂರೋ ಆಫ್ ಎನ[ರ್ಜಿ] ಎಫಿಸಿಯನ್ಸಿರವರು ಕೂಡ ಇಂಧನ ಸಂರಕ್ಷಣ[ೆಗೆ] ಒತ್ತು ನೀಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಅದ[ರಂತೆ] ವಿದ್ಯುತ್ ಕಡಿಮೆ ಬಳಸುವ ರೆಫ್ರಿಜರೇಟರ್, ಎಸಿ, ಟ್ರಾನ್ಸ್‌ಫಾರ್ಮರ್ ಹಾ[ಗೂ] ಟ್ಯೂಬ್‌ಲೈಟ್‌ಗಳಿಗೆ ಸ್ಟಾರ್ ಲೇಬಲ್‌ಅನ್ನು ಕಡ್ಡಾಯಗೊಳಿಸಿರುತ್ತಾರೆ. ಉಪಕರಣಗಳು ಒಂದರಿಂದ ಐದು ಸ್ಟಾರ್ ಹೊಂದಿದ್ದು ಐದುಸ್ಟಾರ್ ಹೊಂದಿರು[ವ] ಗೃಹೋಪಯೋಗಿ ವಿದ್ಯುತ್ ಉಪಕರಣಗಳನ್ನು ಖರೀದಿಸಿದಲ್ಲಿ ಹೆಚ್ಚು ವಿದ್ಯು[ತ್] ಉಳಿತಾಯ ಮಾಡಬಹುದಾಗಿದೆ. ಹೆಚ್ಚು ಇಂಧನ ಬಳಸುವ ಕೈಗಾರಿಕೆಗಳ[ಾದ] ಸ್ಟೀಲ್, ಸಿಮೆಂಟ್, ಅಲ್ಯುಮೀನಿಯಂ, ಟೆಕ್ಸ್‌ಟೈಲ್, ಕೆಮಿಕಲ್ ಕೈಗಾರಿಕೆಗ[ಳಿಗೆ] ಇಂಧನದ ಮಿತಿಯನ್ನು ನಿಗದಿಗೊಳಿಸಿ, ವಿದ್ಯುತ್ ಪರಿಶೋಧನೆಗೆ ಕ್ರಮ ಕೈಗೊಂ[ಡು] ಪರಿಶೋಧನಾವರದಿಯಲ್ಲಿ ತಿಳಿಸುವ ವಿದ್ಯುತ್ ಉಳಿತಾಯದ ಕ್ರಮವನ್ನು ಅನುಷ್ಠಾನ ಗೊಳಿಸುವುದನ್ನು ಕಡ್ಡಾಯಗೊಳಿಸಿರುತ್ತಾರೆ. ಹಾಗೂ ದೇಶಾದ್ಯಂತ ಪರಿಸರ ಸ್ನೇ[ಹಿ] ಕಟ್ಟಡ ಹಾಗೂ ವಿದ್ಯುತ್ ಉಳಿತಾಯ ಮಾಡಬಲ್ಲ ಉಪಕರಣಗಳನ್ನು ಪ್ರತ್ಯೇಕವಾ[ಗಿ] ಬಿಇಇರವರು ರಾಜ್ಯದ ನೋಡಲ್ ಏಜೆನ್ಸಿಯಿಂದ (ಕೆ.ಆರ್.ಇ.ಡಿ.ಎಲ್) ಅನುಷ್ಠಾನಗೊಳಿಸುತ್ತಿದ್ದಾರೆ.

ಈ ಎಲ್ಲದರ ಉದ್ದೇಶ ವಿದ್ಯುತ್ ಮಿತವ್ಯಯ, ಉಳಿತಾಯ ಹಾಗೂ ಪರಿಸರ ಸಂರಕ್ಷ[ಣೆ].

ದೈನಂದಿನ ಬದುಕಿಗೆ ಅತಿಮುಖ್ಯ ಮೂಲಭೂತ ಸೌಕರ್ಯ ವಿದ್ಯುತ್. ದಿ[ನೇ] ದಿನೇ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಸ್ಪಂದಿಸಲು ಹಾಗೂ ಬರಿದಾಗುತ್ತಿರುವ ಇಂ[ಧನ] ಕೊರತೆ ನೀಗಿಸಲು ಪ್ರಕೃತಿಯಲ್ಲಿ ಉಚಿತವಾಗಿ ಹಾಗೂ ಅಗಾಧ ಪ್ರಮಾಣದ[ಲ್ಲಿ] ಲಭ್ಯವಿರುವ ನವೀಕರಿಸಬಹುದಾದ ಶಕ್ತಿ ಮೂಲಗಳ ಸಂಪೂರ್ಣ ಪ್ರಯೋಜ[ನ] ಪಡೆದು ಸ್ವಾವಲಂಬನೆ ಸಾಧಿಸಿ ಪರಿಸರವನ್ನು ಕಾಪಾಡುವ ಹೊಣೆ ನಮ್ಮೆಲ್ಲರದು. ಉದ್ದೇಶದಿಂದ ನವೀಕರಿಸಬಹುದಾದ ಇಂಧನಗಳ ಸದ್ಬಳಕೆ ಹಾಗೂ ನವ ಮ[ತ್ತು] ನವೀಕರಿಸಬಹುದಾದ ಇಂಧನ ಮಂತ್ರಾಲಯವು ನೀಡುವ ಸಹಾಯಧ[ನವನ್ನು] ಸಮರ್ಥವಾಗಿ ಬಳಸಿಕೊಳ್ಳುವುದರಿಂದ ಪರಿಸರನಾಶವನ್ನು ತಡೆಗಟ್ಟಲು ನಾವೆಲ್ಲ[ರೂ] ಅಳಿಲು ಸೇವೆ ಮಾಡಿದಂತಾಗುತ್ತದೆ.

'ವಿಶ್ವಪರಿಸರ ದಿನಾಚರಣೆಯಂದು ನವೀಕರಿಸಬಹುದಾದ ಇಂಧನವ[ನ್ನು] ಹೆಚ್ಚಾಗಿ ಬಳಸಲು ಪಣತೊಡೋಣ.'

ದಿನೇಶ್ ಕುಮಾರ್ ಡಿ. ಕೆ.
ಯೋಜನಾ ಅಭಿಯಂತರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು

ಡಾ॥ ರಹಮತ್ ತರೀಕೆರೆ

ಸನ್ನತಿಯಿಂದ ಬೋಧಗಯೆಗೆ



೧

ಕೆಲವು ವರ್ಷಗಳ ಹಿಂದೆ ಕರ್ನಾಟಕದ ಬೌದ್ಧತಾಣಗಳನ್ನು ನೋಡುತ್ತ, ಭೀಮಾ
ಳೆದಡದಲ್ಲಿರುವ ಚಿತಾಪುರ ತಾಲೂಕಿನ ಸನ್ನತಿಗೆ ಗೆಳೆಯರೊಂದಿಗೆ ಹೋಗಿದ್ದೆ.
ದ್ಧಧರ್ಮ ಹುಟ್ಟಿಬೆಳೆದಿದ್ದು ಹೆಚ್ಚಾಗಿ ಗಂಗಾನದಿಯ ಬಯಲಿನಲ್ಲಿ. ಆದರೂ
ಣ ಭಾರತದಲ್ಲೂ ಅದರ ಹಬ್ಬುವಿಕೆಯಾಯಿತು. ಕರ್ನಾಟಕದಲ್ಲಿ ಅಶೋಕನ
ನಗಳು ಕೊರೆಯಲ್ಪಟ್ಟವು. ಸಾತವಾಹನರ ಕಾಲದಲ್ಲಿ (ಕ್ರಿ. ಶ. ೨) ಚೈತ್ಯಾಲಯಗಳು
ರ್ಮಾಣವಾದವು. ಸನ್ನತಿಯದು ಸಾತವಾಹನರ ಕಾಲದಲ್ಲಿ ಮೂಡಿದ ಚೈತ್ಯಾಲಯ.
ರೆ ಯಾಕೊ ಏನೋ ಸನ್ನತಿ ಹಂಪಿಯಂತೆ ಖ್ಯಾತವಾಗಲಿಲ್ಲ. ಪ್ರವಾಸಿಗರಿರಲಿ.
ರ್ನಾಟಕದ ಬಹಳಷ್ಟು ಸಂಶೋಧಕರೇ ಅದನ್ನು ಸರಿಯಾಗಿ ನೋಡಹೋಗಿಲ್ಲ.
ಒಂದು ಅಪೂರ್ವ ಶಿಲ್ಪ ತಾಣ. ಅಲ್ಲಿರುವ ಶಿಲ್ಪಗಳಲ್ಲಿ ನನಗೆ ಸೆಳೆದಿದ್ದು ಬುದ್ಧನು
ನೋದಯ ಪಡೆದ ಬೋಧಿವೃಕ್ಷದ ಕೆತ್ತನೆ. ಶಿಲ್ಪಿಯು ಅರಳಿಮರದ ಎಲೆಗಳನ್ನು
ರ ನರನಾಡಿಗಳ ಸಮೇತ ಚಂದವಾಗಿ ಬಿಡಿಸಿರುವನು.

ಅದನ್ನು ನೋಡುತ್ತ ನನ್ನೊಳಗೆ ಬೋಧಿವೃಕ್ಷವಿರುವ ಬೋಧಗಯೆಗೆ
ೀಗಬೇಕೆಂದು ತುಡಿತವುಂಟಾಯಿತು.

ಒಮ್ಮೆ ಸವುಡು ಮಾಡಿಕೊಂಡು ಬಿಹಾರಕ್ಕೆ ಹೋದೆ. ಬಿಹಾರದ ಹೆಸರು ಕೂಡ
ರ ಎಂಬ ಬೌದ್ಧಸೂಚಕವಾದುದು. ಅಶೋಕನ ಮಗಧ ರಾಜ್ಯದ ರಾಜಧಾನಿ
ಗಿದ್ದ ಪಾಟಲಿಪುತ್ರವೇ ಈಗಿನ ಪಟ್ನಾ. ಪಾಟಲಿಪುತ್ರಕ್ಕೂ ಕರ್ನಾಟಕಕ್ಕೂ ಪ್ರಾಚೀನ
ತು. ಅಶೋಕನ ವಂಶಕ್ಕೆ ಸೇರಿದ ಚಂದ್ರಗುಪ್ತ ಮೌರ್ಯನು (ಕ್ರಿ. ಪೂ. ೩ನೇ
ತಮಾನ) ಪಾಟಲಿಪುತ್ರದಿಂದ ಭದ್ರಬಾಹು ಮುನಿಗಳ ಜತೆಗೂಡಿ ಶ್ರವಣಬೆಳಗೊಳಕ್ಕೆ
ದು ಸಲ್ಲೇಖನ ವ್ರತ ಹಿಡಿದು ದೇಹತ್ಯಾಗ ಮಾಡಿದನು. ಅವನು ದೇಹತ್ಯಾಗ
ಡಿದ ಬೆಟ್ಟಕ್ಕೆ ಈಗಲೂ ಚಂದ್ರಗಿರಿ ಎಂಬ ಹೆಸರಿದ್ದು, ಅವನ ಹೆಸರಲ್ಲಿ
ದಿಯೂ ಇದೆ. ಎಲ್ಲೊ ಹುಟ್ಟಿ ಇನ್ನೆಲ್ಲೊ ಬೆಳೆದು ಏನನ್ನೊ ಹುಡುಕುತ್ತ ಬಂದು
ಲ್ಲೊ ಪ್ರಾಣಬಿಡುವ ಈ ಸವಣರು, ಸೂಫಿಗಳು, ನಾಥರು, ಶರಣರು ಸೋಜಿಗ
ಸುತ್ತಾರೆ. ಬಸವಕಲ್ಯಾಣಕ್ಕೆ ಬಂದ ಮೋಳಿಗೆಯ ಮಾರಯ್ಯ ಕಾಶ್ಮೀರದವನು;
ಗಿನ 'ಬಸವ ಪುರಾಣಮು' ಬರೆದ ಪಾಲ್ಕುರಿಕೆ ಸೋಮನಾಥ, ನಲ್ಗೊಂಡ
ಜಿಲ್ಲೆಯವನಾಗಿದ್ದು ಒಬ್ಬ ಶೀಲವಂತ ಸಾಧಕಿಯನ್ನು ನೋಡಲೆಂದು ಬಂದು ಮಾಗಡಿ ಸಮೀಪದ ಕಲ್ಯದಲ್ಲಿ ದೇಹತ್ಯಾಗ ಮಾಡಿದನು; ದೆಹಲಿಯಲ್ಲಿ ಹುಟ್ಟಿಬೆಳೆದ ಬಂದೇನವಾಜ ಗೇಸುದರಾಜನು ಗುಲಬರ್ಗಾಯಲ್ಲಿ ತೀರಿಕೊಂಡನು. ನೇಪಾಳದ ಲುಂಬಿನಿಯಲ್ಲಿ ಹುಟ್ಟಿದ ಬುದ್ಧ ಕೊನೆಯ ದಿನಗಳನ್ನು ಬೋಧಗಯೆಯಲ್ಲಿ ಕಳೆದು ಕುಶಿನಗರದಲ್ಲಿ ತೀರಿಕೊಂಡನು. ಬನವಾಸಿ ನಾಡಿನ ಅಲ್ಲಮ ಕದಳಿಯ ಗುಹೆಗೆ ಹೋಗಿ ದೇಹತ್ಯಾಗ ಮಾಡಿದನು. ಹೊಳೆಗಳು ಕೂಡ ಹೀಗೇ. ಎಲ್ಲೊ ಹುಟ್ಟಿ ಇನ್ನೆಲ್ಲೆಲ್ಲೊ ಹರಿದು ಮತ್ತೆಲ್ಲೊ ಇರುವ ದೂರದ ಕಡಲಲ್ಲಿ ಸಂಗಮಗೊಳ್ಳುತ್ತವೆ. ಅವು ಹುಟ್ಟುವ ಪರ್ವತ ಮತ್ತು ಕಡಲನ್ನು ಕೂಡುವ ಬಿಂದುಗಳ ನಡುವೆ ಬಯಲಲ್ಲಿ ಇರುವುದು ಚಲನೆಯ ತತ್ವ. ಹರಿವ ನದಿಗೆ ಮೈಯೆಲ್ಲ ಕಾಲು ಎಂದು ಅಲ್ಲಮ ಹೇಳುತ್ತಾನೆ. ಬುದ್ಧನ ಕಾಲಲ್ಲಿ ಚಕ್ರದ ಗುರುತಿತ್ತು. ಅವನು ಸ್ಥಾಪಿಸಿದ ಧಮ್ಮದಲ್ಲೂ ಚಕ್ರವಿದೆ. ಚಕ್ರವು ವಿಷ್ಣುವಿನ ಕೈಯಲ್ಲಿ ಕೊಲುವ ಆಯುಧವಾದರೆ, ಬುದ್ಧನಲ್ಲಿ ಧಮ್ಮಚಕ್ರವು ಚಲನಶೀಲತೆಯ ಸಂಕೇತ. ಬುದ್ಧನಿಗೆ ಸಂಬಂಧಪಟ್ಟ ಜಾಗಗಳಾದ ಬೋಧಗಯೆ, ಪಾಟಲಿಪುತ್ರ, ಸಾರನಾಥ ಮುಂತಾದವು ಗಂಗೆಯ, ಸನ್ನತಿ ಭೀಮೆಯ ಹಾಗೂ ಅಮರಾವತಿ ನಾಗಾರ್ಜುನಕೊಂಡಗಳು ಕೃಷ್ಣೆಯ ದಡದಲ್ಲಿ ಇರುವುದು ಆಕಸ್ಮಿಕ ಇರಲಿಕ್ಕಿಲ್ಲ.

೨

ಬೆಳಬೆಳಿಗ್ಗೆಯೇ ಹೊರಡುವ ಪಟ್ನಾ-ಗಯಾ ಪ್ಯಾಸೆಂಜರಿನಲ್ಲಿ ಬೋಧಗಯೆಗೆ ಹೊರಟೆ. ಪಟ್ನಾ ರೈಲು ನಿಲ್ದಾಣವು, ಜಗತ್ತಿನ ದಶದಿಕ್ಕುಗಳಿಗೆ ದುಡಿಯುವವರನ್ನು ಸರಬರಾಜು ಮಾಡುವ ಬಿಹಾರದ ರವಾನೆ ಕೇಂದ್ರದಂತಿದೆ. ಬಿಹಾರದ ಹಳ್ಳಿಗಾಡುಗಳಿಂದ ಬಂದ ಕೆಲಸಗಾರರು ಭಾರತದ ಬೇರೆಬೇರೆ ನಗರಗಳಿಗೆ ಇಲ್ಲಿಂದ ಹೋಗುತ್ತಾರೆ. ಪಟ್ನಾದಿಂದ ಗಯೆಗೆ ೧೦೦ ಕಿ. ಮೀ. ದೂರ. ನಾಲ್ಕು ತಾಸು ಪಯಣ. ೧೨ ರೂಪಾಯಿ ಹಾಸಲು. ಟ್ರೈನು ಸಣ್ಣಪುಟ್ಟ ನಿಲ್ದಾಣಗಳಲ್ಲಿ ನಿಲ್ಲುತ್ತ, ಬುದ್ಧನು ಭಿಕ್ಷೆಯನ್ನು ಸರ್ವರಿಂದಲೂ ಸ್ವೀಕರಿಸುತ್ತ ಚರಿಸುತ್ತಿದ್ದಂತೆ, ಶಾಲೆಮಕ್ಕಳನ್ನೂ ಕಾಯಿಪಲ್ಲೆ ಮಾರುವವವರನ್ನೂ ಕಛೇರಿಗೆ ಹೋಗುವವರನ್ನೂ ಅನಾಥ ಭಿಕ್ಷುಕರನ್ನೂ ರೈತರನ್ನೂ ತುಂಬಿಕೊಂಡು, ಭಾರತದ ಬೀದಿಯೇ ಚಲಿಸಿದಂತೆ, ಬಿಹಾರದ ಬಡತನವೆಲ್ಲ ಮೆರವಣಿಗೆ ಹೊರಟಂತೆ ನಿಧಾನವಾಗಿ ಚಲಿಸುತ್ತಿತ್ತು. ಟ್ರೈನಿನಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ಶೇಂಗಾ, ಚನಾ, ತಿಲ್ಕೂಟ್, ಚಹಾ ಮುಂತಾಗಿ ತಿಂಡಿತಿನಿಸು ಮಾರುವವರೇ ತುಂಬಿದ್ದರು. ನಾನು ರೈಲುರಸ್ತೆಯ ಎರಡೂ ಬದಿ ಕುಯಿಲಿಗೆ ಬಂದಿರುವ ಬತ್ತದ ಗದ್ದೆಗಳನ್ನು ನೋಡುತ್ತ ಪಯಣಿಸಿದೆ.

ಬೋಧಗಯಾ ಬುದ್ಧನು ಬೋಧಿವೃಕ್ಷದ ಕೆಳಗೆ ಜ್ಞಾನೋದಯ ಪಡೆದ ಸ್ಥಳ. ನಾವೆಲ್ಲ ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳಲ್ಲಿ ''ಸಿದ್ಧಾರ್ಥನಿಗೆ ಬೋಧಗಯಾದಲ್ಲಿ ಬೋಧಿವೃಕ್ಷದ ಕೆಳಗೆ ಕುಳಿತಿರುವಾಗ ಜ್ಞಾನೋದಯವಾಯಿತು. ಬಳಿಕ ಅವನು ಬುದ್ಧನಾದನು'' ಎಂದು ಬಾಯಿಪಾಠ ಮಾಡಿದ್ದೆವು. ನಮಗೆ 'ಜ್ಞಾನೋದಯ' ಎಂದರೆ, ಸೂರ್ಯೋದಯದ ಹಾಗೆ ಅಥವಾ ಸ್ವಿಚ್ಚು ಹಾಕಿದರೆ ಕತ್ತಲೆ ಹೊರಟುಹೋಗಿ ಬೆಳಕಾಗುವ ಹಾಗೆ ಎಂದೇ ಅರ್ಥವಾಗಿತ್ತು. ಆದರೆ ಜ್ಞಾನೋದಯಕ್ಕೆ ಮುನ್ನ ಬುದ್ಧ ಮಾಡಿದ ತಿರುಗಾಟ, ಪ್ರಯೋಗ, ಹೋರಾಟ, ಸೆಣಸಾಟ ಎಷ್ಟು ಅಪಾರ? ಬೋಧಗಯೆಯ ಹಾದಿಯಲ್ಲಿ ಬರ್ಬರ್ ಎಂಬ ಸಣ್ಣ ನಿಲ್ದಾಣ ಸಿಗುತ್ತದೆ. ಅಲ್ಲಿಂದ ನೋಡಿದರೆ, ದೂರದಲ್ಲಿ ಕಲ್ಲುಬೆಟ್ಟದ ಸಾಲೊಂದು ಕಾಣುತ್ತದೆ. ಗಂಗಾಬಯಲಿನ ಉತ್ತರಪ್ರದೇಶ, ಬಿಹಾರ, ಬಂಗಾಳಗಳಲ್ಲಿ ಬೆಟ್ಟಗಳೇ ಇಲ್ಲ. ಹಾಗಿರುತ್ತ ಬಟಾಬಯಲಲ್ಲಿ

ಅಪೂರ್ವ ವಸ್ತುವಿನಂತೆ ಎದ್ದುಕಾಣುವ ಈ ಬೆಟ್ಟಗಳ ಗುಹೆಗಳಲ್ಲಿ ಬುದ್ಧನು ದೇಹ ದಂಡನೆಯ ಪ್ರಯೋಗ ಮಾಡಿದನು; ದೇಹದಂಡನೆ ಮಾಡುವುದರಿಂದ ಹೊಸ ತಿಳಿವು ಸಾಧ್ಯವಿಲ್ಲ ಎಂದೂ ಕಂಡುಕೊಂಡನು. ಅಲ್ಲಮಪ್ರಭು ಬಯಲು ನಾಡಿನಲ್ಲಿ ತಿರುಗಾಡಿ ಕಡೆಗೆ ಕದಳಿಯ ಗುಹೆಯನ್ನು ಹೊಕ್ಕವನು; ಬುದ್ಧ ಬರ್ಬಾರ್ ಬೆಟ್ಟದ ಗುಹೆಯಲ್ಲಿ ದೇಹದಂಡನೆಯ ಪ್ರಯೋಗ ಮಾಡಿ ಮರಳಿ ಬಯಲಿಗೆ ಬಂದವನು. ಬುದ್ಧನ ವರ್ಗದಿಂದ ಬಹಳ ಪ್ರಭಾವಿತನಾಗಿದ್ದ ಕನ್ನಡದ ಶರಣ ಅಲ್ಲಮಪ್ರಭುವಿನ ಪರಿಭಾಷೆಯಲ್ಲಿ ಬಯಲೆಂದರೆ, ಬುದ್ಧ ಹೇಳಿದ ಶೂನ್ಯತೆಯೇ! ಮಹಾ ತಿರುಗಾಡಿಯಾಗಿದ್ದ ಅಲ್ಲಮನು ಬೋಧಗಯೆಗೆ ಬಂದುಹೋಗಿದ್ದರೆ ಸೋಜಿಗವಲ್ಲ.

೩

ಗಂಪಾ ನಿಲ್ದಾಣ ಬಂದಿತು. ಗಯಾದಲ್ಲಿಳಿದು ರಿಕ್ಷಾಹಿಡಿದು ೧೨ ಕಿ. ಮೀ. ದೂರ ಸಾಗಿದರೆ ಬೋಧಗಯಾ. ಪಟ್ನಾ ಗಂಗಾನದಿಯ ದಡದ ನಗರ. ಐದಾರು ಮೈಲಿ ಅಗಲಕ್ಕೆ ಹರಿವ ವಿಶಾಲ ಗಂಗೆಯ ವೈಭವವನ್ನು ಅಲ್ಲಿ ನೋಡುವುದೇ ಒಂದು ಅನುಭವ. ಆದರೆ ಬೋಧಗಯಾ ಪುಟ್ಟನದಿ ನಿರಂಜನದ ತಟದಲ್ಲಿರುವ ಸಣ್ಣ ಊರು. ಫರ್ಲಾಂಗು ಅಗಲದ ನೆಲಮಟ್ಟಕ್ಕೆ ಕೆಲವೇ ಅಡಿ ಆಳದಲ್ಲಿರುವ ನಿರಂಜನ, ಮರಳ ಹಾಸಿನ ಮೇಲೆ ನೀರಜಾಡದ ಹೊದಿಸಿದಂತೆ, ತೆಳ್ಳಗೆ ಹರಿಯುತ್ತಿತ್ತು. ಅದರ ದಡದಲ್ಲಿ ಬೂದಿಬಿಳುಪಿನ ಉಸುಕುನೆಲದ ಬಯಲು. ಹೊಲದಲ್ಲಿ ಭಂಡಾರ ಚೆಲ್ಲಿದಂತೆ ಸಾಸಿವೆಯ ಬೆಳೆ. ತನಗೂ ತನ್ನ ಅನುಯಾಯಿಗಳಿಗೂ ಸುಭಿಕ್ಷೆ ಸಿಗುತ್ತದೆಯೆಂದು ಹೊಳೆತಟದ ಊರುಗಳನ್ನು ಬುದ್ಧ ಆರಿಸಿಕೊಂಡಿರಬೇಕು ಎಂದು ಆಲೋಚಿಸುತ್ತಿರುವಾಗಲೆ, ಬೋಧಗಯಾ ಬಂತು. ಪ್ರಾಚೀನ ಕಾಲದಲ್ಲಿ ಉರುವೇಲಾ ಎಂದು ಹೆಸರಾಗಿದ್ದ ಇದು, ಬುದ್ಧನ ಕಾರಣದಿಂದ ಈಗಿರುವ ಹೆಸರನ್ನು ಪಡೆಯಿತು. ಇಳಿದವನೇ ನೇರ ಚೈತ್ಯಾಲಯಕ್ಕೆ ಹೋದೆ. ಒಂದು ದೊಡ್ಡ ತಗ್ಗಿನಲ್ಲಿ ಕಲ್ಲಿಂದ ಕೆತ್ತಿದ ಗೋಪಿನ ಜೋಳದ ತೆನೆಯಂತೆ ಚೈತ್ಯಾಲಯವು ಆಗಸಕ್ಕೆ ನಿಮಿರಿನಿಂತಿತ್ತು. ಶಿಖರದ ತುಂಬ ಸ್ತೂಪಾಕಾರದ ಕಿಂಡಿಗಳಲ್ಲಿ ಭೂಸ್ಪರ್ಶ ಮುದ್ರೆಯಲ್ಲಿ ಕುಳಿತಿರುವ ಬುದ್ಧನ ಮೂರ್ತಿಗಳು. ಅದನ್ನೆ ಗೂಡುಮಾಡಿಕೊಂಡು ಬುದ್ಧಮೂರ್ತಿಗಳ ತಲೆಗಳ ಮೇಲೆ ಕುಳಿತು ವಿರಮಿಸುತ್ತಿರುವ ಪಾರಿವಾಳಗಳು. ಸುತ್ತಲೂ ನೂರಾರು ಸ್ತೂಪಾಕೃತಿಗಳು, ಶಿಲಾ ಸ್ಮಾರಕಗಳು. ಆದರೆ ಧಮ್ಮವನ್ನು ನಿಜಜೀವನದಲ್ಲಿ ಬದುಕುವ ಜೀವಂತ ಸಮಾಜಗಳು ನನಗೆ ಹೆಚ್ಚು ಕಾಣಿಸಲಿಲ್ಲ. ಚೈತ್ಯಾಲಯವನ್ನು ಕಂಡಾಗಲೂ, ಗೊಮ್ಮಟೇಶ್ವರನನ್ನು



ಕಂಡಾಗ ಆಗುವಂತೆ 'ಯಾರೊ ತೆಕ್ಕನೆ ಬಾಯ್ಮುಚ್ಚಿ ಒಡಿದ' ಭವ್ಯಾನುಭವ ಆಗ... ಚೈತ್ಯಾಲಯದ ಗರ್ಭದೊಳಗಿದ್ದ ಅರೆನಿಮೀಲಿತ ನೇತ್ರನಾಗಿ ಧ್ಯಾನಮುದ್ರೆ... ಕುಳಿತಿರುವ ವಜ್ರದ ಹರಳುಗಳಿಂದ ಶೃಂಗರಿತ ಚಿನ್ನದ ಬಣ್ಣದಿಂದ ಲೇಪಿತ ಬು... ಮೂರ್ತಿ ಮುದ್ದಾಗಿತ್ತು. ಅದೇಕೊ ಮನಸ್ಸನ್ನು ತುಂಬಿಕೊಳ್ಳಲಿಲ್ಲ. ಬೋಧಗ... ಒಂದು ಪ್ರವಾಸಿ ತಾಣ. ಬಂದವರೆಲ್ಲರೂ ನುಗ್ಗಿ ಗದ್ದಲಮಾಡುತ್ತ ಫೋಟೊ ಸೆಳೆ... ಇರುತ್ತಾರೆ. ಧ್ಯಾನಕ್ಕೆ ಬೇಕಾದ ಏಕಾಂತವೇ ಅಲ್ಲಿಲ್ಲ. ಧ್ಯಾನ ಮಾಡುವವರಿಗೆಂದು ಒ... ವನವನ್ನು ಕಾದಿರಿಸಿದ್ದಾರೆ. ಚೈತ್ಯಾಲಯದ ಹಿಂದಿರುವ ಮರಗಳ ಕೆಳಗೆ ಕೂಡ ನಾ... ದೇಶಗಳಿಂದ ಬಂದ ಸಾಧಕರು ಭಿಕ್ಷುಗಳು ಧ್ಯಾನ ಮಾಡುತ್ತಿರುವರು. ಚೈತ್ಯಾಲ... ಮುಂದಿನ ಗೌಜು ಹಿಂದಿಲ್ಲ.

ಚೈತ್ಯಾಲಯದ ತುಂಬ ಬುದ್ಧನ ಬಗೆಬಗೆಯ ವಿನ್ಯಾಸದ ಪ್ರತಿಮೆಗಳನ್ನು ಹಾ... ನೂರಾರು ಸ್ತೂಪಗಳನ್ನು ನೋಡುತ್ತ ಯಾಕೊ ಮಂಕು ಆವರಿಸತೊಡಗಿತು. ಮೊ... ಕಾಣುವ ಬುದ್ಧನ ಪ್ರತಿಮೆ ಉಕ್ಕಿಸಿದ ತನ್ಮಯತೆ ಮತ್ತು ಬೀರಿದ ಪ್ರಭಾವಗಳನ್ನು, ನ... ಕಾಣುತ್ತ ಹೋದ ಪ್ರತಿಮೆಗಳು, ಏಕತಾನತೆ ಹುಟ್ಟಿಸಿ ಕಳೆದುಹಾಕುತ್ತವೆ. ಈ ಪ್ರ... ಚೈತ್ಯ ವಿಹಾರ ಸ್ತೂಪಗಳು ಬುದ್ಧನ ತತ್ವಚಿಂತನೆಯಿಂದ ದೂರ ಕರೆದೊಯ್ಯುತ್ತವೆ...

ಥವಾ ಹಾಗೆ ದೂರಹೋದಾಗಲೇ ಪ್ರತಿಮಾ ಸಂಸ್ಕೃತಿ, ಚೈತ್ಯಾಲಯಗಳ ಸಂಸ್ಕೃತಿ ಆರಂಭವಾಗುತ್ತದೆಯೇ ಎಂಬ ಕೆಯೂ ನುಸುಳಿತು. ಸಾಕಾರ ಸಗುಣ ದೇವರಿಗೆ ಶರಣಾಗತ ಭಕ್ತಿ ಅರ್ಪಿಸುವ ಧರ್ಮಗಳಿಗೆ ಆರಾಧನೆಯ ಚರಣೆಗಳು ಸಾಕು. ಆದರೆ ಜಿಜ್ಞಾಸೆಯ ಮೂಲಕವೇ ವ್ಯಕ್ತಿಯನ್ನು ರೂಪಾಂತರಗೊಳಿಸುವ ದರ್ಶನ ಪ್ರಧಾನ ರ್ಮ ಮತ್ತು ಪಂಥಗಳಿಗೆ ಆರಾಧನಾ ಆಚರಣೆಗಳೇ ಒಂದು ತೊಡಕು. ಆದರೆ ಆರಾಧನೆಗಳಿಲ್ಲದೆ ಧರ್ಮ ೂರ್ತವಾಗಿ ಉಳಿಯುವುದಿಲ್ಲ. ಅದನ್ನು ಮೂರ್ತ ಸ್ಥಾವರ ಮತ್ತು ಆಚರಣೆಗಳ ರೂಪದಲ್ಲಿ ಉಳಿಸಿಕೊಂಡರೆ ರ್ಮದ ದರ್ಶನದ ಕೇಂದ್ರಬಿಂದುವೇ ವಿಚಲಿತವಾಗುತ್ತದೆ. ಎಂತಲೇ ಇರಬೇಕು. ಚಿಂತನೆ ಮತ್ತು ಕ್ರಿಯೆ ಪ್ರಧಾನವಾದ ನ್ ಧರ್ಮದ ಶಾಖೆಯು, ಬೋಧಿವೃಕ್ಷದ ಟೊಂಗೆಯನ್ನು ಒಯ್ದು ನಮ್ಮೂರಲ್ಲಿ ಬೆಳೆಸಿದರೆ ನಮ್ಮದೇ ಮರ ಗುವ ಹಾಗೆ, ಬೆಳೆದಿದ್ದು. ಹಾಗೆ ಕಂಡರೆ ಮೂರ್ತಿ ಚೈತ್ಯಾಲಯ ಸ್ತೂಪಗಳಂಥ ಸ್ಥಾವರಗಳಿದ್ದರೂ, ಬೌದ್ಧತಾಣ ಲ್ಲಿ ಪುರೋಹಿತಶಾಹಿ ಎಂಬುದೇನಿಲ್ಲ. ಭಂತೆಗಳು ಮೂಲತಃ ಜ್ಞಾನಾರ್ಜನೆ ಮಾಡುವವರು. ಬಲಾಢ್ ೕನಾವನ್ನು ಎದುರುಹಾಕಿಕೊಂಡು ದೇಶಭ್ರಷ್ಟರಾದ ಟಿಬೆಟಿಯನರು ಚದುರಿಹೋಗದಂತೆ ಕಲೆಹಾಕಿಕೊಂಡು, ಾತೃದೇಶದ ಬಿಡುಗಡೆಯಾಗಿ ಸೆಣಸಾಡುತ್ತಿರುವ ಚಳುವಳಿಗಾರನೂ ಚತುರ ರಾಜಕಾರಣಿಯೂ ಆಗಿರುವ ೖಲಾಮ, ತಮ್ಮ ಮೊಗದಲ್ಲಿ ಹಸುಗೂಸಿನ ಮುಗ್ಧತೆಯನ್ನು ಉಳಿಸಿಕೊಂಡಿರುವುದು. ಹೇಗೆ ಸಾಧ್ಯವಾಗಿರುವುದು ಜ್ಞಾನದಿಂದಲೇ ಇರಬೇಕು. ಟಿಬೆಟಿಯನ್ ಬೌದ್ಧತಾಣಗಳಾದ ಮುಂಡಗೋಡು, ಕುಶಾಲನಗರ ಧರ್ಮಶಾಲೆ ಲ್ಲಿ ನೋಡುವಾಗಲೂ ಅವು ವಿದ್ಯಾಕೇಂದ್ರಗಳು ಅನಿಸುತ್ತದೆ ಹೊರತು, ಪೂಜಾಸ್ಥಾನಗಳು ಅನಿಸುವುದಿಲ್ಲ. ಹಾಯಾನಿಗಳಿಗೆ ಹೋಲಿಸಿದರೆ ಹೀನಯಾನ ತೇರಾಪಂಥದವರೇ ಬುದ್ಧನ ಪಠ್ಯಗಳಿಗೆ ಚಿಂತನೆಗಳಿಗೆ ಮತ್ತಷ್ಟು ತ್ತಿರವಾಗಿ ಉಳಿದಿರುವರು. ಬೋಧಗಯೆಯ ಚೈತ್ಯಾಲಯದ ಆವರಣದಲ್ಲಿ ಟಿಬೆಟ್ಟಿನ ಮಹಾಯಾನ ಬೌದ್ಧರು ಟ್ಟಲುಗಳಲ್ಲಿ ನೀರುತುಂಬಿಸಿ ಹೂವುಗಳನ್ನು, ತುಪ್ಪ ತುಂಬಿಸಿ ದೀಪಗಳನ್ನು ಹಚ್ಚುತ್ತಿದ್ದರೆ, ಶ್ರೀಲಂಕೆಯ ಹೀನಯಾನ ೌದ್ಧರು ತ್ರಿಪಿಠಿಕಗಳನ್ನು ಪಠಣೆಸುತ್ತಿದ್ದುದು ಇದಕ್ಕೆ ಸಾಕ್ಷಿ. ಆದರೆ ಶ್ರೀಲಂಕನರ ಮಂತ್ರಪಠಣ ಕೂಡ ಪೂಜೆಯಷ್ಟೇ ಾಂತ್ರಿಕ ಅನಿಸುತ್ತಿತ್ತು. ಚೈತ್ಯಾಲಯದ ಹಿಂದೆ, ಮರದ ನೆರಳಲ್ಲಿ ಕುಳಿತು ಧ್ಯಾನಮಗ್ನರಾಗಿರುವ ಭಂತೆಗಳಲ್ಲದ ೌಕಿಕ ಸಾಧಕರೇ ನಿಜವಾದ ತತ್ವಾನ್ವೇಷಿಗಳೇನೊ ಅನಿಸಿತು. ನಾನೂ ಅಲ್ಲಿ ಕೊಂಚ ಹೊತ್ತು ಧ್ಯಾನಕ್ಕೆ ಕುಳಿತೆ. ಅರಳಿ ರದ ತುಂಬ ತುಂಬಿಕೊಂಡು ಹಣ್ಣನ್ನು ತಿನ್ನಲು ಬಂದಿರುವ ಹಕ್ಕಿಗಳ ಕಲರವವೇ ಕಿವಿಯನ್ನು ತುಂಬಿತು.

ನನಗೆ ಕುತೂಹಲ ಹುಟ್ಟಿಸಿದ್ದು ಬೌದ್ಧಚೈತ್ಯಾಲಯದ ಎದುರಿಗಿದ್ದ ಶಿವಲಿಂಗದ ಗುಡಿ ಮತ್ತು ಭೈರವಿಯ ೂರ್ತಿ. ಇದಕ್ಕೆ ಕಾರಣವಿದೆ. ಬೋಧಗಯೆ ೧೯ನೇ ಶತಮಾನದ ತನಕ ಪಾಳುಬಿದ್ದ ಜಾಗವಾಗಿತ್ತು. ಆಗ ಇಲ್ಲಿಗೆ ಂದ ಒಬ್ಬ ಶೈವಸಾಧು ಇದನ್ನು ತನ್ನ ಸಾಧನೆಯ ಜಾಗವಾಗಿಸಿಕೊಂಡನು. ಈಗಲೂ ಬೋಧಗಯೆಯಲ್ಲಿ ಬೌದ್ಧ ತ್ತು ಶೈವಸಮಾಧಿಗಳು ಒಟ್ಟೊಟ್ಟಿಗಿವೆ. ಶೈವಸಮಾಧಿಯ ಮೇಲೆ ಲಿಂಗುವಿನ ಕೆತ್ತನೆಯಿದ್ದರೆ ಬೌದ್ಧಸಮಾಧಿಯ ೕಲೆ ಸ್ತೂಪದ ಕೆತ್ತನೆಯಿದೆ. ಭಾರತದಲ್ಲಿ ಬೌದ್ಧವು ಹೆಚ್ಚು ಒಡನಾಟ ಮಾಡಿದ್ದು ಶೈವದ ಜತೆ. ಕಾರಣ ಎರಡೂ ೕಹದ ಮೂಲಕ ಸಾಧನೆ ಮಾಡುವ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವ ಯೋಗಮಾರ್ಗಿಗಳು. ಥಶೈವವೂ ಮಹಾಯಾನ ಬೌದ್ಧವೂ ೧೦ನೇ ಶತಮಾನದ ಸುಮಾರಿಗೆ ಟಿಬೆಟು, ನೇಪಾಳ, ಬಂಗಾಲಗಳಲ್ಲಿ ಹಾಮಿಲನ ಸಾಧಿಸಿದವು. ಇದರ ಪರಿಣಾಮ ಮಚೇಂದ್ರನಾಥನು ಶೈವಯೋಗಿಯೂ ಬೌದ್ಧಯೋಗಿಯೂ ದನು. ಶೈವದ ಜತೆ ಬೌದ್ಧಧರ್ಮವು ಸಹಬಾಳುವೆ, ಕೊಡುಕೊಳೆ ಮಾಡಿದ ಒಂದು ಅಧ್ಯಾಯ, ನಮ್ಮ ಂಗಳೂರಿನ ಕದ್ರಿಯಲ್ಲಿಯೂ ಇದೆ. ಧರ್ಮಸ್ಥಳದಲ್ಲಿಯೂ ಇದೆ. ಮಹಾಯಾನ ಬೌದ್ಧವು ಇನ್ನೂ ಒಂದು ಹೆಜ್ಜೆ ುನ್ನಡೆದು ಶಿವ, ಕಾಳಿ, ಭೈರವರನ್ನು ತನ್ನ ದೇವತೆಗಳನ್ನಾಗಿಸಿಕೊಂಡಿತು.

ನನಗೆ ಖುಶಿ ಕೊಟ್ಟಿದ್ದು ಬೋಧಗಯೆಯಲ್ಲಿ ಬುದ್ಧನಿಗ ತಾವರೆಯನ್ನು ಅರ್ಪಿಸುತ್ತಿದ್ದುದು. ಇಲ್ಲಿರುವ ಎಲ್ಲ ್ಪದಲ್ಲಿಯೂ ಬುದ್ಧನು ಒಂದೊ ತಾವರೆಯ ಮೇಲೆ ಕುಳಿತಿರುವನು ಇಲ್ಲವೇ ಕೈಲಿ ತಾವರೆ ಹಿಡಿದು ಪದ್ಮಪಾಣಿ ಾಗಿರುವನು. ಭಾರತದಿಂದ ಬೌದ್ಧಧರ್ಮವನ್ನು ಟಿಬೆಟಿಗೆ ಒಯ್ದ ಗುರುವಿನ ಹೆಸರು ಕೂಡ ಪದ್ಮಸಂಭವ. ಬೌದ್ಧರು ರಸ್ಪರ ನಮಸ್ಕಾರವನ್ನು 'ಓಂ ಮಣಿ ಪದ್ಮಯೇ' ಎನ್ನುತ್ತಾರೆ. ಆದ್ದರಿಂದ ತಾವರೆಗೂ ಬೌದ್ಧಶಿಲ್ಪಕ್ಕೂ ಆಳದ ಬಂಧವಿದೆ. ಬದಾಮಿಯ ೩ನೇ ಗುಹೆಯಲ್ಲಿರುವ ಬುದ್ಧನೂ ಪದ್ಮಪಾಣಿ. ಆದರೆ ಅವನ ಕೈಯಲ್ಲಿನ ಪದ್ಮವಿನ್ನೂ ರಳುತ್ತಿರುವ ಮೊಗ್ಗು. ಅದನ್ನು ಅರಳಲು ಕೊಡೆವು ಎಂಬಂತೆ ಪದ್ಮಪಾಣಿ ಮೂರ್ತಿಯನ್ನು ಭಗ್ನಗೊಳಿಸಲಾಗಿದೆ. ದರೆ ಪದ್ಮವು ಮಾತ್ರ ಹಾಗೇ ಉಳಿದಿದೆ. ವಿಕಸನ ಸಂಕುಚನ ಮಾಡಬಲ್ಲ ತಾವರೆ, ಯೋಗಿಯ ಮನಸ್ಸಿನಂತೆ. ೆರಲ್ಲಿ ಹುಟ್ಟಿದರೂ ಸೂರ್ಯನಿಗಾಗಿ (ಜ್ಞಾನ) ತಲೆಯೆತ್ತಿ ಊರ್ಧ್ವಗಾಮಿಯಾಗಿ ನಿಲ್ಲುವ ಹೂವು. ಕರ್ನಾಟಕ ಲ್ಲಿರುವ ತಾವರೆಕೆರೆಗಳು ಬೌದ್ಧಧರ್ಮಕ್ಕೆ ಸಂಬಂಧವುಳ್ಳವೇ ಎಂಬುದನ್ನು ಪರಿಶೀಲಿಸಬೇಕು. ಬೌದ್ಧಯಕ್ಷಿಯಾದ ರೆಯ ಹೆಸರಲ್ಲಿ ಕೆರೆಗಳು ನಿರ್ಮಾಣವಾಗುತ್ತಿದ್ದವು. ನನ್ನೂರು ತರೀಕೆರೆಯೂ ತಾರಾಭಗವತಿಯ ಕೆರೆಯ ಕ್ಷಿಪ್ತರೂಪವೇ ಎಂದು ತಿಳಿದಾಗ ನನಗೆ ಆನಂದವಾಗಿತ್ತು.

ಬೋಧಗಯೆಯ ವಿಶೇಷವೆಂದರೆ, ಅಲ್ಲಿ ಎಲ್ಲ ದೇಶಗಳೂ ತಮ್ಮ ವಿಹಾರಗಳನ್ನು ನಿರ್ಮಿಸಿಕೊಂಡಿರುವುದು. ಬ್ಬ ದೊರೆಯನ್ನು ಸೇವಿಸಲು ನಾನಾ ರಾಷ್ಟ್ರಗಳ ರಾಯಭಾರ ಕಛೇರಿಗಳು ತೆಗೆದಂತೆ ಅವು ಕಾಣುತ್ತವೆ. ಚೀನಾ, ತಾನ, ಟಿಬೆಟ್, ಜಪಾನ್, ಶ್ರೀಲಂಕಾ, ಮ್ಯಾನ್ಮಾರ್ – ಹೀಗೆ ಪ್ರತಿದೇಶದ ವಾಸ್ತುರಚನೆ ಮತ್ತು ಸಾಂಸ್ಕೃತಿಕ ಶಿಷ್ಟತೆಗಳಲ್ಲಿ ವು ರೂಪುಗೊಂಡಿವೆ. ಒಳಗಿನ ಬುದ್ಧನ ಮುಖ ಕೂಡ ಆಯಾ ದೇಶದವರ ಮುಖಚಹರೆಯನ್ನೇ ಹೋಲುತ್ತದೆ. ಒಬ್ಬನೇ ದ್ಧ ಬೇರೆಬೇರೆ ದೇಶ ಮತ್ತು ಸಮಾಜಗಳಲ್ಲಿ ಪಡೆದ ರೂಪಾಂತರವು ವಿಸ್ಮಯ ಹುಟ್ಟಿಸುತ್ತದೆ. ವಿಶೇಷವೆಂದರೆ ಇಲ್ಲಿ ಂಗ್ಲಾದೇಶದ ವಿಹಾರವೂ ಇರುವುದು. ಥಾಯಿಲೆಂಡಿನ ವಿಹಾರದಲ್ಲಿ ದೋಣಿಯಲ್ಲಿ ಮುಳುಗುತ್ತಿರುವ ನಾವಿಕರಿಗೆ ಕಾಗಿ ದಾರಿ ತೋರುವವನಾಗಿ ಬುದ್ಧನಿರುವ ದೊಡ್ಡ ವರ್ಣಚಿತ್ರವಿತ್ತು. ವಿಹಾರಗಳು ಆಯಾ ದೇಶಗಳ ಸಂಸ್ಕೃತಿಯನ್ನು



ಮಾತ್ರವಲ್ಲ, ಸಿರಿವಂತಿಕೆಯನ್ನೂ ಸೂಚಿಸುವಂತಿವೆ. ಜಪಾನಿ ವಿಹಾರವು ಎಲ್ಲಕ್ಕಿಂತ ಹೆಚ್ಚು ವೈಭವದಲ್ಲಿದೆ. ವಿಚಿತ್ರ ಅನಿಸಿದ್ದು ಅತಿ ಎತ್ತರದ ಪ್ರತಿಮೆಯನ್ನು ಸ್ಥಾಪಿಸುವ ಸ್ಪರ್ಧೆಯನ್ನು ಈ ಬೌದ್ಧ ದೇಶಗಳು ಕೈಗೆತ್ತಿಕೊಂಡಿರುವುದು.

೪

ಸಂಜೆಯ ತನಕ ಬೋಧಗಯೆಯಲ್ಲಿ ಕಳೆದೆ. ಬೋಧಗಯೆಯನ್ನು ಬಿಟ್ಟು ಗಯೆಗೆ ಬರುವಾಗ ಒಂದು ರಿಕ್ಷಾ ಹತ್ತಿದೆ. ಅದರ ತುಂಬ ಕಣ್ಣಿಗೆ ಪಟ್ಟಿಕಟ್ಟಿಕೊಂಡ, ಕಪ್ಪು ಕನ್ನಡಕ ಹಾಕಿದ ಕರುಣಾನಿಧಿಗಳೇ ತುಂಬಿಕೊಂಡಿದ್ದರು. ಯಾಕೆಂದು ವಿಚಾರಿಸಲು ಬೋಧಗಯೆಯಲ್ಲಿ ಕಣ್ಣು ಚಿಕಿತ್ಸೆಯ ಕ್ಯಾಂಪು ನಡೆಯುತ್ತಿತ್ತು. ಅದಕ್ಕೆ ಸುತ್ತಮುತ್ತಲಿನ ಕಣ್ಣುಬೇನೆಯ ರೋಗಿಗಳು, ಹೆಚ್ಚಾಗಿ ವಯಸ್ಸಾದವರು ಮತ್ತು ಬಡವರು ಆಗಮಿಸಿದ್ದರು. ರೋಗಿ ಮತ್ತು ವಯಸ್ಸಾದವರನ್ನು ನೋಡಿ ರಾಜಕುಮಾರ ಸಿದ್ಧಾರ್ಥನ ಮನಸ್ಸು ಕದಡಿಹೋಗಿತ್ತು. ಬುದ್ಧನು ಕಣ್ಣು ತೆರೆದಿರುವ ಶಿಲ್ಪ ಅಥವಾ ಚಿತ್ರಗಳೇ ಕಡಿಮೆ. ಹೆಚ್ಚಿನ ಶಿಲ್ಪ ಮತ್ತು ಚಿತ್ರಗಳಲ್ಲಿ ಅವನು ಕಣ್ಣನ್ನು ಮುಚ್ಚಿ ಧ್ಯಾನನಿರತನಾಗಿದ್ದಾನೆ. ಆದರೆ ಧ್ಯಾನಕ್ಕೆ ಕಣ್ಮುಚ್ಚುವ ಮೊದಲು ಜಗತ್ತನ್ನೆಲ್ಲ ಕಣ್ತೆರೆದು ಸಾಕಷ್ಟು ನೋಡಿದ್ದಾನೆ. ಬೋಧಗಯೆಯ ಮುಖ್ಯ ಬುದ್ಧಮೂರ್ತಿ ಕಣ್ತೆರೆದ ಅನಿಮಿಷ ಲೋಚನ. ಬುದ್ಧನಿಗೆ ಜ್ಞಾನೋದಯವಾದ ಬಳಿಕ ಬೋಧಿ ಮರವನ್ನು ಬಹುಕಾಲ ದಿಟ್ಟಿಸಿ ನೋಡಿದ್ದರ ಸಂಕೇತವಾಗಿ ಇದು ರೂಪುಗೊಂಡಿರಬೇಕು. ಉಳಿದಂತೆ ಬುದ್ಧ ಕಣ್ಮುಚ್ಚಿ ಕುಳಿತ ನಿಮಿಷ ಲೋಚನನೇ. ಆದರೆ ಅವನು ಕೊಟ್ಟ ಚಿಂತನೆ, ಲೋಕದ ಕುರುಡುತನಕ್ಕೆ ಮದ್ದಾಗಿ ಒದಗಿಬಂದಿತು. ಅಂತಹ ಬುದ್ಧನಿಗೆ ಜ್ಞಾನ ದಕ್ಕಿದ ಊರಲ್ಲಿ, ಅತಿ ಎತ್ತರದ ಸ್ಥಾವರ ಪ್ರತಿಮೆ ಸ್ಥಾಪಿಸುವುದಕ್ಕಿಂತ ಈ ಭಿಷಜದಾನ ಅರ್ಥಪೂರ್ಣ ಅನಿಸಿತು. ಕಣ್ಣಪಟ್ಟಿ ಕಟ್ಟಿಕೊಂಡು ನಾಳೆ ಬರಲಿರುವ ದೃಷ್ಟಿಗಾಗಿ ತವಿಸುತ್ತಿರುವ ಈ ರೋಗಿಗಳ ಜತೆ ಪಯಣ ಮಾಡಿ ಮರಳಿ ಬಂದೆ.

ಬೋಧಗಯೆ ಎಂದರೆ, ಹಣ್ಣುತಿನ್ನಲು ಬಂದಿದ್ದ ಹಕ್ಕಿಗಳು, ಧ್ಯಾನ ಮಾಡಗೊಡದಂತೆ ಮಾಡುತ್ತಿದ್ದ ಕಚಿಪಿಚಿ ಕಲರವವೇ ನೆನಪಾಗುತ್ತದೆ.

ಡಾ|| ರಹಮತ್ ತರೀಕೆರೆ
'ಸೂಫಿ', ಎಂ. ಪಿ. ಪ್ರಕಾಶ್ ನಗರ, ಹೊಸಪೇಟೆ - ೫೮೩ ೨೦೧

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ


ಇವರಿಂದ ರಚಿತವಾದ ಕೃತಿಗಳು

ಸಂಪುಟ 1 ; ರೂ. 320/-



ಸಂಪುಟ 2 ; ರೂ. 250/-

ಸಂಪುಟ 3 ; ರೂ. 425/-



ರೂ. 995/-

ಪ್ರಸ್ತುತ ಭೂಗೋಳ ಸಂಗಾತಿ ಪುಸ್ತಕವನ್ನು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿ ವೃಂದಕ್ಕೆ ವಿಶಾಲವಾದ ವಿಶ್ವ ಸೌರವ್ಯೂಹ ಹಾಗೂ ಮಾನವನ ಆವಾಸ ಸ್ಥಾನವಾದ ಪೃಥ್ವಿಯನ್ನು ಕುರಿತ ಆಳವಾದ ಅಧ್ಯಯನ ಮಾಡಲು ವಿಶೇಷವಾಗಿ ರಚಿಸಲಾಗಿದೆ. ಶಿಲೆಗಳು ಮತ್ತು ಭೂ ಮೇಲ್ಮೈ ಸ್ವರೂಪಗಳನ್ನು ರೂಪಿಸಿ ಹಾಗೂ ಏರ್ಪಡಿಸಿ ವೈವಿಧ್ಯಮಯವಾದ ಸ್ವರೂಪಗಳನ್ನು ಸೃಷ್ಟಿಸುವ ಶಕ್ತಿಗಳಿಂದ ಗೋಚರಿತ ಮತ್ತು ಆಕರ್ಷಣೀಯ ವಿವಿಧ ಮಜಲುಗಳನ್ನು ಈ ಪುಸ್ತಕವು ಪ್ರತಿಬಿಂಬಿಸುತ್ತದೆ.

.... ಈ ಸಂಪುಟದಲ್ಲಿ ನಾವು ಜೀವಮಂಡಲ ಎಂಬ ನಾಲ್ಕನೆಯ ಮಂಡಲದ ಬಗ್ಗೆ ಪರಿಚಯ ಮಾಡಲು ಪ್ರಯತ್ನಿಸಿದ್ದೇವೆ... ಇಲ್ಲಿ ಜೀವ ಮಂಡಲದ ಪ್ರಾಮುಖ್ಯತೆ ಹಾಗೂ ಪರಿಸರದ ಮೇಲೆ ಮಾನವನ ಪ್ರಭಾವದಿಂದ ಉಂಟಾದ ಪರಿಸರದ ನಾಶ ಮತ್ತು ಪರಿಸರ ಮಾಲಿನ್ಯ ಕುರಿತು ಸವಿಸ್ತಾರವಾಗಿ ಬರೆಯಲಾಗಿದೆ.

... 'ಭೂಗೋಳ ಸಂಗಾತಿ ಸಂಪುಟ 3 'ಪೃಥ್ವಿಯ ಮೇಲೆ ದೊರೆಯುವ ವಿವಿಧ ಬಗೆಯ ಸಂಪನ್ಮೂಲಗಳು, ವಿವಿಧ ಪ್ರದೇಶಗಳಲ್ಲಿ ಮಾನವ ಚಟುವಟಿಕೆಗಳಲ್ಲಿನ ವ್ಯತ್ಯಾಸಗಳು ಹಾಗೂ ಅವುಗಳ ಪರಿಣಾಮ ಸ್ವರೂಪವಾಗಿ ಮಾನವನ ವಿವಿಧ ಉದ್ಯೋಗಗಳ, ಉಂಟಾದ ಸಂಪನ್ಮೂಲಗಳ ಅಭಿವೃದ್ಧಿಗಳನ್ನು ವಿವರಿಸುತ್ತದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸೃಜನಾತ್ಮಕ ಶಕ್ತಿಯನ್ನು ಹೆಚ್ಚಿಸಲು ಹಾಗೂ ಭೂಗೋಳ ಶಾಸ್ತ್ರದ ಅಧ್ಯಯನವನ್ನು ಚಟುವಟಿಕೆ ಆಧಾರಿತವನ್ನಾಗಿ ಮಾಡಲು ಸೂಕ್ತ ಚಟುವಟಿಕೆಗಳನ್ನು ಸೂಚಿಸಲಾಗಿದೆ... ಮಾನವನ ಚಟುವಟಿಕೆಗಳ ಮೇಲೆ ನೈಸರ್ಗಿಕ ಪರಿಸರವು ಪ್ರಭಾವ ಬೀರುತ್ತದೆ ಹಾಗೂ ಮಾನವನು ನೈಸರ್ಗಿಕ ಪರಿಸರದೊಳಗೆ ತನ್ನ ಲಾಭಕ್ಕಾಗಿ ಮಧ್ಯೆ ಪ್ರವೇಶಿಸುತ್ತಾನೆ ಎಂಬುದನ್ನು ಈ ಸಂಪುಟವು ವಿವರಿಸುತ್ತದೆ.

... ಈ ಪುಸ್ತಕದ ವಿಷಯವು ಪ್ರೌಢಶಾಲಾ ಹಂತದ ಪಠ್ಯ ವಸ್ತುವನ್ನು ಒಳಗೊಂಡಿದೆ. ಭೂಮಿಯ ಉಗಮದಿಂದ, ಜೀವಿಗಳ ವಿಕಾಸದಿಂದ ಹಿಡಿದು ಆಧುನಿಕ ಯುಗದ ಘಟನೆಗಳನ್ನು ಒಳಗೊಂಡಿದೆ... ಚಿತ್ರ ನೋಡಿ ನಿರೂಪಣೆ ಓದುತ್ತ ಹೋದರೆ ಗತಕಾಲದ ವಾಸ್ತವ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತದೆ.... ಚರಿತ್ರೆಯ ಸಾಮಾಜಿಕ, ಸಾಂಸ್ಕೃತಿಕ, ಸಾಧನೆಗಳ ದರ್ಶನ, ಜನತೆಯ ಜೀವನ ರೂಪುಗೊಂಡ ವಿಧಾನದ ಪರಿಚಯ, ಮಾನವ ಜನಾಂಗದ ಅಧ್ಯಯನ, ಕಾಲದೊಂದಿಗೆ ಮಾನವರ ಪಯಣ ಎಂಬ ಮಹತ್ವದ ಅಂಶಗಳನ್ನು ಮಕ್ಕಳಿಗೆ ತಿಳಿಯಹೇಳಿ, ಚರಿತ್ರೆಯ ಬೋಧನೆಗೆ ಹೊಸ ಆಯಾಮಗಳನ್ನೂ ಸೂಚಿಸುವುದು. ವೈಜ್ಞಾನಿಕ ದೃಷ್ಟಿಕೋನವನ್ನು ಮೂಡಿಸುವುದು ಹಾಗೂ ಚರಿತ್ರೆಯ ಅಭ್ಯಾಸವನ್ನು ಸುಸಂಗತಗೊಳಿಸುವುದೇ ಈ ಪುಸ್ತಕ ರಚನೆಯ ಮೂಲ ಆಶಯವಾಗಿದೆ.

ಮಲಯಾಳ ಮೂಲ : **ಡಾ|| ಕೆ. ಪಿ. ಕೃಷ್ಣನ್ ಕುಟ್ಟಿ**

ಕನ್ನಡಕ್ಕೆ : **ಪಾರ್ವತಿ ಜಿ. ಐತಾಳ್**

ಎಡಪಂಥೀಯ ಕಲ್ಪನೆ ಎಂದರೇನು ?

ಎಡಪಂಥೀಯ ಕಲ್ಪನೆ ಎಂದರೇನೆಂಬ ಪ್ರಶ್ನೆಗೆ ಅನೇಕ ಬೂರ್ಷ್ವಾ ಚಿಂತಕರು ಅಸ್ಪಷ್ಟವೂ ಗೊಂದಲಮಯವೂ ಆದ ಉತ್ತರಗಳನ್ನು ಕೊಡುತ್ತಾರೆ. ಎಷ್ಟೋ ಬಾರಿ ಅರ್ಥವಾಗದ ಭಾಷೆಯಲ್ಲಿ ಅವರು ತಮ್ಮ ಗೊಂದಲವನ್ನು ಇತರರಿಗೆ ದಾಟಿಸುತ್ತಾರೆ. ಅರ್ಥಹೀನ ಶಬ್ದಾಡಂಬರಗಳ ಮೇಲೆ ನಿಂತು ಕೈಕಾಲು ಬಡಿಯುವ ಅವರ ಉತ್ತರಗಳು ಸಾಮಾನ್ಯಪ್ರಜ್ಞೆಯ ಮೇಲ್ಪದರದಲ್ಲಿ ಅಲೆಗಳನ್ನೂ ಗುಳ್ಳೆಗಳನ್ನೂ ಸೃಷ್ಟಿಸಿ ಗಮನಾರ್ಹವಾಗುತ್ತಲೇ ಸತ್ಯದ ಆಳದಿಂದ ಗಮನವನ್ನು ಅಗಲಿಸಿ ದೂರ ಮಾಡುತ್ತವೆ. ಎಡಪಂಥೀಯ ಕಲ್ಪನೆಯ ಕೊಂಬು ಮತ್ತು ಸೊಂಡಿಲುಗಳನ್ನು ಬೇರೆ ಬೇರೆಯಾಗಿ ತಡವಿ ಮುಟ್ಟಿ ಸತ್ಯವನ್ನು ಕಂಡುಹಿಡಿದೆವೆಂದು ಹೆಮ್ಮೆಯಿಂದ ಹೇಳಿಕೊಳ್ಳುವವರು ತಮ್ಮ ಸ್ವಂತ ಅಂಧತ್ವವನ್ನು ಗುರುತಿಸಿಕೊಳ್ಳುವುದಿಲ್ಲ ಎಂಬುದೇ ಸತ್ಯ. ಭಾವನಾವಾದದ ಜೌಗು ನೆಲದಲ್ಲಿ ತಲೆಕೆಳಗೆ ಮಾಡಿ ನಿಲ್ಲುವುದರಿಂದ ಬೂರ್ಷ್ವಾ ಬುದ್ಧಿಜೀವಿಗಳಿಗೆ ಎಡಪಂಥೀಯ ಕಲ್ಪನೆಯ ಶಕ್ತಿಯನ್ನೂ ದೃಢತೆಯನ್ನೂ ನೋಡುವುದು ಸಾಧ್ಯವಾಗುವುದಿಲ್ಲ. 'ಸ್ವಾತಂತ್ರ್ಯ', 'ವ್ಯಕ್ತಿತ್ವ', 'ಮೂಲಭೂತ ತತ್ವ', 'ಆತ್ಮಾವಿಷ್ಕಾರ' ಮುಂತಾದ ಶಬ್ದಗಳ ಪ್ರಯೋಗಗಳ ಮೂಲಕ ತಮ್ಮ ಸ್ವಂತ ನಿಲುವುಗಳ ಆಂತರಿಕ ಟೊಳ್ಳುತನವನ್ನು ಅವರು ಮುಚ್ಚಿಡುತ್ತಾರೆ. ವಾಸ್ತವದ ವಸ್ತುನಿಷ್ಠ ವಿದ್ಯಮಾನಗಳ ಪರಸ್ಪರ ಸಂಬಂಧಗಳಲ್ಲಿ ಗುರುತಿಸಲು ಪ್ರಯತ್ನಿಸದೆ ಅವರು ಭಾವನಾವಾದದ ಅಪ್ರಯೋಜಕ ಸಂಗತಿಗಳೊಂದಿಗೆ ಆಟವಾಡುತ್ತಿದ್ದಾರೆ.

ಚಾರಿತ್ರಿಕವೂ ದ್ವಂದ್ವಾತ್ಮಕವೂ ಆದ ಭೌತವಾದದ ತಾತ್ವಿಕ ಪರಿಪೂರ್ಣತೆಯನ್ನು ಅವರು ಅರ್ಥಮಾಡಿಕೊಳ್ಳುವುದಿಲ್ಲ. 'ಸಂಸ್ಕೃತಿ' ಎಂಬ ಪದಕ್ಕೆ ಅವರು ಕೊಡುವ ವ್ಯಾಖ್ಯಾನವೇ ಇದಕ್ಕೆ ಒಂದು ಪ್ರಮುಖ ಸಾಕ್ಷಿ. ಸಂಸ್ಕೃತಿ ಎಂದರೆ ಕೇವಲ ಕಲೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಎಂಬುದಾಗಿ ಅವರು ಸಂಕ್ಷಿಪ್ತಗೊಳಿಸುತ್ತಾರೆ. ಸಂಗೀತ, ಸಾಹಿತ್ಯ, ನೃತ್ಯ, ನಾಟಕ, ಸಿನಿಮಾ ಮೊದಲಾದ ಕ್ಷೇತ್ರಗಳಿಗೆ ಸಂಬಂಧಪಟ್ಟಂತಹ ಚಟುವಟಿಕೆಗಳು ಮಾತ್ರವೇ ಅವರ ದೃಷ್ಟಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು. ರಾಜಕೀಯ ಚಟುವಟಿಕೆಗಳನ್ನು ಸಾಂಸ್ಕೃತಿಕ ಚಟುವಟಿಕೆಗಳೆಂದು ಅವರು ಒಪ್ಪಿಕೊಳ್ಳುವುದಿಲ್ಲ. ರಾಜಕೀಯವು ಅಸ್ಪೃಶ್ಯವೆಂದೂ ಅದರ ನೆರಳು ಸೋಕಿದರೆ ಸಾಕು, ಕಲೆ-ಸಾಹಿತ್ಯ-ಸಿನಿಮಾ ಇತ್ಯಾದಿಗಳು ಅಪವಿತ್ರವಾಗುತ್ತವೆಂದೂ ಅವರು ನಂಬುತ್ತಾರೆ. ಸಮುದಾಯದ ಸಾಂಸ್ಕೃತಿಕ ನೆಲೆಗಳ ದ್ಯೋತಕವಾಗಿ ಈ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಳನ್ನು ಮಾತ್ರ ಪರಿಗಣಿಸಿ, ಅವುಗಳಿಗೆ ಮಾತ್ರ ಪ್ರಾಶಸ್ತ್ಯ ಕೊಡುವಾಗ ಸಾಮಾಜಿಕ ಬದುಕಿನ ಮೂಲಭೂತ ಸತ್ಯಗಳಿಗೆ ಬೂರ್ಷ್ವಾ ಚಿಂತಕರು ಎರಡನೇ ಸ್ಥಾನ ಕಲ್ಪಿಸುತ್ತಾರೆ. ಇದು ತಲೆಕೆಳಗಾಗಿ ನಿಂತು ಜಗತ್ತನ್ನು ನೋಡಿದಂತೆ. ಬೂರ್ಷ್ವಾ ಚಿಂತಕರು ಈಗಲೂ ತಾತ್ವಿಕ ಶೀರ್ಷಾಸನವನ್ನೇ ಮಾಡುತ್ತಿದ್ದಾರೆ. ಸ್ವಂತ ಕಾಲುಗಳ ಮೇಲೆ ನೆಟ್ಟಗೆ ನಿಂತು ಜಗತ್ತನ್ನು ನೋಡಲು ಅವರಿಂದಾಗುತ್ತಿಲ್ಲ. ಅವರು ಭಾವನಾವಾದದ ಬಲಿಪಶುಗಳು. ಸತ್ಯವನ್ನು ಅರ್ಥಮಾಡಿಕೊಂಡು ಶೀರ್ಷಾಸನದ ಸ್ಥಿತಿಯನ್ನು ಬಿಟ್ಟುಬಿಡಲು ಅವರು ಪ್ರಯತ್ನಿಸಿಯಾರೆಂದು ನಿರೀಕ್ಷಿಸಲಾಗದು. ಯಾಕೆಂದರೆ ಆ ರೀತಿ ಅರ್ಥಮಾಡಿಕೊಳ್ಳಲು ಬೇಕಾದ ತಾಂತ್ರಿಕ ಪರಿಣತಿಯನ್ನು ಪಡೆಯುವುದೆಂದರೆ ಬೂರ್ಷ್ವಾ ಚಿಂತನೆಯ ಸ್ಥಾಯಿತ್ವ ಸ್ಥಿತಿಯಿಂದ ಕ್ರಾಂತಿಕಾರಿ ಬದಲಾವಣೆಯತ್ತ ಸಾಗಬೇಕಾದೀತೆಂದು ಅವರು ಭಯಪಡುತ್ತಾರೆ.

ಸಂಸ್ಕೃತಿಯ ಕುರಿತಾದ ಸಾಹಿತ್ಯ ಕೇಂದ್ರಿತವಾದ ನಿಲುವು ಆಂಶಿಕವೂ ವಿಕೃತವೂ ಆದಂಥದ್ದು. ಕಲಾ-ಸಾಹಿತ್ಯ ಕಲಾಪಗಳಲ್ಲಿ ಸೇರಿಕೊಳ್ಳಲಾಗದ ಒಂದು ದೊಡ್ಡ ವರ್ಗದ ಮಂದಿಯ ಬಗ್ಗೆ 'ಕಲಾ-ಸಾಹಿತ್ಯ ಮಾತ್ರವಾದಿಗಳು' ಯೋಚಿಸುವುದಿಲ್ಲ. ನಿಜ ಹೇಳಬೇಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಒಟ್ಟು ಸಂಸ್ಕೃತಿಗೆ ಚಿಕ್ಕದಾಗಲಿ, ದೊಡ್ಡದಾಗಲಿ – ಒಂದಿಲ್ಲೊಂದು ರೀತಿಯ ಕೊಡುಗೆಯನ್ನು ಕೊಟ್ಟೇ ಕೊಡುತ್ತಾನೆ. ಪ್ರಾಯಶಃ ಕಲೆ ಅಥವಾ ಸಾಹಿತ್ಯದ ಮೂಲಕವೇ ಆಗಿಲ್ಲದಿರಲೂಬಹುದು. ರಾಜಕೀಯ, ರೋಗಿಗಳ ಶುಶ್ರೂಷೆ, ಸಮಾಜ ಸೇವೆ, ಆಧ್ಯಾತ್ಮಿಕ ಕಾರ್ಯ ಮುಂತಾದವುಗಳೆಲ್ಲ ಸಾಂಸ್ಕೃತಿಕ ಮಹಾನದಿಯನ್ನು [illegible] ಸೇರುವ ಉಪನದಿಗಳು. ಸೃಜನಶೀಲತೆಯ ಅಂತರಿಕ್ಷದಲ್ಲಿ ಹಾಯಾಗಿ ವಿಹರಿಸುವವರು ಮಾತ್ರವಲ್ಲ, ಬದುಕಿನ ಪ್ರಧಾನವಾಹಿನಿಯಿಂದ ಅಂಚಿಗೆ ತಳ್ಳಲ್ಪಟ್ಟವರನ್ನೂ ಪರಿಗಣಿಸುವಾಗ ಮಾತ್ರವೇ ಸಂಸ್ಕೃತಿಗೆ ಸಂಬಂಧಿಸಿದ ಚಿಂತನೆಗಳು ಸಂಪೂರ್ಣವೆನಿಸುತ್ತವೆ. ಎಡಪಂಥೀಯ ಚಿಂತನೆಯು ಬಲಪಂಥೀಯ ದೃಷ್ಟಿಕೋನಕ್ಕಿಂತ ಭಿನ್ನವಾಗುವುದು ಈ ಅರ್ಥದಲ್ಲೇ. ಎಡಪಂಥೀಯವಾದ ಸಂಸ್ಕೃತಿಯ ಕಲ್ಪನೆಯು ಯಾರೊಬ್ಬರನ್ನೂ ಪರಿಗಣನೆಯ ಪರಿಧಿಯಿಂದ ಹೊರಗೆ ನಿಲ್ಲಿಸುವುದಿಲ್ಲ. ಸಂಸ್ಕೃತಿಯನ್ನು ಎಡಪಂಥವು ಸಾಹಿತ್ಯ ಕೇಂದ್ರಿತವಾಗಿಯಲ್ಲ, ಸಮುದಾಯ ಕೇಂದ್ರಿತವಾಗಿ ನೋಡುತ್ತದೆ.

ಸಮಾನತೆಯ ಕಲ್ಪನೆ, ನೈತಿಕಪ್ರಜ್ಞೆ ಮತ್ತು ಜೀವ ನೀಡುವ ಒಂದು ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸುವ ಸೈದ್ಧಾಂತಿಕವೂ ಪ್ರಾಯೋಗಿಕವೂ ಆದ ರಾಜಕೀಯ ತತ್ವಗಳು ಎಡಪಂಥೀಯ ಸಾಂಸ್ಕೃತಿಕ ಕಲ್ಪನೆಯ ಆತ್ಮ. ಶ್ರೇಷ್ಠವಾದ ರಾಜಕೀಯ ಕಲ್ಪನೆಯು ಶ್ರೇಷ್ಠವಾದ ಸಾಮಾಜಿಕ ಜೀವನಮೌಲ್ಯಗಳನ್ನು ಸೃಷ್ಟಿಸುವ ಗುರಿ ಹೊಂದಿರುತ್ತದೆ. ಕಲೆ, ಸಾಹಿತ್ಯ, ಸಂಗೀತ, ನಾಟಕ, ಸಿನಿಮಾ ಇತ್ಯಾದಿಗಳು ಈ ಜೀವನಮೌಲ್ಯಗಳ ಸೃಷ್ಟಿಗೆ ಸೃಜನಶೀಲ ಕೊಡುಗೆಗಳನ್ನು ನೀಡುತ್ತವೆ. ಸಮಾನತೆ-ನ್ಯಾಯಗಳನ್ನು ಸೃಷ್ಟಿಸುವ ಒಂದು ಸಾಮಾಜಿಕ ವ್ಯವಸ್ಥೆಗಾಗಿ (ರಾಜಕೀಯ ಸಂಯೋಜನೆಗಾಗಿ) ಸೃಜನಶೀಲ ಕಲ್ಪನೆಯ ಎಲ್ಲ ಸಾಧ್ಯತೆಗಳನ್ನೂ ಎಡಪಂಥೀಯ ಕಲ್ಪನೆಯು ಪ್ರಜ್ಞಾಪೂರ್ವಕವಾಗಿ ವಿನಿಯೋಗಿಸಿಕೊಳ್ಳುತ್ತದೆ. ಅದು ದ್ವಂದ್ವಾತ್ಮಕವಾಗಿ ಶಕ್ತಿಯನ್ನು ಸಂಪಾದಿಸುತ್ತದೆ.

ಈ ಅರ್ಥದಲ್ಲಿ ಎಡಪಂಥೀಯ ಕಲ್ಪನೆ ವರ್ಗ ಪರವೂ, ಚರಿತ್ರಾತ್ಮಕವೂ, ದ್ವಂದ್ವಾತ್ಮಕವೂ ಭೌತಿಕವಾದ ಪರವೂ ಆಗಿದೆ. ರಾಜಕೀಯವಾಗಿ ಅದು ನಿಷ್ಪಕ್ಷಪಾತಿಯಲ್ಲ. ಬಲವಾಗಲಿ, ಮಧ್ಯಮವಾಗಲಿ ಅಲ್ಲ. ವರ್ಗವಿಭಜಿತ ಸಮಾಜದ ಎಡಪಂಥ ಕಲ್ಪನೆಯೇ ವರ್ಗಸಮರದ ಚಾಲಕ ಶಕ್ತಿ. ಎಲ್ಲ ಕಲ್ಪನೆಯಲ್ಲೂ ರಾಜಕೀಯವಿದೆ. ಎಲ್ಲ ರಾಜಕೀಯದಲ್ಲೂ ಕಲ್ಪನೆಯಿದೆ. ಕಾವ್ಯಕಲ್ಪನೆಯಲ್ಲಿ ರಾಜಕೀಯವೂ, ರಾಜಕೀಯದಲ್ಲಿ ಕಾವ್ಯಕಲ್ಪನೆಯೂ ಇದೆ. ಎಡಪಂಥೀಯ ಕಲ್ಪನೆ ಎಂದು ಬಲಪಂಥದೊಂದಿಗೆ ಒಪ್ಪುವುದಾಗಲಿ ರಾಜಿಮಾಡಿ ಕೊಳ್ಳುವುದಾಗಲಿ ಇಲ್ಲ. ಕಲ್ಪನೆಯಲ್ಲೂ ವರ್ಗ ವೈರುಧ್ಯವಿದೆ ಎಂದರ್ಥ. ಎಡಪಂಥೀಯ ಕಲ್ಪನೆ ಬಲಪಂಥೀಯ ಕಲ್ಪನೆಯ ನೇರ ವಿರುದ್ಧ ಅಂಚಿನಲ್ಲಿದೆ. ಆದ್ದರಿಂದ ಬರವಣಿಗೆಯ ಹಿಂದೆ ಇರುವುದು ಕೇವಲ ಸ್ವಾತಂತ್ರ್ಯದ ಅನುಭವ ಎಂಬ ಭಾವನಾವಾದದ ದೃಷ್ಟಿ ವಿವೇಚನಾರಹಿತವಾದದ್ದು. ಯಾಕೆಂದರೆ ಕಲ್ಪನೆಯ ಸೃಷ್ಟಿಯಾದ ಬರವಣಿಗೆ ನಿರ್ಲಕ್ಷ್ಯವಾದುದಾಗಲಿ ನಿಷ್ಪಕ್ಷಪಾತಿಯಾಗಲಿ ಆಗಿರಲು ಸಾಧ್ಯವಿಲ್ಲ. ಬರವಣಿಗೆಯ ಚಿಹ್ನೆಗಳು – ಭಾಷಾ ಪ್ರಯೋಗಗಳು ಸೈದ್ಧಾಂತಿಕವಾದ ಸಂದೇಶಗಳನ್ನು ಒಳಗೊಂಡಿರುತ್ತವೆ. ಆದ್ದರಿಂದ ಯಾವ ಸಮುದಾಯದ ಯಾವ ಸೈದ್ಧಾಂತಿಕ ಸಂದರ್ಭದಲ್ಲಿ ಚಿಹ್ನೆಯ ಪ್ರಯೋಗ ನಡೆಯುತ್ತಿದೆ ಎಂಬುದಕ್ಕೆ ರಾಜಕೀಯ ಪ್ರಸ್ತುತತೆಯಿದೆ. ವರ್ಗಪರವಾಗಿ ಸೈದ್ಧಾಂತಿಕವೂ ತಾತ್ವಿಕವೂ ಆದ, ಪರ-ವಿರೋಧಗಳು ನೆಲೆಯಲ್ಲಿರುವ ಸಾಮಾಜಿಕ ಸಂದರ್ಭದಲ್ಲಿ ನಿರ್ಗುಣ (ನಿರಪೇಕ್ಷ!) ಚಿಹ್ನೆಯ ಪ್ರಯೋಗವು ಅಸಾಧ್ಯವೂ ಅಸಂಭವವೂ ಆಗಿದೆ. ಚಿಹ್ನೆ ಎಂಬುದು ಒಂದು ಆಯುಧ (ಉಪಕರಣ). ವಿವಿಧ ಸಂದರ್ಭಗಳಲ್ಲಿ ವಿವಿಧ ಅಗತ್ಯಗಳಿಗಾಗಿ ವಿವಿಧ ರೀತಿಯ ಉಪಕರಣಗಳು (ಚಿಹ್ನೆಗಳು) ಪ್ರಯೋಗಿಸಲ್ಪಡುತ್ತವೆ. ಚಿಹ್ನೆಗಳು ಸಾಮಾಜಿಕವಾದವು. ಸಮಾಜದ ಸಾಮಾನ್ಯರಿಂದ ಉತ್ಪನ್ನಗೊಂಡಿದ್ದು. ಗುರಿಯ ಸಾಧನೆಗಾಗಿ ಯಾ ಚಿಹ್ನೆಯನ್ನು ಬಳಸಬೇಕು ಎಂಬುದು ಪ್ರಯೋಗಿಸು… ತೀರ್ಮಾನಕ್ಕೆ ಬಿಟ್ಟದ್ದು. ಆದರೆ ಪ್ರತಿಯೊ… ತೀರ್ಮಾನದ ಹಿಂದೆಯೂ ಪ್ರತ್ಯಕ್ಷ ಮತ್ತು ಪರೋಕ್ಷ… ಅನೇಕ ಸೈದ್ಧಾಂತಿಕ ಮತ್ತು ತಾತ್ವಿಕವಾದ ಪ್ರಭಾವ… ಇರಬಹುದು. ಪ್ರತಿ ಚಿಹ್ನೆಯ ಪ್ರಯೋ… ಒಂದೊಂದು ಆಯ್ಕೆಯಾಗಿರುತ್ತದೆ. ಆಯ್ಕೆಯ ಹಿ… ಪ್ರಭಾವಗಳನ್ನು ಗುರುತಿಸದೆ ಅ… ಸ್ವಾತಂತ್ರ್ಯಾನುಭವವೆಂದು ಪ್ರಮಾಣೀಕರಿಸು… ಸ್ವತಃ ತನ್ನ ಮೇಲೆ ಗುಲಾಮಗಿರಿಯನ್ನು ಆ… ಕೊಳ್ಳುವ ಸ್ವಾತಂತ್ರ್ಯವೂ ಸ್ವಾತಂತ್ರ್ಯಾನುಭ… ಆಗಿದೆಯೆಂದು ತಿಳಿಯುವಾಗ, ಅಥವಾ ಅರಾಜಕತೆಯ… ಸ್ವಾತಂತ್ರ್ಯವೆಂದು ಎಣಿಸುವಾಗ ಮಾತ್ರ. ವರ್ಗವಿಭ… ಸಮಾಜದಲ್ಲಿ ಅರಾಜಕ ಸ್ವಾತಂತ್ರ್ಯದ ಬಗ್ಗೆ ಕ… ಕಾಣುವುದು ಸಹ ಒಂದು ರೀತಿಯ ರಾಜಕೀಯ… ಭವವೇ ಆಗಿದೆ. ಅದು ವಿಕಲವೂ ಪ್ರತಿಗಾಮಿ… ಆಗಿದೆಯೆಂದು ಮಾತ್ರ. ಸಾಮಾಜಿಕವಾದ ವಿಪ್ಲ… ಲಕ್ಷಣಗಳನ್ನು ಒಳಗೊಳ್ಳುವಾಗ ಮಾತ್ರವೇ ಕಲ್ಪನೆ… ಪ್ರಗತಿಪರವಾಗಲು ಸಾಧ್ಯ. ಈ ವಿಪ್ಲ… ಸೂಚನೆಯನ್ನು ವರ್ಗಶೋಷಣೆಗೆ ಬಲಿಯಾಗು… ಸ್ವಾತಂತ್ರ್ಯದ ಬಗೆಗಿನ ತಾತ್ವಿಕ ದೃಷ್ಟಿಕೋನ ವ… ಪ್ರಾಯೋಗಿಕ ಕ್ರಿಯಾವಿಧಿಗಳನ್ನು ಒಳಗೊಳ್ಳದ ಕ… ಕಲ್ಪನೆ ಎಡಪಂಥೀಯ ಕಲ್ಪನೆಯಲ್ಲ. ಎಡಪಂಥೀ…

ನೆಯು ಸ್ವಾತಂತ್ರ್ಯದ ಲೇಖನಿಯೂ ಲೇಖನವೂ ವುದು ಶೋಷಣೆಗೆ ಬಲಿಯಾಗುವವನ ಪಕ್ಷದಲ್ಲಿ ವಾಗಿ ನಿಂತು ಶೋಷಕನೆದುರು ತಿರುಗಿ ನಿಲ್ಲುವ ತಂತ್ರ್ಯವನ್ನು ಆಯ್ದುಕೊಂಡಾಗ ಮಾತ್ರ.

ಕೇವಲ ಎದುರಿಸುವ ಅಥವಾ ವಿರೋಧಿಸುವ ವಾ ಭಾವನಾವಾದದ ಆತ್ಮನಿಷ್ಠೆಯ ವಾಙ್ಮಯ ತ್ರವಲ್ಲ ಎಡಪಂಥೀಯ ಬರವಣಿಗೆ. ರ್ಶನಿಕವಾಗಿ ಪೂರ್ತಿ ಭಿನ್ನವಾದ ಎಡಪಂಥೀಯ ನೆಯು ಭೌತವಾದ ಪರವೂ, ದ್ವಂದ್ವಾತ್ಮಕವೂ ಆದ ಂಚಾವಲೋಕನದ ಸಮಗ್ರತೆಯನ್ನು ಒಳಗೊಳ್ಳುತ್ತದೆ. ವನಾವಾದದ ತಾತ್ವಿಕ ಸರಳೀಕರಣವನ್ನು ಎಡ ಥೀಯ ಕಲ್ಪನೆ ಪ್ರಜ್ಞಾಪೂರ್ವಕವಾಗಿ ವರ್ಜಿಸುತ್ತದೆ. ರಾರು ವರ್ಷಗಳ ಹಳಮೆಯಿರುವ ಸಾಮಾಜಿಕ ಸ್ಕೃತಿಕ ಪ್ರಜ್ಞೆಯ ಮೇಲೆ ಆಳವಾಗಿ ಅಚ್ಚೊತ್ತಿರುವ ವನಾವಾದದ ತಾತ್ವಿಕ ಬಂಧದೊಂದಿಗೆ ರಾಜಿಮಾಡಿ ಳ್ಳದೆ ಹೋರಾಟ ನಡೆಸುವುದು ಮತ್ತು ಅದರ ಸದಲ್ಲಿ ಭೌತವಾದೀಯವೂ ವೈಜ್ಞಾನಿಕವೂ ಆದ ವನ್ನು ಅಳವಡಿಸಿಕೊಂಡು ಗಟ್ಟಿಮಾಡಿಕೊಳ್ಳುವುದು ಪಂಥೀಯ ಕಲ್ಪನೆಯು ಸ್ವಯಂ ತನ್ನ ಕರ್ತವ್ಯವೆಂದು ದುಕೊಂಡಿದೆ. ಸಾರ್ವದೇಶಿಕ ಐಕ್ಯದತ್ತ ಮನುಷ್ಯನ ಸುವಿಕೆಯನ್ನು ಅಡ್ಡಿಪಡಿಸುವ ಎಲ್ಲ ನಿಷೇಧಾತ್ಮಕ ಗಳಿಗೆದುರಾಗಿ ನಡೆಸುವ ಹೋರಾಟಕ್ಕೆ ಬೇಕಾದ ನಸ್ಸನ್ನು ಸಿದ್ಧಪಡಿಸಿಕೊಂಡು ಹೊಸ ಸಮಾಜದ ಗೋಸ್ಕರ ಎಡಪಂಥೀಯ ಬರಹಗಾರ ಹೋರಾಟ ಸುತ್ತಾನೆ.

ಅನಾರೋಗ್ಯಕರವಾದ ನಿರಂತರ ಪ್ರತಿಭಟನಾ ನೋಭಾವಕ್ಕೆ ಎಡಪಂಥೀಯ ಲೇಖಕ ಬಲಿ ಾಗುವುದಿಲ್ಲ. ಅರಾಜಕ ಪ್ರತಿಭಟನೆ ಆತನ ಅಜೆಂಡ ಲ್ಲ. ವರ್ಗೀಯ ಸಮಾನತೆ ಮತ್ತು ನ್ಯಾಯಕ್ಕಾಗಿ ೀರಾಡುವಾಗ ಪ್ರಗತಿಪರ ತತ್ವಗಳನ್ನು ಆವಿಷ್ಕರಿಸಿ ಪ್ರಯೋಗಿಸುತ್ತಾನೆ. ತಾತ್ವಿಕ ನಿಗೂಢೀಕರಣವನ್ನೂ ತಿಕ ಬದುಕಿನ ಸಮಸ್ಯೆಗಳಿಂದ ಪಲಾಯನಗೈಯು ವನ್ನೂ ಆತ ಒಪ್ಪಿಕೊಳ್ಳುವುದಿಲ್ಲ. ಭಿನ್ನ ಮಾನವ ಾಜಗಳ ಒಂದಾಗುವಿಕೆ ಮತ್ತು ಸಮನ್ವಯತೆಗೆ ಪಯೋಗವಾಗದ ಭಾವನಾವಾದದ ತಾತ್ವಿಕ ೀರಣೆಗಳನ್ನು ತಿರಸ್ಕರಿಸಲು ಮತ್ತು ನಿಷೇಧಿಸಲು ಹೊಣೆಗಾರನಾಗಿರುತ್ತಾನೆ. ಎಡಪಂಥೀಯ ಖಕ ವಿಗ್ರಹ ಭಂಜಕನಾಗಿರುತ್ತಾನೆ. ತತ್ವಶಾಸ್ತ್ರ, ಿತ್ಯ ಮತ್ತು ರಾಜಕೀಯಗಳಲ್ಲಿ ಗಟ್ಟಿಯಾಗಿ ರೂರಿರುವ ವಿಗ್ರಹಗಳನ್ನು ಆತ ಬೇರು ಸಮೇತ ಸೆಯುತ್ತಾನೆ. ಇದನ್ನು ನಿರ್ವಹಿಸುವುದು ಸುಲಭವಲ್ಲ. ಕೆಂದರೆ ಈ ವಿಗ್ರಹಗಳೂ ಇರುವುದು ಸಮಾಜದ ಸ್ಸಿನೊಳಗೆ. ಮನಸ್ಸನ್ನು ಬಂಧಿಸಿದ ಸಂಕೋಲೆ ನ್ನು ಸ್ವಾತಂತ್ರ್ಯದ ಸ್ವರ್ಣಾಭರಣಗಳೆಂದು ನಂಬುವ ಲ್ಲಿ ಅರಿವು ಮೂಡಿಸುವುದು ಸುಲಭಸಾಧ್ಯವಲ್ಲ ಬುದನ್ನು ಒಬ್ಬ ಎಡಪಂಥೀಯ ಲೇಖಕ ದಿರುತ್ತಾನೆ. ಸಾಮಾಜಿಕ ಆರ್ಥಿಕ ಕ್ಷೇತ್ರದ ವರ್ಗ ಜನೆಗೆ ಸಮಾನಾಂತರವಾಗಿ ತತ್ವಶಾಸ್ತ್ರದಲ್ಲೂ ಲ್ಪನಿಕ ರಂಗದಲ್ಲೂ ವರ್ಗ ವಿಭಜನೆಯಿದೆ. ಎಲ್ಲಾ ಯ ಆದರ್ಶವಾದಕ್ಕೆ ಎದುರುನಿಲ್ಲುವ ಚಾರಿತ್ರಿಕವೂ ದ್ವಂದ್ವಾತ್ಮಕವೂ ಆದ ಭೌತವಾದವನ್ನು ಸಮಾಜದ ಮನಸ್ಸಿನಲ್ಲೂ ಕಲ್ಪನೆಯಲ್ಲೂ ಬೇರೂರಿಸುವುದೇ ಎಡಪಂಥೀಯ ಪ್ರಜ್ಞೆಯನ್ನು ಬೆಳೆಸಿಕೊಂಡ ಲೇಖಕನ ತಾತ್ವಿಕ ಬದ್ಧತೆಯಾಗಿದೆ.

ಎಡಪಂಥೀಯ ಕಲ್ಪನೆ ಯಾವುದರ ಬಗೆಗೂ ಅನಾಸಕ್ತಿಯನ್ನು ಬೆಳೆಸಿಕೊಳ್ಳುವುದಿಲ್ಲ. ನಿರಂತರವಾಗಿ ಜಗತ್ತಿನ ವಿದ್ಯಮಾನಗಳನ್ನು ಮಾನವೀಕರಣಗೊಳಿಸುವ ಮನುಷ್ಯ ಪ್ರತಿಭೆಗಳೊಂದಿಗೆ ಸ್ವತಃ ಪ್ರವರ್ತಿಸುವ ಎಡಪಂಥೀಯ ಕಲ್ಪನೆಗೆ ರಾಜಕೀಯ ಅನಾಸಕ್ತಿ ಬೆಳೆಸಿಕೊಳ್ಳುವುದು ಸಾಧ್ಯವಾಗುವುದಾದರೂ ಹೇಗೆ ? ಎಡಪಂಥೀಯ ಕಲ್ಪನೆಯಲ್ಲಿ ಪ್ರಪಂಚದ ಮನಸ್ಸು ಕೆಲಸಮಾಡುವುದು ಬರೇ ಅಭಿರುಚಿಯ ಮೂಲಕ ಅಲ್ಲ; ಬದಲಾಗಿ ಒಂದು ಸಮೂಹಪ್ರಜ್ಞೆಯಾಗಿ. ವ್ಯಕ್ತಿ ಮತ್ತು ಸಮಾಜಗಳ ನಡುವೆ ಇರುವ ದ್ವಂದ್ವಾತ್ಮಕ ಸಂಬಂಧವೇ ಎಡಪಂಥೀಯ ಕಲ್ಪನೆ ಮತ್ತು ಸಾಮಾಜಿಕ ಪ್ರಜ್ಞೆಗಳ ನಡುವೆ ಇದೆ. ಎಡಪಂಥೀಯ ಕಲ್ಪನೆಯೆಂಬುದು ಸಾಮಾಜಿಕ ಪ್ರಜ್ಞೆಯನ್ನು ಏಕಪಕ್ಷೀಯವಾಗಿ ಪ್ರತಿಬಿಂಬಿಸುವ ಒಂದು ಜಾಗವಲ್ಲ. ಎಡಪಂಥೀಯ ಕಲ್ಪನೆಯ ವ್ಯಾವಹಾರಿಕ ಮಧ್ಯಪ್ರವೇಶವನ್ನು ನಿಷ್ಪಕ್ಷವಾಗಿ ನಿಲ್ಲಿಸಿಕೊಡುವುದಿಲ್ಲ ಪ್ರಪಂಚದ ಮನಸ್ಸು ಕೂಡ. ನಿರಂತರವಾದ ಪರಸ್ಪರ ಬಂಧದ ಮೂಲಕ ದ್ವಂದ್ವಾತ್ಮಕವಾಗಿ ರೂಪುಗೊಳ್ಳುತ್ತ ಪರಿಪಕ್ವಗೊಳ್ಳುವುದು ಎಡಪಂಥೀಯ ಸೃಜನಶೀಲತೆ.

ವ್ಯಕ್ತಿನಿಷ್ಠ ಸತ್ಯವು ಸತ್ಯವೇ ಅಲ್ಲ; ಅದು ಮೊಲದ ಕೊಂಬುಗಳಿದ್ದಂತೆ ! ಅದರಾಚೆಗೆ ವಸ್ತುನಿಷ್ಠ ಸಾಮಾಜಿಕ ಪ್ರಕ್ರಿಯೆಗಳ ಗತಿಯನ್ನು ಗುರುತಿಸಿಕೊಂಡು ಅವನ್ನು ವರ್ಗಪರವಾದ ಮಾನವೀಯ ನೆಲೆಯ ಆಯ್ಕೆಗೆ ಎಡಪಂಥೀಯ ಕಲ್ಪನೆ ಒಳಗಾಗಿಸುತ್ತದೆ. ರಾಜಕೀಯ ಅನಾಸಕ್ತಿಗಾಗಲಿ, ಸ್ವ-ಇಚ್ಛೆ ಅಥವಾ ಪರರ ಇಚ್ಛೆಗೆ ಮಣಿದು ಮಾಡುವ ಬೇರ್ಪಡಿಸುವಿಕೆಗಾಗಲಿ, ಎಡಪಂಥೀಯ ಕಲ್ಪನೆ ಬಾಗುವುದಿಲ್ಲ. ಆದ್ದರಿಂದ ವಾಸ್ತವವಾಗಲಿ, ದಂತಕಥೆಯಾಗಲಿ, ಕಾಲ್ಪನಿಕತೆಯಾಗಲಿ ಎಡಪಂಥೀಯ ಕಲ್ಪನೆಯೆಂದೂ ಅವನ್ನು ವರ್ಜಿಸುವುದಿಲ್ಲ. ಮಾತ್ರವಲ್ಲ, ಇವೆಲ್ಲವೂ ಎಡಪಂಥೀಯ ಕಲ್ಪನೆಯ ಮಿತಿಯನ್ನೂ ಒಳಹೂರಣವನ್ನೂ ನಿರ್ಧರಿಸುವ ಅಂಶಗಳೂ ಆಗಿರುತ್ತವೆ. ಸಿದ್ಧಾಂತ ಮತ್ತು ಕಲ್ಪನೆಗಳ ನಡುವಿನ ಬಂಧವೆನ್ನುವುದು ಕೇವಲವೂ ಯಾಂತ್ರಿಕವೂ ಆದದ್ದಲ್ಲ. ಅನುವಂಶೀಯ ಗುಣ ಮತ್ತು ಹುಟ್ಟಿದ ಪರಿಸರಗಳು ದ್ವಂದ್ವಾತ್ಮಕವಾಗಿ ಸೂಕ್ಷ್ಮತಲಗಳಲ್ಲಿ ಲೇಖಕನನ್ನು ಪ್ರಭಾವಿಸುವುದರ ಫಲವಾಗಿಯೇ ಬರವಣಿಗೆಯಲ್ಲಿ ತಾತ್ವಿಕವೂ ಸೈದ್ಧಾಂತಿಕವೂ ಆದ ಭಾವನಾತ್ಮಕತೆ ಹರಿದುಬರುತ್ತದೆ. ನಿಜ ಹೇಳಬೇಕೆಂದರೆ ಅವು ಹೊರನೋಟಕ್ಕೆ ಮಾತ್ರ ಸೀಮಿತವಾದವು. ಎಡಪಂಥೀಯ ಕಲ್ಪನೆಯು ಕೆಲಸ ಮಾಡುವುದು ವರ್ಗೀಯ ಪ್ರಜ್ಞೆಯ ಮೂಲಕವೇ. ಸೈದ್ಧಾಂತಿಕತೆಗೆ ಸಮಾಜದಲ್ಲಿ ಸ್ಥಾನವೇನೆಂಬುದು ಮತ್ತು ಅದರ ಪ್ರಭಾವವೇನೆಂಬುದು ಎಡಪಂಥೀಯ ಕವಿಗೆ ಗೊತ್ತು. ಊಟ ಮುಗಿಸಿ ನಿದ್ರೆಮಾಡಿ ಎದ್ದವನು ಆಕಳಿಸುವ ದೊಡ್ಡ ಬಾಯಿಯೇನೂ ಅಲ್ಲ ಕವಿತೆಯೆಂದರೆ.

ಸಾಹಿತ್ಯ, ಕವಿತೆ, ಕಲೆ, ಸಂಗೀತ ಇತ್ಯಾದಿಗಳೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಮನುಷ್ಯ ಮನಸ್ಸುಗಳ ಸಾಮರ್ಥ್ಯವು ದೈವದತ್ತವೆಂದೂ, ಸರಸ್ವತಿ ವರದಾನವೆಂದೂ ನಂಬುವ ಭಾವನಾವಾದದ ಧೋರಣೆಗಳ ಹಳೆಯ ಗೋಣಿಚೀಲಗಳಿಂದ ಅನೇಕ ಕಲಾ- ಸಾಹಿತ್ಯವಾದಿಗಳು ಮುಕ್ತರಲ್ಲ. ಅನುವಂಶೀಯ ವೈಶಿಷ್ಟ್ಯಗಳಿಂದಾಗಿ ಪ್ರತಿಯೊಬ್ಬನಲ್ಲೂ ಒಂದೊಂದು ರೀತಿಯ ಪ್ರತಿಭೆಯೋ ಪ್ರತಿಭಾಹೀನತೆಯೋ ಕಂಡುಬರುತ್ತದೆ ಎಂದು ಆಧುನಿಕ ವಿಜ್ಞಾನ ಹೇಳುತ್ತದೆ. ಈ ಪ್ರತಿಭೆ/ ಪ್ರತಿಭಾರಾಹಿತ್ಯಗಳಲ್ಲಿ ಭೌತಿಕಾತೀತವಾದ್ದು ಏನೂ ಇರುವುದಿಲ್ಲ. ಇವುಗಳ ಹಿಂದಿರುವ ಭೌತಶಾಸ್ತ್ರೀಯ ಜ್ಞಾನವು ಮನುಷ್ಯನು ಪಡೆಯಲಾರದ್ದೇನೂ ಅಲ್ಲ. ಆದರೆ ವಿಜ್ಞಾನದ ಅನುಪಸ್ಥಿತಿಯಲ್ಲಿ ಅಸಾಧಾರಣ ಸಾಮರ್ಥ್ಯ/ಸಾಮರ್ಥ್ಯಹೀನತೆಗಳು ಅಜ್ಞಾತವೂ ವಿವರಣೆಗೆ ನಿಲುಕದವೂ ಆಗಿ ಉಳಿದು ಅವೆಲ್ಲವೂ ದಿವ್ಯಾನುಗ್ರಹ/ದೈವಶಾಪಗಳ ಪರಿಣಾಮವೆಂದು ನಿಷ್ಕಪಟರಾದ ಸಾಮಾನ್ಯಮಂದಿಯನ್ನು ನಂಬಿಸುವ ಕೆಲಸ ನಡೆಯುತ್ತಿದೆ. ಈ ಸ್ಥಿತಿಯು ಕವಿಗಳನ್ನೂ ಕಲಾವಿದರನ್ನೂ ವಿಶೇಷವಾದ ಹಕ್ಕು-ಅಧಿಕಾರಗಳಿಗೆ ಪಾತ್ರರನ್ನಾಗಿಸುತ್ತದೆ. ರಾಜನ ಅಧಿಕಾರವು ದೈವದತ್ತವೂ ಜನ್ಮಸಿದ್ಧವೂ ಆಗಿರುವುದೆಂದು ನಂಬಿದ ಹಳೆಯ ಸಮಾಜದಲ್ಲಿ ಜನ್ಮ ವಾಸನೆಯಿಂದ ಒಬ್ಬ ಕವಿಗೆ ಅತಿವೇಗವಾಗಿ ದಿವ್ಯಾನುಗ್ರಹ ಪಾತ್ರನಾಗಿ ಬದಲಾಗುವುದು ಸಾಧ್ಯವಿತ್ತು. ಆಧುನಿಕ ಪ್ರಜಾಪ್ರಭುತ್ವ ಯುಗದಲ್ಲಿ ಭೌತವಿಜ್ಞಾನ ಕ್ಷೇತ್ರದ ಪ್ರಗತಿಯು ಜನ್ಮವಾಸನೆಗಳ ಅನುವಂಶೀಯ ಗುಣವನ್ನು ಹೊರಗೆಳೆಯುತ್ತಿರುವಾಗ ಕವಿ ಜನ್ಮದ ಕುರಿತು ತೋರಿಸುವ ಭಯಭಕ್ತಿಗಳು ಭಾವನಾವಾದದ ಈಗಲೂ ಮುಂದುವರಿಯುತ್ತಿರುವ ಪ್ರಭಾವವನ್ನು ತಿಳಿಸುತ್ತದೆ. ಎಡಪಂಥೀಯ ಕಲ್ಪನೆಯ ಕವಿ ತನ್ನ ಜನ್ಮವಾಸನೆಯ ಬಗ್ಗೆ ಅಹಂಕಾರ ಪಡುವವನೋ, ಅದರ ಹೆಸರಿನಲ್ಲಿ ಪ್ರತ್ಯೇಕವಾದ ಸಾಮಾಜಿಕ ಸ್ಥಾನಮಾನಗಳನ್ನು ಬಯಸುವವನೋ ಆಗಿರುವುದಿಲ್ಲ. ತನ್ನ ಗುಣ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳುವ ಆತ ಸಾಮಾಜಿಕ ಸಂದರ್ಭದಲ್ಲಿ ತನ್ನ ಸ್ಥಾನವೇನೆಂಬುದನ್ನು ಕೂಡ ಅರ್ಥಮಾಡಿಕೊಳ್ಳುತ್ತಾನೆ. ಪ್ರಜ್ಞಾಪೂರ್ವಕವಾಗಿ ಕಾವ್ಯಾತ್ಮಕವಾದ ಮಧ್ಯಸ್ತಿಕೆ ವಹಿಸುವುದರ ಅರ್ಥ ಜನ್ಮವಾಸನೆಯನ್ನು ಉದ್ದೇಶಪೂರ್ವಕವಾಗಿ ವಿನಿಯೋಗಿಸುವುದು ಎಂದು ಕೂಡ ಹೌದಲ್ಲವೆ ?

ಸೈದ್ಧಾಂತಿಕ ನಿಲುವುಗಳು ಜನ್ಮಸಹಜವಾಗಿ ಬಂದವಲ್ಲ. ತಾಯಿ ತಂದೆಯರಿಂದ ಯಾವ ಶಿಶುವೂ ಯಾವುದೇ ವೈಚಾರಿಕ/ಸೈದ್ಧಾಂತಿಕ ಧೋರಣೆಗಳನ್ನು ಅನುವಂಶೀಯವಾಗಿ ಪಡೆಯುವುದಿಲ್ಲ. ಯಾವುದೇ ಸಿದ್ಧಾಂತವೂ ಅನುವಂಶೀಯವಾಗಿ ವರ್ಗಾಯಿಸಲ್ಪಡುವುದಿಲ್ಲ. ಕುಟುಂಬ ಮತ್ತು ಸಮಾಜಗಳು ಪ್ರತಿಯೊಬ್ಬ ವ್ಯಕ್ತಿಯ ಧೋರಣೆಗಳನ್ನು ರೂಪಿಸುತ್ತವೆ. ಪ್ರತಿಯೊಂದು ಶಿಶುವೂ ಹುಟ್ಟಿಬರುವುದು ಸಿದ್ಧಾಂತಗಳತ್ತಲೇ ಆಗಿದೆ. ಉಸಿರಾಡುವ ಗಾಳಿಯ ಜತೆಗೆ ಸಿದ್ಧಾಂತಗಳೂ ಶಿಶುವಿನ ಆಂತರಿಕ ಭಾವನೆಗಳೊಂದಿಗೆ ಶಕ್ತಿಪ್ರಸರಣ ನಡೆಸುತ್ತವೆ. ಜೇನು, ಶುಂಠಿಗಳನ್ನು ಚಪ್ಪರಿಸುವುದರಿಂದ ಹಿಡಿದು ವಿವಿಧ ಸಿದ್ಧಾಂತಗಳು

ಶಿಶುವಿನೊಳಗೆ ಆವಾಹನೆಗೊಳ್ಳುತ್ತವೆ. ಧರ್ಮ, ರಾಜಕೀಯ, ಸಂಸ್ಕೃತಿ ಮತ್ತು ಅವುಗಳ ಅಂತರ ವಿಭಾಗಗಳು ಹೆಚ್ಚು ಕಡಿಮೆ ಪ್ರಮಾಣಗಳಲ್ಲಿ ಶಿಶುವಿನ ಮೇಲೆ ಪ್ರಭಾವ ಬೀರುತ್ತವೆ. ಶಿಶುವಿನ ಅರಿವಿಗೆ ಬಾರದೆ, ಸಮ್ಮತಿ ಪಡೆಯದೆ ಬೆಳವಣಿಗೆಯ ವಿವಿಧ ಮೆಟ್ಟಿಲುಗಳಲ್ಲಿ ಅವು ಶಿಶುವನ್ನು ಸಂಯೋಜಿಸಿ ಮಾತನಾಡುತ್ತವೆ ಇಲ್ಲವೇ ಆಕರ್ಷಿಸುತ್ತವೆ. ಯಾವುದಾದರೂ ಸಿದ್ಧಾಂತದೊಳಗೇ ಹೊರತು ಅದರ ಶೂನ್ಯತೆಯಲ್ಲಿ ಯಾವ ವ್ಯಕ್ತಿಯೂ ಜೀವಿಸುವುದಿಲ್ಲ. ವಿಮರ್ಶೆ ಮತ್ತು ಸ್ವಯಂ ವಿಮರ್ಶೆಗಳೇ ಒಂದು ಸಿದ್ಧಾಂತದ ಗೂಡನ್ನು ಬಿಟ್ಟು ಇನ್ನೊಂದರತ್ತಲೂ, ವೈಚಾರಿಕ ಸಿದ್ಧಾಂತಗಳಾಚೆಗೂ ದಾಟಿ ಆಚೆಯ ನಡೆಯಲು ಒಬ್ಬ ವ್ಯಕ್ತಿಗೆ ಸಹಾಯ ಮಾಡುತ್ತವೆ. ಪ್ರಜಾಪ್ರಭುತ್ವವು ಇದಕ್ಕೆ ಪ್ರತಿಯೊಬ್ಬನಿಗೂ ಸಮ್ಮತಿ ನೀಡುತ್ತ ಸಹಾಯ ನೀಡುತ್ತ ಇರಬೇಕು. ಆದರೆ ಬೂರ್ಷ್ವಾ ಪ್ರಜಾಸತ್ತೆಯ ಪ್ರಭುತ್ವ ವರ್ಗದ ಆಸಕ್ತಿಯು ಈ ಪ್ರಕ್ರಿಯೆಯಲ್ಲಿ ಬೇಕಾದಷ್ಟು ಅಡ್ಡಿಗಳನ್ನು ಹುಟ್ಟುಹಾಕುತ್ತದೆ. ಪ್ರತಿಗಾಮಿ ವಿಚಾರಗಳಿಗೆ ಇಂಬುಕೊಟ್ಟು ಪ್ರಗತಿಪರ ಶಕ್ತಿಗಳನ್ನು ವಿರೋಧಿಸಿ ಮಾಧ್ಯಮಗಳು ನಡೆಸುವ ತಂತ್ರಗಳೇ ಬೂರ್ಷ್ವಾ ಪ್ರಜಾಸತ್ತೆಯಾಗಿದೆ. ಜನಪರ ಪ್ರಜಾಪ್ರಭುತ್ವದತ್ತ ನಡೆಯುವ ವಿಕಾಸದಲ್ಲಿ ತಾತ್ವಿಕವೂ ಸೈದ್ಧಾಂತಿಕವೂ ಆದ ಆಯ್ಕೆ ನಡೆಸುವುದು ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ ಕಷ್ಟಕರವಾಗುತ್ತದೆ. ವಿಮರ್ಶಾತ್ಮಕವಾದ ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದು ತಪ್ಪು, ಯಾವುದು ಸರಿ ಎಂದು ತೀರ್ಮಾನಿಸುವ ವ್ಯಕ್ತಿಯ ಹಕ್ಕು ಮೂಲಭೂತವಾದದ್ದು. ತೀರಾ ವೈಯಕ್ತಿಕವಾದ ಈ ಹಕ್ಕಿನೊಳಗೆ ಕೈ ಹಾಕುವ ಅಧಿಕಾರ ಯಾರಿಗೂ ಇಲ್ಲ. ಆಯ್ಕೆಮಾಡುವ ಸ್ವಾತಂತ್ರ್ಯವು ಆತನ ಅಸ್ತಿತ್ವವನ್ನು ನಿರ್ಧರಿಸಿ ನಿರ್ವಹಿಸುತ್ತದೆ. ವ್ಯಕ್ತಿ-ಸಮಷ್ಟಿಗಳ ನಡುವಣ ದ್ವಂದ್ವಾತ್ಮಕ ಸಂಬಂಧದ ಚಾರಿತ್ರಿಕತೆಯನ್ನು ಗುರುತಿಸಿಕೊಂಡು, ಸಾಮಾಜಿಕ ಸಂದರ್ಭದಲ್ಲಿ ವರ್ಗೀಯ ದೃಷ್ಟಿಯ ಪ್ರಾಧಾನ್ಯವನ್ನು ಅರ್ಥಮಾಡಿಕೊಂಡು, ಸಂಪೂರ್ಣ ಮಾನವೀಯ ಮೌಲ್ಯಗಳ ಪ್ರಾಣವಾಯುವನ್ನು ಉಸಿರಾಡಿಕೊಂಡು ಜೀವತುಂಬಿ ನಿಲ್ಲುವ ಎಡಪಂಥೀಯ ಕಲ್ಪನೆಯ ಬೇರುಗಳು ಒಣಗುವುದಾಗಲಿ, ಕುಡಿಗಳು ಮುರುಟಿ ಹೋಗುವುದಾಗಲೀ ಎಂದೂ ಆಗುವುದಿಲ್ಲ.

ಎಡಪಂಥೀಯ ಕಲ್ಪನೆಯು ವಿಕಸನ ಗುಣವುಳ್ಳದ್ದೂ ವಿಕಾಸೋನ್ಮುಖವೂ ಆಗಿ ಸಾಮಾಜಿಕ ವಾಸ್ತವದೊಂದಿಗೆ ದ್ವಂದ್ವಾತ್ಮಕವಾಗಿ ಪ್ರತಿಸ್ಪಂದಿಸುತ್ತ ಅ ಸೃಜನಶೀಲವಾಗುತ್ತದೆ. ಆದ್ದರಿಂದ ಅದರ ಕ್ರಮಬದ್ಧವಾದ ವಿಕಾಸಕ್ಕೆ ಅದರದ್ದೇ ಚರಿತ್ರೆಯಿದೆ. ಶ್ರೇಷ್ಠವಾದ ಮಾನವೀಯ ಮೌಲ್ಯಗಳಲ್ಲಿ ಅದರ ತಾಯಿಬೇ ನೆಟ್ಟುಕೊಂಡಿದೆ. ಪ್ರಾಯಶಃ ಕ್ರೌಂಚ ಮಿಥುನಗಳಲ್ಲೊಂದನ್ನು ಕೊಂದ ವ್ಯಾಧನ ಶಪಿಸಿದ ಋಷಿ ಕವಿಯಷ್ಟು ಹಳಮೆ ಅದಕ್ಕಿದೆ. ಎಡಪಂಥ ರಾಜಕೀಯ ಹುಟ್ಟುವುದ ಮೊದಲೇ ಎಡಪಂಥೀಯ ಕಲ್ಪನೆ ಇತ್ತು. ಚರಿತ್ರೆಯೊಂದಿಗೆ ಸಾಮಾಜಿಕ ವಾಸ್ತ ವಿಕಾಸ ಪೂರ್ಣತೆಯನ್ನು ಅವಲಂಬಿಸಿಯೇ ಎಡಪಂಥೀಯ ಕಲ್ಪನೆಯ ರೆಕ್ಕೆಗ ಗರಿಗಳು ಮೊಳೆತದ್ದು. ಎಡಪಂಥ ರಾಜಕಾರಣಗಳೆಂದು ಧ್ವನಿಯೇರಿಸಿ ಹ ಕೊಳ್ಳುವ ಮತ್ತು ಅಚ್ಚೊತ್ತಿಸಿಕೊಂಡ ಲೇಖಕರಲ್ಲಿ ಮಾತ್ರ ಕಾಣುವ ವೈಶಿಷ್ಟ್ಯವೇ ಅಲ್ಲ ಎಡಪಂಥೀಯ ಕಲ್ಪನೆ. ಮನುಷ್ಯನ ಸ್ವಾತಂತ್ರ್ಯವನ್ನು ಪರಿಮಿತಗೊಳಿಸ ಯಾವುದೇ ವಿಚಾರವಿರಲಿ, ವರ್ಗೀಯ ನೆಲೆಯಲ್ಲಿ ಹಿಂತು ಶೋಷಣೆಯ ಕಲುಷಿತಗೊಂಡ ಸಮಾಜ ವ್ಯವಸ್ಥೆಯನ್ನು ಸೃಷ್ಟಿಸುವ ಸಂಕೀರ್ಣ ಶಕ್ತಿಗಳ ವಿ ನಿಷೇಧಾತ್ಮಕವಾಗಿ ಪ್ರತಿಕ್ರಿಯಿಸುವವರೇ ಎಡಪಂಥೀಯ ಲೇಖಕರು. ಆದ ಹೀಗಿರುವ ಎಲ್ಲ ಬರಹಗಾರರೂ ಚಾರಿತ್ರಿಕವೂ ದ್ವಂದ್ವಾತ್ಮಕವೂ ಆದ ಭೌತವಾದ ಸಾಕ್ಷಾತ್ಕರಿಸಿಕೊಂಡಿರಬೇಕೆಂದಿಲ್ಲ. ಭಾವನಾವಾದಿ ಪ್ರಪಂಚಾವಲೋಕ ಪ್ರಭಾವಲಯದೊಳಗೆ ಬೆಳೆದವರಾದರೂ ಸಾಮಾಜಿಕ ವಾಸ್ತವದಲ್ಲಿರುವ ವರ್ಗ ವಿಭಜನೆಯ ಸತ್ಯವನ್ನು ಅರ್ಥಮಾಡಿಕೊಂಡಿರುವುದರಿಂದ ಅವರು ಮಾನವೀ ಮೌಲ್ಯಗಳ ಪಕ್ಷದಲ್ಲಿ ನೆಲೆಯೂರಿರುತ್ತಾರೆ. ರಷ್ಯನ್ ಅರಿಸ್ಟೋಕ್ರಸಿಯ ಪ್ರತಿ ಯಾದ ಟಾಲ್‌ಸ್ಟಾಯ್‌ನ ಕೃತಿಗಳು ರಷ್ಯನ್ ಬದುಕಿನ ವಾಸ್ತವಗಳ ಒಳಗೊಂಡಿರುವುದು ಪ್ರಶಂಸಾತ್ಮಕವಾದದ್ದು ಎಂದು ಲೆನಿನ್ ಹೇಳಿದ್ದಾನೆ. ರಮ್ಯವಾ ಕವಿಗಳೂ, ವಾಸ್ತವವಾದಿ ಕಾದಂಬರಿಕಾರರೂ, ನಾಟಕಕಾರರೂ ತೋರಿಸಿಕೊಟ್ಟಿರು ಮಾನವೀಯತೆಯ ಹಾದಿಯಲ್ಲೇ ಎಡಪಂಥೀಯ ಕಲ್ಪನೆ ಮುಂದೆ ಸಾಗುತ್ತದೆ. ಆದ ಆಧುನಿಕ ಎಡಪಂಥೀಯ ಲೇಖಕರಿಗೆ ಭಾವನಾವಾದ ತತ್ವಕ್ಕೆ ಬದಲಾಗಿ ವೈಜ್ಞಾನಿಕವಾ ಭೌತವಾದ ತತ್ವದ ಸಾಮಾಜಿಕ ಸ್ಥಾಪನೆ ಎಂಬ ಕಾರ್ಯವನ್ನು ನಿರ್ವಹಿಸು ಜವಾಬ್ದಾರಿಯಿದೆ. ಬಡವರ್ಗದ ಮಾನವೀಯತೆಯ ವಕ್ತಾರರಾಗಿರುವುದರ ಜತೆ ವರ್ಗಶೋಷಣೆಯ ಬೌದ್ಧಿಕ ನ್ಯಾಯೀಕರಣಕ್ಕೋಸ್ಕರ ತಾತ್ವಿಕ ತಳಪಾಯವ ಸಿದ್ಧಗೊಳಿಸುವ ಅವೈಜ್ಞಾನಿಕ ಭಾವನಾವಾದವನ್ನು ಸಾಮಾಜಿಕ ಪ್ರಜ್ಞೆಯಿಂ ಉಚ್ಚಾಟನೆಗೊಳಿಸುವ ಕಷ್ಟಕರವಾದ ಕರ್ತವ್ಯವನ್ನು ಎಡಪಂಥೀಯ ಕಲ ನಿರ್ವಹಿಸಬೇಕಾಗಿದೆ.

ಈ ಪರಿಸ್ಥಿತಿಯಲ್ಲಿ ಕೇವಲ ಪಕ್ಷ ರಾಜಕೀಯ ನಿಯಮಗಳು ಮತ್ತು ಪೂರ್ವ ತೀರ್ಮಾನಗಳನ್ನು ಇಟ್ಟುಕೊಂಡು ಎಡಪಂಥೀಯ ಕಲ್ಪನೆಗೆ ಅಂತಿಮ ಚಿಕಿತ್ಸೆ ನಡೆಸ ಪ್ರಯತ್ನಿಸುವುದರ ಹಿಂದೆ ಅಷ್ಟೊಂದು ರಹಸ್ಯವಲ್ಲದ ರಾಜಕೀಯ ಹುನ್ನಾರವಿ ಇತ್ತೀಚೆಗಿನ ಮಲಯಾಳ ಕಾವ್ಯ ಸಾಹಿತ್ಯವನ್ನು ಗಮನಿಸಿದವರಿಗೆ ಇದರ ಹಿಂದ ಕಾಪಟ್ಯವೇನೆಂಬುದು ಅರ್ಥವಾಗಬಹುದು. ಇಡಶ್ಶೇರಿ, ವೈಲೋಪ್ಪಿಳ್ಳಿ ಮ ಕಡಮ್ಮನಿಟ್ಟರ ಕಾವ್ಯ ಕಲ್ಪನೆಯ ಸಾನ್ನಿಧ್ಯವು ಈಗಲೂ ನಮ್ಮ ಮನಸ್ಸಿನಲ್ಲಿ ಜೀವ ವಾಗಿದೆ. ಎಡಪಂಥೀಯ ಕಲ್ಪನೆಯು ಸಂಪೂರ್ಣವಾಗಿ ರಾಜಕೀಯ ಪ್ರಚಾರ ಉದ್ದೇಶವನ್ನು ಹೊಂದಿದ್ದಾಗಿದೆಯೆಂದೂ, ಅದಕ್ಕಿರುವುದು ಬೋಧನಾತ್ಮಕವಾ ಗುರಿ ಮಾತ್ರವೆಂದೂ, ಮಾರ್ಕ್ಸ್‌ವಾದದ ಸ್ತುತಿ ಮಾತ್ರವೇ ಎಡಪಂಥೀಯ ಲೇಖಕ ವಿಧಿಸಿರುವ ಕಟ್ಟಾಜ್ಞೆಯೆಂದೂ ಮಲಯಾಳ ಮಾಧ್ಯಮಗಳು ಏನೂ ತಿಳಿಯ ಮುಗ್ಧರನ್ನು ನಂಬಿಸಿವೆ. ಸತ್ಯ ದೂರವಾದ ಈ ಧೋರಣೆಗಳನ್ನು ಸರಿಪಡಿಸುವುದು ಕೂಡ ಎಡಪಂಥೀಯ ಲೇಖಕನ ಹೊಣೆಯಾಗಿದೆ.

ಎಡಪಂಥೀಯ ಕಲಾವಿದ ಓರ್ವ ಎಡಪಂಥೀಯ ತತ್ವಜ್ಞಾನಿಯೂ ಹೌದು.

ಮಲಯಾಳ ಮೂಲ : ಕೆ. ಪಿ. ಕೃಷ್ಣನ್ ಕುಟ್ಟಿ
ಲಿಂಗ್ವಿಸ್ಟಿಕ್ಸ್ ಡಿಪಾರ್ಟ್‌ಮೆಂಟ್, ಸೆಂಟರ್ ಫಾರ್ ಕಂಪ್ಯಾರಿಟಿವ್ ಸ್ಟಡೀಸ್
ಶ್ರೀ ಶಂಕರಾಚಾರ್ಯ ಯೂನಿವರ್ಸಿಟಿ, ಕಾಲಡಿ, ಕೇರಳ.

ಕನ್ನಡಕ್ಕೆ : ಪಾರ್ವತಿ ಜಿ. ಐತಾಳ್
ಅಸೋಸಿಯೇಟ್ ಪ್ರೊಫೆಸರ್, ಡಿಪಾರ್ಟ್‌ಮೆಂಟ್ ಆಫ್ ಇಂಗ್ಲಿಷ್
ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ - ೫೭೬ ೨೦೧



ವಿಜ್ಞಾನ: ಹೊಣೆಗಾರಿಕೆ ಮತ್ತು ರಾಜಕೀಯ

ಕಳೆದ ಒಂದು ವರ್ಷದಿಂದ ಮಾಧ್ಯಮಗಳು ಭ್ರಷ್ಟಾಚಾರವನ್ನು ಕುರಿತು ಅನೇಕ ವಿಷಯಗಳನ್ನು ೇಳುತ್ತಿವೆ. ವಿವಿಧ ಪಕ್ಷಗಳ ರಾಜಕೀಯ ಮುಖಂಡರು (ಎಡಪಕ್ಷಗಳನ್ನು ಹೊರತುಪಡಿಸಿ) ದೊಡ್ಡ ಮೊತ್ತದ ಣ ಹಗರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಆಂಟ್ರಿಕ್ಸ್ ವಿಷಯ ಒಂದನ್ನು ಬಿಟ್ಟರೆ ವ್ಯಕ್ತಿಗತವಾಗಿ ಯಾವ ಂದು ವಿಜ್ಞಾನಿ ಅಥವಾ ವಿಜ್ಞಾನ ಸಂಸ್ಥೆಯಾಗಲಿ ಇಂತಹ ಹಗರಣದಲ್ಲಿ ಸೇರಿಲ್ಲ. ಆದರೆ ಆಂಟ್ರಿಕ್ಸ್‌ನಿಂದ ್ರಜ್ಞಾನಿಕ ಸಂಸ್ಥೆಗಳಿಗೆ ಕೆಟ್ಟ ಹೆಸರು ಬಂದಿಲ್ಲವೆಂದಲ್ಲ. ಅವು ಮಾಧ್ಯಮದ ಕಣ್ಣಿನಲ್ಲಿ ಅಷ್ಟೊಂದು ಮುಖ್ಯವಾದ ಷಯವಾಗಿಲ್ಲ, ಅಷ್ಟೆ.

ಇಂತಹ ಪರಿಶುದ್ಧ ದೃಶ್ಯವು, ಅಣುಶಕ್ತಿ ನಿಯಂತ್ರಣಾ ಸಮಿತಿಯ ಅಧ್ಯಕ್ಷರ ಹೇಳಿಕೆಯಿಂದ ಕಲುಷಿತ ಾಗಿದೆ. ಅವರು ತಮ್ಮ ಇತ್ತೀಚಿನ ಬರಹವೊಂದರಲ್ಲಿ ಹೇಳಿದ್ದು ಈ ರೀತಿ: ''ಭಾರತ ಮತ್ತು ಅಮೆರಿಕಾ ಡುವಿನ ಅಣುಶಕ್ತಿ ಒಪ್ಪಂದವನ್ನು ದಕ್ಕಿಸಿಕೊಳ್ಳಲು, ಪರಮಾಣು ರೀಯಾಕ್ಟರ್‌ಗಳಿಗೆ ಇಂಧನ ಸಾಮಗ್ರಿ ರಬರಾಜು ಮಾಡುವ ಗುಂಪಿನಿಂದ ವಿನಾಯಿತಿ ಪಡೆಯಲು, ನಮ್ಮ ಪ್ರಧಾನಿ ಅಮೆರಿಕಾ, ಫ್ರಾನ್ಸ್ ುತ್ತು ರಷ್ಯಾಗೆ, ಅವರಿಂದ ಅನೇಕ ಪರಮಾಣು ರೀಯಾಕ್ಟರುಗಳನ್ನು ಕೊಂಡುಕೊಳ್ಳುವುದಾಗಿ ಭಾಷೆ ಟ್ಟರು. ಈ ಪ್ರಮಾಣವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ನಮ್ಮ ಪ್ರಭುತ್ವ ಆಕ್ರಮಣಶೀಲ ರೀತಿಯಲ್ಲಿ ೀಯಾಕ್ಟರುಗಳನ್ನು ಆಮದು ಮಾಡಿಕೊಳ್ಳಲು ಬಿರುಸಿನ ಕಾರ್ಯಕ್ರಮ ಹಮ್ಮಿಕೊಂಡಿದೆ. ಆಮದು ಾಡುತ್ತಿದೆ.

''ಭಾರತ ದೇಶದಲ್ಲಿ ಅಣುಶಕ್ತಿ ಸಂಬಂಧದ ಯಾವುದೇ ಕಾರ್ಯನೀತಿ ಇಲ್ಲ. ನಮ್ಮ ಪ್ರಧಾನಿಯ ಅನಿಸಿಕೆಯಲ್ಲಿ ಅಂತಹ ಕಾರ್ಯನೀತಿಯ ಅಗತ್ಯವೇ ಇಲ್ಲ. ಮುಂದಿನ ೨೦ ವರ್ಷಗಳಲ್ಲಿ, ೪೦,೦೦೦ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ಬೆಲೆಬಾಳುವ ಯಂತ್ರಗಳನ್ನು ಖರೀದಿಸಲು ಅವರು ನಿರ್ಧಾರ ತೆಗೆದುಕೊಂಡಾಗಿದೆ. ಹಿಂದಿನ ಮೂರು ಅಣುಶಕ್ತಿ ಸಮಿತಿಗಳ ಅಧ್ಯಕ್ಷರುಗಳು ಮತ್ತು ವಿಜ್ಞಾನಿಗಳು ಅನೈತಿಕವಾಗಿ ಪ್ರಧಾನಿಯವರು ವಿದೇಶದಿಂದ ಅಣ್ವಸ್ತ್ರ ಯಂತ್ರಗಳನ್ನು ಆಮದು ಮಾಡುವ ಈ ಅಸಂಬದ್ಧವಾದ ನಿರ್ಧಾರವನ್ನು ಯಾವ ಮೌಲ್ಯ, ಗುಣಮಟ್ಟ ಹಾಗೂ ಸುರಕ್ಷತೆಯ ಪರೀಕ್ಷೆಗಳಿಲ್ಲದೆ ಪ್ರೋತ್ಸಾಹಿಸಿದ್ದಾರೆ. ಇದರಿಂದ ನಮ್ಮ ಸ್ವದೇಶೀಯ 'ಪ್ರೆಷರೈಸ್ಡ್ ಹೆವೀ ವಾಟರ್ ರಿಯಾಕ್ಟರ್' ಪ್ರಯತ್ನಗಳೆಲ್ಲಾ ತ್ಯಜಿಸಲ್ಪಟ್ಟವು.'' (ಎ. ಗೋಪಾಕೃಷ್ಣ, 'ಡಿ.ಎನ್.ಎ.' ಮುಂಬಯಿ, ೮-೧೧-೨೦೧೧)

ಈ ಆಪಾದನೆಗಳು ಬಹಳ ಗಂಭೀರವಾಗಿದ್ದು, ಇದುವರೆಗೂ ಯಾವ ವಿಜ್ಞಾನಿಯ ಬಗ್ಗೆಯೂ ಇಂತಹುದನ್ನು ಕೇಳಿರಲಿಲ್ಲ. ವಿಜ್ಞಾನ ಮತ್ತು ವಿಜ್ಞಾನಿಗಳ ಗೂಢ ಪ್ರಪಂಚದಲ್ಲಿ ಎಲ್ಲವೂ ಸರಿಯಿದೆಯೇ ಎಂದು ಜನಸಾಮಾನ್ಯರು ಕೇಳಬಹುದು.

ಈಗ ಆಗುತ್ತಿರುವ ಭ್ರಷ್ಟಾಚಾರದ ಬಗೆಗಿನ ವಾದ ವಿವಾದಗಳಲ್ಲಿ, ಈ ವಿಷಯವು ಖಂಡಿತ ಗಮನ ಸೆಳೆಯುತ್ತದೆ. 'ಭ್ರಷ್ಟಾಚಾರ'ದ ಬಗ್ಗೆ ಸಾರ್ವಜನಿಕರಿಗೆ ಇರುವ ಅಭಿಪ್ರಾಯವನ್ನು ಕುರಿತು ಯೋಚಿಸೋಣ. ಭ್ರಷ್ಟಾಚಾರವೆಂದರೆ, ಒಬ್ಬರ ಸಾರ್ವಜನಿಕ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ವ್ಯಕ್ತಿಗತ ಲಾಭಗಳನ್ನು ಪಡೆಯುವುದು ಅಥವಾ ಇನ್ನೊಬ್ಬರಿಗೆ ಅಂತಹ ಲಾಭವನ್ನು ಪಡೆಯುವಂತೆ ಸಹಾಯ ಮಾಡುವುದು ಮತ್ತು ಸಾರ್ವಜನಿಕರಿಗೆ ಆ ಲಾಭ ಸಿಗದಂತೆ ಮಾಡುವುದು. ಇದುವರೆಗೆ ಯಾವ ವಿಜ್ಞಾನಿಯೂ ಅತಿಯಾದ ಆಸ್ತಿ ಗಳಿಸದಿದ್ದರೂ, ಅನೇಕ ವಿಷಯಗಳಲ್ಲಿ ಅವರ ಅಭಿಪ್ರಾಯವು (ಗೊತ್ತಿದ್ದರೂ ಮತ್ತು ಗೊತ್ತಿಲ್ಲದಿದ್ದರೂ) ಸಾರ್ವಜನಿಕರ ಮನಸ್ಸನ್ನು ಸೆಳೆದು, ಸಿಗಬೇಕಾದವರಿಗೆ ಲಾಭ ಸಿಕ್ಕದೆ ಬೇರೆಯವರಿಗೆ ಸಿಗುವಂತೆ ಮಾಡುತ್ತದೆ. ಇದರಿಂದ ಸಾರ್ವಜನಿಕರಿಗೆ ಆಗುವ ಹಾನಿ ಅಪಾರ. ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳಬಾರದು.

ಒಬ್ಬ ವಿಜ್ಞಾನಿಯನ್ನು ವಿಮರ್ಶಿಸುವಾಗ, ಆತನ 'ವೈಜ್ಞಾನಿಕ ಪ್ರಾಮಾಣಿಕತೆ'ಯನ್ನು ಪರೀಕ್ಷಿಸಬೇಕಾಗುತ್ತದೆ. ಇದನ್ನು ಪರಾಮರ್ಶಿಸುವುದು ಸುಲಭದ ಕೆಲಸ.

ಡಾ|| ಸವ್ಯಸಾಚಿ ಚಟರ್ಜಿ

ದು ಸಿದ್ಧಾಂತವನ್ನು ನಿರೂಪಿಸಬೇಕಾದರೆ, ಆತನು ಪರಿಶೋಧನೆಯನ್ನು ಮಾಡಿದ ಸ್ಥಿತಿ, ಪರಿಣಾಮದ ಮರುಕಳಿಕೆ, ಅವನ ಅಭಿಪ್ರಾಯವನ್ನು ಇವೆಲ್ಲವೂ ಸಮರ್ಥನೆ ಡಿವೆಯೇ, ಎಂಬುದನ್ನೆಲ್ಲಾ ಗಮನಿಸಬೇಕಾಗುತ್ತದೆ. ಇಲ್ಲಿ ಎಲ್ಲರಿಗೂ ಮೋಸ ಡುವುದು ಕಷ್ಟದ ಕೆಲಸ. ಆ ವಿಜ್ಞಾನಿಯು ತನ್ನ ಸಿದ್ಧಾಂತವನ್ನು ಪ್ರಮುಖರಿಂದ ರ್ಶಿಸಲ್ಪಟ್ಟ ಗ್ರಂಥಗಳಲ್ಲಿ ಪ್ರಕಟಿಸಬೇಕು. ಮೋಸವನ್ನು ಕಂಡುಹಿಡಿದರೆ, ಜ್ಞಾನಿಯ ಸಂಶೋಧನೆಗೆ ಕಳಂಕ ಒದಗಿ, ಅಂತಹ ವಿಜ್ಞಾನಿಯು ಇತಿಹಾಸದ ಾಗುತ್ತಾನೆ.

ವಿಜ್ಞಾನಿಗಳು, ತಪ್ಪು ಸಿದ್ಧಾಂತಗಳ ಅಪಾಯದಿಂದ ಎಚ್ಚರಿಕೆಯಿಂದಿರಬೇಕು. ವು ವೇಳೆ, ಇಂತಹ ತಪ್ಪು ಸಿದ್ಧಾಂತಗಳು ಬೇಕೆಂದು ಮಾಡದೇ ಇದ್ದರೂ, ಬಿಡುತ್ತವೆ. ೧೯೬೦ ಮತ್ತು ೭೦ರಲ್ಲಿ ನಡೆದ ಒಂದು ಘಟನೆಯ ಉದಾಹರಣೆ ಡಬಹುದು. ಸೋವಿಯತ್ ವಿಜ್ಞಾನಿಗಳ ಒಂದು ಗುಂಪು ನೀರಿನ ಕೆಲವು ವಿಚಿತ್ರ ಣಗಳನ್ನು ಗಮನಿಸಿತು. ನೀರು ಒಂದು 'ಪಾಲಿಮರ್' ಎಂಬ ಸಿದ್ಧಾಂತವನ್ನು ೂಪಿಸಿ, ಈ ವಸ್ತುವನ್ನು 'ಪಾಲೀ ವಾಟರ್' ಎಂದು ಕರೆದರು. ಪಶ್ಚಿಮದ ಅನೇಕ ಜ್ಞಾನಿ ಗುಂಪುಗಳು ಈ ಪರೀಕ್ಷೆಯನ್ನು ಮತ್ತೆ ಮತ್ತೆ ಮಾಡಿ ಈ ಸಿದ್ಧಾಂತವನ್ನು ಕೊಂಡವು. ಇದರಿಂದ, ನೀರಿನ ಈ ಹೊಸ ಸ್ಥಿತಿಯ ಬಗ್ಗೆ ವಿಜ್ಞಾನಿಗಳ ುದಾಯದಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ, ಆಶ್ಚರ್ಯಕರವಾಗಿ, ಅದೇ ೀವಿಯತ್ ವಿಜ್ಞಾನಿಗಳು, ತಮ್ಮ ಸಿದ್ಧಾಂತವನ್ನು ಸಮರ್ಥಿಸುವ ಬೇರೆ ಪುರಾವೆಗಳನ್ನು ಡುಕುವಾಗ, ಅದು ಸಿಗಲಿಲ್ಲ. ಅನೇಕ ಪರೀಕ್ಷೆಗಳನಂತರ, ತಮ್ಮ ಸಿದ್ಧಾಂತವು ಂದು ಅವರು ಅಭಿಪ್ರಾಯಪಟ್ಟರು. ಅವರು ತಮ್ಮ ತಪ್ಪನ್ನು ಪ್ರಕಟಿಸಿ ಎಲ್ಲರಿಗೂ ಸಿದರು. ಆದರೆ, ಇದರಿಂದ ಅವರ ಘನತೆಗೇನೂ ಕುಂದು ಬರಲಿಲ್ಲ. ನಿಜ, ರು ವಿಜ್ಞಾನಿಗಳ ಸಮುದಾಯಕ್ಕೆ ತಪ್ಪು ದಾರಿ ತೋರಿಸಿದರು. ಆದರೆ, ಇದರಿಂದ ರ ಸ್ವಂತ ವಿಜ್ಞಾನವೂ ಹಿಂದುಳಿಯಿತು. ಈ ತಪ್ಪು ಸಂಶೋಧನೆಯನ್ನು ಲೆಕ್ಕಿಸದೆ, ್ಯಾಗ್ವಿನ್ ನಾಯಕತ್ವದ ಈ ಗುಂಪಿನ ಕೊಡುಗೆಯನ್ನು 'ಸರ್ಫೇಸ್ ಸೈನ್ಸ್' ಾಗದಲ್ಲಿ ಇವತ್ತಿಗೂ ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ.

ಇನ್ನು ಕೆಲವು ಉದಾಹರಣೆಗಳು: ಬೆಳಕಿನ ಕಿರಣಗಳು 'ಈಥರ್' ಎಂಬ ವಸ್ತುವಿನ ಮೂಲಕ ಚಲಿಸುತ್ತದೆಂದು ನಂಬಲಾಗಿತ್ತು. ೧೮೮೧ರಲ್ಲಿ ಎ. ಎ. ಮೈಕಲ್‌ಸನ್ ಎಂಬ ವಿಜ್ಞಾನಿ 'ಈಥರ್' ನಿಜವಾಗಿಯೂ ಇದೆ ಎಂದು ರುಜುವಾತು ಮಾಡಲು ಒಂದು ಪ್ರಯೋಗ ಮಾಡಿದರು. ಆದರೆ ಆ ಪ್ರಯತ್ನಗಳೆಲ್ಲವೂ 'ಈಥರ್' ಇಲ್ಲವೆಂಬುದಕ್ಕೆ ಪುರಾವೆ ನೀಡಿದವು. ಲಾರ್ಡ್ ಕೆಲ್ವಿನ್ ಅವರ ಸಲಹೆಯ ಪ್ರಕಾರ ಮಾರ್ಲೀ ಎಂಬ ವಿಜ್ಞಾನಿಯ ಜೊತೆ ಮತ್ತೆ ಅದೇ ಪ್ರಯೋಗವನ್ನು ಮಾಡಿದರು. ಈ ಸಲವೂ ಸಕಾರಾತ್ಮಕ ಫಲಿತಾಂಶವೇ ಬಂದಿತು. ವಿಜ್ಞಾನದ ಅತ್ಯಂತ ಪ್ರಮುಖವಾದ ಈ ನಕಾರ ಫಲಿತಾಂಶವು, 'ರಿಲೇಟಿವಿಟಿ' ಸಿದ್ಧಾಂತಕ್ಕೆ ಮುಖ್ಯವಾದ ಮೈಲಿಗಲ್ಲು.

ಐನ್‌ಸ್ಟೈನನ 'ಫೋಟಾನ್' ಸಿದ್ಧಾಂತವನ್ನು ಕಡೆಗೂ ಒಪ್ಪಿದ ಮಿಲಿಕಾನ್‌ನ ಹಾದಿಯು ಕಠಿಣವೇ ಆಗಿತ್ತು. ಮಿಲ್ಲಿಕಾನ್‌ಗೆ ನೋಬೆಲ್ ಪ್ರಶಸ್ತಿ ಕೊಟ್ಟ ಸಮಿತಿಯು 'ಮೂಲವಸ್ತು ರೂಪ ಮತ್ತು ಫೋಟೋ ಪರಿಣಾಮ'ವೆಂದು ಅವನ ಸಂಶೋಧನೆಯನ್ನು ಗುರುತಿಸಿದೆ. ಇವರ ಪ್ರಯೋಗವು ಐನ್‌ಸ್ಟೈನನ 'ಫೋಟೋ' ಸಿದ್ಧಾಂತವನ್ನು ವಿಜ್ಞಾನಿಗಳು ಒಪ್ಪಿಕೊಳ್ಳುವುದಕ್ಕೆ ಕಾರಣವಾಗಿತ್ತು. ಆದರೆ ಮಿಲ್ಲಿಕಾನ್‌ಗೆ ಐನ್‌ಸ್ಟೈನನ ಸಂಶೋಧನೆಯ ಬಗೆಗಿನ ಅಭಿಪ್ರಾಯವೇ ಬೇರೆಯಾಗಿತ್ತು. ''ಜವಾಬ್ದಾರಿ ಇಲ್ಲದ ಕೆಲಸ. ನನ್ನ ಅಭಿಪ್ರಾಯದಲ್ಲಿ, ಇದಕ್ಕೆ ಯಾವ ತೃಪ್ತಿಕರವಾದ ಸಿದ್ಧಾಂತವೂ ಆಧಾರವಾಗಿಲ್ಲ.'' ಆದರೆ ೩೦ ವರ್ಷಗಳ ಬಳಿಕ ಮಿಲ್ಲಿಕಾನ್‌ನ ಅಭಿಪ್ರಾಯ ಹೀಗಿತ್ತು: ಐನ್‌ಸ್ಟೈನ್ ಮೊದಲು ಕೊಟ್ಟ ನಿರ್ವಚನೆಗಿಂತ ಬೇರೆ ಯಾವ ಸಿದ್ಧಾಂತವೂ ಇದನ್ನು ನಿರೂಪಿಸುವುದಕ್ಕೆ ಸಾಧ್ಯವಿಲ್ಲ.

ಅನ್ಯೋನ್ಯ ಅವಲಂಬನೆ ವಿಜ್ಞಾನಿಗಳನ್ನು ತಮ್ಮ ಸಹಕಾರಿಗಳ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ.

ಆದರೆ ಆದ್ಯತೆ, ಅಂದರೆ ಪರಿಶೋಧನೆಯನ್ನು ತಾನೇ ಮೊದಲು ಮಾಡಿದೆನೆಂಬ ಘನತೆ, ಪ್ರತಿಯೊಂದು ವಿಜ್ಞಾನಿಯ ಇಚ್ಛೆ. ಇದೇ ಕಾರಣಕ್ಕಾಗಿಯೇ, ಹೊಸ ವರ್ಣ ಪಟಲವನ್ನು ನೋಡಿದಾಗ, ಸಿ. ವಿ. ರಾಮನ್, ಬರೀ ತನ್ನ ಹೆಸರಿನ ಮೇಲೆ ಟೆಲಿಗ್ರಾಂ ಕಳುಹಿಸಿದ್ದು. ಆ ಸಂಶೋಧನೆಯಲ್ಲಿ ತನ್ನ ಜೊತೆಗಾರನಾದ ಕೆ. ಎಸ್. ಕೃಷ್ಣನ್

ಕಾರ್ಬನ್–ಕಾರ್ಬನ್

ನಾನು ಕಡುಗಪ್ಪಿದ್ದರೇನು
ಜಗದ ಚೇತನ ನಾನು
ಸರ್ವಜೀವದಾತ ನಾನು
ಸೃಷ್ಟಿಯ-ಸೊಬಗೇ ನಾನು
ಹಾಡುತ್ತ ಸಾಗಿತ್ತು ಕಾರ್ಬನ್
ತಲೆಯಾಡಿಸಿ ಕುಣಿದೆವು ನಾವು.

ಸತ್ಯಯುಗದಿಂದ ದ್ವಾಪರದೊರೆಗೆ
ಮಾನವನಂಜಿದ್ದು ಈಶ್ವರಗೆ
ಆದರೀ... ಕರಾಳ ಕಲಿಯುಗದಿ
ಜಗ ನಡುಗುವದು ಕೇವಲ ನನಗೆ
ಗುಡುಗತೊಡಗಿತ್ತು ಕಾರ್ಬನ್
ಬೆವರತೊಡಗಿದೆವು ನಾವು.

ಯುಗ-ಯುಗದಿ ಸಾಗಿರುವ
ಜಲ-ವಾಯು ಚೆಂಡಿನಾಟದಲಿ
ಒಮ್ಮೆ ಛಳಿ, ಮತ್ತೊಮ್ಮೆ ಬಿಸಿ
ಒಮ್ಮೆ ಅತಿವೃಷ್ಟಿ, ಒಮ್ಮೆ ಅನಾವೃಷ್ಟಿ
ಕಣ್ಣುಮುಚ್ಚಾಟವಾಡಿತ್ತು ಕಾರ್ಬನ್
ದಿಕ್ಕು-ದೆಶೆ ತಪ್ಪಿದೆವು ನಾವು.

ಅಂತ್ಯವಿರದ ಅನಂತ ಲೋಭ
ಆವಿಷ್ಕಾರಗಳ ವೇಗದಿಂದೆದ್ದ ಧೂಳು
ಚೀತ್ಕರಿಸುತ್ತ ಮಣ್ಣಾದ ಕಾಡು
ಸೇರಿ... ಕಾರ್ಬನ್ನಿಗಿಟ್ಟವು ಕಿಚ್ಚು
ಕಾರ್ಬನ್ನಿನ ಕಣ್ಣು ಕೆಂಪಡರಿತ್ತು
ನಮ್ಮ ದೇಹ ಬಿಳುಚಿಗೊಂಡಿತು.

ತಣಿಯಲಿಲ್ಲ ಕಾರ್ಬನ್ನಿನ ಕೋಪ
ಯದ್ವಾ-ತದ್ವಾ ಒಡಿದ ವರುಣ
ನೀರಿಲ್ಲದೇ ಬಿರಿಯಿತು ಭೂಮಿ
ಎತ್ತನೋಡಿದರತ್ತ ನಿಸರ್ಗದಟ್ಟಹಾಸ
ಠೇಂಕರಿಸುತ್ತ ಸಾಗಿತ್ತು ಕಾರ್ಬನ್
ಆವಿಯಾಗತೊಡಗಿದೆವು ನಾವು

ಭೂ-ಜಲ-ವಾಯುಮಂಡಲದಿ
ದಿನವೂ ಸುಡುತ್ತಿರುವೆ ನಾನು
ಅಲ್ಪವಾದರೂ ತಣಿಸಿರೆನ್ನ
ತಪ್ಪೀತು ಮಹಾ-ಪ್ರಳಯ
ಸೃಷ್ಟಿಚೇತನವಲ್ಲವೆ ನಾನು
ಚೀತ್ಕರಿಸುತ್ತಿತ್ತು ಕಾರ್ಬನ್
ಶ್ರವಣಹೀನರಾಗಿದ್ದೆವು ನಾವು.

ಡಾ|| ವಿರುಪಾಕ್ಷ ಕೆ. ಬಣಕಾರ್

ಅವರಿಗೆ ಈ ಘನತೆಯಲ್ಲಿ ಪಾಲು ಕೊಡಲಿಲ್ಲ. ಈ ಸಂಶೋಧನೆಯನ್ನು ರಾಮನ್-ಕೃಷ್ಣನ್ ಪರಿಣಾಮ ಎಂದು ಪ್ರಖ್ಯಾತ ವಿಜ್ಞಾನಿ ಅರ್ನಾಲ್ಡ್ ಸೊಮರ್‌ಫೆಲ್ಡ್ ಹೇಳಿದರೂ, ನೋಬೆಲ್ ಪ್ರಶಸ್ತಿಯನ್ನು ಬರೀ ರಾಮನ್ ಅವರಿಗೆ ಕೊಟ್ಟರು. ಈ ಸಂಶೋಧನೆಯಲ್ಲಿ ರಾಮನ್ ಅವರ ಹಕ್ಕನ್ನು ನಿರಾಕರಿಸುವುದು ಯಾರಿಂದಲೂ ಸಾಧ್ಯವಿಲ್ಲ. ಆದರೆ 'ರಾಮನ್ ಪರಿಣಾಮ'ದ ಸಿದ್ಧಾಂತವನ್ನು ಮಂಡಿಸಿದ ಸ್ಮೇಕಲ್ ಅವರಿಗಾಗಲಿ, ತಾವು ಕಂಡದ್ದನ್ನು ಖಚಿತಪಡಿಸಿಕೊಳ್ಳಲು ಸ್ವಲ್ಪ ದಿನ ಕಾದ ಲಾಂಡ್ಸಬರ್ಗ್ ಮತ್ತು ಮೆಡಲ್‌ಸ್ಟಾಮ್ ಅವರಿಗಾಗಲಿ, ನೋಬೆಲ್ ಪ್ರಶಸ್ತಿ ಸಿಗಲಿಲ್ಲ. ಆದರೆ, ವಿಜ್ಞಾನದ ಸಂಶೋಧನೆಯಲ್ಲಿ ಇನ್ನೊಬ್ಬರ ಕೊಡುಗೆಯನ್ನು ಗುರುತಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದ ಒಂದು ಒಳ್ಳೆಯ ಪದ್ಧತಿ. ೧೯೬೪ರಲ್ಲಿ ರಸಾಯನಶಾಸ್ತ್ರಕ್ಕೆ ನೋಬೆಲ್ ಪ್ರಶಸ್ತಿ ಪಡೆದ ಡಾರತೀ ಹಾಡ್ಕಿನ್ ಅವರು, ಈ ಸಂಶೋಧನೆಯಲ್ಲಿ ತನ್ನ ಗುರುವಾದ ಜೆ. ಡಿ. ಬರ್ನಾಲ್ ಅವರಿಗೂ ಪ್ರಶಸ್ತಿ ಸಿಕ್ಕಿದ್ದರೆ ಸಂತೋಷವಾಗುತ್ತಿತ್ತು ಎಂದರು.

ಜೇಮ್ಸ್ ವಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಅವರ ಡಿ.ಎನ್.ಎ.ನ ಡಬಲ್ ಹೆಲಿಕ್ಸ್ ವಿನ್ಯಾಸದ ಹಿಂದೆಯೂ ಒಂದು ಕುತೂಹಲಕಾರಿ ಕಥೆ ಇದೆ. ಅವರ ಸಂಶೋಧನೆಗೆ ದಾರಿಮಾಡಿದ್ದು ರೊಸಲಿನ್ಡ್ ಫ್ರಾಂಕ್ಲಿನ್ ತೆಗೆದ ಕ್ಷ-ಕಿರಣ ಚಿತ್ರಗಳು. ಈ ಚಿತ್ರಗಳು ಬರ್ನಾಲ್ ಅವರ ಅಭಿಪ್ರಾಯದಲ್ಲಿ "ಯಾವ ವಸ್ತುವಿನಲ್ಲೂ ಇದುವರೆಗೂ ಕಾಣದ ಅತ್ಯಂತ ಸುಂದರವಾದ ಕ್ಷ-ಕಿರಣ ಚಿತ್ರಗಳು." ಆದರೆ ಫ್ರಾಂಕ್ಲಿನ್‌ಗೆ ತಿಳಿಯದಂತೆ, ಅವಳ ಮೇಲಧಿಕಾರಿಯಾದ ಮಾರಿಸ್ ವಿಲ್ಕಿನ್ಸ್ ಆ ಚಿತ್ರಗಳನ್ನು ವಾಟ್ಸನ್ ಮತ್ತು ಕ್ರಿಕ್‌ಗೆ ತೋರಿಸಿದನು. ಈ ಚಿತ್ರಗಳ ಆಧಾರದ ಮೇಲೆ ವಾಟ್ಸನ್ ಮತ್ತು ಕ್ರಿಕ್ ತಮ್ಮ ಡಬಲ್ ಹೆಲಿಕ್ಸ್ ವಿನ್ಯಾಸವನ್ನು ತಯಾರಿಸಿದರು. ಆದರೆ ಫ್ರಾಂಕ್ಲಿನ್‌ನನ್ನು ತಮ್ಮ ಗುಂಪಿಗೆ ಸೇರಿಸಿಕೊಳ್ಳಲಿಲ್ಲ. ಫ್ರಾಂಕ್ಲಿನ್‌ನ ಸಂಶೋಧನೆ ಅವರ ಸಂಶೋಧನೆಯೊಂದಿಗೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟಗೊಂಡರೂ, ಅವರು ಸದಾ ಅವಳ ತೇಜೋವಧೆ
ಮಾಡುತ್ತಿದ್ದರು. ಇದನ್ನು ನಂತರ ಜೇಮ್ಸ್ ವಾಟ್ಸನ್ ಒಪ್ಪಿಕೊಂಡ. ನೋಬೆಲ್ ಪ್ರ
ವಾಟ್ಸನ್, ಕ್ರಿಕ್ ಮತ್ತು ವಿಲ್ಕಿನ್ಸ್‌ಗೆ ಮಾತ್ರ ಸಿಕ್ಕಿತು. ನೋಬೆಲ್ ಪ್ರಶಸ್ತಿಯನ್ನು ಮೂ
ಮಂದಿಗೆ ಮಾತ್ರ ಕೊಡಬಹುದು. ಫ್ರಾಂಕ್ಲಿನ್‌ಳ ಚಿಕ್ಕ ವಯಸ್ಸಿನಲ್ಲಿನ ಸಾವು ನೋಬೆ
ಸಮಿತಿಯನ್ನು ಗಲಭೆಯಿಂದ ಕಾಪಾಡಿತು. ವ್ಯಕ್ತಿ ಸತ್ತಮೇಲೆ ನೋಬೆಲ್ ಪ್ರ
ಕೊಡುವುದಿಲ್ಲ. ಈ ಕಥೆಗೆ ಇನ್ನೊಂದು ಭಾಗವೂ ಇದೆ. ಡಬಲ್ ಹೆಲಿಕ್ಸ್ ವಿನ್ಯಾಸ
ಮೊದಲು ಶುರು ಮಾಡಿದ ವಿಜ್ಞಾನಿ ಲೈನಸ್ ಪೌಲಿಂಗ್. ಆತನ ನಮೂನೆ ಇ
ಪೂರ್ತಿಯಾಗಿರಲಿಲ್ಲ. ವಾಟ್ಸನ್ ಮತ್ತು ಕ್ರಿಕ್ ಆ ನಮೂನೆಯನ್ನು ನೋ
ಅದರಲ್ಲಿರುವ ನ್ಯೂನತೆಯನ್ನು ಗೊತ್ತಿದ್ದೂ ಹೇಳಲಿಲ್ಲ. ತಾವೇ ಸಂಶೋಧನೆಯ
ಮಾಡಬೇಕೆಂಬ ಅತಿಯಾಸೆ ಅವರಲ್ಲಿತ್ತು. ಅವರು ಪೌಲಿಂಗ್‌ನ ಸಂಶೋಧನೆಯ
ಸರಿ ಮಾರ್ಗದಲ್ಲಿ ನಡೆಯಲು ಸಹಕರಿಸದೆ ಹಾಗೆಯೇ ಮುಂದುವರಿಯಲಿಕ್ಕೆ ಬಿಟ
ಫ್ರಾಂಕ್ಲಿನ್‌ಳ ಚಿತ್ರವನ್ನು ಉಪಯೋಗಿಸಿ ತಮ್ಮ ಡಬಲ್ ಹೆಲಿಕ್ಸ್ ವಿನ್ಯಾಸವ
ಪೂರ್ಣಗೊಳಿಸಿದರು.

ನೋಬೆಲ್ ಪ್ರಶಸ್ತಿಯ ಇನ್ನೊಂದು ವಿವಾದವು ೧೯೭೪ರ ಭೌತಶಾ
ಸಂಬಂಧಿಸಿದ್ದು. ಪಲ್ಸಾರ್ ಕುರಿತ ಶೋಧನೆಗೆ ಹೆವಿಶ್ ಮತ್ತು ರೈಲ್ ಅವರಿಗೆ ಪ್ರ
ಕೊಡಲಾಯಿತು. ಜೋಸಲಿನ್ ಬೆಲ್ ಎಂಬ ವಿಜ್ಞಾನಿ ಸಂಗ್ರಹಿಸಿದ ರೇಡಿ
ಖಗೋಳಶಾಸ್ತ್ರ ಪ್ರಮಾಣವನ್ನು ಆಧರಿಸಿ ಈ ಸಂಶೋಧನೆ ನಡೆದಿತ್ತು. ಬೆಲ್ ರೇಡಿ
ದೂರದರ್ಶಕ ಯಂತ್ರವನ್ನು ನಿರ್ಮಿಸಿ ಈ ಪ್ರಮಾಣವನ್ನು (ಡೇಟಾ) ಸಂಗ್ರಹಿಸಿದರು.
ಡೇಟಾದಲ್ಲಿದ್ದ ಆಶ್ಚರ್ಯಕರ ಬದಲಾವಣೆಗಳನ್ನು ಆಕೆ ಹೆವಿಶ್‌ಗೆ ತೋರಿಸಿದರು. ಬೆ
ಹೆವಿಶ್‌ಗಿಂತ ಕಿರಿಯ ಅಧಿಕಾರಿ. ಆತ ಬೆಲ್‌ಗೆ ಹೇಳದೆ ರೈಲ್ ಜೊತೆ ಆ
ಸಂಶೋಧನೆಯನ್ನು ವಿಶ್ಲೇಷಿಸತೊಡಗಿದನು. ಹೆವಿಶ್ ಮತ್ತು ರೈಲ್ ತಪ್ಪು ವಿಶ್ಲೇಷ
ಮಾಡಿ, ಭೂಮಿಗೆ ಹೊರಗಿರುವ ಪ್ರಾಣಿಗಳು ಕಳಿಸಿರುವ ಸಂದೇಶ ಅದೆಂ
ನಂಬಿದರು. ಆ ಪ್ರಾಣಿಯನ್ನು 'ಲಿಟಲ್ ಗ್ರೀನ್ ಮ್ಯಾನ್' ಎಂದು ಕರೆದರು. ಬೆ
ಇನ್ನೂ ಅನೇಕ ಪ್ರಮಾಣಗಳನ್ನು ವಿಶ್ಲೇಷಿಸಿದ ಮೇಲೆ ಅವರು ಇದು ತಿರುಗುತ್ತಿರ
ನ್ಯೂಟ್ರಾನ್ ನಕ್ಷತ್ರದ ಸಂಕೇತವೆಂದು ತಿಳಿಸಿದರು. ಆದರೆ, ಇಷ್ಟ
ಸಂಶೋಧನೆಯನ್ನು ಮಾಡಿದ ಬೆಲ್‌ಗೆ ನೋಬೆಲ್ ಪ್ರಶಸ್ತಿ ಸಿಗಲೇ ಇಲ್ಲ.

ಇಂತಹ ವೈರತ್ವವು ಭಾರತೀಯ ವಿಜ್ಞಾನದಲ್ಲಿಯೂ ಇದೆ. ೧೯೩
ಸಮಯದಲ್ಲಿ ರಾಮನ್ ಕಲ್ಕತ್ತಾ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾ
ಮುಖಂಡರಾಗಿದ್ದರು. ಮೇಘನಾದ ಸಾಹಾ ಆ ಸಮಯದಲ್ಲಿ ಒಬ್ಬ ಕಿರಿ
ಅಧ್ಯಾಪಕ. ಸಾಹಾರವರು ಅಮೆರಿಕಾದ ಖಭೌತಶಾಸ್ತ್ರ ಮಂದಿರದಿಂದ ಹ
ಸಹಾಯಕ್ಕೆ ಪ್ರಯತ್ನಿಸುತ್ತಿದ್ದರು. ಅಮೆರಿಕಾದ ಸಂಸ್ಥೆಗಳು ಅನುಮೋದನೆಗಾಗಿ
ಬರೆದಾಗ, ರಾಮನ್ ಅವರ ಸಹಾಯವನ್ನು ನಿರಾಕರಿಸಿ, ಸಾಹಾರವರ ಸಂಶೋಧ
ವಿಭಾಗವೇ ಎಲ್ಲ ಸಹಕಾರವನ್ನು ನೀಡುವುದೆಂದೇ ಬರೆದರು. ಇದರಿಂದ ಅಮೆರಿ
ಸಂಸ್ಥೆ ಸಹಾಯ ನೀಡಲಿಲ್ಲ. ರಾಮನ್ ಕೂಡ ವಿಶ್ವವಿದ್ಯಾಲಯದ ವಿಭಾಗದಿ
ಯಾವ ಸಹಾಯವನ್ನೂ ಮಾಡಲಿಲ್ಲ.

ಇಂತಹ ವೈಯಕ್ತಿಕ ಭೇದಗಳು ರಾಜಕೀಯ ಕಾರಣಗಳಿಂದಲೂ ಇರಬಹು
ಎಡಚಿಂತಕನಾಗಿದ್ದ ಸಾಹಾ ಮತ್ತು ಭಾಭಾ ನಡುವೆ ಇಂತಹ ಗಲಭೆಯಾಗಿ
ದೇಶದಲ್ಲಿನ ಪ್ರಪ್ರಥಮ ಪರಮಾಣು ಭೌತಿಕಶಾಸ್ತ್ರ ಗುಂಪಿಗೆ ಸಾಹಾ ಮುಖ
ರಾಗಿದ್ದರು. ಪ್ರಭುತ್ವವು ಅಣುಶಕ್ತಿ ಸಂಶೋಧನೆಗೆ ಮುಂಬಯಿಯನ್ನು ಕೇಂದ್ರವನ್ನಾ
ಮಾಡಿ, ಕಲ್ಕತ್ತಾವನ್ನು ಕಡೆಗಣಿಸಿತು. ಇದರಿಂದ ಸಾಹಾ ಅವರು ಅಣು
ಕಾರ್ಯನೀತಿಯ ಮುಖಂಡತ್ವ ಕಳೆದುಕೊಂಡರು. ಆದರೆ, ಮುಂಬಯಿಯಲ್ಲಿ ಅಣು
ಸಂಶೋಧನೆಯು ಇನ್ನೂ ಶೈಶವಾವಸ್ಥೆಯಲ್ಲಿತ್ತು. ಕಲ್ಕತ್ತಾದಲ್ಲಿ ಈ ಸಂಶೋ
ಆಗಲೇ ಚುರುಕಾಗಿತ್ತು. ಆದರೂ ಪ್ರಭುತ್ವ ಕಲ್ಕತ್ತಾಗೆ ಪ್ರಾಮುಖ್ಯತೆ ಕೊಡಲಿ
ಸಾಹಾ ಅವರನ್ನು ಅಣುಶಕ್ತಿ ಸಮಿತಿಯ ಸದಸ್ಯರನ್ನಾಗಿಯೂ ಮಾಡಲಿಲ್ಲ (ಅಥ
ಬಹುಶಃ ಸಾಹಾ ಆ ಪದವಿಯನ್ನು ನಿರಾಕರಿಸಿದರು). ದೇಶದಲ್ಲಿ ಅಣು
ಸಂಶೋಧನೆಗೆ ಮಂಡಿಸಿದ ಭಾಭಾ ಅವರ ನಮೂನೆ ಸಾಹಾಗೆ ಹಿಡಿಸಲಿ
ಭಾಭಾರ ನಮೂನೆಯ ಪ್ರಕಾರ ಅಣುಶಕ್ತಿ ಸಂಶೋಧನೆಯು ಒಂದೇ ಅಧಿಕಾ
ಕೆಳಗೆ ನಡೆಯಬೇಕಿತ್ತು. ಸಾಹಾ ಇದನ್ನು ವಿರೋಧಿಸಿ, ಇಂತಹ ನಮೂನೆ
ಅಣುಶಕ್ತಿ ಸಮಿತಿಗೆ ನಿರಂಕುಶ, ಸರ್ವಾಧಿಕಾರವನ್ನು ಕೊಡುತ್ತದೆಯೆಂದು
ಅಣುಶಕ್ತಿ ಸಂಶೋಧನೆಗೆ ಒಂದು ವಿಶಾಲವಾದ ಆಧಾರ ಕೊಡಬೇಕೆಂದು
ಅದನ್ನು ವಿಶ್ವವಿದ್ಯಾಲಯಗಳಲ್ಲಿ ಪೋಷಿಸಬೇಕೆಂದೂ ನಂಬಿದರು. (ಸಾ

ವಿದ್ಯಾಲಯಗಳ ಪ್ರತಿನಿಧಿಯಾಗಿದ್ದರು). ಸಾಹಾ ೀಯ ವಿಜ್ಞಾನ ವಿನ್ಯಾಸವನ್ನು ತಯಾರಿಸುವಾಗ ವಾಗಿಯೂ ಮುಂಚೂಣಿಯಲ್ಲಿದ್ದರು. ಸಾಹಾ ನ ಪ್ರಧಾನಿ ನೆಹ್ರೂವಿನ ಅನೇಕ ಅಭಿಪ್ರಾಯಗಳನ್ನು ಪಟ್ಟರೂ, ಅವರು ಖಾಸಗಿ ಬಂಡವಾಳಕ್ಕೆ ರಾಜಿ ದ್ದನ್ನು ವಿರೋಧಿಸಿದ್ದರು. ಒಂದುಸಲ, ಸಂಸತ್ತಿನಲ್ಲಿ ವಾದ-ವಿವಾದವು ತೀಕ್ಷ್ಣವಾಯಿತು. ನೆಹ್ರೂ ಸಾಹಾ ರನ್ನು 'ಆಕಸ್ಮಿಕ' ವಿಜ್ಞಾನಿ ಎಂದು ಹೇಳಿದರು. ಅದೇ ತ್ತಿನಲ್ಲಿ ಸಾಹಾ ತನ್ನನ್ನು ಯು.ಎಸ್.ಎಸ್.ಆರ್.ಗೆ ರ ವಿಶೇಷ ಆಹ್ವಾನವನ್ನು ಮನ್ನಿಸಿ ನೆಹ್ರೂ ಹಿಸಿದ್ದನ್ನೂ, ಭಾರತವನ್ನು ಪ್ರತಿನಿಧಿಸುವಂತೆ ತನ್ನನ್ನು ಕೊಂಡದ್ದನ್ನೂ ನೆನಪಿಸಿದರು. ಪ್ರಭುತ್ವದ 'ಒಳ್ಳೆಯ ಪ್ರಾಯ'ವನ್ನು ಕಳೆದುಕೊಂಡ ಇನ್ನೊಬ್ಬ ವಿಜ್ಞಾನಿ ಮೋದರ್ ಧರ್ಮಾನಂದ್ ಕೊಸಾಂಬಿ. ಅಣುಶಕ್ತಿಯ ಲೆ ಸಂಶೋಧಿಸದೆ ಸೌರಶಕ್ತಿಯ ಬಗ್ಗೆ ಸಂಶೋಧನೆ ಮಾಡಿದ್ದಕ್ಕಾಗಿ ಭಾಭಾನ ಪ್ತಿಗೆ ಅವರು ಕಾರಣರಾದರು. ೧೯೬೨ನೇ ಇಸವಿ ಆದಮೇಲೆ ಕೊಸಾಂಬಿ ಅವರ ಾವಧಿಯನ್ನು ಟಿ.ಐ.ಎಫ್.ಆರ್.ನಲ್ಲಿ ಮುಂದುವರಿಸಲಿಲ್ಲ. ಅಲ್ಲದೆ, ಶೈಕ್ಷಣಿಕ ಡಲಿಯಲ್ಲಿ ಅವರನ್ನು ಒಂದು 'ಅರೆ ಸಾಮರ್ಥ್ಯದ ಗಣಿತಶಾಸ್ತ್ರಜ್ಞ' ಎಂದು ಯುತ್ತಿದ್ದರು. ಕೊಸಾಂಬಿ ಅವರು ಚರಿತ್ರೆ, ನಾಣ್ಯಶಾಸ್ತ್ರ ಮತ್ತು ಕಮ್ಯುನಿಸ್ಟ್ ದ್ಧಾಂತದ ಬಗ್ಗೆ ಕೆಲಸಮಾಡುತ್ತಾ, ತಮ್ಮ ಸಮಯವನ್ನು ವ್ಯರ್ಥಮಾಡುತ್ತಿದ್ದಾರೆಂದು ಸುತ್ತಿದ್ದರು. ಆಶ್ಚರ್ಯಕರ ವಿಷಯವೆಂದರೆ, ಇಂತಹ ಬಿರುದುಗಳು ಅಧಿಕೃತ ದಿಯಲ್ಲಿ ಹೋಗುವ ಯಾವ ವಿಜ್ಞಾನಿಗೂ ಬರುವುದಿಲ್ಲ. ಬೇರೆ ಹಾದಿಯನ್ನು ೇರಿಸುವ ಶಕ್ತಿ ಇರುವ ಕೊಸಾಂಬಿ ಅಂತಹವರಿಗೇ ಇಂತಹ ಬಿರುದುಗಳು ತ್ತವೆ. ಈ ಕೆಳಗಿನ ವಾಕ್ಯ ಇದನ್ನು ಸ್ಪಷ್ಟಪಡಿಸುತ್ತದೆ. ''ಅಣುಶಕ್ತಿಯನ್ನು ಯೋಗಿಸಿದರೂ ಇಲ್ಲದಿದ್ದರೂ, ಭಾರತದಂಥ ದೇಶಕ್ಕೆ, ಇಂಧನವು ಷ್ಟಿಯಾಗಿ ಸಿಗುವ, ಸೌರಶಕ್ತಿ ಸಂಶೋಧನೆಯು ಬಹಳ ಸಹಾಯಕಾರಿಯಾದದ್ದು. ರೆ, ಸಂಶೋಧನೆಯೆಂದರೆ ಬರೀ ಕೆಲವು ಲೇಖನಗಳನ್ನು ಪ್ರಕಟಿಸಿ, ಇಷ್ಟ ದವರನ್ನು ಅಂತರರಾಷ್ಟ್ರೀಯ ಸಮಾವೇಶಗಳಿಗೆ ಕಳಿಸಿ, ರಾಜಕಾರಣಿಗಳು ಕೊಟ್ಟ ವನ್ನು ಸ್ವಂತವಾಗಿಸಿಕೊಳ್ಳುವುದಲ್ಲ.''

ವಿಜ್ಞಾನಿಗಳ ನಿಗೂಢ ಪ್ರಪಂಚದಲ್ಲಿ ವ್ಯಕ್ತಿಗಳ ಅಥವಾ ಸಂಸ್ಥೆಗಳ ಮಧ್ಯೆ ಭೆಗಳು ಆಗುತ್ತಲೇ ಇರುತ್ತವೆ. ಇವು ವೈಯಕ್ತಿಕ ಅಥವಾ ರಾಜಕೀಯ ಕಾರಣಕ್ಕಿರ ದು. ಮೇಘನಾದ ಸಾಹಾ ಅವರ ಬದುಕನ್ನು ಮತ್ತೆ ಉದಾಹರಣೆಗೆ ತೆಗೆದು ಳ್ಳೋಣ. ಸಾಹಾ ಅವರ ಉಷ್ಣಕ್ಕೆ ಸಂಬಂಧಪಟ್ಟ ಅಯಾನೀಕರಣವು ಖಭೌತ ಕ್ಷೆ ಅತೀ ಮುಖ್ಯವಾದದ್ದು, ಅದಕ್ಕೆ ಅಂತರರಾಷ್ಟ್ರೀಯ ಶ್ಲಾಘನೆಯು ತಕ್ಷಣ ದಿತು. ಸಾಹಾರವರು ಖಗೋಳ ಶಾಸ್ತ್ರವನ್ನು ಖಭೌತಶಾಸ್ತ್ರವನ್ನಾಗಿ ಮಾಡಿದರೆಂದು ಳುತ್ತಾರೆ. ೧೯೨೦ನೇ ಇಸವಿಯಲ್ಲಿ ಸಾಹಾ ಅವರ ರನ್ನು ಲಂಡನ್ನಿನ 'ಫೆಲೋ ಆಫ್ ರಾಯಲ್ ಸೈಟಿ' ಸ್ಥಾನಕ್ಕೆ ಸೂಚಿಸಲಾಯಿತು. ಆದರೆ ಯಲ್ ಸೊಸೈಟಿ ಮೊದಲು ಇವರ ರಾಜಕೀಯ ತ್ರಿಯನ್ನು ತಿಳಿದುಕೊಂಡು, ಇವರು ತಮ್ಮನ್ನು ದರೆಗೀಡುಮಾಡುವುದಿಲ್ಲವೆಂದು ದೃಢಪಡಿಸಿ ಡು, ಆಮೇಲೆ ಅವರಿಗೆ ಬಿರುದನ್ನು ನೀಡಿತು. ಯಕ್ತಿಕ ಅಹಂನಿಂದ ಬರುವ ಹೊಡೆದಾಟಗಳು ಅಧಿಕಾರದಲ್ಲಿರುವವರಿಂದ ಮಟ್ಟಹಾಕ ವುದು ಹೊಸತೇನಲ್ಲ. ೧೯೬೦ರಲ್ಲಿ ದೆಹಲಿಯ .ಪಿ.ಎಲ್.ನಲ್ಲಿ ಇದು ಬಹಳ ದೊಡ್ಡ ಗಲಭೆ ನ್ನು ಸೃಷ್ಟಿಸಿತು. ಅಲ್ಲಿ ವಿಚಾರಣೆಯನ್ನು ಮಾಡುವ ವನ್ನು ಬ್ರಿಟನ್ನಿನ ಭೌತಶಾಸ್ತ್ರಜ್ಞ ಬ್ಲಾಕೆಟ್‌ಗೆ ತಲಾಯಿತು. ಬ್ಲಾಕೆಟ್, ನೋಬೆಲ್ ಪ್ರಶಸ್ತಿ ೇತ ಮತ್ತು ಭಾರತದಲ್ಲಿನ ಪರಿಸ್ಥಿತಿಯನ್ನು



ಅರಿತವರು. ನಮ್ಮಲ್ಲಿ ಪಾರದರ್ಶಕತೆ ಇಲ್ಲದಿರುವುದರಿಂದ ವಿಚಾರಣಾ ಸಮಿತಿಯ ಕೆಲಸವು ಸುಲಭವೇನಲ್ಲ. ಇನ್ನೊಬ್ಬ ವಿಜ್ಞಾನಿ ಹಾಲ್ಡೇನ್ ಭಾರತದಲ್ಲಿ ಏಳು ವರ್ಷಗಳ ಕಾಲ ಕೆಲಸಮಾಡಿದ್ದರು. ಅವರು ಬ್ಲಾಕೆಟ್‌ಗೆ ಈ ರೀತಿ ಹೇಳಿದರು : ''ನಿನ್ನ ಕೆಲಸದ ಬಗ್ಗೆ ನನಗೇನೂ ಅಸೂಯೆ ಎನಿಸುವುದಿಲ್ಲ. ನಿನ್ನನ್ನು ನಿಜಾಂಶ ಕಂಡುಹಿಡಿಯಲು ಬಿಡುವುದಿಲ್ಲ. ಮೇಲಿನ ಅಧಿಕಾರಿಗಳಿಂದ ನಿಜಾಂಶ ಬಯಲಾಗದಂತೆ ಸಾಕಷ್ಟು ಒತ್ತಡ ಹೇರಲಾಗುತ್ತದೆ. ನೀನು ಅನಧಿಕೃತ ಮೂಲಗಳಿಂದ ನಿಜಾಂಶವನ್ನು ಕಂಡುಹಿಡಿದರೂ ಸಹ ಜನರಿಂದ ದಾರುಣವಾದ ಸುಳ್ಳುಗಳನ್ನು ಕೇಳುತ್ತೀಯ. ಸ್ವಂತ ಲಾಭವಿಲ್ಲದೆಯೇ ಯಾರಾದರೂ ಕೆಲಸಮಾಡಿದರೆ ಇಲ್ಲಿನ ಜನ ಅದನ್ನು ನಂಬುವುದಿಲ್ಲ.''

> **ಸುಳ್ಳು**
>
> **ಹೇಳಬೇಕಾದ್ದನ್ನು**
> **ಹೇಳದೆ**
> **ಸುಮ್ಮನಿದ್ದು ಬಿಟ್ಟರೆ,**
> **ಸುಳ್ಳ**
> **ಹೇಳಿದಂತೆಯೆ ಸರಿ !**
>
> ಸಿಪಿಕೆ
> ಮೈಸೂರು

ವಿಜ್ಞಾನಿಗಳ ಸಮುದಾಯದಲ್ಲಿ ಒಂದು ರೀತಿಯ ಅಸಂಬದ್ಧ ವಾತಾವರಣವಿದೆ. 'ವಿಜ್ಞಾನ' ಪ್ರಪಂಚದಲ್ಲಿ, ಸಂಶೋಧಕನು ಬೇರೆ ಬೇರೆ ಸಿದ್ಧಾಂತಗಳನ್ನು ಹುಡುಕಬೇಕು ಮತ್ತು ಭಿನ್ನಾಭಿಪ್ರಾಯಗಳಿದ್ದರೆ, ಅವುಗಳನ್ನು ಪ್ರೋತ್ಸಾಹಿಸಬೇಕು. ಆದರೆ, ಅದೇ ವಿಜ್ಞಾನಿಯು ಕಾರ್ಯನೀತಿ ಅಥವಾ ವಿನ್ಯಾಸಗಳನ್ನು ಪ್ರಶ್ನಿಸುವಂತಿಲ್ಲ. ಈ ವಿಜ್ಞಾನದ ವಿನ್ಯಾಸಗಳನ್ನು ರಾಜಕೀಯ ಮಂದಿ ಅಥವಾ ಬೇರೆ ವಿಜ್ಞಾನಿಗಳು ಮಂಡಿಸಿರುತ್ತಾರೆ. ಅದನ್ನು ಯಾವ ಪ್ರತಿಭಟನೆಯೂ ಇಲ್ಲದೆ ಇವನು ನಿರ್ವಹಿಸಬೇಕು. ಇಲ್ಲಿ ಒಂದು ಪ್ರಶ್ನೆ : ಒಬ್ಬ ಅಧಿಕಾರಿ, ಜನಗಳಿಗೆ ಹಾನಿಮಾಡುವ ಆದೇಶವನ್ನು ಹೊರಡಿಸಬಾರದು ಎನ್ನುವುದಾದರೆ, ಅದೇ ನ್ಯಾಯ ಒಬ್ಬ ವಿಜ್ಞಾನಿಗೆ ಅನ್ವಯಿಸುವುದಿಲ್ಲವೇಕೆ ? ಒಬ್ಬ ನ್ಯಾಯಶಾಸ್ತ್ರ ಪಂಡಿತನು ನ್ಯಾಯವನ್ನು ಎತ್ತಿಹಿಡಿಯಬೇಕಾದರೆ, ವಿಜ್ಞಾನಿಯೂ ವಿಜ್ಞಾನವನ್ನು ಎತ್ತಿಹಿಡಿಯಬೇಕಲ್ಲವೇ ?

ಈ ಪರಿಣಾಮಗಳನ್ನು ಉದಾಹರಣೆಗಳಿಂದ ಅರ್ಥಮಾಡಿಕೊಳ್ಳೋಣ. ೧೯೯೨ರಲ್ಲಿ ನಾನು ಒಬ್ಬ ಇಂಡಿಯಾದಲ್ಲಿ ಹುಟ್ಟಿದ ಅಮೆರಿಕನ್ ವಿಜ್ಞಾನಿಯನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿದೆ. ಈ ವಿಜ್ಞಾನಿ ಅಮೆರಿಕದಲ್ಲಿ ಕಾನೂನು ಸಮರವನ್ನು ಗೆದ್ದು 'ಇತಿಹಾಸ'ವನ್ನೇ ಸೃಷ್ಟಿಸಿದ್ದನು. ಇದರಿಂದ ಉತ್ಪತ್ತಿ ಮೂಲಗಳನ್ನು ಮಾರ್ಪಡಿಸಲಾದ ಜೀವಿಗಳ ಮೇಲೆ ಅಧಿಕಾರಪತ್ರ (ಪೇಟೆಂಟ್) ತೆಗೆದುಕೊಳ್ಳಬಹುದಾಗಿತ್ತು (ಜೆನೆಟಿಕಲೀ ಮೋಡಿಫೈಡ್). ಅವನು ತನ್ನ ಸಂಶೋಧನೆಯನ್ನು ನಿಲ್ಲಿಸಿ ವಿವಿಧ ದೇಶಗಳಿಗೆ ಭೇಟಿ ನೀಡುತ್ತಿದ್ದ. ಅಲ್ಲಿನ ಪ್ರಭುತ್ವ ಮತ್ತು ಜೀವಶಾಸ್ತ್ರ ವಿಜ್ಞಾನಿಗಳನ್ನು ಭೇಟಿಮಾಡಿ ಪೇಟೆಂಟ್ ಕಾನೂನನ್ನು ಅಮೆರಿಕದ ವಿನ್ಯಾಸದಂತೆ ಬದಲಿಸಿಕೊಳ್ಳಲು ಒಪ್ಪಿಸುತ್ತಿದ್ದ. ಆತನ ನಿಯತ್ತು ಮತ್ತು ನಿಷ್ಠೆ ಇದರಲ್ಲೇ ಅರ್ಥವಾಯಿತು. ಅವನು ಜೀವಶಾಸ್ತ್ರ ವಿಜ್ಞಾನಿಯಾದ್ದರಿಂದ ಸದ್ದಾಮ್ ಹುಸೇನನ ಬಳಿ ಜೈವಿಕ ಆಯುಧಗಳು (ಬಯೊಲಾಜಿಕಲ್ ವೆಪನ್ಸ್) ಇದೆಯಾ ಎಂದು ಕೇಳಿದೆ. ಖಂಡಿತವಾಗಿಯೂ ಇದೆ ಎಂದ. ''ನಿನಗೆ ಹೇಗೆ ಗೊತ್ತು'' ಎಂದು ಕೇಳಿದರೆ ''ಖಂಡಿತವಾಗಿಯೂ ಇದೆ'' ಎನ್ನುತ್ತಿದ್ದ. ಬೇರೆ ಉತ್ತರವೇ ಇರಲಿಲ್ಲ. ಬುಶ್ ಮತ್ತು ಬ್ಲೈರ್ ಕೊಟ್ಟ ಹೇಳಿಕೆಯನ್ನು ಬಿಟ್ಟರೆ, ಬೇರೆ ಎಲ್ಲಾ ಆಲೋಚನಾಶಕ್ತಿಯನ್ನೂ ಅವನು ಕಳೆದುಕೊಂಡಿದ್ದ. ಇಲ್ಲಿ ಸಮಸ್ಯೆಯೆಂದರೆ, ಒಬ್ಬ ವಿಜ್ಞಾನಿ ವಿಜ್ಞಾನವನ್ನು ಕಲಿಯ ಬೇಕೇ ವಿನಾ ರಾಜಕೀಯದಲ್ಲಿ ಮತ್ತು ನ್ಯಾಯ- ಅನ್ಯಾಯ ವಿಶ್ಲೇಷಣೆಯಲ್ಲಿ ಭಾಗವಹಿಸಬಾರದು. ಒಬ್ಬ ಸಂಶೋಧಕನಿಗೆ ಹೇಳಿಕೊಡುವುದೇನೆಂದರೆ ''ತನ್ನ ಕೆಲಸದಲ್ಲಿ ಮುಳುಗಿ ಹೋಗುವುದು, ಅಧಿಕಾರಿಗಳು ತೋರಿಸಿದ ಮಾರ್ಗದಲ್ಲೇ ಸಾಗುವುದು ಮತ್ತು ಇದರಲ್ಲೇ ದೇಶಭಕ್ತಿಯನ್ನು ಕಾಣುವುದು.''

ಭಾರತದಲ್ಲಿನ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ

ಳ ವ್ಯತ್ಯಾಸವೇನೂ ಇಲ್ಲ. ಇಲ್ಲಿಯೂ ಭಿನ್ನಾಭಿಪ್ರಾಯಗಳು ಇವೆ. ಅವನ್ನು ಕರಿಯ ನಿಯಮಗಳ ಹೆಸರನ್ನು ಹೇಳಿ ಬಾಯಿಮುಚ್ಚಿಸುತ್ತಿದ್ದಾರೆ. ಭಿಪ್ರಾಯಗಳು ಇದ್ದರೂ ಅವನ್ನು ಪ್ರಕಟ ಮಾಡುವುದಕ್ಕೆ ಮಾರ್ಗವಿಲ್ಲ. ಭಿಪ್ರಾಯ ಇರುವವರನ್ನು ದೊಡ್ಡದಾದ ವಿನ್ಯಾಸವನ್ನು ಮತ್ತು ಸಂಶೋಧನೆಯ ಲ ಚಿತ್ರವನ್ನು ಗ್ರಹಿಸಲು ಬಾರದವರೆಂದು ಕಡೆಗಣಿಸಲಾಗುತ್ತಿದೆ.

ನಮ್ಮ ದೇಶದಲ್ಲಿನ ವಿಜ್ಞಾನದಲ್ಲಿ ರಾಜಕೀಯವಿಲ್ಲವೆಂದು ಹೇಳುತ್ತಿರುವವರಿಗೆ ಲ್ನೋಟ ಮಾತ್ರ ಕಾಣುತ್ತಿದೆ. ಸಂಸತ್ತಿನಲ್ಲಿ ಜುಲೈ ೨೦೦೮ರಲ್ಲಿ ನಡೆದ ನಂಬಿಕೆಯ ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮುಖ್ಯ ಪಾತ್ರ ವಹಿಸಿದ್ದು ನಿಜವಲ್ಲವೇ? ವೋಟು ಭಾರತ ಮತ್ತು ಅಮೆರಿಕಾ ಮಧ್ಯೆ ಆಗಲಿರುವ ಅಣುಶಕ್ತಿ ಒಪ್ಪಂದದ ಅಲ್ಲವೇ? ಭಾರತ ಆ ದೇಶದಿಂದ ಅನೇಕ ಯಂತ್ರಗಳನ್ನು ಆಮದು ಡಿಕೊಳ್ಳಬೇಕೆಂದಿರಲಿಲ್ಲವೇ? ಈ ಎಲ್ಲಾ ವಿಷಯಗಳನ್ನು ಕುರಿತು ಈ ಖನದಲ್ಲಿ ಆಗಲೇ ಹೇಳಿಯಾಗಿದೆ. ವೋಟುಗಳನ್ನು ಹಣಕ್ಕೆ ಕೊಂಡುಕೊಂಡ ರಣ ಆಗಲಿಲ್ಲವೇ? 'ಆರೋಗ್ಯ ಬಹಳ ಕ್ಷೀಣಿಸಿದ' ಅಮರ್ ಸಿಂಗ್ ಅವರು ನು ಜೊತೆ ಯುದ್ಧ ನಡೆಸಿ 'ಜೈಲಾ ಅಥವಾ ಬೈಲಾ' ಎಂದು ತಿರುಗುತ್ತಿದ್ದಾರೆ.

ಈ ವೋಟು ಆಗುವ ಕೆಲವೇ ದಿನಗಳ ಮುಂಚೆ,ಒಂದು ರಾಜಕೀಯ ಪಕ್ಷವು, ನಿಯೂ ಆದ ನಮ್ಮ ಮಾಜಿ ರಾಷ್ಟ್ರಪತಿ ಅವರ ಜೊತೆ ಮಾತನಾಡಿದ ತಕ್ಷಣ ತನ್ನ ನ ನಿಲುವನ್ನು ಬದಲಾಯಿಸಿ, ಅಣುಶಕ್ತಿ ಒಪ್ಪಂದಕ್ಕೆ ಸಮ್ಮತಿ ನೀಡಲು ಯಿಸಿತು. ಈ ವಿಷಯದಲ್ಲಿ ಮಾಜಿ ರಾಷ್ಟ್ರಪತಿಗಳ ಅಭಿಪ್ರಾಯ ಎಲ್ಲರಿಗೂ ಬಹಳ ಗಳಿಂದಲೇ ಗೊತ್ತಿತ್ತು. ಸಮಾಜವಾದಿ ಪಕ್ಷವು ಇದ್ದಕ್ಕಿದ್ದಂತೆ ತನ್ನ ನಿಲುವನ್ನು ಲಾಯಿಸಲು ಮಾಜಿ ರಾಷ್ಟ್ರಪತಿ ಅವರು ಯಾವ 'ವಿಶೇಷ' ಚರ್ಚೆಯನ್ನು ಡಿಸಿದರು ಎಂಬುದು ಯಾರಿಗೂ ಗೊತ್ತಿಲ್ಲ. ಆ ರಾಜಕೀಯ ಪಕ್ಷವಾಗಲಿ, ಧ್ಯಮಗಳಾಗಲಿ ಅಥವಾ ಮಾಜಿ ರಾಷ್ಟ್ರಪತಿಯವರೇ ಆಗಲಿ ಜನರಿಗೆ ಈ ಯದ ಬಗ್ಗೆ ಏನನ್ನೂ ಹೇಳಲಿಲ್ಲ. ಇಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ, ಸಾಮಾನ್ಯ ಗಳಿಗೆ ಯಾವುದೂ ಗೊತ್ತಾಗಬೇಕಿಲ್ಲವೇ? ಈ ವಿಷಯದಲ್ಲಿ ವೈಜ್ಞಾನಿಕ ಗಳು ಹಾಗೂ ಪ್ರಭುತ್ವವು ಕೊಟ್ಟಿದ್ದು ಎರಡೇ ಕಾರಣಗಳು. ಒಂದು, ಅಣುಶಕ್ತಿ ಬೆಳವಣಿಗೆಗೆ ಮುಖ್ಯ. ಎರಡು, ಈ ಅಣುಶಕ್ತಿ ಉತ್ಪಾದನೆಗೆ ಬೇಕಾಗುವ ನವನ್ನು ಮುಂದಿನ ದಿನಗಳಲ್ಲಿ ಉಳಿಸಲು ನಾವು ದಾರಿ ಮಾಡಿಕೊಟ್ಟಿದ್ದೇವೆ. ರಡನ್ನೂ ಲಾಭಗಳೆಂದು ಪರಿಗಣಿಸಿದರೂ (ಈ ವಿಷಯದಲ್ಲೂ ಪೂರ್ತಿ ತವಿಲ್ಲ), ಇದರಿಂದ ರಾಜಕೀಯವಾಗಿ ನಮ್ಮ ದೇಶ ಕೊಟ್ಟ ಬೆಲೆ ಎಷ್ಟು? ನಿಯಾಗಲಿ, ಸಾಮಾನ್ಯ ಪ್ರಜೆಯಾಗಲಿ, ಎಲ್ಲರಿಗೂ ಇದೇ ಪ್ರಶ್ನೆ ಅನ್ವಯಿಸುತ್ತೆ. ಲ್ಲದಕ್ಕೂ ಆಗುವ ಖರ್ಚನ್ನು ಯಾರು ಭರಿಸುತ್ತಾರೆ? ಇಂತಹ ವಿಷಯಗಳಲ್ಲಿ ನಿಯು ರಾಜಕೀಯ ಮತ್ತು ಅದರ ಪರಿಣಾಮವೆಲ್ಲವನ್ನೂ ಮರೆತು, ಬರೀ ೋಧನೆಯಲ್ಲಿ ಮುಳುಗುವುದು ಸರಿಯೇ? ಕೆಲ ಪ್ರಖ್ಯಾತ ವಿಜ್ಞಾನಿಗಳು ಈ ಯದಲ್ಲಿ, ರಾಜಕೀಯ ನಿರ್ಧಾರಗಳನ್ನು ವಿಶ್ಲೇಷಿಸಿ ಚರ್ಚೆಯಲ್ಲಿ ಪಾಲ್ಗೊಳ್ಳಲಿಲ್ಲವೇ? ಈ ವಿಷಯಗಳನ್ನು ವಿಜ್ಞಾನಿಗಳು ಮಾಡದಿದ್ದರೂ, ಸಾಮಾನ್ಯಪ್ರಜೆಗಳು ಸಬೇಕು. 'ಪೊಕ್ರಾನ್ ೨' ಸಮಯದಲ್ಲಿ ಆದ ಆತಂಕಕಾರಿ ಬೆಳವಣಿಗೆಗಳು ನನಗೆ ಜ್ಞಾಪಕಕ್ಕೆ ಬರುತ್ತವೆ. ಕೆಲವು ಹಿಂದುತ್ವ ಗುಂಪುಗಳ ಉತ್ಸಾಹ ಎಷ್ಟರಮಟ್ಟಿಗೆ ಏರಿತೆಂದರೆ, ಅವರು ಸ್ಫೋಟ ನಡೆದ ಸ್ಥಳದಲ್ಲಿನ ಮಣ್ಣನ್ನು ಎಲ್ಲರಿಗೂ ಹಂಚಲು ಸಿದ್ಧವಾಗಿದ್ದರು. ಆದರೆ ಯಾವ ವೈಜ್ಞಾನಿಕ ಸಂಸ್ಥೆಯೂ ಇಂಥ ಸಾಹಸಕಾರ್ಯ ಮಾಡಬಾರದೆಂಬ ಹೇಳಿಕೆ ಕೊಡಲಿಲ್ಲ. ಅದಕ್ಕೆ ಬದಲು ವಿಜ್ಞಾನಿಗಳೇ ಅಣುಸ್ಫೋಟ ಸಮಯದಲ್ಲಿನ ಭದ್ರತಾ ವ್ಯವಸ್ಥೆ, ಅಂತರರಾಷ್ಟ್ರೀಯ ಭದ್ರತಾ ಪರಿಷತ್ತಿನಲ್ಲಿ ಭಾರತಕ್ಕೆ ಸ್ಥಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು ಮುಂತಾದ ವಿಷಯಗಳ ಬಗ್ಗೆ ಹೇಳಿಕೆಗಳನ್ನು ಕೊಟ್ಟರು. ವಿಜ್ಞಾನಿಗಳಿಗೆ, ಬೇರೆ ಎಲ್ಲ ಪ್ರಜೆಗಳಿಗಿದ್ದಂತೆಯೇ, ಯಾವ ವಿಷಯದ ಬಗ್ಗೆಯಾದರೂ ಹೇಳಿಕೆಗಳನ್ನು ಕೊಡುವ ಹಕ್ಕಿದೆ. ಈ ಹಕ್ಕನ್ನು ನಿರಾಕರಿಸಲು ಯಾರಿಗೂ ಸಾಧ್ಯವಿಲ್ಲ. (ಈ ಹೇಳಿಕೆಗಳನ್ನು ಕೊಟ್ಟು, ಅಂದರೆ 'ಪೋಕ್ರಾನ್ ೨' ಸ್ಫೋಟಗೊಂಡು ೧೦ ವರ್ಷದ ಮೇಲೆಯಾದರೂ, ಈ ವಿಷಯದಲ್ಲಿ ಎಂತಹ ಪ್ರಗತಿಯೂ ಆಗಿಲ್ಲವೆಂಬುದು ಬೇರೆ ವಿಷಯ). ಭಿನ್ನಾಭಿಪ್ರಾಯವಿದ್ದವರು ಸಾರ್ವಜನಿಕರ ಮನ ಗೆಲ್ಲಲು ಪ್ರಯತ್ನಿಸಿದರೂ, ಮಾಧ್ಯಮಗಳಿಂದ ಬೆಂಬಲ ಸಿಗಲಿಲ್ಲ. ಬಹಳ ದಿಗ್ಭ್ರಮೆಗೊಳಿಸುವ ಘಟನೆ ಆಗಿದ್ದು ನಾನು ದೂರದರ್ಶನದಲ್ಲಿ ನೇರಪ್ರಸಾರವಾಗುತ್ತಿದ್ದ ಲೋಕಸಭೆಯ ಚರ್ಚೆಗಳನ್ನು



ನೋಡುತ್ತಿದ್ದಾಗ. ಭಾ.ಜ.ಪ. ಸದಸ್ಯನೊಬ್ಬನು ಹೇಳಿದ್ದು ಹೀಗೆ: ''ವಿಜ್ಞಾನಿಗಳು ಈ ಅಣುಸ್ಫೋಟವನ್ನು ಕೇಳಿದರು. ಅವರು ಇಡೀ ಜೀವನದಲ್ಲಿನ ಸಾಧನೆಯನ್ನು ದೇಶಕ್ಕೆ ತೋರಿಸಬೇಕೆನ್ನುವುದು ಅವರ ಇಚ್ಛೆಯಾಗಿತ್ತು.'' ನಾನು ಇದನ್ನು ನಂಬಲಿಲ್ಲ. ನನ್ನ ಇಚ್ಛೆ ಯಾರಾದರೂ ಅಣುವಿಜ್ಞಾನಿ ಈ ರೀತಿ ಹೇಳುವರೆಂದು: ''ನಮ್ಮ ವೈಜ್ಞಾನಿಕ ಸಾಧನೆಗಳನ್ನು ತೋರಿಸುವುದಕ್ಕೆ ಈ ರೀತಿಯ ಸ್ಫೋಟಗಳು ಬೇಕಿಲ್ಲ. ನಾವು ನಮ್ಮ ಸಂಶೋಧನೆಗಳನ್ನು ಪ್ರಮುಖರಿಂದ ವಿಮರ್ಶಿಸಲ್ಪಡುವ ಗ್ರಂಥಗಳಲ್ಲಿ ಪ್ರಕಟಿಸುತ್ತೇವೆ. ಇಡೀ ಪ್ರಪಂಚ ಅದನ್ನು ಗುರುತಿಸುತ್ತದೆ'' ಎಂದು. ಆದರೆ ದುರದೃಷ್ಟದಿಂದ ಯಾವ ವಿಜ್ಞಾನಿಯೂ ಅಂತಹ ಹೇಳಿಕೆಯನ್ನು ಕೊಡಲಿಲ್ಲ. ಅಂತರರಾಷ್ಟ್ರೀಯ ವಿಜ್ಞಾನಿ ಸಮುದಾಯವನ್ನು ಒಂದು ಪ್ರಶ್ನೆ ಕೇಳಬೇಕು: ಒಂದು ಅಣುಸ್ಫೋಟವು ಒಬ್ಬ ವಿಜ್ಞಾನಿಯ ಇಡೀ ಜೀವನದ ಸಾಧನೆಯೇ?

ಇಲ್ಲಿ ಗಮನಿಸಬೇಕಾದ ವಿಷಯ ಒಂದಿದೆ. ಭಾರತ ಅಮೇರಿಕಾ ನಡುವಿನ ಅಣುಶಕ್ತಿ ಒಪ್ಪಂದವು, ಬೇರೆ ಒಂದು ದೊಡ್ಡ ಪ್ರಣಾಳಿಕೆಯ ಒಂದು ಭಾಗವಷ್ಟೇ. ಅಣುಶಕ್ತಿ ಉತ್ಪಾದನೆಗೆ ಇಂಧನವನ್ನು ಗಳಿಸುವಾಗ, ಪ್ರಣಾಳಿಕೆಗಾರರು ಈ ವಿಷಯವನ್ನು ಗಣನೆಗೆ ತೆಗೆದುಕೊಂಡರೇ? ಪ್ರಧಾನಮಂತ್ರಿಯ ಪರಿವಾರದಲ್ಲಿ ಇರುವಾಗ, ಅವರಿಗೆ ನಿಜವಾಗಲೂ ಹೀಗೆ ಮಾಡುವ ಸ್ವಾತಂತ್ರ್ಯವಿತ್ತೇ? ಐ.ಎ.ಇ.ಎ.ನಲ್ಲಿ ಇರಾನ್‌ನ ವಿರುದ್ಧ ವೋಟು ಮಾಡುವಾಗ ಅವರಿಗೆ ಇಂಧನ ಶಕ್ತಿಯ ಪೂರ್ಣ ಸ್ವರೂಪವು ಗೊತ್ತಿತ್ತೇ? ಅವರ ಈ ಕೃತ್ಯವು ಭಾರತ ಅಮೆರಿಕಾ ನಡುವೆ ಒಂದು ಬೇಸಾಯ ವಿಷಯಕ ಸಮಿತಿಯನ್ನು ತಯಾರು ಮಾಡುತ್ತದೆಂದೂ, ಸಾಮಾನ್ಯ ಜನರ ಮೇಲೆ ಅದರ ಪರಿಣಾಮ ಎಂಥದೆಂದೂ ಅವರಿಗೆ ಗೊತ್ತಿತ್ತೇ? ಕಳೆದ ೧೨ ವರ್ಷಗಳಲ್ಲಿ ೨,೫೦,೦೦೦ ರೈತರು ಆತ್ಮಹತ್ಯೆ ಮಾಡಿಕೊಂಡ ನಮ್ಮ ದೇಶದಲ್ಲಿ (ಇದನ್ನು ಪ್ರಭುತ್ವ ಮತ್ತು ಮಾಧ್ಯಮ ಇಬ್ಬರೂ ಒಪ್ಪಿಕೊಂಡಿದ್ದಾರೆ) ಇದನ್ನು ಮರೆಯಲು ಸಾಧ್ಯವೇ? ಮಿಲಿಟರಿ ಭದ್ರತೆ ಕುರಿತು ಅಷ್ಟೆಲ್ಲಾ ಚರ್ಚೆ ಮಾಡಿದ ನಮ್ಮ

ವಿಜ್ಞಾನಿಗಳು, ಬಡಜನರ ಆಹಾರ ಭದ್ರತೆಯನ್ನು ಚರ್ಚಿಸದೆ ಹಿಂಜರಿಯಬೇ[illegible] ಇಲ್ಲದಿದ್ದರೆ ಭಾರತ-ಅಮೆರಿಕಾ ಮೈತ್ರಿಯಿಂದ ಆಗುವ 'ಹಸಿರು ಕ್ರಾಂತಿ[illegible] ವ್ಯಾಮೋಹದಲ್ಲಿ, ಜಿ.ಎಮ್. ತಳಿಗಳನ್ನು ತರಿಸಲು ಆಗ್ರಹಿಸಬೇಕೇ ? ದುರದೃಷ್ಟ[illegible] ಬೆಂಗಳೂರಿನಲ್ಲಿ ೬-೨-೨೦೧೦ರಂದು ನಡೆದ ಬಿ.ಟಿ. ಬದನೇಕಾಯಿ ಸಭೆ[illegible] ಇದನ್ನು ನಾನು ನೋಡಿದೆ.

ಕಡೆಯದಾಗಿ ಒಂದು ಜನಪ್ರಿಯ ಕಥೆಯನ್ನು ಹೇಳಿ ನನ್ನ ಲೇಖನ[illegible] ಮುಗಿಸುತ್ತೇನೆ. ಕುರುಕ್ಷೇತ್ರ ಯುದ್ಧದ ಮುಂಚೆ ಕೌರವ ಪಾಂಡವರಿಬ್ಬರೂ ಕೃ[illegible] ಸಹಾಯ ಕೇಳುವುದಕ್ಕೆ ಬಂದರು. ಗೊತ್ತುಪಡಿಸಿದ ಸಮಯಕ್ಕೆ ಅವರು ಬಂ[illegible] ಕೃಷ್ಣನು ನಿದ್ದೆಮಾಡುತ್ತಿದ್ದನು. ಹಾಸಿಗೆಯ ಪಕ್ಕದಲ್ಲಿ ಎರಡು ಆಸನಗಳಿದ್ದವು. ಚೆ[illegible] ಅಲಂಕರಿಸಲ್ಪಟ್ಟ ಆಸನವು ತಲೆಯ ಹತ್ತಿರವಿತ್ತು. ಅಲಂಕಾರವಿಲ್ಲದ ಆಸನವು [illegible] ಹತ್ತಿರವಿತ್ತು. ಮೊದಲು ಬಂದ ಕೌರವನು ರಾಜಠೀವಿಗೆ ಸರಿಹೊಂದುವ ತ[illegible] ಹತ್ತಿರದ ಆಸನದ ಮೇಲೆ ಕುಳಿತನು. ಆಮೇಲೆ ಬಂದ ಅರ್ಜುನನು ಕಾಲಹ[illegible] ಆಸನದಲ್ಲಿ ಕುಳಿತುಕೊಳ್ಳಬೇಕಾಯಿತು. ಅನಾಸಕ್ತನಂತೆ ಇತರರಿಗೆ ಕಂಡರೂ, [illegible] ನಿಜವಾಗಿ ಕೃಷ್ಣನ ರಾಜಕೀಯ ಜಾಣ್ಮೆ. ತಾನು ಯಾರನ್ನು ಮೊದಲು ನೋಡುತ್ತೇ[illegible] ಅವರಿಗೆ ಸಹಾಯಮಾಡುವುದಾಗಿ ಕೃಷ್ಣನು ಹೇಳಿದ್ದನು. ಕೃಷ್ಣನು ನಿದ್ದೆಯಿಂದ ಎ[illegible] ಮೊದಲು ಅರ್ಜುನನನ್ನು ನೋಡಿ ಅವನಿಗೆ ಸಹಾಯ ಮಾಡಿದನು. ಈ ರಾಜಕಾರ್ಯ[illegible] ಕೌರವರು ಸೋತುಹೋದರು. ವಿಜ್ಞಾನಿಗೆ ಇಂತಹ ಕೌಶಲಗಳನ್ನು ಪ್ರದರ್ಶಿ[illegible] ಅವಕಾಶವು ಸಿಗುವುದಿಲ್ಲ. ಆದರೆ ಯಾವಾಗಲೂ ಸ್ಪರ್ಧಿಸುತ್ತಿರುವ ರಾಜಕೀ[illegible] ಪಕ್ಷಗಳಿಗೆ ಇವರ ಸಹಕಾರ ಬೇಕು. ಇಂತಹ ಪರಿಸ್ಥಿತಿಯಲ್ಲಿ ಭಗವದ್ಗೀತೆಯ ಹೆ[illegible] ಸರಿಬರುವುದಿಲ್ಲ: ''ನಿನ್ನ ಕೆಲಸವನ್ನು ಮಾಡು. ಪರಿಣಾಮವನ್ನು ಕು[illegible] ಚಿಂತಿಸಬೇಡ'' ಎನ್ನುತ್ತದೆ ಗೀತೆ. ಆದರೆ, ಈಗಿನ ಸಂದರ್ಭದಲ್ಲಿ ಪರಿಣಾ[illegible] ಕಾರ್ಯವನ್ನು ನಿರ್ಣಯಿಸುತ್ತದೆ. ಇದು ರಾಜಕೀಯ. ನಿಮಗೆ ರಾಜಕೀಯವೆಂಬ [illegible] ಇಷ್ಟವಾಗದಿದ್ದರೆ 'ಹೊಣೆಗಾರಿಕೆ' ಎಂದು ಕರೆಯಿರಿ.

(ಈ ಲೇಖನದಲ್ಲಿ ಇರುವ ಅಭಿಪ್ರಾಯವು ಲೇಖಕರ ಸ್ವಂತದ್ದು. ಇಲ್ಲಿ ಇ[illegible] ಅಭಿಪ್ರಾಯಗಳಿಗೂ, ಲೇಖಕರು ಕೆಲಸಮಾಡುವ ಸಂಸ್ಥೆಗೂ ಯಾವ ಸಂಬಂಧವೂ [illegible]

References :

1. Nucleus and Nation, Robert S. Anderson, Chicago Univer[illegible] Press, Chicago (2009).
2. Meghnad Saha in Parliament, Ed. Shantimoy Chatterjee a[illegible] Jyotirmoy Gupta, The Asiatic Society, Calcutta (1993)
3. Saha's Influence in the West: A Preliminary Account, David[illegible] de Vorkin, in Meghnad Saha Birth Centenary volume , [illegible] S.B. Karmohapatro , Saha Institute of Nuclear Physics (19[illegible]
4. A Journey into Light, G.Venkataraman, Indian Academy [illegible] Science , Bangalore(1988)
5. Kariamanikkam Srinivasa Krishnan, his Life and Wo[illegible] D.C.V.Mallik and S.Chatterjee, Universities Press (2011).
6. The Raman Effect and Krishnan's Diary , D.C.V. Mallik, No[illegible] and Records of the Royal Society of London, Vol 54, p 67 (20[illegible]
7. D. D. Kosambi: The Scholar and the Man: Meera Kosam[illegible] Resonance, Vol 16, p 504 (2011).
8. Atomic Energy for India, D.D.Kosambi, Text of the lecture [illegible] the Rotary Club of Poona, delivered on 25.07.1960., available [illegible] ddkosambi.blogspot.com/2007/08/atomic-energy-for india.ht[illegible]
9. Rosalind Franklin and the secret "Photo 51"- the Structure [illegible] DNA. www.pbs.org/wgbh/nova/transcripts/3009 photo 51.ht[illegible]
10. Emine Saner, The Guardian, 08.03.2011. Jocelyn Bell sa[illegible] "Well men win prizes and young women look after babies."
11. Dorothy Hodgkin: A Life, Georgina Ferry , Granta Books (200[illegible]
12. A. Gopalkrishnan, DNA, Mumbai Edition, 08.11.2011.
13. Unconstitutional, unethical, unscientific, Pushpa M. Bharga[illegible] The Hindu, 28.12.2011, on the issue of the Biotechnolo[illegible] Regulatory Authority of India Bill.

ಡಾ|| ಸವ್ಯಸಾಚಿ ಚಟರ್ಜಿ

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್, ಬೆಂಗಳೂರು - ೫೬೦ ೦೩೪

ಪು ಂಡಪ್ಪನವರು ಪಂಡಲಾಪುರಕ್ಕೆ ಹೋಗಿ ಬಂದಮೇಲೆ ಮಾತಾಡೋದನ್ನೇ ಮ ಮಾಡಿಬಿಟ್ಟರು. ಇದರಿಂದ ತೊಂದರೆ ಬಂದದ್ದು ಅವರ ಶ್ರೀಮತಿಯವರಿಗೆ. ರು ಮಕ್ಕಳು ದೊಡ್ಡದಾದ ಬಳಿಕ ಮಕ್ಕಳ ವಿಷಯದಲ್ಲಿ ಜಗಳ ಆಡುವುದನ್ನು ದ್ದರು. ಮಗನನ್ನು ನೀನು ಮುದ್ದು ಮಾಡಿ ಹಾಳು ಮಾಡಿದ್ದಿ ಎಂದು ಡಪ್ಪನವರು, ಮಗಳನ್ನು ಅಚ್ಚ ಮಾಡಿ ಹಠಮಾರಿಯಾಗಿಸಿದ್ದೀರಿ, ಎಂದು ುತಿ ಪುಂಡಪ್ಪನವರು ಒದರಾಡಿಕೊಳ್ಳುವದಿತ್ತು. ದಿನದಲ್ಲಿ ತಾಸೆರಡು ತಾಸು ತ್ರ ಮೌನದ ತಂಪು. ಉಳಿದ ಸಮಯವೆಲ್ಲಾ ವಾದದ ಬಿಸಿ, ು ಪುಂಡಪ್ಪನವರ ಮನೆಯ ಹವಾಮಾನ ವರದಿ. ಹೊರಗಿನ , ಮಳೆ, ಚಳಿ ಯಾವುದಕ್ಕೂ ಇವರ ಈ ವಾದದ ಬಿಸಿಯನ್ನು, ವಾಮಾನವನ್ನು ಬದಲಾಯಿಸುವ ಶಕ್ತಿ ಇಲ್ಲ.

ಮಕ್ಕಳು ಮದುವೆಯಾಗಿ ದೂರ ಹೋದ ಬಳಿಕ ವಾದದ -ವಿಷಯ ಬದಲಾದವೇ ಹೊರತು ವಾದದ ವೈಖರಿ ಲಾಗಲಿಲ್ಲ, ಎಂಬುದು ಅಕ್ಕ-ಪಕ್ಕದವರ ಅಭಿಪ್ರಾಯ. ಡಪ್ಪನವರು ಮಾಸ್ತರಿಕೆ ಮಾಡಿ ರಿಟೈರ್ ಆದ ಬಳಿಕವಾದರೂ ಸ್ತರಿಕಿ ಯಾ ದೈನೇಶಿತನ ಬಿಟ್ಟು ಸ್ವಲ್ಪ ನಾಗರಿಕರ ಹಾಗೆ ುಕಬಹುದಿತ್ತು, ಅನ್ನುವುದು ಪುಂಡಮ್ಮನವರ ವಾದ. ಎಲ್ಲರೂ ್ಯತ್ ತೆರಿಗೆ ಕಟ್ಟುವ ಮೊದಲು ಹೋಗಿ ಕಟ್ಟಬರುವುದು, ನ ತೆರಿಗೆ, ಮನೆ ತೆರಿಗೆ ಕಟ್ಟಲು ಒಂದು ದಿನ ತಡವಾದರೂ ಡುವುದು, ಪೇಪರಿನವನು ತಪ್ಪಿ ಹೆಚ್ಚಿನ ಪೇಪರ್ ಒಂದನ್ನು ಬಿಟ್ಟು ಹೋದರೆ ತಕ್ಷಣವೇ ಬೀದಿ ಬೀದಿ ಅಲೆದು ನೆಲ್ಲಿದ್ದಾನೆ ಎಂಬುದನ್ನು ಪತ್ತೆ ಹಚ್ಚಿ, ಆ ಪೇಪರ್ ವಾಪಸ್ ್ಟು ಬರುವುದು, ಇಂತಹ ನೂರು ನಾಗರಿಕ ಅತಿಶಯಗಳನ್ನು ುತಿ ಪುಂಡಪ್ಪ ಪಟ್ಟಿ ಮಾಡುತ್ತಾರೆ.

'ನಮ್ಮ ಗಂಡಗೋಳು ಸುಳ್ಳು ಹೇಳಂಗಿಲ್ಲ, ಕಳ್ಳತನ ಮಾಡಂಗಿಲ್ಲ, ಲಂಚ ಆ್ಳೋದಿಲ್ಲ ಅಂತೆಲ್ಲಾ ಹೇಳ್ಕೊಂಡು ಬರ್ಲಿಕ್ಕೆ ಖುಷೀನೇ ತಗೋರಿ. ಆದ್ರೆ ಹ ಹುಚ್ಚುತನಕ್ಕೆ ಏನನ್ನೋಣ? ತಾವು ಸುಖವಾಗಿ ಇರೋವಲ್ಲು,

ಅತಿ (ನಾಗರಿಕ) ಮಾನವ

ಯವರನ್ನು ಸುಖವಾಗಿರ್ಲಿಕ್ಕೆ ಬಿಡೋವಲ್ರು. ಇಂತಹವರನ್ನು ಕಟ್ಕೊಂಡು ಹ್ಯಾಂಗ್ ಬೇಕು ನೀವಾ ಹೇಳ್ರಿ ಗೋದು ಬಾಯಾರ'' ಎನ್ನುತ್ತ ಪುಂಡಮ್ಮ ಕಣ್ಣೀರು ಸುವುದನ್ನು ಕಂಡ ಅಕ್ಕ-ಪಕ್ಕದ ಹೆಣ್ಮಕ್ಕಳು ''ಏನ್ ಮಾಸ್ತರೋ ತೆಗೀರಿ,'' ಎಂದು ಗು ಸಹಾನುಭೂತಿ ಕೊಡುತ್ತಿದ್ದರು.

ಮಕ್ಕಳಿಬ್ಬರೂ ಅಪ್ಪ-ಅಮ್ಮನ ಈ ನಾಗರಿಕ ಜಗಳಗಳಿಗೆ ಹೆಚ್ಚು ಕಿಮ್ಮತ್ತು ುತ್ತಿರಲಿಲ್ಲ, ತಾವಾಯಿತು ತಮ್ಮ ಓದು ಆಯಿತು ಎಂಬ ನಿರಾಸಕ್ತ ಯೋಗ ಸೇ ಮುಳುಗಿಕೊಂಡಿರುತ್ತಿದ್ದರು. ಅಪ್ಪ-ಅಮ್ಮಂದಿರ ವಾದದಲ್ಲಿ ಯಾರದು ಸರಿ ರದು ತಪ್ಪು ಎಂದು ನಿರ್ಧರಿಸುವಷ್ಟು ಅಗತ್ಯ ಅವರಿಗೆ ಇರಲಿಲ್ಲ. ಇಬ್ಬರ ಳೂ ತಾರಕಕ್ಕೇರಿ ಪರಿಸ್ಥಿತಿ ಬಿಗಡಾಯಿಸಿತೆಂದಾಗ, ತಾಯಿಯ ಕಣ್ಣಲ್ಲಿ ನೀರು ಗಿದಾಗ, ಪುಂಡಪ್ಪನವರು ಟೆನ್ಷನ್‌ನಲ್ಲಿ ನಾಲ್ಕಾರು ಬಾರಿ ಮಾಳಿಗೆ ಹತ್ತಿ ಗ... ಹೀಗೆ ಗಂಭೀರ ಸಂದರ್ಭದಲ್ಲಿ ಮಾತ್ರ ಮಧ್ಯೆ ಪ್ರವೇಶಿಸುತ್ತಿದ್ದರು.

'ಅವ್ವಾ ಗಪ್‌ಕೂಡು, ತಪ್ಪ ಏನಾರೂ ಹೇಳ್ಳಿ, [illegible] ಾಡಬೇಡ, ಸ್ವಲ್ಪ ಹೊತ್ತಿಗೆ ತಾನೇ ಸರಿ ಹೋಗುತ್ತಾನೆ'' ತಾಯಿಗೆ ಹೇಳುವುದಾಗಲಿ, ''ಅಪ್ಪ ನೀನು ಅಷ್ಟನ್ನಂಗೆ ಹಿಡಿದ್ರೆ ಹ್ಯಾಂಗೆ, ನೀನಾರೂ ಸುಮ್ಮಗೆ ಕೂಡಬೇಕಪ್ಪ

ಭುವನೇಶ್ವರಿ ಹೆಗಡೆ

ಮಾಡಿ ಹೋಗು ಏನಂತಾರೆ, ಒಂದು ಕಿಲೋ ಅಷ್ಟೇ' ಎಂದು ಸಮಯ ಸಂದರ್ಭಾನುಸಾರ ಎಲ್ಲರಿಗೂ ಬುದ್ಧಿ ಹೇಳುತ್ತಿದ್ದರು.

ಪುಂಡಪ್ಪ ಮಾಸ್ತ್ರ ಅತೀ ನಾಗರಿಕ ಬುದ್ಧಿ ಊರವರ ಕಣ್ಣಿಗೆ ಬಿದ್ದದ್ದು ಅವರ ಮನೆಯ ಹಳೆಯ ಟಾಯ್ಲೆಟ್ ಅನ್ನು ಕಿತ್ತು ಹೊಸ ಟಾಯ್ಲೆಟ್ ಕಟ್ಟಿಸಿದ ಸಂದರ್ಭದಲ್ಲಿ. ಮೇಸ್ತ್ರಿ ಹತ್ರ ಇಷ್ಟು ಕಡಿಮೆ ಸಾಮಾನು ತಗೋತೀಯ, ಇನ್ನೂ ಸ್ವಲ್ಪ ತಗೋ, ಎನ್ನುವ ಗಂಡನನ್ನು ಪುಂಡಮ್ಮ ಅವಡುಗಚ್ಚಿ ಸಹಿಸಿಕೊಂಡಿದ್ದರು.

[illegible] ಎಂದು ಮೇಸ್ತ್ರಿ, ಗಾಡಿಯವನಿಗೆ ಹೆಚ್ಚಿಗೆ ನೂರರ ನೋಟು ಕೊಟ್ಟಾಗ ಪುಂಡಮ್ಮ ಮಕ್ಕಳ ಬಳಿ ''ಧರ್ಮರಾಯ ನೋಡು, [illegible] ನೋಡು'' ಎಂದು ಗೋಗರೆದದ್ದೂ ಇಂತು. ಹಳೇ ಗಾರೆ, ಹೆಂಚು, [illegible] ಎಲ್ಲವನ್ನು ಮನೆ ಮುಂದೆ ರಾಶಿ ಮಾಡಿ ಹಾಕಿ [illegible] ಮೇಸ್ತ್ರಿ ಗ್ಯಾಂಗ್ ನಗುತ್ತಾ ಹೊರಟುಹೋಯಿತು. [illegible] ಪುಂಡಪ್ಪ ಮಾಸ್ತ್ರ ನಾಗರಿಕ [illegible] ಮನೆಯ ಮುಂದೆ ರಾಶಿ [illegible] ವರಿಗರವನ್ನು [illegible]

ಹನಗಳಿಗೆ ಅಡ್ಡಿಪಡಿಸಬಹುದು. ಆಡುವ ಮಕ್ಕಳು ಅದರ ಮೇಲೆ ಹತ್ತಿದರೆ ತಂ... ಪಾಪಂ... ಒಂದರಗಳಿಗೆ ಸಹ ಮಾಷ್ಟ್ರು ಸುಮ್ಮನೆ ಕೂಡದಾದರು. ಾರು ಬಾರಿ ಮಾಳಿಗೆ ಹತ್ತಿ ಇಳಿದು ಹೆಂಡತಿಯ ಬಳಿ ''ನಿನಗೇನು ಅನಿಸೋದೆ '' ಎಂದು ಕೇಳಿ - ''ನನಗ ಬಾಳ ಅನಿಸತ್ತೈತಿ, ಎಲ್ಲಾದ್ಕ ಹೇಳಿದ್ರೆ ನೀವೆಲ್ಲಿ ನ್ನು ಬಿಡ್ತೀರಿ ಅದಕ್ಕ ಸುಮ್ನೆ ಕೂತೀನಿ'' ಎಂದು ತಿಪಿಸಿಕೊಂಡರು.

ಹನ್ನೆರಡನೇ ಬಾರಿ ಮೆಟ್ಟಿಲು ಹತ್ತಿ ಇಳಿದಾಗ ಮೇಷ್ಟ್ರ ತಲೆಯಲ್ಲಿ ಯೋಚನೆಯೊಂದು ವಾಗಿತ್ತು. ಮನೆಯಲ್ಲಿದ್ದ ಗೋಣಿಚೀಲ, ಪ್ಲಾಸ್ಟಿಕ್ ಬ್ಯಾಗು, ತರಕಾರಿ ಬ್ಯಾಗು, ಮಕ್ಕಳ ಲು ಬ್ಯಾಗ್, ಹೆಂಡತಿಯ ವ್ಯಾನಿಟಿ ಬ್ಯಾಗ್ ಒಂದನ್ನು ಮತ್ತು ಬ್ಯಾಗಿನ ಆಕಾರದ ಲ್ಲಾ ವಸ್ತುಗಳನ್ನು ಹುಡುಕಿ ತೆಗೆದು ಆಚೀಚೆ ಧಾವಿಸತೊಡಗಿದಾಗ, ''ನಿಮ್ಮಪ್ಪಗೆ ತು ನೋಡ್ರೋ ಕುಣಿಲಿಕ್ಕೆ ಹತ್ಯಾರ'' ಎಂದು ಮಕ್ಕಳನ್ನು ಕರೆದು ಆತಂಕ ತೋಡಿ ಂಡರು ಪುಂಡಮ್ಮ. ಹೆಂಡತಿಯನ್ನು ಕೆಕ್ಕರ ಕಣ್ಣಿನಿಂದ ನೋಡಿದ ಪುಂಡಪ್ಪ ''ನೀವು ುಷ್ಯರೆ ಆಗಿದ್ರೆ ನಿಮಗೊಂದು, ಆತ್ಮಸಾಕ್ಷಿ, ಆತ್ಮ ಇಂತವೇನಾದ್ರು ಇದ್ರೆ ನಂಜೋಡಿ , ಇಲ್ಲಾ ನಾವೆ ಮನುಷ್ಯರಲ್ಲಿ ಮೃಗಗಳು, ಆತ್ಮ-ಗೀತ್ಮ ಗೊತ್ತಿಲ್ಲ ಅನ್ನೋದಾದ್ರೆ ಗ ಬಿದ್ದಿರ್ರಿ'' ಎನ್ನುತ್ತ ಸಕಲ ಬ್ಯಾಗುಗಳನ್ನು ಹೊತ್ತುಕೊಂಡು ಹೊರನಡೆದರು. ಡತಿ-ಮಕ್ಕಳು ಬೆರಗಾಗಿ ನೋಡುತ್ತಿರುವಂತೆ ಒಂದೊಂದೇ ಬ್ಯಾಗುಗಳಲ್ಲಿ ಂಟು, ಟೈಲ್ಸ್, ಕಮೋಡಿನ ಚೂರುಗಳನ್ನು ಮಾಷ್ಟ್ರು ತುಂಬತೊಡಗಿದರು.

ಅಪ್ಪ ಏನ್ ಮಾಡ್ಲಿಕ್ ಹತ್ತಿ? ಅದು ನನ್ನ ಕಾಲೇಜ್ ಬ್ಯಾಗು, ಅದು ನನ್ನ ಟೆನ್ನಿಸ್ ್ ಎನ್ನುತ್ತ ಮಕ್ಕಳು ಓಡೋಡಿ ಬರುವಷ್ಟರಲ್ಲಿ, ಅವುಗಳೆಲ್ಲಾ ವೇಸ್ಟ್ ತುಂಬಿ ವೇಸ್ಟ್ ಡಿ ಆಗಿತ್ತು. ಗರಬಡಿದು ನಿಂತ ಪುಂಡಮ್ಮನಿಗೆ ಹೇಳಲಾದರೂ ಏನು ಉಳಿದಿತ್ತು?

ನಾಗರಿಕ ಗಂಡನ ಕರ್ತವ್ಯ ಪ್ರಜ್ಞೆಗೆ ಕೈ ಜೋಡಿಸುವುದೊಂದೇ ಅವರಿಗುಳಿದ ರ್ಗ. ಬೀದಿಯುದ್ದಕ್ಕೂ ಪಾಟೀಲರ ಪತ್ನಿ, ಕುಲಕರ್ಣಿ ಅವರ ತಾಯಿ, ನಿರುದ್ಯೋಗಿ ವರಾಜ, ಪಡಪೋಸಿ ಪ್ರಕಾಶ ಇಂಥವರೆಲ್ಲಾ ನಿಂತು ಬೇರೆ ನೋಡುತ್ತಿದ್ದಾರೆ. ಷ್ಟ್ರ ಮೈಮೇಲೆ ನಾಗರಿಕ ಪಿಶಾಚಿ ಅಮರಿಕೊಂಡಿದೆ! ಪರಿಸ್ಥಿತಿ ಕೈಮೀರುತ್ತಿದೆ. ಮಾಡಿದರೂ ಗಂಡನನ್ನಂತು ತಹಬಂದಿಗೆ ತರುವ ಹಾಗಿಲ್ಲ. ಪುಂಡಮ್ಮ ಹತಾಶ ತಲುಪಿದ್ದರು. ಗಂಡನ ಮುಂದಿನ ನಡೆ ಏನೆಂಬುದು ಅವರಿಗೆ ಗೊತ್ತಾಗಿ ಹೋಗಿತ್ತು ವರ್ಷದ ಅನುಭವ ಅವರಿಗೆ ಅದನ್ನು ಕಲಿಸಿದೆ. ಏನು ಮಾಡಿದರೂ ಪ್ರಯೋಜನ ಪ ಪ್ರಳಯಾಂತಕ ಪತಿರಾಯ! ಮಕ್ಕಳನ್ನು ಕರೆದುಕೊಂಡು ಅವಡುಗಚ್ಚಿ ಳಿದು, ಕಾಯಕ ನಿರತ ಪತಿಯ ಬಳಿಗೆ ಬಂದು ಕೈ ಕಟ್ಟಿ ನಿಂತರು, ಪುಂಡಮ್ಮ.

ಅರಳಿನಿಂತ ಆತ್ಮಸಾಕ್ಷಿ ಕೊನೆಗೂ ಇವರನ್ನಿಲ್ಲಿಗೆ ಕರೆಸಿತು, ಎಂಬಂತೆ ನಗುವೊಂದನ್ನು ಮ್ಮಿಸಿದ ಮಾಷ್ಟ್ರು ಒಂದೊಂದೇ ಚೀಲಗಳನ್ನು ಮಕ್ಕಳ ತಲೆಯ ಮೇಲೂ ಡತಿಯ ತಲೆಯ ಮೇಲೂ ಇಟ್ಟು ತಾನೂ ಹೊರಲಾರದ ಮೂಟೆಯೊಂದನ್ನು ತ್ತುಕೊಂಡು ''ನಡೀರಿನ್ನು ಮುನ್ಸಿಪಾಲಿಟಿ ಹತ್ರ ಅಲ್ಲೇನಾದ್ರು ಲಾರಿ-ಗೀರಿ ಇದ್ರೆ, ನ ವ್ಯವಸ್ಥೆ ಇದ್ರೆ ಹಾಕಿ ಬರೋಣ'' ಎನ್ನುತ್ತ ದಾರಿಗುಂಟ ಹೆಜ್ಜೆ ಹಾಕತೊಡಗಿದರು. ಬೀದಿಯ ಜನ ಮೂಗಿನ ಮೇಲೆ ಇಟ್ಟ ಬೆರಳನ್ನು ತೆಗೆಯಲು ಹರಸಾಹಸ ತೊಡಗಿದರು.

''ಪುರದ ಪುಣ್ಯ ಪುರುಷ ರೂಪಿಂದ ಪೋಗುತಿದೆ'' ಎಂದು ಹರಿಶ್ಚಂದ್ರ ಕಾವ್ಯವನ್ನು ತ್ರವಾಗಿ ವಿವರಿಸುತ್ತಿದ್ದ ಪುಂಡಪ್ಪ ಮಾಷ್ಟ್ರು ತಾನು ನಿರ್ಮಿಸಿದ ಈ ದೃಶ್ಯಾವಳಿಯಿಂದ ಬೀದಿಯ ಗಮನ ಸೆಳೆದಿದ್ದರು. ಅವರ ಶಿಷ್ಯರಲ್ಲಿ ಅನೇಕರು.

''ಕಾಲೊನಿಯ ಹುಚ್ಚಾಟಕ್ಕೆ ಕಾಲು ಬಂದವೋ
ಕಟ್ಟಿಕೊಂಡ ಹೆಂಡತಿಯ ಗೋಳು ನೋಡಿರೋ
ನೆಟ್ಟಗಿವಗೆ ಬುದ್ಧಿಹೇಳಿ ಕೂಡಿಸ ಬನ್ನಿರೋ...''

ು ಮುಂತಾಗಿ ಹಾಡಿಕೊಳ್ಳತೊಡಗಿದರು.

ಕುಲಕರ್ಣಿಯವರ ಪತ್ನಿ, ಪಕ್ಕದ ಮನೆ ಪಂಕಜ ಬಾಯವರ ಹತ್ತಿರ ''ಅಂದ್ರು, ಮಾತ್ರವ್ವ, ಈ ಮನುಷ್ಯಗ ಹೇಳೋರು ಕೇಳೋರು ಯಾರು ಇಲ್ಲೇನೊ, ಇಂತ ಹೆಂಡತಿ ಮಕ್ಕಳನ್ನು ಗೋಳಾಡಿಸೋ ಗಂಡ ದೇವಲೋಕದಲ್ಲಿ ಇರೋದಕ್ಕೆ ುಕ್ಕು. ನಮ್ ಬೀದಿಗ ಇವಂದು ಅತಿಯಾಯಿತು, ಮಿತಿಮೀರಿತು'' ಎಂದು ಪ ವ್ಯಕ್ತಪಡಿಸಿದರು.

ಪಾಪ! ಆ ತಾಯಿ ಪುಂಡಮ್ಮ ಹಿಂದಿನ ಜನುಮದಾಗ ಚಂದ್ರಮತಿಯಾಗಿದ್ಲೇನ್ರಿ ು ಪಂಕಜ ಬಾಯಿ ಕೂಡ ಬಾಯ್ಬಿಟ್ಟರು. ಬೆನ್ನ ಹಿಂದೆ ಯಾರೇ ಏನೇ ಹೇಳಲಿ, ೋಪ ವ್ಯಕ್ತಪಡಿಸಲು, ಪದ್ಯ ಕಟ್ಟಿ ಹಾಡಲಿ, ಮಾಷ್ಟ್ರಿಗೆ ಅದರ ದರ್ದೇ ಇಲ್ಲ, ತಾವಾಯಿತು ತಮ್ಮ ''ಮಿಷನ್ ಗಾರ್ಬೇಜ್'' ಆಯಿತು, ಹೆಜ್ಜೆ ಹಾಕುತ್ತಲೇ ಹೋದರು. ಮೂಟೆ ಹೊತ್ತ ಹೆಂಡತಿ ಮಕ್ಕಳು ನಾಶವಾದ ತಮ್ಮ ಬ್ಯಾಗುಗಳನ್ನು ನೋಡುತ್ತ ತಲೆಯ ಮೇಲಿಂದ ಉದುರುವ ಧೂಳನ್ನು ಕೊಡವುತ್ತ, ಗೊಣಗುತ್ತಾ, ಕಣ್ಣೀರು ಸುರಿಸುತ್ತಾ ಅಪ್ಪನನ್ನು ಹಿಂಬಾಲಿಸಿ ಮೆರವಣಿಗೆ ನಡೆಸಿದ್ದರು.

ಊರಿನುದ್ದಕ್ಕೂ ಇದ್ದ ಪುಂಡಪ್ಪ ಮಾಷ್ಟ್ರ ಶಿಷ್ಯರ ಕಣ್ಣಿಗೆ ಈ ಮೆರವಣಿಗೆ ಕಾಣಸಿಗುವುದು ಮತ್ತು ಮೇಷ್ಟ್ರು ಮಾಡಿದ ಪಾಠ ಹರಿಶ್ಚಂದ್ರ ಕಾವ್ಯದ ಪುರ ನಿರ್ಗಮನ ಭಾಗ ನೆನಪಾಗುವುದು ನಡೆದೇ ಇತ್ತು. ಅಂತೂ ಮೇಷ್ಟ್ರ ಮೆರವಣಿಗೆ ಮುನ್ಸಿಪಾಲಿಟಿ ಆಫೀಸ್ ತಲುಪಿ ಅಲ್ಲಿ ಅವರ ಕಣ್ಣಿಗೆ ಬಿದ್ದು ನಗೆಪಾಟಲಾಯಿತು.

''ಯಾರ್ರೀ ಇವ್ರು 'ನಾಗರಿಕ ಶ್ರೇಷ್ಠ' ಅವಾರ್ಡ್ ಪಡೆಯೋದಿಕ್ಕೆ ಅರ್ಹರಾದವರು'' ಎಂದು ಆಫೀಸರ್ ಮುಂದೆ ನಕ್ಕರೆ, ಉಳಿದವರು ''ಇದ್ಯಾವುದೋ ಮೆಂಟಲ್ ಕೇಸ್ ಕಣಣ್ಣಾ, ಹೆಂಡ್ತಿ, ಮಕ್ಕಳ ತಲೆಮೇಲೆ ಬೇರೆ ಹೊರಿಸಿಕೊಂಡು ಬಂದಿದಾನೆ'' ಎಂದು ಲೊಚಗುಟ್ಟಿದರು. ಮೇಷ್ಟ್ರನ್ನು ಗುರುತು ಹಿಡಿದ ಯಾರೋ ಮಾತ್ರ – ''ಇದೇನು ಮಾಷ್ಟ್ರೇ ಹುಚ್ಚಾಟ? ಫೋನ್ ಮಾಡಿದ್ರೆ ನಾವೇ ಟ್ರಕ್ ಕಳಿಸಿ ತರಿಸ್ಕೋತಿರ್ಲಿಲ್ವ, ಯ್ಯಾವ ಸೀಮೆ ಕೆಲಸ ಸ್ವಾಮಿ'' ಎಂದು ದಬಾಯಿಸಿದರು. ಎಲ್ಲದಕ್ಕೂ ಮೇಷ್ಟ್ರ ಪ್ರತಿಕ್ರಿಯೆ ಒಂದು ಸ್ಥಿತಪ್ರಜ್ಞ ನಗು.

ಮೂಟೆಯಿಂದ ಮುಕ್ತರಾದ ಮಕ್ಕಳು ''ಅಮ್ಮ ಈಗೇನು ಮನೆಗೆ ಹೋಗೋದೋ ಸ್ಮಶಾನಕ್ಕೆ ಹೋಗೋದೋ ಎಂದು ಅಪ್ಪನನ್ನು ಕೇಳು'' ಎಂದವು. ''ಹೋಗೋಣ ಎಂದರೆ ಅಲ್ಲಿಗೇ ಕರೆದೊಯ್ಯುತ್ತಾರೆ ನಿಮ್ಮಪ್ಪ, ಇನ್ನು ನನ್ನ ಕುತ್ತಿಗೆ ಕಡಿಯೋದೊಂದು ಬಾಕಿ'' ಎಂದು ಕಣ್ಣೀರುಗರೆಯುತ್ತಾ ಹೇಳಿದ ಹೆಂಡತಿಯನ್ನು ''ಸಾಕಿನ್ನು ಬನ್ನಿ ಮನೆಗೆ ಹೋಗೋಣ'' ಎಂದು ಏನೂ ಆಗದವರಂತೆ ಪುಸಲಾಯಿಸತೊಡಗಿದರು.

ಮೆರವಣಿಗೆ ಮನೆಗೆ ತಲುಪುವಷ್ಟರಲ್ಲಿ ಬೀದಿಯ ಹಿರಿಯ ಪಟೇಲ್ ಪರಮಪ್ಪ ಇವರ ಅಂಗಳದಲ್ಲಿ ಕುರ್ಚಿ ಹಾಕಿ ಕೂತಿದ್ದರು. ಸುತ್ತಲೂ ಸಹಾನುಭೂತಿ ಸಂಪನ್ನ ಮಹಿಳಾ ಸಂಕುಲ! ''ಮಾಷ್ಟ್ರೇ ನಿಮ್ಮ ಮನೆಯ ವಿಷಯದಲ್ಲಿ ಊರವರಾದ ನಾವು ಕೆಲವು ತೀರ್ಮಾನ ಮಾಡಿದ್ದೇವೆ. ಮತ್ತು ಇದನ್ನು ನೀವು ಪಾಲಿಸಲೇಬೇಕೆಂದು ಈ ಮೂಲಕ ನಿಮ್ಮ ಮೇಲೆ ಒತ್ತಡ ಹೇರುತ್ತಿದ್ದೇವೆ.

೧. ನೀವು ಅದೆಂತದ್ದೇ ನಾಗರಿಕ ಪ್ರಜ್ಞೆಯಿಂದ ಬಳಲುತ್ತಿರಿ ನಮಗದು ಸಂಬಂಧವಿಲ್ಲ. ಈ ಬೀದಿಯ ಗೌರವಸ್ಥ ಕುಟುಂಬಗಳು ಹೇಗೆ ನಡೆದುಕೊಳ್ಳುತ್ತವೆಯೋ ಹಾಗೆ ಮಾತ್ರ ನಡೆದುಕೊಳ್ಳತಕ್ಕದ್ದು. ವಿಪರೀತ ವರ್ತನೆಗೆ ಮೊದಲಿಟ್ಟರೆ ಬಹಿಷ್ಕಾರ ಹಾಕುತ್ತೇವೆ.
೨. ಹೆಂಡತಿ ಮಕ್ಕಳನ್ನು ನಾವೆಲ್ಲಾ ನೋಡಿಕೊಳ್ಳುವಂತೆ ನೋಡಿಕೊಳ್ಳತಕ್ಕದ್ದು. ನಿಮ್ಮ ಶ್ರೀಮತಿಯ ಕಣ್ಣಲ್ಲಿ ನೀರು ಜಿನುಗಿದರೆ ನಿಮಗೆ ನಾವು 'ಬಿಸಿ' ನೀರು ಕುಡಿಸುತ್ತೇವೆ.
೩. ಪ್ರಾಯಶ್ಚಿತ್ತ ರೂಪವಾಗಿ ಅದೇನು ಮಾಡುತ್ತೀರೋ ನಮ್ಮ ಗಮನಕ್ಕೆ ತರತಕ್ಕದ್ದು.
೪. ಇದಕ್ಕೆ ನೀವು ಒಪ್ಪಿದ್ದೀರೆಂದು ಇನ್ನು ಮೇಲೆ ನಿಮ್ಮ ಮನೆಯು ನಮ್ಮೆಲ್ಲಾ ಮನೆಗಳ ಹಾಗೆ ಸುಸ್ಥಿತಿಯಲ್ಲಿರುತ್ತದೆ ಎಂದು ಭಾವಿಸಿದ್ದೇವೆ. ತಪ್ಪಿದಲ್ಲಿ ನಿಮ್ಮ ಮೇಲೆ ಕಠಿಣ ಕ್ರಮ ಕೈಗೊಳ್ಳಬಾರದೇಕೆ ? ಎಂದು ತೀರ್ಮಾನಿಸಿದ್ದೇವೆ...''

ಹೀಗೆ ಸ್ಕೂಲ್ ಇನ್ಸ್‌ಪೆಕ್ಟರ್ ಧಾಟಿಯಲ್ಲಿ ಪಟೇಲರು ತೀರ್ಮಾನಗಳನ್ನು ಓದುತ್ತಾ ಹೋದಾಗ ಮೇಷ್ಟ್ರ ಮುಖದಲ್ಲಿದ್ದ ಸ್ಥಿತಪ್ರಜ್ಞ ನಗು ಮಾಯವಾಗಿ ಹತಪ್ರಜ್ಞ ವದನರಾದರು.

ಮರುದಿನವೇ ಪಂಡಲಾಪುರಕ್ಕೆ ಹೊರಟು ನಿಂತರು.

ಭುವನೇಶ್ವರಿ ಹೆಗಡೆ
ನಂ. ೧೦೧,
'ರತ್ನಾ ಅಪಾರ್ಟ್‌ಮೆಂಟ್ಸ್
ಕದ್ರಿ ಮಾರ್ಕೆಟ್
ಮಂಗಳೂರು - ೫೭೫ ೦೦೧





● ಡಾ॥ ಕೆ. ವೈ. ನಾರಾಯಣಸ್ವಾಮಿ

ಕಾರಣದಿಂದಲೇ ಇರಬಹುದು. ಅನುಭಾವ ಎನ್ನುವುದು ಅರಿವನ್ನು ಒಡೆದು ನೋಡುವ ಕ್ರಮ. ಕಾಲದೇಶಗಳು ಒಂದು ವಿಶಿಷ್ಟ ರೀತಿಯಲ್ಲಿ ಮುರಿದು ಬೀಳುತ್ತಿರುವ ವಿನ್ಯಾಸ. ಆದ ಕಾರಣ ಬಸವಣ್ಣ ಇದನ್ನು 'ಶಿಶುಕಂಡ ಸ್ವಪ್ನ' ಎಂದು ಕರೆದಿದ್ದಾರೆ. ಸಂತರು ಅನುಭವವನ್ನು ನಡೆದ ದಾರಿ ಎಂದು ಕರೆದರೆ, ಅನುಭಾವದ ನಡೆ ಹೆಜ್ಜೆಯನ್ನು ಅಳಿಸಿಕೊಂಡು ನಡೆಯಬೇಕಾದ ಪ್ರಯಾಣ ಎಂದು ವಿವರಿಸಿದ್ದಾರೆ. ಅನುಭಾವ ಎನ್ನುವುದು ಗುರುತುಗಳನ್ನು ಈಡಾಡುತ್ತಿರುವ ಪ್ರಕ್ರಿಯೆ ಮಾತ್ರವಲ್ಲ, ಅನುಭವದ ಮೈಲಿಗೆಯನ್ನು ತೊಳೆಯುವ ಕ್ರಿಯೆಯೂ ಹೌದು. ವಸ್ತು ಲೋಕದಿಂದ ಮನುಷ್ಯ ಪಡೆಯುವ ಹೊಚ್ಚ ಹೊಸ ಅನುಭವವನ್ನು ಅನುಭಾವವೆಂದು ಕರೆಯಬಹುದೆ ?

ಅನುಭಾವ ಎನ್ನುವುದು ಅಂತಿಮವಾಗಿ ಐಂದ್ರಿಕ ಜನ್ಯವೇ ಆದರೂ ಅದು ಅಭಿವ್ಯಕ್ತವಾಗುವುದಕ್ಕೆ ಆಶ್ರಯಿಸುವ ಆಕರಗಳು ಮಾತ್ರ ಲೋಕ ಪದಾರ್ಥಗಳೆ ಆಗಿವೆ. ಆದರೆ ಅನುಭವಾರ್ಥ ಮಾತ್ರ ಭಿನ್ನ. ಸಾಹಿತ್ಯ ಮತ್ತು ಸಂಸ್ಕೃತಿಯ ಚರ್ಚೆಯಲ್ಲಿ ಅನುಭಾವದ ಗುರುತು ಮತ್ತು ಅರ್ಥ ನಿಷ್ಕರ್ಷೆ ಇನ್ನೂ ಬಗೆಹರಿಯದ ಸಂಗತಿ. ಶರಣರು ದಾಸರು ಸಂತರು ಈ ಅಗ್ನಿದಿವ್ಯಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದರಿಂದ ಕನ್ನಡ ಸಂವೇದನಾ ಜಗತ್ತು ಈ ವಿಷಯದಲ್ಲಿ ಸಾಕಷ್ಟು ಶ್ರೀಮಂತವಾಗಿರುವುದು ಕನ್ನಡ ಭಾಷೆಯ ಪುಣ್ಯ.

ಕೀರ್ತನೆಯನ್ನು ನಾವು ಈವರೆಗೆ ಅರ್ಥ ಮಾಡಿಕೊಂಡಿರುವುದು ಅದು ತಾನು ಅನುಸಂಧಾನಿಸುತ್ತಿರುವ ದೈವದ ಲೀಲಾ ವಿಲಾಸಗಳ ನಿರೂಪಣೆ ಎಂದು. ಭಕ್ತನ ಆತ್ಮ ನಿವೇದನೆ ಎಂದೂ ಹಾಗೂ ಸಮಾಜ ವಿಮರ್ಶೆ ದಾಖಲೆ ಎಂಬ ಆಯಾಮಗಳಲ್ಲಿ ನಿವೇದಿಸುವ-ಅರಿಯುವ ಪ್ರಯತ್ನಗಳು ನಡೆದಿವೆ. ಮುಖ್ಯವಾಗಿ ಭಕ್ತನಿಗೆ ಈ ಭವದ ಪದಾರ್ಥ ಲೋಕದ ಮೂಲಕವೇ ದೈವ ಸಾಕ್ಷಾತ್ಕಾರವಾಗುವ ಪರಿಯನ್ನು ಅಥವಾ ಆ ಅರಿವನ್ನೇ ಅನುಭಾವವಾಗಿ ಕೀರ್ತನಾ ಪರಂಪರೆ ಕಟ್ಟಿಕೊಟ್ಟಿದೆ. ಕನಕದಾಸರು ಇತರ

ಕನಕದಾಸರ ಕೀರ್ತನೆಗಳಲ್ಲಿ ಅನುಭಾವ ದರ್ಶನ

ಕಲ್ಪವೃಕ್ಷ ವೃಂದಾವನಗಳಲಿ ಹೇಗೋ ಹೊಕ್ಕು ಬಂದೆ ಅಲ್ಲ ನಿದ್ದೆಯೂ
ಅಲ್ಲ ಎಚ್ಚರವೂ ಯಾವ ಯಾವ ಯೋಗದಿಂದೆ ?


\- ಬೇಂದ್ರೆ

ಅನುಭಾವ ಎಂದರೆ ಏನು ? ಈ ಪ್ರಶ್ನೆ ಮತ್ತೆ ಮತ್ತೆ ಸಂಸ್ಕೃತಿ ವಿಮರ್ಶೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಅನುಭಾವ ಎನ್ನುವ ಪದ ಆಧ್ಯಾತ್ಮಿಕವಾದ ಅನುಭವವನ್ನು ಸೂಚಿಸುವಂತಹ ಪದ ಎಂಬ ರೂಢಿಯ ಅರ್ಥದಿಂದಾಗಿಯೇ ನಾವು ದಾರಿ ತಪ್ಪಿರುವ ಹಾಗೆ ತೋರುತ್ತದೆ. ಅನುಭಾವ ಎನ್ನುವ ಅರಿವಿನ ನೆಲೆಯನ್ನು ವಿವರಿಸಲು ಯತ್ನಿಸುವ ಅತೀತ- ಅಲೌಕಿಕ- ಅತಾರ್ಕಿಕ- ಅನೂಹ್ಯ- ಅಗೋಚರ- ಆಗಮಿಕ- ಅನುಭೂತಿ ಇತ್ಯಾದಿ ಪದಗಳು ಬಳಕೆಯಲ್ಲಿವೆ. ಇದು ಕೂಡ ಸಮಸ್ಯೆ ಮತ್ತಷ್ಟು ಸಂಕೀರ್ಣವಾಗಲು ಕಾರಣವಾಗಿದೆ. ಮನುಷ್ಯನ ಲೋಕಸಂಬಂಧಗಳು ಕಾಲದೇಶಗಳ ಕುರುಹಿನ ಜೊತೆ ತಾರ್ಕಿಕವಾಗಿ ಅರಿವಿಗೆ ಬರುವ ಪ್ರಕ್ರಿಯೆಯನ್ನು ಅನುಭವ ಎಂದು ಸರಳವಾಗಿ ಗ್ರಹಿಸಬಹುದು. ಆದರೆ ಕೆಲವು ಅನುಭವಗಳನ್ನು ಭಾಷೆಯಲ್ಲಿ ಸಿದ್ಧಗೊಂಡಿರುವ ಅರ್ಥಗಳಲ್ಲಿ ಗ್ರಹಿಸಲಾಗುವುದಿಲ್ಲ. ಅಂತಹವನ್ನು ಸಾರಾಸಗಟಾಗಿ ಅನುಭಾವದ ಗುಂಪಿಗೆ ಒಗ್ಗಿಸಲಾಗುವುದಿಲ್ಲ. ಮನುಷ್ಯ ತನ್ನ ಸ್ವಂತದ್ದು ಎಂದು ತಿಳಿಯುವ ಅನೇಕ ಅನುಭವಗಳು ನಿರೂಪಿಸುತ್ತಿರುವ ವ್ಯಕ್ತಿಯದಾಗಿರದೇ ಮತ್ತೊಬ್ಬರು ಈಗಾಗಲೇ ಗ್ರಹಿಸಿ ಬಳಸುತ್ತಿರುವ ಭಾಷಿಕ ನೆಲೆಯ ವಿಸ್ತರಣೆಯಾಗಿಯೋ ಅಥವಾ ಪುನರ್ ಅನುಕರಣೆಯಾಗಿಯೋ ಕಾಣಿಸಿಕೊಳ್ಳುತ್ತದೆ. ನನ್ನದೆಂಬ ಈ ಮಾತು ಮತ್ಯಾರದೋ ಪ್ರತಿಧ್ವನಿಯಾಗಿ ಕೇಳಿಸುವುದು ಮಾತಿಗಿರುವ ಸಂಕಟ. ಅಲ್ಲಮಪ್ರಭು ಭಾಷೆಯೆಂಬುದು ಪ್ರಾಣಘಾತಕ ಎಂದಿರುವುದು ಕೂಡ ಈ


ಕನಕದಾಸರ ಕೀರ್ತನೆಗಳಲ್ಲಿ ಕಂಡರಿಸಿದ ಲೋಕ ತಲ್ಲಣದ ಲೋಕ. ಈ ತಲ್ಲಣ ವಸ್ತುವಿನ ನಿತ್ಯ ಪರಿವರ್ತನಾ ಶೀಲತೆಯಿಂದ ಉಂಟಾದದ್ದು. 'ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂದು ಮತ್ತೆ ಮತ್ತೆ ಸಂತೈಸುವ ಪ್ರಯತ್ನದಲ್ಲಿಯೇ ಅನಿಶ್ಚಿತತೆ ಎದ್ದು ಕಾಣುತ್ತದೆ. ನಾವು ಭಾವಿಸಿರುವಂತೆ ಅಪ್ರತಿಮ ನಂಬಿಕೆಯ ಸಂಗತಿಯಲ್ಲ ಅದು. ಪರಿವರ್ತನೆ ವ್ಯಾಪಾರಗಳು ಕ್ಷಣ ಕ್ಷಣವು ಸಂಶಯವನ್ನು ಹುಟ್ಟು ಹಾಕುತ್ತಿರುವುದರಿಂದ ಇದಕೆ ಸಂಶಯವಿಲ್ಲ ಎಂದು ಭರವಸೆಯನ್ನು ಕಟ್ಟಿಕೊಳ್ಳುವ ವಿನ್ಯಾಸ ಭಕ್ತನಿಗೆ ದೈವದಲ್ಲಿ ದೃಢನಂಬಿಕೆ ಹೊಂದಿದ್ದಾನೆ ಎಂಬ ನಮ್ಮ ತಿಳುವಳಿಕೆಯನ್ನು ಪಲ್ಲಟಿಸುವಂತಿದೆ.

ಪ್ರಿಯದರ್ಶಿನಿ ಪ್ರಕಾಶನ

138, 7ನೇ 'ಸಿ' ಮುಖ್ಯರಸ್ತೆ,
ಹಂಪಿನಗರ,
ಬೆಂಗಳೂರು–560 104


















ಡಾ. ಎಸ್. ವಿದ್ಯಾಶಂಕರ





ಲ್ಲ ದಾಸರಂತೆ ಅನುಭಾವದ ಅಭಿವ್ಯಕ್ತಿಗೆ ಕೆಲ ತೊಡರುಗಳನ್ನು ಎದುರಿಸಿದ್ದಾರೆ. ನುಭವಕ್ಕೆ ಕಾರಣೀಭೂತವಾಗಿರುವ ಲೋಕ-ದೇಹ-ಭಾಷೆ ಇವುಗಳನ್ನು ಕನಕದಾಸರು ನ್ವಾಯಿಸಿರುವ ಕ್ರಮ ಅವರ ಕಾಣ್ಕೆಯನ್ನು ಅನನ್ಯವಾಗಿಸಿರುವ ಅಂಶವಾಗಿದೆ.

ಕನಕದಾಸರು ಅನುಸಂಧಾನಿಸುವ ವಸ್ತುಲೋಕ ಮತ್ತು ದೈವ ಇವು ೇರೆಬೇರೆಯಲ್ಲ. ದೈವ ಮತ್ತು ಭೌತಿಕ ಪದಾರ್ಥಗಳು ಕೂಡ ಮಾಯಾ ಣಗಳನ್ನು ಪಡೆದಿವೆ. ಮಾಯೆ ಎಂಬುದನ್ನು ಗ್ರಹಿಸುತ್ತಿರುವ ವಿನ್ಯಾಸವು ಕೂಡ ಶಿಷ್ಟವಾಗಿದೆ. ಲೋಕದ ಮಾಯೆ ದೈವವನ್ನು ಅರಿಯಲು ಅಡ್ಡಿ ಎಂಬ ತಿಳುವಳಿಕೆ ಕದಾಸರಲ್ಲಿ ಪಲ್ಲಟವಾಗಿರುವುದನ್ನು ಕಾಣಬಹುದು. ಮಾಯೆ ಎನ್ನುವುದು ಇರುವ ಂಗತಿಯಲ್ಲ ಅದು ತೋರುವ ವಿಶಿಷ್ಟತೆ ಎಂಬ ನಿಲುವು ಅನುಭಾವದ ಮತ್ತೊಂದು ಯಾಮವನ್ನು ನಮ್ಮ ಅರಿವಿಗೆ ತರುತ್ತದೆ.

ಲ್ಲಣಿಸುವ ಲೋಕ

ಕನಕದಾಸರ ಕೀರ್ತನೆಗಳಲ್ಲಿ ಕಂಡರಿಸಿದ ಲೋಕ ತಲ್ಲಣದ ಲೋಕ. ಈ ತಲ್ಲಣ ಸ್ತುವಿನ ನಿತ್ಯ ಪರಿವರ್ತನಾಶೀಲತೆಯಿಂದ ಉಂಟಾದದ್ದು. 'ತಲ್ಲಣಿಸದಿರು ಕಂಡ್ಯ ಳು ಮನವೇ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂದು ಮತ್ತೆ ಮತ್ತೆ ತ್ತೈಸುವ ಪ್ರಯತ್ನದಲ್ಲಿಯೇ ಅನಿಶ್ಚಿತತೆ ಎದ್ದು ಕಾಣುತ್ತದೆ. ನಾವು ಭಾವಿಸಿರುವಂತೆ ಪ್ರತಿಮ ನಂಬಿಕೆಯ ಸಂಗತಿಯಲ್ಲ ಅದು. ಪರಿವರ್ತನೆ ವ್ಯಾಪಾರಗಳು ಕ್ಷಣ ಕ್ಷಣವು ಶಯವನ್ನು ಹುಟ್ಟು ಹಾಕುತ್ತಿರುವುದರಿಂದ ಇದಕೆ ಸಂಶಯವಿಲ್ಲ ಎಂದು ರವಸೆಯನ್ನು ಕಟ್ಟಿಕೊಳ್ಳುವ ವಿನ್ಯಾಸ ಭಕ್ತನಿಗೆ ದೈವದಲ್ಲಿ ದೃಢ ನಂಬಿಕೆ ಹೊಂದಿದ್ದಾನೆ ಎಂಬ ನಮ್ಮ ತಿಳುವಳಿಕೆಯನ್ನು ಪಲ್ಲಟಿಸುವಂತಿದೆ.

ನವ ಮೋಹನಾಂಗೇರ ರೂಪವ ಕಣ್ಣಲ್ಲಿ
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ...
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡು ರುಚಿಗೊಂಡರೆ ಆ ರುಚಿ ನಿನ್ನದಯ್ಯ..

ಇಲ್ಲಿನ ತಲ್ಲಣದ ನೆಲೆ ಐಂದ್ರಿಕವಾದ ಪ್ರವೃತ್ತಿಗಳ ಕುರಿತದ್ದು. ಭಕ್ತನು ಕೂಡ ಂಚೇಂದ್ರಿಯಗಳ ವರ್ತನೆಗಳಿಗೆ ಅಧೀನನಾಗಿರುವ ಮತ್ತು ಅವು ಆತನ ಇಚ್ಛೆಗೆ ರುದ್ಧವಾಗಿಯೂ ವರ್ತಿಸುವ ರೀತಿ ತಲ್ಲಣದ ಕಾರಣದ್ರವ್ಯವಾಗಿದೆ. ಲೋಕದ ಂಭ್ರಮಗಳಿಗೆ ವಿಮುಖವಾಗಿರುವ ಡಾಂಭಿಕತೆಯಾಗಲಿ ಅಥವಾ ಹುಸಿ ನಿರ್ಲಕ್ಷ್ಯತೆ ಯಾಗಲಿ ಇಲ್ಲಿ ಕಾಣುವುದಿಲ್ಲ. ನೋಟ ಮತ್ತು ರುಚಿಗಳನ್ನು ನಿರೂಪಿಸುವಾಗ ಕಾಣುವ ತೀವ್ರತೆಯನ್ನು ಗಮನಿಸಿದರೆ ಸಾಕು ಇಲ್ಲಿನ ಪದಗಳಲ್ಲಿ ಅನುಭವದ ತಿರಸ್ಕಾರ ಕಾಣುವುದಿಲ್ಲ. ಅಲ್ಲದೆ ಈ ತಲ್ಲಣವನ್ನು ದೇವರು ಒಡ್ಡುತ್ತಿರುವ ಪಂಕ್ತಿ ... ಕನಕದಾಸರು ಪರಿಭಾವಿಸದಿರುವುದೇ ಈ ಕೀರ್ತನೆಗಳ ಸೊಗಸಿಗೆ ಕಾರಣವಾಗಿರುವ ... ಇತರ ಕೀರ್ತನೆಕಾರರಿಂದಲೂ ಕನಕರನ್ನು ಪ್ರತ್ಯೇಕಿಸುವ ಅಂಶವಾಗಿದೆ. ... ಮಾಯೆಯೊಳಗೋ ನಿನ್ನೊಳು ಮಾಯೆಯೋ' ಎನ್ನುವ ಕೀರ್ತನೆಯ ಆರಂಭದಲ್ಲಿ ನಿರೂಪಣೆಗಳು ಬೆರಗಿನಂತೆ ಕಂಡರೂ ಅದು ಪರಸ್ಪರ ಸಂಧಿಗೊಳ್ಳುವ ಪ್ರಕ್ರಿಯೆಯನ್ನು ಆತಂಕ ಮೂಲವಾಗಿಯೇ ಗ್ರಹಿಸಿರುವುದು 'ಉಸಿರೆನ್ನಳವಲ್ಲ ಎಲ್ಲ ನಿನ್ನೊಳಗೋ ಹರಿಯೆ' ಎಂಬ ಸಂಶಯದ ನೆಲೆಗೆ ಸರಿಯುವುದನ್ನು ಗಮನಿಸಬಹುದು.

ದೇಹವೆಂಬ ಲಜ್ಜೆ

ಅಧ್ಯಾತ್ಮದ ಮಾತು ಬಂದಾಗಲೆಲ್ಲ ದೇಹವನ್ನು ಅನುಭಾವದ ದಾರಿಯಲ್ಲಿನ ಅಡ್ಡಿಯಾಗಿ ಗ್ರಹಿಸುವ ಸಂಪ್ರದಾಯಿಕ ನೆಲೆ ನಮ್ಮ ಭಕ್ತಿ ಸಾಹಿತ್ಯದಲ್ಲಿ ವಿಪುಲವಾಗಿ ಕಂಡುಬರುತ್ತದೆ. ದೇಹ ನಶ್ವರವೂ ಅಶಾಶ್ವತವೂ ಆಗಿರುವುದರಿಂದ ಅದು ಭವಿ. ದ್ವೈತ ವೇದಾಂತದಲ್ಲಿ ಶರೀರವನ್ನು ನಿತ್ಯನರಕಿ ಎಂದೇ ಗುರುತಿಸಲಾಗಿದೆ. ಹಸಿವು ನೀರಡಿಕೆ ನಿದ್ದೆ ಮೈಥುನಾದಿಗಳ ಹಂಗಿನಿಂದ ಮುಕ್ತವಾಗಲಾರದ ಈ ಶರೀರವು ಪರದ ಶತ್ರು ಎಂಬಂತೆ ಕಲ್ಪಿಸಿಕೊಳ್ಳಲಾಗಿದೆ. ಆದರೆ ಕನಕರಲ್ಲಿ ಮಾತ್ರ ದೇಹ ಇಹದ ಪಾರಮ್ಯವನ್ನು ಒಪ್ಪುವಂತಹದು. ಇವರಲ್ಲಿ ಇತರರಂತೆ ದೇಹವನ್ನು ಕುರಿತ ತುಚ್ಛೀಕರಣ ಭಾವವನ್ನು ಹೊಂದಿಲ್ಲದಿರುವುದು ಅಚ್ಚರಿಯನ್ನೂ ಗೌರವವನ್ನೂ ತರುವ ವಿಷಯವಾಗಿದೆ. ದೈವದ ಮಾಯೆ ಮೈದೋರುವ ಮಾಧ್ಯಮ ಶರೀರವೇ ಎಂಬ ಪ್ರಾಥಮಿಕ ಅವಶ್ಯಕತೆಯನ್ನು ಕನಕರು ಗ್ರಹಿಸಿರುವುದನ್ನು ಅವರ ಕೀರ್ತನೆಗಳು ಸಾದರಪಡಿಸುತ್ತವೆ. ಕನಕರ ಕೀರ್ತನೆಗಳಲ್ಲಿ ಕೇಶವನೂ ಕೂಡ ಭಕ್ತರ ಹಾಗೆಯೇ ಶರೀರದ ದೈನಂದಿನ ದುರಂತಗಳಿಗೆ ಒಳಗಾಗುವ ನೆಲೆಯನ್ನು ನಿರೂಪಿಸಿರುವುದು ಅತ್ಯಂತ ವಿಶಿಷ್ಟಸಂಗತಿ ಯಾಗಿದೆ. ಅಲ್ಲದೆ ದೇಹ ತೊಡಕು ಅಲ್ಲ ಅನುಭಾವ ಪಯಣದ ಸೋಪಾನವೆಂಬ ಅರಿವೇ ಕನಕದರ್ಶನದ ತಿರುಳು.

ಒಡಲಿನಾಯಾಸದಲಿ
ಲಜ್ಜೆಗಾಗಿ ತಲೆಬಗ್ಗಿ ಮಲಗಿದ್ದಿಯೋ
ರಮಣಿ ಭೂಮಿಯನು ತಂದಾಲಸ್ಯವೋ
ಕ್ಷಮೆಯ ನಳದೀ ಪಾದಕಮಲ ನೊಂದಾವೋ...

ಕಾಲು ನೀಡಿ ಎಡಗೈಯನ್ನು ಹೊತ್ತಿಗೆ ಮಾಡಿಕೊಂಡು ಪವಡಿಸಿರುವ

ಶ್ರೀರಂಗನಾಥನನ್ನು ಕಂಡು ಗೇಲಿ ಮಾಡುವ ಧಾಟಿಯಲ್ಲಿರುವ ಮೇಲಿನ ಸಾಲುಗಳು ದೇವರು ಪರವಸ್ತುವೆಂಬ ನಂಬಿಕೆಯನ್ನು ಬುಡಮೇಲು ಮಾಡಿದಂತಿದೆ. ಓ ಜೀವವೇ ಮೈಯಲ್ಲಿ ನವೆ ಗಾಯ, ಗಾಯ ಕಟ್ಟುವರಿಲ್ಲ ಗಾಳಿ ಬೀಸುವರಿಲ್ಲ, ದೈವವೂ ಇಹದಲ್ಲಿ ಮನುಷ್ಯ ಆವರಣದೊಳಗೆ ಅಸ್ತಿತ್ವದಲ್ಲಿರುವ ನೋವು, ಅಪಮಾನ, ಹಸಿವು, ಆಯಾಸಗಳನ್ನು ಅನುಭವಿಸುವ, ಲಜ್ಜೆಗೊಳ್ಳುವ ವಿವರಣೆಗಳು ದೇವರು ಮತ್ತು ಭಕ್ತರ ನಡುವಿನ ಸಂಬಂಧವನ್ನು ಸಮಪಾತಳಿಯಲ್ಲಿ ಗ್ರಹಿಸಿರುವ ಕನಕರ ದೃಷ್ಟಿಕೋನವು ಕೀರ್ತನಾ ಪರಂಪರೆಯಲ್ಲಿಯೇ ಅನನ್ಯವಾಗಿ ಕಾಣುತ್ತದೆ. ಆದ್ದರಿಂದಲೇ ಕನಕದಾಸರಲ್ಲಿ ದಾಸ ಎನ್ನುವ ಪರಿಕಲ್ಪನೆಯು ಅಧೀನತೆಯಾಗಿ ಪರಿಗಣಿತವಾಗದೆ ಎಲ್ಲ ಬಗೆಯ ಹಂಗುಗಳನ್ನು ಧಿಕ್ಕರಿಸುವ, ಪ್ರಶ್ನಿಸುವ ಮನೋಧರ್ಮವಾಗಿ ಮಂಡಿತವಾಗಿರುವುದು ಅಭ್ಯಾಸ ಯೋಗ್ಯವಾದ ಸಂಗತಿಯಾಗಿದೆ.

ಬೀಗ

ಹೆಣ್ಣು ಕೆಡದಿರಲೆಂದು
ಒಳಗಿರಿಸಿ, ಬಾಗಿಲಿಗೆ
ಬೀಗ ಹಾಕಿಕೊಂಡು
ಹೋಗುವವರೂ ಉಂಟಂತೆ.
ವಿರಳ !
ಅಷ್ಟೇಕೆ. ಹಿಂದೆ ಹೆಣ್ಣಿಗೇ
ಬೀಗ ಹಾಕುತ್ತಿದ್ದರಲ್ಲ !

ಸಿ.ಪಿ.ಕೆ.
ಮೈಸೂರು

ಭಾಷೆಯೆಂಬ ಸಂಕ

ಅನುಭಾವಿಗಳಿಗೆ ಲೋಕದ ಹಾಗೆ, ದೇಹದ ಹಾಗೆ ಭಾಷೆ ಕೂಡ ಬಹು ಮುಖ್ಯವಾದ ಸವಾಲು. ಭಾಷೆ ಕುರಿತಾದ ಆತಂಕ, ಅನಿವಾರ್ಯತೆ ಮತ್ತು ಬೆಡಗು ಇವುಗಳನ್ನು ಕನ್ನಡದ ವಚನ ಪರಂಪರೆ ಚೂಲಮೂಲವಾಗಿ ಚರ್ಚಿಸಿದೆ. ದೇವರೊಡನೆ, ಲೋಕದೊಡನೆ, ತನ್ನೊಡನೆ ತಾನೇ ಸಂವಾದಿಸಲು ಅನುಭಾವಿಯಾದವನು ಹುಡುಕುವ ಭಾಷಿಕ ರೂಪಗಳ ಅಧ್ಯಯನವು ಕುತೂಹಲಕಾರಿಯಾದ ಸಂಗತಿಗಳನ್ನು ಹೊರಗೆಡವಬಲ್ಲದು. ಅನುಭಾವ ಅಥವಾ ಅಧ್ಯಾತ್ಮದ ನಡೆಗೆ ಇರುವ ಸಂಕಟಗಳಲ್ಲಿ ತಾನು ಹಾದುಬರುತ್ತಿ[...] ಕೊಂಡಗಳ ಅನುಭವವನ್ನು ಮಾತಿನಲ್ಲಿ ಲೋ[...] ಜೊತೆ ಹಂಚಿಕೊಳ್ಳುವಲ್ಲಿ ತಲೆದೋರುವ ಸ[...] ಯಾಗಿದೆ. ಮಾತು ಅಥವಾ ಪದ ಎನ್ನುವುದು ಕೇ[...] ಶಬ್ದ ಮಾತ್ರ, ಅರ್ಥವೇನಿದ್ದರೂ ಲೋಕ ಕಟ್ಟಿಕೊ[...] ತಿಳಿವು. ಆದ್ದರಿಂದಲೇ ಅದು ಮೈಲಿಗೆ ಎಂದು ಶ್ರವ[...] ಪರಂಪರೆಗಳು ನಂಬಿರುವುದು. ಪ್ರತಿಯೊ[...] ಸಂತ-ದಾಸ-ಫಕೀರರು ಈ ಮಾತಿನ ಮೈಲಿಗೆ[...] ಕಳೆಯಲು ಉಗ್ರ ಹಠದಿಂದ ಪ್ರಯತ್ನಪಟ್ಟಿರುವು[...] ಅವರ ಕೃತಿಗಳು ಮನಗಾಣಿಸುತ್ತವೆ. ಕನಕದಾಸ ಅ[...] ಭಾಷೆಯ ಪ್ರಯೋಗದಲ್ಲಿ ಇಂತಹ ಭಾಷಿಕ ಆ[...] ಗಳಿರುವುದನ್ನು ಗುರುತಿಸಬಹುದು. ಕನಕರ ಈ ಬಗೆ[...] ಕೀರ್ತನೆಗಳನ್ನು ಗುರುತಿಸಿ ಅರ್ಥೈಸಲು ಕೀರ್ತನೆಗಳ[...] ಹೊಸ ಹೊಸ ಬಗೆಗಳಲ್ಲಿ ಓದುವುದರಿಂದ ಸಾ[...] ತೋರಿಸಬಹುದು. ಉದಾಹರಣೆಗಾಗಿ ಕನಕರ [...] ಪ್ರಸಿದ್ಧವೂ ಜನಪ್ರಿಯವೂ ಆಗಿರುವ 'ಬಾಗಿ[...] ತೆರೆದು ಸೇವೆಯನು ಕೊಡೊ ಹರಿಯೇ' ಎನ್ನುವ ನಿರೂಪಣೆಯನ್ನು ಅಭ್ಯಾ[...] ಮಾಡಬಹುದು. ಈ ಪದ್ಯ ಪಲ್ಲವಿಯನ್ನು ಗಮನಿಸಿ. ಮೊದಲ ಸಾಲಿನ ಕೊನೆಯ [...] ಹರಿಯೇ ಎನ್ನುವುದು ಎರಡನೆಯ ಸಾಲಿನ ಕೊನೆಯ ಪದ ನರಹರಿ[...] ಎನ್ನುವುದು. ಈ ಎರಡು ಪದಗಳನ್ನು ಕನಕದಾಸ ಇಷ್ಟದೈವವಾದ ಕೇಶವನ ಹೆ[...] (ಹರಿ, ನರಹರಿ = ಕೇಶವನ ಹಲವು ಹೆಸರುಗಳು – ಇವು ನಾಮಪದ) ಎ[...] ಈವರೆಗೆ ಅಭ್ಯಾಸ ಮಾಡಲಾಗಿದೆ ಅರ್ಥ ನೀಡಲಾಗಿದೆ. ಆದರೆ ಈ ಪದಗ[...] ಕನ್ನಡಭಾಷೆಯ ಪ್ರಯೋಗಗಳಲ್ಲಿ ಕ್ರಿಯಾಪದದ (ನರ ಹರಿಯೇ = ಗಂಟ[...] ಹರಿದುಹೋಗುವ ಹಾಗೆ ಕೂಗಿದರೂ) ನೆಲೆಯೂ ಉಂಟು. ಈ ಅರ್ಥ[...] ಹಿನ್ನೆಲೆಯಿಂದ ಗ್ರಹಿಸುವುದಾದರೆ ಕೀರ್ತನೆಯಲ್ಲಿ ಪ್ರಸ್ತಾಪವಾಗುತ್ತಿರುವ [...] ಮತ್ತು ಭಕ್ತನ ಸಂಬಂಧದಲ್ಲಿನ ಅಧಿಕಾರ ಸಂಬಂಧಗಳು ಉಲ್ಟಾಪಲ್ಟ ಆಗು[...] ಎನ್ನುವುದು ತಟ್ಟನೆ ಹೊಳೆಯುತ್ತದೆ. ಗಂಟಲು ಹರಿದು ಹೋಗುವ[...] ಗಟ್ಟಿಯಾಗಿ ಕಿರುಚಿ ದೈವವನ್ನು ನಿರ್ದೇಶಿಸುತ್ತಿರುವ ಅಂಶ ತಿಳಿಯುತ್ತದೆ. ಕೊ[...] ಎನ್ನುವುದು ವಿನಂತಿಯ ಮಾತಾದರೆ ಕೊಡೊ ಎನ್ನುವುದು ಅಧಿಕಾ[...] ಮಾತಾಗುತ್ತದೆ. ಈ ಕೀರ್ತನೆ ಭಕ್ತ ಮತ್ತು ದೇವರ ನಡುವಿನ ಸಂಬಂಧದ ಪ್ರಶ್ನೆಯ[...] ನಿರೂಪಿಸುವುದಿಲ್ಲ. ಅದು ಬಾಗಿಲಾಚೆ ಹತ್ತಿರ ಇದ್ದರೂ, ಗಂಟಲು ಹರಿಯುವ ಹ[...] ಶಬ್ದಮಾಡಿ ಮಾತನಾಡಿಸಿದರೂ ದೈವಕ್ಕೆ ಮೊರೆ ಕೇಳಿಸದಿರುವ ಸ್ಥಿತಿಯ[...] ಮನಗಾಣಿಸಲು ಪ್ರಯತ್ನಿಸಿರುವಂತೆ ಕಾಣುತ್ತದೆ. ಏಕೆಂದರೆ ನಂತರ ಚರಣಗ[...] ಪ್ರಸ್ತಾಪವಾಗುತ್ತಿರುವ ಕರಿರಾಜ, ಪ್ರಹ್ಲಾದ, ದ್ರೌಪದಿಯ ಪ್ರಸಂಗಗಳಲ್ಲಿ ದೇವ[...] ಭಕ್ತರ ಮಾತು ಕೇಳಿಸಿದ್ದರಿಂದ ಇಷ್ಟದೈವವು ಅವರ ಕಷ್ಟಕ್ಕೆ ಒದಗಿ ಬಂದ ಸಂಗತಿಗ[...] ನಿರೂಪಗೊಂಡಿರುವುದನ್ನು ಅರಿತರೆ ನನ್ನ ಮಾತು ಸ್ಪಷ್ಟವಾಗುವುದು. [...] ಪ್ರಕರಣಗಳಲ್ಲಿ ಭಕ್ತರು ದೈವವನ್ನು ಉದ್ದೇಶಿಸಿ ಆಡಿದ ಮಾತು ದೂರದ ಪರಮ[...] ದಲ್ಲಿರುವ ಅವನಿಗೆ ಕೇಳಿಸಿದ್ದು ಹೇಗೆ? ಬಾಗಿಲಾಚೆಯಿಂದ ನರಹರಿಯೇ ಎ[...] ಕೂಗಿಕೊಂಡರೂ ಮಾತು ಕೇಳದೇ ಹೋದದ್ದು ಹೇಗೆ ? ಎನ್ನುವ ಪ್ರಶ್ನೆಯೇ [...] ಭಾಷಿಕ ನಿರೂಪಣೆಯನ್ನು ಹೊಸ ಹೊಳಪಿಗೆ ಒಡ್ಡುತ್ತದೆ. ಕನಕದಾ[...] ಕೀರ್ತನೆಗಳನ್ನು ಈಗಾಗಲೇ ಚರಿತ್ರೆ ಆಧಾರಿತ ಮತ್ತು ಧಾರ್ಮಿಕ ಪರಿವೇಶ[...] ಅರ್ಥಗಳಿಗೆ ಒಗ್ಗಿಸಿ ವಿವರಿಸಿರುವ ಕ್ರಮಗಳನ್ನು ಬದಿಗಿರಿಸಿ ನಿಜ ಅನುಭಾ[...] ಆಯಾಮಗಳ ಮೂಲಕ ಎದಿರುಗೊಳ್ಳಬೇಕಾದ ಅವಶ್ಯಕತೆಯು ಇಂದಿನ ಸ[...] [...]ಸ್ಕೃತಿಕ ತುರ್ತು ಹಾಗೂ ಜವಾಬ್ದಾರಿಯೂ ಆಗಿದೆ. ಆಗ ಮಾತ್ರ ಹೊಸ ಅರಿ[...] ಲೋಕಗಳು ಅಕ್ಷರಗಳ ಮರೆಯಿಂದ ಬಯಲಿಗೆ ಬರುತ್ತವೆ. ಆ ದಿಕ್ಕಿನತ್ತ ನಡೆಗೆ ಲೇಖನ ಪ್ರೇರಣೆ ನೀಡಬೇಕು ಎನ್ನುವುದು ನನ್ನ ಆಶಯ.

ಡಾ|| ಕೆ. ವೈ. ನಾರಾಯಣಸ್ವಾಮಿ
ಸಂಖ್ಯೆ. ೪೭, ಎನ್. ಆರ್. ಲೇಔಟ್, ೫ನೇ ಮುಖ್ಯರಸ್ತೆ
ವಿರಾಟನಗರ, ಬೊಮ್ಮನಹಳ್ಳಿ, ಬೆಂಗಳೂರು - ೫೬೦ ೦೬೮

ಡಾ|| ಚೆನ್ನವೀರ ಕಣವಿ



ಪ್ರೊ|| ಮಾಳವಾಡರ
ರಿನಲ್ಲಿ ಎಸ್. ಎಸ್. ಇದೆ.
ರೆ ಅವರು ನೀವು ಹೇಳಿದ್ದಕ್ಕೆಲ್ಲ 'ಯಸ್,
ಸ್' ಎಂದು ಗೋಣು ಹಾಕುವವರಲ್ಲ'' –
|| ಮಾಳವಾಡರ ಷಷ್ಟಿಪೂರ್ತಿ ಸಮಾರಂಭದ
ದರ್ಭದಲ್ಲಿ (೧೩-೧೨-೧೯೭೦) ವರಕವಿ
|| ದ. ರಾ. ಬೇಂದ್ರೆಯವರು ಈ ಮಾತನ್ನು ಎತ್ತಿ
ಳಿದ್ದರು. ಮಾಳವಾಡರನ್ನು ಚೆನ್ನಾಗಿ ಬಲ್ಲ ಯಾರಿಗೂ
ಮಾತಿನ ಸತ್ಯ ಗೋಚರಿಸದೆ ಇರದು. ಯಾವುದೇ
ಷಯದ ಬಗ್ಗೆ ಭಾವೋದ್ರೇಕಕ್ಕೆ ಒಳಗಾಗದೆ, ಅದನ್ನು
ಚಾರಿಕ ಒರೆಗಲ್ಲಿಗೆ ಹಚ್ಚಿನೋಡುವ ಚಿಕಿತ್ಸಕ ದೃಷ್ಟಿ
ರ ವ್ಯಕ್ತಿವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತಿತ್ತು. ಅವರ
ನಿಲುವು ಸ್ವಪ್ರತಿಷ್ಠೆಯಿಂದ ಕೂಡಿರದೆ ಸತ್ಯ
ೕಧನೆಯ ದೃಷ್ಟಿಯಿಂದ ಪ್ರೇರಿತವಾಗಿರುತ್ತಿತ್ತು
ಬುದನ್ನು ಮರೆಯುವಂತಿಲ್ಲ.

ಕರ್ನಾಟಕ ಕಾಲೇಜಿನಲ್ಲಿ ನಾನು ನೇರವಾಗಿ
|| ಮಾಳವಾಡರ ವಿದ್ಯಾರ್ಥಿಯಾಗುವ ಪೂರ್ವ
ಯೇ ಅಂದರೆ, ಹಾಯ್‌ಸ್ಕೂಲ್ ವಿದ್ಯಾರ್ಥಿ
ಗಿದ್ದಾಗಲೇ ಅವರ ಪ್ರಭಾವಕ್ಕೆ ಒಳಗಾಗಿದ್ದೆ. ನಾನು
ರುಘಾಮಠದ ಪ್ರಸಾದ ನಿಲಯದಲ್ಲಿದ್ದಾಗ
|| ಶಿ. ಶಿ. ಬಸವನಾಳ ಹಾಗೂ ರೆವರೆಂಡ್ ಚನ್ನಪ್ಪ
ತ್ತಂಗಿಯವರ ಜೊತೆಗೆ ಪ್ರೊ|| ಮಾಳವಾಡರೂ
ಗ ಬಂದು ಉಪನ್ಯಾಸವೀಯುತ್ತಿದ್ದರು. ಹಾಗೆಯೇ
ರ್ಟಕ ವಿದ್ಯಾವರ್ಧಕ ಸಂಘ ಮತ್ತು ಇನ್ನಿತರ
ಹಬ್ಬದಂತಹ ಸಾರ್ವಜನಿಕ ವೇದಿಕೆಗಳಲ್ಲಿ ಅವರ
ಷಣಗಳನ್ನು ಕೇಳಿ ಕನ್ನಡ ನಾಡು-ನುಡಿಯ ಬಗ್ಗೆ
ಯನ್ನೂ ಅಭಿಮಾನವನ್ನೂ ತಾಳಿದವರಲ್ಲಿ
ೂ ಒಬ್ಬ. ಕರ್ನಾಟಕ ಕಾಲೇಜಿನ ಐದಾರು
ರ್ಗಗಳ (೧೯೪೬-೧೯೫೨) ವಿದ್ಯಾರ್ಥಿ ಜೀವನದ
ಧಿಯಂತೂ ನಮ್ಮ ಓದು, ಬರವಣಿಗೆ,
ರ್ಟಕ ಸಂಘದ ಚಟುವಟಿಕೆಗಳು – ಎಲ್ಲದಕ್ಕೂ
ದು ಉತ್ಕರ್ಷದ ಕಾಲವಾಗಿತ್ತು. ಇದಕ್ಕೆಲ್ಲ
|| ಮಾಳವಾಡರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ

ಪ್ರೊ|| ಮಾಳವಾಡರ ಸೇವೆ ಎಂದೂ ಅಧ್ಯಾಪನಕ್ಕಷ್ಟೇ ಸೀಮಿತವಾಗಿರದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಗೌರವ ನಿರ್ದೇಶಕತ್ವ ವಿದ್ಯಾರ್ಥಿ ಕಲ್ಯಾಣಾಧಿಕಾರಿ, ಪ್ರಾಚಾರ್ಯ, ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದ ಸ್ಥಾಪಕ ನಿರ್ದೇಶಕ – ಇತ್ಯಾದಿಗಳೂ ಅವರ ಅನುಭವದ ಲಾಭವನ್ನು ಪಡೆದಿವೆ. ಮುಂಬಯಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿ, ಕನ್ನಡ ಅಭ್ಯಾಸ ನಿಯಾಮಕ ಮಂಡಳ, ವಿಶ್ವವಿದ್ಯಾಲಯದ ಸೆನೇಟ್, ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ – ಇವೇ ಮೊದಲಾದವುಗಳ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು.

ಜನ್ಮಶತಾಬ್ದಿ ಸ್ಮರಣೆ


ಕಾರಣರಾಗಿದ್ದರೆಂದು ಬೇರೆ ಹೇಳಬೇಕಿಲ್ಲ. ಪರೋಕ್ಷವಾಗಿ ಎಂದು ಯಾಕೆ ಹೇಳುವೆನೆಂದರೆ, ನಮಗೆ ಗೊತ್ತಾಗದ ಹಾಗೆಯೇ ಎಷ್ಟೋ ಬಗೆಯಲ್ಲಿ ಅವರು ನಮ್ಮ ಬೆಳವಣಿಗೆಗೆ ಕಾರಣರಾಗಿದ್ದರು. ಅದನ್ನೇ ಮಾಡುವುದು ಅವರ ಸ್ವಭಾವವೇ ಆಗಿತ್ತು. ಇನ್ನೊಬ್ಬ ಕನ್ನಡ ಅಧ್ಯಾಪಕರಾಗಿದ್ದ ಪ್ರೊ|| ಎಸ್. ಆರ್. ಮಳಗಿಯವರು ಅನೇಕ ವಿಷಯಗಳಲ್ಲಿ ಅವರಿಗೆ ಸಹಾಯಕರಾಗಿರುತ್ತಿದ್ದರು. (ಶತಾಯುಷಿಗಳಾದ ಪ್ರೊ|| ಮಳಗಿಯವರು ಬೆಂಗಳೂರಿನ ರಾಜಾಜಿನಗರದ ತಮ್ಮ ಮನೆಯಲ್ಲಿ ನೆಮ್ಮದಿಯಾಗಿರುವುದು ಸಂತೋಷದ ಸಂಗತಿ.) ವೈಯಕ್ತಿಕವಾಗಿ 'ಭಾವಜೀವಿ' ಎನಿಸಿಕೊಂಡ ನನ್ನಲ್ಲಿ ಪ್ರೊ|| ಮಾಳವಾಡರು ತಮ್ಮ ನಡೆ-ನುಡಿಗಳಿಂದ ವೈಚಾರಿಕತೆಯನ್ನೂ ವಿಮರ್ಶಾಪ್ರಜ್ಞೆಯನ್ನೂ ಹುಟ್ಟು ಹಾಕಿದರು. ನನ್ನ ಪ್ರಥಮ ಗದ್ಯಕೃತಿ 'ಸಾಹಿತ್ಯ ಚಿಂತನ'ಕ್ಕೆ (೧೯೬೬) ವಿಮರ್ಶಾತ್ಮಕ ಮುನ್ನುಡಿ ಬರೆದು ಪ್ರೋತ್ಸಾಹಿಸಿದರು.

ಕಾಲೇಜಿನ ಕನ್ನಡ ವಿಭಾಗವನ್ನು ಹೊರತು ಪಡಿಸಿಯೂ ಪ್ರೊ|| ಮಾಳವಾಡರಿಂದ ಆಕರ್ಷಿತರಾದ ವಿದ್ಯಾರ್ಥಿಗಳು ಹಾಗೂ ಲೇಖಕರು ಕಾಲೇಜಿನ ಒಳಗೂ ಹೊರಗೂ ಅನೇಕರಿದ್ದರು. ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಯಾಗಿದ್ದ ಡಾ|| ಜಿ. ಎಸ್. ಆಮೂರ ಅವರು ಅಂದಿನ ಸಂದರ್ಭವನ್ನು ಹೀಗೆ ನೆನೆದುಕೊಳ್ಳುತ್ತಾರೆ : ''ಕಾಲೇಜಿನ ಕನ್ನಡ ಚಟುವಟಿಕೆಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ನನಗೆ ಆ ವರ್ಷದ ಕರ್ನಾಟಕ ನಿಬಂಧ ಬಹುಮಾನ ಶಿವರಾಮ ಕಾರಂತರ ಕೃತಿಗಳ ಅಧ್ಯಯನಕ್ಕಾಗಿ ದೊರೆಯಿತು. ನನಗಾಗಿ ಪ್ರಬಂಧ ಸ್ಪರ್ಧೆಯ ಕೊನೆಯ ದಿನಾಂಕವನ್ನು ಪ್ರೊ|| ಮಾಳವಾಡರು ವಿಸ್ತರಿಸಿದ್ದಕ್ಕಾಗಿ ಇದು ಸಾಧ್ಯವಾಯಿತು... ೧೯೮೫ರಲ್ಲಿ ನಾನು ಧಾರವಾಡಕ್ಕೆ ಮರಳಿಬಂದಾಗ ಪ್ರೊ|| ಮಾಳವಾಡರು ಸಾರ್ವಜನಿಕ ಜೀವನದಿಂದ ಹಿಂದೆ ಸರಿದು ಅಧ್ಯಾತ್ಮ ಚಿಂತನೆಯಲ್ಲಿ ತೊಡಗಿದ್ದರು. ...ಯಾವುದೋ ಕಾರಣಕ್ಕಾಗಿ

ಆತ್ಮಗೌರವದ, ಸ್ವಪ್ರತಿಷ್ಠೆಯ ಪ್ರಾಧ್ಯಾಪಕ ಪ್ರೊ|| ಸ. ಸ. ಮಾಳವಾಡ

ಅವರನ್ನು ಕಂಡಾಗ ತಮ್ಮ ಪುಸ್ತಕಗಳ ಪ್ರತಿಗಳನ್ನು ನನ್ನೆದುರಿಗಿಟ್ಟು ಆಯ್ಕೆಯ ಸ್ವಾತಂತ್ರ್ಯವನ್ನು ನನಗೆಯೇ ನೀಡಿದರು. ಅವರ ಪ್ರವಾಸ ಗ್ರಂಥಗಳನ್ನು ಹಾಗೂ ಆತ್ಮಚರಿತ್ರೆಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ಬರಹದಲ್ಲಿಯ ಸಂಯಮ ಹಾಗೂ ವಿವೇಕವಾದ ಸರಳ ಸಂವಹನ ಶೈಲಿ – ಇವು ಅವರ ಬರಹಗಳಲ್ಲಿ ಅನುಕರಣೀಯ ಗುಣಗಳು.''

೧೯೩೬ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡಂದಿನಿಂದ ಮುಂದಿನ ಅರ್ಧ ಶತಮಾನಕ್ಕೂ ಮಿಕ್ಕ ಅವಧಿಯಲ್ಲಿ ಧಾರವಾಡದ ಸಾಹಿತ್ಯಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಹಾಗೆಯೇ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿ ಈ ಬಗೆಯ ಆತ್ಮಗೌರವ ಹಾಗೂ ತತ್ವನಿಷ್ಠೆಗೆ ಪ್ರಥಮ ಪ್ರಾಶಸ್ತ್ಯವಿತ್ತು. ಪ್ರೊ|| ಮಾಳವಾಡರಂತೆ ಬಾಳಿದವರು ವಿರಳವೆಂದೇ ಹೇಳಬೇಕು. ಅಚ್ಚುಕಟ್ಟಾದ ಜೀವನಕ್ರಮ, ಪ್ರತಿಯೊಂದು ಕೆಲಸದಲ್ಲಿ ಶಿಸ್ತು, ಓರಣ, ಗಾಂಭೀರ್ಯವನ್ನು ಬಿಟ್ಟುಕೊಡದ ಸ್ನೇಹ ಸೌಹಾರ್ದತೆ, ಕಾರ್ಯದಕ್ಷತೆ, ನ್ಯಾಯ ನಿಷ್ಠುರ ನಡವಳಿಕೆ, ಮೌನದ ಅಂತರ್ಮುಖತೆ, ನಿರ್ದಿಷ್ಟವಾದ ಚೊಕ್ಕ ಬರವಣಿಗೆ – ಇವು ಅವರ ವ್ಯಕ್ತಿತ್ವದ ಅಷ್ಟ ಪೈಲುಗಳೆನ್ನಬಹುದು.



"ಮಂತ್ರಿಗಳೇ, ಇದಕ್ಕೆ ಮುಂಚೆ ನಿಮಗೆ ಯಾವಾಗಲಾದರೂ ಹಾರ್ಟ್‌ಅಟ್ಯಾಕ್ ಆಗಿತ್ತೇ...?"
"ಒಂದೇ ಸಾರಿ, ನೀವು ಹೋದ ಸಾರಿ ಬಿಲ್ ಕೊಟ್ಟಾಗ...!!"

ವಿದ್ಯಾರ್ಥಿ ದೆಸೆಯಲ್ಲಿಯೇ ಇವರ ಕನ್ನಡ ಪ್ರೇಮ ಹಾಗೂ ಉತ್ಸಾಹವನ್ನು ಗಮನಿಸಿದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು ಇವರನ್ನು ಮೆಚ್ಚಿಕೊಂಡು ಕರ್ನಾಟಕ ಇತಿಹಾಸ ಮಂಡಳದ ಸದಸ್ಯನಾಗಿ ಮಾಡಿಕೊಂಡದ್ದಲ್ಲದೆ ತಮ್ಮ ರಾಯಭಾರಿಯಾಗಿ ಇವರನ್ನು ಆರಿಸಿಕೊಂಡರು. ಅವರು ಆಗ ನವಜೀವನ ಗ್ರಂಥಮಾಲೆಯ ಪರವಾಗಿ ವಿಚಾರ ಸಾಹಿತ್ಯದ ಪ್ರ ಪ್ರಕಟಿಸುತ್ತಿದ್ದರು. ಆ ಪುಸ್ತಕಗಳ ಪ್ರಚಾರಕ್ಕೆ ಮಾಳವಾಡರು ಅವರ ಅಪೇಕ್ಷೆಯಂತೆ ಕೊಲ್ಹಾಪು ಸಾಂಗಲಿ, ಪುಣೆ, ಮುಂಬಯಿಗಳ ಪ್ರವಾಸ ಕೈಗೊಂ ಸಾಧ್ಯವಿದ್ದಷ್ಟು ನೆರವಾದರು.

* * *

ಧಾರವಾಡ ಜಿಲ್ಲೆಯ ಮೆಣಸಿಗಿಯಲ್ಲಿ ೧೯೧ ನವೆಂಬರ್ ೧೪ರಂದು ಜನಿಸಿದ ಸಂಗಪ್ಪ - ಸ ಬಸಪ್ಪ - ಮಾಳವಾಡ ಗೋವನಕೊಪ್ಪದಲ್ಲಿ ಪ್ರಾಥ ಶಿಕ್ಷಣವನ್ನೂ, ಗುಳೇದಗುಡ್ಡ, ಬಾಗಲಕೊ ವಿಜಾಪುರಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪೂ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಉಚ್ಚ ಪಡೆದು, ಮುಂಬಯಿ ವಿಶ್ವವಿದ್ಯಾಲಯದ ಎಂ ಪದವಿಯೊಡನೆ ಕನ್ನಡ ಐಚ್ಛಿಕದಲ್ಲಿ ಪ್ರಥಮ ಪಡೆದು ೧೯೩೬ರಲ್ಲಿ ಕರ್ನಾಟಕ ಕಾಲೇಜಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ವರ್ಷವೇ ಶಾಂತಾದೇವಿಯವರೊಡನೆ ಮದುವೆ ಆಯಿತು. ಮುಂದೆ ಮೂರುವರೆ ದಶಕಗಳ ಪ್ರಾಧ್ಯಾಪಕರಾಗಿ ಕಾಲೇಜಿನ ಪ್ರಾಚಾರ್ಯರಾಗಿ ಸಲ್ಲಿಸಿ ೧೯೭೦ರಲ್ಲಿ ನಿವೃತ್ತರಾದರು.

ಬಿ.ಎ. ಪರೀಕ್ಷೆಗೆ ಅವರು ಓದಿದ್ದು ಚರಿತ್ರೆ ಮತ್ತು ಅರ್ಥಶಾಸ್ತ್ರ. ಎಂ.ಎ. ಪರೀ ಕನ್ನಡವನ್ನು ಪ್ರಮುಖ ಐಚ್ಛಿಕವಾಗಿ ಆರಿಸಿಕೊಳ್ಳುವ ಅವಕಾಶ ಆಗ ಕರ್ನಾ ಕಾಲೇಜಿನಲ್ಲಿರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಕೊಲ್ಲಾಪುರ ರಾಜಾರಾ ಕಾಲೇಜಿನಲ್ಲಿ ಹೆಸರು ಹಚ್ಚಿಸಿ ಪ್ರೊ|| ಕೆ. ಜಿ. ಕುಂದಣಗಾರ ಅವರ ಶಿಷ್ಯರಾಗುವ ಭ ಪಡೆದುಕೊಂಡರು. ಅಲ್ಲಿಯ ಚಿತ್ರದುರ್ಗ ಮಠದಲ್ಲಿ ವಸತಿ ಸೌಕ ಲಭ್ಯವಾಯಿತು. ಚಿತ್ರದುರ್ಗ ಮಠದ ವಿದ್ಯಾರ್ಥಿನಿಲಯ ರೂಪುಗೊಳ್ಳುವ ಆಗಿನ ಸಂಸ್ಥಾನಿಕರಾದ ಛತ್ರಪತಿ ಶಾಹು ಮಹಾರಾಜರ ಪ್ರೋತ್ಸಾಹವೂ ಕಾರಣವಾ ಬ್ರಾಹ್ಮಣೇತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ, ನೆರವು ಒದಗಿ ಧೋರಣೆಯೂ ಅವರದಾಗಿತ್ತು. ಕೊಲ್ಲಾಪುರದ ಜನ ಪ್ರೊ|| ಕುಂದಣಗಾರ "ಅಣ್ಣಾ" ಎಂದು ಗೌರವಪೂರ್ವಕ ಸಂಬೋಧಿಸುತ್ತಿದ್ದುದನ್ನೂ ಪ್ರಸಿದ್ಧ ಮ ಲೇಖಕರಾದ ವಿ. ಸ. ಖಾಂಡೇಕರ ಕುಂದಣಗಾರರ ಮನೆಗೆ ಆ ಬರುತ್ತಿದ್ದುದನ್ನೂ ಪ್ರೊ|| ಮಾಳವಾಡರು ತಮ್ಮ ಆತ್ಮಕಥೆಯಲ್ಲಿ ನೆನೆಸಿಕೊಂಡಿ ಕನ್ನಡದ ಸ್ವಾಭಿಮಾನದ ವಿಷಯದಲ್ಲಿ ಮಾಳವಾಡರಿಗಿದ್ದ ಕಳಕಳಿಗೆ ಒಂದು ನಿದರ್ಶನವಿದೆ: ಕನ್ನಡದಲ್ಲಿ ಬರೆದ ವಿಳಾಸಗಳ ಪತ್ರಗಳನ್ನು ಹಂಚು ಸಾಧ್ಯವಿಲ್ಲವೆಂದೂ, ಮರಾಠಿಯಲ್ಲಿ ಅಥವಾ ಇಂಗ್ಲೀಷಿನಲ್ಲಿದ್ದರೆ ಸಾಧ್ಯವೆಂದೂ ಅ ಪೋಸ್ಟಮಾಸ್ತರ ಪರಿಪತ್ರ ಹೊರಡಿಸಿದಾಗ, ಮಾಳವಾಡರು ಕೊಲ್ಹಾಪು ಕನ್ನಡಿಗರನ್ನು ಸಂಘಟಿಸಿ, ಈ ಅನ್ಯಾಯವನ್ನು ಕೇಂದ್ರ ಸರಕಾರಕ್ಕೆ [illegible], ಪರಿಪತ್ರ ಹಿಂತೆಗೆದುಕೊಳ್ಳುವಂತೆ ಮಾಡುವವರಲ್ಲಿ ಮುಖ್ಯರಾದರು.

ಅವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಕರ್ನಾಟಕ ಸಂ ಮತ್ತು ನಾಡಹಬ್ಬಕ್ಕೆ ಬರುತ್ತಿದ್ದ ನಾಡಿನ ವಿವಿಧ ಪ್ರದೇಶಗಳ ಸಾಹಿತಿಗಳ ಸಂಪ ಅವರಿಗೆ ಒದಗಿತು. ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತ ಅವರು ಬರೆದಿದ್ "ಅಸಾಧಾರಣ ಮೇಧಾವಿ ಪಂಡಿತ ತಾರಾನಾಥರು ತಮ್ಮ ಅಸಾಮಾನ್ಯ ವ್ಯಕ್ತಿತ್ವದಿ ಉಜ್ವಲ ಭಾಷಣದಿಂದ ನಮ್ಮ ಮೇಲೆ ಪ್ರಭಾವ ಬೀರಿದರು. ಅತ್ಯಂತ ಸ್ವಾರಸ್ಯಕರ ಪ್ರವಚನದ ಮೂಲಕ ಕನ್ನಡದ ಬಗೆಗೆ ಅಭಿಮಾನ ಪ್ರಚೋದಿಸುತ್ತಿದ್ದ ಕೀ ಕಾನು ಶಿವಮೂರ್ತಿ ಶಾಸ್ತ್ರಿಗಳು ನಮ್ಮನ್ನು ಆಕರ್ಷಿಸಿದರು. ೧೯೩೦ರಲ್ಲಿ ಆರ್. ಜಹಗೀರದಾರರು ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರ ಬಳಿ ಬರುತ್ತಿದ್ದ ಹಿ ಸಾಹಿತಿಗಳ ಪರಿಚಯ ನನಗೆ ಸಾಧ್ಯವಾಯಿತು. ಅಂತಹವರಲ್ಲಿ ಶಿವರಾಮ ಕಾ ವಿ.ಸೀ., ಅ.ನ.ಕೃ. ಮೊದಲಾದವರಿದ್ದರು. ನಾನು ಸೀನಿಯರ್ ಬಿ.ಎ. ವ ಬರುವ ಹೊತ್ತಿಗೆ ಗೆಳೆಯರ ಗುಂಪಿನ ಕೆಲವರೊಂದಿಗೆ ಸಲಿಗೆಯುಂಟಾಗಿ ೧೯೩೩ರಲ್ಲಿ ಬಿ.ಎ. ಪರೀಕ್ಷೆಗೆ ಕುಳಿತ ಮೇಲೆ ಧಾರವಾಡದ ಕರ್ನಾಟಕ ಸಾ

ಂದಿರದ ಟಿ. ಡಿ. ಶಿವಲಿಂಗಯ್ಯನವರ ಅಪೇಕ್ಷೆಯ
ರೆಗೆ ಮಾಳವಾಡರು ಬೆಂಗಳೂರಿಗೆ ಹೋಗಿ
ಧುರಚೆನ್ನರ 'ನನ್ನ ನಲ್ಲ' ಕವನ ಸಂಗ್ರಹವನ್ನು
ುದ್ರಿಸಿಕೊಂಡು ಬಂದ ಸಂಗತಿ ಇಲ್ಲಿ ಗಮನಾರ್ಹ
ಗಿದೆ. ಅದೇ ವರುಷ ಹುಬ್ಬಳ್ಳಿಯಲ್ಲಿ ನೆರವೇರಿದ
ಡ ಸಾಹಿತ್ಯ ಸಮ್ಮೇಳನದಲ್ಲಿ ಕೆ. ವಿ. ಪುಟ್ಟಪ್ಪನವರು
ಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಭಾಷಣ
ಳವಾಡರಿಗೆ ಸ್ಫೂರ್ತಿದಾಯಕವಾಗಿತ್ತು. ಅವರನ್ನು
ಚಯಿಸಿಕೊಳ್ಳಬೇಕೆನ್ನುವ ಉತ್ಸಾಹ ಮಾತ್ರ ಫಲಕಾರಿ
ಗಲಿಲ್ಲ. ಆ ದಿಸೆಯಲ್ಲಿ ಅವರು ಮುಂದಿನ
ರು ನಾಲ್ಕು ವರ್ಷ ಕಾಯಬೇಕಾಯಿತು. ಆಮೇಲೆ
ನೆಯವರೆಗೂ ಕುವೆಂಪು ಅವರ ಆತ್ಮೀಯ
ಹಿತರಲ್ಲಿ ಒಬ್ಬರಾದರು. ಹಳೆಯ ಮೈಸೂರು ಮತ್ತು
ತ್ತರ ಕರ್ನಾಟಕಕ್ಕೆ ಮೊದಲಿನಿಂದಲೂ ಅವರು ಸ್ನೇಹ
ತುವೆಯಾಗಿದ್ದರು.

ಒಂದು ಕಾಲಕ್ಕೆ ಕನ್ನಡದ ಗಾಳಿ ಕೂಡ ಆಡದ,
ನ್ಯ ಭಾಷೆಗಳ ಅಧ್ಯಾಪಕರ ಅಟ್ಟಹಾಸಕ್ಕೊಳಗಾದ ಈ
ಕಾರಿ ಬೃಹತ್ ಕಾಲೇಜು ಬರಬರುತ್ತ ಕನ್ನಡ
ಹಿತ್ಯ-ಸಂಸ್ಕೃತಿಯ ಭದ್ರಕೋಟೆಯಾಗುವಂತೆ ಶ್ರಮಿಸಿ
ವರಲ್ಲಿ ಆರ್. ವ್ಹಿ. ಜಹಗೀರದಾರ (ಶ್ರೀರಂಗ)
ಗೂ ಮಾಳವಾಡರು ಅಗ್ರಗಣ್ಯರೆನ್ನಬಹುದು.
ಡಾ|| ಡಿ. ಸಿ. ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಸಂದರ್ಭದಲ್ಲಿ, ಪ್ರೊ|| ವಿ. ಕೃ. ಗೋಕಾಕರು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿ (೧೯೫೪) ಬಂದಾಗ ಧಾರವಾಡದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮಹತ್ವ ಇನ್ನಷ್ಟು ಉಜ್ವಲಗೊಂಡು ರಾಷ್ಟ್ರವ್ಯಾಪಿಯಾಯಿತು. ಕಾಲೇಜಿನಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ವಿವಿಧ ಕಾರ್ಯರಂಗದಲ್ಲಿ ಈ ಮೊದಲೇ ಪ್ರವೇಶಿಸಿದ್ದ ಮಾಳವಾಡರಿಗೂ ಇದು ಅತ್ಯಂತ ಕ್ರಿಯಾಶೀಲ ದಶಕವಾಗಿತ್ತು.

* * *


೧೯೩೯ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ' ಗ್ರಂಥದಿಂದ ಪ್ರಾರಂಭವಾದ ಮಾಳವಾಡರ ಸಾಹಿತ್ಯಸೃಷ್ಟಿ, ವಿಮರ್ಶೆ, ಸಂಶೋಧನೆ, ಸಂಪಾದನೆ, ಜೀವನಚರಿತೆ, ಅಧ್ಯಾತ್ಮ ಸಾಹಿತ್ಯ, ಪ್ರವಾಸ ಸಾಹಿತ್ಯ, ವಿಚಾರ ಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಕೊಡಮಾಡಿದೆ. ೧೯೩೫-೩೯ರಷ್ಟು ಹಿಂದೆಯೇ ಅವರು ಮಾಡಿದ ಇನ್ನೊಂದು ಮಹತ್ವದ ಕಾರ್ಯವೆಂದರೆ, ಕನ್ನಡ ಗದ್ಯವು ಬೆಳೆದು ಬಂದ ಬಗೆಯನ್ನು ಗದ್ಯಶೈಲಿಯ ವಿವಿಧ ಸೊಬಗನ್ನು ತೋರಿಸಿಕೊಡುವ ದೃಷ್ಟಿಯಿಂದ 'ಗದ್ಯಮಾಲೆ' ಎಂಬ ಮೂರು ಸಂಕಲನಗಳನ್ನು ಸಿದ್ಧಗೊಳಿಸಲು ನಿರ್ಧರಿಸಿ, 'ಕನ್ನಡ ಗದ್ಯಮಾಲೆ-೧'ನ್ನು ಪ್ರಕಟಿಸಿದಾಗ ಅದು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತ ಸಂಕಲನವೆಂದು ಪರಿಗಣಿತವಾಗಿ, ಬೇರೆ ಬೇರೆ [illegible] ಕನ್ನಡ ಪ್ರದೇಶಗಳಲ್ಲಿ ಅದನ್ನು ಪಠ್ಯಗ್ರಂಥವೆಂದು ಬಹುಕಾಲ ಬಳಸಲಾಯಿತು.

ವಿಶ್ರಾಂತ ಜೀವನದಲ್ಲಿ ಪ್ರೊ|| ಮಾಳವಾಡರು ತಮ್ಮ ಅನೇಕ ಪುಸ್ತಕಗಳನ್ನು ತಾವೇ ಪ್ರಕಟಿಸಿದರು. ಈ ಉದ್ದೇಶಕ್ಕಾಗಿಯೇ 'ಸಾಹಿತ್ಯನಿಧಿ' ಎಂಬುದನ್ನು ಸ್ಥಾಪಿಸಿದರು. 'ಜಯಪ್ರಕಾಶ' ಎಂಬುದು ಶ್ರೀ ಶಾಂತಾದೇವಿ ಮಾಳವಾಡರು ನಡೆಸಿಕೊಂಡ ಪ್ರಕಾಶನ. ಈ ಪ್ರಕಾಶನದ ಐದಾರು ಗ್ರಂಥಗಳಿಗೆ ತಮ್ಮ ಪ್ರೀತಿಯ ಶಿಷ್ಯರಿಂದಲೇ ಮುನ್ನುಡಿ ಬರೆಯಿಸಿ ತಮ್ಮ ಶಿಷ್ಯ ವಾತ್ಸಲ್ಯವನ್ನು ಪ್ರಕಟಿಸಿದ್ದುಂಟು. ಇವುಗಳಲ್ಲಿ ನನ್ನ ಪಾಲಿಗೆ ಬಂದದ್ದು ವ್ಯಕ್ತಿ ಚಿತ್ರಗಳನ್ನು ವೈಚಾರಿಕ ಪ್ರಬಂಧಗಳನ್ನು ಒಳಗೊಂಡ ಅವರ ಕೃತಿ 'ಕಾಲವಾಹಿನಿ' (೧೯೬೮). ಈ ಅವಧಿಯಲ್ಲಿ ಅವರು ಕೈಗೊಂಡ ಒಂದು ಮಹತ್ವದ ಬರವಣಿಗೆಯೆಂದರೆ ಅವರ ಆತ್ಮಚರಿತ್ರೆ 'ದಾರಿ ಸಾಗಿದೆ.' ಅದರ ಮೊದಲ ಭಾಗ 'ಹಳ್ಳಿಯ ಹುಡುಗ' (೧೯೮೦) ಹದಿನಾರು

ಒಂದು ಸಂದರ್ಭ... ಕಿಕ್ಕಿರಿದ ಮನುಷ್ಯರ ಮಧ್ಯೆ
ಗದ್ದಲವಾಗಿ...
ಮತ್ತೊಂದು ಸಂದರ್ಭ... ಖಾಲಿಯಾಗಿ...
ಒಂಟಿಯಾಗಿ... ಶೂನ್ಯದಂತೆ ನೇತಾಡುತ್ತಾ...
ಕೆಲವು ಸಾಯಂಕಾಲಗಳು
ಎಡೆಬಿಡದ ನಿರೀಕ್ಷೆಗಳಲ್ಲಿ ಒಡೆದು
ಚುಚ್ಚಿಕೊಳ್ಳುತ್ತವೆ
ತುಟಿಗಳ ಮಧ್ಯೆ ಕೊಳಲು
ಭಿಕ್ಷುಕನಂತೆ ಅರಚುತ್ತಿರುವ ರಾತ್ರಿ
ನಿದ್ರೆ ಹಿಡಿಯದ ಒಂದು ಸನಾತನ ಹಿಂಸೆಯಲ್ಲಿ
ಒಂದೇ ಕನಸನ್ನು ಮತ್ತೆ ಮತ್ತೆ ಕಾಣುತ್ತಾ
ನಿಸ್ಸಹಾಯನಾಗಿ ಒಳಗೊಳಗೆ ಛಿದ್ರಗೊಳ್ಳುವೆನು

ಇವತ್ತು ಯಾರೋ ಹಟಾತ್ತಾಗಿ ಬಂದು
ನನ್ನಿಂದ ದೇಹವನ್ನು ಕಸಿದೊಯ್ಯುವರು
ನನ್ನಿಂದ ನಾನು ಕಳಚಿಹೋಗುವುದು ಹೇಗೋ
ತಿಳಿಯುತ್ತಾ ಇರುತ್ತದೆ.

ಒಂದು ಕದಲಲಾರದ ಸಮಯ
ರಕ್ತದ ಮುದ್ದೆಯಂತೆ ಗಡ್ಡೆಕಟ್ಟಿಕೊಂಡು ಹೋಗುತ್ತದೆ
ನನ್ನ ಐಲುತನ ಬೆಂಕಿಯಲ್ಲಿ ಹಾಕಿದರೆ
ಚಿಟಪಟ ಚಿಟಪಟವೆನ್ನುತ್ತದೆ
ಬಹುಶಃ ಇದು ಯುದ್ಧ ಸಂದರ್ಭ ಇರಬಹುದು
ಎಷ್ಟು ರಹಸ್ಯವಾಗಿ ಮೊಳೆತರೂ
ತಿಳಿಯುತ್ತಲೇ ಇರುತ್ತದೆ
ಮಧ್ಯಾಹ್ನ ಮುಳ್ಳುಕಂಟಿಯ ಮೇಲೆ
ಆರಹಾಕಿದ ಆಕಾಶ ಹರಿದುಹೋಗುತ್ತದೆ.



ಕೋಣೆಯಲ್ಲಿ ಕತ್ತಲು
ಆತ್ಮದಲ್ಲಿ ಯಾರೂ ದೀಪ ಇಡರು
ಒಳಗಿನ ದುಃಖವನ್ನು ತಾಕಲು ಯಾರೂ ಸಾಹಸಪಡರು
ಈಗಾಗಲೇ ಕನ್ನಡಿ ನನ್ನನ್ನು ಸ್ವೀಕರಿಸುತ್ತಿಲ್ಲ
ದಿನವೂ ಬಿದ್ದು ಹೋದ ಪ್ರತಿಬಿಂಬವನ್ನು
ಆರಿಸಿಕೊಳ್ಳುತ್ತಲೇ ಇರುವೆನು
-ಇದು
ಏನನ್ನೂ ಮಾತನಾಡದೇ ಹೋಗುವಷ್ಟು ಸುಲಭವಾಗಿ
ಏನನ್ನಾದರೂ ಮಾತನಾಡುವಂಥದ್ದು
ಒಂದು ವಾಂಛೆ -
ರಕ್ತದಲ್ಲಿ ಕರಗಿ ದೇಹದಲ್ಲಿ ಹುದುಗಿಹೋಗುತ್ತಿರುವಂತೆ
ಸಂಭಾಷಣೆ ಮೊದಲಾಗುತ್ತದೆ ನದಿಯ ಮೇಲೆ
ನನ್ನ ಆತಂಕವನ್ನು ಲಂಗರು ಹಾಕಿ
ದಡದಲ್ಲಿ ಕುಳಿತ ಮೇಲೆ
ದೋಣಿಯ ಕೆಳಗೆ ಗುಂಪುಗೂಡಿದ ನೆರಳುಗಳಂತೆ
ಮಾತನಾಡಿಕೊಳ್ಳುತ್ತಲೇ ಇರಬೇಕು
ಮೆಲ್ಲ ಮೆಲ್ಲಗೆ... ತುಂಡು ತುಂಡಾದ
ವಾಕ್ಯಗಳು ಒಣಗಿ ಹೋದ ಸೇವಂತಿ ಗಿಡಗಳು.

* * *

ದಿನವೂ ಪಕ್ಷಿ ರೆಕ್ಕೆಗಳ ಕೆಳಗೆ ಸೂರ್ಯೋದಯವಾಗುತ್ತದೆ
ಆದರೆ ಒಂದು ಕಪ್ ಕಾಫಿ ಕುಡಿಯುವುದರೊಳಗೆ
ಹೊರಟು ಹೋಗುತ್ತದೆ ಉದಯ
ಜೀವನವನ್ನು ಬೇಡಿಕೊಳ್ಳುವ ಆಯಾಸದಲ್ಲಿ
ಬಹುಶಃ... ನಿಶ್ಶಬ್ದ ಒಂದು ಋತುವು.
ನನ್ನ ನರಗಳಲ್ಲಿ ಜರಜರಾ ಒಂದು ಭಯಗೀತ
ಸಾರವತ್ತಾಗಿರುವುದನ್ನೆಲ್ಲಾ ಕಳಕೊಳ್ಳುತ್ತಿರುವ ಜ್ಞಾಪಕ...
ಗಾಢವಾದ ಪರಿಚಯಾತ್ಮಕ ಅನುಭವ ಯಾವುದೋ...
ವರ್ಷಾತೀತವಾಗಿ ಒದ್ದೆ ಮುದ್ದೆ ಆಗುತ್ತದೆ
ನೆಲವೆಲ್ಲಾ ಕಾಲುಗಳನ್ನು ಚಾಚಿಕೊಂಡರೂ
ನಿಂತರೆ ಆಕಾಶ ತಾಕಿ ಬೊಬ್ಬೆ ಏಳುತ್ತದೆ
ಆದರೂ ಇವತ್ತು ಎಲ್ಲೂ ಹೋಗೆನು ಕೆರಳಿ
ಪ್ರಪಂಚ ಪೂರಾ ಮುಳುಗಿದಂತೆ ಚಳಿ

ತೆಲುಗು ಮೂಲ: **ಅರುಣ್ ಬವೇರಾ** ಕನ್ನಡಕ್ಕೆ: **ಕೆ. ವಿ. ಚಂದ್ರಜ್ಯೋತಿ**
೨/೯೪೬, ಸ್ಟೂಡೆಂಟ್ ಬುಕ್ ಹೌಸ್, ಕೆ ಆರ್ ಬಡಾವಣೆ, ತುಮಕೂರು - [illegible]



ಧಾರವಾಡದ ಮನೆಯಲ್ಲಿ ಕುವೆಂಪು ದಂಪತಿಗಳೊಂದಿಗೆ ಮಾಳವಾಡ ದಂಪತಿಗಳು

ಯಸ್ಸಿನ ಅವಧಿಯ ನಿರೂಪಣೆ, ಆರು ಭಾಗಗಳನ್ನೊಳಗೊಂಡ, ಸುಮಾರು ಟುನೂರು ಪುಟಗಳ ಈ ಕೃತಿ ಪೂರ್ತಿಗೊಳ್ಳುವ ಕೊನೆಯ ಹಂತದಲ್ಲಿದ್ದಾಗಲೇ ಳವಾಡರು ಕಾಲವಶರಾದರು (೩೦-೦೮-೧೯೮೭). ಕೊನೆಯ ನೂರೈವತ್ತು ಗಳಷ್ಟನ್ನು ಅವರ ದಿನಚರಿ, ಟಿಪ್ಪಣಿಗಳು ಹಾಗೂ ಫೈಲುಗಳ ಆಧಾರದಿಂದ ಮತಿ ಶಾಂತಾದೇವಿಯವರು ಕೃತಿಯ ಸಾತತ್ಯಕ್ಕೆ ಭಂಗ ಬರದಂತೆ ಬರೆದು ರೈಸಿದರು. ಪ್ರೊ॥ ಮಾಳವಾಡರ ಎಂಬತ್ತನೆಯ ಹುಟ್ಟುಹಬ್ಬದಂದು, ೧೯೮೯ರಲ್ಲಿ ರ ಬಿಡುಗಡೆಯಾಯಿತು. (ಈ ಆತ್ಮಚರಿತ್ರೆ ಸುಮಾರು ಅರುವತ್ತು ವರ್ಷಗಳ ಧಿಯ ಕರ್ನಾಟಕದ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಜನಜೀವನಗಳ ಚರಿತ್ರೆಯೂ ಆಗಿದೆ.) ಇದರ ಬರವಣಿಗೆಯ ಕಾರ್ಯ ಅವರ ದಾಂಪತ್ಯಯೋಗಕ್ಕೆ ಒಂದು ಉತ್ತಮ ಕೇತವೆಂದು ಹೇಳಬಹುದು. ''ಪ್ರೊ॥ ಮಾಳವಾಡರ ಬಗ್ಗೆ ಎಷ್ಟೇ ಹೇಳಿದರೂ ದರೂ ಶಾಂತಕ್ಕನವರ ಉಲ್ಲೇಖವಿಲ್ಲದೆ ಅದು ಪೂರ್ಣವಾಗಲಾರದು. ಅವರಲ್ಲಿ ರನ್ನು ಬಿಟ್ಟು ಇನ್ನೊಬ್ಬರನ್ನು ಯೋಚಿಸುವದೂ ಆಗದ ಮಾತು'' ಎಂಬ ಮಾ. ನಾಯಕರ ಮಾತು ನೂರಕ್ಕೆ ನೂರರಷ್ಟು ಸತ್ಯ. ಶಾಲೆಯಲ್ಲಿ ಕಲಿತದು ಲ್ಲವಾದರೂ ಪ್ರೊ॥ ಮಾಳವಾಡರ ಪ್ರೋತ್ಸಾಹದಿಂದ ಓದು-ಬರೆಹವನ್ನು ಢಿಸಿಕೊಂಡು, ಮನೆಯಲ್ಲಿಯೇ ಹಿಂದಿಯನ್ನೂ, ತಕ್ಕಮಟ್ಟಿಗೆ ಇಂಗ್ಲಿಷನ್ನೂ ಕಲಿತು ಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಸಿಸಿದರು. ಸೃಜನಶೀಲ ಲೇಖಕಿಯಾಗಿ, ಕಥೆ, ದಂಬರಿ, ಶರಣಸಾಹಿತ್ಯ, ಜೀವನಚರಿತ್ರೆಗಳನ್ನಲ್ಲದೆ, ಗೃಹಾಲಂಕಾರ, ಪಾಕಶಾಸ್ತ್ರ ಮೊದಲಾದ ವಿಷಯಗಳನ್ನು ಕುರಿತು ಮೂವತ್ತಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿ ದರಿ ಎನಿಸಿದರು. ಸಾಹಿತ್ಯ ಸೃಷ್ಟಿ ಅವರ ವ್ಯಕ್ತಿತ್ವದ ಒಂದು ಮಜಲಾದರೆ, ಳೆಯರ ಸಂಘಟನೆ, ಅಕ್ಕನ ಬಳಗ, ಮಹಿಳಾ ಮಂಡಲ, ಲೇಖಕಿಯರ ಸಂಘ ದಲಾದವುಗಳಿಗೆ ಸಂಬಂಧಿಸಿದ ಸಾರ್ವಜನಿಕ ಸೇವೆ ಮತ್ತೊಂದು ಮಹತ್ವದ ಲು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ದಾನ ಚಿಂತಾಮಣಿ ಮಬ್ಬೆ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳ ಗೌರವಕ್ಕೆ ಅವರು ಪಾತ್ರರಾದರು. ಗಲಕೋಟೆಯಲ್ಲಿ ನಡೆದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ರು ಜನಮನ್ನಣೆ ಪಡೆದದ್ದು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಒಂದು ತ್ರಾರ್ಹ ಘಟನೆ ಎನ್ನಬಹುದು. ಇದನ್ನು ಅವರ ದಾಂಪತ್ಯಯೋಗಕ್ಕೆ ಸಂದ ವವೆಂದೂ ಭಾವಿಸಬಹುದು. ಶಾಂತಾದೇವಿಯವರಿಗೆ ಎಂಟು ಸಲ ಗರ್ಭಪಾತವಾಗಿ ಭವಿಸಿದ ನೋವನ್ನೂ ಇಲ್ಲಿ ನೆನೆಯಬಹುದು. ಅವರ ಚಿಕಿತ್ಸೆಯನ್ನು ಕೈಗೊಂಡ ಬಂಬದ ಡಾಕ್ಟರರು ""Mrs. Malwad's case is a problem of Medical ence" ಎಂದು ಹೇಳಿದ್ದರು. ಆ ಹೇಳಿಕೆ ಕೊನೆಗೂ ನಿಜವಾಗಿಯೆ ಪರಿಣಮಿಸಿತು.

* * *

ಪ್ರೊ॥ ಮಾಳವಾಡರ ಸೇವೆ ಎಂದೂ ಅಧ್ಯಾಪನಕ್ಕಷ್ಟೇ ಸೀಮಿತವಾಗಿರದೆ ರವಾಡದ ಕನ್ನಡ ಸಂಶೋಧನ ಸಂಸ್ಥೆಯ ಗೌರವ ನಿರ್ದೇಶಕತ್ವ, ವಿದ್ಯಾರ್ಥಿ ಕ್ಷಣಾಧಿಕಾರಿ, ಪ್ರಾಚಾರ್ಯ, ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದ ರಕ ನಿರ್ದೇಶಕ – ಇತ್ಯಾದಿಗಳೂ ಅವರ ಅನುಭವದ ಲಾಭವನ್ನು ಪಡೆದಿವೆ. ಂಬಯಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿ, ಕನ್ನಡ ಅಭ್ಯಾಸ ನಿಯಾಮಕ ಮಂಡಳ, ವಿಶ್ವವಿದ್ಯಾಲಯದ ಸೆನೇಟ್, ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ – ಇವೇ ಮೊದಲಾದವುಗಳ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಕರ್ನಾಟಕ ಏಕೀಕರಣ, ಧಾರವಾಡ ಆಕಾಶವಾಣಿ ಕೇಂದ್ರ, ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿಯೂ ಅವರು ಯಾವಾಗಲೂ ಮುಂಚೂಣಿಯಲ್ಲಿದ್ದರು. ೧೯೪೬ರಲ್ಲಿ ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಬಿ. ಜಿ. ಖೇರ್ ಅವರನ್ನು ಭೆಟ್ಟಿಯಾಗಿ ಮನವಿ ಸಲ್ಲಿಸಿದ 'ಕರ್ನಾಟಕ ವಿದ್ಯಾಪೀಠ ಸಮಿತಿ'ಯ ಕಾರ್ಯದರ್ಶಿಯಾಗಿದ್ದ ಮಾಳವಾಡರು ಅದೇ ಸಂದರ್ಭದಲ್ಲಿ ರಚಿಸಿದ್ದ 'ಕರ್ನಾಟಕ ವಿಶ್ವವಿದ್ಯಾಲಯ' ಎಂಬ ಪುಸ್ತಿಕೆ ಮಹತ್ವದ ಅಂಶಗಳನ್ನು ಒಳಗೊಂಡಿದ್ದಿತು, ಕನ್ನಡ ಸಾಹಿತ್ಯ ಪರಿಷತ್ತು ಅವರ ಸಲಹೆಗಳಿಗೆ ಮನ್ನಣೆ ನೀಡುತ್ತಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘವಂತೂ ಅವರ ಸಾಂಸ್ಕೃತಿಕ ಚಟುವಟಿಕೆಗಳ ಆಡುಂಬೊಲವಾಗಿದ್ದಿತು. ಅಖಿಲ ಭಾರತ ಪಿ.ಈ.ಎನ್. ಕೇಂದ್ರ ಹಾಗೂ ಪ್ರಾಚ್ಯವಿದ್ಯಾಪರಿಷತ್ತುಗಳು ಭಾರತದ ಇತರ ಪ್ರಾಂತಗಳ ಲೇಖಕರ, ವಿದ್ವಾಂಸರ ಸ್ನೇಹವನ್ನೂ ಆಯಾ ಭಾಷಾ ಸಾಹಿತ್ಯಗಳ ಪರಿಚಯವನ್ನೂ ಒದಗಿಸಿದವು. ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ಸಲಹಾ ಸಮಿತಿ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಥಮ ಸಮಿತಿಯ ಸದಸ್ಯರಾಗಿದ್ದರು. ಭಾರತೀಯ ಜ್ಞಾನಪೀಠದ ಪ್ರಥಮ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿಯೂ ಅವರು ಕಾರ್ಯಗೈದರು – ಇವೆಲ್ಲವುಗಳ ಚಟುವಟಿಕೆಗಳಲ್ಲಿ ಅವರು ತೋರಿಸುತ್ತಿದ್ದ ಆಸ್ಥೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸ್ಥಾಪನೆಯ ಆರುನೂರು ವರ್ಷಗಳ ಸ್ಮಾರಕೋತ್ಸವದ ಸಾಹಿತ್ಯೋತ್ಸವ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯಕ್ರಮ ನಿರ್ವಹಿಸಿದ್ದು ಅವರಿಗೆ ಹೆಚ್ಚಿನ ತೃಪ್ತಿಯನ್ನು ತಂದುಕೊಟ್ಟದ್ದಿತು. ಅಂದು ಬಿ.ಎಂ.ಶ್ರೀ.ಯವರು ಆ ಸಮಾರಂಭದಲ್ಲಿ ತಮ್ಮ 'ಕನ್ನಡ ತಾಯ್ ನೋಟ' ಕವಿತೆಯನ್ನು ಭಾವಪೂರ್ಣವಾಗಿ ವಾಚನಮಾಡಿ ಸಭಿಕರಲ್ಲಿ ರೋಮಾಂಚನವನ್ನುಂಟುಮಾಡಿದ್ದನ್ನು 'ದಾರಿ ಸಾಗಿದೆ' ಕೃತಿಯಲ್ಲಿ ಸಂಭ್ರಮದಿಂದ ಉಲ್ಲೇಖಿಸಿದ್ದಾರೆ. ಇಂಥ ಅನೇಕ ಘಟನೆಗಳನ್ನು, ಸನ್ನಿವೇಶಗಳನ್ನು ಅವರ ಆತ್ಮಚರಿತ್ರೆ ಒಳಗೊಂಡಿದ್ದು, ಕನ್ನಡ ಲೇಖಕರ ಅಂದಿನ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವ ಇನ್ನೊಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಮಾಳವಾಡರು ಹಾಯಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಗಳಗನಾಥರ ಕಾದಂಬರಿಗಳನ್ನೋದಿ ತಮ್ಮ ವಾಚನಾಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರನ್ನು ನೋಡಿರದಿದ್ದರೂ ಅವರ ಬಗ್ಗೆ ಪೂಜ್ಯಭಾವನೆ ತಾಳಿದ್ದರು. ಒಂದು ದಿನ ಮಾಳವಾಡರು ಕಾಲೇಜಿನ ಕೆಲಸ ಪೂರೈಸಿ ಮನೆಗೆ ವಿಶ್ರಾಂತಿಗೆಂದು ತೆರಳಿದ ಸಂದರ್ಭದಲ್ಲಿ ಬಡಕಲು ದೇಹ, ಮಾಸಿದ ಬಟ್ಟೆ, ಬೆಳೆದ ಗಡ್ಡ, ದೈನ್ಯ ಮುಖಮುದ್ರೆಯುಳ್ಳ ಮುದುಕರೊಬ್ಬರು ಭಾರವಾದ ಗಂಟನ್ನು ತಲೆಯ ಮೇಲೆ ಹೊತ್ತುಕೊಂಡು ಅವರ ಮನೆಯ ಬಾಗಿಲಿಗೆ ಬಂದರು. ಅವರೇ ಗಳಗನಾಥರೆಂದು ತಿಳಿದಾಗ ಅವರಿಗೆ ಆಶ್ಚರ್ಯದೊಂದಿಗೆ ವ್ಯಥೆಯೂ ಆಯಿತು. ಪತ್ರಿಕೆ, ಪುಸ್ತಕ



ಪ್ರೊ॥ ಮಾಳವಾಡರ ಷಷ್ಟ್ಯಬ್ದಿ ಸಮಾರಂಭದಲ್ಲಿ
ಪ್ರೊ॥ ವಿ. ಕೃ. ಗೋಕಾಕ ಹಾಗೂ ಡಾ॥ ಆರ್. ಸಿ. ಹಿರೇಮಠ

ಕಟಣೆಗಳಿಂದಾಗಿ ಮಾಡಿದ ಸಾಲವನ್ನು ತೀರಿಸಲೆಂದು ಗ ಗಳಗನಾಥರು ಪುಸ್ತಕಗಳ ಮೂಟೆಯನ್ನು ತಲೆಯ ಲೆ ಹೊತ್ತುಕೊಂಡು ಮನೆಮನೆಗೆ ಹೋಗಿ ಪುಸ್ತಕ ರಾಟ ಮಾಡಲು ತೊಡಗಿದ್ದರು. ಅವರನ್ನು ಉಪಚರಿಸಿ, ಲೇಜಿನ ಲೈಬ್ರರಿಗಾಗಿ ಹಾಗೂ ಸ್ವಂತಕ್ಕಾಗಿ ಕೆಲವು ಸ್ತಕಗಳನ್ನು ಕೊಳ್ಳುವ ಮೂಲಕ ತಮಗೆ ಸಾಧ್ಯವಿದ್ದ ಶವನ್ನು ಆ ಹಿರಿಯ ಸಾಹಿತಿಗೆ ಒದಗಿಸಿದ ಸಂತಸ ಾಳವಾಡರಿಗಾದದ್ದು ಸಹಜವೇ ಆಗಿದೆ.


೧೯೫೦ರಲ್ಲಿ ಧಾರವಾಡ ಬಾನುಲಿ ಕೇಂದ್ರ ರಂಭವಾದಾಗ ಕೇಂದ್ರದ ನಿಯೋಜಿತ ಮುಖ್ಯಾಧಿಕಾರಿ ್. ಡಿ. ವಾಕನೀಸ್ ಮರಾಠಿ ಭಾಷಿಕರಾಗಿದ್ದು ಕನ್ನಡ ಧ್ಯಾಪಕರಾಗಿದ್ದ ಪ್ರೊ|| ಮಾಳವಾಡರೊಂದಿಗೆ ಟವರ್ತಿಯಾಗಿ ಕಾರ್ಯಕ್ರಮಗಳ ಸಂಯೋಜನೆಯಲ್ಲಿ ವರ ಸಲಹೆಗಳನ್ನು ಪದೇಪದೇ ಪಡೆದುಕೊಳ್ಳುತ್ತಿದ್ದರು.

* * *

ನಂತರದ ವರ್ಷಗಳಲ್ಲಿ ಸಾರ್ವಜನಿಕ ಸಾಹಿತ್ಯ ಯದಲ್ಲಿ ಕಳಕಳಿಯ ಸೇವಾ ಭಾವನೆ ಹಿಂದಾಗಿ ರಾಜಕೀಯ ವ್ಯಾಪಾರಿ ಮನೋಭಾವ ಬಲವಾಗ ತೊಡಗಿದ್ದನ್ನು ಕಂಡು ಮಾಳವಾಡರು ಅವುಗಳಿಂದ ದೂರವಿರ ಡಗಿದರು. ಇದಕ್ಕೊಂದು ಪ್ರಬಲ ಕಾರಣವೂ ಇತ್ತು. ೧೯೫೮ರಿಂದ ೧೯೬೮ರ ವರೆಗೆ ಾಳವಾಡರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ದಸ್ಯರಾಗಿದ್ದರು. ಇದಕ್ಕೆ ಪೂರ್ವದಲ್ಲಿಯೇ ಮಾಸ್ತಿಯವರ 'ಚೆನ್ನಬಸವ ನಾಯಕ' ದಂಬರಿ ಭಾರತದ ಇತರ ಭಾಷೆಗಳಿಗೆ ಭಾಷಾಂತರಕ್ಕೆ 'ಸೂಚಿತ'ವಾಗಿತ್ತು. ಆ ಚನೆಯು ಸಾರ್ವಜನಿಕರಲ್ಲಿ ತೀವ್ರವಾದ ವಿವಾದಕ್ಕೆ ಆಸ್ಪದವಾಗಿತ್ತು. ಪ್ರಮುಖ ತಿಹಾಸಿಕ ಆಧಾರಗಳಿಗೆ ಅದು ಅನುಗುಣವಾಗಿಲ್ಲ ಎಂಬ ಕಾರಣದಿಂದ ವಿರೋಧ ಕ್ತವಾಗಿತ್ತು. ('ದಾರಿ ಸಾಗಿದೆ' ಆತ್ಮಚರಿತ್ರೆಯಲ್ಲಿ ಈ ಬಗ್ಗೆ ಇಪ್ಪತ್ತು ಪುಟಗಳ ರವಣಿಗೆಯನ್ನು ಇವರು ಮುಕ್ತ ಮನಸ್ಸಿನಿಂದ ಪ್ರತಿಪಾದಿಸಿದ್ದಾರೆ). 'ಸುಹೃದ್ಭಾವ ಳೆಯುವದೆಂಬ ಭರವಸೆ'ಯಿಂದ ಮೂಡಿಬಂದ ಸಮತೋಲನ ದೃಷ್ಟಿ, ಸಭ್ಯ ಡಿಗಳ ತಮ್ಮ ಸಂಯುಕ್ತ ಪ್ರಕಟಣೆ – ಕರ್ನಾಟಕದ ವಿವಿಧ ಕೋಮುಗಳಿಗೆ ಸೇರಿದ ಟು ಜನ ಲೇಖಕರ ಅಂಕಿತದಲ್ಲಿ ರೂಪುಗೊಂಡ ಮನವಿ – ಯನ್ನು ಇತ್ತಂಡದವರೂ ಟ್ಟುಕೊಳ್ಳದೆ ಅವರನ್ನು ನಿಂದನೆಗೊಳಗುಮಾಡಿದ್ದರು. ಈ ರೀತಿಯ ಸಾಹಿತ್ಯಿಕ-ರ್ವಜನಿಕ ಸಂಬಂಧಗಳಲ್ಲಿ ಹೊಂದಿಕೊಳ್ಳಲಾರದವ (misfit) ಎಂದು ಅವರಿಗೆ ನವರಿಕೆಯಾಯಿತು. ಈ ಮೊದಲೇ ಮೂಡಿದ್ದ ಆಧ್ಯಾತ್ಮಿಕ ಒಲವು ಹಾಗೂ ಸಾಧನೆ ಂದ ಬಾಳಿಗೆ ಹೊಸ ದೃಷ್ಟಿಯನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನ ಅವರದಾಯಿತು. ೧೯೪೫ರ ಕೊನೆಯ ಭಾಗದಲ್ಲಿ ಮಧುರಚೆನ್ನರ ಪ್ರೇರಣೆಯಿಂದ ಮಾಳವಾಡರು ಥಮಸಲ ಅರವಿಂದಾಶ್ರಮವನ್ನು ಸಂದರ್ಶಿಸಿದರು. ಅಂದಿನಿಂದ ಸುಮಾರು ಾವತ್ತೈದು ವರ್ಷ ಅವರು ಪಾಂಡಿಚೆರಿ ಪ್ರಯಾಣ ಕೈಗೊಳ್ಳುತ್ತ ಅಲ್ಲಿ ನಾಲ್ಕೈದು ರ ಮನೆಯವರ ಜೊತೆಗೆ ವಾಸಿಸುವ ರೂಢಿ ಇತ್ತು. ''ಶಿವಶರಣರ ಬೋಧೆಯಲ್ಲಿ ನೆಮ್ಮದಿಯ ಹಾದಿ ಸೂಚಿತವಾಗಿದೆಯೆಂಬುದು ನಿಜ. ಆದರೆ ಅದನ್ನು ವಾಸ್ತವವಾಗಿ ಧಿಸಿಕೊಳ್ಳುವ ಪ್ರಯೋಗಶಾಲೆಯಾಯಿತು ಆಶ್ರಮವು ನಮಗೆ'' ಎನ್ನುತ್ತಿದ್ದರು ಾಳವಾಡರು. ಅರವಿಂದಾಶ್ರಮದ ಸ್ವರೂಪ, ಕಾರ್ಯ ಯೋಜನೆ, ಅನುಷ್ಠಾನಗಳ ವರಗಳನ್ನು ತಮ್ಮ 'ಅರವಿಂದ ಸಂಗಮ' ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಅರವಿಂದರು ಗೂ ಮಾತೆಯವರ ವಿಚಾರಧಾರೆಯನ್ನು ಬೇರೆ ಕೆಲವು ಗ್ರಂಥಗಳಲ್ಲಿ ಸುಲಭ ರಿಯಲ್ಲಿ ಅವರು ವಿವರಿಸಿದ್ದಾರೆ. ಅವರ ಪ್ರಕಾರ ಅರವಿಂದಾಶ್ರಮವು ಬಾಳಿನಿಂದ ಲಾಯನವನ್ನು ಬೋಧಿಸುವದಿಲ್ಲ. ಮಾನವೀಯ ಬಾಳಿನ ಮಧ್ಯದಲ್ಲಿಯೇ ದೈವೀಪ್ರಜ್ಞೆ ಕಟವಾಗಬೇಕೆಂಬುದು ಅಲ್ಲಿಯ ಸಂದೇಶವಾಗಿದೆ. ಯಾವುದೇ ಬಗೆಯ ರ್ಮಿಕ ವಿಧಿವಿಧಾನ, ದೀಕ್ಷೆ ಇತ್ಯಾದಿ ಅಲ್ಲಿ ಇಲ್ಲ. ಪರಮಾತ್ಮನ ಅನುಸಂಧಾನವನ್ನು ರಿತು ಯಾರೂ ಯಾವುದೇ ಕ್ರಮವನ್ನು, ಧರ್ಮವನ್ನು ಅನುಸರಿಸಬಹುದು.

* * *

೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ೮೫ರಲ್ಲಿ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳಿಂದ



ಅದಿರುಗುಡ್ಡಕ್ಕಿಂತ ಈ ಆರೋಪ ಪಟ್ಟಿಯೇ
ಇನ್ನೂ ಎತ್ತರವಾಗಿ ಕಾಣ್ತದೆಯಲ್ರೀ !
ಇದನ್ನು ಓದಿ ತೀರ್ಪು ಕೊಡಲು ಸಾಧ್ಯವೆ...?

ಅವರನ್ನು ಗೌರವಿಸಲಾಯಿತು. ಆದರೆ ಮಾಳವಾಡರಿಗೆ ಇದಾವುದರ ಕಡೆಗೂ ಲಕ್ಷ್ಯವಿರಲಿಲ್ಲ. ತಮ್ಮ 'ಪ್ರಶಾಂತ' ಗೃಹದಲ್ಲಿ ಪತ್ನಿ ಶಾಂತಾದೇವಿಯವರ ಜೊತೆಗೆ ಸದಾ ವ್ಯಾಸಂಗನಿರತರಾಗಿ, ಸಾಧ್ಯವಿದ್ದಷ್ಟು ಬರವಣಿಗೆಯನ್ನು ಮಾಡುತ್ತ ಜೀವನ - ಸಾಹಿತ್ಯ - ಅಧ್ಯಾತ್ಮ - ದಾಂಪತ್ಯಗಳಲ್ಲಿ ಪರಸ್ಪರ ಪೂರಕವೆನಿಸಿದ್ದರು. ಹಡೆದ ಮಗನಲ್ಲದಿದ್ದರೂ ಪಡೆದ ಮಗ (ತಮ್ಮನ ಮಗ ಚೆನ್ನಬಸವ) ಮನೆಯಲ್ಲಿದ್ದು, ಸೊಸೆ (ಲಲಿತಾ) ಮನೆತುಂಬಿ, ಮಾಳವಾಡ ದಂಪತಿಗಳ ಉಡಿಯಲ್ಲಿ ಮೂವರು ಮೊಮ್ಮಕ್ಕಳನ್ನು (ಮೀರಾ, ಚಿನ್ಮಯಿ, ಅರವಿಂದ) ನೀಡಿರುವಾಗ ಅವರಿಗೆ ಯಾವ ಕೊರತೆಯೂ ಎನಿಸಿರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಹಂಬಲಿಸಬಹುದಾದ, ರಾಜ್ಯ ಸರಕಾರ ಕೊಡಮಾಡಿದ ಮಾಸಿಕ ಗೌರವಧನವನ್ನು ನಿರಾಕರಿಸಿದ್ದು ಮಾಳವಾಡರ ನಿಸ್ಪೃಹತೆಗೆ ಸಾಕ್ಷಿಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದತ್ತಿ ಉಪನ್ಯಾಸಕ್ಕಾಗಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಪ್ರಶಸ್ತಿಯಾಗಿ ಒಂದು ಮೊತ್ತದ ಹಣವನ್ನು ನೀಡಿ, ಕನ್ನಡ ಸಾಹಿತ್ಯ ಸಂವರ್ಧನೆಯ ಬಗೆಗಿನ ತಮ್ಮ ಕಳಕಳಿಯನ್ನು ಕಾರ್ಯರೂಪಕ್ಕಿಳಿಸಿ ಕೃತಾರ್ಥರಾದರು. ''ಕಾಯದ ಕಳವಳಕ್ಕಂಜಿ 'ಕಾಯಯ್ಯ' ಎನ್ನೆನು; ಜೀವನೋಪಾಯಕ್ಕಾಗಿ 'ಈಯಯ್ಯಾ' ಎನ್ನೆನು'' ಎಂಬ ಬಸವವಾಣಿಯನ್ವಯ ತಮ್ಮ ಜೀವನವನ್ನು ರೂಪಿಸಿಕೊಂಡ ಮಾಳವಾಡರು, ''ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ'' ನ್ಯಾಯನಿಷ್ಠುರರಾಗಿ ಬಾಳಿದರು.

ಸ್ನೇಹಿತರ ಹಾಗೂ ಸಾಹಿತ್ಯಾಸಕ್ತರ ಅಪೇಕ್ಷೆಯಂತೆ ಮಾಳವಾಡರ ಅರವತ್ತನೆಯ ಹುಟ್ಟುಹಬ್ಬವನ್ನು ಧಾರವಾಡದಲ್ಲೂ ಎಪ್ಪತ್ತರ ಹುಟ್ಟುಹಬ್ಬವನ್ನು ಬೆಂಗಳೂರಿನಲ್ಲೂ ಸಾರ್ವಜನಿಕ ಸಮಾರಂಭವಾಗಿ ಆಚರಿಸಲಾಯಿತು. ಧಾರವಾಡದ ಸಮಾರಂಭದಲ್ಲಿ ಅವರು ಹೇಳಿದರು : ''ನಾನು ಜನಪ್ರಿಯತೆ ಗಳಿಸಲಿಲ್ಲ ಎಂಬುದು ನನಗೆ ಗೊತ್ತಿದೆ. ಆ ದಿಸೆಯಲ್ಲಿ ನಾನು ಸಾಗಲಿಲ್ಲ. ಕರ್ತವ್ಯನಿಷ್ಠೆ, ನ್ಯಾಯಸಮ್ಮತ ಸ್ಪಷ್ಟೋಕ್ತಿ – ಈ ದೃಷ್ಟಿಯಿಂದ ಕೆಲಮಟ್ಟಿಗೆ ನಿಷ್ಠುರವಾದ ಹಾದಿಯನ್ನೇ ನಾನು ತುಳಿದೆ.'' ಅವರ ಭಾಷಣ ಹಾಗೂ ಬರೆಹಗಳಲ್ಲಿ ಹೆಚ್ಚಿನ ವ್ಯತ್ಯಾಸವಿರುತ್ತಿರಲಿಲ್ಲ.

೭೩ನೆಯ ಹುಟ್ಟುಹಬ್ಬದಂದು (೧೯೮೩) 'ವ್ಯಾಸಂಗ' ಹೆಸರಿನ ಅಭಿನಂದನ ಗ್ರಂಥವನ್ನು ಧಾರವಾಡದಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ಮಾಳವಾಡರಿಗೆ ಸಲ್ಲಿಸಲಾಯಿತು. ವಿಮರ್ಶಕ ಮಾಳವಾಡರ ಅಭಿರುಚಿಗೆ ತಕ್ಕಂತೆ ಆ ಗ್ರಂಥದಲ್ಲಿ, ಭಾರತೀಯ ಹಾಗೂ ಪಾಶ್ಚಾತ್ಯ ವಿಮರ್ಶಾ ಪರಿಕಲ್ಪನೆಗಳು ಮತ್ತು ಸಮಸ್ಯೆಗಳನ್ನು ಕುರಿತಂತೆ ಸಂಪಾದಕರಾದ ಪ್ರೊ|| ಸದಾನಂದ ಕನವಳ್ಳಿಯವರು ವಿದ್ವತ್ಪೂರ್ಣ ಲೇಖನಗಳನ್ನು ಬರೆಯಿಸಿ ವಿಶಿಷ್ಟ ಮಾದರಿಯನ್ನು ಹಾಕಿಕೊಟ್ಟರು. ಈ ಗ್ರಂಥ ಯಾವ ಅಭಿಮಾನಿ ಸಂಘವನ್ನು ಕಟ್ಟಿಕೊಂಡಿರದ, ವ್ಯಾಸಂಗಪ್ರಿಯರಾದ ಪ್ರೊ|| ಮಾಳವಾಡರಿಗೆ ಬೆಲೆಯುಳ್ಳದ್ದಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ.

ಧಾರವಾಡವೆ ಮಾಳವಾಡರ ಜ್ಞಾನಕ್ಷೇತ್ರ ಹಾಗೂ ಕರ್ಮಭೂಮಿಯಾಗಿದ್ದರಿಂದ, 'ಬೇಂದ್ರೆಯವರಂತೆ ನನಗೂ ಧಾರವಾಡ ತಾಯಿಯ ವಾತ್ಸಲ್ಯ ಒಡಗೂಡಿ ಬಂದಿತು' ಎಂಬ ಅವರ ಹೇಳಿಕೆ ಅರ್ಥಪೂರ್ಣವಾಗಿದೆ. ವಸ್ತುನಿಷ್ಠ ದೃಷ್ಟಿಯಿಂದ ಅವರು ಜಗತ್ತನ್ನೂ ಉಳಿದವರನ್ನೂ ನೋಡಿದಂತೆ ಆ ದೃಷ್ಟಿಯನ್ನು ತಮ್ಮ ಮೇಲೂ ಹಾಯಿಸಿಕೊಳ್ಳಲು ಅವರು ಮರೆಯಲಿಲ್ಲ. ಒಂದೆಡೆ ಅವರು ಹೇಳಿದ್ದಾರೆ: ''ನನ್ನ ಓದು ವಿಸ್ತಾರವಾದದ್ದು; ಆಳ ಇರಲಿಕ್ಕಿಲ್ಲ. ಈ ಮಾತು ನನ್ನ ಬರೆಹಕ್ಕೂ ಅನ್ವಯಿಸಬಹುದು. ನನ್ನ ಚೇತನವೇ ಹಾಗಿರಬಹುದು. ಈ ಬಗೆಗೆ ನಾನು [illegible] ಪರಮಾತ್ಮ [illegible] ಶಕ್ತಿಯನ್ನು [illegible] ಪರಿಶ್ರಮದಿಂದ ಉಪಯೋಗಿ[illegible] ಸಮಾಧಾನ [illegible] ನನ್ನ ದುಡಿಮೆಯೆ ನನಗೆ ಸಂತೋಷವನ್ನು ನೀಡಿದೆ.'' ಈ ಪ್ರವೃತ್ತಿಯೇ [illegible] ದೊಡ್ಡವರನ್ನಾಗಿಸಿತು.

ಡಾ|| ಚೆನ್ನವೀರ ಕಣವಿ
[illegible], ಕಲ್ಯಾಣ ನಗರ, ಧಾರವಾಡ - [illegible]

ಕವಡೆ ಕನ್ಯೆಯು ಮಹಾಕೂಟ!



೧. [illegible] ಮುಕ್ಕುವಂತೆ ಬಿಟ್ಟಿದ್ದ ಕನ್ಯಾ[illegible]
[illegible]
ಹುಟ್ಟಬಾರದೆಡೆ ಕಚಗುಳಿ ಹುಟ್ಟಿ ದಿಗಿಲನ್ನು ಮೆಟ್ಟಿ
ಬೀದಿಗೋಡಿ ಬಂದೆ; ಕತ್ತಲ ಪೊದೆಯ ತುಂಬಾ ಬೆಳಕಿನ ಹೂಗಳು
ಗಾಳಿ ಪಲ್ಲಂಗದಲ್ಲಿ ಮಾಂಜೆ ನಿರ್ಮಾಯೆಯೊಂದಿಗೆ ಸೆಣಸುತ್ತ
ಮಾಳಿಗೆಯ ಅಂಚಿಂದ ಕರೀ ಬೆಕ್ಕೊಂದು ಯಾಮಾರಿ
ಬೀಳಬೀಳುತ್ತ ಹಂಸ ಅರಿವೆಯಾಯಿತೆಂಥ ಚೆಂದ!
ಕಾಳ ಬೆಕ್ಕು ಕಳ್ಳ ಬೆಕ್ಕು ಮಾಳ ಬೆಕ್ಕು ಮಳ್ಳ ಬೆಕ್ಕು
ಕನ್ನಡಿಯ ಚೋದ್ಯಕ್ಕೇ ಕನ್ನಡಿ ಹಿಡಿವ ವಿಸ್ಮಯ!
ಥರಥರಗುಟ್ಟಿದ ಕನ್ಯಾನೆತ್ತರ ನದಿಗಳಲ್ಲಿ
ಕಾಮ ಮದದ ಕಸ್ತೂರಿ ಜಂತು ಮೋಕ್ಷಾ[illegible] ಈಜತೊಡಗಿತು

ಮೀಟಬಾರದ ಎದೆಯದು; ಮೀಟಿಯೇ ಮೀಟಿತು
ಮೀಟಬಾರದ ಹೊತ್ತದು ; ಮೀಟಿಯೇ ಮೀಟಿತು
ಮೀಟಬಾರದ ತಲ್ಲಣವದು ; ಮೀಟಿಯೇ ಮೀಟಿತು
ರಸ ವಿಶೇಷ ರಂಕು ಮಾಟದ ಮಾರ್ಮಿಕ ತಂತು
ಎಚ್ಚರದೆದೆಗೆ ಜಾಗರಿಸುವ ಮಂತ್ರದಗುಳಿಯನಿಕ್ಕಿ
ಕಾಗುಣಿತದ ಹಮ್ಮು ತರಿದು ಕೆರಗಳಾಗಿಸಿ ಮೆಟ್ಟಿತು
ಲೋಕದ ಮೇಲೊಂದು ಲೋಕವೇ ಬಂದು ಕುಂತು
ರಾಗಗಳೇ ರಜಸ್ವಲೆಯಾಗುವಂತೆ ರಾಗಿಕಲ್ಲು ಬೀಸಿತು
ಪದಗಳನ್ನರೆಯುತ್ತ ಹುಚ್ಚುಗಾಳಿದ್ದು ಕಣ್ಣುಗಳ ಮೇಲೆಲ್ಲಾ
ಕನಸಿನ ಧೂಳು ಧೂಳು ರಂಗಿನಮಲು!
ಅರಿವಾಗದೋಪಾದಿಯಲ್ಲಿ ಅರಿವೆಯಾದಳು ತಾನೇ
ಭೋಗ ವ್ಯಸನಿದೇಹ ಬೂರುಗದ ಜುಂಜಿಗಿಂತಲೂ ಹಗುರ
ನೆಲ ಒರೆಸಿ ಚಿಂದಿಯಾದರೂ
ಚಿಂತಿಸದೆ ಬತ್ತಿ ಹತ್ತಿ ಉರಿವ ಚಂದ್ರಸುಖದ ಥರ

ಕಂಕಾಳಿಯ ಎದುರಲ್ಲಿ ಕವಡೆ ಹಾಕಿಸಲೆಂದೇ
ಕಣ್ಣ ಜಾತ್ರೆಯ ಕದ ತೆರೆದು
ಮಹಾಕೂಟದ ಮುಕ್ಕಣ್ಣನ ಜಾತ್ರೆಗೆದ್ದಳು

೨. ತನಿ ಹೂಗಳು ಗಂಧವ ಮೆಲ್ಲುತ್ತ ಮತ್ತನ್ನು ಚೆಲ್ಲುತ್ತಿದ್ದವು
ಹಮ್ಮೀರನೆಡೆ ಬಾಣಲಿಯಲ್ಲಿ ಮಾಯೆ ಮಿಡುಕಿ ಮಸಿಯಾಗುತ್ತಿತ್ತು
ಏಳಾನೆ ಕದಗಳ ಅವನೆವೆಗಳನ್ನು ಪುಟಪೂರ ತೆರೆದಳಲ್ಲ
ಆ ಜವ್ವನೆ-ಎರಗೆರಗಿ ನವೆದ ಜೀವವ ಮೇಲೆ ರವ್ವರವ್ವನೆ
ಅಲಿಪಿ ಕಾಮದಚ್ಚರಗಳ ಕೊರೆಕೊರೆದು
ತೇರಿಗೆ ತೆರಳ ಬಾರೆಂದು ನಿರೂಪವ ನೆಟ್ಟು ಹೋದಳಲ್ಲ?!
ಚಣ ಸಿಲ್ಕದ ಚೆಂಬಳೆಗಳ ನಾದ ತೂಬು ತೆರೆದೇ ಬಿಟ್ಟಳಲ್ಲ?
ಗಮ್ಮೆನ್ನುವ ಗಾರುಡಿಯ ಗಳಿಗೆ ನಂಬಿನೋಡಲೇ?
ಹಮ್ಮೀರ ನಾ - ಜಾರ ಜೋಗಿಯಂತೆರಗಿ ಬಿಡಲೇ?
[illegible]
[illegible]
[illegible]
[illegible]!

೩. ಜರಿ ಅರಿವೆ ತೊಟ್ಟಂತೆ ಜಾತ್ರೆಯ ತುಂಬಾ ಗಾಳಿ ಕಾಳಿ
ಇಬ್ಬರು ನಿಂತೆಡೆ ಒಗಟಿನ ಹಂದರ
ಮಂದಿ ಕುಂತೆಡೆ ಸ್ವಪ್ನ ಮಾಯಾ ಮಂದಾರ
ದೂರ ನಿರ್ಜನ ಬಿದಿರು ಪೊದೆಯಲ್ಲೂ
ಬೆದೆ ಹತ್ತಿದ ಒಂಟಿದೆಯ್ಯದ ಹೂಂಕಾರ!

ಬಿಳಿಲುಗಳ ನಡುವೆ ಸ್ವಪ್ನ ಕೌದಿಯನ್ನೆ ಹಾಸಿ
ಶುಕಭಾಷಾ ಕೋವಿದ ಕಣ್ಣ ಕವಡೆಗಳೊಂದಿಗೆ ಕುಂತಿದ್ದ
ಏಳು ಮಲೆಗಳನ್ನು ಏಳು ಚಣದಲ್ಲಿ ಸುತ್ತುತ್ತಿದ್ದ ಗಿಳಿಗಳವು
ದುಃಖದೊಂದವೆ ಸುಖದೊಂದವೆ ಮಿಟುಕಾಡಿಸುತ್ತಿದ್ದವು
ಜ್ವಾಲೆಯ ತುಣುಕೊಂದು ತೇಲಿ ಬಂದಂತೆ ಬಂದೇ ಬಂದಳು
ಬೆಕ್ಕು ಅರಿವೆಯಾದ ಚೋದ್ಯದ ಪ್ರಶ್ನೆಯಿಟ್ಟಳು
ಕೌದಿಯೆದುರು ಲಜ್ಜಾಗೌರಿಯಂತೆ ಭಂಗಿಯಲ್ಲಿ ತಂಗಿ!
ಕೂಡಲೇ ಅರೆಆಕಳಿಕೆಯ ಕವಡೆಗಳುರುಳಿದವು
ಅಂಗಾತ ಉರುಳಿದವು ; ಪಾತಾಳ ಬಗೆದವು
ಮಖಾಡೆ ಮಲಗಿದವು ; ಬಾಣಲಿಂಗದ ತುದಿ ಸವರಿದವು
ಕವಡೆಗಳಲ್ಲಿ ಕಡಲುಗಳೇ ಉರುಳಿದಂಥ ಭೋರ್ಗರೆತ!
ಹನಿಯೊಂದನ್ನು ಕಣ್ಣು ಹಿಡಿದರೆ
ಮನದ ತುಂಬಾ ಮಳೆಯ ಮುಸಲ ಧಾರೆ
ನೆನೆ ನೆನೆದಂತೆಲ್ಲಾ ನುಲಿದ ನೆನಪುಗಳ ಸೂರೆ
ಕಡಲುಗಳನ್ನೇ ನುಂಗುವಂತಹ ಮಜಬೂತು ಮೀನೊಂದು
ಬಾಲ ಬಡಿದೇಟಿಗೇ ಕೋಟಿ ಕೋಟಿ ಹನಿಗಳು ಸಿಡಿದು
ಕಾಮನಿಮೀಲಿತ ಮಳೆಬಿಲ್ಲುಗಳು ಗುರಿಯಿಟ್ಟವು
ಲಜ್ಜಾಗೌರಿಯ ರಕ್ತಮಾಂಸಗಳ ಕಾಳ ಕವಡೆಗೆ
ಚೋದ್ಯವ ಬಗೆದರೆ ಚೋದ್ಯಗಳೇ ಎದ್ದೆದ್ದು ಕುಣಿದು
ಮಳೆಬಿಲ್ಲಿನ ಸಂಧಿಗಳೆಡೆಯಿಂದ ಇಣುಕಿ ಕೆಣಕುತ್ತಿದ್ದವು
ಶುಕ ಭಾಷಿಕ ಪಂಚರಂಗಿ ಕಣ್ಣುಗಳು!
ಕನ್ಯಾ ಬೆರಗಿನ ರತಿ ಮದವನ್ನು ಮುದವಾಗಿ ಮರ್ದಿಸೆ
ಜಮ್ಮು ನೇರಳೆ ಕಣ್ಣುಗಳು ಜುಮ್ಮೆಂದವು
ಕಣ್ಣುಗಳು ಕವಡೆಗಳಾಗಿ ಕವಡೆಗಳೇ ಕಣ್ಣುಗಳಾದವು
ದೇಹದಲ್ಲಿ ಮಹಾಕೂಟದ ಜಾತ್ರೆ ನೆರೆದು
ಬಾಣಲಿಂಗದ ತೇರು ಲಂಘಿಸಿತು
ಮಳೆಬಿಲ್ಲುಗಳ ಹೊರೆ ಕಟ್ಟಿ
ಆಸೆಗಳ ಜಂತಿಗೆ ನೇತುಬಿಟ್ಟು
ಜಾತ್ರೆ ಬೆಂತರವನ್ನು ಎದೆಗವಿಯಿಂದ ಹೊರದೂಡಿ
ನಿರುಮ್ಮಳ ಖಾಲಿಯಾದಳು ಕಾಲಿ
ಬೆಂಬಿದ್ದ ಪಂಚರಂಗಿಗಳು ಎಳೆದಾಡಿ ತೆಕ್ಕೈಸಿದವು
ಕಾಮ ಮಿಲನೋತ್ಸಾಹದಲ್ಲಿ!
ಕಾಮವದು ಕಾಮವಲ್ಲ; ತಲ್ಲಣಗಳ ವಿರಾಮ
ಕನ್ಯೆಯನ್ನು ಕನ್ಯೆಯಂತಿರಲು ಬಿಡದೆ
ಹದಮಾಡಿ ಕೂಟವಾಡಿ ಪುಟವಿಟ್ಟವು
ಅವಳು ಅವಳಲ್ಲ; ಅವನು ಅವನಲ್ಲ


ನಾನೆಂಬುದೆಂಥ ಮಿಥ್ಯವೋ ಸುಖದುತ್ತುಂಗದಲ್ಲಿ!
ನನ್ನನ್ನೆ ಇಲ್ಲಗೊಡಿಸುವುದೆಂಥ ಕಾರಣಿಕವೋ?

ಲಕ್ಷ್ಮೀಪತಿ ಕೋಲಾರ
ನಂ. ೧೪, ೩ನೇ ಅಡ್ಡರಸ್ತೆ, ೧ನೇ ಹಂತ
ಬಿ.ಇ.ಎಂ.ಎಲ್. ಲೇಔಟ್, ಬಸವೇಶ್ವರನಗರ
ಬೆಂಗಳೂರು - ೫೬೦ ೦೭೯



ನಮ್ಮ ಕೆಲವು ಪ್ರಕಟಣೆಗಳು






₹ 75




₹ 50



₹ 180



₹ 70




₹ 35




₹ 90



₹ 45




₹ 35



₹ 100



₹ 50



₹ 75




₹ 120




₹ 75




₹ 40



₹ 35



₹ 50




₹ 180




₹ 54



₹ 35




₹ 40



₹ 150




₹ 110



₹ 150




₹ 75



₹ 35



₹ 50



₹ 165

ಕೃಷಿವಿಕಾಸ್ ಪಬ್ಲಿಕೇಷನ್ಸ್
ಚಂದನ ಪ್ರಕಾಶನ

ನಂ. 225, 3ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ವೃಷಭಾವತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು - 560 079

ಡಾ|| ವಿ. ಚಂದ್ರಶೇಖರ ಸಂಗಲಿ

ಪ್ರಜೆಗಳು ಮತ್ತು ಮಾಧ್ಯಮಗಳ ಸಂಬಂಧವನ್ನು ಆಲಿಬಾಬಾ ಮತ್ತು ನಲವತ್ತು ಕಳ್ಳರ ಕಥನಕ್ಕೆ ಪ್ರತೀಕವಾಗಿ ಕಾಣಬಹುದು. ಎಲ್ಲ ಬಗೆಯ ಮಾಧ್ಯಮಗಳು ಈ ನಲವತ್ತು ಕಳ್ಳರಿದ್ದಂತೆ! ಇವರ ನಿರ್ವಹಣೆಯಲ್ಲಿರುವ ಡಿಜಿಟಲ್ ಗವಿಯಲ್ಲಿ ಅಪಾರವಾದ ಸಂಪತ್ತು ಸಮೃದ್ಧಿಯಿದೆ. ಇದರ ಒಳಹೊಕ್ಕು ಹೊರಬರುವ ಜಾಣ್ಮೆ-ಸಂಯಮಗಳನ್ನು ಪ್ರಜೆಗಳು ಆಲಿಬಾಬಾನಂತೆ ನಿರ್ವಹಣೆ ಮಾಡಬೇಕು. ಯಾವ ಕಾರಣಕ್ಕೂ ಮೂಲಮಂತ್ರವನ್ನು ಮರೆಯಬಾರದು. ಮರೆತು ಹೋದರೆ ಈ ಕಳ್ಳರ ಕೈಗೆ ಸಿಕ್ಕುಬೀಳುವ ಆಲಿಬಾಬಾನ ಅಣ್ಣನಿಗಾಗುವ ದುರ್ಗತಿಯೇ ಪ್ರಜೆಗಳಿಗೂ ಆಗದಿರದು! ಸುಳ್ಳು ಸೃಷ್ಟಿಗಳೆಂಬ ಬೂದಿಯನ್ನು ಕೊಡವಿ ನಿಗಿನಿಗಿಸುವ ಕೆಂಡದಂಥ ಸತ್ಯಗಳನ್ನು ಮನಗಾಣುವ ಶಕ್ತಿಯನ್ನು ಪ್ರಜೆಗಳು ಗಳಿಸಬೇಕು; ಇದೇ ನೈಜ ವಿದ್ಯೆ! ಉಳಿದದ್ದೆಲ್ಲವೂ ಅವಿದ್ಯೆ!

ಸಂಸ್ಕೃತಿ ಮತ್ತು ಮಾಧ್ಯಮಗಳು

ಪ್ರಾಚೀನ ಮತ್ತು ಮಧ್ಯಕಾಲೀನ ಯುಗದ ಸಮಾಜಗಳಿಗೆ ...ೀಲಿಸಿದರೆ, ಆಧುನಿಕ ಯುಗದ ಸಮಾಜಗಳ ಮೇಲೆ ಮಾಧ್ಯಮಗಳ ಹಿಡಿತ-ಪ್ರಾಬಲ್ಯ ಬಹು ತೀವ್ರವಾಗಿದೆ. ಮಾಧ್ಯಮ ವಿಜ್ಞಾನ, ಸಮೂಹ ...ಧ್ಯಮಗಳು, ಮಾಧ್ಯಮ ವಲಯಗಳ ಹುಟ್ಟು ಮತ್ತು ಬೆಳವಣಿಗೆಯು ...ುತ್ವದ ಪಾಲಿಗೆ ಪ್ರಜೆಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಲು ಅಗತ್ಯವಾದ ಸಾಧನವಾಗಿದೆ. ಮಾಧ್ಯಮ ವಿಜ್ಞಾನ ಮತ್ತು ಸಮೂಹ ಮಾಧ್ಯಮ ...ನ್ನು ಕುರಿತು ಎಡಪಂಥೀಯ ಚಿಂತಕರಾದ ರೇಮಂಡ್ ವಿಲಿಯಮ್ಸ್, ...ೀಮ್ ಚೋಮ್‌ಸ್ಕಿ, ಜೆ ಗುಪ್ತಾರ ಮುಂತಾದವರು ವ್ಯಕ್ತಪಡಿಸಿರುವ ...ಪ್ರಾಯಗಳು ವಸ್ತುನಿಷ್ಠ ಚಿಂತನೆಗಳಾಗಿದ್ದು, ಪ್ರಭುತ್ವಶಾಹಿ ...ಧ್ಯಮಗಳ ಕಪಟ ನಾಟಕವನ್ನು ಬಯಲು ಮಾಡಿವೆ. ಇಂಗ್ಲಿಷಿನಲ್ಲಿ ...ಲ್ತಿಯಲ್ಲಿರುವ ಮೀಡಿಯ, ಮೀಡಿಯಂ, ಮೀಡಿಯೇಷನ್ ಎಂಬ ...ಗಳು 'ಮೀಡಿಯರ್' ಎಂಬ ಲ್ಯಾಟಿನ್ ಶಬ್ದದಿಂದ ನಿಷ್ಪತ್ತಿಯಾಗಿವೆ. ಈ ಪಾರಿಭಾಷಿಕ ಶಬ್ದಕ್ಕೆ ರೇಮಂಡ್ ವಿಲಿಯಮ್ಸ್ ಕೊಟ್ಟಿರುವ ಅರ್ಥ ...ಲ್ಲಿ 'ವಿಭಜನೆಮಾಡುವ' ಮತ್ತು 'ಮಧ್ಯವರ್ತಿಯಾಗುವ' ನೆಲೆಗಳು ...ವುದು ಗಮನಾರ್ಹ. ಪ್ರಸ್ತುತ, 'ಮೀಡಿಯ' ಎಂಬುದು ಬಳಕೆಯಾಗು...ವ ಪರಿಗಳಿವು : ಮಾಸ್ ಮೀಡಿಯ, ಮೀಡಿಯ ಪೀಪಲ್, ಮೀಡಿಯ ...ನ್ಸೀಸ್, ಮೀಡಿಯ ಸ್ಟಡೀಸ್ ಇತ್ಯಾದಿ. ಇಪ್ಪತ್ತನೆ ಶತಮಾನದಲ್ಲಿ ಹುಟ್ಟಿ, ...ತ್ತನೆ ಶತಮಾನವನ್ನೆ ನುಂಗಿಹಾಕಿರುವ ಜ್ಞಾನಶಾಖೆಯನ್ನಾಗಿ 'ಮಾಧ್ಯಮ ...ನ'ವನ್ನು ನೋಡಬೇಕಾಗಿದೆ. 'ಮಾಧ್ಯಮಗಳು' ಎಂದರೇನು, ...ಬುದನ್ನು ಒಂದು ಮಾತಿನಲ್ಲಿ ವಿವರಿಸುವುದು ಸಾಧ್ಯವಿಲ್ಲವಾದರೂ ... ಬಗೆಯ ಮಾಧ್ಯಮಗಳ ಸ್ವರೂಪ, ಅಸ್ತಿತ್ವ ಮತ್ತು ಕಾರ್ಯಭಾರ ...ಹಣೆಗಳನ್ನು ಗಮನಿಸಿ ಹೀಗೆ ಹೇಳಬಹುದು :

...ಪ್ರಜೆಗಳು ಮತ್ತು ಪ್ರಭುತ್ವದ ಮಧ್ಯೆ ಪ್ರವೇಶಿಸಿ,
...ತರವಾಗಿ ವಿಭಜನೆ ಮಾಡುತ್ತಾ, ಸದಾ ಪ್ರಭುತ್ವದ
...ಸಕ್ತಿಗಳನ್ನು ಕಾಪಾಡುತ್ತಾ, ಪ್ರಜೆಗಳಿಗೆ
...ರೆಂದಿಗೂ ನಿಜದುದಯವಾಗದಂತೆ ನೋಡಿಕೊಳ್ಳುತ್ತಿರುವ
...ವರ್ತಿಯಾದ ಶಕ್ತಿಸಾಧನಗಳೇ ಮಾಧ್ಯಮಗಳು...'' (ವಿವಿಧ ...ಲಗಳಿಂದ)



[illegible] ಅತ್ಯಾಧುನಿಕ ಸಂದರ್ಭಕ್ಕೆ [illegible]. ಡಿಜಿಟಲ್ ಮಾಧ್ಯಮಗಳು ಮತ್ತು ನಾನ್ ಡಿಜಿಟಲ್ ಮಾಧ್ಯಮಗಳು ಎಂದು ಗ್ರಹಿಸಬೇಕಾಗಿದೆ. ಡಿಜಿಟಲ್ ಮಾಧ್ಯಮಗಳ ವ್ಯಾಪ್ತಿಗೆ ಪ್ರಿಂಟ್ ಮೀಡಿಯ (ನ್ಯೂಸ್ ಪೇಪರ್), ಸೌಂಡ್ ಮೀಡಿಯ (ರೇಡಿಯೊ), ವಿಷನ್ ಮೀಡಿಯ (ಟೆಲಿ ವಿಷನ್), ಕಂಪ್ಯೂಟೇಷನಲ್ ಮೀಡಿಯ (ಕಂಪ್ಯೂಟರ್- ಸಿಂಪ್ಯೂಟರ್ ನೆಟ್‌ವರ್ಕ್) ಮುಂತಾದ ಬಹುಮುಖ್ಯ ಶಕ್ತಿಸಾಧನಗಳು ಬರುತ್ತವೆ. ನಾನ್‌ಡಿಜಿಟಲ್ ಮಾಧ್ಯಮಗಳೆಂದರೆ, ಎಲ್ಲ ಬಗೆಯ ಪರಂಪರೆಗಳು, ಸಂಸ್ಕೃತಿದತ್ತವಾದ 'ಸಚರಾಚರ' ರಚನೆಗಳು, ಮಾನವನಿರ್ಮಿತವಾದ ಸಂಘ ಸಂಸ್ಥೆಗಳು ಎಂದು ಅರ್ಥಮಾಡಿಕೊಳ್ಳಬೇಕು.



ಒಂದೊಂದು ಜ್ಞಾನಶಾಖೆಗೆ ಒಬ್ಬೊಬ್ಬ ಪಿತಾಮಹನಿರುವಂತೆ, 'ಮಾಧ್ಯಮ ವಿಜ್ಞಾನ'ಕ್ಕೂ ಒಬ್ಬ ಪಿತಾಮಹನಿದ್ದಾನೆ. ನಮ್ಮ ದೇಶದಲ್ಲಿ ಅರ್ಥಶಾಸ್ತ್ರಕ್ಕೆ ಚಾಣಕ್ಯ, ಧರ್ಮಶಾಸ್ತ್ರಕ್ಕೆ ಮನು ಹೇಗೋ ಹಾಗೆ 'ಮೀಡಿಯ ಸ್ಟಡೀಸ್'ಗೆ ಜೆ. ಗೊಬೆಲ್ಸ್ ಎಂಬ ಹಿಟ್ಲರನ ಪ್ರಚಾರ ಮಂತ್ರಿಯೇ ಆಚಾರ್ಯ ಪುರುಷ! ಮಾಧ್ಯಮಗಳ ಉದ್ದೇಶ ಮತ್ತು ಕಾರ್ಯವೈಖರಿಗಳನ್ನು ನಿರೂಪಿಸಿರುವ ಜೋಸೆಫ್ ಗೊಬೆಲ್ಸ್‌ನ ಸಪ್ತ ಸೂತ್ರಗಳಿವು :

೧. ಪ್ರಭುತ್ವವು ತನ್ನ ಇಚ್ಛೆಗೆ ತಕ್ಕಂತೆ ಆಟವಾಡುವ ಮಾಯಾದಾಳಗಳಂತೆ ಪ್ರಸ್ತುಗಳನ್ನು ಪರಿಗಣಿಸಬೇಕು.

೨. ನಂಬಿಕೆಗಳು ಪರ್ವತಗಳನ್ನು ಕದಲಿಸಬಲ್ಲವು. ಆದರೆ ತಂತ್ರಗಾರಿಕೆ ಮಾತ್ರ ಅವುಗಳನ್ನು ಸರಿಯಾದ ಸ್ಥಳದಲ್ಲಿ ಇರಿಸಬಲ್ಲುದು.

೩. ಪ್ರಭುತ್ವದ ಉದ್ದೇಶಕ್ಕೆ ವ್ಯಕ್ತಿತ್ವ ನಿರ್ಮಾಣಕ್ಕೆ ಅಪಾಯಕಾರಿಯ ಸಂಗತಿಯೆಂದರೆ, ಉಜ್ವಲವಾದ ಬೌ ಚಟುವಟಿಕೆಯೊಂದೇ!

೪. ಅತ್ಯಂತ ಪ್ರಖರವಾದ ಪ್ರಚಾರ ತಂತ್ರಗಾರಿಕೆಯಿದು : ಒಂದು ಮ ಭೂತವಾದ ತತ್ವವನ್ನು ಪ್ರಜೆ ಮಿದುಳಿನಲ್ಲಿ ಸ್ಥಿರವಾಗಿ ಪ್ರತಿಷ್ಠಾ ಮಾಡದ ಹೊರತು, ಅವ ಶರಣಾಗಿಸಲು ಮತ್ತು ಮನಗೆಲ್ಲಲು ಸಾ ಇಲ್ಲವೆಂಬುದನ್ನು ಮೊದಲಿಗೆ ಅ ಕೊಳ್ಳಬೇಕು. ಉಳಿದಂತೆ, ಇನ್ನೆಲ್ಲ ವಿಚಾ ಗಳಲ್ಲಿ ಗೊಂದಲ ಹುಟ್ಟಿಸುತ್ತಾ ಅದ ಮತ್ತೆ ಮತ್ತೆ ಪುನರುಚ್ಚರಿಸುತ್ತಿರಬೇಕು.

೫. ಒಂದು ಸುಳ್ಳನ್ನು ನೂರು ಸರ್ತಿ ಹೇಳುತ್ತಾ ಅದನ್ನೇ ಪುನರುಚ್ ಮಾಡುತ್ತಿದ್ದರೆ, ಪ್ರಜೆಗಳು ಅದನ್ನು ಕ್ರಮೇಣ ನಂಬುತ್ತಾರೆ. ಪ್ರಭುತ್ವವು ರಾಜಕೀಯ- ಆರ್ಥಿಕ- ಮಿಲಿಟರಿಯ ಆಗುಹೋಗುಗಳನ್ನು ಪ್ರಜೆಗಳಿಗೆ ತಿಳಿಯದ ಸಂರಕ್ಷಣೆ ಮಾಡಿ ಕೊಳ್ಳುವ ಉಪಾಯವೆಂಬಂತೆ ಸುಳ್ಳುಗಳನ್ನು ಹುಟ್ಟಿಸುತ್ತಾ ಸದಾಕ ಪರಿಸ್ಥಿತಿಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿರಬೇಕು. ಪ್ರಭುತ್ವವು ತನ್ನ ಶಕ್ತಿಸಾಧನಗಳನ್ನು ಬಳಸಿಕೊಂಡು ಭಿನ್ನಮತವನ್ನು ನಿರ್ಮೂಲ ಮಾಡುವುದು ಬ ಮುಖ್ಯವಾದ ಕಾರ್ಯಾಚರಣೆಯಾಗಬೇಕು. ಸುಳ್ಳಿನ ಮಹಾನ್ ಶತ್ರುವಾದ ಸತ್ಯ ಮರೆಮಾಚಬೇಕು. ಸುಳ್ಳನ್ನು ಉಚ್ಚಾಟಿಸುವ ಸತ್ಯವೇ ಪ್ರಭುತ್ವದ ಪರಮಶತ್ರು.

೬. ಯುದ್ಧ ಕಾಲದಲ್ಲಿ ಪ್ರಭುತ್ವವು ಪ್ರಜೆಗಳಿಗೆ ಮಾಹಿತಿಜ್ಞಾನವನ್ನು ನೀಡುವ ಕ್ಕಿಂತಲೂ ತನ್ನ ಅಸ್ತಿತ್ವಕ್ಕೆ ಧಕ್ಕೆಯಾಗದಂತೆ ಶಿಕ್ಷಣ ನೀಡುವತ್ತ ಹೆಚ್ಚು ಗಮನ ಹರಿಸಬೇ

. ಸಾರ್ವಜನಿಕ ಅಭಿಪ್ರಾಯಗಳನ್ನು ...ಸುವ ಉಸ್ತುವಾರಿಯನ್ನು ಪ್ರಭುತ್ವವು ತನ್ನ ...ಸಿದ್ಧ ಹಕ್ಕು ಎಂದು ತಿಳಿಯಬೇಕು.

...ಗೊಬೆಲ್ಸ್‌ನ ಈ ಸಪ್ತಸೂತ್ರಗಳು ಪ್ರಭುತ್ವದ ...ಸಕ್ತಿಗೆ ಬದ್ಧವಾದ ಮಾಧ್ಯಮಗಳ ನೈಜ ...ಪವನ್ನು ಸಾರಿ ಹೇಳುತ್ತಿವೆ. ಮತ್ತು ...ಯನ್ನು ಪಾಲಿಸುತ್ತಿರುವ ಸೈಬರ್‌ಲೋಕದ ... ಜಾಲದಲ್ಲಿ 'ವಿಕಿಲೀಕ್ಸ್'ನಂಥ ಪ್ರಭುತ್ವ ...ರೋಧಿ ವಾಹಿನಿಗಳು ಇರುವುದಾದರೂ ...ಂಜ್‌ಗೆ ತುರಂಗ ವಾಸ ತಪ್ಪಲಿಲ್ಲವೆಂಬುದನ್ನು ...ಯಬಾರದು.



...ಪ್ರಜೆಗಳು ಮತ್ತು ಮಾಧ್ಯಮಗಳ ಸಂಬಂಧವನ್ನು ಆಲಿಬಾಬಾ ಮತ್ತು ನಲವತ್ತು ... ಕಥನಕ್ಕೆ ಪ್ರತೀಕವಾಗಿ ಕಾಣಬಹುದು. ಎಲ್ಲ ಬಗೆಯ ಮಾಧ್ಯಮಗಳು ಈ ...ತ್ತು ಕಳ್ಳರಿದ್ದಂತೆ! ಇವರ ನಿರ್ವಹಣೆಯಲ್ಲಿರುವ ಡಿಜಿಟಲ್ ಗವಿಯಲ್ಲಿ ...ರವಾದ ಸಂಪತ್ತು ಸಮೃದ್ಧಿಯಿದೆ. ಇದರ ಒಳಹೊಕ್ಕು ಹೊರಬರುವ ಜಾಣ್ಮೆ-...ಯಮಗಳನ್ನು ಪ್ರಜೆಗಳು ಆಲಿಬಾಬಾನಂತೆ ನಿರ್ವಹಣೆ ಮಾಡಬೇಕು. ಯಾವ ...ಕ್ಕೂ ಮೂಲಮಂತ್ರವನ್ನು ಮರೆಯಬಾರದು. ಮರೆತುಹೋದರೆ ಈ ಕಳ್ಳರ ... ಸಿಕ್ಕುಬೀಳುವ ಆಲಿಬಾಬಾನ ಅಣ್ಣನಿಗಾಗುವ ದುರ್ಗತಿಯೇ ಪ್ರಜೆಗಳಿಗೂ ...ರದು! ಸುಳ್ಳು ಸೃಷ್ಟಿಗಳೆಂಬ ಬೂದಿಯನ್ನು ಕೊಡವಿ ನಿಗಿನಿಗಿಸುವ ಕೆಂಡದಂಥ ...ಳನ್ನು ಮನಗಾಣುವ ಶಕ್ತಿಯನ್ನು ಪ್ರಜೆಗಳು ಗಳಿಸಬೇಕು; ಇದೇ ನೈಜ ವಿದ್ಯೆ! ...ವದ್ದೆಲ್ಲವೂ ಅವಿದ್ಯೆ!

ಈ ಹಿನ್ನೆಲೆಯನ್ನಿಟ್ಟುಕೊಂಡೆ ನೋಮ್ ಚೋಮ್‌ಸ್ಕಿ ಪ್ರಜೆಗಳನ್ನು ಎರಡು ...ಪ್ರಗಳನ್ನಾಗಿ ವಿಂಗಡಿಸಿದ್ದಾರೆ:

. ವಿಶೇಷವರ್ಗದ ಪ್ರಜೆಗಳು.

. ಕುರಿದೊಡ್ಡಿ ಪ್ರಜೆಗಳು.

...ಂದು ಪ್ರಭುತ್ವ ತಾನು ಚಿರಾಯುವಾಗಿ ಮತ್ತು ಭದ್ರಾಯುವಾಗಿ ಉಳಿದು ...ಲು ವಿಶೇಷವರ್ಗವನ್ನು ಬಳಸಿಕೊಂಡು, ಕುರಿದೊಡ್ಡಿ ಪ್ರಜೆಗಳನ್ನು ಸದಾ ...ಂತ್ರಣದಲ್ಲಿಟ್ಟುಕೊಂಡಿರಬೇಕಾಗುತ್ತದೆ. ವಿಶೇಷ ವರ್ಗವೆಂದರೆ ಬೌದ್ಧಿಕ ...ದಾರರು ಮತ್ತು ವಾಣಿಜ್ಯೋದ್ಯಮಿಗಳು. ಕುರಿದೊಡ್ಡಿ ಪ್ರಜೆಗಳು ಎಂದರೆ, ...ತ್ವವನ್ನು ಒಪ್ಪಿಕೊಳ್ಳುವ ಮತದಾನಿಗಳು ಎಂದರ್ಥ. ಪ್ರಭುತ್ವದ ಹಿತಾಸಕ್ತಿಗಳ ...ಕ್ಷಣೆಯಾಗಬೇಕಾದರೆ, ಪ್ರಜೆಗಳೆನಿಸಿಕೊಂಡವರು ಪ್ರಭುತ್ವದಲ್ಲಿ ಸಹಭಾಗಿತ್ವ ...ದಿರಬಾರದು. ಅವರು ಮೂಕ ಪ್ರೇಕ್ಷಕರಾಗಿದ್ದುಕೊಂಡು ತಟಸ್ಥರಾಗಿರಬೇಕು. ...ಗೆಯನ್ನೇ ರೇಮಂಡ್ ವಿಲಿಯಮ್ಸ್ 'ಸಾಮಾಜಿಕ ತಟಸ್ಥೀಕರಣ' ಎಂದು ...ದ್ದಾನೆ. ಕಾರ್ಪೊರೇಟ್ ಏಕಸ್ವಾಮ್ಯಕ್ಕೆ ಒಳಪಟ್ಟಿರುವ ಮಾಧ್ಯಮಗಳಿಂದ ... ತುಳುಕುತ್ತಿರುವ ನಮ್ಮ ದೇಶದಲ್ಲಿಂದು ಸಾಮಾಜಿಕ ತಟಸ್ಥೀಕರಣ ಎದ್ದು ...ತ್ತದೆ. ಹಳೆಯ 'ಕಲೋನಿಯಲಿಸಂ'ಗೆ ಬದಲು ಅನ್ಯ ಮತ್ತು ಸ್ವಂತ ಎಂದು ...ಡಿಸಿಕೊಳ್ಳಲಾಗದ ರೀತಿಯಲ್ಲಿ 'ಮೀಡಿಯ ಕಲೋನಿಯಲಿಸಂ' – ಮಾಧ್ಯಮ ...ಹತುಶಾಹಿಯಲ್ಲಿ ನಾವಿದ್ದೇವೆ. ಜಾಗತಿಕ ಮತ್ತು ಸ್ಥಳೀಯ ಪ್ರಭುತ್ವಗಳ ...ಮುಖ್ಯವಾದ ಆಶಯವೆಂದರೆ, ನೇರ ಮತ್ತು ದೂರ ನಿಯಂತ್ರಣ ಬಲದಿಂದ ...ಧ್ಯಮಗಳೆಂಬ ಶಕ್ತಿ ಸಾಧನಗಳ ಮೂಲಕ ಪ್ರಜೆಗಳ ಮೇಲೆ, ಸಾಮಾಜಿಕ ...ತಿಗಳ ಮೇಲೆ ಬಿಗಿಹಿಡಿತವನ್ನು ಸಾಧಿಸುವುದು. ಚೋಮ್‌ಸ್ಕಿ ಅವರ 'ಮೀಡಿಯ ...ಟ್ರೇಲ್' ಎಂಬ ಪುಸ್ತಕ ಈ ವ್ಯವಸ್ಥಿತ ಹುನ್ನಾರವನ್ನು ಬಯಲಿಗೆಳೆದಿದೆ.

...ಳ್ಳು ಸೃಷ್ಟಿಗಳೆಂಬ ಸಾರ್ವಜನಿಕ ಅಭಿಮತಗಳ ಉತ್ಪಾದನೆ-ನಿರ್ವಹಣೆ-...ವರ್ತಿತ್ವವನ್ನು ಯಾವುದೇ ನೈತಿಕತೆ ಇಲ್ಲದೆ ನಡೆಸುತ್ತಿರುವ ಭಾರತೀಯ ಪತ್ರಿಕಾ ...ಧ್ಯಮಗಳು ಪ್ರಭುತ್ವದ ಶಕ್ತಿಸಾಧನಗಳಾಗಿ ಉಳಿದುಬಿಟ್ಟಿವೆ. ಪ್ರಜಾಪ್ರಭುತ್ವದ ...ನೇ ಸ್ತಂಭದಂತೆ ಕೆಲಸ ಮಾಡಿದ್ದ ಗಾಂಧಿ ಮತ್ತು ಅಂಬೇಡ್ಕರ್ ಕಾಲದ ಪತ್ರಿಕಾ ...ವು ಇಂದು ಸಮಾಧಿಯಾಗಿದ್ದು ಭಾರತದ ಆದ್ಯಂತ ಪತ್ರಿಕೋದ್ಯಮವೇ ...ಭಿಸುತ್ತಿದೆ. ಮಾಧ್ಯಮಗಳು - ಶಾಲಾಕಾಲೇಜುಗಳು - ವಿಶ್ವವಿದ್ಯಾಲಯಗಳು - ...ಯ ಸಂಸ್ಕೃತಿಗಳು ಒಗ್ಗಟ್ಟಾಗಿ ಚತುರ್ಮುಖ ಸಿಂಹ ಗರ್ಜನೆ ಮಾಡುವುದಕ್ಕೆ ... ಇವು ನಾಲ್ಕೂ ದಿಕ್ಪಾಲಾಗಿ ಹೋಗಿವೆ. ಪ್ರಭುತ್ವದ ಹಿತಾಸಕ್ತಿಗಳಿಗೆ [illegible] ... ಕರಣಕ್ಕೆ ಪ್ರತೀಕವಾಗಿ [illegible]

ಜೆನೆಟಿಕ್ ಇಂಜಿನಿಯರಿಂಗ್ ಮಾಡುತ್ತಾ ತಮಗೆ ಬೇಕಾದ ಕುಲಾಂತರಿ ಸಸ್ಯ ಮತ್ತು ಪ್ರಾಣಿಗಳನ್ನು ಉತ್ಪತ್ತಿ ಮಾಡುವಂತೆಯೇ ಜನತೆಯ ಮನಸ್ಸುಗಳನ್ನು ಇಂಜಿನಿಯರಿಂಗ್ ಮಾಡುತ್ತಾ – ಸೈಕಿಕಲ್ ಇಂಜಿನಿಯರಿಂಗ್ – ಪ್ರಭುತ್ವಗಳು ತಮ್ಮ ಹಿತಾಸಕ್ತಿಗೆ ಅನುಗುಣವಾದ ಅಭಿಮತಗಳನ್ನು ರೂಪಿಸುತ್ತಿವೆ. ಇಂಥ ಅಭಿಮತಗಳನ್ನು ಶ್ರೀರಾಮನ ಪಾದುಕೆಗಳಂತೆ ತಲೆಯ ಮೇಲಿಟ್ಟುಕೊಂಡು ಭಕ್ತಿಯಿಂದ ಓಲಗಿಸುತ್ತಿರುವ ಭರತನಂತಿರುವ ಭಾರತೀಯ ಮಾಧ್ಯಮಗಳಿಂದ ಹೆಚ್ಚು ನಿರೀಕ್ಷಿಸುವಂತಿಲ್ಲ. ಸಾಮಾಜಿಕ ತಟಸ್ಥೀಕರಣದ ಫಲಿತಗಳಾದ ವಿಧೇಯತೆ ಮತ್ತು ನಿಷ್ಕ್ರಿಯತೆಗಳೇ ಜನತೆಯ ಪಾಲಿಗೆ ಸೂಕ್ತ ಕ್ರಮವೆಂಬಂತೆ ಬಿಂಬಿಸಲಾಗುತ್ತಿದೆ: ''ಯಾವುದಾದರೂ ಸನ್ನಿವೇಶ ಅಥವಾ ಪ್ರದರ್ಶನವನ್ನು ನೋಡಲು ಇಚ್ಛೆಯಿಲ್ಲವಾದರೆ, ಅತ್ಯುತ್ತಮ ಸೆನ್ಸಾರ್ ಮಂಡಳಿಯಂತಿರುವ ನಿನ್ನ ಕಣ್ಣು ರೆಪ್ಪೆಗಳನ್ನು ಮುಚ್ಚಿಕೊಂಡು ಬಿಡು...'' ಅಲಿಕ್ ಪದಮ್‌ಸೀ ಹೇಳಿಕೆ...

ಪ್ರಭುತ್ವವು ತನ್ನ ಹಿತಾಸಕ್ತಿಗೆ ಅನುಗುಣವಾದ ಅಭಿಮತಗಳನ್ನು ಉತ್ಪಾದನೆ ಮಾಡುತ್ತಾ ಮತಪೆಟ್ಟಿಗೆಯ ಬ್ಯಾಂಕುಗಳನ್ನು ಹೆಚ್ಚಿಸಿಕೊಳ್ಳುತ್ತಿರುತ್ತದೆ. ಇದರ ಈಡೇರುವಿಕೆಗಾಗಿ ಅತ್ಯಂತ ಸೂಕ್ಷ್ಮವಾದ ಮತ್ತು ಪರಿಣಾಮಕಾರಿಯಾದ ವಿಧಾನಗಳನ್ನು ಅಳವಡಿಸಿಕೊಳ್ಳುತ್ತದೆ. ಉದಾಹರಣೆ: ನೆಹರೂ ಕಾಲದಿಂದ ಹಿಡಿದು ಅಲಹಾಬಾದ್ ತೀರ್ಪಿನವರೆಗೆ 'ಅಯೋಧ್ಯಾಕಾಂಡ'ದಲ್ಲಿ ಪ್ರಭುತ್ವದ ಹಿತಾಸಕ್ತಿಯೇ ಮುಖ್ಯವಾಗಿದೆ. ಬಾಬರಿ ಮಸೀದಿಯನ್ನು ಕೆಡವಿ ಹಾಕಿದಾಗ ಪತ್ರಿಕೆಗಳು ಮುಖಪುಟದಲ್ಲಿ ಬಾಬರಿ ಮಸೀದಿ ಧ್ವಂಸ ಅಥವಾ ಪತನ ಎಂದು ವರ್ಣಿಸಿದ್ದವು. ಆದರೆ, ಹಿಂದೂ ಪತ್ರಿಕೆ 'ಇಂಡಿಯ ಅಂಡರ್ ಅಟ್ಯಾಕ್' ಎಂಬ ಶೀರ್ಷಿಕೆಯಲ್ಲಿ ಈ ಸುದ್ದಿಯನ್ನು ಪ್ರಕಟಿಸಿತ್ತು. ಘಟನೆಯೊಂದರ ನಿರೂಪಣೆಯಲ್ಲಿ ಎಂಥ ವ್ಯಂಗ್ಯವಿದೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಜಾಗತಿಕ ಸುದ್ದಿ ಸಂಸ್ಥೆಗಳು ಕ್ಯೂಬ ವಿಷಯದಲ್ಲಿ ತೋರಿದ ದಿವ್ಯನಿರ್ಲಕ್ಷ್ಯವನ್ನು ಇಲ್ಲಿ ಉದಾಹರಿಸಬಹುದು. ಅಮೆರಿಕಾ ದೇಶದ ಬಾಂಬ್ ಧಾಳಿಗಳು ಎಲ್ಲೆಲ್ಲಿ ನಡೆದಿವೆ? ಇದುವರೆಗೆ ಅಮೆರಿಕಾ ಮಾಡಿರುವ ಯುದ್ಧಗಳೆಷ್ಟು? ಇದರ ಸಮಗ್ರ ಪಟ್ಟಿಯನ್ನು ಅಂಕಿ-ಅಂಶಗಳ ಸಹಿತ ನೋಡಿದರೆ ನಿಜವಾದ ಭಯೋತ್ಪಾದಕ ಯಾರು ಎಂಬುದು ಬಯಲಾಗುತ್ತದೆ. ಚೋಮ್‌ಸ್ಕಿ ಇದನ್ನು ಹೇಳುತ್ತಲೇ ಬಂದಿದ್ದಾರೆ. ಆದರೆ, ಮಾಧ್ಯಮಗಳು ಸದ್ದಾಂ ಹುಸೇನ್, ಬಿನ್ ಲಾಡೆನ್ ಮಾತ್ರವಲ್ಲ, ಮುಸ್ಲಿಮರನ್ನೆಲ್ಲ ಭಯೋತ್ಪಾದಕರು ಎಂಬಂತೆ ಬಿಂಬಿಸುತ್ತವೆ. ಇದು ಕೋತಿ ಮೊಸರನ್ನ ತಿಂದು ಮೇಕೆ ಮೂತಿಗೆ ಒರೆಸಿದ ಗಾದೆಯನ್ನೇ ಹೋಲುತ್ತದೆ.

'ಪ್ರಜಾಪ್ರಭುತ್ವ' ಎಂದರೇನೆಂಬುದರ ಹಳೆಯ ವಿವರಣೆ ಪ್ರಸಿದ್ಧವಾಗಿದೆ. ಆದರೆ ಪ್ರಜೆಗಳನ್ನು ವಿಭಜಿಸುತ್ತಾ, ದಾರಿ ತಪ್ಪಿಸುತ್ತಾ ತನಗೆ ಬೇಕಾದಂತೆ ಪ್ರಜೆಗಳನ್ನು ನಿರ್ದೇಶಿಸುತ್ತಿರುವುದನ್ನು ನಮ್ಮ ದೇಶದಲ್ಲಿ ಅನುಭವಿಸುತ್ತಿದ್ದೇವೆ. ಇಂಥ ಸುಳ್ಳು ಸೃಷ್ಟಿಗಳಿಗೆ, ಸುಳ್ಳುರೂಪು ಸಂಸ್ಕೃತಿಗಳಿಗೆ ಮಣೆ ಹಾಕುತ್ತಿರುವ ಮಾಧ್ಯಮಗಳಿಂದ ನಮಗೆ ಬಿಡುಗಡೆಯಿಲ್ಲವೆ, ಎಂಬ ಪ್ರಶ್ನೆ ಸಂಸ್ಕೃತಿ ನಮ್ಮೆಲ್ಲರ ಉಸಿರಾಗಬೇಕಾಗಿದೆ.

ನಾಲೆಡ್ಜ್ ಈಸ್ ಪವರ್, ನ ಹಿ ಜ್ಞಾನೇನ ಸದೃಶಂ ಎಂಬ ಸೂಕ್ತಿಗಳನ್ನು ಯಾಂತ್ರಿಕವಾಗಿ ಉದ್ಧರಿಸುವಾಗ, ನಾವೆಲ್ಲರೂ ಅದು ಯಾವ ಬಗೆಯ ಜ್ಞಾನ ಎಂದು ಪ್ರಶ್ನಿಸಿಕೊಳ್ಳಬೇಕು. ನಾನ್ ಡಿಜಿಟಲ್ ಮಾಧ್ಯಮಗಳಾದ ಎಲ್ಲ ಬಗೆಯ ಪರಂಪರೆಗಳು, ಸಂಸ್ಕೃತಿದತ್ತವಾದ ಸಕಲ ರಚನೆಗಳು, ಮಾನವನಿರ್ಮಿತವಾದ ಸಂಘಸಂಸ್ಥೆಗಳು ಕೊಡುವ ಜ್ಞಾನ ಕೃತಕವಾದುದು. 'ಜ್ಞಾನ' ಎನ್ನುವುದು ನನ್ನಿಂದ ಹೊರಗಿದೆ ಎಂದು ತಿಳಿಯಬಾರದು. ಸಹಜಜ್ಞಾನದ ಅನಾವರಣವೇ ಬಹುಮುಖ್ಯ. ಇದನ್ನು ಕನ್ನಡದ ವಚನಕಾರರು ಅರಿತುಕೊಂಡಿದ್ದರು. ಆದ್ದರಿಂದಲೇ ಸುಳ್ಳು ಸೃಷ್ಟಿಗಳ ಮತ್ತು ಸುಳ್ಳುರೂಪು ಸಂಸ್ಕೃತಿಯ ಗುಲಾಮರಾಗದೆ, ಪ್ರಶ್ನೆ ಸಂಸ್ಕೃತಿಯ ಸಮಾಜ[illegible] ಮಾಡಿದರು. ನಾವಿಂದು ಸಾಮಾಜಿಕ ತಟಸ್ಥೀಕರಣಕ್ಕೊಳಗಾಗಿ, ಪ್ರಶ್ನೆಗಳೇ [illegible] 'ಪ್ರಶ್ನ[illegible]' ಸಂಸ್ಕೃತಿ[illegible] ([illegible]) [illegible]

ಬಗ್ಗೆ ಮರುವ್ಯಾಖ್ಯಾನಿಸಿದ ಮಾನಗುಂತ ಕುವೆಂಪು ಅವರು ಬಹಳ ಹಿಂದೆಯೇ 'ಅಕ್ಷಿಣಿಗಾಗಿ ನಿರೀಕ್ಷಿಸಲೇಬೇಕಿಗಾಗಿ' (1944) ಎಂಬ ಭಾಷಣದ ಮೂಲಕ 'ಅಲ್ಪಮ ಕೂಗಿದ ಕೂಗು' ನೀಡಿದ್ದಾರೆ. ಆ ಲೇಖನದಲ್ಲಿ ಕುವೆಂಪು ಅಲ್ಪಮನನ್ನು ಹಿಂದಾಪುರ ವಿವೇಚಿಸಿದ್ದಾರೆಯೆಂಬುದನ್ನು ಮರೆಯಬಾರದು.

ಅಭಿರುಚಿ ನಿರ್ಮಾಣದಲ್ಲಿ ಕವಿಗಳು ವಹಿಸುವ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಉದಾಹರಣೆಗೆ, ಸೀತಾಪಹರಣ ಪ್ರಸಂಗವನ್ನೇ ತೆಗೆದುಕೊಳ್ಳಿ. ಸಂಸ್ಕೃತ ರಾಮಾಯಣದಲ್ಲಿ ಇದು ದೈಹಿಕ ಬಲಾತ್ಕಾರವಾಗಿ ನಿರೂಪಣೆಯಾಗಿದೆ. ರಾವಣನು ಸೀತೆಯನ್ನು ಎತ್ತಿಕೊಂಡು ಹೆಗಲಮೇಲೆ ಹಾಕಿಕೊಂಡು ಅಪಹರಣ ಮಾಡುವುದು ಟಿ.ವಿ. ರಾಮಾಯಣದಲ್ಲೂ ಪ್ರಸಾರವಾಯಿತು. ಇದು ಸಂಸ್ಕೃತ ರಾಮಾಯಣಕ್ಕೆ ಬದ್ಧವಾದ ಚಿತ್ರಣವಾಗಿದೆ. ಆದರೆ, ತಮಿಳಿನ ಕಂಬನ ರಾಮಾಯಣದಲ್ಲಿ ಸೀತಾಪಹರಣವನ್ನು ಅದ್ಭುತವಾದ ಫ್ಯಾಂಟಸಿಯ ಮೂಲಕ ನಿರ್ವಹಿಸಲಾಗಿದೆ. ಲಕ್ಷ್ಮಣರೇಖೆಯನ್ನು ದಾಟಿದ ಸೀತೆ ರಾವಣನ ವಿರಾಟ್ ಸ್ವರೂಪವನ್ನು ನೋಡಿ ನಡುಗುತ್ತಾ ಬವಳಿಗೊಂಡು ನೆಲಕ್ಕುರುಳುತ್ತಾಳೆ. ರಾವಣನು ಭೂಜಾತೆಯಾದ ಸೀತೆಯನ್ನು ಸ್ಪರ್ಶಿಸದೆ, ತನ್ನ ಬೆರಳುಗಳನ್ನೇ ನೇಗಿಲಿನಂತೆ ಬಳಸಿಕೊಂಡು ಸೀತೆಯಿದ್ದ ಭೂಭಾಗವನ್ನೆಲ್ಲ ಅಖಂಡವಾಗಿ ಬಗೆದು, ಸೀತೆಯನ್ನೆತ್ತಿಕೊಂಡು ಗಗನಗಾಮಿಯಾಗಿ ಲಂಕೆ ತಲುಪುತ್ತಾನೆ. ಇದನ್ನು ಎಸ್ವಿಆರ್ ರಾವಣನಾಗಿ ನಟಿಸಿರುವ 'ಸೀತಾರಾಮ ಕಲ್ಯಾಣಂ' – ಎಂಬ ಪೌರಾಣಿಕ ಚಿತ್ರದಲ್ಲಿ ಅದ್ಭುತರಮ್ಯವಾಗಿ ದೃಶ್ಯೀಕರಿಸಲಾಗಿದೆ. ಇಂಥ ಫ್ಯಾಂಟಸಿಯ ಮೂಲಕ ಕವಿ ಸಮಾಜಕ್ಕೆ ಕೊಡುತ್ತಿರುವ ಮೆಸೇಜ್ ಬಹುಮುಖ್ಯವೆಂದು ನನಗನ್ನಿಸಿದೆ. ಇದರ ಮುಂದೆ ದೈಹಿಕ ಬಲಾತ್ಕಾರದ ಟಿ.ವಿ. ರಾಮಾಯಣದ ಪ್ರಸಂಗವನ್ನು ಅರಳಿಸಿಯೆತ್ತಿ ನೋಡಬೇಕು. ತೆಲುಗು ಭಾಷೆಯಲ್ಲಿರುವ ಪೌರಾಣಿಕ ಚಿತ್ರಗಳನ್ನು ಸ್ಮರಿಸಿಕೊಂಡಲ್ಲಿ, ಮನೆಮನೆಯ ಹರಿಕತೆಯಾಗಿ ಮೂಡಿಬಂದ ಟಿ.ವಿ. ರಾಮಾಯಣ ಮತ್ತು ಟಿ.ವಿ. ಮಹಾಭಾರತಗಳು ಸಪ್ಪೆಯಾಗಿ ತೋರುತ್ತವೆ. ಜ್ಯೋತಿಷ್ಯವಾಣಿಗಳು, ಧಾರ್ಮಿಕ ಪ್ರವಚನಗಳು, ರಿಯಾಲಿಟಿ ಶೋಗಳು, ಹರಟೆ ಮಾತುಗಳು, ಕಂಪೆನಿ ಜಾಹೀರಾತುಗಳಿಗಾಗಿ ಪಟ್ಟುಗಳಂತೆ ಬಳಕೆಯಾಗುತ್ತಿರುವ ಕ್ವಿಜ್ ಕಾರ್ಯಕ್ರಮಗಳು, ದೈನಂದಿನ ಬದುಕುಗಳನ್ನು ಅತಿಯಾಗಿ ಎಳೆದೆಳೆದು ಚಿತ್ರರವಾಗುತ್ತಿರುವ ಸೀರಿಯಲ್‌ಗಳು ಮುಂತಾದುವು 'ಸಾಮಾಜಿಕ ತಟಸ್ಥೀಕರಣ'ಕ್ಕೆ ಸಲ್ಲಿಸುತ್ತಿರುವ ಮುಖ್ಯ ಪ್ರತ್ಯಾರ್ಪ ಕೊಡುಗೆಯನ್ನು ಗಮನಿಸಿದಲ್ಲಿ, ಕಿರುತೆರೆಗೆ ಅಗತ್ಯವಾದ ಸೆನ್ಸಾರ್‌ಶಿಪ್ ಬಗ್ಗೆ ಮನವರಿಕೆಯಾಗಬಹುದು. ಕಣ್ಣೆಯಿಲ್ಲದೆ ಕಾಣುವುದನ್ನು, ಕಿವಿಯಿಲ್ಲದೆ ಕೇಳುವುದನ್ನು ಯಾಂತ್ರಿಕವಾಗಿ ಕಲಿಸುತ್ತಿರುವ ಟಿ.ವಿ. ಮುಂತಾದ ಮಾಧ್ಯಮಗಳು ಪ್ರಜೆಗಳ ಎದೆ ಹೊಲದಲ್ಲಿ ಪಾರ್ಥೇನಿಯಂ ಬೆಳೆಯುತ್ತಾ ಹಾಳುಮಾಡುತ್ತಿವೆ. ಶ್ರುತಕವಾದ ಸುಸ್ವರೂಪ್ಪ ಸಂಸ್ಕೃತಿ ಮತ್ತು ಮನಸ್ಸಾಕ್ಷಿಯ ಮೌಲ್ಯಗಳೊಂದಿಗೆ ನಮ್ಮ ಬದುಕುಗಳನ್ನೇ ಪಣವಾಗಿಟ್ಟು ಆಟವಾಡುತ್ತಿರುವ ಈ ಮಾಧ್ಯಮಗಳ ನಿರ್ಲಜ್ಜೆಗೆ ಕೊನೆಯಿಲ್ಲವೆ ?

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಭಕ್ತಿಪಂಥದ ಮೂ ಅಲೆಗಳಿವೆ: ೧. ವಚನ ಚಳುವಳಿ ೨. ಕೀರ್ತನ ಸಾಹಿ ೩. ತತ್ವಪದಗಳು. ನಾಲ್ಕನೆಯ ಅಲೆಯಾಗಿ ಕನ್ನಡ ಭಕ್ತಿರಸ ಪ್ರಧಾನ ಸಿನೆಮಾಗಳನ್ನು ಗುರುತಿಸಬಹುದು ತಮಿಳು-ತೆಲುಗಿನ ಹಾಸ್ಯ ಪ್ರಜ್ಞೆ ಮತ್ತು ರಾಜಕೀ ಧ್ವನಿಯುಳ್ಳ ವಿಡಂಬನೆಗಳ ಮೂಲಕ ಸಾಧ್ಯವಾದ ಸಿನ ರಾಜಕಾರಣದ ತಿರುವನ್ನು ಕನ್ನಡ ಚಿತ್ರರಂಗ ತೆಗೆದುಕೊಳ್ಳ ಇರಲು ಈ ಭಕ್ತಿ ರಸಾಧಿಕ್ಯವೇ ಕಾರಣವಿರಬಹುದೆ ಡಿ. ಆರ್. ನಾಗರಾಜ್ ನಿರೂಪಣೆಯನ್ನಿಲ್ಲಿ (= ಸಾ ಕಥನ) ಸ್ಮರಿಸಿಕೊಳ್ಳಬಹುದು.

ಡಬ್ಬಿಂಗ್ ತಂತ್ರಜ್ಞಾನ ಕನ್ನಡಿಗರ ಅಸ್ಮಿತೆಗೆ ಮ ಕೊಡುಗೆ ಎಂದು ನಿರೂಪಿಸಿರುವ ಕೆ. ಪುಟ್ಟಸ್ವಾಮಿ ಅ 'ಸಿನೆಮಾಯಾನ'ದಲ್ಲಿ ಈ ಕುರಿತ ವಿವರಗಳಿವೆ. ಸುಬ್ಬಯ್ಯ ನಾಯ್ಡು ಮ ಆರ್. ನಾಗೇಂದ್ರರಾವ್ ನಟಿಸಿದ ಸತ್ಯಹರಿಶ್ಚಂದ್ರ ತಮಿಳಿಗೆ ಡಬ್ ಯಶಸ್ವಿಯಾಯ್ತು. ಆದರೆ, ಈ ಡಬ್ಬಿಂಗ್ ಮುಂದೆ ಕನ್ನಡಕ್ಕೆ ಬೂಮರಾಂ ಆಯಿತು. ತೆಲುಗು ಪೌರಾಣಿಕ ಮತ್ತು ಜಾನಪದ ಚಿತ್ರಗಳು ಕನ್ನಡಕ್ಕೆ ಡಬ್ ಅಪಾರ ಯಶಸ್ಸು ಗಳಿಸಿದವು. ಇದರಿಂದ ಕನ್ನಡ ಚಿತ್ರರಂಗಕ್ಕೆ ಭಾರಿ ಪೆಟ್ಟು ಬಿತ್ತು. ಕನ್ನಡ ಸಂಸ್ಕೃತಿ ಕ್ಷೇತ್ರದ ಅ.ನ.ಕೃ., ಮ. ರಾಮಮೂರ್ತಿ ಬೀದಿಗಿಳಿದು ಹೋರಾ ಮಾಡಿದರು. ಕನ್ನಡ ಚಳುವಳಿಗಾರರ ಹೋರಾಟ - ಪ್ರತಿಭಟನೆಗಳಿಂದ ಸರ್ಕಾರ ಮುಂದಾಗಿ ಡಬ್ಬಿಂಗ್ ಚಿತ್ರಗಳನ್ನು ನಿಷೇಧಿಸಿತು. ಇದರಿಂದಾಗಿ, ಕನ್ನಡದಲ್ಲಿ ಕ್ವಚಿತ್ತಾ ಕಾಣಿಸಿಕೊಂಡಿದ್ದ ಜಂಟಿ ನಿರ್ಮಾಣ ಚಿತ್ರಗಳು (= ಬೇಡರ ಕಣ್ಣಪ್ಪ, ನಾಗಾರ್ಜುನ ಇವು ಕನ್ನಡ ಮತ್ತು ತೆಲುಗಿನಲ್ಲಿ ರಾಜ್ ನಾಯಕತ್ವದಲ್ಲಿ ಜಂಟಿಯಾಗಿ ತಯಾರಾಗಿದ್ದವು ಒಂದು ಪರಂಪರೆಯಾಗಿ ಮುಂದುವರಿಯಿತು. ವಿಜಯಾ, ವಿಕ್ರಂ, ಎ.ವಿ.ಎ ಮುಂತಾದುವು ಕನ್ನಡ-ತೆಲುಗು-ತಮಿಳು ಭಾಷೆಗಳಲ್ಲಿ ಜಂಟಿಯಾಗಿ ಚಿತ್ರ ನಿರ್ ಮಾಡಿದುವು. ಇದರಿಂದ, ಕನ್ನಡ ಚಿತ್ರರಂಗ ಮತ್ತೆ ಚೇತರಿಸಿಕೊಂಡಿತು. ಜಂ ನಿರ್ಮಾಣಗಳಿಂದ ಕನ್ನಡದಲ್ಲಿ ಸದಭಿರುಚಿಯ ಶ್ರೇಷ್ಠ ಸಿನೆಮಾಗಳು ಮೂಡಿಬಂದು ಸತ್ಯಹರಿಶ್ಚಂದ್ರ, ವೀರ ಕೇಸರಿ, ವಾಲ್ಮೀಕಿ, ಗಾಳಿಗೋಪುರ, ಅಮರಶಿಲ್ಪಿ ಜಕಣಾಚಾ ಭೂಕೈಲಾಸ, ವಾತ್ಸಲ್ಯ ಮುಂತಾದವು ದ್ವಿಭಾಷಿಕ ಅಥವಾ ತ್ರಿಭಾಷಿಕ ಚಿತ್ರಗಳಾಗಿ ಜಂ ನಿರ್ಮಾಣಕ್ಕೆ ನಿದರ್ಶನಗಳು. ಕೆ. ಪುಟ್ಟಸ್ವಾಮಿ ನೀಡಿರುವ ಅಂಕಿ-ಅಂಶಗಳ ಪ್ರಕ ಜಂಟಿನಿರ್ಮಾಣದ 'ಅಮರಶಿಲ್ಪಿ ಜಕಣಾಚಾರಿ'ಗೆ ತಗುಲಿದ ಒಟ್ಟು ವೆಚ್ಚ ೧೧ ಲ ಕನ್ನಡದಿಂದ ಏಳು ಲಕ್ಷ ಮತ್ತು ತೆಲುಗಿನಿಂದ ಹದಿನೇಳು ಲಕ್ಷ, ಒಟ್ಟು ೨೪ ಲಕ್ಷ ರೂ.ಗಳ ಗಳಿಸಿತು. ಬೇಲೂರು-ಹಳೇಬೀಡು ಶಿಲ್ಪಗಳ ನಿರ್ಮಾಣಕಾರನೆಂದು ನಂಬಿರ ಜಕಣಾಚಾರಿಯ ಕತೆ ತೆಲುಗಿಗೆ ನೇಟಿವಿಟಿ ಅಲ್ಲ! ನೇಟಿವಿಟಿ ಅಥವಾ ಪ್ಯಾನ್ ಇಂಡಿಯ ಬೆಳೆಯದಿದ್ದರೆ ಮಾತ್ರ ಜಂಟಿ ನಿರ್ಮಾಣ ಸಾಧ್ಯ ಎನ್ನುವಂತಿಲ್ಲ. ಈ ಉದಾಹರಣೆಯಿ ಜಂಟಿ ನಿರ್ಮಾಣಗಳ ಬಗ್ಗೆ ಇನ್ನಾದರೂ ಗಂಭೀರವಾಗಿ ಆಲೋಚಿಸಬೇಕು.

ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರರಂಗದ ಡಬ್ಬಿಂಗ್ ವಿರೋ

ಮಹಾ ಪರಿನಿರ್ವಾಣ



೧

ಕಾಂಡವೇ ಶಿಲೀಕೃತಗೊಂಡು
ಕಲ್ಲಾದ ಪಳೆಯುಳಿಕೆ, ಮರಗಲ್ಲಿನಲಿ
ಕೆತ್ತಿದ ಬುದ್ಧನಿಗೆ
ಅವಳಡುಗೆ ಮನೆಯೀಗ ತಪೋವನ.
ನೀಳ ಕಣ್ಣು ಮುಚ್ಚಿ
ಧ್ಯಾನಕ್ಕೆ ಕೂತ ಅವನೊಂದಿಗೆ
ಅವಳ ನಿತ್ಯ ಕಸುಬಿನಲ್ಲೇ
ಮೌನ ಜುಗಲ್ ಬಂದಿ.

೨

ಸೊಪ್ಪು ಸೋಸುತ್ತಾ
ಕಾಳು ಬಿಡಿಸುತ್ತಾ
ಪಾತ್ರೆ ತೊಳೆಯುತ್ತಾ
ಮಗುವಿಗೆ ಹಾಲೂಡಿ
ಲಾಲಿ ಹೇಳುತ್ತಾ
ಮರಗಲ್ಲ ಬುದ್ಧನನ್ನು ನೆಟ್ಟಿದ್ದಾಳೆ
ಹೆಣ್ಣ ಪ್ರತಿರೂಪದ ಮೃತ್ತಿಕೆಯಲಿ.

೩

ಗಡಿಬಿಡಿಯಲಿ ಕೈಸುಟ್ಟು
ಬೆರಳು ಕೊಯ್ದು
ಜಾರಿ ಬಿದ್ದು
ನೋವು ಉಮ್ಮಳಿಸಿ
ಬಿಕ್ಕಳಿಸಿದ ಸದ್ದು
ಒಂದಿಷ್ಟೇ ಕಣ್ತೆರೆದು ನೋಡಿ
ಥಟ್ಟನೆ ಮುಚ್ಚುವ ತಥಾಗತ.
ಅವಳ ನೋವಿಗೆ ಮಿಡುಕುವನೇ ?
ತನ್ನ ಸಂಘಕ್ಕೇ ಹೆಣ್ಣ ನಿರಾಕರಿಸಿ
ಪರಿನಿರ್ವಾಣ ಹೊಂದಿದವನು ?
ಛೆ ! ಅವನೆಂಥ ಬುದ್ಧ ?
ಅವಳೆಂತು ಸಂಭಾವಿಸುವಳು
ತನ್ನಸ್ತಿತ್ವವನೇ ಅಪಮಾನಿಸಿದ
ನಿರ್ದಯಿ ಸಿದ್ಧಾರ್ಥನನ್ನು ?

೪

ಈರುಳ್ಳಿ ಹೆಚ್ಚುವ ನೆವದಲಿ
ಒಳಗಿನ ಸಂಕಟವೇ ಹೊರಕಾರಿ
ದಳ ದಳ ಉದುರುವ ಅವಳ ಕಣ್ಣೀರಿಗೆ
ಈಗೀಗ ಅವನ ಕಣ್ಣಂಚಿನಲ್ಲೂ
ಕಂಡೂ ಕಾಣದಂತೆ ನೀರ ಪಸೆಯೇ ?

೫

ಒಲೆಯ ಕಾವಿಗೆ ಬಿಸಿಯಾಗಿ
ಕುಳಿರ್ಗಾಳಿಗೆ ತಂಪಾಗಿ
ಜೋಗುಳಕ್ಕೆ ನಿದ್ದೆಯಾಗಿ
ಪಾತ್ರೆ ಸಪ್ಪಳಕ್ಕೆ ಕಿವಿಯಾಗಿ
ಅಡುಗೆ ಘಮಕ್ಕೆ ವಾಸನೆಯಾಗಿ
ಅವಳ ಜೀವಂತಿಕೆಗೆ ಕಣ್ಣಾಗಿ
ಅರಳುತ್ತಿವೆ ಅವನೊಳಹೊರಗು
ಬುದ್ಧನೆನಿಸಿಕೊಂಡೂ ಮುಕ್ಕಾಗಿ
ಮಿಕ್ಕುಳಿದ ಸಾಕ್ಷಿಗಾಗಿ
ಅವಳ ಆರ್ದ್ರತೆ
ಅವನ ನಿರ್ವಿಕಾರತೆಯ
ಅನುಸಂಧಾನದಲ್ಲೇ ಪರಸ್ಪರ
ಪರಿಪೂರಕ ಸಂಭಾಳಿಕೆ.

೬

ಹೆಣ್ಣ ಮಿಡಿತದ ಮೃತ್ತಿಕೆಯಲಿ ನೆಟ್ಟ
ಮರಗಲ್ಲ ಬುದ್ಧನಿಗೀಗ
ನೆಲದಾಳದಲ್ಲೆಲ್ಲಾ ಬೇರು
ಕೈಕಾಲು ಎದೆ ತಲೆಗಳೆಲ್ಲ ಚಿಗುರು
ಅವನೀಗ ಮರ್ತ್ಯಲೋಕದ
ಜೀವಂತ ಕೂಸು
ಕಣಕಣದ ಚಲನೆಗೂ ಮಿಡಿವ
ಹೆಣ್ಣ ನೋವಿಗೂ ತುಡಿವ
ಪರಿಪೂರ್ಣ ಜಾಗೃತ.
ಬುದ್ಧನೆಂಬ ಅನ್ವರ್ಥ !

(ಈ ಪದ್ಯದಲ್ಲಿ ಶಿಲೀಕೃತಗೊಂಡ ಕಾಂಡ ಅಥವಾ ಮರಗಲ್ಲು ಎಂಬ ಪದವನ್ನು ಬಳಸಿದ್ದೇನೆ. ಇದು ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಪದ. ಮರದ ಕಾಂಡ ಒಣಗಿ ಅನೇಕ ವರ್ಷಗಳ ಕಾಲ ಮಣ್ಣಿನೊಂದಿಗಿನ ಸಂಪರ್ಕದಿಂದ, ರಾಸಾಯನಿಕಕ್ರಿಯೆ ನಡೆದು ಖನಿಜವನ್ನು ಹೀರಿ ಮರದ ಕಾಂಡವೇ ಕಲ್ಲಾಗಿ ಪರಿವರ್ತನೆಯಾಗುವ ಸೃಷ್ಟಿ ವಿಶೇಷಕ್ಕೆ ಇಂಗ್ಲಿಷಿನಲ್ಲಿ 'petrified wood' ಎನ್ನುತ್ತಾರೆ. ಅದಕ್ಕೆ ತಕ್ಕ ಅರ್ಥ ನೀಡುವ ಪದ ಕನ್ನಡದಲ್ಲಿ ಇಲ್ಲ. ಹೀಗಾಗಿ ನಾನದನ್ನು 'ಮರಗಲ್ಲು' ಎಂದಿಲ್ಲಿ ಬಳಸಿದ್ದೇನೆ.)

ರೂಪ ಹಾಸನ
'ಪ್ರೇರಣ', ಸಂಟ್ ಜೋಸೆಫ್ ಶಾಲೆ ಹತ್ತಿರ
ಉತ್ತರ ಬಡಾವಣೆ, ಹಾಸನ-೫೭೩೨೦೧

ರ್ಣ ಸಾಧಕ ಮಡಿವಂತಿಕೆಯಾಗಿ ತೋರುತ್ತಿದೆ. ಡಬ್ಬಿಂಗ್ ವಿರೋಧಿ ನೀತಿಯಿಂದ ಕ ಚಿತ್ರರಂಗ ಪ್ರತ್ಯೇಕ ದ್ವೀಪವಾಗಿದೆ. ಹಿಂದಿ-ತೆಲುಗು-ತಮಿಳುಗಳ ನಡುವೆ ಂಗ್ ಚಿತ್ರಗಳ ವಿನಿಮಯ ಈಗಲೂ ಇದೆ. ಹಾಲಿವುಡ್ ಚಿತ್ರಗಳು ಈ ಮೂರು ಗಳಲ್ಲೂ ಡಬ್ಬಿಂಗ್ ಮೂಲಕ ಪ್ರಸಾರದಲ್ಲಿವೆ. ಟಿ.ವಿ.ಗಳಲ್ಲಿನ ಜಾಹಿರಾತುಗಳು, ನಲ್ ಜಿಯಾಗ್ರಫಿ, ಕಾರ್ಟೂನ್ ಮಾಲಿಗಳು ಕನ್ನಡಕ್ಕೆ ಡಬ್ಬಿಂಗ್ ಆಗಿ ಪ್ರಸಾರ ವೆ. ಭಾಷಿಕವಾಗಿ ಡಬ್ಬಿಂಗ್ (= ಸಂಸ್ಕೃತೀಕರಣ) ಮಾಡಿಕೊಳ್ಳುತ್ತಿರುವ ಕನ್ನಡವು ಮಾ ಮಾಧ್ಯಮದಲ್ಲಿ ಡಬ್ಬಿಂಗ್ ವೈರಿಯಾಗಿ ಇರುವುದು ಕನ್ನಡ ಚಿತ್ರರಂಗಕ್ಕೆ ಮಾರಕ ದೆ. ಈ ಬಗ್ಗೆ ಮರುಚಿಂತನೆ ಅಗತ್ಯವಾಗಿದೆ. ಸೀಮಿತವಾದ ಮಾರುಕಟ್ಟೆಯಿಂದ ಟ್ಟುಹೋಗಿರುವ ಇಂದಿನ ಕನ್ನಡ ಸಿನೆಮಾಗಳ ಬಗ್ಗೆ ಬರೆಯುವುದಕ್ಕೆ ಏನೂ ಇಲ್ಲ. ಪತ್ರಿಕೆಗಳು, ದೂರದರ್ಶನ, ಸಿನೆಮಾ ಕ್ಷೇತ್ರಗಳು ಬಿಂಬಿಸುವ 'ಕರ್ನಾಟಕ ಕೃತಿ'ಯನ್ನೇ ಏಕಮೇವ ಎಂದು ತಿಳಿಯಬೇಕಾಗಿಲ್ಲ. ಕಾರ್ಪೊರೇಟ್ ಹಿತಾಸಕ್ತಿಗಳಿಗೆ ನಾದ ರಾಜಕಾರಣಗಳು ಮತ್ತು ಸಮೂಹ ಮಾಧ್ಯಮಗಳು ಬಿಂಬಿಸುವುದೇ ರ್ನಾಟಕ ಸಂಸ್ಕೃತಿ' ಅಲ್ಲ! ಕರ್ನಾಟಕದ ರಾಜಧಾನಿಯಾಗಿರುವ ಮಹಾನಗರ ಗಳೂರಿನ ನಡೆ-ನುಡಿ, ರುಚಿ-ಅಭಿರುಚಿ, ಸಮಗ್ರ ಜೀವನಶೈಲಿಗಳನ್ನೇ ರ್ನಾಟಕ ಸಂಸ್ಕೃತಿ'ಯೆಂದು ಭಾವಿಸುವಂತಿಲ್ಲ. ಕಾರ್ಪೊರೇಟ್ ಹಿತಾಸಕ್ತಿಗಳು ಲ್ಲ ರಾಜಧಾನಿಯ ಎಲ್ಲ ಆಕರ್ಷಣೆಗಳಿಂದ ದೂರವಾಗಿರುವ ಜನಸಮುದಾಯಗಳು ಕುವ ಬಗೆಯಲ್ಲಿ 'ಕರ್ನಾಟಕ ಸಂಸ್ಕೃತಿ'ಯನ್ನು ಮನಗಾಣಬೇಕಾಗುತ್ತದೆ.

ಅದರಲ್ಲೂ ತುಂಗಭದ್ರಾ ನದಿಯ ಮೇಲಕ್ಕೆ ಇರುವ ಜನಸಮುದಾಯಗಳ ನಡೆ-ನುಡಿ, ರುಚಿ-ಅಭಿರುಚಿ, ಸಮಗ್ರ ಜೀವನಶೈಲಿಗಳನ್ನು ತುಂಗಭದ್ರಾ ಸಂಸ್ಕೃತಿ ಎನ್ನಬಹುದು. ಕರ್ನಾಟಕ ಸಂಸ್ಕೃತಿ ಎಂದರೆ ತುಂಗ (= ಉನ್ನತವಾದುದು), ಭದ್ರ (=ಸುಸ್ಥಿರವಾದುದು) ಎಂದು ಅರ್ಥಮಾಡಿಕೊಳ್ಳಬೇಕು. ತುಂಗಭದ್ರಾ ಸಂಸ್ಕೃತಿಯು ಏಕರೂಪಾತ್ಮಕವಾದ ತೋಪು ಸಂಸ್ಕೃತಿ ಅಲ್ಲ! ಇದು ಬಹುರೂಪಾತ್ಮಕ ಕಾಡು ಪ್ರಜ್ಞೆಯ 'ಜವಾರಿ ಸಂಸ್ಕೃತಿ'ಯೆಂದೇ ತಿಳಿಯಬೇಕು. ಸಸ್ಯಗಳು, ಪ್ರಾಣಿಗಳು, ಮನುಷ್ಯರು ಬದುಕುವ ಬಗೆಯಲ್ಲಿ ಜವಾರಿತನ ಉಳಿದಿರುವುದು ತುಂಗಭದ್ರಾ ನದಿಯ ಮೇಲುಗಡೆಯೆಂದು ನನಗನ್ನಿಸಿದೆ. ಪರಸ್ಪರ ಸಂಬಂಧವಿಲ್ಲದೆ ತುಂಡು ವಿಚಾರಗಳ ಜೋಡಣೆಯಂತಿರುವ ಈ ಬರಹಕ್ಕೆ ಕ್ಷಮೆ ಇರಲಿ.

(* ನವೆಂಬರ್ ೨೦೧೦ರಲ್ಲಿ ಇಳಕಲ್ಲದ ಶ್ರೀ ವಿಜಯ ಮಹಾಂತೇಶ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯವು 'ಸಂಸ್ಕೃತಿ: ಮರುಚಿಂತನ' ಎಂಬ ವಿಷಯ ಕುರಿತು ಸಮ್ಮೇಳನ ನಡೆಸಿತು. ಅಲ್ಲಿ [illegible] [illegible] [illegible].)

ಡಾ॥ ಎ. ಚಂದ್ರಶೇಖರ ನಂಗಲಿ
[illegible] 'ಶ್ರೀಗೌರಿ', ೪ನೇ ಅಡ್ಡರಸ್ತೆ, ಕನಕನಗರ
ಹೊಸಕೋಟೆ - ೫೬೨ ೧೧೪ (ಬೆಂಗಳೂರು [illegible])



ಕದಳಿ ಹೊಕ್ಕು ಬಂದೆ

(ಸುತ್ತಾಟದ ಕಥನಗಳು)

ರಹಮತ್ ತರೀಕೆರೆ

ಪುಟ : ೧೭೬

ಬೆಲೆ : ರೂ. ೧೦೦

ನವಕರ್ನಾಟಕ ಪ್ರಕಾಶನ

ಎಂಬೆಸಿ ಸೆಂಟರ್,

ಕ್ರೆಸೆಂಟ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ ೫೧೫೯, ಬೆಂಗಳೂರು - ೧

ರಹಮತ್ ತರೀಕೆರೆಯವರ ಬರಹಗಳೆಂದರೆ ಹೊಸ ಲೋಕವೊಂದನ್ನು ಪ್ರವೇಶಿಸಿದಂತೆ. ನಮಗರಿವಿಲ್ಲದ ಎಷ್ಟೊಂದು ವಿಚಾರಗಳು ಅಲ್ಲಿ ಒಂದರ ಹಿಂದೊಂದು ಸಾಲುಗಟ್ಟಿ ನಮ್ಮನ್ನೆದುರುಗೊಳ್ಳುತ್ತವೆ. ವ್ಯಾಪಕ ಓದು - ಅಧ್ಯಾಪನ - ಪ್ರವಾಸ - ಬರವಣಿಗೆಗಳಿಂದ ಸ್ವಲ್ಪವೂ ಕಂಗೆಡದೆ ತುಂಬ ಆಪ್ತವಾಗಿ ಅವನ್ನು ಕಂಡಿದ್ದರಿಂದ ಇದುವರೆಗೂ ೨೩ ಕೃತಿಗಳನ್ನು ಅವರು ಬರೆಯಲು ಸಾಧ್ಯವಾಯಿತು. ಈ ಕೃತಿಯ ಬಗ್ಗೆ ಹೇಳುವುದಾದರೆ ಇತಿಹಾಸ ಪ್ರಸಿದ್ಧ ತಾಣಗಳೆಲ್ಲವೂ ಇವರನ್ನು ಕೈಬೀಸಿ ಕರೆಯುತ್ತಿರುತ್ತವೆ. ಓಗೊಟ್ಟು ಇವರು ಹೊರಟರೆಂದರೆ ಒಂದು ತರಗೆಲೆಯ ಮರ್ಮರವನ್ನೂ ಸೂಕ್ಷ್ಮವಾಗಿ ಕಿವಿಗೊಟ್ಟು ಕೇಳಿಸಿಕೊಳ್ಳುತ್ತ ಪ್ರವಾಸದ ಕ್ಷಣಕ್ಷಣವನ್ನೂ ಆಸ್ವಾದಿಸಬಲ್ಲವರು. ಇವರ ಮೊದಲ ಆಯ್ಕೆ ಬೆಟ್ಟ ಪ್ರದೇಶಗಳು, ಹಳ್ಳಿಗಾಡುಗಳು, ಸಮುದ್ರದ ನಡುವೆ ಇಣುಕುತ್ತಿರುವ ದ್ವೀಪ ಸಮೂಹಗಳು. ಅಲ್ಲಿನ ಸೌಂದರ್ಯದ ಜೊತೆಗೆ ಸ್ಥಳೀಯ ವಿಶೇಷತೆಗಳೇನಾದರೂ ಇದ್ದರೆ ಮೊದಲು ತಿಳಿದುಕೊಳ್ಳುವುದು, ಊರಿನ ಆದರಣೀಯ ವ್ಯಕ್ತಿಗಳೊಂದಿಗೆ ಸಂವಾದ, ಪುರಾಣ ಪ್ರಸಿದ್ಧ ಸ್ಥಳಗಳಲ್ಲಿನ ಕಳೆದುಹೋದ ಸಂಸ್ಕೃತಿಯನ್ನು ಇಂದಿನ ಕಾಲಕ್ಕೆ ತಳಕುಹಾಕಿ ತುಲನೆ ಮಾಡುವುದು ಇವೆಲ್ಲ ರಹಮತ್‌ಗೆ ತುಂಬ ಪ್ರಿಯವಾದ ಹವ್ಯಾಸಗಳು. ಒಂದೆಡೆ ಕುಳಿತುಮಾಡುವ ಅಧ್ಯಯನದಿಂದ ಸಿಗುವ ಜ್ಞಾನ ಒಂದು ತೆರನಾದರೆ ದೇಶ ಸಂಚಾರ ಮಾಡುತ್ತಾ ಸ್ವಾನುಭವದಿಂದ ಗಳಿಸಿದ ಸತ್ಯದ ಅರಿವೇ ಇನ್ನೊಂದು ತರಹದ್ದು. ಅದನ್ನು ಈ ಪುಸ್ತಕದಲ್ಲಿ ಮನಗಾಣಿಸಲಾಗಿದೆ.

ಬಾನಾಡಿಗೆ ಬಂಧನವೆ ? (ಬಾಲ್ಯವೆಂಬ ಪಂಜರದಿಂದ ಬಿಡುಗಡೆ ಬಯಸುವ ಯೋಚನೆಗಳು)

ಡಾ॥ ಮಹಾಬಲೇಶ್ವರ ರಾವ್

ಪುಟ : ೧೬೮ ಬೆಲೆ : ರೂ. ೧೦೦

ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂಚೆ ಪೆಟ್ಟಿಗೆ ಸಂ. ೫೧೫೯, ಬೆಂಗಳೂರು - ೫೬೦ ೦೦೧



ಮೊಗ್ಗು ಸಹಜವಾಗಿ ಅರಳಬೇಕು. ಪಕಳೆ ಬಿಡಿಸಿ ಬೇಗ ಅರಳಿಸಲು ನೋಡಿದರೆ ಅದು ಅರಳುವ ಬದಲು ಮುದುಡಬಹುದು. ಮಕ್ಕಳು ಸಹ ಯಾವುದೇ ಒತ್ತಡವಿಲ್ಲದೆ ನಕ್ಕು ನಲಿಯಬೇಕಾದರೆ ಬಾಲ್ಯದಲ್ಲಿ ಸೂಕ್ತ ಮತ್ತು ಸಹ್ಯ ವಾತಾವರಣ ಬೇಕು. ಬಾಲ್ಯದಲ್ಲಿ ವಿಪರೀತ ಶಿಸ್ತು, ಭಯದ ವಾತಾವರಣ, ಹೊಡೆ... ಅಪಮಾನಗಳನ್ನು ಸಹಿಸಿ ನೋವುಂಡ ಮಗು ಎಲ್ಲರಂತಿರದೆ ಆತ್ಮವಿಶ್ವಾಸ ಕಳೆದುಕೊಂಡಿರುತ್ತದೆ. ನಮ್ಮ ದೇಶದ ಬ... ಕುಟುಂಬಗಳಲ್ಲಿ ಮಕ್ಕಳ ಪಾಲನೆ ಒಂದು ಸಮಸ್ಯೆಯಾದರೆ ಸಿರಿವಂತ ಕುಟುಂಬದವರಿಗೆ ಮಗುವನ್ನು ಗಮನಿಸ... ಸಮಯವಿಲ್ಲ! ಎಲ್ಲಕ್ಕೂ ಆಳುಕಾಳು. ಸುರಕ್ಷಿತ ಭಾವನೆ, ಒತ್ತಡ ಇಲ್ಲದ ನಿರ್ಭಯ ವಾತಾವರಣ ಮಗುವಿಗೆ ಇಂದಿ... ದಿನಗಳಲ್ಲಿ ಸಿಗುವುದು ಕಷ್ಟ. ಸಂತೋಷದ ಬಾಲ್ಯ ಎಷ್ಟೊಂದು ಅಗತ್ಯವೆಂಬುದನ್ನು ಇಲ್ಲಿ ಶಿಕ್ಷಣತಜ್ಞ ಮಹಾಬಲೇಶ್ವ... ರಾವ್ ಉದಾಹರಣೆಗಳ ಸಹಿತ ನಿರೂಪಿಸಿದ್ದಾರೆ. ತಮ್ಮ ಬಾಲ್ಯ ಹೇಗಿತ್ತೆಂಬುದನ್ನೂ ಹಿಂತಿರುಗಿ ನೋಡಿ ಅನುಭವಗ... ಸಹಿತ ಮನೋವೈಜ್ಞಾನಿಕ ಮತ್ತು ಸಮಾಜ ಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಎಲ್ಲ ಹೆತ್ತವರು, ಪೋಷಕರು, ಶಾಲ... ಶಿಕ್ಷಕರು ಈ ಪುಸ್ತಕವನ್ನು ಓದುವುದಷ್ಟೇ ಅಲ್ಲದೆ ಮಕ್ಕಳಿಗೆ ಸಂತೋಷದಾಯಕ ಬಾಲ್ಯವನ್ನು ಕಳೆಯಲು ನೆರವಾಗಬೇಕ... ಮಕ್ಕಳಿಗಿರುವ ಮೂಲಭೂತ ಹಕ್ಕುಗಳು ಯಾವುವು, ಹದಿಹರೆಯದವರ ಮನೋಸ್ಥಿತಿ, ಮಾದಕ ವಸ್ತುಗಳಿಗೆ ಸುಲಭವಾ... ಬಲಿಯಾಗುವ ಯುವಜನತೆ, ಇವಕ್ಕೆಲ್ಲ ಕಾರಣಗಳು ಹಾಗೂ ಪರಿಹಾರ ರೂಪದ ಸಲಹೆಗಳೂ ಈ ಕೃತಿಯಲ್ಲಿವೆ.

ಚಿಂತಕರು ಮತ್ತು ಖಜಾಂಚಿಗಳು

ಬ್ಯಾರೋಸ್ ಡನ್‌ಹ್ಯಾಮ್; ಅನುವಾದ : ಎಚ್. ಕೆ. ರಾಮಚಂದ್ರಮೂರ್ತಿ

ಪುಟ : ೬೪ ಬೆಲೆ : ರೂ. ೪...

ಮಾ-ಲೆ ಪ್ರಕಾಶನ, ೨-ಎಫ್, ಪವನ ಪರಂಜ್ಯೋತಿ ಅಪಾರ್ಟ್‌ಮೆಂಟ್ಸ್, ೨೨/೧, ೪ನೇ ಅಡ್ಡರಸ್ತೆ, ಕಾವೇರಿನಗರ, ಬನಶಂಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫

ಬ್ಯಾರೋಸ್ ಡನ್‌ಹ್ಯಾಮ್ ಆಂಗ್ಲಭಾಷೆಯಲ್ಲಿ ಬರೆದ 'ಥಿಂಕರ್ಸ್ ಎಂಡ್ ಟ್ರೆಷರರ್ಸ್' ಕೃತಿ... ಕನ್ನಡ ಅನುವಾದ. ಹಣವೂ ಬುದ್ಧಿವಂತಿಕೆಯೂ ಒಟ್ಟಾಗಿರುವುದು ಅಪರೂಪ ಮತ್ತು ಇದ್ದ... ಅದು ದೇಶದ ಸೌಭಾಗ್ಯ. ಚಿಂತನೆಗಳು ಜನಪರವಾಗಿರುವುದು ಮುಖ್ಯ. ಈ ಪುಸ್ತಕದ... ಖಜಾಂಚಿಗಳ ಮತ್ತು ಚಿಂತಕರ ನಡುವಿನ ಸಂಬಂಧಗಳನ್ನು ವಿವರಿಸುತ್ತ ಅದರಿಂದ ಜನತೆ... ಮೇಲಾಗುವ ಅನುಕೂಲ-ಪ್ರತಿಕೂಲ ಪರಿಣಾಮಗಳನ್ನು ಸೊಗಸಾಗಿ ವಿಶ್ಲೇಷಿಸಲಾಗಿದೆ. ಇಂದಿನ ಜಾಗತಿಕ ವಿದ್ಯಮಾ... ಗಳನ್ನು ಅವಲೋಕಿಸಿದರೆ ಅಧಿಕಾರ ಮತ್ತು ಹಣದ ಬಲದಿಂದ ಪ್ರಭುತ್ವದ ಚಿಂತನೆಗಳು ಪ್ರಳಯಾಂತಕವಾಗಿ ಮೇಲು... ಪಡೆದಿವೆ. ಖಜಾಂಚಿಗಳಿಗೊಲಿಯುವ ಚಿಂತಕರ ಸಂಖ್ಯೆ ಇಂದು ಹೆಚ್ಚಾಗಿರುವುದು ದುರದೃಷ್ಟಕರ ಮತ್ತು ಆತಂಕ... ವಿಚಾರ. ಸಾಮಾನ್ಯ ಜನರ ಹಿತವನ್ನು ಬಲಿಗೊಟ್ಟಾದರೂ ಪ್ರಭುತ್ವಕ್ಕೆ ಬೇಕಾದಂತೆ ಯೋಜನೆಯನ್ನು ರೂಪಿಸಿಕೊಡು... ಒತ್ತಡವೊಂದು ಚಿಂತಕರಿಗೆ ಎದುರಾಗುತ್ತದೆ. ಅಮೆರಿಕಾದಂತಹ ಶ್ರೀಮಂತ ರಾಷ್ಟ್ರವೊಂದನ್ನು ಗಮನದಲ್ಲಿರಿಸಿಕೊಂ... ಬರೆದ ಈ ಪುಸ್ತಕವು ಇಂದು ಭಾರತದಂತಹ ಇತರ ರಾಷ್ಟ್ರಗಳಿಗೂ ಅನ್ವಯಿಸುವ ರೀತಿಯಲ್ಲಿ ನಾವು ಹ... ಹಾಕುತ್ತಿರುವುದು ಅಪರಾಧ. ಧೀಮಂತ ವಿಜ್ಞಾನಿ, ತತ್ವಜ್ಞಾನಿ, ಚರಿತ್ರೆಕಾರ, ಪತ್ರಕರ್ತ, ಸಾಹಿತಿ... ಇವರೆಲ್ಲ ಯಾರು... ಒಬ್ಬಿಬ್ಬರಿಗಾಗಿ ಕೆಲಸ ಮಾಡದೆ, ಬಾಹ್ಯ ಒತ್ತಡಕ್ಕೆ ಮಣಿಯದೆ ತನ್ನತನ ಉಳಿಸಿಕೊಂಡಲ್ಲಿ ಜನಾದರಣೀಯನಾಗುತ್ತಾನೆ.

ಲೋಕಾಯತ (ಪ್ರಾಚೀನ ಭಾರತದಲ್ಲಿ ಭೌತವಾದ - ಒಂದು ಅಧ್ಯಯನ)

ದೇವಿಪ್ರಸಾದ ಚಟ್ಟೋಪಾಧ್ಯಾಯ; ಸಂಗ್ರಹಾನುವಾದ : ಜಿ. ರಾಮಕೃಷ್ಣ

ಪುಟ : ೪೪೦ ಬೆಲೆ : ರೂ. ೨೫೦

ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ ೫೧೫೯, ಬೆಂಗಳೂರು - ೫೬೦ ೦೦೧



ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಉತ್ಕೃಷ್ಟ ಕೃತಿ ಲೋಕಾಯತವು ಕನ್ನಡಕ್ಕೆ ಅನುವಾದಗೊಂಡುದೇ ಸಂತೋಷದ ಸಂಗತಿ. ನಮ್ಮ ನೆಲದಲ್ಲೇ ನಡೆದುಹೋಗಿರುವ ಚರಿತ್ರೆಯ ಅದ್ಭುತ ಕಥನದ ಅನಾವರಣ. ಪ್ರಾಚೀನ ಭಾರತದ ಬುಡಕಟ್ಟು ಸಂಸ್ಕೃತಿಗಳ ಸಮೂಹಜೀವನ ವ್ಯವಸ್ಥೆಯಿಂದ ಮುಂದೆ ಕೃಷಿ ಪದ್ಧತಿಗೆ ಹೊಂದಿಕೊಳ್ಳುವ ಜನಜೀವನ, ವಿವಿಧ ಆಚರಣೆಗಳು ಇಲ್ಲಿ ಪ್ರಸ್ತಾಪಿತವಾಗಿವೆ. ನಾವಿಂದು ಅನುಸರಿಸುವ ಅನೇಕ ಮೂಢಾಚಾರಗಳು ಅಂದಿನ ದಿನಗಳಲ್ಲಿ ಹೇಗೆ ಗ್ರಹಿಸಲ್ಪಟ್ಟಿದ್ದುವು ಮತ್ತು ಮೂಲ ಸಂಸ್ಕೃತಿಯ ಬೇರು ಎಲ್ಲಿತ್ತು ಎಂಬುದನ್ನು ಶೋಧಿಸುತ್ತ ಸಾಗುವ ಕೃತಿ. ಬೇಟೆಯ ಹಂತದಿಂದ ಕೃಷಿಯ ಕಡೆಗೆ ಸಾಗಿದ ಸಂದರ್ಭದಲ್ಲಿ, ಹಂಚಿ ತಿನ್ನುವ ಸಮಾನತೆಯ ಕಾಲ ಕೊನೆಗೊಂಡು ಮನುಷ್ಯ ನೆಲದ ಹಕ್ಕು ಸ್ಥಾಪಿಸುವ ಹಂತದಲ್ಲಿ ಸಂಘರ್ಷಗಳುಂಟಾಗಿ ವರ್ಗವ್ಯವಸ್ಥೆ ಮೂಡಿತು. ಇಲ್ಲಿ ವೇದಪೂರ್ವ - ವೇದೋತ್ತರ ಕಾಲದ ಘಟನೆಗಳೆಲ್ಲ ಮೆರವಣಿಗೆಯಂತೆ ಸಾಲಾಗಿ ಕಣ್ಣಮುಂದೆ ಸಾಗುತ್ತವೆ. ವಿವಿಧ ಕಾಲಘಟ್ಟಗಳಲ್ಲಿ ಬಗೆ ಬಗೆಯ ಆಚಾರಗಳು, ನಾಸ್ತಿಕ-ಆಸ್ತಿಕ ದರ್ಶನಗಳು, ಕಲ್ಪನೆಗಳು, ಪ್ರಾರ್ಥನೆ, ಹಾರೈಕೆ ಇವೆಲ್ಲ ಆಹಾರ ದೊರೆಯಲೆಂದು ಆಶಿಸುವ ಅಪೇಕ್ಷೆಗಳಾಗಿದ್ದುವು... ಚರಿತ್ರೆಯಲ್ಲಿ ಮಾನವ ಜೀವನದ ಯಾವ ಘಟ್ಟವನ್ನೂ ಬಿಟ್ಟು ಮುಂದುವರಿಯಲು ಅಸಾಧ್ಯವೆಂಬ ಸತ್ಯವನ್ನು ಲೋಕಾಯತ ಕೃತಿ ನಮಗೆ ತಿಳಿಸುತ್ತದೆ. ಪ್ರಾಚೀನ ಭೌತವಾದ, ಸಾಮಾಜ... ಹಿನ್ನೆಲೆ ಭೌತವಾದ, ಭಾವನಾವಾದಗಳೆಂಬ ನಾಲ್ಕು ಅಧ್ಯಾಯಗಳಲ್ಲಿರುವ ಈ ಅದ್ವಿತೀಯ ಗ್ರಂಥವನ್ನು, ಇಂಗ್ಲಿಷ್ ಆವೃತ್ತಿ ಬಂದು ೫೨ ವರ್ಷಗಳಾದರೂ ಕನ್ನಡಕ್ಕೆ ತರಲು ಯಾರು ಮನಸ್ಸು ಮಾಡಿಲ್ಲದ ಸಂದರ್ಭದಲ್ಲಿ ಡಾ॥ ಜಿ. ಆರ್. ಅನುವಾದಿಸಿಕೊಟ್ಟಿದ್ದಾರೆ. ಅವರಿಗೆ ಅಭಿನಂದನೆ ಹೇಳುತ್ತ ಇಲ್ಲಿನ ಅಸಂಖ್ಯ-ಅತುಲ್ಯ ವೈಚಾರಿಕ ನಿಲುವನ್ನು ಸವಿಯೋಣ.

ದಿವಿನಂಗಳ (ಅಸ್ಪೃಶ್ಯತಾ ನಿವಾರಣೆಯ ಹದಿನೈದು ಬೀದಿ ನಾಟಕಗಳ ಗುಚ್ಛ)

ಸಂಪಾದಕ : ನಂಜುಂಡಸ್ವಾಮಿ ತೊಟ್ಟವಾಡಿ

ಪುಟ : xx + ೨೬೪ = ೨೮೪ ಬೆಲೆ : ರೂ. ೧೫೦

ರಂಗಚೇತನ ಸಂಸ್ಕೃತಿ ಕೇಂದ್ರ ಟ್ರಸ್ಟ್, ನಂ. ೩೦೬, ಸ್ವಿಸ್ ಕಾಂಪ್ಲೆಕ್ಸ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - ೫೬೦ ೦೦೧

ಅಸ್ಪೃಶ್ಯತಾ ನಿವಾರಣೆಯ ಪ್ರಬಲ ಗುರಿಯನ್ನಿರಿಸಿಕೊಂಡ ಹಲವು ನಾಟಕಗಳು ಇಲ್ಲಿವೆ. ಎಲ್ಲ ಪ್ರಸಿದ್ಧ ಬೀದಿ ನಾಟಕಗಳಾಗಿದ್ದು ಶೋಷಿತ ಸಮುದಾಯ ಎಚ್ಚರಗೊಂಡು ಶೋಷಣೆಯ ವಿರುದ್ಧ ದನಿಯೆತ್ತಿರುವ ಪ್ರತಿಭಟನೆಯ ಪ್ರಬಲ ಅಸ್ತ್ರಗಳು. ಇವು ಆರಂಭಗೊಂಡು ನಾಲ್ಕು ದಶಕಗಳೇ ಸಂದಿವೆ. ಅಂದಿನ ಪ್ರಗತಿಪರ ನಾಟಕಕಾರರೂ ಇಂತಹ ನಾಟಕಗಳನ್ನು ಬರೆದು ನಗರದ ಬೀದಿ ಬೀದಿಗಳಲ್ಲಿ ಪ್ರದರ್ಶಿಸಿ ಸಮಾಜದ ಕೊರೆಗಳನ್ನು, ವಿಕೃತ ಮನಸ್ಸುಗಳನ್ನು ತೆರೆದಿರಿಸಿದ್ದರು. ಇಂತಹ ನಾಟಕಗಳಿಗೆ ಮೇಕಪ್, ವೇಷ ಭೂಷಣ, ಢಾಳಾದ ದೀಪ ಮುಂತಾದವು ಏನೂ ಬೇಕಿಲ್ಲ. ನಟರೂ-ನಟಿಯರೂ ವಿಷಯವನ್ನು ಪ್ರಸ್ತುತಪಡಿಸುತ್ತ ಸಹಜವಾಗಿ ಅಭಿನಯಿಸಿ ಪಾತ್ರನಿರ್ವಹಣೆ ಮಾಡುವುದಷ್ಟೇ. ಇಂಥ ನಾಟಕ ಪ್ರಕಾರವೊಂದು ಇಲೆಕ್ಟ್ರಾನಿಕ್ ಮಾಧ್ಯಮಗಳ ಮುಂದೆ ಸ್ಪರ್ಧಿಸಲಾಗದೆ ನೇಪಥ್ಯಕ್ಕೆ ಸರಿಯಿತು. ಇತ್ತೀಚೆಗೆ ರಂಗಚೇತನ ಟ್ರಸ್ಟ್ ಮೂಲಕ ಬೀದಿನಾಟಕಗಳ ಸಪ್ತಾಹ ಕರ್ನಾಟಕದಾದ್ಯಂತ ನಡೆದಿದ್ದು ಅಲ್ಲಿ ಪ್ರದರ್ಶನಕ್ಕಾಗಿ ಬರೆಸಿರುವ ನಾಟಕಗಳ ಸಂಕಲನವಿದು. ಸಮಾಜವೇಕೆ ಹೀಗಿದೆ? ತಾರತಮ್ಯಗಳೇಕೆ, ದುರ್ಬಲರನ್ನೇಕೆ ತುಳಿಯುತ್ತಿದ್ದಾರೆ, ಎಲ್ಲರಿಗೂ ಬದುಕುವ ಹಕ್ಕಿಲ್ಲವೆ, ಗುಣಕ್ಕಿಂತ ಹಣಕ್ಕೇಕೆ ಪ್ರಾಮುಖ್ಯತೆ – ಮುಂತಾದ ಪ್ರಶ್ನೆಗಳನ್ನು ಮುಂದಿರಿಸಿಕೊಂಡು ಇವು ರಚಿತವಾಗಿವೆ. ಇವನ್ನು ಬೀದಿಗಳಲ್ಲೇ ಪ್ರದರ್ಶಿಸಬೇಕೆಂದೇನೂ ಇಲ್ಲ. ಓದಿಯೂ ಅರ್ಥೈಸಬಹುದು; ರಂಗಕ್ಕೂ ಅಳವಡಿಸಬಹುದು. ಮಾಧ್ಯಮ ಯಾವುದಾದರೇನು – ಜನಜಾಗೃತಿ ಮುಖ್ಯ. ಧರ್ಮನಿರಪೇಕ್ಷ, ಜಾತ್ಯತೀತ ಸಮಾಜ ನಿರ್ಮಾಣ ಮುಖ್ಯ.



ಗೂಡು ಕಟ್ಟಿದ ಹಕ್ಕಿ (ಕವಿತೆ, ಭಾವಗೀತೆ)

ಡಾ|| ಕಾ. ವೆಂ. ಶ್ರೀನಿವಾಸಮೂರ್ತಿ

ಪುಟ : ೮೦ ಬೆಲೆ : ರೂ. ೫೦

ಬರಹ ಪಬ್ಲಿಷಿಂಗ್ ಹೌಸ್, ನಂ. ೧೧೯, ೩ನೇ ಅಡ್ಡರಸ್ತೆ, ೮ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು - ೪

ಇಂದಿನ ಮನುಷ್ಯನಿಗೆ ಸದ್ಭಾವನೆಗಳು – ಸದಾಶಯಗಳು ಉಂಟಾಗಲೆಂದು ಹಾರೈಸಿ ಬರೆದ ಈ ಭಾವಗೀತೆ-ಕವಿತೆಗಳು ನಾವಿಂದು ಬದುಕುತ್ತಿರುವ ಪರಿಸ್ಥಿತಿಯಲ್ಲಿ ಅವೆಲ್ಲ ಇಲ್ಲವೆಂಬ ಸತ್ಯವನ್ನು ಮನಗಾಣಿಸುತ್ತವೆ. ಕಳೆದುಹೋದಂತಹ ಉತ್ತಮ ನಡವಳಿಕೆಗಳು ಮತ್ತು ಮನುಷ್ಯರಲ್ಲಿರಬೇಕಾದ ಸದ್ಗುಣಗಳೆಲ್ಲ ಮರಳಿ ಬರಲೆಂಬ ಆಶಯ ಇಲ್ಲಿದೆ. ಜಗತ್ತೇಕೆ ಹೀಗೆ ಬದಲಾವಣೆ ಕಂಡಿದೆ ಮತ್ತು ಅದು ಕೆಡುಕಿನೆಡೆಗೇ ಯಾಕೆ ಹೆಜ್ಜೆ ಹಾಕುತ್ತಿದೆ ಎಂಬುದು ಪ್ರಶ್ನೆಯಾದರೆ ಅದಕ್ಕುತ್ತರವಾಗಿ ಬೇವು ಬಿತ್ತಿದರೆ ಮಾವು ಬೆಳೆಯುವುದೇ ಎಂಬ ಪ್ರಶ್ನೆ ತಿರುಗುಬಾಣವಾಗಿ ಬರುತ್ತದೆ. ಮಾನವನೇ ಎಸಗಿದ ಅಕೃತ್ಯ-ಕುಕೃತ್ಯಗಳಿಂದಲೇ ನಮ್ಮ ಪರಿಸರ ಹಾನಿಗೊಳ್ಳುತ್ತಿರುವುದೆಂದು ಕೆಲ ಕವಿತೆಗಳು ಹೇಳಿದರೆ, ಭೂಮಿಯ ಮಕ್ಕಳೆಲ್ಲ ಒಂದೇ ಆಗಿದ್ದರೂ ಮನುಷ್ಯರಲ್ಲಿ ಬೇರೂರಿದ ಹೊಣೆಗೇಡಿತನ, ಮತೀಯ ಭಾವನೆಯಂಥ ಸೂಕ್ಷ್ಮ ವಿಚಾರಗಳಿಂದಾಗುವ ಅನಾಹುತಗಳನ್ನು ಇತರ ಪದ್ಯಗಳು ಎತ್ತಿತೋರುತ್ತಿವೆ. ಬುದ್ಧಿವಂತನಾದ ಮಾನವ ಸ್ವಲ್ಪ ವಿವೇಕದಿಂದ ವರ್ತಿಸಿದರೆ ಬಹಳಷ್ಟು ಕೆಡುಕುಗಳಿಂದ ಪಾರಾಗಬಹುದೆಂಬ ಸಂದೇಶ ಕವಿತೆಗಳಲ್ಲಿ ಅಡಕವಾಗಿದೆ. ಈ ಸಂಕಲನದ ಕವಿ ಶ್ರೀ ಕಾ. ವೆಂ. ಶ್ರೀನಿವಾಸಮೂರ್ತಿ ಎಡಪಂಥೀಯ ಸಮಾಜವಾದೀ ದೃಷ್ಟಿಕೋನ ಉಳ್ಳವರು. ಕ್ರಾಂತಿಕಾರಿ ಹೋರಾಟದ ಬಗ್ಗೆ ಒಲವುಳ್ಳವರು. ಕನ್ನಡ ಪರವಾದ ಕಾಳಜಿ ಇವರಲ್ಲಿ ವಿಶೇಷವಾಗಿದ್ದು, ಇಲ್ಲಿನ ಕೆಲವು ಹಾಡುಗಳು ಪ್ರಸಿದ್ಧ ಗಾಯಕರಿಂದ ಹಾಡಲ್ಪಟ್ಟು, ಧ್ವನಿಸುರುಳಿಗಳಾಗಿ ಮೆಚ್ಚುಗೆ ಪಡೆದಿದ್ದು ವಿವಿಧ ಪತ್ರಿಕೆಗಳಲ್ಲೂ ಪ್ರಕಟವಾಗಿವೆ.

– ಇಂದಿರಾಕುಮಾರಿ

[illegible] ಯಶವಂತಪುರ, ಬೆಂಗಳೂರು - ೨೨

ಸಾದರ ಸ್ವೀಕಾರ

ಉದ್ಯಮ ಕರ್ನಾಟಕ [illegible]

ಪುಟ : ೧೮೪ ಬೆಲೆ : ರೂ. ೧೫೦

ಕಾರ್ಮಿಕ ಲೋಕ, [illegible]

ಕಾವೇರಿನಗರ, ಕತ್ರಿಗುಪ್ಪೆ

ಬೆಂಗಳೂರು - ೫೬೦ ೦೮೫

ಹಿರಿಮರೆಯ ಕನ್ನಡ ಕಲಿಗಳು ಕೆ. [illegible] ನರಸಿಂಹಮೂರ್ತಿ

ಪುಟ : ೧೧೦ ಬೆಲೆ : ರೂ. ೭೫

ಕನ್ನಡ ಗೆಳೆಯರ ಬಳಗ, [illegible] ಕಾಂಪ್ಲೆಕ್ಸ್, [illegible] ಬೆಂಗಳೂರು - ೨೨

[illegible] [illegible]

ಪುಟ : ೨೧೦ ಬೆಲೆ : ರೂ. ೧೦೦

ಚಾರ್ವಾಕ ಪ್ರಕಾಶನ, ಡಿ-೧೫೪, ಜೀವನ ಬೀಮಾ ನಗರ, ಬೆಂಗಳೂರು - ೫೬೦ ೦೭೫

ರಿವು ನಾಚಿತ್ತು (ಆಧುನಿಕ ವಚನಗಳು)

ಎಸ್. ಜಿ. ಸಿದ್ಧರಾಮಯ್ಯ

ಪುಟ : ೮೮ ಬೆಲೆ : ರೂ. ೬೦

ಅಂಕಿತ ಪ್ರಕಾಶನ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬೆಂಗಳೂರು - ೫೬೦ ೦೦೪

ಪು ದೀಪ (ಕವನ ಸಂಕಲನ) ಅಂಬಿಗರ ಮಂಜುನಾಥ

ಪುಟ : ೬೪ ಬೆಲೆ : ರೂ. ೫೦

ಯುವಕರ ಸಂಘ (ರಿ), ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩ ೨೧೨, ಬಳ್ಳಾರಿ ಜಿಲ್ಲೆ

ಅಯ್ಯಂಗಾರಿಯ ಹತ್ತು ಪೈಸೆಯ ಬ್ರೆಡ್ಡು (ಕವನ ಸಂಕಲನ)

ಸೈಫ್‌ಜಾನ್ಸೆ ಕೊಟ್ಟೂರು

ಪುಟ : ೮೬ ಬೆಲೆ : ರೂ. ೮೦

ಪಲ್ಲವ ಪ್ರಕಾಶನ, ಚನ್ನಪಟ್ಟಣ, ಎಮ್ಮಿಗನೂರು ಮಾರ್ಗ, ಬಳ್ಳಾರಿ - ೫೮೩ ೧೧೩

ಕಥೆ-ಕವನ (ಸಂಕಲನ) [illegible]

ಪುಟ : ೧೩೨ ಬೆಲೆ : ರೂ. ೬೫

ಬರಹ (ಪ್ರಬಂಧ ಸಂಕಲನ) [illegible]

ಪುಟ : ೫೬ ಬೆಲೆ : ರೂ. [illegible]

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು

ಬನಶಂಕರಿ ಪ್ರಿಂಟರ್ಸ್, ೧೭೨/೩, ೩೧ನೇ [illegible], ಜೆಎಸ್‌ಎಸ್ ಲೇಔಟ್ ಹತ್ತಿರ, ೧ನೇ ಕ್ರಾಸ್, ರಾಘವೇಂದ್ರ ನಗರ, ಮೈಸೂರು - ೫೭೦ ೦೧೧

ಮರಕುಂದಿ ಬಸವಣ್ಣೆಪ್ಪ ಕೃತ 'ನಿಜಾನಂದ ಲಹರಿ'

ಸಂ.: ಶ್ರೀಮತಿ ಗೋಪಿಕಾದೇವಿ ದೇಶಮುಖ

ಪುಟ : ೧೯೮ ಬೆಲೆ : ರೂ. ೧೦೦

ಶಿವಶರಣರ ವಚನಗಳಲ್ಲಿ ಸಾಮಾಜಿಕ ಮೌಲ್ಯಗಳು

ಡಾ|| ಸಿ. ಶಿವಕುಮಾರಸ್ವಾಮಿ

ಪುಟ : ೧೦೮ ಬೆಲೆ : ರೂ. ೭೫

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು

ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ - ೫೮೫ ೪೩೭, ಬಸವಕಲ್ಯಾಣ, ಬೀದರ ಜಿಲ್ಲೆ

ಮಕ್ಕಳ ಟ್ಯಾಗೋರ್ (ಮಕ್ಕಳ ನಾಟಕ) ಸುಧಾ ಆಡುಕಳ

ಪುಟ : ೫೨ ಬೆಲೆ : ರೂ. ೩೦

ಮಕ್ಕಳು ಮತ್ತು ಜಗತ್ತು (ಲೇಖನ ಸಂಕಲನ)

ಆರ್. ವಿ. ಭಂಡಾರಿ

ಪುಟ : ೯೯ ಬೆಲೆ : ರೂ. ೫೦

ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು

ಬಂಡಾಯ ಪ್ರಕಾಶನ, 'ಸಹಯಾನ' – ಕೆರೆಕೋಣ, ಅಂಚೆ : ಅರೇ ಅಂಗಡಿ, ಹೊನ್ನಾವರ, ಉತ್ತರ ಕನ್ನಡ - ೫೮೧ ೩೩೪

ಭಾರತದ ಪ್ರಾಚೀನ ವಿದ್ಯಾಪೀಠಗಳು (ಶೈಕ್ಷಣಿಕ ಬರಹಗಳು)

[illegible] ಪಿ. ಶಿವಾನಂದರಾವ್

ಪುಟ : ೮೮ ಬೆಲೆ : ರೂ. ೫೦

ಗೀತಾಂಜಲಿ ಪಬ್ಲಿಕೇಷನ್ಸ್, ನಂ. ೧೩೪, ೮ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಗೋವಿಂದರಾಜನಗರ, ಬೆಂಗಳೂರು - ೫೬೦ ೦೪೦

ಡಾ|| ಎಸ್. ರಾಧಾಕೃಷ್ಣನ್ (ಪ್ರಬಂಧ)

[illegible] ಪಿ. ಶಿವಾನಂದರಾವ್

ಪುಟ : ೬೪ ಬೆಲೆ : ರೂ. ೪೦

ಜಾಗೃತಿ ಪ್ರಿಂಟರ್ಸ್, [illegible] ಬೆಂಗಳೂರು - [illegible]



ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಕೆಲವು ಬ್ರಿಟಿಷ್ ಮೂಲದ ವಿದ್ವಾಂಸರು ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಮಹತ್ವದ ಲೇಖನಗಳನ್ನು ಪ್ರಕಟಿಸಿದರು. ಈ ಲೇಖನಗಳು ವಿಶ್ವಪ್ರಸಿದ್ಧವಾದ ರಾಯಲ್ ಸೊಸೈಟಿಯ ''ಫಿಲಸಾಫಿಕಲ್ ಟ್ರ್ಯಾನ್ಸ್ಯಾಕ್ಷನ್ಸ್'' ಮುಂತಾದ ಸಂಶೋಧನ ನಿಯತಕಾಲಿಕೆಗಳಲ್ಲೂ ಪ್ರಕಟಗೊಂಡವು. ಕಾಲಕ್ರಮದಲ್ಲಿ ಹೊರಬಂದ ಅಂತಹ ಲೇಖನಗಳಲ್ಲಿ ಎದ್ದುಕಾಣುವ ಒಂದು ಲಕ್ಷಣವೆಂದರೆ ಮೊಟ್ಟಮೊದಲು ಪ್ರಕಟವಾದ ಲೇಖನಗಳಲ್ಲಿ ಸ್ಥಳೀಯ ವಿಜ್ಞಾನ ಸಂಸ್ಕೃತಿಯ ಹಿರಿಮೆಯನ್ನು ಕಂಡು ಬೆರಗಾಗುವುದು.

...ಭಾರತೀಯ ವಿಜ್ಞಾನ ಪರಂಪರೆ ಹಾಗೂ ವಿಮರ್ಶೆಗಳು

ಡಾ|| ಎಸ್. ಬಾಲಚಂದ್ರರಾವ್

...ಬಹಳಷ್ಟು ಜನರ ನಂಬಿಕೆ ಅಥವಾ ಅನಿಸಿಕೆ ...ಂದರೆ ಪೌರ್ವಾತ್ಯ ದೇಶಗಳಲ್ಲಿ ವಸಾಹತುಶಾಹಿ ...ೋಪ್ಯ ಸಾಮ್ರಾಜ್ಯಗಳು - ವಿಶೇಷವಾಗಿ ಬ್ರಿಟಿಷರು ...ಮ್ಮ ಆಳ್ವಿಕೆಯನ್ನು ಸ್ಥಾಪಿಸಿ ತಮ್ಮ ಐರೋಪ್ಯಮೂಲದ ...ಜ್ಞಾನವನ್ನು ಬೋಧಿಸುವ ತನಕ ಭಾರತ ಮತ್ತು ಚೈನ ...ಗಳೂ ಸೇರಿದಂತೆ ಆ ನಾಗರಿಕತೆಗಳಲ್ಲಿ ...ಜ್ಞಾನ''ವೇ ಇರಲಿಲ್ಲ ಎಂದು. ಅಕಸ್ಮಾತ್ ...ಸ್ವಲ್ಪವಿದ್ದರೂ ಕೂಡ ಅವು ಹುಸಿ-ವಿಜ್ಞಾನ ...ಡೋಸೈನ್ಸ್) ಪ್ರಕಾರಗಳು ಎಂದು. ಇದನ್ನು ...ರೋಸೆಂಟ್ರಿಕ್ ವಿಜ್ಞಾನವಾದ ಎನ್ನಬಹುದು. ಈ ...ರಣೆಯ ವಾದದ ತಿರುಳೆಂದರೆ ವಿಜ್ಞಾನವನ್ನು ...ಶ್ಚಾತ್ಯದೇಶಗಳಲ್ಲಿ ಸುಮಾರು ಕ್ರಿ.ಶ. ಹದಿನಾರನೇ ...ಮಾನದಿಂದ ಬೆಳೆದುಬಂದ ವಿಜ್ಞಾನ ಪ್ರಕಾರ ...ಂದಿಗೆ ಸಾರಾಸಗಟಾಗಿ ಸಮೀಕರಿಸುವುದು.


...ಈ ಧೋರಣೆಗೆ ವಿರೋಧವಾಗಿ, ನಮ್ಮ ...ರತೀಯ ಜ್ಞಾನ ಪರಂಪರೆಯಲ್ಲಿ ಬೆಳೆದುಬಂದ ...ತ, ಖಗೋಲ, ಲೋಹವಿಜ್ಞಾನ, ವೈದ್ಯಕೀಯ ...ತಾದ ಶಾಸ್ತ್ರಗಳು ಪಾಶ್ಚಾತ್ಯ ಮೂಲದ ...ಗಳಿಗಿಂತಲೂ ಬಹಳ ಶ್ರೇಷ್ಠವೆಂದೂ ಹಾಗೂ ...ಸಾವಿರ, ಹತ್ತುಸಾವಿರ ವರ್ಷಗಳಿಗಿಂತ ಹಿಂದಿನವು ...ಂದಾಗಿಯೂ ಅವುಗಳಿಗೆ ಅತಿ ಪ್ರಾಚೀನತೆಯ ...ನ್ನು ಕಟ್ಟಿ ವೈಭವೀಕರಿಸುವುದು ನಮ್ಮ ...ಲ(ಭೂತ)ವ್ಯಾಧಿಗ್ರಸ್ತವಾದಿಗಳ ಚಾಳಿ!

...ಈ ಎರಡು ವಿರುದ್ಧ ಧೋರಣೆಗಳತ್ತಲೂ ವಾಲದೆ ...ತ್ರವಾಗಿ ವಸ್ತುನಿಷ್ಠವಾಗಿ ಭಾರತೀಯ ವಿಜ್ಞಾನ ...ಪರೆಯ ಬೆಳವಣಿಗೆಯನ್ನು ವಿಶ್ಲೇಷಿಸುವುದು ...ಕ ಮತ್ತು ಪ್ರಸ್ತುತ.

...ಲವು ಪಾಶ್ಚಾತ್ಯ ಪ್ರಾಚ್ಯವಿದ್ಯಾ ವಿದ್ವಾಂಸರು, ಈ ...ರು ವಸ್ತುನಿಷ್ಠ ಅಧ್ಯಯನಗಳನ್ನು ಈ ಹಿಂದೆ ನಡೆಸಿದ್ದಾರೆ. ಕಳೆದ ಒಂದು ಶತಮಾನದಿಂದ ಈಚೆಗೆ ಲಭ್ಯವಾಗಿರುವ ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳ ಕೃತಿಗಳನ್ನು ಆಧರಿಸಿ ನಡೆಸಿರುವ ಸಂಶೋಧನೆಗಳಿಂದ ಭಾರತೀಯ ಮೂಲದ ವಿಜ್ಞಾನ ಪ್ರಕಾರಗಳ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲುವ ಮಾಹಿತಿಯು ದೊರಕುತ್ತಿದೆ.

ಇತರ ವಿಜ್ಞಾನದ ಶಾಖೆಗಳ ಸಾಕಷ್ಟು ಪರಿಚಯ ಮತ್ತು ಪರಿಣತಿ ನನಗೆ ಇಲ್ಲದಿರುವುದರಿಂದ, ಈ ಲೇಖನದಲ್ಲಿ ವಿಶೇಷವಾಗಿ ಖಗೋಲ ಮತ್ತು ಗಣಿತಶಾಸ್ತ್ರಗಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಓದುಗರೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸುತ್ತೇನೆ.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಕೆಲವು ಬ್ರಿಟಿಷ್ ಮೂಲದ ವಿದ್ವಾಂಸರು ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಮಹತ್ವದ ಲೇಖನಗಳನು ಪ್ರಕಟಿಸಿದರು. ಈ ಲೇಖನಗಳು ವಿಶ್ವಪ್ರಸಿದ್ಧವಾದ ರಾಯಲ್ ಸೊಸೈಟಿಯ ''ಫಿಲಸಾಫಿಕಲ್ ಟ್ರ್ಯಾನ್ಸ್ಯಾಕ್ಷನ್ಸ್'' ಮುಂತಾದ ಸಂಶೋಧನ ನಿಯತಕಾಲಿಕೆಗಳಲ್ಲೂ ಪ್ರಕಟಗೊಂಡವು. ಕಾಲಕ್ರಮದಲ್ಲಿ ಹೊರಬಂದ ಅಂತಹ ಲೇಖನಗಳಲ್ಲಿ ಎದ್ದುಕಾಣುವ ಒಂದು ಲಕ್ಷಣವೆಂದರೆ ಮೊಟ್ಟಮೊದಲು ಪ್ರಕಟವಾದ ಲೇಖನಗಳಲ್ಲಿ ಸ್ಥಳೀಯ ವಿಜ್ಞಾನ ಸಂಸ್ಕೃತಿಯ ಹಿರಿಮೆಯನ್ನು ಕಂಡು ಬೆರಗಾಗುವುದು. ಅನಂತರ ನಿಧಾನವಾಗಿ ಲೋಪದೋಷಗಳನ್ನು ಹುಡುಕಿ ಸ್ಥಳೀಯ ವಿಜ್ಞಾನ ಮತ್ತು ತಂತ್ರಜ್ಞಾನ ಕಳಪೆ ಹಾಗೂ ಐರೋಪ್ಯ ಸಾಧನೆಗಳಿಗಿಂತ ಕೀಳುಮಟ್ಟದ್ದು ಎಂದು ಚಿತ್ರಿಸುವುದು! ಮುಖ್ಯವಾಗಿ ಖಗೋಳವಿಜ್ಞಾನದ ಸಂದರ್ಭದಲ್ಲಿ ಬಹಳಷ್ಟು ಬ್ರಿಟಿಷ್ ವಿದ್ವಾಂಸರು ಪ್ರಯತ್ನಪೂರ್ವಕವಾಗಿ ಬಿಂಬಿಸಿದ್ದು ಭಾರತೀಯ ಖಗೋಲ ವಿಜ್ಞಾನದ ಮೂಲ ಫಲಿತಾಂಶಗಳೆಲ್ಲಾ ಗ್ರೀಸ್ ಮೂಲದ್ದು ಎಂದು. ಕ್ರಿ.ಶ. ೫ನೇ ಶತಮಾನದಲ್ಲಿದ್ದ (ಮೊದಲನೇ) ಆರ್ಯಭಟನು ತನ್ನ ''ಆರ್ಯಭಟೀಯಮ್'' ಎಂಬ ಕೃತಿಯಲ್ಲಿ ಹಾಕಿದ ಭದ್ರವಾದ ಅಡಿಪಾಯದ ಮೇಲೆಯೇ ನಮ್ಮ ದೇಶದಲ್ಲಿ ಮುಂದೆ ವಿಸ್ತಾರವಾಗಿಯೂ ಆಳವಾಗಿಯೂ ಬೆಳೆದುಬಂದ ಖಗೋಲ-ಗಣಿತಶಾಸ್ತ್ರಗಳಲ್ಲಿ ನಿಜವಾಗಿ ತಾರ್ಕಿಕ ಮತ್ತು ವೈಜ್ಞಾನಿಕ ಅಂಶಗಳನ್ನು ಕಾಣಬಹುದು. ಪ್ರಾಚೀನ ಗ್ರೀಕ್ ಸಂಸ್ಕೃತಿಯಲ್ಲಿ ಈ ಹಿಂದೆ ಬೆಳೆದುಬಂದ ಜ್ಯಾಮಿತೀಯ (ರೇಖಾಗಣಿತದ) ಫಲಿತಾಂಶಗಳನ್ನು ಯುಕ್ಲಿಡ್ ಎಂಬ ಗಣಿತಜ್ಞನು ಕ್ರೋಡೀಕರಿಸಿ ಅವುಗಳನ್ನು ಸ್ವತಸ್ಸಿದ್ಧೋಕ್ತಿಗಳು (''ಆಕ್ಷಮ್ಯ''ಗಳು !), ಪ್ರಮೇಯಗಳು, ಉಪಪ್ರಮೇಯಗಳು ಮತ್ತು ರಚನೆಗಳು ಎಂಬ ಮಾದರಿಯಲ್ಲಿ ನೀಡಿದ್ದು ಗೊತ್ತಿರುವ ವಿಷಯ. ಹಾಗೆಯೇ ಭಾರತದಲ್ಲಿ ಆರ್ಯಭಟನು ಅವನ ಕಾಲದವರೆಗೆ



From Sūryasiddhānta
(Visvanatha's Udāharanam)



ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ
ನಡೆದ ಎಪ್ಪತ್ತೆಂಟನೇ
ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನದ ಅಧ್ಯಕ್ಷತೆಯ ಗೌರವ ಪಡೆದ
ಡಾ|| ಸಿ. ಪಿ. ಕೃಷ್ಣಕುಮಾರ್ ಅವರಿಗೆ
'ಹೊಸತು' ಪತ್ರಿಕೆಯ ಅಭಿನಂದನೆಗಳು

ಳಿದುಬಂದಿದ್ದ ಗಣಿತ ಮತ್ತು ಖಗೋಲ ಶಾಸ್ತ್ರಗಳ ಫಲಿತಾಂಶಗಳನ್ನು ಮಬದ್ಧವಾಗಿ ಜೋಡಿಸಿ ಅವುಗಳಿಗೆ ತನ್ನ ವಿಶೇಷವಾದ ಕೊಡುಗೆಯನ್ನೂ ಸೇರಿಸಿ ಶ್ವಕ್ಕೆ ನೀಡಿದ್ದಾನೆ. ಅಂದರೆ, ಆರ್ಯಭಟೀಯದ (ಕ್ರಿ. ಶ. ೪೯೯) ಕಾಲಕ್ಕಿಂತ ಂದೆಯೇ ಗ್ರಹಗಳ ಸಿದ್ಧಾಂತ ನಮ್ಮ ದೇಶದಲ್ಲಿ ಬಳಕೆಯಲ್ಲಿತ್ತು. ಇದಕ್ಕೆ ರಾಹಮಿಹಿರನು ಸಂಗ್ರಹಿಸಿದ ''ಪಂಚಸಿದ್ಧಾಂತಿಕಾ'' ಸಾಕ್ಷಿ. ಆದರೆ, ರಾಹಮಿಹಿರನಿಂದ ಮುಂದೆ ಭಾರತೀಯ ವೈಜ್ಞಾನಿಕ ಚಿಂತನೆಯನ್ನು ಕುಂಠಿತಗೊಳಿಸಿ ಹಗಳ ಪೀಡೆಗೆ' ಶರಣಾಗುವಂತೆ ಮಾಡಿದ ದೊಡ್ಡ ಶಾಪವೆಂದರೆ ಯವನರಿಂದ 'ಲಜ್ಯೋತಿಷ'ವನ್ನು ಗ್ರೀಕ್ ಪದಗಳೊಂದಿಗೆ ಹಸಿ ಹಸಿಯಾಗಿ ಆಮದು ಾಡಿಕೊಂಡಿದ್ದು! ಉದಾಹರಣೆಗೆ, ಆತನ ಬೃಹದ್‌ಜಾತಕದ ಮೊದಲನೇ ಧ್ಯಾಯದಲ್ಲೇ ೧೨ ರಾಶಿಗಳ ಹೆಸರುಗಳು (ಅಪಭ್ರಂಶ) ಗ್ರೀಕ್ ಭಾಷೆಯಲ್ಲಿ ಹೀಗಿವೆ :

ಕ್ರಿಯತವುರಿಜಿತುಮಕುಲಿರಲೇಯಪಾಥೋನಜೂಕಕೌರ್ಪ್ಯಾಖ್ಯಾಃ ||
ತಾಕ್ಷಿಕ ಆಕೋಕೇರೋ ಹೃದ್ರೋಗಶ್ಚಾಂತ್ಯಭಂ ಚೇತ್ಥಮ್ || (ಬೃಜಾ.೧.೮).

ಆರ್ಯಭಟನು ಗ್ರಹಗಳ ಸ್ಥಾನಗಳ ಲೆಕ್ಕಾಚಾರಗಳಲ್ಲಿ ಬಳಸಿದ ಮೂಲಾಂಕ ಾಗಲೀ (ಪ್ಯಾರಾಮೀಟರ್ಸ್) ಅಥವಾ ಗ್ರಹಗಳ ಚಲನೆಯ ರೇಖಾಗಣಿತೀಯ ಾದರಿಯಾಗಲಿ ಪ್ರಸಿದ್ಧ ಗ್ರೀಕ್ ಖಗೋಲಜ್ಞನಾದ ಟಾಲೆಮಿಯ (ಕ್ರಿ. ಶ. ೨ನೇ ಶಮಾನ) ''ಅಲ್‌ಮೇಗೇಸ್ಟ್'' ಕೃತಿಯನ್ನು ಆಧರಿಸಿಲ್ಲ ಎಂದು ಬಹಳ ಹಿಂದೆಯೇ ್ಯಾತ ಖಗೋಲ-ಗಣಿತ ಸಂಶೋಧಕರಾಗಿದ್ದ ಪ್ರೊ|| ಪಿ. ಸಿ. ಸೇನ್‌ಗುಪ್ತಾ ಅವರು ೀದಾಹರಣವಾಗಿ ತೋರಿಸಿಕೊಟ್ಟಿದ್ದಾರೆ. ಈ ವಿಷಯವು ಬಹಳಷ್ಟು ಖಚಿತ ಗುತ್ತಿದ್ದಂತೆಯೇ ಕೆಲವು ಶ್ರೇಷ್ಠಮಟ್ಟದ ಫ್ರೆಂಚ್ ಗಣಿತ ವಿದ್ವಾಂಸರು ಈ ಹಿಂದೆ ರ್ವಗ್ರಹ ಪೀಡಿತ ಬ್ರಿಟಿಷ್ ಪ್ರಾಚ್ಯವಿದ್ಯಾ ಪರಿಣತರು ಘೋಷಿಸಿದ ಭಾರತ ರೋಧೀ ಹೇಳಿಕೆಗಳನ್ನು ಸಾಧಾರವಾಗಿ ಖಂಡಿಸಿ, ತಮ್ಮ ವಿದ್ವತ್ಪೂರ್ಣ ಸಂಶೋಧನ ಖನಗಳನ್ನು ಪ್ರಕಟಿಸಿದರು. ಇವರಲ್ಲಿ ಪ್ರಮುಖರಾದವರು ಬೆಯ್ಲಿ, ನ್-ಡರ್-ವಾರ್ಡನ್ ಮತ್ತು ರಾಜರ್ ಬಿಲಾರ್ಡ್. ಈ ಮೂವರೂ ಬಹಳ ಚ್ಚಮಟ್ಟದ ಖಗೋಲ-ಗಣಿತಜ್ಞರಾಗಿದ್ದು ಅವರು ಆರ್ಯಭಟ ಮುಂತಾದ ರತೀಯ ಖಗೋಲಜ್ಞ - ಗಣಿತಜ್ಞರ ಸ್ವತಂತ್ರವಾದ ಕೊಡುಗೆಗಳ ಹಿರಿಮೆ ಹಾಗೂ ್ಯತೆಗಳನ್ನು ತೋರಿಸಿಕೊಟ್ಟಾಗ ವಿಶ್ವದ ವಿಜ್ಞಾನ - ಇತಿಹಾಸಕಾರರು ಅವುಗಳಿಗೆ ನ್ನಣೆ ಕೊಡಬೇಕಾಯಿತು. ಈ ಸಂದರ್ಭದಲ್ಲಿ ಎರಡು ಪ್ರಸಿದ್ಧವಾದ ಹೇಳಿಕೆಗಳನ್ನು ವು ಜ್ಞಾಪಿಸಿಕೊಳ್ಳಬಹುದು :

೧) ''ಇಂದಿನ ವಿಜ್ಞಾನದಲ್ಲಿ ಭಾರತೀಯ ಗಣಿತವು ಎಷ್ಟೊಂದು ಮಟ್ಟಿಗೆ ವೇಶಿಸಿದೆ ಎಂಬುದು ನಿಜಕ್ಕೂ ಆಶ್ಚರ್ಯವನ್ನು ಉಂಟುಮಾಡುತ್ತದೆ. ಇಂದಿನ ಕಗಣಿತ ಹಾಗೂ ಬೀಜಗಣಿತಗಳ ಸ್ವರೂಪ ಹಾಗೂ ಅಂತರಾಳ ಎರಡೂ ರತೀಯವೇ!'' - ಫ್ಲೋರಿಯನ್ ಕೆಜೋರಿ, ವಿಶ್ವದ ಪ್ರಸಿದ್ಧ ಗಣಿತ ಹಾಸತಜ್ಞ.

೨) ''ಎಲ್ಲಾ ಸಂಖ್ಯೆಗಳನ್ನೂ ಹತ್ತು ಚಿಹ್ನೆಗಳ ಮೂಲಕ – ಪ್ರತಿಯೊಂದು ಚಿಹ್ನೆಗೂ ರರ ಸ್ಥಾನದಿಂದ ಸಿಗುವ ಬೆಲೆಯು ಮಾತ್ರವಲ್ಲದೆ ಅದರದೇ ಆದ ಸ್ವಂತ ಲೆಯೂ ಇರುವಂತೆ – ಅಭಿವ್ಯಕ್ತಿಸುವ ಚಮತ್ಕಾರವಾದ ವಿಧಾನವನ್ನು ನಮಗೆ ಡಿರುವುದು ಭಾರತವೇ. ಈ ಕಲ್ಪನೆ ಆರ್ಕಿಮಿಡೀಸ್ ಮತ್ತು ಅಪಲೋನಿಯಸ್ ಥವರ ಪ್ರತಿಭೆಯನ್ನೂ ಮೀರಿದ್ದು!'' – ಲಾಪ್ಲಾಸ್ (೧೭೪೯-೧೮೨೭), ಪ್ರಖ್ಯಾತ ಚ್ ಗಣಿತಜ್ಞ.

ಇತ್ತೀಚೆಗೆ ಪ್ರಕಟವಾಗಿರುವ ''ಮ್ಯಾಥಮ್ಯಾಟಿಕ್ಸ್ ಇನ್ ಇಂಡಿಯಾ'' ಎಂಬ ತಮ್ಮ ಗ್ರಂಥದಲ್ಲಿ ಲೇಖಕಿಯಾದ ಕಿಮ್ ಫ್ಲಾಫ್‌ಕರ್ ಅವರು ವಸಾಹತುಶಾಹಿ ಬ್ರಿಟಿಷರ ಅಧಿಕಾರಿಗಳಾಗಿದ್ದ ಪ್ರಾಚ್ಯವಿದ್ಯಾ ಪಾರಂಗತರ ಅಹಂಕಾರದ ಧೋರಣೆಯನ್ನು ಕುರಿತು ಹೀಗೆ ಹೇಳುತ್ತಾರೆ :

''ಭಾರತದ ವಿಜ್ಞಾನದ ಪರಂಪರೆಯ ಇತಿಹಾಸವನ್ನು ಬಹಳ ಕಾಲದಿಂದ ರಾಜಕೀಯ ಉದ್ದೇಶಗಳಿಗಾಗಿ (ಪಟ್ಟಭದ್ರ ಹಿತಾಸಕ್ತರು) ತಮ್ಮದಾಗಿಸಿಕೊಂಡಿದ್ದಾರೆ. ಅತೀವ ಹೀನಾಯವಾಗಿ ಹತ್ತೊಂಬತ್ತನೇ ಶತಮಾನದ ಅಧಿಕಾರಿಗಳು ಸ್ಥಳೀಯ ಬೌದ್ಧಿಕ ಪರಂಪರೆಗಳನ್ನು ('ನೇಟಿವ್ ಲರ್ನಿಂಗ್' ಎಂದು ಹೆಸರಿಸಿ) ತುಚ್ಛೀಕರಿಸಲು ಅವರ ಸ್ವಾರ್ಥಮಯ ಉದ್ದೇಶವೆಂದರೆ ಮುಂದಿನ ವಸಾಹತುಶಾಹಿಯ (ಸ್ಥಳೀಯ) ಒತ್ತಾಳುಗಳಿಗಾಗಿ ಪಾಶ್ಚಾತ್ಯ ವಿದ್ಯಾಕ್ರಮವನ್ನು ಹೇರುವುದು...''. ಇದಕ್ಕೆ ಉತ್ತರವಾಗಿ ಅನೇಕ ರಾಷ್ಟ್ರಪರ ಸಂಘಟನೆಗಳು ತಲೆದೋರಿ, ಕೆಲವರು ನಮ್ಮ ದೇಶದ ವಿಜ್ಞಾನ ಪರಂಪರೆಯನ್ನು ಆವಶ್ಯಕತೆಯನ್ನು ಮೀರಿ ವೈಭವೀಕರಿಸುವ 'ಇತಿಹಾಸ'ವನ್ನು ರಚಿಸಲಾರಂಭಿಸಿದರು. ಇಂತಹ ಪುನರುತ್ಥಾನವಾದಿಗಳ ಪ್ರಭಾವವು ಈಗಲೂ ಕೂಡ ಬಲಪಂಥೀಯ ಪ್ರಚಾರಗಳಲ್ಲಿ, ಪುಂಖಾನುಪುಂಖವಾಗಿ ಹೊರಬರುವ ಭಾಷಣ-ಭೀಷಣಗಳಲ್ಲಿ ಬಹಳವಾಗಿಯೇ ಕಂಡುಬರುತ್ತದೆ.

ಡಾ|| ಜಿ. ರಾಮಕೃಷ್ಣ ಅವರು ತಮ್ಮ ''ಭಾರತೀಯ ವಿಜ್ಞಾನದ ಹಾದಿ'' (ಪ್ರ|| ಕನ್ನಡ ವಿ.ವಿ., ಹಂಪಿ) ಎಂಬ ತಮ್ಮ ಉದ್ಬೋಧಕ ಕೃತಿಯಲ್ಲಿ ಇಂತಹ ಅತಿರಾಷ್ಟ್ರೀಯತೆ ಎಂಬ ಪಿಡುಗನ್ನು ಕುರಿತು ಹೀಗೆ ವಿಶ್ಲೇಷಿಸುತ್ತಾರೆ :

''ವೇದಕ್ಕೆ ಆಧುನಿಕ ಕವಚ ತೊಡಿಸಿದರೆ ಮಾತ್ರ ಅದು ಶ್ಲಾಘನೀಯವಾಗಿ ಕಂಡುಬರುತ್ತದೆಂಬ ಮನೋರೋಗದಿಂದ ಪೀಡಿತರಾಗಿರುವವರು ಏನೇನೋ ಬೌದ್ಧಿಕ ಕವಾಯತುಗಳನ್ನು ಮಾಡುತ್ತಿರುವುದುಂಟು. ಅದರಿಂದ ಯಾವ ಹೆಗ್ಗಳಿಕೆಯ ಪ್ರಾಪ್ತಿಯೂ ಆಗುವುದಿಲ್ಲ. ಇದಕ್ಕೆ ಎರಡು ನಿದರ್ಶನಗಳನ್ನು ನೋಡಬಹುದು. ಮಹೇಶ್ ಯೋಗಿ ಮತ್ತು ಭಾರತೀ ಕೃಷ್ಣತೀರ್ಥ ಇವರಿಬ್ಬರೂ ಆ ನಿದರ್ಶನಗಳನ್ನೊದಗಿಸುತ್ತಾರೆ. ವೇದವಾಗಲೀ, ಆಧುನಿಕ ವಿಜ್ಞಾನವಾಗಲೀ, ಎರಡೂ ತಿಳಿಯದವರಿಗೆ ಇವರು ಮಂಕುಬೂದಿಯನ್ನೆರಚಿ ಸ್ತಂಭೀಭೂತರನ್ನಾಗಿಸುತ್ತಾರೆ...'' ಡಾ|| ಜಿ. ಆರ್. ಅವರು ಮುಂದುವರಿಸುತ್ತ ಎರಡನೇ ಉದಾಹರಣೆಯನ್ನು ಹೀಗೆ ವಿಮರ್ಶಿಸುತ್ತಾರೆ : ''ಇನ್ನು ಭಾರತೀ ಕೃಷ್ಣತೀರ್ಥರತ್ತ ಹೊರಳೋಣ. ಅವರು ಪುರಿಯ ಗೋವರ್ಧನಮಠದ ಜಗದ್ಗುರು ಶಂಕರಾಚಾರ್ಯರು. 'ವೈದಿಕ ಗಣಿತಶಾಸ್ತ್ರ' ಎಂಬ ಸ್ವಾರಸ್ಯಕರ ಹಾಗೂ ಉಪಯುಕ್ತ ಗ್ರಂಥವೊಂದನ್ನು ಅವರು ರಚಿಸಿದ್ದಾರೆ. ...ಈ ಜಗದ್ಗುರುಗಳು ಪೂರ್ವಾಶ್ರಮದಲ್ಲಿ ವೆಂಕಟರಾಮನ್ ಸರಸ್ವತಿ ಎಂಬ ಹೆಸರಿನ ಸಂಸ್ಕೃತ ವಿದ್ವಾಂಸರು, ಗಣಿತಶಾಸ್ತ್ರ ಪ್ರವೀಣರು.... ಗಣಿತಶಾಸ್ತ್ರದ... ವಿಧಾನಗಳನ್ನು ಸೂತ್ರರೂಪಾದಿಯಲ್ಲಿ ಸಂಸ್ಕೃತದಲ್ಲಿ ಬರೆದಿಟ್ಟು ಅದನ್ನು 'ವೈದಿಕ ಗಣಿತಶಾಸ್ತ್ರ' ಎಂದು ಕರೆದರು. ಅದರಲ್ಲಿ 'ವೈದಿಕ' ಗೌಣವಾಗಿತ್ತು, 'ಗಣಿತಶಾಸ್ತ್ರ' ಪ್ರಗಲ್ಭವಾಗಿತ್ತು. ಆದರೆ ವಿ. ಎಸ್. ಅಗ್ರವಾಲ್ ಮುಂತಾದ ಶಿಷ್ಯರು ಗಣಿತಶಾಸ್ತ್ರವನ್ನು ಗೌಣಮಾಡಿ 'ವೈದಿಕ'ವನ್ನು ವಿಜೃಂಭಿಸಿದರು.... (ವೆಂಕಟರಾಮನ್ ಅವರು) ಮಾನಸಿಕ ತೃಪ್ತಿಗಾಗಿ ಅದನ್ನು 'ವೈದಿಕ' ಎಂದು ಕರೆದಿದ್ದಾರೆ, ಅಷ್ಟೆ. ಅವರು ಕೊಟ್ಟಿರುವ ಗಣಿತ ವಿಧಾನಗಳನ್ನು ನಾವು ವೇದದಲ್ಲಿ ಹುಡುಕಹೊರಟರೆ ನಿರಾಶೆ ಕಾದಿರುತ್ತದೆ ಅಷ್ಟೆ. ...ಜಗದ್ಗುರುಗಳೇ ಬರೆದಿರುವ ಪೀಠಿಕೆಯನ್ನು ಓದದೆ ಎನ್.ಸಿ.ಇ.ಆರ್.ಟಿ.ಯ ಗಣಿತಶಾಸ್ತ್ರ ಪ್ರಾಧ್ಯಾಪಕ ಎಸ್. ಸಿ. ಶರ್ಮಾ ಮಾತ್ರ 'ಲೇಖಕರು ವೇದಗಳಿಂದ ಸೂತ್ರಗಳನ್ನು ಉಲ್ಲೇಖಿಸಿರುವುದು ಅದ್ಭುತವಾಗಿದೆ' ಎಂದು ಹೇಳಿ ತಮ್ಮ ಅಜ್ಞಾನವನ್ನು ಮೆರೆದಿದ್ದಾರೆ.''

'ವೇದಿಕ್ ಮ್ಯಾಥಮ್ಯಾಟಿಕ್ಸ್' ಗ್ರಂಥದ ಕರ್ತೃಗಳ ಶಿಷ್ಯೆ ಶ್ರೀಮತಿ ಮಂಜುಳಾ ತ್ರಿವೇದಿ ತಮ್ಮ 'ಪರಿಚಯಾತ್ಮಕ ಟಿಪ್ಪಣಿಗಳು' ಎಂಬ ಭಾಗದಲ್ಲಿ ''ಈ ಸೂತ್ರಗಳನ್ನು ಈಗ ಇರುವ ಅಥರ್ವವೇದದ ಪಠ್ಯಾಂತರಗಳಲ್ಲಿ ಹುಡುಕಬಾರದು. ವಾಸ್ತವವಾಗಿ (ಸ್ವಾಮಿಗಳ) ಅಂತಃಸ್ಫೂರ್ತಿಯನ್ನು ಆಧರಿಸಿ ಇವುಗಳು ಪುನಾರಚಿಸಲಾಗಿವೆ.'' ಪ್ರೊ|| ದೇಬೀಪ್ರಸಾದ್ ಚಟ್ಟೋಪಾಧ್ಯಾಯರು ಈ ಕೃತಿಯ ಬಗ್ಗೆ ಹೀಗೆ ತಮ್ಮ ಅಭಿಪ್ರಾಯವನ್ನು ಕೊಡುತ್ತಾರೆ – ''ಅಷ್ಟಾಗಿಯೂ ಬಹಳ ವಂಚನಾತ್ಮಕವಾದದ್ದು ಏನೆಂದರೆ ಆ ಕೃತಿಯ ಹೆಸರು ಹಾಗೂ ಅದರ ಬಗ್ಗೆ ತಮ್ಮದನ್ನಾಗಿಸುವ ಮಹತ್ವದ ಐತಿಹಾಸಿಕ ಹಕ್ಕುಬಾಧ್ಯತೆ.'' ಇನ್ನೂ ಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ ಹಾಗೂ ಗಣಿತ-

ಖಗೋಳಶಾಸ್ತ್ರಗಳಲ್ಲಿ ವಿಶೇಷವಾದ ಪರಿಣತಿಯನ್ನು ಹೊಂದಿದ್ದ ಪ್ರೊ॥ ಟಿ. ಎಸ್. ಕುಪ್ಪಣ್ಣಶಾಸ್ತ್ರಿಗಳ ಮಹತ್ವದ ಅಭಿಪ್ರಾಯ ಹೀಗಿದೆ – ''ಈ ಕೃತಿಯು ಸಾಮಾನ್ಯವಾಗಿ ಒಪ್ಪಲಾದ ಅರ್ಥದಲ್ಲಿ 'ವೈದಿಕ'ವಲ್ಲವೇ ಅಲ್ಲ. ತಥಾಕಥಿತ ಸೂತ್ರಗಳಾಗಲೀ ಅಥವಾ ಅವುಗಳಲ್ಲಿ ಹೇಳಲಾದ ಫಲಿತಾಂಶಗಳಾಗಲೀ ವೈದಿಕ ಸಾಹಿತ್ಯದಲ್ಲಿ ಎಲ್ಲೂ ಕಂಡುಬರುವುದಿಲ್ಲ... ಅವರ (ಸ್ವಾಮಿಯವರ) ಈ ರೀತಿ ವೇದಗಳನ್ನಾಗಲೀ ಮತ್ತು ಹಿಂದೂ ಸಂಸ್ಕೃತಿಯನ್ನಾಗಲೀ ಹುಸಿವಾದಗಳಿಂದ ವಿಜೃಂಭಿಸುವ ಪ್ರಯತ್ನವು ಸತ್ಯ ಗೊತ್ತಾದಾಗ ಅಂತಹ ವಿಷಯಗಳ ಬಗ್ಗೆ ತುಚ್ಛಭಾವನೆ ಉಂಟಾಗುತ್ತದೆ. ದುಃಖದ ವಿಷಯವೆಂದರೆ ಈ ಲೇಖಕರು (ಸ್ವಾಮಿಗಳು) ನೀಡುತ್ತಿರುವುದು ಹಿಂದೂ ಪಾರಂಪರಿಕ ಗಣಿತವೂ ಕೂಡ ಅಲ್ಲ!''

ಹೀಗೆ ಸಂಸ್ಕೃತ ವಿದ್ವಾಂಸರ ಹಾಗೂ ಉಚ್ಚಮಟ್ಟದ ಗಣಿತಜ್ಞರ ಒಟ್ಟು ಅಭಿಪ್ರಾಯವೆಂದರೆ ಈ ತಥಾಕಥಿತ 'ವೇದಿಕ್ ಮ್ಯಾಥಮ್ಯಾಟಿಕ್ಸ್' ಎಂಬುವುದು 'ವೈದಿಕವೂ ಅಲ್ಲ, ಮ್ಯಾಥಮ್ಯಾಟಿಕ್ಸೂ ಅಲ್ಲ!'

ಈ ಹಿಂದೆಯೇ ಹೇಳಿದಂತೆ ೧೮-೧೯ನೇ ಶತಮಾನಗಳಲ್ಲಿ ಪ್ರಕಟವಾದ ಐರೋಪ್ಯ ವಿದ್ವಾಂಸರ ವಿಮರ್ಶೆಗಳಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಗಣಿತ-ಖಗೋಲ ಪರಂಪರೆಯ ಬಗ್ಗೆ ಅತೀವ ಹೊಗಳಿಕೆಯಿಂದ ಹಿಡಿದು ಕಾಲಕ್ರಮೇಣ ಕಟುಟೀಕೆಗಳವರೆಗೆ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಡಾ॥ ಕಿಮ್ ಪ್ಲಾಫ್ಕರ್ ಅಭಿಪ್ರಾಯದಂತೆ ವಿಶೇಷವಾಗಿ ಬ್ರಿಟಿಷ್ ಅಧಿಕಾರಿಗಳ ಧೋರಣೆಯಲ್ಲಿ ಅವರ ಸಾಮ್ರಾಜ್ಯಶಾಹಿ ಪರವಾದ ಉದ್ದೇಶಪೂರ್ವಕವಾದ ಉಪೇಕ್ಷೆಯನ್ನು ಕಾಣಬಹುದು. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಬಹಳಷ್ಟು ಬ್ರಿಟಿಷ್ ಇಂಡಾಲಜಿಸ್ಟ್‌ಗಳು ಗಣಿತಶಾಸ್ತ್ರದಲ್ಲಾಗಲೀ ಖಗೋಲ ವಿಜ್ಞಾನದಲ್ಲಾಗಲೀ ಪರಿಣತಿಯನ್ನು ಹೊಂದಿರಲೇ ಇಲ್ಲ! ಇಂತಹ ಪರಿಸ್ಥಿತಿಯಲ್ಲಿ ನಮಗೆ ನಿಜಕ್ಕೂ ಗಣ್ಯರಾಗುವ ಪಾಶ್ಚಾತ್ಯ ವಿಮರ್ಶಕ ಹಾಗೂ ವರದಿಗಾರ ವಿದ್ವಾಂಸರೆಂದರೆ ಫ್ರಾನ್ಸಿನ ಬೆಯ್ಲಿ, ಲೆ ಜೆಂಟಿಲ್, ವ್ಯಾನ್-ಡರ್-ವಾರ್ಡನ್, ರಾಜರ್ ಬಿಲಾರ್ಡ್ ಮತ್ತು ಸ್ಕಾಟ್‌ಲ್ಯಾಂಡ್‌ನ ಪ್ಲೇಫೇರ್.

ಈ ಮೇಲೆ ಹೇಳಿದ ಬದಲಾಗುತ್ತಿದ್ದ ಧೋರಣೆಗಳಿಗೆ ಹಾಗೂ ಇತಿಹಾಸ ತಿರುಚುವಿಕೆಗೆ ಕೆಲವು ಉದಾಹರಣೆಗಳನ್ನು ಕೊಡಬಹುದು :

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಬಂಗಾಲದಲ್ಲಿ ಕಮ್ಯಾಂಡರ್-ಇನ್-ಚೀಫ್ ಹಾಗ ಮುಂದೆ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯನಾಗಿದ್ದ ರಾಬರ್ಟ್ ಬಾರ್ಕರ್ ಎಂಬಾ ಕಾಶಿಯ ಪ್ರಸಿದ್ಧವಾಗಿದ್ದ ಖಗೋಲ ವೀಕ್ಷಣಾಲಯ (ವೇಧಾಲಯ 'ಮಾನ್‌ಮಂದಿರ'ವನ್ನು ವಿವರಿಸುತ್ತಾನೆ. ೧೮೨೩ರ ಸಂಚಿಕೆಯ ಎನ್ಸೈಕ್ಲೋಪಿಡಿಯ ಬ್ರಿಟಾನಿಕಾದಲ್ಲಿ 'ಮಾನ್‌ಮಂದಿರ' ವೇಧಾಲಯವನ್ನು ''ಐದು ಬಹಳ ಪ್ರಸಿದ್ಧವಾ ವೀಕ್ಷಣಾಲಯಗಳಲ್ಲಿ ಒಂದು'' ಎಂದು ಉಲ್ಲೇಖಿಸಿದೆ. ಅದಕ್ಕಿಂತ ಹಿಂದ ೧೭೭೭ರಲ್ಲಿ ಪ್ರಕಟವಾದ ರಾಬರ್ಟ್ ಬಾರ್ಕರ್ ನೀಡಿದ ವಿವರಣೆಯಲ್ಲಿ ''ಅಕ್ಬ ಚಕ್ರವರ್ತಿಯ ಆಜ್ಞೆಯಂತೆ ಈ ವೇಧಾಲಯವು ಇನ್ನೂರು ವರ್ಷಗಳ ಹಿ ಕಟ್ಟಲಾಗಿದೆ.'' ಬಾರ್ಕರ್ ಮಹಾಶಯನ ಜೊತೆಯಲ್ಲೇ ೧೭೭೨ರ ಮಾನ್‌ಮಂದಿರಕ್ಕೆ ಭೇಟಿ ನೀಡಿದ ಕರ್ನಲ್ ಟಿ. ಡಿ. ಪಿಯರ್ಸ್ ಎಂಬಾತ ''ಈ ವೇಧಾಲಯವನ್ನು ಜಯ್‌ಸಿಂಗನ ಮಗನಾದ ಮಾನ್‌ಸಿಂಗ್ ೨೦೦ ವರ್ಷಗ ಹಿಂದೆ ಕಟ್ಟಿಸಿದನು'' ಎಂದು ಹೇಳಿದ್ದಾನೆ. ಫ್ರಾನ್ಸ್ ದೇಶದವನಾದ ಖಗೋಲಶಾಸ್ತ್ರ ಪ್ರಸಿದ್ಧ ಇತಿಹಾಸಕಾರ ಜೀನ್-ಸಿಲ್ವೈನ್ ಬೆಯ್ಲಿ ಭಾರತೀಯ ಖಗೋಲಶಾಸ್ತ್ರ ಹಿರಿಮೆಯನ್ನು ಕುರಿತು ಫ್ರೆಂಚ್ ಭಾಷೆಯಲ್ಲಿ ಒಂದು ಉದ್ಗ್ರಂಥವನ್ನು ೧೭೮೭ರ ಪ್ರಕಟಿಸಿದನು. ಈ ಕೃತಿಯ ಬಹಳ ವಿಸ್ತೃತವಾದ ವಿಮರ್ಶೆಯನ್ನು ಎಡಿನ್‌ಬರ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನೂ ಮತ್ತು ರಾಯಲ್ ಸೊಸೈಟಿ ಫೆಲೊ ಆಗಿದ್ದ ಪ್ರೊ॥ ಜಾನ್ ಪ್ಲೇಫೇರ್ ಎಂಬಾತ ಆಂಗ್ಲಭಾಷೆಯಲ್ಲಿ ೧೭೯೦ರ ಪ್ರಕಟಿಸಿದ. ಈ ಇಬ್ಬರು ಘನವಿದ್ವಾಂಸರ ವಸ್ತುನಿಷ್ಠ ಅಭಿಪ್ರಾಯಗ ಗಮನಾರ್ಹವಾಗಿವೆ :

೧) ಭಾರತೀಯ ಖಗೋಲಶಾಸ್ತ್ರಕ್ಕೆ ಆಧಾರವಾದ ಆಕಾಶಕಾಯಗಳ ವೀಕ್ಷಣೆಗ ಕ್ರಿಸ್ತಶಕಕ್ಕಿಂತ ಮೂರುಸಾವಿರ ವರ್ಷಗಳಿಗಿಂತ ಹಿಂದಿನಿಂದಲೇ ನಡೆಸಿಕೊಂಡ ಬಂದವುಗಳು. ಅದರಲ್ಲೂ ಮುಖ್ಯವಾಗಿ ಸೂರ್ಯ ಮತ್ತು ಚಂದ್ರರ ಗತಿ ಮು

Nāgarī	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Sāradā	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Tākarī	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Gurumukhi	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Kaithi	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Bāngālā	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Maithili	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Uriyā	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Gujarātī	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Marāthi	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Telegu	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Kanadi	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Malayalam	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Burmese	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Siamese	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
Tibetan	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]

ಭಾರತೀಯ ಭಾಷೆಗಳಲ್ಲಿ ದಾಶಮಾನಿಕ ಅಂಕಿಗಳು (ಚಿತ್ರ-೧)

ಸ್ಥಾನಗಳನ್ನು ಕಲಿಯುಗದ ಆದಿಯಿಂದಲೇ (ಕ್ರಿ.ಪೂ. ೩೧೦೧ರ ಫೆಬ್ರವರಿ ೧೮, ಲಂಕಾ-ಉಜ್ಜಯಿನಿಯ ರೇಖೆಗೆ ಸರಿಯಾಗಿ ಮಧ್ಯಮ ಸೂರ್ಯೋದಯದ ಸಮಯ !) ವೀಕ್ಷಣೆಗಳನ್ನು ಆಧರಿಸಿ ನಿರ್ಧರಿಸಿದ್ದು.

ಈಗ ಬ್ರಾಹ್ಮಣ ವಿದ್ವಾಂಸರ ಕೈಯಲ್ಲಿರುವ ಖಗೋಲಶಾಸ್ತ್ರದ ಮೂಲವು ಬಹಳ ಪ್ರಾಚೀನ. ಹಾಗಿದ್ದರೂ ಕೂಡ ಅದರಲ್ಲಿರುವ ನಿಯಮಗಳು ಮತ್ತು ಕೋಷ್ಟಕಗಳು ಆ ಮೇಲೆ (ವ್ಯವಸ್ಥಿತ ಗಣಿತವನ್ನು ಆಧರಿಸಿ) ರಚಿತವಾದುವುಗಳು. ಫ್ರೆಂಚರು ಥಾಯ್‌ಲ್ಯಾಂಡ್‌ನ ಸಯಾಮ್‌ನಿಂದ ಪಡೆದುಕೊಂಡ 'ಕೃಷ್ಣಬೌರಮ್', 'ನರಸಾಪುರ' ಮತ್ತು 'ತಿರ್ವಲೂರ್' ಎಂಬ ಊರುಗಳ ಮೂಲದ 'ಭಾರತೀಯ ಖಗೋಲ ಕೋಷ್ಟಕ'ಗಳನ್ನು ಅಧ್ಯಯನ ಮಾಡಿದ ಗಣಿತಜ್ಞ ಪ್ಲೇಫೇರ್ ಮಹಾಶಯನ ಅಭಿಪ್ರಾಯದಂತೆ ಈ ಮೇಲೆ ಉಲ್ಲೇಖಿಸಿದ ಕೋಷ್ಟಕಗಳಿಗೆಲ್ಲಾ ಒಂದೇ ಆಧಾರ.

ಈ ಭಾರತೀಯ ಕೋಷ್ಟಕಗಳ ರಚನೆಗಳಿಂದ ಕಂಡುಬರುವುದು ಅವುಗಳ ರಚನಕಾರರು ರೇಖಾಗಣಿತ ಮತ್ತು ಅಂಕಗಣಿತಗಳಲ್ಲಿ ಮಾತ್ರವಲ್ಲದೆ ಖಗೋಲಶಾಸ್ತ್ರದ (ಚಾಪೀಯ ತ್ರಿಕೋಣಮಿತಿಯು ಸೇರಿದಂತೆ) ಸಿದ್ಧಾಂತ ಭಾಗದಲ್ಲೂ ಹೊಂದಿದ್ದ ಅಪಾರ ವಿಜ್ಞಾನ.

ಶಾಸ್ತ್ರಕ್ಕೆ ಭಾರತೀಯರ ವಿಶೇಷ ಕೊಡುಗೆಗಳು

ಇಡೀ ಪ್ರಪಂಚವೇ ಭಾರತಕ್ಕೆ ಋಣಿಯಾಗಿರಬೇಕಾದ ಅತ್ಯಮೂಲ್ಯವೂ ತ್ತರವೂ ಆದ ಕೊಡುಗೆಯೆಂದರೆ 'ಶೂನ್ಯ'ದ ಗಣಿತಪರಿಕಲ್ಪನೆ ಮತ್ತು ಮಾನ ಸಂಖ್ಯಾ ಪದ್ಧತಿ'.

ೂನ್ಯದ ಪರಿಕಲ್ಪನೆ ಮತ್ತು ದಾಶಮಾನಿಕ ಸಂಖ್ಯಾ ಪದ್ಧತಿ

ೂನ್ಯದ ಪರಿಕಲ್ಪನೆಯನ್ನು ಕ್ರಿ.ಪೂ. ೨೦೦ಕ್ಕೂ ಹಿಂದೆ ರಚಿತವಾದ ಪಿಂಗಳನ ದಸೂತ್ರ'ದಲ್ಲಿ ಕಾಣಬಹುದು (''ರೂಪೇ ಶೂನ್ಯಂ''. ''ದ್ವಿಃ ಶೂನ್ಯೇ'' - ಛಂ. viii, ೨೯-೩೦).

ಹಳ ಹೆಮ್ಮೆಯ ವಿಷಯವೆಂದರೆ, ಒಂದರಿಂದ ಒಂಬತ್ತರವರೆಗೆ ಮತ್ತು ಸೊನ್ನೆಗೆ ಗಳನ್ನು ಸೂಚಿಸಿದ ಕೀರ್ತಿ ಪ್ರಾಚೀನ ಭಾರತೀಯರದು. ಈ ಭಾರತೀಯ ಮಾನಿಕ ಸಂಖ್ಯಾಪದ್ಧತಿಯೇ, ಸಣ್ಣಪುಟ್ಟ ಬದಲಾವಣೆಗಳೊಂದಿಗೆ, ಇಂದಿಗೂ ಚದಾದ್ಯಂತ ಬಳಕೆಯಲ್ಲಿದೆ (ಚಿತ್ರ-೧).

ಬಹಳ ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಎಣಿಕೆಗೂ ಹಾಗೂ ಲೆ[illegible] ಚಾರಗಳಿಗೂ ದಾಶಮಾನಿಕ ಪದ್ಧತಿಯೇ ಬಳಕೆಯಲ್ಲಿದೆ. ಯಜುರ್ವೇದ ಸಂಹಿತೆಯಲ್ಲಿ ಏಕ, ದಶ, ಶತ ಇತ್ಯಾದಿಯಾಗಿ ಒಂದರ ಮುಂದೆ ಹನ್ನೆರಡು ಸೊನ್ನೆಗಳನ್ನುಳ್ಳ ಸಂಖ್ಯೆಯವರೆಗೆ (೧೦ರ ಘಾತಗಳಾದ ೧೦^{೧}, ೧೦^{೨}, ... ೧೦^{೧೨}) ಹೆಸರುಗಳನ್ನು ಕೊಟ್ಟಿದೆ. ಆ ಪಟ್ಟಿಯ ಕೊನೆಯ ಸಂಖ್ಯೆಗೆ ''ಪರಾರ್ಧ'' ಎಂದು ಹೆಸರು. ಪ್ರಾಚೀನ ಗ್ರೀಕರಿಗೆ ಗೊತ್ತಿದ್ದ ಅತಿ ಹೆಚ್ಚಿನ ಸಂಖ್ಯೆ ಎಂದರೆ 'ಮಿರಿಯಡ್', ಹತ್ತುಸಾವಿರ !

ಪ್ರಾಚೀನ ಜೈನ ಮತ್ತು ಬೌದ್ಧ ಸಂಪ್ರದಾಯಗಳಲ್ಲಿ ಗಣಿತಶಾಸ್ತ್ರಕ್ಕೆ ಬಹಳ ಪ್ರಾಶಸ್ತ್ಯವಿತ್ತು. ಬೌದ್ಧ ಸಾಹಿತ್ಯದ ಒಂದು ಉಲ್ಲೇಖದ ಪ್ರಕಾರ ರಾಜಕುಮಾರ ಸಿದ್ಧಾರ್ಥನಿಗೆ ಹತ್ತರ ಘಾತಗಳ ಪಟ್ಟಿಯಲ್ಲಿ ೧೦^{೫೩} ಅಂದರೆ ಒಂದರ ಮುಂದೆ ೫೩ ಸೊನ್ನೆಗಳಷ್ಟು ದೊಡ್ಡ ಸಂಖ್ಯೆಯ ತನಕ ಪರಿಚಯವಿತ್ತಂತೆ. ಆ ದೊಡ್ಡ ಸಂಖ್ಯೆಗೆ 'ತಲ್ಲಕ್ಷಣ' ಎಂಬ ಹೆಸರು.

೨. ಶುಲ್ವಸೂತ್ರಗಳು - ವೃತ್ತವನ್ನು ಚಚ್ಚೌಕಿಸುವ ರಚನೆ


ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂಬ ಆರು ವೇದಾಂಗಗಳ ಪೈಕಿ ನಮಗೆ ಪ್ರಸ್ತುತವಾಗಿರುವ ವೇದಾಂಗಗಳೆಂದರೆ ಜ್ಯೋತಿಷ ಮತ್ತು ಕಲ್ಪ. ಜ್ಯೋತಿಷ ವೇದಾಂಗದಲ್ಲಿ ಖಗೋಲಕ್ಕೆ ಹಾಗೂ ನಮ್ಮ ಪಂಚಾಂಗ ಪದ್ಧತಿಗೆ ಸಂಬಂಧಿಸಿದ ವಿಷಯಗಳಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ''ಜ್ಯೋತಿಷ''ವೆಂದರೆ ಖಗೋಲಶಾಸ್ತ್ರವೇ (ಅಥವಾ ನಕ್ಷತ್ರವಿದ್ಯೆಯೇ ಹೊರತು ಕಣಿ ಹೇಳುವ ''ಫಲಜ್ಯೋತಿಷ'' ಅಲ್ಲವೇ ಅಲ್ಲ!

ವಿದ್ವಾಂಸರಿಂದ ಹೆಸರಿಸಲಾದ ಒಂಬತ್ತು ಶುಲ್ವಸೂತ್ರ ಕೃತಿಗಳ ಪೈಕಿ ಬೌಧಾಯನ, ಆಪಸ್ತಂಬ ಮತ್ತು ಕಾತ್ಯಾಯನ ಶುಲ್ವಸೂತ್ರಗಳು ಗಣಿತಶಾಸ್ತ್ರದ ಬೆಳವಣಿಗೆಯ ದೃಷ್ಟಿಯಿಂದ ಬಹಳ ಮುಖ್ಯವಾದವು. ಒಂದು ಮಹತ್ವದ ವಿಷಯವೆಂದರೆ ಗ್ರೀಕ್ ಜ್ಯಾಮಿತಿಯ ಪ್ರವರ್ತಕನಾದ ಯುಕ್ಲಿಡ್‌ಗಿಂತ ಏಳೆಂಟು ಶತಮಾನಗಳಷ್ಟಾದರೂ ಹಿಂದಿದ್ದ ಶುಲ್ವಕಾರರ ರೇಖಾಗಣಿತವನ್ನೇ ಎರಡೂವರೆ ಸಾವಿರ ವರ್ಷಗಳಷ್ಟು ದೀರ್ಘಕಾಲ ಆಧರಿಸಿ ನಮ್ಮ ಕೋಟೆಗಳು, ದೇವಸ್ಥಾನಗಳು, ಅರಮನೆಗಳು, ಪ್ರಾಚೀನ ಸೇತುವೆಗಳು ಎಲ್ಲಾ ಕಟ್ಟಲಾಗಿವೆ. ಯುಕ್ಲಿಡ್‌ನ ಜ್ಯಾಮಿತಿಯು ಭಾರತಕ್ಕೆ ಅಧಿಕೃತವಾಗಿ ಪ್ರವೇಶಿಸಿದ್ದು ರಾಜಾ ಜಯಸಿಂಗನ ಅಣತಿಯಂತೆ ಸಮ್ರಾಟ್ ಜಗನ್ನಾಥನು ಅದರ ಪರ್ಶಿಯನ್ ಪಾಠಾಂತರವನ್ನು ಸಂಸ್ಕೃತಕ್ಕೆ ''ರೇಖಾಗಣಿತಮ್'' ಎಂದು ಅನುವಾದಿಸಿದ ನಂತರ - ನಮಗೆ ಅದರ ಅವಶ್ಯಕತೆಯೇ ಇಲ್ಲದ ಕಾಲಘಟ್ಟದಲ್ಲಿ!

ಗಣಿತಶಾಸ್ತ್ರದಲ್ಲಿ ಬಹಳ ಶತಮಾನಗಳಿಂದ ಇತ್ತೀಚಿನ ತನಕ ಕೆಲವು ಬಿಡಿಸಲಾಗದ ಸಮಸ್ಯೆಗಳು ಗಣಿತಜ್ಞರನ್ನು ಬಹಳ ಕಾಡುತ್ತಿದ್ದವು. ಅವುಗಳಲ್ಲಿ ಒಂದು ಮುಖ್ಯವಾದ ಸಮಸ್ಯೆ ಎಂದರೆ ಒಂದು ಕೊಟ್ಟಿರುವ ವೃತ್ತದ ವಿಸ್ತಾರಕ್ಕೆ ಸಮನಾದ ವಿಸ್ತಾರವುಳ್ಳ ಚಚ್ಚೌಕವನ್ನು ರಚಿಸುವುದು. ಈ ಸಮಸ್ಯೆಯನ್ನು 'ಸ್ಕ್ವೇರಿಂಗ್ ದ ಸರ್ಕಲ್' ಎಂದು ಕರೆದಿದ್ದಾರೆ.

ಬಹಳ ಸೋಜಿಗದ ಹಾಗೂ ಹೆಮ್ಮೆಯ ವಿಷಯವೆಂದರೆ ಪ್ರಸಿದ್ಧವಾದ ಈ ಸಮಸ್ಯೆಗೆ ವ್ಯಾವಹಾರಿಕ (ಸ್ಥೂಲ) ಪರಿಹಾರವನ್ನು ಮೊಟ್ಟಮೊದಲು ನೀಡಿದ್ದು 'ಬೌಧಾಯನ' ಮತ್ತು 'ಆಪಸ್ತಂಬ ಶುಲ್ವಸೂತ್ರಗಳು'. (ಚಿತ್ರ-೨)

೩. ಆರ್ಯಭಟನ ಕೊಡುಗೆ



''ವೃತ್ತವನ್ನು ಚಚ್ಚೌಕಿಸುವ'' ರಚನೆ ಬೌಧಾಯನ ಶುಲ್ವಸೂತ್ರ : ೫೮ (ಚಿತ್ರ-೨)

(i) ಭಾರತೀಯ ಗಣಿತ ಮತ್ತು ಖಗೋಳಶಾಸ್ತ್ರಗಳ ಮುಂದಿನ ಬೆಳವಣಿಗೆಗೆ ಬುನಾದಿಯನ್ನು ಹಾಕಿದ ಕೀರ್ತಿ ಆರ್ಯಭಟನಿಗೆ (ಕ್ರಿ. ಶ. ೪೭೬) ಸಲ್ಲುತ್ತದೆ. ...ವುದೇ ಒಂದು ವೃತ್ತದ ಸುತ್ತಳತೆಯನ್ನು (ಪರಿಧಿ, ಪರಿಣಾಹ) ಅದರ ವ್ಯಾಸದಿಂದ ...ಂಭ) ಭಾಗಿಸಿದಾಗ ಬರುವ ಬೆಲೆಯು ಒಂದು ಸ್ಥಿರಸಂಖ್ಯೆ ಆಗಿದ್ದು ಅದನ್ನು ... ವರ್ಣ ''ಪೈ''(π)ಯಿಂದ ಸೂಚಿಸುತ್ತೇವೆ. ಈ 'ಪೈ' ಸಂಖ್ಯೆಯ ನಿಖರವಾದ ... ಮತ್ತು ಅದರ ಗಣಿತ ಲಕ್ಷಣಗಳ ಬಗ್ಗೆ ನೂರಾರು ವರ್ಷಗಳಿಂದ ಸಾಕಷ್ಟು ...ಶೋಧನೆಗಳು ನಡೆದಿವೆ. ಆ ಸಂಖ್ಯೆಯನ್ನು ನಾಲ್ಕು ದಶಮಾಂಶಸ್ಥಾನಗಳವರೆಗೆ ...ರವಾಗಿ ಕೊಟ್ಟ ಮೊದಲಿಗನು (ಮೊದಲನೇ) ಆರ್ಯಭಟನೇ. ಆತನ ...ತಿನಲ್ಲೇ ಹೇಳುವುದಾದರೆ,

ಚತುರಧಿಕಂ ಶತಮಷ್ಟಗುಣಂ ದ್ವಾಷಷ್ಟಿಸ್ತಥಾ ಸಹಸ್ರಾಣಾಮ್ ।
ಅಯುತದ್ವಯ ವಿಷ್ಕಂಭಸ್ಯಾಸನ್ನೋ ವೃತ್ತ ಪರಿಣಾಹಃ ॥ (೨.೧೦)

೨೦,೦೦೦ ಮೂಲಮಾನಗಳಷ್ಟು ವ್ಯಾಸವುಳ್ಳ ವೃತ್ತದ ಸುತ್ತಳತೆಯು ೬೨,೮೩೨ ...ಲಮಾನಗಳಷ್ಟು ಇರುತ್ತದೆ. ಅಂದರೆ ಪೈ (π) = ೬೨,೮೩೨/೨೦,೦೦೦ = ...೪೧೬. ಇಲ್ಲಿ ಗಮನಿಸಬೇಕಾದ ಒಂದು ಮಹತ್ವದ ಅಂಶವೆಂದರೆ ತಾನು ಕೊಟ್ಟ ... ಸಂಖ್ಯೆಯ ಬೆಲೆಯು ''ಆಸನ್ನ'' (ಎಂದರೆ 'ಸಮೀಪ'.) ಬೆಲೆ ಎಂದು ...ರುವುದು. ಹಾಗಾದರೆ ಆ ಸ್ಥಿರಸಂಖ್ಯೆಯ ಬೆಲೆಯು ನಿಖರವಾದ ಭಾಗಲಬ್ಧ ...ional) ಬೆಲೆಯನ್ನು ಹೊಂದಿರುವುದಿಲ್ಲ ಎಂಬುದು ಆರ್ಯಭಟನಿಗೆ ಬಹುಶಃ ...ಸ್ಫೂರ್ತಿಯಿಂದ ಮನದಟ್ಟಾಗಿರಬೇಕು. ಮುಂದೆ ಸುಮಾರು ೧೪ ಶತಮಾನಗಳ ...ರವೇ ಕ್ರಿ. ಶ. ೧೭೬೧ರಲ್ಲಿ ಲ್ಯಾಂಬರ್ಟ್ ಎಂಬ ಗಣಿತಜ್ಞ ಪೈ ಸ್ಥಿರಾಂಕವು ಒಂದು ...ಭಾಗಲಬ್ಧ'' (irrational) ಸಂಖ್ಯೆಯೆಂದು ಸಾಧಿಸಿದನು.

... ಜ್ಯಾ-ಸಂಖ್ಯೆಗಳ ಕೋಷ್ಟಕ (sine tables)

...ಗಣಿತದ ಒಂದು ಮುಖ್ಯ ಶಾಖೆಯಾದ 'ತ್ರಿಕೋಣಮಿತಿ' (trigonometry) ...ದಲ್ಲಿ ಜ್ಯಾ (sine), ಕೋಟಿಜ್ಯಾ (cosine) ಮುಂತಾದ ತ್ರಿಕೋಣಮಿತೀಯ ...ಣಗಳನ್ನು ಬಳಸುತ್ತೇವೆ. ಖಗೋಲ ಗಣಿತದಲ್ಲಿ ಇವುಗಳ ಪ್ರಯೋಗ ಪದೇಪದೇ ...ತ್ತಿರುತ್ತದೆ. ಈಗಿನ 'ಸೈನ್' ಮತ್ತು 'ಕೊಸೈನ್'ಗಳಿಗೂ ಮತ್ತು ಭಾರತೀಯ ...ೋಣಮಿತಿಯ 'ಜ್ಯಾ' ಮತ್ತು 'ಕೋಟಿಜ್ಯಾ'ಗಳಿಗೆ ಇರುವ ಸಂಬಂಧವೆಂದರೆ ಜ್ಯಾ = R sinθ ಮತ್ತು ಕೋಟಿಜ್ಯಾ = R cosθ. ಬೇರೆ ಬೇರೆ ಕೋನಗಳಿಗೆ ಜ್ಯಾ ...ಲೆಗಳನ್ನು ಪಡೆಯಲು ಆರ್ಯಭಟನು ವೃತ್ತದ ಕಾಲುಭಾಗದ ಕೇಂದ್ರ ...ನಪರಿಮಿತಿಯಾದ ೯೦ಡಿಗ್ರಿ (ಅಂಶ)ಗಳ ಕೋನವನ್ನು ೨೪ ಸಮಭಾಗಗಳನ್ನಾಗಿ ...ಿ ಪ್ರತಿ 3¾ ಡಿಗ್ರಿಗಳಿಗೂ ಜ್ಯಾ-ಬೆಲೆಗಳನ್ನು ಅವುಗಳ ಅಂತರಗಳ ಮೂಲಕ ...ನೇ ಶ್ಲೋಕದಲ್ಲಿ ಕೊಟ್ಟಿದ್ದಾನೆ.

ಆರ್ಯಭಟನ ವಿಧಾನದಲ್ಲಿ ಬರುವ ಕೋಷ್ಟಕದಿಂದ ಕೆಲವು ಕೋನಗಳ ... ಸಂಖ್ಯೆಗಳನ್ನು ಆಧುನಿಕ R sine ಬೆಲೆಗಳೊಂದಿಗೆ ಹೋಲಿಸಿದಾಗ ...ರ್ಯಭಟನು ನೀಡಿರುವ ಬೆಲೆಗಳ ನಿಖರತೆಯು ಬಹಳ ಸ್ಪಷ್ಟವಾಗಿದೆ. ಇಲ್ಲಿ R = ...೮ ಕಲೆಗಳು (areminutes) ಎಂಬುವುದು 'ರೇಡಿಯನ್' ಬೆಲೆಗೆ ಅತಿ ...ಪದ ಪೂರ್ಣಾಂಕ.

...ರ್ಯಭಟನ ಜ್ಯೋತ್ಪತ್ತಿ ಕೋಷ್ಟಕ

ಕೋನಗಳು θ	(ಭಾರತೀಯ) ಜ್ಯಾ-ಸಂಖ್ಯೆ	ಆಧುನಿಕ ಜ್ಯಾ-ಸಂಖ್ಯೆ (sinθ x ೩೪೩೮)
೦°	೦	೦
೧೫°	೮೯೦	೮೮೯.೮೨
೩೦°	೧೭೧೯	೧೭೧೯.೦೦
೪೫°	೨೪೩೧	೨೪೩೧.೦೧
೭೫°	೩೩೨೧	೩೩೨೦.೮೫
೯೦°	೩೪೩೮	೩೪೩೮.೦೦

... ಅನಿರ್ದಿಷ್ಟ ಸಮೀಕರಣಗಳು (Indeterminate equations)

...ಪ್ರಾಚೀನ ಭಾರತೀಯ ಗಣಿತಜ್ಞರ ಒಂದು ವಿಶೇಷವಾದ ಕೊಡುಗೆಯೆಂದರೆ ax ... + c = 0 ಮತ್ತು Nx^2 + ೧ = y^2 ಮಾದರಿಯ ಒಂದನೇ ಪ್ರಮಾಣದ ಮತ್ತು ಎರಡನೇ ಪ್ರಮಾಣದ ಸಮೀಕರಣಗಳನ್ನು (first and second degree equations) ಪೂರ್ಣಾಂಕ (integer) ಫಲಿತಾಂಶಗಳು ಬರುವಂತೆ ಬಿಡಿಸುವುದು. ಇಂತಹವೇ ಅನೇಕ ಇತರ ಅನಿರ್ದಿಷ್ಟ ಸಮೀಕರಣಗಳನ್ನು ಬಿಡಿಸುವ ವಿಧಾನಗಳನ್ನು ಪ್ರಪಂಚದಲ್ಲೇ ಮೊಟ್ಟ ಮೊದಲನೆಯವನಾಗಿ ಆರ್ಯಭಟನೂ (ಜನ್ಮ ಕ್ರಿ. ಶ. ೪೭೬), ಅನಂತರ ಬ್ರಹ್ಮಗುಪ್ತ(ಕ್ರಿ. ಶ. ೬೨೮), ಕರ್ಣಾಟಕದವನೇ ಆದ ಮಹಾವೀರಾಚಾರ್ಯ (ಕ್ರಿ. ಶ. ೯ನೇ ಶತ.), ಎರಡನೇ ಭಾಸ್ಕರಾಚಾರ್ಯ (ಜನ್ಮ ಕ್ರಿ. ಶ. ೧೧೧೪) ಮುಂತಾದವರು ಚರ್ಚಿಸಿದ್ದಾರೆ. ಇಂತಹ ಒಂದನೇ ದರ್ಜೆಯ ಅನಿರ್ದಿಷ್ಟ (indeterminate) ಸಮೀಕರಣಗಳನ್ನು ಅವ್ಯಕ್ತ ಸಂಖ್ಯೆ (''ಯಾವತ್‌ತಾವತ್'') ಗಳಾದ x ಮತ್ತು yಗಳ ಪೂರ್ಣಾಂಕ ಬೆಲೆಗಳನ್ನು ಹೊಂದುವಂತೆ ಸಾಧಿಸುವ ವಿಧಾನಕ್ಕೆ ''ಕುಟ್ಟಕ'' ಎಂದು ಕರೆದಿದ್ದಾರೆ. ಇಂತಹ ಸಮೀಕರಣಗಳನ್ನು ಪಾಶ್ಚಾತ್ಯ ಗಣಿತಜ್ಞರು ''ಡಯಫಾಂಟೈನ್ ಇಕ್ವೇಷನ್ಸ್'' ಎಂದು ಹೆಸರಿಸಿದ್ದಾರೆ. ಆದರೆ ಸಮೀಕರಣವನ್ನು ಸಾರ್ವತ್ರಿಕವಾಗಿ ಬಿಡಿಸುವ ವಿಧಾನವನ್ನು ವಿಶ್ವದಲ್ಲೇ ಮೊಟ್ಟಮೊದಲಿಗನಾಗಿ ನೀಡಿದ ಕೀರ್ತಿ ಆರ್ಯಭಟನಿಗೆ ಸಲ್ಲುತ್ತದೆ.

೪. ಬ್ರಹ್ಮಗುಪ್ತ ಮತ್ತು ಭಾಸ್ಕರರ ಕೊಡುಗೆ

ಹಾಗೆಯೇ ಎರಡನೇ ದರ್ಜೆಯ Nx^2 + y^2 = ೧ ಎಂಬ ಅನಿರ್ದಿಷ್ಟ ಸಮೀಕರಣದ ಸಾರ್ವತ್ರಿಕವಾಗಿ ಬಿಡಿಸುವ ತನ್ನ ''ಸಮಾಸಭಾವನಾ'' ವಿಧಾನವನ್ನು ಮೊಟ್ಟಮೊದಲಿಗೆ ನೀಡಿದವನು ಬ್ರಹ್ಮಗುಪ್ತ (ಕ್ರಿ. ಶ. ೬೨೮). ಈ ಮಾದರಿಯ ಸಮೀಕರಣಕ್ಕೆ ''ವರ್ಗಪ್ರಕೃತಿ'' ಎಂದು ಹೆಸರು.

ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ಮಹತ್ವದ ಘಟನೆಯನ್ನು ಉಲ್ಲೇಖಿಸುವುದು ಪ್ರಸ್ತುತ. ಫ್ರಾನ್ಸ್ ದೇಶದ ಪ್ರಸಿದ್ಧ ಗಣಿತಜ್ಞ ಫರ್ಮಾ ಕ್ರಿ. ಶ. ೧೬೫೭ರಲ್ಲಿ ಒಂದು ವಿಶೇಷ ಉದಾಹರಣೆಯಾಗಿ ೬೧x^2 + ೧ = y^2 ಎಂಬ ಅನಿರ್ದಿಷ್ಟ ಸಮೀಕರಣವು ಸರಿಹೊಂದುವಂತೆ x ಮತ್ತು yಗಳ ಎಲ್ಲಾ ಪೂರ್ಣಾಂಕ ಸಂಖ್ಯೆಗಳನ್ನು (general solution) ಕಂಡುಹಿಡಿಯುವ ಸಮಸ್ಯೆಯನ್ನು ಪ್ರಖ್ಯಾತ ಐರೋಪ್ಯ ಗಣಿತಜ್ಞರ ಮುಂದಿರಿಸಿದನು. ಫರ್ಮಾ ಸೇರಿದಂತೆ ಯಾರೊಬ್ಬರೂ ಈ ಸಮಸ್ಯೆಗೆ ಪರಿಹಾರವನ್ನು ನೀಡಲು ಸಾಧ್ಯವಾಗಲಿಲ್ಲ. ಸಾರ್ವತ್ರಿಕ ಪರಿಹಾರವಾಗಲೀ, x ಮತ್ತು yಗಳ ಯಾವುದೇ ಒಂದಾದರೂ ಜೊತೆ ಬೆಲೆಗಳನ್ನು ಕೊಡಲಾಗಲಿಲ್ಲ. ಇಲ್ಲಿ x=0, y=೧ ಎಂಬುವುದು ಕ್ಷುಲ್ಲಕ ಪರಿಹಾರ! ಆದರೆ, ಒಂದು ಐತಿಹಾಸಿಕ ಕಾಕತಾಲೀಯ ವಿಪರ್ಯಾಸವೆಂದರೆ ಈ ಮೇಲೆ ಹೇಳಿದ ೬೧x^2 + ೧ = y^2 ಮಾತ್ರವಲ್ಲದೆ ೬೭ x^2 + ೧ = y^2 ಎಂಬ ಇನ್ನೊಂದು ಸಮೀಕರಣವನ್ನೂ (ಎರಡನೇ)ಭಾಸ್ಕರಾಚಾರ್ಯರು ಐನೂರು ವರ್ಷಗಳ ಹಿಂದೆಯೇ ತಮ್ಮ ಬೀಜಗಣಿತಮ್ ಎಂಬ ಕೃತಿಯಲ್ಲಿ ಸಾರ್ವತ್ರಿಕವಾಗಿ ಬಿಡಿಸಿದ್ದಾರೆ. ಅವುಗಳಲ್ಲಿ ೬೧x^2 + ೧ = y^2 ಎಂಬ ಸಮೀಕರಣವು ಸರಿ ಹೊಂದುವಂತೆ x ಮತ್ತು yಗಳ ಕನಿಷ್ಠ ಪೂರ್ಣಾಂಕ ಬೆಲೆಗಳು x = ೨೨೬೧೫೩೯೮೦ (೯ ಅಂಕಿಗಳು) y = ೧೭೬೬೩೧೯೦೪೯ (೧೦ ಅಂಕಿಗಳು)! ಭಾಸ್ಕರರ ವಿಧಾನಕ್ಕೆ ''ಚಕ್ರವಾಳ'' ವೆಂದು ಹೆಸರು. ಈ ವಿಧಾನದ ಮಹತ್ವವನ್ನು ಕುರಿತು ಜರ್ಮನಿಯ ಖ್ಯಾತ ಗಣಿತಜ್ಞ ಹ್ಯಾಂಕೆಲ್ ಹೇಳುತ್ತಾನೆ: ''ಭಾಸ್ಕರನ ಚಕ್ರವಾಳ ವಿಧಾನವು ಎಲ್ಲಾ ಶ್ಲಾಘನೆಗೂ ಮೀರಿದೆ. ಸಂಖ್ಯಾ ಸಿದ್ಧಾಂತದಲ್ಲಿ (number theory) ಲಗ್ರಾಂಜ್‌ಗಿಂತಲೂ ಮೊದಲು ಗಳಿಸಿದ ಸಾಧನೆಗಳ ಪೈಕಿ ಇದು ಅತ್ಯಂತ ಶ್ರೇಷ್ಠವಾದುದು.''

೫. ಮಹಾವೀರಾಚಾರ್ಯನ ಕೊಡುಗೆ

ಮಹಾವೀರಾಚಾರ್ಯನು ರಾಷ್ಟ್ರಕೂಟ ದೊರೆಯಾದ ಅಮೋಘವರ್ಷ ನೃಪತುಂಗನ (ಸು. ಕ್ರಿ. ಶ. ೮೧೫-೮೭೮) ಆಸ್ಥಾನದಲ್ಲಿದ್ದ ನಮ್ಮ ಕರ್ಣಾಟಕದವನೇ ಆದ ಪ್ರಖ್ಯಾತ ಭಾರತೀಯ ಗಣಿತಜ್ಞ. ಮಹಾವೀರನಲ್ಲಿ ಒಬ್ಬ ಸಿದ್ಧಗಣಿತಜ್ಞನ ಬುದ್ಧಿತೀಕ್ಷ್ಣತೆಯ ಹಾಗೂ ಕವಿಯ ರಸಿಕತೆಯ ಮತ್ತು ಕಲಾವಿದನ ಸೃಜನಾತ್ಮಕ ಕಲ್ಪನಾಶಕ್ತಿಯ ತ್ರಿವೇಣೀ-ಸಂಗಮವನ್ನು ಕಾಣುತ್ತೇವೆ. ಆತನ ಪ್ರಸಿದ್ಧ ಗ್ರಂಥ ''ಗಣಿತಸಾರ-ಸಂಗ್ರಹ''ದಿಂದ ಆಯ್ದ ಒಂದೆರಡು ಮಹತ್ವದ ಫಲಿತಾಂಶಗಳನ್ನು ಉಲ್ಲೇಖಿಸುವುದು ಸೂಕ್ತ. ಮುಂದೆ ಸುಮಾರು ೨-೩ ಶತಮಾನಗಳಷ್ಟು ಕಾಲ ಮಹಾವೀರನ ಕೃತಿಯೇ ದಕ್ಷಿಣ ಭಾರತದಲ್ಲಿ ಪಠ್ಯಗ್ರಂಥವಾಗಿ ಮೆರೆಯಿತು!

(i) ವಿಕಲ್ಪ ಅಥವಾ ಭಂಗ (Combinations)

ಪ್ರಸ್ತರಣ (Permutations) ಮತ್ತು ವಿಕಲ್ಪ ಅಥವಾ ಭಂಗ (Combinations) ಎಂಬ ಗಣಿತಶಾಖೆಗೆ ಲಭ್ಯವಾಗಿರುವ ಆದಿ ಕೃತಿ ಈ ಹಿಂದೆಯೇ ಉಲ್ಲೇಖಿಸಿದ

ಪಿಂಗಳನ "ಛಂದಸೂತ್ರ". ಅನಂತರ ಈ ಕ್ಷೇತ್ರಕ್ಕೆ ವಿಶೇಷವಾದ ಕೊಡುಗೆಯನ್ನು ನಾವು ಕಾಣುವುದು ಜೈನಗ್ರಂಥಗಳಲ್ಲಿ. ಆ ಸಂಪ್ರದಾಯದಲ್ಲಿ ಬೆಳೆದುಬಂದ ಮಹಾವೀರಾಚಾರ್ಯನು ತನ್ನ ಕೊಡುಗೆಯಲ್ಲಿ ಹಿಂದಿನವರನ್ನೆಲ್ಲಾ ಮೀರಿಸಿದ್ದಾನೆ. ಇರುವ n ಪದಾರ್ಥಗಳಲ್ಲಿ ಒಂದೊಂದು ಸಲವೂ r ಪದಾರ್ಥಗಳಷ್ಟನ್ನು ಆರಿಸಿಕೊಳ್ಳಬಹುದಾದ ಒಟ್ಟು ಆಯ್ಕೆಗಳ (selections) ಸಂಖ್ಯೆಯನ್ನು ^nC_r ಎಂದು ಸೂಚಿಸುತ್ತೇವೆ. ಈ ಸಂಖ್ಯೆಯ ಬೆಲೆಯನ್ನು ಕಂಡುಹಿಡಿಯಲು ಸಾರ್ವತ್ರಿಕ ಸೂತ್ರ (general formula) ಹೀಗಿದೆ :


$$^nC_r = \frac{n(n-1)(n-2)(n-3).....(n-r+1)}{1.2.3.....\ ....r}$$

ಈ ಸೂತ್ರವನ್ನು ಜಗತ್ತಿನಲ್ಲೇ ಮೊಟ್ಟಮೊದಲಿಗೆ ನೀಡಿರುವ ಕೀರ್ತಿ ನಮ್ಮ ಕರ್ನಾಟಕದವನೇ ಆದ ಮಹಾವೀರಾಚಾರ್ಯನಿಗೆ ಸಲ್ಲುತ್ತದೆ ಎಂಬುದು ಕನ್ನಡಿಗರಾದ ನಮಗೆಲ್ಲಾ ನಿಜಕ್ಕೂ ಹೆಮ್ಮೆಯ ವಿಷಯ !

(ii) ದೀರ್ಘವೃತ್ತದ ಪರಿಧಿ (Circumference of Ellipse)

ಒಂದು ದೀರ್ಘವೃತ್ತದ (ellipse) ಸುತ್ತಳತೆ ಮತ್ತು ಕ್ಷೇತ್ರಗಳನ್ನು (circumference and area) ಕಂಡುಹಿಡಿಯಲು ಸೂತ್ರಗಳನ್ನು ಭಾರತೀಯ ಗಣಿತಜ್ಞರಲ್ಲಿ ಮೊದಲಬಾರಿಗೆ ಮಹಾವೀರನ "ಗಣಿತ-ಸಾರ-ಸಂಗ್ರಹ" ಕೃತಿಯಲ್ಲಿ ಕಾಣುತ್ತೇವೆ. ದೀರ್ಘವೃತ್ತಕ್ಕೆ ಮಹಾವೀರನು ಕೊಟ್ಟಿರುವ ಹೆಸರು "ಆಯತವೃತ್ತ." ಬಹುಶಃ ಮಹಾವೀರನಿಗೆ ಪ್ರಾಚೀನ ಜೈನ ಗಣಿತ ಸಾಹಿತ್ಯದಲ್ಲಿ ಬರುವ "ವಿಷಮ ಚಕ್ರವಾಳ" ಸ್ಫೂರ್ತಿ ನೀಡಿರಬಹುದು.

ಆತನು ಆಯತವೃತ್ತದ ಕ್ಷೇತ್ರಫಲ (ವಿಸ್ತಾರ)ಕ್ಕೆ ಕೊಟ್ಟಿರುವ ಸೂತ್ರ ಸಮರ್ಪಕವಲ್ಲವಾದರೂ, ಪರಿಧಿಯ ಸೂತ್ರ ನಿಜಕ್ಕೂ ಗಮನಾರ್ಹವಾಗಿದೆ. ದೀರ್ಘವೃತ್ತದ ದೀರ್ಘ ಅಕ್ಷ (major-axis) 2a ಮತ್ತು ಹ್ರಸ್ವ-ಅಕ್ಷ (minor-axis) 2b ಆಗಿದ್ದರೆ (ಚಿತ್ರ-೩ ನೋಡಿ) ಮಹಾವೀರನ ಪ್ರಕಾರ ದೀರ್ಘ (ಆಯತ) ವೃತ್ತದ



ದೀರ್ಘ ವೃತ್ತ (ಆಯತ ವೃತ್ತ) (ಚಿತ್ರ-೩)

ಪರಿಧಿ = $\sqrt{24b+16a}$

ಒಂದು ವೇಳೆ "ಪೈ" ಸ್ಥಿರಾಂಕದ ಬೆಲೆಯನ್ನು √೧೦ ಎಂಬ ಮಹಾವೀರನ ಸನ್ನಿಹಿತ (ಆಸನ್ನ, approximate) ಬೆಲೆಯನ್ನು ತೆಗೆದುಕೊಂಡರೆ


ಪರಿಧಿ $\approx 2\pi a\sqrt{1-(3/5)e^2}$

ಎಂದಾಗುತ್ತದೆ. ಇಲ್ಲಿ e ಎಂದರೆ ದೀರ್ಘವೃತ್ತದ 'ಎಕ್ಸೆಂಟ್ರಿಸಿಟಿ' ಎಂಬ ಸ್ಥಿರಾಂಕ. ಆಧುನಿಕ ಗಣಿತದಲ್ಲಿ ದೀರ್ಘವೃತ್ತದ ಪರಿಧಿಗೆ ಒಂದು ಸುಲಭವಾದ ಸೂತ್ರವು (ವೃತ್ತಕ್ಕೆ ೨ π a ಇರುವಂತೆ) ಇಲ್ಲ! ಇಂತಹ ಸಂದರ್ಭದಲ್ಲಿ ಮಹಾವೀರನ ಸನ್ನಿಹಿತ ಬೆಲೆಯ ಸೂತ್ರವು ನಿಜಕ್ಕೂ ಶ್ಲಾಘ್ಯ.

ಮುಂದೆ ಶ್ರೀನಿವಾಸ ರಾಮಾನುಜನ್ (೧೮೮೭-೧೯೨೦) ಆತನ ಬಹಳ ಶ್ರೇಷ್ಠಮಟ್ಟದ ವಿಪುಲವಾದ ಫಲಿತಾಂಶಗಳೊಂದಿಗೆ ದೀರ್ಘವೃತ್ತದ ಪರಿಧಿಗೆ ಬಹಳ ಹತ್ತಿರದ ಬೆಲೆ ಸಿಗುವಂತಹ ಸೂತ್ರವನ್ನು ಕೊಟ್ಟಿದ್ದಾನೆ. ಹಾಗೆಯೇ ಈ ಹಿಂದೆ ಉಲ್ಲೇಖಿಸಿದ "ವೃತ್ತವನ್ನು ಚೌಕೀಕರಿಸುವ" ರಚನೆಗೆ ಕೂಡ ಬಹಳ ಸನ್ನಿಹಿತವಾದ ರಚನೆಯನ್ನು ನೀಡಿದ್ದಾನೆ.

೬. ಗಣೇಶ ದೈವಜ್ಞನಿಂದ ಖಗೋಲಗಣಿತ ವಿಧಾನಗಳ ಸರಳೀಕರಣ

ಭಾರತೀಯ ಖಗೋಲಸಿದ್ಧಾಂತ ವಿಧಾನಗಳಲ್ಲಿ 'ಜ್ಯಾ' ಮತ್ತು 'ಕೋಟಿಜ್ಯಾ'ಗ ಬಹಳಷ್ಟು ಸಲ ಬಳಸಬೇಕಾಗುತ್ತದೆ. ಅಷ್ಟು ಗಣಿತಪ್ರಿಯರಲ್ಲದ ಎಷ್ಟೋ ಪಂಚಾ ಕರ್ತೃಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಇದೊಂದು ತಲೆಬೇನೆಯೇ ಸರಿ. ಇದ ಮನಗಂಡ ಮಹಾರಾಷ್ಟ್ರದ ಕೊಂಕಣಪ್ರದೇಶ ಮೂಲದ ಪ್ರಖ ಖಗೋಲಗಣಿತಜ್ಞ ಗಣೇಶ ದೈವಜ್ಞ (ಕ್ರಿ. ಶ. ೧೫೨೦) ತನ್ನ 'ಗ್ರಹಲಾಘವಮ ಎಂಬ ಗ್ರಂಥದಲ್ಲಿ 'ಜ್ಯಾ' ಮತ್ತು 'ಕೋಟಿಜ್ಯಾ'ಗಳ ಬದಲಿಗೆ ಸುಲಭವಾ ಬೀಜಗಣಿತೀಯ ಸೂತ್ರಗಳನ್ನು ಬಳಸಿ ಇಡೀ ಶಾಸ್ತ್ರವನ್ನೇ ಸರಳೀಕರಿಸಿದ್ದಾ ಇಂದಿಗೂ ಉತ್ತರ ಭಾರತದಲ್ಲಿ, ಮಹಾರಾಷ್ಟ್ರದಲ್ಲಿ ಹಾಗೂ ಉತ್ತರ ಕರ್ನಾಟ ಪ್ರದೇಶಗಳಲ್ಲಿ 'ಗ್ರಹಲಾಘವಮ್' ಕೃತಿಯು ಅತ್ಯಂತ ಜನಪ್ರಿಯವಾಗಿದೆ (ಚಿತ್ರ-೪)



ಗಣೇಶ ದೈವಜ್ಞನ "ಗ್ರಹ ಲಾಘವಮ್" ಕೃತಿಯ ಹಸ್ತಪ್ರತಿ (ಚಿತ್ರ-೪)

ಉಪಸಂಹಾರ : ಪ್ರಸ್ತುತ ಲೇಖನದ ಸುದೀರ್ಘವಾದ ಹಿನ್ನಲೆಯಲ್ಲಿ ಭಾರತೀ ಖಗೋಲಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದೆರಡೇ ಮಾತು. ಕೆಲವು ಪಾಶ್ಚಾ ವಿಮರ್ಶಕರ ಆಪಾದನೆ ಎಂದರೆ "ಪ್ರಾಚೀನ ಮತ್ತು ಮಧ್ಯಕಾಲೀನ ಭಾರತೀಯರು ಎಂದಿಗೂ ಒಳ್ಳೆಯ ಖಗೋಲ ವೀಕ್ಷಕರಾಗಿಯೇ ಇರಲಿಲ್ಲ; ಹೆಚ್ಚೆಂದರೆ ಗಣಿತ ಲೆಕ್ಕಾಚಾರಗಳಲ್ಲಿ ನಿಷ್ಣಾತರಾಗಿದ್ದರು" ಎಂದು. ಈ ಆಪಾದನೆ ಸತ್ಯ ದೂರವಾಗಿದ್ದು, ಅಂತಹ ವಿಮರ್ಶಕರ ಅವಿಜ್ಞಾನ ಮತ್ತು ಪೂರ್ವಗ್ರಹಗಳ ಸೂಚಿಸುತ್ತವಷ್ಟೆ. ನಮ್ಮ ಪ್ರಾಚೀನ ಸಿದ್ಧಾಂತಗಳಲ್ಲಿ "ಯಂತ್ರಾಧ್ಯಾಯ" ಎಂ ಒಂದು ಪ್ರತ್ಯೇಕ ಅಧ್ಯಾಯವೇ ಇದ್ದು ಅದರಲ್ಲಿ ಆಗ ಬಳಸುತ್ತಿದ್ದ ವೀಕ್ಷಣೆಗ ಉಪಕರಣಗಳನ್ನು ಬಣ್ಣಿಸಿದ್ದಾರೆ. ಅಷ್ಟೇ ಅಲ್ಲದೆ, ಬಹಳ ಪ್ರಾಚೀನವಾದ "ವಾಸಿ ಸಿದ್ಧಾಂತ"ದಿಂದ ಹಿಡಿದು ಮುಂದಿನ ಕೃತಿಗಳಲ್ಲೂ "ದೃಗ್-ಗಣಿತ-ಐಕ್ಯ" ಎಂದ ವೀಕ್ಷಿಸಿದ ಹಾಗೂ ಗಣಿತದ ಲೆಕ್ಕಾಚಾರಗಳಿಂದ ಬಂದ ಫಲಿತಾಂಶಗಳು ಸಾಮ್ಯವನ ಹೊಂದಿರಬೇಕೆಂದು ನಿರ್ದೇಶಿಸುತ್ತಲೇ ಬಂದಿದ್ದಾರೆ.

ಕ್ರಿ. ಶ. ೧೪-೧೫ನೇ ಶತಮಾನದಲ್ಲಿದ್ದ ಕೇರಳದ ಪ್ರಸಿದ್ಧ ಖಗೋಲ ಪರಮೇಶ್ವರ ಹೀಗೆ ಉಪದೇಶಿಸುತ್ತಾನೆ: *"ಕಾಲಾಂತರೇ ತು ಸಂಸ್ಕಾರಶ್ಚಿಂತ್ಯತಾ ಗಣಕೋತ್ತಮೈಃ"* – ಕಾಲಾಂತರದಲ್ಲಿ ಗಣಕೋತ್ತಮರು (ಸೂಕ್ತ) ಸಂಸ್ಕಾ (ಪರಿಷ್ಕರಣೆ)ಯನ್ನು ಸೂಚಿಸಬೇಕು.

ಇನ್ನು ಪರಮೇಶ್ವರನೇ ಸ್ವತಃ ಶ್ರೇಷ್ಠಮಟ್ಟದ ಗಣಕೋತ್ತಮ ಮಾತ್ರವಲ್ಲದೆ ಬಹು ನಿಷ್ಠಾವಂತ ಖಗೋಲ ವೀಕ್ಷಕನೆಂದು ತಿಳಿದುಬರುವುದು ಆತನ ಪ್ರಶಿಷ್ಯ ನೀಲಕಂ ಸೋಮಯಾಜಿಯ (ಕ್ರಿ. ಶ. ೧೫೦೦) ಮಾತಿನಿಂದ : "(ಪರಮೇಶ್ವರನು) ಐವತ್ತೈ ವರ್ಷಗಳಷ್ಟು (ದೀರ್ಘಕಾಲ) ಗ್ರಹಣ-ಗ್ರಹಯೋಗಗಳನ್ನು ವೀಕ್ಷಿಸಿ, (ಅವು ಫಲಿತಾಂಶಗಳನ್ನು ವಿಮರ್ಶಿಸಿ ಮತ್ತು) ಪರೀಕ್ಷಿಸಿ ತನ್ನ 'ಸಮದೃಗ್ಗಣಿತಮ್' ಎಂ ಕರಣಗ್ರಂಥವನ್ನು ರಚಿಸಿದನು" *(ಪಂಚಪಂಚಾಶತ್ ವರ್ಷಕಾಲಂ ನಿರೀಕ್ಷ ಗ್ರಹಣಗ್ರಹಯೋಗಾದಿಷು ಪರೀಕ್ಷ್ಯ ಸಮದೃಗ್ಗಣಿತಂ ಕರಣಂ ಚಕಾರ).*

ಡಾ|| ಎಸ್. ಬಾಲಚಂದ್ರರಾವ್
ಗೌ|| ನಿರ್ದೇಶಕರು, ಭವನ್ಸ್ ಗಾಂಧಿ ಸೆಂಟರ್ ಆಫ್ ಸೈನ್ಸ್ ಅಂಡ್ ಹ್ಯೂಮನ್ ವ್ಯಾಲ್ಯೂಸ್
ಭಾರತೀಯ ವಿದ್ಯಾಭವನ, ನಂ. ೪೩/೧, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - ೫೬೦ ೦೦೧

With Best Compliments from





ಕ್ಲಾಸಿಕ್ ಎಲೆಕ್ಟ್ರಾನಿಕ್ಸ್

CLASSIC ELECTRONICS

Aishwarya Complex, # 6 (Old #64), M.S.R. Main Road, Mathikere
Bengaluru-560 054, Phone : 23571888, 22900000

Dealers in Electronic Goods

ಹೇಮಂತ ಸಾಹಿತ್ಯ ಪ್ರಕಾಶನದ ಅಮೂಲ್ಯಕೊಡುಗೆ

ಶ್ರೀಮದ್ ವಾಲ್ಮೀಕಿ ಮಹರ್ಷಿ ಪ್ರಣೀತ ಯೋಗವಾಸಿಷ್ಠ

ಯೋಗ ವಾಸಿಷ್ಠವು ಅದ್ವೈತ ವೇದಾಂತದ ಪ್ರತಿಪಾದನೆಯಾಗಿದ್ದು ಪುರಾಣಗ್ರಂಥಗಳಲ್ಲೆಲ್ಲ ಬೃಹತ್ ಮತ್ತು ಮಹತ್ ಎಂದು ಪರಿಗಣಿತವಾಗಿದೆ. ಖಂಡವಲ್ಲದ ಅಖಂಡ ಕಲ್ಪನೆಯೇ ಅದ್ವೈತದ ಸಾರ. ಇವುಗಳ ಶ್ಲೋಕಗಳು ಮೂಲ ಸಂಸ್ಕೃತದಲ್ಲಿದ್ದು ಇಕ್ಷ್ವಾಕು ಕುಲ ಪುರೋಹಿತ ವಸಿಷ್ಠಮುನಿ ಶ್ರೀರಾಮಚಂದ್ರನಿಗೆ ಉಪದೇಶಿಸಿದಂತೆ ಗುರು-ಶಿಷ್ಯರ ನಡುವಿನ ಸಂವಾದ ರೂಪದಂತಿವೆ. ಪ್ರಾಪಂಚಿಕ ಬದುಕಿನ ಬಗ್ಗೆ ಗಂಭೀರವಾಗಿ ಹೇಳಲ್ಪಟ್ಟ ಜ್ಞಾನೋಪದೇಶವಾಗಿದೆ. ವಸಿಷ್ಠರು ಇಲ್ಲಿ ಜ್ಞಾನ ಯೋಗಕ್ಕೆ ಹೆಚ್ಚು ಒತ್ತು ಕೊಟ್ಟು ವಿಶೇಷವಾಗಿ ಹೇಳಿರುವುದರಿಂದಲೇ ಇದು 'ಯೋಗ ವಾಸಿಷ್ಠ' ಎನಿಸಿದೆ. ಹಿಂದಿನ ಯುಗಗಳಲ್ಲಿ ಅತಿ ಶ್ರೇಷ್ಠರೆಂದು ಮಾನ್ಯರಾದ, ಋಷಿಮುನಿ ಪುಂಗವರೆಂದು ಖ್ಯಾತರಾದ, ಇಂದಿಗೂ ಪೂಜ್ಯರೆಂದು ಗೌರವಿಸಲ್ಪಡುವ ಮಹಾಜ್ಞಾನಿಗಳಿಂದ ಅನಂತ ವಿಶ್ವದ ಬಗ್ಗೆ ಮತ್ತೂ ತಿಳಿಯುವ ಹಂಬಲ ತೀವ್ರವಾಗಿತ್ತು. ಅವರ ವಿಚಾರ- ವಿಶ್ಲೇಷಣೆಗಳು ಬ್ರಹ್ಮಾಂಡದ ಉತ್ಪತ್ತಿ - ಜೀವದ ಉಗಮ - ಜೀವಿಯ ಜನನ- ಜೀವನ- ಮರಣ ಮುಂತಾದ ಅಧ್ಯಾತ್ಮಗಳತ್ತ ಹರಿದಿದ್ದವು. ಅಂದಿನವರು ತಮ್ಮ ಬುದ್ಧಿಗೋ ದಿವ್ಯದೃಷ್ಟಿಗೋ ಹೊಳೆದುದನ್ನು ಶ್ಲೋಕಗಳಾಗಿ, ಉಪಕಥೆಗಳೊಂದಿಗೆ, ನೀತಿಕಥೆಗಳೊಂದಿಗೆ ತಮ್ಮ ಮುಂದಿನ ಪೀಳಿಗೆಗೆ ದಾಟಿಸುತ್ತ ಬಂದಿದ್ದಾರೆ. ಈ ಜಿಜ್ಞಾಸೆ ಅಂದಿನಿಂದ ಇಂದಿನವರೆಗೂ ನಡೆದಿದೆ. ಪ್ರಾಪಂಚಿಕ ಸುಖಗಳು ಕ್ಷಣಿಕವಾದುವು, ಪರಬ್ರಹ್ಮವೊಂದೇ ಶಾಶ್ವತ ಎಂಬ ತತ್ತ್ವವು ಅಂದು ಮಾನ್ಯವಾಗಿದ್ದು ತತ್ತ್ವಶಾಸ್ತ್ರಗಳು, ದರ್ಶನಗಳು, ವೇದಪುರಾಣಗಳು ಅದನ್ನೇ ಸಾರಿದವು. ಜ್ಞಾನ -ವೈರಾಗ್ಯಗಳು ಮೇಲುಗೈ ಪಡೆದು ವಿವಿಧ ಚಿಂತನೆಗಳಿಂದಾಗಿ ಬಹು ಶಾಖೆಯ ಜ್ಞಾನದರ್ಶನಗಳು ರೂಪುಗೊಂಡವು. ಕೊನೆಗೆ ಇಡೀ ವಿಶ್ವವೇ ಪರಬ್ರಹ್ಮ ಎಂಬ ಅಂತಿಮ ಸತ್ಯದೊಂದಿಗೆ ಐಕ್ಯಗೊಳ್ಳುವುದೆಂದೂ, ಮತ್ತೆ ಉಗಮವಾಗುವುದೆಂದೂ ನಂಬಲಾಯಿತು. ಬುದ್ಧಿ ವಿಕಾಸಗೊಂಡಂತೆಲ್ಲ, ಜ್ಞಾನಶಾಖೆಗಳು ಬೆಳೆದಂತೆಲ್ಲ ಮಾನವ ಮಾತ್ರವಲ್ಲ, ಸಕಲ ಜೀವಿಗಳು, ಅಣು-ರೇಣು ತೃಣ-ಕಾಷ್ಠಗಳಲ್ಲಿಯೂ ಸರ್ವ ಅಂತರಗಾಮಿಯಾದ ಯಾವುದೋ ಶಕ್ತಿ ಎಲ್ಲವನ್ನೂ ನಿಯಂತ್ರಿಸುವುದೆಂಬ ನಿರ್ಧಾರವೇ ಅಂತಿಮವಾಯಿತು. ಮುಂದೆ ಪರಸ್ಪರ ವಿಚಾರ ವಿನಿಮಯ - ಶ್ರೇಷ್ಠರೆಲ್ಲ ಸೇರಿಚರ್ಚೆಗಳು - ವಾಗ್ವಾದಗಳು ಬೆಳೆದಂತೆಲ್ಲ ಅತಿಶ್ರೇಷ್ಠರು ಯಾರೆಂದೂ, ಅತ್ಯುನ್ನತ ಜ್ಞಾನಿ ಯಾರೆಂದೂ ಸಕಲ ವಿದ್ಯಾಪಾರಂಗತರೆಲ್ಲ ಸೇರಿ ಚರ್ಚಿಸಿದರು. - ಹೀಗೆ ಕಥೆಗಳು - ಉಪಕಥೆಗಳು ಬೆಳೆದು ಪ್ರಪಂಚದ ಜ್ಞಾನವನ್ನೆಲ್ಲ ಕ್ರೋಢೀಕರಿಸ ತೊಡಗಿದಾಗ ಇಂತಹ ಮಹಾನ್ ವ್ಯಕ್ತಿಗಳಿಂದ ಬೃಹತ್ ಗ್ರಂಥಗಳ ರಚನೆಯಾಯಿತು. ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಎತ್ತಿ ತೋರಿಸುವ ಈ ದರ್ಶನ ಗ್ರಂಥವು ಏಳು ಸಂಪುಟಗಳಲ್ಲಿ ಸುಮಾರು 5600 ಪುಟಗಳಷ್ಟಿದ್ದು ಜ್ಞಾನಧಾರೆಯೇ ಹರಿದು ಬಂದು ಜನಸಾಗರವನ್ನು ಸೇರುವಷ್ಟು ಅಗಾಧವಾಗಿದೆ. ಹೇಮಂತ ಸಾಹಿತ್ಯದ ಅಗಾಧ ಪರಿಶ್ರಮದ ಪ್ರಕಟಣೆಯಾದ 28,000 ಶ್ಲೋಕಗಳಿರುವ ಇಂಥ ಮಹತ್ವದ ಉದ್ಗ್ರಂಥವನ್ನು ನಾಡಿನ ಶ್ರೇಷ್ಠ ಸಾಹಿತ್ಯ ಪ್ರತಿಭೆಯೆಂದು ಗೌರವಕ್ಕೆ ಪಾತ್ರರಾದ ದೇವುಡು ಕನ್ನಡೀಕರಿಸಿದ್ದಾರೆ.


ಒಟ್ಟು
7 ಸಂಪುಟಗಳ
ಬೆಲೆ ₹ 3150/-



ರೈತರ ಬೆಂಗಾವಲಾಗಿ ನಿಲ್ಲುವುದು ರೈತ ಸಂಘದ ಕರ್ತವ್ಯ – ಅನಸೂಯಮ್ಮ

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಪ್ರತಿಭಟನಾ ಪ್ರದರ್ಶನಗಳಲ್ಲಿ ದೂರದಿಂದ ಕಂಡಿದ್ದ ಅನಸೂಯಮ್ಮನವರನ್ನು ಹತ್ತಿರದಿಂದ ಕಾಣುವ, ಅವರೊಡನೆ ವೇದಿಕೆ ಹಂಚಿಕೊಳ್ಳುವ ಸದವಕಾಶ ನನಗೆ ಕಳೆದ ವರ್ಷ ಕ್ಕಿತ್ತು. ಹೊನ್ನಾವರದ ಡಾ|| ಅನುಪಮಾ ದಂಪತಿಗಳ ಕರೆಯ ಮೇರೆಗೆ ಅವರು ಹೊನ್ನಾವರದಲ್ಲಿ ನಡೆಸಿದ ವಿಚಾರ ಸಂಕಿರಣದಲ್ಲಿ ಾಗವಹಿಸಲು ಬೆಂಗಳೂರಿನಿಂದ ಹೊರಟಾಗ ಬಸ್ಸಿನಲ್ಲಿ ಅವರೊಡನೆ ಳ ಹಂಚಿಕೊಂಡಂತೆ, ಅವರ ಮಾತಿನ ಬುತ್ತಿಯನ್ನೂ ಸವಿಯುತ್ತಾ ಹೊರಟೆ. ಎರಡು ದಿನಗಳ ಅವರೊಂದಿಗಿನ ಒಡನಾಟದಲ್ಲಿ ವಿದಷ್ಟೂ ಮುಗಿಯದ ಅವರ ಅನುಭವದ ಕಂತೆಯಿಂದ ನನಗಾದ ಬೆರಗಿಗೆ ಪಾರವೇ ಇಲ್ಲ. ಅಂತಹ ಕರ್ನಾಟಕದ ರೈತ ಚಳುವಳಿಯ ಪ್ರಜ್ವಲ ಸ್ತ್ರೀರತ್ನವನ್ನು ನಮ್ಮ 'ಹೊಸತು' ಓದುಗರಿಗೆ ಪರಿಚಯಿಸಲು ಪತ್ರಿಕೆಯ ಸಂಪಾದಕರಾದ ಡಾ|| ಜಿ. ರಾಮಕೃಷ್ಣ ಮತ್ತು ನಾನು ನಡೆಸಿದ ಚಿಕ್ಕ ಸಂದರ್ಶನವು ಇಲ್ಲಿದೆ. ಕರ್ನಾಟಕ ರೈತ ಸಂಘದ ಉಪಾಧ್ಯಕ್ಷೆಯಾಗಿ ಕೆಲಸ ಮಾಡುತ್ತಿರುವ ಬಿ. ಅನಸೂಯಮ್ಮನವರನ್ನು ಬೆಂಗಳೂರಿನ ಗಾಯತ್ರಿನಗರದಲ್ಲಿರುವ ಅವರ ಮಗಳು ಅಖಿಲರವರ ಮನೆಯಲ್ಲಿ ಸಂದರ್ಶಿಸಿದೆವು.

ಕನಕಪುರದ ಕೃಷಿಕ ಶ್ರೀ ಕೆ. ಎಂ. ಬಸವೇಗೌಡರ ಪುತ್ರಿಯಾದ ಅನಸೂಯಮ್ಮ ತಮ್ಮ ತಾಯಿ ಗಂಗಮ್ಮನವರನ್ನು ಚಿಕ್ಕ ವಯಸ್ಸಿನಲ್ಲೇ



ಸಂದರ್ಶನ, ಲೇಖನ ಮತ್ತು ಚಿತ್ರಗಳು :
ಡಾ|| ಎನ್. ಗಾಯತ್ರಿ

ಕಳೆದುಕೊಂಡರು. ಈ ದಂಪತಿಗಳ ಎಂಟು ಮಕ್ಕಳಲ್ಲಿ ಐದನೆಯ ವರಾದ ಅನಸೂಯಮ್ಮ ಜನಿಸಿದ್ದು 1948ರ ಸೆಪ್ಟೆಂಬರ್ 15ರಂದು. ಅಮ್ಮ ತೀರಿಕೊಂಡಾಗ ಅವರಿಗೆ ಎರಡೂವರೆ ವರ್ಷ. ಮನೆಯಲ್ಲಿ ಕಿರಿಯವಳು. ತಂದೆ ಜಾತಿವಾದಿ; ರಾಜಕಾರಣಿ. ಮಧ್ಯಮವರ್ಗದ ಸಂಪ್ರದಾಯಸ್ಥ ಕುಟುಂಬ. ಗಂಗಡಿಕಾರ ಒಕ್ಕಲಿಗರ ಜಾತಿಗೆ ಸೇರಿದ್ದರಿಂದ ಜಾತಿ ಗೌರವ ಹೆಚ್ಚೆಂಬ ಅಹಂ ತಂದೆಗೆ. ತಂದೆ ಮಗಳಿಗೆ ಶಾಲೆಯಲ್ಲಿ ನೀರು ಕುಡಿಯಬೇಡ; ಬೇರೆಯವರ ಮನೆಗೆ ಹೋಗಿ ಏನೂ ತಿನ್ನಬೇಡ, ಎಂದೆಲ್ಲಾ ನಿರ್ಬಂಧಿಸುತ್ತಿದ್ದರು. ಆದ್ದರಿಂದ ಮೊದಲಿನಿಂದಲೂ ಮನೆಯ ಹೊರಗಿರುವುದನ್ನು ಇಷ್ಟಪಡುತ್ತಿದ್ದ ಅನಸೂಯಮ್ಮನವರಿಗೆ ಶಾಲೆ ಎಂದರೆ ಬಹಳ ಇಷ್ಟ. ಕನಕಪುರದಲ್ಲಿ ರೂರಲ್ ಗರ್ಲ್ಸ್ ಹೈಸ್ಕೂಲ್ ಆರಂಭವಾದಾಗ ಅದರ ಮೊದಲ ವರ್ಷದ ವಿದ್ಯಾರ್ಥಿನಿಯಾಗಿ ಸೇರಿದ ಅವರಿಗೆ ಶಾಲೆ ಅವರ ಪ್ರತಿಭೆಯ ಅಭಿವ್ಯಕ್ತಿಗೆ ಸಕಲ ಅವಕಾಶಗಳನ್ನೂ ತೆರೆಯಿತು. ಹಾಡು, ನಾಟಕ, ಆಶುಭಾಷಣ ಸ್ಪರ್ಧೆ ಎಲ್ಲದರಲ್ಲೂ ಮುಂದು. ಹೈಸ್ಕೂಲ್ ಶಿಕ್ಷಣ ಮುಗಿದ ನಂತರ ಕಾಲೇಜಿಗೆ ಸೇರಬೇಕೆಂಬ ಅವರ ಆಸೆಯನ್ನು ಮನೆಯಲ್ಲಿ ಯಾರೂ ಪೋಷಿಸಲಿಲ್ಲ, ಆದಕ್ಕಾಗಿ ಅವರು ನಡೆಸಿದ ಮುಷ್ಕರ, ಹೋರಾಟಕ್ಕೆ ಯಾರೂ ಬೆಂಬಲ ನೀಡಲಿಲ್ಲ. ಕೊನೆಗೆ ಮನೆಯಲ್ಲಿಯೇ ಪುಸ್ತಕದ ರಾಶಿಯನ್ನು ತಂದು ತಮ್ಮ ಸ್ವಯಂ ಶಿಕ್ಷಣ ಗಳಿಸಿಕೊಂಡರು. ಮದುವೆಯೇ ಆಗದ ಸಾರ್ವಜನಿಕ ಬದುಕಿನಲ್ಲಿ ತೊಡಗಿಕೊಳ್ಳಬೇಕೆಂದು ಬಹಳ ಆಸೆಪಟ್ಟರು. ಅದು ಕೈಗೂಡಲಿಲ್ಲ. ಹೆಂಡತಿ ಮಡಿದು, ಎರಡು ಮಕ್ಕಳಿದ್ದ ಸೋದರಮಾವ ಸೋಮಲಿಂಗಯ್ಯನವರನ್ನು ಅನಿವಾರ್ಯವಾಗಿ ಮದುವೆಯಾದರು. ಮದುವೆಯ ನಂತರ ಅನಸೂಯಮ್ಮನವರ ಹೋರಾಟದ ಬದುಕು ಬೇರೆಯದೇ ಸ್ವರೂಪ ಪಡೆಯಿತು. ಇಲ್ಲಿಯವರೆಗೂ ವೈಯಕ್ತಿಕ ಆಶೆ, ಧ್ಯೇಯಗಳಿಗಾಗಿ ಕೌಟುಂಬಿಕ ಚೌಕಟ್ಟಿನಲ್ಲಿ ನಡೆಸುತ್ತಿದ್ದ ಅನಸೂಯಮ್ಮನವರ ಹೋರಾಟ ಸಮಾಜಮುಖಿಯಾಗಿ ವಿಸ್ತರಿಸಿತು. ಇಷ್ಟೆಲ್ಲಾ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅನಸೂಯಮ್ಮನವರ ಉದ್ಯೋಗ ತಮ್ಮ ಹಳ್ಳಿಯ ಅಂಚೆ ಕಚೇರಿಯನ್ನು ನಿರ್ವಹಿಸುವುದು. ಪೂರ್ಣಪ್ರಮಾಣದ ನೌಕರರಿಗೆ ದೊರೆಯುವ ವೇತನ ಸಹ ಇವರಿಗೆ ದೊರೆಯುವುದಿಲ್ಲ. ಈ ಎಲ್ಲ ಅನುಭವದ ಕತೆಯನ್ನು ಅವರ ಬಾಯಿಂದ ಕೇಳುವುದೇ ಒಂದು ಸೊಗಸು. ಮೈಯೆಲ್ಲಾ ಹೂ ಹೊತ್ತ ಪಾರಿಜಾತದ ಗಿಡವನ್ನು ಅಲುಗಿಸಿದಂತಹ ಅನುಭವ ಇದು. ಸುಮ್ಮನೆ ಮುಟ್ಟಿದರೆ ಸಾಕು, ಅವರ ಅನುಭವ ಕಥನ ಧಾರೆಯಾಗುತ್ತದೆ. ಹೋರಾಟವೇ ಉಸಿರಾದ ರೈತನಾಯಕಿ ಅನಸೂಯಮ್ಮ.



ಹೊಸತು : ನೀವು ಸಾರ್ವಜನಿಕ ವ್ಯಕ್ತಿಯಾಗಿ ರೂಪುಗೊಳ್ಳುವುದಕ್ಕೆ ನಿಮ್ಮ ಟುಂಬಿಕ ಪರಿಸರದ ಪ್ರಭಾವ ಏನಾದರೂ ಕಾರಣವಾಗಿತ್ತಾ?

ಅನಸೂಯಮ್ಮ : ಕರಿಯಪ್ಪನವರು ಅಪ್ಪನಿಗೆ ತುಂಬ ಸ್ನೇಹಿತರು. ರಾಜಕೀಯದಲ್ಲಿದ್ದ ರು ಮೊದಲು ಪ್ರಜಾ ಸೋಷಿಯಲಿಸ್ಟ್ ಪಕ್ಷದಲ್ಲಿ ಇದ್ದು ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಕೊಂಡರು. ಜಾಫರ್ ಷರೀಫ್ ಚುನಾವಣೆಗೆ ನಿಂತಾಗ ಅವರನ್ನು ಗೆಲ್ಲಿಸಲು ಾವಣೆಯಲ್ಲಿ ಕೆಲಸ ಮಾಡಿದರು. ಒಂದು ರೀತಿಯಲ್ಲಿ ನಮ್ಮ ಮನೆಗೆ ರಾಜಕೀಯದ ಗಳು ತುಂಬ ಬರುತ್ತಿದ್ದರು. ಕಾಲೇಜಿಗೆ ಕಳುಹಿಸದಿದ್ದರಿಂದ ಮನೆಯಲ್ಲಿದ್ದೇ ು ಪುಸ್ತಕ ಓದುತ್ತಿದ್ದೆ. ಶಿವರಾಮ ಕಾರಂತರ 'ಅಳಿದ ಮೇಲೆ' ಕಾದಂಬರಿಯಲ್ಲಿನ ು ಸಾಲು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿಬಿಟ್ಟಿತ್ತು : ''ಮಗು ಋಣ ಹೊತ್ತುಕೊಂಡು ರು ತಾನು ಪಡೋದಕ್ಕಿಂತ ಹೆಚ್ಚು ಸಮಾಜಕ್ಕೆ ಕೊಡಬೇಕು.'' ಈ ಮಾತು ಸದಾ ಮನಸ್ಸಿನಲ್ಲಿ ಎಚ್ಚರಿಸುತ್ತಿರುತ್ತದೆ. ಸಮಾಜ ಸೇವೆ ಮಾಡಬೇಕೆನ್ನುವ ಹುಚ್ಚಿನಿಂದ ಮದುವೆ ಬೇಡವೆಂದು ಹಟ ಮಾಡುತ್ತಾ ಕುಳಿತೆ. ಯಾರೂ ನನ್ನ ಮಾತು ವ ಸ್ಥಿತಿಯಲ್ಲಿರಲಿಲ್ಲ. ಆದರೂ ಹಲವಾರು ಗಂಡುಗಳು ಬಂದು ಹೋದವು. ನೋಡಲು ಬಂದರೆ ನಾನು ತಲೆ ಬಾಚದೆ ಕುಳ್ಳಿರುತ್ತಿದ್ದೆ. ಮನೆಯ ಹೊರಗೆ ಗುತ್ತಿರಲಿಲ್ಲ. ಇನ್ನೂ ಹೆಚ್ಚು ಬಲವಂತ ಮಾಡಿದಾಗ ಆತ್ಮಹತ್ಯೆಗೆ ಪ್ರಯತ್ನಿ ತ್ಯ ಆಸ್ಪತ್ರೆಗೆ ಸೇರಿದ್ದು, ಬದುಕಿ ಬಂದೆ. ಕೊನೆಗೆ ನನ್ನ ಸೋದರಮಾವ ಒಬ್ಬರು. ಸ್ಸಿನಲ್ಲಿ ನನಗಿಂತ ತುಂಬ ದೊಡ್ಡವರು. ಯಾವಾಗಲೂ ನಮ್ಮ ಮನೆಗೆ ತ್ತಿದ್ದರು. ಅವರಿಗೆ ಹೆಂಡತಿ ತೀರಿಹೋಗಿದ್ದು ಇಬ್ಬರು ಮಕ್ಕಳಿದ್ದರು. ಅವರು ್ನ ಚೆನ್ನಾಗಿ ಮಾತಾಡಿಸುತ್ತಾ, ನಾನು ಅವರನ್ನು ಮದುವೆಯಾದರೆ ನಾನು ಸಿದಂತೆ ಇರಬಹುದು, ಎಂಬ ಆಶ್ವಾಸನೆ ಕೊಟ್ಟರು. ನಮ್ಮ ಮನೆಯವರಿಗೆಲ್ಲಾ ುದುವೆಗೆ ಅಂತಹ ಸಮ್ಮತಿ ಇಲ್ಲದಿದ್ದರೂ ಸಾಮಾಜಿಕವಾಗಿ ಏನಾದರೂ ಸಾಧಿ ುದು, ಎನ್ನುವ ಆಸೆಯಿಂದ ಅವರನ್ನು ಮದುವೆಯಾಗಿ ಅಳ್ಳಾಲಸಂದ್ರಕ್ಕೆ ಬಂದೆ. ನಿಂದ ಇದೇ ನನ್ನ ಕಾರ್ಯಕ್ಷೇತ್ರವಾಗಿದೆ.

ಹೊ : ಮದುವೆಯಾಗಿ ಅಳ್ಳಾಲಸಂದ್ರಕ್ಕೆ ಬಂದ ಮೇಲೆ ಎಂತಹ ಚಟುವಟಿಕೆ ತೊಡಗಿಕೊಂಡಿರಿ ?

ಅ : ಮದುವೆಯಾಗಿ ನಾನು ಹೋದ ಮನೆ ಆರ್ಥಿಕ ಮುಗ್ಗಟ್ಟಿನಿಂದ ಕೂಡಿತ್ತು. ತ್ಯದ ಜೀವನ ನಿರ್ವಹಣೆಗೆ ದುಡಿಯಬೇಕಾದಂತಹ ಪರಿಸ್ಥಿತಿ. ಮುಂಚೆ ಂಗ್ ಕಲಿತಿದ್ದ ನಾನು ಅದನ್ನೇ ಜೀವನೋಪಾಯಕ್ಕೆ ಬಳಸಿಕೊಂಡೆ. ಆ ಹಳ್ಳಿಯ ಗೆ ನನ್ನ ಬಗ್ಗೆ ಏನೋ ಕುತೂಹಲ. ಉದ್ದ ಜಡೆ, ನಾಜೂಕಿನ ನನ್ನ ಬಟ್ಟೆಬರೆಗಳಿಂದ ಏನೋ ಫಿಲಂ ಸ್ಟಾರ್ ತರಹ ಅಂತ ನನ್ನ ಬಗ್ಗೆ ಮಾತಾಡ್ಕೋತಿದ್ದರಂತೆ. ೇ ನೆಪ ಹುಡುಕ್ಕೊಂಡು ನನ್ನನ್ನು ಮಾತಾಡಿಸೋಕ್ಕೆ ನಮ್ಮ ಮನೆಗೆ ಬರುತ್ತಿದ್ದರು. ನನಗೂ ಇದು ಒಂದು ರೀತಿಯಲ್ಲಿ ಅವರ ಸಂಪರ್ಕವನ್ನು ಪಡೆಯೋಕೆ ಅನುಕೂಲ ವಾಯಿತು. ಅವರಿಗೂ ಟೈಲರಿಂಗ್ ಕಲಿಸ್ತೀನಂತ ಹೇಳಿದೆ. ಆಮೇಲೆ ಎಲ್ಲರನ್ನೂ ಸೇರಿಸಿ ಮಹಿಳಾ ಸಮಾಜ ಮಾಡಿದೆವು. ಆ ಊರಿನಲ್ಲಿ ಬಹಳ ಸಮಸ್ಯೆಗಳು ಇದ್ದವು. ಊರಿನ ಪಟೇಲ್ ಕಾಡೇಗೌಡ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ. ಹಲವಾರು ರೈತರ ಜಮೀನು ಕಬಳಿಸಿದ್ದ. ಮೊದಲಿಗೆ ಒಂದು ವಯಸ್ಕ ಶಿಕ್ಷಣ ಶಾಲೆಯನ್ನು ಆರಂಭಿಸುವುದೆಂದು ನಿರ್ಧರಿಸಿ ೩೦ ಮಕ್ಕಳ ಪಟ್ಟಿ ತಯಾರಿಸಿದೆವು. ಮೊದಲು ಕೆಲವರು ಬಂದರಾದರೂ ಆಮೇಲೆ ಯಾರೂ ತಲೆ ಹಾಕಲಿಲ್ಲ. ನಾನು ಮತ್ತು ಗ್ರಾಮಸೇವಕಿ ಮನೆ ಮನೆಗೆ ಹೋಗಿ ಜನರನ್ನು ಕರೆತಂದೆವು. ಪಟೇಲ ಜನರನ್ನು ಬೆದರಿಸಿದ್ದ. ಈ ಸಂದರ್ಭದಲ್ಲಿ ಹಲವಾರು ಘಟನೆಗಳು ನಡೆದವು. ಊರಿನಲ್ಲಿ ನೀರಿನ ಸಮಸ್ಯೆ ಇತ್ತು. ಬಹಳ ಮುಖ್ಯವಾದದ್ದು ಟೆನೆಂಟ್ ಹೋರಾಟ. ಕೊಡಿಗೆ ಜಮೀನನ್ನು (ದೇವಸ್ಥಾನಕ್ಕೆ ಕೊಟ್ಟ ಭೂಮಿ) ವಶಪಡಿಸಿಕೊಂಡು ರೈತರಿಗೆ ಹಂಚಲಾಯಿತು. ಇದಕ್ಕೆ ಆಗ ಬಿ.ಡಿ.ಒ. ಆಗಿದ್ದ ಪೊನ್ನಪ್ಪ ತುಂಬ ಸಹಾಯ ಮಾಡಿದ್ದರು. ಮುಂದೆ ರೈತರನ್ನು ಜಾಗೃತಗೊಳಿಸಲು ಸಮಾಜವಾದಿ ಅಧ್ಯಯನ ಕೇಂದ್ರವನ್ನು ಆರಂಭಿಸಿದೆವು. ಜಮೀನಿಗಾಗಿ ಡಿಕ್ಲರೇಷನ್ ಹಾಕಿದ್ದ ರೈತರಿಗೆ ಪಟೇಲ ಕಿರುಕುಳ ಕೊಡಲು ಆರಂಭಿಸಿದ. ಊರಲ್ಲಿ ಕೆರೆ ನೀರನ್ನು ಯಾರೂ ಬಳಸುವಂತಿಲ್ಲ, ಎಂದು ಸಾರಿಸಿದ್ದ. ಇದರ ವಿರುದ್ಧ ಹೋರಾಟ ನಡೆದು ಇದನ್ನು ಪ್ರತಿಭಟಿಸಲು ಹೋದಾಗ ಎರಡು ಗುಂಪಿನವರ ನಡುವೆ ಘರ್ಷಣೆ ನಡೆದು ರೈತರಿಗೆ ಭಾರಿ ಏಟುಗಳು ಬಿದ್ದವು. ನನ್ನ ಗಂಡ ಸೋಮಣ್ಣನಿಗೂ ಭಾರಿ ಪೆಟ್ಟಾಗಿ ಚೆನ್ನಪಟ್ಟಣದ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಸುಮಾರು ಜನ ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆ ಖರ್ಚಿಗೆ ನಮ್ಮ ಬಳಿ ಹಣವೇ ಇರಲಿಲ್ಲ. ಆಗ ಮೈಸೂರಿನಿಂದ ಡಾ॥ ಲಕ್ಷ್ಮೀನಾರಾಯಣ ಮತ್ತು ಸ್ನೇಹಿತರು ನಾಟಕ ಮಾಡಿ ಹಣ ಸಂಗ್ರಹಿಸಿ ನಮಗೆ ಕಳುಹಿಸಿಕೊಟ್ಟರು. ಅನೇಕ ಕಡೆಗಳಿಂದ ಸಹಾಯ ದೊರಕಿತು.

ಹೊ : ರೈತರನ್ನು ಜಪ್ತಿ ಮಾಡಿದ್ದ ಬ್ಯಾಂಕುಗಳ ವಿರುದ್ಧ ನೀವು ಮಾಡಿದ್ದ ಹೋರಾಟದ ಬಗ್ಗೆ ಸ್ವಲ್ಪ ಹೇಳಿ.

ಅ : ಆಗ 'ಹಸಿರು ಕ್ರಾಂತಿ', 'ಹೈಬ್ರಿಡ್ ತಳಿಗಳು', 'ಹೆಚ್ಚು ಇಳುವರಿ'ಗಳ ಸ್ಲೋಗನ್ ಕಾಲ. ಈ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರಗಳು, [illegible] ಬಳಸಿ ಉತ್ಪಾದನೆ ಕೊಟ್ಟೆವು. ಆದರೆ ಸಾಲ ಹೊತ್ತುಕೊಂಡೆವು. [illegible] ಗೊತ್ತಿಲ್ಲದೆ, ಸೀಮೆ ಹಸು ಬೆಳೆಸಲು ಗೊತ್ತಿಲ್ಲದೆ [illegible] ಹೆಚ್ಚು ೫೦೦೦ ರೂಪಾಯಿ ಸಾಲ ತೆಗೆದುಕೊಂಡವರು ಸಾಲ ತೀರಿಸಲಾಗದೆ ೧೫ ವರ್ಷಕ್ಕೆ ೧೫೦೦೦ ರೂಪಾಯಿ ಸಾಲ ಹೊತ್ತುಕೊಂಡೆವು. ಸುಸ್ತಿ ಬಡ್ಡಿ ಹೆಚ್ಚಿ ಮನೆ ಜಪ್ತಿಗಳು ನಡೆದವು. ಸಾಲ ದುರುಪಯೋಗ ಮಾಡಿಕೊಂಡವರು ಐದಾರು ಮಂದಿ ಇರಬಹುದು ಆದರೆ ಬಾಕಿ ಎಲ್ಲಾ ಮೈಬಗ್ಗಿಸಿ ದುಡಿಯುವ ಕೆಲಸಗಾರರೇ. ಈ ಮನೆ ಜಪ್ತಿ ಅತ್ಯಂತ

ಕರಾಳ ದೌರ್ಜನ್ಯ. ಮನೆಯಲ್ಲಿ ಗಂಡಸರಿಲ್ಲದ ಸಮಯದಲ್ಲಿ ಬ್ಯಾಂಕಿನವರು ಬಂದು ಬಡವರ ಮನೆಗಳಲ್ಲಿ ಸಿಗಬಹುದಾದ ಪಾತ್ರೆ, ಪರಡಿ, ದವಸ-ಧಾನ್ಯ, ದನ-ಕರು, ಕೊನೆಗೆ ಮಗುವಿನ ತೊಟ್ಟಿಲು – ಎಲ್ಲಾ ಸೇರಿಸಿ ಹೊತ್ತುಕೊಂಡು ಹೋಗುತ್ತಿದ್ದರು. ಇವರಿಗೆ ಪಟೇಲನ ಕುಮ್ಮಕ್ಕು ಬೇರೆ. ನಮ್ಮ ಮನೆಯಲ್ಲಿ ಬಾವಿ ಸಾಲ ಎಂದು ೬೦೦೦ ರೂಪಾಯಿ ಸಾಲ ತೆಗೆದುಕೊಂಡು ತೀರಿಸಿರಲಿಲ್ಲ. ನಮ್ಮ ಮನೆಗೆ ಪಟೇಲರ ಜೊತೆಗೆ ಬ್ಯಾಂಕಿನವರು ಜಫ್ತಿಗೆ ಬಂದರು. ಮನೆಯಲ್ಲಿ ಒಬ್ಬಳೇ ಇದ್ದೆ. ಅವರನ್ನು ನೋಡಿ ಭುಗಿಲ್ ಎಂದು ಕೋಪ ಬಂತು. ''ಇಲ್ಲಿ ಇರುವ ಸಾಮಾನೆಲ್ಲಾ ನಂದು. ನಾನು ಸಾಲಗಾರಳಲ್ಲ. ಏನಾದರೂ ಮುಟ್ಟಿದರೆ ಜೋಕೆ! ಯಾರಿಗೆ ಸಾಲ ಕೊಟ್ಟಿದ್ದೀರೋ ಅವರನ್ನೇ ಕೇಳಿ'' ಎಂದು ಜಫ್ತಿಗೆ ಬಂದಿದ್ದವರನ್ನು ಬೆದರಿಸಿ ಹೊರಕ್ಕೆ ಕಳುಹಿಸಿದೆ.

ಹೊ : ಈ ಹೋರಾಟವನ್ನು ನೀವು ಮಾಡುವಾಗ ರೈತ ಸಂಘದ ಮೂಲಕ ಮಾಡಿದಿರಾ ?

ಅ : ಮೊದಲಿಗೆ ರೈತ ಸಂಘ ಇರಲಿಲ್ಲ. ಅದಿಲ್ಲದೆಯೇ ನಾವು ಹಳ್ಳಿಯ ರೈತರು ಹೋರಾಟ ಮಾಡುತ್ತಿದ್ದೆವು. ಆಗ ಒಮ್ಮೆ ಕಡಿದಾಳು ಶಾಮಣ್ಣನವರ ಪರಿಚಯ ವಾಯಿತು. ಅವರು ನಮಗೆ ರೈತ ಸಂಘ ಮಾಡಿಕೊಳ್ಳಿ, ಎಂದು ಹೇಳಿದರು. ನಮ್ಮ ಹಳ್ಳಿಯಿಂದ ನಾವು ಶಿವಮೊಗ್ಗೆಗೆ ರೈತ ಸಮ್ಮೇಳನಕ್ಕೆ ಹೋಗಿಬಂದೆವು. ರೈತ ಸಂಘಟನೆಗೆ ಸಂಬಂಧಿಸಿದಂತೆ ಅಲ್ಲಿ ಹಲವಾರು ವಿಚಾರಗಳನ್ನು ತಿಳಿದುಕೊಂಡು ಬಂದೆವು. ನಂತರ ಜೂನಿಯರ್ ವಕೀಲರಾಗಿದ್ದ ರವಿವರ್ಮ ಕುಮಾರ್ ಮತ್ತು ಎಸ್. ಆರ್. ನಾಯಕ್ ರವರು ನಮ್ಮಲ್ಲಿ ಕ್ಷೇತ್ರಕಾರ್ಯ ಮಾಡಲು ಬಂದಿದ್ದರು. ಆಮೇಲೆ ಸಂಘಟನೆ ಆರಂಭ ವಾಯಿತು. ಬೋರ್ಡ್ ಹಾಕಿಸಿದೆವು. ಆ ದಿನ ನಂಜುಂಡಸ್ವಾಮಿ, ರುದ್ರಪ್ಪ– ಎಲ್ಲರೂ ಇದ್ದರು. ಅವರು ಭಾಷಣಗಳನ್ನು ಮಾಡಿದರು. ''ನಾವು ಸಾಲಗಾರರಲ್ಲ; ಸರ್ಕಾರವೇ ನಮಗೆ ಕೊಡಬೇಕಾದ ಸಾಲ ಬಾಕಿ ಇದೆ. ಆಹಾರ ಸ್ವಾವಲಂಬನೆ ಕೊಟ್ಟಿರುವವರು ನಾವು, ಮನೆ ಮಂದಿಯೆಲ್ಲಾ ದುಡಿದಿದ್ದೇವೆ'' ಮುಂತಾದ ಮಾತುಗಳು ಭಾಷಣದಲ್ಲಿ ಮುಖ್ಯವಾಗಿದ್ದವು. ೧೯೮೦ರಲ್ಲಿ ನಾನು, ಪಾರ್ವತಮ್ಮ, ಸೋಮಣ್ಣ, ಪುಟ್ಟಸ್ವಾಮಿ



ಎಲ್ಲರೂ ಸಕ್ರಿಯವಾಗಿ ಕೆಲಸ ಮಾಡಿದೆವು. ಜಫ್ತಿ ಮಾಡಲು ಬಂದ ಬ್ಯಾಂಕಿನವರಿ ಪ್ರಶ್ನೆ ಹಾಕುತ್ತಿದ್ದೆವು. ನೀವು ಅನುಮತಿಯಿಲ್ಲದೆ ಬರಕೂಡದು. ಬೆಳಗ್ಗೆ ೬ಕ್ಕೆ ಮುಂ ಮತ್ತು ಸಂಜೆ ೬ ಗಂಟೆಯ ನಂತರ ಮಾತ್ರ ಪ್ರವೇಶ, ಪರವಾನಗಿ ಇಲ್ಲದ ಪ್ರವೇಶ ಇತ್ಯಾದಿ ಸ್ಲೋಗನ್‌ಗಳು ಆಗಿದ್ದವು. ನಮ್ಮ ಪ್ರಶ್ನೆಗಳಿಗೆ ಅವರು 'ಸರ್ಕಾರವನ್ನು ಕೇ ಎಂದು ಉತ್ತರಿಸುತ್ತಿದ್ದರು. ಒಮ್ಮೆ ಅವರಿಂದ ಕ್ಷಮಾಪಣೆ ಪತ್ರ ಬರೆಸಿಕೊಂ ಕಳಿಸಿದೆವು. ಕೂಡಲೆ, ಅವರು ಪೊಲೀಸರಿಗೆ ನಮ್ಮ ವಿರುದ್ಧ ದೂರು ಕೊಟ್ಟ ವಿಚಾರಿಸಲು ಎಸ್.ಐ. ಬಂದ. ಅವನನ್ನು ತರಾಟೆಗೆ ತೆಗೆದುಕೊಂಡೆವು. ಅವನು ಮ ನಮ್ಮ ವಿರುದ್ಧ ದೂರು ಕೊಟ್ಟ: ನಮ್ಮಿಂದ ಕಟ್ಟಿಹಾಕುವ ಭೀತಿ, ಸಗಣಿ ಎರಚುವ ಮತ್ತು ಪ್ರಾಣಭೀತಿಯಿದೆಯೆಂದು ಹೇಳಿದ. ಕೋರ್ಟಿಗೆ ಅಲೆದಾಡಿದೆವು. ಕೊನೆಗೆ ಜ ಅವರಿಗೆ ಛೀಮಾರಿ ಹಾಕಿ ನಮ್ಮನ್ನು ಬಿಟ್ಟುಬಿಟ್ಟರು. ೧೯೮೩ರಲ್ಲಿ 'ಸ್ಥಳೀಯರ ಸಂಪನ್ಮೂ ಸ್ಥಳೀಯರಿಗೆ ಇರಬೇಕು' ಎನ್ನುವ ಘೋಷಣೆಯೊಂದಿಗೆ 'ಕಲ್ಲು ಹೋರಾ ಆರಂಭಿಸಿದೆವು. ಅಂದರೆ ಗ್ರಾನೈಟ್ ಲೂಟಿ ವಿರುದ್ಧ. ಆಗ ರೈತಸಂಘಕ್ಕೆ ಪರಿಹಾ ಸಿಕ್ಕಿತು. ಒಮ್ಮೆ ಗುಬ್ಬಿ ಬಳಿ ಚಿಕ್ಕೋನಹಳ್ಳಿಯಲ್ಲಿ ರೈತ ಸಭೆಗೆಂದು ಹೋದಾಗ ಲಾಠಿ ಏ ಗಳನ್ನು ಎಲ್ಲರೂ ಚೆನ್ನಾಗಿ ತಿಂದಿದ್ದೆವು. ರೈತರು ಸಂಘ ಸ್ಥಾಪನೆ ಮಾಡಕೂಡದೆಂ ಪೊಲೀಸರು ಆರ್ಭಟಿಸಿದರು. ಸಿವಿಲ್ ಡ್ರೆಸ್‌ನಲ್ಲಿದ್ದ ಪೊಲೀಸರು ಚೆನ್ನಾಗಿ ಲಾಠಿ ಬೀ ಸಿಕ್ಕವರನ್ನೆಲ್ಲಾ ಹುಚ್ಚಾಪಟ್ಟೆ ಬಡಿದರು. ಆಗ ಚೆನ್ನಾಗಿ ಏಟು ತಿಂದ ನಾ ಬೆಂಗಳೂರಿನಲ್ಲಿ ಆಸ್ಪತ್ರೆ ಸೇರಿದ್ದೆ. ಆಗ ಆಸ್ಪತ್ರೆಯಲ್ಲೇ ಪೊಲೀಸರನ್ನು ಚೆನ್ನಾಗಿ ಬಯ ಆಗ ಡಾ|| ಸುರೇಂದ್ರರವರು (ಕುವೆಂಪುರವರ ಅಳಿಯ) ನಮಗೆ ಚಿಕಿತ್ಸೆ ಮಾಡಿದ್ದು

ಹೊ : ರೈತ ಸಮಸ್ಯೆಗಳೇ ಅಲ್ಲದೆ, ಮತ್ತೆ ನಿಮ್ಮ ಸಂಘಟನೆಯ ಬೇರೆ ಆಸಕ್ತಿ ಏನಾಗಿದ್ದವು ?

ಅ : ನಾವು ಹಳ್ಳಿಯಲ್ಲಿ ಒಂದು ಶಿಶುವಿಹಾರ ಆರಂಭಿಸಿದೆವು. ನಾವು ನೂರಾ ಜೋಡಿಗಳಿಗೆ ಸರಳ ವಿವಾಹ ಮಾಡಿಸಿದ್ದೇವೆ. ಮಹಿಳೆಯರ ಮೇಲೆ ದೌರ್ಜ ನಡೆದ ಹಲವಾರು ಪ್ರಸಂಗಗಳಲ್ಲಿ ಎರಡೂ ಕಡೆಯವರನ್ನು ಕೂಡಿಸಿ ರಾಜಿ ಪಂ ಮಾಡಿಸಿದ್ದೇವೆ. ಇಲ್ಲವೆ ನೊಂದವರಿಗೆ ಸಾಂತ್ವನ ಹೇಳಿ, ಪರಿಹಾರ ದೊರಕಿಸ ಪ್ರಯತ್ನ ನಡೆಸಿದ್ದೀವಿ. ಕೆಲವೊಮ್ಮೆ ಅತ್ಯಾಚಾರಕ್ಕೊಳಗಾಗಿ ತೊಂದರೆಗೊಳಗಾದವರ ಮನೆಯಲ್ಲಿ ತಂದಿಟ್ಟುಕೊಂಡದ್ದು ಇದೆ. ಏತಲೇನ ಹಳ್ಳಿಯಲ್ಲಿ ಮತ್ತು ಕೂಡ್ಲೂರಿನ ಹುಡುಗಿಯರ ಮೇಲೆ ಅತ್ಯಾಚಾರವಾದಾಗ ಅವರ ನೆರವಿಗೆ ಧಾವಿಸಿ ಪರಿಹಾ ಕೊಡಿಸಿದ್ದೇವೆ. ಈ ಮಧ್ಯೆ ವೃತ್ತಿಶಿಕ್ಷಣ ನೀಡುವ ಆರ್. ಎಂ. ಲೋಹಿಯ ಸಮತಾ ವಿದ್ಯಾಲಯವನ್ನು ಅಳ್ಳಾಲಸಂದ್ರದಲ್ಲಿ ಆರಂಭಿಸಿದೆವು. ಸುಮಾರು ಎಕರೆಯಷ್ಟು ವಿಸ್ತಾರವಾದ ಭೂಮಿಯಲ್ಲಿ ಆರಂಭವಾದ ಈ ಕೇಂದ್ರಕ್ಕೆ ಪಟ್ನಾಯಕ್ ದೇವನೂರು ಮಹಾದೇವ, ನಾನು, ರವಿವರ್ಮಕುಮಾರ್ ಎಲ್ಲರೂ ಟ್ರಸ್ಟಿಗಳಾಗಿದ್ದೇ

ಹೊ : ನೀವು ರೈತ ಚಳುವಳಿಯಲ್ಲಿ ಮಹಿಳೆಯರನ್ನು ಘಟಿಸಲು ಏನಾದರೂ ವಿಶೇಷ ಪರಿಶ್ರಮ ಸಿದ್ದು ಉಂಟಾ ?

ಅ: ಹೌದು ಇದೆ. ರೈತ ಸಮಾವೇಶಗಳಲ್ಲಿ ಬೆಳೆ , ಭೂಮಿಯ ಸಮಸ್ಯೆಗಳು, ಸಾಲ ಮನ್ನಾ, ತಹ ವಿಷಯಗಳ ಚರ್ಚೆಯೇ ನಡೆಯುತ್ತಿರುತ್ತದೆ. ರೆ ಮಹಿಳೆಯರಿಗೆ ವಿಶಿಷ್ಟವಾದ ಸಮಸ್ಯೆಗಳತ್ತ ಷ ಬೆಳಕು ಬೀರಲು ಸಾಧ್ಯವಾಗುತ್ತಿರಲಿಲ್ಲ. ಳೆಯರದೇ ಸಂಘಟನೆಯಾದರೆ, ಅವರು ತಮ್ಮ ಸ್ಯೆಗಳನ್ನು ನಿರಾಳವಾಗಿ ಚರ್ಚಿಸಿಕೊಳ್ಳಬಹುದು, ದು ತೀರ್ಮಾನಿಸಿ ರೈತ ಸಂಘದ ಅಡಿಯಲ್ಲಿ ಮಹಿಳಾ ವೇಶದ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳುವ ರ್ಧಾರ ತೆಗೆದುಕೊಂಡು ಹಳ್ಳಿ ಹಳ್ಳಿಗೆ ಹೋಗಿ ಳೆಯರನ್ನು ಸಂಘಟಿಸಿದೆವು. ಹಳಿಯಾಳದಲ್ಲಿ ಮಾರು ೬೦,೦೦೦ ಜನರು ಸೇರಿದ್ದಂತಹ ಳಾ ಸಮ್ಮೇಳನವನ್ನು ಹಮ್ಮಿಕೊಂಡೆವು. ಸಮ್ಮೇಳನ ಆದದ್ದೇನು ಗೊತ್ತೆ? ವೇದಿಕೆಯ ಮೇಲೂ ಎಲ್ಲ ಷರೇ. ಮಹಿಳೆಯರು ಏನು ಚರ್ಚಿಸಬೇಕು ? ಗೆ ಸಮಾವೇಶ ನಡೆಸಬೇಕು? ಅದನ್ನೂ ರೈತ ಯಕರೇ ನಿರ್ಧರಿಸಿದರು. ಅದರಲ್ಲೂ ವಿಶೇಷವಾಗಿ ಹಿರಿಯ ನಾಯಕರಾದ ಪ್ರೊಫೆಸರ್ ನಂಜುಂಡ ಮಿಯವರು, ''ನಾನು ಹೇಳಿದಂತೆ ಕಾರ್ಯಕ್ರಮ ಡಿ'' ಎಂದು ಆದೇಶಿಸಿದರು. ಈ ಸಮ್ಮೇಳನ ದ ಶೈಲಿಯೇ ಆ ನಂತರ ವಿಶೇಷವಾಗಿ ಚರ್ಚೆಗೆ ಗಾಯಿತು. ಕಡಿದಾಳ ಶಾಮಣ್ಣನವರು ಈ ಸಮ್ಮೇಳನ ದ ವೈಖರಿಯನ್ನು ಕುರಿತು ಲಂಕೇಶ್ ಪತ್ರಿಕೆಯಲ್ಲಿ ದರು. ೧೯೮೮ರಲ್ಲಿ ರಾಮಕೃಷ್ಣ ಹೆಗ್ಗಡೆಯವರ ದಲ್ಲಿ ಜೈಲು ಭರೋ ಚಳುವಳಿಯಾಯಿತು. ರ ರೈತ ಸಂಘದಿಂದ 'ಕನ್ನಡ ದೇಶ ಪಕ್ಷ' ಹುಟ್ಟು ಹಾಕಬೇಕೆಂದು ಸೂಚಿಸಿದಾಗ ಅದನ್ನು ನಾವು ಕೆಲವರು ಪ್ರಬಲವಾಗಿ ವಿರೋಧಿಸಿದ್ದೆವು. ೧೯೮೭ರಲ್ಲಿ ''ಮೂರನೆಯ ಶಕ್ತಿ'' ಬಗ್ಗೆ ಚರ್ಚಿಸೋಣವೆಂದು ಬರೆದಿದ್ದಕ್ಕೆ ನಮ್ಮನ್ನು, ಅಂದರೆ ಸುಮಾರು ೧೦೦೦ ಮಂದಿಯನ್ನು, ರೈತ ಸಂಘದಿಂದ ಉಚ್ಚಾಟನೆ ಮಾಡಿದರು. ಈ ಎಲ್ಲಾ ಬೆಳವಣಿಗೆಗಳಿಂದ ರೈತ ಸಂಘದಲ್ಲಿ ವಿಭಜನೆಯಾಯಿತು.

ಹೊ: ನಿಮಗೆ ಪಕ್ಷ ರಾಜಕಾರಣದಲ್ಲಿ ಆಸಕ್ತಿ ಇರಲಿಲ್ಲವೆ ?

ಅ: ನನಗೆ ರೈತ ಸಂಘ ರಾಜಕೀಯ ಪಕ್ಷವಾಗುವುದು ಸರಿಯೆನಿಸಲಿಲ್ಲ. ಹಾಗೆ ನೋಡಿದರೆ ನಾನು ಯಾವ ರಾಜಕೀಯ ಪಕ್ಷದ ಹಿಂದೆಯೂ ಹೋಗಿಲ್ಲ. ನನ್ನ ಮನೆಯಲ್ಲಿಯೇ ಈಗ ನನ್ನ ಮಗ ಬಿಎಸ್‌ಪಿ ಸೇರಿದ್ದಾನೆ. ಅದು ಅವನ ಇಷ್ಟ. ನನಗೆ ಬಿಜೆಪಿಯಾಗಲೀ, ಬಿಎಸ್‌ಪಿಯಾಗಲೀ ಯಾವುದೂ ಸಮ್ಮತವಲ್ಲ. ಒಂದು ಗಾಂಧಿಯನ್ನು ಕೊಂದರೆ, ಮತ್ತೊಂದು ಗಾಂಧಿಯನ್ನು ಬಯ್ಯುವ ಪಕ್ಷ. 'ಹಳ್ಳಿ ಬೆಳೆದರೆ, ದಿಲ್ಲಿ ಬೆಳೆಯುತ್ತೆ' ಎಂದು ಹೇಳಿದ ಗಾಂಧಿಯ ಮಾತಿನಲ್ಲಿ ಅಚಲವಾಗಿ ನಂಬಿಕೆ ಉಳ್ಳವಳು ನಾನು. ಆ ನಂಬಿಕೆಯಿಂದಲೇ ಈಗಲೂ ನನಗೆ ಸಂಘಟನೆಯಲ್ಲಿ ತೊಡಗಿಕೊಂಡಿರಲು ಸಾಧ್ಯವಾಗಿದೆ.

ಹೊ : ನೀವು ಮತ್ತೆ ರೈತಸಂಘಕ್ಕೆ ಬಂದದ್ದು ಹೇಗೆ ?

ಅ: ನಾನು ರೈತ ಸಂಘದ ವಿಭಜನೆಯ ಮುಂಚೆಯೂ ಅದರ ಉಪಾಧ್ಯಕ್ಷೆಯಾಗಿದ್ದೆ. ಹಾಗೆ ಈಗ ಒಂದುಗೂಡಿದ ರೈತ ಸಂಘಕ್ಕೂ ಉಪಾಧ್ಯಕ್ಷೆಯಾಗಿಯೇ ಕೆಲಸ ಮಾಡುತ್ತಿರುವೆ. ಈಗ ಪುಟ್ಟಣ್ಣಯ್ಯ ಅಧ್ಯಕ್ಷರಾಗಿದ್ದಾರೆ. ಪ್ರೊ|| ನಂಜುಂಡಸ್ವಾಮಿಯವರ ನಿಧನದ ನಂತರ ಒಡೆದುಹೋಗಿದ್ದ ರೈತ ಸಂಘ ಮತ್ತೆ ಒಂದಾಯಿತು. ಆದರೆ ಈಗಿನ ಸಂಘದ ಸ್ಥಿತಿಯ ಬಗ್ಗೆ ವಿಷಾದವೆನಿಸುತ್ತದೆ.



ಹೊ : ಈ ವಿಷಾದದ ಸ್ಥಿತಿಗೆ ಮುಖ್ಯ ಕಾರಣ ? ಈ ಕಗ್ಗಂಟನಾಚೆ ಬೆಳಕು ಕಾಣಿಸುವುದಿಲ್ಲವೇ ?

ಅ : ಈಗಿನ ಸಂಘದ ಸ್ಥಿತಿ ಹೇಗಿದೆಯೆಂದರೆ, ಹೊಟ್ಟೆಯಲ್ಲಿರುವ ಮಗುವನ್ನು ಯಾರೋ ಕತ್ತು ಹಿಚುಕಿ ಸಾಯಿಸಿದಂತಹ ಭಾವವುಂಟಾಗುತ್ತದೆ. ನಾವು ಕಟ್ಟಿ ಬೆಳೆಸಿದ ಸಂಸ್ಥೆ ಯಾವ ಸೂತ್ರವೂ ಇಲ್ಲದೆ, ನೀತಿ ನಿಯಮಾವಳಿಗಳಿಲ್ಲದೆ ಸಾಗುತ್ತಿದೆ. ಬಹುಪಾಲು ನಾಯಕರು ತಮ್ಮ ಹಿತ ಕಾಯ್ದುಕೊಳ್ಳುವವರಾಗಿದ್ದಾರೆಯೇ ಹೊರತು ರೈತರ ಬಗೆಗೆ ಕಾಳಜಿಯಿಲ್ಲ. ಇವತ್ತು ರೈತ ಸಂಘ ಆರಂಭದಲ್ಲಿದ್ದಂತೆ ಕ್ರಿಯಾಶೀಲವಾಗಿದ್ದಿದ್ದರೆ, ಇಷ್ಟೊಂದು ರೈತರ ಆತ್ಮಹತ್ಯೆಗಳು ಆಗುತ್ತಿರಲಿಲ್ಲ. ಇವತ್ತೂ ಪ್ರಾಮಾಣಿಕ ಕಾರ್ಯಕರ್ತರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡುವ ನಾಯಕರ ಕೊರತೆಯಿದೆ. ಇವತ್ತು ಹಿಂದೆಂದಿಗಿಂತ ಹೆಚ್ಚು ರೈತರ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿವೆ. ಸಂಘಟನೆಗೆ ಅವಕಾಶ ಇದೆ. ವಿಶೇಷ ಆರ್ಥಿಕ ವಲಯ, ವಿದೇಶಿ ಬಂಡವಾಳ ಹೂಡಿಕೆ, ವಿದ್ಯುಚ್ಛಕ್ತಿ ಹಾಗೂ ನೀರಾವರಿಗಳ ಖಾಸಗೀಕರಣ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ ರೈತರಿಗೆ ಬೆಂಗಾವಲಾಗಿ ನಿಲ್ಲಬೇಕಾದ್ದು ರೈತಸಂಘದ ಮೊದಲ ಕರ್ತವ್ಯವಾಗಬೇಕು. ಈ ಕೆಲಸವನ್ನು ಈಗಿನ ನೇತಾರರು ಮಾಡ್ತಾರೆಯೇ ಎಂಬುದರ ಬಗ್ಗೆ ನನಗೆ ಅನುಮಾನವಿದೆ. ಆದರೂ ಇಂದು ಯುವಜನರು ಹೆಚ್ಚು ಹೆಚ್ಚಾಗಿ ಈ ಸಂಘಟನೆಗೆ ಬಂದು ಹೊಸ ಪರಿಸರವನ್ನು ಉಂಟುಮಾಡಬೇಕು.

ಹೊ: ನಿಮ್ಮ ಜೀವನದ ಪ್ರಮುಖ ಘಟ್ಟಗಳನ್ನು ನಮ್ಮೊಡನೆ ಹಂಚಿಕೊಂಡು ರೈತ ಚಳುವಳಿಯ ಕೆಲವು ಒಳನೋಟಗಳ ಪರಿಚಯ ಮಾಡಿಕೊಟ್ಟದ್ದಕ್ಕೆ ತುಂಬ ವಂದನೆಗಳು, ನಮಸ್ಕಾರ.

ಅ: ಈಗ ನಾನು ಹೇಳಿದ್ದಕ್ಕಿಂತ ಹೇಳದಿರುವುದು ಬಹಳಷ್ಟಿದೆ. ಮತ್ತೊಮ್ಮೆ ಭೇಟಿಯಾಗೋಣ. ನಮಸ್ಕಾರ.

ಎರಡು ಗಂಟೆಗೂ ಮಿಕ್ಕಿ ತಮ್ಮ ಅನುಭವವನ್ನು ನಮ್ಮೊಡನೆ ಹಂಚಿಕೊಂಡ ಅನಸೂಯಮ್ಮನವರಿಗೆ ದಣಿವೇ ಕಾಣಲಿಲ್ಲ. ಅವರ ಅನುಭವಗಳ ಮೂಟೆಯೂ ಬಹಳ ದೊಡ್ಡದೇ ಇತ್ತು. ಆದರೆ ನಮ್ಮ ಸಂದರ್ಶನಕ್ಕೆ ಮಿತಿಯಿತ್ತು. ಮತ್ತೊಮ್ಮೆ ಅವರ ಅನುಭವ ಕಥನ ಕೇಳಬೇಕೆಂಬ ನಮ್ಮ ಆಸೆಯನ್ನು ಅವರಲ್ಲಿ ವ್ಯಕ್ತಪಡಿಸಿ ಸಂದರ್ಶನಕ್ಕೆ ಮುಕ್ತಾಯ ಹಾಡಿದೆವು. ಈ ಅವಧಿಯಲ್ಲಿ ಅನಾವರಣಗೊಂಡ ಅನಸೂಯಮ್ಮ ಕೇವಲ ರೈತ ನಾಯಕಿಯಾಗಿ ನಮ್ಮ ಮುಂದೆ ಕಾಣಲಿಲ್ಲ. ಐದು ಮಕ್ಕಳ ಮಮತಾಮಯಿ ತಾಯಿಯಾಗಿ, ಆತ್ಮವಿಶ್ವಾಸದ ಸಮರ್ಥ ಸಾಮಾಜಿಕ ಕಾರ್ಯಕರ್ತೆಯಾಗಿ, ಅಪಾರ ಸಾಮಾಜಿಕ ಕಳಕಳಿಯ ಅನನ್ಯ ವ್ಯಕ್ತಿತ್ವವಾಗಿ ನಮಗೆ ಬಹಳ ಆಪ್ತರಾದರು



ಡಾ|| ಎಚ್. ನಾಗವೇಣಿ

ಖ್ಯಾತ ವಿಮರ್ಶಕರು

ಹೊರಗಡೆ ಮಳೆಯ ವರಾತ ಶುರುವಾಗಿ ಎರಡು ದಿನಗಳಾಗಿವೆ. ಸುರಿ... .. ಸುರಿ! ವರುಣದೇವನ ಮಡದಿ ಗೊಟಕ್ಕೆಂದಳೋ ಏನೋ ಎಂಬಂತೆ ...ಸ್ಟ ಶುರುವಾಗಿರುವ ಆ ಆಕಾಶರಾಯನ ಜೀರಿಗಟ್ಟಿದ ಅಳು ಇನ್ನೂ ...ದುವರಿದೇ ಇತ್ತು.

ಅತ್ತ ಹೊರಗೆ ಬಾನ ಸೀಳಿದಂತೆ ಮಳೆ ಸುರಿಯುತ್ತಿದ್ದರೆ... ಇತ್ತ ತಮ್ಮ ತೆಂಕು ...ದ ಜಗುಲಿಯಲ್ಲಿ ಪೂರ್ವಾಭಿಮುಖವಾಗಿದ್ದ ಆರಾಮಕುರ್ಚಿಯಲ್ಲಿ ಕೂತು, ...ಯ ಹೀರುತ್ತಿದ್ದ ಖ್ಯಾತ ವಿಮರ್ಶಕರ ತಲೆಯಂತೂ ಯೋಚಿಸಿ... ಯೋಚಿಸಿ ...ಗಿ, ಇನ್ನೇನು ತೊಟ್ಟಿನ ಕಳಚಿ ಉರುಳಲಿರುವ ತುಳುವ ಹಲಸಿನ ಹಣ್ಣಿನಂತೆ ...ವಾಗಿ ಹೋಗಿತ್ತು.

ಹೀಗೆ... ಮಳೆ ಸುರಿಯುವ ಬೇರೆ ದಿನಗಳಲ್ಲಾದರೆ ಈ ವಿಮರ್ಶಕರು, ...ಯ ಈ 'ಆಲಾಪ'ವನ್ನು, ತಮ್ಮ ಸುರಿದು ಹೋಗಿರುವ ಯೌವ್ವನದ ...ಳಲ್ಲಿ, ಹೆಂಡತಿಯ ಕಣ್ಣಿಗೆ ಮಣ್ಣೆರಚಿ ತನ್ನಿಷ್ಟದ ಹೆಣ್ಣುಜೀವಗಳಿಗೆ ಹರಿಸುತ್ತಿದ್ದ ...ಮಧಾರೆಯ ಆಲಾಪ'ವನ್ನು ಹೋಲಿಸಿದರೂ ಹೋಲಿಸಿಕೊಳ್ಳುತ್ತಿದ್ದರೇನೋ ?! ...ಆದರೆ ಇಂದು ಅಂತದ್ದ್ಯಾವುದೂ ಭಾವಸಂಚಾರವಿಲ್ಲದೆ ಜೀವಂತ ಹೆಣದಂತೆ ...ದ್ದ ಖ್ಯಾತ ವಿಮರ್ಶಕರು ಮರುಬೇಯಿಸಿದ ಗೆಣಸಿನಂತೆ ಪೂರ್ತಿ ಮೆತ್ತಗಾಗಿದ್ದರು. ಹನಿ ಕಡಿಯದೆ ಸುರಿಯುತ್ತಿರುವ ಮಳೆ ಅವರ ಗಮನವನ್ನು ಸೆಳೆಯುವುದರಲ್ಲಿ ಇಂದು ಸಂಪೂರ್ಣ ವಿಫಲವಾಗಿದೆ. ಪ್ರಕೃತಿಯ ಈ ರುದ್ರ 'ಆಲಾಪ'ವನ್ನು ಧ್ಯಾನಿಸುತ್ತ... ಧ್ಯಾನಿಸುತ್ತ ಅಂತರ್ಮುಖತೆಯ ಶಿಖರವನ್ನೇರಿ ಅಲ್ಲಿರುವ ಏಕಾಕಿಯ ಗುಹೆಯೊಂದನ್ನು ಸುಗ್ಗಿ ಕೂತಿದ್ದೇನೆ ಎಂಬಂತಹ ಭಾವ ಹೊತ್ತು ಅವರೀಗ ಕಷಾಯ ಸೇವಿಸುತ್ತಿದ್ದಾರೆ.

ಹೌದು, ಕನ್ನಡದ ಖ್ಯಾತ ವಿಮರ್ಶಕರು ಇಂದು ಮಾತ್ರ ಎಂದಿನಂತಿಲ್ಲ. ಅವರು ಕೂತಿದ್ದ ಆರಾಮಕುರ್ಚಿಯತ್ತ ಬೀಸುತ್ತಿದ್ದ ಮಳೆಯ ಚೀರನಿಗಳು ಹೆಂಡತಿಯ ಕೈಗಳೆರಡ ನಡುವೆ ಹಾರಿ ಬರುವ ಎಂಜಲಿನ ಚೀರನಿಗಳಂತೆ ಭಾಸವಾಗಿ... ಅವರು ಒಂಥರಾ ಜಿಗುಪ್ಸೆಯಿಂದ ಮುಖ ಮುದುಡಿಸಿಕೊಂಡು ಆರಾಮಕುರ್ಚಿಯನ್ನು ಮತ್ತಷ್ಟು ಹಿಂದಕ್ಕೆ ಜರುಗಿಸಿಕೊಂಡು ಕೂತರು.

ಖ್ಯಾತ ವಿಮರ್ಶಕರ ಈ ಪರಿಯ ಅಂತರ್ಮುಖತೆ ಖಿನ್ನತೆ ಬೇಸರಿಕೆಗೆ ಕಾರಣ ಕೂತಿರುವ ಮಣೆಯೇ ಕುಂಡೆ ಕಚ್ಚುತ್ತಿದೆ – ಎಂಬ ಸ್ಥಿತಿ ಅವರ ಮನೆಯೊಳಗೇ ನಿರ್ಮಾಣವಾದುದು! ಅದೂ ಅವರ ಮಡದಿಯಿಂದ. ಹಾಗೆ ನೋಡಿದರೆ ಖ್ಯಾತ ವಿಮರ್ಶಕರು ಸದಾ ಹೆಂಡತಿ ಸೆರಗಿನಡಿ ಮುಖ ಮರೆಸಿಕೊಳ್ಳುವವರು ಎಂಬ ಆರೋಪ ಅವರ ಮೇಲೆ ಎಂದಿನಿಂದಲೇ ಇದೆ. 'ಅಲ್ಲ ಮತ್ತೆ... ನನ್ನ ಹೆಂಡ್ತಿ ಸೆರಗಲ್ಲಿ ಮುಖ ಮರೆಸಿಮರೆಸಿಕೊಳ್ಳದೆ ಪಕ್ಕದ ಮನೆಯವನ ಹೆಂಡ್ತಿ ಸೆರಗಲ್ಲಿ ಮುಖ ಮುಚ್ಚಿಕೊಳ್ಳಲಾಗುತ್ತ ಮಾರಾಯ್ರೆ... ಸ್ವಂತ ಹೆಂಡ್ತಿ ಅಂತ ಒಂದು ಮುಷ್ಟಿ ಜಾಸ್ತಿ ಪ್ರೀತಿ ತೋರಿಸಿದ ಸೋಣವಪ್ಪಗ ಹೀಗೆ ಕಾಣಿಸುವುದು ಸಹಜವೇ' ಎನ್ನುವ ಸಮಜಾಯಿಷಿ ನೀಡುತ್ತಾ ವಿಮರ್ಶಕರು, ಅಂತಹ ಹುರುಳಿಲ್ಲದ ಆರೋಪವನ್ನು ಸಿಂಬಳ ಜಾರಿಸಿದಷ್ಟೆ ಸುಲಭವಾಗಿ ಜಾರಿಸಿ ಹಾರಿಸಿಬಿಡುವುದೂ ಇದ್ದೇ ಇದೆ.

ನಿಜ ಹೇಳಬೇಕೆಂದರೆ, ವಿಮರ್ಶಕರ ಅಂತರಂಗವನ್ನು ಜಾಲಾಡಿಸಿ ನೋಡಿದರೆ ಯಾವುದೇ ಹೆಣ್ಣುಮಕ್ಕಳ ವಿಕಾರ, ನಮ್ಮ ಖ್ಯಾತ ವಿಮರ್ಶಕರಂತೂ ಹೆಂಡತಿದಾಸರು ಅಲ್ಲವೇ ಅಲ್ಲ. ಆದರೆ ಆ ರೀತಿಯ ಸೋಗು ಹಾಕಿ ಹೆಂಡತಿಯನ್ನು ಮುಷ್ಟಿಯಲ್ಲಿಟ್ಟುಕೊಂಡು ತಮ್ಮ ಕಾರ್ಯಸಾಧನೆಯನ್ನು ಸಾಧಿಸಿಕೊಳ್ಳುವುದರಲ್ಲಿ ಅವರು ಬಲು ನಿಪುಣರು ಎಂಬ ಅವರ ದೂರು ಮಾತ್ರ ಹೆಚ್ಚು ಕಮ್ಮಿ ಸಂಬಂಧಿಸಿದ್ದು.

ಅದೇನೇ ಇರಲಿ. ಹೊರಗಡೆ ತಂಪು ಮಳೆ ಸುರಿಯುತ್ತಿದ್ದರೆ ಒಳಗಡೆ ಖ್ಯಾತ ವಿಮರ್ಶಕರು ಹೆಂಡತಿಯ ನಿನ್ನೆ ಮೊನ್ನೆಯ ಸುಡುಮಾತುಗಳನ್ನೇ ನೆನಪಿಸಿಕೊಂಡು ಬೆವರಿ ಬೆಚ್ಚಗಾಗಿ 'ಮುನ್ನುಡಿ ಬರೆಯಲೇ ಬೇಡವೇ' ಎಂಬ ತುಯ್ದಾಟದಲ್ಲಿ ಕಳಿತ ಹಲಸಿನ ಹಣ್ಣಂತೆ ಕ್ಷಣ ಕ್ಷಣಕ್ಕೆ ಮೆತ್ತಗಾಗುತ್ತಿರುವುದು, ಅಲ್ಲಿ ಅಂಗಳದ ಮೂಲೆಯಲ್ಲಿ ಗೋಣಿತಾಟಿನ ಮೇಲೆ ಮಲಗಿದ್ದ ನಾಯಿ ಬೊಳ್ಳನಿಗೆ ಅದ್ಹೇಗೆ ತಿಳಿದು ಹೋಗಿತ್ತೊ ಏನೋ ? ಆತ ಸದ್ದಿಲ್ಲದೆ ಅಲ್ಲಿಂದ ಎದ್ದು ಬಂದು ಆರಾಮಕುರ್ಚಿಯಡಿಯೇ ನುಸುಳಿ 'ತಲ್ಲಣಿಸದಿರು ಒಡೆಯಾ... ನಾನಿರುವೆ' ಎಂಬಂತೆ ಒಡೆಯನ ಕಾಲುಗಳ ನಡುವೆ ಮೂತಿ ತೂರಿಸಿ ಉದ್ದಕ್ಕೆ ಮಲಗಿಯೇ ಬಿಟ್ಟ.

ಅಂಗಳಕ್ಕೆ ಬೀಳುತ್ತಿದ್ದ ಮಳೆಧಾರೆಯನ್ನು ಅವರ ಕಣ್ಣುಗಳು ದಿಟ್ಟಿಸುತ್ತಿದ್ದರೂ ಅವರ ಮನಸ್ಸು... ತಾನು ಮಾಡಿರುವ ಮಹಾಪರಾಧವಾದರೂ ಏನು ಎಂಬುದನ್ನು ಬಗೆಯುತ್ತಿತ್ತು. ಆ 'ಆಕಾರ' ಪತ್ರಿಕೆಯ ಸಂಪಾದಕ ಈ ಇಳಿವಯಸ್ಸಲ್ಲಿ ಯಾಕಾಗಿ ನನ್ನ ನೆಮ್ಮದಿಗೆ ಕಿಚ್ಚುಬಿಟ್ಟ ಎಂದು ಖಿನ್ನರಾಗುತ್ತ ತಮ್ಮ ಯೋಚನೆಯನ್ನು ಮತ್ತಷ್ಟು ಮುಂದುವರಿಸಿದ್ದರು.

ಹಾಗೆ ಯೋಚಿಸುತ್ತ... ಯೋಚಿಸುತ್ತ ಅವರ ಮನಸ್ಸು ಹೋಗಿ ನಿಂತಿದ್ದು ಇಪ್ಪತ್ತೆರಡು ವರುಷಗಳ ಹಿಂದಕ್ಕೆ. ಆ ಹೊತ್ತಲ್ಲಿನ್ನೂ ಈ ಖ್ಯಾತ ವಿಮರ್ಶಕರು – ಯಾವುದೇ ರೀತಿಯ ವಿಮರ್ಶೆಯಲ್ಲಿ ಅಷ್ಟೊಂದು ಖ್ಯಾತರಾಗಿರಲಿಲ್ಲ. ಸರಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಇವರು ಗಟ್ಟದ ಮೇಲಿನ ಆ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಆಯ್ಕೆಯಾದಾಗ ಅವರನ್ನು ಅಭಿನಂದಿಸಿದವರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರ ಎಂ.ಎ. ಸಹಪಾಠಿಯಾಗಿದ್ದ ಆ 'ಆಕಾರ' ಪತ್ರಿಕೆಯ ಸಂಪಾದಕನೂ ಒಬ್ಬ. ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗುವುದೆಂದರೆ ಒಬ್ಬ ನುರಿತ ರಾಜಕಾರಣಿ ಸೃಷ್ಟಿಯಾದನೆಂದೇ ಅರ್ಥ – ಎಂದು ಕೀಟಲೆ ಮಾಡಿದ್ದ ಇಂದಿನ ಈ ಸಂಪಾದಕ ಗೆಳೆಯ, ಅಂದು ಖಾಸಗಿ ಕಾಲೇಜಿನಲ್ಲಿ ದುಡಿಯುತ್ತ ತನಗೆ ದೊರಕದ ಈ ಉದ್ಯೋಗ ಅವಕಾಶಕ್ಕಾಗಿ ಒಳಗೊಳಗೆ ಕರುಬುತ್ತ, ಹೊರಗೆ ಆಮೆ ನಗೆ

ತುಳುಕಿಸುತ್ತ ಗೆಳೆಯನನ್ನು ಗಟ್ಟಕ್ಕೆ ಬೀಳ್ಕೊಟ್ಟಿದ್ದ. ವಿಶ್ವವಿದ್ಯಾಲಯದ ಆವರಣದ
ವರುಷಗಳೆರಡು ಉರುಳುತ್ತಲೇ ನಮ್ಮೀ ವಿಮರ್ಶಕರು... ಖ್ಯಾತ ವಿಮರ್ಶಕರಾ
ರೂಪುಗೊಂಡಿದ್ದು ಮಾತ್ರವಲ್ಲ ತಮ್ಮ ಅಧ್ಯಾಪನ ಕ್ರಮದಿಂದಲೆ
ವಿದ್ಯಾರ್ಥಿಗಳಿಗೂ ಅಚ್ಚುಮೆಚ್ಚಿನವರಾಗುತ್ತ ತಮ್ಮದೇ ಶೈಲಿಯಲ್ಲಿ ಸಾಹಿತ್ಯವ
ಗ್ರಹಿಸುತ್ತ... ಅದನ್ನು ಹಸಿದ ಕಿವಿಗಳಿಗೆ ಮಂಡಿಸುತ್ತ ನಾಡಿನ ಹೆಚ್ಚಿನ ಸಾಹಿ
ಕಾರ್ಯಕ್ರಮಗಳಲ್ಲಿ 'ತುಳಸಿಕಟ್ಟೆ'ಯಂತೆ ಪವಿತ್ರವಾಗಿ ಶೋಭಿಸತೊಡಗಿದ್ದರು.
ಜನಪ್ರಿಯತೆಯ ಹಂತದಲ್ಲಿ ಬಾಲ್ಯದಿಂದಲೇ ಅವರೊಳಗೆ ಹುದುಗಿದ್ದ 'ಕವಿ'ಗ
ಸ್ವಲ್ಪ ಪುಷ್ಟಿ ಬರತೊಡಗಿತ್ತು.

ಇಷ್ಟೇ ಆಗಿದ್ದರೆ ಪರವಾಗಿರಲಿಲ್ಲ; ಖ್ಯಾತ ವಿಮರ್ಶಕರಿಗೆ ಇಂದು ಇಂತ
ದುರ್ಗತಿ ಒದಗಿಬರುತ್ತಿರಲಿಲ್ಲ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರೆಲ್ಲ – ಕೊಳ
ಗೊಬ್ಬರಕ್ಕೆ ಕೆಸುವಿನ ಸಸಿ ಬಲಿತುಕೊಳ್ಳುವಂತೆ ಬಲಿಯುವುದೇ – ಅವರ
ಸಂಶೋಧನಾ ಮಾರ್ಗದರ್ಶನದ ಸಂಪೂರ್ಣ ಹಕ್ಕು ಪ್ರಾಪ್ತಿಯಾದ ನಂತರ ಎಂ
ಲೋಕಕ್ಕೇ ತಿಳಿದ ವಿಚಾರ. ಹಾಗೆ ನೋಡಿದರೆ ನಮ್ಮ ಖ್ಯಾತ ವಿಮರ್ಶಕರಿಗಂತ
ಈ ಸಂಶೋಧನಾ ಮಾರ್ಗದರ್ಶನ ಮಾಡುವ ಕೆಲಸವೆಂದರೆ ಆಟಿ
ಔಷಧದಂತೆಯೇ ಕಹಿ ಸಂಗತಿ. 'ಈ ಜಾತಿವಾರು ಹಂಚಿಕೆಯಲ್ಲಿ ಬರುವ ಆ ಬ
ತಲೆಯವುಗಳ ಜತೆ ತಾನು ಏಗುವುದಾದರೂ ಹೇಗೆ...? ತನಗೆ ಬೇಕಾದವರ
ಆಯ್ಕೆ ಮಾಡಿಕೊಂಡರೆ ಅದಕ್ಕೂ ನೂರಾರು ಅಡ್ಡಿಗಳು, ಕೊಂಕು ಮಾತುಗ
ಬೇರೆ...! ತನ್ನ 'ತಲೆಯಲ್ಲಿದ್ದುದನ್ನು ಆ ಸಂಶೋಧನಾ ವಿದ್ಯಾರ್ಥಿಗಳ ತ
ಹೊದಿಸಿ, ಕೊನೆಗೆ ಅವರಿಂದೊಂದು ಸಂಪ್ರಬಂಧ ಬರೆಸುವುದೆಂದರೆ ನನಗೊಂ
ಪುನರ್ಜನ್ಮವೇ ಸಮ...' ಎಂದು ಈ ಖ್ಯಾತ ವಿಮರ್ಶಕ ಕಮ್ ಪ್ರಾಧ್ಯಾಪಕರು ಹಲ
ಬಾರಿ ತನ್ನ ಸಹಪಾಠಿ ಗೆಳೆಯ ಅಂದರೆ ಇಂದಿನ 'ಆಕಾರ' ಪತ್ರಿಕೆಯ ಸಂಪಾದಕರ
ಹೇಳಿಕೊಂಡದ್ದಿದೆ. ಸಂಪಾದಕರೂ ಹೇಳಿದ್ದಿದೆ: ಕೈಗೆ ಸಿಕ್ಕ ಕಸಕಡ್ಡಿಗಳಿಗೆಲ್ಲ ನಿ
ವಿದ್ವತ್ತನ್ನು ಧಾರೆ ಎರೆಯಬೇಡ ಕಣೋ..., ಅದರಲ್ಲೂ ಸ್ವಲ್ಪ ಆಯ್ಕೆ ಇರಲಿ ಎಂದ

ರೆ ಸಂಪಾದಕರು ಹಾಗೆ ಹೇಳಿದ ಎರಡು ತಿಂಗಳಲ್ಲೇ ಖ್ಯಾತ ವಿಮರ್ಶಕರಿಗೆ ನು ಫೋನಾಯಿಸಿ ''ನನ್ನ ಒಬ್ಬ ಒಳ್ಳೆಯ ಶಿಷ್ಯೆಯನ್ನು ನಿಂಗೆ ಕಳುಹಿಸಿಕೊಡುತ್ತಿದ್ದೇನೆ ೀ..., ನನ್ನ ಪತ್ರಿಕೆಯ 'ಕುಹು... ಕುಹೂ' ಅಂಕಣಕ್ಕೆ ಗದ್ಯ ಬರೆಯುವ ಕೊರಳು' ಅದು. ನೀನು ಅವಳ ಬುದ್ಧಿಮತ್ತೆನ ಒಮ್ಮೆ ನೋಡಿಬಿಡು...'' ಎಂದು ದವರೇ, ಮುಂದಿನ ಅಕಾಡೆಮಿಕ್ ವರ್ಷದ ಪಿಎಚ್.ಡಿ.ಗೆ ಗೆಳೆಯನ ಯಲ್ಲಿ ಆಕೆಯನ್ನು ಆಯ್ಕೆ ಮಾಡಿಸಿಯೂ ಆಗಿತ್ತು. ಅದುವೇ ಇದೀಗ ಖ್ಯಾತ ರ್ಶಕರ ನೆಮ್ಮದಿಗೆ ಕಂಟಕವಾಗಿ ಪರಿಣಮಿಸತೊಡಗಿದ್ದು.

ಆಕಾರ' ಪತ್ರಿಕೆಯ ಸಂಪಾದಕರು, ತಮ್ಮ ಖಾಸಗಿ ಕಾಲೇಜಿನ ಅಧ್ಯಾಪನ ವೃತ್ತಿಗೆ ಂಜಲಿ ಇತ್ತು ಅಪ್ಪನ ಪತ್ರಿಕಾವೃತ್ತಿಯನ್ನು ತನ್ನ ವೃತ್ತಿಯಾಗಿ ಸ್ವೀಕರಿಸಿದ ನಂತರ, ಪತ್ರಿಕೆಯಲ್ಲಿ ನಾಡಿನ ಪ್ರತಿಭಾವಂತ ಯುವ ಶಕ್ತಿಗಳಿಗಾಗಿಯೇ ಅದರಲ್ಲೂ ಾಜದಲ್ಲಿ ಪರಂಪರೆಯಿಂದ ತುಳಿಯಲ್ಪಟ್ಟವರ ಅಭಿವ್ಯಕ್ತಿಗಾಗಿಯೇ ವಿವಿಧ ಣಗಳನ್ನು ಆರಂಭಿಸಿದ್ದರು. ಈ ಅಂಕಣಗಳ ಮೂಲಕ ಬೆಳಕಿಗೆ ಬರುತ್ತಿದ್ದ ಹೊಸ ಪ್ರಗಳಿಗೆ ಮುಂದಿನ ದಾರಿಯನ್ನೂ ತೋರುವ ಪ್ರಯತ್ನದಲ್ಲಿದ್ದ ಸಂಪಾದಕರು, ಕ್ಕಾಗಿ ತನ್ನ ಗೆಳೆಯರ ಬೆಂಬಲವನ್ನು ಪಡೆಯಹೊರಟಿದ್ದು - ಆ ಗೆಳೆಯರ ಪಾಲಿಗೆ ಷ್ಟ ಸಂಕಟವಾಗಿ ಪರಿಣಮಿಸತೊಡಗಿತ್ತು: ಸಂಪಾದಕರು ುಮಕ್ಕಳಿಗೆ ಆ ಪರಿಯಲ್ಲಿ ದಾರಿತೋರುತ್ತಿದ್ದರೂ ಪರವಾಗಿರಲಿಲ್ಲ... ರೆ ಅವರು ದಾರಿ ತೋರಹೊರಟಿದ್ದು ಶೇಕಡವಾರು ಎಂಬತ್ತರಷ್ಟು ್ಣಮಕ್ಕಳಿಗೆ! ಸಂಪಾದಕರು ಹಾಗೆ ದಾರಿತೋರಿದ ಹೆಣ್ಣುಮಕ್ಕಳಲ್ಲಿ ುಮತಿ ಎಂಬ ಇಪ್ಪತ್ಮೂರರ ತರುಣಿ ಬಂದು ಸೇರಿದ್ದು ನಮ್ಮ ಖ್ಯಾತ ರ್ಶಕರ ಮಡಿಲಿಗೆ!

ನಮ್ಮ ಖ್ಯಾತ ವಿಮರ್ಶಕರಿಗಂತು ಮೊದಮೊದಲಿಗೆ, ಈ ಹೆಣ್ಣುಮಕ್ಕಳ ಾಸವೆಂದರೆ - ಕೊಟ್ಟೆ ಮುಳ್ಳಿನ ಪೊದೆ – ಎಂದು ಅನಿಸಲೇ ಇಲ್ಲವೆಂದು ಸುತ್ತೆ. ಹೆಣ್ಣುಗಳೆಂದರೆ, ತಕ್ಷಣ ಬಾಯಲ್ಲಿ ಎಂಟು ಚಮಚ ಎಂಜಲು ಸುತ್ತಿದ್ದ ವಿಮರ್ಶಕರಿಗೆ - ಆ ಪತ್ರಿಕಾ ಸಂಪಾದಕರು ಶಿಷ್ಯೆಯೊಬ್ಬಳನ್ನು ುಸಿಕೊಡುತ್ತೇನೆ ಎಂದು ಅಂದಾಗ - ಮುಂದೆ ಇದೇ ವಿಷಯ ತನ್ನ ಕಿನ ನೆಮ್ಮದಿಗೆ ದೊಡ್ಡ ಮುಳ್ಳಾಗಬಹುದು ಎಂಬ ಕಲ್ಪನೆಯೇ ರಲಿಲ್ಲ.

ಾಗೆ ನೋಡಿದರೆ ನಮ್ಮ ಖ್ಯಾತ ವಿಮರ್ಶಕರನ್ನು ಬೇರೆ ವಿಮರ್ಶಕರಿಗೆ ಾ ಅವರ ಗೆಳೆಯ ಪತ್ರಿಕಾ ಸಂಪಾದಕರಿಗೆ ಹೋಲಿಸಿದ್ದಲ್ಲಿ... ಇವರು ತ ಅಷ್ಟೇನೂ ಕಚ್ಚೆಹರುಕರಲ್ಲ. ಹೆಣ್ಣು ಸಿಕ್ಕಿದರೆ ಸಾಕು, ಬಾಚಿ ಬೇಕು – ಎಂಬ ಕೆಟ್ಟತನ ಈ ಖ್ಯಾತ ವಿಮರ್ಶಕರಿಗಿಲ್ಲ. ಆದರೆ ತನ್ನ ೆ ವ್ಯಕ್ತಿತ್ವ ಒಳ್ಳೆಯತನವನ್ನು ಬಯಸಿ ಬರುವ ಹೆಣ್ಣುಮಕ್ಕಳನ್ನು ತಳ್ಳುವ ಕಠಿಣ ಮನಸ್ಸು ಮಾತ್ರ ಇವರದ್ದಲ್ಲ. ಅಷ್ಟೆ. ಇಂತಹ 'ಮೃದು' ತಿಯಲ್ಲಿ ಖ್ಯಾತ ವಿಮರ್ಶಕರು ಇರುವಾಗಲೇ, ಮಧುಮತಿ ಎಂಬ ಪ್ರತಿಭಾವಂತೆ ಅವರ ವಿಭಾಗವನ್ನು ಹೊಕ್ಕಿದ್ದಲ್ಲದೆ, ಮುಂದಿನ ಎರಡೇ ಎರಡು ಲ್ಲಿ ಅವರ ಮನಸ್ಸನ್ನೂ ಆವರಿಸಿಬಿಟ್ಟಿದ್ದಳು! ಅದುವರೆಗೂ ಆಕಾರ ಪತ್ರಿಕೆಯ ದಕರ ಅಂತರಂಗಕ್ಕೆ ಹೆಚ್ಚು ಹತ್ತಿರವಿದ್ದ ಹುಡುಗಿ ಮಧುಮತಿ, ಆಕೆ ನಿಜಕ್ಕೂ ಾವಂತೆ, ವಿಷಯ ಗ್ರಹಿಕೆಯಲ್ಲೂ ಚುರುಕು ಎಂಬುದನ್ನು ಸಾಬೀತು ವಂತೆ ಪಿಎಚ್.ಡಿ. ವ್ಯಾಸಂಗಕ್ಕೆ ಆಕೆಯದ್ದೇ ಅರ್ಹತೆಯಲ್ಲಿ ಆಯ್ಕೆಯಾದುದು ವಿಮರ್ಶಕರಿಗಂತೂ ಆಕೆಯ ಮೇಲಿನ ಸೆಳೆತವನ್ನು ಇಮ್ಮಡಿಗೊಳಿಸಿತ್ತು. ಶೀಲತೆಯಲ್ಲೂ ಮುಂದಾಗಿದ್ದ ಆ ಹುಡುಗಿಗೆ, ಓದುವಿಕೆಯ ಜೊತೆ ಕತೆ ಗಳನ್ನೂ ಬರೆಯುವ ಹಂಬಲ. ಹಾಗೆ ಬರೆದದ್ದನ್ನೆಲ್ಲ ಆಕೆ ವಿಮರ್ಶಕರಾಗಿರುವ ರ್ಗದರ್ಶಕರೆದುರು ಕುಕ್ಕತೊಡಗಿದಾಗ... ಆಕೆಯ ಪ್ರತಿಭೆಗೆ ಈ ವಿಮರ್ಶಕರು ರ್ಣ ವಾಲಿದ್ದು ಖಂಡಿತ ಸುಳ್ಳೇನಲ್ಲ.

ಕೆ ತನ್ನಲ್ಲಿ ಸಂಶೋಧನಾ ವಿದ್ಯಾರ್ಥಿನಿಯಾಗಿ ಸೇರಿಕೊಂಡ ನಂತರ ಆಕಾಶದಲ್ಲಿ ಮ ಆರನೇ ಹುಣ್ಣಿಮೆಯನ್ನು ಆಚರಿಸುವಷ್ಟರಲ್ಲಿ, ಈ ಪ್ರಾಧ್ಯಾಪಕರು ದ್ದಂತೆ ಶಿಷ್ಯೆಯ ಪ್ರತಿಭೆಯನ್ನು ವಾಚಾಮಗೋಚರವಾಗಿ ವಿಶ್ವವಿದ್ಯಾಲಯ ಣದಲ್ಲಿ ಹೊಗಳತೊಡಗಿದಾಗ, ಆ ಹೊಗಳಿಕೆಯ ರಭಸಕ್ಕೆ ಮಧುಮತಿಗೆ ದ ಬೆಂಗಳೂರಲ್ಲಿದ್ದ ಸಂಪಾದಕರ ನೆನಪು, ಕೃತಜ್ಞತೆ ಮರೆಯಾಗತೊಡಗಿ ಕ್ಕೆ ಆಕೆಯ ನಿಷ್ಠೆ ನಮ್ಮ ಖ್ಯಾತ ವಿಮರ್ಶಕರ ಮೇಲೇ ನೆಲೆಗೊಳ್ಳತೊಡಗಿತ್ತು!

ಈ ಕರ್ಣಕಠೋರ ಸುದ್ದಿಯನ್ನು ಬೆಂಗಳೂರಿನ ಆ ಪತ್ರಿಕಾ ಸಂಪಾದಕರ ಕಿವಿಗೆ ತಲುಪಿಸಲು ಯಾವುದೇ 'ವರದಿಗಾರ'ರು ತಕ್ಷಣದಲ್ಲೇ ಲಭ್ಯವಾಗದ ಕಾರಣ ಅದು ಅವರ ಕಿವಿಗೆ ತಲುಪಿದ್ದು ವರ್ಷವೊಂದರ ನಂತರವಷ್ಟೆ. ತನ್ನ ಪ್ರತಿಭಾವಂತ ಶಿಷ್ಯೆ 'ಅಧ್ಯಯನದಲ್ಲೇ ತೊಡಗಿದ್ದಾಳೆ' ಎಂದು ಭಾವಿಸಿದ್ದ ಸಂಪಾದಕರು, ತನ್ನ ಅಂತರಂಗಕ್ಕೆ ಹತ್ತಿರವಾದವಳು ವಿಮರ್ಶಕರತ್ತ ವಾಲುತ್ತಿರುವ ಸುದ್ದಿ ಕೇಳಿದ ತಕ್ಷಣ - ಬಾಲಕ್ಕೆ ಡಬ್ಬ ಬಿಗಿಯಲ್ಪಟ್ಟ ಹೋರಿಯಂತೆ ಅಸಹನೆಗೊಳಗಾದರು.

ತನ್ನ ಹುಡುಗಿಯನ್ನು ಮರಳಿ ತನ್ನತ್ತ ಸೆಳೆದುಕೊಳ್ಳಲಾಗದಂತಹ ಸ್ಥಿತಿಗಿಳಿದ ಸಂಪಾದಕರು. 'ಆ ಖ್ಯಾತ ವಿಮರ್ಶಕರ ಮಾನವನ್ನು ಹರಾಜು ಹಾಕುವ ಮೊದಲ ಕಾರ್ಯಕ್ರಮವಿದು' - ಎನ್ನುವಂತೆ ತನ್ನ ಪತ್ರಿಕೆಯಲ್ಲಿ 'ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಅಂಗಸಂಗ' ಎಂಬ ಶೀರ್ಷಿಕೆಯಡಿ ಲೇಖನವೊಂದನ್ನು ತಾನೇ ಬರೆದು ಖ್ಯಾತ ವಿಮರ್ಶಕರನ್ನೇ ಅಲ್ಲಿ ಉದಾಹರಿಸಿಬಿಟ್ಟು ಮಧುಮತಿಯ ಮಾರ್ಗದರ್ಶಕರ ಮಾನವನ್ನು ಬೀದಿಯಲ್ಲಿ ಹರಾಜಿಗಿಟ್ಟರು.

ಪತ್ರಿಕಾ ಸಂಪಾದಕರ ಈ ಬರಹ, ವಿಶ್ವವಿದ್ಯಾಲಯದಲ್ಲಿದ್ದ ಖ್ಯಾತ ವಿಮರ್ಶಕರ ಹಿತಶತ್ರುಗಳು ಹಾಗೂ ಪ್ರತಿಭೆಯಲ್ಲಿ ಅವರೆದುರು ತೀರಾ ಕುಬ್ಜರೆನಿಸುವ ಹಲವು



ಸಹೋದ್ಯೋಗಿಗಳಿಗೆ ಹಾಲು ಕುಡಿದಷ್ಟೇ ಖುಷಿ ನೀಡಿದ್ದರೆ, ವಿಶ್ವವಿದ್ಯಾಲಯದ ಆಡಳಿತ ವರ್ಗವಂತೂ ಕುಂಡೆಯಲ್ಲಿ ಕುರವೆದ್ದಂತೆ ಒಂದೆರಡು ದಿನ ಅಸಮಾಧಾನಗೊಂಡು, ಮಾರ್ಗದರ್ಶಕ ಪ್ರಾಧ್ಯಾಪಕರಿಗೆ ಎರಡು ನೋಟೀಸುಗಳನ್ನು ಕೊಟ್ಟು ಸುಮ್ಮನಾಯಿತು. ಆದರೆ... ಆದರೆ... ದುರದೃಷ್ಟವಶಾತ್ ವಿಮರ್ಶಕರ ಅಡುಗೆಮನೆಯಲ್ಲಿ ಮಾತ್ರ 'ಮಹಾಸ್ಫೋಟ'ವಾಯಿತು. ಆ 'ಸ್ಫೋಟ'ದ ಫಲವಾಗಿ ಮುಂದಿನ ಮೂರೇ ತಿಂಗಳಲ್ಲಿ ಪಿಎಚ್.ಡಿ. ಮಹಾಪ್ರಬಂಧ ಸಲ್ಲಿಸಿ ತನ್ನೂರಿಗೆ ಹೊರಟುಹೋದ ಮಧುಮತಿ... ಮತ್ತೆಂದೂ ಮಾರ್ಗದರ್ಶಕರ ಮನೆಯಲ್ಲಿ 'ರಣಕಹಳೆ' ಮೊಳಗಿಸಲು ಕಾರಣವಾಗಲಿಲ್ಲ. 'ಆಕೆ ಏನಾದಳು... ಎಲ್ಲಿ ಹೋದಳು... ? ಈಗಲೂ ನನ್ನ ಯಜಮಾನರಲ್ಲಿ ಏನಾದರೂ ನಂಟು ಇರಿಸಿಕೊಂಡಿದ್ದಾಳೆಯೇ...' ಎಂಬ ಕೆಟ್ಟ ಕುತೂಹಲವೇ ಇಲ್ಲದ ವಿಮರ್ಶಕರ ಪತ್ನಿಯೂ ನಿಧಾನಕ್ಕೆ ಆಕೆಯನ್ನು ಮರೆತರು. ಗಂಡನನ್ನು ಇನ್ನೆಂದೂ ಗೋಳು ಹೊಯ್ದುಕೊಳ್ಳಲಿಲ್ಲ. ಆದರೆ ಖ್ಯಾತ ವಿಮರ್ಶಕರು ಮೊನ್ನೆ ಮೊನ್ನೆಯವರೆಗೂ ಹಳೆಯ ನೆನಪುಗಳ ಮೂಲಕವೇ ಮಧುಮತಿಯನ್ನು ತನ್ನ ಅಂತರಂಗದೊಳಗಿರಿಸಿಕೊಂಡು ತಾನು ಕಟ್ಟಿಕೊಂಡವಳ ಜೊತೆ ಸುಖವಾಗಿಯೇ ಬದುಕಿದವರು. ಹೌದು ನೆನಪುಗಳನ್ನು, ಅವು ಕೊಡುವ ಸುಖವನ್ನು ಯಾರಿಂದಾದರೂ ಕಿತ್ತುಕೊಳ್ಳಲು ಸಾಧ್ಯವೇನು ?

ಕಳೆದ ವರ್ಷ ಅಂದರೆ ಅವರು ವಿಶ್ರಾಂತ ಜೀವನಕ್ಕೆ ಕಾಲಿಟ್ಟ ವರ್ಷ ಅವರ ಸುಖದ ಬುಡವನ್ನೇ ಸುಡುವಂತಹ 'ಕೆಲಸ'ವೊಂದು ನಡೆದೇ ಹೋಯ್ತು. ಅಂದು ಅವರು ಕಳೆದುಕೊಂಡಿರುವ ನೆಮ್ಮದಿ ಇಂದೂ ಅವರತ್ತ ಸುಳಿಯದಿರುವುದು...

ಮತ್ತು ಮಾಸಿಕ, ದ್ವೈಮಾಸಿಕದ ಲೆಕ್ಕಾಚಾರದಲ್ಲಿ ಹಂತ ಹಂತವಾಗಿ ಅವರ ಮಾನವು ನಷ್ಟವಾಗುತ್ತಿರುವುದು ಇಂದಿಗೂ ಮುಂದುವರಿದಿದೆ ಮಾತ್ರವಲ್ಲ ಮನೆಯೂ ರಣರಂಗವಾಗಿ ಮಾರ್ಪಾಡುಗೊಂಡಿರುವುದು ಇಳಿಪ್ರಾಯದಲ್ಲಿರುವ ಅವರ ಬದುಕಿನ ದುರಂತವೇ ಸರಿ.

ತನ್ನ ಬದುಕಿನ 'ಗತ'ವನ್ನು ನೆನಪಿಸಿಕೊಳ್ಳುತ್ತ... ಇಂದು ಮುಂಜಾನೆಯಿಂದ ಸುರಿಯುತ್ತಿರುವ ಆ ಮಳೆಯಲ್ಲೂ ಖ್ಯಾತ ವಿಮರ್ಶಕರು ಮತ್ತೆ ಮತ್ತೆ ಬೆವರ ತೊಡಗಿದರು; ಮತ್ತು ತನ್ನ ಕೈಯಲ್ಲಿರುವ ಕೆಲಸವನ್ನು ಮುಂದುವರಿಸಲೇ... ಬೇಡವೇ ? ಎನ್ನುವ ದ್ವಂದ್ವಕ್ಕವರು ಈಡಾದರು.

ಇದೀಗ ತಾನು ಕೈಯಲ್ಲಿರುವ ಕೆಲಸವನ್ನು ಮುಂದುವರಿಸಿದರೆ ತನ್ನ 'ಸಾಹಿತ್ಯ ಕಾರ್ಯ'ದ ಬಗ್ಗೆ ಒಂದು ಕಡೆ ಹೆಂಡತಿಯ ದಾಳಿ ನಡೆದರೆ ಮತ್ತೊಂದೆಡೆಯಿಂದ ಆ 'ಆಕಾರ' ಪತ್ರಿಕೆಯ ಸಂಪಾದಕನೂ ತನ್ನ ಮೇಲೆ ದಾಳಿ ನಡೆಸದೆ ಬಿಡಲಾರ. ತನ್ನ ಸಾಹಿತ್ಯ ವಿಮರ್ಶೆಯ ವರಸೆಯ ಬಗ್ಗೆ ನಾಡಿನೆಲ್ಲೆಡೆಯಿಂದ ಪ್ರಶಂಸೆಯೆಂಬುದು ಎಷ್ಟು ರಭಸವಾಗಿ ಹರಿದು ಬಂದಿತ್ತೋ... ಅಷ್ಟೇ ರಭಸದಲ್ಲೀಗ ಆತ್ಮವಂಚನೆಯ ನಿಂದನೆಯೂ ಬಂದು ಸೇರಿಕೊಂಡಿದೆ. ತಾನು ಲೇಖಕಿಯರ ಕೃತಿ ವಿಮರ್ಶಾ ವಿಚಾರದಲ್ಲಿ ತುಂಬ ಉದಾರಿಯಾಗಿರುವುದು, ಅದರಲ್ಲೂ ಶಿಷ್ಯೆಯರ ಕೃತಿಗಳಿಗೆ 'ಮುನ್ನುಡಿ' ಬರೆಯುವ ಕಾಲಕ್ಕೆ ಸಂಪೂರ್ಣ ಆತ್ಮವಂಚನೆ ಮಾಡಿಕೊಂಡು ಕೃತಿಯಲ್ಲಿ 'ಇಂದ್ರ-ಚಂದ್ರ'ರಿದ್ದಾರೆಂದು ಹೊಗಳುವುದನ್ನು ಹಲವು ಸೃಜನಶೀಲ ಬರಹಗಾರರು ನೇರವಾಗಿ ಅಲ್ಲಿ ಇಲ್ಲಿ ಬರೆದು 'ಇದು ವಿಮರ್ಶಕರ ಆತ್ಮವಂಚನೆ' ಎಂದು ನೇರವಾಗಿ ನಿಂದಿಸಿದ್ದಿದೆ... ಎಂದೆಲ್ಲ ಯೋಚಿಸುತ್ತಲೇ ವಿಮರ್ಶಕರು ತನ್ನ ಕೈಯಲ್ಲಿರುವ ಕೆಲಸದ ಬಗ್ಗೆ ಚಿಂತಿತರಾದರು.

ಖ್ಯಾತ ವಿಮರ್ಶಕರು ಆ ಸುರಿವ ಮಳೆಯನ್ನು ದಿಟ್ಟಿಸುತ್ತ ತನ್ನ ಆತ್ಮವಿಮರ್ಶೆಯಲ್ಲಿ ತೊಡಗುತ್ತಿದ್ದಂತೆ ಕೈಯಲ್ಲಿದ್ದ ಕಷಾಯ ಖಾಲಿಯಾಗತೊಡಗಿತ್ತು. ಹುಟ್ಟಿನಿಂದಲೇ ಪರನಿಂದನೆಯನ್ನು ಸಹಿಸಿಕೊಳ್ಳುವ ಶಕ್ತಿ ಇಲ್ಲದ ವಿಮರ್ಶಕರಿಗೆ, ಈ ಇಳಿಪ್ರಾಯದಲ್ಲಂತೂ ಅದು ಅವರ ಪ್ರಾಣ ತೆಗೆವ ಅಸ್ತ್ರದಂತೆ ಪರಿಣಮಿಸಿತ್ತು. ಪರನಿಂದನೆಗೆ ಸಂಬಂಧಿಸಿದಂತೆ ವಿಮರ್ಶಕರೇ ಕೆಲವೊಮ್ಮೆ ತನ್ನನ್ನು ತಾನು ಸಮರ್ಥಿ... ಸಮಾಧಾನಿಸಿಕೊಳ್ಳುವುದಿದೆ. 'ಹೌದಪ್ಪ ಎಲ್ಲೂ ಸಿಗದನ್ನು ಎಲ್ಲೋ ಒಂದು ಕ... ಸಮೃದ್ಧವಾಗಿ ಪಡೆದುಕೊಂಡು, ತೃಪ್ತಿಪಡಿಸಿದವರಿಗಾಗಿ ಆತ್ಮವನ್ನು ಒಂದಿಷ್ಟು ವಂಚ... ಕೊಂಡರೆ ತಪ್ಪೇನು...' ಎಂದು, ಆದರೂ ಖ್ಯಾತ ವಿಮರ್ಶಕರು ಆತ್ಮವಂಚನೆ... ದಾರಿ ಹಿಡಿದಾಗಲೆಲ್ಲ ಸಾರಸ್ವತ ಲೋಕ ಮಾತ್ರವಲ್ಲ ಬಂಧುಮಿತ್ರರೂ ಕೂಡ ಅವ... ಗುಮಾನಿಯ ಕೆಟ್ಟದಿಟ್ಟಿ ಬೀರುತ್ತಿದ್ದುದು... ತಕ್ಷಣ ಅವರು ಮುಂದಿನ ಕೆಲವು ವ... ಆತ್ಮವನ್ನು ಸ್ವಯಂ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಿದ್ದುದು... ಹೀಗೆ ನಡೆದೇ ಇ... ಖ್ಯಾತ ವಿಮರ್ಶಕರು ಹೀಗೆ ತಮ್ಮ ಆತ್ಮನನ್ನು ಸ್ವಯಂ ನಿಯತ್ರಣಕ್ಕೆ ತರು... ಪ್ರಯತ್ನವಾಗಿ ಕೆಲವು ದಿನ ಧ್ಯಾನಸ್ಥ ಸ್ಥಿತಿಯಲ್ಲಿ ಕೂತು ತಮ್ಮನ್ನು ತಾವು ಕಾವ್ಯ ಸೃ... ಒಗ್ಗಿಸಿಕೊಳ್ಳುತ್ತಿದ್ದುದಿದೆ. ಆ ಸಂಧಿಕಾಲದಲ್ಲಿ ಹುಟ್ಟಿದ ಕಾವ್ಯಗಳು ಅವ... 'ಸಂವೇದನಾಶೀಲ ಕವಿ' ಎಂಬ ಪಟ್ಟವನ್ನೂ ತಂದು ಕೊಟ್ಟದ್ದಿದೆ.

ಆದರೆ, ಊರಿಡೀ ಅವರಿಗೆ 'ಕವಿ' ಪಟ್ಟ ಸಿಕ್ಕಿ ಏನು ಸುಖ ಬಂತು! ... ಮಡದಿ ಸುಲೋಚನಮ್ಮನವರು ಮಾತ್ರ ಅವರನ್ನು ಕವಿ ಎಂದು ಎಂ... ಒಪ್ಪಿಕೊಂಡವರಲ್ಲ. ಒಮ್ಮೆ ಈ ಖ್ಯಾತ ವಿಮರ್ಶಕರು ಇಂತಹದ್ದೇ ಸಂದಿ... ಮನಸ್ಥಿತಿಯಲ್ಲಿದ್ದ ಕಾಲದಲ್ಲಿ ಧ್ಯಾನಸ್ಥ ಸ್ಥಿತಿಯಲ್ಲಿ 'ಕಾಲನ ಕೇಳಿಕೆ' ಎಂಬ ಕಾವ್ಯ... ಸೃಷ್ಟಿಸಿದಾಗ, ಇದೇ ಸುಲೋಚನಮ್ಮನವರು ತನ್ನ ತಂಗಿಯಂದಿರಲ್ಲಿ 'ಅದೇನೋ ಒಬ್ಬ ಗಣಪತಿ ಮಾಡಲು ಹೋಗಿ.... ಮಂಗನ ಮುಸುಡಿ ಮಾಡಿಟ್ಟನಂ... ಹಾಗಾಯ್ತು ಇವರ ಕತೆ.; ಬರೆಯಲು ಹೋದದ್ದು ಪ್ರೇಮಕಾವ್ಯ, ಬರೆದು ಮುಗಿಸಿ... 'ರುದ್ರಕಾವ್ಯ'ವನ್ನು' ಎಂದು ಗಂಡನೆಂಬ ಮುಲಾಜಿಲ್ಲದೆ ಜರಿದೇ ಬಿಟ್ಟಿದ್ದರು.

ಗಂಡನ ಕಾವ್ಯವನ್ನು ವಿಮರ್ಶೆ ಮಾಡುವ ಈ ಸುಲೋಚನಮ್ಮನವರು ಬರೀ ಒಂ... ಪಡ್ಡೋಸಿ ಕುಟುಂಬದಿಂದ ಬಂದವರಲ್ಲ. ಅವರು ಕನ್ನಡ ನಾಡಿನ ಖ್ಯಾತ ಗ... ನಾರಣಪ್ಪನವರ ಹಿರಿಮಗಳು. ಗಮಕಿಗಳ ಮುದ್ದಿನ ಹಿರಿಮಗಳಿಗೆ ಕಾವ್ಯ ಓದುವ ಖಯಾ... ವಿಮರ್ಶಕರನ್ನು ಮದುವೆಯಾದ ಮೇಲೆ ಬಂದಿದ್ದಲ್ಲ. 'ಗದುಗಿನ ಭಾರತ'ವ... ನೀರು ಕುಡಿದಂತೆ ಓದಬಲ್ಲ ಸುಲೋಚನಮ್ಮನವರು ಅಪ್ಪನಿಂದಲೇ ಹಳೆಗನ್ನ... ಕಾವ್ಯಗಳನ್ನು ಓದಲು ಕಲಿತವರು. ಆಧುನಿಕ ಕಾವ್ಯದ ಓದುವಿಕೆಯನ್ನು ಅಣ್ಣಂದಿರಿಂ... ಕಲಿತವರು. ಆದರೆ ಸಾಹಿತ್ಯ ವಿಮರ್ಶೆ ಎಂಬ ಸಾಹಿತ್ಯಕ ಹತಾರಿನ ಬಗ್ಗೆ ಮಾ... ಅವರಿಗೇನೇನೂ ತಿಳಿದಿಲ್ಲ. ಇದು ಸತ್ಯ; ಅವರ ಹುಟ್ಟೂರು ಉಡುಪಿಯ ಕೃಷ್ಣನಾಣೆ...

ಏನೇ ಆಗಲಿ... ತನ್ನ ಗಂಡ ಖ್ಯಾತ ವಿಮರ್ಶಕರು ಎಂದು ಖ... ಹೊಂದುವುದಕ್ಕೆ ಸುಲೋಚನಮ್ಮನವರದ್ದು ಏನೇನೂ ಅಡ್ಡಿಯಿಲ್ಲ. ಆದರೂ ಖ... ವಿಮರ್ಶಕರು ಆತ್ಮವಂಚನೆಯ ದಾರಿ ಹಿಡಿದಾಗಲೆಲ್ಲ ಸಾರಸ್ವತಲೋಕ ಮಾತ್ರ... ಬಂಧುಮಿತ್ರರೂ ಕೂಡ ಅವರತ್ತ ಗುಮಾನಿಯ ಕೆಟ್ಟ ದಿಟ್ಟ ಬೀರುತ್ತಿದ್ದದು... ತಕ್ಷಣ... ಅವರು ಮುಂದಿನ ಕೆಲವು ವರ್ಷಗಳ ಕಾಲ ಆತ್ಮನನ್ನು ಸ್ವಯಂ ನಿಯಂತ್ರಣದಲ್ಲಿ... ಕೊಳ್ಳುತ್ತಿದ್ದುದು - ಕಾವ್ಯ ಸೃಷ್ಟಿಸುತ್ತಿದ್ದುದು... ಹೀಗೆ ನಡೆದೇ ಇತ್ತು.

ಒಂದು ಸಂದಿಗ್ಧ ಸ್ಥಿತಿಯಲ್ಲಿ ಕಾವ್ಯಸೃಷ್ಟಿಯಾಗುತ್ತಿದ್ದ ಕಾರಣಕ್ಕಾಗಿಯೇ... ಸುಲೋಚನಮ್ಮನವರು ಗಂಡನೊಳಗಿನ ಕಹಿಯನ್ನು ಸಂದರ್ಭ ಸಿಕ್ಕಾಗಲೆಲ್ಲ ಮಡೆ... ಮೀನನ್ನು ಬೂದಿಗೆ ಹಾಕಿ ತಿಕ್ಕುವ ಹಾಗೆ ತಿಕ್ಕುತ್ತಿದ್ದರೂ, ಗಂಡನೊಳಗಿನ ವಿಮರ್ಶಕನ... ಕೆದಕಿ ಕೆಣಕಿ ಹಿಂಸಿಸಲು ಅವರಿಗಿನ್ನೂ ಸಾಧ್ಯವಾಗದಿರುವುದು - ವಿಮರ್ಶೆಯ... ಓದುವ ಭಾಷೆ ಅವರಿಗಿನ್ನೂ ಸಿದ್ಧಿಸದಿರುವುದರಿಂದ. ಸುಲೋಚನಮ್ಮನವ... ವಿಮರ್ಶೆಯ ಪರಿಭಾಷೆ ತಲೆಗೆ ಹತ್ತುತ್ತಿಲ್ಲವಾದ್ದರಿಂದ, ಸಾಹಿತ್ಯ ವಿಮರ್ಶೆಯೆಂದರೆ... ಅದು ಒಂಥರಾ ಕುಂಬುಕಟ್ಟಿದ ಒಣಮೀನಿನಂತೆ – ಎಂಬ ಅಸಡ್ಡೆ ಅವರಿಗಿರುವುದರಿಂ... ಅವರು ಗಂಡನ ವಿಮರ್ಶಾಲೋಕಕ್ಕೆ ಎಂದೂ ಮೂಗು ತೂರಿಸುವವರಲ್ಲ... ಕಾರಣಕ್ಕೇ ಖ್ಯಾತ ವಿಮರ್ಶಕರ ಗೆಳೆಯರೆಲ್ಲ ಸುಲೋಚನಮ್ಮನವರ ಹಿಂದೆ ಹ... ಆಡಿಕೊಳ್ಳುವುದುಂಟು : 'ವಿಮರ್ಶಕರ ಪತ್ನಿಗೆ ಗಂಡನ ವಿಮರ್ಶೆ ಓದುವ, ... ಅರ್ಥೈಸಿಕೊಳ್ಳುವ ವಿಶೇಷ 'ಕನ್ನಡಕ'ಗಳಿನ್ನೂ ಹುಟ್ಟಿಲ್ಲವಾದ್ದರಿಂದ ಖ... ವಿಮರ್ಶಕರಿನ್ನೂ ಖ್ಯಾತರಾಗೇ ಉಳಿದುಕೊಳ್ಳಲು ಸಾಧ್ಯವಾಗಿದೆ' ಎಂದು.

ನಿಜ ಹೇಳಬೇಕೆಂದರೆ ಖ್ಯಾತ ವಿಮರ್ಶಕರ ಗೆಳೆಯರು ಆಡಿಕೊಳ್ಳುವ... ನೀಚನಿಂದಕರಲ್ಲ ಸುಲೋಚನಮ್ಮನವರು. ಅವರಿಗೆ ಗಂಡನ ಮೇಲಿರುವ ವಿಶೇ... ಕಾಳಜಿ, ಪ್ರೀತಿಯಿಂದಾಗಿಯೆ ಮನೆಯಲ್ಲೇ ಗಂಡನನ್ನು ತಿದ್ದುವ ಕೆ... ಮಾಡುತ್ತಾರಷ್ಟೆ. ಆದರೆ ಗಂಡನ ಸಾಹಿತ್ಯದ ಕೆಲಸವನ್ನು ವಿಮರ್ಶಿಸುವ ಅಥ... ನಿಂದಿಸುವ ಕೆಲಸವನ್ನು ಊರವರು ಮಾಡಿದರೆ ಮಾತ್ರ ಅದನ್ನು ಸಹಿಸಿ ಕೂರುವವ...

ಲೋಚನಮ್ಮನವರಲ್ಲ. ಒಮ್ಮೆ ಅಂದರೆ ಇಪ್ಪತ್ತೈದು ವರ್ಷಗಳ ...... ಗಟ್ಟದ ಮೇಲಿನ ವಿಶ್ವವಿದ್ಯಾಲಯದಲ್ಲಿ ಕನ್ನಡ ...ಪಕರಾಗಿದ್ದ ಈ ಖ್ಯಾತ ವಿಮರ್ಶಕರು, ಆಗ ಸಿಕ್ಕಾಪಟ್ಟೆ ...ಕರನ್ನು ತನ್ನ ಸುತ್ತ ಸೃಷ್ಟಿಸಿಕೊಂಡಿದ್ದ ಕಾಲ.

...ಗ ನಮ್ಮ ವಿಮರ್ಶಕರಿಗೆ ಆತ್ಮವಂಚನೆಯೆಂಬುದು ...ಸದೂಟದಂತೆ ಅಪರೂಪವಾಗಿದ್ದ ಕಾಲವೂ ಹೌದು. ...ರ್ಶಕರಲ್ಲಿದ್ದ ಪ್ರತಿಭೆ, ಬೌದ್ಧಿಕ ಪ್ರೌಢಿಮೆ ಮತ್ತು ಅವರೊಳಗಿನ ...ರ ನಡವಳಿಕೆಯು ಅವರ ಹಿಂದೆ ಒಂದು ನಿಂದಕರ ಗುಂಪನ್ನೇ ...ಬಿಟ್ಟಿತ್ತು. ನಿಂದಕರ ಸೃಷ್ಟಿಗೆ ಒಂದೆರಡು ಕಾರಣಗಳೇ ಸಾಕು ...ಎಂದು ಎಲ್ಲರಿಗೂ ವೇದ್ಯವಾದ ವಿಚಾರವೇ.

...ವರು ಖ್ಯಾತ ವಿಮರ್ಶಕರಾದರೂ ತಮ್ಮ ಚೊಚ್ಚಲ ಕೃತಿಗಳಿಗೆ ... ನಿರೀಕ್ಷೆಯಂತೆ 'ಮುತ್ತು ಹವಳ'ಗಳನ್ನು ಪೋಣಿಸಿ ಮುನ್ನುಡಿ ...ುಲಿಲ್ಲವೆಂದೋ ಅಥವಾ ತಮ್ಮ ಪ್ರಕಟಿತ ಕೃತಿಗಳನ್ನು ...ರ್ಶಿಸುವಾಗ ಈ ಖ್ಯಾತ ವಿಮರ್ಶಕರು ಅನಗತ್ಯವಾದ ...ಣೀನು ಬಳಸಿ ತಮ್ಮ ಕೃತಿಯ ಮೂಲೆ ಮೂಲೆಗಳಿಂದ ...ಲ ಅಂಶಗಳನ್ನೆಲ್ಲ ಎತ್ತಿ ತಂದರೆಂದೋ... ಕೆಲವರು ತೀರಾ ...ಾಧಾನಿತರಾಗಿ ನಿಂದಕರ ಸಾಲಿನಲ್ಲಿ ಹೋಗಿ ನಿಂತಿದ್ದರೆ, ... ಕೆಲವರು ಈ ಖ್ಯಾತ ವಿಮರ್ಶಕರು ಕೃತಿ ಬರೆದವರ ಜಾತಿ ... ಲಿಂಗ, ವಯಸ್ಸಿಗೆ ಅನುಗುಣವಾಗಿ ಮುಖಮೂತಿ ದಿಟ್ಟಿಸಿ ಆ ...ನ್ನು ಚಿನ್ನ, ಬೆಳ್ಳಿ, ಕಬ್ಬಿಣ... ಹೀಗೆ ಬೇರೆ ಬೇರೆ ಜಾತಿಯ ...ಗಳಲ್ಲಿಟ್ಟು ತೂಗಿ, ಅಗತ್ಯವಿದ್ದಲ್ಲಿ ಕೃತಿಗೆ ತಮ್ಮ ಕಿಸೆಯಿಂದಲೇ ...ಷ್ಟು 'ಮುತ್ತು ಹವಳ'ಗಳನ್ನು ಸೇರಿಸಿ ತನಗಿಷ್ಟವಾದ ...ರರನ್ನು ಮಾತ್ರ ಖುಷಿ ಪಡಿಸುತ್ತಾರೆ ಎಂದು ನಿಂದಿಸಿದ್ದರೆ, ... ಹಲವು ಬರಹಗಾರರು 'ಈ ದರ್ವೇಸಿ ವಿಮರ್ಶಕ ತಾನು ಹೆಣ್ಣುಗಳಿಗೆಷ್ಟು ಬರಿಬೇಕು, ಗಂಡುಗಳಿಗೆಷ್ಟು ಬರಿಬೇಕು: ದಲಿತರಿಗೆಷ್ಟು ಬರಿಬೇಕು, ದಲಿತೇತರರಿಗೆಷ್ಟು ಬರಿಬೇಕು ? ಯಾರಿಗೆಷ್ಟು ಬರೆದರೆ... ತನಗೇನು ದಕ್ಕೀತು ? ಎಂಬ ಲೆಕ್ಕಾಚಾರವನ್ನು ತಾಯಿಯ ಹೊಟ್ಟೆಯಲ್ಲೇ ಕಲಿತು ಬಂದಿದ್ದಾನೆ...' ಎಂದು ತೀಕ್ಷ್ಣವಾಗಿ ಲೇವಡಿ ಮಾಡಿ ನಿಂದಿಸಿದ್ದಿದೆ.

ಈ ನಿಂದನೆ ಸುಲೋಚನಮ್ಮನವರ ಕಿವಿಬೀಳಿಗೂ ತಲುಪಿತ್ತು. ಸಿಟ್ಟಿಗೆದ್ದ ವಿಮರ್ಶಕ ಪತ್ನಿಯವರು ಜವಾನ ಓಬಳೇಶನಿಗೆ ಬಿಸಿ ಬಿಸಿ ಶಾವಿಗೆ - ಕಾಯಿಹಾಲು ತಿನ್ನಿಸಿ, ತನ್ನ ಗಂಡನ ಹಿಂದಿರುವ ಕೆಲವು ನಿಂದಕರ 'ಪಟ್ಟಿ'ಯನ್ನು ತರಿಸಿಕೊಂಡು ಆ ನಿಂದಕರ ಪತ್ನಿಯರನ್ನು ಅಂದೇ ಭೇಟಿಮಾಡಿ ಮುಖಮೂತಿ ನೋಡದೆ ಅವರಿಗೆ ಸಮಾ ಜಾಡಿಸಿದ್ದರು. ಆದರೆ ಇದರಿಂದ ನಿಜಕ್ಕೂ ಮುಖಭಂಗವಾಗಿದ್ದು ಸ್ವತ ಖ್ಯಾತ ವಿಮರ್ಶಕರಿಗೇ ! ತನ್ನ ಮಡದಿ, ತನ್ನನ್ನು ವಿಮರ್ಶೆ ಮಾಡುವ ಪ್ರತಿಯೊಬ್ಬರ ಮೇಲೆಯೂ ಹೀಗೆ ಎಗರಾಡತೊಡಗುತ್ತಿದ್ದುದು ಖ್ಯಾತ ವಿಮರ್ಶಕರಿಗೇ ದೊಡ್ಡ ಮುಷ್ಕಿಲ್ಲಾಗಿ ಪರಿಣಮಿಸಿತ್ತು.

ಇಂತಹ ನೂರೆಂಟು ಕುಹಕಿಗಳ ಆರೋಪ-ಲೇವಡಿಗಳನ್ನು ಅಲ್ಲಿ ಇಲ್ಲಿ ಕೇಳಿಸಿಕೊಂಡಿರುವ ಈ ಖ್ಯಾತ ವಿಮರ್ಶಕರು ಒಮ್ಮೊಮ್ಮೆ ''ಅರೆ, ಯಾವ ವಿಮರ್ಶಕರಲ್ಲಿ ಇಂತಹ 'ತಕ್ಕಡಿ ಬದಲಿಸುವ' ಗುಣಗಳಿಲ್ಲ ?'' ಎಂದು ಮರು ಪ್ರಶ್ನಿಸಬೇಕೆನ್ನುವಾಗ ಅವರ ಮನಸ್ಸೊಮ್ಮೆ ಅವರ ಅಂತರಂಗದೊಳಗೇ ಅಂತರ್ಧ್ಯಾನ ಮಾಡಿಬಂದು ''ನಿಜಕ್ಕೂ ನೀನು ದಲಿತರ ಮತ್ತು ಹೆಣ್ಮಕ್ಕಳ ಕೃತಿಗಳಿಗೆ ನಾಲ್ಕು ಮುಷ್ಟಿ ಹೆಚ್ಚೇ 'ಮುತ್ತು ಕಟ್ಟಿರುವುದನ್ನು' ಒಪ್ಪಿಕೊಂಡು ತೆಪ್ಪಗಿರು'' ಎಂದು ಅಂದದ್ದಿದೆ. ಒಮ್ಮೊಮ್ಮೆ ಸುಲೋಚನಮ್ಮನವರು ಹೀಗೇ... ಯಾರದೋ ಮಾತು ಕೇಳಿ 'ಇದು ನೀವು ಮಾಡುವುದು ಪರಮ ತಪ್ಪಲ್ಲವಾ ?' ಎಂದು ಗಂಡನನ್ನು ಕೇಳಿದರೆ 'ಸುಮ್ನಿರು ಮಾರಾಯ್ತಿ, ನಿನಗೆ ಈ ಜಗತ್ತು ಎಷ್ಟು ಕೆಟ್ಟದ್ದು ಅಂತ ಗೊತ್ತಿಲ್ಲ; ಕೆಳಗಿರುವವರನ್ನು ನಾವು ಸ್ವಲ್ಪ ಮೇಲಕ್ಕೆ ಎತ್ತಲೇಬೇಕಾಗಿದೆ' ಎಂದು ಹೇಳಿ ಹೆಂಡತಿಯ ಬಾಯಿ ಮುಚ್ಚಿಸಿದ್ದಿದೆ.

ಗಂಡ ಹೀಗೆ ತನ್ನ ಬಾಯಿ ಮುಚ್ಚಿಸುವಾಗಲೆಲ್ಲ ಸುಲೋಚನಮ್ಮನವರಿಗೆ ತಲೆಯಲ್ಲೊಂದು ಅಹಂಕಾರದ ಮೂಟೆ ಎದ್ದು ಕೂರುತ್ತಿತ್ತು: ಈ ವಿಚಾರದಲ್ಲಿ ತನ್ನ ಗಂಡನಿಗೆ ತಿಳಿದಷ್ಟು ಯಾರಿಗೂ ತಿಳಿದಿಲ್ಲ ಎಂದು. ಈ 'ಮೂಟೆ'ಯಿಂದಲೇ ಸುಲೋಚನಮ್ಮನವರ ತಲೆಗೆ ಅವರ ಹೆಗಲ ಮೇಲೆ ಕೂಡುವುದಕ್ಕೆ ಸ್ವಲ್ಪ ಪ್ರಯಾಸವಾಗತೊಡಗಿದ್ದು. ಅವರು ಗಂಡನ ವಿಮರ್ಶೆಯನ್ನು ತೀರಾ ಕಷ್ಟಪಟ್ಟು ಓದತೊಡಗಿದ್ದು ಈ ಸ್ಥಿತಿ ತಲೆಯೊಳಗೆ 'ನಿರ್ಮಾಣ'ವಾದ ನಂತರದಲ್ಲಿ.

ಇಂತಹ ಮನಸ್ಥಿತಿಯಿಂದಾಗಿಯೇ ಸಾಹಿತ್ಯದ ವಿಚಾರದಲ್ಲಿ ಗಂಡನನ್ನು ನಿಂದಿಸುವ ಹಕ್ಕು ತನ್ನೊಬ್ಬಳದ್ದೇ ಎಂದು ಭಾವಿಸಿರುವ ಸುಲೋಚನಮ್ಮನವರು... ಈ ವಿಚಾರದಲ್ಲಿ ತನ್ನ ಒಡಹುಟ್ಟಿದವರನ್ನು ಕೂಡ ಸಹಿಸಿಕೊಳ್ಳುವವರಲ್ಲ. ಕಳೆದ ವರ್ಷ ಸುಲೋಚನಮ್ಮನವರ ತಮ್ಮಂದಿರಿಬ್ಬರು (ಅವರೂ ಪುಡಿ ವಿಮರ್ಶಕರೆ) 'ಭಾವ ಬರೆಯುವ ಪ್ರೇಮಕಾವ್ಯಗಳು ಬರೆಯುತ್ತ... ಬರೆಯುತ್ತ ವಿಕಾಸಗೊಂಡು ರುದ್ರಕಾವ್ಯಗಳಾಗುತ್ತಿವೆ...' ಎಂದು ಹಾಸ್ಯ ಮಾಡಿದಾಗ, ಅದನ್ನವರು ಸಹಿಸಿಕೊಂಡರಾದರೂ, 'ಭಾವ ಬರೆಯುವ ವಿಮರ್ಶೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತಿರುತ್ತದೆ; ಅದರಲ್ಲೂ ಹೆಣ್ಣುಮಕ್ಕಳ ಬರಹಗಳಿಗಂತೂ ಅವರು ಬುಡದಿಂದಲೇ ಕರಗುತ್ತಾರೆ...' ಎಂದು ಹೇಳಿದಾಗಲಂತೂ ಅವರ ಅಕ್ಕಯ್ಯ ಉರಿದು ಕೆಂಡವಾಗಿದ್ದರು. ತಟ್ಟನೆ ಮುಖ ಊದಿಸಿಕೊಂಡು ತಮ್ಮಂದಿರಿಗೆ ಏನು ಹೇಳಬೇಕೋ ಅಷ್ಟನ್ನು

ಕಡಲು – ಕವಿತೆ

ಒಡುವಿಲ್ಲದ ಗದ್ದೆಯಲ್ಲಿ
ಬೆಸ್ತರೇ ರೈತರು
ಮೀನುಗಳೇ ಫಸಲು

• • •

ಸಂಜೆ ಸೂರ್ಯನನ್ನು ನುಂಗಿದರೂ
ಸಾಯಿಸುವುದಿಲ್ಲ ಕಡಲು
ಮತ್ತೆ ಬರುವುದಿಲ್ಲವೆ ಹಗಲು ?

• • •

ತೆರೆಗಳು ಅಪ್ಪಳಿಸುತ್ತಲೇ ಇವೆ
ಕರ್ತವ್ಯದೆಚ್ಚರದಂತೆ
ದಡವು ಹೃದಯ ಬಿಚ್ಚಿ
ಸ್ವಾಗತಿಸುತ್ತಲೇ ಇದೆ
ಬೆಚ್ಚಗಿನ ಪ್ರೀತಿಯಂತೆ

• • •

ನೀರು ಮೀನು ಉಪ್ಪು ಕೊಟ್ಟು
ಪಾಲಿಸುತ್ತಿರುವಾಗ ಕಡಲು
ಸುನಾಮಿಯಾದದ್ದೆ ತಡ
ಯಮನಾಗಿ ಬಿಟ್ಟಿತ್ತು

ಹೇಳಿ ಅವರ ಬಾಯಿ ಮುಚ್ಚಿಸಿದ್ದರು.

...ಹೀಗೆ ಗಂಡನ 'ವಿಮರ್ಶಾ ಚಾಕಚಕ್ಯತೆ'ಯ ಬಗ್ಗೆ ದೇಹಪೂರ್ತಿ ಉಗ್ರ ಅಭಿಮಾನವಿರಿಸಿಕೊಂಡಿದ್ದ ಸುಲೋಚನಮ್ಮನವರು ಇದ್ದಕ್ಕಿದ್ದಂತೆ ಇದೇ 'ವಿಮರ್ಶಾ ಕಾರಣ'ಕ್ಕಾಗಿ ಗಂಡನ ಮೇಲೆ ಉರಿದು ಬಿದ್ದು ಮನಸೀಳಿಸಿಕೊಳ್ಳುವ ಪ್ರಸಂಗವೊಂದು ಮೊನ್ನೆ ನಡೆದೇ ಹೋಯಿತು! ಆ ಕಾರಣಕ್ಕಾಗೇ ಖ್ಯಾತ ವಿಮರ್ಶಕರು ಆ ಪರಿಯಲ್ಲಿ ಸುರಿವ ಮಳೆಯಲ್ಲೂ ಬೆಚ್ಚಗೆ ಬೆವರುತ್ತಿದ್ದುದು.

ಮೊನ್ನೆ... ಸುಲೋಚನಮ್ಮನವರ ಮನಸೀಳುವ ಪ್ರಸಂಗ ನಡೆದುದರ ಹಿನ್ನೆಲೆ ಇಲ್ಲಿದೆ. ಯಾವುದೇ ವಿಮರ್ಶಕ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಬೇಕೆ ವಿನಾ ವ್ಯಕ್ತಿನಿಷ್ಠವಾಗಿ ವಿಮರ್ಶಿಸಕೂಡದು ಎಂದು ಗೆಳೆಯರ ಕೂಟದಲ್ಲಿ ಹೇಳುತ್ತಲೇ ಇದ್ದ 'ಆಕಾರ' ಪತ್ರಿಕೆಯ ಸಂಪಾದಕರು, ಕಳೆದ ನಾಲ್ಕು ವರ್ಷಗಳಿಂದ 'ಕೃತಿ ಹೂರಣ' ಎಂಬ ವಿಮರ್ಶಾ ಅಂಕಣ ಆರಂಭಿಸಿ ಹೊಸಕೃತಿಗಳ ಜತೆಗೆ ಕೆಲವು ಹಳೆಯ ಕೃತಿಗಳನ್ನೂ 'ವಿಭಿನ್ನ ನೋಟ'ಗಳಿಂದ ವಿಮರ್ಶಿಸತೊಡಗಿದ್ದರು. ಸಂಪಾದಕ ವಿಮರ್ಶಕರು ಕೃತಿಯ 'ಮುನ್ನುಡಿ'ಯನ್ನು ಮೊದಲು ಹೊಕ್ಕು ನಂತರ ಕೃತಿಯ 'ಹೂರಣ'ಕ್ಕೆ ಪ್ರವೇಶ ಪಡೆದು ಮುನ್ನುಡಿ ಬರೆದ ವ್ಯಕ್ತಿಯ 'ವಿಮರ್ಶಾ ತಕ್ಕಡಿ' ಎಷ್ಟು ಪ್ರಾಮಾಣಿಕವಾಗಿ ತೂಗಿದೆ ? ಎಷ್ಟು ಅಪ್ರಾಮಾಣಿಕವಾಗಿ ಅಲ್ಲಿ... ಇಲ್ಲಿ... ಎಲ್ಲಿ ವಾಲಿದೆ ? – ಎಂದು ಅಳೆಯುವುದೇ ಈ ಅಂಕಣದ ವೈಶಿಷ್ಟ್ಯ.

'ಈ ಅಂಕಣ ಆರಂಭಗೊಂಡಿದ್ದು, ನಮ್ಮ ಖ್ಯಾತ ವಿಮರ್ಶಕರನ್ನು ಬೋನಿಗೆ ಕೆಡವುದಕ್ಕಾಗಿಯೇ...' ಎಂದು ಈ ಖ್ಯಾತ ವಿಮರ್ಶಕರ ನಿಂದನಾಗುಂಪಿನಲ್ಲಿರುವ ತಲೆಮಾಸದ ಅನೇಕ ಕುಹಕಿಗಳು ಅಲ್ಲಿ ಇಲ್ಲಿ ಮಾತನಾಡಿಕೊಂಡದ್ದಿದೆ. ಆದರೆ ಆ ಕುಹಕಿಗಳ ಮಾತು ಭಾಗಶಃ ನಿಜ ಅಷ್ಟೆ. 'ಆಕಾರ' ಸಂಪಾದಕರು ಸಾಹಿತ್ಯ ವಿಮರ್ಶಕರನ್ನು ಅವರವರ 'ದೋಷಪೂರಿತ ತಕ್ಕಡಿ'ಗಳ ಸಮೇತ ಸೆರೆಹಿಡಿಯಲು ಇರಿಸಿದ್ದ ಆ 'ವಿಮರ್ಶಾ ಬೋನಿ'ನಲ್ಲಿ ಇದುವರೆಗೆ ಹೆಚ್ಚಾಗಿ ಸೆರೆಯಾದವರು ನಮ್ಮ ಖ್ಯಾತ ವಿಮರ್ಶಕರು ಎಂಬುದೇನೋ ನಿಜ. ಆದರೆ ಕನ್ನಡ ನಾಡಿನ ಇನ್ನೂ ಕೆಲವು ವಿಮರ್ಶಕರನ್ನು ಇದೇ ಅಂಕಣದಲ್ಲಿ ಬೆನ್ನುಡಿ - ಮುನ್ನುಡಿ - ಅಭಿಪ್ರಾಯ - ಅನಿಸಿಕೆ

ಎಂಬಿತ್ಯಾದಿ 'ಉರುಳು'ಗಳಿಗೆ ಸಿಲುಕಿಸಿ ಆ 'ಬೋನಿ'ನಲ್ಲಿ ಹಿಡಿದಿಟ್ಟು ಒದ್ದಾಡಿಸಿರುವು... ಕೂಡ ಅಷ್ಟೇ ನಿಜ.

ಆಕಾರ ಸಂಪಾದಕರು ಲೋಕದ ಕಣ್ಣಿಗೆ ತಾವೊಬ್ಬ ಸಜ್ಜನ ನಿಷ್ಪಕ್ಷಪಾತಿ, ಪ್ರಗತಿ... ಎಂಬ ಮುಖವಾಡ ಹಾಕಿಕೊಂಡಿದ್ದರೂ, 'ಮದ-ಮತ್ಸರ-ಮೋಹ'ವೆ... ಜೀವವಿರೋಧಿ ವಿಷಗುಣವೊಂದು ಅವರನ್ನು ನಿಯಂತ್ರಿಸುತ್ತಿದ್ದುದು, ಅವರ... ತೀರಾ ಹತ್ತಿರದಿಂದ ಬಲ್ಲ ಅವರ ಎಲ್ಲಾ ಗೆಳೆಯರಿಗೆ ತಿಳಿಯದ ವಿಚಾರವೇನಲ್ಲ.

ಯಾವುದೇ ಸಾಹಿತ್ಯದ ವಿಮರ್ಶೆ ಮಾಡುವಾಗ ಅಥವಾ ಹೊಸ ಕೃತಿಗಳಿಗೆ ತ... ಅಭಿಪ್ರಾಯಗಳ 'ಮುನ್ನುಡಿ'ಯ ಮೊಹರು ಹಾಕುವಾಗ ನಾಡಿನ ವಿಮರ್ಶಕರು ಆಡ... ದೂರಾಲೋಚನೆಯ 'ಆಟ'ಗಳನ್ನೆಲ್ಲ ಈ ಅಂಕಣದಲ್ಲಿ ಎತ್ತಿ ತಂದು ಅವರ ಮಾನಹಾ... ವನ್ನು ಮಾಡಲೇಬೇಕೆಂಬ ಆಂತರಿಕ ಕಾರ್ಯಸೂಚಿಯೊಂದು ಸಂಪಾದಕರಲ್ಲಿ ಪ್ರಬಲವಾ... ನಿರ್ವಹಿಸುತ್ತಿದೆ ಎಂಬುದು ಸ್ವತಃ ನಮ್ಮ ಖ್ಯಾತ ವಿಮರ್ಶಕರಿಗೇ ತಿಳಿದಿದೆ.

ಇತ್ತೀಚೆಗೆ ಪ್ರತಿ ಶುಕ್ರವಾರ ಬರುತ್ತಿದೆ ಎಂದರೆ ಸಾಕು - ಸುಲೋಚನಮ್ಮನವ... ದೇವಿಸ್ತುತಿ ಮಾಡಿ ಪೂಜಿಸುವ ಪವಿತ್ರ ದಿನ ಅದುವಾದರೆ, ಖ್ಯಾತ ವಿಮರ್ಶಕರಿಗ... ಎದೆ ಭಯದಿಂದ ಪುಕುಗುಟ್ಟತೊಡಗುತ್ತದೆ. ''ಈ ಬಾರಿಯ 'ಮುನ್ನುಡಿಯ ತಿಕ್ಕಾ... ಯಾವ ಮಗನ ಸರದಿಯಪ್ಪ...? ಅಕಸ್ಮಾತ್ ನನ್ನದೇ 'ಮುನ್ನುಡಿ'ಯಾಗಿ... ಅಡುಗೆಮನೆಯ 'ಕ್ರಾಂತಿ'ಯನ್ನು ಹೇಗೆ ಎದುರಿಸಲಿ ?'' ಎಂಬ ಚಿಂತೆಯಲ್ಲೇ ಅ... ಎದೆ ಮೆತ್ತಗಾಗತೊಡಗುತ್ತದೆ. ಮರುದಿನ ಶನಿವಾರ 'ಆಕಾರ' ಸಂಚಿಕೆ ಮಾರುಕ... ಬರುವವರೆಗೆ ಖ್ಯಾತ ವಿಮರ್ಶಕರಿಗೆ ಒಂದೆರಡು ದಿನ ಸರಿಯಾಗಿ ನಿದ್ದೆ, ಊ... ತಿಂಡಿ ಎಂಬುದೇ ಇಲ್ಲ.

ಅದರಲ್ಲೂ ಇತ್ತೀಚೆಗೆ ಸುಲೋಚನಮ್ಮನವರ ಸಿಟ್ಟು ಗಂಡನ ಮೇಲೆ ಬೇರೆ ಬ... ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಖ್ಯಾತ ವಿಮರ್ಶಕರಿಗೆ ನುಂಗಲಾರದ ತುತ... ಪರಿಣಮಿಸಿದೆ. ಸಂಪಾದಕನ ವಿಮರ್ಶಾ ದೆಸೆಯಿಂದ ಕಳೆದ ಎಷ್ಟೋ ವಾರಗಳ... ಹೆಂಡತಿಯ ಕೈಯಡುಗೆಯ ರುಚಿ ಯಾವುದೋ ಗಟ್ಟ ಏರಿರುವುದು ಮತ್ತು... ಗಂಡ ಈ ಮಾತನ್ನು ಕಿವಿಗೆ ಹಾಕಿಕೊಳ್ಳದೆ 'ಲೇಖಕಿಯರಿಗೆ ಮುನ್ನುಡಿ ಬರ... ರೋಗವನ್ನಿನ್ನೂ ಮೈತುಂಬ ಅಂಟಿಸಿಕೊಂಡಿದ್ದಾರೆ ಎಂಬ ಅನುಮಾನದಿಂದ ಮ... ಏನೋ ಒಂದನ್ನು ಬೇಯಿಸಿಟ್ಟು... ತನ್ನ ಅಂತರಂಗದ ಬೇಗುದಿ, ಸಿಟ್ಟು ಅಸ... ಆಕ್ರೋಶವನ್ನೆಲ್ಲ ಆ ಬೇಯಿಸಿಡುವ ವ್ಯಂಜನಗಳ ಮೂಲಕವೇ ಅಭಿವ್ಯಕ್ತಿಸುತ್ತಿರುವು... ಖ್ಯಾತ ವಿಮರ್ಶಕರಿಗೊಂದು ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಈ ಕಾರಣಕ್ಕಾಗಿಯೇ ಇತ್ತೀಚೆಗೆ ನಮ್ಮ ಖ್ಯಾತ ವಿಮರ್ಶಕರು ಹೆಂಡತಿ... ರಾಜಿಪಂಚಾಯಿತಿಗೇಕೆ ಒಳಗಾಗಿ 'ಇನ್ನು ಹೊಸ ಕೃತಿಗಳಿಗೆ ಮುನ... ಬರೆಯುವುದಿಲ್ಲವೆಂದು' ಹೆಂಡತಿಗೆ 'ಭಾಷೆ' ಕೊಟ್ಟಿದ್ದರೂ, ಸುಲೋಚನಮ್ಮನವ... ಗಂಡನ ಆ 'ಭಾಷೆ'ಯಲ್ಲಿ ಮಾತ್ರ ಕಿಂಚಿತ್ತೂ ನಂಬಿಕೆ ಎಂಬುದು ಮೂಡಿರಲ... ಕಾರಣ ವಿಮರ್ಶಕರು ತಮ್ಮ ಮೂವತ್ತಾರು ವರ್ಷದ ದಾಂಪತ್ಯ ಬದುಕಿನಲ್ಲಿ ಇಂ... ಎಷ್ಟೋ 'ಭಾಷೆ'ಗಳನ್ನು ಕೊಟ್ಟದ್ದೂ ಇದೆ, ಮುರಿದದ್ದೂ ಇದೆ. ಆ 'ಭಾಷೆ'... ಪ್ರಭಾವ ಏನಿದ್ದರೂ ಒಂದೆರಡು ದಿನಕ್ಕೆ ಮಾತ್ರ ಸೀಮಿತ ಎಂಬು... ಸುಲೋಚನಮ್ಮನವರ ಬದುಕಿನ ಅನುಭವ.

ಅದೇನೇ ಇರಲಿ, ನಮ್ಮ ಖ್ಯಾತ ವಿಮರ್ಶಕರಿಗೆ ಕಳೆದೊಂದು ದಶಕದಿ... ಅಂಟಿಕೊಂಡಿದ್ದ ಹೊಸಬರ ಕೃತಿಗಳಿಗೆ 'ಮುನ್ನುಡಿ' ಬರೆಯುವಂತಹ ವಾಸಿಯಾ... ರೋಗದಿಂದಾಗಿ, ಸಂಪಾದಕರ 'ಕೃತಿ ಹೂರಣ' ಎಂಬ ಅಂಕಣದಡಿ ಹಾಯ್ದು ಬ... ಈ ಗಂಡ ಬರೆದ 'ಮುನ್ನುಡಿ'ಗಳು ಸುಲೋಚನಮ್ಮನವರ ಪಿತ್ತ ಕೆದರಿಸ... ಕಾರಣವಾದವು ಮಾತ್ರವಲ್ಲ ಅವು ಖ್ಯಾತ ವಿಮರ್ಶಕರ ನೆಮ್ಮದಿಗೇ ಕೊಳ್ಳಿ ಇಕ್ಕಿ... ಎಂದರೆ ಖಂಡಿತ ತಪ್ಪಾಗಲಿಕ್ಕಿಲ್ಲ.

ಸುಲೋಚನಮ್ಮನವರ ಸದ್ಯದ 'ಅಡುಗೆಮನೆ ಕ್ರಾಂತಿ'ಗೆ ನೇರವಾದ ಕಾ... ಇದಲ್ಲ. ಕಳೆದ ವಾರದ 'ಆಕಾರ' ಸಂಚಿಕೆಯಲ್ಲಿ ಸಂಪಾದಕರು, ನಮ್ಮ ಖ... ವಿಮರ್ಶಕರು 'ಸ್ವರ್ಗಕ್ಕೊಂದು ಪ್ರೇಮದೇಣಿ' ಎಂಬ ಕೃತಿಗೆ ಬರೆದ ಮುನ್ನುಡಿಯ... ಯಾವ್ಯಾವ ಕಡೆ ಅವರು 'ಅಮಾವಾಸ್ಯೆ ರಾತ್ರಿಯಲ್ಲಿ ಪೂರ್ಣಚಂದ್ರನನ್ನು ತೋರಿ... ಪ್ರಯತ್ನವನ್ನು ಎಷ್ಟು ಆಳವಾಗಿ ಮಾಡಿದ್ದಾರೆ' ಎಂಬುದನ್ನು ತೋರಿಸುತ್ತಲೇ, ಈ ಬ... ಲೇಖಕಿಯ ಭಾವಚಿತ್ರವನ್ನೂ ಪ್ರಕಟಿಸುವ ಮೂಲಕ ವಿಮರ್ಶಕರ ಅಂಗಳ ವ... ಅಡುಗೆ ಮನೆಯಲ್ಲಿದ್ದ ನೆಮ್ಮದಿ, ಶಾಂತಿಯನ್ನೆಲ್ಲ ಶಾಶ್ವತವಾಗಿ ಗುಡಿಸಿ ಅರ... ಸಮುದ್ರಕ್ಕೆ ಸೇರಿಸಲು ಕಾರಣರಾದರು.

ಈ ಸಂಪಾದಕರು ತಮ್ಮ 'ಕೃತಿ ಹೂರಣ' ಅಂಕಣದಲ್ಲಿ ಏನೇ ಬರೆದುಕೊಳ್ಳಲಿ, ಆದರೆ ಲೇಖಕಿಯರ ಭಾವಚಿತ್ರಗಳನ್ನು ಆಗೊಮ್ಮೆ ಈಗೊಮ್ಮೆ ಪ್ರಕಟಿಸುವ ಹಿಂದಿನ ಘನ ಉದ್ದೇಶ ಏನು? ಮನೆಯೊಡೆಯುವುದೇ ಅಲ್ಲವೇ? ಎಂದು ಸಂಪಾದಕನ ವಿಮರ್ಶಾ ಬೋನಿ'ಗೆ ಬಿದ್ದ ಹಲವು ವಿಮರ್ಶಕರು ರಂಪಾಟಕ್ಕಿಳಿದ ಹೆಂಡತಿಯರ ಹಿಂದೆ ಗೋಣಗಿಕೊಂಡದ್ದಿದೆ.


ಸುಲೋಚನಮ್ಮನವರಿಗೆ 'ಆಕಾರ' ಪತ್ರಿಕೆಯಲ್ಲಿ ಬರುವ ಗಂಡನ 'ಮುನ್ನುಡಿ'ಯ ಮೇಲಿನ 'ವಿಮರ್ಶೆಯ ಖಾರ' ಅಷ್ಟೊಂದು ತೀವ್ರವಾಗಿ ತಲಪದಿದ್ದರೂ, ಲೇಖಕಿಯ ಹೆಸರಿನ ಜೊತೆ ಭಾವಚಿತ್ರಗಳೇನಾದರೂ ಕಣ್ಣಿಗೆ ಬಿದ್ದೊಡನೆ ಅವರ ಭಾವಲೋಕ ದೊಳಗೆ ಭೂತಸಂಚಾರವಾದ ಅನುಭವವಾಗುತ್ತಿತ್ತು. ಆದರೆ ನಿನ್ನೆ ಮೊನ್ನೆ ಅವರಿಗೆ ತಲಪಿರುವ 'ಆಕಾರ' ಸಂಚಿಕೆಯಲ್ಲಿದ್ದ 'ಸ್ವರ್ಗಕ್ಕೊಂದು ಪ್ರೇಮದೇಣಿ' ಕೃತಿಯ ಲೇಖಕಿಯ ಭಾವಚಿತ್ರ ಕಂಡೊಡನೆ ಅವರ ಸರ್ವಪಿತ್ತವೂ ಕೆದರಿ ಅವರು ಸಿಟ್ಟಿನಿಂದ ಕುಸಿಯುವಂತಾದರು. ಸಂಚಿಕೆಯಲ್ಲಿದ್ದ ಸುಂದರಿ ಮಧುಮತಿಯ ಭಾವಚಿತ್ರವನ್ನು ಕಂಡೊಡನೆ ಸುಲೋಚನಮ್ಮನವರು..., ಜಗಲಿಯಲ್ಲಿ ಆರಾಮಕುರ್ಚಿಯಲ್ಲಿ ಕೂತು ಕೈಯಲ್ಲಿದ್ದ ಹಸ್ತಪ್ರತಿಯ ಮೇಲೆ ಕಣ್ಣಾಡಿಸುತ್ತಿದ್ದ ಗಂಡನತ್ತ ಧಾವಿಸಿದವರೇ 'ಏನಿದು ...ರ್ಮ, ಈ ಹಡಬೆ ಹುಡುಗಿಯ ಚಂಗಯಿ ಇನ್ನೂ ಬಿಟ್ಟಿಲ್ವ ನೀವು...' ಎಂದು ...ಟ್ಟಿನಿಂದ ಅದ್ದಿರುವ ಕಣ್ಣೀರು ಮಿಶ್ರಿತ ಬೈಗಳನ್ನು ಆರಂಭಿಸಿದವರೇ ಸಂಚಿಕೆಯನ್ನು ...ದ್ದಕ್ಕೆ ಬರ್‍ರೆಂದು ಸೀಳಿ ಗಂಡನ ಮುಖಕ್ಕೆಸೆದರು.

...ಾಗೆ ಆರಂಭವಾದ ಬೈಗಳು... ನೂರೆಂಟು ಪ್ರಶ್ನೆಗಳ ...ಚಾರಣೆಯಾಗಿ ಪರಿವರ್ತನೆಗೊಂಡು, ಕೊನೆಗೆ ...ಂದು ನಿಂತಿದ್ದು, 'ಮೊನ್ನೆ ಒಂದು ಹೆಣ್ಣು ಬಂದು ...ನೋ ಸುಡುಗಾಡು ಬರೀರಿ ಅಂತ ಹೇಳಿತಲ್ವ..., ...ೀವೇನಾದ್ರು ಅದಕ್ಕೆ ಮುನ್ನುಡಿ ಬರೆದಿರೋ... ...ಂದಾ ನೀವು ಬದುಕಿರ್‍ಬೇಕು ಅಥವಾ ...ಾನಿರಬೇಕು...' ಎಂದು ಹೇಳುತ್ತ ಕೈಯಲ್ಲಿದ್ದ ...ೂರುವ ಬಾಚಣಿಕೆಯನ್ನು ರಪ್ಪೆಂದು ಗೋಡೆಯ ...ೀಲಿದ್ದ ತಮ್ಮ ಮದುವೆ ಕಾಲದ ಫೋಟೋ ಪ್ರೇಮಿನ ...ೀಲೆಸೆದರು. ಫೋಟೋವನ್ನು ಎಷ್ಟೋ ವರ್ಷದಿಂದ ...ವುಚಿಹಿಡಿದಿದ್ದ ಗಾಜು ಪಳ್ಳೆಂದು ಸದ್ದು ಮಾಡಿತು.

ಖ್ಯಾತ ವಿಮರ್ಶಕರು ಹೆಂಡತಿಯ ಪ್ರಶ್ನೆಗಳಿಗೆ ತಮ್ಮ ...ಲಾದಷ್ಟು ಸಾವಧಾನದಿಂದ ಉತ್ತರಿಸಿದ್ದರೂ ಆಕೆಯ ...ೊನೆಯ ತೀರ್ಮಾನದ ಮಾತನ್ನು ಮಾತ್ರ ಅವರಿಂದ ...ಹಿಸಿಕೊಳ್ಳಲಾಗಲಿಲ್ಲ. "ಮುನ್ನುಡಿ ಬರೆಯುವುದು ...ಡುವುದು... ನನಗೆ ಬಿಟ್ಟಿದ್ದು, ನೀನದರಲ್ಲಿ ತಲೆ ಹಾಕಬೇಡ..., ನಾನು ಆ ...ಣ್ಮಗಳಿಗೆ ಬರೀತೆನೆಂದು 'ಭಾಷೆ' ಕೊಟ್ಟು ಆಗಿದೆ..." ಎಂದು ಹೇಳಿದ್ದಾರಷ್ಟೆ, ...ಲೋಚನಮ್ಮನವರಿಗೆ ಎಲ್ಲಿತ್ತೋ ಅಷ್ಟು... ಊರು ಸೀಳುವ ಸಿಟ್ಟು- ...ರಿತೀರಾ... ಬರಿತೀರಾ...? ನೋಡ್ತಿರಿ, ಆಕೆ ಕೊಟ್ಟ ಆ ಕಾಗದಗಳನ್ನೆಲ್ಲ ಒಂದು ...ರದೊಳಗೆ ಒಲೆಬಾಯಿಗೆ ಹಾಕಿ ನೀರು ಕಾಯಿಸಿ ನಾನು ಮೀಯದಿದ್ದರೆ... ನಾನು ...ೂರು ಅಂತ ಹೇಳಿ...' ಎಂದು ಚೀರುತ್ತ ಅಡುಗೆಮನೆಗೆ ನುಗ್ಗಿದ್ದರು.

ಅಂದು ಅಂದರೆ ಮೊನ್ನೆಯಿಂದ ಆ ಹೆಣ್ಮಗಳ ಹಸ್ತಪ್ರತಿಯ ಮೇಲೆ ಕಣ್ಣಾಡಿಸುತ್ತ ...ತಿದ್ದ ಖ್ಯಾತ ವಿಮರ್ಶಕರು..., ಹೊರಗೆ ಬಾನಸೀಳುವಂತೆ ಸುರಿಯುತ್ತಿದ್ದ ...ಳೆಯಲ್ಲೂ ಹೆಂಡತಿಯ ಮಾತನ್ನ ನೆನಪಿಸಿಕೊಂಡು ಬೆವರಿ ಬೆಚ್ಚಗಾಗುತ್ತಿದ್ದುದು ...ದೇ ಕಾರಣಕ್ಕೆ. ಮೊನ್ನೆಯಿಂದ ತನ್ನ ಕೈಯಲ್ಲಿದ್ದ ಹಸ್ತಪ್ರತಿಯನ್ನು ಹೆಂಡತಿಯ ಕಣ್ಣಿಗೆ ...ಣದಂತೆ ಕಾಪಿಡುತ್ತಿದ್ದ ಖ್ಯಾತ ವಿಮರ್ಶಕರು ಇಂದು ಸುರಿವ ಮಳೆಗೆ ಬೆಚ್ಚಗಿನ ...ಾಯ ಕುಡಿಯುತ್ತ... ಯಾವುದೋ ಒಂದು ತೀರ್ಮಾನಕ್ಕೆ ಬರಬೇಕೆಂದು ...ದ್ದಾಡುತ್ತಿದ್ದಾರೆ. ಆದರೆ ಅದು ಅವರಿಂದ ಸಾಧ್ಯವಾಗುತ್ತಿಲ್ಲ.

ಅಲ್ಲ... ಆ ಹೆಣ್ಮಗಳು ಬೇರೆ ಯಾರೂ ಅಲ್ಲ ಮಧುಮತಿಯ ತಂಗಿ ಕುಸುಮಾವತಿ; ...ಕೆಯ ಗದ್ಯ ಬರಹಗಳ ಹಸ್ತಪ್ರತಿ ಅದೆಷ್ಟೋ ದಿನಗಳಿಂದ ಅವರ ಪ್ರಾಣ ಹಿಂಡುತ್ತಿದೆ. ...ೀವು ಮುನ್ನುಡಿ ಬರೆಯದಿದ್ದರೆ... ಪುಸ್ತಕವನ್ನೇ ಪ್ರಕ್ಲ' ಎಂದು ಮುದ್ದು ಹಠ ಮಾಡಿ ...ತಿರುವ ಕುಸುಮಾವತಿಯ ಎದುರಿಗೆ ಖ್ಯಾತ ವಿಮರ್ಶಕರು 'ಶರಣಾಗಿ' ವಾರಗಳೇ ...ದಿವೆ. ಏನಾದರಾಗಲಿ ಆಕೆಗೆ ಬರೆಯಲೇ ಬೇಕು ಎಂಬ 'ಗಂಡಸ್ತನ' ಅವರೊಳಗೆ



ಕೆನೆಯುತ್ತಿದ್ದರೆ... 'ಆಕಾರ' ಪತ್ರಿಕೆಯ ಸಂಪಾದಕರ ಮತ್ತು ಮಡದಿಯ ಭಯ, ಅವರ 'ಗಂಡಸ್ತನ'ವನ್ನು ಮೆಟ್ಟುವಂತೆ ಮತ್ತೂ ಜೋರಾಗಿ ಕೆನೆಯುತ್ತಿದೆ!

ತಾನು 'ಮುನ್ನುಡಿ' ಬರೆಯದಿದ್ದರೆ ಮಧುಮತಿಗೆ ಆಗುವ ನೋವು, ಕುಸುಮಾವತಿಗೆ ಆಗುವ ನೋವಿಗಿಂತ ನೂರು ಪಟ್ಟು ಹೆಚ್ಚಿನದು – ಎಂಬುದನ್ನು ಬಲ್ಲ ಖ್ಯಾತ ವಿಮರ್ಶಕರು, ಮಧುಮತಿಯನ್ನಿನ್ನೂ ಅಂತರಂಗದ ಬಲಮೂಲೆಯಲ್ಲಿಟ್ಟು ನೆನಪೆಂಬ ಬತ್ತಿ ಉರಿಸಿ ಆರಾಧಿಸುತ್ತಿರುವುದರಿಂದ – 'ಮುನ್ನುಡಿ' ಬರೆದೇ ತೀರುತ್ತೇನೆಂದು ನಿರ್ಧರಿಸಿ ಮೊನ್ನೆಯೇ ಹೆಂಡತಿಯಲ್ಲಿ ವಾದ ಮಾಡಿಯೂ ಆಗಿದೆ.

ಆದರೆ ಕ್ಷಣ, ದಿನ ಕಳೆದಂತೆ, ಅವರ ನಿರ್ಧಾರದ ಬುನಾದಿ ಇಷ್ಟಿಷ್ಟೇ ಕುಸಿಯ ತೊಡಗಿದೆ. ಸಂಪಾದಕನಿಂದಾಗಿ ತನ್ನ ಮಾನವಂತೂ ವಿಪರೀತ ನಷ್ಟವಾಗಿದೆ... ಆದರೆ ಇನ್ನು ಮನೆ - ಮನದ ನೆಮ್ಮದಿಯನ್ನೂ ಶಾಶ್ವತವಾಗಿ ಅಂಗಳದಿಂದ ಕಳುಹಿಸಿ ಕೊಡುವುದೇ? ಯಾರನ್ನು ಉಳಿಸಿಕೊಳ್ಳಲಿ... ಮಧುಮತಿಯನ್ನೇ? ಮಡದಿಯನ್ನೇ? ಎಂಬ ದ್ವಂದ್ವದಲ್ಲಿ ವಿಮರ್ಶಕರು ಮುಳುಗಿ ಮೀಯುತ್ತಿರಬೇಕಾದರೆ, ಅವರಿಗೆ ಒಂದು ಕ್ಷಣ ಏನನಿಸಿತೋ ಏನೋ ಥಟ್ಟನೆ ಕೂತಲ್ಲಿಂದ ಹಸ್ತಪ್ರತಿ ಸಮೇತ ಎದ್ದು ನಿಂತವರೇ... ಕಷಾಯದ ಖಾಲಿ ಲೋಟ ಸಮೇತ ಒಳಕೋಣೆಗೆ ಬಂದವರು, ತಲೆಕವುಚಿ ಹಾಕಿ ಎರಡು ಪುಟ ಬರೆದೇಬಿಟ್ಟರು.

ಅಷ್ಟರಲ್ಲಿ ಸುಲೋಚನಮ್ಮನವರು ಮೆಣಸ್ಕಾಯಿಗೆ ಹಾಗಲಕಾಯಿ ಹಚ್ಚುತ್ತಿದ್ದವರು, ಅದನ್ನು ಹಚ್ಚಿ ಕಾಯಿತುರಿದಿಟ್ಟು, ಮಸಾಲೆ ಹುರಿವ ಕೆಲಸ ಮುಗಿಸಿ, ಬೋಳು ಸಾರೊಂದನ್ನು ಮಾಡಿಡುವಷ್ಟರಲ್ಲಿ... ಖ್ಯಾತ ವಿಮರ್ಶಕರು 'ಮುನ್ನುಡಿ'ಯನ್ನು ಜುಬ್ಬದ ಕಿಸೆಯಲ್ಲಿಟ್ಟು ಅದನ್ನು ಅಂಚೆಯ ಬಾಯಿಗಿಡಲು ಪೇಟೆಗೆ ಹೊರಟೇಬಿಟ್ಟರು.

ಆ ಭಾಷೆಗೆಟ್ಟ ಮಳೆಯ ಅಬ್ಬರಿಕೆಯ ನಡುವೆಯೇ ಕೊಡೆ ಹಿಡಿದು ಅಂಗಳವಿಳಿದ ಗಂಡನ ನಡಿಗೆಯಲ್ಲಿದ್ದ ಅವಸರವನ್ನೇ ದಿಟ್ಟಿಸುತ್ತಿದ್ದ ಸುಲೋಚನಮ್ಮನವರು, 'ಎಲ್ಲಿಗಪ್ಪ ಈ ಸವಾರಿ?' ಎಂದು ಒಂದು ಕ್ಷಣ ಯೋಚನೆಗೆ ಬಿದ್ದರೂ. ಮರುಕ್ಷಣವೇ, ಅಡುಗೆ ಮನೆಯಲ್ಲಿ ತನ್ನ ಕೈಗಂಟಿದ್ದ ಕೆಲಸವನ್ನು ಅಲ್ಲೇ ಬಿಸುಟು ಬಂದವರು ನೇರ ಗಂಡನ 'ಬರಿವ ಕೋಣೆ' ಹೊಕ್ಕಿದ್ದರು. ಹಾಗೆ ಬಂದವರೇ ಅವರು ಮೊದಲು ಕಣ್ಣು ಹಾಯಿಸಿದ್ದು ಆ ಹೆಣ್ಮಗಳ ಹಸ್ತಪ್ರತಿಗಾಗಿ. ಮಡದಿ ಹೆಚ್ಚು ಕಷ್ಟಪಡಬಾರದು ಎಂಬ ಕಾರಣಕ್ಕೋ ಏನೋ... ಖ್ಯಾತ ವಿಮರ್ಶಕರು ಅದನ್ನು ಬರೆವ ಮೇಜಿನ ಮೇಲೆಯೇ ಕಣ್ಣಿಗೆ ಕುಕ್ಕುವಂತೆಯೇ ಇರಿಸಿದ್ದರು. ಜೆರಾಕ್ಸ್ ರೂಪದಲ್ಲಿದ್ದ ಆ ಹಸ್ತಪ್ರತಿ ಕಣ್ಣಿಗೆ ಬಿದ್ದೊಡನೆ ವಿಮರ್ಶಕರ ಪತ್ನಿಯವರ ಕಣ್ಣರಳಿತ್ತು. ಥಟ್ಟನೆ ಗಿಡುಗ ಹೂಮರಿಗಳನ್ನು ಕೊಂಡೊಯ್ಯುವಂತೆ ಹಸ್ತಪ್ರತಿಯನ್ನು ಎತ್ತೊಯ್ದವರೇ ಬಚ್ಚಲು ಮನೆಯಲ್ಲಿ ಇನ್ನೂ ಸಣ್ಣಗೆ ಉರಿಯುತ್ತಿದ್ದ ಬೆಂಕಿಯ ಬಾಯಿಗಿಟ್ಟರು.

ಅತ್ತ ಕುಸುಮಾವತಿಯ 'ಮುನ್ನುಡಿ'ಯನ್ನು ರಿಜಿಸ್ಟರ್ಡ್ ಅಂಚೆಯ ಬಾಯಿಗಿಟ್ಟು ಮನೆಗೆ ಮರಳಿ ಬಂದ ವಿಮರ್ಶಕರು, ತನ್ನ ಬರಿವ ಕೋಣೆ ಹೊಕ್ಕು ನೋಡುತ್ತಾರೇನು! ಅವರ ನಿರೀಕ್ಷೆಯಂತೆ ಎಲ್ಲವೂ ನಡೆದಿದೆ. ವಿಮರ್ಶಕರು ಅಂತರಂಗದಲ್ಲಿ ನಗುತ್ತ... ಮುಖದಲ್ಲಿ ಆತಂಕವನ್ನು ಪ್ರಕಟಿಸುತ್ತ, ಜಗಲಿಯಿಂದ ಒಳಮನೆಗೆ ಎರಡೆರಡು ಬಾರಿ ಅಡ್ಡಾಡಿ ಬಂದು, ನಿಡುಸುಯ್ಲೊಂದನ್ನು ಬಿಟ್ಟು ಆರಾಮಕುರ್ಚಿಯಲ್ಲಿ ಕೂತರು. ಇದನ್ನೆಲ್ಲ ಅಡುಗೆಮನೆಯಿಂದ ಒಳಗಣ್ಣಲ್ಲೇ ಗಮನಿಸುತ್ತಿದ್ದ ಸುಲೋಚನಮ್ಮನವರು ಯಾವುದೋ ಖುಷಿಯಿಂದ ಹಾಗಲಕಾಯಿ ಮೆಣಸ್ಕಾಯಿಗೆ ಒಂದು ಗಟ್ಟಿ ಒಗ್ಗರಣೆ ಕೊಟ್ಟೇ ಬಿಟ್ಟರು. ಆ ಪರಿಮಳದಿಂದಲೇ ಖ್ಯಾತ ವಿಮರ್ಶಕರು ಮಡದಿಯ ಅಂತರಂಗವನ್ನು ವಿಮರ್ಶಿಸಿಯೇ ಬಿಟ್ಟರು - ಅದೀಗ ಮಳೆ ಸುರಿಸಿ ನಿಂತಿರುವ ನಿರ್ಮಲ ಆಕಾಶವಾಗಿದೆ ಎಂದು.

ಎಚ್. ನಾಗವೇಣಿ
ಗ್ರಂಥಪಾಲಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬



ಕಾನೂನಿನ ತೆಕ್ಕೆಗೆ ಸರ್ಕಾರಿ ಸೇವೆ



ಸರ್ಕಾರದಿಂದ ದೊರೆಯಬೇಕಾದ ಸೇವೆಗಳನ್ನು ಪಡೆಯುವುದು ನಾಗರಿಕರ ಹಕ್ಕು ಎಂಬುದರಲ್ಲಿ ಯಾವುದೆ ಸಂದೇಹವಿಲ್ಲ. ತಾವು ಪಾವತಿಸುವ ತೆರಿಗೆ ಹಣದಿಂದ ನಡೆಯುವ ಸರ್ಕಾರ ನಾಗರಿಕರದ್ದು. ಆದ್ದರಿಂದ ಸರ್ಕಾರ ನೀಡಬೇಕಾದ ಸೇವೆಯಲ್ಲಿ ದೋಷ ಕಂಡುಬಂದರೆ ಅದಕ್ಕೆ ಸೂಕ್ತ ಪರಿಹಾರ ಪಡೆಯುವುದು ಸಹ ನಾಗರಿಕರ ಹಕ್ಕು. ಆದರೆ ಈ ಅಧಿಕಾರ ದೊರೆಯದೆ ಪರಿತಪಿಸುತ್ತಿದ್ದ ಭಾರತೀಯ ನಾಗರಿಕನಿಗೆ ಸದ್ಯದಲ್ಲೇ ಈ ಹಕ್ಕು ನೀಡುವ ಕಾನೂನು ಜಾರಿಗೆ ಬರಲಿದೆ. ಕೇಂದ್ರ ಸರ್ಕಾರವು ದಿ ರೈಟ್ ಆಫ್ ಸಿಟಿಜನ್ಸ್ ಫಾರ್ ಟೈಂ ಬೌಂಡ್ ಡೆಲಿವರಿ ಆಫ್ ಗೂಡ್ಸ್ ಅಂಡ್ ಸರ್ವೀಸಸ್ ಅಂಡ್ ರಿಡ್ರೆಸಲ್ ಆಫ್ ದೇರ್ ಗ್ರೀವಿನ್ಸ್‌ಸ್ ವಿಧೇಯಕ ೨೦೧೧ಕ್ಕೆ ಅಂಗೀಕಾರ ನೀಡಿದೆ. ಸೂಕ್ಷ್ಮವಾಗಿ ಇದನ್ನು ನಾಗರಿಕ ಸನ್ನದು ವಿಧೇಯಕ ಎಂದು ಕರೆಯಲಾಗಿದೆ.

ಕೇಂದ್ರ ಸರ್ಕಾರವು ೧೯೯೭ರಲ್ಲಿ ನಾಗರಿಕ ಸನ್ನದನ್ನು ಜಾರಿಗೊಳಿಸಿತ್ತು. ಬಹುತೇಕ ಇಲಾಖೆಗಳು ಮತ್ತು ಸಂಸ್ಥೆಗಳು ತಮ್ಮದೆ ಆದ ನಾಗರಿಕ ಸನ್ನದನ್ನು ಸ್ವಯಂಪ್ರೇರಿತವಾಗಿ ರಚಿಸಿದ್ದವು. ಆದರೆ ಅದರಿಂದ ನಾಗರಿಕರಿಗೆ ಯಾವುದೆ ರೀತಿಯಲ್ಲೂ ಫಲ ದೊರೆಯಲಿಲ್ಲ. ಕಾರಣ ಇಲಾಖೆಗಳು ನಾಗರಿಕ ಸನ್ನದಿನ ಬಗ್ಗೆ ಜನರಿಗೆ ಮಾಹಿತಿ ನೀಡಲಿಲ್ಲ. ಸನ್ನದಿನಲ್ಲಿ ಹೇಳಿದಂತೆ ವಾಯಿದೆಯೊಳಗೆ ಸೇವೆ ನೀಡದಿದ್ದರೆ ಅದಕ್ಕೆ ಯಾವುದೆ ದಂಡ ವಿಧಿಸುವ ಇಲ್ಲವೆ ನಾಗರಿಕರಿಗೆ ಪರಿಹಾರ ನೀಡುವ ಅಂಶ ಸೇರಿರಲಿಲ್ಲ. ಆದ್ದರಿಂದ ನಾಗರಿಕ ಸನ್ನದು ಕೇವಲ ಪುಸ್ತಕ ಮತ್ತು ದಾಖಲೆಗಳಲ್ಲಿ ಉಳಿಯಿತು. ಇದನ್ನು ಸರಿಪಡಿಸಲು ಕೇಂದ್ರ ಸರ್ಕಾರ 'ಸೇವೋತ್ತಮ್' ಎಂಬ ಹೊಸ ಯೋಜನೆಯನ್ನು ರೂಪಿಸಿತು. ಅದೂ ಸಹ ನಾಗರಿಕರಿಗೆ ಪರಿಹಾರ ನೀಡಲಿಲ್ಲ. ಇದನ್ನು ಅರಿತ ಕೇಂದ್ರ ಸರ್ಕಾರ ಈಗ ನಾಗರಿಕ ಸನ್ನದನ್ನು ಒಳಗೊಂಡ ಕಾಯ್ದೆಯನ್ನು ಜಾರಿಗೊಳಿಸಲಿದೆ.

ಈಗಿನ ವಿಧೇಯಕದ ಪ್ರಕಾರ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ತನ್ನದೆ ಆದ ನಾಗರಿಕ ಸನ್ನದನ್ನು ಪ್ರಕಟಿಸಬೇಕು. ತಾನು ನೀಡುವ ಸೇವೆ ಅಥವಾ ಸರಕುಗಳನ್ನು ಇಂತಿಷ್ಟು ದಿನದಲ್ಲಿ ನೀಡುವ ಪ್ರಮಾಣ ಮಾಡಬೇಕು. ಸೇವೆಗಳನ್ನು ಪಡೆಯಲು ಯಾರು ಅರ್ಹರು, ಯಾವ ದಾಖಲೆಗಳನ್ನು ಸಲ್ಲಿಸಬೇಕು, ಎಷ್ಟು ಶುಲ್ಕ ಪಾವತಿಸಬೇಕು ಇತ್ಯಾದಿ ವಿವರವನ್ನು ನಾಗರಿಕ ಸನ್ನದಿನಲ್ಲಿ ಪ್ರಕಟಿಸಬೇಕು. ಸರಕುಗಳ ವಿಷಯದಲ್ಲಾದರೆ ಅದರ ಗುಣಮಟ್ಟ, ತೂಕ, ಅಳತೆ ಇತ್ಯಾದಿ ಮಾಹಿತಿ ಒದಗಿಸಬೇಕು. ಸೇವೆಗಳನ್ನು ನೀಡುವುದಕ್ಕೆ ಯಾರು ಹೊಣೆಗಾರರೋ ಅವರ ಹೆಸರು, ಹುದ್ದೆ ಇತರೆ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಚುರಪಡಿಸಬೇಕು. ಪ್ರಾಧಿಕಾರ ಮತ್ತು ಇತರೆ ಇಲಾಖೆಗಳು ನಾಗರಿಕ ಸನ್ನದನ್ನು ಪ್ರತಿ ವರ್ಷ ಅಪ್‌ಡೇಟ್ ಮಾಡಬೇಕು ಹಾಗೂ ಅದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ತಾವು ನೀಡುವ ಸೇವೆಗೆ ಸಂಬಂಧಿಸಿದ ಮಾಹಿತಿ ತರಿಸಲು ಮಾಹಿತಿ ಕೇಂದ್ರವನ್ನು ಸಹ ಸ್ಥಾಪಿಸಬೇಕು. ಜೊತೆಗೆ ಈ ಕೇಂದ್ರಗಳು ನಾಗರಿಕರ ಕುಂದುಕೊರತೆಗಳನ್ನು ನಿವಾರಿಸುವ ಕೆಲಸವನ್ನೂ ಮಾಡಬೇಕು.

ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ಕುಂದುಕೊರತೆಗಳ ನಿವಾರಣೆಗಾಗಿ ಪ್ರತ್ಯೇಕ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಈ ವಿಧೇಯಕ ಹೇಳುತ್ತದೆ. ಕೇಂದ್ರ, ರಾಜ್ಯ, ಜಿಲ್ಲೆ, ಉಪವಿಭಾಗ, ಪಂಚಾಯತ್ ಮಟ್ಟದಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವ ಮೂಲಕ ನಾಗರಿಕರ ಕುಂದುಕೊರತೆಗಳಿಗೆ ಪರಿಹಾರ ನೀಡಬೇಕು. ಈ ಅಧಿಕಾರಿಗಳ ವಿವರವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಲ್ಲಿ ತಿಳುವಳಿಕೆ ನೀಡಬೇಕು. ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ಕುಂದುಕೊರತೆ ನಿವಾರಣಾ ಅಧಿಕಾರಿಯ ವಿವರವನ್ನು ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು.

ನಾಗರಿಕರು ದೂರು ನೀಡಲು ಬಂದಾಗ ಅವರಿಗೆ ಎಲ್ಲ ರೀತಿಯ ಸಹಕಾರ, ಸಹಾ[...] ನೀಡುವುದು ದೂರು ನಿವಾರಣಾ ಅಧಿಕಾರಿಯ ಜವಾಬ್ದಾರಿ. ಒಂದು ವೇಳೆ ದೂ[...] ನೀಡಲು ಬಂದವರು ಅನಕ್ಷರಸ್ಥರಾದಲ್ಲಿ ಅವರ ದೂರನ್ನು ಲಿಖಿತರೂಪ[...] ಇಳಿಸುವುದು ಸಹ ದೂರು ನಿವಾರಣಾ ಅಧಿಕಾರಿಯ ಕೆಲಸ.

ಜನರ ದೂರುಗಳನ್ನು ಯಾವ ರೀತಿ ಪರಿಹರಿಸಬೇಕು ಎಂಬುದನ್ನು ನಿಯಮದ[...] ವಿವರಿಸಲಾಗುವುದು. ಉದಾಹರಣೆಗೆ ಪ್ರತಿಯೊಂದು ದೂರನ್ನು ಗರಿಷ್ಠ ೫[...] ದಿನಗಳಲ್ಲಿ ಇತ್ಯರ್ಥಗೊಳಿಸಬೇಕು. ಯಾವ ಅಧಿಕಾರಿ ಈ ಕುಂದುಕೊರತೆಗೆ ಕಾರ[...] ಎಂಬುದನ್ನು ಗುರುತಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಿಸಿಗ್ನೇಟ[...] ಅಧಿಕಾರಿಗೆ ಸಲಹೆ ನೀಡಬೇಕು. ಸೇವೆ ಅಥವಾ ಸರಕನ್ನು ಸಮಯಕ್ಕೆ ಸರಿಯಾ[...] ಪೂರೈಸದ ಅಧಿಕಾರಿಯ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ, ೧೯೮೮ರ ಪ್ರಕಾರ ಕ್ರ[...] ಕೈಗೊಳ್ಳುವಂತೆ ಹಾಗೂ ದಂಡ ವಿಧಿಸುವಂತೆ ಸೂಚನೆ ನೀಡಬಹುದಾಗಿದೆ. ಇದಲ್ಲ[...] ಸಮಯಕ್ಕೆ ಸರಿಯಾಗಿ ಸೇವೆ ಅಥವಾ ಸರಕು ದೊರೆಯದ ನಾಗರಿಕರಿಗೆ ಪರಿಹಾ[...] ನೀಡಿ ಅದರ ಮೊತ್ತವನ್ನು ತಪ್ಪಿತಸ್ಥ ಅಧಿಕಾರಿಯ ಸಂಬಳದಿಂದ ಮುರಿದುಕೊಳ್ಳ[...] ಸೂಚನೆಯನ್ನೂ ನೀಡಬಹುದು. ಒಂದು ವೇಳೆ ದೂರು ನಿವಾರಣಾ ಅಧಿಕಾ[...] ನಿಗದಿತ ವಾಯ್ದೆಯಲ್ಲಿ ದೂರನ್ನು ಕೈಗೆತ್ತಿಕೊಂಡು ಪರಿಹಾರ ನೀಡದಿದ್ದ[...] ನಾಗರಿಕರು ನೇರವಾಗಿ ಮೇಲ್ಮನವಿ ಸಲ್ಲಿಸಬಹುದು. ಅದಕ್ಕಾಗಿ ಒಬ್ಬ ನಿದಿ[...] ಅಧಿಕಾರಿ ಡೆಸಿಗ್ನೇಟೆಡ್ ಅಥಾರಿಟಿಯನ್ನು ನೇಮಕ ಮಾಡಲಾಗುತ್ತದೆ. ಡೆಸಿಗ್ನೇಟೆ[...] ಅಧಿಕಾರಿಗೆ ಕೆಲವೊಂದು ವಿಷಯಗಳಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರು[...] ಅಧಿಕಾರವನ್ನು ನೀಡಲಾಗಿದೆ. ತಮಗೆ ಸಲ್ಲಿಸಿದ ಮೇಲ್ಮನವಿಯನ್ನು ೩೦ ದಿನಗಳ[...] ಇತ್ಯರ್ಥಗೊಳಿಸುವುದು ಅಥಾರಿಟಿಯ ಜವಾಬ್ದಾರಿ.

ಡೆಸಿಗ್ನೇಟೆಡ್ ಅಥಾರಿಟಿ ನೀಡುವ ತೀರ್ಪು ಸಮಾಧಾನ ತರದಿದ್ದಲ್ಲಿ, ನಾಗರಿಕ[...] ಮತ್ತೊಂದು ಮೇಲ್ಮನವಿ ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಮತ್ತು ರಾ[...] ಮಟ್ಟದಲ್ಲಿ ಸಾರ್ವಜನಿಕ ಕುಂದುಕೊರತೆ ನಿವಾರಣಾ ಆಯೋಗವ[...] ಸ್ಥಾಪಿಸಲಾಗುವುದು. ಹೆಚ್ಚು ಕಡಿಮೆ ಮಾಹಿತಿ ಆಯೋಗವನ್ನು ಹೋಲುವ [...] ಆಯೋಗಗಳು ನಿವೃತ್ತರಾಗುವ ಸರ್ಕಾರಿ ಅಧಿಕಾರಿಗಳಿಗೆ ಪುನರ್ವ[...] ಕೇಂದ್ರಗಳಾಗಲಿವೆ. ಈ ಎರಡೂ ಆಯೋಗಗಳ ಸಂರಚನೆ, ಅದಕ್ಕೆ ಆಯುಕ್ತರ[...] ನೇಮಕ ಮಾಡುವ ವಿಧಾನ, ಅರ್ಹತೆ, ಸಂಬಳ, ಭತ್ಯೆ, ಸ್ಥಾನಮಾನ ಇತ್ಯಾ[...] ಗಮನಿಸಿದರೆ ಇದು ಅಧಿಕಾರಿಶಾಹಿಯ ಹಿತವನ್ನು ಕಾಪಾಡುವುದಕ್ಕಾಗಿಯ[...] ರಚಿಸಲಾಗಿದೆ ಎಂಬ ಗುಮಾನಿ ಬಂದರೆ ಆಶ್ಚರ್ಯವಿಲ್ಲ. ಜಿಲ್ಲಾ ನ್ಯಾಯಾಧೀಶ[...] ಹೈಕೋರ್ಟ್ ನ್ಯಾಯಾಧೀಶರು ಮತ್ತು ಸಾರ್ವಜನಿಕ ಸೇವೆಯಲ್ಲಿ ನಿರತರಾದವರು [...] ಪದವಿಗೆ ಅರ್ಹರು. ರಾಜ್ಯ ಆಯುಕ್ತರಿಗೆ ಮುಖ್ಯ ಕಾರ್ಯದರ್ಶಿಯ ಸ್ಥಾನಮಾ[...] ಮತ್ತು ಮುಖ್ಯ ಆಯುಕ್ತರಿಗೆ ಚುನಾವಣಾ ಆಯುಕ್ತರ ಸ್ಥಾನಮಾನ ನೀಡಲಾಗಿದೆ. [...] ಆಯೋಗಗಳಿಂದ ನಾಗರಿಕರ ಕುಂದುಕೊರತೆ ನಿವಾರಣೆಯಾಗುವುದಕ್ಕಿಂತ ಹೆಚ್ಚಾ[...] ಆಯೋಗ ಮತ್ತು ಅದರ ಖರ್ಚುವೆಚ್ಚ ನಾಗರಿಕರಿಗೆ ಹೊರೆಯಾಗುವುದರ[...] ಯಾವುದೆ ಸಂಶಯವಿಲ್ಲ. ಇದರ ಬದಲು ಈಗಿರುವ ಗ್ರಾಹಕ ವೇದಿಕೆಗಳ[...] ಬಲಪಡಿಸಿ, ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಸರ್ಕಾರಿ ಸೇವೆಯ[...] ಸೇರಿಸಿದ್ದರೆ ಸಾಕಾಗುತ್ತಿತ್ತು.

ವೈ. ಜಿ. ಮುರಳೀಧರ
ನಂ. ೨೪೯, ೫ನೇ 'ಸಿ' ಮುಖ್ಯರಸ್ತೆ, ರೆಂಕೊ ಬಡಾವಣೆ
ಹಂಪಿನಗರ, ಬೆಂಗಳೂರು - ೫೬೦ ೧೦೪

ಸರ್ಪಲೋಕದ ಸಂಶೋಧನೆಗಳು ನಡೆದು ಬಂದ ದಾರಿ



ೆರೆದ ಮನಸ್ಸಿನಿಂದ ಅವಲೋಕಿಸಿದಾಗ ರ್ಪಗಳಿಂದಾಗುವ ಕೇಡಿಗಿಂತ ಉಪಯೋಗವೇ ೆಚ್ಚೆಂದು ಕಂಡುಬರುತ್ತದೆ. ಹಾವುಗಳು ವಿಷಪೂರಿತ ಮಾತ್ರ) ಕಡಿದಾಗ ಮಾನವರ ಲಿಯಾಗುವುದು ಸತ್ಯವಾದರೂ, ಅದೇ ಾವುಗಳಿಂದ ಇಡೀ ಮಾನವ ಕುಲಕ್ಕೆ ಎಂತಹ ್ರಯೋಜನ ಎಂಬುದು ಸಂಶೋಧನೆಗಳಿಂದ ಾತ್ರ ಮನನ ಮಾಡಲು ಸಾಧ್ಯ. ರೈತ ಕುಲಕ್ಕೆ ುಹಾಮಾರಿಯಾಗಿರುವ ಮೂಷಿಕ ಸಂತತಿಯನ್ನು ತೋಟಿಯಲ್ಲಿಡಲು ಕೇವಲ ಸರ್ಪ ಂಕುಲದಿಂದ ಮಾತ್ರ ಸಾಧ್ಯವೆನ್ನುವುದು ಸತ್ಯ. ಲ್ಲದೆ ಹಾವುಗಳಲ್ಲಿರುವ ವಿಷದಿಂದ ಪ್ರತಿ ಷವೂ (ಆಂಟಿ ವೆನಮ್) ಸೇರಿದಂತೆ ಅನೇಕ ೀವರಕ್ಷಕ ಔಷಧಿಗಳನ್ನು ತಯಾರಿಸಬಹುದೆಂದು ನೇಕರಿಗೆ ತಿಳಿದಿರದ ಸೋಜಿಗದ ಸಂಗತಿ.



ಡಿ. ಆರ್. ಪ್ರಹ್ಲಾದ್

ನಮ್ಮ ಸಮಾಜದ ದೃಷ್ಟಿಯಲ್ಲಿ ಸರ್ಪಗಳು ಒಂದು ಅಪಾಯಕಾರಿ ಹಾಗೂ ಯಾವುದೇ ಉಪಯೋಗಲ್ಲದ ಜೀವಿಗಳು. ಅವುಗಳನ್ನು ಕಂಡೊಡನೆ ಕೊಲ್ಲುವುದು ಅಥವಾ ಕೆಲವಾರು ಸಂದರ್ಭಗಳಲ್ಲಿ ಪರಿಣತರ ಸಹಾಯದಿಂದ ಹಿಡಿಸಿ ಕೈ ತೊಳೆದುಕೊಳ್ಳುವುದು ತೀರಾ ಸಾಮಾನ್ಯ ಸಂಗತಿ. ಈ ರೀತಿಯ ಹಿನ್ನೆಲೆಯಲ್ಲಿ ಯೋಚಿಸಿದಾಗ ಸರ್ಪಲೋಕದ ಬಗ್ಗೆ ಸಂಶೋಧನೆ, ವೈಜ್ಞಾನಿಕ ಸಂಶೋಧನೆ, ಎಷ್ಟು ನಡೆದಿದೆ ಎಂಬ ಜಿಜ್ಞಾಸೆ ಮೂಡುತ್ತದೆ. ಹಾಗಾದರೆ ಇದು ನಿರ್ಲಕ್ಷಿಸಬೇಕಾದ ವಿಷಯವೇ ?


ಪ್ರಕೃತಿಯಲ್ಲಿ ಸೃಷ್ಟಿಯಾಗಿರುವ ಪ್ರತಿಯೊಂದು ಜೀವಿಯೂ (ಬಹುಶಃ ಮಾನವನನ್ನು ಹೊರತುಪಡಿಸಿ) ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಕೊಡುಗೆಯನ್ನು ನೀಡುತ್ತಲೇ ಬಂದಿವೆ. ತೆರೆದ ಮನಸ್ಸಿನಿಂದ ಅವಲೋಕಿಸಿದಾಗ ಸರ್ಪಗಳಿಂದಾಗುವ ಕೇಡಿಗಿಂತ ಉಪಯೋಗವೇ ಹೆಚ್ಚೆಂದು ಕಂಡು ಬರುತ್ತದೆ. ಹಾವುಗಳು (ವಿಷಪೂರಿತ ಮಾತ್ರ) ಕಡಿದಾಗ ಮಾನವರ ಬಲಿಯಾಗುವುದು ಸತ್ಯವಾದರೂ, ಅದೇ ಹಾವುಗಳಿಂದ ಇಡೀ ಮಾನವ ಕುಲಕ್ಕೆ ಎಂತಹ ಪ್ರಯೋಜನ ಎಂಬುದು ಸಂಶೋಧನೆಗಳಿಂದ ಮಾತ್ರ ಮನನ ಮಾಡಲು ಸಾಧ್ಯ. ರೈತ ಕುಲಕ್ಕೆ ಮಹಾಮಾರಿಯಾಗಿರುವ ಮೂಷಿಕ ಸಂತತಿಯನ್ನು ಹತೋಟಿಯಲ್ಲಿಡಲು ಕೇವಲ ಸರ್ಪ ಸಂಕುಲದಿಂದ ಮಾತ್ರ ಸಾಧ್ಯವೆನ್ನುವುದು ಸತ್ಯ. ಅಲ್ಲದೆ ಹಾವುಗಳಲ್ಲಿರುವ ವಿಷದಿಂದ ಪ್ರತಿ ವಿಷವೂ (ಆಂಟಿ ವೆನಮ್) ಸೇರಿದಂತೆ ಅನೇಕ ಜೀವರಕ್ಷಕ ಔಷಧಿಗಳನ್ನು ತಯಾರಿಸಬಹುದೆಂಬುದು ಅನೇಕರಿಗೆ ತಿಳಿದಿರದ ಸೋಜಿಗದ ಸಂಗತಿ. ಈ ಎಲ್ಲಾ ಕಾರಣಗಳಿಂದ ಸರ್ಪಲೋಕದಲ್ಲಿ ಅಡಗಿರುವ ಪ್ರಯೋಜನಕಾರಿ ಅಂಶಗಳ ಬಗ್ಗೆ ವೈಜ್ಞಾನಿಕ ಸಂಶೋಧನೆಗಳು ಅತ್ಯಗತ್ಯ.

ಎಂಬತ್ತರ ದಶಕದ ಹಿಂದೆ ನಡೆದ ಸಂಶೋಧನೆಗಳು ಬಹುಮಟ್ಟಿಗೆ ಮನುಕುಲವನ್ನು ಉಳಿಸಿಕೊಳ್ಳುವ ಪ್ರತಿ ವಿಷದ ತಯಾರಿಕೆ ಹಾಗೂ ಕೆಲವೇ ಕೆಲವು ಔಷಧಿಗಳ ಬಗ್ಗೆ ಸೀಮಿತಗೊಂಡಿದ್ದವು (ಭಾರತದ ಹಿನ್ನೆಲೆಯಲ್ಲಿ). ಇದನ್ನು ಹೊರತುಪಡಿಸಿ, ನಡೆದ ಆಳವಾದ ಅಧ್ಯಯನಗಳು ಸಾರ್ವಜನಿಕವಾಗಿ ಬೆಳಕು ಕಾಣಲೇ ಇಲ್ಲ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಸಂಗತಿಯೆಂದರೆ, ನಮ್ಮ ದೇಶ ಸರ್ಪಸಂಕುಲದ ವಿವಿಧತೆಗೆ, ಅವುಗಳ ವೃದ್ಧಿಗೆ ನೈಸರ್ಗಿಕವಾಗಿ ಪೂರಕವಾದ ನಾಡು. ಇಲ್ಲಿನ ಹವಾಮಾನ, ವೈವಿಧ್ಯಮಯ ಭೂ ಪ್ರದೇಶ ಹಾಗೂ ಯಥೇಚ್ಛವಾಗಿ ಪೂರೈಕೆಯಾಗುವ ಆಹಾರ ಸರಪಳಿ ಸರ್ಪಗಳ ಅನೇಕ ಪ್ರಭೇದಗಳ ಉಗಮಕ್ಕೆ ಕಾರಣವಾಗಿದೆ. ಕ್ರಮೇಣ ಮಾನವನ ಸ್ವಾರ್ಥ ಹಾಗೂ ವ್ಯಾಪಾರೀ ಮನೋಭಾವಕ್ಕೆ ಅನೇಕ ಪ್ರಭೇದಗಳು ನಶಿಸಿಹೋದವು, ಈಗ ಹಲವಾರು ಹಾವುಗಳ ಛಾಯಾಚಿತ್ರಗಳೂ ಲಭ್ಯವಿಲ್ಲ. ಇದಕ್ಕೆ ಕಾರಣ ಹಾವಿನ ಚರ್ಮಕ್ಕಾಗಿ ಮಾನವ ನಡೆಸಿದ ಕ್ರೂರ ನಿರಂತರ ಬೇಟೆ ಎಂದರೆ ತಪ್ಪಾಗಲಾರದು. ಮಹಿಳೆಯರು ಉಪಯೋಗಿಸುವ ಜಂಭದ ಚೀಲ (ವ್ಯಾನಿಟಿ ಬ್ಯಾಗ್) ಹಾಗೂ ಪುರುಷರ ಸೊಂಟಪಟ್ಟಿ ತಯಾರಿಕೆಗಾಗಿ ಲಕ್ಷಾಂತರ ಸರ್ಪಗಳ ಮಾರಣ ಹೋಮ ನಡೆಸಿದ್ದಾನೆ ಹೇಯ ಮಾನವ.

೧೯೭೨ರ ವನ್ಯಜೀವಿ ಕಾಯ್ದೆ ಜಾರಿಗೆ ಬಂದ ನಂತರ ಇಂತಹ ಹೇಯ ಕೃತ್ಯ ಪೂರ್ಣವಲ್ಲದಿದ್ದರೂ ಒಂದು ಹಂತದ ಮಟ್ಟಿಗೆ ನಿಗ್ರಹಗೊಂಡಿದೆ. ಹೀಗೆ ಕಳೆದುಕೊಂಡಿರುವ ಪ್ರಭೇದಗಳ ಪುನರುಜ್ಜೀವನದ ನಿಟ್ಟಿನಲ್ಲಿ ಸಂಶೋಧನೆ ನಡೆಯಬೇಕಿದೆ.

ಈವರೆಗೆ ಹಲವಾರು ವೈದ್ಯಕೀಯ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ಈ ವಿಷಯದ ಬಗ್ಗೆ ನಡೆಸಿರುವ ಸಂಶೋಧನೆಗಳು ಬಹುಪಾಲು ಸ್ನಾತಕೋತ್ತರ ಅಥವಾ ಪಿಎಚ್.ಡಿ. ಪದವಿಗಾಗಿ ತಯಾರಿಸುವ ಪ್ರಬಂಧಗಳಿಗಷ್ಟೇ ಸೀಮಿತವಾಗಿವೆ. ಈ ರೀತಿಯ ಅಧ್ಯಯನಗಳಿಂದ ಬೆಳಕು ಕಂಡ ವಿಷಯಗಳು ತದನಂತರದ ಸಂಶೋಧನೆಗೊಳಪಡದೆ ದುರ್ಬಲವಾಗಿಬಿಡುತ್ತವೆ ಹಾಗೂ ವೈದ್ಯಕೀಯವಾಗಿ ಮನುಕುಲದ ಸೇವೆಗೆ ಅಲಭ್ಯವಾಗುತ್ತವೆ. ಕೆಲವು ಉನ್ನತ ವ್ಯಾಸಂಗದ ಸಂಸ್ಥೆಗಳು ಈ ರೀತಿಯ ವಿಷಯಗಳನ್ನು ಉಪೇಕ್ಷಿಸಿಬಿಡುತ್ತವೆ, ಏಕೆಂದರೆ, ಇಂತಹ ಸಂಶೋಧನೆಗಳಿಗೆ ವಿದೇಶಗಳಲ್ಲಿರುವಂತೆ ಸಾಕಷ್ಟು ಹಣಕಾಸಿನ (ವೆಂಚರ್ ಕ್ಯಾಪಿಟಲ್) ಹಾಗೂ ಮೂಲಭೂತ ಸೌಕರ್ಯಗಳು ಇಲ್ಲಿ ಸಿಗುತ್ತಿಲ್ಲ. ಕೆಲವು ವಿದೇಶೀಯರು ಇಲ್ಲಿಗೆ ಬಂದು ಆಳವಾದ ಅಧ್ಯಯನ ನಡೆಸಿ ಅದರ ಫಲವನ್ನು ತಮ್ಮ ದೇಶಗಳಿಗೆ ಕೊಂಡೊಯ್ದಿದ್ದಾರೆ. ಉದಾಹರಣೆಗೆ ಸಹಸ್ರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಕಾಣಸಿಗುವ 'ಮಂಡಲದ ಹಾವು' ವಿಶ್ವದಾದ್ಯಂತ ಗುರುತಿಸಲ್ಪಡುವುದು ರಸೆಲ್ ಎಂಬ ಬ್ರಿಟಿಷ್ ಅಧಿಕಾರಿಯ ಹೆಸರಿನಿಂದ. ರಸೆಲ್ ಹುಟ್ಟುವ ಎಷ್ಟೋ ವರ್ಷದ ಹಿಂದೆ ಪ್ರಾಚೀನ ಚಾಮುಂಟಿಕಾ ಲಘು ನಿಘಂಟಿನಲ್ಲಿ ಈ ಹಾವಿನ ಪ್ರಸ್ತಾಪವಿದೆ. ಹೀಗಾಗಿ, ಈ ದೃಷ್ಟಿಯಿಂದಲೂ ಅಧ್ಯಯನಗಳು ನಡಯಬೇಕಿವೆ.

ಈವರೆಗೆ ಗಣನೀಯವಾಗಿ ಅಧ್ಯಯನ ನಡೆದಿರುವ ವಿಷಯಗಳೆಂದರೆ ಹಾವುಗಳ ಪ್ರಭೇದಗಳ ಗುರುತಿಸುವಿಕೆ ಹಾಗೂ ಅದರ ವಿಷದ ಪರಿಣಾಮಗಳನ್ನು ಯಶಸ್ವಿಯಾಗಿ ನಿಯಂತ್ರಿಸುವುದರ ಬಗ್ಗೆ ಮಾತ್ರ. ಈ ವಿಷಯದಲ್ಲಿಯೂ ಸಹ ಅಧ್ಯಯನ ನಡೆಸಿರುವುದು 'ಈಗಿನ ಭಾರತೀಯ' ಅಂದಿನ ಅಮೆರಿಕಾ ಸಂಜಾತ ರೋಮುಲಸ್ ವ್ಹಿಟೇಕರ್ ಹಾಗೂ ಅವರ ತಂಡ, ಮತ್ತೆ ಕೆಲವು ಬೆರಳೆಣಿಕೆಯ ಮಂದಿ. ಉಳಿದ ವಿಜ್ಞಾನಿಗಳಿಗೆ ಅಂತಹ ಆಸಕ್ತಿ ಇದ್ದಂತೆ ಕಾಣುವುದಿಲ್ಲ. ಇನ್ನು ವೈಯಕ್ತಿಕವಾಗಿ ಸಂಶೋಧನೆ ನಡೆಸಬಯಸಿದವರಿಗೆ ಅರಣ್ಯ ಕಾಯ್ದೆ ಹಾಗೂ ಸಿಬ್ಬಂದಿ ನಿರಂತರ ಕಿರುಕುಳ ನೀಡುತ್ತಲೇ ಇರುತ್ತಾರೆ. ಹಾಗಾಗಿ ಅನೇಕ ವನ್ಯಜೀವಿ ತಜ್ಞರು ಸಹ ಈ ವಿಷಯದ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಇನ್ನು ದೊಡ್ಡ ಪ್ರಾಣಿಗಳಾದ ಹುಲಿ, ಚಿರತೆ, ಆನೆ ಹಾಗೂ ಕರಡಿಗಳ ಬಗ್ಗೆ ಅಧ್ಯಯನ ನಡೆಸಿದರೆ ಹಣ, ಹೆಸರು ಹಾಗೂ ಸಾಮಾಜಿಕ ಅನುಮೋದನೆ ಹೇರಳವಾಗಿ ಸಿಗುತ್ತದೆ. ಸಾರ್ವಜನಿಕ ವಲಯದಿಂದ ಈ ರೀತಿಯ ನಿರೀಕ್ಷೆ ಮೂಢತನವಾಗುತ್ತದೆ.



ಅಧ್ಯಯನ ನಡೆಯಬೇಕಿರುವ ವಸ್ತು ವಿಷಯಗಳು

೧. ಪುನರ್ವಸತಿಗೊಂಡ ಸರ್ಪಗಳು ಹೊಸ ಪರಿಸರದಲ್ಲಿ ಎದುರಿಸುವ ಕ್ಷೇತ್ರ ಪ್ರಾಬಲ್ಯದ ಹೋರಾಟ, ಆಹಾರ ಪೂರೈಕೆ ಹಾಗೂ ಸಂತಾನಾಭಿವೃದ್ಧಿಗೆ ಸಂಗಾತಿಯ ಲಭ್ಯತೆ ಮುಂತಾದವುಗಳು.

೨. ಹಾವಿನ ವಿಷ ಕೇವಲ ಮಾರಣಾಂತಿಕವಾಗಿರದೆ ಔಷಧೀಯ ಗುಣಗಳನ್ನು ಸಹ ಹೊಂದಿರುವ ವಿಷಯ ಸರ್ವವಿದಿತ. ಹಾಗಾಗಿ ಹಾವಿನ ವಿಷದ ಸಂಕೀರ್ಣ ರಾಸಾಯನಿಕಗಳ ಬಗ್ಗೆ ಬಹಳ ಸಂಶೋಧನೆಗಳು ನಡೆಯಬೇಕಿವೆ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಜೈವಿಕ ರಸಾಯನ ವಿಭಾಗದ ಮುಖ್ಯಸ್ಥರಾದ ಡಾ|| ಬಿ. ಎಸ್. ವಿಶ್ವನಾಥ್ ಹಾಗೂ ಅವರ ಸಹೋದ್ಯೋಗಿ ಡಾ|| ಸಿ. ಡಿ. ರಾಘವೇಂದ್ರ ಗೌಡ ಬಹಳ ಉಪಯೋಗಿ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಹಾವಿನ ವಿಷದ ಗ್ರಂಥಿಗಳ ವಿಕಸನದಿಂದ ಹಿಡಿದು ಅನೇಕ ವೈದ್ಯಕೀಯ ಮಹತ್ವ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ಅಲ್ಲದೆ ಅ ವಿಭಾಗದ ಅನೇಕ ಸದಸ್ಯರುಗಳು ಹಾವಿನ ಕಡಿ ಸಾಮಾನ್ಯವಾಗಿ ನೀಡುವ ಪ್ರತಿ ವಿಷದ ಬದಲ ಹಲವಾರು ಪಾರಂಪರಿಕ ಆಯುರ್ವೇದ ಔಷಧಿಗ ಮತ್ತು ಗಿಡಮೂಲಿಕೆಗಳನ್ನು ಉಪಯೋಗಿಸಿಕೊಂ ಗುಣಪಡಿಸುವ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದಾ ಸಾಮಾನ್ಯವಾಗಿ ಹಾವಿನ ಕಡಿತ ವಾದಾಗ ಪ್ರತಿ ವಿಷ ನೀ ಜೀವ ಉಳಿಸಬಹುದು. ಆದರೆ ಕಚ್ಚಿದ ಜಾಗದ ಉಂಟಾಗುವ ವ್ರಣ (ನೆಕ್ರೋಸಿಸ್) ಹಲವು ವಾ ಗಳಿಂದ ಹಿಡಿದು ಅನೇಕ ವರ್ಷಗಳವರೆಗೆ ಕಾಡುತ್ತದೆ. ಕೆಲವೊಂದು ಪ್ರಸಂಗಗಳ ಕೊಳೆತ ಅಂಗಚ್ಛೇದನ ಕೂಡ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲ ಗಿಡಮೂಲಿಕೆ ಹಾಗೂ ಇನ್ನಿತರ ವೈದ್ಯಕೀಯ ಪದ್ಧತಿಗಳು ಸಹಾಯಕಾರಿಯಾಗಿ ಹಾಗಾಗಿ ಈ ನಿಟ್ಟಿನಲ್ಲಿ ಬಹಳಷ್ಟು ಅಧ್ಯಯನ ನಡೆದಿದೆ ಹಾಗೂ ನಿರಂತರವಾ ನಡೆಯಬೇಕಿದೆ. ಒಟ್ಟಾರೆ ಕೂಲಂಕಷವಾಗಿ ಸರ್ಪಸಂಕುಲ, ವಿಷ ಹಾಗೂ ಅದ ಔಷಧೀಯ ಗುಣಗಳು, ಸರ್ಪಗಳಿಂದ ಮಾನವರಿಗೆ ಆಗಬಹುದಾದ ಇನ್ನು ಪ್ರಯೋಜನಗಳ ಬಗ್ಗೆ ಅಧ್ಯಯನ ನಡೆಯಬೇಕಿದೆ. ಈ ಪ್ರಕ್ರಿಯೆಯಲ್ಲಿ ಸರ್ಕಾ ಅರಣ್ಯ ಇಲಾಖೆ, ವಿಜ್ಞಾನಿಗಳ ಸಮೂಹ ಹಾಗೂ ಸಾರ್ವಜನಿಕರು ಕೈ ಜೋಡಿಸಿ ಉತ್ತಮ ಪರಿಣಾಮಗಳನ್ನು ಬೆಳಕಿಗೆ ತಂದು ಮನುಕುಲದ ಕಲ್ಯಾಣಕ್ಕೆ ಕೊಡು ನೀಡಬಹುದು. ನಮ್ಮ ವಿದ್ಯಾವಂತ ಹಾಗೂ ಪ್ರಜ್ಞಾವಂತ ಸಮಾಜದಿಂದ ಇಂತ ಅಮೂಲ್ಯ ಕಾಣಿಕೆ ಸಿಗಬಹುದೆಂದು ನಿರೀಕ್ಷಿಸೋಣ.

ಡಿ. ಆರ್. ಪ್ರಹ್ಲಾದ್
ನಂ. ೮೨/೨, ೧೮ನೇ ತಿರುವು, ಮಲ್ಲೇಶ್ವರ
ಬೆಂಗಳೂರು - ೫೬೦ ೦೫೫

ಸಿ. ಆರ್. ಕೃಷ್ಣರಾವ್

ಅಮೆರಿಕ ಪ್ರವಾಸ: ದುಬಾರಿ ಶಸ್ತ್ರಚಿಕಿತ್ಸೆ

ಹತ್ತು ವರ್ಷಗಳ ನಂತರ ಅಮೆರಿಕಾಗೆ ಮತ್ತೆ ಪ್ರಯಾಣ. ಮನಸ್ಸು, ದೇಹ ರಡೂ ಈ ಪ್ರವಾಸಕ್ಕೆ ಸಿದ್ಧವಿರಲಿಲ್ಲ. ನನ್ನ ಮಡದಿಗಂತೂ ಸುತರಾಂ ಷ್ಟವಿರಲಿಲ್ಲ. ಮಗಳು, ಮೊಮ್ಮಕ್ಕಳ ವ್ಯಾಮೋಹದ್ದೇ ಮೇಲುಗೈಯಾಯಿತು. ೀಗಾಗಿ ಅನಿವಾರ್ಯ. ಈ ವರ್ಷ ಅವರ್‍ಯಾರೂ ಇಲ್ಲಿಗೆ ಬರುವುದಿಲ್ಲ ಎಂದು ಚಿತವಾಗಿ ಹೇಳಿದ ಮೇಲೆ ಪ್ರಯಾಣಕ್ಕೆ ಸಿದ್ಧತೆ ಮಾಡಿಕೊಂಡೆವು. ಎಲ್ಲವೂ ೊದಲಿಂದ ಶುರು. ಅಗತ್ಯವಾದ ವೀಸಾ ಪಡೆಯಲು ಚೆನ್ನೈಗೆ ಪ್ರಯಾಣ. ರಳಚ್ಚು ಬೇರೆ. ವಯಸ್ಸಾಗಿದ್ದುದರಿಂದ ನನಗೆ ಇದರಿಂದ ವಿನಾಯಿತಿ. ದಿನೆಂಟು ಗಂಟೆಗಳ ಸುದೀರ್ಘ ವಿಮಾನಯಾನ, ನಡುವೆ ಆರೆಂಟು ಗಂಟೆಗಳ ಯಾಣ ನಿಜಕ್ಕೂ ಪ್ರಯಾಸಕರ. ಅಂತೂ ಅಮೆರಿಕ ತಲುಪಿದೆವು.

ಮಗಳು ಅಳಿಯ ಇರುವ ಡೆಟ್ರಾಯಿಟ್ ನಗರದಲ್ಲಿ ಕಾರುಗಳದ್ದೇ ಕಾರುಬಾರು. ರುಗಳ ತಯಾರಿಕೆಗೆ ತವರು. ಮೂರೂ ಋತುಮಾನಗಳನ್ನು ಹೊಂದಿರುವ ಂದರ ನಗರ. ನಾಲ್ಕೈದು ತಿಂಗಳ ಸಖತ್ ಛಳಿಗಾಲ, ವಸಂತದ ಚಿಗುರಿನ ಕಾಲ, ತ್ತೆ ಬೇಸಿಗೆ. ಮೂರೂ ಕಾಲಗಳನ್ನು ಅನುಭವಿಸುವ ಕಾಣುವ ಅದೃಷ್ಟ ನ್ನದಾಗಿತ್ತು. ಛಳಿಗಾಲದ ಹಿಮಪಾತ ತಡೆದುಕೊಳ್ಳುವುದು ನಮ್ಮಂಥವರಿಗೆ ತುಂಬ ಷ್ಟ. ನೋಡುವುದಕ್ಕೆ ಅಂದ. ಎಲ್ಲೆಲ್ಲೂ ಬಿಳುಪು, ಹಿಮದ ರಾಶಿ. ಈ ಛಳಿಗಾಲ ಪ್ರಾರಂಭವಾಗುವುದಕ್ಕೆ ಮುನ್ನ, 'ಫಾಲ್ ಸೀಸನ್' ಎಂದು ಅವರು ಕರೆಯುವ ಆ ನಗಳು ಹಿತವಾದ ಛಳಿ ಹಾಗೂ ಮನಮೋಹಕ ದೃಶ್ಯಗಳಿಂದ ಕೂಡಿರುತ್ತವೆ. ಡಮರಗಳ ಎಲೆಗಳೆಲ್ಲ ಹಳದಿ, ಕೆಂಪು ಮೊದಲಾದ ವರ್ಣಗಳಿಂದ ಂಗೊಳಿಸುತ್ತವೆ. ಮಧ್ಯೆ ಮಧ್ಯೆ ಹಸಿರೂ ಕಾಣುತ್ತದೆ. ನಾನಾ ಬಗೆಯ ಹಕ್ಕಿಗಳು, ಗ್ಗಣಗಳಂತೆ ದಪ್ಪ ಮೈಹೊತ್ತ ಅಳಿಲುಗಳು, ಮೊಲಗಳು ಮೊದಲಾದ ಪ್ರಾಣಿ ಕ್ಷಿಗಳೆಲ್ಲ ಛಳಿಗಾಲಕ್ಕೆ ಅಗತ್ಯವಾದ ಆಹಾರ ಸಂಗ್ರಹದಲ್ಲಿ ತೊಡಗಿರುತ್ತವೆ. ಊರು ಂಥ ದೊಡ್ಡದಲ್ಲದಿದ್ದರೂ ವಿಶಾಲವಾಗಿದೆ. ಬಡಾವಣೆಗಳ ಮಧ್ಯೆ ಹಸಿರು ಡಮರಗಳ ಚಿಕ್ಕ ಕಾನನಗಳು. ಅಪಾರ್ಟ್‌ಮೆಂಟ್‌ಗಳ ಸಮೂಹ ಬಿಟ್ಟರೆ ಬಿಡಿ ನೆಗಳು. ಎಲ್ಲ ಒಂದೇ ತರಹೆ, ವೆರೈಟಿಗಳು ಕಡಿಮೆ. ಬೇಕಾದಷ್ಟು ಜಾಗ ರುವುದರಿಂದ ಸಾಕಷ್ಟು ವಿಶಾಲವಾದ ಹುಲ್ಲುಹಾಸು. ಅಮೆರಿಕದ ಎಲ್ಲ ಗರಗಳಂತೆ ಷಾಪಿಂಗ್ ಮಾಲ್‌ಗಳು, ರೆಸ್ಟಾರೆಂಟುಗಳು ಇತ್ಯಾದಿ. ಈ ಊರಿನಲ್ಲಿ ರ್ವಜನಿಕ ಸಾರಿಗೆ ಇಲ್ಲ. ರಸ್ತೆಯಲ್ಲಿ ಓಡಾಡುವ ಜನರು ತೀರಾ ಕಡಿಮೆ. ಪರೂಪಕ್ಕೆ ಜಾಗಿಂಗ್ ಮಾಡುತ್ತಿರುವವರೋ, ನಾಯಿ ಅಥವಾ ಬೆಕ್ಕನ್ನು ಶೌಚಕ್ಕೆ ಯ್ಯುತ್ತಿರುವವರೋ ಕಣ್ಣಿಗೆ ಬೀಳುತ್ತಾರೆ ಅಷ್ಟೆ. ಒಂದು ರೀತಿಯಲ್ಲಿ ಮ್ಮಂಥವರಿಗೆ ಬಂದಿಖಾನೆ. ಮನೆಯಲ್ಲಿರುವವರಿಗೆ ಬಿಡುವಾದಾಗ ಹೊರಗೆ ೆದೊಯ್ದರೆ ಉಂಟು ಇಲ್ಲದಿದ್ದರೆ ಇಲ್ಲ. ಇಲ್ಲಿನ ಗ್ರಂಥಾಲಯ ವಿಶಿಷ್ಟವಾದ್ದು. ಮೆರಿಕದ ಎಲ್ಲ ನಗರಗಳಲ್ಲೂ ಈ ವ್ಯವಸ್ಥೆ ಕಾಣಬಹುದು. ಎಲ್ಲ ಬಡಾವಣೆಗಳಲ್ಲೂ ರುತ್ತವೆ. ಈಚೆಗೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಗ್ರಂಥಾಲಯಗಳು ಸೊರಗುತ್ತಿವೆ. ಂಥಾಲಯದಲ್ಲಿ ಪುಸ್ತಕಗಳು ದೊರೆಯುತ್ತಿದ್ದುದರಿಂದ ನನಗೆ ಹೆಚ್ಚು ೊಂದರೆಯಾಗಲಿಲ್ಲ. ಮಾತಿಗೆ ಯಾರೂ ಸಿಗದಿರುವುದರಿಂದ ನನ್ನ ಹೆಂಡತಿಗೆ ೀರು. ನಮಗೆ ಬೇಸರವಾಗದಿರಲಿ ಎಂದು ಹೆಚ್ಚು ಕಡಿಮೆ ಪ್ರತಿನಿತ್ಯ ಾವುದಾದರೂ ಸಿನಿಮಾ ಹಾಕುತ್ತಿದ್ದರು ದೊಡ್ಡ ಟಿವಿ ಪರದೆ ಮೇಲೆ. ಈ ತಾವರಣದಲ್ಲಿ ಮೂರು ತಿಂಗಳಿದ್ದು ಮರಳಿದ್ದೇ ಒಂದು ಸಾಹಸ. ಬೇಸಿಗೆ ದ್ದುದರಿಂದ ಸ್ವೆಟರ್ ಧರಿಸದೆ ಹೊರಗೆ ನಡೆದಾಡಬಹುದಾಗಿತ್ತು. ಜನವೇ ಇದ ಕಾಲುದಾರಿಗಳಲ್ಲಿ ನಿತ್ಯ ಸಂಜೆ ಮೊಮ್ಮಕ್ಕಳ ಜೊತೆ ವಾಕಿಂಗ್ ೋಗುವುದು ಮುದ ನೀಡುತ್ತಿತ್ತು. ಇಬ್ಬರು ಮೊಮ್ಮಕ್ಕಳು. ದೊಡ್ಡವನು



ಮಿಷಿಗನ್ ವಿಶ್ವವಿದ್ಯಾಲಯದ ಒಂದು ವಿಭಾಗ

ಮಿಷಿಗನ್ ಕನ್ನಡ ಕೂಟ ಎನ್ನುವ ಸಂಸ್ಥೆಯೊಂದು ಡೆಟ್ರಾಯಿಟ್‌ನ ಕ್ಯಾಂಟನ್‌ನಲ್ಲಿದೆ. ಈ ಕೂಟದ ಕೆಲ ಸದಸ್ಯರನ್ನು ಬಿಡಿಯಾಗಿ, ಇಡಿಯಾಗಿ ನೋಡುವ ಅವಕಾಶ ನನಗೆ ಲಭಿಸಿತು. ಮನೆಗೆ ಬರುತ್ತಿದ್ದವರೊಂದಿಗೆ ಮಾತುಕತೆ. ಆಸಕ್ತಿ ಇದ್ದವರು ನಮ್ಮ ನವಕರ್ನಾಟಕ ಪ್ರಕಾಶನದ ಕೆಲವು ಪುಸ್ತಕಗಳನ್ನು ನೋಡುತ್ತಿದ್ದರು, ನನ್ನ ಅಳಿಯ-ಮಗಳ ಸಂಗ್ರಹದಲ್ಲಿದ್ದಷ್ಟು. ಹಾಗೆ ಬಂದ ಉತ್ತರ ಭಾರತದ ದಂಪತಿಗಳು ಶ್ರುತಿ ಮತ್ತು ರಾಕೇಶ್ ಕನ್ನಡ ಬಾರದಿದ್ದರೂ ಕರ್ನಾಟಕ ಕಲಾದರ್ಶನ, ವಿಜ್ಞಾನ ತಂತ್ರಜ್ಞಾನ ಪದಸಂಪದ, ನೊಬೆಲ್ ಪುರಸ್ಕೃತರು ಪುಸ್ತಕಗಳನ್ನು ಮೆಚ್ಚಿಕೊಂಡರು. ಇಂಥ ಪುಸ್ತಕಗಳು ಬಡ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು ಎಂದು ಹೇಳಿದ ಅವರು ಕೆಲವು ಶಾಲೆಗಳಿಗಾದರೂ ಹಂಚಿ ಎಂದು ತಮ್ಮ ಕೊಡುಗೆಯಾಗಿ ಒಂದಷ್ಟು ಡಾಲರುಗಳನ್ನು ನೀಡಿದರು.



ಡೆಟ್ರಾಯಿಟ್‌ನ ಫ್ರಾಂಕೆನ್ ಮಾತನಲ್ಲಿ

ಹೈಸ್ಕೂಲು, ಚಿಕ್ಕವನು ಮಿಡಲ್ ಸ್ಕೂಲು. ದೊಡ್ಡವನಿಗೆ ಪುಸ್ತಕ ಓದುವ, ಬರೆಯುವ ಆಸಕ್ತಿ, ಎರಡನೆಯವನು ತೀರಾ ಚಿಕ್ಕವ, ವಾಚಾಳಿ. ಮಗಳು ವೈದ್ಯಕೀಯ ಮಾಹಿತಿಗೆ ಸಂಬಂಧ ಪಟ್ಟ ಒಂದು ಕೋರ್ಸ್ ಮುಗಿಸಿ ಪದವೀಧರಳಾಗಿ ಉದ್ಯೋಗ ಅರಸುತ್ತಿದ್ದಳು. ಅಮೆರಿಕದಲ್ಲಿ ಇದೊಂದು ಸೌಲಭ್ಯ. ಯಾರು ಯಾವಾಗ ಬೇಕಾದರೂ ತಾವು ಬಯಸುವ ವಿಷಯ ಅಧ್ಯಯನ ಮಾಡಬಹುದು. ನನ್ನ ಮಗಳು ಕೃಷಿವಿಜ್ಞಾನದಲ್ಲಿ ಎಂ.ಎಸ್‌ಸಿ. ಮಾಡಿದ್ದರೂ ವೈದ್ಯಕೀಯ ವಿಭಾಗ ಆಯ್ಕೆ ಮಾಡಿಕೊಂಡಿದ್ದಳು.

ಈ ಸಲ ಎಲ್ಲೂ ತಿರುಗಾಟಕ್ಕೆ ಹೋಗುವ ಯೋಜನೆ ಇರಲಿಲ್ಲ. ಅಮೆರಿಕದಲ್ಲಿ ನೋಡಬೇಕಾಗಿದ್ದ ಮುಖ್ಯವಾದ ಸ್ಥಳಗಳನ್ನೆಲ್ಲ ನೋಡಿಯಾಗಿತ್ತು. ಕಳೆದ ಬಾರಿ ಹೋಗಿದ್ದಾಗ ಕ್ಯಾಲಿಫೋರ್ನಿಯ ಪ್ರವಾಸ ಮುಗಿಸಿ ಬಂದಾಗ ಮರುದಿನವೇ ವರ್ಲ್ಡ್ ಟ್ರೇಡ್ ಸೆಂಟರ್ ಕಟ್ಟಡದ ಮೇಲೆ ಭಯೋತ್ಪಾದಕರ ದಾಳಿ ನಡೆದಿತ್ತು. ಟಿ ಅಂಟಿಕೊಂಡು ಆ ದುರಂತದ ದೃಶ್ಯಗಳನ್ನು ನೋಡಿದ್ದೆ. ಕಾಕತಾಳೀಯ ಎನ್ನುವ ಹತ್ತನೇ ವರ್ಷದಲ್ಲೂ ಅಮೆರಿಕದಲ್ಲೇ ಇದ್ದೆ. ಆ ಸಂದರ್ಭಕ್ಕಾಗಿ ನಿರ್ಮಿಸಲಾಗಿ ಸ್ಮಾರಕದ ಅನಾವರಣದ ದೃಶ್ಯಗಳನ್ನು ವೀಕ್ಷಿಸಿದೆ. ಒಂದು ದಶಕದ ಹಿಂದೆ ಭೇ ನೀಡಿದ್ದಾಗ ಅಮೆರಿಕದಲ್ಲಿ ಕಂಪ್ಯೂಟರ್ ಉದ್ಯಮದಲ್ಲಿ ಭಾರೀ ಕುಸಿತ ಉಂಟಾ ಸಹಸ್ರಾರು ಮಂದಿ ಉದ್ಯೋಗಗಳನ್ನು ಕಳೆದುಕೊಂಡಿದ್ದರು. ಭಾರತೀಯರ ಒಳಗೊಂಡಂತೆ ಅನೇಕರು ಬರಿಗೈಯಲ್ಲಿ ಸ್ವದೇಶಕ್ಕೆ ಮರಳಿದ್ದರು. ಈಗ ಪರಿಸ್ಥಿತಿಯೇ ಬೇರೆ. ಆರ್ಥಿಕ ಹಿಂಜರಿಕೆಯಿಂದ ಇನ್ನೂ ಚೇತರಿಸಿಕೊಳ್ಳದಿರು ದೇಶದಲ್ಲಿ ನಿರುದ್ಯೋಗದ ಭೀತಿ ಆವರಿಸಿಕೊಂಡಿದೆ. ಒಂದು ಬಗೆಯ ಅನಿಶ್ಚಿ ಆತಂಕ ಎದ್ದು ಕಾಣುತ್ತಿದೆ. ಅಧ್ಯಕ್ಷ ಒಬಾಮಾರ ಯೋಜನೆಗಳೆಲ್ಲ ಬೆಂಬಲವಿ ಮೂಲೆಗುಂಪಾಗಿವೆ. ಅಮೆರಿಕದ ಜನರಲ್ಲಿ ಈಗ ಹಿಂದಿನಂತೆ ಕೊಳ್ಳುಬಾಕ ಕಾಣುವುದಿಲ್ಲ. ಭವಿಷ್ಯದ ಚಿಂತೆ ಕಾಡತೊಡಗಿದೆ. ನಿರುದ್ಯೋಗ ಆಫ್ರಿಕ ಅಮೆರಿಕನ್ನರಲ್ಲಿ ಹೆಚ್ಚು. ಅದು ಶೇಕಡ ೧೭ರಷ್ಟು ದಾಟಿದೆ. ಡೆಟ್ರಾಯಿಟ್‌ನಲ್ಲಿ ಮ ಮಿಷಿಗನ್ ರಾಜ್ಯದಲ್ಲಿ ಆಫ್ರಿಕನ್ ಅಮೆರಿಕನ್ನರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇ ವಾಸ್ತವ್ಯವೆಲ್ಲ ಡೌನ್ ಟೌನ್ ಎಂದು ಕರೆಯುವ ಜನದಟ್ಟಣೆ ಪ್ರದೇಶಗಳ ಬಡಾವಣೆಗಳಲ್ಲಿರುವವರು ಅಪರೂಪ, ಬಿಳಿಯರು ಏಶಿಯನರುಗಳೇ ಹೆಚ್ಚು ಡೆಟ್ರಾಯಿಟ್‌ನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಇಂಜಿನಿಯರುಗಳ ಡಾಕ್ಟರುಗಳೇ ಎಲ್ಲ ಎನ್ನಬಹುದು. ಇವರೆಲ್ಲ ಆಗಾಗ ಗುಂಪು ಗುಂಪಾಗಿ ಯ ಮನೆಯಲ್ಲಾದರೂ ಸೇರುತ್ತಿರುತ್ತಾರೆ. ಸಾಮಾನ್ಯವಾಗಿ ವಾರಾಂತ್ಯದಲ್ಲಿ ಸಂಜೆ ಏಳು ಎಂಟು ಗಂಟೆಗೆ ಸೇರಿದರೆ ಊಟ ತಿಂಡಿ ಹರಟೆ ಮಧ್ಯರಾತ್ರಿವರೆಗೆ ಸಾಗುತ್ತ ಅಂಥ ಕೆಲವು ಪಾರ್ಟಿಗಳಿಗೆ ಹೋಗದೆ ಇರಲಾಗದು. ಹೋದಾ ಹಿರಿಯರೆನಿಸಿಕೊಂಡ ನಮ್ಮ ಬಗ್ಗೆ ಗೌರವ. ನಮಗೆ ಅಂಥ ಕೂಟಗಳಲ್ಲಿ ಪರಕೀ ಭಾವನೆ. ತಮ್ಮ ತಮ್ಮ ವೃತ್ತಿಯ ಬಗ್ಗೆ ಮಾತಾಡಿಕೊಳ್ಳುವ ಇವರೆಲ್ಲ ಮೂವತ್ತು ನಲ ವಯಸ್ಸಿನವರು. ಇವರಲ್ಲಿ ಬಹುತೇಕ ಮಂದಿ ಅಧ್ಯಾತ್ಮದ ಕಡೆ ಒಲವುಳ್ಳವ



ಕೊಂಬಿನ ಮೊಲಗಳು ತಿವಿವವ್ರೊ ಇನ್ನಾ

ಮದುವೆ, ದಾಂಪತ್ಯ, ಒಗೆತನ, ಪಾತಿವ್ರತ್ಯ
ಹೊರಲಿಕ್ಕಿವೆ ನಮ್ಮ ಹೆಣವ ನಾಲ್ಕು ಬದಿಗೂ ನಿತ್ಯ
ಸಹನೆ, ದಯೆ, ಕರುಣೆ, ಕ್ಷಮೆ ಒಂದಲ್ಲ ಎರಡಲ್ಲ
ಬಡಕೊಳ್ಳಲು ಬಾಯ ನಾಲ್ಕು ದಿಕ್ಕಿಗೂ ನಿತ್ಯ

ಬದುಕೆಂದರೆ ಸಾವನ್ನೆ ಜೀವಿಸುವುದಲ್ಲವೇನೆ
ಗಳಿಗೆ ಗಳಿಗೆಗೂ ಹೆಣ್ಣುಗಳಿಗೆ ?
ಜೀವದಾ ಹೆಣವೆ ತೆಗೆದಂತೆ ಮೆರವಣಿಗೆ
ಎಂದಾದರು ಬಂದರೆ ನಾವು ಹೊಸಿಲಾಚೆಗೆ
ಜೈಲೇ ಸುಖ ಬಯಲೇ ಸಜೆ ನಮಗೆ
ಅಕ್ಕಾ ನಾವೇನು ಗಿಳಿಪಾಠದ ಕಲ್ಲುಗಳೇನೆ
ಅಡಿಗೆ ಮನೆಗೆ

ಕನಸುಗಳಿದ್ದವಂತೆ ಅಹಲ್ಯೆಗೂ
ಹೇಳೆ ಇರಬಾರದೇನೆ ನಮಗೂ

ನಿಯಮ ನೀತಿ ಹೊಂದಾಣಿಕೆ ಪ್ರೀತಿ
ಒಂದೇ ಎರಡೇ ಅಕ್ಕಾ ಅವರು ತೊಡಿಸಿದ
ಬುರ್ಖಾ

ಹೇಳೆ ಈ ಬಟ್ಟೆ ಯಾವ ಮಹಾ ಲೆಕ್ಕ
ಚೈನಾ ಗೋಡೆಗಳೇ ಚಿಕ್ಕವು ಕಾಣೆ ನಮಗೆ
ಈ ನಡೆದಾಡುವ ಖೈದಿಗಳಿಗೆ

ಬಯಲೆಡೆಗೆ ಚೊಂಬ ಹಿಡಿದು ನಡೆದರೂ
ಬಗ್ಗಿ ನೋಡುವರಲ್ಲೆ ಬೆಂಬತ್ತಿ ಇವರು
ಹೈ-ಟೆಕ್ಕಿಗಳು ಶ್ರೀರಾಮಚಂದ್ರರು
ಸದಾ ಸುರತ ನಿರತ ಸೂಳೆಯರೇನೆ ಹೆಂಡತಿಯರು

ಮಗಳು ಹೆಂಡತಿ ತಾಯಿ ತಂಗಿ
ಒಂದೆ ಎರಡೆ ಅಕ್ಕಾ ಇವರಿಕ್ಕಿದ ಕೋಳ
ಹೇಳೆ ಇವು ಯಾವ ಮಹಾ ತೋಳ
ಅವರ ಕಣ್ಣುಗಳೇ ಸಾಕೆ ಸೀಳಲು ತಿಕ್ಕಲು
ಈ ತಿಕ್ಕಲು ನರಮಾಂಸಗಳ ನೆಕ್ಕಲು


ಬನ್ನಿರೋ ಎಷ್ಟಿವೆಯೊ ನಿಮ್ಮ ಬುರ್ಖಾ ತನ್ನಿರೋ
ಹಾರಬಲ್ಲೆವೊ ನಾವೂ ನಿಮ್ಮ ಹಾಗೇ
ಮುಗಿಲಾಗೆ ಮಿಗಿಲಾಗೆ ಇರುಳಾಗೆ ಹಗಲಾಗೆ
ಹೇಳಿರೋ ನಮ್ಮ ಮನದಾಳದ ನಾಳಕು ಬೀಗಾ ಇವೆಯಾ ?
ತೊಗಲಾಳದ ಹಗಲಿಗು ಬುರ್ಖಾ ಇವೆಯಾ ?

ಕೊಂಬಿನ ಮೊಲಗಳು ತಿವಿವವ್ರೋ ಇನ್ನಾ
ನಡೆಯದೋ ಇನ್ನಾ ನಿಮ್ಮಯ ಆಟ
ಅವರ್ ಬಿಟ್ ಇವರ್ ಬಿಟ್ ಅವರಾಟ
ಏಕ್ ಮಾರ್ ದೋ ತುಕಡಾ, ಖಲಾಸ್ ಖಲಾಸ್
ಖಲಾಸ್‌ಡಾ

ಡಾ|| ರಾಮಲಿಂಗಪ್ಪ ಟಿ. ಬೇಗೂರು
ನಂ. ೩೫, ೬ನೇ ಬ್ಲಾಕ್, ಬನಗಿರಿನಗರ, ಬನಶಂಕರಿ ೩ನೇ, ಹಂತ, ಬೆಂಗಳೂರು - ೫೬೦ ೦೮೫

ಉತ್ಸಾಸಕ್ತರು ಬಹಳ ಕಡಿಮೆ. ಕನ್ನಡಾಭಿಮಾನ ಇರುವುದರಿಂದ ಕನ್ನಡ ಸಂಘಗಳನ್ನು ಟಿಸಿಕೊಂಡು ಆಗಾಗ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತಾರೆ. ಹೊರಗಿನಿಂದ ಾರಾದರೂ ಸಾಹಿತಿಗಳೋ, ಕಲಾವಿದರೋ ಬಂದರೆ ಕರೆದು ಸನ್ಮಾನಿಸುವುದನ್ನು ಢಿ ಮಾಡಿಕೊಂಡಿದ್ದಾರೆ. ಚಿನ್ಮಯ ಮಿಶನ್‌ನಂಥ ಸಂಸ್ಥೆಗಳು ಸಾಕಷ್ಟು ಕ್ರಿಯಾಶೀಲ ಗಿವೆ. ಡೆಟ್ರೊಯಿಟ್‌ನ ಕ್ಯಾಂಟನ್ ಬಡಾವಣೆಯಲ್ಲಿ ಹಿಂದೆ ಚಿಕ್ಕ ದೇವಸ್ಥಾನವಿತ್ತು. ಜರಾತಿಗಳದೇ ಅದರ ಪಾರುಪತ್ಯ. ಈಗ ಬೃಹತ್ ದೇವಾಲಯವನ್ನಾಗಿ ಡಿದ್ದಾರೆ. ಸ್ವಾಮಿ ನಾರಾಯಣ ದೇವಸ್ಥಾನವೂ ದಿದೆ. ಇದನ್ನು ಅಮೆರಿಕದ ಎಲ್ಲ ನಗರಗಳಲ್ಲೂ ಬಹುದು. ಭಾರತದಲ್ಲಿ ಓದಿ ಅಭ್ಯಾಸ ಮಾಡಿ ೀಗಿರುವ ಪೀಳಿಗೆಯವರಿಗೆ ತಾಯಿನಾಡಿನ ಮೇಲೆ ು, ಮಾತೃಭಾಷೆಯ ಮೇಲೆ ಅಭಿಮಾನ. ನಂತರದ ೆಗೆಯವರಿಗೆ, ಎಂದರೆ ಅಲ್ಲೇ ಹುಟ್ಟಿ ಬೆಳೆದವರಿಗೆ ೀ ಪ್ರವೃತ್ತಿ ಇರುತ್ತದೆ ಎನ್ನುವಂತಿಲ್ಲ. ಅವರ ಒಲವು ವುಗಳೆಲ್ಲ ಅಲ್ಲಿಯದೇ ಆಗಿರುತ್ತದೆ. ಗಣೇಶ, ಮಹಾಲಕ್ಷ್ಮಿ, ದೀಪಾವಳಿ, ಉಗಾದಿ ಹಬ್ಬಗಳನ್ನೂ ನವರು ಸಾಮೂಹಿಕವಾಗಿ ಆಚರಿಸುತ್ತಾರೆ. ತಮ್ಮ ್ಕಳಿಗೆ ಭಾರತೀಯ ಸಂಸ್ಕೃತಿ ಪರಿಚಯವಾಗಲಿ ಎಂದು ಆಚರಣೆ ಕುರಿತು ಹೇಳುತ್ತಾರೆ. ಇದು ಎಷ್ಟುಮಟ್ಟಿಗೆ ಾವ ಬೀರೀತೋ ಹೇಳುವಂತಿಲ್ಲ. ಹತ್ತಾರು ರ್ಷಗಳಿಂದ ಇಲ್ಲೇ ವಾಸವಾಗಿದ್ದರೂ ಭಾರತ ಾತರಲ್ಲಿ ಒಂದು ರೀತಿಯ ಅನಾಥ ಪ್ರಜ್ಞೆ ಇನ್ನೂ ೀಗಿಲ್ಲ, ಇದು ಎದ್ದು ಕಾಣುತ್ತದೆ.

ಮಿಷಿಗನ್ ಕನ್ನಡ ಕೂಟ ಎನ್ನುವ ಸಂಸ್ಥೆಯೊಂದು ಟ್ರಾಯಿಟ್‌ನ ಕ್ಯಾಂಟನ್‌ನಲ್ಲಿದೆ. ಈ ಕೂಟದ ಕೆಲ ಸ್ಯರನ್ನು ಬಿಡಿಯಾಗಿ, ಇಡಿಯಾಗಿ ನೋಡುವ ಅವಕಾಶ ನನಗೆ ಲಭಿಸಿತು. ಮನೆಗೆ ಬರುತ್ತಿದ್ದವರೊಂದಿಗೆ ಮಾತುಕತೆ. ಆಸಕ್ತಿ ಇದ್ದವರು ನಮ್ಮ ನವಕರ್ನಾಟಕ ಪ್ರಕಾಶನದ ಕೆಲವು ಪುಸ್ತಕಗಳನ್ನು ನೋಡುತ್ತಿದ್ದರು, ನನ್ನ ಅಳಿಯ-ಮಗಳ ಸಂಗ್ರಹದಲ್ಲಿದ್ದಷ್ಟು. ಹಾಗೆ ಬಂದ ಉತ್ತರ ಭಾರತದ ದಂಪತಿಗಳು ಶ್ರುತಿ ಮತ್ತು ರಾಕೇಶ್ ಕನ್ನಡ ಬಾರದಿದ್ದರೂ ಕರ್ನಾಟಕ ಕಲಾದರ್ಶನ, ವಿಜ್ಞಾನ ತಂತ್ರಜ್ಞಾನ ಪದಸಂಪದ, ನೊಬೆಲ್ ಪುರಸ್ಕೃತರು ಪುಸ್ತಕಗಳನ್ನು ಮೆಚ್ಚಿಕೊಂಡರು. ಇಂಥ ಪುಸ್ತಕಗಳು ಬಡ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು ಎಂದು ಹೇಳಿದ ಅವರು ಕೆಲವು ಶಾಲೆಗಳಿಗಾದರೂ ಹಂಚಿ ಎಂದು ತಮ್ಮ ಕೊಡುಗೆಯಾಗಿ ಒಂದಷ್ಟು ಡಾಲರುಗಳನ್ನು ನೀಡಿದರು. ಅವರ ಔದಾರ್ಯ ಕಂಡು ಬೆರಗಾಯಿತು. ಈ ಅನುಭವವನ್ನು ಕನ್ನಡ ಕೂಟದ ಸದಸ್ಯರೊಂದಿಗೆ ಹಂಚಿಕೊಂಡಾಗ ಅವರೂ ಒಂದಿಷ್ಟು ಮೊಬಲಗನ್ನು ಸಂಗ್ರಹಿಸಿ ನೀಡಿದರು. ಕನ್ನಡ ಕೂಟದ ಅಧ್ಯಕ್ಷರು ನಾಗರಾಜ. ಪುಸ್ತಕಗಳ ಬಗ್ಗೆ ಆಸಕ್ತಿ ಇರುವವರು. ಅವರು ಶ್ರೀಮತಿ ವಿಜಯಾ ಪಂಡಿತ್ ಎನ್ನುವವರ ಮನೆಯ ನೆಲಮಾಳಿಗೆಯಲ್ಲಿ ಕನ್ನಡ ಕೂಟದ ಸಭೆಯೊಂದನ್ನು ಏರ್ಪಡಿಸಿದ್ದರು. ಕನ್ನಡ ಪುಸ್ತಕಗಳ ಕುರಿತು, ನವಕರ್ನಾಟಕ ಸಂಸ್ಥೆ ಮತ್ತು ಪ್ರಕಟಣೆಗಳ ಬಗ್ಗೆ ಮಾತನಾಡಬೇಕೆಂದು ನನಗೆ ಆಮಂತ್ರಣ ನೀಡಿದರು. ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಕನ್ನಡದವರು ಸೇರಿದ್ದರು. ಒಂದು ಒಂದೂವರೆ ಗಂಟೆ ನಡೆದ ಅನೌಪಚಾರಿಕ ಸಭೆಯಲ್ಲಿ ಮಾತಾಡಿದೆ. ಅವರ ಪ್ರತಿಕ್ರಿಯೆ ಕಂಡು ನನಗ ಸಂತೋಷವಾಯಿತು. ಅದೊಂದು ಅಪೂರ್ವವಾದ ಅನುಭವ. ಹಿಂದಿನ ಪ್ರವಾಸ ಕಾಲದಲ್ಲಿ ಆಗಿರಲಿಲ್ಲ. ಈ ಪ್ರವಾಸದ ಸಮಯದಲ್ಲಿ ನಾನು ನೋಡಿದ ಒಂದು ಸ್ಥಳ ಎಂದರೆ



ಕತ್ತರಿ ಹಾಕ್ಬಿಟ್ಟರೆ ನಿಮಗೆ 'ಗಿನ್ನಿಸ್' ದಾಖಲೆ ಪುಸ್ತಕದಲ್ಲಿ ಸೇರುವ ಚಾನ್ಸ್ ಉಂಟು ಸಾರ್...


ಟ್ರಾಯಿಟ್ ನಗರದಲ್ಲಿರುವ 'ಫ್ರಾಂಕೆನ್ ಮಾತ' ಎಂಬ ಚಿಕ್ಕಪ್ರದೇಶ. ದಿನೆಂಟನೇ ಶತಮಾನದಲ್ಲಿ ಜರ್ಮನಿಯಿಂದ ಬಂದು ನೆಲೆಸಿ ಕಟ್ಟಿದ ಊರು ಇದು. ರ್ಮನ್ ವಾಸ್ತುಶಿಲ್ಪವನ್ನು ಇಲ್ಲಿ ಕಾಣಬಹುದು. ವಿಶಾಲವಾದ ರಸ್ತೆಗಳು, ಡಮರಗಳು ತುಂಬಿರುವ ಈ ಪ್ರದೇಶ ರಮಣೀಯವಾಗಿದೆ. ನಡೆದಾಡಲು ುಷಿಯಾಗುತ್ತದೆ. ಎಲ್ಲ ಕಡೆಯೂ ಇರುವ ಹಾಗೆ ಇಲ್ಲಿಯೂ ಷಾಪಿಂಗ್ ಮಾಡಲು ೀಕಾದಷ್ಟು ಅಂಗಡಿಗಳಿವೆ. ವಾರಾಂತ್ಯದಲ್ಲಿ ಎಲ್ಲ ಕಡೆಯಿಂದ ಜನ ಬರುತ್ತಾರೆ. ಾತ್ರೆಗೆ ಹೋದಹಾಗಿರುತ್ತದೆ ಇಲ್ಲಿ ಬಂದರೆ.

ಮೂರು ತಿಂಗಳ ಈ ಸಲದ ಅಮೆರಿಕ ಪ್ರವಾಸ ಯಾವತ್ತಿನಂತಿರಲಿಲ್ಲ. ರೋಗ್ಯವಾಗಿ ಬೆಂಗಳೂರಿಗೆ ಹಿಂದಿರುಗಿ ಬಂದದ್ದೇ ದೊಡ್ಡ ವಿಷಯ. ಮೆರಿಕದಲ್ಲಿ ಲಭ್ಯವಿರುವ ವೈದ್ಯಕೀಯ ಸೌಲಭ್ಯದ ನೇರ ಪರಿಚಯ ನನಗಾಯಿತು. ದೆಷ್ಟು ದುಬಾರಿ ಎನ್ನುವುದರ ಅನುಭವವಾಯಿತು. ಅಮೆರಿಕಾ ತಲುಪಿದ ಎರಡು ೂರು ದಿನಗಳಲ್ಲಿಯೇ ನನ್ನ ಹೆಂಡತಿಗೊಂದು ಸಣ್ಣ ಅಪಘಾತ. ಚಿಕಿತ್ಸೆಗಾಗಿ ರದಾಟ. ಸಣ್ಣ ಮೂಳೆ ಮುರಿತ. ಚಿಕಿತ್ಸೆ, ಮೂಳೆ ಜೋಡಣೆ, ಪ್ಲಾಸ್ಟರ್ ಏನೂ ರಲಿಲ್ಲ. ಎಕ್ಸರೇ, ವೈದ್ಯರಿಂದ ತಪಾಸಣೆ ಇಷ್ಟೆ. ಅದಕ್ಕೆ ಸಾವಿರದ ಐನೂರು ಾಲರುಗಳು ಖರ್ಚು. ಇಂಡಿಯಾದ ರೂಪಾಯಿಗಳಲ್ಲಿ ಸುಮಾರು ಎಪ್ಪತ್ತು ಸಾವಿರ. ೂರು ನಾಲ್ಕು ವಾರದಲ್ಲಿ ಚೇತರಿಕೆಯಾಯಿತು. ಇದಾದ ಕೆಲವೇ ದಿನಗಳಲ್ಲಿ ನಗೊಂದು ದೊಡ್ಡ ಅಪಘಾತ.

ಅಪಘಾತವೆಂದೇ ಹೇಳಬೇಕು. ಯಾವ ಸೂಚನೆಯೂ ಇರಲಿಲ್ಲ. ರಾತ್ರೆ ಚ್ಚರವಾದಾಗ ಬಾತ್‌ರೂಮಿನಲ್ಲಿ ಆಯತಪ್ಪಿ ಬಿದ್ದದ್ದೆ ದೊಡ್ಡ ಅವಾಂತರ. ೀತರಿಸಿಕೊಂಡು ಎದ್ದು ಬಂದು ಮಲಗಿದಾಗ ಏನೂ ತಿಳಿಯಲಿಲ್ಲ. ಬೆಳಿಗ್ಗೆ ಎದ್ದಾಗ ಲಗಾಲು ಸ್ವಲ್ಪ ಸ್ವಾಧೀನ ತಪ್ಪಿತ್ತು. ನೋಡೋಣ ಎಂದು ಸುಮ್ಮನಾದೆ. ಮನೆಯಲ್ಲಿ ಗಳು, ಅಳಿಯ, ನನ್ನ ಮಡದಿ ಕೇಳಿದಾಗ ಪ್ರಾಯಶಃ ರಕ್ತದ ಒತ್ತಡ ಚ್ಚಾಗಿರಬಹುದು, ತಹಬಂದಿಗೆ ಬರಬಹುದು ಎಂದೆ. ಆದರೆ ಹಾಗಾಗಲಿಲ್ಲ. ನವಿಡೀ ಮುಜುಗರ. ಮರುದಿನ ವೈದ್ಯರನ್ನು ಕಾಣಲು ನಿರ್ಧರಿಸಿದ್ದಾಯಿತು. ನೆಗೆ ಸಮೀಪದಲ್ಲೇ ಇದ್ದ ಸಂತ ಜೋಸೆಫ್ ಮರ್ಸಿ ಆಸ್ಪತ್ರೆಯಲ್ಲಿ ಮಧ್ಯಾಹ್ನ ರಡು ಗಂಟೆಗೆ ಅಪಾಯಿಂಟ್‌ಮೆಂಟ್ ದೊರೆಯಿತು. ವೈದ್ಯರ ಬಳಿ ಪಾಯಿಂಟ್‌ಮೆಂಟ್ ದೊರೆಯಬೇಕಾದರೆ ಕಾಯಬೇಕು ಮತ್ತು ಇನ್ಸೂರೆನ್ಸ್ ರಬೇಕು. ಇಲ್ಲದಿದ್ದರೆ ಎಮರ್ಜೆನ್ಸಿಗೆ ಸಾರ್ವಜನಿಕ ಆಸ್ಪತ್ರೆಯೇ ಗತಿ. ಇದಕ್ಕೆ ನಗಟ್ಟಲೆ ಕಾಯಬೇಕು. ಅಲ್ಲಿ ಲಭ್ಯವಿರುವ ಚಿಕಿತ್ಸೆಯೂ ಅಷ್ಟಕ್ಕಷ್ಟೆ. ನಾವು ಹೋದ ಸ್ಪತ್ರೆ ಹತ್ತು ಮೈಲಿ ದೂರದಲ್ಲಿತ್ತು. ಹೆಚ್ಚಾಗಿ ಹೊರ ರೋಗಿಗಳನ್ನು ತಪಾಸಣೆ ಾಡುವ ವಿಭಾಗ ಅದು. ಆಸ್ಪತ್ರೆ ತಲುಪಿದ ಮೇಲೆ ವೈದ್ಯರಿಂದ ತಪಾಸಣೆ ಾರಂಭವಾಯಿತು. ಒಡನೆಯೇ ನನ್ನ ತಲೆಯ ಸ್ಕ್ಯಾನಿಂಗ್ ಮಾಡಿದರು. ನ್ಯೂರೋ ರ್ಜರಿ ವಿಭಾಗದ ವೈದ್ಯರು ಸ್ಕ್ಯಾನಿಂಗ್ ರಿಸಲ್ಟ್ ಪರೀಕ್ಷಿಸಿ ಏನಾಗಿದೆ ಎನ್ನುವುದನ್ನು ತ್ತಿ ಹಚ್ಚಿ ಶಸ್ತ್ರಚಿಕಿತ್ಸೆಯಾಗಬೇಕೆಂದು ನಿರ್ಧರಿಸಿದರು. ಅವರ ಪ್ರಕಾರ ನಗಾಗಿದ್ದುದು 'ಸಬ್‌ಡ್ಯೂರಲ್ ಹೆಮರಾಜ್' ಎನ್ನುವ ಕಾಯಿಲೆ. ತಲೆಯ ತಭಾಗದಲ್ಲಿ ರಕ್ತಸ್ರಾವವಾಗಿ ಅದರ ಒತ್ತಡದಿಂದಾಗಿ ದೇಹದ ಬಲಭಾಗದ ಮೇಲೆ ರಿಣಾಮ ಬೀರಿತ್ತು. ಇನ್ನೂ ತಡವಾಗಿದ್ದರೆ ಕೋಮಾಗೆ ಹೋಗಿ ಫಜೀತಿ ಆಗುತ್ತಿತ್ತು ಂದು ಹೇಳಿ, ಅದೃಷ್ಟವಶಾತ್ ಪಾರ್ಶ್ವವಾಯುವಿನಿಂದ ತಪ್ಪಿಸಿಕೊಂಡಿದ್ದೀರಿ ಎಂದು ೀಳಿದರು. ಒಮ್ಮೆ ರೋಗನಿರ್ಧಾರವಾದ ಮೇಲೆ ಒಡನೆಯೇ ಚಿಕಿತ್ಸೆ ಪ್ರಾರಂಭಿ.., ರುದಿನವೇ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿದರು. ಆಸ್ಪತ್ರೆಯ ಮುಖ್ಯವಿಭಾಗಕ್ಕೆ ರ್ಗಾಯಿಸಿ ದಾಖಲೆ ಮಾಡಿಕೊಳ್ಳಲು ಏರ್ಪಾಡು ಮಾಡಿದರು. ಆಸ್ಪತ್ರೆ ಅಲ್ಲಿಂದ ಮಾರು ಇಪ್ಪತ್ತೈದು ಮೈಲಿ ದೂರ. ಅಂಬ್ಯುಲೆನ್ಸ್‌ನಲ್ಲೇ ಒಯ್ಯುವರೆಂದು ರೀಕ್ಷಿಸಿದ್ದೆವು. ಆದರೆ ಅವರು ನನ್ನನ್ನು ಹೆಲಿಕಾಪ್ಟರಿನಲ್ಲಿ ಸಾಗಿಸಲು ತೀರ್ಮಾನಿಸಿದ್ದರು. ುರ್ ಮೇಲೆ ಮಲಗಿಸಿ ಆಸ್ಪತ್ರೆಗೆ ಒಯ್ದರು. ಎರಡು-ಮೂರು ವರ್ಷಗಳಿಂದ ಕ್ತದೊತ್ತಡ ಹೆಚ್ಚಾದ ಮೇಲೆ ಪಾರ್ಶ್ವವಾಯು ತಡೆಯಲು ರಕ್ತ ತೆಳುವಾಗಿಸಲು ಾತ್ರೆ ತೆಗೆದುಕೊಳ್ಳುತ್ತಿದ್ದೆ. ಈ ಮಾತ್ರೆಗಳ ಪರಿಣಾಮದಿಂದಲೇ ಈಗಿನ ರೋಗ ಿಸ್ಥಿತಿ ಎಂದು ನಿರ್ಧರಿಸಿದ ವೈದ್ಯರು ಮೂರು-ನಾಲ್ಕು ದಿನ ಆಸ್ಪತ್ರೆಯಲ್ಲೇ ಿಸಿಕೊಂಡು ನಂತರ ಶಸ್ತ್ರಕ್ರಿಯೆ ನಡೆಸುವುದಾಗಿ ಹೇಳಿ ಆಸ್ಪತ್ರೆಯ ಐಸಿಯು ಡ್ರ್‌ಗೆ ದಾಖಲಿಸಿದರು. ಸಂತ ಜೋಸೆಫ್ ಮರ್ಸಿ ಆಸ್ಪತ್ರೆ ವಿಶಾಲವಾದ ದೊಡ್ಡ ಟ್ಟಡದಲ್ಲಿದೆ. ಪಂಚತಾರಾ ಹೊಟೇಲನ್ನು ಹೋಲುವ ಈ ಆಸ್ಪತ್ರೆಯಲ್ಲಿ ಆರು ಅಂತಸ್ತುಗಳಿವೆ. ಸುತ್ತಲೂ ಸುಮಾರು ಎರಡು ಮೂರು ಮೈಲಿ ವಿಸ್ತೀರ್ಣ. ಗಿಡ-ಮರಗಳು. ಹಸಿರು ಹುಲ್ಲು, ಹೂವಿನ ಗಿಡಗಳು ಮತ್ತು ನೂರಾರು ಕಾರುಗಳ ನಿಲ್ಲ-ಪಾರ್ಕಿಂಗ್ ವ್ಯವಸ್ಥೆ. ಬೇಕಾದಷ್ಟು ಜಾಗ ಇರುವುದರಿಂದ ಆಸ್ಪತ್ರೆ ಹರಡಿಕೊಂಡಿದೆ. ಎರಡನೆ ಮಹಡಿಯಲ್ಲಿ ಐಸಿಯುನಲ್ಲಿದ್ದ ನನ್ನನ್ನು ಮರುದಿನ ಬೆಳಗ್ಗೆ ಐದನೆ ಮಹಡಿಗೆ ಸಾಗಿಸಿದರು. ಹಲವು ಬಗೆಯ ಟೆಸ್ಟ್‌ಗಳನ್ನು ಮಾಡಿದ ಮೇಲೆ ಶಸ್ತ್ರಚಿಕಿತ್ಸೆಗೆ ದಿನ ನಿಗದಿ ಮಾಡಿದರು. ಮಧ್ಯಾಹ್ನ ಎರಡು ಗಂಟೆಯಿಂದ ಸುಮಾರು ಒಂದು ಗಂಟೆ ಶಸ್ತ್ರಚಿಕಿತ್ಸೆ. ಎಲ್ಲ ರೋಗಿಗಳಂತೆ ನನಗೂ ಟ್ಯೂಬುಗಳ ಹಾರ ಜೋಡಿಸಿದ್ದರು. ನನಗೆ ಶಸ್ತ್ರಚಿಕಿತ್ಸೆ ನಡೆಸಿದವರು ಡಾ|| ಬರ್ಮಿಂಗ್‌ಹ್ಯಾಮ್ ಎನ್ನುವವರು. ಶಸ್ತ್ರಚಿಕಿತ್ಸೆಯ ನೋವಾಗಲಿ, ಅದರ ಅಡ್ಡಪರಿಣಾಮಗಳಾಗಲೀ ನನಗಾಗಲಿಲ್ಲ. ಸ್ವಲ್ಪವೂ ನೋವು ಕಾಣಿಸದಂತೆ ನನಗೆ ಆಗಾಗ್ಗೆ ಮಾರ್ಫೀನ್ ಇನ್‌ಜೆಕ್ಷನ್ ಕೊಡುತ್ತಿದ್ದರು. ಶಸ್ತ್ರಚಿಕಿತ್ಸೆಯಾಗಿ ನಲವತ್ತೆಂಟು ಗಂಟೆಯಾದ ಮೇಲೆ ಮನೆಗೆ ಕಳಿಸಿದರು.

ಆಸ್ಪತ್ರೆಯ ಆವರಣದ, ವಾರ್ಡುಗಳ ಪರಿಶುದ್ಧತೆ ಬಗ್ಗೆ ಎರಡು ಮಾತಿಲ್ಲ. ಅಷ್ಟು ಸ್ವಚ್ಛ. ಇನ್ನು ನರ್ಸಮ್ಮಗಳೂ ತರಬೇತಿ ಹೊಂದಿದವರು. ನಿಗದಿಯಾದ ಸಮಯಕ್ಕೆ ಸರಿಯಾಗಿ ರೋಗಿಗೆ ಅಗತ್ಯವಾದ ಸೌಲಭ್ಯಗಳನ್ನು, ಔಷಧಗಳನ್ನು ಒದಗಿಸುತ್ತಾರೆ. ವಾರ್ಡು ವಿಶಾಲವಾಗಿರುವ ಕೋಣೆ. ಬಂದವರು ಕೂಡಲು ಸೋಫ ಮತ್ತು ಕುರ್ಚಿ. ರೋಗಿಯ ಜೊತೆ ಮಲಗಲು ಒಬ್ಬರಿಗೆ ವ್ಯವಸ್ಥೆ. ಎಲ್ಲ ಕಂಪ್ಯೂಟರ್‌ಮಯ. ಇಲ್ಲಿ ಲಭ್ಯವಿರುವ ಚಿಕಿತ್ಸೆ ಶ್ರೇಷ್ಠಮಟ್ಟದ್ದು. ಅಷ್ಟೇ ದುಬಾರಿಯಾದ್ದು ಕೂಡ. ಇನ್ಸೂರೆನ್ಸ್ ಮಾಡಿಸಿದ್ದರೆ ಬಚಾವು, ಇಲ್ಲದಿದ್ದರೆ ಮನೆಮಠ ಮಾರಿ ದಿವಾಳಿಯಾಗುವುದು ಖಚಿತ. ಬಡಜನರಿಗೆ ಚಿಕಿತ್ಸೆ ಕನಸಿನ ಮಾತು. ಒಬಾಮಾ ಅಧ್ಯಕ್ಷನಾದ ಮೇಲೆ ತರಬಯಸಿದ್ದ ವೈದ್ಯಕ್ಷೇತ್ರದ ಸುಧಾರಣೆ ಅರೆಬರೆ. ಇನ್ಸೂರೆನ್ಸ್ ಕಂಪೆನಿಗಳು, ವೈದ್ಯರು, ಆಸ್ಪತ್ರೆಗಳ ಪಾರುಪತ್ಯದ್ದೇ ಮೇಲುಗೈ. ಮನೆಗೆ ಬಂದಮೇಲೆ ಒಂದು ವಾರ ಕಾಲ ವಾಕರ್ ಇರಿಸಿಕೊಂಡು ಓಡಾಡುತ್ತಿದ್ದೆ. ಈ ಅವಧಿಯಲ್ಲಿ ಎರಡು ಬಾರಿ ಫಿಸಿಯೋ ಥೆರಪಿಸ್ಟ್ ಮನೆಗೆ ಬಂದಿದ್ದ. ಆತನ ಸಹಾಯ ನನಗೆ ಅಷ್ಟಾಗಿ ಬೇಕಿರಲಿಲ್ಲ. ಅದೃಷ್ಟ ಚೆನ್ನಾಗಿದ್ದುದರಿಂದ ಬಹುಬೇಗ ಚೇತರಿಸಿಕೊಂಡೆ. ನನಗಿದ್ದ ಒಂದು ಭಯ ಸ್ಮರಣಶಕ್ತಿ ಹೋಗಿಬಿಡುವುದೋ, ಬರವಣಿಗೆ ಸಾಧ್ಯವಾಗದೋ ಎಂದಿತ್ತು. ಸದ್ಯ ಹಾಗೇನೂ ಆಗಲಿಲ್ಲ. ಮೂರು-ನಾಲ್ಕು ವಾರಗಳಲ್ಲಿ ಪೂರ್ಣವಾಗಿ ಚೇತರಿಸಿಕೊಂಡು ಬೆಂಗಳೂರಿಗೆ ವಾಪಸ್ಸಾದೆವು, ಮೊದಲೇ ನಿಗದಿಯಾಗಿದ್ದಂತೆ. ಇಬ್ಬರೇ ಪ್ರಯಾಣ ಮಾಡುವ ಧೈರ್ಯವಿರಲಿಲ್ಲ, ಅದರಿಂದ ಲಂಡನ್ನಿನಲ್ಲಿರುವ ಮಗ ಜೊತೆಗೆ ಬಂದು ಊರು ತಲುಪಿಸಿ, ನಾಲ್ಕು ದಿನ ಇದ್ದು ನೆರವಾದ. ಆಮೇಲೆ ಶುರುವಾಯಿತು ಆಸ್ಪತ್ರೆಯ ಬಿಲ್ಲುಗಳ ಹಾರಾಟ. ದುಬಾರಿಯಾದ ಹೇರ್‌ಕಟ್, ದುಬಾರಿಯಾದ ಶಸ್ತ್ರಚಿಕಿತ್ಸೆ ಅಮೆರಿಕದಲ್ಲಾಯಿತು ನನಗೆ. ಇಲ್ಲಿ ಹೇರ್‌ಕಟ್‌ಗೆ ಒಂಬತ್ತು ಡಾಲರುಗಳು (ಸುಮಾರು ಆರುನೂರು ರೂಪಾಯಿ). ನನ್ನ ಚಿಕಿತ್ಸೆ ವೆಚ್ಚ ಸುಮಾರು ಎಪ್ಪತ್ತೈದು ಸಾವಿರ ಡಾಲರುಗಳು. ಡಾಲರಿಗೆ ನಲವತ್ತೈದು ರೂಪಾಯಿಯಂತೆ ಲೆಕ್ಕ ಹಾಕಿದರೆ ಗಾಬರಿಯಾಗುತ್ತೆ. ಹೆಲಿಕಾಪ್ಟರಿನಲ್ಲಿ ಒಯ್ದದ್ದಕ್ಕೆ ೮೦೦೦ ಡಾಲರು, ಶಸ್ತ್ರಚಿಕಿತ್ಸೆ ೬೦೦೦ ಡಾಲರು, ಆಸ್ಪತ್ರೆ ವಾರ್ಡು ಚಾರ್ಜ್ ೧೦,೦೦೦ ಡಾಲರು, ಅರಿವಳಿಕೆ ೬೦೦೦ ಡಾಲರು ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತೆ. ಇನ್ಸೂರೆನ್ಸ್ ಕಂಪೆನಿ ಮತ್ತು ಆಸ್ಪತ್ರೆ ಜಗ್ಗಾಟ ನಡೆಯುತ್ತೆ ವರ್ಷಗಟ್ಟಲೆ. ಅಮೆರಿಕದಲ್ಲಿ ಇಲ್ಲಿನಂತೆ ನಮಗೆ ಬೇಕೆಂದಾಗ ಡಾಕ್ಟರುಗಳ ಬಳಿ ಹೋಗಲಾಗುವುದಿಲ್ಲ. ಸಣ್ಣಪುಟ್ಟ ಜ್ವರ, ಶೀತ ಮೊದಲಾದವಕ್ಕೆಲ್ಲ ದೂರವಾಣಿ ಮೂಲಕವೇ ಏನಾದರೂ ಔಷಧಿ ಸೂಚಿಸುತ್ತಾರೆ. ಇಲ್ಲದಿದ್ದರೆ ಎಮರ್ಜೆನ್ಸಿ ಇದ್ದೇ ಇರುತ್ತದೆ. ಇನ್ಸೂರೆನ್ಸ್ ಇರಬೇಕು ಅಷ್ಟೆ. ಇನ್ನು ವೈದ್ಯರು ಬರೆದುಕೊಡುವ ಔಷಧಿಯನ್ನು ಫಾರ್ಮಸಿಯಿಂದ ಪಡೆಯಲು ಗಂಟೆಗಟ್ಟಲೆ ಕಾಯಬೇಕು. ಫಾರ್ಮಸಿಯವರು ಕ್ರಾಸ್ ಚೆಕ್ ಮಾಡಿದ ನಂತರ ಪ್ರಿಸ್ಕ್ರಿಪ್ಶನ್‌ನಲ್ಲಿರುವ ಔಷಧಿ ಒದಗಿಸುತ್ತಾರೆ. ಒಟ್ಟಿನಲ್ಲಿ ದುಬಾರಿ ಚಿಕಿತ್ಸೆ ಪಡೆಯಲು ಅಮೆರಿಕಾಗೆ ಹೋಗಬೇಕು. ಜೋಕೆ, ಇನ್ಸೂರೆನ್ಸ್ ಮಾಡಿಸುವುದು ಮರೆಯದಿರಿ. ಇಲ್ಲದಿದ್ದರೆ ಅಲ್ಲಿರುವವರಿಗೆ ದೊಡ್ಡ ಹೊರೆ. ಈಗಲೂ ನನ್ನ ಬಳಿ ಸ್ಮರಣಿಕೆಯಾಗಿ ವಾಕರ್ ಕೂತಿದೆ. ಅಂತೂ ಈ ಸಲದ ಅಮೆರಿಕದ ಪ್ರವಾಸ ನಿಜವಾಗಿಯೂ ದೊಡ್ಡ ಸಾಹಸ.

ಸಿ. ಆರ್. ಕೃಷ್ಣರಾವ್
'ಚೌಬೀನ' ೧೯ ೮೪೪, ೬ನೇ ಕ್ರಾಸ್ ಬನಶಂಕರಿ ೩ನೆ ಹಂತ ೩ನೆ ಬ್ಲಾಕ್
ಕತ್ರಿಗುಪ್ಪೆ ಬೆಂಗಳೂರು - ೫೬೦ ೦೮೫



ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಕಾರ್ಮಿಕ ಕಲ್ಯಾಣ ಭವನ, ನಂ. 48, 2ನೇ ಮಹಡಿ ಮತ್ತಿಕೆರೆ ಮುಖ್ಯರಸ್ತೆ

ಯಶವಂತಪುರ, ಬೆಂಗಳೂರು-560022

ದೂರವಾಣಿ ಸಂಖ್ಯೆ : 080-23570266 ಫ್ಯಾಕ್ಸ್ 23475188

ಕಾರ್ಮಿಕರ ಸೇವೆಯಲ್ಲಿ ಕಲ್ಯಾಣ ಮಂಡಳಿ

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965ರಡಿಯಲ್ಲಿ ಸ್ಥಾಪಿಸಲಾಗಿದೆ. **ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಲ್ಲಿ** ದುಡಿಯುತ್ತಿರುವ ಕಾರ್ಮಿಕರು, ಅವರ ಅವಲಂಬಿತರು, ಮತ್ತು ಕಾರ್ಮಿಕ ಮಕ್ಕಳ ಕ್ಷೇಮಾಭಿವೃದ್ಧಿಗೆ ಮಂಡಳಿಯ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

ಈ ಸೌಲಭ್ಯಗಳಿಗೆ ಮಾಸಿಕ ಸಂಬಳ ರೂ. 15,000/- ಗಳಿಗೆ ಮೀರಿರಬಾರದು. ವಯೋಮಿತಿ 18-60

1) **ವಿದ್ಯಾರ್ಥಿ ವೇತನ :** ಪ್ರೌಢಶಾಲೆ (8 ರಿಂದ 10ನೇ ತರಗತಿವರೆಗೆ) ರೂ. 1500-/ ಪಿಯುಸಿ/ಡಿಪ್ಲೊಮ್/ಐಟಿಐ/ಟಿಸಿಹೆಚ್ ಇತ್ಯಾದಿ ರೂ. 2000/- ಪದವಿ ತರಗತಿಗಳಿಗೆ ರೂ. 2200/- ಸ್ನಾತಕೋತ್ತರ ಪದವಿ ತರಗತಿಗಳಿಗೆ ರೂ. 2500/- ಇಂಜಿನಿಯರಿಂಗ್/ವೈದ್ಯಕೀಯ ರೂ. 3000/-ಗಳು ನೀಡಲಾಗುತ್ತಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ : S.S.L.C '10' - 2nd PUC '10' ಪರೀಕ್ಷೆಗಳಲ್ಲಿ **ಶೇಕಡ 60** ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿ ಜಿಲ್ಲೆಗೆ ಒಟ್ಟು 20 ವಿದ್ಯಾರ್ಥಿಗಳಿಗೆ, ಬೆಂಗಳೂರು ನಗರ ಜಿಲ್ಲೆಗೆ '40' ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.

2) **ಕಾರ್ಮಿಕರಿಗೆ ವೈದ್ಯಕೀಯ ನೆರವು ಯೋಜನೆಯಡಿಯಲ್ಲಿ :** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಅರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ **ಚಿಕಿತ್ಸೆಗೆ ರೂ. 1,000/-ಗಳಿಂದ ರೂ. 10,000/-ಗಳವರೆಗೆ** ಮತ್ತು **ಆರೋಗ್ಯ ತಪಾಸಣೆಗೆ ರೂ. 200/-ಗಳಿಂದ ರೂ.600/-ಗಳವರೆಗೆ** ಧನ ಸಹಾಯ ನೀಡಲಾಗುವುದು.

3) **ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಗಣಕಯಂತ್ರ ತರಬೇತಿ :** ಅಭ್ಯರ್ಥಿಯು ಕನಿಷ್ಠ **SSLC** ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು **18-40 ವಯೋಮಿತಿ ಇರಬೇಕು.** ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಒಂದು ಬ್ಯಾಚಿನಲ್ಲಿ ಇದರ ಲಾಭ ದೊರೆಯುವುದು ಹಾಗೂ ಒಟ್ಟಾರೆ ಒಂದು ಕುಟುಂಬದಲ್ಲಿ ಇಬ್ಬರಿಗೆ ಮಾತ್ರ ಸೌಲಭ್ಯ ನೀಡಲಾಗುವುದು.

4) **ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್ ಒದಗಿಸುವ ಧನ ಸಹಾಯ ರೂ. 5,000/- ಸೌಲಭ್ಯ** ಪಡೆಯಬಹುದು.

5) **ಕಾರ್ಮಿಕರ ಅಪಘಾತ ಧನ ಸಹಾಯ ಯೋಜನೆಯಡಿಯಲ್ಲಿ, ಕನಿಷ್ಠ ರೂ. 1000/- ಗರಿಷ್ಠ ರೂ. 3000/-** ದವರೆಗಿರುತ್ತದೆ. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ 3 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

6) **ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀದಿಸಲು ಧನ ಸಹಾಯ ಯೋಜನೆಯಡಿಯಲ್ಲಿ, E.S.I.,** ಕಾರ್ಮಿಕ ನಷ್ಟ ಪರಿಹಾರ ಕಾಯಿದೆ ಅಥವಾ ಬೇರಾವುದೇ ಧನ ಸಹಾಯ ಪಡೆದಿರಬಾರದು. ಕೃತಕ ಅಂಗ ಸಾಧನ ಖರೀದಿಸಲು **ರೂ. 1000/- ರೂ.5,000/-** ನೀಡಲಾಗುವುದು.

ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60

1) **ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ :** ಕಾರ್ಮಿಕ ಸಂಘಟನೆಗಳು/ ಸರ್ಕಾರೇತರ ಸಂಸ್ಥೆ **(N.G.Os.)** ಮತ್ತು ರೋಟರಿಯನ್ಸ್, ಲಯನ್ಸ್ ಕ್ಲಬ್ ಇತ್ಯಾದಿ ಸಂಘಗಳು ನಡೆಸುವ ಪ್ರತಿ ಶಿಬಿರದಲ್ಲಿ ಭಾಗವಹಿಸುವ ಕಾರ್ಮಿಕರ ಗರಿಷ್ಠ ಪರಿಮಿತಿ ಹಾಗೂ ನೀಡುವ ಚಿಕಿತ್ಸಾ ಕ್ರಮವನ್ನು ಆಧರಿಸಿ **ರೂ. 20,000/- ಗಳವರೆಗೆ** ಧನ ಸಹಾಯ ನೀಡಲಾಗುವುದು. ಒಂದು ಸಂಘಟನೆಗೆ ವರ್ಷದಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯ ನೀಡಲಾಗುವುದು.

2) **ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ:** ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಂಡಲ್ಲಿ **ರೂ. 40,000/-** ರವರೆಗೆ ಧನ ಸಹಾಯ ನೀಡಲಾಗುವುದು. ವರ್ಷದಲ್ಲಿ **ಒಂದು ಸಂಘಟನೆಗೆ ಒಂದು ಬಾರಿ** ಮಾತ್ರ ಈ ಸೌಲಭ್ಯ ನೀಡಲಾಗುವುದು.

3) **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ ಪಡೆಯಲು :** ಮೃತ ಕಾರ್ಮಿಕರ ಅವಲಂಬಿತರು ನಿಗದಿತ ಅರ್ಜಿಯನ್ನು ವಿವರಗಳೊಂದಿಗೆ 6 ತಿಂಗಳೊಳಗೆ ಸಲ್ಲಿಸಿದಲ್ಲಿ, **ರೂ.5,000/-**ಗಳನ್ನು ನೀಡಲಾಗುವುದು.

4) **ಹಿಮೋಫೀಲಿಯಾ ನ್ಯೂನತೆಯಿಂದ ಬಳಲುತ್ತಿರುವ ಕಾರ್ಮಿಕರು ನೋಂದಾಯಿತ ಹಿಮೊಫೀಲಿಯಾ ಸೊಸೈಟಿಗಳಿಂದ ಚಿಕಿತ್ಸೆ ಪಡೆದುಕೊಂಡಲ್ಲಿ ಅಂತಹ ಸೊಸೈಟಿಗಳಿಗೆ ರೂ. 5,000/-** ಧನ ಸಹಾಯ ನೀಡಲಾಗುವುದು. ಇಂತಹ ಸೊಸೈಟಿಗಳು ಬೆಂಗಳೂರು, ಮಣಿಪಾಲ್ ಮತ್ತು ದಾವಣಗೆರೆಯಲ್ಲಿ ಲಭ್ಯವಿರುವುದು.

5)**ಪೀಣ್ಯ 1ನೇ ಹಂತ, ಬೆಂಗಳೂರು ಇಲ್ಲಿ, ಸಮುದಾಯ ಭವನವನ್ನು ಕಾರ್ಮಿಕರಿಗೆ ಮದುವೆ / ಇತರೆ ಸಮಾರಂಭಗಳಿಗೆ** ರಿಯಾಯಿತಿ ದರದಲ್ಲಿ ನೀಡಲಾಗುವುದು.

(ಸೂಚನೆ: ಮಾಲೀಕರು ಕಾರ್ಖಾನೆ ಮತ್ತು ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪ್ರತಿ ಕಾರ್ಮಿಕರಿಗೆ ರೂ. 6/-ಗಳನ್ನು ಅವರ ಡಿಸೆಂಬರ್ ತಿಂಗಳ ವೇತನದಲ್ಲಿ ಕಡಿತ ಗೊಳಿಸಿ, ಮಾಲೀಕರು ಪ್ರತಿ ಕಾರ್ಮಿಕರಿಗೆ ರೂ. 12/- ಸೇರಿಸಿ ಒಟ್ಟು ರೂ. 18/-ಗಳಂತೆ ಪ್ರತಿ ವರ್ಷ ಜನವರಿ 15ರೊಳಗೆ ವಂತಿಗೆ ಪಾವತಿಸತಕ್ಕದ್ದು ಹಾಗೂ ಕಾರ್ಮಿಕರಿಗೆ ಪಾವತಿಯಾಗದ (Unclaimed) ವೇತನ, ಬೋನಸ್, ಗ್ರಾಚ್ಯುಯಿಟಿಯನ್ನೊಳಗೊಂಡಂತೆ, ಮೊತ್ತವನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.

– ಕಲ್ಯಾಣ ಆಯುಕ್ತರು

ಮೆದುಳು, ಮನಸ್ಸು, ವರ್ತನೆ, ಗುಣಾವಗುಣಗಳ ಉಗಮ ಮತ್ತು ವಿಕಸನ : ಜೀವವಿಜ್ಞಾನದ ಒಳನೋಟ



ಡಾ || ಎನ್. ಎಸ್. ಲೀಲಾ

ಹಲವಾರು ಪುರಾತನ ಸಂಸ್ಕೃತಿಗಳ ಮೇಲುವರ್ಗಗಳಲ್ಲಿ 'ಶ್ರೇಷ್ಠ'ರೆನ್ನಿಸಿಕೊಂಡ ುದ್ಧಿಜೀವಿಗಳು, ತಮ್ಮ ಸುಖಜೀವನದ ಅಮಲೇರಿದ್ದಾಗ "ನಾನು ಯಾರು? ಹೇಗೆ ೀಗಾದೆ?" ಎನ್ನುವಂತಹ ಪ್ರಶ್ನೆಗಳನ್ನು ಕೇಳಿ ಮಹಾನ್ ದಾರ್ಶನಿಕರೆನ್ನಿಸಿಕೊಂಡಿದ್ದಾರೆ. ಎಲ್ಲ ್ರಶ್ನೆಗಳೂ ಮೆಚ್ಚಬೇಕಾದವೆ, ನಿಜ! ಆದರೆ ಇವರಲ್ಲಿ ಬಹಳ ಜನ, ತಮ್ಮದೇ ಪೂರ್ವಗ್ರಹ ೀಡಿತ ಉತ್ತರ ಹೊಂದಿಸಿದ ನಂತರವೇ ಈ ಪ್ರಶ್ನೆಗಳನ್ನು ಕೇಳಿದವರು, ತಮ್ಮ ಗುರುಪಾಠದಲ್ಲಿ ಈ ್ರಶ್ನೆಯನ್ನೆತ್ತಿ ಉತ್ತರ ಹೇಳಿದವರು, ಅಥವಾ ಇನ್ನೊಬ್ಬ ಗುರುವಿನ ಇಂತಹುದೆ ಉತ್ತರವನ್ನು ೀಕಿಸಿದವರು. ದೈವ, ಜಾತಿಕುಲ, ವಂಶ, ಆತ್ಮ ಇಂತಹವುಗಳ ಶ್ರೇಷ್ಠತೆಯ ಪೂರ್ವಗ್ರಹ, ಂದಿಗೂ ಬಹಳಷ್ಟು ಉಳಿದುಕೊಂಡಿದ್ದು, ಜನಜೀವನದ ಸಮಸ್ಯೆಗಳ ಅನೇಕ ಪ್ರಶ್ನೆಗಳನ್ನು ಡಿಯಲ್ಲಿಯೆ ಚಿವುಟಿಹಾಕಿ ಮೆರೆಯುತ್ತಿದೆ. ಇಂತಹ ವೈಯಕ್ತಿಕ ಅಥವಾ ವ್ಯಕ್ತಿನಿಷ್ಠ (ಸಬ್ಜೆಕ್ಟಿವ್) ್ರಶ್ನೆಗಳ ನಿರರ್ಥಕತೆಯನ್ನು ನಿವಾರಿಸಿ ವಸ್ತುನಿಷ್ಠ (ಅಬ್ಜೆಕ್ಟಿವ್) ಪ್ರಶ್ನೆಗಳಿಗೆ ದಾರಿಯನ್ನು ಾಡಿಕೊಟ್ಟದ್ದು, ವಿಜ್ಞಾನ. 'ಮಾನವ ಏಕೆ, ಹೇಗೆ ಹೀಗಾದ?' ಎಂದು ಕೇಳುವ ಮಟ್ಟಕ್ಕೆ ರುವುದಕ್ಕೆ ಐದಾರು ಸಾವಿರ ವರ್ಷಗಳೇ ಬೇಕಾದವು. ಸತ್ಯಶೋಧನೆಯಲ್ಲಿ, ವಿಜ್ಞಾನದ ಾಮರ್ಥ್ಯವನ್ನು ಒಪ್ಪಿಕೊಳ್ಳಲೇಬೇಕಾಗಿ ಬಂದಾಗಲೂ, 'ಜೀವನದಲ್ಲಿ ಮುಖ್ಯವಲ್ಲದ ದೇಹ ತ್ತು ಅಂಗಗಳು ಮಾತ್ರವಷ್ಟೇ ಜೀವವಿಕಸನದಲ್ಲಿ ಬಂದವು; ಬಹುಮುಖ್ಯ ಣಾವಗುಣಗಳಂತು ದೈವ, ಜಾತಿಕುಲ, ವಂಶ, ಆತ್ಮ (ಜನ್ಮಾಂತರಗಳ ಮುಂದುವರಿಕೆ) ಂತಹವುಗಳಿಂದ ಬರುವುವು' ಎಂದು ವಾದಿಸುವವರು ಅನೇಕರಿದ್ದಾರೆ. ಹಲವರಂತು, ದೈವದತ್ತವಾಗಿ ಬಂದಿರುವ ಮಾನವಜನ್ಮದಲ್ಲಿ ಮಾತ್ರ, ಎಲ್ಲ ಸದ್ವರ್ತನೆಗಳು, ಗುಣಾವಗುಣಗಳು, ಗೂ ಅವನ್ನು ಒಳ್ಳೆಯದು ಅಥವಾ ಕೆಟ್ಟದು ಎನ್ನುವ ಅರಿವು ಮೂಡಿಸುವ ಮನಸ್ಸು ಇರುತ್ತವೆ; ್ರಾಣಿಗಳಲ್ಲಿ ಇವು ಇಲ್ಲ", ಎನ್ನುವ ಮೌಢ್ಯದಿಂದ ಹೊರಗೆ ಬರಲಾರದವರಾಗಿದ್ದಾರೆ.

ೀನ್ಸ್ ಮತ್ತು ಮೆದುಳು

ನಮ್ಮ ಎಲ್ಲ ವರ್ತನೆ, ಮನಸ್ಸು, ಒಳ್ಳೆಯ ಮತ್ತು ಕೆಟ್ಟ ಗುಣಗಳು ಇವೆಲ್ಲವೂ ಜೀವವಿಕಸನದ ೊಡುಗೆಗಳೇ ಎಂದು ಇಂದಿನ ಜೀವವಿಜ್ಞಾನ ಖಚಿತವಾಗಿ ತೋರಿಸಿಕೊಡುತ್ತದೆ. ದೇಹದ ಎಲ್ಲ ್ರಿಯೆಗಳನ್ನು ನಿಯಂತ್ರಿಸುವ ಮೆದುಳೇ, ವರ್ತನೆ, ಗುಣಾವಗುಣಗಳು ಮತ್ತು ಮನಸ್ಸು ಎಲ್ಲವನ್ನು ರ್ದೇಶಿಸುವುದು ಎನ್ನುವುದೂ ಪ್ರಮಾಣವಾಗಿಹೋಗಿದೆ. ಈ ಮಹತ್ಕಾರ್ಯಗಳ ರ್ವಹಣೆಗೆ ಅನುಕೂಲವಾಗುವ ಮೆದುಳಿನ ಅದ್ಭುತ ರಚನೆ ಎಂತಹದು, ಹೇಗಾಯಿತು, ಏಕೆ ಾಗಾಯಿತು, ಎನ್ನುವ ಪ್ರಶ್ನೆಗಳ ಉತ್ತರಗಳನ್ನು ಹುಡುಕುವುದಕ್ಕೆ ಬಹಳಷ್ಟು ಸುಳಿವುಗಳು, ಂದಿನ ಮನುಷ್ಯನ ಮೆದುಳನ್ನು ಪದರ ಪದರವಾಗಿ ಬಿಚ್ಚಿ ನೋಡಿದಾಗ ಸಿಕ್ಕುತ್ತವೆ; ಏಕೆಂದರೆ, ಾನವ ಮೆದುಳು, ಶತಕೋಟಿ (ಬಿಲಿಯನ್) ವರುಷಗಳ ಜೀವವಿಕಸನದ ಎಲ್ಲ ಪೂರ್ವಜರ ರಂಪರೆಯಲ್ಲಿ ಪಡೆಯುತ್ತಿದ್ದ ಮೆದುಳುಗಳ ಮೇಲೆ ಮೇಲೆ ಪದರಗಳ ಪೇರಿಕೆಯಾಗಿ ಚನೆಗೊಳ್ಳುತ್ತಿದ್ದು ಆಯಾ ಜೀವಿಗಳ ಬದುಕಿಗೆ ಬಹಳಷ್ಟು ಚೆನ್ನಾಗಿಯೆ ಅನುಕೂಲ ಾಡಿಕೊಡುತ್ತ ಬಂದ ಯಾವುದೆ ಶರೀರದ ಒಂದು ಬಹು ಮುಖ್ಯ ದೈಹಿಕಾಂಗ. ಬಹುಶಃ ಮೆದುಳಲ್ಲದೆ ಬೇರೆ ಯಾವ ದೈಹಿಕಾಂಗವೂ ಎಲ್ಲ ಪ್ರಾಣಿಗಳಲ್ಲೂ ಇಷ್ಟರಮಟ್ಟಿಗೆ ಒಂದೇ ೂಲವಿನ್ಯಾಸದ ಮಾದರಿಯಲ್ಲಿದ್ದರೂ, ಇಷ್ಟೊಂದು ಬಗೆಬಗೆಯ ಸೃಜನಶೀಲ ನವ್ಯಪರ ಗತಿಪರ ಕಾರ್ಯಗಳಲ್ಲಿ ಇದರಷ್ಟು ಸಫಲತೆಯನ್ನು ಪಡೆದಿಲ್ಲ. ಮನುಷ್ಯನ ಜಿನೋಮ್‌ನಲ್ಲಿರುವ ಡಿಎನ್‌ಎ(ಜೀವತಂತುವಾಹಿ)ಯ ಮೂಲಾಕ್ಷರಗಳ ದೀರ್ಘ ಲೇಖನದಲ್ಲಿ, ಇಡೀ ಜೀವಕೋ[illegible] ರೇಷೆಗಳು ಹೇಗೆ ಅಡಕವಾಗಿದೆಯೊ ಹಾಗೆಯೆ, ಮಾನವನ ಮೆದು[illegible] ರಚನೆಯಲ್ಲಿ ಸಹ ಎಲ್ಲ ಪೂರ್ವಜರ ಮೆದುಳುಗಳ ರಚನೆಯ ಚರಿತ್ರೆ [illegible] ಕಾಣಲು ಸಿಕ್ಕುತ್ತದೆ. ಡಿಎನ್‌ಎಯ ಜೀನ್ಸ್‌ಗಳೇ ಮೆದುಳಿನ ರಚನಾ[illegible] ಮೇಲೆ ಇಂತಹ ಸಂಬಂಧ ಇರುವುದು ಆಶ್ಚರ್ಯಕರವೇನಲ್ಲ! ಹಾಗೆಯೆ, ಇಂತಹುದೆ ಕಾರಣಕ್ಕಾಗಿಯೆ, ಗರ್ಭಾವಸ್ಥೆಯಲ್ಲಿನ ಮಾನವ ಶಿಶುವ ಮೊದಲ ವಾರಗಳಲ್ಲಿ ಪಡೆಯುತ್ತ ಹೋಗುವ ವಿವಿಧ ರೂಪಾಂತರಗಳ ಚಿತ್ರಗಳಲ್ಲಿ, ಜೀವವಿಕಸನದ ಕೋಟ್ಯಂತರ ವರ್ಷಗಳಲ್ಲಿನ ವಿವಿಧ ಹಂತಗಳ (ಬಿಡಿ ಜೀವಕೋಶ, ಬೆನ್ನೆಲುಬು ಇರದ ಜಂತು, ನಂತರ

ನಮ್ಮ ಎಲ್ಲ ವರ್ತನೆ, ಮನಸ್ಸು, ಒಳ್ಳೆಯ ಮತ್ತು ಕೆಟ್ಟ ಗುಣಗಳು ಇವೆಲ್ಲವೂ ಜೀವವಿಕಸನದ ಕೊಡುಗೆಗಳೇ ಎಂದು ಇಂದಿನ ಜೀವವಿಜ್ಞಾನ ಖಚಿತವಾಗಿ ತೋರಿಸಿಕೊಡುತ್ತದೆ. ದೇಹದ ಎಲ್ಲ ಕ್ರಿಯೆಗಳನ್ನು ನಿಯಂತ್ರಿಸುವ ಮೆದುಳೇ, ವರ್ತನೆ, ಗುಣಾವಗುಣಗಳು ಮತ್ತು ಮನಸ್ಸು ಎಲ್ಲವನ್ನು ನಿರ್ದೇಶಿಸುವುದು ಎನ್ನುವುದೂ ಪ್ರಮಾಣವಾಗಿಹೋಗಿದೆ. ಈ ಮಹತ್ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವ ಮೆದುಳಿನ ಅದ್ಭುತ ರಚನೆ ಎಂತಹದು, ಹೇಗಾಯಿತು, ಏಕೆ ಹಾಗಾಯಿತು, ಎನ್ನುವ ಪ್ರಶ್ನೆಗಳ ಉತ್ತರಗಳನ್ನು ಹುಡುಕುವುದಕ್ಕೆ ಬಹಳಷ್ಟು ಸುಳಿವುಗಳು, ಇಂದಿನ ಮನುಷ್ಯನ ಮೆದುಳನ್ನು ಪದರ ಪದರವಾಗಿ ಬಿಚ್ಚಿ ನೋಡಿದಾಗ ಸಿಕ್ಕುತ್ತವೆ.

ಬೆನ್ನೆಲುಬಿರುವ ರೆಪ್ಟಿಲಿಯ(ಸರೀಸೃಪ), ಕಡೆಗೆ ಸಸ್ತನಿ, ಹಾಗೂ ಚಿಂಪಾಂಜಿ) ನಮೂನೆಗಳೂ ಅದೇ ಸರದಿಯಲ್ಲಿ ಕಂಡುಬರುತ್ತವೆ. ಇವೆಲ್ಲ ಸುದೀರ್ಘ ಸ್ವಾರಸ್ಯಮಯ ವಿಷಯಗಳನ್ನು ಪಕ್ಕಕ್ಕೆ ಬದಿಗಿಡೋಣ. ಮೆದುಳು, ಜೀವವಿಕಸನದ ಮೊದಲು ಮೊದಲ ಹಂತಗಳಲ್ಲಿ, ಪ್ರತಿಯೊಂದು ಪ್ರಾಣಿಯ ದೇಹದ ಅವಿಭಾಜ್ಯ ಅಂಗವಾಗಿತ್ತು, ಮತ್ತು ದೇಹದ ಕ್ರಿಯೆಗಳನ್ನು, ಜೊತೆಜೊತೆಗೆ ವರ್ತನೆಗಳನ್ನೂ ನಿರ್ದೇಶಿಸುತ್ತಿತ್ತು ಎಂಬುದನ್ನು ಉದಾಹರಣೆಗಳ ಮೂಲಕ ಖಚಿತಪಡಿಸಿಕೊಳ್ಳೋಣ.

ಎರಡು ಮೂರು ಶತಕೋಟಿ ವರ್ಷಗಳಿಂದ ನಡೆದುಬರುತ್ತಿರುವ ಜೀವವಿಕಸನದ ಗುರಿಯನ್ನು ಹೀಗೆ ಗುರುತಿಸಬಹುದು : ಜೀವಿ ತನ್ನ ಪರಮೋದ್ದೇಶವಾದ ಸಂತತಿವೃದ್ಧಿಗೆ ಅಡ್ಡಿಬರುವ ಪರಿಸರದ ಪ್ರಾಕೃತಿಕ ಕ್ರಿಯೆಗಳಿಗೆ ಮರುಕ್ರಿಯೆಯಾಗಿ ತಾನೇ ಅಳವಡುತ್ತದೆ; ಮತ್ತು, ಅಷ್ಟೇ ಮುಖ್ಯವಾಗಿ, ಪರಿಸರವನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತದೆ. 'ಪರಿಸರ' ಎನ್ನುವುದಕ್ಕೆ, ಪರಿಸರದ ಜೊತೆಜೊತೆಗೆ ಅಳವಡುವ ಮತ್ತು ಅಳವಡಿಸುತ್ತಿರುವ ಜೀವಿಗಳೂ ಸೇರಿ ಆಗಿರುವ 'ಪ್ರಕೃತಿ' ಎನ್ನುವ ಅರ್ಥ ಕೊಟ್ಟಾಗ, ಜೀವವಿಜ್ಞಾನದಲ್ಲಿ ಡಾರ್ವಿನ್‌ಗೂ ಈಚೆಗೆ ಹೆಚ್ಚು ಹೆಚ್ಚು ಗಮನ ಸೆಳೆಯುತ್ತಿರುವ ಈ ಹೊಸ ತಿರುವಿನ ಸತ್ಯ ಕಾಣತೊಡಗುತ್ತದೆ. ಪ್ರಕೃತಿಯನ್ನು ಅಳವಡಿಸಿಕೊಳ್ಳುವ ಅಥವಾ ಬಳಸಿಕೊಳ್ಳುವ ಮರುಕ್ರಿಯೆ ಬಹು ಹಿಂದಿನ ಜೀವಿಗಳಲ್ಲಿ ಇಲ್ಲವೆನ್ನುವಷ್ಟು ಅಲ್ಪವಾಗಿದ್ದು, ಈಗ ಪರಿಸರವನ್ನು ಸಂಪೂರ್ಣ ವಶ ಮಾಡಿಕೊಂಡಿರುವ ಭ್ರಮೆಯನ್ನು ಹುಟ್ಟಿಸುವ ಮಟ್ಟಕ್ಕೇರಿದೆ. (ಕೆಲವು ವಿವರಗಳು 'ಹೊಸತು' ಪತ್ರಿಕೆಯ ಜನವರಿ ೨೦೦೯ರ ಸಂಚಿಕೆಯಲ್ಲಿನ ''ನಾವೆಲ್ಲ ವಿಜ್ಞಾನಿಗಳೇ; ಜಗತ್ತೇ ಒಂದು ಪ್ರಯೋಗಶಾಲೆ'', ಲೇಖನದಲ್ಲಿವೆ.) ಜೀವಿಯ ಡಿಎನ್‌ಎಯಿಂದಾದ ಜೀನ್ಸ್‌ಗಳು, ಪರಿಸರಕ್ಕೆ ಅಳವಡುವುದಕ್ಕೆ ಜೀವಿಯ ದೇಹವನ್ನೇ ಬದಲಿಸಿಡುವುದರ ಜೊತೆಜೊತೆಗೆ, ಜೀವಿಯೇ ತನ್ನ ಪರಿಸರವನ್ನೂ ಬದಲಾಯಿಸಿಕೊಳ್ಳುವಂತಹ ಕಾರ್ಯೋದ್ದೇಶಗಳ ಪೂರೈಕೆಗಾಗಿಯೂ ಸಹ, ಉಪಯೋಗವಾಗುವ ಹಲವಾರು ದೈಹಿಕ ಭಾಗಗಳನ್ನು (ಅವಯವಗಳ ಜೊತೆಗೆ ಚರ್ಮ, ಮೂಗು, ಕಣ್ಣು, ಕಿವಿ ಇತ್ಯಾದಿ ಸಲಕರಣೆಗಳನ್ನು) ಜೋಡಿಸುತ್ತಲೇ ಇದ್ದವು. ಇಂತಹ ವ್ಯವಸ್ಥಿತ, ಪರಸ್ಪರ ಸಹಕಾರಿ ಭಾಗಗಳ ಸಮೂಹದ ಕೇಂದ್ರವೇ ಮೆದುಳು. ಆದ್ದರಿಂದ ಈ ಮೆದುಳು ಬಹು ಮೊದಲ ಜೀವಿಗಳಿಗೂ ಅತ್ಯವಶ್ಯಕವಾಗಿತ್ತು.

ಆದಿಜೀವಿಗಳು, ಪರಿಸರ ಬದಲಾವಣೆಯ ಅನುಕೂಲದ ಮರುಕ್ರಿಯೆಗಳಲ್ಲಿ ಬಹಳಷ್ಟು ಮೊದಲು ಮೊದಲಲ್ಲೆ ಕಂಡುಕೊಂಡದ್ದು ಚಲನೆ; ಅಂದರೆ, ಶತ್ರುಗಳಿಂದಲೂ ಮತ್ತು ತನ್ನದೇ ಅವಶ್ಯಕಗಳ ಅಭಾವದ ಪರಿಸರಗಳಿಂದಲೂ ಓಡಿಹೋಗುವ ತಂತ್ರ! ಚಲನೆಯಲ್ಲಿಯೂ ಮೆದುಳು ಬೇಕಾಯಿತು. ಅತ್ಯುತ್ತಮ ಅನುಕೂಲದ ಪರಿಸರದಲ್ಲಿ ಅಪರಿಮಿತ ಸಂತತಿಯ ಉತ್ಪಾದನೆ ಮಾಡಿದ ಜೀವಿ, ಉತ್ಪಾದನೆಗೆ ಬೇಕಾದ ಸಾಮಗ್ರಿಗಳ ಅಭಾವವನ್ನು ತಾನೇ ಉಂಟುಮಾಡಿದ್ದರೂ, ಅ[illegible] ತನ್ನದೇ ಸಂತತಿಯನ್ನೆ ಸ್ಪರ್ಧಿ -ಶತ್ರುವಾಗಿ ಕಂಡು, ಹೊಸ ಪರಿಸರಕ್ಕೆ ಪಲಾಯ[illegible] ಅಥವಾ ವಲಸೆ ಹೋಗುವ ವರ್ತನೆ, ಅತ್ಯಂತ ಆಧುನಿಕ ಮಾನವನಲ್ಲಿಯೂ ಪ್ರಧಾನವಾಗಿರುವುದು ಇಂದಿಗೂ ಬಹು ಸಾಮಾನ್ಯ! ಆದ್ದರಿಂದ ಚಲನೆಯಂತಹ ವರ್ತನೆ ಹಾಗೂ ಅದಕ್ಕಾಗಿ ಮೆದುಳು, ಪ್ರತಿಜೀವಿಯ ಬಹು ಪ್ರಾಥಮಿಕ, ಹಾಗೂ ಶಾಶ್ವತ ಅಂಶಗಳು. 'ಕಣ್ಣು, ಕಿವಿ, ಮೂಗು ಇಲ್ಲದಿದ್ದಾಗಲೂ, ಮೆದುಳ[illegible] ಅವಶ್ಯಕವಾಗಿದ್ದರಿಂದ ಉಗಮಗೊಂಡಿತ್ತು', ಎನ್ನುವುದು ಬಹುಕಾಲ ಗಮನಕ್ಕೆ ಬಾರದೆ ಹೋಗಿದ್ದ ಒಂದು ಮುಖ್ಯಾಂಶ.

ಉದಾಹರಣೆಯಾಗಿ, ಶತಕೋಟಿ ವರ್ಷಗಳಿಗೂ ಹೆಚ್ಚು ಪ್ರಾಚೀನವಾಗಿದ್ದರೂ ಈಗಲೂ ತನ್ನ ಪರಮೋದ್ದೇಶದಲ್ಲಿ ಯಶಸ್ವಿಯಾಗಿರುವ ಸಾಮಾನ್ಯ ದುಂಡುಹುಳು[illegible]ಗಳನ್ನು ತೆಗೆದುಕೊಳ್ಳೋಣ. ಈ ಒಂದೆರಡು ಮಿಲಿಮೀಟರ್ ಉದ್ದದ ಹುಳು, ಮಣ್ಣಿನಲ್ಲಿನ ಚಲನೆಗೆ ದೇಹವನ್ನು ನುಲುಚಿಕೊಳ್ಳಲು ದೇಹದ ಎಲ್ಲ ಭಾಗಗ[illegible] ಟಿಷ್ಯೂ(ಅಂಗಾಂಶ)ಗಳ ಸರಿಹೊಂದಾಣಿಕೆಗಾಗಿ ತನ್ನ ಮೆದುಳನ್ನು ಬಳಸುತ್ತದೆ. ಈ ಅತಿಸರಳ ರಚನೆಯ ದೇಹದಲ್ಲಿನ ಮೆದುಳಿನ ನರಸಮೂಹದಲ್ಲಿ ೩೦೮ ನರಕೋಶ[illegible]ಗಳಿವೆ, ಮತ್ತು ಇವುಗಳ ಸಮೂಹಜಾಲದ ನರ-ನರಗಳ ನಡುವೆಯ ಜೋಡಣೆಯ ಜಂಟಿಗಳಾಗಿ ಕೆಲಸ ಮಾಡುವ ಸುಮಾರು ೭,೮೦೦ 'ಸೈನಾಪ್ಸಿಸ್' (ಜಾಲಜಂಟಿ)ಗಳಿವೆ. ಮನುಷ್ಯನ ಮೆದುಳಿನ ಮಾದರಿಯಲ್ಲಿಯೆ ಹುಳುವಿನ ಮೆದುಳಿನ ಎಲ್ಲ ಕಾರ್ಯ[illegible] ತಂತ್ರಗಳು ನಡೆಯುತ್ತವೆ. ಹೆಚ್ಚು ಪರಿಸರ ಸಮಸ್ಯೆಗಳನ್ನು ಎದುರಿಸಿದ ಮನುಷ್ಯನ ಮೆದುಳಿನಲ್ಲಿ ನೂರು ಶತಕೋಟಿ(ಬಿಲಿಯನ್)ಯಷ್ಟು ನರಕೋಶಗಳು ಮತ್ತು ೫೦೦ ಲಕ್ಷಕೋಟಿ (ಟ್ರಿಲಿಯನ್)ಯಷ್ಟು ಜಾಲಜಂಟಿಗಳ ನರಸಮೂಹ ಜಾಲವಿದೆ. ಆದ[illegible] ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ವಿಷಯ ಇದು: ಮನುಷ್ಯನ ಜೀನೋಮ[illegible] (ಡಿಎನ್‌ಎಯ ಬೃಹತ್ ಸಮೂಹ), ಹುಳುವಿನ ಡಿಎನ್‌ಎಯ ಬಿಡಿಬಿಡಿ ಮೂಲಾಂಶಗಳ[illegible] ರಾಶಿ ರಾಶಿಗಳನ್ನೆ ಪೇರಿಸಿಟ್ಟಂತೆ ಆಗಿರುವ ಒಂದು ದೊಡ್ಡ ಸಮೂಹ ಅಷ್ಟೆ, ಅದರ[illegible] ಇಟ್ಟಿಗೆಗಳಿಂದ ಕಟ್ಟಿಕೊಂಡಿರುವ ಒಂದು ಬೃಹತ್ ಕಟ್ಟಡ ಅಷ್ಟೆಯೆ ! ಈ ಕಟ್ಟಡದ[illegible] ಹಲವಾರು ಭಾಗಗಳು ಆ ಹುಳುವಿನ ಕೆಲವು ಭಾಗಗಳ ಮೂಲವಿನ್ಯಾಸವನ್ನ[illegible] ಅನಾಮತ್ತಾಗಿ ಬಳಸಿಕೊಂಡು ಬಂದವುಗಳೆ! ಹುಳು ಮತ್ತು ಮನುಷ್ಯರ ನಡುವಿನ ಈ ರೀತಿಯ ಸಂಬಂಧ, ಡಿಎನ್‌ಎಗಳ ಮೂಲಾಂಶಗಳಲ್ಲಷ್ಟೆ ಅಲ್ಲ; (ಆಗಲೆ ಹೇಳಿದಂತೆ,) ದೇಹಗಳ ಮತ್ತು ಮೆದುಳುಗಳ ಮೂಲಾಂಶಗಳಲ್ಲೂ ಇದೇ ರೀತಿಯ ಸಂಬಂಧಗಳಿವೆ. ಜೀವವಿಕಸನದ ಪರಿಣಾಮವಾಗಿಯೇ ಇಂತಹ ಸಂಬಂಧಗಳ[illegible] ಏರ್ಪಟ್ಟಿವೆ. ಇಷ್ಟೇ ಅಲ್ಲ! ಆ ಹುಳುವಷ್ಟೇ ಮಾನವನ[illegible] ಮುತ್ತಜ್ಜಿಯೇ? ಅವನ ವಂಶವೃಕ್ಷದ ಸಹಸ್ರಾರು ಅಜ್ಜಿಯರೊಡನೆ ಇಂತಹುದೇ ಸಂಬಂಧಗಳನ್ನು ಇಟ್ಟುಕೊಂಡಿರುವ ಕೂಸುಮರಿ ಈ ಮನುಷ್ಯ !

ಹೀಗೆ ಜೀವವಿಕಸನದ ನೂರಾರು ಮಜಲುಗಳಲ್ಲಿ (ಅಂದರೆ ವಿವಿಧ ಮಟ್ಟದ ಪ್ರಾಣಿ ಪ್ರಭೇದಗಳಲ್ಲಿ) ಅಲ್ಲಲ್ಲಿಯವರೆಗಿನ ಪರಿಸರದೊಡನೆಯ ಹೊಂದಾಣಿಕೆ[illegible] ತಕ್ಕಂತೆ ಮಾತ್ರ ಹಳೆಯ ಮೆದುಳಿಗೆ ಜೋಡಿಸಿಕೊಳ್ಳುತ್ತ ಬೆಳೆದ ಮಾನವ ಮೆದುಳು, ಹೇಗೆ ತಾನೆ ಒಂದು ಸುರಚಿತ ಸರ್ವೋತ್ತಮ ವಿನ್ಯಾಸದ ರಚನೆಯಾಗಿರುವುದು ಸಾಧ್ಯ? ನಾವೆಲ್ಲ ನಂಬಿರುವಂತೆ, ಒಂದು ಸರ್ವೋತ್ಕೃಷ್ಟ ಯಂತ್ರವಾಗಿರುವುದೂ ಹೇಗೆ ಸಾಧ್ಯ?? (ಹಳೆಯ 'ಇಲೆಕ್ಟ್ರಿಕ್ ನೆಟ್‌ವರ್ಕ್ ಅನಲೈಜರ್' ನಂತಹ ಗಣ[illegible] ಯಂತ್ರವನ್ನು ಎಷ್ಟು ಉತ್ಕೃಷ್ಟಗೊಳಿಸಿದರೆ ತಾನೆ ಅದು ಇಂದಿನ ಡಿಜಿಟಲ್ ಕಂಪ್ಯೂಟರ್‌ನಷ್ಟು ಸಮರ್ಥ[illegible]ವಾಗಿರುತ್ತಿತ್ತು?) ಆದರೂ, ತನ್ನ ಎಲ್ಲ ಲೋಪದೋಷಗ[illegible] ಜೊತೆಜೊತೆಗೂ, ಈ ಎಲ್ಲ ಅಸಾಧ್ಯಗಳನ್ನು ಮೀರಿ, ಈಗ ಈ ಮೆದುಳು ಚಂದ್ರನನ್ನು ನಿಲುಕ[illegible] ಸಮರ್ಥವಾಗಿರುವುದರ ಇತಿಹಾಸವೂ ಜೀವವಿಕಸನದ ಒಂದು ಅದ್ಭುತವೇ ಸರಿ !



ರ್ತನೆ ಮತ್ತು ಗುಣಾವಗುಣಗಳು ಹಳೆಯವೆ

ಸಸ್ತನಿ ಪ್ರಾಣಿಗಳ ಮರಿಗಳು ಹಾವಿನ ಮರಿಗಳಂತಲ್ಲ! ಗರ್ಭದಲ್ಲಿಯೇ ಬಹು ಕಾಲ ಳೆದುದಾದ ಮೇಲೆ ಹೊರಬಂದು, ಬಹು ಕಾಲದ ಪೋಷಣೆಯಲ್ಲಿ ಮತ್ತೂ ಬೆಳೆದ ನಂತರ ಮಾತ್ರ, ತಮ್ಮ ಆಹಾರ ಪಡೆದುಕೊಳ್ಳಬಲ್ಲವು; ಆದರೆ ಹಾಗೆ ಬೆಳೆದಾದ ಮೇಲೆ ಷ್ಟು ಸಮರ್ಪಕವಾಗಿ ಮತ್ತು ಬಹು ಹೆಚ್ಚು ಸಮರ್ಥವಾಗಿ. ಹೀಗೆ ಬೆಳೆಸುವ ಕೆಲಸಕ್ಕೆ, ನಿ ತಾಯಿಯರಿಗೆ, ಅವಶ್ಯಕ ದೈಹಿಕ ಭಾಗಗಳಷ್ಟೆಯೆ ಇದ್ದರೆ ಸಾಕೇ? ಗರ್ಭದಲ್ಲಿ ಸಿ, ಚಿರಕಾಲ ಹಾಲೂಡುವ ವರ್ತನೆ, ಮತ್ತು ಪ್ರೀತಿಯ ಗುಣಗಳನ್ನು ಅಂದರೆ ನಸ್ಸೆಂಬುದನ್ನು ಬೆಳೆಸಿಕೊಂಡಿರುವ ಕಾರಣಕ್ಕಷ್ಟೆ, ಹೆಣ್ಣುಪ್ರಾಣಿಗಳು ತಮ್ಮ ಸ್ವಂತ ಭವೇನೂ ಇರದಾದ ಈ ಅತಿಕಷ್ಟದ ಮತ್ತು ಅತಿಸಾಹಸದ ಚಟುವಟಿಕೆಗಳಲ್ಲಿ ಡಗುತ್ತವೆ. ಪ್ರೀತಿ ಮತ್ತು ಸ್ವಾರ್ಥತ್ಯಾಗದಂತಹ ಸದ್ಗುಣಗಳು ಹೆಣ್ಣಿಗಷ್ಟೇ ಮಿತವಲ್ಲ! ಅನೇಕ ಪ್ರಭೇದಗಳಲ್ಲಿ ಗಂಡುಪ್ರಾಣಿಯೂ ಸಹ ತನ್ನ ಮರಿಗಳು ಯುವಷ್ಟು ಸಮಯವಾದರೂ, ತಾಯಿಯ ಅನನ್ಯ ಸಂಗಾತಿಯಾಗಿರುವಷ್ಟು, ತ್ತು ಬಗೆಬಗೆಯ ಸಹಕಾರ ಕೊಡುವಷ್ಟು, ಪ್ರೀತಿ ಮತ್ತು ತ್ಯಾಗದ ಗುಣಗಳನ್ನು ಂದಿರುತ್ತದೆ; ಆ ಮರಿಯೂ ಸಹ, ಗಾಳಿಯಿಂದ ಆಮ್ಲಜನಕವನ್ನು ಹೀರುವ ಗೆ, ಹಾಲು ಹೀರುವ ಪ್ರವೃತ್ತಿ(ಇನ್‌ಸ್ಟಿಂಕ್ಟ್)ಯನ್ನೂ ಇಟ್ಟುಕೊಂಡೇ ಹುಟ್ಟುತ್ತದೆ. ತಹ ಗುಣಗಳನ್ನು ಪಡೆದುಕೊಂಡು, ಈ ಕಷ್ಟಸಾಧ್ಯ ಕಾರ್ಯೋದ್ದೇಶವನ್ನು ಲಗೊಳಿಸುವುದಕ್ಕೆ ಬೇಕಾದ ಪ್ರವೃತ್ತಿ, ಕ್ರಿಯಾಶಕ್ತಿ, ಮತ್ತು ಸಾಮರ್ಥ್ಯಗಳನ್ನು ನ್‌ಗಳು ನಿಗದಿಗೊಳಿಸಿದ್ದರೂ, ಕ್ರಿಯೆಗಳನ್ನು ನಡೆಸಲು ಬೇಕಾದ ಸಂದರ್ಭೋಚಿತ ರ್ದೇಶನ ಮತ್ತು ಸಮಯೋಚಿತ ನಿಯಂತ್ರಣಗಳನ್ನು ನೀಡುವ ಶಕ್ತಿ ಇರುವ ದುಳೂ ಸಹ ಅತ್ಯವಶ್ಯಕವೇ! ದೇಶದ ಸಂವಿಧಾನವಿದ್ದರೂ, ಅದಕ್ಕೊಂದು ಕಾರವೂ ಅವಶ್ಯಕವಿರುವ ಹಾಗೆ! ಆ ಮೆದುಳೂ ಅದರ ಶಕ್ತಿಯೂ ನ್‌ಗಳಿಂದಲೇ ಆದವುಗಳಾದರೂ, ತತ್ ಕ್ಷಣದ ಕ್ರಿಯೆಗಳ ಆಗುಹೋಗುಗಳನ್ನು, ಪ್ಸಿಸ್‌ಗಳಲ್ಲಿನ (ಅಂದರೆ, ನರಸಮೂಹದ ಜಾಲಜಂಟಿಗಳಲ್ಲಿನ) ವಿವಿಧ ವಿಶಿಷ್ಟ ಸಾಯನಿಕ ದ್ರವ್ಯಗಳು ನಿಯಂತ್ರಿಸುವುವು. ಈ ದ್ರವ್ಯಗಳು ದೇಹವೇ ಉತ್ಪಾದಿಸಿ ದಿರಿಸಿಟ್ಟಿರುವ ಗ್ರಂಥಿ(ಗ್ಲಾಂಡ್)ಗಳ ಸದ್ಯದ ಪ್ರಚೋದನೆಯಿಂದ ಒದಗಿ ಬರುವ ರ್ಮೋನ್‌ಗಳು ಅಡ್ರೆನಾಲಿನ್ ಮುಂತಾದವು ಆಗಿರಬಹುದು; ಅಥವಾ ಸರದಲ್ಲಿದ್ದು ಮೆದುಳನ್ನು ತಲುಪಿದ, ಪೂರಕ ಅಥವಾ ಮಾರಕ ಔಷಧದಂತಹವು ಂದ ಸಂಯೋಜಿತಗೊಂಡಿರಬಹುದು. ನರಕೋಶಗಳಲ್ಲಿನ ವಿದ್ಯುತ್ ಪ್ರವಾಹದಲ್ಲಿ ು ಹೆಚ್ಚಿನ ವೇಗದಲ್ಲಿ ನಿರ್ದೇಶನ ಮತ್ತು ನಿಯಂತ್ರಣಗಳ ಆದೇಶಗಳ ಹಿತಿಗಳು ಹರಿಯುತ್ತಿದ್ದರೂ, ಜಾಲಜಂಟಿಗಳಲ್ಲಿ ಅವು ಇತರೇ ನೂರಾರು ಗಳಿಂದ ಆಗ ತಾನೇ ಬಂದ ಬೇರೆಯ ಮಾಹಿತಿಗಳಿಂದ ಹೆಚ್ಚಾಗಿಯೋ ಮೆಯಾಗಿಯೋ ಮಾರ್ಪಟ್ಟು, ತಮ್ಮತಮ್ಮ ಕೊನೆಯ ಗುರಿಯಿರುವ ದೈಹಿಕ ಗವನ್ನು ತಲುಪುತ್ತವೆ; ಉದ್ದೇಶಿತ ಕ್ರಿಯೆಗಳನ್ನು ಸ್ನಾಯುಗಳ ಮೂಲಕ ಅಪೇಕ್ಷಿತ ದಲ್ಲಿ ನಡೆಸುತ್ತವೆ. ಇಂತಹ ಆಯಾ ಪ್ರಾಣಿಸಹಜ ಸಾಮಾನ್ಯ ಕ್ರಿಯೆಗಳೇ ನೆಗಳಾಗಿ ಹೊರತೋರುವುವು; ವರ್ತನೆಗಳು, ಕ್ರಮಹೀನವಾಗಿರದೆ, ತದಲ್ಲಿ ಸಕ್ರಮವಾಗಿರುವಷ್ಟು ಸ್ಥಿರಗೊಂಡು, ಗುರುತಿಸಬಲ್ಲ ನಮೂನೆಗಳನ್ನು ರತೊಡಗಿದಾಗ, ಅವುಗಳ ಒಕ್ಕೂಟವು ಮನಸ್ಸು ಎಂದು ನಾವು ಹೆಸರಿಟ್ಟಿರುವ ು ವ್ಯವಸ್ಥೆ ಆಗುತ್ತದೆ. ಇಂತಹ ವರ್ತನೆಗಳು ಮತ್ತು ಗುಣಗಳು ಅದೇ ಯಲ್ಲೇ ಒಮ್ಮೆ ಕಾಣಿಸಿಕೊಂಡು ಮತ್ತೆ ಮರೆಯಾಗಬಹುದು; ಆಗಾಗ ಪ್ರಚೋದಿತವಾಗಿ ಶಮನವಾಗಬಹುದು, ಕೆಲವು ಬಾರಿ ಅತಿ ಹೆಚ್ಚಾಗಿ, ಹಲವು ಬಾರಿ ಅತ್ಯಲ್ಪವಾಗಿ, ಹಲವರಲ್ಲಿ ಬಹಳವಾಗಿ, ಕೆಲವರಲ್ಲಿ ವಿರಳವಾಗಿ. ಇಷ್ಟೊಂದು ವೈವಿಧ್ಯತೆಗೆ ಕಾರಣ, ಪ್ರತಿ ಜೀವಿಯೂ ತನ್ನತನ್ನ ಪರಿಸರಕ್ಕೆ ಅನುಗುಣವಾಗಿ ಸ್ಪಂದಿಸುವಂತೆ ತನ್ನ ಜೀವಾವಧಿಯ ಮೊದಮೊದಲಲ್ಲಿಯೇ ಹೆಚ್ಚು ಹೆಚ್ಚು ಕಾಲ ಬೆಳೆಸಿಕೊಳ್ಳಬಹುದಾದ ಸಾಮರ್ಥ್ಯವಿರುವ ಮೆದುಳನ್ನು ಹೆಣೆದುಕೊಳ್ಳುವ ವಿಕಸನತಂತ್ರವನ್ನು ತನ್ನ ಜೀನ್‌ಗಳ ಮೂಲಕ ಪಡೆದು ಬಂದಿರುವುದೇ ಆಗಿದೆ. ಈ ಶೈಶವ-ಯುವ ಕಾಲ, ಪರರ ಪೋಷಣೆಯಲ್ಲಿ ತರಬೇತಿಗೊಳ್ಳುವ ಕಾಲ. ಜೀನ್‌ಗಳಿಂದ ಪಡೆದ ಪ್ರವೃತ್ತಿ(ಇನ್‌ಸ್ಟಿಂಕ್ಟ್)ಯಿಂದಾಗಿ ವಯೋಚಿತ ವರ್ತನೆಗಳನ್ನು ತೋರಿಸುತ್ತಿರುವ ಶಿಶುಗಳೂ, ಅತ್ಯಗತ್ಯ ಆಹಾರ, ಮತ್ತು ಅತ್ಯವಶ್ಯಕ ಸಾಮಾಜಿಕ ವರ್ತನೆಗಳ ಅನುಭವಗಳಿಂದ ವಂಚಿತರಾದಾಗ ನರಸಮೂಹ ಜಾಲದ ಅನೇಕ ಜೋಡಣೆಗಳನ್ನು ಬೆಳೆಸಿಕೊಳ್ಳಲಿಕ್ಕಾಗದಿರುವುದನ್ನು, ಶಿಶುಗಳ ಮೆದುಳಿನ ಎಮ್‌ಆರ್‌ಐ, ಪಿಇಟಿ, ಈಈಜಿ ಮುಂತಾದ ಸ್ಕ್ಯಾನಿಂಗ್(ತಪಾಸಣೆ)ಗಳಲ್ಲಿ ಪ್ರತ್ಯಕ್ಷವಾಗಿ ಕಾಣಬಹುದು. ಇದಕ್ಕಾಗಿ ನಮ್ಮ ತಂತ್ರಜ್ಞಾನ ಬಹಳಷ್ಟು ಬೆಳೆದಿದೆ.

ಹೀಗೆ ಸಂತತಿಗಾಗಿ ಸ್ವಾರ್ಥತ್ಯಾಗ ಮಾಡುವ ಸದ್ಗುಣಗಳು ಮನುಷ್ಯನಿಗೆ ಅತಿನಿಕಟ ಸಸ್ತನಿಗಳಲ್ಲಷ್ಟೇ ಅಲ್ಲ; ಪಕ್ಷಿಗಳಲ್ಲಿಯೂ ಸಹ ಇವೆ. ರೋಚಕ ಜೀವನಚರಿತ್ರೆಯ ಪೆಂಗ್ವಿನ್‌ಗಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಪೆಂಗ್ವಿನ್‌ಗಳಲ್ಲಿ ಅನೇಕ ಜಾತಿಪ್ರಭೇದಗಳಿದ್ದರೂ ಎಲ್ಲವೂ, ದಕ್ಷಿಣ ಶೀತವಲಯದಲ್ಲಿ ಮಾತ್ರ ಇರುವವೇ! ಹಾಗೂ, ರೆಕ್ಕೆಗಳಿದ್ದರೂ ಹಾರಲಾರದ ಹಕ್ಕಿಗಳೇ! ರೆಕ್ಕೆಗಳ ಉಪಯೋಗ ಇರುವುದು ಮಂಜುಗಡ್ಡೆಯ ಕೆನೆಯ ಕೆಳಗಿನ ಶೀತಸಾಗರಗಳಲ್ಲಿ ಈಜುವುದಕ್ಕೆ, ಮತ್ತು, ನಮ್ಮ ಹಾಗೆ ನಡೆಯುವುದಕ್ಕೆ! ಪೆಂಗ್ವಿನ್‌ಗಳು ಮಂಜುಗಡ್ಡೆಯ ಮೇಲೆ ಮೊಟ್ಟೆಯಿಟ್ಟ ನಂತರ ತಾಯಿತಂದೆಯರು ಕಾವು ಕೊಡುವುದಕ್ಕೆ ಬಹುಕಾಲ ಹಸಿದುಕೊಂಡೇ ಇರುತ್ತವೆ. (ಆ ಶೈತ್ಯದಲ್ಲಿ ಜೀವಿಸುವುದಕ್ಕೆ ಪ್ರತಿನಿತ್ಯ ಬೇಕಾಗುವ ಆಹಾರದ ಪ್ರಮಾಣ ಶರೀರತೂಕದ ಬಹು ಹೆಚ್ಚು ಭಾಗದಷ್ಟು!) ಎಂಪರರ್ ಜಾತಿಯ ಪೆಂಗ್ವಿನ್‌ಗಳಲ್ಲಂತೂ ಈ ಕೆಲಸ ಗಂಡಿನದೇ! ಬಹಳಷ್ಟು ಪೆಂಗ್ವಿನ್ ತಾಯಂದಿರು ಎಲ್ಲರ ಮರಿಗಳನ್ನೂ ಶಾಖದ ಅನುಕೂಲಕ್ಕಾಗಿ ಕ್ರೇಷ್(ಶಿಶು ರಕ್ಷಣೆ ಕೇಂದ್ರ)ಗಳಲ್ಲಿ ಒಟ್ಟುಗೂಡಿಸಿ, ಕರ್ತವ್ಯಪರದಿಯಲ್ಲಿ ಕಾವಲು ಕಾಯುತ್ತಾರೆ! ಕೀಟವರ್ಗಗಳಲ್ಲೂ, ಸಂತತಿವೃದ್ಧಿಗಾಗಿ ಜೇನುಹುಳುಗಳು ತೋರುವ ಕರ್ತವ್ಯನಿಷ್ಠೆಯ ವರ್ತನೆ ಎಲ್ಲರಿಗೂ ಗೊತ್ತಿರುವ ವಿಷಯವೇ!

ಪ್ರಾಣಿಗಳಲ್ಲಿ, ಸಂತತಿಯ ವೃದ್ಧಿ ಮತ್ತು ರಕ್ಷಣೆಗಳ ಅನುಕೂಲಗಳಿಗಾಗಿ ಸಾಮೂಹಿಕ ಜೀವನದ ವರ್ತನೆ ಆರಂಭವಾಯಿತು. ಆದರೂ, ಮೆದುಳನ್ನು ಇಷ್ಟು ಶೀಘ್ರಗತಿಯಲ್ಲಿ ಇಷ್ಟೊಂದು ಉನ್ನತ ಪರಿಣಾಮಕಾರಿ ಮಟ್ಟಕ್ಕೆ ಈ ವರ್ತನೆಯು ಬೆಳೆಸಿದ ಹಾಗೆ, ಜೀವವಿಕಸನದಲ್ಲಿ ಹಿಂದೆಂದೂ ಯಾವುದೇ ಪ್ರಾಣಿಯ ಯಾವುದೇ ವರ್ತನೆಯಿಂದಲೂ ಬೇರೆ ಯಾವ ದೇಹಭಾಗದಲ್ಲೂ ಆಗದಿದ್ದದ್ದು ಗಮನಿಸಲೇ ಬೇಕಾದ ವಿಷಯ. ಕಾರಣ ಇಷ್ಟೇ! ಪ್ರತಿ ಜೀವಿಯ ಮೆದುಳು, ಸ್ವಂತ ಅನುಭವಗಳಿಂದ ತನ್ನ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ರಚನಾವಿನ್ಯಾಸ ಉಳ್ಳದ್ದಾದ್ದರಿಂದ ಅತಿಮಂದಗತಿಯಲ್ಲಿ ಬೆಳೆಯುವ ಜೀನ್‌ಗಳ ಮೊರೆ ಹೋಗಬೇಕಿಲ್ಲ. ಮೆದುಳು ಸಾಮೂಹಿಕ ಜೀವನದ ಪರಿಸರವೇ ಒದಗಿಸುವ ತೀಕ್ಷ್ಣಸ್ಪರ್ಧೆಯಿಂದ, ಮತ್ತು ಅನುಕರಣೆ ಮುಂತಾದ ಕಲಿಕೆ ಹಾಗೂ ಕಲಿಸಾಟಗಳ ಅನುಭವಗಳಿಂದ ಹೆಚ್ಚು ಹೆಚ್ಚು ಬೆಳೆಯುತ್ತದೆ. (ಎಲ್ಲ ಪುರಾತನ ನಾಗರಿಕತೆಗಳೂ ಹೀಗೆ ತಾನೆ ಹೆಚ್ಚು ಹೆಚ್ಚು

ತೀಕ್ಷ್ಣಬುದ್ಧಿಮತ್ತೆ, ಜ್ಞಾನಗಳನ್ನು ಬೆಳೆಸಿಕೊಂಡದ್ದು!) ಇಂತಹ ಸಂದರ್ಭ ಮತ್ತು ಪರಿಸ್ಥಿತಿಗಳಲ್ಲಿ, ಸಂತತಿವೃದ್ಧಿಯ ಗುರಿ ಗೌಣವಾಗಿ, ಸಾಮೂಹಿಕ ಜೀವನದ ಗುರಿಯ ನೇರ ಪ್ರಭಾವದಲ್ಲಿ, ಸಹಜೀವನಕ್ಕೆ ಅನುಕೂಲವಾದ ವರ್ತನೆಗಳು (ಅಂದರೆ ಗುಣಾವಗುಣಗಳು, ಮತ್ತು ಮನಸ್ಸು) ಹೆಚ್ಚುತ್ತವೆ. ಇಂತಹ ವರ್ತನೆಗಳನ್ನು ತೊಡಗಿಸುವ ಗುಣಗಳೇ ಸ್ವಾರ್ಥತ್ಯಾಗ, ಪ್ರೀತಿ, ಬಾಂಧವ್ಯ, ಸ್ನೇಹ, ಸಹಾನುಭೂತಿ, ದಯೆ, ಅನುಕಂಪ, ಸುಖ, ಸಂತೋಷ, ಕುತೂಹಲ, ಸಾಹಸಗಳಲ್ಲಿ ಆನಂದ, ಮುಂತಾದವು; ಕಡೆಗೆ, ಸರ್ವಜನ ಸಮಾನತೆಯಂತಹ ಗುಣವೂ ಸಹ! ಹಲವು ದೇಶಗಳ ಇತಿಹಾಸಗಳೇ ಇದಕ್ಕೆ ಸಾಕ್ಷಿ. ಈ ಸದ್ಗುಣಗಳು ಸಹ ಮನುಷ್ಯನಿಗೆ ಸೀಮಿತವಾದುವಲ್ಲ. ಇತರ ಪ್ರಾಣಿಗಳಲ್ಲಿ ಇಂತಹ ಗುಣಗಳ ಪರಿಣಾಮದ ವರ್ತನೆಗಳನ್ನು ನಾವೇ ಕಂಡಿರಬಹುದು; ವರದಿಗಳನ್ನು ಕೇಳಿರಬಹುದು. ಹಲವು ಶತಮಾನಗಳಿಂದ, ಪ್ರಾಣಿಶಾಸ್ತ್ರಜ್ಞರು ಈ ದಿಶೆಯಲ್ಲಿನ ತಮ್ಮ ಅಧ್ಯಯನಗಳ ಅನುಭವಗಳನ್ನು ದಾಖಲೆ ಮಾಡಿಟ್ಟಿದ್ದಾರೆ. ಇತ್ತೀಚೆಗೆ, ಜೀವವಿಜ್ಞಾನಿಗಳು ಆಯಾ ಗುಣ, ವರ್ತನೆಗಳಿಗೆ ಸಂಬಂಧಿತ ಜೀನ್ಸ್‌ಗಳು ಇತರ ಯಾವ ಯಾವ ಹಿಂದಿನ ಪ್ರಾಣಿಗಳಲ್ಲಿದ್ದವು ಎಂಬುದನ್ನೂ ಹುಡುಕುತ್ತಿದ್ದಾರೆ. ಮೆದುಳು ಮತ್ತು ನರಕೋಶಗಳ ಪರಿಣತರು, ಮೆದುಳಿನಲ್ಲಿ ವರ್ತನೆಗಳ ಕೇಂದ್ರಗಳ ನೆಲೆಗಳನ್ನು ದಾಖಲಿಸಿಡುತ್ತಿದ್ದಾರೆ. ಕೆಲವು ಕೌತುಕಗಳ ಉದಾಹರಣೆಗಳನ್ನು ಈಗ ನೋಡೋಣ.

ಬಹಳಷ್ಟು ಸಸ್ತನಿ ಪ್ರಾಣಿಗಳಲ್ಲಿ, ಅನೇಕ ಜಾತಿಯ ಪಕ್ಷಿಗಳಲ್ಲಿ, ಸಮುದ್ರದ ವಾಲ್ರಸ್‌ಗಳಲ್ಲಿ ಈ ಕೆಲವು ಸ್ವಾರ್ಥತ್ಯಾಗದಂತಹ ಸದ್ಗುಣಗಳು ಬಹು ಸಾಮಾನ್ಯ. ನಾಯಿಗಳು ತಮ್ಮ ಜಾತಿಯವೇ ಅಲ್ಲದ ಬೆಕ್ಕು, ಅಳಿಲು, ಬಾತುಕೋಳಿ ಕಡೆಗೆ ಹುಲಿ ಮುಂತಾದವುಗಳ ತಬ್ಬಲಿ ಮರಿಗಳಿಗೂ ಹಾಲೂಡಿಸಿ, ಮೆದು ಆಹಾರ ಒದಗಿಸಿ ಸಾಕಿದ ಹಲವು ಉದಾಹರಣೆಗಳು ಇವೆ. ಡಾಲ್ಫಿನ್‌ಗಳು, ಗಾಯಗೊಂಡೋ ದಣಿದೋ ಸಮುದ್ರದಲ್ಲಿ ಈಜಲಾರದ ಪ್ರಾಣಿಗಳಿಗೆ, ಉಸಿರಾಡಿ ತೇಲಿ ಚಲಿಸುವುದಕ್ಕೆ ಸಾಕಷ್ಟು ಸಹಾಯ ಮಾಡುತ್ತವೆ. ತೋಳಗಳು, ಕಡೆಗೆ ರಕ್ತ ಹೀರುವ ಬಾವಲಿಗಳೂ ಸಹ, ಬೇಟೆಯಾಡುವ ಶಕ್ತಿ ಕಳೆದುಕೊಂಡ ಸಂಗಾತಿಗಳೊಡನೆ ತಮ್ಮ ಬೇಟೆಯ ಪಾಲನ್ನು ಹಂಚಿಕೊಳ್ಳುತ್ತವೆ. ಕರಾಳ ಮೃಗಗಳು ಸುತ್ತಮುತ್ತ ಸುಳಿದಾಗ ಮರದ ಮೇಲಿನ ಕೋತಿಗಳು, ತಮಗೆ ಆಪತ್ತಿಲ್ಲದಿದ್ದಾಗಲೂ ಸಹ, ನೆಲದ ಮೇಲಿನ ಎಲ್ಲ ಪ್ರಾಣಿಗಳಿಗೂ ಎಚ್ಚರಿಕೆ ಕೊಡುವ ಕೂಗು ಹಾಕಿ, ಅವನ್ನು ಉಳಿಸುತ್ತವೆ. ಆಫ್ರಿಕಾದ ಎಮ್ಮೆ ಕೋಣಗಳು, ತಮ್ಮ ಒಬ್ಬ ಸಹಪಯಣಿಗ ಯಾವುದೇ ಹಿಂಸ್ರಪ್ರಾಣಿಯ ಹಿಡಿತಕ್ಕೆ ಸಿಕ್ಕಿಬಿದ್ದಾಗ, ಅದನ್ನು ಉಳಿಸಲು ಸೆಣಸಾಡಿ ತಾವೆ ತುತ್ತಾಗುವುದೂ ಬಹು ಸಾಮಾನ್ಯ ವರ್ತನೆ!

ಸಾಮಾಜಿಕತೆಯ ಮಹತ್ವ

ಎಲ್ಲ ಪ್ರಾಣಿಗಳಲ್ಲಿಯೂ ಬಹುಸಾಮಾನ್ಯವಾಗಿರುವ ಒಂದು ಮಹಾ ಸದ್ವರ್ತನೆ, ಅವು ಆಹಾರ ಮತ್ತು ಸ್ವರಕ್ಷಣೆಗಳಿಗಲ್ಲದೆ ಬೇರೆ ಯಾವ ಕಾರಣಕ್ಕೂ ಇತರ ಯಾವ ಜೀವಿಗೂ ಹಿಂಸೆ ಮಾಡದಿರುವುದು. ಅಮಾಯಕರಿಗೂ ಹಿಂಸೆ ಮಾಡುವ ದುರ್ಗುಣ ದೈಹಿಕಮತೀಯ ಮನುಷ್ಯರಲ್ಲಿ ಸಾಮಾನ್ಯವಾಗಿರುವುದು ಇತಿಹಾಸ ಪ್ರಸಿದ್ಧ! ಬೇರಾವ ಪ್ರಾಣಿಜಾತಿಯಲ್ಲಿ ನೂರಾರು ವರ್ಷಗಳ ಕಾಲ ನಿರರ್ಥಕ ಯುದ್ಧಗಳು ನಡೆದಿವೆ? [illegible] ವಿಹಾರಸುಖದ ವರ್ತನೆಯಿದೆ? ಯಜ್ಞ, ಯಾಗ, ಪ್ರಾಣಿಬಲಿಗಳಂತಹ ಸದಾಚಾರಗಳಿವೆ? ಮಕ್ಕಳಿಗಾಗಿ ತಾಯಿತಂದೆಯರು ತಮ್ಮ ಬದುಕಿನ ಬಹುಭಾಗವನ್ನು ತ್ಯಾಗಮಾಡುವ ಸದ್ವರ್ತನೆಯಷ್ಟೆಯೆ ಜೀವವಿಕಸನದಿಂದ ಮಾನವರಿಗೆ ದೊರೆತ ಕೊಡುಗೆಯಲ್ಲ! ಜನಸಮೂಹದಲ್ಲಿ ಬದುಕಿ ಪರಸ್ಪರ ಪ್ರೇಮ ಬಾಂಧವ್ಯಗಳಲ್ಲಿ ಕಷ್ಟಸುಖಗಳನ್ನು ಹಂಚಿಕೊಂಡು ಜನಪ್ರಗತಿ ಸಾಧಿಸುವ ವರ್ತನೆ ಕೋಟ್ಯಂತರ ವರ್ಷಗಳಿಂದ ಬೆಳೆಯುತ್ತಿದೆ. ನಮ್ಮ ಎಲ್ಲ ನಾಗರಿಕತೆಗಳು, ಅವುಗಳ ಸಾಮಾಜಿಕತೆಯ ಉತ್ಪನ್ನಗಳಾದ ನಮ್ಮ ಎಲ್ಲ ಸಂಸ್ಕೃತಿಗಳು, ಈ ವರ್ತನೆಗಳಲ್ಲದೆ ಬೇರೇನು? ಈ ವರ್ತನೆಗಳಿಲ್ಲದಿರುವಲ್ಲಿ ಆ ನಾಗರಿಕತೆ ಆ ಸಂಸ್ಕೃತಿಗಳ ಅಸ್ತಿತ್ವವೆಲ್ಲಿಂದ ಬರುತಿತ್ತು? ಆದರೆ, ವಿಜ್ಞಾನದ ಈ ಸತ್ಯಗಳನ್ನು ವಿರೋಧಿಸುತ್ತಲೇ ಬಂದಿರುವ ದೈವಿಕಮತಗಳು ಮನುಷ್ಯಶ್ರೇಷ್ಠವೆನ್ನುವ ವರ್ತನೆಗಳು :

ಸಾಮೂಹಿಕ ಜನಜೀವನದಲ್ಲಿ ಭೇದ ತರುವ ಜಾತೀಯತೆ,
ವ್ಯಕ್ತಿಕೇಂದ್ರಿತವಾಗಿಯೇ ಸಾಧಿಸಬೇಕಾದ ಆಧ್ಯಾತ್ಮಿಕ ಆತ್ಮೋದ್ಧಾರ,
ಪರಿಸರ, ಪ್ರಕೃತಿ, ಪರ್ಯಾವರಣಗಳನ್ನು ನಿರ್ಲಕ್ಷಿಸುವ ಪರಲೋಕನಿಷ್ಠೆ, ಇತ್ಯಾದಿ.
ಇವೆಲ್ಲವೂ, ಜೀವವಿಕಸನ ವಿರೋಧಿ ವರ್ತನೆಗಳೆ ತಾನೇ!

ಇಂದಿನ ಮಾನವನನ್ನು ಬೆಳೆಸಿಟ್ಟವರು ಬಹು ಹಿಂದಿನಿಂದಿರುವ ಸಾಧಾರಣ ಪ್ರಾಣಿಗಳು. ಅವುಗಳ ಅರಿವು ಬಹು ಕಡಿಮೆ ಮಟ್ಟದ ಆರಂಭದ್ದಾಗಿದ್ದರೂ, ತಮ್ಮ ಸಂತಾನದ ಅಭಿವೃದ್ಧಿಯ ಗುರಿ ತಲುಪಲು, ಅವು ಮಾಡಿದ ಸ್ವಾರ್ಥತ್ಯಾಗಗಳು, ಆ ತ್ಯಾಗವನ್ನು ಬೆಂಬಲಿಸಿದ ಸದ್ವರ್ತನೆಗಳು, ಹಾಗೂ ಆ ಗುರಿಯ ಸಾಧನೆಗೆ ಅತ್ಯವಶ್ಯಕ ವಾಗಿದ್ದ ಸಾಮೂಹಿಕ/ಸಾಮಾಜಿಕ ಮಾರ್ಗಗಳನ್ನು ಬೆಳೆಸಿಕೊಂಡ ವಿವೇಚನಾತ್ಮಕ ಪ್ರವೃತ್ತಿ, ಇವುಗಳನ್ನೆಲ್ಲ ನೆನಪಿಡುವುದು ಬರಿಯ ಕೃತಜ್ಞತೆಯಷ್ಟೆ ಅಲ್ಲ! ಅದು ನಮ್ಮ ಭವಿಷ್ಯತ್ತಿಗೂ ಮಾರ್ಗದರ್ಶಕ! ನಮ್ಮ ಸ್ವಂತ ಮಕ್ಕಳ ಅಭಿವೃದ್ಧಿ, ನಮ್ಮ ಇಡೀ ಮಾನವ ಸಮಾಜದ ಅಭಿವೃದ್ಧಿಯಿಂದ ಮಾತ್ರ ಸಾಧ್ಯ ಎನ್ನುವ ಸರಳ ಸತ್ಯವನ್ನು ನಾವಿನ್ನೂ ಇಷ್ಟೊಂದು ವಿಕಾಸದ ಪಾಠಗಳ ನಂತರವೂ ಕಲಿಯದೇ ಇರುವುದು ನಾಚಿಕೆಗೇಡಿನ ವಿಷಯ! ಆ ಪ್ರಾಣಿಗಳು ನಮ್ಮನ್ನು 'ಛೀ' ಎನ್ನುವುದು ಬೇಡವಾದರೆ, ನಾವು ಮಾಡಬೇಕಾದದ್ದು ಏನು? ಆಗಲೆ ಹೇಳಿದಂತೆ ಅತ್ಯಗತ್ಯ ಆಹಾರ, ಮತ್ತು ಅತ್ಯವಶ್ಯಕ ಅನುಭವ (ಅಂದರೆ, ಸಾಮಾಜಿಕ ಸಂಸ್ಕೃತಿಯಲ್ಲಿ ಪಾಲುಗಾರಿಕೆ ಇವುಗಳಿಂದ ವಂಚಿತರಾದ ಶಿಶುಗಳ ಮೆದುಳುಗಳ ದುಃಸ್ಥಿತಿಯನ್ನು ಕಣ್ಣಾರೆ ಕಾಣುವಷ್ಟು ಅದ್ಭುತ ತಂತ್ರಜ್ಞಾನಿಗಳಾದ ನಮಗೆ, ಕ್ಷಾಮ, ಅತಿಬಡತನ, ಯುದ್ಧಾಘಾತ, ಜಾತಿಮತಸಂಘರ್ಷ ಇಂತಹವುಗಳಿಂದ ಕಂಗೆಟ್ಟ ಪ್ರದೇಶಗಳ ಜನಗಳ ಶಿಶುಗಳ ಮೆದುಳುಗಳ ಚಿತ್ರಗಳೇಕೆ ಕಾಣುತ್ತಿಲ್ಲ? ಪ್ರಪಂಚದ ಅನೇಕ ಪ್ರದೇಶಗಳು, ಆಫ್ರಿಕಾದ ಹಲವು ದೇಶಗಳಂತೂ ಅತಿ ಉಲ್ಬಣವಾಗಿ, ಸುಧಾರಣೆಗೊಳ್ಳಲಾಗದ ದುರಂತ ಚಕ್ರಗಳಲ್ಲಿ ಸಿಲುಕಿರುವುದು ಇಂತಹ ಪರಿಣಾಮಗಳ ಪರಿಸ್ಥಿತಿಯಲ್ಲಿಯೇ! ಶತಕೋಟಿ ವರ್ಷಗಳ ಅನುಭವದ ಪ್ರಚಂಡ ಜೀನ್ಸ್‌ಗಳು, ಆ ಮಕ್ಕಳನ್ನು ಉಳಿಸುವುದು, ಜೊತೆಗೆ ಮತ್ತಷ್ಟು ಅವರ ಸಂಖ್ಯಾವೃದ್ಧಿಯ ವರ್ತನೆಯನ್ನು ಬೆಳೆಸುವುದು ಖಂಡಿತ! 'ಬಾಲ್ಯ ಎಂಬ ಸಸ್ತನಿನಿಬದ್ಧ ಜನ್ಮಸಿದ್ಧ ಹಕ್ಕನ್ನು ಕಳೆದುಕೊಂಡ ಆ ಮಕ್ಕಳ ಗುಣ ಮತ್ತು ವರ್ತನೆಗಳು, ಹಕ್ಕು ಕಸಿದು ಬೆಳೆದ ಸ್ಥಿತಿವಂತರ ನಾಜೂಕು ಮಕ್ಕಳಿಗೆ ಒಗ್ಗಿಕೊಳ್ಳುವಂತೆ ಇರಲಿಕ್ಕಿಲ್ಲ ಎಂಬ ಸ್ಥಿತಿಪ್ರಜ್ಞೆ, ಎಲ್ಲ ಸ್ಥಿತಿವಂತರಿಗೆ ಎಷ್ಟು ಬೇಗ ಬಂದರೆ ಅಷ್ಟು ಮಾತ್ರ, ಅವರ ಇವರ ಎಲ್ಲ ಮಕ್ಕಳಿಗೂ ಕ್ಷೇಮ!

ಡಾ|| ಎಮ್. ಎನ್. ಕೇಶವ ರಾವ್
ನಂ. ೩೮೮, ವೆಂಕಟೇಶ ದಾಸ್ ರೋಡ್,
ಪದ್ಮನಾಭನಗರ, ಬೆಂಗಳೂರು - ೫೬೦ ೦೭೦

ಹನಿಯೊಂದು ಜಾರಿದೆ



ಕಣ್ಣ ಬೇಲಿಯ ಜಿಗಿದು ಹಾರಿ
ಹನಿಯೊಂದು ಜಾರಿದೆ
ಕಲ್ಲಾದ ಎದೆಯ ಭಾರ
ಕರಗಿ ನೀರಾಗಿದೆ.

ಪುಟ್ಟ ಹನಿಯೊಳಗೆ ಬದುಕ ಬಣ್ಣಗಳು
ಗಾಢವಾಗಿ ಕದಡಿವೆ
ಮನದ ಭಾವ ಚಿತ್ರವಾಗಿ
ಕಣ್ಣಂಚಲಿ ಫಲಿಸಿದೆ.

ಖುಷಿಯ ಮಿಡಿತಕು ನೋವ ಬಡಿತಕೂ
ಕಣ್ಣಲ್ಲವೇ ಕನ್ನಡಿ ?
ಎದೆಯ ಭಾವದ ಕಾವ್ಯ ಲಹರಿಗೆ
ಕಣ್ಣೆ ತಾನೇ ಮುನ್ನುಡಿ.

ನೂರು ಮಾತು ನೂರು ಮೌನ
ಒದ್ದೆಯಾಗಿ ತೇಲಿದೆ
ಹರಿದ ಹನಿಹನಿಯಲ್ಲು ಹೊಸತು
ಲೋಕವೇ ತೆರೆದಿದೆ.

ಸ್ಮಿತಾ ಅಮೃತರಾಜ್, ಸಂಪಾಜೆ
'ಹಸಿರು', ಚಾಲಂಬ ಅಂಚೆ, ಚೆಂಬು ಗ್ರಾಮ
ಮಡಿಕೇರಿ ತಾಲ್ಲೂಕು, ಕೊಡಗು– 574234

ನೆನಪಿನ ಸುರುಳಿಯನ್ನು ಬಿಚ್ಚಿದ ಮಡೆಸ್ನಾನ

ಸನತ್‌ಕುಮಾರ ಬೆಳಗಲಿ

ಕುಕ್ಕೆ ಸುಬ್ರಹ್ಮಣ್ಯದ ಮಡೆಸ್ನಾನದ ಬಗ್ಗೆ ನಾಡಿನಲ್ಲಿ ದ್ದಿರುವ ಪ್ರತಿಭಟನೆಯ ಅಲೆಯನ್ನು ನೋಡಿದಾಗ, ನನಗೆ ಲ್ಕು ದಶಕಗಳ ಹಿಂದೆ ನಡೆದ ಎರಡು ಘಟನೆಗಳು ನೆನಪಿಗೆ ಂದವು. ಒಂದರಲ್ಲಿ ಸ್ವತಃ ನಾನೇ ತೊಡಗಿಸಿಕೊಂಡಿದ್ದೆ. ಟ್ನೊಂದನ್ನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೆ. ಇವೆರಡು ಟನೆಗಳಲ್ಲಿ ಅಂದಿನ ರಾಜ್ಯ ಸರ್ಕಾರಗಳು ಮನುಷ್ಯ ವಿರೋಧಿ ದಾಚಾರದ ವಿರುದ್ಧ ದೃಢವಾದ ಕಾನೂನು ಕ್ರಮವನ್ನು ಕೊಂಡಿದ್ದವು. ಆದರೆ ಇಂತಹ ಅಂಧಶ್ರದ್ಧೆಗಳನ್ನು ಹಾಗೂ ಣೀಕೃತ ಜಾತಿ ವ್ಯವಸ್ಥೆಯನ್ನು ರಕ್ಷಿಸಿ ಮುಂದುವರೆಸಿಕೊಂಡು ೀಗುವ ಸೈದ್ಧಾಂತಿಕ ಹಿನ್ನೆಲೆ ಹೊಂದಿರುವ ಬಿಜೆಪಿಯಂತಹ ಈಗ ರಾಜ್ಯದಲ್ಲಿ ಅಧಿಕಾರದಲ್ಲಿ ಇರುವುದರಿಂದ ವಿಧಾನಬದ್ಧ ಆಡಳಿತವನ್ನಾಗಲಿ, ಕಟ್ಟುನಿಟ್ಟಿನ ಕಾನೂನಿನ ಕ್ರಮವನ್ನಾಗಲಿ ನಿರೀಕ್ಷಿಸಲು ಆಗುವುದಿಲ್ಲ.

ನಾನು ಹೇಳಿದ ಎರಡು ಘಟನೆಗಳ ಪೈಕಿ ಮೊದಲನೆಯದ್ದು ರ ದಶಕದಲ್ಲಿ ಉತ್ತರ ರ್ನಾಟಕದಲ್ಲಿ ಆಚರಣೆಯಲ್ಲಿದ್ದ ಳಿ ಎಂಬ ಕೆಟ್ಟ ಸಂಪ್ರದಾಯ. ಮಾರ್ಚ್‌ನಿಂದ ಜೂನ್ ಗಳ ಕಾಲಾವಧಿಯಲ್ಲಿ ಆ ಭಾಗದ ಬಹುತೇಕ ಹಳ್ಳಿಗಳಲ್ಲಿ ಳಿ ನಡೆಯುತ್ತಿತ್ತು. ಆ ದಿವಸ ನೀರಿನ ಹೊಂಡ ಅಗೆದು, ಅದಕ್ಕೆ ನೀರು ತುಂಬುತ್ತಾರೆ. ಸಾಯಂಕಾಲ ಓಕುಳಿ ಉತ್ಸವ ಆರಂಭವಾಗುತ್ತಿತ್ತು. ದಲಿತ ಸಮುದಾಯದ ಹರೆಯದ ಹೆಣ್ಣುಮಕ್ಕಳನ್ನು ಬೀದಿ ಮೇಲೆ ನಿಲ್ಲಿಸಿ, ಊರಿನ ಮೇಲುಜಾತಿಯ ಗಂಡಸರು ಅವರಿಗೆ ನೀರನ್ನು ಎರಚುತ್ತಿದ್ದರು. ಬಿರುಸಿನಿಂದ ಬರುವ ನೀರಿನ ಹೊಡೆತವನ್ನು ತಪ್ಪಿಸಿಕೊಳ್ಳಲು ಆ ದಲಿತ ಯುವತಿಯರು ಬೀದಿಯುದ್ದಕ್ಕೂ ಒದ್ದೆ ಸೀರೆಯನ್ನುಟ್ಟುಕೊಂಡು ಓಡಾಡುತ್ತಿದ್ದರು. ಹೆಂಡ ಕುಡಿದು ಉನ್ಮತ್ತರಾದ ಮೇಲುಜಾತಿ ಗಂಡಸರು ಅವರನ್ನು ಬೆನ್ನು ಹತ್ತಿ, ಹೊಲಸುರಾಡಿ ನೀರಿನಿಂದ ಅಭಿಷೇಕ ಮಾಡಿಸುತ್ತಿದ್ದರು.

ಚಳಿಯಲ್ಲಿ ಗಡಗಡ ನಡುಗುತ್ತ ಓಡಾಡುವ ಮಹಿಳೆಯರನ್ನು ಸಾರಾಯಿ ಕುಡಿದು ಬೆನ್ನಟ್ಟಿ ಹೋಗುವ ಗಂಡಸರು, ಕಾಲು ಜಾರಿ ರಾಡಿಯಲ್ಲಿ ಉಳ್ಳಾಡುವ ಹೆಂಗಸರನ್ನು ಕಂಡು ಕೇಕೆ ಹಾಕುತ್ತಿದ್ದರು. ಯುವತಿಯರ ಅಂಗಾಂಗಗಳನ್ನು ಕಂಡು ಲೇವಡಿ ಮಾಡುತ್ತಿದ್ದರು. ಈ ಓಕುಳಿ ಸಂಜೆ ೪ ರಿಂದ ರಾತ್ರಿ ೭ ಗಂಟೆಯವರೆಗೆ ನಡೆಯುತ್ತಿತ್ತು. ಊರಲ್ಲಿ ಮೇಲುಜಾತಿಯ ಮಹಿಳೆಯರು ಕೂಡ ತಮ್ಮ ಸೋದರಿಯರಿಗೆ ಆಗುತ್ತಿದ್ದ ಅವಮಾನವನ್ನು ಕಂಡು 'ಎಂಜಾಯ್' ಮಾಡುತ್ತಿದ್ದರೆಂದರೆ ಜಾತಿಗ್ರಸ್ತ ಮನಸ್ಸುಗಳು ಎಷ್ಟು ಅಮಾನವೀಯವಾಗಿ ಇರುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿತ್ತು.



ಬ್ರಾಹ್ಮಣರು ಕುಂತುಂಡ ಎಂಜಲೆಲೆಗಳ ಮೇಲೆ
ಶೂದ್ರಜನ ಉರುಳಾಡಿದರೆ ಶ್ರೇಯವಂತೆ
ಭೂಸುರೋಪಾಸನೆಯ ಮಡೆಸ್ನಾನವಂತೆ
ಅಟ್ಟುಣ್ಣಲಿಕ್ಕೆ ಬಿಟ್ಟಿ ಕಾಳುಪಡಿ ಮೊದಲೆ ಕೊಡಬೇಕಂತೆ
ಉಂಡವನು ತೇಗಿದರೆ ಉರುಳಾಡಿದವನಿಗೆ ಹುಣ್ಣು
ಇದ ಕಂಡೂ ಕಂಡು ಹರಕೆಯ ಪ್ರಶ್ನಿಸಲು ಬಾರದು
ಎನ್ನುವ ಅಕ್ಷರವಂತ ಜನ
ಕೋಟಿ ಕೋಟಿಗೆ ಹರಾಜಾದ ಕ್ರಿಕೆಟ್ಟಿಗರ ಕಂಡು
ಅಯ್ಯೋ ಅವಮಾನ ಅವಮಾನವೆಂದಳುತ್ತಿಹವಯ್ಯ
ಈ ಹರಕೆ ಹರಾಜುಗಳ ವ್ಯಾಕರಣದ ಮತಿಸೂಕ್ಷ್ಮವ ಕಂಡು
ನೆಲನೆದ್ದು ನಗುತ್ತಿಹುದಯ್ಯ
ಅರಿವೇ ಗುರುವೆಂದ ಗುರುಸಿದ್ಧರಾಮ ತಂದೆ

('ಅರಿವು ನಾಚಿತ್ತು' ಸಂಕಲನದಿಂದ)

ಎಸ್ .ಜಿ. ಸಿದ್ಧರಾಮಯ್ಯ, ಎಸ್-೧೨೩ ದೀಪ್ತಿ ಅಪಾರ್ಟ್‌ಮೆಂಟ್ಸ್, ಎಫ್-೨, ಕಿರ್ಲೋಸ್ಕರ್ ಕಾಲನಿ, ೧ನೇ ಅಡ್ಡರಸ್ತೆ, ಬಸವೇಶ್ವರ ನಗರ, ಬೆಂಗಳೂರು - ೭೯

ನನ್ನ ಊರಾದ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಈ ಓಕುಳಿ ಪ್ರತಿ ವರ್ಷ ನಡೆಯುತ್ತಿತ್ತು. ಅದು ೧೯೭೫ನೇ ಇಸವಿ. ಆಗ ಉಪರಾಷ್ಟ್ರಪತಿಯಾಗಿದ್ದ ಬಸಪ್ಪ ದಾನಪ್ಪ ಜತ್ತಿ ನಮ್ಮೂರಿನವರು. ಇಂತಹ ಊರಿನಲ್ಲಿ ಓಕುಳಿಯ ಈ ಹೇಯ ದೃಶ್ಯವನ್ನು ನಾನು ಕಣ್ಣಾರೆ ಕಂಡೆ. ಆಗ ನನ್ನ ವಯಸ್ಸು ೨೧. ಎಡಪಂಥೀಯ ವಿಚಾರಗಳು ಆದೇ ತಾನೇ ಮೆದುಳನ್ನು ತಟ್ಟಿದ್ದರಿಂದ ಈ ದೃಶ್ಯ ನೋಡಿ, 'ಎಂಜಾಯ್' ಮಾಡಲು ಮನಸ್ಸಾಗಲಿಲ್ಲ. ತುಂಬ ಸಂಕಟಪಟ್ಟುಕೊಂಡೆ. ಆಗ ದಲಿತ ಸಂಘರ್ಷ ಸಮಿತಿ ಕೂಡ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಹೀಗಾಗಿ ಇಂತಹ ಅನ್ಯಾಯಗಳಿಗೆ ಪ್ರತಿಭಟನೆ ಎಂಬುದೇ ಇರುತ್ತಿರಲಿಲ್ಲ.

ಈ ಓಕುಳಿ ನಡೆದ ಮರುದಿನ ನನ್ನ ಮನಸ್ಸು ತಡೆಯಲಾಗಲಿಲ್ಲ. ಎಲ್ಲ ಪತ್ರಿಕೆಗಳಿಗೂ ಕಾಗದ ಬರೆದೆ. ಆಗ ಕೊರಿಯರ್ ವ್ಯವಸ್ಥೆ ಇರಲಿಲ್ಲ. ಆದರೆ ಅಂಚೆಕಚೇರಿಯಲ್ಲಿ ಸಿಗುವ ಅಂತರ್ದೇಶೀಯ ಪತ್ರದಲ್ಲಿ ಈ ಬಗ್ಗೆ ಬರೆದು ಕಳುಹಿಸಿದೆ. ಅದು ಪ್ರಕಟವಾಗುತ್ತದೆ ಎಂಬ ನಂಬಿಕೆಯೂ ನನಗಿರಲಿಲ್ಲ. ಆದರೆ ಪತ್ರದ ಮೂಲಕವಾದರೂ ಪ್ರತಿಭಟಿಸಿದೆ ಎಂಬ ನೈತಿಕ ನೆಮ್ಮದಿ ಮಾತ್ರವಿತ್ತು. ಒಂದು ವಾರದ ತನಕ ಪತ್ರಿಕೆಗಳನ್ನು ನೋಡುತ್ತಲೇ ಇದ್ದೆ. ಆಗ ನಮ್ಮೂರಿಗೆ ಬರುತ್ತಿದ್ದ ಏಕಮಾತ್ರ ಕನ್ನಡ ಪತ್ರಿಕೆ 'ಸಂಯುಕ್ತ ಕರ್ನಾಟಕ' ಸಂಜೆ ೭ ಗಂಟೆಗೆ ಬಸ್ ಮೂಲಕ ಬಂದು ಕೈಗೆ ಸೇರುತಿತ್ತು.

ಸಮಾಜವಾದಿ ಚಳವಳಿಯಿಂದ ಬಂದ ಖಾದ್ರಿ ಶಾಮಣ್ಣ ಆಗ ಸಂಯುಕ್ತ ಕರ್ನಾಟಕದ ಸಂಪಾದಕರಾಗಿದ್ದರು. ಎಸ್. ವಿ. ಜಯಶೀಲರಾವ್ ಸಹಾಯಕ ಸಂಪಾದಕರು. ಕೆ. ಜನಾರ್ದನ ಎಂಬ ಪ್ರಗತಿಪರ ಒಲವಿನ ಸ್ಥಾನಿಕ ಸಂಪಾದಕರು ಇದ್ದರು. ಓದುಗರ ವಿಭಾಗಕ್ಕೆಂದು ನಾನು ಕಳುಹಿಸಿದ ಪತ್ರ ಆಕಸ್ಮಿಕವಾಗಿ ಖಾದ್ರಿಯವರಿಗೆ ಸಿಕ್ಕಿದೆ. ಅವರು ತಕ್ಷಣ ಜಯಶೀಲರಾವ್ ಅವರನ್ನು ಕರೆದು ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಲು ಹೇಳಿದರು. ೧೯೭೫ ಜೂನ್ ೧೯ರ ಸಂಚಿಕೆಯಲ್ಲಿ ''ಷಂಡ ಸಮಾಜದಲ್ಲಿ ದುಶ್ಯಾಸನರ ಕೇಕೆ'' ಎಂಬ ತಲೆಬರಹದಡಿಯಲ್ಲಿ ನನ್ನ ಪತ್ರ ಪ್ರಕಟವಾಯಿತು. ಸಂಯುಕ್ತ ಕರ್ನಾಟಕದ ಆವರೆಗಿನ ಇತಿಹಾಸದಲ್ಲಿ ಓದುಗರ ಪತ್ರವೊಂದು ಮುಖಪುಟದಲ್ಲಿ ಪ್ರಕಟವಾಗಿದ್ದು ಅದೇ ಮೊದಲು.

೧೯೭೫ರಲ್ಲಿ ದೇವರಾಜ ಅರಸು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು. ಬಿ. ಬಸವ ಲಿಂಗಪ್ಪ, ಕೆ. ಎಚ್. ರಂಗನಾಥ, ಎಂ. ವೈ. ಘೋರ್ಪಡೆ, ವೀರಪ್ಪ ಮೊಯಿಲಿ ಮುಂತಾದವರು ಸಚಿವ ಸಂಪುಟದಲ್ಲಿದ್ದರು. ಮೇಲುಜಾತಿ, ಮೇಲುವರ್ಗಗಳ ಯಜಮಾನಿಕೆ ವಿರುದ್ಧ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನು ಒಂದುಗೂಡಿಸಿ ಕರ್ನಾಟಕದ ರಾಜಕೀಯಕ್ಕೆ ಹೊಸ ದಿಕ್ಕನ್ನು ನೀಡಿದ ಅರಸರು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ ನನ್ನ ಪತ್ರವನ್ನು ನೋಡಿ ತಕ್ಷಣ ಓಕುಳಿಯನ್ನು ನಿಷೇಧಿಸುವ ಆದೇಶ ಹೊರಡಿಸಿದರು. ಎಲ್ಲೆಲ್ಲಿ ಓಕುಳಿ ನಡೆಯುತ್ತದೆ ಎಂಬ ಬಗ್ಗೆ ಸಮಗ್ರ ವರದಿ ನೀಡುವಂತೆ ಅಧಿಕಾರಿಗಳಿಗೆ ಆದೇಶ ನೀಡಿದರು.

ದೇವರಾಜ ಅರಸು ಸರ್ಕಾರವೇನೋ ಓಕುಳಿಯನ್ನು ನಿಷೇಧಿಸಿತು. ಆದರೆ ಸಾವಳಗಿಯಲ್ಲಿ

ಸಂಪ್ರದಾಯವಾದಿಗಳಿಂದ ನನಗೆ ಕಿರಿಕಿರಿ ಆರಂಭವಾಯಿತು. ''ಇದನ್ನೆಲ್ಲ ಯಾಕೆ ಬರೆದೆ ? ಪೇಪರ್‌ಗೆ ಯಾಕೆ ಕಳುಹಿಸಿದೆ ? ಓಕುಳಿ ನಿಲಿಸಿದರೆ ಮಳೆಯಾಗುವುದಿಲ್ಲ. ಬರಗಾಲ ಬರುತ್ತದೆ'' ಎಂದು ನಮ್ಮೂರಿನ ಪುಢಾರಿಗಳು ನನಗೆ ಹಿಂಸೆ ನೀಡತೊಡಗಿದರು. ಇಂತಹ ಮಾತುಗಳು ನಮ್ಮ ಸಂಬಂಧಿಗಳಿಂದಲೂ ಕೇಳಿ ಬಂದವು. ಆದರೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಹೊಂದಿದ ನಮ್ಮ ಮನೆಯಲ್ಲಿ ಯಾರೂ ಅದನ್ನು ತಪ್ಪೆಂದು ಹೇಳಲಿಲ್ಲ. ಆದರೆ ಮುಂದಿನ ವರ್ಷ ಮಳೆಯಾಗುವುದಿಲ್ಲ ಎಂದು ಜನರು ಕಿರಿಕಿರಿ ಮಾಡತೊಡಗಿದಾಗ ರೋಸಿ ಹೋದ ನಾನು, [illegible] ಒಕುಳಿಗೆ ನಿಲ್ಲಿಸೋಣ'' ಎಂದು ಕೋಪದಿಂದ ಹೇಳಿ ಎದ್ದುಬಂದೆ.

ಆ ಚಿಕ್ಕವಯಸ್ಸಿನಲ್ಲಿ ಏಕಾಕಿಯಾಗಿ ಊರಿನವರನ್ನು ಎದುರು ಹಾಕಿಕೊಳ್ಳುವ ಧೈರ್ಯ ನನಗೆ ಬಂದಿದ್ದು ಎಡಪಂಥೀಯ ವೈಚಾರಿಕ ದೃಷ್ಟಿಕೋನದಿಂದ. ಯಾವಾಗ ನಾನು ತಿರುಗಿ ನಿಂತೆನೋ, ಆಗ ಹಿರಿಯರು ತಣ್ಣಗಾದರು. ಮರುವರ್ಷದಿಂದ ಸಾವಳಗಿಯಲ್ಲಿ ಮಾತ್ರವಲ್ಲ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಓಕುಳಿ ನಿಷೇಧಿಸಲ್ಪಟ್ಟಿತು. ಕೆಲವಡೆ ಪೊಲೀಸರ ಕಣ್ಣುತಪ್ಪಿಸಿ, ಓಕುಳಿ ನಡೆದರೂ ದಲಿತ ಮಹಿಳೆಯರನ್ನು ಅವಮಾನಿಸುವ ಪದ್ಧತಿ ನಿಂತುಹೋಯಿತು.


ನನ್ನ ನೆನಪಿಗೆ ಬರುವ ಇನ್ನೊಂದು ಘಟನೆ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯ ಬೆತ್ತಲೆ ಸೇವೆ. ಇದು ೮೦ರ ದಶಕದಲ್ಲಿ ನಡೆದ ಘಟನೆ. ಹರಕೆ ತೀರಿಸಲು ಹಿಂದುಳಿದ ವರ್ಗದ ಹೆಣ್ಣುಮಕ್ಕಳು ಬೆತ್ತಲೆಯಾಗಿ ಚಂದ್ರಗುತ್ತಿ ದೇವಾಲಯಕ್ಕೆ ಬರುತ್ತಿದ್ದರು. ಆಗ ಇದನ್ನು ತಡೆಯಲು ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಬಿ.ಕೃಷ್ಣಪ್ಪ ಪ್ರತಿಭಟನೆಯೊಂದನ್ನು ಸಂಘಟಿಸಿದರು. ರಾಮಕೃಷ್ಣ ಹೆಗಡೆಯವರು ಆಗ ರಾಜ್ಯದ ಮುಖ್ಯಮಂತ್ರಿ. ಅವರ ಸರ್ಕಾರವೇನೋ ಬೆತ್ತಲೆಪೂಜೆ ನಿಷೇಧಿಸಿತು. ಆದರೆ ಅಂಧಶ್ರದ್ಧೆಯ ನಶೆಯೇರಿದ್ದ ಭಕ್ತರು ಚಂದ್ರಗುತ್ತಿಗೆ ಬರುವುದನ್ನು ನಿಲ್ಲಿಸಲಿಲ್ಲ.

ಡಿಎಸ್ಎಸ್ ಗೆಳೆಯರು ಪ್ರತಿಭಟನೆಗೆ ಮುಂದಾದಾಗ, ಕೃಷ್ಣಪ್ಪ ಅವರನ್ನು ಕೊಲೆ ಮಾಡುವ ಯತ್ನವೂ ನಡೆಯಿತು. ಘೋಷಣೆ ಹಾಕುತ್ತಿದ್ದ ಕಾರ್ಯಕರ್ತರನ್ನು ಮತ್ತೇರಿದ ಗೂಂಡಾಗಳು ಅಟ್ಟಾಡಿಸಿ ಹೊಡೆದರು. ಆಗ ಅಲ್ಲಿ ವಿಶೇಷ ತಹಸೀಲ್ದಾರ್ ಆಗಿದ್ದ ವಿಚಾರವಾದಿ ರುದ್ರಪ್ಪ ಹನಗವಾಡಿ ಇಂದಿಗೂ ಬೀಭತ್ಸ ಘಟನೆಗಳನ್ನು ನೆನಪಿಸಿಕೊಂಡು ಮಾತಾಡುತ್ತಿರುತ್ತಾರೆ.

ಸುಬ್ರಹ್ಮಣ್ಯದ ಮಡೆಸ್ನಾನದ ವರದಿ ಓದಿದಾಗ, ಅರಸು ಮತ್ತು ಹೆಗಡೆ ಕಾಲದಲ್ಲಿ ಮುಂದೆ ಹೋಗಿದ್ದ ಕರ್ನಾಟಕ ಮತ್ತೆ ಮನುವಾದದ ಕತ್ತಲೆಯುಗಕ್ಕೆ ವಾಪಸು ಹೊರಟಿದೆಯಲ್ಲ ಎಂದು ವೇದನೆಯಾಯಿತು. ೧೯೭೦ರಲ್ಲಿ ಕಾಂಗ್ರೆಸ್‌ಗೆ ಸೇರಿದ ದೇವರಾಜ ಅರಸು, ೧೯೮೩ರಲ್ಲಿ ಜನತಾ ದಳಕ್ಕೆ ಸೇರಿದ ರಾಮಕೃಷ್ಣ ಹೆಗಡೆ ರಾಜ್ಯದ ಅಧಿಕಾರಸೂತ್ರ ಹಿಡಿದಿದ್ದರು. ಅವೆರಡು ಪಕ್ಷಗಳು ಸಂವಿಧಾನದಲ್ಲಿ ನಂಬಿ[ke] ಹೊಂದಿದ್ದರಿಂದ ಓಕುಳಿ ಮತ್ತು ಬೆತ್ತಲೆ ಸೇವೆಯಂತಹ ಕೆಟ್ಟ ಸಂಪ್ರದಾಯಗಳ[ನ್ನು] ನಿಷೇಧಿಸಿದವು. ಆದರೆ ಈಗ ರಾಜ್ಯದ ಅಧಿಕಾರ ಹಿಡಿದಿರುವುದು ಬಿಜೆಪಿ. ಈ ಪಕ್ಷ[ದ] ನಾಯಕಿಯಾಗಿದ್ದ ರಾಜಮಾತಾ ವಿಜಯರಾಜೇ ಸಿಂಧಿಯಾ ಸತಿ ಸಹಗಮ[ನ] ಪದ್ಧತಿಯನ್ನೇ ಬೆಂಬಲಿಸಿದವರು. ಸಂಘಪರಿವಾರದ ಅನೇಕ ನಾಯಕರು ಬಹಿರಂಗವಾ[ಗಿ] [illegible] ಅದು ಹಿಂದೂ ಸಂಪ್ರದಾಯದ ಭಾಗ ಎಂದು ಒಪ್ಪಿಕೊಂಡವರು. ಹಿಂದೂರಾಷ್ಟ್ರ ನಿರ್ಮಾಣವಾದಾಗ ಈ ಕರಾಳ ಸಂಪ್ರದಾಯವನ್ನು ಮುಂದುವರೆಸು[ವ] ಹಿ[illegible] ಅಜೆಂಡಾ ಹೊಂದಿದವರು. ಇಂತಹ ಪರಿವಾರಕ್ಕೆ ಸೇರಿದ ಮುಜರಾಯಿ ಮಂ[ತ್ರಿ] ಡಾ|| ವಿ. ಎಸ್. ಆಚಾರ್ಯ ಅವರು 'ಮಡೆಸ್ನಾನ ಜನರ ನಂಬಿಕೆ ಪ್ರಶ್ನೆ. ಜನರ ಧಾರ್ಮಿ[ಕ] ಸಂಪ್ರದಾಯ-ಆಚರಣೆ-ನಂಬಿಕೆಗಳಿಗೆ ಕಾನೂನಿನ ಹೆಸರಿನಲ್ಲಿ ಅಡ್ಡಿ ಬರಬೇ[ಕು] ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮುಖ್ಯಮಂತ್ರಿ ಸದಾನಂದಗೌಡ[ರು] ಎಂದಿನಂತೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾರೆ.

ಸರ್ಕಾರವೇ ತಮ್ಮ ಬೆಂಬಲಕ್ಕಿದೆ ಎಂದು ಕೊಬ್ಬಿದ ಕುಕ್ಕೆ ಸುಬ್ರಹ್ಮಣ್ಯದ ಪುರೋಹಿತಶಾ[ಹಿ] ಗೂಂಡಾಗಳು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಶಿವರಾಂ ಅವರ ಮೇ[ಲೆ] ಹಲ್ಲೆ ಮಾಡಿ, ಥಳಿಸಿದ್ದಾರೆ. ಆದರೂ ಆಚಾರ್ಯರು, ''ಅನಾದಿಯಿಂದ ನಡೆದು ಬಂ[ದ] ಆಚರಣೆಯನ್ನು ಏಕಾಏಕಿ ನಿಲ್ಲಿಸುವುದು ಸರಿಯಲ್ಲ. ಅಷ್ಟಮಂಗಲ ಪ್ರಶ್ನೆಯಲ್ಲಿ ಕೇ[ಳಿ] ನಂತರ ನಿರ್ಧರಿಸೋಣ'' ಎಂದು ಬಹಿರಂಗ ಹೇಳಿಕೆ ನೀಡಿದ್ದಾರೆ. ಈ ಆಚಾರ್ಯ[ರು] ಸರ್ಕಾರದ ಹಿರಿಯ ಮಂತ್ರಿಗಳು. ಸಂವಿಧಾನದಲ್ಲಿ ನಿಷ್ಠೆ ಹೊಂದಿರುವುದಾಗಿ ಪ್ರಮಾ[ಣ] ಸ್ವೀಕರಿಸಿ, ಅಧಿಕಾರಕ್ಕೆ ಬಂದಿದ್ದಾರೆ. ಆದರೂ ಅಷ್ಟಮಂಗಲದ ಪ್ರಶ್ನೆ ಕೇ[ಳಿ] ತೀರ್ಮಾನಿಸುವುದಾಗಿ ಹೇಳುವಷ್ಟು ಅವಿವೇಕತನವನ್ನು ತೋರಿಸಿದ್ದಾರೆ. ಇನ್ನೂ ಮಂ[ತ್ರಿ] ಯಾಗಿರಲು ಅವರು ಅರ್ಹರಲ್ಲ. ಮಂತ್ರಿ ಮಂಡಲಕ್ಕೆ ರಾಜೀನಾಮೆ ನೀಡಿ ಉಡು[ಪಿ] ಮಠದಲ್ಲಿ ದರ್ಭೆ ಕಟ್ಟಿಕೊಂಡು ಸೇವೆ ಮಾಡಲು ಹೋಗುವುದು ಕ್ಷೇಮ. ಮಾಧ್ಯ[ಮ] ಗಳಲ್ಲಿರುವ ಕೆಲ ಮನುವಾದಿಗಳು ಬ್ರಾಹ್ಮಣರು ಮತ್ತು ದಲಿತರು ಉಂಡ ಎಲೆ ಮೇ[ಲೆ] ಉರುಳಾಡಿ, ಮಡೆಸ್ನಾನ ಮಾಡುತ್ತಾರೆಂದು ಸುಳ್ಳು ಕತೆ ಕಟ್ಟಿ ಈ ಕಂದಾಚಾರವ[ನ್ನು] ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಿಜೆಪಿ ಸರ್ಕಾರ ಹೋಗುವವರೆಗೆ ಇಂತಹ ಅವಿವೇಕಗಳಿ[ಗೆ] ಕೊನೆ ಎಂಬುದಿಲ್ಲ. ಬಹುಶಃ ಶ್ರೀರಾಮುಲು ವಿಜಯದ ನಂತರ ಆ ಕಾಲವೂ ಸನ್ನಿ[ಹಿತ] ವಾದಂತೆ ಕಾಣುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರವನ್ನೇ ನಂಬಿಕೊಂಡು ಕು[ಳಿ]ತ[ರೆ] ಆಗದು. ದಲಿತ-ಪ್ರಗತಿಪರ ಸಂಘಟನೆಗಳು ಒಂದುಗೂಡಿ ಇಂತಹ ಅವಿವೇಕಿಗಳಿಗೆ [ಕ]ಿ ಹಿಂಡಿ ಮಾತ್ರವಲ್ಲ, ಇನ್ನೂ ಪರಿಣಾಮಕಾರಿಯಾಗಿ ಬುದ್ಧಿ ಹೇಳಲು ಮುಂದಾಗಬೇಕಾಗಿ[ದೆ].

ಸನತ್‌ಕುಮಾರ ಬೆಳಗಲಿ
ನಂ. ಎಲ್ಎಫ್-೧೭/೬, ಬಿಡಿಎ ಫ್ಲ್ಯಾಟ್ಸ್, ಬಿಟಿಎಂ ಬಡಾವಣೆ, ಬೆಂಗಳೂರು - ೫೬೦ ೦೭೬



ಮಾತನಾಡಬೇಕು ನಾವು

ಮಾತನಾಡಬೇಕು ನಾವು
ಒಂದು ಘಳಿಗೆ ಕುಳಿತು
ಬಿಟ್ಟು ಎಲ್ಲ ಹಮ್ಮು ಬಿಮ್ಮು
ಹೃದಯ ಬೆಸೆಯಬೇಕು

ದಾರ ಏಕೆ ದೂರ ಏಕೆ
ಮಾತನಾಡುವಾಗ
ಬೇಲಿ ಬೇಡ ನೋಟ ಇರಲಿ
ಮನಸು ಕೂಡುವಾಗ


ಹಂಚಿಕೊಂ[illegible]
ರಕ್ತ ಹರಿವುದೇಕೆ ?

ಹಾಲೂಡಿದ ನೆಲವದೊಂದೆ
ಇಲ್ಲಿ ಕದನವೇಕೆ ?

ನನಗೆ ನೀನು ನಿನಗೆ ನಾನು
ಇದು ಅಲ್ಲವೆ ಸತ್ಯ
ಇಂತಿರಲು ಕಲಹವೇಕೆ ?
ಕಾಣದವನೆ ಮಿಥ್ಯ

ನಡೆದ ದಾರಿ ಹಾಗಿರಲಿ
ಹೆಜ್ಜೆ ಮುಂದೆ ಇರಲಿ
ಆಕಾಶವು ಅಳದಿರಲಿ
ನೆಲವು ಕುಸಿಯದಿರಲಿ

ಕಾ. ವೆಂ. ಶ್ರೀನಿವಾಸಮೂರ್ತಿ
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು
ವಿಶ್ವವಿದ್ಯಾಲಯ, ಕೋಲಾರ - ೫೬೩೧೦೧





ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ವಂಚಿಸಿ ಕಪ್ಪುಹಣ ಮತ್ತು ಅಕ್ರಮ ಂಪಾದನೆಯನ್ನು ತೆರಿಗೆದಾರರ ಭದ್ರಕೋಟೆಗಳೆನ್ನುವ ಸ್ವಿಟ್ಜರ್‌ಲೆಂಡ್ ಮೊದಲಾದ ೀಶಗಳಲ್ಲಿ ಬಚ್ಚಿಡುವ ಬಗೆಗೆ ಭಾರತದ ಲೋಕಸಭೆಯ ಒಳಗೂ ಹೊರಗೂ ೀಕಾದಷ್ಟು ಗದ್ದಲ ಗಲಾಟೆಗಳು ನಡೆದಿವೆ, ನಡೆಯುತ್ತಲೂ ಇವೆ. ಆದರೆ ನೂನು ಕಟ್ಟಳೆಗಳ ಅಲಕ್ಷ್ಯದಿಂದಾಗಿ, ತೆರಿಗೆ ವಂಚಕರು ಅನುಸರಿಸುವ ಧಾನಗಳ ಬಗೆಗೆ ಸಾಕಷ್ಟು ಜಾಗೃತಿ ಮೂಡಿರುವುದಿಲ್ಲ. ದಶಕಗಳಿಂದಲೂ ಪ್ಪುಹಣದ ವ್ಯವಹಾರವು ಅಧಿಕೃತ ಸರ್ಕಾರಿ ಆರ್ಥಿಕ ವ್ಯವಹಾರಕ್ಕೆ ರ್ಯಾಯವಾಗಿ ನಡೆದು ಬರುತ್ತ ದೇಶಕ್ಕೆ ಒಂದು ದೊಡ್ಡ ವಿಪತ್ತಿನ ರಿಸ್ಥಿತಿಯೊದಗಿದೆ. ೧೯೭೦ರಷ್ಟು ಹಿಂದೆಯೇ ನ್ಯಾಯಮೂರ್ತಿ ವಾಂಛೂ ದರು ಕಪ್ಪುಹಣದ ಬೆಳವಣಿಗೆಯನ್ನು ಈಗಲೇ ತಡೆಗಟ್ಟದಿದ್ದರೆ ಅದು ೀಗೆಯೇ ಬೆಳೆಯುತ್ತ ಹೋಗಿ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಹಾಳು ಾಡುವುದೆಂದು ಎಚ್ಚರಿಸಿದ್ದರು. ನಾಲ್ಕು ದಶಕಗಳ ಅನಂತರ ಸರ್ವೋಚ್ಚ ್ಯಾಯಾಲಯದ ನ್ಯಾಯಮೂರ್ತಿಗಳೊಬ್ಬರು ಆತಂಕದಿಂದ 'ಈ ದೇಶದಲ್ಲಿ ು ನಡೆಯುತ್ತಿದೆ?' ಎಂದು ಉದ್ಗರಿಸಿದರು! ಮತ್ತು ಅಧಿಕಾರಸ್ಥರು ಸನ ಆಲಿಯಂಥಾ ಕುಪ್ರಸಿದ್ಧರಾದ 'ಹವಾಲಾ ವ್ಯವಹಾರ'ದಲ್ಲಿ ತರಾಗಿರುವವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೆ ಜನರ

ಭಾರತದಲ್ಲಿ ತೆರಿಗೆ ವಂಚನೆ ಮತ್ತು ಕಪ್ಪು ಹಣದ ಪಿಡುಗು



ಗೆ ಮಣ್ಣೆರಚುತ್ತಿದ್ದಾರೆಂದು ಟೀಕಿಸಿದರು. ರಾಜಕೀಯ ಧುರೀಣರು, ಅಧಿಕಾರಿವರ್ಗ ತ್ತು ವ್ಯಾಪಾರೋದ್ಯಮಿಗಳ ನಡುವಿನ ಹೊಂದಾಣಿಕೆಯು ಕಪ್ಪು ಹಣವನ್ನು ರತೆಗೆಯುವುದರಲ್ಲಿ ಮತ್ತು ಅದರಲ್ಲಿ ಶಾಮೀಲಾಗಿರುವವರ ವಿರುದ್ಧ ಕ್ರಮ ದುಕೊಳ್ಳುವುದರಲ್ಲಿ ಸಂಪೂರ್ಣ ವಿಫಲವಾಗಿದೆ.

ಅನ್ಯಾಯ ಮಾರ್ಗಗಳಿಂದ ಹಣವನ್ನು ಉತ್ಪಾದಿಸುವುದು ಮತ್ತು ಹಾಗೆ ಉತ್ಪತ್ತಿಯಾದ ವನ್ನು ಬಚ್ಚಿಡುವ ಕೆಲವು ವಿಧಾನಗಳು ಮತ್ತು ಇದರಿಂದ ಶೇಖರವಾಗಿರ ಂದಾದ ಹಣದ ಅಂದಾಜು ಪ್ರಮಾಣವನ್ನು ಲಭ್ಯವಿರುವ ಕೆಲವು ಅಧ್ಯಯನಗಳ ಆರದ ಮೇಲೆ ಕೆಲವು ವಿಷಯಗಳನ್ನು ಇಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ:

ಕಪ್ಪು ಹಣವು ಮುಖ್ಯವಾಗಿ ಮೂರು ಬಗೆಗಳಲ್ಲಿ ಉತ್ಪಾದನೆಯಾಗುತ್ತದೆ. ಜೂಜಾಟ, ಕಳ್ಳಸಾಗಣೆ, ಲಂಚ ರುಷುವತ್ತು ಮತ್ತು ಕಾಳಸಂತೆ ವ್ಯಾಪಾರ ದಿ ಕಾನೂನುಬಾಹಿರ ಚಟುವಟಿಕೆಗಳಿಂದ ಅಕ್ರಮವಾಗಿ ಾದಿಸುವುದು. (೨) ಮನೆ, ನಿವೇಶನ, ಭೂಮಿಗಳನ್ನು ಕೊಳ್ಳುವಾಗ ಮತ್ತು ಮಾರುವಾಗ ನಿಜಬೆಲೆಯನ್ನು ನಮೂದಿಸದೆ, ಭಾಗಶಃ ಮಾತ್ರ ಬೆಲೆಯನ್ನು ನಮೂದಿಸಿ ಕಾಗದ ಪತ್ರಗಳನ್ನು ತಯಾರಿಸಿ ಕಾನೂನುಬದ್ಧ ಲೆಕ್ಕಾಚಾರದಿಂದ ತಪ್ಪಿಸಿಕೊಳ್ಳುವುದು. (೩) ಆಮದು, ರಫ್ತುಗಳಲ್ಲಿ ಸರಕು ಸಾಗಣೆ, ಬೆಲೆ ಪಟ್ಟಿಗಳಲ್ಲಿ ಕಡಿಮೆ ಅಥವಾ ಹೆಚ್ಚಿನ ಪ್ರಮಾಣ ನಮೂದಿಸುವ ಮೂಲಕ ಲಾಭವನ್ನು ಕಡಿಮೆ ತೋರಿಸುವುದು; ಇದರಿಂದ ಬಂದ ಲಾಭದ ಮೇಲೆ ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ತಪ್ಪಿಸುವುದು ಸಾಧ್ಯವಾಗುತ್ತದೆ.

ಡಾ|| ಡಿ. ನರಸಿಂಹ ರೆಡ್ಡಿ

ಸರಕುಗಳಿಗೆ ತಪ್ಪು ಬೆಲೆ (ಕಡಿಮೆ ಅಥವಾ ಹೆಚ್ಚು) ನಮೂದಿಸುವ ಮೂಲಕ ಲಾಭವನ್ನು ಕಡಿಮೆ ತೋರಿಸಿ ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ವಂಚಿಸುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಸಂಗತಿ. ಬಹುಭಾಗ ಕಪ್ಪು ಹಣವು ಬೆಲೆಗಳ ತಪ್ಪು ನಮೂದು ಮಾಡುವ ಅಂತರರಾಷ್ಟ್ರೀಯ ವ್ಯಾಪಾರ ವ್ಯವಹಾರಗಳಿಂದ ಸೃಷ್ಟಿಯಾಗುತ್ತದೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಕಪ್ಪು ಹಣದ ವ್ಯವಹಾರವು ಸಾಚಾ ವ್ಯವಹಾರದ

ಅರ್ಧದಷ್ಟಿದೆ. ಇದರಲ್ಲಿ ಶೇಕಡ ಎಂಬತ್ತು ಭಾಗವು ಮೇಲೆ ಹೇಳಿದ ಮೂರನೇ ವಿಧಾನದಿಂದ ಅಂದರೆ ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟಿನಲ್ಲಿ ತೆರಿಗೆ ವಂಚನೆಯ [illegible] ಹತ್ತಿರ ಹತ್ತಿರ [illegible] ಅಂತರರಾಷ್ಟ್ರೀಯ 'ಹವಾಲಾ' ದಂಧೆ ಮತ್ತು 'ತೆರಿಗೆದಾರರ ಭದ್ರಕೋಟೆ' ಎನ್ನುವ [illegible] ದೇಶಗಳ ಮೂಲಕ ವ್ಯವಹರಿಸುವುದರಿಂದ. [illegible] ದೇಶಕ್ಕೆ [illegible] ತೆರಿಗೆಯನ್ನು ವಂಚಿಸುವ ಮೂರು ಮುಖ್ಯ ವಿಧಾನಗಳನ್ನು (ಇವು ಪರಸ್ಪರ ಸಂಬಂಧಿಸಿದವೇ ಆಗಿವೆ.) ಇಲ್ಲಿ ಚರ್ಚಿಸುತ್ತೇನೆ :

(೧) ತಪ್ಪು ಬೆಲೆ ನಮೂದು ಮೂಲಕ ವ್ಯವಹಾರ ನಡೆಸುವುದು. (೨) ತೆರಿಗೆದಾರರ ಭದ್ರಕೋಟೆಗಳ, ಅದರಲ್ಲೂ ವಿಶೇಷವಾಗಿ, ಮಾರಿಷಸ್ ಮಾರ್ಗವಾಗಿ ವ್ಯಾಪಾರ ಮಾಡುವುದು. (೩) 'ಸಹಭಾಗಿ ಪತ್ರ' (ಪಾರ್ಟಿಸಿಪೇಟರಿ ನೋಟ್ಸ್) ವನ್ನು ಬಳಸಿಕೊಂಡು ವ್ಯವಹರಿಸುವುದು.

ವ್ಯಾಪಾರ ವ್ಯವಹಾರದಲ್ಲಿ ತಪ್ಪು ಬೆಲೆ (ಸರಕುಗಳ ಬೆಲೆಯನ್ನು ಕಡಿಮೆ ಅಥವಾ ಹೆಚ್ಚು ತೋರಿಸುವುದು)

'ಅಭಿವೃದ್ಧಿಶೀಲ ದೇಶಗಳಿಂದ ಅಕ್ರಮ ಹಣದ ಹರಿವು' - ಎಂಬ ಹೆಸರಿನ ಜಾಗತಿಕ ಹಣಕಾಸಿನ ಋಜುತ್ವದ ವರದಿಯೊಂದರ ಪ್ರಕಾರ (ದೇವಕರ್ ಮತ್ತು ಕಾರ್ಟರ್ರೈಟ್ ಸ್ಮಿತ್ - ೨೦೦೮) ೨೦೦೨ರಿಂದ ೨೦೦೬ರ ಅವಧಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಒಟ್ಟಿನ ಮೇಲೆ ೬೪೧ರಿಂದ ೯೭೯ ಬಿಲಿಯನ್ ಡಾಲರ್‌ಗಳ ಅಕ್ರಮ ಹಣದ ಹೊರಹರಿವನ್ನು ಅನುಭವಿಸಿದವು; ಅಲ್ಲದೆ ಈ ಅವಧಿಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಅಕ್ರಮ ಹಣದ ಹೊರಹರಿವನ್ನು ಅನುಭವಿಸಿದ ಹತ್ತು ದೇಶಗಳ ಪೈಕಿ ಭಾರತದ ಸ್ಥಾನವು ಐದನೆಯದು! ಅಂದರೆ, ವಾರ್ಷಿಕ ಸರಾಸರಿ ಅಂದಾಜು ೧೧೩.೬ ಬಿಲಿಯನ್ ಡಾಲರ್ (ಸುಮಾರು ೫೧೧,೨೦೦ ಕೋಟಿ ರೂಪಾಯಿಗಳು)ಗಳ ನಷ್ಟವು ನಮ್ಮ ದೇಶಕ್ಕಾಗಿದೆ. ಜಿ-೨೦ ದೇಶಗಳ ಪೈಕಿ ಅತ್ಯಂತ ಹೆಚ್ಚು ಪ್ರಮಾಣದ ತೆರಿಗೆ ನಷ್ಟವನ್ನು ಅನುಭವಿಸಿದ ದೇಶಗಳಲ್ಲಿ ಭಾರತವು ಮೂರನೆಯ ಸ್ಥಾನದಲ್ಲಿದೆ. ಯುರೋಪಿನ ಯೂನಿಯನ್ ಮತ್ತು ಅಮೆರಿಕಾಗಳೊಂದಿಗೆ, ತಪ್ಪು



ಬೆಲೆ ನಿಗದಿಯ ವ್ಯಾಪಾರದ ಮೂಲಕ ಭಾರತವು ಅನುಭವಿಸಿದ ತೆರಿಗೆ ನಷ್ಟವು [illegible] ಬಿಲಿಯನ್ ([illegible] ಬಿಲಿಯನ್ ರೂಪಾಯಿಗಳು).

ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಈ ಎರಡು ಗುಂಪಿನ ದೇಶಗಳೊಡನೆ ನಡೆಸಿದ ವ್ಯಾಪಾರದಲ್ಲಿ ತಪ್ಪು ಬೆಲೆ ನಮೂದನೆಯ ಮೂಲಕ, ಮುಖ್ಯವಾಗಿ ಎರಡ

ಗೆಯ ಸರಕುಗಳಲ್ಲಿ, ಹೆಚ್ಚಿನ ಪ್ರಮಾಣದ ನಷ್ಟವನ್ನು ಅನುಭವಿಸಿವೆ. (೧) ನ್ಯೂಕ್ಲಿಯರ್ ಯಾಕ್ಟರ್‌ಗಳು, ಬಾಯ್ಲರ್‌ಗಳು, ಯಂತ್ರಗಳು, ಯಂತ್ರೋಪಕರಣಗಳು ಇತ್ಯಾದಿ.) ವಿದ್ಯುತ್ ಯಂತ್ರಗಳು ಮತ್ತು ಯಂತ್ರಸಲಕರಣೆಗಳು. – ಈ ಎರಡು ಬಗೆಯ ರಕುಗಳೇ, ಒಟ್ಟು ನಷ್ಟದಲ್ಲಿ ಶೇಕಡ ಅರವತ್ತು ಭಾಗ ನಷ್ಟಕ್ಕೆ ಕಾರಣವಾಗಿವೆ. ೦೦೮ರಲ್ಲಿ ಯು.ಪಿ.ಎ. ಸರ್ಕಾರವು ತನ್ನ ಅಸ್ತಿತ್ವಕ್ಕೇ ಉಂಟಾದ ಧಕ್ಕೆಯನ್ನೂ ಕ್ಷಿಸದೆ, ಅಮೆರಿಕಾ ಮತ್ತು ಭಾರತಗಳ ನಡುವಿನ ನಾಗರಿಕ-ಪರಮಾಣು ಒಪ್ಪಂದವನ್ನು ೇಶದ ಮೇಲೆ ಹೇರಿತು ಎಂಬುದನ್ನೂ, ವಿದ್ಯುತ್‌ವಲಯದ ಸುಧಾರಣೆ-ದ್ಯುದುತ್ಪನ್ನ ಹೆಚ್ಚಿಸುವ ನಿಟ್ಟಿನಲ್ಲಿ ಖಾಸಗಿ ವಲಯಕ್ಕೆ ಕೊಡುತ್ತಿರುವ ಪ್ರಾಧಾನ್ಯವನ್ನು – ದರಿಂದ ಇಡೀ ಕಾರ್ಪೊರೇಟ್ ವಲಯವು ಹೇಗೆ ಸಂಭ್ರಮಿಸುತ್ತಿದೆ ಎಂಬುದನ್ನೂ ರಿತವರಿಗೆ ಇದು (ಈ ನಷ್ಟವು) ಆಶ್ಚರ್ಯವೆನಿಸಲಿಕ್ಕಿಲ್ಲ. ನ್ಯೂಕ್ಲಿಯರ್ ರಿಯಾಕ್ಟರ್ ನ್ನು ಒದಗಿಸುವ ದೇಶಗಳು ತಮ್ಮ ವ್ಯಾಪಾರವನ್ನು ಚೆನ್ನಾಗಿ ಕುದುರಿಸಿಕೊಳ್ಳಲು ರತದಲ್ಲಿ ಬಿಡಾರ ಹೂಡಿವೆ. ವಿದ್ಯುದುತ್ಪಾದನೆಯಲ್ಲಿ ತೊಡಗಿರುವ ಭಾರತದ ರ್ಪೊರೇಟ್ ಕಂಪನಿಗಳು ಪ್ರಪಂಚದ ನಾನಾ ಭಾಗಗಳಿಂದ ವಿದ್ಯುದುತ್ಪಾದನಾ ಲಕರಣೆಗಳನ್ನು ಆಮದು ಮಾಡಿಕೊಳ್ಳಲು ಆಸಕ್ತಿಯಿಂದ ವ್ಯವಹರಿಸುತ್ತಿವೆ. ಆದರೆ ದ್ಯುದುತ್ಪಾದನಾ ಸಲಕರಣೆಗಳನ್ನು ತಯಾರಿಸುವುದರಲ್ಲಿ ಪ್ರಪಂಚದ ಬಂಚೂಣಿಯ ಘಟಕಗಳಲ್ಲಿ ಒಂದಾದ ಭಾರತದ ಸಾರ್ವಜನಿಕ ಕ್ಷೇತ್ರದ ಘಟಕ, ಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್' – ಬಿಎಚ್‌ಇಎಲ್‌ನೊಡನೆ ವ್ಯವಹರಿಸುವುದಕ್ಕೆ, ರತೀಯ ಕಂಪನಿಗಳೂ ಸೇರಿದಂತೆ, ಎಲ್ಲ ಕಂಪನಿಗಳೂ ಂಜರಿಯುತ್ತಿವೆ. ಇದರ ಅರ್ಥವೇನೆಂದರೆ, ಹೊರದೇಶದ ಸಗಿ ಕಂಪನಿಗಳಿಂದ ಸರಕನ್ನು ಆಮದು ಮಾಡಿಕೊಂಡರೆ, ಪ್ಪು ಬೆಲೆ ನಮೂದನೆಯ ಮೂಲಕ ಹೆಚ್ಚು ಹೆಚ್ಚು ಅಕ್ರಮ ಣ (ಕಪ್ಪು ಹಣ) ಗಳಿಸಬಹುದೆ ಎಂಬುದೇ ಆಗಿದೆ. ರತದಲ್ಲಿ ಕಪ್ಪು ಹಣ ಹೇಗೆ ಸೃಷ್ಟಿಯಾಗುತ್ತಿದೆಯೆಂಬುದಕ್ಕೆ ದು ಒಂದು ನಿದರ್ಶನ.

ರುಬೇಡಿಕೆ ಸಲ್ಲಿಸುವುದು (ರೀ-ಇನ್‌ವಾಯ್ಸಿಂಗ್)

ಇತ್ತೀಚಿನ, ಅಂದರೆ ಫೆಬ್ರವರಿ ೨೦೧೧ರ, ಜಿಎಫ್‌ಐ ರದಿಯು ವ್ಯಾಪಾರ ವ್ಯವಹಾರದಲ್ಲಿ ಸರಕುಗಳಿಗೆ ರುಬೇಡಿಕೆ ಸಲ್ಲಿಸುವ' ಮೂಲಕ ಆಗುವ ಮತ್ತೊಂದು ಯ ತೆರಿಗೆ ನಷ್ಟವನ್ನು ವಿಶ್ಲೇಷಿಸುತ್ತದೆ. ಸರಕುಗಳನ್ನು ರೈಸುವುದಕ್ಕಾಗಿ ಒಂದು ದೇಶವು ಬೇಡಿಕೆಯನ್ನು ಸಿದ ಮೇಲೆ, ಸದರಿ ಸರಕುಗಳನ್ನು ಒದಗಿಸುವ ದೇಶವು ನನ್ನು 'ತೆರಿಗೆದಾರರ ರಕ್ಷಣಾಕೋಟೆ'ಯ ವಲಯದಲ್ಲಿ ರುವ ಮತ್ತೊಂದು ದೇಶಕ್ಕೆ ರವಾನಿಸುತ್ತದೆ. ಅಲ್ಲಿ ಕುಗಳ ಬೆಲೆಯನ್ನು ಮಾರ್ಪಡಿಸಿ, ತಪ್ಪು ಬೆಲೆ ನಮೂದಿಸಿ ತಿಮವಾಗಿ ಮೂಲತಃ ಬೇಡಿಕೆ ಸಲ್ಲಿಸಿದ ದೇಶಕ್ಕೆ ರಫ್ತು ಮಾಡಲಾಗುತ್ತದೆ. ಇದೇ ರುಬೇಡಿಕೆ ಸಲ್ಲಿಕೆ' ಎನ್ನುವುದು. ಮೂಲತಃ ಬೇಡಿಕೆ ಸಲ್ಲಿಸಿದ ದೇಶವು ಈಗ 'ತಪ್ಪು ೆ ನಮೂದಿಸಿದ' ಸರಕನ್ನು ಹೆಚ್ಚಿನ ಹಣ ಪಾವತಿಸಿ ಪಡಿಸಿಕೊಳ್ಳಬೇಕಾಗುತ್ತದೆ.

ವಾಸ್ತವವಾಗಿ ಅತ್ಯಂತ ದೊಡ್ಡ ಪ್ರಮಾಣದ ತಪ್ಪು ಬೆಲೆ ನಿಗದಿಯಾಗುವುದು ್ಯಕ್ಲಿಯರ್ ಶಕ್ತಿಯನ್ನು ಉತ್ಪಾದಿಸುವ ಸಾಧನಗಳು ಮತ್ತು ವಿದ್ಯುತ್‌ಶಕ್ತಿ ಉತ್ಪಾದನಾ ಧನಗಳ ವಿಚಾರದಲ್ಲಿ. ಇವು ಭಾರತವು ಅನುಸರಿಸುತ್ತಿರುವ ಶಕ್ತಿ ಉತ್ಪಾದನಾ ತ್ರಿಗಳಿಗೆ ನೇರವಾಗಿ ತಳಕು ಹಾಕಿಕೊಂಡಿವೆ. ಶಕ್ತಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ್ಮ ದೇಶವು ಖಾಸಗಿ ವಲಯವನ್ನು ಅವಲಂಬಿಸುವ ಕಡೆಗೆ ವಾಲುತ್ತಿರುವುದು ಬಹು ಂಕಕಾರಿ ಸಂಗತಿಯಾಗಿದೆ. ತೀವ್ರ ರಾಜಕೀಯ ವಿರೋಧದ ನಡುವೆಯೂ ನಮ್ಮ ಶವು ಅಣುಶಕ್ತಿ ಉತ್ಪಾದನೆಗೆ ಕೊಟ್ಟಿರುವ ಪ್ರಾಧಾನ್ಯವು ಮತ್ತೊಂದು ಆತಂಕಕಾರಿ ಾರ. ಶಕ್ತಿ ಉತ್ಪಾದನೆಗೆ ಅಗತ್ಯವಿರುವ ಬಂಡವಾಳ ಹೂಡುವ ಸಲುವಾಗಿ ಖಾಸಗಿ ತ್ರವು, ತೆರಿಗೆದಾರರ ಭದ್ರಕೋಟೆಗಳಾದ ಸಿಂಗಪುರ, ಮಾರಿಷಸ್ ಮೊದಲಾದ ಕಡೆ ಡಿದ ಬಂಡವಾಳದ ಮೇಲೆ ಉತ್ಪತ್ತಿಯಾದ ಆದಾಯವನ್ನು ಬಳಸಿಕೊಳ್ಳುತ್ತದೆ.

ಉತ್ಪಾದನೆಯ ಸಾಧನಗಳನ್ನು ಈ ದೇಶದ ಮೂಲಕವೇ ಆಮದು ಡಿಕೊಳ್ಳುತ್ತದೆ. ಹೀಗೆ ಮಾಡುವುದರಿಂದ ಮೂಲ ಬಂಡವಾಳವು ಗಳಿಸಿದ ಭದ ಮೇಲೆ ತೆರಿಗೆ ಕಟ್ಟುವುದನ್ನು ತಪ್ಪಿಸಿಕೊಳ್ಳುವ ಅವಕಾಶವಿದೆ; ಆಮದು ಮಾಡಿಕೊಂಡ ಸಾಧನಗಳಿಗೆ ಮರುಬೇಡಿಕೆ ಸಲ್ಲಿಸುವ ಮೂಲಕ, ತಪ್ಪು ಬೆಲೆ ನಿಗದಿಮಾಡಿದ ಸಾಧನಗಳನ್ನು ಆಮದುಮಾಡಿಕೊಂಡು ಮತ್ತಷ್ಟು ತೆರಿಗೆ ತಪ್ಪಿಸಿ ಕೊಳ್ಳುತ್ತದೆ. ಹೀಗೆ ಎರಡೂ ಬಗೆಗಳಲ್ಲಿ ಭಾರ[illegible] ಬಂಡವಾಳದ ಹೊರಹರಿವು ನಡೆಯುತ್ತಲೇ ಇದೆ.

ಮರುಬೇಡಿಕೆಯಲ್ಲಿ ತಪ್ಪು ಬೆಲೆ ನಿಗದಿಯ ಮೂಲಕ ಅತ್ಯಂತ ಹೆಚ್ಚು ತೆರಿಗೆ ನಷ್ಟವನ್ನು ಅನುಭವಿಸಿದ ದೇಶಗಳ ಪೈಕಿ, ಭಾರತವು ಮೂರನೆಯ ಸ್ಥಾನದಲ್ಲಿದೆ. ೨೦೦೨ರಿಂದ ೨೦೦೬ರವರೆಗೆ ಮರುಬೇಡಿಕೆ ಮತ್ತು ತಪ್ಪು ಬೆಲೆ ನಿಗದಿಯ ಮೂಲಕ ಭಾರತದಿಂದ ಹೊರಗೆ ಹರಿದುಹೋದ ಹಣದ ಪ್ರಮಾಣವು ೨೨.೭೨ ಬಿಲಿಯನ್ ಡಾಲರ್ (೧೦೨.೧೫೦ ಕೋಟಿ ರೂಪಾಯಿಗಳು)ಗಳು. ಚಾಲ್ತಿಯಲ್ಲಿರುವ ಶೇ. ೩.೪೮ರ ಕಾರ್ಪೊರೇಟ್ ತೆರಿಗೆಯ ದರದಲ್ಲಿ ಲೆಕ್ಕಮಾಡಿದರೆ, ವಾರ್ಷಿಕ ತೆರಿಗೆ ನಷ್ಟ ೭.೭ ಬಿಲಿಯನ್ ಡಾಲರ್‌ಗಳು (೩೪೬೫೦ ಕೋಟಿ ರೂಪಾಯಿ). ವಾರ್ಷಿಕ ಸರಾಸರಿ ಸರ್ಕಾರಿ ಆದಾಯ ೮೮ ಬಿಲಿಯನ್ ಡಾಲರ್‌ಗಳ ಜೊತೆ ಹೋಲಿಸಿದರೆ ತೆರಿಗೆ ನಷ್ಟವು ಒಟ್ಟು ತೆರಿಗೆ ಆದಾಯದ ಶೇಕಡ ೮.೮ರಷ್ಟಾಗುತ್ತದೆ.

ತಪ್ಪುಬೆಲೆ ನಿಗದಿಯು ಅಕ್ರಮ ಹಣದ ಹೊರಹರಿವಿನ ಪ್ರಮುಖ ಕಾರಣವೆಂಬುದು ಖಚಿತವಾಗಿದೆ. ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ಒಟ್ಟು ಉತ್ಪಾದನೆ (ಜಿಡಿಪಿ) ಮತ್ತು ವ್ಯಾಪಾರ ವಹಿವಾಟುಗಳು ಬೆಳವಣಿಗೆಯಾದಂತೆ ಈ ದೇಶಗಳಿಂದ ಹೆಚ್ಚು ಹೆಚ್ಚು ಬಂಡವಾಳವು ಹೊರಕ್ಕೆ ಹರಿದು ಬಸಿದುಹೋಗುವುದೂ ಹೆಚ್ಚಾಗುತ್ತಿದೆ. ದೇಶವು ಹೊರಗಿನ ವ್ಯಾಪಾರಕ್ಕೆ ಹೆಚ್ಚು ಹೆಚ್ಚು ತೆರೆದುಕೊಂಡಂತೆ, ಬಂಡವಾಳವು ಬಸಿದುಹೋಗುವುದು ಮತ್ತು ತಪ್ಪುಬೆಲೆ ನಿಗದಿಯ ಮೂಲಕ ಹೆಚ್ಚು ತೆರಿಗೆ ನಷ್ಟವಾಗುವುದು ಅನಿವಾರ್ಯವಾಗುತ್ತದೆ.



ಸ್ವಾತಂತ್ರ್ಯಾನಂತರ ಇದೇ ಮೊಟ್ಟ ಮೊದಲ ಬಾರಿಗೆ ಭಾರತದಿಂದ ಅಕ್ರಮ ಬಂಡವಾಳವು ಹರಿದುಹೋಗುವ ಬಗೆಗೆ ವ್ಯವಸ್ಥಿತವಾದ ಲೆಕ್ಕಾಚಾರವೊಂದು ನಡೆದಿದೆ. ಜಾಗತಿಕ ಹಣಕಾಸು ಋಜುತ್ವದ ಬಗೆಗೆ ಅಧ್ಯಯನ ಮಾಡುತ್ತಿರುವ ದೇವಕರ್ ಅವರು ''ಭಾರತದಿಂದ ಅಕ್ರಮ ಹಣದ ಹರಿವಿನ ಚಾಲಕರು ಮತ್ತು ಚಲನೆಯ ಗತಿ ೧೯೪೮-೨೦೦೮'' (The Drivers and Dynamics of illict Financial Flows from India : 1948-2008) ಎಂಬ ತಮ್ಮ ಅಧ್ಯಯನದಲ್ಲಿ ಭಾರತದಿಂದ ಹೊರಕ್ಕೆ ಹರಿದುಹೋಗುತ್ತಿರುವ ಅಕ್ರಮ ಹಣದ ಗಾತ್ರವನ್ನು ಪರಿಶೀಲಿಸಿ, ಒಂದು ಸಮಗ್ರ ಚಿತ್ರವನ್ನು ಕೊಟ್ಟಿದ್ದಾರೆ. ಸದರಿ ಅಧ್ಯಯನದಲ್ಲಿ ನಿರೂಪಿಸಿರುವಂತೆ ಭಾರತವು ಒಟ್ಟಿನ ಮೇಲೆ ೨೧೩ ಬಿಲಿಯನ್ ಅಮೆರಿಕಾ ಡಾಲರ್‌ಗಳ ನಷ್ಟವನ್ನು ಅನುಭವಿಸಿದೆ. (ಪ್ರಸ್ತುತ ವಿನಿಮಯ ದರದ ಪ್ರಕಾರ ೨೩ ಲಕ್ಷ ಕೋಟಿಗಳ, ಬೆಚ್ಚಿಬೀಳಿಸುವ ಪ್ರಮಾಣದ ನಷ್ಟ!)

ಈ ಹೊರಹರಿವಿನ ದೊಡ್ಡ ಭಾಗವು (ಶೇ. ೬೯ ಅಥವಾ ೧೪೭ ಬಿಲಿಯನ್ ಯು.ಎಸ್. ಡಾಲರ್‌ಗಳು) ೧೯೯೧-೨೦೦೮ರ ಆರ್ಥಿಕ ಸುಧಾರಣೆಯ ಅನಂತರದ್ದು. (ಹೋಲಿಸಿ : ೧೯೪೮-೧೯೯೦ರ ಮುಂಚಿನ ಶೇ. ೩೧ ಅಥವಾ ೬೭ ಬಿಲಿಯನ್ ಯು.ಎಸ್. ಡಾಲರ್‌ಗಳು; ಇದು ಆರ್ಥಿಕ ಸುಧಾರಣೆಗೆ ಮುಂಚಿನ ದಿನಗಳದ್ದು.) ಈ ಅಂಕಿಅಂಶವನ್ನು ನೋಡಿದರೆ ಆರ್ಥಿಕ ಸುಧಾರಣೆ, ಉದಾರೀಕರಣ ಹಾಗೂ ಮುಕ್ತ ಮಾರುಕಟ್ಟೆಯ ನೀತಿಯು ಅಕ್ರಮ ಹಣದ ಹೊರಹರಿವನ್ನು ಹೆಚ್ಚಿಸಿತೇ ವಿನಾ ಕಡಿಮೆಯೇನೂ ಮಾಡಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ಭಾಗಶಃ ಈ ನೀತಿಯು, ೧೯೯೧ರ ಅನಂತರದ ಆರ್ಥಿಕ ಉದಾರೀಕರಣವು, ಮುಕ್ತವಾದ ವ್ಯಾಪಾರ ವ್ಯವಹಾರಗಳನ್ನು ಹೆಚ್ಚಿಸಿತು; (ಹೊರ ದೇಶಗಳೊಡನೆ ಭಾರತದ ವ್ಯಾಪಾರವು ಜಿಡಿಪಿಯ ಶೇಕಡ ೧೧ರಿಂದ ಶೇಕಡ ಸುಮಾರು ೨೨ಕ್ಕೆ ಏರಿತು.) ಮತ್ತು ತಪ್ಪು ಬೆಲೆ ನಿಗದಿಯ ಮೂಲಕ ವ್ಯಾಪಾರ ನಡೆಸಲು ಹೆಚ್ಚಿನ ಅವಕಾಶಗಳನ್ನೂ ಸೃಷ್ಟಿಸಿತು.

ಅಕ್ರಮ ಹಣದ ಹರಿವನ್ನು ಊರ್ಜಿತಗೊಳಿಸಲು ಪ್ರಮುಖ ಕಾರಣವಾಗಿ[illegible] ಅಪಾರ ಪ್ರಮಾಣದ ಕಪ್ಪುಹಣ ಅಥವಾ ಭೂಗತ ಆರ್ಥಿಕತೆಯ ಅಸ್ತಿತ್ವ. ಈ

ಮೊದಲು ಪ್ರಸ್ತಾಪಿಸಿದ ಅಧ್ಯಯನವು – ಈ ವಿಚಾರದ ಇತರ ಅಧ್ಯಯನಗಳನ್ನೂ ಗಮನಕ್ಕೆ ತೆಗೆದುಕೊಂಡು – ಭಾರತದಲ್ಲಿ ಅಕ್ರಮ ಆರ್ಥಿಕ ಚಟುವಟಿಕೆಯು ಜಿಡಿಪಿಯ ಶೇಕಡ ೫೦ ಭಾಗದಷ್ಟಿದೆಯೆಂದು ಅಂದಾಜು ಮಾಡುತ್ತದೆ. (೨೦೦೮ರ ಕೊನೆಯವರೆಗೆ ೬೪೦ ಬಿಲಿಯನ್ ಯು.ಎಸ್. ಡಾಲರ್‌ಗಳು.) ಹೊರದೇಶಗಳಲ್ಲಿ ಭೂಗತ ಹಣದಿಂದ ಗಳಿಸಿದ ಆಸ್ತಿಯು ಶೇಕಡ ೭೨ ಭಾಗದಷ್ಟಿದ್ದು ಭಾರತದಲ್ಲಿ ಸುಮಾರು ಶೇ. ೨೮ ಭಾಗ ಮಾತ್ರ ಉಳಿದಿರಬಹುದೆಂಬ ತೀರ್ಮಾನಕ್ಕೆ ಬರುತ್ತದೆ. ಅಂದರೆ, ಸರ್ಕಾರದ ಗಮನಕ್ಕೆ ಬರದಂತೆ ಸಂಪತ್ತನ್ನು ಗಳಿಸಬೇಕು ಮತ್ತು ಬಚ್ಚಿಡಬೇಕೆಂಬ ಆಸೆಯು ಈ ದೇಶದ ಜನರಲ್ಲಿ ಎಷ್ಟು ಪ್ರಬಲವಾಗಿದೆಯೆಂಬುದನ್ನು ಊಹಿಸಬಹುದು.

ಅಕ್ರಮ ಸಂಪತ್ತು ಹೊರದೇಶಗಳಿಗೆ ಪ್ರವಾಹದೋಪಾದಿಯಲ್ಲಿ ಹರಿದುಹೋಗಲು ತೆರೆದಿಟ್ಟಿರುವ ಮಾರ್ಗಗಳನ್ನೂ ಮತ್ತು ಅಂಥ ಮಾರ್ಗಗಳು ಆಗಾಗ ಬದಲಾಗುವುದನ್ನೂ ಕೂಡ ಅಧ್ಯಯನವು ವಿಶ್ಲೇಷಿಸುತ್ತದೆ. ಅಂತರರಾಷ್ಟ್ರೀಯ ಬ್ಯಾಂಕ್‌ನಲ್ಲಿನ ಹೂಡಿಕೆ ವರ್ಗಾವಣೆ (Bank for International Settlement - BIS) ಮೂಲದಿಂದ ಸಂಗ್ರಹಿಸಿದ ವಿದೇಶೀ ಹಣವು ವರ್ಗಾವಣೆಗೊಳ್ಳುವ ಮಾಹಿತಿಯನ್ನು ಆಧರಿಸಿ ಭಾರತದ ಬ್ಯಾಂಕ್‌ಗಳ ಹೊರಗಿನ ಖಾಸಗಿವಲಯದ ಮೂಲಕ ೧೯೯೫-೨೦೦೯ರ ಅವಧಿಯಲ್ಲಿ ಅಕ್ರಮ ಸಂಪತ್ತು ಅಭಿವೃದ್ಧಿ ಹೊಂದಿದ ದೇಶಗಳ ಬ್ಯಾಂಕ್‌ಗಳು ಮತ್ತು ಸಾಗರೋತ್ತರ ಹಣಕಾಸು ಸಂಸ್ಥೆಗಳಿಗೆ ಹಣವು ಹರಿದ ಬಗೆಗಳನ್ನು ಪರಿಶೀಲಿಸುತ್ತದೆ; ಮತ್ತು ಹೂಡಿಕೆದಾರರ ವರ್ತನೆಯ ಬಗೆಗೆ ಕೆಲವು ಉಪಯುಕ್ತ ಮಾಹಿತಿಗಳನ್ನೂ ನೀಡುತ್ತದೆ. ಈ ಅವಧಿಯಲ್ಲಿ ಒಟ್ಟಿನ ಮೇಲೆ ಭಾರತದ ಖಾಸಗಿ ಕ್ಷೇತ್ರವು ಹಣವನ್ನು ಬ್ಯಾಂಕ್‌ಗಳಲ್ಲಿ ಇಡುವುದಕ್ಕೆ ಬದಲಾಗಿ ಸಾಗರೋತ್ತರ ಹಣಕಾಸು ಸಂಸ್ಥೆಗಳ ಕಡೆಗೆ ಚಲಿಸಿತು. ೧೯೯೫ರಲ್ಲಿ ಇಂಥ ಕಡೆಗಳಲ್ಲಿ ಶೇಕಡ ೩೬.೪ರಷ್ಟಿದ್ದ ಹೂಡಿಕೆಯ ಭಾಗವು ೨೦೦೯ರ ವೇಳೆಗೆ ಶೇಕಡ ೫೪.೨ರಷ್ಟಕ್ಕೆ ಏರಿತು, ಮತ್ತು ಬ್ಯಾಂಕ್‌ಗಳಲ್ಲಿನ ಹೂಡಿಕೆಯು ಶೇಕಡ ೪೫.೮ರಷ್ಟಕ್ಕೆ ಕುಸಿಯಿತು. ಸರ್ಕಾರಗಳು ಬ್ಯಾಂಕ್ ವ್ಯವಹಾರಗಳ ಮೇಲೆ ನಿಗಾ ಇಡುವಷ್ಟು ಪ್ರಮಾಣದಲ್ಲಿ ಈ ಸಂಸ್ಥೆಗಳ ಮೇಲೆ ಇಡುವುದಿಲ್ಲವೆಂಬುದು ಅಕ್ರಮ ಸಂಪತ್ತನ್ನು ಕೂಡಿಡಲು ಇ ಒಳ್ಳೆಯ ಮಾದರಿಯಾಗಲು ಕಾರಣವಿರಬಹುದು. ಏನೇ ಇರಲಿ, ಬ್ಯಾಂಕ್‌ಗಳಿಂ ಬ್ಯಾಂಕ್ ಹೊರಗಿನ ಕೇಂದ್ರಗಳಿಗೆ ಹೆಚ್ಚು ಹೆಚ್ಚು ಹರಿವು ಹರಿದುಬರುತ್ತಿರುವುದು, ಅಕ್ರ ಸಂಪತ್ತನ್ನು ಸೃಷ್ಟಿಸುವ ಭೂಗತ ವ್ಯವಹಾರಗಳು ಬೆಳೆಯುತ್ತಿರುವುದನ್ನು ಸೂಚಿಸುತ್ತದೆ.

ತೆರಿಗೆದಾರರ ಭದ್ರಕೋಟೆ - ಮಾರಿಷಸ್

ತೆರಿಗೆ ವಿನಾಯಿತಿ ಮತ್ತು ಇತರ ರಿಯಾಯಿತಿಗಳನ್ನು ಒದಗಿಸಿಕೊಡು ವಿಚಾರದಲ್ಲಿ ಮಾರಿಷಸ್ ಈಗ ಹೆಸರುವಾಸಿಯಾಗಿದೆ. ಕೇವಲ ೪೮ ಗಂಟೆಗಳಲ್ಲಿ ಅ ಯಾವುದೇ ಕಂಪನಿಯನ್ನು ಸುಲಭವಾಗಿ ನೋಂದಣಿ ಮಾಡಿಸಬಹುದು. ಅಗ ಸೌಲಭ್ಯಗಳನ್ನು ಒದಗಿಸುವ ವಿಚಾರದಲ್ಲಿ ಅಲ್ಲಿನ ಸಿಬ್ಬಂದಿಯು ಅತ್ಯಂ ಸಮರ್ಥವಾಗಿದೆ. ಹೂಡಿದ ಬಂಡವಾಳದ ಮೇಲೆ ಬರುವ ಆದಾಯಕ್ಕೆ ಅ ತೆರಿಗೆಯಿಲ್ಲ! ಮತ್ತು ಉತ್ತರಾಧಿಕಾರದಿಂದ ದೊರೆಯುವ ಆಸ್ತಿ-ಪಾಸ್ತಿಗ ಮೇಲಾಗಲಿ, ರಾಯಧನದ ಮೇಲಾಗಲಿ ತೆರಿಗೆಯಿಲ್ಲ, ಗ್ರಾಹಕರು, ತಾವು ಹೂಡಿ ಬಂಡವಾಳವನ್ನೂ ಮತ್ತು ಲಾಭವನ್ನೂ ತಮ್ಮ ಸ್ವದೇಶಕ್ಕೆ ವರ್ಗಾಯಿಸಿದರೆ ಮಾರಿಷ ವರ್ಗಾವಣೆ ಶುಲ್ಕವನ್ನಾಗಲಿ, ತೆರಿಗೆಯನ್ನಾಗಲಿ ಮುರಿದುಕೊಳ್ಳುವುದಿಲ್ಲ! ವಾಸ್ತವವಾ ಕಾರ್ಪೊರೇಷನ್ ತೆರಿಗೆಯ ದರ ಕೇವಲ ಶೇಕಡ ಮೂರು (೩%) ಮಾತ್ರ ಜಿಬಿಸಿಎಸ್‌ಗಳು ಇನ್ನೂ ಹೆಚ್ಚಿನ ವಿನಾಯಿತಿಗಾಗಿ ಅರ್ಜಿ ಹಾಕಿಕೊಳ್ಳಬಹುದು. ಒಟ್ಟಿ ಮೇಲೆ ಮಾರಿಷಸ್ ಶೂನ್ಯ ತೆರಿಗೆ ಪ್ರದೇಶವೇ ಆಗಿದೆ. ಎರಡು ದೇಶಗಳ ನಡುವಿ ಹಣಕಾಸು ವ್ಯವಹಾರದಲ್ಲಿ ಎರಡೂಕಡೆ ತೆರಿಗೆ ವಿಧಿಸದಿರುವ ಒಪ್ಪಂ ಮಾಡಿಕೊಳ್ಳುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ನ್ಯಾಯಸಮ್ಮತವಾದ ಇ ಒಪ್ಪಂದದಿಂದ ಕೂಡ, ಎರಡು ದೇಶಗಳ ನಡುವಿನ ತೆರಿಗೆ ದರದಲ್ಲಿ ಭಾ ವ್ಯತ್ಯಾಸವಿದ್ದಾಗ ಒಂದು ದೇಶಕ್ಕೆ ಅನ್ಯಾಯವಾಗುತ್ತದೆ; ನ್ಯಾಯಸಮ್ಮತವಲ್ಲ ವ್ಯವಹಾರಗಳಿಗೆ ಅವಕಾಶವಾಗುತ್ತದೆ. ಭಾರತ ಮತ್ತು ಮಾರಿಷಸ್‌ಗಳ ನಡು "ಎರಡೂ ಕಡೆ ತೆರಿಗೆ ವಿಧಿಸುವುದನ್ನು ತಪ್ಪಿಸುವ ಒಪ್ಪಂದ" (DTAA) ಎಂ ಒಪ್ಪಂದವಾಗಿದೆ. ತೌಲನಿಕವಾಗಿ ಭಾರತವು ಅತ್ಯಂತ ಹೆಚ್ಚಿನ ದರದಲ್ಲಿ ನೇ

ರಿಗೆಯನ್ನು ವಿಧಿಸುತ್ತದೆ ಮತ್ತು ಕಾನೂನು ಬದ್ಧವಾದ ತೆರಿಗೆ ಸೂಲಿ ವ್ಯವಸ್ಥೆಯನ್ನು ಹೊಂದಿದೆ. ತದ್ವಿರುದ್ಧವಾಗಿ ಮಾರಿಷಸ್‌ನಲ್ಲಿ ನೇರ ತೆರಿಗೆ ವಸೂಲಿ ವ್ಯವಸ್ಥೆಯಿಲ್ಲವೆಂದೇ ಳಬಹುದು. ವ್ಯವಸ್ಥಿತವಾದ ತೆರಿಗೆ ವಸೂಲಿ ಕ್ರಮವಿಲ್ಲ ರುವುದೇ ಮಾರಿಷಸ್‌ನ ವೈಶಿಷ್ಟ್ಯವಾಗಿದೆ.

೧೯೮೩ರಲ್ಲಿ ಭಾರತ ಮತ್ತು ಮಾರಿಷಸ್‌ಗಳ ಡುವೆ ಡಿಟಿಎಎ ಜಾರಿಗೆ ಬಂದಿತು. ಪರಸ್ಪರ ್ಯಾಪಾರ ವ್ಯವಹಾರಗಳನ್ನು ಮತ್ತು ಬಂಡವಾಳ ೂಡಿಕೆಯನ್ನು ಪ್ರೋತ್ಸಾಹಿಸುವುದು ಇದರ ೂಲ ಉದ್ದೇಶವಾಗಿತ್ತು. ಮಾರಿಷಸ್ ಮತ್ತು ರತಗಳ ನಡುವಿನ ವ್ಯಾಪಾರ ವಹಾರಗಳು ನಿರ್ಲಕ್ಷಿಸುವಷ್ಟು ಅಲ್ಪ ಮಾಣದಲ್ಲಿದ್ದಾಗ ಇದರಿಂದ ಭಾರತಕ್ಕೆ ಷ್ಟಿನ ಅನ್ಯಾಯವೇನೂ ಆಗಲಿಲ್ಲ. ಆದರೆ ೯೪ರ ಆರ್ಥಿಕ ಉದಾರೀಕರಣವು ರಿಗೆ ಬಂದಮೇಲೆ ಭಾರತವು ಬಂಡವಾಳ ೂಡಿಕೆದಾರರಿಗೆ ಆಕರ್ಷಕವಾಯಿತು. ಇದೇ ದರ್ಭದಲ್ಲಿ ಮಾರಿಷಸ್ ದೇಶವು ರತದಲ್ಲಿ ಹೂಡುವ ಬಂಡವಾಳದ ಮೇಲೆ ಷ್ತಿಶಃ ತೆರಿಗೆ ವಿನಾಯಿತಿ ನೀಡಲಾಗುವು ದು ಪ್ರಕಟಿಸಿತು. ಇಷ್ಟಾದಮೇಲೆ ಭಾರತ - ರಿಷಸ್‌ಗಳ ನಡುವಿನ ಒಪ್ಪಂದದಲ್ಲಿದ್ದ ರಂಧ್ರಗಳನ್ನು ಅಥವಾ ಲೋಪಗಳನ್ನು ಸಿಕೊಂಡು ಮಾರಿಷಸ್ ಮೂಲಕ ಭಾರತಕ್ಕೆ ವಿದೇಶೀ ಬಂಡವಾಳದ ಪ್ರವಾಹವೇ ದುಬರಲು ತೊಡಗಿತು.

ಶ್ಯದಲ್ಲಿ ಭಾರತ-ಮಾರಿಷಸ್‌ಗಳ ನಡುವೆ ಹಣದ ಹರಿವು

ಅಂತರರಾಷ್ಟ್ರೀಯ ಹಣಕಾಸು ನಿಧಿಯ ವಾರ್ಷಿಕ ವರದಿಯು ೨೦೦೭ರಲ್ಲಿ ರಿಷಸ್‌ನಿಂದ ಭಾರತಕ್ಕೆ ಹರಿದುಬಂದು ಹೂಡಿಕೆಯಾದ ಬಂಡವಾಳವು ೧೮೪ ಯನ್ ಡಾಲರ್‌ಗಳು (ಸುಮಾರು ೬ ಲಕ್ಷ ಕೋಟಿ ರೂಪಾಯಿಗಳು) ಎಂದು ಸುತ್ತದೆ. ಅಂದರೆ ಈ ದೇಶದಲ್ಲಿ ಹೂಡಿಕೆಯಾದ ಒಟ್ಟು ಬಂಡವಾಳದ ೭೨ರಷ್ಟು! ಇದರಲ್ಲಿ ವಿದೇಶಗಳು ಮಾರಿಷಸ್ ಮೂಲಕ ಭಾರತದಲ್ಲಿ ಹೂಡಿದ ಡವಾಳವು ಶೇ. ೪೩ರಷ್ಟಿದೆ. ಭಾರತದಿಂದ ಬಂಡವಾಳವು ಹರಿದುಹೋಗುವುದು ಮುಖವಾಗಿಯಲ್ಲ. ಭಾರತದಿಂದ ಹರಿದುಹೋದ ಬಂಡವಾಳದ ಬಹುಭಾಗವು ರಿಷಸ್ ಮೂಲಕ ಡಿಟಿಎಎ ಸೌಲಭ್ಯವನ್ನು ಬಳಸಿಕೊಂಡು ಪುನಃ ಭಾರತಕ್ಕೆ ದಿರುಗುತ್ತದೆ. ಹೀಗೆ ಮಾಡುವುದರಿಂದ ಭಾರತಕ್ಕೆ ತೆರಿಗೆ ಕೊಡುವುದು ತಪ್ಪುತ್ತದೆ.

ಬಂಡವಾಳದ ಬಹುಭಾಗವು ಮುಖ್ಯವಾಗಿ 'ಸ್ಟಾಕ್ ಮಾರುಕಟ್ಟೆ'ಯಲ್ಲಿ ಡಿಕೆಯಾಗಿ ಶೀಘ್ರವಾಗಿ ಅಪಾರ ಲಾಭ ಗಳಿಸುತ್ತದೆ. ವಾಸ್ತವವಾಗಿ ಈ ಬಗೆಯ ್ಯವಹಾರಗಳಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಆದರೆ ಮಾರಿಷಸ್ ಮಾರ್ಗವಾಗಿ ರ ಕಣ್ಣಿಗೆ ಮಣ್ಣೆರಚಿ ಡಿಟಿಎಎ ಬಳಸಿಕೊಂಡು ಭಾರತದಲ್ಲಿ ಬಂಡವಾಳ ಡಲಾಗುತ್ತಿದೆ. ಹೀಗೆ ಬೇರೆ ಬೇರೆ ದೇಶಗಳಿಂದ, ತೆರಿಗೆದಾರರ ಭದ್ರಕೋಟೆಗಳ ಖಾಂತರವಾಗಿ ಭಾರತಕ್ಕೆ ಹರಿದುಬರುವ ಬಂಡವಾಳದ ಬಗೆಗೆ ಹಲವು ಾಜುಗಳಿವೆ. ಒಂದು ಅಂದಾಜಿನ ಪ್ರಕಾರ, ೨೦೦೮ರಲ್ಲಿ ಸಿಂಗಪುರ, ಮಾರಿಷಸ್ ತ್ತು ಸೈಪ್ರಸ್‌ಗಳಂಥ ತೆರಿಗೆ ವಿನಾಯಿತಿಯ ಭದ್ರಕೋಟೆಗಳ ಮೂಲಕ ಭಾರತಕ್ಕೆ ದುಬಂದ ಬಂಡವಾಳವು ಒಟ್ಟು ವಿದೇಶೀ ನೇರ ಬಂಡವಾಳ ಹೂಡಿಕೆಯ ಶೇಕಡ ಭಾಗದಷ್ಟಾಗುತ್ತದೆ. ಇದರ ಬಹುಭಾಗವು ಭಾರತದಿಂದ ಅಕ್ರಮವಾಗಿ ಹೊರಕ್ಕೆ ದು ಅನಂತರ ಸುತ್ತಿ ಬಳಸಿ ಬಂದ ಹಣವಾಗಿರುವುದು ಸಾಧ್ಯ. ಸಾರ್ವಜನಿಕ ಷನ್ (೨೦೦೯) ಪ್ರಕಾರ, ೨೦೦೬-'೦೭ರಲ್ಲಿ ಭಾರತದಲ್ಲಿ ನೇರ ಹೂಡಿಕೆಯ ಡವಾಳದ ಶೇಕಡ ೩೮ಕ್ಕೆ ಕಡಿಮೆ ಇಲ್ಲದಷ್ಟು ಭಾಗವು ಮಾರಿಷಸ್ ಮೂಲಕ ದುದಾಗಿದೆ.

ರಿಷಸ್ ಮಾರ್ಗವಾಗಿ ನೇರ ಬಂಡವಾಳ ಹೂಡಿಕೆ

ಮಾರಿಷಸ್ ಮೂಲಕ ಸಾಗಿಸಿದ ಬಂಡವಾಳವನ್ನು ಸ್ಟಾಕ್ ಮಾರುಕಟ್ಟೆಯಲ್ಲಿ ಹೂಡುವುದರ ಜೊತೆಗೆ ಹೊರ ದೇಶಗಳಿಗೆ ಸಾಗಿಸಲು ಅನುಕೂಲಕರವಾದ ಇನ್ನೊಂದು ವಿಧಾನವಿದೆ. ಅದು ಷೇರುಗಳಾಗಿ ಅಥವಾ ಕಡ್ಡಾಯ ಡಿಬೆಂಚರ್‌ಗಳಾಗಿ ಪರಿವರ್ತಿಸಲು ಅವಕಾಶವಿರುವಂತೆ ಸಾಲ ಕೊಡುವುದು. ಈ ಎರಡನೇ ವಿಧಾನವು ಪ್ರಚಲಿತವಿರುವುದು ಮುಖ್ಯವಾಗಿ ಶಕ್ತಿ (ವಿದ್ಯುತ್‌ಶಕ್ತಿ) ಉತ್ಪಾದನೆ, ಹಡಗು ಅಥವಾ ವಿಮಾನ ನಿಲ್ದಾಣಗಳ ನಿರ್ಮಾಣ ಮತ್ತು ಸ್ಥಿರಾಸ್ತಿ (ಕಾರ್ಖಾನೆಗಳಿಗಾಗಿ ಅಥವಾ ಗೃಹನಿವೇಶನಗಳಿಗಾಗಿ)ಗಳ ಖರೀದಿಯಲ್ಲಿ. ಇವುಗಳಲ್ಲಿ ತೊಡಗಿಸಿದ ಹಣದ ಮೇಲೆ ಆರಂಭದ ಕೆಲವು ವರ್ಷಗಳಲ್ಲಿ (ನಿರ್ಮಾಣ ಕಾರ್ಯವು ಮುಗಿಯುವವರೆಗೆ) ತೆರಿಗೆ ಪಾವತಿಯಲ್ಲಿ ವಿನಾಯಿತಿಯುಂಟು. ನಿರ್ಮಾಣ ಕಾರ್ಯವು ಮುಗಿದು ಆದಾಯವು ಹರಿದು ಬರತೊಡಗಿದ ಮೇಲೆ, ಸಾರ್ವಜನಿಕ ವಿತರಣೆಯು ಆರಂಭವಾಗುತ್ತದೆ. ಆಗ ಸಾಲ ಕೊಟ್ಟ ಬಂಡವಾಳ ಅಥವಾ ಡಿಬೆಂಚರ್‌ಗಳನ್ನು ಷೇರುಗಳಾಗಿ ಪರಿವರ್ತಿಸಲಾಗುತ್ತದೆ. ಷೇರುಬೆಲೆಯು ಮೇಲೆ ಜಿಗಿದು ಅವುಗಳನ್ನು ಮಾರಿದಾಗ ಬಂದ ಲಾಭದ ಮೇಲೆ ಯಾವ ತೆರಿಗೆಯನ್ನೂ ಕಟ್ಟದೆ ಬಂದ ಲಾಭವನ್ನೆಲ್ಲ ತಮ್ಮ ದೇಶಕ್ಕೆ ಕೊಂಡೊಯ್ಯಬಹುದು. ಹೀಗೆ ಭಾರತದ ಖಜಾನೆಗೆ ನಷ್ಟವನ್ನುಂಟು ಮಾಡುವಂತೆ ಬಂಡವಾಳ ಹೂಡುವುದು ವಿದೇಶಗಳಿಗೆ ಅತ್ಯಂತ ಲಾಭದಾಯಕವಾದ ವ್ಯಾಪಾರ.

ಭಾರತ ಸರ್ಕಾರದ ಕೈಗಾರಿಕಾಭಿವೃದ್ಧಿ ಇಲಾಖೆಯ ಪ್ರಕಾರ ಏಪ್ರಿಲ್ ೨೦೦೦ದಿಂದ ಮಾರ್ಚ್ ೨೦೦೯ರ ಅವಧಿಯಲ್ಲಿ ವಿದೇಶೀ ಬಂಡವಾಳದ ನೇರ ಹೂಡಿಕೆಯ ಮೂಲಕ ಭಾರತಕ್ಕೆ ಹರಿದುಬಂದ ಒಟ್ಟು ವಿದೇಶೀ ಹಣದ ಮೊತ್ತವು ೮೧ ಬಿಲಿಯನ್ ಡಾಲರ್‌ಗಳು. ಇದರಲ್ಲಿ ೩೫.೧೮ ಬಿಲಿಯನ್ ಡಾಲರ್‌ಗಳು ಅಥವಾ ಶೇಕಡ ೪೩ರಷ್ಟು ಭಾಗವು ಮಾರಿಷಸ್ ಮೂಲಕ ಬಂದಿದೆ! ಅಮೆರಿಕಾ ೭.೫೯ ಬಿಲಿಯನ್ ಡಾಲರ್‌ಗಳು, ಬ್ರಿಟನ್ ೭.೭೨ ಬಿಲಿಯನ್ ಡಾಲರ್ ಮತ್ತು ಜರ್ಮನಿ ೨.೧೪ ಬಿಲಿಯನ್ ಡಾಲರ್‌ಗಳು, ಹೀಗೆ ವಿದೇಶೀ ಹೂಡಿಕೆ ಬಂದಿದ್ದು ಇವು ಕ್ರಮವಾಗಿ ೨, ೩ ಮತ್ತು ೪ನೇ ಸ್ಥಾನದಲ್ಲಿವೆ.

ಸಕ್ರಮ ಬಂಡವಾಳವು ಕೂಡ ತೆರಿಗೆದಾರರ ಭದ್ರಕೋಟೆಗಳಿಗೆ

ಅಕ್ರಮ ಬಂಡವಾಳದ ಹರಿವು ಎಲ್ಲಿ ಕೊನೆಗೊಳ್ಳುತ್ತದೆ ಮತ್ತು ಸಕ್ರಮ ಬಂಡವಾಳದ ಹರಿವು ಎಲ್ಲಿ ಆರಂಭವಾಗುತ್ತದೆ ಎಂಬುದು ಒಂದು ತೊಡಕಿನ ಪ್ರಶ್ನೆ. ಲಭ್ಯವಿರುವ ಮಾಹಿತಿಯ ಪ್ರಕಾರ ಭಾರತದ ಕಂಪನಿಗಳು ವಿದೇಶಗಳಲ್ಲಿ ಹೂಡುವ ನ್ಯಾಯವಾದ ಬಂಡವಾಳವು ಕೂಡ ಅನ್ಯಾಯದ ಬಂಡವಾಳವು ಹರಿದುಹೋಗುವ ಮಾರ್ಗಗಳಲ್ಲೇ ಹರಿದುಹೋಗಿ ತೆರಿಗೆದಾರರ ಭದ್ರಕೋಟೆಗಳನ್ನು ತಲುಪುತ್ತದೆ. ಆಗಸ್ಟ್ ೭, ೨೦೦೯ರಲ್ಲಿ ಭಾರತದ ಲೋಕಸಭೆಗೆ ಒದಗಿಸಿದ ಮಾಹಿತಿಯ ಪ್ರಕಾರ ೨೦೦೮-'೦೯ರಲ್ಲಿ ಭಾರತದ ಕಂಪನಿಗಳು ಹೊರದೇಶಗಳಲ್ಲಿ ಹೂಡಿದ ಬಂಡವಾಳದಲ್ಲಿ ಶೇಕಡ ೬೦ರಷ್ಟು ಭಾಗವು ತೆರಿಗೆದಾರರ ಭದ್ರಕೋಟೆಗಳ ಮೂಲಕ ಸಾಗಿಸಲ್ಪಟ್ಟಿತ್ತು. ಭಾರತದ ಕಂಪನಿಗಳು ಹೊರದೇಶಗಳಲ್ಲಿ ಹೂಡಿದ ೧೬ ಬಿಲಿಯನ್ ಡಾಲರ್ (ಸುಮಾರು ೭೨,೦೦೦ ಕೋಟಿ ರೂಪಾಯಿ)ಗಳ ಪೈಕಿ ಹೆಚ್ಚು ಕಡಮೆ ೧೦ ಬಿಲಿಯನ್ ಡಾಲರ್ (ಸುಮಾರು ೪೫,೦೦೦ ಕೋಟಿ ರೂಪಾಯಿ)ಗಳು ತೆರಿಗೆದಾರರ ಭದ್ರಕೋಟೆಗಳೆಂದು ಪಟ್ಟಿಮಾಡಿರುವ ಸಿಂಗಪುರ (೩,೬೮೦.೭೪ ಮಿಲಿಯನ್ ಡಾಲರ್), ಸೈಪ್ರಸ್ (೨,೨೫೫.೬೪ ಮಿಲಿಯನ್ ಡಾಲರ್), ಮಾರಿಷಸ್ (೧,೮೦೪.೯೨ ಮಿಲಿಯನ್ ಡಾಲರ್), ರಷ್ಯಾ (೬೭೬.೦೮ ಮಿಲಿಯನ್ ಡಾಲರ್), ಐಲ್ ಆಫ್ ಮ್ಯಾನ್ (೩೩೪.೭೦ ಮಿಲಿಯನ್ ಡಾಲರ್), ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್ (೨೩೦.೪ ಮಿಲಿಯನ್ ಡಾಲರ್) ಮತ್ತು ಸರುನ್ ಐಲ್ಯಾಂಡ್ (೧೧೯.೭೫ ಡಾಲರ್‌ಗಳು), ಮುಖಾಂತರ ಹೋಗಿದೆ. ಸಿಂಗಪುರವು ಬಂಡವಾಳ ಹೂಡಿಕೆಯ ಬಗೆಗೆ ವಿವರಗಳನ್ನು ಒದಗಿಸಿ ಸಹಕರಿಸುವುದಿಲ್ಲವೆಂಬುದು ಜಗತ್ತಿಗೇ ಗೊತ್ತಿರುವ ವಿಚಾರ. ಸೈಪ್ರಸ್ ಸರಕು ಸಾಗಣೆ (ಹಡಗಿನ ಮೂಲಕ) ಕಂಪನಿಗಳಿಗೆ

ವಿಶೇಷ ರಿಯಾಯಿತಿ ತೋರಿಸಿ ಕನಿಷ್ಠ ಪ್ರಮಾಣದ ಕಾರ್ಪೊರೆಟ್ ತೆರಿಗೆಯನ್ನು ವಸೂಲಿ ಮಾಡುತ್ತದೆ. ಭಾರತವು ೨೦೦೮-೦೯ರಲ್ಲಿ ಸೈಪ್ರಸ್‌ನಲ್ಲಿ ಹೂಡಿದ ಬಂಡವಾಳವು ೨.೨೫೫.೬೦ ಮಿಲಿಯನ್ ಡಾಲರ್ ಗಳಾಗಿದ್ದು, ಇದು ಹಿಂದಿನ ವರ್ಷಗಳ ಹೂಡಿದ ಬಂಡವಾಳದ ನಾಲ್ಕರಷ್ಟಾಗಿದೆ. ಮಾರಿಷಸ್‌ನಲ್ಲಿ ಹೂಡಿದ ಬಂಡವಾಳವು ಕೂಡ ೨೦೦೭-೦೮ರಲ್ಲಿನ ೧.೪೬೭ ಮಿಲಿಯನ್ ಡಾಲರ್‌ಗಳಿದ್ದುದು ೨೦೦೮-೦೯ರಲ್ಲಿ ೧,೮೦೪ ಡಾಲರ್‌ಗಳಿಗೇರಿತು. ಇದು ಕೇವಲ ಕಾಕತಾಳೀಯವಲ್ಲ, ಅಂದರೆ ಸಕ್ರಮ ಬಂಡವಾಳವು ಅಕ್ರಮ ಬಂಡವಾಳ ಹೂಡಿಕೆಯನ್ನು ಹಿಂಬಾಲಿಸಿ ಹೋಗಿ, ಎರಡೂ ಬೆಸೆದುಕೊಂಡು, ಒಟ್ಟಿನ ಮೇಲೆ ಡಿಟಿಎಎ ಮುಸುಕಿನಲ್ಲಿ ತೆರಿಗೆ ತಪ್ಪಿಸಿಕೊಂಡು ಭಾರತಕ್ಕೆ ಬಂಡವಾಳವನ್ನು ಹರಿಸುವ ಹುನ್ನಾರವಾಗಿದೆ.

ಸಹಭಾಗಿತ್ವ ಪತ್ರ ಮತ್ತು ಮಾರಿಷಸ್ ಒಪ್ಪಂದ (ಪಿಎನ್‌ಎಸ್)

''ಸಹಭಾಗಿತ್ವ ಪತ್ರ'' ಎಂಬುದು ದೇಶದ ಜನತೆಗೆ ಎಸಗಿದ ಒಂದು ಮಹಾದ್ರೋಹವಾಗಿದೆ. ಅದನ್ನು ಯಾರು ಬಳಸಿಕೊಳ್ಳುತ್ತಾರೆಂಬುದನ್ನು ಬಹಿರಂಗಪಡಿಸದಿರಲು ಕಾನೂನುಬದ್ಧವಾಗಿಯೇ ಅನುಮತಿ ನೀಡುವ ಈ ಪತ್ರವು ಹಣಕಾಸು ದಳ್ಳಾಳಿಗಳ ಚಾಣಾಕ್ಷಸೃಷ್ಟಿ. ಸ್ವಿಸ್‌ಬ್ಯಾಂಕ್ ಮತ್ತು ಬಹಮಾಗಳಂಥ ತೆರಿಗೆದಾರರ ಭದ್ರಕೋಟೆಗಳಲ್ಲಿ ಬಚ್ಚಿಟ್ಟಿರುವ ಹಣವನ್ನು, ದೊಡ್ಡ ದೊಡ್ಡ ಕಂಪನಿಗಳು ಮಾರಿಷಸ್‌ಗೆ ತಂದು ಅಲ್ಲಿಂದ ಪಿಎನ್‌ಎಸ್ ಮೂಲಕ ಸಾಗಿಸಿ 'ಸ್ಟಾಕ್ ಎಕ್ಸ್‌ಛೇಂಜ್'ನಲ್ಲಿ ಹೂಡುತ್ತವೆ. ಸ್ಟಾಕ್ ಮಾರುಕಟ್ಟೆಯ ವಿಶ್ಲೇಷಕರೊಬ್ಬರು ಹೇಳಿದಂತೆ ''ಹಣವನ್ನು ಹೊರಗೆ ಸಾಗಿಸುವ ಮಾರ್ಗ 'ಹವಾಲ' ಆದರೆ, ಪುನಃ ಒಳಗೆ ತರುವ ಮಾರ್ಗ ಸಹಭಾಗಿತ್ವ ಪತ್ರ.'' ಲಭ್ಯವಿರುವ ಮಾಹಿತಿಗಳ ಪ್ರಕಾರ ೨೦೦೯ರ ಕಡೆಯವರೆಗೆ ವಿದೇಶಿ ಔದ್ಯಮಿಕ ಹೂಡಿಕೆಯಲ್ಲಿನ ಶೇಕಡ ೫೦ರಿಂದ ೬೦ ಭಾಗದಷ್ಟು ಅಂದರೆ, ಒಟ್ಟು ೮೫ ಬಿಲಿಯನ್ ಡಾಲರ್‌ಗಳು (೪ ಲಕ್ಷ ಕೋಟಿ ರೂಪಾಯಿಗಳು), ಇದೇ ಮಾರ್ಗವಾಗಿ ಹರಿದು ಬಂದಿದೆ ಮತ್ತು ಈ ಮಾರ್ಗವು ವಿಸ್ತರಿಸುತ್ತಲೇ ಇರುವ ಹಾಗೆ ಕಾಣುತ್ತದೆ. ಅದನ್ನು ನಿಷೇಧಿಸುವಂತೆ ಭಾರತದ ರಿಸರ್ವ್ ಬ್ಯಾಂಕ್ ಸರ್ಕಾರವನ್ನು ಮತ್ತೆ ಮತ್ತೆ ಒತ್ತಾಯ ಮಾಡುತ್ತಲೇ ಇದೆ; ಏಕೆಂದರೆ, ಅದರ ಮೂಲಕ ಹೂಡಿದ ಬಂಡವಾಳದ ಮೇಲೆ ದೊರೆಯು
ಲಾಭವನ್ನು ಯಾರು ಪಡೆಯುತ್ತಾರೆ ಎಂಬುದಾಗಲಿ, ಹಣ ಹೂಡಿದವರ ಗುರುತ
ಪರಿಚಯಗಳಾಗಲಿ ಪತ್ತೆಯಾಗದೆ ನಿಗೂಢವಾಗಿಯೇ ಉಳಿಯುತ್ತವೆ.

ಅಕ್ರಮವಾಗಿ ಗಳಿಸಿದ ಹಣವು ಮೂರು ವರ್ಗಗಳಲ್ಲಿ ಹಂಚಿಕೆಯಾಗುತ್ತದೆ. ಈ
ಪೈಕಿ ವ್ಯಾಪಾರೀ ವರ್ಗವು ಹೆಚ್ಚು ಲಾಭ ಪಡೆಯುತ್ತದೆಯಾದರೂ ಅವರ ಮೇ
ಕಳಂಕವನ್ನು ಹೊರಿಸುವಂತಿಲ್ಲ. ಏಕೆಂದರೆ, ವ್ಯಾಪಾರಿಗಳು ಹಲವಾರು ಬಗೆ
ಲಾಭದಾಯಕ ಮಾರ್ಗಗಳನ್ನು ನೇರವಾಗಿಯೇ ಅನುಸರಿಸುತ್ತಾರೆ. ಆದ
ಅಕ್ರಮಲಾಭದ ಪಾಲು ದಾರರಾದ ರಾಜಕಾರಣಿಗಳು ಮತ್ತು ಅಧಿಕಾರಿಗಳು ತ
ಗುರುತು ಪರಿಚಯಗಳನ್ನು ಬಿಟ್ಟುಕೊಡದೆ ತೆರೆಮರೆಯಲ್ಲೆ ಉಳಿದು ಯಥಾಶಕ್ತಿ ಲಾ
ಪಡೆದುಕೊಳ್ಳುತ್ತಾರೆ; ಸಾಮಾನ್ಯವಾಗಿ ಇವರು ವಿದೇಶಿ ಔದ್ಯಮಿಕ ಹೂಡಿಕೆಯ ಲಾ
ಪಡೆಯಲು ಸುತ್ತುಬಳಸಿನ ದಾರಿಗಳನ್ನು ಅನುಸರಿಸುತ್ತಾರೆ. ಈ ಕಾರಣದಿಂದಾಗಿಯ
ಪಿಎನ್‌ಎಸ್ ನಿಷೇಧಿಸಲು ಇವರ್ಯಾರೂ ಮನಸ್ಸು ಮಾಡುವುದಿಲ್ಲ.

ಮಾಜಿ ಲೋಕಸಭಾ ಸದಸ್ಯರಾದ ಸುಬ್ರಮಣ್ಯಂ ಸ್ವಾಮಿಯವರ ಈ
ಸಂದರ್ಶನವು ಇದರ ಕಥೆಗೆ ತೀಕ್ಷ್ಣತೆಯನ್ನು ಮಾತ್ರವಲ್ಲದೆ, ಆಕ್ರೋಶವ
ಕೂಡಿಸುತ್ತದೆ. (ಇಂಡಿಯನ್ ಎಕ್ಸ್‌ಪ್ರೆಸ್, ೧೫-೨-೨೦೧೦) :

''ಭಾರತದ ಆರ್ಥಿಕ ಹಿನ್ನಡೆಗೆ ಕಾರಣವು ಅಮೆರಿಕಾದ ಸಂಪಕ
ದೋಷವಾಗಲಿ ಅಥವಾ ಪರಸ್ಪರಾವಲಂಬಿಯಾದ ಜಾಗತಿಕ ವ್ಯಾ
ವ್ಯವಸ್ಥೆಯಾಗಲಿ ಅಲ್ಲ; ಆದರೆ ಕ್ಷೀಣಿಸಿದ ನಮ್ಮ ಆರ್ಥಿಕ ಉತ್ಪನ್ನ ಮತ್ತು ದೇಶ
ಹಿತವನ್ನು ಅಲಕ್ಷಿಸಿ ನಾವು ಮಾರಿಷಸ್ ಜೊತೆಗೆ ಮಾಡಿಕೊಂಡ 'ಸಹಭಾಗಿತ್ವ ಒಪ್ಪಂ
ಪತ್ರ'ಗಳೇ ಆಗಿವೆ. ಈ ಒಪ್ಪಂದದ ಅಡಿಯಲ್ಲಿ ಕೇವಲ ೧ ಡಾಲರ್ ಸಲ್ಲಿ
ಮಾರಿಷಸ್‌ನಲ್ಲಿ ಸಂಘಟಿತವಾದ ಕಂಪನಿಯು ಕೂಡ ಗಳಿಸಿದ ಲಾಭದ ಮೇ
ಯಾವ ತೆರಿಗೆಯನ್ನೂ ಕೊಡದೆ ಭಾರತದ ಸ್ಟಾಕ್ ಮಾರುಕಟ್ಟೆಯಲ್ಲಿ ಹಣಹೂಡ
ಅವಕಾಶ ಮಾಡಿಕೊಡುತ್ತದೆ.

''ಪಿಎನ್‌ಎಸ್ ಹೊರತುಪಡಿಸಿದರೆ ಇನ್ನಿತರ ಸ್ಟಾಕ್ ಮಾರುಕಟ್ಟೆ ವ್ಯವಹಾರಗಳ
'ಸ್ಟಾಕ್'ಗಳನ್ನು ಕೊಳ್ಳುವವರು ಮತ್ತು ಮಾರುವವರ ವಿವರಗಳನ್ನೂ ಹೂ
ಬಂಡವಾಳದ ಮೂಲವನ್ನೂ ತಿಳಿಸ ಬೇಕಾಗುತ್ತದೆ. ಆರ್ಥಿಕ ಸುಧಾರಣೆ ಕುರಿತಾ
ತಾರಾಪೂರ್ ಸಮಿತಿಯು ಪಿಎನ್‌ಎಸ್‌ಅನ್ನು ತೀವ್ರವಾಗಿ ಖಂಡಿಸಿ ಅದನ
ರದ್ದುಮಾಡಬೇಕೆಂದು ಸಲಹೆ ಮಾಡಿತು. ಆರ್‌ಬಿಐ ಗವರ್ನರ್ ರೆಡ್ಡಿಯವರು ಅದ
ಅಪಾಯಗಳ ಬಗೆಗೆ ಎಚ್ಚರಿಕೆ ನೀಡಿದರು. ಆದರೆ ಇವೆಲ್ಲವನ್ನೂ ಅಲಕ್ಷಿಸಲಾಯಿತು
ದಾಮೋದರ್ ಮತ್ತು ರೆಡ್ಡಿ ಇಬ್ಬರಿಗೂ, ಸಾಮಾನ್ಯವಾಗಿ ದೊರೆಯ ಬೇಕಾಗಿದ್ದ ಅ
ಕಾರಾವಧಿಯ ವಿಸ್ತರಣೆಯನ್ನು ನಿರಾಕರಿಸಲಾಯಿತು. ಮುಂದೆ ಬಂದವರ
ಸರ್ಕಾರದ ಹಾದಿಗೇ ಬಂದರು. ಹೀಗಾಗಿ ವಿಶ್ವಾಸಘಾತಕವಾದ ಈ ಒಪ್ಪಂದ
ಯಾವುದೇ ಹೊಣೆಗಾರಿಕೆಯಿಲ್ಲದೆ ಮುಂದುವರಿದಿದೆ.''

ಇಚ್ಛೆಯಾಗಲಿ ಒತ್ತಾಯವಾಗಲಿ ಎರಡೂ ಇಲ್ಲ

ಈ ಹಿಂದೆ ಪ್ರಸ್ತಾಪಿಸಿದ ಮೂರೂ ಬಗೆಯ ಅಕ್ರಮ ವ್ಯವಹಾರಗ
ದಶಕಗಳಿಂದ ನಡೆಯುತ್ತಲೇ ಇವೆ. ಸರ್ಕಾರವು ಇಚ್ಛಿಸಿದ್ದರೆ ಇದನ್ನು ಯಾವತೊ
ಕೊನೆಗೊಳಿಸಬಹುದಾಗಿತ್ತು. ತಪ್ಪು ಬೆಲೆ ನಮೂದಿಸುವುದನ್ನು ಕಟ್ಟುನಿಟ್ಟ
ನಿಯಂತ್ರಿಸುವಂತೆ ಶಕ್ತವಾದ ಜಾರಿ ನಿರ್ದೇಶನಾಲಯವು ಕಾರ್ಯ ನಿರ್ವಹಿ
ಬಹುದು. ಇದಕ್ಕೆ ಸಮರ್ಥವೂ, ಪ್ರಾಮಾಣಿಕರೂ ಆದ ನುರಿತ ಸಿಬ್ಬಂದಿಯ
ಅಗತ್ಯವಾಗುತ್ತದೆ. ಮಾರಿಷಸ್ ಡಿಟಿಎಎಯನ್ನು ಕೈಬಿಡದಿದ್ದರೆ ಭಾರತವೇ ಅದನ
(ಡಿಟಿಎಎ) ರದ್ದುಗೊಳಿಸಬಹುದು. ಆದರೆ ಸರ್ವೋಚ್ಚ ನ್ಯಾಯಾಲಯವು ಗಮನಿ
ಹೇಳಿದಂತೆ (ಮಾರ್ಚ್ ೨, ೨೦೧೧) ಭಾರತದ ಅಧಿಕಾರಿ ವರ್ಗವು ಯಾ
ಕ್ರಮವನ್ನೂ ಕೈಗೊಳ್ಳದೆ ಜನರ ಕಣ್ಣಿಗೆ ಮಣ್ಣೆರಚುವುದನ್ನು ಮುಂದುವರಿಸಿದೆ.

ಡಾ॥ ಡಿ. ನರಸಿಂಹ ರೆಡ್ಡಿ
(ನಿವೃತ್ತ) ಅರ್ಥಶಾಸ್ತ್ರ ಪ್ರಾಧ್ಯಾಪಕರು,
೩-೩೩-೩೩, ಎಲ್. ವೆಂಕಟರೆಡ್ಡಿ ಕಾಲೋನಿ, ಲಿಂಗಂಪಲ್ಲಿ ಹೈದರಾಬಾದ್ - ೫೦೦ ೦೧೯

ಕನ್ನಡಕ್ಕೆ : ಡಾ॥ ಕೆ. ಎಲ್. ಗೋಪಾಲಕೃಷ್ಣಯ್ಯ
ನಂ. ೨೨೭೩, ೨೨ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ ಬೆಂಗಳೂರು - ೫೬೦ ೦೭೦







ಪರಂಜ್ಯೋತಿ

ಪ್ರವಾಸವೆಂದರೆ ಬರಿ ಕುತೂಹಲವೇ ಅಲ್ಲ

ಪ್ರವಾಸ ಹೊರಡುವುದೆಂದರೆ ಕುತೂಹಲ ಕೆರಳುತ್ತದೆ. ನಾವಿಬ್ಬರು ಗೋವಾ ಪ್ರವಾಸದ ಯೋಜನೆ ಹಾಕಿದಾಗ ಕುತೂಹಲಕ್ಕೆ ರೆಕ್ಕೆ ಮೂಡಿತು ಎನ್ನಬಹುದು!

ಕರ್ನಾಟಕದ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳ ಎಲ್ಲೆಗಳಿಗೆ ಹೊಂದಿಕೊಂಡಿರುವ ಪುಟ್ಟ ರಾಜ್ಯ ಗೋವಾ. ಕೇಂದ್ರಾಡಳಿತ ಪ್ರದೇಶ. ಪಶ್ಚಿಮ ಘಟ್ಟಗಳ ಮೇಲಿನಿಂದ ಅರಬ್ಬಿ ಸಮುದ್ರದತ್ತ ಜಾರಿಕೊಂಡಂತಿದ್ದು ಇಡೀ ಪಶ್ಚಿಮ ಭಾಗ ಕಡಲ ತೀರದಲ್ಲಿದೆ.

ವರ್ಷಪೂರ್ತಿ ನಮ್ಮ ದೇಶದಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ಪ್ರವಾಸಿಗಳನ್ನು ಆಕರ್ಷಿಸುವ ಗೋವಾದ ವಿಸ್ತೀರ್ಣ ೩.೭೦೨ ಚ.ಕಿ.ಮೀ. ಜನಸಂಖ್ಯೆ ಸುಮಾರು ೧೫ ಲಕ್ಷ.

೧೬ನೇ ಶತಮಾನದ ಮೊದಲ ದಶಕದಲ್ಲಿ ಬಿಜಾಪುರದ ಸುಲ್ತಾನ ಅದಿಲ್ ಷಾ ತನ್ನ ರಾಜಧಾನಿಯನ್ನು ಹಳೆಯ ಗೋವಾಕ್ಕೆ ಬದಲಾಯಿಸಲು ನಿರ್ಧರಿಸಿದ್ದ. ಆದರೆ ಸಿದ್ಧತೆಗಳು ಪೂರ್ಣಗೊಳ್ಳುವ ಮೊದಲು, ಅಫೊನ್ಸೊ ಡಿ ಆಲ್ಬುಕರ್ಕ್ ಕದನದಲ್ಲಿ ಅದನ್ನು ವಶಪಡಿಸಿಕೊಂಡು ಪೋರ್ಚುಗೀಸ್ ವಸಾಹತು ಕೇಂದ್ರವಾಗಿ ಪರಿವರ್ತಿಸಿದಾಗ ಕರ್ನಾಟಕದೊಂದಿಗಿನ ಸಂಪರ್ಕ ಕಡಿದುಹೋಯಿತು. ಮುಂದೆ ಅದು ಪೋರ್ಚುಗೀಸರ ಸಾಗರೋತ್ತರ ವಸಾಹತಾಗಿ ೪೫೦ ವರ್ಷಗಳಷ್ಟು ದೀರ್ಘಕಾಲ ಅವರ ಆಡಳಿತಕ್ಕೊಳಪಟ್ಟಿತು. ಪಣಜಿ ಅಥವಾ ಪಂಜಿಮ್ ಗೋವಾದ ರಾಜಧಾನಿಯಾಯಿತು. ೧೯೬೧ರಲ್ಲಿ ಸೈನಿಕ ಕಾರ್ಯಾಚರಣೆಯಿಂದ ವಸಾಹತು ಗೋವಾ ಹೋಗಿ ಭಾರತ ಗಣರಾಜ್ಯದ ಗೋವಾ ಆಯಿತು.

೧೯೯೦ರ ದಶಕದಲ್ಲೊಮ್ಮೆ ನಾನು ಗೋವಾಕ್ಕೆ ಹೋಗಿದ್ದೆ. ಗೋವಾ ಎಂದರೆ ಹನಿಮೂನಿಗರ ಸ್ವರ್ಗವೆಂದು ಖ್ಯಾತವಾಗಿದೆಯಷ್ಟೆ. ಆಗ, ನಾವು ಹನಿಮೂನಿಗೆಂದು ಎಲ್ಲಿಗೂ ಹೋಗಿಲ್ಲವಲ್ಲ ಎಂಬುದನ್ನು ನೆನಪು ಮಾಡಿಕೊಂಡಿದ್ದೆ. ಈ ಬಾರಿ ನನ್ನ ಪತ್ನಿಯೂ ಜೊತೆಗಿದ್ದು, ಅದನ್ನು ಪ್ರಾಯ ಸಂದವರ ಹನಿಮೂನು ಎಂದು ಸಂಭ್ರಮಪಟ್ಟುಕೊಳ್ಳಲು ಯಾವ ಅಡ್ಡಿಯೂ ಇರಲಿಲ್ಲ!

ಗೋವಾದಲ್ಲಿ ಇಳಿದ ಕ್ಷಣದಿಂದಲೇ ತಿರುಗಾಟ ಪ್ರಾರಂಭಿಸಬೇಕೆಂದುಕೊಂಡಿದ್ದ ನಮ್ಮ ಅಂದಾಜು ತಲೆಕೆಳಗಾಯಿತು. ದಾರಿಯಲ್ಲಿ ಇಡಿಕಿರಿದು ನಿಂತುಬಿಟ್ಟಿದ್ದ ಅದಿರುಲಾರಿಗಳಿಂದಾಗಿ ಬಸ್ಸು ಪಣಜಿ ತಲುಪಲು ತಡವಾಯಿತು.

ಪಣಜಿಯ ದೋನಾ ಪಾಲಾ ಭಾಗದಲ್ಲಿರುವ ಭಾರತೀಯ ಸಾಗರ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನಿಯಾಗಿರುವ ಡಾ॥ ವಿರುಪಾಕ್ಷ ಬಣಕಾರರ ಸಹಾಯದಿಂದ ಅತಿಥಿಗೃಹದಲ್ಲಿ ನಮ್ಮ





ಪ್ರವಾಸದಲ್ಲಿ ಗೆಳೆತನ

ವಾಸ್ತವ್ಯಕ್ಕೆ ಏರ್ಪಾಟಾಗಿತ್ತು. ಆದರೆ ನಾವು ಪ್ರವಾಸಕ್ಕೆ ತಯಾರಾಗುವಾಗ ಸಮಯ ಮೀರಿತ್ತು. ಪ್ರವಾಸಿಗಳನ್ನು ಒಯ್ಯುವ ಬಸ್ಸುಗಳು ಹೊರಟುಹೋಗಿದ್ದವು. ಮರು ದಿನದವರೆಗೆ ಕಾಯಬೇಕಲ್ಲ ಎಂಬ ಪೇಚಾಟ ನಮ್ಮದು.

ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಡಾ॥ ಬಣಕಾರರು, ತಮಗೆ ಪರಿಚಿತನಾದ ಕಾರು ಚಾಲಕನೊಬ್ಬನನ್ನು ಸಂಪರ್ಕಿಸಿ, ಎರಡು ಮೂರು ಗಂಟೆಗಳ ಕಾಲ ಹಳೆಯ ಗೋವಾದ ಚರ್ಚುಗಳತ್ತ ತಿರುಗಾಡಿ ಬರಲು ಅವಕಾಶ ಒದಗಿಸಿಕೊಟ್ಟರು.

ತಮಿಳ್ನಾಡು ಮತ್ತು ಕೇರಳದ ಪರಿಚಯವಷ್ಟೆ ಇದ್ದ ನನ್ನ ಪತ್ನಿ ಗೋವಾದ ವಿವಿಧ ಬಗೆಯ ಜನರನ್ನು ನೋಡಿ ಮೊದಲಿಗೆ ಗಲಿಬಿಲಿಗೊಂಡವಳಂತೆ ಕಾಣಿಸಿದಳು. ಆದರೆ ಡಾ॥ ಬಣಕಾರರ ಕನ್ನಡ ಕೇಳಿದ ಮೇಲೆ ಅವಳ ಗೊಂದಲ ಸ್ವಲ್ಪ ಕಡಿಮೆಯಾದಂತಿತ್ತು.

ಪಣಜಿ ಮಾಂಡವಿ ನದಿಯ ಎಡದಂಡೆಯ ಮೇಲಿದೆ. ಪೋರ್ಚುಗೀಸರ ಕಾಲದ ಭವನಗಳು, ಆಡಳಿತ ಕಚೇರಿಗಳ ಜೊತೆಗೆ ಆಧುನಿಕ ಕಟ್ಟಡಗಳು ತಲೆ ಎತ್ತಿವೆ. ಹಳೆಯ ಗೋವಾಕ್ಕೆ ಮಾಂಡವಿ ನದಿಯ ದಂಡೆಯ ಮೇಲೆ ಸಾಗಬೇಕು. ನಾನು ಕಳೆದಬಾರಿ ಬಂದಿದ್ದಾಗ ನದಿಗೆ ಅಡ್ಡಲಾಗಿ ಕಟ್ಟಿದ್ದ ಹೊಸ ಸೇತುವೆ ಮುರಿದುಬಿದ್ದು ಹಗರಣಕ್ಕೆ ಕಾರಣವಾಗಿತ್ತು. ಈಗ ಹೊಸ ಸೇತುವೆಯ ಮೇಲೆ ವಾಹನಗಳು ಓಡಾಡುತ್ತವೆ. ನೀರಿನಲ್ಲಿ ದೊಡ್ಡ ಕ್ಯಾಸಿನೊ ಹಡಗುಗಳು ಬೀಡುಬಿಟ್ಟಿವೆ. ರಾತ್ರಿ ಅಲ್ಲಿ ಬಗೆಬಗೆಯ ಜೂಜಾಟಗಳು, ಮೋಜು, ಮಸ್ತಿ ನಡೆಯುತ್ತವಂತೆ.

ಗೋವಾದ ಯಾವ ಮೂಲೆಗೆ ತಿರುಗಿದರೂ ಸಣ್ಣಪುಟ್ಟ ದೊಡ್ಡ ಚರ್ಚುಗಳು ಕಣ್ಣಿಗೆ ಬೀಳುತ್ತವೆ. ಅಲ್ಲಿರುವ ನೂರಾರು ಚರ್ಚುಗಳ ಪೈಕಿ ಬಹಳ ಪ್ರಸಿದ್ಧವಾದದ್ದು ಬ್ಯಾಸಿಲಿಕ ಆಫ್ ಬೋಮ್ ಜೀಸಸ್ ಚರ್ಚ್. ಕ್ರಿ.ಶ. ೧೫೬೨ರಲ್ಲಿ ಅದನ್ನು ನಿರ್ಮಿಸಲಾಯಿತು. ಪೋರ್ಚುಗೀಸ್ ವಾಸ್ತುಶೈಲಿಯಲ್ಲಿ ನಿರ್ಮಿಸಲಾಗಿರುವ ಆ ಭವ್ಯ ಚರ್ಚಿನಲ್ಲಿ, ಮತ ಪ್ರಚಾರಕ್ಕೆಂದು ಗೋವಾಕ್ಕೆ ಬಂದಿದ್ದ ಸಂತ ಫ್ರಾನ್ಸಿಸ್ ಜೇವಿಯರರ ಪಾರ್ಥಿವ ಶರೀರವನ್ನು ಗಾಜಿನ ಪೆಟ್ಟಿಗೆಯಲ್ಲಿ ರಕ್ಷಿಸಿಡಲಾಗಿದೆ. ನಾವು ನಿಂತಲ್ಲಿಂದ ಸಂತರ ಮುಖದ ಒಂದು ಪಾರ್ಶ್ವ ಮಾತ್ರ ಕಾಣಿಸುತ್ತದೆ. ಹನ್ನೆರಡು ವರ್ಷಗಳಿಗೊಮ್ಮೆ ಅದನ್ನು ಸಾರ್ವಜನಿಕರ ಪ್ರದರ್ಶನಕ್ಕೆ ಇಡಲಾಗುತ್ತದೆ. ಆಗ ಸಂತ ಫ್ರಾನ್ಸಿಸರ ದರ್ಶನ ಪಡೆಯಲು ಜಗತ್ತಿನ ಎಲ್ಲ ಭಾಗಗಳಿಂದ ಭಕ್ತರು ಬರುತ್ತಾರೆ. ಆ ಚರ್ಚಿಗೆ ಹೊಂದಿಕೊಂಡಂತೆ ಒಂದು ಸನ್ಯಾಸಿ ಮಠವಿದೆ. ಅದರ ಪಕ್ಕದಲ್ಲಿ ಮತ್ತೊಂದು ಭವ್ಯವಾದ ಸೈಂಟ್ ಫ್ರಾನ್ಸಿಸ್ ಆಫ್ ಅಸ್ಸಿಸಿ ಚರ್ಚ್ ಇದೆ. ಅದನ್ನು ೧೯೬೧ರಲ್ಲಿ ನಿರ್ಮಿಸಲಾಯಿತು. ಇದಕ್ಕೆ ಹೊಂದಿಕೊಂಡಂತೆ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವಿದೆ. ಅದರಲ್ಲಿ ಚರ್ಚು ನಿರ್ಮಾಣ ಸಂದರ್ಭದ ಚಿತ್ರಗಳಿವೆ. ಹಲವು ಸಂತರ ಮತ್ತು ಗೋವಾದ ಗೌವರ್ನರುಗಳ ಭಾವಚಿತ್ರಗಳಿವೆ.

ಚರ್ಚುಗಳೊಳಕ್ಕೆ ಕ್ಯಾಮೆರಾ ಅಥವಾ ಹ್ಯಾಂಡಿಕ್ಯಾಂ ಒಯ್ಯಲು ಅಡ್ಡಿಯಿಲ್ಲ. ಆದರೆ ಅಲ್ಲಿನ ದೇವರ ಮೂರ್ತಿಗಳ ಹಿನ್ನೆಲೆಯಲ್ಲಿ ನಿಂತು ಫೋಟೊ ತೆಗೆಯುವಂತಿಲ್ಲ. ಎಲ್ಲರ ಕೈಗಳಲ್ಲೂ ಮೊಬೈಲ್ ಫೋನ್ ಕ್ಯಾಮರಾಗಳಿರುವ ಈ ದಿನಗಳಲ್ಲಿ ಕೆಲವು ಕಟ್ಟುಪಾಡುಗಳು ತಮ್ಮಷ್ಟಕ್ಕೆ ಸಡಿಲಗೊಳ್ಳುವುದುಂಟು. ಆದರೂ ಅಲ್ಲಿರುವ ಸ್ವಯಂ



ೀವಿಕೆಯರು ಎಲ್ಲರ ಮೇಲೂ ಹದ್ದಿನ ದೃಷ್ಟಿಯಿಟ್ಟು ಕಾಯುತ್ತಿರುತ್ತಾರೆ.

ಎರಡು ಮೂರು ಗಂಟೆಗಳ ಅವಧಿಯ ತಿರುಗಾಟದಿಂದ ಮನಸ್ಸಿಗೆ ಸ್ವಲ್ಪ ಮಾಧಾನವಾಯಿತು. ಸಂಜೆ ದೋನಾ ಪಾಲಾ ತೀರಕ್ಕೆ ನಡೆಯುತ್ತ ಹೊರಟೆವು. ರಳು ಹಾಸಿನ ತೀರವಲ್ಲ, ಅದು ಹೆಚ್ಚು ಗದ್ದಲವಿಲ್ಲದ ಪ್ರಶಾಂತ ಸ್ಥಳ ಎನ್ನಬಹುದು. ೋನಾ ಪಾಲಾ ಜುವಾರಿ ನದಿ ಅರಬ್ಬಿ ಸಮುದ್ರದೊಂದಿಗೆ ಸಂಗಮವಾಗುವ ಸ್ಥಳ. ಂದು ಹೆಬ್ಬಂಡೆ. ಅದರ ಮೇಲೆ ಸಂಜೆ ಸೂರ್ಯಾಸ್ತ ನೋಡಲು ಅನುಕೂಲ ಾಗುವಂತೆ ನಿರ್ಮಿಸಲಾಗಿರುವ ಕಲ್ಲು ಮಂಟಪ. ಅದಕ್ಕೆ ಹೊಂದಿಕೊಂಡಂತೆ ರ್ವದತ್ತ ನೀರಿನೊಳಕ್ಕೆ ಸುಮಾರು ಮುನ್ನೂರು ಅಡಿಗಳವರೆಗೆ ಚಾಚಿಕೊಂಡಿರುವ ವತ್ತು ಅಡಿ ಅಗಲದ ಒಂದು ಜೆಟ್ಟಿ. ದೋಣಿಗಳಿಂದ ಜನರು ಇಳಿಯುವ, ಬಲೆ ಬೀಸಿ ಡಿದು ತಂದ ಮೀನುಗಳನ್ನು ಇಳಿಸಿಕೊಳ್ಳುವ ಸ್ಥಳ. ತುದಿಯವರೆಗೆ ನಡೆಯುತ್ತ ಹೋಗಿ ಥವಾ ಕಲ್ಲುಬೆಂಚುಗಳ ಮೇಲೆ ಕುಳಿತು ಅಲೆಗಳು ತೀರಕ್ಕೆ ಅಪ್ಪಳಿಸುವುದನ್ನು, ರಿನಲ್ಲಿ ತೀವ್ರ ವೇಗದಿಂದ ಚಲಿಸುವ ಸ್ಪೀಡ್ ಬೋಟ್‌ಗಳನ್ನು, ತೀರದ ಸಮೀಪ ುತಿರುವ ದೋಣಿ ಹಿಂಡನ್ನು ನೋಡಬಹುದು. ಆ ಭಾಗದಲ್ಲಿ ಸಾಗರ ವಿಜ್ಞಾನ ಸಂಸ್ಥೆ, ೋವಾ ವಿಶ್ವವಿದ್ಯಾ ನಿಲಯ, ಗೋವಾ ಅಂತರರಾಷ್ಟ್ರೀಯ ಕೇಂದ್ರ ಇತ್ಯಾದಿ ಸ್ಥೆಗಳಿವೆ. ಅಲ್ಲಿಂದ ದಕ್ಷಿಣಕ್ಕೆ ಮರ್ಮಗೋವಾ ಬಂದರು. ಬಂದರಿನಲ್ಲಿ ನಿಂತು ದಿರು ತುಂಬಿಸಿಕೊಳ್ಳುವ ಹಡಗುಗಳು.

ದೋನಾ ಪಾಲಾ ಪ್ರವಾಸಿ ತಾಣಕ್ಕೆ ಸಂಬಂಧಿಸಿದ ಒಂದು ದಂತಕತೆ ಹೀಗಿದೆ. ೋನಾ ಎಂಬ ಶ್ರೀಮಂತ ಸುಂದರಿ ಮತ್ತು ಪಾಲಾ ಎಂಬ ಮೀನುಗಾರ ಯುವಕನ ಧ್ಯೆ ಪ್ರೇಮಾಂಕುರವಾಗಿ, ದೋನಾಳ ಶ್ರೀಮಂತ ತಾಯಿ ತಂದೆಯರ ವಿರೋಧದ ುವೆ ಅವರ ಮದುವೆ ನಡೆಯಿತು. ದಂಪತಿಗಳು ಅನ್ಯೋನ್ಯವಾಗಿದ್ದರು. ಒಮ್ಮೆ ಮೀನು ಿಯಲು ಸಮುದ್ರಕ್ಕೆ ಹೋದ ಪಾಲಾ ಹಿಂದಿರುಗಿ ಬರಲಿಲ್ಲ. ದೋನಾ ಆತನ ಬರವಿಗಾಗಿ ಯುತ್ತ ಕುಳಿತಳು. ಹಾಗೇ ಕಾಯುತ್ತ ಆ ಹೆಬ್ಬಂಡೆಯ ರೂಪ ತಾಳಿದಳು. ಪ್ರಾಯಶ ಥ ದಂತ ಕತೆಗಳು ಗೋವಾದ ಎಲ್ಲ ಪ್ರವಾಸಿ ತಾಣಗಳ ಬಗೆಗೂ ಇರಬಹುದು !

ಆದರೆ ವಾಸ್ತವದಲ್ಲಿ ದೋನಾ ನಾಲ್ಕುನೂರು ವರ್ಷಗಳ ಹಿಂದೆ ಬದುಕಿದ್ದ ಶ್ರೀಮಂತ ುಂದರಿ. ಆಕೆಯ ತಂದೆ ಶ್ರೀಲಂಕಾದ ಜಾಫ್ನಾದಲ್ಲಿ ಪೋರ್ಚುಗಲ್ಲಿನ ಗೌರ್ನರನಾಗಿದ್ದ. ಿವೃತ್ತಿಯ ನಂತರ ಅವರ ಕುಟುಂಬ ೧೬೬೪ರಲ್ಲಿ ಗೋವಾಕ್ಕೆ ಬಂದು ನೆಲೆಸಿತು. ೀಮ್ ಆಂಟೋನಿಯಾ ಸೋಟೊ ಮಾಯಿರ್ ಎಂಬ ಶ್ರೀಮಂತ ಯುವಕನೊಂದಿಗೆ ೋನಾಳ ವಿವಾಹ ನೆರವೇರಿತು. ಆಕೆ ೧೬೮೨ರಲ್ಲಿ ಮರಣ ಹೊಂದಿದಳು. ಕಲ್ಲು ಂಟಪಕ್ಕೆ ಹತ್ತಿಹೋಗುವ ಮೆಟ್ಟಿಲುಗಳ ಒಂದು ಬದಿಯಲ್ಲಿ ದಂಪತಿಗಳ ಶಿಲ್ಪವೊಂದಿದ್ದು ವಾಸಿಗರು ಅದನ್ನೇ ದೋನಾ-ಪಾಲಾರ ಶಿಲ್ಪವೆಂದು ಭಾವಿಸಿ ಅದರ ಮುಂದುಗಡೆ ುತು ಫೋಟೊ ತೆಗೆದುಕೊಳ್ಳುತ್ತಾರೆ. ಅದು ವಾಸ್ತವದಲ್ಲಿ ತತ್ವಶಾಸ್ತ್ರಜ್ಞ ರಾಬರ್ಟ್ ್ ದಂಪತಿಗಳದು. ಡಚ್ ಶಿಲ್ಪ ಕಲಾವಿದೆ ಯರ್ಸೆ ವಾನ್ ಲೀಸ್ಟನರ್ ನಿರ್ಮಿಸಿದ್ದು.

ಸೂರ್ಯ ಮುಳುಗಿದನಂತರ ನೀರಿನ ಮೇಲೆ ಕತ್ತಲೆ ಮುಸುಕಿತು. ಜನರು ಬಂದ ು ಹಿಡಿಯತೊಡಗಿದರು. ದೋಣಿಯೊಂದು ವೇಗವಾಗಿ ಚಲಿಸುತ್ತ ಆಗೀಗ ನೀರಿನ ೇಲೆ ಬೆಳಕಿನ ಗೆರೆ ಎಳೆಯತೊಡಗಿತ್ತು. ವಾಹನಗಳ ಸದ್ದಿನ, ಇತರ ಬೀಚುಗಳಂತೆ ಿ ತಿನಿಸು ಮಾರಾಟ ಮಾಡುವವರ ಗದ್ದಲವಿಲ್ಲ. ದಡದಲ್ಲಿ ಜಾಡುಬಿಟ್ಟದ್ದ ದೋಣಿಗಳ ಮತ್ತು ತೀರದಂಚಿನ ಮನೆಗಳಿಂದ ಬಿದ್ದ ಬೆಳಕು ನೀರಿನಲ್ಲಿ ಪ್ರತಿಫಲಿಸಿ ಚಿತ್ರಗಾರನ ದೊಡ್ಡ ಕ್ಯಾನ್ವಾಸಿನಂತೆ ಗೋಚರಿಸುತ್ತಿತ್ತು. ನೀರಿನ ಮೇಲಿಂದ ತಣ್ಣನೆಯ ಗಾಳಿ ಬೀಸಿ ಮನಸ್ಸಿಗೆ ಆಹ್ಲಾದವೆನ್ನಿಸಿತು. ನಮ್ಮ ಅತಿಥಿಗೃಹ ನಡೆದೇ ಹೋಗಬಹುದಾದಷ್ಟು ಸಮೀಪದಲ್ಲಿದ್ದುದರಿಂದ ನಾವು ಜೆಟ್ಟಿಯ ಮೇಲಿನ ಕಲ್ಲುಬೆಂಚೊಂದರ ಮೇಲೆ ಕುಳಿತೆವು. ಬಂಡೆಗೆ ಅಪ್ಪಳಿಸುವ ನೀರಿನ ಸದ್ದು, ಪ್ರಶಾಂತವಾದ, ಪ್ರಾಯಶಃ ರಸಾನುಭೂತಿ ಎನ್ನಬಹುದಾದಂಥ ವಾತಾವರಣ.

ನನ್ನ ಪತ್ನಿ ಮೊಮ್ಮಕ್ಕಳ ಪೈಕಿ ಯಾರಾದರೊಬ್ಬನನ್ನು ಜೊತೆಯಲ್ಲಿ ಕರೆತರಬೇಕಿತ್ತು ಎಂದು – ನಾವು ಹನಿಮೂನಿಗರು ಎಂಬುದನ್ನು ಮರೆತು – ಅಜ್ಜಿಯಾಗಿ ಹಂಬಲಿಸಿದಳು !

ಅತಿಥಿ ಗೃಹದತ್ತ ಹಿಂದಿರುಗುವಾಗ ಮತ್ತೊಂದು ತಮಾಷೆಯ ಪ್ರಸಂಗ. ರಸ್ತೆಯಲ್ಲಿ ಜನಸಂಚಾರವಿಲ್ಲ. ದೋನಾ ಪಾಲಾ ಕವಲು ರಸ್ತೆಯಲ್ಲಿ ನಿಂತು ನಾವು ಬೆಳಗ್ಗೆ ಬಸ್ಸಿನಲ್ಲಿ ಬಂದು ಇಳಿದದ್ದು ಇಲ್ಲಿ, ಸಾಗರವಿಜ್ಞಾನ ಸಂಸ್ಥೆ ಆ ಕಡೆ ಇದೆ – ಮುಂತಾಗಿ ನನ್ನ ಪತ್ನಿಗೆ ಸ್ಥಳ ಪರಿಚಯ ಮಾಡಿಸಿ ಅತಿಥಿಗೃಹದ ರಸ್ತೆಯಲ್ಲಿ ನಡೆಯತೊಡಗಿದ್ದೆವು. ಕಾರಿನಲ್ಲಿ ಕುಳಿತು ನಮ್ಮನ್ನು ಗಮನಿಸುತ್ತಿದ್ದ ವ್ಯಕ್ತಿಯೊಂದು, ಪ್ರಾಯಶಃ ನಾವು ದಾರಿ ತಪ್ಪಿದ್ದೇವೆಂದು ಭಾವಿಸಿ 'ಯಾರು ಅದು ? ಕಿದರ್ ಜಾನೇಕ ?' – ಎಂದು ಗದ್ದರಿಸುವ ದನಿಯಲ್ಲಿ ನಮ್ಮನ್ನು ಕೇಳಿದ. ವ್ಯಕ್ತಿ ಆಗಲೇ ಭರ್ತಿಯಾಗಿದ್ದ! ನಾಲಿಗೆ ತೊದಲುತ್ತಿತ್ತು. ನಾನು ನಿಂತು ಅತಿಥಿಗೃಹದ ಹೆಸರು ಹೇಳಿದೆ. ನಾವು ಹೊರಟಿದ್ದ ರಸ್ತೆಯ ಕಡೆ ಕೈ ತೋರಿಸಿ 'ಸೀದಾ ಹೋಗಿ' ಎಂದ. ಬೇರೆಲ್ಲೂ ಹೋಗಿ ದಾರಿ ತಪ್ಪಿಸಿಕೊಳ್ಳಬೇಡಿ ಎನ್ನುವಂತಿತ್ತು ಆತನ ವರ್ತನೆ. ನಾವು ದಾರಿ ನಡೆಯುತ್ತ ನಕ್ಕೆವು !

* * *

ಮರುದಿನ ಪ್ರವಾಸಕ್ಕೆ ಮಿನಿ ಬಸ್ಸಿನಲ್ಲಿ ಸ್ಥಳ ಕಾಯ್ದಿರಿಸಿದ್ದೆವು. ಮಾಂಡವಿ ನದಿಯ ಸೇತುವೆ ದಾಟಿ ಉತ್ತರ ಗೋವಾಕ್ಕೆ ಪಯಣ. ಕಿರು ರಸ್ತೆಯಲ್ಲಿ ಕಿಕ್ಕಿರಿದ ವಾಹನಗಳ ಆಮೆ ನಡಿಗೆ. ಕಿಟಕಿಯಲ್ಲಿ ಕಾಣಿಸುವ ದೃಶ್ಯಗಳನ್ನೇ ಸೊಬಗೆಂದುಕೊಳ್ಳುತ್ತ ಬೇಸರವಿಲ್ಲದ ಆಕಳಿಸುತ್ತ ಪಯಣ ಸಾಗಿತು. ಒಂದೂವರೆ ಗಂಟೆಯ ಪಯಣದ ನಂತರ ಸಮುದ್ರ







ತೀರದಲ್ಲಿ ಅರ್ಧಗಂಟೆ ತಿರುಗಾಟ. ಇಡೀ ದಿನ ಇದರ ಪುನರಾವರ್ತನೆ.

ನನ್ನ ಪತ್ನಿಗೆ ಜೊತೆಯಾಗಿ ನ್ಯಾನ್ಸಿ ಕೌಲ್ ಎಂಬ ಅಜ್ಜಿ ಜೊತೆಯಾದಳು. ಕಾಶ್ಮೀರದಿಂದ ಬಂದು ಮುಂಬೈಯಲ್ಲಿ ನೆಲಸಿತ್ತು ಆಕೆಯ ಕುಟುಂಬ. ಪಣಜಿಯಲ್ಲಿ ಮಗಳ ಮನೆಗೆ ಬಂದಿದ್ದವಳು. ಆಕೆ ನಮ್ಮನ್ನು ಬಂಗಾಳಿಗಳೆಂದುಕೊಂಡಿದ್ದಳಂತೆ. ನನ್ನ ಪತ್ನಿಗೂ ಬಂಗಾಳದ ಯಾರಾದರೂ ಬ್ಯಾನರ್ಜಿ, ಚಟರ್ಜಿ ಮಹಿಳೆಗೂ ಏನು ಹೋಲಿಕೆ ಇತ್ತೋ ಕಾಣೆ.

ನಾನು ಕಡಲ ತೀರದಲ್ಲಿ ದೃಶ್ಯಗಳಿಗಾಗಿ ಹುಡುಕಾಡುತ್ತ ಮುಂದೆ ನಡೆದು ಹೋದಾಗ ಅವರಿಬ್ಬರೂ ದೀರ್ಘಕಾಲದ ಗೆಳತಿಯರಂತೆ ಏನೇನೋ ಮಾತಾಡಿಕೊಂಡು ಕಡಲ ನೋಟ ಅನುಭವಿಸಿದರು. ಆ ಅಜ್ಜಿಗೆ ಕನ್ನಡ ಬಾರದು, ನನ್ನಾಕೆಗೆ ಹಿಂದಿ ಬಾರದು. ಆದರೂ ಅವರು ಏನು ಮಾತಾಡಿಕೊಂಡರೋ!

ಮಿನಿ ಬಸ್ಸಿನಿಂದ ಇಳಿದು ಡಾಲ್ಫಿನ್ ಪಾಯಿಂಟ್‌ಗೆ ಲಾಂಚುಗಳಲ್ಲಿ ಪಯಣ. ಅಕ್ವೇರಿಯಂನಲ್ಲಿ ಡಾಲ್ಫಿನ್‌ಗಳನ್ನು ತೋರಿಸುತ್ತಾರೆಂದು ತಪ್ಪಾಗಿ ಭಾವಿಸಿದ್ದೆವು. ತಲಾ ಇನ್ನೂರು ರೂಪಾಯಿ ಶುಲ್ಕ ತೆತ್ತು ಲಾಂಚಿಗೇರಿದೆವು. ಹತ್ತು ಜನರು ಮಾತ್ರ ಅದರಲ್ಲಿ ಕುಳಿತು ಸಂಚರಿಸಬಹುದು. ನನಗೆ ಸ್ಥಳವಿಲ್ಲದೆ ನಾನು ಚಾಲಕನ ಬಳಿ ಹಲಗೆಯ ಮೇಲೆ ಕುಳಿತು ಜಲಸಂಚಾರ ಪ್ರಾರಂಭಿಸಿದೆ.

ಆ ಲಾಂಚು ಅಲೆಗಳ ಮಧ್ಯೆ ವೇಗವಾಗಿ ಸಾಗುತ್ತ ನಾವು ಹೊರಟ ಸ್ಥಳ ಹಿಂದುಳಿಯಿತು. ಸುಮಾರು ಅರ್ಧಗಂಟೆ ಸಮುದ್ರದ ಸಂಚಾರ. ಚಾಲಕ ನಮ್ಮನ್ನು ಒಂದು ಕಡಿದಾದ ಬೆಟ್ಟದ ಬುಡದತ್ತ ಒಯ್ದು ದೂರದಿಂದಲೇ ಅದು ಅಗುವಾಡ ಸೆರೆಮನೆ ಎಂದು ವಿವರಣೆ ನೀಡಿದ. ನಮಗೆ ಡಾಲ್ಫಿನ್‌ಗಳನ್ನು ಕಾಣುವ ತವಕ. ನೀಲಿ ಆಕಾಶ, ನೀಲಿ ಕಡಲು, ತರಗಲೆಯಂತೆ ತೇಲಾಡುವ ಲಾಂಚು!

ಪೋರ್ಚುಗೀಸರ ಕಾಲದಲ್ಲಿ ನಿರ್ಮಿಸಿದ ಕುಪ್ರಸಿದ್ಧ ಸೆರೆಮನೆ. ಪ್ರಾಯಶಃ ಅತ್ಯಂತ ಅಪಾಯಕಾರಿ ರಾಜಕೀಯ ಕೈದಿಗಳನ್ನು, ಅಪರಾಧಿಗಳನ್ನು ಇರಿಸುವ ಅಲ್ಲಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಾಗದಂಥ ಸ್ಥಳ. ಆದರೆ, ಆಧುನಿಕ ಕಳ್ಳ ಸಾಗಾಟಗಾರನೊಬ್ಬ ಅಲ್ಲಿಂದಲೂ ಪರಾರಿಯಾಗಿ ಸುದ್ದಿ ಮಾಡಿದ್ದ.

ಅಗುವಾಡ ತೀರದಿಂದ ಲಾಂಚು ಎಡಕ್ಕೆ ನಡುಕಡಲಿನತ್ತ ತಿರುಗಿತು. ನಾನು ಅಗುವಾಡ ಗುಡ್ಡದ [illegible]ಪಕ್ಕೆ ಬಂದಾಗ ನಮ್ಮತ್ತ ಟಾಟಾ ಮಾಡುವ ಇತರ [illegible] [illegible] ತೆಗೆಯುತ್ತಿರುವಾಗಲೇ ನಮ್ಮ [illegible] ಗಮನಿಸುತ್ತಿದ್ದೆ.

ಕಡಲಿನಲ್ಲಿ ಸಾಗುತ್ತಿದ್ದ ಲಾಂಚಿನ ವೇಗ [illegible]



ಮುಚ್ಚಳ ತೆಗೆದು ಪರೀಕ್ಷಿಸಿದ. ಆತನ ಗಾಬರಿ ಹೆಚ್ಚಿತು. ಆತ ತುರ್ತು ಸ್ಥಿತಿಗಾಗಿ ಶೇಖರಿಸಿದ್ದ ಇಂಧನ ಡಬ್ಬಿ ಹುಡುಕಾಡಿದ. ಅದನ್ನು ತೆಗೆದು ಅಲ್ಲಾಡಿಸಿ ನೋಡಿದಾಗ ಆತನ ಮುಖ ಪೆಚ್ಚಾಯಿತು. ಅಷ್ಟರಲ್ಲಿ ಎಂಜಿನ್ ದಡಕ್ ದಡಕ್ ಎನ್ನುತ್ತ ನಿಲ್ಲುವ ಸೂಚನೆ ನೀಡಿತು. ಚಾಲಕ ಡಬ್ಬಿಯಲ್ಲಿದ್ದ ಸ್ವಲ್ಪ ಇಂಧನ ಟ್ಯಾಂಕಿಗೆ ಸುರಿದು ಮತ್ತೆ ಇಂಜಿನ್ ಚಾಲೂ ಮಾಡಿದ. ಜೊತೆಗೆ ಸಮೀಪದಿಂದ ಹಾಯುತ್ತಿದ್ದ ಲಾಂಚುಗಳ ಚಾಲಕರಿಗೆ ಸನ್ನೆಯ ಮೂಲಕ ಇಂಧನ ಮುಗಿದಿರುವ ವಿಷಯ ತಿಳಿಸಲು ಪ್ರಯತ್ನಿಸಿದ. ಕಾಪಿಟ್ಟಿದ್ದ ಸ್ವಲ್ಪ ಇಂಧನದ ಸಹಾಯದಿಂದ ಸ್ವಲ್ಪ ದೂರ ಚಲಿಸಿದ ಎಂಜಿನ್ ತನ್ನ ಕೆಲಸ ನಿಲ್ಲಿಸಿತು. ಎಂಜಿನ್ ಚಾಲನೆಯಲ್ಲಿದ್ದಾಗ ಸಮುದ್ರದಲೆಗಳ ಅಥವಾ ಸಮುದ್ರದ ಮೇಲೆ ಬೀಸುವ ಗಾಳಿಯ ರಭಸ ನಮ್ಮ ಗಮನಕ್ಕೆ ಬಂದಿರಲಿಲ್ಲ. ನಿಂತ ಲಾಂಚು ಅತ್ತಿತ್ತ ವಾಲಾಡತೊಡಗಿತು. ನೆಲದ ಮೇಲೆ ನಮ್ಮ ವಾಹನದ ಇಂಧನ ಮುಗಿದಿದ್ದರೆ ಕೆಳಗಿಳಿದು ಅತ್ತಿತ್ತ ತಿರುಗಾಡಿ ನೋಡಬಹುದಿತ್ತು. ಸಮುದ್ರದ ಮಧ್ಯೆ ಇಳಿಯುವುದಾದರೂ ಹೇಗೆ? ಹೊರಡುವಾಗಲೇ ಇದನ್ನೆಲ್ಲ ನೋಡಿಕೊಳ್ಳಬೇಕಾಗಿತ್ತು ಎಂದು ಕೆಲವರು ಚಾಲಕನ ಮೇಲೆ ಜೋರು ಮಾಡತೊಡಗಿದರು. ಆತ ಸುಮಾರು ಇಪ್ಪತ್ತರ ಯುವಕ. 'ನನ್ನ ಪಾಳಿ ಮುಗಿಸಿ ಹೊರಡುವವನಿದ್ದೆ. ಈ ಲಾಂಚಿನ ಚಾಲಕ ಬಾರದ ಕಾರಣ ನನ್ನನ್ನು ಹಿಡಿದು ಮತ್ತೆ ದಬ್ಬಿದರು' ಎಂದು ಆತ ಪೆಚ್ಚು ಪೆಚ್ಚಾಗಿ ಸಮಜಾಯಿಷಿ ನೀಡತೊಡಗಿದ. ಈ ಮಧ್ಯೆ ಆತ ಸಮೀಪಿಸುವ ಲಾಂಚುಗಳ ಚಾಲಕರ ಗಮನ ಸೆಳೆಯಲೂ ಪ್ರಯತ್ನ ನಡೆಸಿದ್ದ. ತನ್ನ ಮೊಬೈಲು ಮೂಲಕ ಯಾರನ್ನೋ ಸಂಪರ್ಕಿಸಲೂ ಪ್ರಯತ್ನಿಸಿದ.

ನಾನು ಚಾಲಕನ ಪಕ್ಕದಲ್ಲಿ ಹಲಗೆಯ ಮೇಲೆ ಕುಳಿತಿದ್ದೆನಷ್ಟೆ. ಹೆಗಲಿನಲ್ಲಿ ಕ್ಯಾಮರಾ ಬ್ಯಾಗು, ಕೊರಳಿಗೆ ನೇತು ಹಾಕಿಕೊಂಡಿದ್ದ ಕ್ಯಾಮರಾ, ಬಲಗೈಯಲ್ಲಿ ಹ್ಯಾಂಡಿಕ್ಯಾಂ – ಇವೆಲ್ಲವನ್ನು ಜೋಪಾನವಾಗಿರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಲಾಂಚು ನಿಂತಿದ್ದರಿಂದ ಅಲುಗಾಟವೂ ಹೆಚ್ಚಿತು. ನನ್ನ ಪತ್ನಿ ಕಳವಳದಿಂದ ನನ್ನತ್ತ ನೋಡ[illegible] ತೊಡಗಿದಳು. ಸಮಯ ಮೀರಿದಂತೆ ಎಲ್ಲರ ಮುಖಗಳಲ್ಲೂ ಆತಂಕ. ಡಾಲ್ಫಿನ್ ನೋಡಲು ಹೋಗಿ ಅಗುವಾಡ ತೀರದಲ್ಲಿ ಆಘಾತ!

ಕಾಶ್ಮೀರಿ ಅಜ್ಜಿ 'ಬೇಟಾ ದುವಾ ಮಾಂಗ್' ಎಂದು ಚಾಲಕನಿಗೆ ಹೇಳಿದಳು. ಆತ ಪೆಚ್ಚು ಪೆಚ್ಚಾಗಿ ತಲೆಯಲ್ಲಾಡಿಸಿದ. ಈಗ ನಮ್ಮ ಲಾಂಚು ಆಕಸ್ಮಾತ್ ಮುಳುಗಿದರೆ ಏನಾಗಬಹುದು – ಎಂಬ ಕಲ್ಪನೆ [illegible] ತಲೆಯಲ್ಲಿ. ಪ್ರಾಯಶಃ ನನ್ನ ಪತ್ನಿಗೂ ಹಾಗನ್ನಿಸಿರಬಹುದು.

ನಮ್ಮ ಚಾಲಕನ [illegible] ಕರೆಯನ್ನು ಕೇಳಿಸಿಕೊಂಡ [illegible] ಮತ್ತೊಂದು ಲಾಂಚು ನಮ್ಮತ್ತ ಬರತೊಡಗಿತು! ಅಲೆಗಳ ತಾಕಲಾಟಕ್ಕೆ ನಮ್ಮ ಲಾಂಚು ಮತ್ತಷ್ಟು ಅಲುಗಾಡುವಂತೆ ನಮ್ಮ ಸಮೀಪ ಬಂದಿತು. ಚಾಲಕ ಖಾಲಿಯಾಗಿದ್ದ ಡಬ್ಬಿ





ನಿಗೆ ನೀಡಿದ. ಆತ ಡಬ್ಬಿಗೆ ಇಂಧನ ತುಂಬಿಸಿಕೊಟ್ಟ. ಎಲ್ಲರ ಆತಂಕ ಕಡಿಮೆ ಯಿತು. ಪ್ರಾಯಶಃ ಚಾಲಕರಿಗೆ ಇಂಥವೆಲ್ಲ ಆಗಾಗ ನಡೆಯುವ ಘಟನೆಗಳಾಗಿರ ಬು. ನಮ್ಮ ಚಾಲಕನ ಉತ್ಸಾಹ ಹಿಂದಿರುಗಿತು. ಡಾಲ್ಫಿನ್ ಪಾಯಿಂಟ್‌ನತ್ತ ಲಾಂಚು ಗಿಸಿದ. ಸದ್ಯ ಪಾರಾದೆವು ಎಂದು ಎಲ್ಲರೂ ನಿಟ್ಟುಸಿರುಬಿಟ್ಟಿರಲೇಬೇಕು. ಆ ಯುವ ಕ ನಮ್ಮ ಹೀರೋ ಆಗಿದ್ದ.

ಅಲ್ಲಿದ್ದ ಮೂರು ನಾಲ್ಕು ಡಾಲ್ಫಿನ್‌ಗಳನ್ನು ನೋಡಲು ಸುಮಾರು ಐವತ್ತರಷ್ಟು ಚುಗಳು ಕಾಯುತ್ತಿದ್ದವು. ಅಂದರೆ ನಿಂತು ಕಾಯುವುದಲ್ಲ, ಅವನ್ನು ಓಡಿಸಿಕೊಂಡು ೀಗುವಂತೆ ಸುತ್ತಲೂ ಲಾಂಚುಗಳಿಂದ ದಾಳಿ ಮಾಡುವುದು! ನಮಗೂ ಅವುಗಳ ಕೂಡಲೇ ಕಾಣಸಲಿಲ್ಲ. ಸಮುದ್ರದಲ್ಲಿ ಮೂರು ಸುತ್ತು ಹಾಕಿದ ಮೇಲೆ ಚಾಲಕನ ಖದಲ್ಲಿ ಗೆಲುವು ಕಾಣಿಸಿಕೊಂಡಿತು. 'ಯಾರೂ ಎದ್ದು ನಿಲ್ಲಬೇಡಿ, ನೀರಿಗೆ ಕಬೇಡಿ, ಕುಳಿತಲ್ಲಿಂದಲೇ ನೋಡಿ' ಎಂದು ಎಚ್ಚರಿಕೆ ನೀಡುತ್ತಲೇ ಡಾಲ್ಫಿನ್‌ಗಳತ್ತ ಚು ಒಯ್ದ. ನಮ್ಮ ಹಾಗೇ ಇತರ ಲಾಂಚುಗಳಿಗೂ ಅವಸರ, ಒಮ್ಮೆ ಪಕ್ಕದಲ್ಲಿ ವ ಲಾಂಚಿಗೆ ನಮ್ಮ ಲಾಂಚು ಲಘುವಾಗಿ ಡಿಕ್ಕಿ ಸಹ ಹೊಡೆಯಿತು! ತಮ್ಮ ತಮ್ಮ ಳಲ್ಲಿ ಭದ್ರವಾಗಿ ಕುಳಿತಿದ್ದವರಿಗಿಂತ, ಹಲಗೆಯ ಮೇಲೆ ನನ್ನ ಉಪಕರಣಗಳ ತ ಕುಳಿತಿದ್ದ ನನಗೇ ಹೆಚ್ಚು ಹಾನಿ ಸಂಭವಿಸಬಹುದಿತ್ತು, ಅಂಥ ಗಡಿಬಿಡಿಯ ಯಲ್ಲೂ ಡಾಲ್ಫಿನ್‌ಗಳು ಒಮ್ಮೆ ಮೇಲೆ ತಮ್ಮ ತಲೆ ತೋರಿಸಿ ನೀರಿನಲ್ಲಿ ಮುಳುಗು ದ್ದು ನನ್ನ ಹ್ಯಾಂಡಿಕ್ಯಾಮ್‌ನಲ್ಲಿ ದಾಖಲಾಯಿತು. ಲಾಂಚಿನಲ್ಲಿದ್ದವರೂ 'ಹೋ ಅಗೋ ಇಲ್ಲಿ' ಎಂದು ಉದ್ಗರಿಸಿ ಸಂಭ್ರಮಿಸಿದರು. ಸ್ವಲ್ಪ ಹೊತ್ತಿಗೆ ಮುಂಚೆಯಷ್ಟೆ ದೋಣಿ ತಾಕಲಾಟಕ್ಕೆ ಸಿಕ್ಕಿದ್ದುದನ್ನು ಎಲ್ಲರೂ ಮರೆತಿದ್ದರು.

'ಇನ್ನು ಸಾಕು ಮಾರಾಯ, ನಮ್ಮನ್ನು ತೀರಕ್ಕೆ ತಲುಪಿಸು' ಎಂದು ಹೇಳಿದರೂ ಆ ವ ಚಾಲಕ ಯಾರ ಮಾತನ್ನೂ ಕೇಳಿಸಿಕೊಳ್ಳದವನಂತೆ ಡಾಲ್ಫಿನ್‌ಗಳ ಸುತ್ತಲೂ ರಡು ರೌಂಡು ಹೊಡೆಸಿದ. ನಾವು ಹಿಂದಿರುಗುವ ದಾರಿಯಲ್ಲಷ್ಟೆ ನಮಗೆ ಲೈಫ್ ಟ್‌ಗಳನ್ನು ನೀಡಿರಲಿಲ್ಲ ಎಂಬುದು ನಮ್ಮ ಗಮನಕ್ಕೆ ಬಂತು! ಹಣ ಸಂಪಾದನೆಯ ಂತದಲ್ಲಿ ಸಮುದ್ರಕ್ಕೆ ಹೋಗಿದ್ದ ಲಾಂಚು ಹಿಂದಿರುಗಿ ಪ್ರವಾಸಿಗಳಿಗೆ ಒದಗಿಸಿದ್ದ ಜಾಕೆಟ್‌ಗಳನ್ನು ಡಾಲ್ಫಿನ್ ನೋಡಲು ಹೊರಟಿರುವವರಿಗೆ ಒದಗಿಸಬೇಕಿತ್ತು. ಲ್ಲಿ ಅಪಘಾತ ಸಂಭವಿಸಿದನಂತರ, ಆ ಕುರಿತ ವಿಚಾರಣೆಯ ಸಂದರ್ಭದಲ್ಲಿ



ಕಾರವಾರ ತೀರದಲ್ಲಿ ಹಳೆಯ ಯುದ್ಧ ನೌಕೆ

ಬೆಳಕಿಗೆ ಬರುವ ವಿಷಯ. ತೀರಕ್ಕೆ ಬಂದು ನಮ್ಮ ಬಸ್ಸಿಗೆ ಹತ್ತಿ ಕುಳಿತಾಗ ಸದ್ಯ ಅಪಾಯದಿಂದ ಪಾರಾದೆವು ಎಂದು ನಿಟ್ಟುಸಿರುಬಿಟ್ಟೆವು.

ಮತ್ತೆ ಪಯಣ. ಹೊಟ್ಟೆ ಚುರುಗುಡತೊಡಗಿತು. ಇನ್ನು ಊಟಕ್ಕೆ ಎಲ್ಲಿಗೆ ಕೊಂಡೊಯ್ಯುತ್ತಾನೋ ಎಂಬ ಆತಂಕ. ನಮ್ಮ ಮಾರ್ಗದರ್ಶಿ ಎದ್ದು ನಿಂತು ಗೋವಾದಲ್ಲಿ ತಯಾರಾಗುವ ಫೆನಿ ಎಂಬ ಮದ್ಯದ ಬಗ್ಗೆ ಉಪನ್ಯಾಸ ನೀಡಿದ. ಊಟಕ್ಕಾಗಿ ಹಪಹಪಿಸು ವವರನ್ನು ಮದ್ಯದಂಗಡಿಗಳ ಮುಂದೆ ನಿಲ್ಲಿಸಿದ. ಬಸ್ಸಿನಲ್ಲಿ ಕೆಲವರನ್ನುಳಿದು ಎಲ್ಲರೂ ಕೆಳಗಿಳಿದು ದಾಹಕ್ಕೆ ಬೀರು ಹೀರಿದರಲ್ಲದೆ ಚೀಲಗಳಲ್ಲಿ ಮದ್ಯದ ಬಾಟಲಿಗಳೊಂದಿಗೆ ಹಿಂದಿರುಗಿದರು. ನಮ್ಮ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪಡ್ಡೆ ಹುಡುಗರು ಬೀರು ಹೀರುತ್ತ ಗೋಡಂಬಿ ಬೀಜಗಳನ್ನು ಮುಕ್ಕತೊಡಗಿದರು.

ದಾರಿಯಲ್ಲಿ ಒಂದೇ ಹೋಟಲಿರುವ ಜಾಗದಲ್ಲಿ ಬಸ್ಸು ನಿಂತಿತು. ಜನರ ನೂಕು ನುಗ್ಗಲಿನಲ್ಲಿ ಅವರು ಕೊಟ್ಟದ್ದನ್ನು ಉಂಡೆವು.

ಗೋವಾದ ಆರ್ಥಿಕತೆ ಬಹುಮಟ್ಟಿಗೆ ಪ್ರವಾಸೋದ್ಯಮವನ್ನು ಅವಲಂಬಿಸಿದೆ. ಅದರಲ್ಲಿ ಸಮುದ್ರದ ಮಧ್ಯೆ ಇರುವ ಡಾಲ್ಫಿನ್‌ಗಳಿಗೆ ನೀಡುವ ಕಿರುಕುಳಕ್ಕಾಗಿ ಪ್ರವಾಸಿಗಳಿಂದ ವಸೂಲುಮಾಡುವ ಶುಲ್ಕ, ಮದ್ಯದಂಗಡಿಗಳವರು, ಹೋಟೆಲಿನವರು ಬಸ್ಸಿನವರಿಗೆ ಪೀಕುವ ಕಮಿಷನ್ ಸಹ ಸೇರುತ್ತದೆ ಎನ್ನಬಹುದು. ಗೋವಾದಲ್ಲಿ ಮದ್ಯಕ್ಕೆ ಇತರೆಡೆಗಳಿಗಿಂತ ಕಡಿಮೆ ಬೆಲೆಯಂತೆ. ಮತ್ತೆ ಜೂಜಾಟಕ್ಕೆ ಸಹ ಯಾವುದೇ ತಡೆ ಇಲ್ಲವಂತೆ. ಮಾಂಡವಿ ನದಿಯಲ್ಲಿ ಬೀಡುಬಿಟ್ಟಿದ್ದ ಕ್ಯಾಸಿನೋ ಹಡಗುಗಳಲ್ಲಿ ಬಗೆಬಗೆಯ ಜೂಜಾಟಗಳು ನಡೆಯುತ್ತವಂತೆ. ಯಾವುದಾದರೂ ರೀತಿಯಲ್ಲಿ ಹಣ ಖಜಾನೆಗೆ ಬಂದರಾಯಿತು.

ಸಂಜೆಯವರೆಗೆ ಮತ್ತೆ ತಿರುಗಾಟ. ಬಸ್ಸಿನಲ್ಲಿ ಒಂದೆರಡು ಗಂಟೆಯಾದರೆ ಸಮುದ್ರ ತೀರದಲ್ಲಿ ಅರ್ಧಗಂಟೆ ಅಲೆದಾಟ. ಅಂಜುನಾ, ವಗಾತಾರ್ ಬೀಚುಗಳು. ಬೇರೆ ಬೇರೆ ಊರುಗಳಿಂದ ಬಂದಿರುವ ಬಗೆ ಬಗೆಯ ಉಡುಪು ಧರಿಸಿ ಬೀಚಿನಲ್ಲಿ ಮುತ್ತಿರುವ ಜನರು. ಸಮುದ್ರ ಸ್ನಾನ, ಸ್ಪೀಡ್ ಬೋಟುಗಳಲ್ಲಿ ಜಲಕ್ರೀಡೆ, ನೀರಿನ ಮೇಲೆ ಪ್ಯಾರಾಚ್ಯೂಟ್ ಹಾರಾಟ, ಅಲೆಗಳ ಅಬ್ಬರದ ಸದ್ದು ಮೀರಿಸುವಂತೆ ಜನರ ಉತ್ಸಾಹ.

ಉಡುಗೆ ತೊಡುಗೆ ವಿಷಯದಲ್ಲಿ ಗೋವಾ ಇತರ ರಾಜ್ಯಗಳಿಗಿಂತ ಭಿನ್ನ. ಪೋರ್ಚುಗೀಸರ ಪ್ರಭಾವದ ಜೊತೆಗೆ ವಿದೇಶಗಳಿಂದ ಬರುವ ಪ್ರವಾಸಿಗಳ ಚಿತ್ರ ವಿಚಿತ್ರ ಉಡುಪುಗಳು. ಅದನ್ನೆಲ್ಲ ನೋಡಿಯೇ ಮೆಚ್ಚಬೇಕು!

ತಮ್ಮ ಊರುಗಳಲ್ಲಿ ತೀರಾ ಸಾಂಪ್ರದಾಯಿಕ ಉಡುಪು ಧರಿಸುತ್ತಿದ್ದವರು ಸಹ ಗೋವಾ ಪ್ರವಾಸಕ್ಕೆ ಬಂದಾಗ ಯಾರ ಅಂಕೆಯೂ ಇಲ್ಲದೆ ತಮಗಿಷ್ಟವೆನ್ನಿಸುವ ಫ್ಯಾಶನೆಬಲ್ ಉಡುಪು ಧರಿಸಿ ಗಂಡ-ಮಕ್ಕಳ ಜೊತೆ ತಿರುಗಾಡುತ್ತಿರಬಹುದೆಂಬ ಅನುಮಾನ ನನಗೆ!

ಸಂಜೆ ಐದರ ಸುಮಾರಿಗೆ ನಾವು ಹೊರಟ ಸ್ಥಳದಲ್ಲಿ ಬಸ್ಸಿನಿಂದಿಳಿದೆವು. ಕಾಶ್ಮೀರದ ಅಜ್ಜಿಗೆ ವಿದಾಯ ಹೇಳಿ ಅತಿಥಿಗೃಹದ ಕಡೆ ಹೋಗುವ ಬಸ್ ಸ್ಟಾಪಿನಲ್ಲಿ ನಿಂತಾಗ, ಪಕ್ಕದಲ್ಲಿ ಅಂಬಾ ಭವಾನಿಯ ದೇವಾಲಯ ಕಾಣಿಸಿತು. ನನ್ನ ಪತ್ನಿಗೆ ಭವಾನಿಯ ದರ್ಶನದ ಹಂಬಲ. ಹೇಗೂ ನಾನು ರಸ್ತೆ ಬದಿಯಲ್ಲಿ ನಿಲ್ಲುವವನು!

ನಾವು ನಿಂತಿದ್ದುದು ಮಿರಾಮಾರ್ ಬೀಚಿನ ರಸ್ತೆಯಲ್ಲಿ. ಪತ್ನಿಗೆ ಮತ್ತೆ ಸಂಜೆಯ ಸಮುದ್ರ ನೋಡುವ ಬಯಕೆ ಮರುಕಳಿಸಿತು. ಸಮುದ್ರ ಅಲೆಗಳನ್ನು ನೋಡುತ್ತ ಎಷ್ಟು ಹೊತ್ತು ಬೇಕಾದರೂ ಅಲೆದಾಡಲು ಆಕೆಗೆ ಬೇಸರವಾಗುವುದಿಲ್ಲ. ಅದಕ್ಕಾಗಿ ನಾನು ಕಾ[illegible] ಬಿಚ್ಚಬೇಕಾಗಿರಲಿಲ್ಲವಲ್ಲ. ಹಾಗಾಗಿ ನಾನೂ ಆಕೆಯನ್ನು ಹಿಂಬಾಲಿಸಿದೆ. [illegible] ಅಲೆಗಳು ಕಾಲಿಗೆ ಸೋಂಕುವಂತೆ ನಿಂತು ತಲೆಗೆ ಎರಡು ಹನಿ ಸಮುದ್ರ[illegible] ನೀ[illegible]

ಚಿಮುಕಿಸಿಕೊಂಡಳು. ಸ್ವಲ್ಪ ತಾಮ್ರ ಬಣ್ಣದ ಮಿರಾಮಾರ್ ಬೀಚಿನ ಮರಳು. ಆಕೆ ಭೂವಿಜ್ಞಾನಿಯಂತೆ ಸಮುದ್ರ ತೀರದ ಮರಳು ಸಂಗ್ರಹಿಸಿ ತನ್ನ ಚೀಲಕ್ಕೆ ಸೇರಿಸಿದಳು. ನಿನ್ನೆ ದೊ[illegible] ಪಾಲಾ ಬಂಡೆಯ ಮೇಲಿನಿಂದ ಸೂರ್ಯಾಸ್ತ [illegible]ದ್ದೆವು. ಈಗ ಮಿ[illegible]ಮಾರ್‌ನಲ್ಲಿ ಸೂರ್ಯ ಹೇಗೆ ಮುಳುಗುತ್ತಾನೆಂದು ನೋಡುತ್ತ ಕುಳಿತೆವು.

ಮರುದಿನದ ಪಯಣದ ಸಿದ್ಧತೆಯ ಮಧ್ಯೆ ಡಾಲ್ಫಿನ್ ಪಾಯಿಂಟ್ ಘಟನೆ ನೆನಪು ಮಾಡಿಕೊಂಡೆವು. ಏನಾದರೂ ಆಕಸ್ಮಿಕ ಸಂಭವಿಸಿದ್ದರೆ ಎಂಬ ಪ್ರಶ್ನೆ ಸ್ವಲ್ಪ ಹೊತ್ತು ನಮ್ಮನ್ನು ಕಾಡಿಸಿತು. ಮೊಮ್ಮಗನನ್ನು ಕರೆತಂದಿದ್ದರೆ ಯಡವಟ್ಟಾಗುತ್ತಿತ್ತು. ನಮ್ಮ ಅನ್ನಿಸಿಕೆಗೆ ತಿದ್ದುಪಡಿ ಮಾಡಿಕೊಂಡೆವು.

ಮುಂಜಾವು ಕಾರವಾರಕ್ಕೆ. ಅಲ್ಲಿಂದ ಕೈಗಾಕ್ಕೆ ಹೋಗಬೇಕೆಂಬುದು ನಮ್ಮ ಯೋಜನೆ. ಸಮುದ್ರ ತೀರವಲ್ಲದ ಗೋವಾದ ಭೂಭಾಗದಲ್ಲಿ ಸಾಗುವ, ಅದಿರು ಲಾರಿಗಳ ಸುಳಿವಿಲ್ಲದ ವಿಶಾಲವಾದ ಹೆದ್ದಾರಿ. ಹೊಸ ಹೊಸ ಬಡಾವಣೆಗಳ, ಕಾರ್ಖಾನೆಗಳ, ಏರುತಗ್ಗಿನ ನುಣುಪಾದ ರಸ್ತೆ. ಸಮತಟ್ಟಾದ ಜಾಗದಲ್ಲಿ ಸಣ್ಣ ಗದ್ದೆಗಳು, ತೋಟಗಳು, ಸುತ್ತಲೂ ಹರಡಿರುವ ಗೇರು ಹೂವಿನ ದಟ್ಟ ಕಂಪು.

ಗೋವಾದ ಒಂದು ಹಳ್ಳಿಯನ್ನು, ತಮ್ಮ ಹೊಲ ತೋಟಗಳಲ್ಲಿ ದುಡಿಯುವ ರೈತರನ್ನು, ಮೀನುಗಾರ ಹಳ್ಳಿಯನ್ನು ನೋಡಲು, ಅಲ್ಲೆಲ್ಲ ತಿರುಗಾಡಿ ದಾರಿಬದಿಯ ಟೀ ಅಂಗಡಿಯಲ್ಲಿ ಕುಳಿತು ಗೋವಾದ ತಿಂಡಿ ಮೆಲ್ಲುತ್ತ ಚಾ ಕುಡಿಯಲು, ಗೋವಾದ ಸಂಗೀತ ಕೇಳಿಸಿಕೊಳ್ಳಲು, ಮಿನಿ ಬಸ್ಸುಗಳವರ ಧಾವಂತವಿಲ್ಲದೆ ನಮ್ಮಷ್ಟಕ್ಕೆ ನಿಧಾನವಾಗಿ ಗೋವಾದ ಆತ್ಮವನ್ನು ಭೇಟಿ ಮಾಡಲು ಮತ್ತೊಮ್ಮೆ ಗೋವಾಕ್ಕೆ ಬರಬೇಕು ಎಂಬ ಹಂಚಿಕೆ ಮನಸ್ಸಿನಲ್ಲಿ ಸುಳಿಯಿತು.

* * *

ಕಾರವಾರದಲ್ಲಿ ಹಳೆಯ ಮಿತ್ರರ ಮನೆಯಲ್ಲಿ ಉಳಿದುಕೊಂಡೆವು. ನೀಲಗಿರಿಯಲ್ಲಿ ಹುಟ್ಟಿದ ಅವರು ಮಿಲಿಟರಿ ಸೇವೆ ಮುಗಿಸಿ, ಕರ್ನಾಟಕ ಸರಕಾರದಲ್ಲಿ ಅಧಿಕಾರಿಯಾಗಿದ್ದು ನಿವೃತ್ತರಾದವರು. ನೀಲಗಿರಿಯ ದಿನಗಳ ನೆನಪು ಮಾಡಿಕೊಂಡೆವು. ಅವರ ಮಿಲಿಟರಿ ದಿನಗಳ ಅನುಭವಗಳನ್ನು ವರ್ಣಿಸಿದರು. ಸಂಜೆ ಯಥಾಪ್ರಕಾರ ಕಾರವಾರದ ಕಡಲ ತೀರದಲ್ಲಿ ತಿರುಗಾಟ. ನನ್ನ ಮಿತ್ರರ ಪತ್ನಿ ಮತ್ತು ಮೊಮ್ಮಗಳು ನನ್ನ ಪತ್ನಿಗೆ ಜೊತೆಯಾದರು. ಕಾರವಾರದ ಕಡಲ ತೀರದ ಮರಳು ಸಂಗ್ರಹಣೆ ನಡೆಯಿತು.

ಕಾರವಾರದಿಂದ ಬೆಂಗಳೂರಿಗೆ ಬಸ್ಸಿನಲ್ಲಿ ಸೀಟು ಸಿಕ್ಕದ ಕಾರಣ ನಾವು ಸಿರಸಿಯಿಂದ ಸ್ಥಳ ಕಾಯ್ದಿರಿಸಬೇಕಾಯಿತು. ಅನಿವಾರ್ಯ ಕಾರಣದಿಂದ ಕೈಗಾ ಕಾಡಿನಲ್ಲಿ ಅಲೆದಾಟ ಸಾಧ್ಯವಾಗಲಿಲ್ಲ. ಮತ್ತೊಮ್ಮೆ ಕೈಗಾ ಮತ್ತು ಕಾಳಿ ನದಿ ಹಿನ್ನೀರಿನ ನೋಟಕ್ಕೆಂದೇ ಬರುವುದೆಂದು ತೀರ್ಮಾನ ಮಾಡಿದೆವು.

'ಹೇಗೂ ಸಿರಸಿವರೆಗೆ ಹೋಗುತ್ತೀರಿ. ಬಸ್ಸು ರಾತ್ರಿ ೮ಕ್ಕೆ ಹೊರಡುತ್ತದೆ. ಹಗಲು ಬನವಾಸಿಗೆ ಹೋಗಿ ಬನ್ನಿ' ಎಂದು ಮಿತ್ರರು ಸಲಹೆ ಮಾಡಿದರು. ಹೊಸ ಸ್ಥಳ ನೋಡುವ ಕುತೂಹಲ ಕೆರಳಿತು. ಕರ್ನಾಟಕದ ಅತ್ಯಂತ ಹಳೆಯ ನಗರ ಬನವಾಸಿ. ಅಲ್ಲಿರುವ ಮಧುಕೇಶ್ವರ ದೇವಾಲಯ. ಕ್ರಿ. ಶ. ಒಂಬತ್ತನೇ ಶತಮಾನದಲ್ಲಿ ನಿರ್ಮಾಣಗೊಂಡದ್ದು. ಅಲ್ಲಿರುವ ಶಿವಲಿಂಗ ಜೇನಿನ ಬಣ್ಣದಲ್ಲಿದೆ. ಅದೊಂದು ಅಪರೂಪದ ಶಿಲ್ಪ - ಜೊತೆಗೆ ಹಲವು ಪ್ರಾಚೀನ ವಿಗ್ರಹಗಳಿವೆ. ಐದನೇ ಶತಮಾನದಷ್ಟು ಹಿಂದೆಯೇ ಟಂಕಿಸಿರುವ ಅಲ್ಲಿ ದೊರೆತಿರುವ ನಾಣ್ಯದಲ್ಲಿ ಕನ್ನಡದ ಅಕ್ಷರಗಳಿವೆ. ಅಲ್ಲಿ ಅಪರೂಪದ ನಂದಿ ಶಿಲ್ಪವಿದ್ದು, ಅದರ ದೃಷ್ಟಿ ಎರಡು ಕಡೆಗೆ ನೆಟ್ಟಿರುವಂತೆ ಅದನ್ನು ಕೆತ್ತಲಾಗಿದೆ. ಮುಂತಾಗಿ, ಜಿಲ್ಲಾಧಿಕಾರಿಯಾಗಿ ಅಲ್ಲೆಲ್ಲ ತಿರುಗಾಡಿದ್ದ ಮಿತ್ರರು ನನ್ನ ಕುತೂಹಲ ಕೆರಳಿಸಿದರು.

ಸಿರಸಿಯಲ್ಲಿ ಬಸ್ಸಿನಿಂದ ಇಳಿದು, ಊಟ ಮುಗಿಸಿ ಬನವಾಸಿಯ ಬಸ್ಸು ಹಿಡಿದೆವು. ನನ್ನ ಕಲ್ಪನೆಯಲ್ಲಿ ಕದಂಬರ ರಾಜಧಾನಿ ಬನವಾಸಿಯ, ಪಂಪ ತಿರುಗಾಡಿ ಮೆಚ್ಚಿಕೊಂಡ, 'ಆರಂಕುಶಮಿಟ್ಟಡಂ ನೆನೆವುದೆನ್ನಮನಂ ಬನವಾಸಿ ದೇಶಮಂ' – ಎಂದು ಕೊಂಡಾಡಿದ ಬನವಾಸಿಯ ವೈಭವದ ದಿನಗಳು ಮೂಡಿಬಂದವು. ದೇವಾಲಯದ ಬಾಗಿಲಿನಲ್ಲಿಯೇ ಬಸ್ಸಿನಿಂದಿಳಿದೆವು.

ಬ್ಯಾಗಿನಿಂದ ಕ್ಯಾಮರಾ ಹೊರತೆಗೆದು ಕತ್ತಿಗೆ ನೇತು ಹಾಕಿಕೊಂಡೆ. ದೇವಾಲಯದ ಹೊರಾವರಣದ ಮಂಟಪದತ್ತ ಹೆಜ್ಜೆ ಹಾಕಿದೆವು. ನನ್ನ ಒಂದು ಹೆಜ್ಜೆ ಮೆಟ್ಟಿಲಿನ ಮೇಲೆ. ಯಾರೋ ಕಿರಿಚಾಡುತ್ತ ನಮ್ಮತ್ತ ಓಡಿಬರತೊಡಗಿದ[illegible] ಎರಡು ಮೂರು ಮಂದಿ [illegible] ಓಡಿಹೋಗತೊಡಗಿದರು. ಏನಾಯಿತೆಂದು ಅರ್ಥವಾಗುವಷ್ಟರಲ್ಲಿ [illegible] ಗಾಬರಿಯಿಂದ ಸೆರಗಿನಿಂದ ತಲೆಯ ಮೇಲೆ ಚಾಮರ [illegible]ಕೊಳ್ಳುತ್ತ ದಡಬಡ ಮೆಟ್ಟಿಲಿಳಿದು 'ಜೇನು ಜೇನು' ಎಂದು ಬೊಬ್ಬೆ ಹಾಕುತ್ತ ಓಡಿಬಂದರು. ಬಾಲಕನೊಬ್ಬ ಎರಡು ಮೆಟ್ಟಿಲನ್ನು ಒಮ್ಮೆಲೇ ಹಾರಿದ. ದೇವಾಲಯ[illegible] ಹೊರ ಮಂಟಪದ ಫೋಟೊ ತೆಗೆಯಲು ಪ್ರಯತ್ನಿಸುತ್ತಿದ್ದಾಗ ನನ್ನ ತಲೆಯ ಮೇಲೆ [illegible] ಹೆಜ್ಜೇನ ದುಂಬಿಯೊಂದು ಜೀಂಯ್‌ಗುಡುತ್ತ ಹಾರಿ ಬಂದಿತು. ದಡದಡ ಮೆಟ್ಟಿಲಿ[illegible] ಕುಟುಂಬದವರು ತಮ್ಮ ತಲೆಗಳ ಸುತ್ತ ಹಾರಾಡುತ್ತಿದ್ದ ಜೇನು ದುಂಬಿಗಳನ್ನು ಓಡಿಸ[illegible] ಪ್ರಯತ್ನಿಸುತ್ತಲೇ ಸ್ವಲ್ಪ ದೂರದಲ್ಲಿ ನಿಲ್ಲಿಸಿದ್ದ ತಮ್ಮ ಕಾರಿನತ್ತ ಓಡತೊಡಗಿದರು.



ಮಾರಿಕಾಂಬ ದೇವಾಲಯ

ಅಟ್ಟಿಸಿಕೊಂಡು ಬಂದಿರುವ ಜೇನು ದುಂಬಿಗಳು ಮುಖ ಮೋರೆ ನೋಡದೆ ಸಿಕ್ಕ[illegible] ಕಡೆ ಇರಿದು ಪ್ರವಾಸಕ್ಕೆ ಬಂದಕಡೆ ಮುಖ ಊದಿಸಿಕೊಂಡು ಅವಸ್ಥೆಪಡುವ ಕಲ್ಪನೆಯಿ[illegible] ನನಗೂ ಗಾಬರಿಯಾಗದೆ ಇರಲಿಲ್ಲ. ಕರವಸ್ತ್ರದಿಂದ ತಲೆಯ ಮೇಲೆ ಹಾರಾಡುತ್ತಿದ್ದ ಜೇ[illegible] ದುಂಬಿಗಳನ್ನು ಓಡಿಸಲು ಪ್ರಯತ್ನಿಸುತ್ತ ನಾನು ದೇವಾಲಯದ ಎದುರಿನ ಅಂಗಡಿಗ[illegible] ಓಡಿದೆ. ಜೇನು ದುಂಬಿಗಳಿಂದ ರಕ್ಷಿಸಿಕೊಳ್ಳಲು ತಲೆಯ ಮೇಲೆ ಸೆರಗು ಹೊದ್ದುಕೊಂಡ[illegible] ನನ್ನ ಪತ್ನಿ ನನ್ನಷ್ಟು ಗಾಬರಿಗೊಂಡಿರಲಿಲ್ಲ. ನನಗೇ ಆಶ್ಚರ್ಯವಾಗುವಂತೆ ಸಾಕ[illegible] ಶಾಂತವಾಗಿದ್ದಳು. ಕರವಸ್ತ್ರದಿಂದ ಅವನ್ನು ಹಾಗೆ ಓಡಿಸಲು ಪ್ರಯತ್ನಿಸಬಾರದೆಂ[illegible] ನನಗೆ ಸಲಹೆ ಮಾಡಿದಳು. ಎಲ್ಲಿಯಾದರೂ ಮರೆಯಾಗಿ ನಿಲ್ಲಲೂ ಸ್ಥಳ[illegible] ಅಂಗಡಿಗಳವರು ಜೇನು ಹಿಂಡಿಗೆ ಹೆದರಿ ಬಾಗಿಲು ಮುಚ್ಚತೊಡಗಿದ್ದರು.

ಅಲ್ಲಿ ಏನು ನಡೆದಿರಬಹುದೆಂದು ಊಹಿಸಬಹುದಿತ್ತು. ಹೇಳಿಕೇಳಿ ಮಧುಕೇಶ್[illegible] ದೇವಾಲಯ! ಅಲ್ಲಿ ಜೇನುಗಳು ಗೂಡುಕಟ್ಟಲು ಯಾವ ದೊಣ್ಣೆ ನಾಯಕನ ಅಪ್ಪಣೆಯ[illegible] ಬೇಕಾಗಿರಲಿಲ್ಲ. ಆದರೆ ಭಕ್ತರು ಸುಮ್ಮನಿರಬೇಕಲ್ಲ. ಅಲ್ಲದೆ ಎಲ್ಲರ ಕೈಗಳಲ್ಲೂ ಒಂದೊ[illegible] ಮೊಬೈಲ್ ಕ್ಯಾಮರಾಗಳು! ಯಾರೋ ಜೇನುಗೂಡಿಗೆ ತೀರಾ ಸಮೀಪಕ್ಕೆ ಹೋ[illegible] ಫೋಟೊ ತೆಗೆಯಲು ಪ್ರಯತ್ನಿಸಿ ಫ್ಲಾಶ್ ಬೆಳಕಿನಿಂದ ಅವನ್ನು ಕೆರಳಿಸಿರಬಹುದು.

ಸ್ವಲ್ಪ ಹೊತ್ತು ಅಲ್ಲಿ ಮರೆಯಾಗಿದ್ದು ಜೇನು ಹಿಂಡಿನ ಕೋಪ ತಣಿದ ನಂ[illegible] ಹೋಗಬಹುದೇ ಎಂದೆಲ್ಲ ಆಲೋಚಿಸುತ್ತಲೇ ನಾವು ಸ್ವಲ್ಪ ದೂರ ಬೇಗ ಬೇ[illegible] ನಡೆದಿದ್ದೆವು. ಬನವಾಸಿಯ ಹೆಜ್ಜೇನುಗಳ ಸ್ವಭಾವ ಶಾಂತವೋ, ಉಗ್ರವೋ ತಿಳಿಯದ[illegible] ಅಷ್ಟು ಸಮೀಪದಲ್ಲಿದ್ದು ದೇವಾಲಯದತ್ತ ಮತ್ತೆ ಹೋಗಲು ಧೈರ್ಯವಾಗಲಿ[illegible] ಅಲ್ಲಿರುವ ಮ್ಯೂಸಿಯಂನ ಕುರಿತು ರಸ್ತೆ ಬದಿಯ ಅರ್ಚಕರ ಮನೆಯಲ್ಲಿ ವಿಚಾರಿಸಿ[illegible] ಮ್ಯೂಸಿಯಂ ದೇವಾಲಯದ ಆವರಣದಲ್ಲಿದೆ ಎಂದರು ಅವರು. ಅಲ್ಲಿನ ಸುಂದ[illegible] ಶಿಲ್ಪಗಳನ್ನು ಅವುಗಳ ಪಾಡಿಗೆ ಬಿಟ್ಟು ಬಂದ ದಾರಿಗೆ ಸುಂಕವಿಲ್ಲವೆಂದು ಹಿಂದಿರು[illegible] ಬೇಕಾಯಿತು! ಮತ್ತೊಮ್ಮೆ ಬನವಾಸಿಗೆ ಬಂದರೆ, ಜೇನುಗಳು ಹಿಂದಿನ ಪ್ರಕರ[illegible] ಮರೆತು ನಮ್ಮೊಂದಿಗೆ ಸಹಕರಿಸಬಹುದೆ ಎಂದು ಕಲ್ಪಿಸಿಕೊಂಡು ಇಬ್ಬರೂ ನಕ್ಕೆವು.

ಮತ್ತೆ ಸಿರಸಿಯತ್ತ ಪಯಣ.

ಸಿರಸಿಯ ಮಾರಿಕಾಂಬ ದೇವಾಲಯದ ಬಳಿ ಇಳಿದೆವು. ದೇವಾಲಯ ವಾಸ್ತು[illegible] ದೃಷ್ಟಿಯಿಂದ ಬೇರೆಯೇ ತರಹದ್ದು. ಒಳಗೆ ವಿಶಾಲವಾದ ಹಜಾರ. ಗೋಡೆಗಳ[illegible] ಅಲಂಕರಿಸಿರುವ ಮಾರಿಕಾಂಬೆಯ ವಿವಿಧ ಅವತಾರಗಳನ್ನು ಚಿತ್ರಿಸುವ ದೊ[illegible] ಪೇಂಟಿಂಗ್‌ಗಳು ಮತ್ತು ದೇವಾಲಯ ನಿರ್ಮಾಣದ ಮಾಹಿತಿ ಫಲಕಗಳ[illegible] ನೋಡುತ್ತ, ನನ್ನದೇ ರೀತಿಯ ಮಾರಿಕಾಂಬೆಯ ದರ್ಶನ ಮಾಡುತ್ತ, ಅಲ್ಲಿದ್ದ ಬೆಂ[illegible] ಮೇಲೆ ಕುಳಿತು ಅಂದಿನ ದಣಿವು ನಿವಾರಿಸಿಕೊಂಡೆ! ನನ್ನ ಪತ್ನಿ ಎಂದಿನ[illegible] ಗರ್ಭಗುಡಿಯತ್ತ ನುಸುಳಿ ಮಾರಿಕಾಂಬೆಯೊಂದಿಗೆ ಸಂವಾದ ನಡೆಸಿಬಂದಳು.

ಪರಂಜ್ಯೋತಿ
ನಂ. ೧೬೭೭, ೧೦ನೇ ಮುಖ್ಯರಸ್ತೆ, ೩ನೇ ಹಂತ, ಪೀ[illegible] ಕೈಗಾರಿಕಾ ಪ್ರದೇಶ, ಬೆಂಗಳೂರು - ೫೬೦ ೦[illegible]

ಮರಳು ಕಲಾ ಮಾಂತ್ರಿಕ



ರಾಘವೇಂದ್ರ ಹೆಗಡೆ





"ಮರಳು ಕಲಾ ಮಾಂತ್ರಿಕ" ರಾಘವೇಂದ್ರ ಹೆಗಡೆ ಅವರು ಮೈಸೂರು ವಿಶ್ವವಿದ್ಯಾನಿಲಯದ "ಕಾವಾ"ದಲ್ಲಿ ಶಿಲ್ಪಕಲೆಯಲ್ಲಿ 2002ರಲ್ಲಿ ಪದವಿಯನ್ನು, ಬೆಂಗಳೂರು ವಿಶ್ವವಿದ್ಯಾನಿಲಯದ ಚಿತ್ರಕಲಾ ಪರಿಷತ್ತಿನಲ್ಲಿ ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ. ಜೇಡಿಮಣ್ಣು, ಸಿಮೆಂಟ್, ಕಂಚು, ಕಲ್ಲು, ಮರ, "ತಂತುಗಾಜು", ಪ್ರಧಾನವಾಗಿ ಅಕ್ರಲಿಕ್ ಗಾಜು, ತಂತಿಯ ಬಲೆ ಮೊದಲಾದುವಲ್ಲಿ ಶಿಲ್ಪಕಲಾ ತಯಾರಿಕೆ ಹಾಗೂ ತೈಲವರ್ಣ, ಅಕ್ರಲಿಕ್, ಜಲವರ್ಣಗಳ ಚಿತ್ರಕಲೆಯಲ್ಲಿ ಅವರು ಚತುರತೆಯನ್ನು ರೂಢಿಸಿಕೊಂಡಿರುವುದು ಗಮನಾರ್ಹ.

ಪಿ. ಎಂ. ರಾಜನ್
ಕಲಾ ವಿಮರ್ಶಕ - ಪತ್ರಕರ್ತ
ನಂ. ೫೦೩, ೫ನೇ ಕ್ರಾಸ್, ಗಿರಿದರ್ಶಿನಿ ನಗರ, ಮೈಸೂರು - ೫೭೦ ೦೨೮





ಹಿಮಾಲಯ ಮೂಡಿಸುವ ಇಂಥ ಅರಿವು ಆರೋಗ್ಯಕರ


ಎಂ. ಮದನ ಗೋಪಾಲ್













ನಾವೆಷ್ಟು ಕಿರಿಯರು ! ಹಿಮಾಲಯ ಮೂಡಿಸುವ ಇಂಥ ಅರಿವು ಆರೋಗ್ಯಕರ



– ಎಂ. ಮದನ ಗೋಪಾಲ್

ಶ್ರೀ ಮದನ ಗೋಪಾಲ್ ಕರ್ನಾಟಕದಲ್ಲಿ ರ್ಕಾರದ ಅಧಿಕಾರಿಯಾಗಿ ೧೯೮೪ರಿಂದ ಸೇವೆ ಲ್ಲಿಸುತ್ತಿದ್ದಾರೆ. ಪ್ರಸ್ತುತ ಅವರು ಕರ್ನಾಟಕ ರಾಜ್ಯ ಣಕಾಸು ನಿಗಮದ (ಕೆ.ಎಸ್.ಎಫ್.ಸಿ.) ವಸ್ಥಾಪಕ ನಿರ್ದೇಶಕರು. ಉನ್ನತ ಶಿಕ್ಷಣ, ರೋಗ್ಯ, ಮುಂತಾದ ಹತ್ತಾರು ಇಲಾಖೆಗಳಲ್ಲಿ ಧಾನ ಕಾರ್ಯದರ್ಶಿಯಾಗಿ ಈ ಹಿಂದೆ ಕೆಲಸ ಾಡಿದ್ದಾರೆ. ಪರ್ವತಾರೋಹಣ ಮತ್ತು ೋಟೋಗ್ರಫಿ ಇವರ ಪ್ರಿಯವಾದ ವ್ಯಾಸಗಳು. ನೇರನುಡಿ ಮತ್ತು ಕಾರ್ಯನಿಷ್ಠೆಗೆ ಸರಾದ ಇವರನ್ನು ಸಂದರ್ಶಿಸಲು ಇಚ್ಛಿಸಿದಾಗ ಾಡಲೆ ಒಪ್ಪಿಗೆಯಿತ್ತು ಸಹಕರಿಸಿದ್ದಾರೆ. ಇವರು ಮಾಲಯ ಚಾರಣದ ಸಂದರ್ಭದಲ್ಲಿ ತೆಗೆದ ಲವು ಛಾಯಾಚಿತ್ರಗಳನ್ನು ಇಲ್ಲಿ ಪ್ರಕಟಿಸಿದ್ದೇವೆ.

ಹೊಸತು : ಮೊದಲಿಗೆ ನಿಮ್ಮ ಕುಟುಂಬದ ಸಾಮಾಜಿಕ ಹಿನ್ನೆಲೆಯ ಬಗ್ಗೆ ಹೇಳುವಿರಾ ? ನಿಮ್ಮದು ರಾಜಕೀಯ ಹಿನ್ನೆಲೆಯ ಕುಟುಂಬವೆಂದು ಕೇಳಿದ್ದೇವೆ.

ಮದನ ಗೋಪಾಲ್ : ಆಂಧ್ರಪ್ರದೇಶದ ಗುಂಟೂರು ನಮ್ಮ ಊರು. ನಮ್ಮ ಅಜ್ಜ ಗುಂಟೂರು ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದವರು. ೧೯೨೦ರ ದಶಕದಲ್ಲಿ ಗಾಂಧೀಜಿ ಅಸಹಕಾರ ಚಳವಳಿಗೆ ಕರೆಕೊಟ್ಟಾಗ ನನ್ನ ಅಜ್ಜ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದರು. ನನ್ನ ಅಜ್ಜ ಅಜ್ಜಿ ಇಬ್ಬರೂ ಅಸಹಕಾರ ಚಳುವಳಿಗೆ ಧುಮುಕಿದರು. ನನ್ನ ತಂದೆ ಪ್ರೊ|| ವೆಂಕಟಾಚಾರ್ಯ ಅವರಿಗೆ ಕಮ್ಯುನಿಸ್ಟ್ ಪಾರ್ಟಿಯ ಸಂಪರ್ಕವಿತ್ತು. ಅವರು ರಾಜಕೀಯ ಚಟುವಟಿಕೆಗಳ ಕಾರಣ ಹದಿನೇಳು ಭಯೋತ್ಪಾದಕ ಪ್ರಕರಣಗಳಲ್ಲಿ ಆಪಾದಿತರಾಗಿದ್ದರು. ತೆನಾಲಿ ಪಿತೂರಿ ಪ್ರಕರಣ, ಗುಂಟೂರು ಬಾಂಬು ಸ್ಫೋಟ ಪ್ರಕರಣಗಳಲ್ಲಿ ಅವರು ಮೊದಲನೇ ಆಪಾದಿತರಾಗಿದ್ದರು. ಬಳ್ಳಾರಿಯ ಅಲಿಪುರ ಜೈಲಿನಲ್ಲಿ, ಯರವಾಡಾದ ಜೈಲಿನಲ್ಲಿ ರಾಜಕೀಯ ಖೈದಿಯಾಗಿ ಒಟ್ಟು ಆರುವರ್ಷ ಜೈಲುವಾಸ ಅನುಭವಿಸಿದರು. ಮುಂದೆ ಅವರು ಅಧ್ಯಾತ್ಮಿಕದತ್ತ ವಾಲಿದರು. ಅದೊಂದು ಬೇರೆಯೇ ಕತೆ. ಗುಂಟೂರಿನಲ್ಲಿ ನಮ್ಮ ಪೂರ್ವಿಕರ ಮನೆಯ ನೆಲಮಾಳಿಗೆಯಲ್ಲಿ ಒಂದು ರಹಸ್ಯ ಕೋಣೆಯಲ್ಲಿ ಬಾಂಬು ತಯಾರಿಕೆಯೂ ನಡೆದಿತ್ತು. ನನ್ನ ಅಜ್ಜಿ ಗಾಂಧೀಜಿಯವರ ಅನುಯಾಯಿಯಾದರೂ ಬ್ರಿಟಿಷರನ್ನು ತೊಲಗಿಸುವ ಎಲ್ಲ ಚಟುವಟಿಕೆಗಳಿಗೆ ಹಣ ಸಹಾಯ ಮಾಡುತ್ತಿದ್ದರು. ಅವರೆಲ್ಲರೂ ಯಾವ ಫಲವನ್ನೂ ಅಪೇಕ್ಷಿಸದೆ ಬ್ರಿಟಿಷರನ್ನು ದೇಶದಿಂದ ಓಡಿಸುವ ಹೋರಾಟದಲ್ಲಿ ಭಾಗವಹಿಸಿದವರು.

ಹೊ : ನಿಮ್ಮ ತಂದೆ ಅಧ್ಯಾತ್ಮದತ್ತ ವಾಲಿದರು ಎಂದಿರಲ್ಲ...

ಮ. ಗೋ. : ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿ. ಹಿಂದಿ ಎಂ.ಎ. ಮತ್ತು ಸಂಸ್ಕೃತ ಎಂ.ಎ. ಪದವಿ ಮತ್ತು ಕಾಶಿ ವಿದ್ಯಾಪೀಠ ದಿಂದ 'ಗೀತಾಚಾರ್ಯ' ಪದವಿ ಪಡೆದವರು.

ಸಂದರ್ಶಿಸಿದವರು :
ಜಿ. ರಾಮಕೃಷ್ಣ
ಎಸ್. ಸುರೇಂದ್ರ
ಕೆ. ಪಿ. ಸ್ವಾಮಿ
ಎ. ಆರ್. ಉಡುಪ

ಸಾಂದರ್ಭಿಕ ಲೇಖನ ಮತ್ತು ಚಿತ್ರಗಳು :
ಕೆ. ಪಿ. ಸ್ವಾಮಿ

ಎಡಪಂಥದ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದರು. ಸ್ವಾಭಾವಿಕವಾಗಿ ಇಂಥವರು ತುಂಬ ಸೂಕ್ಷ್ಮಮತಿಗಳಾಗಿರುತ್ತಾರೆ. ಸಾಮಾಜಿಕ ಬದಲಾವಣೆಗಳು ಬೇಗನೇ ಸಂಭವಿಸಬೇಕೆಂದು ಅಪೇಕ್ಷಿಸುತ್ತಾರೆ. ಅದು ವಿಳಂಬವಾದಾಗ ನಿರಾಶರಾಗುತ್ತಾರೆ. ಪೆಂಡುಲಮ್ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಾಲುವಂತೆ ಅವರು ಎಡ ವಿಚಾರಧಾರೆಯಿಂದ ಅಧ್ಯಾತ್ಮದತ್ತ ವಾಲಿದರು. ನಾವು ಹೈದರಾಬಾದಿನಲ್ಲಿದ್ದಾಗ ಸುಂದರಯ್ಯನವರು ನಮ್ಮ ಮನೆಗೆ ಬಂದಿದ್ದರು. ಅಲ್ಲದೆ ನನ್ನ ತಂದೆಯವರು ಡಾಂಗೆ, ರಣದಿವೆ ಮುಂತಾದ ನಾಯಕರೊಂದಿಗೆ ಪತ್ರವ್ಯವಹಾರ ಇರಿಸಿಕೊಂಡಿದ್ದರು. ಆಗ ನನಗೆ ಹದಿನೆಂಟರ ಪ್ರಾಯ.

ಹೊ : ನಿಮ್ಮ ವ್ಯಾಸಂಗ, ಆಸಕ್ತಿಗಳು, ವೈಯಕ್ತಿಕ ಆಕಾಂಕ್ಷೆಗಳ ಕುರಿತು...

ಮ. ಗೋ. : ನಾನು ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದೆ. ಮಾರ್ಕ್ಸ್‌ರ ವಿಚಾರಧಾರೆಗಳು ಯುವಕರನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದ ಅವಧಿ. ಮುಖ್ಯವಾಗಿ ಎಡಪಂಥೀಯ, ಪ್ರಗತಿಶೀಲ ಸಾಹಿತ್ಯ ಚಳವಳಿಯತ್ತ ನಾನು ಹೆಚ್ಚು ಆಕರ್ಷಿತನಾಗಿದ್ದೆ. ಆಗ ನಡೆಯುತ್ತಿದ್ದ ಎಲ್ಲ ವಿದ್ಯಾರ್ಥಿ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದೆ. ತೆಲುಗಿನ ಪ್ರಮುಖ ಲೇಖಕರಾಗಿದ್ದ ಶ್ರೀ ಶ್ರೀ ಮತ್ತು ಗುಡಿಪಾಟಿ ವೆಂಕಟಾಚಲಂ ಅಥವಾ ಚಲಂ ಅವರ ಕವಿತೆಗಳು ಮತ್ತು ಕಥೆಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು.

ತೀವ್ರಗಾಮಿ ಎಡಪಂಥೀಯ ವಿದ್ಯಾರ್ಥಿಗಳ ಪ್ರಭಾವ ಹೆಚ್ಚಾಗಿತ್ತು.

ಹೊ : ನೀವು ಸೂಚಿಸಿದ ಅಭಿಜಾತ ಸಾಹಿತ್ಯಕ ಕೃತಿಗಳಲ್ಲದೆ ನಿಮ್ಮನ್ನು ಪ್ರಭಾವಗೊಳಿಸಿದ ಇತರ ಸಾಹಿತ್ಯದ ಬಗ್ಗೆ ತಿಳಿಸಿ.

ಮ. ಗೋ. : ನಾನೊಬ್ಬ ಓದುಬಾಕ ಎನ್ನಬಹುದು. ಇಂಗ್ಲಿಷ್, ರಶಿಯನ್, ಚೀಣಿ, ಇಟಾಲಿಯನ್, ಸ್ಪ್ಯಾನಿಷ್, ಜರ್ಮನ್ – ಹೀಗೆ ಒಂದು ಡಜನ್ ಭಾಷೆಗಳ ಸಾಹಿತ್ಯ ಕೃತಿಗಳನ್ನು ಓದಿದ್ದೇನೆ.

ಹೊ : ನಿಮಗೆ ಅಷ್ಟು ಭಾಷೆಗಳ ಪರಿಚಯವಿದೆಯೆ ?

ಮ. ಗೋ. : ತೆಲುಗು ಇಲ್ಲವೆ ಇಂಗ್ಲಿಷ್ ಅನುವಾದದಲ್ಲಿ ಅಷ್ಟನ್ನೂ ಓದಿದ್ದೇನೆ. ಉದಾಹರಣೆಗೆ ನೊಬೆಲ್ ಪ್ರಶಸ್ತಿ ವಿಜೇತ ಸಾಹಿತಿ ಮಾರಿಯೊ ಇಲ್ಯಾಸ್‌ರ ಎಲ್ಲ ಕೃತಿಗಳನ್ನು ಓದಿ ಮುಗಿಸಿದ್ದೇನೆ.

ಹೊ : ಸಾಹಿತ್ಯದಲ್ಲಿ ಯಾವ ಪ್ರಕಾರ ನಿಮಗೆ ಹೆಚ್ಚು ಪ್ರಿಯ ?

ಮ. ಗೋ. : ಪ್ರವಾಸ ಸಾಹಿತ್ಯ. ಜೊತೆಗೆ ತತ್ವಶಾಸ್ತ್ರ. ಸ್ಥಾಪಿತ ವ್ಯವಸ್ಥೆಯ ವಿರುದ್ಧ, ಅನ್ಯಾಯದ ವಿರುದ್ಧ ಹೋರಾಡುವ ವಸ್ತುವಿರುವ ಕೃತಿಗಳು ನನಗೆ ಹೆಚ್ಚು ಇಷ್ಟವಾಗುತ್ತವೆ.

ಹೊ : ಈ ಹಿನ್ನೆಲೆಯಲ್ಲಿ, ಐ.ಎ.ಎಸ್.ನತ್ತ ಒಲವು ಮೂಡಿದ್ದು ಯಾವಾಗ ?

ಮ. ಗೋ. : ಬಹಳ ವರ್ಷಗಳನಂತರ. ಈ ಮಧ್ಯೆ ನಾನು ಜಿಡ್ಡು ಕೃಷ್ಣಮೂರ್ತಿಯವರ ವಿಚಾರಗಳತ್ತ ಒಲವು ಬೆಳೆಸಿಕೊಂಡೆ. ಓಶೋ ವಿಚಾರಗಳಿಗೂ ಸಹ. ಆ



ಹೊ : ಆ ಸನ್ನಿವೇಶದಲ್ಲಿ ಯಾವ ದಿಶೆಯಲ್ಲಿ ಸಾಗಬೇಕೆಂಬುದು ನಿಮ್ಮ ಕಾಂಕ್ಷೆಯಾಗಿತ್ತು ?

ಮ. ಗೋ. : ಸ್ವಾಭಾವಿಕವಾಗಿಯೇ ಶೋಷಣೆ - ಬಡತನ ನಿವಾರಣೆಯಾಗಬೇಕು, ಮಾಜದ ಎಲ್ಲರೂ ಸಮಾನರಾಗಿ ಬದುಕಬೇಕು ಎಂಬ ಆದರ್ಶಗಳು ನನ್ನ ಮುಂದಿದ್ದವು. ೋರ್ಕಿ, ಚೆಕೋವ್ ಮತ್ತು ದೊಸ್ತೋವ್‌ಸ್ಕಿ ಸಾಹಿತ್ಯ ಸಹ ನನ್ನನ್ನು ಸಾಕಷ್ಟು ್ಫೂರ್ತಿಗೊಳಿಸಿದೆ. ಗೋರ್ಕಿ ಅವರ 'ತಾಯಿ' ಕಾದಂಬರಿಯಂತೂ ಒಂದು ಉತ್ಕೃಷ್ಟ ಹಿತ್ಯ ಕೃತಿಯಾಗಿ ಮಾತ್ರವಲ್ಲದೆ ಒಂದು ಆದರ್ಶವಾಗಿ ಸಹ ಮರೆಯಲಾಗದ ಕೃತಿ.

ಹೊ : ವಿದ್ಯಾರ್ಥಿ ಚಳುವಳಿಗಳ ವಿಷಯ ತಿಳಿಸಿ. ನಿಮ್ಮ ಕ್ಯಾಂಪಸಿನಲ್ಲಿ ಜೆ. ಪಿ. ಳುವಳಿಯ ಪ್ರಭಾವ ಹೇಗಿತ್ತು ?

ಮ. ಗೋ. : ಆಗ ಎಲ್ಲ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಪ್ರತ್ಯೇಕವಾಗಿ ಟುವಟಿಕೆ ನಡೆಸದೆ ಒಂದು ವಿಶಾಲ ವೇದಿಕೆಯಡಿ ಚಟುವಟಿಕೆ ನಡೆಸುತ್ತಿದ್ದವು. ದಾಹರಣೆಗೆ, ದಿವಿ ಸೀಮೆಗೆ ಚಂಡಮಾರುತ ದಾಳಿ ಮಾಡಿದ ಸಂದರ್ಭದಲ್ಲಿ ಈ ವಿದ್ಯಾರ್ಥಿ ಸಂಘಟನೆಗಳು, ವೈದ್ಯಕೀಯ ವಿದ್ಯಾರ್ಥಿಗಳ ಜೊತೆ ಸೇರಿ ಸ್ವಯಂ ವಕರಾಗಿ ಹಾನಿಗೊಳಗಾದವರ ರಕ್ಷಣೆಗೆ ಧಾವಿಸಿದ್ದರು. ಜೆ.ಪಿ. ಚಳುವಳಿಯಲ್ಲಿ

ಸಂದರ್ಭದಲ್ಲಿ ಚಲಂರ ಪ್ರಭಾವದಿಂದ ಬದುಕಿನ ಬಗ್ಗೆ, ದೇಶದ ಬಗ್ಗೆ, ಸಮಾಜದ ಬಗ್ಗೆ ನನ್ನ ಕಣ್ಣೋಟ ಹೇಗಿರಬೇಕು ಎಂಬುದು ನಿಚ್ಚಳವಾಗತೊಡಗಿತು. ವಾಸ್ತವದಲ್ಲಿ ಅವರು ನನ್ನ ತಲೆಯ ಮುಚ್ಚಳ ತೆರೆದರು ಎನ್ನಬೇಕು. ರಮಣ ಮಹರ್ಷಿಗಳತ್ತ ನನಗೆ ಒಲವುಂಟಾಗಲೂ ಅವರೇ ಕಾರಣ. ಚಲಂ ಆಗಲೇ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿದ ಸಮರ್ಥ ಲೇಖಕರು. ಅವರೊಬ್ಬ ಪಕ್ಕಾ ನಿಷ್ಕಪಟ ವ್ಯಕ್ತಿ. ತೆಲುಗಿನ ಜನಪ್ರಿಯ ಪತ್ರಿಕೆಗಳಲ್ಲಿ ಅವರ ಸಾಹಿತ್ಯ ಪ್ರಕಟವಾಗುತ್ತಿರಲಿಲ್ಲ. ಎಡಪಂಥೀಯ, ಪ್ರಗತಿಶೀಲ ಪತ್ರಿಕೆಗಳು ಅವರ ಕೃತಿಗಳನ್ನು ಪ್ರಕಟಿಸುತ್ತಿದ್ದವು. ಶ್ರೀಶ್ರೀ ಅವರ 'ಮಹಾಪ್ರಸ್ಥಾನ' ಕೃತಿಗೆ ಚಲಂ ಬರೆದ ಮುನ್ನುಡಿ ಎಷ್ಟು ವಿದ್ವತ್ಪೂರ್ಣವಾಗಿತ್ತೆಂದರೆ ಪ್ರಾರಂಭದಲ್ಲಿ ಅವರ ಮುನ್ನುಡಿಗಾಗಿಯೇ ಮಹಾಪ್ರಸ್ಥಾನದ ಹೆಚ್ಚು ಪ್ರತಿಗಳು ಮಾರಾಟವಾದವು! ಈಗಲೂ ನಾನು ಆಗಾಗ ರಮಣಾಶ್ರಮಕ್ಕೆ ಹೋಗಿಬರುತ್ತೇನೆ. ಅಲ್ಲಿನ ಆಕರ್ಷಣೆಯೆಂದರೆ, ಅಲ್ಲಿ ಮತಾಚರಣೆಗಳ, ಸಿದ್ಧಾಂತ ಸೂತ್ರಗಳ, ಕರ್ಮಕಾಂಡಗಳ ಕಿರಿಕಿರಿ ಇಲ್ಲವಿರುವುದು. ನಾನು ಯಾರು ಎಂಬ [illegible] ಮೂಡದಿದ್ದರೆ ವ್ಯಕ್ತಿ ಏನನ್ನೂ ಸಾಧಿಸಲಾಗುವುದಿಲ್ಲ. ಮನುಷ್ಯನನ್ನು ಪರಿಶುದ್ಧಗೊಳಿಸುವುದಕ್ಕೆ ಅದು [illegible]ಕವಾಗುತ್ತದೆ.

ಹೊ : ನೀವು ಐಎಎಸ್ ಮಾಡಿದ್ದು ಯಾವಾಗ ?

ಮ. ಗೋ. : [illegible] ನಾನು ಎಂ.ಕಾಂ ಹಿನ್ನೆಲೆಯಿಂದ ಬಂದವನು. ಐಎಎಸ್‌ನಲ್ಲಿ ಇತಿಹಾಸ, ತತ್ವಶಾಸ್ತ್ರ ಆರಿಸಿಕೊಂಡಿದ್ದೆ. ಷಡ್‌ದರ್ಶನಗಳು ಪಠ್ಯ ವಿಷಯಗಳಾಗಿದ್ದವು. ಪಾಶ್ಚಾತ್ಯರ ಪೈಕಿ ಪ್ಲೇಟೋನಿಂದ ಜೀನ್ ಪಾಲ್ ಸಾರ್ತ್ರೆವರೆಗೆ ಅಧ್ಯಯನ. ಜೊತೆಗೆ ಸಾಮಾಜಿಕ-ರಾಜಕೀಯ ತತ್ವಗಳು. ಮತಧರ್ಮದ ತತ್ವಶಾಸ್ತ್ರ ಅತ್ಯಂತ ಆಸಕ್ತಿದಾಯಕ ವಿಷಯ. ಆಶ್ಚರ್ಯಕರ ವಿಷಯವೆಂದರೆ ಅಧ್ಯಯನ ಮಾಡಿದವರು ತಮ್ಮ ಧರ್ಮವನ್ನು ತಮ್ಮದೇ ದೃಷ್ಟಿಕೋನದಿಂದ ಸಮರ್ಥಿಸಿಕೊಳ್ಳುತ್ತಾರೆ! ತಿರುವಣ್ಣಾಮಲೆಗೆ ಹೋಗಿಬರತೊಡಗಿದ ಮೇಲೆ ಯಾವುದೇ ತತ್ವಶಾಸ್ತ್ರದ ಬಗ್ಗೆ ಪ್ರಯೋಗ ಮಾಡಿ ನೋಡುವ ಆವಶ್ಯಕತೆ ನನಗೆ ಕಾಣಿಸುತ್ತಿಲ್ಲ.

ಹೊ : ಫೋಟೋಗ್ರಫಿ ಬಗ್ಗೆ ನಿಮಗೆ ಆಸಕ್ತಿ ಹೇಗೆ ? ಅದು ನಿಮ್ಮ ಹವ್ಯಾಸವೆ ?

ಮ. ಗೋ. : ಪರ್ವತಾರೋಹಣ ನನ್ನ ಮುಖ್ಯ ಹವ್ಯಾಸ. ಹೇಗೋ ನಾನು ಹಿಮಾಲಯ ಪರ್ವತಗಳ ಕಡೆಗೆ ಆಕರ್ಷಿತನಾದೆ. ಅಂಥ ತಿರುಗಾಟದ ಸಂದರ್ಭದಲ್ಲಿ ಫೋಟೋಗ್ರಫಿಯಲ್ಲಿ ಆಸಕ್ತಿ ಹುಟ್ಟಿತು. ಬದ್ರಿನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿ, ಕದಂಬಾರಿ, ಅಮರನಾಥ, ಲಡಾಕ್, ಹಿಮಾಚಲ ಪ್ರದೇಶ, ಕಾಂಗ್ರಾ ಕಣಿವೆ, ಕೈಲಾಸ, ಮಾನಸ ಸರೋವರ, ಕಾಂಚನಗಂಗಾ, ವ್ಯಾಸಿಕಾರ್, ಎವರೆಸ್ಟ್ ಬೇಸ್ ಕ್ಯಾಂಪ್, ಅನ್ನಪೂರ್ಣ ಬೇಸ್ ಕ್ಯಾಂಪ್ ಇತ್ಯಾದಿ ನಾನು ಚಾರಣ ಕೈಗೊಂಡ ಸ್ಥಳಗಳು. ಕೈಲಾಸ ಮಾನಸ ಸರೋವರ ತಿರುಗಾಟದ ಬಗ್ಗೆ ನವ ಅಂಗಾರಕ ಗೋವಿಂದ ಎಂಬುವವರು 'ವೇ ಆಫ್ ದಿ ವೈಟ್ ಕ್ಲೌಡ್ಸ್' ಎಂಬ ಪುಸ್ತಕ ಬರೆದಿದ್ದಾರೆ. ಇವರು ರಾಹುಲ ಸಾಂಕೃತ್ಯಾಯನರ ಜೊತೆಗೆ ಯಾತ್ರೆ ಮಾಡಿದವರು. ರಾಹುಲರ ಮಹಾನ್ ಕೃತಿ 'ವೋಲ್ಗಾ ಗಂಗಾ'. ಅದೇ ರೀತಿ ದೇವಿಪ್ರಸಾದ್ ಚಟ್ಟೋಪಾಧ್ಯಾಯರ 'ಲೋಕಾಯತ' ಇವೆರಡು ಅಮೂಲ್ಯ ಗ್ರಂಥಗಳು. ಯಾರು ಕೇಳಿದರೂ ಇವನ್ನು ಕೊಡಲಾರೆ. ಈಗಿನ ಯುವ ಪೀಳಿಗೆಯವರು ಈ ಗ್ರಂಥಗಳನ್ನು ಓದಬೇಕು. ನಲವತ್ತು ಐವತ್ತರ ಪ್ರಾಯದವರು ಸಹ ಎಷ್ಟು ಮಂದಿ ಈ ಗ್ರಂಥಗಳನ್ನು ಓದಿದ್ದಾರೋ ಹೇಳಲು ಬಾರದು.

ಹೊ : ನಿಮ್ಮ ಚಾರಣದ ಅನುಭವಗಳ ಬಗ್ಗೆ.

ಮ. ಗೋ. : ಹಿಮಾಲಯದ ಸೌಂದರ್ಯ ವರ್ಣನೆಗೆ ನಿಲುಕದ್ದು. ಅದು ಮುಂದೆ ನಿಂತಾಗ ಅದರ ಎತ್ತರ, ಅಗಾಧತೆ ಮಂತ್ರಮುಗ್ಧಗೊಳಿಸುತ್ತವೆ. ತಾನ ಐಎಎಸ್, ಭಾರತೀಯ, ಭಾರಿ ದೊಡ್ಡ ವ್ಯಕ್ತಿ – ಮುಂತಾದುವೆಲ್ಲ ಮರೆತು ಹೋಗುತ್ತ ತಾನು ಎಷ್ಟು ಸಣ್ಣವನು ಎನ್ನಿಸುತ್ತದೆ. ಹಿಮಾಲಯದ ಮ್ಯೂಸಿಯಂನಲ್ಲಿರುವ ೧೨ ಮಿಲಿಯ ವರ್ಷಗಳಷ್ಟು ಹಳೆಯದಾದ ಸಾಲಿಗ್ರಾಮವನ್ನು ನೋಡಿದಾಗ ಪ್ರಕೃ ಚಿರಂತನ, ಉಳಿದದ್ದು ಕ್ಷಣಿಕ ಎಂಬ ಭಾವನೆ ಉಂಟಾಗುತ್ತದೆ. ಮನುಷ್ಯ ಅಹಂಭಾವ, ಅಸಹಿಷ್ಣುತೆ, ತಾನು ಶ್ರೇಷ್ಠ ಎಂಬ ಭಾವನೆ ಎಲ್ಲ ಮಾಯವಾಗಿ ಒಂದ ಹೊಸ ಚೈತನ್ಯ ಬರುತ್ತದೆ. ಅಲ್ಲಿ ತಿರುಗಾಡಿದರೇನೇ ಶರೀರದ ಆರೋ ಮರುಕಳಿಸುತ್ತದೆ. ಅದಕ್ಕಾಗಿ ಬೇರೆ ಏನೂ ಪ್ರಯತ್ನ ಬೇಕಾಗಿಲ್ಲ.

ಹೊ : ನೀವು ಐಎಎಸ್‌ಅನ್ನು ಜೀವನ ಮಾರ್ಗದ ಹುದ್ದೆಯಾ ಸ್ವೀಕರಿಸಿದುದರಲ್ಲಿ ಬೇರೇನಾದರೂ ಆಕಾಂಕ್ಷೆಗಳೂ ಇದ್ದುವೆ ?

ಮ. ಗೋ. : ನಾನು ಸಾಮಾಜಿಕ ಚಳುವಳಿಗಳ ಮಧ್ಯೆ ಬೆಳೆದುಬಂದವನು. ಹುದ್ದೆಯಲ್ಲಿ ಒಂದು ಸಣ್ಣ ಅವಕಾಶ ಸಿಕ್ಕಿದರೂ ಸಮಾಜಕ್ಕೆ ಒಳಿತಾಗುವ ಬದಲಾವ ತರಲು ಸಾಧ್ಯ ಎಂದು ನಂಬಿದವನು.

ಉದಾಹರಣೆಗೆ, ನಾನು ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದಾ ಸಿಇಟಿ ವ್ಯವಸ್ಥೆಯ ನೋಟಿಫಿಕೇಷನನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿ ಆಗ ಮಹಿಳೆಯೊಬ್ಬರು ''ನೋಟಿಫಿಕೇಷನ್ನಿನಲ್ಲಿ ಅಂಗವಿಕಲ ವಿದ್ಯಾರ್ಥಿಗಳ ಮೀಸಲಾತಿ ಕಲ್ಪಿಸಿದ್ದೀರಿ. ಆದರೆ, ನನ್ನ ಮಗನಿಗೆ ಡಿಸ್‌ಲೆಕ್ಸಿಯ ಇದೆ. ಅಂಗವಿಕಲತೆ ಪಟ್ಟಿಯಲ್ಲಿ ಇದು ಸೇರುತ್ತದೋ ಎಂದು ಸ್ಪಷ್ಟವಾಗಿಲ್ಲ''. ಎಂದರು. ವಾಸ್ತವದ ಆವರೆಗೆ ನನಗೆ ಡಿಸ್‌ಲೆಕ್ಸಿಯ ಬಗೆಗೆ ಹೆಚ್ಚು ತಿಳಿದಿರಲಿಲ್ಲ. ಅದೇನೆಂದು ಆಕೆಯನ ಕೇಳಿದೆ. 'ತಾರೆ ಜಮೀನ್ ಪರ್' ಸಿನಿಮಾದಲ್ಲಿ ಬರುತ್ತದಲ್ಲ ಅಂಥ ವಿಕಲತೆ ಎಂದರ ನಾನು ಕೂಡಲೇ ಈ ವಿಷಯವನ್ನು ಆಗಿನ ಶಿಕ್ಷಣ ಮಂತ್ರಿಯವರ ಗಮನಕ್ಕೆ ತಂ ಅದೃಷ್ಟವಶಾತ್ ಅವರಿಗೆ ವಿಷಯ ಮನವರಿಕೆಯಾಯಿತು. ಅವರು ನಿಯಮಗಳ

ತಿದ್ದುಪಡಿ ತರಲು ಸಲಹೆ ಮಾಡಿದರು. ಒಂದು ವಾರದಲ್ಲಿ ತಿದ್ದುಪಡಿ ಅಂಗೀಕಾರವಾಯಿತು. ಆದರಿಂದ ಭಾರತದಲ್ಲಿ ಮೊದಲ ಬಾರಿಗೆ ಒಬ್ಬ ಡಿಸ್‌ಲೆಕ್ಸಿಯ ವಿದ್ಯಾರ್ಥಿಗೆ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಸಿಕ್ಕಿತು. ಆ ತಾಯಿಗಾದ ಸಂತೋಷ ಅಷ್ಟಿಷ್ಟಲ್ಲ. ಇದೊಂದು ಸಣ್ಣ ವಿಷಯವಾದರೂ, ಕೆಲವು ಮಿತಿಗಳು, ನಿರ್ಬಂಧಗಳು ಇದ್ದಾಗ್ಯೂ ಇದನ್ನು ಸಾಧಿಸಲು ಸಾಧ್ಯವಾಯಿತಲ್ಲ ಎಂಬ ತೃಪ್ತಿ ನನಗೆ. ಇಂಥ ಹಲವು ಉದಾಹರಣೆಗಳನ್ನು ನೀಡಬಹುದು. ಈ ಘಟನೆ ಯಾರ ನೆನಪಿನಲ್ಲಿದೆಯೋ ಇಲ್ಲವೋ ಅದು ಮುಖ್ಯವಲ್ಲ.

ಹೊ: ಮಿತಿಗಳು, ನಿರ್ಬಂಧಗಳು ಯಾರಿಂದ? ಅಧಿಕಾರಶಾಹಿಯಿಂದಲೋ ರಾಜಕಾರಿಣಿಗಳಿಂದಲೋ ?

ಮ. ಗೋ.: ಎರಡೂ ಕಡೆಯಿಂದ. ಹಿಂದೆ ನೀತಿ ರೂಪಿಸುವಲ್ಲಿ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ, ಎಲ್ಲರೂ ಒಂದು ವೃಂದವಾಗಿ ಕೆಲಸ ಮಾಡುತ್ತಿದ್ದರು. ಈಗ ಆ ಪರಿಸ್ಥಿತಿ ಮಾಯವಾಗಿದೆ. ಯಾವುದೇ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲು ಅದು ಅತ್ಯವಶ್ಯಕ. ಸರಕಾರ ತೆಗೆದುಕೊಳ್ಳುವ ಒಳ್ಳೆಯ ಉಪಕ್ರಮಗಳನ್ನು ನಿರಂತರ ಪೋಷಿಸುವುದು ಅಷ್ಟೇ ಮುಖ್ಯ.

ಹೊ: ನಿಮ್ಮ ಕಾರ್ಯಚಟುವಟಿಕೆಗಳ ಮಧ್ಯೆ ಉಂಟಾದ ಅಡ್ಡಿ ಆತಂಕಗಳನ್ನು, ಒತ್ತಡಗಳನ್ನು ಹೇಗೆ ನಿಭಾಯಿಸಿದಿರಿ ?

ಮ. ಗೋ.: ಅದೃಷ್ಟವೆನ್ನಬಹುದು. ಮಾನವೀಯತೆಯನ್ನು ಆಧರಿಸಿದ ಸಾರ್ವತ್ರಿಕ ಸೋದರತ್ವ: ಇದು ಜೀವನದ ಲಕ್ಷ್ಯ. ಮಾರ್ಕ್ಸ್‌ರ ವಿಚಾರಗಳನ್ನು ಇಲ್ಲಿಗೆ ಅನ್ವಯಿಸಬಹುದು. ಜೊತೆಗೆ ನನ್ನ ಅಧ್ಯಾತ್ಮಿಕ ಮತ್ತು ಸಾಮಾಜಿಕ ಒಳವಳಿಗಳ ಹಿನ್ನೆಲೆ. ಎದುರಾದ ಒತ್ತಡಗಳನ್ನು ನಿವಾರಿಸುವಲ್ಲಿ ಇವು ನನಗೆ ಸಹಾಯಕವಾಗಿವೆ.

ಹೊ: ನಿಮ್ಮ ಐಎಎಸ್ ಅಧಿಕಾರಿಗಳ ಮಧ್ಯೆ ಪರಸ್ಪರ ಅಸಹನೆ, ಅಸೂಯೆ – ಇಂಥ ಅನುಭವಗಳು...

ಮ. ಗೋ.: ನಾವು ನಮ್ಮಷ್ಟಕ್ಕೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು. ನಾವು ಪರಸ್ಪರ ಸ್ಪರ್ಧಿಗಳಲ್ಲ. ಪ್ರಾರಂಭದಲ್ಲಿ ಇಂಥ ಸಮಸ್ಯೆಗಳು ಎದುರಾಗಿರಬಹುದಾದರೂ ಇದು ಬದುಕಿನ ಒಂದು ಭಾಗ. ನನ್ನ ಸೇವಾವಧಿಯಲ್ಲಿ ನನ್ನ ಕರ್ತವ್ಯ ಸರಿಯಾಗಿ ನಿರ್ವಹಿಸಿದ ತೃಪ್ತಿ ಇದೆ. ಅಸೂಯೆಗೆ ಯಾವುದೇ ಕಾರಣವಿಲ್ಲ. ಅದೃಷ್ಟವಶಾತ್ ನನ್ನ ಜೀವನದಲ್ಲಿ ನನಗೆ ಇಬ್ಬರು ಸಮಾನ ಮನಸ್ಕರ ಪರಿಚಯ, ಮಾರ್ಗದರ್ಶನ ಲಭಿಸಿದವು. ಶ್ರೀ ಎಸ್. ಆರ್. ಶಂಕರನ್ ಮತ್ತು ಶ್ರೀ ಬ್ರಹ್ಮದತ್ ಶರ್ಮಾ. ಎಸ್. ಆರ್. ಶಂಕರನ್ ತ್ರಿಪುರಾ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದರು. ಇವರನ್ನು ಐಎಎಸ್ ಉಡುಪಿನಲ್ಲಿದ್ದ ಸನ್ಯಾಸಿ ಎನ್ನಬಹುದು. ಭಾರತ ಸರಕಾರದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು. ಮತ್ತೊಬ್ಬ ಹಿರಿಯರು ಬಿ. ಡಿ. ಶರ್ಮಾ. ನಾನಿನ್ನೂ ಮೂರು ತಿಂಗಳ ಮಗುವಾಗಿದ್ದಾಗಲೇ ಐಎಎಸ್.ಗೆ ಸೇರಿದವರು. ನೆಹ್ರು ವಿಶ್ವವಿದ್ಯಾಲಯದ (ಜೆ.ಎನ್.ಯು.) ವೈಸ್ ಛಾನ್ಸಲರಾಗಿ ಕಾರ್ಯ ನಿರ್ವಹಿಸಿದವರು. ರೈತರ ಹೋರಾಟಗಳೊಂದಿಗೆ ಗುರುತಿಸಿಕೊಂಡವರು. ಈಗಲೂ ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಬ್ಬರು ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದ ಶ್ರೇಷ್ಠ ಐ.ಎ.ಎಸ್. ಅಧಿಕಾರಿಗಳು.

ಹೊ: ನಿಮ್ಮನ್ನು ವಿನಾಕಾರಣ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಮಾಡಲಾಯಿತೆಂದು ಹೇಳಲಾಗುತ್ತದೆ. ಇದಕ್ಕೇನಾದರೂ ಕಾರಣಗಳಿವೆಯೆ ?


ಮ. ಗೋ.: ಇವೆಲ್ಲ ನಡೆಯುವಂಥವೇ. ಪರಸ್ಪರ ವಿಭಿನ್ನ ಆಸಕ್ತಿಗಳಿಂದ ಕೂಡಿರುವ ಸಮಾಜದಲ್ಲಿ ಸಮರೂಪದ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದ ಸಂದರ್ಭದಲ್ಲಿ ಅವನ್ನು ಕೆಲವರು ಮೆಚ್ಚಬಹುದು, ಕೆಲವರು ಅಸಹನೆ ತೋರಿಸಬಹುದು. ಘರ್ಷಣೆಗಳುಂಟಾಗುವುದು ಸ್ವಾಭಾವಿಕ.

ಹೊ: ಉನ್ನತ ಶಿಕ್ಷಣದ ವಿಷಯದಲ್ಲಿ ನಿಮ್ಮ ಅನಿಸಿಕೆ ಹೇಳಿ.

ಮ. ಗೋ.: ಶಿಕ್ಷಣ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಅನುಭವದಿಂದ ನಾನು ಇದನ್ನು ಸಭೆ ಸಮಾರಂಭಗಳಲ್ಲಿ ಸಹ ಹೇಳಿದ್ದೇನೆ. ಇದು ಉನ್ನತ ಶಿಕ್ಷಣದ ದಶಕ. 'ಆಪರೇಷನ್ ಬ್ಲಾಕ್ ಬೋರ್ಡ್ - ಸರ್ವಶಿಕ್ಷಾ ಅಭಿಯಾನ್' ಇಂಥ ಸರಕಾರದ ಕೆಲವು ಯೋಜನೆಗಳ ಕಾರಣ ಪ್ರೈಮರಿ ಮತ್ತು ಸೆಕಂಡರಿ ಶಿಕ್ಷಣ ವ್ಯವಸ್ಥೆ ಈಗಾಗಲೇ ಸರಿಸುಮಾರು ಸರಿಗೊಂಡಿದೆ. ಈಗ ಉನ್ನತ ಶಿಕ್ಷಣದ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ. ಹಣಕಾಸು ದೃಷ್ಟಿಯಿಂದ ಮಾತ್ರವಲ್ಲದೆ ವಿಜ್ಞಾನ ವಿಭಾಗಗಳನ್ನು ತೆರೆಯುವ ದೃಷ್ಟಿಯಿಂದಲೂ ಸಾಕಷ್ಟು ಪ್ರಯತ್ನ ನಡೆಯಬೇಕಾಗಿದೆ. ಗಣಿತ ಮತ್ತು ವಿಜ್ಞಾನಗಳ ವಿಷಯದ ಪಾಠ ಮಾಡಲು ಅಧ್ಯಾಪಕರುಗಳಿಲ್ಲದ ಪರಿಸ್ಥಿತಿ ಉಂಟಾಗಿದೆ. [illegible] ಹಣಕಾಸು, ವಿಜ್ಞಾನ ವಿಭಾಗಗಳ ಲಭ್ಯತೆ ಮತ್ತು [illegible] ನಾಯಕತ್ವದ ಗುಣಮಟ್ಟ ಈ ಮೂರು ಮುಖ್ಯವಾದವು. [illegible] ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಪರಿಪಾಠ ನಿಲ್ಲಬೇಕು. ಉನ್ನತ ಶಿಕ್ಷಣ ವ್ಯವಸ್ಥೆಗೆ ರಾಜ್ಯ ಹೆಚ್ಚು ಹೆಚ್ಚು ಬೆಂಬಲ ನೀಡಬೇಕು.

ಹೊ: ರಾಜಕೀಯ ನಾಯಕತ್ವದೊಂದಿಗಿನ ನಿಮ್ಮ ಸಂಬಂಧ ಯಾವ ಬಗೆಯದು ?

ಮ. ಗೋ.: ಕೆಲವು ಸಣ್ಣ ಪುಟ್ಟ ತೊಡಕುಗಳು ಇರುವಂಥವೇ. ಕೆಲವೊಮ್ಮೆ ನಮ್ಮ ಕರ್ತವ್ಯ ನಿಷ್ಠೆ ಕೆಲವರಿಗೆ ಇಷ್ಟವಾಗದೆ ಹೋಗಬಹುದು. ಉದಾಹರಣೆಗೆ, ಇಪ್ಪತ್ತು ಎಕರೆ ತೆಂಗಿನ ತೋಟವಿರುವ ಜಮೀನುದಾರನೊಬ್ಬನಿಗೆ ಪ್ರಯೋಜನವಾಗುವಂತೆ, ಸಾಮಾನ್ಯನೊಬ್ಬನ ಜಮೀನು ಸ್ವಾಧೀನದ ಪ್ರಕರಣವನ್ನು ಹೇಳಬಹುದು. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅಂಶವೇನೂ ಇರಲಿಲ್ಲ. ಆಗ ಭೂಸ್ವಾಧೀನ ಸಂಬಂಧದ ಅಧಿಕಾರಿಯಾಗಿದ್ದ ನಾನು, ಸಮಾಜದ ಒಳಿತಿಗೆ ಸಹಾಯಕವಾಗದ, ಕಾನೂನು ದೃಷ್ಟಿಯಿಂದ ಸಮರ್ಥನೀಯವಲ್ಲದ ಆ ಪ್ರಕ್ರಿಯೆಯನ್ನು ನಿರಾಕರಿಸಿದೆ.



ನಿಯಮದಂತೆ ನಡೆದುಕೊಂಡೆ. ಸಂಬಂಧಪಟ್ಟವರು ನಿಯಮ ಉಲ್ಲಂಘಿಸಿ ಮುಂದುವರಿಯುವಂತೆಯೂ ಇರಲಿಲ್ಲ. ಇಂಥ ಸಂದರ್ಭದಲ್ಲಿ ಅಸಮಾಧಾನ ತಲೆದೋರುವುದು ಸಹಜ.

ಹೊ: ಇಂಥ ಹಲವು ತೊಡಕುಗಳಿದ್ದಾಗ್ಯೂ, ಒಬ್ಬ ಐಎಎಸ್ ಅಧಿಕಾರಿಯಾಗಿ ಸಮಾಜಕ್ಕೆ ಒಳಿತಾಗುವ ಕೆಲಸಗಳನ್ನು ಮಾಡಬಹುದೆನ್ನಿಸುತ್ತದೆಯೆ ?

ಮ. ಗೋ.: ಖಂಡಿತವಾಗಿ ಹೌದು. ನಾವು ಸೇವೆಗೆ ಸೇರುವಾಗ ಅಂದಾಜು ಮಾಡಿಕೊಂಡಿದ್ದಷ್ಟಲ್ಲದಿದ್ದರೂ ಸಮಾಜ ಮತ್ತು ದೇಶದ ಅಭಿವೃದ್ಧಿಯ ನಿಟ್ಟಿನಲ್ಲಿ ತಕ್ಕಮಟ್ಟಿನ ಸಾಧನೆ ಮಾಡಬಹುದು. ಪ್ರಾರಂಭಿಸುವ ಉಪಕ್ರಮಗಳನ್ನು ಮಧ್ಯೆ ಕೈಬಿಡದೆ ನಿರಂತರ ಪೋಷಿಸಿಕೊಂಡು ಹೋಗುವುದು ಬಹಳ ಮುಖ್ಯ.

ಹೊ: ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳ ಪೈಕಿ ಯಾರಿಗೆ ಹೆಚ್ಚು ಸಾಧನೆ ಮಾಡುವ ಅವಕಾಶಗಳಿವೆ ? ಇವರ ಮಧ್ಯೆ ಪರಸ್ಪರ ಅಸೂಯೆ ಇರುವ ಸಾಧ್ಯತೆ ಇದೆಯೆ ?

ಮ. ಗೋ.: ಅವರವರಿಗೆ ಬೇರೆ ಬೇರೆ ಕರ್ತವ್ಯಗಳಿವೆ. ತಮ್ಮ ಕ್ಷೇತ್ರಗಳಲ್ಲಿ ಅವರು ಸಾಧನೆ ಮಾಡಬಹುದು. ಅಸೂಯೆಗೆ ಅವಕಾಶವಿಲ್ಲ. ಆದರೆ, ಅಧಿಕಾರಿಗಳನ್ನು ಪದೇ ಪದೇ ಎತ್ತಂಗಡಿ ಮಾಡುತ್ತ ಹೋಗುವುದರಿಂದ, ಪ್ರಾರಂಭಿಸಿದ ಕಾರ್ಯಕ್ರಮಗಳು ವಿಳಂಬವಾಗಿ [illegible] ವಾಗುತ್ತದೆ. ಇದೊಂದು ಅಡಚಣೆ. ಆಡಳಿತ [illegible] ಅಧಿಕಾರಿಗಳು ಒಂದು ಸ್ಥಳದಲ್ಲಿ ಕನಿಷ್ಠ ಮೂರು [illegible]

ಅವಕಾಶವಿರಬೇಕೆಂದು ಸಲಹೆ ಮಾಡಿದೆ. ಇದು ಸ್ವಾಗತಾರ್ಹ ವಿಷಯ. ಆಡಳಿತ ಕಾರ್ಯನಿರ್ವಾಹಕರಾಗಲಿ ಅಥವಾ ರಾಜಕೀಯ ಕಾರ್ಯನಿರ್ವಾಹಕರಾಗಲಿ – ಸಂವಿಧಾನದ ಆಶಯಗಳಿಗೆ ಬದ್ಧರಾಗಿ ಕಾರ್ಯ ನಿರ್ವಹಿಸಲು ವಚನ ಬದ್ಧರಾಗಿರುತ್ತಾರೆ. ಇಲ್ಲಿ ಹಿತಾಸಕ್ತಿಗಳ ಸಂಘರ್ಷಕ್ಕೆ ಅವಕಾಶವಿರಬೇಕಾಗಿಲ್ಲ.

ಹೊ : ನಿಮ್ಮ ದೀರ್ಘ ಆಡಳಿತದ ಅನುಭವದಿಂದ ಭ್ರಷ್ಟಾಚಾರದ ಮೂಲವನ್ನು ಎಲ್ಲಿ ಗುರುತಿಸಬಹುದು ಎಂಬುದನ್ನು ತಿಳಿಸುವಿರಾ ?

ಮ. ಗೋ. : ಭ್ರಷ್ಟಾಚಾರ ಕೆಳಮಟ್ಟದಿಂದಲೇ ಪ್ರಾರಂಭವಾಗುತ್ತದೆ. ಯಾರ ಕಡೆಗೋ ಬೆರಳು ತೋರಿಸುವುದಕ್ಕಿಂತ, ನಾಗರಿಕರು ತಮ್ಮ ಕರ್ತವ್ಯವನ್ನು ಅರಿತುಕೊಂಡು ಅಧಿಕಾರ ದುರುಪಯೋಗದ ಅವಕಾಶವನ್ನು ತಡೆಯಬಹುದು. ಈ ನಿಟ್ಟಿನಲ್ಲಿ ಲೋಕಾಯುಕ್ತ ಸಂಸ್ಥೆ ಅದ್ಭುತ ಕಾರ್ಯಮಾಡುತ್ತಿದೆ. ಅದೇ ರೀತಿ ಮಾಹಿತಿ ಹಕ್ಕು ಚಲಾಯಿಸುವ ಅವಕಾಶ ನಾಗರಿಕರಲ್ಲಿ ಸಾಕಷ್ಟು ಅರಿವು ಮೂಡಿಸಿದೆ. ಇದಕ್ಕೆ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವ ಮೂಲಕ ಹೆಚ್ಚು ಪ್ರಗತಿ ಸಾಧಿಸಬಹುದು. ಉದಾಹರಣೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಟಚ್‌ಸ್ಕ್ರೀನ್ ಕಟ್ಟೆಯನ್ನು ರೂಢಿಗೆ ತಂದಿರುವ ವಿಷಯವನ್ನು ಹೇಳಬಹುದು. ಇದರ ಸಹಾಯದಿಂದ ಕಡತಗಳ ಚಲನವಲನವನ್ನು ತಿಳಿದುಕೊಳ್ಳಬಹುದು. ನೀವು ಕೊಟ್ಟಿರುವ ಅರ್ಜಿಯ ಗತಿ ಏನಾಯಿತು ಎಂದು ತಿಳಿದುಕೊಳ್ಳಲು ಲಂಚ ನೀಡಬೇಕಾಗುವುದಿಲ್ಲ. ಸ್ಕ್ರೀನಿನ ಮೇಲೆ ನಿಮ್ಮ ಅರ್ಜಿ ಸಂಖ್ಯೆಯನ್ನು ನಮೂದಿಸುವ ಮೂಲಕ ಯಾರೂ ತಿಳಿದುಕೊಳ್ಳಬಹುದು. ಆಡಳಿತದ ದೃಷ್ಟಿಯಿಂದ ರಹಸ್ಯ ಕಾಪಾಡಬೇಕಾದ ಅಗತ್ಯವಿಲ್ಲದ ಸಾರ್ವಜನಿಕ ಶಿಕ್ಷಣ, ಸಾರಿಗೆ, ಆರೋಗ್ಯ, ಗೃಹನಿರ್ಮಾಣ, ಕಾಮಗಾರಿ ಇತ್ಯಾದಿ ಕ್ಷೇತ್ರಗಳ ಕಾರ್ಯ ಹೇಗೆ ನಡೆಯುತ್ತದೆ ಎಂಬುದು ಸಾರ್ವಜನಿಕರಿಗೆ ತಿಳಿಯುವಂತಾಗಬೇಕು. ಭ್ರಷ್ಟಾಚಾರ ನಾಗರಿಕರ ಜೀವನಮಟ್ಟದ ಮೇಲೆ ಎಂಥ ಕೆಟ್ಟ ಪರಿಣಾಮ ಉಂಟುಮಾಡುತ್ತದೆ ಎಂಬುದು ಅವರ ಅರಿವಿಗೆ ಬರುವಂತೆ ಮಾಡಬೇಕು. ಉತ್ತಮ ಗುಣಮಟ್ಟದ ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಾರಿಗೆ ಸಂಪರ್ಕ, ಜನರಿಗೆ ಲಭಿಸುವಂತಾಗಬೇಕು. ಆಡಳಿತದಲ್ಲಿ ಜನರ ಭಾಗವಹಿಸುವಿಕೆ ಎಂದರೆ ಸರಕಾರದ ಕಾರ್ಯಕ್ರಮಗಳಲ್ಲಿ ಜನರು ಭಾಗವಹಿಸುವುದಲ್ಲ, ಬದಲು ಜನರ ಕಾರ್ಯಕ್ರಮದಲ್ಲಿ ಸರಕಾರ ಭಾಗವಹಿಸುವುದು. ಅದು ನಿಜವಾದ ಅರ್ಥದಲ್ಲಿ ಜನರಿಗೆ ನೀಡುವ ಅಧಿಕಾರವಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ನಡೆದ ಕೆರೆಗಳ ರಕ್ಷಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ, ಬಿಸಿಯೂಟ ಮುಂತಾದ ಕಾರ್ಯಕ್ರಮಗಳಲ್ಲಿ ಜನರ ನೇರ ಭಾಗವಹಿಸುವಿಕೆಯಿಂದ ಒಳ್ಳೆಯ ಪರಿಣಾಮಗಳುಂಟಾಗಿವೆ. ತಿಳಿವಳಿಕೆ ಮೂಡಿದ ಜನರು ಭ್ರಷ್ಟಾಚಾರವನ್ನು ಸಹಿಸಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಜನರ ಒತ್ತಡದಿಂದಲೇ ಅನೇಕ ವಿಧೇಯಕ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ಶಿಕ್ಷಣ, ಸಾರಿಗೆ, ವೈದ್ಯಕೀಯ ಸೇವೆ ಇತ್ಯಾದಿ ವಿಷಯಗಳಲ್ಲಿ ಸರಕಾರ ತನ್ನ ಹೊಣೆಯನ್ನು ಎಂದಿಗೂ ಮರೆಯತಕ್ಕದ್ದಲ್ಲ.

ಹೊ : ನಿಮ್ಮ ಮೇಲೆ ಪ್ರಭಾವ ಬೀರಿದ ಭಾರತೀಯ ಸಾಹಿತಿಗಳು ಯಾರು ?

ಮ. ಗೋ. : ಮುಖ್ಯವಾಗಿ ಶರತ್‌ಚಂದ್ರರು. ತೆಲುಗಿನಲ್ಲಿ ಶ್ರೀ ಶ್ರೀ ಮತ್ತು ಚಲಂ ಅಲ್ಲದೆ ಬೇರೆ ಬೇರೆ ಹಲವು ಸಾಹಿತಿಗಳನ್ನು ಹೆಸರಿಸಬಹುದು.

ಹೊ : ಇಷ್ಟು ವೇಳೆ ನೀಡಿದ್ದಕ್ಕೆ ನಿಮಗೆ ಕೃತಜ್ಞರು.

ಮ. ಗೋ. : ನಿಮಗೂ ಕೃತಜ್ಞತೆಗಳು. 'ಹೊಸತು' ಜೊತೆಗೆ ಸಂಪರ್ಕ ನನಗೆ ಸಂತೋಷದ ವಿಷಯ. ಎಲ್ಲವೂ ಕೆಟ್ಟುಹೋಗಿಲ್ಲ ಎಂಬ ಆಶಾಭಾವನೆ ಹುಟ್ಟಿಸುವುದು ಇಂಥ ಪತ್ರಿಕೆಗಳು.



ಸಂದರ್ಶನ ಲೇಖನ ಮತ್ತು ಚಿತ್ರಗಳು : **ಕೆ. ಪಿ. ಸ್ವಾಮಿ**

ನಂ. ೧೬೭, ೧೧ನೇ ಮುಖ್ಯರಸ್ತೆ, ೩ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು - ೫೬೦ ೦೫೮



ಆಲ್ಬರ್ಟೋ ಮೊರಾವಿಯ

"ಒಳ್ಳೆಯ ಲೇಖಕರೆಲ್ಲರೂ ಒಳ್ಳೆಯ ಸಂಗೀತ ನಿರ್ದೇಶಕರಿದ್ದಂತೆ; ಯಾವುದೋ ಒಂದೇ ರಾಗ, ಒಂದೇ ತಾಳದ ಏಕತಾನತೆಯ ಜಾಡಿಗೆ ಸಿಕ್ಕು ಬೀಳುತ್ತಾರೆ. ಜೀವನದ ಯಾವುದೋ ಒಂದೇ ಸಮಸ್ಯೆಗೆ ಪಕ್ಕಾ ಪರಿಹಾರಕ್ಕಾಗಿ ಯಡತಾಕುತ್ತಿರುತ್ತಾರೆ."

ಮೊರಾವಿಯ ಕಳೆದ ಶತಮಾನದ ೭೦-೮೦ರ ದಶಕದ, ಇಟಲಿಯ ಸಾಹಿತಿ ಹಾಗೂ ಪತ್ರಕರ್ತ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ರೋಮಿನ ಮುಸೋಲಿನಿ ಆರ್ಭಟಕ್ಕೆ ಸಿಲುಕಿ ದೇಶ ತ್ಯಾಗ ಮಾಡಬೇಕಾಗಿ ಬಂತು.

ಮೊರಾವಿಯನ ಮೇಲಿನ ಮಾತುಗಳು ನನ್ನನ್ನು ಹಿಡಿದು ನಿಲ್ಲಿಸಿದವು. ಎರಡನೇ ಜಾಗತಿಕ ಯುದ್ಧದ ಯುರೋಪಿಯನ್ ಲೇಖಕರ ಪೈಕಿ ಈತನೂ ಅಗ್ರ ಪಂಕ್ತಿಗೆ ಸಲ್ಲುವವನು. ರೋಮಿನ ಮುಸೋಲಿನಿಯ ಅವಕೃಪೆಗೆ ಒಳಗಾದವನು. ಕಾರ್ಲ್ ಮಾರ್ಕ್ಸ್, ಫ್ರಾಯ್ಡ್‌ರಿಂದ ಪ್ರಭಾವಿತನಾದ ಈ ಸಾಹಿತಿ ಅಂದಿನ ಮಧ್ಯಮ ವರ್ಗದ ದುರಂತ ಪ್ರೇಮ, ಮದುವೆ, ಒಂಟಿತನ ಇತ್ಯಾದಿಗಳ ಬಗ್ಗೆ ಬರೆಯುತ್ತಾನೆ. ಇಟಲಿಯ ಸುಪ್ರಸಿದ್ಧ ಸಿನೆಮಾ ದಿಗ್ದರ್ಶಕರಾದ ಡಿ ಸೀಕಾ, ಬರ್ಟುಲುಚಿ, ಗೊಡಾರ್ಡ್ ಮುಂತಾದವರು ಈತನ ಕಾದಂಬರಿಗಳನ್ನು ಮರೆಯಲಾಗದ ಚಲನಚಿತ್ರಗಳನ್ನಾಗಿಸಿದ್ದಾರೆ. ಎ ಕಾನ್‌ಫಾರ್‌ಮಿಸ್ಟ್, ಟೂ ವಿಮೆನ್, ಎ ಗೋಸ್ಟ್ ಅಟ್ ನೂನ್, ದಿ ಎಂಪ್ಟಿ ಕ್ಯಾನ್‌ವಾಸ್ ಜಗತ್ತಿನ ಶ್ರೇಷ್ಠ ಸಿನೇಮಾಗಳಾಗಿವೆ. ಇಟಲಿಯ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯನಾಗಿಯೂ ಮೊರಾವಿಯ ಕೆಲಸ ಮಾಡಿದ್ದ. ಅನಾಥ ಪ್ರಜ್ಞೆ, ಅಸ್ತಿತ್ವವಾದ ಮುಂತಾದವು ಅಂದಿನ ಯುರೋಪ್ ಲೇಖಕರಲ್ಲಿ ಕಂಡುಬರುತ್ತಿದ್ದ ವಿಚಾರಗಳು.

"ಹಿ ಅಂಡ್ ಐ" ಅವನ ಶ್ರೇಷ್ಠ ಕಥೆಗಳ ಪೈಕಿ ಒಂದು. ಮೂಲ ಕಥೆಯ ಇಂಗ್ಲಿಷ್ ಅನುವಾದವನ್ನು ಸಾಕಷ್ಟು ಬದಲಾಯಿಸಿ ಈ ರೂಪಕ್ಕೆ ತರಲಾಗಿದೆ.

ಈ ನನಗೆ ನಾನೇ ಮಾತಾಡಿಕೊಳ್ಳೋ ಚಟ, ನನ್ನ ಹೆಂಡತಿ ನನ್ನ ಬಿಟ್ಟು ಹಡೆದ ಸ್ವಲ್ಪ ದಿನಗಳ ತರುವಾಯ ಶುರುವಾಗಿದ್ದು. ಇನ್ನೂ ಒಂದ್ಮಾತು. ಅವಳು ಹಾಗೆ ದೂರಾಗಿದ್ದಕ್ಕೆ ಇದೇ ಕಾರಣ. ನನ್ನ ಮೌನ ಅವಳಿಗೆ ತುಂಬ ಬೋರಾಗಿಹೋಗಿತ್ತು. ನಿಜ. ಅವಳ ಜೊತೆ ನಾನು ಮಾತಾಡ್ತಾ ಇರ್ಲಿಲ್ಲ. ಹಾಗೆ ನೋಡಿದ್ರೆ ನಾನು ಯಾರ ಜೊತೆಗೂ ಮಾತಾಡ್ತಿರಲಿಲ್ಲ. ನಾನು ಇದ್ದದ್ದೇ ಹಾಗೆ. ಆದರೆ ಅವಳ ಜೊತೆ ಯಾಕೆ ಹಾಗಿದ್ದೆ ಅಂದ್ರೆ ನಾನು ಅವಳನ್ನು ತುಂಬ ಪ್ರೀತಿಸ್ತಾ ಇದ್ದೆ. ಪ್ರೀತಿಗೆ ಮಾತ್ಯಾಕೆ ಬೇಕು ಅಲ್ಲವಾ ? ಪ್ರೀತಿಸೋರು ಜೊತೇಲಿದ್ರೆ ಸಾಕು. ಅವಳು ಹತ್ತಿರದಲ್ಲೇ ಇರ್ಬೇಕು. ಅವಳನ್ನು ನೋಡ್ತಾನೆ ಇರ್ಬೇಕು ಅಷ್ಟೆ.

ಅವಳ ಜೊತೆ ಮಾತಾಡ್ತಾ ಇರ್ಲಿಲ್ಲ ಅನ್ನೋದೇ, ಅವಳು ಹೊರಟುಹೋದಮೇಲೆ, ನನ್ನ ಜೊತೆ ನಾನೇ ಹರಟಿಕೊಳ್ಳಕ್ಕೆ ಕಾರಣವಾಯ್ತೇನೋ.

ನಾನೊಬ್ಬ ಚಪ್ಲಿ ಹೊಲಿಯೋನು. ನಿಮಗ್ಗೊತ್ತಿಲ್ಲ. ಆ ಕೆಲಸಕ್ಕೆ ತುಂಬ ಸ್ಟಡೀ ಹ್ಯಾಂಡ್ ಬೇಕು. ಚಪ್ಲಿ ಹೊಲಿಯೋದೂ ಒಂದು ಕಲೆ ಕಣ್ರೀ. ಸ್ವಲ್ಪಾನೂ ತಪ್ಪಾಗಬಾರ್ದು. ಮನುಷ್ಯರ ಕಾಲುಗಳಿಗೆ ಸಣ್ಣ ಸಣ್ಣ ತಪ್ಪುಗಳಾದ್ರೂ ತಡಕೊಳ್ಳಕ್ಕೆ ಆಗಲ್ಲ. ಹಾಗಾಗಿ ತುಂಬ ಟೆನ್‌ಷನ್ನು. ಸಾಯಂಕಾಲ ಮನೆ ತಲುಪ್ಪೋವಾಗ ಕಣ್ಣುಗಳೆಲ್ಲ ಕೆಂಡದ್ಹಾಗೆ ಕೆಂಪಗಾಗ್ತಾ ಇದ್ದವು. ತಡೀಲಾರದ ತಲೆಸಿಡಿತ. ಆ ಗುಚ್ಛೀ ಮೊಳೆಗಳನ್ನ ಬಾಯ್ತುಂಬ ತುಂಬ್ಕೊಂಡು, ಒದ್ದೆಮಾಡಿ, ಒದ್ದೆಮಾಡಿ ಲೆದರ್ ಸೋಲ್‌ಗೆ ಹೊಡೀಬೇಕು. ನಾನು ಎಷ್ಟೇ ಬಡಕೊಂಡ್ರೂ ನಿಮಗ್ಯಾರಿಗೂ ಈ ಸಂಕಟ ತಿಳಿಯೋದೇ ಇಲ್ಲ. ಇಲ್ನೋಡಿ ನನ್ನ ತುಟಿಗಳೆಲ್ಲ ಊದಿಕೊಂಡು ಒಳ್ಳೇ ಮಂಗನನ್ಮಗನ ಥರಾ ಕಾಣಿಸ್ತೀನಿ. ಇಂಥಾ ಹೊತ್ನಲ್ಲಿ ಮನೆಗೆ ಬಂದಾಗ ನನಗೇನು ಬೇಕ್ಹೇಳಿ ?... ನಗುಮುಖ. ಬಿಸಿ ಬಿಸಿ ಕಾಫಿ! ಆದರೆ ಇಲ್ಲಿ ಅದ್ಯಾವುದೂ ಇಲ್ಲ. ಬರೀ ಕತ್ಲೆ. ಆ ದರಿದ್ರ ನಲ್ಲಿ ನೀರಿನ ತೊಟ-ತೊಟ. ಈ ಮೌನ ಅಂದ್ರೆಲ್ಲ ಅದ್ಯಾವಾಗ ಚೆನ್ನ ಅಂದ್ರೆ ಪ್ರೀತಿಸೋರು ಜೊತೆಗಿದ್ದಾಗ ಮಾತ್ರ. ಬೇಕೂಂದ್ರೆ ಮಾತು ಸಾಧ್ಯ ಇರ್ಬೇಕು. ಬರೀ ಮೌನವೇ ಇದ್ರೆ ಏನಿಲ್ಲ ಅಷ್ಟೆ. ಚಿತ್ರಹಿಂಸೆ ಆಗೋಗತ್ತೆ. ಅವ್ಳು ಅವರಮ್ಮನ ಮನೆಗೆ ಹೊರಟುಹೋದ್ಮೇಲೆ ಇಲ್ಲಿ ನಾನೇ ಕೂಳು ಬೇಯಿಸ್ಕೊಳ್ತೀನಿ. ಗೂಬೆ ಥರಾ ಒಬ್ನೇ ಕೂತ್ಕೊಂಡು ತಿಂತೀನಿ. ನಿಧಾನವಾಗಿ, ಗೊತ್ತೇಆಗದಂಗೆ ಯೋಚ್ನೆಗಳು ಬರ್ತಾವೆ. ಇಲ್ಲಿ ಈ ಮೂಲೇಲಿ ಕೂತ್ಕೊಂಡು ಯೋಚ್ನೆ ಮಾಡ್ತಾ... ಮಾಡ್ತಾ ಮಾತುಗಳು ಬರ್ತವೆ.

ಮೊದಮೊದಲು ನಾನು ಯಾರನ್ನೂ ಉದ್ದೇಶಿಸಿ ಮಾತಾಡ್ತಾ ಇರ್ಲಿಲ್ಲ. ಸುಮ್ನೆ. ಅದು ನನಗೂ ಅಲ್ಲ, ಬೇರೆಯವರಿಗೂ ಅಲ್ಲ. ಉದಾಹರಣೆಗೆ ಹೀಗೆ...

ವಿಜಯವಾಮನ

ಅವನು–ನಾನು



'ಎಂಥಾ ಥಂಡಿ ಈ ದರಿದ್ರ ಮನೇಲಿ...' ಅಥವಾ ಅಟ್ಟದಲ್ಲಿ ಹೆಗ್ಗಣಗಳು ಇಲ್ದೇ ಹೋಗಿದ್ರೆ ಎಷ್ಟು ನಿಶ್ಶಬ್ದವಾಗಿರತಿತ್ತು. ಅಥವಾ 'ಈ ನಲ್ಲಿ ತೊಟ-ತೊಟ ನಿಲ್ಲೋದೇ ಇಲ್ವಾ ಶಿವಾ ?' ಅಥವಾ 'ಹಾಸಿಗೆ ಸುತ್ತಿಡಬೇಕಿತ್ತು. ಇರಲಿ ಹಾಗೆ. ಲೇಟಾಗಿದೆ. ನಾಳೆ ಸುತ್ತಿಟ್ರಾಯ್ತು.'

ಈ ಮಾತುಗಳ್ನೆಲ್ಲ ಜೋರಾಗೇ ಹೇಳ್ತಾ ಇದ್ದೆ. ಕೆಲವೊಮ್ಮೆ ತುಂಬ ಜೋರಾಗಿ. ಅದೆಲ್ಲ ಇಂಪಾರ್ಟೆಂಟ್ ಅಲ್ಲ ಅಂತ ಗೊತ್ತು. ಆದರೂ ನನ್ನ ದನೀನ ನನಗೇ ಕೇಳಕ್ಕೆ ಒಂಥರಾ ಖುಷಿ ಆಗೋದು.

ಒಂದು ದಿವಸ ಹೀಗೆ ಅಡಿಗೆಮನೇಲಿ ಕೂತಿದ್ದೆ. ನಾನಂದೆ

'ಗುಂಡು ಇದ್ದಿದ್ರೆ ಚೆನ್ನಾಗಿರ್ತಿತ್ತು. ಎರಡು ನೈಂಟೀ ಹಾಕಿದ್ರೆ ಹೈಕ್ಲಾಸ್ ನಿದ್ದೆ.'

ಆವಾಗ ಇದ್ದಕ್ಕಿದ್ದ ಹಾಗೇ, ಹೇಗೆ ಅಂತ ನನಗ್ಗೊತ್ತಿಲ್ಲ,

'ಸುಬ್ರಾಜೂ ನೀನೊಂದು ಹೇಳ್ತಾಂಡೀ ಕಣೋ.'

ನನ್ನ ಮಾತುಗಳಿಗೆ ನನ್ನ ದನೀನೇ! ನನಗಿಂತ ಇನ್ನೂ ಜೋರಾಗಿ ಆವಾಜ್ ಹಾಕ್ತು.

'ಅದು ನಿನಗೂ ಗೊತ್ತೂ ಅನ್ನು. ಗುಂಡಿದ್ದಿದ್ರೆ ಚೆನ್ನಾಗಿರ್ತಿತ್ತು. ಯಾರಲ್ಲ ಅಂದ್ರು, ಆದ್ರೆ ಸುಖ ಇದ್ಯಾ ಸುಖಾ? ಒಂದು ಫುಲ್ ಬಾಟಲಿ ಹಾಕಿದ್ರೂ ನಿನಗವಳನ್ನ ಮರೆಯಕ್ಕಾಗಲ್ಲ. ಅವಳು ವಾಪಾಸು ಬರೋಲ್ಲ. ಗುಂಡು ಚೆನ್ನ ಮಾರಾಯಾ. ಆದ್ರೆ ಅವಳೂ ಇರ್ಬೇಕು.'

ನಿಜವಾದ್ಮಾತು. ಕೇಳಿ ತಬ್ಬಿಬ್ಬಾಗೋದೆ. ಬಿಡಲಿಲ್ಲ. ನಾನೂ ಕೇಳ್ದೆ. ಅಂದ್ರೆ ನನ್ನ ಮೊದಲ ದನಿ ಕೇಳ್ತು.

'ನೀನೇನೋ ಸರಿ. ಆದ್ರೆ ಎಲ್ಲ ಮುಗೀತಲ್ಲ? ಏನುಳಿದಿದೆ ಈಗ ? ನಲವತ್ತಾಯ್ತು ನನಗೆ... ಇಪ್ಪತ್ತೈದರ ಹೆಣ್ಣು ಸಂಬಂಧ ಮುರ್ಕೊಂಡು ಹೋದ್ಮೇಲೆ ಬೇರೆ ಯಾರು ಸಿಗ್ತಾರೆ ? ಗುಂಡು ಬಿಟ್ರೆ ಬೇರೆ ಏನಿದೆ ಇಲ್ಲಿ ?'

ಆ ದನಿ ಮಾತಾಡ್ತು. 'ಕೇಳಿಲ್ಲಿ, ಬರೀ ಒಣ ಹರಟೆ ಬೇಡ. ನಿಂಗಿನ್ನೂ ಅವಳು ವಾಪಸ್ ಬರ್ತಾಳೆ ಅಂತ ಆಸೆ ಇದೆ.'

'ಯಾರು ಹೇಳ್ತಾರೆ ಹಾಗಂತ, ಆ ಆಸೇನ ಯಾವತ್ತೋ ಬಿಟ್ಟುಬಿಟ್ಟೀದೀನಿ ನಾನು. ನಿಜವಾಗಿ.'

ಅವನು ಹೇಳಿದ - 'ಇಲ್ಲ, ನಿನಗಿನ್ನೂ ನಂಬಿಕೆ ಇದೆ. ಇಲ್ಲದಿದ್ರೆ ಯಾಕೆ ಹಾಗೆ, ಎಲ್ಲೆಂದರಲ್ಲಿ, ಬಚ್ಚಲಮನೇಲಿ, ಅಡಿಗೆ ಮನೇಲಿ ಒಬ್ನೆ ಅವಳ ನೆನಪಲ್ಲಿ ಅಳ್ತಾ ಬಿದ್ದಿರ್ತೀಯಾ ?'

ಅಲ್ಲಿಗೆ ಈಗ ನನಗೆ ಎರಡೆರಡು ದನಿ ಇದೆ ಅಂತ ಗೊತ್ತಾಯ್ತು. ಒಂದು ನನ್ನ ಪರವಾಗಿ ಮಾತಾಡತ್ತೆ, ಇನ್ನೊಂದು ಮತ್ತೊಂದರ ಪರವಾಗಿ. ಆ ಮತ್ತೊಂದು ನಾನೇ ಆಗಿರಬಹುದು; ನಾನಾಗಿಲ್ದೇನೂ ಇರಬಹುದು. ಹೀಗೆ ನನಗೇ ಅರಿವಿಲ್ಲದೆ ನನ್ನ ಮಾತುಗಳೆಲ್ಲ ಸ್ವಗತದಿಂದ ಸಂವಾದಗಳಾಗಿಬಿಡ್ತಿದ್ದವು. ಕೆಲವು ಬಾರಿ ಸಂವಾದಗಳು ಮಿತಿಮೀರಿ ವಾಗ್ವಾದಗಳೂ ಆಗ್ತಾಇದ್ದವು.

ಈ ವಾಗ್ವಾದಗಳೆಲ್ಲ ಯಾವಾಗ್ಲೂ ಜಟಾಪಟಗಳೇ ಆಗ್ತಾಇರ್ಲಿಲ್ಲ. ಕೆಲವೊಮ್ಮೆ ಒಪ್ಪಂದವಾಗಿ, ಸಮಾಧಾನವೂ ಆಗ್ತಿತ್ತು. ಒಂದು ಸಂಜೆ, ಗುಂಡು ಸ್ವಲ್ಪ ಜಾಸ್ತೀನೇ ಆಗಿತ್ತೂಂತನ್ನಿಸತ್ತೆ. ಬಚ್ಚಲ ಮನೇಲಿ ಒಂದು ಕನ್ನಡಿ ಇದೆ. ಸ್ವಲ್ಪ ದೊಡ್ಡದೇ. ಅದರ ಮುಂದೆ ನಿಂತು ಮಂಗನ ಥರಾ ನನಗೆ ನಾನೇ ಅಣಕಿಸಿಕೊಳ್ತಾ ಇದ್ದೆ. ಒಮ್ಮೆಗೆ ಅವನ ದನಿ.

'ನೋಡಿಲ್ಲಿ, ಭಾಳಾ ದಿನದ ಮೇಲೆ ನಾವಿಬ್ರೂ ಸೇರಿದೀವಿ. ನೀನು ನೋಡಿದ್ರೆ ಎಣ್ಣೆ ಹಾಕ್ಕೊಂಡು ಬಂದಿದೀಯ. ಸರಿಯಾಗಿ ನಿಂತುಕೊಳ್ಳಕ್ಕೂ ಆಗ್ತಿಲ್ಲ. ಮಂಗನ ಥರಾ ಬೇರೆ ಆಡ್ತಾ ಇದಿಯಾ. ವಯಸ್ಸಾಯ್ತು, ನಾಚಿಕೆ ಆಗಲ್ವ ?

ಅವನು ಬೈತಾ ಇದಾನೋ, ಎಣ್ಣೆ ಹಾಕಕ್ಕೆ ಸಪ್ಪೋರ್ಟ್ ಮಾಡ್ತಾ ಇದಾನೋ ಗೊತ್ತಾಗ್ಲಿಲ್ಲ. ಹೀಗೆ ಒಂದಿಷ್ಟು ದಿವಸಗಳು ಹೋದವು. ಜಗಳಕ್ಕಿಂತ ಒಪ್ಪಂದವೇ ಜಾಸ್ತಿ. ನಾನು ಎಣ್ಣೆ ಹಾಕೋದು. [illegible]

[illegible]

ಆಯ್ಕೆ

ಒಂದು ಕಡೆ
ಬದುಕು;
ಇನ್ನೊಂದು ಕಡೆ
ಬಂದೂಕು!
ಮನುಕುಲ
ಯಾವುದನ್ನು
ಆರಿಸಿಕೊಳ್ಳಬೇಕು ?

ಪಿ.ಪಿ.ಕೆ.

ಹೊರ ಹಾಕಿ ಕೋತಿ ಆ್ಯಕ್ಟಿಂಗ್ ಮಾಡ್ದೆ, ಆಶ್ಚರ್ಯ. ಅವನು ಮಾತ್ರಾ ಘನ ಗಂಭೀರ ಸಿಕ್ಕಾಪಟ್ಟೆ ಸೀರಿಯಸ್ಸು. ಬಾಯೇ ಬಿಡ್ತಿಲ್ಲ. ಹುಬ್ಬುಗಂಟು. ಸ್ವಲ್ಪ ಹೊತ್ತು ದುರುಗುಟ್ಟುಕೊಂಡು ನೋಡಿ ಮೆಲ್ಲಗೆ ಸುರುವಿಟ್ಟ.

'ಸುಬ್ರಾಜು, ನಿನ್ನ ಸಾವಾಸಾ ಸಾಕಿನ್ನು'

ಯಾಕೆ ?

'ಯಾಕೇಂದ್ರೆ ?' ಕನ್ನಡಿಯೊಳಗಿಂದ ಕೇಳ್ದ. 'ನೀನು ಪೂರಾ ಬರಬಾದಾಗಿ ಹೋದೆ. ಅಲ್ಲ ಈ ನಮೂನೀ ಕುಡಿಯುದಾ ? ಕುಡುಕ ನನ್ಮಗನೇ. ಹೆಂಡ್ತೀನ ಕಳಕೊಂಡಿ. ಈಗ ಕೆಲಸಾನೂ... ಬೆಪ್ಪುತಕಡೀ.'

'ಯಾರು ? ಯಾರು ಹಾಗ್ಹೇಳಿದ್ದು ? ಯಾವನವನು ?'

'ನಾನು ಕಣೋ, ನಾನೇ, ನಾನೇಳಿದ್ದು. ನಾನೇ ಯಾಕೆ...; ಕೇರಿಯವರೆಲ್ಲ ಹೇಳ್ತಾ ನೀನು ಕುಡುಕ ನನ್ಮಗಾಂತ. ಚಪ್ಲಿ ರಿಪೇರಿಗೇಂತ ಯಾವ ಜನ ಬರ್ತಿದಾರೆ ನಿನ್ನತ್ರ ಮುಟ್ಠಾಳ !'

ನನಗೆ ತಲೆ ಕೆಟ್ಟ್ಹೋಯ್ತು. ರೇಗೋಯ್ತು.

'ಸರಿ ಹಾಗಾದ್ರೆ, ಈಗ ನಾನೇನ್ಮಾಡಬೇಕೂಂತೀಯಾ ?'

'ಸ್ವಲ್ಪ ವಿಚಾರ ಮಾಡು. ಒಂದು ನಿರ್ಧಾರಕ್ಬಾ.'

'ನಿರ್ಧಾರವಾ ?'

'ಅವಳನ್ನ ಕರ್ಕೊಂಡ್ಬಾ. ಅವಳಿಲ್ಲದೇನೇ ನೀನು ಹೀಗಾಗಿರೋದು. ಹೋಗಿ ಕರ್ಕೊಂಡ್ಬಾ ಅವಳನ್ನ. ನೀನು ಅವಳ ಗಂಡ ಅಲ್ವಾ ? ಹಕ್ಕಿಲ್ವಾ ? ಬರಕ್ಕೆ ಹೇಳು.'

'ಅವಳನ್ನ ಒಪ್ಪಿಸೋದು ಹ್ಯಾಗೆ ಅಂತ ತಿಳೀತಾ ಇಲ್ಲ'

ಕನ್ನಡಿಯೊಳಗಿಂದ ನನ್ನನ್ನೇ ದುರುಗುಡುತ್ತಾ ನೋಡುತ್ತಿದ್ದ ಅವನು, ಆಮೇಲೆ,

'ಹೇಗಾದ್ರೂ ಒಪ್ಸು. ಏನಾದ್ರೂ ಮಾಡು. ಒಳ್ಳೇತನದಿಂದ ಹೇಳ್ನೋಡು, ಇಲ್ಲ ಹೆದರಿಸು. ಒಟ್ಟಿನಲ್ಲಿ ಅವಳು ಇಲ್ಲಿಗೆ ಬರ್ಬೇಕು !'

ಅವನ ದನಿ ಎಷ್ಟು ಗಡಸಾಗಿತ್ತು ಅಂದ್ರೆ ನನಗೇ ಭಯ ಆಗಕ್ಕೆ ಶುರುವಾಯ್ತು.

'ಒಳ್ಳೆ ಮಾತ್ನಿಂದ ಕರೆದಾಯ್ತು. ಆದರೆ...' ನಾನೆಂದೆ, 'ಹೆದರಿಸಕ್ಕೆ ನನ್ ಕೈಲಾಗಲ್ಲ. ನಂಗೆ ಇಷ್ಟಾನೂ ಇಲ್ಲ. ಅವಳು ಬರಲ್ಲ ಬಿಡು.'

ನಾನು ಸರಿಯಾಗೇ ಮಾತಾಡ್ತಾ ಇದೀನಿ ಅಂತ ಅನ್ನಿಸ್ತು. ಅವನಿಗೂ ಒಪ್ಪಿಗೆ ಆಯ್ತು ಅಂತ ಕಾಣತ್ತೆ. ಆದರೂ ಒಳ್ಳೇ ಬೆದರಿಕೆ ಹಾಕೋನರೀತಿ -

'ಆಯ್ತು, ಇನ್ನೊಂದಿನ ಮಾತಾಡಣ.'

ಅಂದವನೇ ಕನ್ನಡಿ ಒಳಗೆ ಕರಗಿಹೋಗಿಬಿಟ್ಟ. ಮತ್ತೆ ನಾನೊಬ್ಬನೇ. ಒಂಟಿ.

ತಲೆ ಸಿಡೀತಿದೆ. ನಿದ್ದೇನಾದ್ರೂ ಮಾಡಣ ಅಂತ ಮಲಗಿದೆ. ದೀಪ ಆರಿಸಿ ಹಾಸಿಗೆ ಮೇಲೆ ಉರುಳಿಕೊಂಡ ತಕ್ಷಣ ಶುರುವಾಯ್ತಪ್ಪ. ಕತ್ತಲ್ಲೇ ಅವನ ಗಡಸು ಮಾತು.

'ಇವತ್ತು ಪರವಾಗಿಲ್ವ ನೀನು ಸಮಾಧಾನವಾಗಿರೋ ಹಾಗಿದೆ. ಎಣ್ಣೆ ಇಳಿದ್ಹಾಗೆ ಕಾಣತ್ತೆ.'

ನಾನು ಬಾಯ್ಮುಚ್ಚಿಕೊಂಡಿದ್ದೆ. ಮಾತಾಡಿದ್ರೆ ತಾನೇ ಸಂವಾದ, ವಾಗ್ವಾದ ಮಾತೇ ಆಡದಿದ್ರೆ ಇವನೇನು ಕಿತ್ತುಕೋತಾನೆ.

'ಅವಳನ್ನ ಕರ್ಕೊಂಡು ಬರೋದು ಹ್ಯಾಗೆ ಅಂತ ಹೇಳ್ತೀನಿ ಕೇಳು. ಸ್ವಲ್ಪ ತಡಿ ಮಧ್ಯೆ ಬಾಯಿ ಹಾಕ್ಬೇಡ ಸುಮ್ನೆ ಬಿದ್ದುಕೊಂಡಿರಕ್ಕೆ ಆಗಲ್ವ ? ಹೇಳೋದ ಸರಿಯಾಗಿ ಕೇಳಿಸ್ಕೋಳಯ್ಯಾ'

ಮಾತಾಡಬೇಕೂಂತ ನಿಗರಿ ನಿಂತಿದ್ದ ನಾನು ತಿಕಮುಚ್ಕೊಂಡು ತೆಪ್ಪಗೆ ಮಲಗಿದೆ. ಭಾಳ ತಮಾಷೆಯಾಗಿ ಮಾತಾಡ್ತಾ ಇದ್ದ. ನಾಳೆ ಬೆಳ್ ಬೆಳಿಗ್ಗೇನೆ ಅವಳ ಮನೇಗ್ ಹೋಗ್ಬೇಕಂತೆ. ಹೋಗ ನಾವು ಚಪ್ಲಿ ರಿಪೇರಿ ಮಾಡ್ತೀವಲ್ಲ ಚಾಕು, ಒಂಥರಾ ಪುಟ್ಟ ಕುಡಗೋಲು, ಕುಡಗೋಲ್ಡ್ರಿ. ಅದ ತೊಗೊಂಡು ಹೋಗಿ ಅವಳ ನೀಳ ಕುತ್ತಿಗೆ ಹ ಹಿಡಕೊಂಡು ವಾರ್ನಿಂಗ್ ಕೊಡಬೇಕಂತೆ.

'ಏಯ್ ಹೆಣ್ಣೆ, ಸೀದಾ ಮನೇಗ್ ನಡಿ ಇಲ್ಲದಿದ್ದೆ ಏನಾಗತ್ತೆ ಗೊತ್ತಾ ?'

ಮಾತಾಡಿದ್ದು ನಾನೋ ಅವನೋ ಅಂತಲ

ನ್‌ಫ್ಯೂಸ್ ಆಗೋಯ್ತು. ಕತ್ತಲಲ್ಲಿ ಅವನು ಯಾವಕಡೆ ನಿಂತಿದಾನೆ ಅನ್ನೋದು ಳೀದೆ ನೇರವಾಗಿ ಕತ್ತಲಿಗೆ ಹೇಳೋನ ಹಾಗೆ ಹೇಳ್ದೆ.

'ಲೇ... ಹುಚ್ಚ ನನ್ಮಗ್ನೆ. ಇಂಥದೆಲ್ಲ ಬೊಗಳಬೇಡ. ಅವಳು ಮನೇಗ್ ಬರ್ಬೇಕು. ಅದು ಸರಿ. ಅದಕ್ಕೋಸ್ಕರ ಚಾಕು ತೊಗೊಂಡು ಹೋಗಿ ಕತ್ತು ಕೊಯ್ದುಬಿಡ್ತೀನಿ ಅಂತ ದರಿಸಕ್ಕಾಗತ್ತೇನೋ ಪೆದ್ದಾ? ಜೈಲಿನ ಕಂಬಿ ಎಣಿಸಕ್ಕೆ ನಂಗೇನೂ ಆಸೆ ಇಲ್ಲ.'

'ಅಲ್ಲಲ್ಲ' ಅವನೆಂದ 'ಜೈಲಿಗೆ ಹೋಗೋ ಆಸೆ ನಿನಗಿಲ್ಲ ನಿಜ. ಆದರೆ, ಜೈಲಿನಲ್ಲಿ ಲ್ಲಿರೋದಕ್ಕಿಂತ ನೆಮ್ಮದಿಯಿಂದ ಇರಬಹುದು ಅಂತ ಅನ್ನಿಸಲ್ವ ?'

'ಏಯ್, ಏನ್ಮಾತಾಡ್ತಾ ಇದ್ಯೋ ?'

'ಏನ್ಮಾತಾಡ್ತಾ ಇದೀನಿ ಅಂದ್ರೆ... ಕೊನೇಪಕ್ಷ ಜೈಲಿನಲ್ಲಿ ನೀನು ಒಂಟಿಯಾಗಿರಲ್ಲ ಅಂತ. ಗೊತ್ತಾಯ್ತಾ? ಅಷ್ಟಕ್ಕೂ ನೀನು ಕಳಕೊಳ್ಳೋದೇನಿದೆ. ಇಲ್ಲ ಅವಳು ನೇಗ್ ಬರ್ತಾಳೆ. ಅದು ಒಳ್ಳೇದೇ. ಇಲ್ಲ ಮನೇಗ್ ಬರಲ್ಲ ಅಂತಾಳೆ.'

'ಆಗ ?'

'ಆಗ... ಕುಡುಗೋಲ್ಮರಿ ಇದ್ಯಲ್ಲ ಸುಬ್ರಾಜೂ... ರುಚಿ ತೋರ್ಸು. ಸೀದಾ ಜೈಲು. ಗೆ ಒಂಟಿ ದೈಯ್ಯದ ಥರ ಅಂತೂ ಉಳಿಯಲ್ಲವಲ್ಲ.'

'ಲೇ ಹುಚ್ಚ, ಲೇ... ಹಸೀ ಹುಚ್ಚ...'

'ಉಹೂ, ನಾ ಹುಚ್ಚ ಅಲ್ಲ. ಹುಚ್ಚ ಅಲ್ಲ ಅಂತ ನಿಂಗೂ ಗೊತ್ತು. ಆದ್ರೆ ನೀನು ಚ್ಚ ಯಾಕಾಗ್ಬೇಕು ? ಅಲ್ವಾ ? ಒಂಟಿಯಾಗಿ ಇರಕ್ಕೆ ಆಗಲ್ಲ ಸುಬ್ರಾಜೂ... ಳಾ ಕಷ್ಟ... ಸುಬ್ಬಣ್ಣೀ... ಜೈಲೇ ಚೆನ್ನಾಗಿರತ್ತೆ ಅಲ್ಲವಾ ರಾಜಾ ?'

ಇನ್ನ ಅವನ ಮಾತುಗಳನ್ನ ಕೇಳ್ತಾ ಮಲಕ್ಕೊಂಡಿರಕ್ಕೆ ನನ್ನ ಕೈಲಿ ಆಗಲಿಲ್ಲ. ಚಪ್ಲಿ ಗೊಂಡು ಹೊಡೀಬೇಕು ಬೋಳೀ ಮಗಂಗೇ. ಕತ್ತಲಲ್ಲೇ ಧಡಾರ್ ಅಂತ ಎದ್ದು ತ್ಕೊಂಡೆ. ಸ್ವಲ್ಪ ಗಡುಸಾಗಿ...

'ಇಂಥಾ ಮಾತುಗಳಿಂದ ಏನುಪಯೋಗಾನೂ ಆಗಲ್ಲ. ಸ್ವಲ್ಪ ಬಾಯ್ಮುಚ್ ಂಡಿರ್ತೀಯಾ ? ನಿಂದೇನು ನಾಲಗೇನೋ ಚಪ್ಲಿ ಅಟ್ಟೇನೋ? ಜಾಗ ಖಾಲಿ ಡು. ನಾನು ಮಲಕ್ಕೋಬೇಕು.'

'ಹೌದಾ ? ಕೇಳಿಲ್ಲಿ, ನೀನ್ ಮಾಡ್ದೇ ಇದ್ರೆ ಏನಾಯ್ತೋ ಹೇತ್ಲಾಂಡೀ ? ನಾನು, ನೇ ಮಾಡ್ತೀನಿ.'

'ನಾನು ಮಲಕ್ಕೊಬೇಕು ಕಣಲೇ... ನಿದ್ದೆ ಬರ್ತಿದೆ. ನಾಳೆ ನೋಡೋಣ.'

'ಅದ್ದು. ನಾಳೆ ನೋಡಣ, ಬೆಳಕು ಹರಿಯೋದರ ಒಳಗೆ. ಆ ಕೆಲಸಾನ ಗಿಸಿಬಿಡಣ. ಮಟಾಷ್.'

'ಬಾಯ್ಮುಚ್ಚು ಬೋಸುಡಿಕೇ.'

'ಹಾಗಿದ್ರೆ ನಿನ್ನ ಒಪ್ಗೆ ಇದೆ ಅಂತಾಯ್ತು.'

ಮಲಗಿದ್ದಂತೇ ಕೈಗೆ ಸಿಕ್ಕ ಚಪ್ಲೀನ್ನ ಕತ್ತಲಲ್ಲಿ ಮುಸಿಮುಸಿ ನಗುತ್ತಿದ್ದವನ ಕಡೆಗೆ ಸಿ ಒಗೆದೆ. ತಪ್ಪಿಸ್ಕೊಂಡ ಘಢವಾ ಅಂತ ಅನ್ನಿಸತ್ತೆ. ಪಿಶಾಚಿ ನನ್ಮಗ. 'ಫಳಾರ್' ತ ಶಬ್ದ ಆಯ್ತು. ಬೀಸಿ ಒಗೆದ ಚಪ್ಲಿ ಖಾಲಿ ಬಾಟಲಿಗೆ ಬಡ್ದು ಗಾಜೆಲ್ಲಾ ರಾಡಿತ್ತು. ನನಗೆ ಹಾಗ ನಿದ್ದೆ ಬಂದುಬಿತ್ತು.

ಕಣ್ಣು ಬಿಟ್ಟಾಗ ಆಗಲೇ ಬೆಳಕಾಗಿಬಿಟ್ಟಿದೆ. ಟೈಂ ವೇಸ್ಟ್ ಮಾಡೋಹಾಗಿಲ್ಲ. ಬಿಡಿಯಿಂದ ಎದ್ದೆ. ಗಾಜಿನ ಚೂರೊಂದು ಚುಚ್ಕೊಂಡು ಲಬಲಬೋ ನ್ನೋಹಾಗಾಯ್ತು. ಕತ್ತಲಲ್ಲಿದ್ದವನು ಎಲ್ಲೋ ಕಾಣ್ತಾನೆ ಇಲ್ಲ. ಗಾಬರಿ ಆಯ್ತು. ನಿಲ್ಲಿ ಇನ್ನೂ ತಡಕಾಡ್ತಾನೇ ಇದೀನಿ. ಅಲ್ಲಿ ಅವನು ನನ್ನ ಪೆಟ್ಟಿಗೆ ಅಂಗ್ಡಿ ತೆರೆದು...

'ಅಯ್ಯಯ್ಯೋ (ಅಂಗ್ಡಿ ಕೀಲಿ ಕೈ ಅವನಿಗೆ ನಾನೇ ಕೊಟ್ಟುಬಿಟ್ನಲ್ಲ!')

ಕುಡುಗೋಲ್ಮರಿ ತೆಕ್ಕೊಳ್ತಾನೆ. ಆಮೇಲೆ... ಮುಗೀತು. ನನ್ನ ಮೈಯೆಲ್ಲ ಥರ ಟ್ಟೋಯ್ತು. ಹಲ್ಲುಜ್ಜದಿದ್ರೆ ಏನಾಯ್ತೀವಾಗ... ಮುಖ ಆಮೇಲೆ ತೊಳಕೊಂಡರಾಯ್ತು. ಸಿಕ್ಕ ಅಂಗಿ ಸಿಗಸ್ಕೊಂಡು ಹೊರಗೆ ಬಂದೆ. ಇನ್ನೂ ಬೆಳಗಾಗಿಲ್ಲ. ನಮಾಜಿನವರೂ ಗಿಲ್ಲ ಅಂತ ಕಾಣ್ತದೆ. ಎಲ್ಲ ಕಡೆ ದಟ್ಟವಾದ ಕಾವಳ. ರಾತ್ರಿಯೋ ಹಗಲೋ. ಗೊತ್ತಾಗ್ತಾ ದಾರಿ ತಿಳೀತಿಲ್ಲ. ಉಸಿರು ಬಿಟ್ರೆ ಮುಸುಡಿ ಮುಂದೇನೇ ಮೋಡ ಕಟ್ಟಕೊಳ್ತಿತ್ತು. ನನ್ನ ಪೆಟ್ಟಿಗೆ ಅಂಗ್ಡಿ ಇರೋದು ದೊಡ್ಡ ಗಡಿಯಾರದ ಚೌಕದಲ್ಲಿ. ಟೌನ್ ಹಾಲ್ ಭಾಗದ ಗುಜರಿ ಗಲ್ಲಿಯೊಳಗಿಂದಲೇ ಓಡ್ತಾಹೋದೆ. ಘನೀಸಾಬನ ಬೇಕರಿ ಂದೆ ಏದುಸಿರು ಬಿಡ್ತಾ ನಿಂತು ನೋಡ್ತೀನಿ. ಅವನು !

ಅವನೇ ! ಕಳ್ಳನ ಥರಾ ಅಂಗ್ಡಿಯಿಂದ ಹೊರಗೆ ಬರ್ತಾ ಇದಾನೆ. ಅರೇ... ಅರರೇ. ರ್ನ್ ರೋಡಿನ ಕಡೆಗೆ ಓಡಿ ಹೋಗ್ತಾ ಇದಾನೆ. ಓಡು. ಓಡು. ಓಡಿ ಹೋಗಿ ಬೇಕು ಅವನನ್ನ.

'ಸರಿ, ಇನ್ಮುಂದೆ ಇದೆ.' ನನಗೆ ನಾನೇ ಹೇಳಿಕೊಂಡೆ. ಅವನು ... ಅನುಮಾನವೇ ಬೇಡ. ಹರಮಾರಿ. ಏನಾದ್ರೂ ಮಾಡ್ತೀನಿ ... ಬೇಕೂಫಂಗೆ. ಏನಾದ್ರೂ ... ಆಗಕ್ಕೆ ... ಅವನ್ನ.

ನಾನು ಧಡ ಧಡಾಂತ ಅಂಗಡೀಗೆ ನುಗ್ಗಿ, ಪೆಟ್ಟಿಗೆ ತೆಗ್ದು ಕುಡುಗೋಲ್ಮರೀನ ತೊಗೊಂಡೆ. ಒಂದು ವೇಳೆ ಅವನೇನಾದ್ರೂ ರೋಫ್ ಹಾಕಿದ್ರೆ ಇರಲೀ. ಅದಕ್ಕೂ ಮೊದಲು ಪೊಲೀಸರಿಗೆ ಫೋನ್ ಮಾಡ್ಬೇಕು. ಮೆಜೆಸ್ಟಿಕ್ ಹೋಟಲ್ ಪಕ್ಕ, ಕಾಯಿನ್ ಬೂತ್ ಇದ್ಯಲ್ಲ. ಹೋಟೆಲ್ ಮಾಣಿ...

'ಇನ್ನೂ ಕಾಫಿ ರೆಡಿಯಾಗಿಲ್ಲಣ್ಣ' ಅಂದ.

'ಪರವಾಗಿಲ್ಲ ಬಿಡೋ ಭಟ್ಟ.' ನಡಗೋ ಕೈಗಳಿಂದ ಫೋನ್ ಡೈರೆಕ್ಟರಿ ತಡಕಾಡಿದೆ. ಬೆಪ್ಪ ನನ್ಮಗಾ. ನೂರಾ ಒಂದು ಅಲ್ವ ? ಪೊಲೀಸರ ಫೋನು ?

'ಹಲೋ, ಪೊಲೀಸ್ ಸ್ಟೇಷನ್, ದೊಡ್ಡಪೇಟೆ.'

ಬಡಬಡಾಂತ ಉಸಿರು ನಿಲ್ಲಿಸದೇ ನಡೆದಿದ್ದೆಲ್ಲ ವಿವರವಾಗಿ ಹೇಳ್ದೆ. ಮಧ್ಯೆ ಆ ಕಡೇಯಿಂದ ಏನೇನೋ ಕೇಳ್ತಾ ಇದ್ದರು. ನಾನು ಅದ್ಯಾವುದಕ್ಕೂ ಕೇರ್ ಮಾಡ್ದೆ ಹೇಳಬೇಕಾದ್ದನ್ನೆಲ್ಲ ಒದರಿ ಹೇಳಿದೆ.

'ಸಾ. ಇನ್‌ಸ್ಪೆಕ್ಟರ್ ಸಾ. ಇರವಿನ್ ರೋಡ್ ಗಲ್ಲೀ ಸಾ. ಬೇಗ ಬನ್ನಿ ಸಾ. ಅವನು ಕೊಲೆ ಮಾಡಿಬಿಡ್ತಾನೆ ಸಾ. ಏನಾಗ್‌ಬಿಡತ್ತೋ ಗೊತ್ತಿಲ್ಲ. ನ. ನ.. ನನ್ನ ಹತ್ರ ಕುಡುಗೋಲ್ಮರೀ ಇದೆ ಸಾ. ಏನಾಗತ್ತೋ ಅಂತ ಹೆದ್ರಿಕೆ ಸಾ. ಬನ್ನಿ ಸಾ !

'ಯೋ... ಯಾವನೋ ಮಾತಾಡ್ತಾ ಇರೋದು ? ನಿಮ್ಮಕ್ಕನ್. ಮಷಗಿರಿ ಮಾಡ್ತೀರಾ ಬೋಳಿಮಕ್ಳಾ ? ಯೇನಲೇ ನಿನ್ ಹೆಸ್ರು ಮಾದರ್‌ಚೋದ್'

'ಸಾ. ಯಾರ್ ಹೆಸ್ರು ಸಾ. ನಾನು ಸಾ. ಕ್ಲಾಕ್ ಟವರ್. ಚಪ್ಲಿ ಅಂಗ್ಡೀ ಸಾ.'

'ಲೋ ಬೇಕೂಫ ನನ್ಮಗ್ನೆ. ಹೆಸ್ರು ಬಗಳು'



'ಸಾ... ನನ್ ಹೆಸ್ರು ಸಾ... ಅವನು... ಅವನ ಹೆಸ್ರು ಸಾ. ನಾನು... ನಾನು ಸಾರ್... ಸು... ಸುಬ್ರಾಜೂ... ಸಾ. ನಿಮಗೊತ್ತು ಸಾ. ಸುಬ್ರಾಜೂ.'

ಅರೇ. ಇದಕ್ಕೇನಂತೀರಿ. ನನ್ನ ಹೆಸ್ರೂ ಸುಬ್ರಾಜು, ಅವನ ಹೆಸ್ರೂ ಸುಬ್ರಾಜು. ಇನ್ನ ತಡ ಮಾಡೋಹಾಗಿಲ್ಲ. ಪೊಲೀಸರಿಗೆ ಹೇಳಿದ್ದಾಯ್ತು. ಬೇಗ ಹೊರಡಬೇಕು ಇಲ್ಲದಿದ್ರೆ ಅವನು...

ನಾನೊಂದು ಆಟೋ ಹಿಡೀಬೇಕು. ಎಲ್ಲಾದ್ರೂ ಪೊಲೀಸರು ಲೇಟಾಗಿಬಿಟ್ರೆ... ಸಿನೇಮಾಲೀ ಆಗೋ ಹಾಗೇ !

ಆಟೋ ಡ್ರೈವರ್ ಒಬ್ಬ ಮುದುಕ. ಬಿಳೀ ಬಾರ್ಡರ್ ತಲೆ - ಮೇಲೆ ಫಳಫಳ. ಆಟೋಗೂ ಅವನಷ್ಟೇ ವಯಸ್ಸು. ನನ್ನ ಗಡಿಬಿಡಿ ನೋಡಿ.

'ಏನ್ಸಾ ಸಮಾಚಾರ. ಭಾಳಾ ಟೆನ್‌ಷನ್ನು ?'

'ಅಯ್ಯೋ ಮಾರಾಯಾ, ಬಂಡ್ರಿ... ಬಂಡ್ರಿ... ಸುಬ್ರಾಜೂ ಅಂತ. ಚಪ್ಲಿ ಹೊಲಿಯೋನು. ಆ ಚಪ್ಲಿ ಹೊಲಿಯೋ ಚಾಕು ಇರಲ್ವ... ಅದನ್ನ ತಕ್ಕೊಂಡು ಅವನ ... ಅವನ... ಹೆಂಡ್ತೀನ ಸಾಯ್ಸಕ್ಕೆ...'

'ಅಯ್ಯೋ ದೇವರೇ. ಪೊಲೀಸರಿಗೆ ಹೇಳಿಲ್ವ ಸಾ. ಮನೇಲಿ ಒ... ?'

'ಹೂ... ಹೂ... ನನ್ ಹೆಂಡತಿ ಒಬ್ಬಳೇ.'

'ಆ ? ಏನ್ಸಾ ... ಹೇಳ್ತಾ ಇರೋದು ?'

'[illegible] ಗಂಡ [illegible] ಜಗಳ. [illegible]'

'[illegible]ರಿಗೆ ...'

'[illegible]ಗೆ ಹೇಳ್ತೆ [illegible]. ಅವರು ಬರ್‍ತಾರೆ. [illegible] ನೋಡ್ತಾ.'

'ಆಯ್ತು ಸಾ, ... ವಿಷ್ಯಾ ನಿಮಗೆ ಹೆಂಗ್ ತಿಳೀತು ಸಾ ?'

'ನನಗಾ ? ಅವನಿಗೆ ನಾನು... ಫ್ರೆಂಡ್ಸು, ಒಂಥರಾ ಫ್ರೆಂಡ್ಸು. ನನಗೇ ಗೊತ್ತು ಅವನೇ ಹೇಳ್ದ. ನಾನೇ. ...'

ಸುಮ್ಮನೆ ಆಟೋ ಓಡ್ತಾ ಇತ್ತು... ಮಾತೇ ಇಲ್ಲ. ನನಗೆ ಹೆದರಿಕೆ ಆಯ್ತು. ಅಷ್ಟರಲ್ಲಿ

'ಹೆದ್ರಬೇಡ್ರಿ ಸಾರ್. ಏನೂ ಆಗಲ್ಲ. ಕೊಲೆ ಮಾಡ್ತೀನಿ ಅಂತ ಹೇಳ್ತೋರೆಲ್ಲ ಕೊಲೆ ಮಾಡೇಬಿಡ್ತಾರಾ. ಕೊಲೆ ಮಾಡಕ್ಕೆ ದಮ್ ಬೇಡವಾ ಸಾರ್ ?'

ನಾನೇನೂ ಮಾತಾಡಲಿಲ್ಲ. ಮುದುಕ ತನ್ನ ಪಾಡಿಗೆ ತಾನೇ ಮಾತಾಡ್ತಾ ಆಟೋ ಓಡಿಸ್ತಾ ಇದ್ದ.

'ಈ ಉಮಾ ಟಾಕೀಸ್ ಗಲ್ಲಿಗ್ಯಾಕೆ ನುಗ್ಗಿದ್ರೀ ? ಮೇನ್ ರೋಡಿನಲ್ಲಿ ಬಂದಿದ್ರೆ... ಈ ಪಾಟೀ ಹೊಂಡ... ಥೂ...'

'ಅಶೋಕ ರೋಡ್ ವನ್‌ವೇ ಅಲ್ಲಪ್ಪಾ ?'

ನಿಧಾನವಾಗಿ ಆಟೋ ಇರ್ವಿನ್ ರೋಡ್ ಕಡೆಗೆ ತಿರುಕ್ಕೊಂತು. ನನ್ನ ಹೆಂಡತಿ ಮನೇ ಕಡೆ.

ಆಟೋ ಇಂದಿಳಿದು ಮುದುಕನಿಗೆ ದುಡ್ಡುಕೊಟ್ಟು ನೋಡ್ತೀನಿ. ಇಡೀ ರಸ್ತೇಲಿ ಒಂದೇ ಒಂದು ಪಿಳ್ಳೇನೂ ಇಲ್ಲ. ಕಾವಳ ಮುಚ್ಚಿದ ರಸ್ತೆ. ಕೊನೇವರೆಗೂ ಕಣ್ಣಾಡಿಸಿದೆ. ಹಾ... ಎಲ್ಲಿ ಹೋಗ್ತಾನೆ ಖದೀಮ. ನನ್ನ ಹೆಂಡತಿ ಮನೆ ಬಾಗಿಲೊಳಗೆ ನುಸುಳ್ತಾ ಇದಾನೆ. ಲೋಫರ್, ಇಷ್ಟೊತ್ನಲ್ಲಿ ನಮ್ಮತ್ತೆ, ತಾಟಗಿತ್ತಿ. ಶನಿ ದೇವರ ಭಕ್ತೆ. ಶನೀನ ಹುಡಿಕಿ ಹೋಗಿರ್‍ತಾಳಲ್ವ ? ಹಾಗಾದ್ರೆ... ಇಲ್ಲಿ ಅವಳೊಬ್ಬಳೆ. ಸೋಂಭೇರಿ ಮುಂಡೆ... ಮಲಗಿದಲ್ಲೆ ಮುಲುಕಾಡ್ತಾ ಇರ್‍ತಾಳೆ.

ಅವನೂ ಸರಿಯಾದ ಟೈಂಗೇ ಬಂದಿದಾನೆ. ಬದ್ಮಾಷ್ ನನ್ಮಗ. ಚೆನ್ನಾಗಿ ಪ್ಲಾನ್ ಮಾಡ್ಕೊಂಡೇ ಬಂದಿರ್‍ತಾನೆ. ಅನುಮಾನವೇ ಇಲ್ಲ. ನಾನು ತಡಮಾಡಬಾರ್‍ದು. ಆಗಬಾರದ್ದು ಆಗಿ ಹೋಗತ್ತೆ. ಧಡ ಧಡಾಂತ ಮುಂಬಾಗಿಲು ತೆಗ್ದು ಒಳಗೆ ಬಂದೆ. ಮಹಡಿ ಮನೆ. ನಾಕ್ನಾಕು ಮೆಟ್ಟಲು ಒಂದ್ಸಲಕ್ಕೇ ಜಿಗ್ದು ಮನೆ ಬಾಗಿಲು ಮುಂದೆ ನಿಂತೆ. ಎಲ್ಲ ಪತಾರದ ಪುಟ್ಟ ಪುಟ್ಟ ಮನೆಗಳು. ಬೆಳಿಗ್ಗಿನ ಛಳೀಗೆ ಬೆಚ್ಚಗೆ ಮಲಗಿಬಿಟ್ಟಿದ್ದವು. [illegible] ಬಾಗಿಲು ಬಡೀಬೇಕು ಆಗಲೇ ಅವನೂ ಬಾಗಿಲು ಬಡೀತಾ [illegible]!

[illegible]ಲಿನ ಬಿಲ್ಲು ಮೇಡಂ. ಮೇಡಂ ಹಾಲಿನ ಬಿಲ್ಲು ಕೊಡ್ತೀರಾ ?

ಚಾಣಾಕ್ಷ ಬಡ್ಡೀಮಗ್ನೆ, ಬಾಗಿಲು ತೆಗೆಸಕ್ಕೆ ಎಂಥಾ ಸಂಚು! ನಾನು ಬಾಗಿಲಿಗೆ ಮರೆಯಾಗೇ ನಿಂತ್ಕೊಂಡೆ. ವಳಗೆ ಹೆಜ್ಜೆ ಸಪ್ಪಳ. ನಿಧಾನವಾಗಿ ಕಿರ್ರಂತ ಬಾಗಿಲು ತೆಕ್ಕೊಳ್ತು. ಅವಳದೇ ದನಿ. ನಿದ್ದೆ ಬಡಕ ಸೋಮಾರಿ.

'ಚಿಲ್ಲರೆ ಇದೆಯೇನಪ್ಪ ? ಇರಲಿ ಬಿಡು, ನಾನೇ ತರ್‍ತೀನಿ. ಬಂದೆ ಒಂದ್ನಿಮಿಷ.'

ಅವಾಗ್ಲೇ ಅದೇ ಗಳಿಗೆಗೆ ಕಾಯ್ತಿದ್ದ ಅವನು ಛಕ್ ಅಂತ ಒಳಗೆ ನುಗ್ಗಿಬಿಟ್ಟ...

[illegible] ? [illegible]...

[illegible] ಕತ್ತಲೆ ಕತ್ತಲೆ. ಬೆಚ್ಚಗಿತ್ತು ಮನೆ. ನಂಗೇನು ಹೊಸತಾ ಇದು ? ಅದೇ ಮನೆ. ಅದೇ ಹಾಸಿಗೆ. ಅದೇ ಅವಳು. ಅದೇ ಮೈ. ಅದೇ ವಾಸ್ನೆ! ತಲೆ ಗಿರಗುಡೋದಕ್ಕೆ ಶುರುವಾಯ್ತು. ಬೆಕ್ಕಿನ ಹಾಗೆ ನಡೀತಾ ಕತ್ತಲಲ್ಲೇ... ಅವಳ ಮಂಚ. ಅವಳ ಹೊದಿಕೆ. ಅವಳ ದಿಂಬು. ಚಿಲ್ಲರೆ ಎಣಿಸ್ತಾ ಬಗ್ಗಿ ನಿಂತುಕೊಂಡಿದ್ದಳು. ಅಹಹಾ, ಇವಳ ಸೊಂಟವೇ! ಬೆನ್ನಿಗಂಟಿಕೊಂಡು ಎಳೆ ಎಳೆಯಾಗಿ ಬಿದ್ದಿದ್ದ ಅವಳ ಹೆರಳು. ಮೊದಲ ಸಲ ಇವೆಲ್ಲ ನನಗೆ ಸಿಕ್ಕಿದ್ದು ನೆನಪಾಗಿ ಒಂಥರಾ ಯಾತನೆ ಆಯ್ತು. ಮೊದಮೊದಲು ದಿನಾ ಬೆಳಿಗ್ಗೆ ಹೀಗೇ ಆಗ್ತಿತ್ತು. ಬಗ್ಗಿ ಮಂಡಿಯೂರಿ ಕುಳಿತು ಹಿಂದಿನಿಂದಲೇ ಅವಳ ಸೊಂಟ ಬಳಸಿ ಬಿಗಿಯಾಗಿ ಎಳೆದುಕೊಂಡೆ. ಅವಳು [illegible]ಗಿ

'ಅಯ್ಯಯ್ಯೋ... ಯಮ್ಮಾ. ಬಿಡಿಸ್ರಪ್ಪೋ ಯಾವನಯ್ಯ ನೀನು. ಕಳ್ಳ ಕಳ್ಳ.'

ಅವಳನ್ನ ಇನ್ನೂ ಬಿಗಿಯಾಗಿ ಬಳಸಿ ಹಿಡಿದು ಅವ[ಳ] ಕಿಬ್ಬೊಟ್ಟೆಯ ಹದದಲ್ಲಿ ನನ್ನ ಮುಖ ಇಟ್ಟುಕೊಂಡೆ. ಅವಳಿಗೆ ಗೊತ್ತಾಗಿಹೋಯ್ತು. ಮುಗೀತು.

ಶ್ಯಾಮ್ಲಿ... ನನ್ನ ಶ್ಯಾಮ್ಲಿ... ...ಮನೇಗ್ ಬಾರೆ... ನಿ[ನ್ನ] ಇಲ್ದೆ ಹೇಗೇಗೋ ಆಗತ್ತೆ. ಬಾರೆ. ಇಲ್ಲದಿದ್ರೆ... ನಾ... ತುಂಬ... ಒಂಟಿ. ...ಯಾಗ್ತೀನಿ... ಏನೂ ಮಾಡ[ಕ್ಕೆ] ತಿಳಿಯಲ್ಲ. ನಾ ಬದುಕಿರಲ್ಲ, ಸತ್ತೋಗ್ತೀನಿ.

ಖಂಡಿತವಾಗಿ ನನ್ಮಾತನ್ನ ಅವಳು ಕೇಳಿಸ್ಕೊಳ್ತಾ ಇದ್ದಳು ಅಂತ ಅನ್ನಿಸ್ತು. ಇನ್ನೇನು... ಆದರೆ ಅದೇ ಸಮಯ[ಕ್ಕೆ] ಸರಿಯಾಗಿ ಮಂಚದ ಆ ಕಡೆಯಿಂದ ಕೈಲಿ ಕುಡುಗೋಲ್ಲ[ರಿ] ಹಿಡಕೊಂಡು ಎದ್ದ ಅವನು. ಪಿಶಾಚಿ. ಕೊಲೆಗಡುಕ. ಶ್ಯಾಮ್[ಲಿ] ತಲೆ ಜುಟ್ಟನ್ನ ಎಡಗೈಲಿ ಬಿಗಿಯಾಗಿ ಜಗ್ಗಿ ಹಿಡಿದು, ಅವ[ಳ] ಕೊರಳ ಹತ್ರ ಕುಡುಗೋಲ್ಮರೀನ ಸವರ್‍ತಾ ಘೀಳಿಟ್ಟ.

'ಎದುರುತ್ತರ ಕೊಡ್ತೆ ಸೀದಾ ಮನೇಗ್ ನಡಿ ಹೆಣ್[ಣೆ] ಇಲ್ಲದಿದ್ರೆ ಇದೇನು ಅಂತ ಗೊತ್ತುತಾನೆ ?'

ಅವಳ ಉದ್ದನೆಯ ಕತ್ತಲ್ಲಿ ಸುಂದರವಾಗಿ ಮಿಡುಕಾಡ್ತಾ ಇದ್ದ ಆ ನೀಲಿ ನರ[ದ] ಮೇಲೆ ಚುಚ್ಚಿಕೊಂಡೇ ಕೂತಿತ್ತು ಕುಡುಗೋಲ್ಮರಿ.

ಆಮೇಲೇನಾಯ್ತು ಅನ್ನೋದನ್ನ ಹೇಳಕ್ಕೆ ನನಗಿಷ್ಟ ಇಲ್ಲ. ಅವನು – ನಾನು ಹೇ[ಗೆ] ಕಾದಾಡಿದಿವಿ. ಕುಡುಗೋಲ್ಮರೀನ ಕಿತ್ಕೊಳ್ಳಕ್ಕೆ ಎಷ್ಟು ಕಿತ್ತಾಡಿದಿವಿ. ಅರಚಾಡ[ಿ] ಕಿರಿಚಾಡ್ತಾ ಮನೆ ತುಂಬ ಓಡಾಡಿ... ಬತ್ತಲೆಯಾಗಿ ಶಿಕಾರಿಯಾದಳು ಅವಳು.

ಆದರೆ... ಆದರೆ... ಅಲ್ಲಿಗೆ ಬಂದಿದ್ದ ಪೋಲೀಸ್ನೋರು ಅನಾಮತ್ತಾಗಿ ನನ್ನ ಮೇ[ಲೆ] ಬಿದ್ದು ಒದ್ದು... ಒದ್ದು... ಚಚ್ಚಿಹಾಕಿದ್ರು. ನಾನು ಜೋರಾಗಿ ಹೊಯ್ಕೊಂಡೆ.

'ಅವನ್ನ ಹಿಡೀರೋ ನಾಮರ್ದಗಳಾ. ಅವನ್ನ ಹಿಡಿದು ಒಳಗಾಕಿ ಮೊದ್[ಲು] ಡೇಂಜರಸ್ಸು. ಕುಡುಗೋಲ್ಮರೀನ ಕಿತ್ಕೊಳ್ಳಿ ಮೊದ್ಲು.'

ಪೋಲೀಸರಿಗೆ ಕನ್‌ಫ್ಯೂಷನ್ನು. ನನ್ನ ಕೈಲೂ ಕುಡುಗೋಲ್ಮರಿ ಇತ್ತಲ್ಲ[ಾ] ಮುಂಡೇಗಂಡ್ರು, ಹಿಂದೆ ಮುಂದೆ ನೋಡ್ದೆ ನನಗೇ ಒದ್ದು ಕೈಗಳನ್ನೆಲ್ಲ ಮುರ್‍ದು ಬೆನ್ನಹಿಂ[ದೆ] ಕಟ್ಟಿಹಾಕಿಬಿಟ್ರು. ಒಬ್ಬ ನನ್ನ ಕೈಲಿದ್ದ ಕುಡುಗೋಲ್ಮರೀನ ಕಿತ್ಕೊಂಡ. ಇನ್ನಿಬ್ರು ನ[ನ್ನ] ದರದರಾಂತ ಕೆಳಗಡೆ ಎಳಕೊಂಡು ಹೋದ್ರು. ನನ್ನೆಲ್ಲ ಶಕ್ತಿ ಮೀರಿ ಹೊಯ್ಕೊಂಡೆ.

'ಅವನು ಕಣ್ರೋ. ಅವನನ್ನ ಅರೆಸ್ಟ್ ಮಾಡಿ. ರೀ ಇನ್‌ಸ್ಪೆಕ್ಟರೇ ನನ್ನನ್ನಲ್ಲ, ನೀ[ವು] ತಪ್ಪು ಮಾಡ್ತಿದೀರಿ. ನಾನಲ್ಲ. ಅವನು.'

ಇರ್ವಿನ್ ರೋಡುದ್ದಕ್ಕೂ ಜನವೋ ಜನ. ಪೋಲೀಸರು ಒದ್ದೂ ಒದ್ದೂ ನನ್[ನ] ವ್ಯಾನೊಳಗೆ ತುರುಕಿದರು.

ತಲೆ ಎತ್ತಿ ನೋಡ್ತೀನಿ. ಅವನೇ! ಇಬ್ಬರು ಪೋಲೀಸರ ಮಧ್ಯೆ ಅವನು. ಕೈ[...] ಕೋಳ. ಪಕ ಪಕಾಂತ ನಗ್ತಾ ಇದಾನೆ. ಲೋಫರ್. ಏನ್ಮಾಡ್ದೆ ನೋಡ್ಪ್ಯಾ ಅನ್ನೋ[...] ಹಾಗೆ. ನಾನು ಸಿಟ್ಟಿನಲ್ಲಿ ಜೋರಾಗಿ ಬಡಕೊಂಡೆ.

'ನನ್ನನ್ನ ಬರಬಾದ್ ಮಾಡಿಬಿಟ್ಟ ಸಾರ್ ಅವನು. ದರಿದ್ರ ಸೂಳೇಮ[ಗ] ಬರ್‌ಬಾದ್ ಆಗೋದೇ...'

ಆಮೇಲೇನಾಯ್ತುಂತ ನನಗೊತ್ತಿಲ್ಲ.

ಈಗ ನನ್ನನ್ನ ಒಂದು ರೂಮ್ನಲ್ಲಿಟ್ಟಿದಾರೆ. ಏನೋ ಪರೀಕ್ಷೆ ಮಾಡಬೇಕಂತೆ! ನ[...] ಮನಸ್ಸಿಗೆ ತಡೀಲಾಗದ ವೇದನೆಯಾಗಿಧೆಯಂತೆ. ನಂದೇನೂ ಆಕ್ಷೇಪ ಇಲ್ಲ. ಆದರೆ ಮತ್ತೆ ಒಂಟಿ ಆದ್ನಲ್ಲ. ಅವನನ್ನ ಬಳ್ಳಾರಿ ಜೈಲಿಗೆ ಹಾಕಿದ್ರು ಅಂತ ಮಾತಾಡಿಕೊಳ್ತಾರೆ. ಅಂತೂ ಅವನೂ – ನಾನೂ ಬೇರೆ ಬೇರೆ ಆದ್ವಿ. ನಾನಿಲ್ಲಿ, ಅವನಲ್ಲಿ. ನನ್ನ ಜೊತೆ ಮಾತಾಡಕ್ಕೆ ಅವನಾದ್ರೂ ಒಬ್ಬ ಇದ್ದ. ಈಗ ನಾನೊಬ್ಬನೇ. ಒಂಟಿ.


ವಿಜಯವಾಮನ
ನಂ. ೧, ಗುಲ್ಮೊಹರ್, ಕೆ.ಹೆಚ್.ಬಿ. ಕಾಲನಿ
ಗಾಂಧೀನಗರ, ಸಾಗರ - ೫೭೭ ೪೦೧



ಸಂಗೀತದ ಪುಸ್ತಕವನ್ನು ಓದುತ್ತಾ ಹಾಡುವ ಪಿಯಾನೊ



ಗ್ರಾಮಾಫೋನ್‌ನ ಪಿರಿಯಜ್ಜ



ಬಿ. ಎಸ್. ಶೈಲಜಾ

ತಾಳೆ ಗರಿಗಳಿಂದ ಇಂದಿನ ಪುಸ್ತಕಗಳವರೆಗೆ ಮುದ್ರಣದ ತಂತ್ರಜ್ಞಾನ ಬೆಳೆದು ಬಂದ ಹಾಗೆ ಸಂಗೀತ ಮುದ್ರಣವೂ ಪರಿಪರಿಯ ವಿನ್ಯಾಸಗಳನ್ನು ತಳೆದು ಇಂದಿನ ಸಿ ಡಿ, ಐಪಾಡ್‌ಗಳವರೆಗೆ ಬೆಳೆದಿದೆ. ಆದರೆ ಈ ಹೆಜ್ಜೆಗಳು ಮೂಡಿದ್ದು ಹೇಗೆ ? ಇದನ್ನು ತಿಳಿಯುವ ಅವಕಾಶ ಸಿಕ್ಕಿದ್ದು ಈಚೆಗೆ ಆಕಸ್ಮಿಕವಾಗಿ ಎನ್ನಬಹುದು.

ಭೂವಿಜ್ಞಾನಿಗಳಾದ ಡಾ|| ಶಂಕರ್, ವಿಶ್ವನಾಥ್ ಮತ್ತು ಪ್ರಕಾಶ್ ಅವರೊಡನೆ ಇಟಲಿಯ ಮೊಡೆನಾ ಎಂಬ ಪುಟ್ಟ ಊರಿಗೆ ಹೋಗುವ ಅವಕಾಶ ಸಿಕ್ಕಿತು. ಯಾವಾಗಲೂ ಆಕಾಶವನ್ನೇ ನೋಡುವ ನನಗೆ ಭೂಮಿಯನ್ನು ಪರಿಚಯಿಸುವ ಅವಕಾಶ ಇದು. ಅಲ್ಲಿಂದ ಸ್ವಲ್ಪ ದೂರದಲ್ಲೇ ಇರುವ ಒಂದು ಹವಾಮಾನ ವೀಕ್ಷಣಾಲಯ ಮತ್ತು ಬೆಟ್ಟದ ಮೇಲಿನ ಪರಿಸರ ಮಾಲಿನ್ಯ ಅಳತೆ ಮಾಡುವ ಪ್ರಯೋಗಾಲಯಗಳ ಭೇಟಿ ಕಾರ್ಯ ಕ್ರಮದಲ್ಲಿತ್ತು. ಇದಕ್ಕೆ ಸೇರಿಕೊಂಡಂತೆ ಒಂದು ದುರ್ಗಕ್ಕೆ ಭೇಟಿಯೂ ಏರ್ಪಾಡಾಗಿತ್ತು.

ಸೆಸ್ಟೋಲಾ ಎಂಬ ಹೆಸರಿನ ಈ ದುರ್ಗಕ್ಕೆ ಸಾಕಷ್ಟು ದೂರದಲ್ಲಿ ಬಸ್ಸು ನಿಂತಿತು. ಪುಟ್ಟ ಊರಿನ ಬೀದಿಗಳಲ್ಲಿ ನಡೆದು ದುರ್ಗದ ಬಾಗಿಲಿಗೆ ಬಂದೆವು. ಅಲ್ಲಿ ಬೆಟ್ಟ ಏರಿದಂತೆ ಕಡಿದಾದ ಹಾದಿ ಹತ್ತಿ ಏದುಸಿರು ಬಿಡುತ್ತಾ ಕೋಟೆಯ ಬಾಗಿಲು ತಲುಪಿದೆವು. ಅದು ಸುಮಾರು ಸಾವಿರದ ಐನೂರು ವರ್ಷಗಳಷ್ಟು ಹಳೆಯದಂತೆ. ಆದರೆ ಹಂತಹಂತವಾಗಿ ವಿಸ್ತರಿಸಿರುವುದರಿಂದ ಅಲ್ಲದೆ ಈಗೊಂದು ಹದಿನೈದು ವರ್ಷಗಳ ಕೆಳಗೆ ಪುನರ್ಜನ್ಮ ಪಡೆದದ್ದರಿಂದ ನಮ್ಮ ಕಣ್ಣಿಗೆ ಹೊಸದಾಗಿಯೇ ಕಂಡಿತು. ಯಾವ ಯಾವುದೋ ರಾಜರುಗಳ ಕೈ ಬದಲಾಯಿಸಿ ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಜೈಲು ಆಗಿತ್ತಂತೆ. ಆಮೇಲೆ ಅದನ್ನು ಪ್ರವಾಸೀ ಆಕರ್ಷಣೆಯನ್ನಾಗಿ ಮಾಡಿದ್ದಾರೆ.

ಅಷ್ಟೇನೂ ದೊಡ್ಡದಲ್ಲದ ಈ ಕ್ಯಾಸೆಲ್‌ನ ಮೊದಲ ಭಾಗದಲ್ಲಿ ಕೆಲವು ಹಳೆಯ ವರ್ಣಚಿತ್ರಗಳು, ಭಿತ್ತಿಚಿತ್ರಗಳಿವೆ. ಕ್ರಿಸ್ತನ ಜೀವನದ ಕೆಲವು ದೃಶ್ಯಗಳು ಬಹಳ ಸ್ವಾಭಾವಿಕವಾಗಿ ಮೂಡಿಬಂದಿವೆ. ಪಕ್ಕದ ಕೋಣೆಯೊಳಗೆ ಪ್ರವೇಶಿಸಿದ ಕೂಡಲೆ ಹೊಸದೊಂದು ಪ್ರಪಂಚಕ್ಕೆ ಕಾಲಿಟ್ಟಂತಾಯಿತು.

ಹಿಂದಿನ ಕಾಲದಲ್ಲಿ ಅಂದರೆ ಸುಮಾರು ೧೭ನೆಯ ಶತಮಾನದಲ್ಲಿ ಬಹಳ ಜನಪ್ರಿಯವಾಗಿದ್ದ ಮ್ಯೂಸಿಕ್ ಬಾಕ್ಸ್‌ಗಳು ಮೊದಲು ಕಂಡವು. ಈ ಸಂಗ್ರಹಾಲಯದ ವಿಶೇಷವೇ ಈ ಬಗೆಯ ಯಾಂತ್ರಿಕ ಸಂಗೀತ ಪೆಟ್ಟಿಗೆಗಳು. ಹಳೆಯ ಕಾಲದ ಹಕ್ಕಿ ಗಡಿಯಾರಗಳು ಮತ್ತು ಬೊಂಬೆಗಳ ಯಾಂತ್ರಿಕ ಚಲನೆಗಳನ್ನು ಅಳವಡಿಸಲಾಗಿದ್ದ ಗಡಿಯಾರಗಳನ್ನು ತಯಾರಿಸುವುದು ಗೃಹ ಕೈಗಾರಿಕೆಯಾಗಿ ಯೂರೋಪಿನ ಹಳ್ಳಿಗಳಲ್ಲಿ ಪ್ರಚಲಿತವಾಗಿತ್ತು. ಮೈಸೂರಿನ ಜಗನ್ಮೋಹನ ಚಿತ್ರಶಾಲೆಯಲ್ಲಿ, ಹೈದರಾಬಾದ್‌ನ ಸಾಲಾರ್ ಜಂಗ್ ಮ್ಯೂಸಿಯಂನಲ್ಲಿ ಇಂತಹ ಗಡಿಯಾರಗಳಿವೆ. ಅವು ಈಗಲೂ ಕೆಲಸ ಮಾಡುತ್ತಿವೆ ಎಂಬುದೇ ವಿಶೇಷ. ಇಲ್ಲಿರುವ ಎಲ್ಲಾ ಮ್ಯೂಸಿಕ್ ಬಾಕ್ಸ್‌ಗಳೂ ಸುಸ್ಥಿತಿಯಲ್ಲಿವೆ. ಸಂಗೀತವನ್ನು ಸೃಷ್ಟಿಸುತ್ತಿವೆ.

ನಮಗೆ ಸಿಕ್ಕಿದ್ದ ಗೈಡ್‌ಗೆ ಇಂಗ್ಲೀಷ್ ಬರುತ್ತಿರಲಿಲ್ಲ. ಒಬ್ಬ ತರುಣಿ ಆತ ಹೇಳಿದ್ದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡುತ್ತಿದ್ದಳು. ಒಂದು ಮ್ಯೂಸಿಕ್ ಬಾಕ್ಸ್‌ನಲ್ಲಿ ಬಹಳ ಸರಳವಾದ ವ್ಯವಸ್ಥೆ ಇತ್ತು. ಹಿಡಿಕೆಯನ್ನು ತಿರುಗಿಸಿದಂತೆ ಪುಟ್ಟಪುಟ್ಟ ಗೂಟಗಳು ಮೇಲೆದ್ದು ಗಾಳಿಯನ್ನು ನಿಯಂತ್ರಿಸಿ ಬೇರೆಬೇರೆ ಸ್ವರಗಳನ್ನು ಹೊರಡಿಸುತ್ತಿದ್ದವು. ಅಂದರೆ ಒಂದು ನಿರ್ದಿಷ್ಟ ಪಲ್ಲವಿಯನ್ನು ಮಾತ್ರ ನುಡಿಸಬಹುದಾಗಿತ್ತು. ಬೇರೊಂದು ಪಲ್ಲವಿಗೆ ಬೇರೆ ವಾದ್ಯ - ಹೀಗೆ. ಪಾಶ್ಚಾತ್ಯ ಸಂಗೀತದ ಕೆಲವು ಪುಟ್ಟ ಗೀತೆಗಳನ್ನು ಕೇಳಿದೆವು. ಮುಂದಿನ ಹಂತದಲ್ಲಿ ಇನ್ನೂ ಸ್ವಲ್ಪ ಕ್ಲಿಷ್ಟತೆ

ಸಂಗೀತ ಮುದ್ರಣ



ಮೊಳೆಗಳನ್ನು ಹೊಡೆದಿರುವ ಸಿಲಿಂಡರ್



ಅತಿ ಸರಳವಾದ ಯಾಂತ್ರಿಕ ಹಾರ್ಮೋನಿಯಂ



ಸಂಗೀತ ಯಂತ್ರ



೧೫೭೦ರಲ್ಲಿ ಪ್ರಕಟವಾದ ಸಂಗೀತ ಗ್ರಂಥ


ಕಂಡುಬಂದಿತು. ಗೂಟಗಳ ಬದಲು ಸಿಲಿಂಡರ್ ಆಕಾರದ ಮರದ ದಿಮ್ಮಿಯ ಮೇಲೆ ಕಬ್ಬಿಣದ ಮೊಳೆಗಳನ್ನು ಹೊಡೆಯಲಾಗಿತ್ತು. ಸಿಲಿಂಡರ್‌ಅನ್ನು ತಿರುಗಿಸಲು ಹಿಡಿಕೆ ಇತ್ತು. ಇದನ್ನು ತಿರುಗಿಸಿದೊಡನೆ ಪಲ್ಲವಿ ಆರಂಭವಾಗುತ್ತಿತ್ತು. ಮೊಳೆಗಳು ಗೂಟಗಳನ್ನು ತಳ್ಳುತ್ತಿದ್ದವು. ಅದಕ್ಕೆ ಅನುಗುಣವಾಗಿ ಬೇರೆ ಬೇರೆ ಸ್ವರಗಳು ಕೇಳುತ್ತಿದ್ದವು.

ಮುಂದಿನ ಹಂತ ಇನ್ನೂ ಸ್ವಾರಸ್ಯಕರವಾಗಿತ್ತು. ಮೊಳೆಗಳೂ ಇಲ್ಲ, ಗೂಟಗಳೂ ಇಲ್ಲ. ತೆಳ್ಳನೆಯ ಕಾಗದದಂತಹ ಬಟ್ಟೆಯ ಮೇಲೆ ಚಿಕ್ಕ ಚಿಕ್ಕ ರಂಧ್ರಗಳು; ಅವುಗಳ ಮೂಲಕ ಗಾಳಿಯ ನಿಯಂತ್ರಣ. ಈ ರಂಧ್ರಗಳ ವಿನ್ಯಾಸವೇ ಸ್ವರಗಳನ್ನು ಸೃಷ್ಟಿಸುವುದು. ಆದರೆ ಈ ಬಟ್ಟೆ/ಕಾಗದ ಮುಂದೆ ಮುಂದೆ ಸಾಗಬೇಕಲ್ಲ; ಅದಕ್ಕಾಗಿ ಒಂದು ಹಿಡಿಕೆ. ಅದನ್ನು ತಿರುಗಿಸುತ್ತಾ ಹೋದಂತೆ ಹಾಡು ಸಾಗುವುದು.

ಗೈಡ್ ಇದನ್ನೆಲ್ಲಾ ವಿವರಿಸುತ್ತಿದ್ದಾಗ ಒಬ್ಬ ಪ್ರಭೃತಿಗೆ ಪ್ರಶ್ನೆಯೊಂದು ಮೂಡಿತು. ಆ ರಾಜ ಅಥವಾ ಗವರ್ನರ್‌ಗೆ ಇಷ್ಟೆಲ್ಲಾ ಏಕೆ ಬೇಕಿತ್ತು? ವಾದ್ಯಗಳನ್ನು ನುಡಿಸಲು ಜನರ ಕೊರತೆಯಿತ್ತೇ? ಇದಕ್ಕೆ ಸಿಕ್ಕ ಉತ್ತರ ಸ್ವಾರಸ್ಯವಾಗಿತ್ತು. ಪ್ರತಿಯೊಂದು ಬಾರಿ ರಾಜ ಬಂದಾಗ ಹೋದಾಗ, ಸಭೆ ಕರೆದಾಗ ರಾಷ್ಟ್ರ ಗೀತೆ (ಅಥವಾ ಅದಕ್ಕೆ ಸಮಾನವಾದದ್ದು) ನುಡಿಸಬೇಕಾಗಿತ್ತು. ಜನಾರು ವಾದ್ಯಗಳು - ಅದಕ್ಕೊಬ್ಬ ಮಾಸ್ಟರ್ (ಸಂಗೀತ ನಿರ್ದೇಶಕ) - ಹೀಗೆ ಅದಕ್ಕೆ ಬೇಕಾಗುವಷ್ಟು ಜನ ನಿಲ್ಲಲು ಅಲ್ಲಿ ಸ್ಥಳವಿರಲಿಲ್ಲ. ಆದ್ದರಿಂದ ಈ ಯಂತ್ರವನ್ನು ಆ ಗೀತೆಯನ್ನು ನುಡಿಸಲು ತಯಾರು ಮಾಡಿಟ್ಟುಬಿಟ್ಟರೆ ಒಬ್ಬನೇ ವ್ಯಕ್ತಿ ಸಾಕಲ್ಲವೇ? ಆತ ಹಿಡಿಯನ್ನು ತಿರುಗಿಸಿದರೆ ಸಾಕು! ಹೀಗೆ ಬೇರೆ ಬೇರೆ ಹಾಡುಗಳನ್ನು ನುಡಿಸಲು ಬೇಕಾಗುವ ತೂತುಗಳ ಕಾಗದಗಳು ದಪ್ಪ ಬೈಂಡಿನ ಪುಸ್ತಕದಂತೆ ಕಾಣುತ್ತಿದ್ದವು. ಕೆಲವರು ತಮಗೆ ಬೇಕಾದುದನ್ನು ನುಡಿಸಲು ವಿನಂತಿಸಿಕೊಂಡು ಕೇಳಿ ಆನಂದಿಸಿದರು.

ಮುಂದಿನ ಹಂತದಲ್ಲಿ ಕಾಗದದ ಹಾಳೆಗಳು ವೃತ್ತಾಕಾರವಾಗಿದ್ದವು. ಅದರಲ್ಲಿಯ ಚೌಕಾಕಾರದ ತೂತುಗಳು ಹಿಂದೆ ಕಂಪ್ಯೂಟರ್‌ಗಳಲ್ಲಿ ಬಳಕೆಯಾಗುತ್ತಿದ್ದ ಪಂಚ್ಡ್ ಕಾರ್ಡ್‌ಗಳನ್ನು ಹೋಲುತ್ತಿದ್ದವು. ಇದರಲ್ಲಿ ಇನ್ನೊಂದು ಬದಲಾವಣೆಯೂ ಇತ್ತು. ಹಾಡು ಚಕ್ರದ ಒಳ ವೃತ್ತದಿಂದ ಆರಂಭವಾಗಿ ಕ್ರಮೇಣ ಹೊರಭಾಗಕ್ಕೆ ಸುರುಳಿಯಂತೆ ಸಾಗುತ್ತಿತ್ತು. ಅರ್ಥಾತ್ ದಶಕಗಳ ಹಿಂದಿನ ಗ್ರಾಮಾಫೋನ್ ರೆಕಾರ್ಡ್‌ಗಳದ್ದು ಇದೇ ತತ್ವ. ಬಹುಶಃ ಎಡಿಸನ್ ಇಂತಹ ಮ್ಯೂಸಿಕ್ ಬಾಕ್ಸ್‌ಗಳನ್ನು ನೋಡಿಯೇ ತನ್ನ ಯಂತ್ರವನ್ನು ವಿನ್ಯಾಸಗೊಳಿಸಿರಬೇಕು. ಗಾಳಿಯನ್ನು ನಿಯಂತ್ರಿಸುವುದನ್ನೇ ಆತ ಎಲೆಕ್ಟ್ರಿಕಲ್ ಸಿಗ್ನಲ್‌ಗಳನ್ನಾಗಿ ಪರಿವರ್ತಿಸಿರಬೇಕು ಎಂದೆನ್ನಿಸಿತು. ಗ್ರಾಮಾಫೋನ್‌ಗಳಿಗೆ ಅವಶ್ಯವಾಗಿ ಬೇಕಾಗಿದ್ದ ಪುಟ್ಟ ಸೆನ್ಸರ್‌ಗಳ ಆವಿಷ್ಕಾರ ಮತ್ತು ಮೋಟರ್‌ಗಳ ವಿನ್ಯಾಸಗಳನ್ನೂ ವಿವರಿಸಲಾಗಿದೆ.

ಮುಂದೆ ವಿವಿಧ ಹಂತಗಳಲ್ಲಿ ಗ್ರಾಮಾಫೋನ್‌ಗಳ ವಿನ್ಯಾಸ ಬದಲಾದದ್ದು, ಮುಂದೆ ಕ್ಯಾಸೆಟ್ ಟೇಪ್‌ಗಳು ಬಂದದ್ದು, ಅವೇ ಸಿ.ಡಿ.ಗಳಾಗಿ ಅವತಾರ ಬದಲಾಯಿಸಿದ್ದನ್ನು ಹಂತಹಂತವಾಗಿ ವಿವರಿಸಿದೆ. ಮೂಲ ವಿನ್ಯಾಸ - ಚಕ್ರಾಕಾರವಾಗಿ ಹಾಡನ್ನು ಕೊರೆಯುವ ತಂತ್ರ-ಮಾತ್ರ ಹಾಗೆಯೇ ಉಳಿದುಕೊಂಡುಬಂದಿದೆ ಎಂಬುದು ಅದ್ಭುತ ಎನ್ನಿಸುತ್ತದೆ.



ಇದೇ ತತ್ವವನ್ನು ಬಳಸಿ ಉದ್ದ ಕೊಳವೆಗ... ಆರ್ಗನ್ ವಾದ್ಯವನ್ನು ನುಡಿಸುವ ವ್ಯವಸ್ಥೆಯೂ ಇತ್ತು. ಇಂದಿನ ಎಲೆಕ್ಟ್ರಾನಿಕ್ ಯುಗದಲ್ಲಿ ಈ ಬಗೆಯ ಯಂತ್ರಗಳು ಮ್ಯಾಜಿಕ್ ಎಂದೆನಿಸಿಕೊಳ್ಳುತ್ತವೆ. ಏಕೆಂದ... ತೀರಾ ಇತ್ತೀಚೆಗೆ ಹಕ್ಕಿಯ ಗಡಿಯಾರವನ್ನು ಕಂ... ಬಾಲಕಿಯೊಬ್ಬಳು ಅದನ್ನು ಹಿಂದೆ ಮುಂದೆ ತಿರುಗಿ... ನೋಡಿ 'ಇದಕ್ಕೆ ಸೆಲ್ ಹಾಕುವುದೆಲ್ಲಿ?' ಎಂದು ಕೇಳಿದ್ದಳು.

ಮುಂದೆ ಆ ಗೈಡ್ ಕ್ಯಾಮೆರಾಗಳ ವಿಕಾಸವನ್ನು ವಿವರಿಸಿದ; ಕೋಟೆಯ ವಿನ್ಯಾಸವನ್ನೂ ವಿವರಿಸಿದ... ಅಲ್ಲೊಂದು ಗೇಟ್ ಇದೆ. ಆದರೆ ಇದು ಮೋಸದ ಗೇಟ್. ಒಳಗೆ ಪ್ರವೇಶಿಸುವಂತಿಲ್ಲ. ಅದರ ಮೇ... ಸೈನಿಕ ಅಡಗಿ ಕುಳಿತಿರುತ್ತಾನಂತೆ. ಶತ್ರು ಈ ಗೇಟ್ ಮೂಲಕ ಒಳಗೆ ನುಗ್ಗೋಣ ಎಂದು ಬಂದಾ... ಮೇಲಿನಿಂದ ಅವನ ಮೇಲೆ ಆಕ್ರಮಣ ಮಾಡುವುದು ಉದ್ದೇಶವಂತೆ. ಇದನ್ನು ಆ ಗೈಡ್ ಅಭಿನಯಪೂರ್ವಕ... ವಾಗಿ ವಿವರಿಸಿದಾಗ ಭಾಷೆ ತೊಡಕು ಎನ್ನಿಸಲೇ ಇಲ್ಲ.

ದೂರದ ಪುಟ್ಟ ಹಳ್ಳಿಯಲ್ಲಿ ಅಡಗಿ ಕುಳಿತಿರುವ ಈ... ಪುಟ್ಟ ಮ್ಯೂಸಿಯಂ ಒಂದು ಹೊಸ ಅನುಭವವನ್ನು ನೀಡಿತು.

ಬಿ. ಎಸ್. ಶೈಲಜಾ
ಜವಹರ್‌ಲಾಲ್ ನೆಹರೂ ತಾರಾಲಯ, ಹೈಗ್ರೌಂಡ್ಸ್
ಬೆಂಗಳೂರು - ೫೬೦ ೦೦೧



ಹೊರಗೆ ಕಾಣುವುದೆಲ್ಲ ಒಳಗಿರುವ ಹಾಗಲ್ಲ
ಒಳಗಿರುವುದಿದ್ದಂತೆ ಹೊರಗೆ ಕಾಣುವುದಿಲ್ಲ!
ಒಳಗಿಳಿದು ನೋಡಿದರೆ ಏಕತೆಯ ಸುಳಿವಿಲ್ಲ
ಮನುಜನೊಳಹೊರಗೊಂದು ಸೂತ್ರವೆಂಬುದೆ ಇಲ್ಲ!

ಮನುಜಮನೋಲೋಕಕ್ಕೆ ಯಾ ದಾರಿ ಯಾ ಬಾಗಿಲು ?
ಹೊರಬೆಳಕೆ ಬರಬೇಕೆ ಒಳಗತ್ತಲೆ ಕಳೆಯಲು ?
ಹೊರಗಣ್ಣಿಗೆ ಕಾಣಲುಂಟೆ ಒಳಗೆ ಕುದಿವ ಕಾವು ?
ಕಾವಿನಲ್ಲೆ ಅರಳುವುದು ಒಳಬೀಜದ ಹೂವು !

ಜಗದ ಮಡಿಲಿಗೆ ಮುತ್ತು ಸಿಂಪು ಕೊಡುವುದು ಹೆತ್ತು
ಕತ್ತಲೆಯ ಕರುಳಿಗೂ ಬೆಳಕಿನಾತಯ ಗೊತ್ತು !
ಶಿಲೆಯ ಜಡತನದಲ್ಲು ಕಲೆಯ ಅಂಕುರದೊಲವು
ಅರಳುವುದು ಬುವಿಯೊಡಲ ಸವಿಗನಸಿನ ನಿಲುವು !

ಒಳಮನದ ಕೆಳಸ್ತರದ ಬಯಕೆಗಳ ಬದಿ ದೂಡಿ
ಧ್ವನಿತರಂಗದ ದಾರಿ ಹಿಡಿಯುವುದು ಬಾನಾಡಿ !


ಬಿ.ಎ.ಸನದಿ
ಕುಮಟಾ (ಉ.ಕ.)




With Best Complimets From

ADDONE PUBLISHING


T.C. 27/1173, Mathrubhumi Road, Vanchiyoor P. O, Thiruvananthapuram-695035
Phone : 0471-2474451, 2576110. Website : www.addone.in




₹ 230



₹ 340



₹ 390



₹ 300




₹ 210




₹ 340




₹ 340



₹ 460



₹ 700




₹ 700



₹ 390



₹ 750




₹ 460

Company Authorised Dealer

SRI MEENAKSHI BOOK AGENCIES

33/27, 106, North 5th Praharam, Thiruvanai Kovil, Trichy-5, Cell : 9787816222



ಎಲ್ಲರಂಥವನಲ್ಲ ನನ ನಲ್ಲ!

"ನನ್ನ ಗಂಡನ್ನ ನಾನು ಪ್ರಕೃತಿಗೇ ಬಿಟ್ಟುಬಿಡ್ತೀನಿ ಡಾಕ್ಟರ್ !"

ನೀಳದೇಹದ ಬಿಳಿಬಿಳಿ ಮುಖದ ಆ ಬುದ್ಧಿವಂತ ಡಾಕ್ಟರು ತಮ್ಮ ದಪ್ಪ ಕನ್ನಡಕದ ಹಿಂದಲೇ ಅವಳನ್ನು ಪರಮಾಶ್ಚರ್ಯದಿಂದ ದಿಟ್ಟಿಸಿದರು. ಶೂನ್ಯವನ್ನೇ ನೋಡುತ್ತಾ ಸೆಟ್ಟಗೆ ಕುಳಿತಿದ್ದ ಅವಳ ದುಂಡುಮುಖದಲ್ಲಿ ದೃಢನಿಶ್ಚಯ ಮಡುಗಟ್ಟಿತ್ತು.

"ಇದೇನು ತಾಯಿ ಹೀಗೆ ಹೇಳ್ತೀರಿ ? ಸಾಮಾನ್ಯವಾಗಿ ರೋಗಿಯ ಕಡೆಯವರಿಗೆ ಜೀವ ಉಳಿದಷ್ಟು ದಿನ ಉಳೀಲಿ ಅನ್ನೋಂಥ ಆಸೆ ಇರತ್ತೆ. ಅವರಾಗೇ ವೆಂಟಲೇಟರ್ ಹಾಕಿಬಿಡಿ ಡಾಕ್ಟರ್ ಅಂತ ಕೇಳ್ಕೋತಾರೆ... ಅಂಥದ್ರಲ್ಲಿ...?"

"ಹಾಗಾದ್ರೆ, ಡಾಕ್ಟರ್, ನಾನೊಂದು ಮಾತು ಕೇಳ್ತೀನಿ. ನೀವು ಮುಚ್ಚುಮರೆ ಇಲ್ದೆ ನನಗೆ ಸತ್ಯಾನೇ ಹೇಳ್ಬೇಕು."

"ಕೇಳಮ್ಮ..."

"ನಿಮ್ಮ ಸಲಹೆ ಪ್ರಕಾರ ನಾನು ವೆಂಟಲೇಟರ್ ಹಾಕಿಸ್ತೀನಿ. ಆದ್ರೆ... ನನ್ನ ಪತಿಯ ಆರೋಗ್ಯ ಸುಧಾರಣೆಗೆ ಎಷ್ಟು ಪರ್ಸೆಂಟ್ ಭರವಸೆ ಕೊಡ್ತೀರಿ ?"

ವೈದ್ಯರು ತಲೆ ಅಲುಗಿಸಿಬಿಟ್ಟರು. "ಇಲ್ಲಮ್ಮ... ಈ ಕೇಸಿನಲ್ಲಿ ನಾನು ಏನೇನೂ ಭರವಸೆ ಕೊಡಲಾರೆ."

"ಹಾಗಾದೆ ನನ್ನ ನಿರ್ಧಾರದಲ್ಲೂ ಬದಲಾವಣೆ ಇಲ್ಲ ಡಾಕ್ಟರ್... ಸುಮ್ಮನೆ ಸಾವನ್ನು ಮುಂದೂಡುತ್ತಾ, ಯಮಯಾತನೆ ಅನುಭವಿಸೋದು ಬೇಡ. ಆದಷ್ಟು ಬೇಗ ನೋವುಗಳಿಂದ ಬಿಡುಗಡೆ ಸಿಗಲಿ !"

"ಸರಿಯಮ್ಮ..." ಡಾಕ್ಟರು ತಮ್ಮ ಭಾರವಾದ ಬೂಟುಗಳನ್ನು ಟಕಟಕ ಸಪ್ಪಳ ಮಾಡುತ್ತಾ ನಿಧಾನವಾಗಿ ವಾರ್ಡಿನಿಂದ ನಡೆದುಹೋದರು.

ಆ ಸಪ್ಪಳ ಮರೆಯಾಗುತ್ತಿದ್ದಂತೆ ರಾಣಿ ಕುಸಿದು ಬಿದ್ದಳು. ತಡೆಗಟ್ಟಿದ್ದ ಕಣ್ಣೀರು ಧಾರೆಯಾಗಿ ಸುರಿಯತೊಡಗಿತು. "ಆಯ್ತು... ಮುಗಿದುಹೋಯ್ತು... ಸದಾಕಾಲ ಭಯದಿಂದ ನಿರೀಕ್ಷಿಸುತ್ತಿದ್ದ ಕರಾಳ ಗಳಿಗೆ ಬಂದೇಬಿಟ್ಟಿತು !" ನೆನಪು-ದುಃಖ-ವಿಸ್ಮೃತಿಗಳ ನಡುವೆ ಒದ್ದಾಡತೊಡಗಿತು ಅವಳ ಜೀವ.

* * *

ಇತ್ತೀಚಿನ ದಿನಗಳಲ್ಲಿ ಸತೀಶ ಯಾವಾಗಲೂ ತನ್ನ ಜತೆಯಲ್ಲೇ ಇರಲು ಬಯಸುತ್ತಿದ್ದ. ಮಗುವಿನಂತೆ ಹಿಂದೆ ಹಿಂದೆ ಸುತ್ತುತ್ತಿದ್ದ. "ರಾಣೀ, ಇನ್ನೈದು ವರ್ಷ ಆದ್ರೂ ಬದುಕಿರ್ತೀನಿ ಅಲ್ವೇನೇ ?" ಆಗಾಗ ಕೇಳುತ್ತಿದ್ದ. ಹೊಟ್ಟೆಯಲ್ಲಿ ಸಂಕಟ ಕಿವುಚುತ್ತಿತ್ತು. ತೋರಗೊಡದೆ ನಗುನಗುತ್ತಾ "ಹಾಗೇನಿಲ್ಲ. ಡಯಾಲಿಸಿಸ್ ಆಗಿಯೂ ಇಪ್ಪತ್ತು-ಮುವ್ವತ್ತು ವರ್ಷ ಬದುಕಿರೋರೂ ಇದಾರೆ" ಅಂದರೆ, ಸಮಾಧಾನದಿಂದ "ಬೇಡ ರಾಣೀ... ನಂಗೆ ಐದು ವರ್ಷ ಸಾಕು" ನಿಟ್ಟುಸಿರಿಡುತ್ತಿದ್ದ.

ಅವನ ಈ ಪುಟ್ಟ ಆಸೆಯೂ ನೆರವೇರಲಿಲ್ಲ.

ಅವತ್ತು ಭಾನುವಾರ. ಡಯಾಲಿಸಿಸ್ ಇರಲಿಲ್ಲ. ಮಧ್ಯಾಹ್ನ ಅವನಿಗಿಷ್ಟವಾದ ಖಾರ ಬೇಳೆ, ಹಾಗಲಕಾಯಿ ರಾಯತ ಮಾಡಿದ್ದೆ. ತುತ್ತು ತುತ್ತಿಗೂ ಹೊಗಳುತ್ತಲೇ ಒಂದು ಮುಷ್ಟಿ ಹೆಚ್ಚಾಗೇ ಉಂಡಿದ್ದ. ಇಬ್ಬರಿಗೂ ಕಣ್ಣೆಳೆಯುತ್ತಿತ್ತು. ಗಡದ್ದಾಗಿ ನಿದ್ದೆ ತೆಗೆದೆವು. ಐದು ಗಂಟೆ ಸುಮಾರಿಗೆ ಧಡಕ್ಕನೆ ಎದ್ದು ಕೂತವನು ನನ್ನ ಭುಜ ಹಿಡಿದು ಅಲುಗಿಸುತ್ತಾ "ರಾಣಿ ಏಳೇ, ಒಂದು ರೌಂಡು ಹೊರಗೆ ಹೋಗಿ ಬರೋಣ" ಅಂದ ಉತ್ಸಾಹದಿಂದ. ನಾನು ಕಣ್ಣೇ ಬಿಡದೆ "ಅಯ್ಯೋ, ನಂಗಿವತ್ತು ಮೂಡಿಲ್ಲ. ಮನೇಲೇ ಹಾಯಾಗಿರೋಣ. ಬೇಕಾದ್ರೆ ಬಿಸಿ ಬಿಸಿ ಬಜ್ಜಿ ಮಾಡ್ಕೊಡ್ತೀನಿ" ಅಂದರೆ "ಅದು ಬ್ಯಾಡ ಅಂತಲೇ ಹೊರಗೆ ಹೋಗೋಣ ಅಂತಿರೋದು. ಯಾವಾಗ್ಲೂ ನೀನು ದುಡಿದುದುಡಿದು ಹೈರಾಣ ಆಗೋದು ಇದ್ದೇ ಇದೆ. ಏಳು ಮತ್ತೆ!... ಮಸಾಲೆ ದೋಸೆ ಕೊಡಿಸ್ತೀನಿ ಬಾರೇ..." ಅವನ ಆಮಿಷ ಹೆಚ್ಚಾದಂತೆ ಮೇಲೆದ್ದು ಮುಖ ತೊಳೆದು ಹಸಿರು ಗಾರ್ಡನ್ ಸೀರೆ ಉಟ್ಟಳು. "ಇದು ಬೇಡ... ಪ್ರಿಂಟೆಡ್ ಸಿಲ್ಕ್ ಉಟ್ಕೋ... ನನ್ನ ಹುಡುಗಿ ಟಿಪ್‌ಟಾಪ್ ಆಗಿರ್ಬೇಕು ಕಣೇ..." ಕೆನ್ನೆ ಹಿಂಡಿದ.

ಆಟೋದಿಂದ ಇಳಿಯುತ್ತಿರುವಂತೆ ರಸ್ತೆ ಬದಿಯಲ್ಲಿ ಘಮಘಮಿಸುವ ಮಲ್ಲಿಗೆ ದಂಡೆ ಅವನ ಕಣ್ಣಿಗೆ ಬಿತ್ತು. "ಮಲ್ಲಿಗೆ ತಗೊಳ್ಳೋಣ... ಮುಡ್ಕೊಂಡು ಬಿಡು..." ಸಂಭ್ರಮದಿಂದ ಅತ್ತ ನಡೆದ. "ನಾನು ಹೆಡ್‌ಬಾತ್ ತಂದಿಲ್ಲ ಸಿಕ್ಕಸಿಕೊಂಡ್ರೆ ಬಿದ್ಹೋಗತ್ತೆ" ಮೂಗೆಳೆದೆ. "ಅದೂ ಒಂದು ಸಮಸ್ಯೇನಾ ? ಬಾ ತಗೊಂಡ್ಬಾಯ್ತು" ಪಕ್ಕದಲ್ಲೇ ಇದ್ದ ಬಳೆ ಅಂಗಡಿಗೆ ಕರೆದೊಯ್ದ. ಆ ಪುಟ್ಟ ಅಂಗಡಿ ತುಂಬ ಹೆಂಗಸರು ತುಂಬಿಹೋಗಿದ್ದರು. ಹಾಗಾಗಿಯೇ ಅವನು ಹೊರಗೇ ನಿಂತು... ನೀನು ತಗೊಂಡು ಬಾ" ಕಾಯುತ್ತಾ ನಿಂತ. ಆಂತೂ ನನ್ನ ಹೆರಳಲ್ಲಿ ಮಲ್ಲಿಗೆ ದಂಡಮೇಲೇ ಮಹರಾಯನಿಗೆ ತೃಪ್ತಿ!

ಆಮೇಲೆ ದೋಸೆ ತಿಂದದ್ದೂ ಆಯ್ತು. "ನಿಂಗೆ ತುಂಬ ಇಷ್ಟ ಅಲ್ವಾ ಮಾವಿನ ಹಣ್ಣು?" ಅಂತ ಜೂಸ್ ಭರ್ತಿ ರಸಪೂರಿ ತುಂಬಿಸಿದ. "ಬ್ಯಾಂಕಿಗೆ ಹೋಗಿ ಒಂದಷ್ಟು ಹಣ ಡ್ರಾ ಮಾಡಿಬಿಡೋಣ ಬಾ." ಬ್ಯಾಂಕ್ ಕಡೆ ನಡೆದಾಗ "ಸದ್ಯಕ್ಕೇನೂ ಅರ್ಜೆಂಟಿಲ್ಲ" ಅಂದೆ ಅವನೆಂದರೂ

ಭಾರತೀ ಕಾಸರಗೋಡು

''ಹಾಗಲ್ಲ ರಾಣೀ, ಆಪದ್ಧನ ಅಂತ ಒಂದಷ್ಟು ಹಣ ಕಟ್ಟೊಗೇ ಕೈಲಿರಬೇಕು'' ಅಂತ ಹೆಚ್ಚಾಗಿಯೇ ತೆಗೆದುಕೊಂಡು ಅವಳ ಪರ್ಸ್ ತುಂಬಿಸಿದ. ''ಸರಿ. ಇನ್ನು ಮನೆಗೆ ಹೋಗಣ್ವಾ ?'' ಅವಳಂದಳು. ''ಇಷ್ಟು ಬೇಗ ಹೋಗಿ ಏನೇ ಮಾಡೋದು ? ಬಾ. ಪಾರ್ಕಿನಲ್ಲಿ ಕೂತಿದ್ದು ಹೋಗೋಣ.'' ಅವಳ ಕೈಹಿಡಿದು ಹೂಗಿಡಗಳಿಂದ ನಳನಳಿಸುತ್ತಿದ್ದ ತೋಟಕ್ಕೆ ಕರೆದೊಯ್ದ. ಆ ಹಸಿರು ಉಸಿರಿನಿಂದ ಹೊಸ ಚೈತನ್ಯ ಪಡೆದವನಂತೆ ಲಕಲಕಿಸುತ್ತಿದ್ದ. ನಸುಗತ್ತಲೆ ತೆರೆತೆರೆಯಾಗಿ ಆವರಿಸತೊಡಗಿದಂತೆ ''ಏಳಿನ್ನು ಹೊರಡೋಣ ಸೊಳ್ಳೆಗಳು ಶುರು ಆಗತ್ತೆ'' ಎಂದು ಮೇಲೆದ್ದು ಹೊರಟ. ಪಾರ್ಕಿನ ತುದಿಯಲ್ಲಿ ಮೆಲ್ಲಗೆ ಮೆಟ್ಟಿಲಿಳಿಯುತ್ತಿದ್ದಂತೆ... ಅದೇನಾಯಿತೋ... ಕಾಲು ಜಾರಿತು. ನೆಲದ ಮೇಲೆ ಕುಸಿದುಬಿದ್ದ. ''ರಾಣೀ, ಗಾಬ್ರಿ ಆಗ್ಬೇಡ... ಎಲ್ಲಿ ಕೈ ಕೊಡು ?'' ಏಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕೃಶದೇಹಿ ಅವನು. ಆದರೂ ಡಯಾಲಿಸಿಸ್ ಆಗಿ ಎರಡು ದಿನ ಕಳೆದದ್ದರಿಂದ ದ್ರವಗಳು ತುಂಬಿಕೊಂಡು ಮೈತೂಕ ಹೆಚ್ಚಾಗಿಬಿಟ್ಟಿತ್ತು. ನಾನು ಗಾಬರಿಯಾಗಿ ಸುತ್ತಮುತ್ತ ನೋಡಿದೆ. ಪಾರ್ಕಿನಲ್ಲಿ ಜನ ಚೆದುರಿದ್ದರು. ಹತ್ತಿರವೇ ಇದ್ದ ಒಂದಿಬ್ಬರು ಮಹಿಳೆಯರೇ ಓಡೋಡಿ ಬಂದರು. ಸತೀಶನನ್ನು ಮೆಲ್ಲಗೆ ಮೇಲೆಬ್ಬಿಸಿದರು. ಆಟೋ ಕೂಡ ತಂದುಕೊಟ್ಟರು. ಕೂಡಲೇ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋದೆ.

''ಏನಿಲ್ಲ ರಾಣೀ, ಅಯೋಡೆಕ್ಸ್ ಹಚ್ಚಿದರೆ ಸರಿಹೋಗುತ್ತೆ. ನೀನು ಕಂಗಾಲಾಗಬೇಡ.'' ದಾರಿಯುದ್ದಕ್ಕೂ ನನ್ನನ್ನೇ ಸಂತೈಸುತ್ತಿದ್ದ!

ಆಸ್ಪತ್ರೆಯಲ್ಲಿ ಬಗೆಬಗೆಯ ತಪಾಸಣೆಗಳಾದವು. ಅವತ್ತೇ ಅವನೇ ಡ್ರಾ ಮಾಡಿದ್ದ 'ಆಪದ್ಧನ' ಹೀಗೆ ಉಪಯೋಗವಾಯಿತು. ''ಹಿಪ್‌ಬೋನ್ ಮುರಿದಿದೆ. ತುರ್ತು ಶಸ್ತ್ರಚಿಕಿತ್ಸೆ ಆಗ್ಬೇಕು'' ಅಂದರು ವೈದ್ಯರು. ನಾನು ನಮ್ಮ ನೆಫ್ರಾಲಜಿಸ್ಟ್‌ನ ಸಲಹೆ ಕೇಳಿದೆ. ಅವರು ಒಪ್ಪಿದರು. ಶಸ್ತ್ರಚಿಕಿತ್ಸೆಯೇನೋ ಆಯಿತು. ಆದರೆ ಮರುದಿನ ಡಯಾಲಿಸಿಸ್ ಮಾಡಲು ಹೋದರೆ, ರಕ್ತದಲ್ಲಿ ಪೊಟಾಷಿಯಂ ತುಂಬ ಜಾಸ್ತಿ ಆಗಿತ್ತು; ಜತೆಗೆ ರಕ್ತದೊತ್ತಡದಲ್ಲಿ ವಿಪರೀತ ಏರಿಳಿತ. ಹಾಗಾಗಿ ಡಯಾಲಿಸಿಸ್ ಪೂರ್ತಿ ಆಗಲಿಲ್ಲ. ಅಷ್ಟರಲ್ಲಿ ಸತೀಶ ಎಲ್ಲ ಭರವಸೆಯನ್ನೂ ಕಳಕೊಂಡುಬಿಟ್ಟಿದ್ದ. ಆಹಾರ ಕೊಡಲು ಹೋದರೆ, ''ಊಟಾನಾ ? ನಿನ್ನೇನೇ ಆಯ್ತಲ್ಲ? ಸಾಕು ಸಾಕು ಬಲವಂತ ಮಾಡ್ಬೇಡ ಐ ವಾಂಟ್ ಟು ಡೈ !'' ಅಂದುಬಿಟ್ಟ. ಆದರೂ ವೈದ್ಯರು ಮತ್ತೆ ಡಯಾಲಿಸಿಸ್ ಪ್ರಯ... ಮಾಡಿದರು. ಅವನ ಶರೀರ ಅದನ್ನು ಸಂಪೂರ್ಣವಾಗಿ ನಿರಾಕರಿಸಿತು. ಇದೀಗ ಅ... ಯಾತನೆಗಳಲ್ಲಿ ಪ್ರಯಾಸದಿಂದ ಉಸಿರಾಡುತ್ತಾ ಮಲಗಿದಾನೆ. ಕೃತಕ ಉಸಿರಾಟದಿಂ... ಅವನ ವಾಸಿಯಾಗದ ನೋವುಗಳನ್ನು ಮುಂದುವರಿಸಲೇ ?

ತನ್ನ ಸಂಗಾತಿಯ ಒಡಲಿನಲ್ಲಿ, ಮನಸ್ಸಿನಲ್ಲಿ, ಆಗುತ್ತಿರಬಹುದಾದ ವೇದ... ಗಳನ್ನು ನೆನೆದು ರಾಣಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ದೂರದಿಂದ ಗಮನಿಸುತ್ತಿ... ಸಿಸ್ಟರು ಓಡಿಬಂದು ಅವಳ ಕೆನ್ನೆ-ಗಲ್ಲಗಳನ್ನು ಮೆಲ್ಲಗೆ ನೇವರಿಸತೊಡಗಿದಳು.

* * *

ನಮ್ಮೂರಿನ ಗಾಂಧಿಬಜಾರಿನಲ್ಲಿ ಆನಂದದಿಂದ ಅಡ್ಡಾಡಿಕೊಂಡಿದ್ದವಳಿಗೆ ದೂರ... ದೆಹಲಿಯಲ್ಲಿ ಕೆಲಸ ಸಿಗಬೇಕೇ ? ಆದರೇನು ? ಹೊಸ ಜೀವನದ, ಹೊಸ ಆರ್ಥಿ... ಸ್ವಾತಂತ್ರ್ಯಗಳ ಸವಿಗನಸುಗಳಿಗೆ ದೆಹಲಿಯ ದೂರ ಏನೇನೂ ಅಡ್ಡ ಬರಲಿಲ್ಲ. ಆದ... ಅಮ್ಮ ಹಾರಾಡಿದಳು. ''ಪ್ರಾಯದ ಹುಡುಗಿ... ಲಕ್ಷಣವಾಗಿ ಮದ್ವೆಮಾ... ಕಳಿಸಬೇಕೂಂತ ನಾನಿದ್ರೆ... ಕೆಲ್ಸದ ಮೇಲೆ ದಿಲ್ಲೀ ಸೀಮೆಗೆ ಕಳಿಸು ಅಂತೀಯಾ ? ಆದರೆ ಅಪ್ಪ ನನ್ನ ಪರ ನಿಂತರು. ''ಸುಮ್ನಿರು ನೀನು... ಮಕ್ಳು ದೇಶ ತಿರುಗಬೇಕ... ಕೋಶ ಓದ್ಬೇಕು... ಜತೇಗೆ ವಿಜಿ ಅಲ್ಲೇ ರೂಂ ಮಾಡ್ಕೊಂಡು ಇದಾನಲ್ಲ? ಈ... ಬೇಕಾದ್ರೆ ಅಕ್ಕ-ತಮ್ಮ ಒಂದು ಸಣ್ಣ ಮನೇನೇ ಮಾಡ್ಕೊತಾರೆ.'' ತಾ... ಮೊದಲಿಂದಲೂ ಅಪ್ಪನ ಮಗಳೇ! ಅವರಲ್ಲೇ ಹೆಚ್ಚು ಸಲಿಗೆ. ಗೆಳತಿಯರೊಂದಿ... ಸಿನಿಮಾಗೆ ಹೋಗಬೇಕಾದ್ರೂ ಅಷ್ಟೇ... ಅಮ್ಮ ಒಳಗೆಲ್ಲೋ ಇದ್ದಾಗ ಅಪ್ಪನೊಂದಿ... ಗುಸು ಗುಸು ! ಆಮೇಲೆ ಪುಸ್ತಕ ಎದೆಗವಚಿ ಕಾಲೇಜಿಗೆ ಹೊರಟರೆ ಅಪ್ಪ ''ಮಗೂ... ಕೆಮಿಸ್ಟ್ರಿ ಬುಕ್ ತಗೊಂಡೆ ತಾನೇ ?'' ಎಚ್ಚರಿಸುತ್ತಿದ್ದರು. ಹಾಗಂದರೆ ಆ ಪುಸ್ತಕದ... ನಿನಗೆ ಸಿನಿಮಾಗೆ ದುಡ್ಡು ಇಟ್ಟಿದೀನಿ ಅಂತ ಸೂಚನೆ !

ನಾನು ದೆಹಲಿಗೆ ಹೋಗುವ ವೇಳೆಗೆ ಸತೀಶನಿಗೂ ಬೆಂಗಳೂರಿಂದ ಅಲ್ಲಿಗ... ವರ್ಗವಾಗಿತ್ತು. ಬ್ಯಾಂಕಿನಲ್ಲಿ ಅವನಿಗೆ ಕೆಲಸ. ನನಗಂತೂ ಇದೊಂದೂ ತಿಳಿಯದು...

'ಕಾಲ-ಪ್ರಕ್ರಿಯೆ'



ಓಡುತ್ತಲೇ ಇದ್ದಾನೆ, ಪೋರನೊಬ್ಬ
ನಿರ್ಭಿಡೆಯಿಂದ ನಡುರಸ್ತೆಯಲಿ
ಸೈಕಲ್ಲಿನ ಟೈರನ್ನು ಉರುಳಿಸುತ್ತಾ...
ಶಾಲೆಯಲ್ಲಿ, ಪಾಟಿಯನ್ನು
ಎಂಜಲು ಹಚ್ಚಿ ಅಂಗಿಗೆ ತಿಕ್ಕಿಕೊಂಡದ್ದು
ತಕ್ಷಣಕ್ಕೆ ನೆನಪಾಗುತ್ತದೆ.
ಅಗೋ... ನೋಡಿ
ಬಸ್‌ಸ್ಟ್ಯಾಂಡಿನಲಿ ಹಸಿವ ನುಂಗಿದ
ಎಳೆಜೀವಗಳು ರಚ್ಚೆಹಿಡಿದು

ಹಠಮಾಡುತ್ತಿವೆ ತಾವು ಬದುಕಲು !
ಈ ಬಯಲಲ್ಲಿ ಅದೆಲ್ಲಿಂದಲೋ
ತೂರಿಬರುವ ಒಂಟಿರೋದನ ತೋಡಿರಾಗ
ಉಲಿಯುವಂತೆ !

ಯಾರ ಎದೆಯನ್ನೂ ಕಂಪಿಸದ
ಬಿಸಿಯುಸಿರ ಕಂಪನ !

ಈ ಮಣ್ಣು ಯಾರಿಗೆ ಪ್ರತಿಜ್ಞೆ ಮಾಡಿದೆಯೋ ಗೊತ್ತಿಲ್ಲ!
ಮಳೆ ತನ್ನ ಕರ್ತವ್ಯ ಮರೆತಾಗಲೂ,
ಬೊಗಸೆಯಷ್ಟಾದರೂ ಕಾಳನ್ನು ನೀಡಲು
ಹಾತೊರೆಯುತ್ತದೆ

ಒಂದು ಸಮ ಬೇಸಿಗೆಯೊಂದು
ನದಿಗಳನ್ನೇ ಕುಡಿದು ದಾಹ ಇಂಗಿಸಿಕೊಂಡಿತು
ಕಡಲು ನದಿಗೆ ಕಾಯುವುದಿಲ್ಲ
ಉಕ್ಕುವುದನ್ನೂ ನಿಲ್ಲಿಸುವುದಿಲ್ಲ

ಕತ್ತಲು ಕೋಣೆಯೊಳಗೆ ಚರ್ರನೆ ಕಡ್ಡಿಗೀಚಿ
ಮೊಂಬತ್ತಿ ಹಚ್ಚಿದರೆ,
ಕ್ಷಣಕಾಲವಾದರೂ ಕತ್ತಲು ಮರೆಯಾಗುತ್ತದೆ
ಕತ್ತಲು ಶಾಶ್ವತವೋ ಅಥವಾ ಬೆಳಕೋ ?

ಚಲಿಸುತ್ತಿರುವ ಈ ಯುಗದ ಬಸ್ಸು-
ಟಪಾಲು ಒಯ್ಯುವ ಬಸ್ಸಿನಂತೆ
ತನ್ನೊಳಗೆ ಯುಗಯುಗದ ಈ ಜಗದ
ತವಕ, ತಲ್ಲಣ; ನೋವು ನಲಿವನ್ನು ಹೊತ್ತು
ನಿಲ್ದಾಣವಿಲ್ಲದ ಊರಿಗೆ ಪಯಣಿಸುತ್ತಿದೆ.
ಈ ಜಗತ್ತು ಒಂದು ರಂಗಭೂಮಿಯಂತೆ!
ನಿನ್ನೆ ನಡೆದ ನಾಟಕದಲ್ಲಿ
ಅವನು,
ಅಕ್ಷರಶಃ ಕರ್ಣನಾಗಿಯೇ ನಟಿಸಿದ
ಇಂದು ಮುಂಜಾನೆ
ಭಿಕ್ಷುಕರನ್ನು ನಡೆ ಮುಂದಿನ ಮನೆಗೆಂದು ಜಬರಿಸಿದ.
ಈ ಕಾಲವೇ ಹೀಗೆ.
ಅದು ಹಿಂದಿನಂತಿರಲಾರದೇನೋ !
ಬದಲಾಗುವುದು ಇಲ್ಲವೇ, ಬದಲಾಯಿಸುವುದು
ಅದರ ಚಾಳಿ.

ಸಂತೋಷ ಅಂಗಡಿ
ಲಕ್ಷ್ಮೀ ನಗರ, ಬಾದಾಮಿ - ೫೮೭೨೦೧, ಬಾಗಲಕೋಟೆ ಜಿಲ್ಲೆ

ಆದರೆ ನಮ್ಮ ಹತ್ತಿರದ ಬಂಧು ರಾಜನಿಗೆ ಸತೀಶ ತುಂಬ ಆತ್ಮೀಯ. ಹಾಗಾಗಿ ಬೆಂಗಳೂರಿಂದ ಹೊರಡುವಾಗ ರಾಜ ನನಗೆ ಸತೀಶನ ಫೋನ್ ನಂಬರ್ ಕೊಟ್ಟು "ನಮ್ಮ ಸತೀಶ ತುಂಬ ಒಳ್ಳೇ ಹುಡುಗ. ಏನಾದ್ರೂ ಸಹಾಯ ಬೇಕಾದ್ರೆ ಅವನ್ಗೆ ಫೋನ್ ಮಾಡು" ಅಂತ ಹೇಳಿದ್ದ.

ಕೆಲಸಕ್ಕೆ ಸೇರಲು ದೆಹಲಿಗೆ ನಾನೊಬ್ಬಳೇ ಹೋದೆ. ಆಫೀಸಿನಲ್ಲಿ ರಿಪೋರ್ಟ್ ಮಾಡಿಕೊಂಡದ್ದೂ ಆಯ್ತು. ಸಂಜೆ ಕೆಳಗೆ ಬಂದು ವಿಜಿಗಾಗಿ ಕಾಯುತ್ತಾ ನಿಂತಾಗ ಅಕಸ್ಮಾತ್ತಾಗಿ ಕತ್ತೆತ್ತಿ ನೋಡಿದರೆ, ರಾಷ್ಟ್ರೀಕೃತ ಬ್ಯಾಂಕಿನ ಬೋರ್ಡು ಕಾಣಿಸಿತು. ಸತೀಶ ಈ ಶಾಖೆಯಲ್ಲೇ ಕೆಲಸ ಮಾಡುವುದು ಅನ್ನುವುದು ನೆನಪಾಯಿತು. ಹೇಗೂ ವಿಜಿ ಬರಲು ಇನ್ನೂ ವೇಳೆ ಇದ್ದದ್ದರಿಂದ ಸತೀಶನಿಗೆ ಫೋನ್ ಮಾಡಿದೆ.

"ಓ, ನೀನಾ ? ರಾಜ ಹೇಳಿದ್ದ ನಿಂವಿಷ್ಯ... ಎಲ್ಲೋ ಫೋನ್ ಮಾಡ್ಲೇ ಇಲ್ವಲ್ಲ ಅಂದ್ಕೊತಾ ಇದ್ದೆ... ಅಂದ್ಹಾಗೆ ಎಲ್ಲಿಂದ ಮಾತಾಡ್ತಿದೀರಿ ?" ಸ್ನೇಹಪೂರ್ಣವಾಗಿ ತೇಲಿಬಂತು ಸತೀಶನ ಇನಿದನಿ! "ಇಲ್ಲೇ, ನಿಮ್ಮ ಕಟ್ಟಡದ ಕೆಳಗೇ ಇದೀನಿ." 'ಅಯ್ಯೋ, ಹಾಗಾದ್ರೆ ಬನ್ನಿ ಮತ್ತೆ!"

ಮೊದಲ ನೋಟಕ್ಕೇ ಆತ್ಮೀಯನಾಗಿಬಿಟ್ಟ ಸತೀಶ. ಸ್ವಚ್ಛವಾದ ಮಾತು, ಸೌಜನ್ಯದ ನಡವಳಿಕೆ... ನೋಡಲು ಕೂಡ ಶಿವಸುಂದರ! ಅವನೂ ಆಗಾಗ ನನ್ನತ್ತ ನೋಡಿ ನೋಡಿ ನಗುತ್ತಿದ್ದ. "ನೀವೀಗ ನನ್ನ ಅತಿಥಿ" ಅಂತ ಉಪಾಹಾರಗೃಹಕ್ಕೆ ಕರಕೊಂಡು ಹೋಗಿ ತಿಂಡಿ-ಕಾಫಿ ಕೊಡಿಸಿದ. ಇದುವರೆಗೂ ಯಾವ ಪುರುಷನ ಜತೆಗೂ ಹೀಗೆ ಹೋಗಿದ್ದೇ ಇಲ್ಲ. ಸತೀಶ ಕರೆದಾಗ ಮಾತ್ರ ಎಷ್ಟೋ ಕಾಲದ ಆತ್ಮೀಯನೋ ಎಂಬಂತೆ ಅವನ ಜತೆ ಸ್ಕೂಟರೇರಿ ಹೋಗಿದ್ದೆ.

ವಿಜೀನೇ ದಿನಾ ಆಫೀಸಿಗೆ ಬಿಡುತ್ತಿದ್ದರೂ, ಸ್ವಲ್ಪ ಸಮಯದ ನಂತರ ಅವನಿಗೆ ಕೆಲಸದ ಒತ್ತಡ ಹೆಚ್ಚಾಗಿ, ಅವನಿಗೆ ಬಿಡಲು ಸಾಧ್ಯವಾಗಲಿಲ್ಲ. "ಹ್ಯಾಗೆ ಒಬ್ಬಳೇ ಹೋಗ್ತೀಯಾ ? ಸಿಟಿ ನಿಂಗಿನ್ನೂ ಹೊಸದು !" ವಿಜಿ ಒಂದು ದಿನ ಪೇಚಾಡಿಕೊಂಡಾಗ, ಸತೀಶನ ಸಹಾಯಹಸ್ತ ಕೂಡಲೇ ಧಾವಿಸಿ ಬಂತು! "ನಾನು ಸ್ವಲ್ಪ ದಿನ ಡ್ರಾಪ್ ಮಾಡ್ತೀನಿ ಬಿಡಿ... ಯಾಕೆ ವರಿ ಮಾಡ್ಕೋತೀರಿ ?" ಸತೀಶ ನಮ್ಮೂರ ಹುಡುಗ. ರಾಜನ ಶಿಫಾರಸು ಬೇರೆ ಇತ್ತು! ಹಾಗಾಗಿ ವಿಜಿ ಕೂಡಲೇ ಒಪ್ಪಿಕೊಂಡ. ಸತೀಶನ ನಗುಮುಖ ಕಂಡು ಈತನನ್ನು ನಂಬಬಹುದು ಅಂತ ತನಗೂ ಅನ್ನಿಸಿತು. ಅಥವಾ ಅದರಾಚೆಗಿನ ಮಧುರ ಭಾವವೊಂದು ಅದಾಗಲೇ ಮೆಲ್ಲಗೆ ಪಲ್ಲವಿಸಿಬಿಟ್ಟಿತ್ತೋ ?

ಅಂತೂ ದೆಹಲಿಯಲ್ಲಿ ನಮ್ಮಿಬ್ಬರ ಓಡಾಟ ಸಾಕಷ್ಟೇ ನಡೆದಿತ್ತು. ಮಾತಿನ ಮಧ್ಯೆ ಸತೀಶ ತನ್ನದು ಬೇರೆ ಜಾತಿ ಎಂಬುದನ್ನೂ ಸೂಕ್ಷ್ಮವಾಗಿ ಉಸುರಿದ್ದ. ಆದರೆ ಅವನ ಮಾನವೀಯತೆಯ ಮುಂದೆ ಜಾತಿಯ ಗೋಡೆ ತನಗೆ ಕಾಣಲೇ ಇಲ್ಲ. ಈ ಮಧ್ಯೆ ನನಗೊಂದು ಗಂಡು ನೋಡಿರುವುದಾಗಿಯೂ ಕೂಡಲೇ ಊರಿಗೆ ಹೊರಟು ಬರಬೇಕೆಂದೂ ಅಮ್ಮನಿಂದ ಪತ್ರ ಬಂತು. ಒಂದಿನ ಸತೀಶ ನನ್ನನ್ನು ಮನೆಗೆ ಬಿಟ್ಟು ಹೊರಟಾಗ, ಸಂಕೋಚದಿಂದಲೇ ಈ ವಿಷಯ ತಿಳಿಸಿದೆ. ಅವನ ಮೂಗು ಕೆಂಪಾಯಿತು. ಆದರೂ ಶಾಂತವಾಗಿ ಕೇಳಿದ – "ನನ್ನನ್ನೇನು ಓಡಾಡಿಸಿ ಬಿಟ್ಟುಬಿಡೋ ಮನುಷ್ಯ ಅಂತ ತಿಳ್ಕೊಂಡಿದೀರಾ ?" ಇದೀಗ ನನಗೂ ಧೈರ್ಯ ಬಂತು. "ಹಾಗಂತ ತಿಳಕೊಂಡಿದ್ರೆ ನಾನೂ ಇಷ್ಟು ಸರಾಗವಾಗಿ ನಿಮ್ಜತೆ ಓಡಾಡ್ತಿರಲಿಲ್ಲ..." ಸತೀಶ ಜೋರಾಗಿ ನಕ್ಕುಬಿಟ್ಟ. ಮೆಲ್ಲಗೆ ಹತ್ತಿರ ಬಂದು "ಹಾಗಾದ್ರೆ ನಾನು ಇಷ್ಟ ಆಗಿದೀನಾ ?" ಮೆಲ್ಲಗಂದ. ಅವನ ಸಾಮೀಪ್ಯದಿಂದ ಕೆನ್ನೆ-ಕಿವಿ ಬಿಸಿಯಾಯ್ತು. ಅವನು ಬೇರೆ ಅನುರಾಗದಿಂದ ನನ್ನತ್ತಲೇ ನೋಡುತ್ತಾ ಉತ್ತರ ನಿರೀಕ್ಷಿಸುತ್ತಿದ್ದ. ಹೇಗೋ ಕಷ್ಟಪಟ್ಟು ಹೌದು ಎಂದುತ್ತರಿಸಿದೆ. ಸತೀಶ ಮೃದುವಾಗಿ ಕೈ ಹಿಡಿದು ಕಡೇವರೆಗೂ ನನ್ನ ಜತೆ ಇರ್ತೀರಾ ? ಯೋಚಿಸಿ ಹೇಳಿ" ಅಂದ. "ಒಂದು ಸಾರಿ ತೀರ್ಮಾನ ಮಾಡಿದ್ಮೇಲೆ ಮುಗೀತು" ಅಂದೆ ನಿರಾಳವಾಗಿ.

ಮರುಸಂಜೆ ಪಾರ್ಕಿನಲ್ಲಿ ಐಸ್‌ಕ್ರೀಂ ಮೆಲ್ಲುತ್ತಾ ಸತೀಶ ಯೋಜನೆಗಳನ್ನು ನಿರೂಪಡಿಸಿದ. "ಹೀಗೆ ಮಾಡೋಣ ರಾಣೀ... ನೀನು ವಿಜಿ ಜತೆ ಬೆಂಗಳೂರಿಗೆ ಹೋಗು. ನಮ್ಮನೆ ವಿಳಾಸ ಕೊಡ್ತೀನಿ. ನನ್ನ ತಂದೇನ ಭೇಟಿ ಮಾಡು. ಆದ್ರೆ ನಮ್ಮಿಬ್ಬರ ಮದ್ವೆ ವಿಷಯ ಹೇಳಬೇಡ. ನಿಮ್ಮನೇಲಿ ಮಾತ್ರ ಹೇಳಿಬಿಡು. ಇಷ್ಟು ಮಾಡ್ತೀಯಾ ? ಮುಂದಿನ ಏರ್ಪಾಡೆಲ್ಲ ನನ್ನದು." "ಆಗಲಿ" ಒಪ್ಪಿಕೊಂಡೆ. ಆಮೇಲೆ ಸಂಕೋಚದಿಂದ ಸತೀಶ "ಇನ್ನೊಂದು ರಿಕ್ವೆಸ್ಟ್!" ಅಂದ. "ನನ್ನನ್ನ ರಿಕ್ವೆಸ್ಟ್ ಮಾಡ್ಕೋಬೇಕಾ ? ಅದೇನು ಹೇಳಿ" ಅಂದೆ. "ಅಮೆರಿಕದಲ್ಲಿ ನನ್ನ ಆಪ್ತಸ್ನೇಹಿತ ಇದಾನೆ. ನನಗೇನಾದ್ರೂ ಉಡುಗೊರೆ ಕೊಡ್ಲೇಬೇಕು ಅಂತ ಅವನ ಗಲಾಟೆ. ಕಡೆಗೆ ಹೇಳಿದೆ 'ವಿಷಕಂಠ ನನ್ನ ಬಾಲ್ಯಸ್ನೇಹಿತ. ಪೋಲಿಯೋ ಆಗಿ ಕಾಲುಗಳೆರಡೂ ಸ್ವಾಧೀನ ಇಲ್ಲ... ಎಲ್ಲಕ್ಕೂ ಅನ್ಯರ ಆಶ್ರಯ ಬೇಕೇಬೇಕು. ನನಗೆ ಗಿಫ್ಟ್ ಕೊಡೋದಾದ್ರೆ ಒಂದು ಒಳ್ಳೇ ಗಾಲಿ ಕುರ್ಚಿ ಕಳಿಸಿಕೊಡು' ಅದರಂತೆ ಅವನು ವೀಲ್ ಛೇರ್ ಕಳಿಸಿದಾನೆ. ನೀನು ಏರ್‌ಪೋರ್ಟಿಗೆ ಹೋಗಿ ಅದನ್ನು ಕಲೆಕ್ಟ್ ಮಾಡ್ಕೊಂಡು ವಿಷಕಂಠನಿಗೆ ತಲುಪಿಸಕ್ಕೆ ಆಗತ್ತಾ, ಪ್ಲೀಸ್ ?" ಸತೀಶ ವಿನಂತಿಸಿದ. "ಇದಕ್ಕಿಂತ ಸಂತೋಷದ ಕೆಲಸ ಇನ್ನೊಂದಿಲ್ಲ" ನಾನು ಮಾತುಕೊಟ್ಟೆ.

ಬೆಂಗಳೂರು ತಲುಪಿದ ತಕ್ಷಣ ವಿಷಕಂಠಪ್ಪ ಅವರಿಗೆ ಗಾಲಿ ಕುರ್ಚಿ ತಲುಪಿಸಿದೆ ಮರುದಿನವೇ ಸತೀಶನ ಮನೆಗೆ ಹೋಗಿ ಅವರ ತಂದೆಯನ್ನು ಭೇಟಿಯಾದೆ. "ನಮ್ಮ ಸತೀಶನ ಪರಿಚಯಸ್ಥರೇ ? ಬನ್ನಿ ಬನ್ನಿ" ಅಭಿಮಾನದಿಂದ ಮಾತಾಡಿಸಿದರು. ಮನೆತುಂಬ ಸರಸರನೆ ಓಡಾಡುತ್ತಾ ಹಣ್ಣು-ಬಿಸ್ಕತ್ತು ಕೊಟ್ಟು ಉಪಚರಿಸಿದರು. ನಾನು ಹೊರಟಾಗ "ಒಳ್ಳೇ ಹುಡ್ಗಿ ಕಣಮ್ಮ ನೀನು... ಆಗಾಗ ಬರ್ತಿರು" ವಿಶ್ವಾಸದಿಂದ ಬೀಳ್ಕೊಟ್ಟರು.

ಇದೀಗ ಸತೀಶ ತನ್ನ ತಂದೆಗೆ ವಿಷಯ ತಿಳಿಸಿ ಪತ್ರ ಬರೆದ. "ಅಪ್ಪ, ನಾನು ಮುಚ್ಚುಮರೆ ಮಾಡಲ್ಲ. ಹುಡುಗೀನ ನೋಡೇ ಇದ್ದೀರಿ. ಅವಳೇ ನನ್ನ ಬಾಳಸಂಗಾತಿ ಅಂತ ತೀರ್ಮಾನಿಸಿಬಿಟ್ಟಿದೀನಿ." ಪತ್ರ ಕಂಡು ಅವನ ತಂದೆ ಕೆಂಡಾಮಂಡಲವಾದರು. "ಯಾಕಯ್ಯಾ, ಲಿಂಗಾಯಿತರಲ್ಲಿ ಇಂಥ ಹುಡುಗಿ ಸಿಗ್ತಿರಲಿಲ್ವೇ ? ಅಮ್ಮ-ಅಪ್ಪ ಎರಡೂ ನಾನೇ ಆಗಿ ಸಾಕಿದ್ದಕ್ಕೆ ಇದೇಯೋ ಬಹುಮಾನ ?" ಅಂತೆಲ್ಲ ಹಾರಾಡಿದರು. ಸತೀಶ ಅಲುಗಾಡಲಿಲ್ಲ. ಅವನದು ಒಂದೇ ಮಾತು. "ಕ್ಷಮಿಸಿ ಅಪ್ಪ... ಮದುವೆಯಂತು ಆಗೇ ಆಗುತ್ತೆ... ದಯವಿಟ್ಟು ಆಶೀರ್ವಾದ ಮಾಡಿ."

ಸತೀಶ ಅಷ್ಟೇ ವಿನಯವಾಗಿ ನನ್ನ ಅಪ್ಪನಿಗೂ ಪತ್ರ ಬರೆದ. ಆದರವರೇನೂ ವಿಚಲಿತರಾಗಲಿಲ್ಲ. ಸಂಯಮದಿಂದಲೇ ಉತ್ತರಿಸಿದರು – "ನಾನು ಜಾತಿ-ಗೀತಿ ನೋಡೋನಲ್ಲ. ಆದರೆ ನನ್ನ ಹೆಂಡತಿ ವಿಪರೀತ ಸಂಪ್ರದಾಯಸ್ಥಳು. ಅವಳಿಗೆ ತುಂಬ ನೋವಾಗತ್ತೆ. ಆದ್ರೂ ನಾನವಳನ್ನು ಒಪ್ಪಿಸ್ತೀನಿ. ನೀವು ಮಾತ್ರ ನನಗೊಂದು ಮಾತು ಕೊಡಬೇಕು. ನನಗೆ ಒಬ್ಬಳೇ ಮಗಳು. ಅವಳು ಯಾವತ್ತೂ ನೋಯದಂತೆ ನೀವು ನಡಕೊಳ್ಬೇಕು."

ಆದರೆ ಅಮ್ಮನನ್ನು ಒಪ್ಪಿಸುವುದು ಸುಲಭವಾಗಿರಲಿಲ್ಲ. ಬೇಕಾದಷ್ಟು ಚೀರಾಡಿದಳು. ರಂಪ, ಗಲಾಟೆ, ಅಳು ಎಲ್ಲ ಅಧ್ಯಾಯಗಳೂ ಕ್ರಮವಾಗಿ ನಡೆದವು. ಅಪ್ಪ ಅಮ್ಮನನ್ನು ಕೂರಿಸಿಕೊಂಡು ಸಮಾಧಾನವಾಗಿ ಹೇಳಿದರು. "ಕೇಳಿಲ್ಲಿ ನನ್ನ ಮಾತು... ಮದುವೆ ಆಗಲು ಅವರು ತೀರ್ಮಾನಿಸಿ ಬಿಟ್ಟಿದ್ದಾರೆ... ಆಗೇ ಆಗ್ತಾರೆ. ಕನಿಷ್ಠಪಕ್ಷ ಒಪ್ಗೆ ಕೇಳ್ತಾ ಇದಾರಲ್ಲ, ಅದಕ್ಕೆ ಸಂತೋಷಪಡು. ಮೇಲಾಗಿ ಹುಡುಗ ಗುಣವಂತ. ಕುಡುಕನಲ್ಲ, ಕೆಡುಕನಲ್ಲ. ಸುಮ್ನೆ ಒಪ್ಗೆ ಕೊಡು."

ಅಮ್ಮ ಏನೂ ಮಾತಾಡಲಿಲ್ಲ. ಎರಡು ದಿನ ಶೀತಲ ಮೌನ. ಮಾರನೇ ದಿನ ನನ್ನ ರೂಮಲ್ಲಿ ಕೂತು ಏನೋ ಓದುತ್ತಾ ಇದ್ದೆ. ಬಾಗಿಲ ಹತ್ತಿರ ಬಳೆಗಳ ಗಲಗಲ ಶಬ್ದ. ಅಮ್ಮ ಮೆಲ್ಲಗೆ ಹತ್ತಿರ ಬಂದು ನನ್ನನ್ನೊರಗಿ ಕೂತಳು. ಮುಸು ಮುಸು ಅಳುತ್ತಾ "ಒಂದು ಮಾತು ಕೊಡ್ಬೇಕು ನೀನು... ಆಗ್ಲೇ ನಾನು ಈ ಮದ್ವೇಗೆ ಒಪ್ಪೋದು." ಅಂದಳು. ಮನಸ್ಸು ಕರಗಿಹೋಯ್ತು. ಅಮ್ಮನ ಕೆನ್ನೆಮೇಲಿನ ನೀರನ್ನು ಒರೆಸುತ್ತಾ "ಅದೇನು ಹೇಳಮ್ಮ ?" ಅಂದೆ. ಅವಳ ಕಣ್ಣೀರು ಹೆಚ್ಚಾಯ್ತು. ನನ್ನನ್ನಪ್ಪಿ ತಲೆ ಸೇವರಿಸುತ್ತಾ ಹೇಳಿದಳು. "ಮದ್ವೆ ಆದ್ಮೇಲೂ... ಒಂದ್ವೇಳೆ ಬೇರೆ ಜಾತಿ ಅಂತೇನಾದ್ರೂ ಅಲ್ಲಿ ನಿಂಗೆ ಹಿಂಸೆ ಆದರೆ... ಮತ್ತೆ ನೀನು ನನ್ನ ಹತ್ರಕ್ಕೇ ಓಡಿ ಬಂದುಬಿಡ್ಬೇಕೂ... ಬರ್ತೀಯಾ ಪುಟ್ಟೀ ?"

* * *

ನನ್ನನ್ನು ಅವನು ಚಿನ್ನು ಅನ್ನುತ್ತಿದ್ದ. ನಾನವನನ್ನು ಅಪರಂಜಿ ಅಂತಲೇ ಕರೆಯಬೇಕು... ಅಂಥ ಸಹೃದಯಿ ಅವನು. ನನ್ನ ಅಪ್ಪನಿಗೆ ಕೊಟ್ಟ ಮಾತನ್ನು ಕಡೇವರೆಗೂ ಉಳಿಸಿಕೊಂಡುಬಿಟ್ಟ. ಇದೀಗ ಅವನ ಉಸಿರು ನಿಂತುಹೋಗುತ್ತಿರುವ ಈ ಯಾತನಾಮಯ ಸಂದರ್ಭದಲ್ಲಿ ಅವನ ಒಂದೊಂದೂ ಒಳ್ಳೆಯತನ ಹೀಗ್ಯಾಕೆ ಸ್ಮೃತಿಪಟಲದ ಮೇಲೆ ಸಾಲು ಸಾಲಾಗಿ ಮೂಡುತ್ತಿವೆ ? ಹೃದಯವನ್ನೆಲ್ಲ ಹಿಂಡಿ ಹಿಂಡಿ ಹಿಪ್ಪೆ ಮಾಡುತ್ತಿವೆ ?

ಬ್ಯಾಂಕ್ ಮ್ಯಾನೇಜರ್ ಅಂದಮೇಲೆ ರಂಗುರಂಗಿನ ಪಾರ್ಟಿಗಳು ಸರ್ವೇಸಾಮಾನ್ಯ. ಆದರೆ ನನ್ನವನು ಯಾವುದೇ ಪಾರ್ಟಿಗೂ ಹೋಗುತ್ತಿರಲಿಲ್ಲ. ಒಂದುವೇಳೆ ಯಾವುದಾದರೂ ಪೂಜಾಭೋಜನಕ್ಕೆ ಒಬ್ಬನೇ ಹೋಗಬೇಕಾದ ಸಂದರ್ಭ ಬಂದರೆ ಬರುವಾಗ ಕೈಲಿ ಸಿಹಿತಿಂಡಿಗಳ, ದೊಡ್ಡ ದೊಡ್ಡ ಡಬ್ಬಗಳು! "ಅಲ್ಲಿ ನಿನ್ನ ಬಿಟ್ಟು [illegible] ತಿಂದು ಬಿಟ್ನಲ್ಲ, ಇಗೋ, ನಿಂಗಿಷ್ಟವಾದ ಮಿಠಾಯಿ !"

ಯಾವತ್ತಾದರೂ ಮನೆಗೆಲಸದವಳು ಬರದಿದ್ದರೆ, ಅವನ [illegible] ಬಾಲ್ಕನೀಲೇ ನಿಂತುಬಿಡುತ್ತಿದ್ದ ಪುಣ್ಯಾತ್ಮ! ಅಕ್ಕಪಕ್ಕದ ಮ[illegible]

ಕೂಗಿ ಕೂಗಿ ಕರೆಯುತ್ತಿದ್ದ. ''ಪಾಪ ಕಣೇ... ಮುದ್ದಾಗಿ ಸಾಕಿದಾರೆ ನಿನ್ನ... ಬಚ್ಚೇ ಹ್ಯಾಗೆ ಮಾಡಿಕೊಳ್ತೀ?'' ಒದ್ದಾಡಿಬಿಡುತ್ತಿದ್ದ.


ಸಾಮಾನ್ಯವಾಗಿ ಬೆಳಗ್ಗೆ ಎಂಟು ಗಂಟೆಗೆ ಅವನ ತಿಂಡಿ. ಪ್ರತಿದಿನ ನಾನವನ ಜತೆ ಕೂತು ತಿಂಡಿ ತಿನ್ನಲೇ ಬೇಕು. ಇದವನ ಪ್ರೀತಿಶಾಸನ. ನಾನು ತಲೆಗೆ ಎಣ್ಣೆ ಇಟ್ಟುಕೊಂಡ ದಿವಸ ''ನಾನಿವತ್ತು ಸ್ನಾನ ನಿಧಾನ... ನೀವು ತಿಂಡಿ ತಿಂದು ಬಿಡಿ'' ಅಂದರೆ ಸುತರಾಂ ಒಪ್ಪುತ್ತಿರಲಿಲ್ಲ. ''ಒಂದ್ಕೆಲ್ಸ ಮಾಡು ಚಿನ್ನು... ಈಗ ನಿನ್ನ ಸಮಾಧಾನಕ್ಕೆ ಚುಟುಕು ಸ್ನಾನ ಮಾಡ್ಕೊಂಡು ಬಾ. ನನ್ನ ಜತೆ ತಿಂಡಿ ತಿನ್ನು. ಆಮೇಲೆ ನಿಧಾನವಾಗಿ ತಲೆಸ್ನಾನಮಾಡ್ಕೊ'' ರಮಿಸಿಬಿಡುತ್ತಿದ್ದ.

ಅವತ್ತು ಕಡೆಯ ಮಂಗಳಗೌರಿ ಪೂಜೆ. ವಿಶೇಷ ತಿಂಡಿಗಳನ್ನು ಮಾಡಿ ಸಂಜೆ ಅವನಿಗಾಗಿ ಕಾಯುತ್ತಾ ಇದ್ದೆ. ಎಂದಿಗಿಂತ ತಡವಾಗಿ ಬಂದ. ಪ್ರೀತಿಯಿಂದ ''ಬಾಯಿಲ್ಲಿ... ನಿಂಗಿವತ್ತು ನನ್ನ ಉಡುಗೊರೆ!'' ದೊಡ್ಡದೊಂದು ಚೀಲವನ್ನು ಕೈಲಿರಿಸಿದ. ಬಿಚ್ಚಿನೋಡಿದರೆ ಸೊಗಸಾದ ನವಿಲು ಬಣ್ಣದ ಕಾಂಜೀವರಂ ಸೀರೆ! ಕಾಫಿ ತರುವಷ್ಟರಲ್ಲಿ ಕೋಣೆಗೆ ಹೋಗಿ ಮಲಗಿಬಿಟ್ಟಿದ್ದ. ಮುಖವೆಲ್ಲ ಕೆಂಪಾಗಿತ್ತು, ಹಣೆ ಮುಟ್ಟಿದರೆ ಜ್ವರ ಸುಡುತ್ತಿತ್ತು. ''ಇಂಥ ಜ್ವರದಲ್ಲೂ ಹೋಗಿ ನಂಗೆ ಸೀರೆ ತರಬೇಕಿತ್ತೇ?'' ಅತ್ತೇ ಬಿಟ್ಟೆ. ''ಅಳಬೇಡ್ವೇ ಹುಡುಗೀ... ಜ್ವರ ಇವತ್ತು ಇರತ್ತೆ... ನಾಳೆ ಹೋಗತ್ತೆ. ಮಂಗಳಗೌರಿ ಹಬ್ಬ ಇನ್ನೊಂದು ಬರುತ್ತೇನೇ? ಎಲ್ಲಿ, ಉಟ್ಕೊಂಡು ನಂಗೆ ತೋರಿಸು?'' ನಗುನಗುತ್ತಾ ಹೇಳಿದ.

ನನ್ನನ್ನು ಅಷ್ಟೊಂದು ಪ್ರೀತಿಸುತ್ತಿದ್ದರೂ, ಕೆಲವೊಂದು ವಿಷಯಗಳಲ್ಲಿ ಅವನು ಅತಿಸೂಕ್ಷ್ಮ. ಅರ್ಥಮಾಡಿಕೊಳ್ಳೋದೇ ಕಷ್ಟ ಅನ್ನಿಸಿಬಿಡುತ್ತಿತ್ತು. ಒಂದು ಸಾರಿ ನೈನಿತಾಲ್‌ಗೆ ಹೋಗುತ್ತಿದ್ದೆವು. ನನ್ನ ಮುಂದೆ ಕೂತಿದ್ದ ಹುಡುಗ ತುಂಬ ಬೆಳ್ಳಗಿದ್ದ. ''ಈ ಕಡೆ ಗಂಡಸರು ಕೂಡ ಎಷ್ಟು ಬೆಳ್ಳಗಿರ್ತಾರೆ ಅಲ್ವಾ?'' ಪಿಸುಗುಟ್ಟಿದೆ. ಏನೂ ಮಾತಾಡಲಿಲ್ಲ. ಸೀಟಿನ ಹಿಂದಕ್ಕೊರಗಿ ಕಣ್ಮುಚ್ಚಿ ಮಲಗಿಬಿಟ್ಟ. ಮಹಾರಾಯ ಅವತ್ತು ಪೂರ್ತಿ ಮೂತಿ ಊದಿಸಿಕೊಂಡೇ ಇದ್ದ. ನನಗಂತು ಕಾರಣ ಗೊತ್ತಾಗಲಿಲ್ಲ. ರಾತ್ರಿ ನಾನಾಗಿ ಯಾಕೆ ಹೀಗೆ ಕೋಪ, ಅಂದರೆ, ನೀನ್ಯಾಕೆ ಬೇರೆ ಗಂಡಸರನ್ನ ಹೊಗಳ್ತೀ ಅನ್ನಬೇಕೇ? ಆಮೇಲೆ ನಾನು ಹುಷಾರಾಗಿಬಿಟ್ಟೆ. ಆದರೂ ಇನ್ನೊಮ್ಮೆ ಅಮಿತಾಭನ ಪಿಕ್ಚರು ನೋಡ್ತಾ ಮೈಯ್ಯುಬ್ಬಿ ''ಅಬ್ಬ! ಎಂಥ ಅದ್ಭುತ ನಟ!'' ಉದ್ಗರಿಸಿದರೆ, ಪಕ್ಕದಲ್ಲೇ ಪೇಪರೋದುತ್ತಾ ಕುಳಿತವ ''ಓದೋದಕ್ಕಿಂತ ಸಿನಿಮಾ ಹುಚ್ಚೇ ಹೆಚ್ಚಾಗಿದೆ! ಇದಕ್ಕೆ ಖರ್ಚು ಮಾಡೋ ಬುದ್ಧೀನ ಪುಸ್ತಕ ಓದಕ್ಕೆ ಖರ್ಚುಮಾಡು. ಉದ್ಧಾರ ಆಗ್ತೀ'' ಗದರಿಬಿಟ್ಟ. ಇದಕ್ಕೆ ತದ್ವಿರುದ್ಧ ಘಟನೆಗಳೂ ಇದ್ದವು. ಎಷ್ಟೋ ಬಾರಿ ಮಾತಿನ ಚಕಮಕಿಗಳಲ್ಲಿ ನಾನೇ ಮೇಲ್ಗೈ ಆಗಿಬಿಡುತ್ತಿದ್ದೆ. ಹೃತ್ಪೂರ್ವಕವಾಗಿ ನಕ್ಕು ''ಬ್ರಾಹ್ಮಣರಿಗೆ ಬುದ್ಧಿ ಜಾಸ್ತಿ ಕಣೇ!'' ಕೆನ್ನೆ ಸವರುತ್ತಿದ್ದ.

ಸತೀಶ ಪ್ರಾಮಾಣಿಕತೆಯನ್ನು ತನ್ನ ಗಾಂಧಿವಾದಿ ತಂದೆಯಿಂದಲೇ ಪಡೆದು ಕೊಂಡಿದ್ದ. ಒಂದು ಸಾರಿ ಗ್ರಾನೈಟ್ ಶಿಲೆಯನ್ನು ರಫ್ತುಮಾಡುವ ವ್ಯಾಪಾರಿಗೆ ದೊಡ್ಡ ಮೊತ್ತದ ಸಾಲ ಬೇಕಾಗಿತ್ತು. ಸತೀಶ ಮಂಜೂರು ಮಾಡಿಸಿದ. ಆ ಹೊಸತರಲ್ಲಿ ಆತ ಮನೆಗೆ [illegible]ದರು. ಕೈಯ್ಯಲ್ಲಿ ಕಂತೆ ಕಂತೆ ನೋಟುಗಳ ಭರ್ತಿ ಕವರು! ''ಮುಂಚೆ ಕೊಟ್ಟದ್ದಾಗ ಲಂಚ... ಈಗಿದು ಕಾಣಿಕೆ... ದಯವಿಟ್ಟು ತಗೋಬೇಕು ಸಾರ್'' ವಿನಂತಿಸಿದರು. ಸತೀಶ [illegible]ಗೆ ಹೇಳಿದ – ''ನಿಮ್ಮ ಕಾಗದ ಪತ್ರ ಸರಿಯಾಗಿತ್ತು, ನಿಮಗೆ ಸಾಲ ಸಿಕ್ಕಿತು ಅಷ್ಟೇ. ನನ್ನ ಕರ್ತವ್ಯಕ್ಕೆ ಬ್ಯಾಂಕ್ ಸಂಬಳ ಕೊಡುತ್ತೆ... ಇದೆಲ್ಲ ಬೇಡ... ಹೇಗೂ ಬಂದಿದೀರಿ, ನನ್ನ ಜತೆ ಒಂದು ಕಪ್ ಕಾಫಿ ಕುಡಿದು ಹೋಗಿ.'' ಇನ್ನೊಂದು ಸಾರಿ [illegible] ಇಬ್ಬರು ಹೀಗೇ ಆಳಿನ ಕೈಲಿ ಬೆಲೆಬಾಳುವ [illegible] ಹೊರಿಸಿಕೊಂಡು ಬಂದರು. ''ನೀವು ಮಾಡಿರೋ ಅಗಾಧ ಸಹಾಯಕ್ಕೆ ನಮ್ಮ ಕೃತಜ್ಞತೆ ಅಷ್ಟೇ... ನೀವು ತಗೊಳ್ಳದಿದ್ರೆ ನಂಗೆ ನೋವಾಗುತ್ತೆ'' ವಿನಂತಿಸಿದರು. ಸತೀಶ ನಸುನಕ್ಕು ತನ್ನ ಅಂಗಿಯನ್ನು ಅವರಿಗೆ ತೋರಿಸುತ್ತಾ [illegible] ನಿಮಗೂ ಗೊತ್ತು. [illegible] ಉಪಯೋಗಕ್ಕೆ [illegible]... [illegible]ಗಳು ಹೀಗೆ ಬರೋದು ತಪ್ಪಲ್ಲ. ಹೀಗೆ ಕೊಡಕ್ಕೆ ಬರೋದು ತಪ್ಪು'' ಅಂತ ಹಿಂದಕ್ಕೆ ಕಳಿಸಿದ.

ತನ್ನದೇ ಆದ ಮೌಲ್ಯಗಳಿಗೆ ಬದ್ಧನಾಗಿ, ತನ್ನಪಾಡಿಗೆ ಜೀವನ ಮಾಡುತ್ತಿದ್ದರೂ, ವಿನಾಕಾರಣ ಅವನನ್ನು ನೋಯಿಸುವವರೂ ಇದ್ದರು. ಒಂದು ಸಂಜೆ ಸಂದರ್ಶನವೊಂದನ್ನು ಮುಗಿಸಿಕೊಂಡು ಮನೆಗೆ ಬಂದವನು ಏನೂ ಮಾತಾಡದೆ ರೂಮು ಸೇರಿಬಿಟ್ಟ. ಮನಸ್ಥಿತಿ ಸರಿಯಿಲ್ಲದಾಗ ನಾನೂ ಅವನಿಗೆ ತೊಂದರೆ ಕೊಡುತ್ತಿದ್ದಿಲ್ಲ. ದೇವರ ಮನೆಗೆ ಹೋಗಿ ದೀಪ ಬೆಳಗಿ ಧ್ಯಾನ ಮಾಡುತ್ತಾ ಕೂತೆ. ಸ್ವಲ್ಪ ಹೊತ್ತಾದ ಮೇಲೆ ಅವನೇ ಹಜಾರಕ್ಕೆ ಬಂದು ಕೂತು ''ರಾಣೀ, ಕಾಫಿ ಕೊಡ್ತೀಯಾ?'' ಕೂಗಿದ. ಕಾಫಿ-ಕೋಡುಬಳೆ ಕೊಟ್ಟೆ. ಮುಖದಲ್ಲಿ ಗೆಲುವಿರಲಿಲ್ಲ, ಕಣ್ಣುಗಳು ಬಾಡಿದ್ದವು. ಅವನೇ ಹೇಳಲಿ ಅಂತ ಸುಮ್ಮನಿದ್ದೆ. ನಿಧಾನವಾಗಿ ಪ್ರಾರಂಭಿಸಿದ – ''ಇವತ್ತು ಇಂಟರ್‌ವ್ಯೂ ಇತ್ತಲ್ಲ ರಾಣೀ? ಎಲ್ಲ ಪ್ರಶ್ನೆಗಳಿಗೂ ಚೆನ್ನಾಗೇ ಉತ್ತರಿಸಿದೆ. ತೃಪ್ತಿಯೂ ಆಯ್ತು. ಇನ್ನೇನು ಹೊರಡಬೇಕು ಅನ್ನುವಾಗ ಅವರಲ್ಲಿ ಒಬ್ಬ 'ಮಕ್ಕಳೆಷ್ಟು ನಿಮ್ಗೆ?' ಅಂದ. 'ನನಗೆ ಮಕ್ಕಳಿಲ್ಲ' ಅಂದೆ. 'ಏನ್ರೀ, ರಿಟೈರ್ ಆದ್ಮೇಲೆ ಮಕ್ಳನ್ನ ಎತ್ಕೊಂಡು ಒಡಾಡ್ಬೇಕು ಅಂತ ಮಾಡಿದೀರಾ?' ಛೇಡಿಸಿದ. ನಾನು ತಕ್ಷಣ ಹೇಳಿದೆ – 'ಮಕ್ಕಳಾಗೋದು ಪ್ರಕೃತಿ ಸಹಜಕ್ರಿಯೆ ಸ್ವಾಮೀ! ಅದನ್ನೊಂದು ಸಾಧನೆ ಅಂತ ನಾನು ಭಾವಿಸಿಲ್ಲ. ಸಾಧನೆಯೇ ಬೇರೆ! ಓದೋದು, ಪಾಸ್ ಮಾಡೋದು, ನಿಮ್ಮಂಥೋರ



ಎಲ್ಲ ರೀತಿಯ ಪ್ರಶ್ನೆಗೆ ಸರಿಯಾಗಿ ಉತ್ತರಿಸೋದು! ಈ ಕೆಲಸ ನಾನು ಮಾಡಿದೀನಲ್ಲ?'' ಅವನೇನೋ ತೆಪ್ಪಗಾದ. ಆದ್ರೂ ರಾಣೀ, ಯಾಕೋ ಸ್ವಲ್ಪ ನೋವಾಯ್ತು ಕಣೇ...'' ಕೂಡಲೇ ಅವನ ಪಕ್ಕಕ್ಕೆ ಜರುಗಿ ಹಣೆಯನ್ನು ನೇವರಿಸುತ್ತಾ ಸಂತೈಸಿದೆ – 'ನನಗೆ ನೀವೇ ಮಗು ನಿಮಗೆ ನಾನೇ ಮಗು ಅನ್ನೋದು ತೀರ್ಮಾನ ಆಗಿಹೋಗಿದೆ ಅಲ್ವ? ಯಾರೇನಾದ್ರೂ ಹೇಳಿಕೊಳ್ಳಲಿ... ನಮಗೇನು?' ನನ್ನ ಸೆರಗಿನ ತುದಿಯನ್ನು ಅಪ್ಪಾ[illegible] ಬೆರಳಿಗೆ ಸುತ್ತಿಕೊಳ್ಳುತ್ತಾ ಸುಮ್ಮಗುಳಿದುಬಿಟ್ಟ.

''ಸಾಲ ತಗೊಳ್ಳಲ್ಲ; ಸಾಲ ಕೊಡಲ್ಲ'' ಇದು ಸತೀಶನ ಯಮನಿಯಮ. ಆದರೆ ತ[illegible] ಸಾಮರ್ಥ್ಯದ ಸೀಮಿತತೆಯಲ್ಲಿ ಉಪಕಾರ ಮಾಡಲು ಅವನು ಸದಾ ಮುಂದು. ಒಂದು ಸಾರಿ ನಾನು ಪೇಟೆಯಲ್ಲಿ ನಿಂತಿದ್ದಾಗ ಅಪರಿಚಿತನೊಬ್ಬ ಹೆಂಡತಿ-ಮಗಳೊಡನೆ ಬಂದು ''ಸಾರ್, ಅರ್ಜೆಂಟಾಗಿ ಊರಿಗೆ ಹೋಗ್ಬೇಕು. ಪರ್ಸ್ ಕಳೆದುಹೋಗಿದೆ. ಹಣ ಸಹಾಯ ಮಾಡಿ ಸಾರ್... ಮಗು ಬೇರ ಹಸಿದು ಕಂಗಾಲಾಗಿದೆ'' ಬೇಡಿಕೊಂಡ. ಸತೀಶ ಕರುಣೆಯಿಂದ ಮಗುವಿನತ್ತಲೇ ದಿಟ್ಟಿಸಿದ. ''ಯಾವುದಕ್ಕೂ ಮೊದಲು ತಿಂಡಿ ತಿನ್ನೋ[illegible] ಬನ್ನಿ'' ಅಂತ ಕರಕೊಂಡು ಹೋಗಿ ಹೊಟ್ಟೆ ತುಂಬ ತಿಂಡಿ ಕೊಡಿಸಿದ. ಆಮೇಲೆ ''ಯಾವ ಊರಿಗೆ ಹೋಗ್ಬೇಕು ಹೇಳಿ ಟಿಕೆಟ್ ಕೊಡಿಸಿಬಿಡ್ತೀನಿ. ಹಣ ಕೈಗೆ ಕೊಡಲ್ಲ'' ಕಡ್ಡಿ ಮುರಿದಂತೆ ಹೇಳಿದ. ಇನ್ನೊಂದು ಕ್ಷಣ ಅಲ್ಲಿ ನಿಲ್ಲದೆ ಪರಾರಿಯಾಯ್ತು ಆ ಸಂಸಾರ!

* * *

ದೆಹಲಿ, ಹೈದರಾಬಾದು, ಮುಂಬಯಿ, ಎಲ್ಲ ಆದಮೇಲೆ ಇಚ್ಛಾ ನಿವೃತ್ತಿ ತೆಗೆದುಕೊಂಡು ನೆಲೆಯಾದದ್ದು ಮೈಸೂರಿನಲ್ಲಿ. ಅಲ್ಲೇ ಒಂದು ಪುಟ್ಟ ಮನೆಯನ್ನೂ ಕಟ್ಟಿಸಿಕೊಂಡೆವು. ಈ ಪ್ರಶಾಂತ ವಾತಾವರಣದಲ್ಲಿ ಇನ್ನುಳಿದ ಜೀವನವನ್ನು ನೆಮ್ಮದಿಯಾಗಿ ಕಳೆಯಬಹುದೆಂಬ ಆಶಯ ನಮ್ಮದು. ಆದರೆ ಈ ಸಮಾಧಾನ ಬಹಳ ದಿನ ಉಳಿಯಲಿಲ್ಲ. ಸತೀಶನ ಎರಡೂ ಮೂತ್ರ ಪಿಂಡಗಳು ವಿಫಲವಾದವು. ''ಅತಿ ಔಷಧ ಸೇವನೆಯೇ ಈ ತೊಂದರೆಗೆ ಕಾರಣ'' ವೈದ್ಯರೆಂದರು. ''ಹೌದು ಡಾಕ್ಟರ್... ಎಷ್ಟೇ ಹುಷಾರಿಲ್ಲದಿದ್ದರೂ ಬ್ಯಾಂಕಿಗೆ ಚಕ್ಕರ್ ಹಾಕಬಾರದೆಂದು ತುಂಬ ಆ್ಯಂಟಿಬಯೋಟಿಕ್ಸ್ ತಗೊಂಡುಬಿಟ್ಟಿದೀನಿ'' ಸತೀಶ ಒಪ್ಪಿಕೊಂಡ.

ಡಯಾಲಿಸಿಸ್ ಅನಿವಾರ್ಯವಾದ ಮೇಲೆ ನಾನಂದೆ ''ನಾವಿನ್ನು ಬೆಂಗಳೂರಿಗೇ ಹೋಗಿಬಿಡೋಣ... ಎಲ್ಲಕ್ಕೂ ಅನುಕೂಲ.'' ಸತೀಶನಿಗೂ ಹಾಗೇ ಅನ್ನಿಸಿತ್ತು. ಮನಸ್ಸಿಲ್ಲದ ಮನಸ್ಸಿನಿಂದ ಮನೆಯನ್ನು ಮಾರಾಟಕ್ಕಿಟ್ಟೆವು. ''ದೇವರ ಇಷ್ಟಗಳನ್ನು ಪ್ರಶ್ನೆ ಮಾಡಲಾಗದು.'' ನಿಟ್ಟುಸಿರಿಟ್ಟ ಸತೀಶ.

ನಮ್ಮ ಮನೆಯನ್ನು ಕೊಳ್ಳಲು ಒಬ್ಬ ವೈದ್ಯರು ಮುಂದೆ ಬಂದರು. ''ಮನೆ ತುಂಬ ಇಷ್ಟವಾಗಿದೆ. ನಾನು ಖಂಡಿತ ತಗೊಳ್ತೀನಿ. ಆದ್ರೆ ಅಡ್ವಾನ್ಸ್ ಮುಂದಿನವಾರ ಕೊಡ್ತೀನಿ. ನನ್ನ ಹೆಂಡತಿ ಒಂದು ಸಾರಿ ನೋಡ್ಬೇಕು ಅಷ್ಟೇ... ದಯವಿಟ್ಟು ಬೇರೆ ಯಾರಿಗೂ ಕೊಡ್ಬೇಡಿ ಸಾರ್...'' ಆತ ಕೇಳಿಕೊಂಡರು. ''ಅಸ್ತು!'' ಅಂದ ಸತೀಶ. ಆದರೆ ಮರುದಿನವೇ ಒಬ್ಬ ವ್ಯಕ್ತಿ ಬಂದ. ಆತ ಮುಖ್ಯಮಂತ್ರಿಗಳ ಬಂಧುವಂತೆ. ''ನಂಗೇ ಕೊಟ್ಟುಬಿಡಿ ಸಾರ್'' ಆತನೂ ಪಟ್ಟು ಹಿಡಿದ. ''ಇಲ್ಲಪ್ಪ... ಇನ್ಯಾರಿಗೋ ಮಾತುಕೊಟ್ಟಿದೀನಿ'' ಸತೀಶ ಅಂದ.

''ಅಡ್ವಾನ್ಸ್ ತಗೊಂಡಿದೀರಾ ?''

''ಇಲ್ಲ.''

''ಹೋಗಲಿ, ಎಷ್ಟಕ್ಕೆ ಮಾತಾಡಿದೀರಿ ?''

''ಇಪ್ಪತ್ತು ಲಕ್ಷ''

''ಸಾರ್ ನಾನು ಇಪ್ಪತ್ತೊಂದು ಲಕ್ಷ ಕೊಡ್ತೀನಿ... ಕೊಟ್ಬಿಡಿ ಸಾರ್ ಪ್ಲೀಸ್...''

''ಕ್ಷಮಿಸೀಪ್ಪ... ನಾನು ಮಾತು ತಪ್ಪಲ್ಲ.''

ನಾವಿನ್ನೂ ಮೈಸೂರಿನಲ್ಲಿ ಇರುವಾಗಲೇ ಬೆಂಗಳೂರಿನಿಂದ ಸತೀಶ ಕೆಲಸ ಮಾಡುತ್ತಿದ್ದ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ತಮ್ಮ ಇನ್ನಿತರ ಸಿಬ್ಬಂದಿಯೊಂದಿಗೆ ನಮ್ಮ ಮನೆಗೆ ಬಂದರು. ಕಾಫಿ ತಿಂಡಿ ಉಭಯಕುಶಲೋಪರಿ ಮುಗಿದಮೇಲೆ ಎಜಿಎಂ ಸತೀಶನಿಗೆ ಪ್ರೀತಿಯಿಂದ ಹೇಳಿದರು – ''ಸತೀಶ್, ನೀವು ಇಷ್ಟೊಂದು ನಿಷ್ಠೆಯಿಂದ ನಮ್ಮ ಬ್ಯಾಂಕಿಗೆ ದುಡಿದಿದ್ದೀರಿ ಅನ್ನುವುದು ನಮಗೆಲ್ಲ ಗೊತ್ತು. ನಿಮಗೀಗ ತೊಂದರೆ ಬಂದಿದೆ. ಸಹಾಯ ಮಾಡುವುದು ನಮ್ಮ ಕರ್ತವ್ಯ ಮತ್ತು ಮಾನವೀಯತೆ. ನಾವೆಲ್ಲ ಒಂದು ತೀರ್ಮಾನ ಮಾಡಿದೀವಿ. ಹತ್ತು ಲಕ್ಷ ಹಣ ಸಂಗ್ರಹಿಸಿ ಕಾಣಿಕೆಯಾಗಿ ಕೊಡ್ತೀವಿ. ನಿಮ್ಮ ಡಯಾಲಿಸಿಸ್‌ಗಳಿಗೆ ಸಹಾಯ ಆಗತ್ತೆ!'' ಸತೀಶನ ಕಣ್ಣುಗಳಲ್ಲಿ ನೀರಾಡಿತು. ಅವರೆಲ್ಲರಿಗೂ ಕೃತಜ್ಞತೆಯಿಂದ ಕೈಮುಗಿದು ಹೇಳಿದ – ''ತುಂಬ ದೊಡ್ಡ ಮನಸ್ಸು ನಿಮ್ಮೆಲ್ಲರದು! ಆದರೆ ಅಂಥ ಕಷ್ಟ ನಂಗಿನ್ನೂ ಬಂದಿಲ್ಲ. ಬರೋದೂ ಬೇಡ ಅಂತಲೇ ನೀವೆಲ್ಲ ನನ್ನ ಆಶೀರ್ವದಿಸಿ.''

* * *

ಇಷ್ಟೆಲ್ಲ ಗುಣವಂತನಿಗೆ ಯಾಕೆ ಐವತ್ತರಲ್ಲೇ ಈ ದಾರುಣ ಅವಸ್ಥೆ? ಮಾತು ಮಾತಿಗೂ ನನ್ನನ್ನು ಚಿನ್ನು ಅನ್ನದೆ, ಕಣ್ಣೆತ್ತಿ ನೋಡದೆ ಹೀಗೆ ಹೊರಟು ನಿಂತಿದಾನೆ ?

ನೋವಿನ ಬಿಸಿಯುಸಿರುಗಳನ್ನು ಬಿಡುತ್ತಾ ತಪ್ಪಳಾಗಿ ಕೂತಿದ್ದಳು ರಾಣಿ. ಯಾರೋ ಮೆಲ್ಲಗೆ ತಲೆ ಸವರಿದಂತಾಯಿತು... ಸತೀಶನ ಅತ್ತಿಗೆ ಮಂಗಳಾ ಬಂದಿದ್ದರು. ಜತೆಗೆ ಅಣ್ಣ ಪರಶಿವಪ್ಪ ಕೂಡ ಇದ್ದರು. ಇಬ್ಬರೂ ಪ್ರಖ್ಯಾತ ನ್ಯಾಯವಾದಿಗಳು. ''ಬಾಮ್ಮ, ಸತೀಶನ್ನ ಮಾತಾಡಿಸೋಣ'' ಮಂಗಳಾ ಮೆಲ್ಲಗುಸುರಿದರು. ಮೌನವಾಗಿ ಹಿಂಬಾಲಿಸಿದಳು.

ನರ್ಸ್ ಅನೇಕ ಬಾರಿ ಅವನ ಕಿವಿಯ ಬಳಿ ಕೂಗಿದ ನಂತರ ಬಲು ಪ್ರಯಾಸದಿಂದ ಕಣ್ತೆರೆದ ಸತೀಶ. ಅಣ್ಣನನ್ನು ಕಾಣುತ್ತಲೇ ಕ್ಷೀಣವಾಗಿ ನಗಲೆತ್ನಿಸುತ್ತಾ ಅಸ್ಪಷ್ಟವಾಗಿ ''ರಾಣೀ ಎಲ್ಲಿದ್ದೀ ? ಪೆನ್ನು ಕೊಡು ಅಣ್ಣಂಗೆ... ತುಂಬ ಬರೀಬೇಕು ಅವನು...'' ತಡವರಿಸಿದ. ಅಷ್ಟಕ್ಕೇ ಸುಸ್ತಾಗಿ ಕಣ್ಮುಚ್ಚಿಬಿಟ್ಟ. ಉಸಿರು ನಿಧಾನವಾಗಿ ಎಳೆಯುತ್ತಿತ್ತು. ಎಲ್ಲರೂ ಹೊರ ಹೋಗುವಂತೆ ವೈದ್ಯರು ಸೂಚಿಸಿದರು. ತುರ್ತು ಉಪಚಾರಗಳಲ್ಲಿ ನಿರತರಾದರು.

* * *

ಬಿದ್ದುಬಿಡುವ ಹಿಂದಿನ ರಾತ್ರಿ ಹನ್ನೆರಡರವರೆಗೂ ಮಾತಾಡುತ್ತಲೇ ಇದ್ದ. ಮಾತಿನಲ್ಲಿ ಬಲು ನಿಪುಣ. ಎಷ್ಟೋ ಬಾರಿ ಡಯಾಲಿಸಿಸ್ ಮುಗಿಸಿಕೊಂಡು ಬರುವಾಗ ಆಟೋದವರೊಂದಿಗೆ ಆರೋಗ್ಯ ಚರ್ಚೆ! ಅವರೇನಾದರೂ ತಮಗೂ ಡಯಾಬಿಟೀಸ್ ಅಂದರೆ ಸಾಕು, ಸುದೀರ್ಘ ಉಪನ್ಯಾಸವೇ! ''ಎಷ್ಟು ಸುಸ್ತಾಗಿರತ್ತೆ, ಆದ್ರೂ ಅಷ್ಟೊಂದು ಮಾತಾಡ್ತೀರಲ್ಲ?'' ಆಕ್ಷೇಪಿಸಿದರೆ, ಹಸನ್ಮುಖನಾಗಿ ''ಹಾಗಲ್ಲ ರಾಣೀ, ನಮಗೆ ಗೊತ್ತಿರೋದನ್ನ ಗೊತ್ತಿಲ್ಲದೋರಿಗೆ ಹೇಳ್ಬೇಕಲ್ವ ?'' ಅನ್ನುತ್ತಿದ್ದ. ಅವನ ಸದ್ಗುಣಗಳಿಗೆ ಸೀಮೆಯೇ ಇರಲಿಲ್ಲ. ಕೆಲವೊಂದು ಬಾರಿ ಬುತ್ತಿ-ಬಟ್ಟೆ ಕಟ್ಟಿಕೊಂಡು ಡಯಾಲಿಸಿಸ್‌ಗೆ ಹೊರಟರೆ (ಅವನಿದನ್ನು ಪಿಕ್‌ನಿಕ್ ಅಂತ ತಮಾಷೆ ಮಾಡುತ್ತಿದ್ದ) ಅಲ್ಲಿ ಸೀರಿಯಸ್ ಆಗಿರೋ ಇನ್ಯಾರೋ ಕಾದಿರುತ್ತಿದ್ದರು. ''ಸಾರ್, ನಿಮ್ಮ ಅವಕಾಶ ಬಿಟ್ಟುಕೊಡ್ತೀರಾ ಪ್ಲೀಸ್ ?'' ಗೋಗರೆದರೆ, ಸಮ್ಮತಿಸಿಬಿಡುತ್ತಿದ್ದ. ನಮ್ಮ ಪಿಕ್‌ನಿಕ್ ಹಾಗೇ ವಾಪಸಾಗುತ್ತಿತ್ತು. ಮತ್ತೆ ಸಂಜೆ ಆಸ್ಪತ್ರೆಗೆ ಮರುಪಯಣ. ಬೆಳಿಗ್ಗೆ ಸಹಾಯ ಮಾಡಿದ ರೋಗಿ ಕಡೆಯವರು ಕಾರು ಕಳಿಸ್ತೀವಿ ಅನ್ನುತ್ತಿದ್ದರು : ಆಟೋ ಹಣ ಕೊಡಲು ಬರುತ್ತಿದ್ದರು. ಎಲ್ಲಕ್ಕೂ ದಿವ್ಯ ನಿರಾಕರಣೆ ನನ್ನ ಗಂಡನದು !

ಅವತ್ತೂ ಹಾಗೇ... ಅವನ ಮಾತೇ ಮುಗಿಯದಿದ್ದಾಗ ''ನಂಗೆ ತುಂಬ ನಿದ್ದೆ ಬರ್ತಿದೆ... ಗುಡ್‌ನೈಟ್'' ಅಂದೆ. ''ಇಲ್ಲ ಇಲ್ಲ ನಾನಿನ್ನೂ ನಿನ್ಹತ್ರ ಮಾತಾಡ್ಬೇಕು... ಎಲ್ಲಿ, ಎದ್ದು ಕೂತ್ಕೋ... ನಿದ್ದೆ ಹೋಗತ್ತೆ'' ಆಜ್ಞಾಪಿಸಿದ. ಅಯ್ಯೋ, ನಾಳೆ ಮಾತಾಡಿದ್ರೆ ಆಗಲ್ವಾ ?'' ರಾಗ ಎಳೆದೆ. ''ಆಗಲ್ಲ. ನಾಳೆ ಹೊತ್ಗೆ ನಂಗೆ ಮರೆತೇ ಹೋಗ್ಬಹ್ದು... ಅಥ್ವಾ ಇನ್ನೇನೋ ಆಗಿಬಿಡಬಹುದು ಏಳು ಏಳು'' ಎಬ್ಬಿಸಿ ಕೂರಿಸಿದ.

''ಚಿನ್ನು, ನಾನೀಗ ಕೆಲವು ವಿಷಯ ಹೇಳ್ತೀನಿ. ನೀನು ಅತ್ತುಕರೆದು ಮಾಡ್ಕೊಡ್ದು ಧೈರ್ಯವಾಗಿ ನಾನು ಹೇಳೋದನ್ನೆಲ್ಲ ಕೇಳಿ ಮನಸ್ಸು ಗಟ್ಟಿ ಮಾಡ್ಕೋಬೇಕು.

''ನೋಡು, ಒಂದೊಂದೂ ಡಯಾಲಿಸಿಸ್ ಒಂದೊಂದು ಪುನರ್ಜನ್ಮ. ನಿಂಗಿದು ಗೊತ್ತೇ ಇದೆ. ಅಕಸ್ಮಾತ್ ಯಾವುದಾದ್ರೂ ಡಯಾಲಿಸಿಸ್‌ನಲ್ಲಿ ನಂಗೆ ಪುನರ್ಜನ್ಮ ಬರದೇನೇ ಹೋಗಬಹುದು...''

ಇಷ್ಟು ಹೊತ್ತಿಗೇ ಕಣ್ಣುಗಳು ಕೊಳಗಳಾಗಿದ್ದವು. ''ಊಹ್ಞೂ... ನನ್ನ ರಾಣಿ ಜಾಣೆ ಧೈರ್ಯಶಾಲಿ!... ಅವಳು ಅಳಲ್ಲ!'' ತಾನೇ ಕಣ್ಣೊರೆಸಿ ಶಾಂತಚಿತ್ತನಾಗಿ ಮಾತು ಮುಂದುವರಿಸಿದ –

''ನಾನು ಹೋದಮೇಲೆ ನೀನು ಹೂವು ಕುಂಕುಮ ತೆಗೀಕೂಡದು. ನನ್ನ ಹುಡ್ಗಿ ಕಡೇವರ್ಗೂ ಟಿಪ್‌ಟಾಪ್ ಆಗೇ ಇರ್ಬೇಕು... ಒಬ್ಳೇ ಇರೋದನ್ನ ಅಭ್ಯಾಸ ಮಾಡ್ಕೋಬೇಕು. ಇದು ತುಂಬ ಕಷ್ಟ. ಆದ್ರೂ ಸಾಧಿಸ್ಬೇಕು. ಇವತ್ತಿನ ದಿನ ಅದೆಷ್ಟು ಹೆಣ್ಣುಮಕ್ಕಳು ಒಬ್ಬೊಬ್ಬರೇ ಬಾಳ್ತಿಲ್ಲ ಹೇಳು ?

''ಆಮೇಲೆ ಸಿಟಿ ಬಸ್ ಯಾವತ್ತೂ ಹತ್ಬೇಡ. ಮೆಟ್ಟಿಲು ತುಂಬ ಎತ್ತರ. ನಿಂಗೆ ಮಂಡಿನೋವು, ತೊಂದ್ರೆ ಆಗತ್ತೆ. ಆಟೋಲೇ ಓಡಾಡು ರಾಣೀ, ಸಂಬಂಧಿಕರ ಮನೆಗೆ ಜಾಸ್ತಿ ಹೋಗ್ಬೇಡ. ನೀನೇನೋ ಆತ್ಮೀಯರು ಅಂತ ಹೋಗಿ, ಅವ್ರು ನಿನ್ನ ಅವ್ಮಾನ ಮಾಡಿಬಿಟ್ರೆ ? ನಂಗೆ ತುಂಬ ನೋವಾಗುತ್ತೆ.

''ಓದೋದನ್ನ ಜಾಸ್ತಿ ಮಾಡ್ಕೋ... ಕಂಪ್ಯೂಟರು ಕಲಿತ್ಕೋ... ಇವೆಲ್ಲ ನಿನ್ನ ಒಂಟಿತನಾನ ಕಡಿಮೆ ಮಾಡುತ್ತೆ. ಜತೆಗೆ ನಿನ್ನ ಸುತ್ತಲಿನ ಬಡಮಕ್ಕಳಿಗೆ ಪಾಠ ಹೇಳ್ಕೊಡು. ಪುಸ್ತಕ ಕೊಡಿಸು. ಒಳ್ಳೆ ಕೆಲ್ಸ ಮಾಡಿದ ತೃಪ್ತಿ ನಿನ್ನ ಕಾಯತ್ತೆ.''

ಅವತ್ತು ಅವನ ಮಾತು ಮುಗಿದಾಗ ಬೆಳಗಿನ ಜಾವ ಮೂರು ಗಂಟೆ.

* * *

ಇವತ್ತು ಎಣಿಕೆಗಳ ಉಸಿರಾಟ ಅವನದು. ನನ್ನನ್ನು ಬಿಟ್ಟು ಹೊರಟೇಹೋಗ್ತಾನೆ. ಇದು ಕ್ರೂರ ಸತ್ಯ. ಈ ಕಠೋರಯಾತನೆ ಗಳಿಗೆಗಳಿಗೆಯೂ ಕೊಲ್ಲುತ್ತಿದೆ. ದೇವರೇ, ಇಷ್ಟೊಂದು ಒಳ್ಳೆಯ ಮನುಷ್ಯನನ್ನು ನನಗೆ ಯಾಕೆ ಕೊಟ್ಟೆ? ಇಷ್ಟು ಬೇಗನೇ ಯಾಕೆ ಹೀಗೆ ಕಸಿದುಕೊಳ್ಳುತ್ತಿದ್ದೀ ? ''ದೇವರ ಶಾಸನಗಳನ್ನು ಪ್ರಶ್ನಿಸಬಾರದು'' ಅನ್ನುತ್ತಾನೆ ನನ್ನ ಜತೆಗಾರ. ಆದರೆ... ಇಂಥ ಉತ್ತಮನನ್ನು ಕಳಕೊಂಡು ಹ್ಯಾಗೆ ತಾನೇ ಇರಲಿ ?

ಆದರೆ... ಅವತ್ತು ರಾತ್ರಿಪೂರಾ ಏದುಸಿರು ಬಿಡುತ್ತಲೇ ಅವನಾಡಿದ ಮಾತುಗಳು, ಅವನೆಲ್ಲ ಕಾಳಜಿಗಳು ವ್ಯರ್ಥವಾಗಬಾರದು. ತಾನು ಮರೆಯಾಗುತ್ತಲೇ ನನಗೆ ಬೆಳಕಿನ ದಾರಿಯನ್ನು ತೋರಿಸಿದ್ದಾನೆ. ಅವನ ಮುದ್ದುಮೂರ್ತಿಯನ್ನು ಎದೆಗೂಡೊಳಗೆ ಬಚ್ಚಿಟ್ಟುಕೊಂಡು ಅದೇ ಬೆಳಕಿನ ದಾರಿಯಲ್ಲಿ ನಡೆದುಬಿಡುತ್ತೇನೆ... ಮುಂದೊಮ್ಮೆ ಅವನನ್ನು ಮತ್ತೆ ಸೇರುವವರೆಗೂ !

ಭಾರತೀ ಕಾಸರಗೋಡು
'ರಂಗಭಾರತಿ', ಡಿ-೨೫, ಸೈಟ್ ನಂ. ೧, ಶ್ರೀನಿಧಿ ಶೆಲ್ಟರ್ಸ್, ರವಿ ಹಿಲ್‌ವ್ಯೂ ಲೇಔಟ್
ಇಟ್ಟಮಡು, ಬನಶಂಕರಿ ೩ನೇ ಹಂತ, ಬೆಂಗಳೂರು [illegible]

ಬನ್ನಿಹಬ್ಬ: ಗಟ್ಟಿಗೊಳ್ಳುವ ಮನುಷ್ಯ ಸಂಬಂಧಗಳು



● ಡಾ|| ಅಮರೇಶ ಸುಗಡೋಣಿ

'ನಾಳೆ ಬನ್ನಿಹಬ್ಬ. ಬನ್ನಿ ಮುಡಿಯಲು ಊರಿಗೆ ಬಾ ಚಿಕ್ಕಪ್ಪ' ಎಂದು ಅಣ್ಣನವರ ಮಕ್ಕಳಾದ ಶಂಕರಗೌಡ, ಗುರುರಾಜ ಮೊಬೈಲ್ ಮೂಲಕ ಕರೆದರು. 'ಹೌದಲ್ಲ, ನೋಡೋಣ ಬರ್ತೀನಿ' ಅಂತ ಹೇಳಿ, ಊರಲ್ಲಿನ ವಿದ್ಯಮಾನದ ಬಗ್ಗೆ ಮಾತಾಡಿದೆ. ಇವರಿಬ್ಬರು ಹೊಲದ ಕೆಲಸ ಮಾಡಿಕೊಂಡಿರುವವರು. ನನಗೆ ನನ್ನೂರು, ಅಲ್ಲಿನ ನನ್ನ ಚಿಕ್ಕಂದಿನ ವರ್ಷಗಳು ನೆನಪಾಗತೊಡಗಿದವು. ಮಾರ್ನಾಮಿ ಹಬ್ಬ ಅಥವಾ ಬನ್ನಿಹಬ್ಬ ಎಂದೇ ನಾವು ನಮ್ಮೂರಲ್ಲಿ ಕರೆಯುತ್ತೇವೆ. ಮಹಾನವಮಿ, ವಿಜಯದಶಮಿ ಹಾಗೂ ಆಯುಧ ಪೂಜೆ ಎಂಬ ಪದಗಳನ್ನು ಕಾಲೇಜು ಸೇರಿದ ಮೇಲೆ, ಪಟ್ಟಣದವರ ಮಾತಿನಲ್ಲಿ ಹೆಚ್ಚಾಗಿ ಕ್ಯಾಲೆಂಡರ್‌ನ ಅಂಕಿಗಳ ಕೆಳಗೆ ಈ ಪದಗಳಿರುವುದನ್ನು [illegible] ಮತ್ತೆ 'ಆಯುಧಪೂಜೆ' [illegible] ಊರಲ್ಲಿ ಬುದ್ಧಿವಂತ ಹಿರಿಯರ ಮಾತಿನಲ್ಲಿ ಕೇಳುತ್ತಿದ್ದೆ. ನಮ್ಮೂರ ಕಡೆ ಸಂಭ್ರಮದ ಹಬ್ಬಗಳಲ್ಲಿ ಮಾರ್ನಾಮಿ ಹಬ್ಬ ಒಂದು. ಮುಂಗಾರು ಮಳೆಗೆ ಬಿತ್ತನೆಯಾಗಿ ಹೊಲಗಳಲ್ಲಿ ಕಪ್ಪುಸಿರಿನ ಬೆಳೆಗಳು ಯೌವ್ವನದಿಂದ ತೂಗಾಡುತ್ತಿರುವ ದಿನಗಳಲ್ಲಿ ಈ ಹಬ್ಬ ಬರುತ್ತದೆ. ಇದೇ ತಿಂಗಳಲ್ಲಿ ಜೋರುಹುಳ ಕಾಣಿಸಿಕೊಂಡು, ಅವು ನಮ್ಮ ಆಟದ ವಸ್ತುವಾಗುತ್ತಿದ್ದವು. ಹಿಂಗಾರಿಮಳೆ ಆರಂಭವಾಗುವ ದಿನಗಳ ಮುನ್ನ ಬನ್ನಿಹಬ್ಬ ಬಂದಿರುತ್ತದೆ. ಈ ವರ್ಷ ಹಿಂಗಾರಿ ಮಳೆ ಆಗಿಲ್ಲವೆಂದು ಊರಿನಿಂದ ಸುದ್ದಿಯಿತ್ತು.

'ಬನ್ನಿ ಮುಡಿವ' ಹಬ್ಬದ ದಿನ ಹೇಗಿರುತ್ತಿತ್ತು? ನಾನೇನು ಮಾಡುತ್ತಿದ್ದೆ ಎಂದು ನೆನೆಸಿಕೊಳ್ಳಲು ಆರಂಭಿಸಿದ್ದೇ ತಡ ಬಾಲ್ಯದ ಚಿತ್ರ ಶುರುವಾಯ್ತು. ನಮ್ಮೂರು ಚಿಕ್ಕದು. ಒಕ್ಕಲುತನವೇ ಎಲ್ಲರ ಕೆಲಸ. ಊರಿಗೆ ಬಸ್ಸು ಬರುತ್ತಿರಲಿಲ್ಲ. ಡಾಂಬರ ರಸ್ತೆ ಇರಲಿಲ್ಲ. ಕರೆಂಟ್ ಬರುವುದರಲ್ಲಿತ್ತು. ಊರಲ್ಲಿ ನಲ್ಲಿಗಳು ಇರಲಿಲ್ಲ. ಊರಿಗೆ ಬಳಕೆಗೆ ಬಾವಿ ನೀರು. ಕುಡಿಯಲು ಹಳ್ಳದ ಚಿಲುಮೆ ನೀರನ್ನು ಬಳಸುತ್ತಿದ್ದೆವು. ಹೋಟಲ್, ಬೇಕರಿ, ಅಂಗಡಿ ಇರಲಿಲ್ಲ ಅನ್ನಿ. ಹೀಗಾಗಿ ನಮ್ಮೂರು 'ಸುಗ್ರಾಮ' ಎಂದೇ ನನ್ನ ಭಾವನೆ. ವರ್ಷದಲ್ಲಿ ನಾಲ್ಕು ಐದು ಹಬ್ಬಗಳನ್ನು ಊರಲ್ಲಿ ಜನ ಸಂಭ್ರಮದಿಂದ ಮಾಡುತ್ತಿದ್ದರು. ಊರವರೆಲ್ಲ ಸೇರಿ ಮಾಡುವ ಹಬ್ಬಗಳೇ ಅವೆಲ್ಲ. ಬನ್ನಿಹಬ್ಬ ಕೂಡ ಊರೊಟ್ಟಿಗಿನ ಹಬ್ಬ. ನಾನು ಕಾಲೇಜು ಮುಗಿಸುವ ತನಕ ಊರಲ್ಲಿನ ಬನ್ನಿ ಹಬ್ಬದಲ್ಲಿ ಸೇರಿಕೊಂಡಿದ್ದೀನಿ. ಅದರಲ್ಲೂ ಬನ್ನಿಹಬ್ಬ ಅಂದ್ರೆ ಊರು ಕೇರಿ ಮಂದಿಯನ್ನೆಲ್ಲ ಭೇಟಿ ಮಾಡುವ ಹಬ್ಬ. ಬನ್ನಿಹಬ್ಬದ ದಿನ ಬೆಳಗ್ಗೆ ಎದ್ದು ಅಣ್ಣನವರೊಂದಿಗೆ ಕೆಲಸಕ್ಕೆ ನಿಲ್ಲುವುದು. ನಾನೇ ಚಿಕ್ಕವನು. ಅಂಕಣದ ದನಗಳನ್ನು ಹಳ್ಳಕ್ಕೆ ಹೊಡೆದುಕೊಂಡು ಹೋಗಿ ಊರ ದನಕಾಯುವವರಿಗೆ ಒಪ್ಪಿಸಿ ಬರುವುದು. ಹಳ್ಳದಲ್ಲಿ ಊರುದನಗಳನ್ನು ಕಾಯ್ವ ಮನೆಯವರು ಬಂದಿರುತ್ತಿದ್ದರು. ಅವರ ಕೆಲಸವೆಂದರೆ, ಊರು ಕೇರಿ ಮನೆ ಮಂದಿಯ ದನಕರುಗಳನ್ನು ಹಳ್ಳದಲ್ಲಿ ಒಟ್ಟಿಗೆ 'ಉಂಬೊತ್ತಿ'ನ ತನಕ ಕೂಡಿ ಹಾಕುವುದು. ನಂತರ ಮೇಯಿಸಲು ಹೊಲಗಳಿಗೆ, ಗುಡ್ಡಗಳಿಗೆ ಹೊಡೆದುಕೊಂಡು ಹೋಗಿ, ಮಧ್ಯಾಹ್ನ ಎರಡು ಗಂಟೆಗೆ ಮರಳಿ ಮನೆಗಳಿಗೆ ಹೋಗಿಸುವುದು. ದಿನ ನಿತ್ಯ ನಾನು ಮುಂಜಾನೆ ನಮ್ಮ ಹತ್ತು ಹನ್ನೆರಡು ದನಕರುಗಳನ್ನು ಅಂಕಣದಿಂದ ಬಿಡಿಸಿ ಹಳ್ಳಕ್ಕೆ ಹೊಡೆದು ಬರುವುದು. ಎತ್ತುಗಳನ್ನು ಬಿಡುತ್ತಿರಲಿಲ್ಲ. ಅವು ಹೊಲದ ಕೆಲಸಗಳಿಗೆ ಹೋಗುತ್ತಿದ್ದವಲ್ಲ ಅದಕ್ಕೆ. ಹಬ್ಬದ ದಿನ ಎತ್ತುಗಳಿಗೆ ಗಳೆವು ಇರುವುದಿಲ್ಲ. ಅಂದ್ರೆ ಅವು ಹೆಗಲಿಗೆ ನೊಗ ಹೊತ್ತು ದುಡಿಯುವುದಿಲ್ಲ. ಅವುಗಳಿಗೂ ರಜೆ. ಬೆಳಿಗ್ಗೆ ಅಂಕಣದಿಂದ ಎಲ್ಲ

ನನಗಳನ್ನು ಹೊರಗೆ ಹೊಡೆದು, ಎತ್ತುಗಳನ್ನು ಅಂಗಳದಲ್ಲಿ ಕಟ್ಟಿಹಾಕಿ ಡಿದನಗಳನ್ನೆಲ್ಲ ಹಳ್ಳಕ್ಕೆ ಹೊಡೆದೊಯ್ದು ಬಿಟ್ಟು ಬರುವುದು. ಹಬ್ಬದ ದಿನ ತ್ತಿನಂಕಣದ ಗೋದಲಿಯನ್ನು ಸ್ವಚ್ಛ ಮಾಡುವುದು. ನಮ್ಮ ಮನೆಯ ಗೋದಲಿ ದೊಣ್ಣನದ್ದು, ಅದಕ್ಕೆ ಹೆಂಡೆಯನ್ನು ನೀರಿನಲ್ಲಿ ಕಲಸಿ ಮೆತ್ತಿ, ಸಾರಿಸುವುದು ಮುಖ್ಯ ಲಸ, ಅಣ್ಣನವರೊಂದಿಗೆ ಹನ್ನೆರಡೆತ್ತಿನ ಗೋದಲಿಯನ್ನು ಸ್ವಚ್ಛಮಾಡಿ. ನೀರು ಹೊಡೆದು, ಹೆಂಡೆ ನೀರಿನಿಂದ ಮೆತ್ತಿ, ಸಾರಿಸಿ ಹೊಳೆಯುವಂತೆ ಮಾಡುವ ಹೊತ್ತಿಗೆ ಉಂಬೊತ್ತು ಆಗುತ್ತಿತ್ತು. ಅಡಿಗೆ ಮನೆಯಿಂದ ಹಬ್ಬದ ಹೋಳಿಗೆ ವಾಸನೆ ಮನೆ ತುಂಬಿರುತ್ತಿತ್ತು. ಉಂಬೊತ್ತಿಗೆ ಮಿತವಾದ ಅನ್ನ ಹಾಲು, ಅಥವಾ ರೊಟ್ಟಿ ಮೊಸರು ಉಂಡು ಎತ್ತುಗಳನ್ನು ಮೈ ತೊಳೆಯಲು ಹಳ್ಳಕ್ಕೆ ಹೊಡೆದುಕೊಂಡು ಹೋಗುವುದು. ನಮ್ಮೂರಲ್ಲಿ ಯಾವುದೇ ಹಬ್ಬ ಬಂದರೂ, ಎತ್ತುಗಳ ಗೋದಲಿಯನ್ನು ಸ್ವಚ್ಛಮಾಡಿ ಪೂಜೆ ಮಾಡುವುದು, ಎತ್ತುಗಳನ್ನು ಮೈ ತೊಳೆದು ಪೂಜೆ ಮಾಡುವುದು ಕಡ್ಡಾಯ.

ಹಳ್ಳಕ್ಕೆ ಎತ್ತುಗಳನ್ನು ನಾನು, ಅಣ್ಣ ಹೊಡೆದುಕೊಂಡು ಹೋಗಿ ನೀರಲ್ಲಿ ನಿಲ್ಲಿಸಿ ಮೈತೊಳೆಯುವುದು ಸಾಮಾನ್ಯ. ಕೆಲವು ಸಲ ಮನೆ ಕೆಲಸದ ಆಳುಗಳು ಬರುವುದಿತ್ತು. ಹಬ್ಬದ ದಿನ ಊರ ಎತ್ತುಗಳೆಲ್ಲ ಹಳ್ಳದಲ್ಲಿ ನಿಂತಿರುತ್ತಿದ್ದವು. ಅವುಗಳ ಮನೆಮಂದಿ ನೀರು ಹರಿವ ಉದ್ದಕ್ಕೂ ಎತ್ತುಗಳನ್ನು ಮೈ ತೊಳೆಯುವ ಸಡಗರದಲ್ಲಿರುತ್ತಿದ್ದರು. ನಮ್ಮ ಮನೆಯಲ್ಲಿ ನಾನು ಹೈಸ್ಕೂಲ್ ಓದುತ್ತಿದ್ದಾಗ ಎಂಟು, ಹತ್ತು ಎತ್ತುಗಳಿದ್ದವು. ಈಗ ನಮ್ಮವು ಎತ್ತುಗಳಿಲ್ಲ. ಅಷ್ಟೇ ಅಲ್ಲ ಊರಲ್ಲಿಯೂ ಇಲ್ಲ ಎಂದು ಕಾಣುತ್ತದೆ. ಟ್ರ್ಯಾಕ್ಟರ್‌ನಿಂದ ಕೆಲಸ ಮಾಡಿಸಿಕೊಳ್ಳುವುದೇ ಹೆಚ್ಚಾಗಿದೆ. ಎಂಟತ್ತು ಎತ್ತುಗಳನ್ನು ಮೈತೊಳೆಯುವುದರಲ್ಲಿ ನಾವು ಸುಸ್ತಾಗುತ್ತಿದ್ದೆವು. ಎತ್ತುಗಳ ಹಿಂಭಾಗ ಹೆಂಡೆ ಮೆತ್ತಿರುತ್ತಿತ್ತು. ಮೆತ್ತಿಕೊಂಡ ಹೆಂಡೆ ಒಣಗಿ ಬಿಟ್ಟಿರುತ್ತಿತ್ತು. ನೀರಾಕಿ ನೀರಾಕಿ ನೆನೆಸಿ, ಹೋಕಿಯಿಂದ ತಿಕ್ಕಿ ತಿಕ್ಕಿ ತೊಳೆದು ಜಳ ಜಳ ಮಾಡುವುದರಲ್ಲಿ ನನಗಂತೂ ಸಾಕ್ಕಿಯಾಗುತ್ತಿತ್ತು. ವಯಸ್ಸಾದ ಎತ್ತುಗಳು ನೀರಿನಲ್ಲಿ ಸುಮ್ಮನೆ ನಿಂತು ಮೈ ತೊಳೆಸಿಕೊಳ್ಳುತ್ತಿದ್ದವು. ಹೊಸ ಎತ್ತುಗಳು, ಮನೆಯ ಹೋರಿಗಳು ಹೂಡಿದ ಮೇಲೆ ಅವೂ ನಿಂತು ಸುಮ್ಮನೆ ಮೈ ತೊಳೆಸಿಕೊಳ್ಳುವುದು ಮಾಡುತ್ತಿರಲಿಲ್ಲ. ಹಗ್ಗ ಕಟ್ಟಿ, ಕಟ್ಟಿದ ಹಗ್ಗವನ್ನು ಕಾಲಲ್ಲಿ ತುಳಿದು ಹಿಡಿದು ನೀರಾಕಿ ಮೈ ತೊಳೆಯಬೇಕು. ನೀರು ಬಿದ್ದರೆ, ಅದೂ ಮುಖದ ಮೇಲೆ ಬಿದ್ದರೆ ಓಡಲು ನೋಡುತ್ತಿದ್ದವು. ನಾನು ಕಾಲಿಗೆ ಕಟ್ಟಿಕೊಂಡ ಹಗ್ಗವನ್ನು ಜಗ್ಗಿದರೆ ಎತ್ತು ನೀರಿಗೇ ಬೀಳುವುದು. ಕಟ್ಟಿಕೊಂಡಿರುತ್ತಿರಲಿಲ್ಲ. ಒಂದು ವೇಳೆ ಕಟ್ಟಿಕೊಂಡಿದ್ದಿದ್ದರೆ, ಸಿನೆಮಾದಲ್ಲಿ ವಿಲನ್ ಅಥವಾ ವಿಲನ್ ಕಡೆಯವರು ನಾಯಕನನ್ನು ಹಗ್ಗಕಟ್ಟಿ ಎಳೆದು ಒಯ್ಯುವುದಿಲ್ಲವೇ ಅದೇ ಗತಿ ನನಗೂ ಆಗುತ್ತದೆಂಬ ಎಚ್ಚರವಿರುತ್ತಿತ್ತು. ಅದಕ್ಕಾಗಿ ಎತ್ತಿಗೆ ಕಟ್ಟಿದ ಹಗ್ಗವನ್ನು ಕಾಲಿನಿಂದ ತುಳಿದು ಹಿಡಿದಿರುತ್ತಿದ್ದೆ. ಜಗ್ಗಿ ಎಳೆದರೆ ಹಗ್ಗದೊಂದಿಗೆ ಎತ್ತು ಹೋಗುತ್ತಿತ್ತಷ್ಟೆ. ಓಡಿ ಹೋಗುವ ಎತ್ತುಗಳನ್ನು ಬೆನ್ನತ್ತುವುದು. ಅಕ್ಕ ಪಕ್ಕದ ಊರ ಮಂದಿ ಕೂಗಿ, ಓಡಿ ಹಿಡಿಯುತ್ತಿದ್ದರು. ಇಲ್ಲ ಅಡ್ಡಗಟ್ಟಿ ತರುಬುತ್ತಿದ್ದರು. ಕೊಸರಾಡುವ ಎತ್ತುಗಳು ನಮ್ಮವೂ ಇದ್ದವು. ಬಟ್ಟೆ ಒಗೆಯುವ ಕಲ್ಲುಗಳನ್ನು ತಂದು, ಅದಕ್ಕೆ ಕಟ್ಟಿ ಹಾಕುತ್ತಿದ್ದೆವು. ಒಮ್ಮೊಮ್ಮೆ ಕಲ್ಲನ್ನೇ ಎಳೆದುಕೊಂಡು ಓಡುತ್ತಿದ್ದವು. ಆ ಕಲ್ಲು ಎತ್ತುಗಳ ಕಾಲಿಗೆ ಬಡಿದೋ, ಸಿಕ್ಕಿಕೊಂಡೋ ಎತ್ತಿಗೆ ಗಾಯ ಮಾಡುತ್ತಿತ್ತು. ಇದರ ಎಚ್ಚರವೂ ನಮಗಿರುತ್ತಿತ್ತು. ಹಳ್ಳದಲ್ಲಿ ನೀರು ಹೆಚ್ಚು ಹರಿಯುತ್ತಿದ್ದರೆ, ಹಳ್ಳದ ದಂಡೆಯ ಗಿಡಮರಗಳಿಗೆ ಎತ್ತುಗಳನ್ನು ಕಟ್ಟಿಹಾಕಿ, ನೀರಿನಲ್ಲಿ ನಿಲ್ಲಿಸಿ ತೊಳೆಯುತ್ತಿದ್ದೆವು. ಒಂದೊಂದಾಗಿ ಮೈ ತೊಳೆದ ಎತ್ತುಗಳನ್ನು ಉಸುಕಿನಲ್ಲಿ ಬಿಡುತ್ತಿದ್ದೆವು. ಊರ ಎತ್ತುಗಳೆಲ್ಲ ಒಂದೇ ಹಳ್ಳದಲ್ಲಿ, ಒಂದು ಕಡೆ ಸೇರಿದಾಗ ಅವು ಮಾತುಕತೆ ನಡೆಸುತ್ತಿದ್ದವು. ಮುಖಕ್ಕೆಮುಖ ಮಾಡಿ ನಿಂತುಕೊಂಡಿರುವ ಕೆಲವು ಎತ್ತುಗಳು, ಒಂದರ ಕೊರಳನ್ನು ಇನ್ನೊಂದು ನೆಕ್ಕುತ್ತ ನಿಂತಿರುವ ಕೆಲವು ಎತ್ತುಗಳು, ಕೆಲವು ಏರಿ ಹೋಗುತ್ತ, ನೆಗೆ ಜಿದಾಡುವುದು ಮಾಡುತ್ತ ಕಾಲ ನೂಕುತ್ತಿದ್ದವು. ಎಲ್ಲೋ ಒಂದೆರಡು ಎತ್ತುಗಳು ಜಿದ್ದಾಡುವುದಕ್ಕೆ ನಿಂತು ಹಳ್ಳವನ್ನೇ ರಣರಂಗ ಮಾಡಿಬಿಡುತ್ತಿದ್ದವು. ಜಗಳ ಮಾಡುವುದು ಮನುಷ್ಯನಿಗೆ ಮಾತ್ರ ಬಿಟ್ಟುಕೊಟ್ಟಿಲ್ಲ. ನೋಡಿ ಪ್ರಾಣಿ, ಪಶು, ಪಕ್ಷಿ, ಕ್ರಿಮಿ ಕೀಟಗಳೂ ಜಗಳ ಮಾಡುತ್ತವೆ.



'ಗಾಡೀನೇ ಇಲ್ಲ, ಹೆಲ್ಮೆಟ್ ಹಾಕ್ಕೊಂಡು ಯಾಕ್ರೀ ನಡಕೊಂಡು ಹೋಗ್ತಾ ಇದೀರಾ ?'
'ದಿನಾ ಹೆಲ್ಮೆಟ್‌ಹಾಕ್ಕೊಂಡು ಗಾಡೀಲಿ ಹೋಗಿ ಅಭ್ಯಾಸ, ಪೆಟ್ರೋಲ್ ಈಗ ತೀರ ದುಬಾರಿ. ಅಭ್ಯಾಸ ಬಲ ನೋಡಿ, ಹೆಲ್ಮೆಟ್ ಇಲ್ಲದೆ ಹೊಸಿಲು ದಾಟೋಕ್ಕೆ ಆಗ್ತಾ ಇಲ್ಲ ಸಾರ್!!'

ನಮ್ಮ ಮನೆಯ ಅಂಕಣದಲ್ಲಿ ಊರು ಗುಬ್ಬಿಗಳು ಜಗಳಕ್ಕೆ ನಿಂತರೆ ಒಂದು ಹಿಂಡೇ ಜಮಾಯಿಸಿ ಜಗಳಕ್ಕೆ ನಿಂತು ಚೆಂವ್‌ಗರೆಯುತ್ತ ಭಯ ಹುಟ್ಟಿಸಿಬಿಡುತ್ತಿದ್ದವು. 'ಕುಲಕ್ಕೆ ಕುಲ ವೈರಿ, ನೀರಿಗೆ ಪಾಚಿ ವೈರಿ' ಅಂತ ಅಪ್ಪ ಇಂಥ ಪ್ರಸಂಗ ನೋಡಿ ಅನ್ನುತ್ತಿದ್ದ, ಇರಲಿ.

ಎತ್ತುಗಳನ್ನು ಮೈ ತೊಳೆದು, ಮನೆಯ ಅಂಕಣಕ್ಕೆ ಹೊಡೆದು ತಂದು, ಗೋದಲಿಗೆ ಕಟ್ಟಿಹಾಕಿ, ಖಾಲಿ ಗೋದಲಿಗೆ ಮತ್ತು ಎತ್ತುಗಳಿಗೆ ವಿಭೂತಿ ಹಚ್ಚಿ, ಕುಂಕುಮ ಹಚ್ಚಿ, ಊದಿನ ಕಡ್ಡಿ ಬೆಳಗಿ, ನೈವಿದ್ಯ ಹಿಡಿದು, ನನ್ನ ಪ್ರೀತಿಯ ದನ, ಕರ, ಎತ್ತಿಗೆ ಹೋಳಿಗೆ ತಿನ್ನಿಸಿ ಖುಷಿಪಡುತ್ತಿದ್ದೆ. ಖಾಲಿ ಗೋದಲಿಗೆ ಅಟ್ಟದಿಂದ ಮೇವು ಹಾಕಿದರೆ ಸಾಕು ಅವು ಮೇಯುತ್ತ ನಿಲ್ಲುತ್ತಿದ್ದರೆ, ನಾವು ಹಳ್ಳದ ನೀರಿನಲ್ಲೇ ನಿಂತು ತೋಯ್ದಿದ್ದರೂ, ಪುನಃ ಮೈಯಿಗೆ ನೀರು ಹಾಕಿಕೊಂಡು, ದೇವರ ಪೂಜೆಯನ್ನು ಮಾಡಿ ಮುಗಿಸುವ ಹೊತ್ತಿಗೆ, ಹೋಳಿಗೆ ವಾಸನೆಯೇ ನಮ್ಮನ್ನು ಹಸಿವೆಗೆ ದೂಡುತ್ತಿತ್ತು. ಅಪ್ಪ ಸಾಮಾನ್ಯವಾಗಿ ದೊಡ್ಡ ಕೆಲಸ ಮಾಡುತ್ತಿರಲಿಲ್ಲ. ನಾವು ಮಾಡುತ್ತಿದ್ದರೆ ನಡು ನಡುವೆ ಬೇಕಾದದ್ದನ್ನು ಕೊಡುತ್ತ ನೆರವಾಗುತ್ತಲೂ, ನಮ್ಮ ಕೆಲಸದಲ್ಲಿ ನಡುವೆ ಮಾತಿನಿಂದಲೋ, ಚೂರು ಕೈ ಹಾಕಿಯೋ ಬೈಸಿಕೊಂಡು ಹೋಗಿ ಪಡಸಾಲೆಯಲ್ಲಿ ಕುಂತುಬಿಡುತ್ತಿದ್ದ. ನಾವು ಪ್ರೀತಿಯಿಂದಲೇ ಬಯ್ದದ್ದನ್ನು ಅಮ್ಮ ಅಡಿಗೆ ಮನೆಯಿಂದಲೇ ಗ್ರಹಿಸಿ ಖುಷಿಪಡುತ್ತಿದ್ದಳು. ಅಪ್ಪ ಅಡಿಗೆ ಮನೆಗೆ ಹೋಗಿ ಅಡ್ಡ ಕಡ್ಡಿಯಾಡಿಸಿ ಅಮ್ಮನಿಂದ ಬಯ್ಸಿಕೊಂಡೇ ಬಂದಿರುತ್ತಿದ್ದ. ನಮ್ಮೆಲ್ಲರ ಕೆಲಸ ಮುಗಿಯುವ ತನಕ ಅಪ್ಪ ಊಟ ಮಾಡುತ್ತಿರಲಿಲ್ಲ ಅನ್ನಿ, ಆದರೆ ತಡವಾದರೆ ಮಾತ್ರ ಹಸಿವು ತಡೆಯದೆ ''ಜಲ್ದಿ ಜಲ್ದಿ ದಗದ ಮುಗಿಸಿ ಬರ್ರಿ! ಅಡಿಗೆ ತಯ್ಯಾರಾಗೇದ'' ಎಂದು ಸಿಡಿಮಿಡಿ ಮಾಡುತ್ತಿದ್ದ. ನಾವು ಎಲ್ಲ ಪೂಜೆ ಮುಗಿಸಿ, ಊಟಕ್ಕೆ ಕೂಡುವ ಮುನ್ನ, ಹೊಸ ಬಟ್ಟೆ ಬರೆ ತಂದಿದ್ದರೆ ಮಾತ್ರ ಅವುಗಳನ್ನು ಬಿಚ್ಚಿ, ಆಕಳ ಮೈ ಮೇಲೆ ಹೊದಿಸಿ, ಪುನಃ ಎಳೆದುಕೊಂಡು ತೊಟ್ಟು ಊಟಕ್ಕೆ ಕೂಡುತ್ತಿದ್ದೆವು. ಗಂಡಸರ ಊಟವಾದ ಮೇಲೆಯೇ ಹೆಂಗಸರ ಊಟ. ಹೆಚ್ಚೆಂದರೆ ಹಿರಿಯ ಹೆಂಗಸರು ಅದೂ ಬೀಗರೋ, ಸಂಬಂಧಿಗಳೋ ಆಗಿದ್ದರೆ ನಡುಮನೆಯಲ್ಲಿ ಅವರೂ ಉಣ್ಣುತ್ತಿದ್ದರು.

ಬನ್ನಿಹಬ್ಬ, ಯುಗಾದಿ, ಎಳ್ಳಮವಾಸೆಗೆ ಹೋಳಿಗೆ ಊಟ ನಮ್ಮ ಮನೆಯಲ್ಲಿ ಗ್ಯಾರಂಟಿ. ಹೋಳಿಗೆ, ಸಂಡಗಿ, ಅನ್ನ, ಅನ್ನ ವಿಶೇಷವಲ್ಲ; ಅನ್ನದ ಜತೆಗೆ ಇರುವ ಹೋಳಿಗೆ ಸಾರು ಎಲ್ಲರನ್ನು ಸೆಳೆಯುತ್ತದೆ. ತಿಳಿ ಕಪ್ಪು ಬಣ್ಣದ ಸಾರು ವಿಶೇಷ. ಬನ್ನಿಹಬ್ಬದ ದಿನವೋ ಏನೋ ಹಿಂಗೆ ದಣಿದು ಉಣ್ಣಲು ಕೂಡುವ ಮುಂಚೆ ದೊಡ್ಡಣ್ಣ ಯಾರು ಹೆಚ್ಚು ಹೋಳಿಗೆ ತಿಂತೀರಿ. ಪಂಥಕ್ಕೆ ಕೂಡ್ರಿ ಅಂದ. ನಾವು ನಾಲ್ವರು ಅಣ್ಣತಮ್ಮರು. ನಾನೇ ಕಿರಿಯ. ದೊಡ್ಡ ಅಣ್ಣನಿಗೆ ೫೦ ದಾಟಿತ್ತು. ನಡುವಿನ ಇಬ್ಬರು ಸ್ಪರ್ಧೆಗೆ ಇಳಿಯಬೇಕು. ಅಮ್ಮ ಪಂಥ ಯಾಕ? ಬೇಕಾದಷ್ಟು ಉಣ್ಣಿ ಅಂದರೂ ಕೇಳದೆ ನಡುವಿನ ಇಬ್ಬರು ಸ್ಪರ್ಧೆಗೆ ಕುಂತರು. ಒಂದು, ಎರಡು, ಮೂರು ಹೀಗೆ ಆರೋ ಏಳೋ ಅಂದಿನ ದಿನ ತಿಂದರು. ಅನ್ನ ಸಾರು ತಿಂದರೋ ಬಿಟ್ಟರೋ ನೆಪ್ಪಿಲ್ಲ. ಖಾನಾವಳಿಯ ಲೆಕ್ಕದಲ್ಲಿ, ಪಟ್ಟಣದವರ ಲೆಕ್ಕದಲ್ಲಿ ಹತ್ತಕ್ಕಿಂತ ಹೆಚ್ಚೆ ಹೋಳಿಗೆ ಅನ್ನಬೇಕು. ನಮ್ಮ ಮನೆಯಲ್ಲಿ ಅಥವಾ ನಮ್ಮ ಹಳ್ಳಿ ಕಡೆ ಹೋಳಿಗೆ ಅಂದರೆ ಹೂರಣ ತುಂಬಿದ ದಪ್ಪ ದಪ್ಪ ಹೋಳಿಗೆ. ಅಮ್ಮ, ಅಕ್ಕಂದಿರು, ಅತ್ತಿಗೆಯವರು ಯಾರೇ ಮಾಡಿದರೂ ಎರಡೇ ತಿನ್ನುವುದರಲ್ಲಿ ಸಾಕು ಅನ್ನಿಸುತ್ತದೆ. ಹೆಚ್ಚೆಂದರೆ ಮೂರು. ಅಣ್ಣಂದಿರು ಪಂದ್ಯಗೆ ಕುಂತು ಆರೇಳು ತಿಂದು, ಕಪ್ಪೆಯನ್ನು ನುಂಗಿದ ಹಾವಿನ ಹಾಗೆ ಎದ್ದು ವಿಶ್ರಾಂತಿಗೆ ಅನಿವಾರ್ಯವಾಗಿ ಶರಣಾದರು.

ಬನ್ನಿಹಬ್ಬ ಎಂದರೆ ಉಂಡು ಮಲಗಲು ಸಮಯ ಇರುವುದಿಲ್ಲ. ಸಂಜೆ ಹೊತ್ತಿಗೆ ಬನ್ನಿ ಮುಡಿಯಲು ಊರೊಟ್ಟಿಗೆ ಸೇರಬೇಕು. ನಮ್ಮೂರ ಬಸವಣ್ಣನ ಗುಡಿ ಸಣ್ಣದು. ಗರ್ಭಗುಡಿ ಇನ್ನೂ ಚಿಕ್ಕದು. ಗುಡಿಯ ಅಂಗಳ ದೊಡ್ಡದು. ಬನ್ನಿಹಬ್ಬದ ದಿನ ಊರ ಜನರು ತಮ್ಮ ತಮ್ಮ ಹೊಲದ ಪೈರಿನ ಒಂದೆರಡು ಸೂಡುಗಳನ್ನು ತಂದು ಬಸವಣ್ಣನಿಗೆ ಸಲ್ಲಿಸುತ್ತಾರೆ. ಬಾಳೆ ದಿಂಡುಗಳನ್ನು, ಕಬ್ಬಿನ ಬೆಳೆಯನ್ನು ದೇವರಿಗೆ ಸಲ್ಲಿಸುವಂತೆ ಇಲ್ಲಿ ನಮ್ಮ ಕಡೆ ಮುಂಗಾರಿನ ಜೋಳದ ಒಂದು ಸೂಡು. ಸಜ್ಜೆ ಬೆಳೆಯ ಸೂಡು, ಬತ್ತದ ಸೂಡು ಹೀಗೆ. ಚಿಕ್ಕವರಾದ ನಮಗೆ

[illegible] ನೋಡುತ್ತಿದ್ದವು. [illegible] ಎಲೆಗಳಂತೂ [illegible] ಕಟ್ಟುವುದು ಸಾಮಾನ್ಯ. [illegible] ಗುಡಿ ಶೃಂಗಾರಗೊಂಡಿರುವುದನ್ನು [illegible]ದಿಂದ ನೋಡುತ್ತಿದ್ದವು. ಒರಗಿರುವವರೆಲ್ಲ ಸೇರಿ. ಬನ್ನಿ ಹಬ್ಬದ ದಿನ ಸಂಜೆ ಊರ ಪ್ರಮುಖರು ಗುಡಿಗೆ ಬಂದುಬಿಡುತ್ತಾರೆ. ಅದರಲ್ಲಿ ಭಜನೆಮಾಡುವ ಗುಂಪು ಬರುವ ತನಕ ಎಲ್ಲರೂ ಕಾಯಬೇಕು. ಬಗಜೀರ ಸಂಗಪ್ಪ, ಜೀರ ವಿರೂಪಾಕ್ಷಿ, ಮೇಘನಾಥ, ಗೌತರ ಶೇಶಪ್ಪ, ವೆಂಕಣ್ಣ, ಕುರುಬರ ಬೂದೆಪ್ಪ ಮುಂತಾದವರು ಹಾಡುವುದರ ಜತೆಗೆ ಭಜನೆಯಲ್ಲಿ ಬಳಕೆಯಾಗುವ ವಾದ್ಯಗಳನ್ನು ನುಡಿಸುವುದರಲ್ಲಿ ಪರಿಣತರು. ನನಗೆ ಬಾಲ್ಯದಿಂದಲೂ ಭಜನೆ ಮೇಳದಲ್ಲಿ ಸೇರಿ ಹಾಡಬೇಕೆಂದು ಆಶೆ. ದಮ್ಮಡಿ, ದಿಮ್ಮಿಯನ್ನು ಬಾರಿಸಬೇಕೆಂದು ಹಂಬಲ. ಆದರೆ ಹಾಡಲು ನನಗೆ ಒಳ್ಳೆಯ ದನಿಯಿಲ್ಲ. ಹಿಮ್ಮೇಳದಲ್ಲಿ ಹಾಡಲೂ ನನಗೆ ಬರಲಿಲ್ಲ. ಹಾಡಿನ ಸ್ವರ, ಲಯ, ಏರಿಳಿತಗಳು ನನ್ನ ದನಿಯಲ್ಲಿ ಮೂಡಿಬರಲಿಲ್ಲ. ಚರ್ಮದ ವಾದ್ಯ ದಿಮ್ಮಿಯನ್ನಾಗಲಿ, ದಮ್ಮಡಿಯನ್ನಾಗಲಿ ಕಲಿಯಲು ಪ್ರಯತ್ನಿಸಿದರೂ ಬರಲಿಲ್ಲ. ತಾಳಗಳು (ಚಿಯ್ಯಪ್‌ಗಳು) ಕೂಡ ಸರಿಯಾಗಿ, ನನ್ನ ಕೈಯಿಂದ ಹಾಡಿಗೆ ನುಡಿಯಲಿಲ್ಲ. ಹೀಗಾಗಿ ಗುಂಪಿನ ಹಿಂದೆ ಕುಂತು ಕೇಳುವುದನ್ನು ಮಾತ್ರ ಮಾಡುತ್ತಿದ್ದೆ. ದಿಮ್ಮಿಯನ್ನು ಬಾರಿಸುವುದರಲ್ಲಿ ಸಂಗಪ್ಪಣ್ಣ, ಮೇಘನಾಥ, ವಿರೂಪಾಕ್ಷ, ವೆಂಕಣ್ಣ, ಶೇಕ್ರಪ್ಪ, ಬೂದೆಪ್ಪ ಎಲ್ಲರೂ ಪರಿಣತರೇ. ಭಜನೆ ನಡೆಯುತ್ತಿದ್ದರೆ ದೂರದಿಂದ ಕೇಳುತ್ತಿದ್ದರೆ ಇವತ್ತು ಇವರೇ ದಿಮ್ಮಿಯನ್ನು ಬಾರಿಸುತ್ತಿದ್ದಾರೆಂದು ನಾನು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಿದ್ದೆ. ತಬಲದ ಇನ್ನೊಂದು ರೂಪವೇ ದಿಮ್ಮಿ. ತಬಲವನ್ನು ಕೈಯಿಂದ ನುಡಿಸುತ್ತಾರೆ. ದಿಮ್ಮಿಯನ್ನು ಎಡಗೈ ಬೆರಳಿನಿಂದಲೂ, ಅಂಗೈಯಿಂದಲೂ ನುಡಿಸುತ್ತ, ಬಲಗೈಯಲ್ಲಿ ಒಂದು ಅಡಿ ಉದ್ದದ ಕೋಲು, ಅದರ ತುದಿಯಲ್ಲಿ ಚರ್ಮದಿಂದ ಬಿಗಿದಿರುತ್ತಾರೆ. ಅದನ್ನು ಬಲಗೈಯಿಂದ ಬಾರಿಸುತ್ತ, ಎಡಗೈಯನ್ನು ಬಳಸಿಕೊಳ್ಳುತ್ತಾರೆ. ನಾನು ಬಾಲ್ಯದಿಂದಲೂ ಬನ್ನಿಮುಡಿಯಲು ಭಜನೆ ಮೇಳದೊಂದಿಗೆ ಬನ್ನಿಮರಕ್ಕೆ ಗೆಳೆಯರ ಜೊತೆಯಲ್ಲಿ ಹೋಗುತ್ತಿದ್ದೆ. ಬನ್ನಿಹಬ್ಬದ ದಿನ ಸಂಜೆ ಜೀರ ವಿರೂಪಾಕ್ಷಿ ಬಸವಣ್ಣನಿಗೆ ಪೂಜೆ ಮಾಡಿ ಅಪ್ಪಣೆ ನೀಡುತ್ತಿದ್ದ. ಭಜನೆ ಮೇಳ ಹಾಡಲು ನಿಂತು, ಹೆಜ್ಜೆ ಹಾಕುತ್ತದೆ. ಊರಮಂದಿ ಹಿಂದಿಂದೆ ಮೆಲ್ಲಗೆ ಹಾಡುತ್ತ, ಮಾತುಕತೆಯಾಡುತ್ತ, ಊರಮನೆಗಳಿಗೆ ಅವರವರ ಬೀಗರು ಬಂದಿದ್ದರೆ, ಅವರ ಜತೆ ಮಾತಾಡುತ್ತ ಹಿಂದಿಂದೆ ನಡೆಯುತ್ತಿದ್ದರು. ಬನ್ನಿಮರ ಗುಡಿಯಿಂದ ದೂರವಿರಲಿಲ್ಲ. ಆದರೆ ಜಾಲಿಯ ನಡುವೆ, ಬಣವಿಗಳ ಸಂದಿಯಲ್ಲಿತ್ತು. ಕಾಲುದಾರಿಯಲ್ಲಿ ಮಾತ್ರ ಅಲ್ಲಿಗೆ ಹೋಗಬೇಕು. ಹಬ್ಬದ ದಿನ ಗುಡಿ ಪೂಜೆಯ ಮನೆಯವರು ಬೆಳಗ್ಗೆ ಹೋಗಿ ಮುಳ್ಳು, ಮುಳ್ಳಿನ ಗಿಡಗಳನ್ನು ತೆಗೆದು ದಾರಿ ಮಾಡಿರುತ್ತಿದ್ದರು. ಗಿಡದ ಬುಡದಲ್ಲಿ ಕಲ್ಲಿನಲ್ಲಿ ನಾಗರಹಾವಿನ ಚಿತ್ರ ಇರುವ ಉದ್ದನೆಯ ಕಲ್ಲುಗಳಿದ್ದವು. ಊರ ಜನ ನಿಂತು ಗಿಡಕ್ಕೆ ಪೂಜೆ ಮಾಡಲು ಬರುವಷ್ಟು ಜಾಗವನ್ನು ಸ್ವಚ್ಛ ಮಾಡಿರುತ್ತಿದ್ದರು. ಬಾಲ್ಯದಲ್ಲಿ ಇದೇ ಮರಕ್ಕೆ ಊರವರೊಂದಿಗೆ ಪೂಜೆ ಮಾಡುವುದನ್ನು ನೋಡುತ್ತ ಪಾಲ್ಗೊಂಡಿದ್ದೇನೆ. ಆದರೆ ಈಗ ಈ ಬನ್ನಿಮರಕ್ಕೆ ಬನ್ನಿಮುಡಿಯಲು ಬರುವುದಿಲ್ಲವಂತೆ. ಈಗ ಬಸವಣ್ಣ ದೇವರ ಗುಡಿಯ ಹಿಂದೆ ಬೆಳೆದಿರುವ ಬನ್ನಿಮರಕ್ಕೆ ಪೂಜೆ ಮಾಡುತ್ತಿದ್ದಾರಂತೆ. ಬನ್ನಿಮುಡಿಯಲು ಬನ್ನಿಮರಕ್ಕೆ ಯುವಕರು, ಚಿಕ್ಕವರು ಊರಿನ ಪ್ರಮುಖರ ಮತ್ತು ಕೇರಿಯ ಮಂದಿ ಇರುತ್ತಿದ್ದರು. ಹೆಂಗಸರು ಬರುತ್ತಿರಲಿಲ್ಲ. ಊರುಕೇರಿಯ ಚಿಕ್ಕ ಹುಡುಗಿಯರು ಮಾತ್ರ ಇರುತ್ತಿದ್ದರು. ಗುಡಿಯಿಂದ ಬಹಳವೆಂದರೆ ಅರ್ಧ, ಮುಕ್ಕಾಲು ಗಂಟೆಯಲ್ಲಿ ಹೆಜ್ಜೆ ಹಾಕುತ್ತ, ಭಜನೆಯೊಂದಿಗೆ ಬನ್ನಿಮರದಲ್ಲಿಗೆ ಬರುವ ಹೊತ್ತಿಗೆ ಕತ್ತಲಾವರಿಸಿರುತ್ತಿತ್ತು. ಒಂದು ಬಿಜಲಿ ಬೆಳಕಿನಲ್ಲಿ ಮೆರವಣಿಗೆ ನಡೆಯುತ್ತಿತ್ತು. ಭಜನೆ ಮೇಳದಲ್ಲಿ ಹತ್ತಾರು ವಾದ್ಯಗಳಿದ್ದರೂ, ಕಂಚಿನ ತಾಳಗಳಿದ್ದರೂ ಚರ್ಮದ ದಿಮ್ಮಿಯದೇ ಶಬ್ದ ಎಲ್ಲರ ಕಿವಿಯನ್ನು ತುಂಬಿರುತ್ತಿತ್ತು. ನಿಂತ ಆಳದ ನೀರಿನಲ್ಲಿ ಎತ್ತರದಿಂದ ಒಂದು ದೊಡ್ಡ ಕಲ್ಲನ್ನು ಹಾಕಿದರೆ ಹೊರಡುವ ಶಬ್ದದಂತೆ ದಿಮ್ಮಿಗೆ ಕೋಲಿನ ಏಟು ಬಿದ್ದಾಗ ಬರುತ್ತಿತ್ತು. ದೂರದಿಂದಲಂತೂ ಕೇಳಲು ಖುಷಿ.

ಬನ್ನಿಮರಕ್ಕೆ ಬಂದು ಸೇರಿದರೆ, ಅಲ್ಲಿ ಗಿಡಕ್ಕೆ ವಿರೂಪಾಕ್ಷಿ ಪೂಜೆ ಸಲ್ಲಿಸುತ್ತಿದ್ದ. ಪೂಜೆಯ ನಂತರ ಕೊನೆಗೆ ಮಂಗಳಾರತಿ ಪದ 'ಬೆಳಗುವೆನಾರತಿಯ ಪಂಪಾಪತಿಗೆ, ಪಂಪಾಪುರದರಸನಿಗೆ...' ಎಂಬ ಮಂಗಳಾರತಿಯ ಈ ಹಾಡು ಬಾಲ್ಯದಿಂದ ಕೇಳುತ್ತ ಬಂದಿದ್ದೀನಿ. ನಿತ್ಯ ರಾತ್ರಿ ಬಸವಣ್ಣನಿಗೆ ಮಂಗಳಾರತಿ ನಡೆಯುತ್ತದೆ. ಅದು ನಡೆಯುತ್ತಿದ್ದಂತೆ, ಗುಡಿ ಪೂಜೆ ಶುರುವಾಯ್ತು. ನಡಿರಿ ಊಟಕ್ಕೆ ಎಂದು ಊರು ಕೇರಿ

ತ್ರಿ ಉಣ್ಣಲು ತೊಡಗುತ್ತಿದ್ದರು. ಈಗಲೂ ಈ ಪೂಜೆಯಿದೆ. ಟಿ.ವಿ. ಮುಂದಿರುವ ಂದಿಗೆ ಪೂಜೆಯ ನಗಾರಿ ಎಲ್ಲಿ ಕೇಳಬೇಕು? ಇರಲಿ. ಬನ್ನಿಮರದ ಪೂಜೆ, ಂಗಳಾರತಿ ಮುಗಿದದ್ದೇ ತಡ ಕೂಡಿದ ಊರ ಮಂದಿಯಲ್ಲಿ ಒಬ್ಬೊಬ್ಬರಾಗಿ ಮಕದ ರೀತಿಯಲ್ಲಿ ಸೋಮೇಶ್ವರನ ಶತಕಗಳನ್ನು, ವಚನಗಳನ್ನು, ಸರ್ವಜ್ಞನ ಪದಿಗಳನ್ನು ಹೇಳುತ್ತಾರೆ. ನಾನು ಒಮ್ಮೆಯೂ ವಚನಗಳನ್ನಾಗಲಿ, ತ್ರಿಪದಿಗಳನ್ನಾಗಲಿ ಳಿಲ್ಲ. ಅಣ್ಣನವರು ಹೇಳುತ್ತಿದ್ದರೆಂದು ನೆನಪು. ಇದು ಮುಗಿದಿದ್ದೇ ತಡ ಜಯಾಜಯನಂ ಪಾರ್ವತಿ ಪತಿ ಹರಹರ ಮಹಾದೇವ' ಎಂದು ಘೋಷಣೆ ಗುತ್ತಲೇ ಯುವಕರು ಬನ್ನಿಮರಕ್ಕೆ ಜಿಗಿಯುತ್ತಿದ್ದರು. ಹಾಗೆ ನೋಡಿದರೆ ನ್ನಿಮರದಲ್ಲಿ ಚಿಕ್ಕ ಚಿಕ್ಕ ಮುಳ್ಳಿನಿಂದ ಕೂಡಿಕೊಂಡೇ ಎಲೆಗಳಿರುತ್ತವೆ. ಹತ್ತಾರು ಜನ ರ ಏರಿ ತಮ್ಮ ಅಂಗಿ ಬಕ್ಕಣ್ಣದಲ್ಲಿ, ಪಂಚೆಯ ಉಡಿಯಲ್ಲಿ ಬನ್ನಿ ಎಲೆ ಹರಿದು ಂಬಿಕೊಳ್ಳುತ್ತಾರೆ. ಕೆಳಗೆ ನಿಂತವರು ನಿಲುಕಿದ ಕೊಲ್ಲೆಗಳನ್ನೇ ಎಳೆದು ರಿದುಕೊಳ್ಳುತ್ತಾರೆ. ಚಿಕ್ಕವರು, ದೊಡ್ಡವರು ಎಲ್ಲರೂ ಪೂಜೆಮಾಡಿದ ಈ ನ್ನಿಮರದ ಬನ್ನಿಯನ್ನು ಮಾತ್ರ ಮುಡಿಯಬೇಕು. ಒಂದುವೇಳೆ ಬೇರೆ ಬನ್ನಿಮರದ ನ್ನಿ ತಂದು ಇಟ್ಟುಕೊಂಡವರು ಬನ್ನಿಮರದ ಬನ್ನಿಯನ್ನು ಸ್ವಲ್ಪ ಸೇರಿಸಿ ಬನ್ನಿ ಡಿಯುತ್ತಿದ್ದರು. ಹೀಗಾಗಿ ಈ ಮರದ ಬನ್ನಿಯನ್ನು ಮುಷ್ಟಿಯಷ್ಟಾದರೂ ರಿದುಕೊಂಡು ತೃಪ್ತಿಪಡುತ್ತಿದ್ದರು. ಒಂದು ಗಂಟೆಯ ಕಾಲ ಬನ್ನಿಮರ ಏರಿದವರು, ನ್ನಿ ಹರಿದುಕೊಂಡು ಕೆಳಗಿಳಿದು ಬರುತ್ತಿದ್ದರು. ಅವರೂ ಬನ್ನಿಯನ್ನು ಇತರರಿಗೆ ಡುತ್ತಿದ್ದರು. ಪೂಜಾರಿ ನಡಿರಿ ಅಂದಾಗ ಪುನಃ ಭಜನೆ ಶುರುವಾಗುತ್ತಿತ್ತು. ಗುಂಪು ಸವಣ್ಣ ಗುಡಿಗೆ ಒಂದೇ ಬಿಜಿಲಿ ಬೆಳಕಿನಲ್ಲಿ ಬಂದು ನೆರೆಯುತ್ತಿತ್ತು. ಪುನಃ ಸವಣ್ಣನಿಗೆ ಪೂಜೆ. ಮೊದಲು ಬಸವಣ್ಣ ದೇವರ ಮುಂದೆ ಬನ್ನಿಯಿಟ್ಟು ಬಂಗಾರದಂತೆ ಬಾಳುವಂತೆ ಆಶೀರ್ವದಿಸು'' ಎಂದು ಹೇಳಿಯೇ ಊರು ಕೇರಿಯ ಂದಿಗೆ ಬನ್ನಿ ಕೊಡಲು ಪಡೆಯಲು ತೊಡಗುತ್ತಿದ್ದರು. ದೇವರಿಗೆ ಅರ್ಪಿಸಿದ ಮೇಲೆ ರ ಪ್ರಮುಖರು ಜಂಗಮರಿಗೆ ಬನ್ನಿ ಕೊಡುವುದು ಪದ್ಧತಿ. ಬನ್ನಿಯ ಜತೆ ಲ್ಯಾಣೆ, ಎಂಟಾಣೆ, ಒಂದು ರೂಪಾಯಿ ಇಟ್ಟು ಪಾದಕ್ಕೆ ಶರಣು ತಾತ ಅಂದು ಟ್ಟು ಪಾದಕ್ಕೆ ನಮಸ್ಕರಿಸುವರು. ನಂತರ ಗುಡಿಯಿಂದ ಊರ ಕಡೆ ರಡುತ್ತಿದ್ದರು. ರಾತ್ರಿಯ ಕತ್ತಲಲ್ಲಿ, ಅಮವಾಸೆ ಮುಗಿದು ಒಂಬತ್ತು ದಿನಕ್ಕೆ ಬನ್ನಿ ಡಿಯುವ ಹಬ್ಬ ಬರುತ್ತದಲ್ಲ, ಚೂರು ಚಂದ್ರ ಮೇಲೆ ಬಂದಿರುತ್ತಾನೆ. ದಿಂಗಳೂ ಇರುತ್ತದೆ. ಅದರ ಬೆಳಕಿನಲ್ಲಿ ಮನೆಗಳ ಕಂದೀಲು ಬೆಳಕು ಊರ ರಿಗೂ ಚಾಚಿರುತ್ತದಲ್ಲ ಅದರ ಬೆಳಕಿನಲ್ಲೇ ಊರು ಕೇರಿ ಮಂದಿ ಮನೆಮನೆಗೆ ೇಗಿ ಬನ್ನಿ ಕೊಟ್ಟು ಪಡೆದು ಬರುತ್ತಾರೆ. ನಾನು ಗುಡಿಯಿಂದ ಮನೆಗೆ ಹೋಗಿ ನೆಮಂದಿಗೆ ಬನ್ನಿ ಕೊಟ್ಟು ಪಾದಕ್ಕೆ ನಮಸ್ಕಾರ ಮಾಡಿದಾಗ ತಲೆ ಮೇಲೆ ಕೈಯಾಡಿಸಿ ದಿ ಶ್ಯಾಣ್ಯಾಗಪ್ಪ' ಅಂತ ಅಪ್ಪ ಅಮ್ಮ ಅನ್ನುತ್ತಿದ್ದರು. ಬನ್ನಿ ಮುಡಿವ ದಿನ ಅಪ್ಪ ಮ್ಮ ಹೊರ ಅಂಗಳದಲ್ಲಿ ಕುಂತಿರುತ್ತಿದ್ದರು. ಬಂದವರೆಲ್ಲ ಮನೆ ಒಳಗೆ ಹೋಗಿ ರುವುದಕ್ಕೆ ಕಷ್ಟಬೇಡೆಂದು ಅದರಲ್ಲೂ ಕೇರಿಮಂದಿ ಬರುತ್ತಿದ್ದರಲ್ಲ ಅವರಿಗಾಗಿಯೂ ರಗೇ ಕೂಡುತ್ತಿದ್ದರು. ನಮ್ಮೂರಲ್ಲಿ ಜಂಗಮರ ಮನೆತನವಿಲ್ಲ. ಪಕ್ಕದೂರಿನ ಲದಿನ್ನಿಯಿಂದ ಅಮವಾಸೆ, ಹುಣ್ಣಿಮೆ, ಹಬ್ಬ, ಕಾರಣಿಕತೆಗಳಿದ್ದರೆ ಬಂದು ಭಕ್ತರ ನೆಯಲ್ಲಿ ಉಂಡು, ದಕ್ಷಿಣೆ ಪಡೆದು ಹೋಗುತ್ತಿದ್ದರು. ಅಪ್ಪನ ಜತೆಗೆ ಜಂಗಮರು ರುತ್ತಿದ್ದರು. ಬನ್ನಿ ಮುಡಿಯುವ ದಿನವೂ ರಾತ್ರಿ ಜಂಗಮರೊಬ್ಬರು ಪಕ್ಕದಲ್ಲಿರುತ್ತಿದ್ದರು. ಜಂಗಮ ದೊಡ್ಡವರ ಮನೆಗಳಿಗೆ ಹೋಗಿಯೂ ಬರುತ್ತಿದ್ದರು. ಕೇರಿಯ ಂಗಸರೂ, ಗಂಡಸರೂ ಬಂದು ಅಪ್ಪ ಅಮ್ಮನಿಗೆ ಬನ್ನಿ ಕೊಡುತ್ತಿದ್ದರು, ಪಡೆಯುತ್ತಿದ್ದರು.

ಬನ್ನಿ ಮುಡಿಯುವ, ಬನ್ನಿ ಕೊಟ್ಟು ಪಡೆಯುವ ಈ ಹಬ್ಬದಲ್ಲಿ ಊರು ಕೇರಿಯ ಲ್ಲರೂ ಒಬ್ಬರಿಗೊಬ್ಬರು ಮುಖತಃ ಭೇಟಿಮಾಡುವುದು ಸಂಪ್ರದಾಯ. ದ್ವೇಷ, ಳ, ಮಾತು ನಿಲ್ಲಿಸಿರುವವರು ಹೀಗೆ, ಯಾವುಯಾವುದಕ್ಕೋ ಮುಖ ಕೊಟ್ಟು ತಾಡದಂತೆ ಸಂಬಂಧಗಳು ಕೆಟ್ಟಿರುತ್ತವಲ್ಲ ಆ ಸಂಬಂಧಗಳಿಗೆ ಹೊಸ ಜೀವ ಸುವುದು ಈ ಬನ್ನಿಮುಡಿಯುವ ಹಬ್ಬದಂದು. ನಿಸ್ಸಂಕೋಚದಿಂದ ಎಲ್ಲರೂ ಲ್ಲರಿಗೆ ಬನ್ನಿಕೊಟ್ಟು ಸಂಬಂಧಗಳ ಬಿರುಕುಗಳನ್ನು ಇಲ್ಲದಂತೆ ಮಾಡಿಕೊಳ್ಳುವ ವಕಾಶ ಪಡೆಯುತ್ತಾರೆ. ಇಷ್ಟಾಗಿಯೂ ಮನುಷ್ಯ ತನ್ನ ಸಣ್ಣತನವನ್ನು ಬಿಡುವುದಿಲ್ಲ. ಥವರಿಗೆ ಎಷ್ಟು ಬನ್ನಿಹಬ್ಬ ಬಂದರೂ ಅಷ್ಟೇ ನಾನಂತೂ ಎಲ್ಲರ ಮನೆ ಗುಡಿಸಲಿಗೆ ೋಗಿ ಬನ್ನಿ ಕೊಡುತ್ತಿದ್ದೆ. ಸಾಂತಮ್ಮನ ಸಣ್ಣಮಗ ಅನ್ನುವವರು, ಸಣ್ಣಗೌಡ ನ್ನುವವರು ಅಂದು ಪ್ರೀತಿ ತೋರಿಸುತ್ತಿದ್ದರು.

ಕೇರಿ ಹುಡುಗರು ಬನ್ನಿ ತಗಂಡು ಬಂಗಾರದಂಗಿರಪ್ಪ ಅಂದು ಕೊಡುತ್ತಲೇ ಅವರು ನಗು ಶುರುಮಾಡಿರುತ್ತಿದ್ದರು. ಕೊಟ್ಟು ಪಡೆದುದ್ದೇ ತಡ ಬಿದ್ದು ಬಿದ್ದು ನಗುತ್ತಿದ್ದರು. ನಮಗೆ ಗಾಬರಿ. ಯಾಕಂದು ಗದರಿಸಿ ಕೇಳಿದರೆ, ''ನಾವು ಗೌಡ ಅವುನು ಅವುನು ಅವುನು ನಿಮ್ಗ ಕೊಟ್ಟದ್ದು ಬನ್ನಿ ತೊಪ್ಲ ಅಲ್ಲ. ಸರ್ಕಾರಿ ಜಾಲಿ ತೊಪ್ಲ'' ಎಂದು ಪಕ್ಕದವನೊಬ್ಬ ಹೇಳಿದಾಗ ನಮಗೆ ಚೂರು ಅವಮಾನ ಆದಂತೆ! ಬನ್ನಿಮರಗಳು ಕಮ್ಮಿ. ಸರ್ಕಾರಿ ಜಾಲಿ ಕೈಚಾಚಿದಲ್ಲಿ ನಿಲುಕುತ್ತವೆ. ಕತ್ತಲಲ್ಲಿ ಅದು ಬನ್ನಿ, ಅದು ಪರಂಗಿ ಜಾತಿದ್ದು ಎಂದು ಕಂಡುಹಿಡಿಯಲು ಸಾಧ್ಯವಿಲ್ಲ. ಪರಂಗಿ ಜಾತಿ ಅಥವಾ ಸರ್ಕಾರಿ ಜಾತಿ ಗಿಡಗಳ ಎಲೆಗಳು ಬನ್ನಿಮರದ್ದು ಒಂದೇ ರೀತಿ ಕಾಣುತ್ತದೆ. ಆದ್ರೆ ಬನ್ನಿಮರದ ಎಲೆ ವಾಸನೆ ಹಿತ. ಪರಂಗಿದು ಅಹಿತ. ನಾವು ರಾತ್ರಿ ಎಲ್ಲರಿಗೆ ಕೊಟ್ಟು ಮನೆಗೆ ಬಂದಾಗ, ಅಪ್ಪ, ಅಮ್ಮ ಅಣ್ಣಂದಿರಿಗೂ ಬನ್ನಿಯಲ್ಲಿ ಪರಂಗಿ ಎಲೆ ಸೇರಿದ್ದನ್ನು ಕಂಡು ಕಾಲ ಕೆಟ್ಟುಹೋಯ್ತು ಎನ್ನುತ್ತ ಕೆಟ್ಟ ವಾಸನೆಯ ಪರಂಗಿ ತೊಪ್ಪಲ ಮುಟ್ಟಿದ್ದಕ್ಕೆ ಕೈ ತೊಳೆದುಕೊಂಡು ಸಮಾಧಾನ ಮಾಡಿಕೊಳ್ಳುತ್ತಿದ್ದರು. ಕಲಬೆರಿಕೆ ಮಾಡಿದ್ದಕ್ಕೆ ಯಾರೂ ಯಾರನ್ನೂ ಬಯ್ಯುತ್ತಿರಲಿಲ್ಲ. ಗೊಣಗುತ್ತಿದ್ದರು. ಇದು ಬನ್ನಿಯ ಅಭಾವದಿಂದಲೂ ನಡೆಯುತ್ತಿತ್ತು. ಇನ್ನೊಂದು ಊರ ಯುವಕರಿಗೆ, ಕೇರಿ ಯುವಕರು ಅಂದರೆ ಸಮವಯಸ್ಕರು, ಮಡಿ, ಮೈಲಿಗೆ ಇದ್ದರೂ ಗೆಳೆತನ ಬೆಳೆದಿರುವವರ ನಡುವೆ ನಡೆಯುವ ನಗೆಚಟಾಕಿಯ ಆಟದ ಭಾಗವಾಗಿ ಈ ಕಲಬೆರಿಕೆ ಅಲ್ಪ ಪ್ರಮಾಣದಲ್ಲಿ, ಅಲ್ಪ ಸಂಖ್ಯೆಯವರಲ್ಲಿ ನಡೆದರೂ, ಅದು ಒಬ್ಬರಿಂದ ಒಬ್ಬರಿಗೆ ಕೊಟ್ಟು ಪಡೆಯುವ ಕೆಲಸದಲ್ಲಿ ಪ್ರಸಾರವಾಗಿಬಿಡುತ್ತಿತ್ತು. ಬೆಳಗಿನಲ್ಲಿ ಈ ಕೆಲಸ ಮಾಡಿದವರನ್ನು ಪಂಪಣ್ಣ ಮಾಸ್ತಾರ ಅವಿವೇಕಿಗಳು ಅಂತ ಬಯ್ಯುತ್ತಿದ್ದರೆ, ಆ ಕೊಟ್ಟು ಪಡೆದ ಯುವಕರು ನಗಾಡುತ್ತ ಓಡುತ್ತಿದ್ದರು. ಹೊತ್ತು ಮುಳುಗಿದಾಗಿನಿಂದ ಬನ್ನಿ ಮುಡಿದು, ಎಲ್ಲರಿಗೆ ಕೊಟ್ಟು ಮನೆ ಸೇರಿ ಉಂಡು ಮಲಗಿದರೂ ಕನಸಿನಲ್ಲಿ ಬನ್ನಿ ಕೊಡುವುದೇ ನಡೆಯುತ್ತಿತ್ತು. ನಾನು, ನನ್ನ ಓರಗೆಯವರೆಲ್ಲ ಚಿಕ್ಕವರು, ಊರ ಯುವಕರು, ಕೇರಿ ಯುವತಿಯರಿಗೆ ಬನ್ನಿ ಕೊಡುವ ಪಡೆಯುವ ಈ ವಿನಿಮಯದಲ್ಲಿಯ ಸ್ಪರ್ಶ, ರುಚಿ, ಪುಳಕ, ಸಂಬಂಧಗಳ ಅರಿವು ಮರುಕಳಿಸಿ ವಿಚಿತ್ರ ಖುಷಿ, ವಿಚಿತ್ರ ದ್ವೇಷ, ವಿಚಿತ್ರವಾದ ಸಂಬಂಧಗಳ ಕುದುರುವಿಕೆಗಳು ನಮ್ಮ ಗಮನಕ್ಕೆ ಮಸುಮಸುಕಾಗಿ ಬಂದು ನಾವು ಚೂರು ಹುಚ್ಚರಾಗುತ್ತಿದ್ದೆವು. ಊರ ಯುವಕ ಯುವತಿಯರ ನಡುವೆ ಪ್ರೇಮ ಸಂಬಂಧಗಳು ಚಿಗುರುತ್ತಿರಲಿಲ್ಲ, ಯಾಕೆಂದರೆ ನಮ್ಮೂರಲ್ಲಿ ಲಿಂಗವಂತ ಮನೆಗಳಿದ್ದು ಅವು ಅಣ್ಣ, ತಮ್ಮ, ಅಕ್ಕ, ತಂಗಿ ಒಟ್ಟಿನಲ್ಲಿ ಸೋದರ, ಸೋದರಿ ಸಂಬಂಧಗಳೇ ಆಗಿರುತ್ತಿದ್ದವು. ಏನು ನಡೆದರೂ ಕೇರಿ ಯುವತಿಯರು ಊರ ಯುವಕರ ನಡುವೆ ನಡೆಯುತ್ತಿದ್ದವು. ಈ ಶೋಷಣೆ, ದಬ್ಬಾಳಿಕೆ, ಜಮೀನ್ದಾರಿತನವೇ ನನ್ನ ಕಥೆಗಳಿಗೆ ವಸ್ತುವಾಗಿವೆ ಎಂಬುದು ಓದಿದವರಿಗೆ ಗೊತ್ತಾಗಬಹುದು. ಇರಲಿ, ಇದು ಬೇರೆ ವಿಷಯ.

ಬನ್ನಿಹಬ್ಬ ಮುಗಿದ ಮರುದಿನವೇ ನಾನು ಗೆಳೆಯರಿಗೆ ಅಂಚೆ ಮೂಲಕ ಬನ್ನಿ ಕಳಿಸುತ್ತಿದ್ದೆ. ಒಂದು ಪತ್ರದ ಜತೆಗೆ, ಮೂರು ನಾಲ್ಕು ದಿನದಲ್ಲಿ ಗೆಳೆಯರಿಂದಲೂ ಬನ್ನಿ ಇರುವ ಪತ್ರಗಳು ಬರುತ್ತಿದ್ದವು. ಒಳಗಿನ ಪತ್ರದಲ್ಲಿ ಭಾವನೆಗಳ ವಿಚಾರ ವಿನಿಮಯ ಇರುತ್ತಿತ್ತು. ಇದೂ ಖುಷಿಯ ಸಂಗತಿಯೇ ಆಗಿತ್ತು. ನನ್ನ ಮಕ್ಕಳಿಗೆ ಬನ್ನಿ ಮುಡಿಯುವುದು ಅಂದರೇನು ? ಗೊತ್ತಿಲ್ಲ.

ಈಗ ? ನನ್ನ ಪಾಲಿಗೆ ಬನ್ನಿ ಕೊಡುವ ಪಡೆಯುವ ಸಂಬಂಧವೇ ಇಲ್ಲವಾಗಿದೆ. ಬದಲಾಗಿ, ಬನ್ನಿಹಬ್ಬದ ದಿನ ಎಸ್.ಎಂ.ಎಸ್. ಬರುತ್ತವೆ. ಊರಲ್ಲಿನ ಅಣ್ಣಂದಿರ ಮಕ್ಕಳೇ ಸಂದೇಶ ಕಳಿಸುತ್ತಾರೆ. ಹಳ್ಳಿಯಲ್ಲಿರುವುದರಿಂದ ಈ ಹಬ್ಬದ ಕೂಸವಿದೆ ಇವರಿಗೆ. ಹಳ್ಳಿಯಿಂದ ನಗರ ಸೇರಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಸಂದೇಶ ಕಳಿಸುತ್ತಿದ್ದಾರೆ, ಯಾವುದೇ ಹಬ್ಬವಿರಲಿ ಅದಕ್ಕೆ ಹೊಂದುವ ರೆಡಿಮೇಡ ಸಂದೇಶಗಳು ಸಿಗುವುದರಿಂದ. ಅವೇ ಎಸ್.ಎಂ.ಎಸ್ ಮೂಲಕ ಬರುತ್ತವೆ. ಓದಿ ಬೇಸರ ಬರುತ್ತದೆ. ಭಾವನೆಗಳಿಲ್ಲದ ಏಕರೂಪಿ ಹಬ್ಬದ ಸಂದೇಶಗಳನ್ನು ಎಷ್ಟು ಓದುವುದು? ಈ ಬಗೆಯ ಕೊರಗನ್ನು ನೀಗಿಕೊಂಡು, ಕಾಲದ ಜತೆ ಬದುಕುವುದನ್ನು ಕಲಿಯುತ್ತಲೇ ಇರುತ್ತೇವೆ. ಆದರೂ ಒಲವು ಬಾಲ್ಯದ ಕಡೆಗೆ. ಬಾಲ್ಯವನ್ನು ಅಕ್ಷರಗಳಲ್ಲಿ ಅಭಿವ್ಯಕ್ತ ಮಾಡಿಕೊಂಡು ಲೇಖಕನಾಗುವುದಂತೂ ನಡೆಯುತ್ತಲೇ ಇದೆಯಲ್ಲ! ಸಾಕು

ಡಾ|| ಅಮರೇಶ ನುಗಡೋಣಿ
ಸಹ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ - ೫೮೩ ೨೭೬

ಕೇಳೀನೆನ್ನೋ ಮಾತೆಲ್ಲ ಹೊಳಿಯೊಳಗಿನ ಉರಟುರುಟು ಕಲ್ಲಿನಾಂಗೆ ಗಂಟಲೊಳಗೆ ಉಳ್ಳಾಡುತ್ತ, ಹಿಡಿದೇನೆಂದರೆ ಪುಳಕ್ಕನೇ ಜಾರಿಕೊಳ್ಳುತ್ತಿರೋ ಹೊತ್ತಲ್ಲಿ ಸಾಮಿ, ಪಳಿನಿಯ ಕಡೆ ನೋಡಿದ. ಹೊತ್ತಲ್ಲದ ಹೊತ್ತಲ್ಲಿ ದಿಂಡಸಿಜಬ್ಬು ತಂದು ಚೊಕ್ಕಮಾಡ್ತಾ ಕೂತಿರೋದು ನೋವುತಿನ್ನೋ ತಾಲೀಮಿನ ಹಂಗೆ ಕಂಡು ಉಗುಳುನುಂಗಿದ. ಗಂಟಲಿಗೆ ಶ್ಯಾಡಿಮೀನಿನ ಮುಳ್ಳು ತೆರೆದಂತಾಗಿ, ಗುಡಿ ಚೊಕ್ಕ ಮಾಡಿ ದೀಪಹಚ್ಚಲು ತಾಸೊತ್ತು ತಗಂಡ. ಜೋಳಿಗೇಲಿ ಊರಾಡಿಕೊಂಡು ತಂದ ಅನ್ನವ ಬಿಸಿನೀರೊಳಗೆ ಉಕ್ಕರಿಸಿ ಚೆಲ್ಲಿ ಪಳಿನಿ 'ಸಾಮಿss' ಅಂತ ಉಣ್ಣಲು ಕರೆದಳು. ಮರದ ಬುಡದ ತರಕು ಗುಡಿಸಿ ಬೆಂಕಿಹಚ್ಚುವಂತೆ ಮಾತು ಗುಡಿಸಿಟ್ಟು ಇಬ್ಬರೂ ಅಪಾರ ಶ್ರದ್ಧೆಯಿಂದೆಂಬಂತೆ ಉಣ್ಣತೊಡಗಿದರು. ಸಾಮಿ ಹಾಗೆ ಮಠದ ಸುತ್ತ ಕಣ್ಣಾಡಿಸಿದ. ನಾಳೆಯ ಹೊಟ್ಟೆಯೊಳಗೆ ಏನಿದೆಯೋ, 'ಸಾಮಿ ಮಠ ಹ್ಯಾಂಗಿಟ್ಟ ಅಂತ ಒಂದು ಕಿಮ್ಮತ್ತಿರಬೇಕಲ್ಲವಾ ?' ಅನ್ನಿಸಿದಾಗ ಕುಡಿವ ನೀರು ನೆತ್ತಿಗೆ ಹತ್ತಿದಂತಾಗಿತ್ತು. ಮಠದ ದಣಪೆಯ ಅಂಚಿಗೆ ಅವಳೇ ಎರಡು ತಗಡು ಅಡ್ಡನಿಲ್ಲಿಸಿ, ಎರಡು ಮಡ್ಲು ಹೊಚ್ಚಿ ಹಾಕಿಕೊಂಡ 'ಪಳಿನಿಯ ಗುಡ್ಲಿ'ನಲ್ಲಿ ಏನೇನೋ ಜಾಡಿಸುತ್ತ, ಮಡಚುತ್ತ, ಕೊಡವುತ್ತ ಇದ್ದಳು. ಒಬ್ಬರಿಗೊಬ್ಬರು ಏನೂ ಹೇಳದೆಯೂ ಒಂದೇ ನಮೂನಿ ಯೋಚಿಸುತ್ತಿರುವುದಕ್ಕೆ ಆಳದಲ್ಲೇನೋ ಅದುರಿದಂತಾಯಿತು. ಹೊದೆದಿದ್ದ ಮಬ್ಬುಬಿಳಿ ಮುಂಡದಿಂದ ಕಣ್ಣೊರೆಸಿಕೊಂಡ. ಸಾಮಿತನ ಕ್ಕೊಂದು ಕಳೆ ತಂದಿಟ್ಟ ಬಿಳಿಗಡ್ಡ-ಮೀಸಿ ಯಾಕೋ ಒಜ್ಜೆಯೆನಿಸುತ್ತಿತ್ತು.

ತನ್ನದೆಂಬುದೇನೂ ಇಲ್ಲದ ಮೇಲೆ ಎದ್ದು ಹೋಗಲಿಕ್ಕೇನು ಹರಕತ್ತು? ಆದರೂ.. ಕಳೆದ ಮೂವತ್ತು ನಲವತ್ತು ವರ್ಷಗಳಿಂದ ಚೆಲ್ತಾ ಸುಂಯ್ ಅಂತ ರಾಗ ಹೊರಡಿಸೋ ಹಾದಿ ನಡಿಗೆಗೇ ಒಂದು ಖುಷಿಯಿತ್ತು. ಅಲ್ಲ, ಇಂಥ ನೆಗಸ ಬರೊ ಹೊಳಿಯನ್ನ ಕಲ್ಲು ಮಣ್ಣಿನ ಕಟ್ಟು ಕಟ್ಟಿ ನಿಶ್ಚಿಂತ ಬದುಕು ಮಾಡುತ್ತಾರಲ್ಲ? ಹೊಳಿಯನ್ನು ಕಟ್ಟು ತಡೆಯಿತೋ? ಕಟ್ಟು ಇದೆಯೆಂಬ ಅರಿವಿನಲ್ಲಿ ಹೊಳಿ ಹರಿಯಿತೋ? ಹೊಸದಾಗಿ ಹೊಳಿ ಕಂಡವನಂತೆ ಸಾಮಿ ಗೆಲುವಾದ. ಉಸುಕಿನ ಹೆದ್ದಾರಿ ಬಯಲಿನಿಂದ ಗದ್ದೆಗೆ ಗುದುಕುವಲ್ಲಿ ಯಾರು ಯಾವಾಗ ಸೂರುಕಟ್ಟಿ ದೀಪ ಹಚ್ಚಿದ್ದರೋ ಶಿವನ ಮಠ. ಹೆಸರಿಗೆ ಮಠ. ಸಣ್ಣ ಖೋಲಿ ಮುಂದ ಒಂದಿಷ್ಟು ಜಾಗ. ಕಟ್ಟಿದ್ದ ಕಳ್ಳಿಮುಳ್ಳಿನ ಅಡೆಯೂ ಕಿತ್ತುಕಿತ್ತು ಬಿದ್ದಿತ್ತು. ಶಾಸ್ತ್ರ ಕೇಳಿದರ ಉಪರಾಟೆ ಅನ್ನಿಸಬೇಕು, ಹಂಗೆ ಬಲಬದಿಗೆ ಗಂಗೆ ದೇವಸ್ಥಾನ. ಅದೂ ಆಗ ಹಂಚಿನ ಈಟೆ ಗುಡಿ. ರಸ್ತೆಯಾಚೆ ಸಮಾ ಎದುರು ಮಸೀದಿ. ಮಸೀದಿ ಬಾಗಿಲಿಗೆ ಹತ್ತಿಕೊಂಡ ಗಾಳಿಮರದ ಬುಡದಲ್ಲಿಯೇ ನಾನು ಜ್ವರ ಏರಿ ಬಿದ್ದಿದ್ದಂತೆ ಯಾರೋ ನೀರು, ಗಂಜಿ ಹಾಕಿದ್ದರು. ಸುದ್ದಿ ತಿಳಿದ ಹೊನ್ನಪ್ಪ ಗಾಂವಕರರು ಮಾತಾಡ್ಸಾಕೆ ಬಂದಿದ್ರು. 'ಏನ ಸಾಮಿ ಯಾವೂರು?' ಅಂದ್ರು. ಊರು ಕೇಳಿದ್ದಕೋ ಕೇಳಿದವನ ದನಿಯಲ್ಲಿ ಒಸರುತ್ತಿದ್ದ ಅಕ್ಕರತೆಗೊ, ಜ್ವರದ ತಾಪವೋ ಅತ್ತು ಅತ್ತು ಹಾಕಿದ್ದಂತೆ ನಾನು. ಜಿಡದಿನ ಅಂತ ಮಾಡಿಕೊಂಡ ಮಂಗಳವಾರದ ಬೆಳಗು ಸಾಂಬಾರವಲಕ್ಕಿ, ಚಾಯ್‌ನೀರು ಮಾಡಿಸಿಕೊಂಡು ಕೂತು ತಿನ್ನಲು ಬರುವ ಗಣಪುಗೌಡ ಆ ಸುದ್ದಿ ಹೇಳ್ತಾ 'ಮಠದ

ವಿನಯಾ

ಎಲ್ಲಿ ಹುಟ್ಟಿ ಎಲ್ಲಿ ಬಾಬ್ಯಾದೋ...

ತುಳಿದ ನೆಲ. ಕಾಲಿಗೆ ಕಸುವಿದ್ದು ಪರದೇಸಿತನವ ಅರಗಿಸಿಕೊಂಡ ದಿನಗಳಿದ್ದವು. ಸಣ್ಣ ದೀಪದ ಬೆಳಕಲ್ಲಿ ನಯ ನಯ ಮಿಂಚುತ್ತ ಕೂತ ಶಿವಲಿಂಗದೆದುರು ಗಕ್ಕನೆ ಕೂತಿದ್ದ ಸಾಮಿ. ಶಿವನಾಟ ಅಂತೀ, ಮಾಡಾಕೇನೂ ಕೆಲಸವಿಲ್ಲವೆ ಇವನಿಗೆ? ಅಲ್ಲ, ನನ್ನ ಯಾಕಿಲ್ಲಿ ಹೊಗಿಸಿಕೊಂಡಿ? ಏನೇನೋ ಉತಾವಳಿ ಮನಸ್ಸಿನೊಳಗೇಳುತ್ತಿತ್ತು. ಶಿವರಾತ್ರಿ ಅಮವಾಸ್ಯೆಪಡಿ ಆಸೆಗೆ, ಮಹಾಬಳೇಶ್ವರನ ಗುಡಿಯಿಂದ ಬೀಚಿನವರೆಗೂ ರಸ್ತೆ ಅಕ್ಕಪಕ್ಕದೊಳಗ ಜಾಗ ಒಡೀಬೇಕು ಅಂತ ಹೊರಟಿದ್ದು. ಹೊಳಿದಾಟಿ ಈ ಊರ ಮೇಲಾಸಿ ಹೋಗಲು ಉಮೇದು. ಸೊಕ್ಕಿ ಹರಿಯೋ ಹೊಳಿ ಎತ್ತರಕ್ಕೇರಿ ಕೂತ ಗುಡಿಯಮ್ಮ. ಸುತ್ತ ಕತ್ತಲ ಕವಿಸೋ ಕಾನು. ನೆಟ್ಟಗೆ ಗೋಕರ್ಣದ ರಸ್ತೆ. ಆ ಕಡೆ ಮಾಟೀಳ್ಳೆಗಳು. ಮಸೀದಿ, ಗರ್ನಾಲು, ಕತ್ತ, ಯಾಪಾರದ ಬದುಕು. ಈ ಕಡೆ ಬಲೆ, ಹಾಣೆ ದೋಣಿ, ಗುಮಟೆಗಳ ಬದುಕು. ಮಾರಿಗೊಂದು ಗಾಳಿಮರ ರಸ್ತೆಗೆ ನೆಳ್ಳು

ರಿಣ ಇತ್ತಕಾಣಿ ನಿಮ್ಗೆ', ಅಂತನ್ನುತ್ತಿದ್ದ. ಗಣಪುಗೌಡನ ಅಕ್ಕರತೆಗೆ ಹಲ್ಲಿಲ್ಲದ ಬಾಯಲು ಅವಲಕ್ಕಿ ನುಲಿದು ನುಲಿದು ರುಚಿಯಾಗಿರ್ತಿತ್ತು. ಜ್ವರ ಇಳಿದ ಮೇಲೆ ಹೊನ್ನಪ್ಪ ಗಾಂವಕರರು ಮತ್ತೆ ಕೇಳಿದ್ದರು "ನೋಡ ಸಾಮಿ, ಅಲ್ಲಿ ಆ ಮಠದಾಗಿರ್ತೀಯ ನಮ್ಮೂರವನಾಗಿ. ಏ ಯಾರೂ ಸಾಮಿನ ಯಾರು, ಎಲ್ಲಿಯಂವ ಏನೂ ಪಿಸಿಬೇಡಿ ಕಡೀಮಾತಿದು" ಅಂತ ನಡೆದರು. ಮುಟ್ಟದರೆ ಹುಡಿಹುಡಿ ಹಾರುವ ಈ ಹೊಯಿಗೆ ಮಣ್ಣಿನಲ್ಲಿ ಜೀವವ ಚೆಸಿಯೋ ಅಕ್ಕರತೆಯ ತೇವ ಉಕ್ಕುತ್ತಿತ್ತೇ? ಆಗಿನಿಂದ ಮ ಅಂದ್ರೆ ಸಾಮಿ ಅಂತಾಯ್ತು. 'ಶಿವಾ' ಅನ್ನೋ ಒಂದೇ ಒಂದು ಪದ ಬಿಟ್ಟು ಮತ್ತೇನೂ ತಿಳಿಯದ್ದು, ತಿಳಿದುಕೋ ಅಂತ ಊರು ದಬಾಯಿಸಲೂ ಇಲ್ಲ. ಜೋಳಿಗೆ ಹಾಕಿಕೊಂಡ ಊರ ಮೇಲೆ ಹೋದಾಗಲೂ ಅಷ್ಟೆ. ಗಿಂಡಿಯೊಳಗೆ ಬಾವಿನೀರಿಗೆ ತುಳಸಿ ಒಡ್ಡಿದ ಕೈ ಹೆಚ್ಚೋ? ಕೊಡುವ ಕೈ ಹೆಚ್ಚೋ? 'ಶಿವಾ' ಅಂತ ಮನಸ್ಸು ತುಂ

ಹಾಕಿದ್ರೆ. ಬದುಕಲಿಕ್ಕೆ ದುಸ್ತರ ಅನ್ನಿಸಲಿಲ್ಲ. ಜೋಳಿಗೆಯ ಅಕ್ಕಿ-ಕಾಸಿನ ಮಾತಲ್ಲ. 'ಬನ್ನಿ ಸಾಮಿ' ಅಂತ ಪ್ರತಿ ಅಂಗಳಕ್ಕೂ ಒಂದು ನುಡಿಯಿತ್ತು. ಕಳೆದುಕೊಂಡಿದ್ದು ಸಿಕ್ಕ ಹಾಗೆ ಜೀವ ತುಂಬಿತ್ತು. ಅನ್ನದ ತಪ್ಪಲಿಗೆ ಹಾಕೋ ಅಕ್ಕಿಯಲ್ಲಿ ಒಂದು ಮುಟಗಿ ತಗ್ದು ಜೋಳಗಿ ಬುಟ್ಟಿ ಮಾಡಿಡ್ತಿದ್ದ ಜನ, ತಾಟಿಗೆ ಹಾಕಿಕೊಂಡ ಅನ್ನದ ಮುದ್ದೆಮಾಡಿ ಪಕ್ಕಿನ ಗೆರಟೆಗೆ ಹಾಕ್ತಿದ್ದ ಜನ .. ಕೂತಲ್ಲೇ ಗರ್ಕಾಗಿದ್ದ ಸಾಮಿಗೆ ಎಚ್ಚರಾದದ್ದು ಪಳನಿಯಮ್ಮ ತನ್ನ ಹರಕು ಚಾಪೆ ಹಾಸಲು ಫಡ್‌ಫಡ್ ಅಂತ ಕೊಡವಿದಾಗ.

ಇಟ್ಟೊರ್ಷ ಸಾಮಿಯ ಮನಸ್ಸಿನೊಳಗೆ ಸಸಿಯ ಹಂಗೆ ಬೇರೂರಿದವಳು ಪಳಿನಿ. ಸಾಮಿ ಮಠಕ್ಕೆ ಲಗತ್ತಾದ ಎರಡುಮೂರು ವರ್ಷದಲ್ಲಿ ಈ ಬಯಲಿಗೆ 'ಸೈಕಲ್ ಸರ್ಕಸ್ ಕಂಪನಿ' ಬಂತು. ಕೇರಳದ ಕರಿಹೈದನೊಬ್ಬ ನೆಲಕ್ಕೆ ಕಾಲೂರದೆ ಎರಡು ಚಕ್ರದ ಸೈಕಲ್ ಮೇಲೆ ಕಸರತ್ತು ಮಾಡುವುದೆಂದರೆ ಅಹಾ, ನೋಡಿದವರು ಮರೀಲಿಕ್ಕಿಲ್ಲ. ಸೈಕಲ್ ರೌಂಡು ಹೊಡೀತಾ ಬೆಂಕಿಯ ವೃತ್ತ ಹಾಯುವುದು, ಎರಡು ಕಂಬಕ್ಕೆ ಟ್ಯೂಬಲೈಟ್ ಕಟ್ಟಿ ಸೈಕಲ್ ಮೇಲೆ ಬಂದು ಬರಿಎದೇಲಿ ಒಡೆಯುವುದು ಗಂಗಾವಳಿ ಸೀಮೆ ಜನ ಬೆಕ್ಕಸ ಬೆರಗಾಗಿದ್ದರು. ಮಕ್ಕಳಂತೂ ಹಗಲಿಸಲ್ಲಿ ಆ ಸವಾರನ ದರ್ಶನ ಮಾತ್ರದಿಂದ ಪುನೀತರಾದವರಂತೆ ಸುತ್ತಮುತ್ತ ಸುಳಿಯುತ್ತಿದ್ದರು. ಒಂದುದಿನ ಅವರ ಟೆಂಟು ಕಿತ್ತು ಮುಂದಿನ ಗಂಗಿಕೊಳ್ಳಕ್ಕೆ ಅಂತ ಹೊರಟಾಗ ಈ ಹೆಣ್ಣು ಇದೇ ಈ ಮಠದ ಬಾಗಿಲಿನ ಹಾಸುಕಲ್ಲಿನ ಮ್ಯಾಲೆ ಕುಂತು ಅಳುತಿತ್ತು. ಕೈಯಲ್ಲೊಂದು ಬಟ್ಟೆಗಂಟಿನ ಮುದ್ದೆ. ಬಾಳ ಬಾಳ ರಮಿಸಿ ಕೇಳಿದ ಮೇಲೆ ಹೇಳಿತ್ತು. ಇವಳು ಆ ಸೈಕಲ್ ಸವಾರನ ಹೆಂಡತಿ. ಮದ್ವೆಯಾಗಿ ಮೂರು ತಿಂಗಳು. ಅಕ್ಕನ ಜತಿ ಇರಾಕೆ ಅಂತ ಬಂದ ತಂಗಿಯೊಟ್ಟಿಗೆ ಗಂಡ ಇದ್ದದ್ದು ಕಂಡು ಮೊನ್ನೆ ರಂಪಾಟ ಮಾಡಿದ್ದಂತೆ. ಏನು ಏನ್ ತಪ್ಪು ? ನಿನಗಿಂತ ಇವ್ಳೇ ಚೆಂದಾಗವ್ಳೆ. ಲೋಕದಾಗ್ಯಾರೂ ಇಂಗಿಲ್ವಾ? ಅಂದಿದ್ದಂತೆ. ಅದ್ಕೆ ಅವರೊಟ್ಟಿಗೆ ಮುಂದಿನ ಬಿಡಾರಕ್ಕೆ ಹೋಗದೆ ಕಲ್ಲಿನ ಮೇಲೆ ಕೂತದ್ದು. 'ನಾ ಸಂದ ಇಲ್ಲ, ಮತ್ತೆ ಮದಿಯಾಕ್ ಮಾಡ್ಕಂಬೇಕು?' ಕರಿಕರಿ ಕಾಳಿಯಂಥ ಹೆಣ್ಣು ಕಿವಿಗೆ ಮೂಗಿಗೆ ತಗಡಿಸಂಥದ್ದೇನೋ ಹಾಕಿಕೊಂಡು ಅದರ ಕೊಳಪಲ್ಲಿ ಹಸಿದ ನಾಯಿ ಹಂಗೆ ಎರಗಿ ಎರಗಿ ಮಾತಾಡುವಾಗ ಸಾಮಿಯೂ ಕಂಡುಗಟ್ಟಿಹೋದ. ನಾಕುದಿನ ಇದ್ದು ಹಟ ಕಮ್ಮಿಯಾಗಿ ಹೋದಾಳು. ಅವರ ಬಿಡಾರವೂ ಮುಂದಿನ ಗಂಗಿಕೊಳ್ಳಕಲ್ವೇ, ಹೆಣ್ಣು ಹಟಮಾಡಿ ಏನು ಮಾಡೀತು? 'ಬಾ, ಮಗಾ, ಬಾ ಅವ್ನೆ' ಅಂತ ಸಾಮಿ ಮಠದೊಳಗೆ ಕರ್ಕಂಡ. ಗಾಂವಕಾರರಿಗೂ ವಿಷ್ಯ ತಿಳ್ಸಿ ಬಂದ.

ಹಾಗೆ ಬಂದ ಪಳಿನಿ ಸು.. ಅನ್ನದೆ ಉಳಿದುಬಿಟ್ಟಳು. ಕ್ಯಾಂಪು ಗಂಗಿಕೊಳ್ಳದಿಂದ ಮುಂದಕ್ಕೆ ಹೊರಟಿದೆ ಎಂದೂ, ಬರುವುದಾದರೆ ಈಗಲೆ ಬರಬೇಕೆಂದೂ ಸುದ್ದಿ ಬಂತು. ಪಳಿನಿ ಕೊರಳಲ್ಲಿದ್ದ ಅರಿಶಿಸದಾರ ಹರ್ದು ಬಿಲ್ವದ ಮರಕ್ಕೆ ಸಿಗಿಸಿಬಿಟ್ಟಳು. ಊರು ಸಾಮಿಯನ್ನೊಳಗೊಂಡಂತೆ ಪಳಿನಿಯನ್ನೂ ಒಳಗೊಂಡಿತು. ಅರೆಬರೆ ಮಾತ್ರ ಕನ್ನಡ ಮಾತಾಡುವ ಪಳಿನಿ ಬೇಡದ ಪ್ರಶ್ನೆಗೆ ಉತ್ತರಿಸದಿರೋ ಮಸಲತ್ತಿನಲ್ಲೇ ದಿನದಾಟಿದಳು. ದೇವ ತನ್ನ ಮುಪ್ಪಿಗಿರಲಿ ಅಂತ ಮಗಳನ್ನೋ ಮೊಮ್ಮಗಳನ್ನೋ ಕಳಿಸಿದ ಹಾಗಿತ್ತು ಸಾಮಿಗೆ. ಪಳಿನಿ ಎಂಬ ಸರ್ಕಸ್ಸಿನ ಹೆಂಗಸು ಪಳಿನಿಯಮ್ಮ ಆಗಿ, ನಮ್ಮೂರ ಪಳಿನಿಯಾಗಿ ಊರೊಳಗೆ ಕಲೆತುಹೋದಳು. ಶನಿವಾರದ ಬೆಳಗು ಪಳಿನಿ ಹಾಯಲಿಲ್ಲ ಅಂದರೆ ಯಾಕ್ರೇ, ನಮ್ಮ ಪಳಿನಿ ಇನ್ನೂ ಬರಲೇ ಇಲ್ಲಲೇ' ಅಂತ ಹೊರಗಿನ ತೆಣೆ ಮೇಲೆ ಕೂತ ಗಂಡಸರಿಗೆ ಅಡಿಗೆ ಮನಿಯಿಂದ ಬಂದು ಕೂಗು ಗ್ಯಾರಂಟಿ. ''ಅದ್ದೆ, ಹಾಳಬಿದ್ದ ಪಳಿನಿಗೆ ನೂರೊರ್ಸ. ನಿನ್ನ ಇಚ್ಚರಕಿ ಮಾಡ್ತೆ ಇದ್ವಲ್ಲೆ.'' ಬಾ ಬಾ ಅಂತ ಕಳೆತಲಿಯೊಂದು ಸ್ವಾಗತಿಸಬೇಕು. ಪಳಿನಿಗೆ 'ಬದುಕಬಹುದಪ್ಪ' ಅನ್ನಿಸಿಬಿಟ್ಟ ಗಳಿಗೆಗಳವು. ಊರ ಯಾವ ಮನಿ ಅಂಗಳವೂ 'ಬೇಡುಕ ಬಂದವಳು' ಅಂತ ತಾಚಾರ ಮಾಡಿಲ್ಲ. ಪಳಿನಿಯೂ ಮನಿಯವರನ್ನೆಲ್ಲ ಒಂದಪ ತನ್ನ ಇಟ್ಟುದ್ದ ಗಂಟಲದಲ್ಲಿ ಕಾಪಳಿಸಿ, ಮಲಗಿದ್ದ ಮಕ್ಕಳನ್ನೆಲ್ಲ ಎಬ್ಬಿಸಿ ನಗಿಸಿ ಅಳಿಸಿ ಬಂದವಳೇ. ಇವಳು ವಾರಕ್ಕೊಂದು ಊರಿಗ ಹೊರಡೋದು ನಿಕ್ಕಿ ಆದ ಮೇಲೆ ಆ ಆ ಊರೊಟ್ಟಿನ ಸಂಬಂಧಗಳು ವಿಲೇವಾರಿ ಯಾಗುತ್ತಿದ್ದವು. ಪಳಿನಿಗೆ ಸಾರ್ಥಕತೆ ನೀಡಿದ ಗಳಿಗೆಗಳವು. ಗೌಡಿ ಹೊನ್ನಪ್ಪಣ್ಣನ ಮಗಳು ಜಯಂತಿ ಓಚ್ಕಡದ ಗಂಡನ ಮನಿಯಿಂದ ಜಗಳಾಡಿ ಬಂದಿದ್ದಳು. ಬಂದ ವಾರೊಪ್ಪತ್ತಿನಲ್ಲಿ ಗಂಡನ ಇಚ್ಚರಕಿ ಆಗಿ ಹಳಹಳಿಸುತ್ತಿದ್ದಳು. ಅಪ್ಪ 'ನಾಯೇನ ಕಮ್ಮಿ' ಅನ್ನೂ ಹಂಗೆ ಕುಂತಿದ್ದ. ಗುರುವಾರ ಓಚ್ಕಡಕೆ ಹೋದ ಪಳಿನಿಯಮ್ಮ ಜಯಂತಿ ಗಂಡನಿಗೆ ಏನೇನಂದಳೋ, ಮಾರನೆ ದಿನವೇ ಅಂವ ಬಂದು ತನ್ನ ಹೆಂಡತಿನ ಕರ್ಕೊಂಡೋಗಿದ್ದ. ಬೀರದ್ಯಾವ್ರ ಮನಿ ಸರ್ಸಕ್ಕ ಅಡಿಗೋಸದ ರಾಮಣ್ಣನ ಅತ್ತಿಮಗಳಂತೆ. ಮುಪ್ಪಿನ ಕಾಲದ ಸಾಯೋಶೀಕಿನಲ್ಲಿ ಆವಳಿಗೆ ರಾಮಣ್ಣನ ಕಾಣಬೇಕು ಅನ್ನಿಸಿತ್ತಂತೆ. ನಾಜೂಕಿನ ಸುದ್ದಿ ಅದು. ಅತ್ತಿತ್ತ ಪಿಸಿಯದ ಹಂಗ ರಾಮಣ್ಣಗೆ ಮುಟ್ಟಿಸಿದ್ದು ಪಳಿನಿಯೇ. ರಾಮಣ್ಣ ಬಂದು ಹೋದ ಮೇಲೇ ಸರ್ಸಕ್ಕ ಕಣ್ಮುಚ್ಚಿದ್ದು. ತೀರಾ ಇತ್ತಿತ್ತಗೆ ಪೇರುಮನಿ ಹರೀಶಗೆ ಮದಿ ಫಿಕ್ಸ್ ಆಗಿ ಪಾಯ್ಸಲುಂಡಮ್ಯಾಲೆ 'ಅಂವಗೆ ಎದಿಮೇಲೆ ಕೂದ್ಲಿಲ್ಲ. ಇಂಥಂವ್ಗೆ ಹೆಣ್ಣು ಕುಡುರೇ ? ಅನ್ನೋ ಬೇನಾಮಿ ಪತ್ರ ತಲ್ಪಿ ಅವ್ರು ಮದಿ ಮುರ್ದಾರಿ ಮಾಡುವಾಗ. ಮತ್ತೆ ವಾಲಗ ಊದಿಸಿದ್ದು ಪಳಿನಿಯಮ್ಮನೆ ಅಲ್ಲವೇ ? ಪಳಿನಿಯಮ್ಮ ಅಂದ್ರೆ ಸುತ್ತಲ ಸೀಮಿಗೆ ಹೊಕ್ಕು ಹೊರಬರೋ ಹಿನ್ನೀರಿದ್ದ ಹಾಂಗೆ.

ಸಾಮಿಯಾಗಲಿ ಪಳಿನಿಯಾಗಲಿ ಊರಮೇಲೆ ಹೋಗದೆ ಗಟ್ಟಿ ಮಠ ಹಿಡಿದರು ಎಂದರೆ ಶಿವರಾತ್ರಿ ಬಂತಂತೇ ಲೆಕ್ಕ. ಉಪವಾಸದ ದಿನ ಗೋಕರ್ಣಕೆ ಹೋಗಿ ಪಾಳಿ ಹಚ್ಚಲಾಗದವರು ಶಿವನ ನೆತ್ತಿ ಹುಡುಕಿ ಬರೋದು ಇಲ್ಲೇ. ವರ್ಸಪೂರ್ತಿ ಈ ಎರಡೇ ಇದ್ದೀ ಮಕ ನೋಡಿ ನೋಡಿ ಬ್ಯಾಸತ್ತಿದ್ದ ಶಿವನೂ ಅವತ್ತು ಕಳಿಕಳಿಯಾಗಿರ್ತಿದ್ದ. ಗಂಗಿಹಬ್ಬದ ದಿನ ಗೋಕರ್ಣದಿಂದ ಭಟ್ಟರು ಹೊತ್ತು ಬಂದ ಶಿವ ಮದಿ ಮಾಡ್ಕಂಡು ರಾತ್ರೋರಾತ್ರಿ ಓಡುವಾಗ, ಪಕ್ಕದಲ್ಲೇ ಇದ್ದೂ ಕ್ಯಾರೇ ಅನ್ನುವವರಿಲ್ಲದ ತನ್ನ ಶಿವನ ಬಗ್ಗೆ ಪಳಿನಿಯಮ್ಮಗೆ ಬೇಸಾರಾಗುತ್ತಿತ್ತು. ಇದನ್ನ ಹ್ಯಾಂಗೆ ಹೇಳೋದೋ, ಯಾರಿಗೆ ಹೇಳೋದೋ ತಿಳೀದೆ ಮಳಿಗಾಲದ ಗಿಡದ ಹಾಂಗೆ ಹುಟ್ಟಿ ಸತ್ತು ಹೋಗ್ತಿದ್ದ ಮಾತದು. ಮಂತ್ರ ಶಾಸ್ತ್ರ ತಿಳೀದ ಸಾಮಿ ಶಿವರಾತ್ರಿಗೆ ವಾರ ಇರುವಾಗಲೇ ಗಲಿಬಿಲಿ ಗೊಳ್ತಿದ್ದ. ಒದ್ದಾಡತ್ತಿದ್ದ. ಒಂದರ ಬದ್ಲಿ ಎರಡೆರಡು ಚುಟ್ಟಾ ಸೇಯ್ತಿದ್ದ. ಆಗೆಲ್ಲ ''ಅಯ್ಯ್ಯಽಽ ತಗಿ ತಗಿ. ಬರೋರು ನಮ್ಮೂರವರಲ್ವಾ?'' ಅಂತ ಬಾಯಿವಾರೆ ಮಾಡಿ ಪಳಿನಿ ಸೂರು ತೆಗೆದಳೆಂದರೆ ಮಲಗಿದ್ದ ನಾಯಿ ದಡಬಡಿಸಿ ಎದ್ದು ಊ.. ಅನ್ತಿತ್ತು.

ಈಗೀಗ ಪಳಿನಿ ಬಾಳ ಅದ್ರ ಆಗ್ತಿರೋದನ್ನ ಸಾಮಿ ಗಮನಿಸಿದ್ದ. ಮುದುಕ ನನಗಿಂತ ಇವ್ಳೇ ಕೆಮ್ಮು ದಮ್ಮು ಅಂತಿದಾಳಲ್ಲ ಅನ್ನಿಸ್ತಿತ್ತು. ತನ್ನ ಅರಿಶಿನದಾರ ಹೊತ್ತ ಬಿಲ್ವದ ಮರವ ನೋಡ್ತಾ ಸುಮ್ಮಗೆ ಕೂಡುತ್ತಿದ್ದಳು. ಮಠದ ಎದುರಿನ ಮೈನುದ್ದೀನ ಸಾಬಿ ಜೊತೆ ಮಾತಾಡ್ತ ಸಾಮಿ ಪಳಿನಿಯ ದೇಹದ ಅಶಕ್ತಿ ಹೇಳಿದ್ದ. ಆವಾಗಿನಿಂದ ಆಗಾಗ ಕತ್ತಲು ಕವುಚಿದ ಮೇಲೆ ಒಂದೀಟು ಬಿರಯಾನಿ, ಖೈಮಾ ಅಂತ ಮಾಪ್ಳೇರ ಕೇರಿಯಿಂದ ಬರತೊಡಗಿತು. ಮುದಿ ದೇಹಗಳಿಗೆ ಎಂಥದೋ ತ್ರಾಣ ಸಿಕ್ಕಾಂಗಿತ್ತು. ಮಸೀದಿ ಮುಂದಿನ ಆವಾರದಲ್ಲಿ ಮಸಾಲೆ ಗಮಲು ಎದ್ದರೆ ಪಳಿನಿ ಅಲ್ಲೊಮ್ಮೆ ಸುಳಿದಾದರೂ ಬರುತ್ತಿದ್ದಳು. ಪಳಿನಿಯ ಪಾಲು ನೆನಪಾಗಲಿ ಅಂತ.

ಇದೇ ಸುಮಾರಿಗೆ ಗೋಕರ್ಣ ಸೀಮೆಯ ಅಂಬಿಗರ ಕುಲದೇವಿ ಗಂಗಾಮಾತೆಯ ಗುಡಿ ಮಜಬೂತಾಗಿ ಜೀರ್ಣೋದ್ಧಾರವಾಯ್ತು. 'ನಮ್ಮ ಸಿವಗೇ ಏನೂ ಇಲ್ವಲ್ಲೋ ಸಾಮಿ' ಅಂತ ಪಳಿನಿ ಒಮ್ಮೆ ಚಾಷ್ಟಿ ಮಾಡಿದ್ಲು. ಈಗೀಗ ಊರಲ್ಲೇ ಗದ್ದಿ ಭೂಮಿ ಸಾಗುವಳಿ ಮಾಡಿಸ್ತಾ ಉಳಿದಿದ್ದ ಹೊನ್ನಪ್ಪ ಗಾಂವಕಾರನ ಹಿರಿಮೊಮ್ಮಗ ರಾಜು ಮಠದ ಕಡೆ ಹಾಯತೊಡಗಿದ್ದ. ಅವನ ಮುಖ ಯಾಕೋ ದುಮುದುಮು ಉರೀತಿದ್ದುದ ಪಳಿನಿ ಕಂಡಿದ್ದಳು. 'ಯಾಕಾ ಮಗಾ ಇತ್ತಾಗ್ತೆ?' ಅಂತ ಅವಳೊಮ್ಮೆ ಮುಸ್ಸಂಜೆ ಕಪ್ಪಲ್ಲಿ ಬಂದವನನ್ನು ಕೇಳಿದರೆ 'ಯಾಕೆ, ಯಾಕ ಬರೂಕಾಗೇನೇ ? ಅಯ್ಯ..' ಅಂತ ಎಂಥದೋ ದನಿ ಎಳೆದಿದ್ದ. ಬಂದವ ನಮ್ಮನ್ನ ಮಾತಾಡ್ಸೋದು ಹೊಗ್ಲಿ, ಆ ಶಿವನಿಗಾದ್ರೂ ಒಮ್ಮೆ ಕೈ ಎತ್ತಿ ಮುಗೀದೆ ಏನೋ ಕಳಕೊಂಡವನ ಹಾಗೆ ಎಡಗಾಲನ್ನ ಥಟ್ ಅಂತ ಹಿಂದೆ ಚಿಮ್ಮಿ ಲುಂಗಿ ಎತ್ತಿ ಕಟ್ಟಿಕೊಂಡು ಸುತ್ತುತ್ತಿದ್ದ. ಆಗಾಗ ಹುಂಪುಮನಿ ಮೋಹನ, ಲಕ್ಷ್ಮಣ ನಾಯಕನ ಮನಿ ಸಂತೋಷ ಅಂತ ಒಬ್ಬರು ಇಬ್ಬರು ಗುಂಪಾಗಿ ಬರುತ್ತಿದ್ದರು. ಅವರ ಮಾತು ಆಸುಪಾಸಿನ ಕುರಿತೇ ಇರುತ್ತಿತ್ತು. 'ಅಂಬೇರಂಥ ಅಂಬೇರಿಗೇ ದೇವ್ರಮನಿ ಕಟ್ಲೂಕಾತೀದಂದ್ರೆ ನಮ್ಕೊಡಾಗೇನಾ?' 'ನೋಡ, ಆ ಬೋಳಿಮಕ್ಕ ಮಸೀದಿ ನೋಡ, ನಡಕ ರಸ್ತಿ ಇಲ್ದರೆ ಹೆದ್ದಾರೀನೂ ನುಂಗಿ ಹಾಕ್ದದ್ರೋ ಏನ? ಚಾರ್‌ಮಿನಾರ ಕಟ್ತರೇನ, ಬೋನಪೂರಾ ನಮ್ದೆ ಅಂತರಲಾ', ಹೀಗೆ ಎಂತೆಂಥದೋ ಮಾತುಗಳು. ಈ ಹುಡುಗರು ಬೇಕಂತೆ ತನ್ನನ್ನು ಅತ್ತತ್ತ ದೂಡುತ್ತಿದ್ದಾರೆಂದು ಸಾಮಿಗೆ ಅನ್ನಿಸಿದಾಗ ಗುಡಿಯ ಹಿಂದಿನಿಂದ ಬೀಸೋ ಹೊಳೆಗಾಳಿ ಚೂರಿಹಂಗೆ ಹೊಟ್ಟೆ ಹರೀತ್ತಿತ್ತು.

ಬಕ್ರೀದ್ ದಿನ ಮೈನುದ್ದೀನನ ಹೆಂಡತಿ ಸಣ್ಣಮಗನ ಹತ್ರ ಪ್ಲಾಸ್ಟಿಕ್ ಹಾಳೆಯಲ್ಲಿ ಒಂದಿಷ್ಟು ಬಿರಯಾನಿ ಕಳಿಸಿದ್ದಳು. ಪಳಿನಿಯಮ್ಮ ಉಂಡು ಬಾಯೊಳ್ತೆದಿದ್ದಳಷ್ಟೇ, ಮೋಟರಸೈಕಲ್ ಮೇಲೆ ಬಂದ ಮೋಹನ ಮತ್ತು ರಾಜು ''ನಾಲ್ಗಿ ಆಟ್ಟ ಮಿಟಿಕಾಯ್ತಿದೇನೇ ? ಅಲ್ಲೇ ಹೋಗ್ ಇರೆ, ಮಸೀದೀಲೆ ಜಾಗ ಕುಡುರ' ಅಂತ ಗುರುಗುಟ್ಟಿ ಹೋದರು. ಬದುಕಿನಲ್ಲಿ ಆಸೆ ಅಂತೇನಾದರೂ ಇದೆ, ನಾಲ್ಗಿ ರುಚಿ ಮಾತ್ರವಾಗಿದ್ದ ಪಳಿನಿಯಮ್ಮಗೆ ಸತ್ತ ಹಾಗಾಗಿತ್ತು. ಸಾಮಿ ಬದುಕಿನ ತಥ್ವದ

ಮಾತಾಡಿದ್ದ. ನಾಜೂಕಿನ ದಿನಗಳು ಸುರುವಾಗಿರೋ ವಾಸನೆ ಹೊಡೀತಿತ್ತು. ಸ್ವಲ್ಪೇ ದಿನದಲ್ಲಿ ಮೈನುದ್ದೀನನ ತಮ್ಮನ ಮನೇಲಿ ಕಾರ್ಯವಿತ್ತು. ಕರೆದಿದ್ದರೂ. ನಾಲಿಗೆ ರುಮುರುಮು ಅಂದರೂ ಪಳಿನಿ ಹೋಗಿರಲಿಲ್ಲ. ಹಾದೀಲಿ ಸಿಕ್ಕ ಮೈನುದ್ದೀನ - ಹರ್ಕಿಗೆ ಹುಂಕಾರ ಹೆಚ್ಚು, ಗುರ್ಕಿಗೆ ಮುಳ್ಳೆಚ್ಚು - ಅಂತ ತಿವಿಯೋ ಮಾತಾಡಿದ್ದ. 'ಏನ ಕರ್ಮ ಕಾಡಾಟ' ಅಂತ ಪಳಿನಿಯಮ್ಮ ಸುಸ್ತುಹೊಡೆದಿದ್ದಳು.

ಇವತ್ತು ಪಳಿನಿ ಅಡಿಗೋಣಕ್ಕೆ ಹೋದ ಹೊತ್ತಲ್ಲಿ ಅವೇ ಹುಡುಗರು ಮಠಕ್ಕೆ ಬಂದು ಸಾಮಿಯನ್ನ ದಬಾಯಿಸತೊಡಗಿದ್ದರು. ಪಳಿನಿಯಮ್ಮನನ್ನ ಎತ್ತ ಬೇಕತ್ತ ಬೇನಾಮಿ ಮಾಡಿದರು. ''ಗಂಡನ ಬಿಟ್ಟ ಮುಂಡಿ ಸೀರಿ ಕಳ್ದ ಬಡೀತವ, ಏನ ತಿಳ್ಕಂಡೀದ ? ಮೀಡಿಯೇಟರ್ಕಿ ಮಾಡ್ತಿದ ಕಡಾ. ಸಿಕ್ರ ಬಿಡೂದಿಲ..'' ಏನಪ್ಪ ಎತ್ತಪ್ಪ ಅನ್ನೂವಷ್ಟರಲ್ಲಿ ಸಾಮಿಯ ಹೆಣ ಬಿದ್ದುಹೋಗಿತ್ತು. ಇದೇ ಈ ಮೋಹನನ ತಂಗಿ ಮಮತಾ ಮೈನುದ್ದೀನನ ಮಗ ಭಾಷಾನ ಕೂಡ ಓಡಿಹೋದದ್ದಂತ ಊರಲ್ಲಿ ಗುಲ್ಲು. ಖರೆಯಾ, ಕಂಡವರಿಲ್ಲ. ಇಬ್ರೂ ಕಾಲೇಜಿಗೆ ಹೋಗ್ವಲ್ಲಿ ಬರ್ವಲ್ಲಿ 'ಉಂದ್ ನಮೂನಿ' ಮಾಡ್ತದ್ರ ಅನ್ನೋದೆ ಸಾಕ್ಷಿ. ಈಗ ಸುದ್ದಿಯ ಬಾಯೊಡೆದು ಸೋರತೊಡಗಿತ್ತು. ಆ ಹುಡ್ಗಿ, 'ಬಿಲ್ವಪತ್ರಿ ಎಲಿ ತೆಳ್ಳಗಾಗೋ ಔಷ್ದಿ. ಮಠದಾಗೀದ, ಹೊಗ್ಬತ್ತಿ' ಅಂತ ತನ್ನ ಅವ್ವಿಗೆ ಹೇಳಿ ಈ ಹದಿನೈದು ದಿನಗಳಿಂದ ಮಠಕ್ಕೆ ಬರುತ್ತಿದ್ದಳು. ಬೆಳಕಿರುವಾಗಲೇ ಬಂದು ಹೋಗೋ ಹುಡುಗಿ ಯಾಕೆ ಬರ್ತಿದ್ದಳು ? ಸೀದಾ ಮನೆಗೆ ಹೋದಳೇ ? ಏನೂ ಪಳಿನಿಯಮ್ಮಗೆ ಗೊತ್ತಿರಲಿಲ್ಲ. ಇವತ್ತು ಬೆಳಗಿನ ಹಾಲ್ಟಿಂಗ್ ಬಸ್ಸಿಗೆ ಮಮತಾ ಹೋದದ್ದು ಅಂತ ಸುದ್ದಿ. ಅದೇ ಬಸ್ಸಿಗೆ 'ನಡೆದರೆ ಕಾಲು ಬಾಯುವ' ಪಳಿನಿಯಮ್ಮನೂ ಹತ್ತಿದ್ದು. ಮುಂದೆ ಭಾಷಾ ಹತ್ತಿದ್ದನೇ ? ಕೂಡೇ ಹೋದರೆ ? ಯಾವುದೂ ಪಳಿನಿಯಮ್ಮಗೆ ಗೊತ್ತಿರದಿದ್ರೂ ನೂಲು ಹೆಂಗೆ ಹೆಂಗೋ ಗಂಟಾಗಿ ಸುತ್ತಿಕೊಂಡಿತ್ತು. ತಂಗಿ ಸಿಕ್ಕರೆ ಕತ್ತರಿಸಿ ಹಾಕಬೇಕೆಂದು ತತ್ತರಿಸುತ್ತಿದ್ದ ಮೋಹನಗೆ ತಕ್ಷಣಕ್ಕೆ ಸಿಗುವವಳು ಪಳನಿಯಮ್ಮ ಮಾತ್ರವಾಗಿದ್ದಳು.

ಚಳಿರಾತ್ರಿ ಹೊಟ್ಟೆ ನಡುಗಿಸುತ್ತಿತ್ತು. ಭತ್ತ ಕೊಯ್ದಿದ್ದರಿಂದ ಗದ್ದೆಬಯಲು ಗಂವ್ವೆನ್ನುತ್ತಿತ್ತು. ಸಾಮಿಯ ಕಣ್ಣಮುಂದೆ ಆ ಹಾರಾಟ, ಚೀರಾಟ ಎಷ್ಟನೇ ಸರ್ತಿಯೋ ಮರುಕಳಿಸುತ್ತಿತ್ತು. 'ಹಾಂಗ್ಯಾಕ ಮಾಡ್ದೆ ಪಳಿನಿ ?' ಅಂತ ಅಂತೂ ಕೇಳಿದ. ಸಿಟ್ಟೋ, ದುಃಖವೋ, ಅಸಹಾಯಕತೆಯೋ; ಅಪಮಾನವೋ ಕೂತಲ್ಲೇ ಉರಿಹತ್ತಿದಂತೆ ಕನಲುತ್ತಿದ್ದಳು ಪಳಿನಿ. ''ನಾ ಎಂಥ ಮಾಡ್ದೆ. ಆಂ, ನನ್ನ ತಲೀಗ್ಯಾಕ ಕಟ್ತೀ...?'' ಅಂತ ಕೂಗಿದಳು. ಬೆಳಗಾದರೆ ಈ ಗುಲ್ಲು ಮಸೀದಿ ಕಡೆಯಿಂದ ಯಾವ ರೂಪ ತಾಳುವುದೋ ಎಂಬ ಲೆಕ್ಕವೂ ಸಾಮಿಗೆ ಸಿಗಲಿಲ್ಲ. ''ಬಿಟ್ಟು ಹೋಗುವನಾ ?'' ''ಎಲ್ಲಿಗೆ ಎಲ್ಲಿಗೆ ಹೇಳೋ...'' ನಾಯಿ ಊಳಿಟ್ಟಂತೆ, ಪಳಿನಿಯೇ ಪ್ರಶ್ನಾರ್ಥಕ ಚಿಹ್ನೆಯಂತೆ ಕೂತಾಗ ಸಾಮಿ ತಲೆಭಾರಕ್ಕೆ ಕಟ್ಟೆಗೆ ಒರಗಿದ.

ಭಾರವೇ ಆದರೂ ಜಾವ ಸರಿಯುತ್ತಿತ್ತು. 'ಸಾಮಿ' ಅಂತ ಕರೆದಳು. ''ನನ್ನತ್ರ ರೊಕ್ಕ ಐತ್ಯಲ್ಲ, ಲೆಕ್ಕ ಮಾಡು, ಎರಡ ಪಾಲ ಮಾಡಿ ಒಂದು ಸಿವನ ಮುಂದೆ ಇನ್ನೊಂದು ಮಸೀದಿ ಮೆಟ್ಟಿಲ ಮುಂದೆ ಇಡುವಾ'' ಅಂದಳು. ಸಾಮಿಗೂ ಪಿತ್ಥನೆತ್ತಿಗೇರಿತು. 'ಸತ್ರೆ ಕ್ರಿಯಾ ಮಾಡೋಕೆ ಮಗ ಅವ್ನೇನೇ' ಅಂದ. ಪಳಿನಿಯಮ್ಮ ಬಿಕ್ಕಳಿಸಲಿಲ್ಲ. ನಿರುಮ್ಮಳವಾಗಿದ್ದಳು. ''ಅವ್ರು ಬಂದ್ ಜೀಂವಾ ತಗದ್ರೆ ಪೋಲೀಸ್ರು ಮಣ್ಣ ಮಾಡ್ತಾರೋ'' ಅಂದಳು. ಸಾಮಿ ಮಾತು ಸತ್ತವನಂತೆ ತಂಡುಹೊಡೆದ.

ಪಳಿನಿಗೆ ಮೋಹನನ ಅವ್ವಿ ಕುಳ್ಳುಗೌರಿಯಂತ ಸುಶೀಲೆಯ ನೆನಪಾಯ್ತು. ಪತ್ರಿ ಎಲಿ ನೆಪ ಮಾಡಿಬಂದಳಂತೆ ಪುಟ್ಟ ಹುಡುಗಿ ಮಮತಾಳನ್ನು ತಾನು ಸರಿ ಗಮನಿಸಿಯೇ ಇಲ್ಲ ಅನ್ನಿಸಿತು. ಹಬ್ಬಿದ ಸುದ್ದಿ ಹೌದೇ ಆದರೆ ಎಲ್ಲಾದ್ರೂ ಬದುಕಿಕೊಳ್ಳಲಿ. ಊರು ನಾಕುದಿನ ಉಬ್ಬರ ಬಂದ ಹಾಂಗಾಡ್ತದೆ, ಅಟ್ಟೆಯಾ. ಏರಿದ ಹೊಳಿ ಇಳೀಬೇಕಲ್ಲ? ಹುಚ್ಚು ಪೋರ ಮೋಹನ, ಕೊಚ್ಚೋದು ಅಟ್ಟು ಸುಲಭವಾ ? ಕೋಳಿ ಕುರಿ ತಲಿ ಕಡೀಬೇಕಾರೆ ಮಂತ್ರ, ವಾದ್ಯ, ಗೌಜಿ, ಪೂಜೆ ಹಾ ಏನೆಲ್ಲ ಬೇಕು. ಸೀರಿ ಎಳೀತೀಯಾ ? ಎಳಿ ಬಾ. ಈ ಸೆರಗಲ್ಲೇ ನಿನ್ನ ಸಿಂಬಳವನೂ ಒರಸೇನಿ. ಹುಚ್ಚಮುಂಡೇದೆ, ಅಂದುಕೊಂಡಳು. ಸಣ್ಣಗೆ ಬೆಳಗು ಹರೀತಿತ್ತು. ಆಕಾಶ ಕೆಂಪೊಡೆಯುತ್ತಿತ್ತು. ದಿನವಿಡೀ ಗಾಬರಿಗೊಂಡ ಸಾಮಿಯ ಮುದಿಜೀವಕ್ಕೆ ಜೊಂಪು ಹತ್ತಿತ್ತು. ಸಾಮಿ ಕನಸಿನಲ್ಲಿ ಹೊನ್ನಪ್ಪ ಗಾಂವಕಾರನ ಕೂಡೆ ಮಾತಾಡಿದ್ದೇ ಆಡಿದ್ದು.

ವಿನಯಾ
'ಸಮೃದಿ', ನಂ. ೧೨೪, ಸಿಐಟಿಬಿ ಕಾಲೋನಿ
ಶ್ರೀನಗರ, ಧಾರವಾಡ - ೫೮೦ ೦೦೩





೨೦೧೧ರ ಡಿಸೆಂಬರ್ ೧೮ರಂದು, ನವಕರ್ನಾಟಕ ಪ್ರಕಟಿಸಿರುವ ಡಾ|| ಎನ್. ಎಸ್. ಲೀಲಾ ಅವರ 'ವರ್ಣ ಮಾಯಾಜಾಲ' (ಕನ್ನಡ) ಮತ್ತು 'ಮಿಸ್ಟರಿ, ಮ್ಯಾಜಿಕ್ ಆ್ಯಂಡ್ ಮ್ಯೂಸಿಕ್ ಆಫ್ ಕಲರ್ಸ್' (ಇಂಗ್ಲಿಷ್) ಮತ್ತು ಶ್ರೀ ಡಿ. ಜಿ. ಮಲ್ಲಿಕಾರ್ಜುನ ಅವರ 'ಚಿಟ್ಟೆಗಳು' (ಕನ್ನಡ) ಹಾಗೂ 'ಬಟರ್‌ಫ್ಲೈಸ್' (ಇಂಗ್ಲಿಷ್ - ಮಿನಿ ಪುಸ್ತಕಗಳು) ಈ ನಾಲ್ಕು ಕೃತಿಗಳ ಲೋಕಾರ್ಪಣೆ ನಡೆಯಿತು. ಪ್ರೊ|| ಕೆ. ಜಗನ್ನಾಥರಾವ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ|| ಎಂ. ಆರ್. ನಾಗರಾಜು ಕೃತಿಗಳ ಪರಿಚಯ ಮಾಡಿಕೊಟ್ಟರು.

ಚಿತ್ರದಲ್ಲಿ : (ಎಡದಿಂದ ಬಲಕ್ಕೆ) ಶ್ರೀ ಆರ್. ಎಸ್. ರಾಜಾರಾಮ್, ಪ್ರೊ|| ಎಂ. ಆರ್. ನಾಗರಾಜು, ಪ್ರೊ|| ಕೆ. ಜಗನ್ನಾಥರಾವ್, ಡಾ|| ಎನ್. ಎಸ್. ಲೀಲಾ ಮತ್ತು ಶ್ರೀ ಡಿ. ಜಿ. ಮಲ್ಲಿಕಾರ್ಜುನ. (ಬಲ ಚಿತ್ರದಲ್ಲಿ: ಸಭಿಕರು)


LITHRONE 28

ಓದುಗರ ವೇದಿಕೆ

'ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು' –

ಈ ಶೀರ್ಷಿಕೆಯಡಿ ಓದುಗರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ನೀಡಬೇಕೆಂದು ವಿನಂತಿಸಿಕೊಂಡಿದ್ದೆವು. ಅನೇಕ ಓದುಗರು ತಮ್ಮ ಪ್ರತಿಕ್ರಿಯೆಗಳನ್ನು ಕಳಿಸಿದ್ದಾರೆ, ಅವರಿಗೆಲ್ಲಾ ನಮ್ಮ ವಂದನೆಗಳು ಸಲ್ಲುತ್ತವೆ. ನಮಗೆ ತಲುಪಿದ್ದ ಬರಹಗಳ ಪೈಕಿ ಕೆಲವನ್ನು ಆಯ್ದು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಅಭಿಪ್ರಾಯಗಳು ಕ್ರಿಯೆಗಳಿಗೆ ಅಡಿಪಾಯವಾಗಲೆಂದು ಆಶಿಸುತ್ತೇವೆ.

– ಸಂ



ಭ್ರಷ್ಟಾಚಾರ ನಿರ್ಮೂಲನಕ್ಕೆ ಸಲಹೆಗಳು ಸಾರ್...

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

ರಾಜಕೀಯ ಧುರೀಣರು ಮತ್ತು ಸರಕಾರಿ ಅಧಿಕಾರಿಗಳು ಜನರಿಂದ ಲಂಚ ತೆಗೆದುಕೊಳ್ಳಲು ಅವರ ಧನದಾಸೆ ಮತ್ತು ಸುಖಭೋಗಗಳ ಆಸೆಯೇ ಕಾರಣವೆಂದು ನಾವೆಲ್ಲ ತಿಳಿದುಕೊಂಡಿದ್ದ ಕಾಲವೊಂದಿತ್ತು. ಆದರೆ ಇಂದು ಅವರಿಗೆ ಹಣ ಕೂಡಿಡಲು ಜಾಗವೇ ಇಲ್ಲ, ಪಡುತ್ತಿರುವ ಸುಖಕ್ಕೆ ಎಣೆಯೇ ಇಲ್ಲ ಎನ್ನುವ ಸ್ಥಿತಿಯಲ್ಲೂ ಲಂಚ ತೆಗೆದುಕೊಂಡು ಹುಚ್ಚರಂತೆ ಯಾವ ಯಾವುದೋ ವಿದೇಶಿ ಬ್ಯಾಂಕುಗಳಲ್ಲಿ ಕೂಡಿಡುವುದನ್ನು ನೋಡಿದಾಗ ಇದು ಅವರ ಪಾಲಿಗೆ ಒಂದು ವ್ಯಸನವಾಗಿ, ಅವರ ಮನಸ್ಸನ್ನು ಒಳಗಿಂದಲೇ ಪೂರ್ತಿಯಾಗಿ ಕೊಳೆಯಿಸುತ್ತ ಬರುವ ಕ್ಯಾನ್ಸರ್ ಆಗಿದೆ ಅನ್ನಿಸುತ್ತಿದೆ ಮತ್ತು ಹೀಗಾದರೆ ಮುಂದೇನು ಎಂಬ ಭಯ ಕಾಡಹತ್ತಿದೆ. ಭ್ರಷ್ಟಾಚಾರದ ರಾಕ್ಷಸನ ಕರಾಳ ಕೈಗಳು ಅಧಿಕಾರದ ಸೊಕ್ಕಿನಿಂದ ಬಡವರ ಕುತ್ತಿಗೆಯನ್ನು ಹಿಸುಕುವುದನ್ನು ನೋಡಿದಾಗ ಕಣ್ಣಮುಂದೆ ನಡೆಯುವ ಅನ್ಯಾಯವು ಮನಸ್ಸಿನಲ್ಲಿ ಆಕ್ರೋಶವನ್ನು ತುಂಬುತ್ತದೆ.

ಆದರೆ ಈ ಕರಾಳ ಕೈಗಳು ಯಾರ ಕಣ್ಣಿಗೂ ಕಾಣಸದಂತೆ ಅದೃಶ್ಯವಾಗಿರುವುದೇ ನಮ್ಮ ಅತ್ಯಂತ ದೊಡ್ಡ ದುರದೃಷ್ಟ. ಯಾಕೆಂದರೆ ಈ ಎಲ್ಲ ರಾಕ್ಷಸರು ದೇವರು, ದೇವಸ್ಥಾನ, ಪುಣ್ಯಕ್ಷೇತ್ರಗಳು, ಮಠ, ಮಠಾಧಿಪತಿಗಳ ಸೆರಗುಗಳ ಮರೆಯಲ್ಲಿ ಅಡಗಿ ಆಶ್ರಯ ಪಡೆಯುತ್ತಾರೆ. ಇಂಥ ಅಡಗುದಾಣ ಗಳಲ್ಲಿ ನಿಂತು ಅವರು ಇಂದು ನಡೆಸುತ್ತಿರುವ ಧಾರ್ಮಿಕ ಕಾರ್ಯ, ಸಾಮಾಜಿಕ ಸೇವಾಕಾರ್ಯ ಮತ್ತು ಬಡವರಿಗೆ ನೀಡುವ ಆರ್ಥಿಕ ಸಹಕಾರದ ನಾಟಕಗಳ ಹಿಂದೆ ಭ್ರಷ್ಟಾಚಾರದ ಮೂಲಕ ಸಂಪಾದಿಸಿದ ಹಣದ ಹುಚ್ಚು ಹೊಳೆಯಿದೆ. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇವೆಂಬ ನಿರಾಳ ಭಾವದೊಂದಿಗೆ ಮಹಾದಾನಿಗಳೆಂಬ ಕೀರ್ತಿಗೂ ಪಾತ್ರರಾಗುವುದಾದರೆ ಅಂಥ ಅವಕಾಶ ಯಾರಿಗೆ ಬೇಡ ? ಧಾರ್ಮಿಕ ನಾಯಕರು ಪಾರಮಾರ್ಥಿಕದ ಸೋಗು ಹಾಕಿಕೊಂಡು ರಾಜಕೀಯದವರನ್ನು, ಸರಕಾರಿ ಅಧಿಕಾರಿಗಳನ್ನು ಮತ್ತು ಶ್ರೀಮಂತ ಉದ್ಯಮಿಗಳನ್ನು ಓಲೈಸುತ್ತ ಅವರಿಂದ ಸಿಗುವ ಲಾಭಕ್ಕಾಗಿ ಹಾತೊರೆಯುವ ಕಪಟಿ ಗಳಾದರೆ, ಅಂಥವರನ್ನು ದೇವದೂತರೆಂದು ನಂಬಿ ಕೈ ಮುಗಿಯುವ ಜನರನ್ನು ಏನೆಂದು ಕರೆಯಬೇಕು ? ಪ್ರಾಯಶಃ ದೇವಾಲಯಗಳಂಥ ಅಡಗುದಾಣಗಳು ಭ್ರಷ್ಟಾಚಾರಿಗಳನ್ನೂ, ಜನರನ್ನು ವಂಚಿಸಿ ಅವರು ಮಾಡಿದ ಹಣವನ್ನೂ ಸಾರಾಸಗಟಾಗಿ ನಿರಾಕರಿಸಿದರೆ ಪರಿಸ್ಥಿತಿ ಬದಲಾಗಬಹುದೇನೋ! ಮುಖ್ಯವಾಗಿ ಈ ಬಗ್ಗೆ ಜನರಲ್ಲಿ ಅರಿವು ಮೂಡಬೇಕಾಗಿದೆ. ದೇವಾಲಯಗಳು ಭ್ರಷ್ಟಾಚಾರಿಗಳನ್ನು ಬೆಂಬಲಿಸದಂತೆ ಅವರ ವಿರುದ್ಧ ಧ್ವನಿಯೆತ್ತಿ ತಡೆಗಟ್ಟುವ ಹೊಣೆಯೂ ಜನಸಾಮಾನ್ಯರ ಮೇಲಿದೆ. ಮಾತ್ರವಲ್ಲ, ಅವರು ತಮ್ಮ ಎಂಜಲು ಹಣವನ್ನು ಸಾರ್ವಜನಿಕರ ಸೇವೆಯಲ್ಲಿ ತೊಡಗಿಸಲು ಬಂದರೆ ಅದನ್ನು ಸ್ವೀಕರಿಸುವುದಿಲ್ಲ ಎಂಬ ಸ್ವಾಭಿಮಾನದ ಮನೋಭಾವವನ್ನು ಜನರು ಬೆಳೆಸಿಕೊಳ್ಳಬೇಕಾಗಿದೆ.

ಪಾರ್ವತಿ ಜಿ. ಐತಾಳ್, ಕುಂದಾಪುರ - ೫೭೬ ೧೦೨, ಉಡುಪಿ ಜಿಲ್ಲೆ

* * *

ಭ್ರಷ್ಟಾಚಾರ ನಿರ್ಮೂಲನೆ ಎಲ್ಲಿಂದ ಆರಂಭವಾಗಬೇಕು ? ಮೆಟ್ಟಿಲನ್ನು ಸ್ವಚ್ಛಗೊಳಿಸುವಾಗ ಮೇಲಿನಿಂದ ಗುಡಿಸಿಕೊಂಡು ಬರಬೇಕು. ನೀರಿನ ಟ್ಯಾಂಕ್‌ನಲ್ಲಿ ಕಶ್ಮಲವಿರುವಾಗ ನಲ್ಲಿಯನ್ನು ಸ್ವಚ್ಛಗೊಳಿಸಿ ಉಪಯೋಗವೇನು ? ನಲ್ಲಿಯನ್ನು ಎಷ್ಟು ತೊಳೆದರೂ ಅಷ್ಟೇ! ನೀರು ಸ್ವಚ್ಛವಾಗದು. ಏಕೆಂದರೆ ಮಲಿನವಾದ ನೀರು ತುಂಬಿರುವುದು ಟ್ಯಾಂಕ್‌ನಲ್ಲಿ. ಈ ಟ್ಯಾಂಕ್ ಇರುವುದಾದರೂ ಎಲ್ಲಿ? ವಿಧಾನ ಸೌಧದಲ್ಲಿ... ಶಾಸಕರ ಭವನದಲ್ಲಿ! ತೊಟ್ಟಿಯಲ್ಲಿರುವ ನೀರೇ ನಲ್ಲಿಯಲ್ಲಿ ಬರುವುದು. ಲೋಕಾಯುಕ್ತರಿಗೆ... ಲೋಕಪಾಲರಿಗೆ... ಟ್ಯಾಂಕ್ ಸ್ವಚ್ಛಗೊಳಿಸಲು ಅನುಮತಿ ನೀಡದೇ... ಕೇವಲ 'ನಲ್ಲಿ' ಸ್ವಚ್ಛಗೊಳಿಸಲು ಅನುಮತಿ ನೀಡಿದರೆ... ಶುದ್ಧ ನೀರು ದೊರಕಲು ಸಾಧ್ಯವೇ ? ಲೋಕಾಯುಕ್ತರಿಗೆ/ ಲೋಕಪಾಲರಿಗೆ ಪರಮಾಧಿಕಾರ ನೀಡದೆ ಹೋದರೆ ಭ್ರಷ್ಟಾಚಾರ ನಿರ್ಮೂಲನೆ ಅಸಾಧ್ಯ.

ಲೋಕಾಯುಕ್ತರು ದಾಳಿ ನಡೆಸುತ್ತಾರೆ. ಭ್ರಷ್ಟನನ್ನು ಬಂಧಿಸುತ್ತಾರೆ. ನ್ಯಾಯಾಲಯವು ಜಾಮೀನು ನೀಡುತ್ತವೆ. ತನಿಖೆ... ವಿಚಾರಣೆಯಾಗುವ ಸಮಯದಲ್ಲೂ ಆತ ಪುನಃ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಾ ಹೋಗದಿಂದಿರುತ್ತಾನೆ. ಲೋಕಾಯುಕ್ತರ ಬಲೆಯಿಂದ (ಜಾಮೀನಿನ ಮೇಲೆ) ಬಿಡಿಸಿಕೊಂಡ ತಿಮಿಂಗಿಲಗಳು ಪುನಃ ಭ್ರಷ್ಟ ಸಾಗರದಲ್ಲಿ ಮುಳುಗಿ ಏಳುತ್ತಾ ಈಜಾಡುತ್ತಿರುತ್ತವೆ. ಇದಕ್ಕೆ ಪರಿಹಾರ ಒಂದೇ!

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

ಭ್ರಷ್ಟಾಚಾರ ನಿಗ್ರಹ ಕಾಯ್ದೆಯು ಅನ್ವಯ ಭ್ರಷ್ಟಾಚಾರವನ್ನು ಜಾಮೀನು ನೀಡಲಾಗದ ಅಪರಾಧವೆಂದು ಪರಿಗಣಿಸ ಬೇಕಲ್ಲದೇ ಲೋಕಾಯುಕ್ತರು ಬಂಧಿಸಿದ ಆರೋಪಿಗೆ ಜಾಮೀನು ನೀಡಬಾರದು. ಭ್ರಷ್ಟಾಚಾರವನ್ನು ಜಾಮೀನು ನೀಡಬಾರದ ಅಪರಾಧ ಎಂದು ಪರಿಗಣಿಸಿ ಜಾಮೀನು ನಿರಾಕರಿಸಿದರೆ ಲಂಚಗುಳಿತನ ಕಡಿಮೆಯಾಗಬಹುದು.

ಆಯಕಟ್ಟಿನಲ್ಲಿ ಪ್ರತಿಷ್ಠಾಪಿತವಾಗಿರುವ ಭ್ರಷ್ಟಾಧಿಕಾರಿಗಳು ಲಂಚ ತೆತ್ತು ಅಧಿಕಾರ ಗಿಟ್ಟಿಸಿರುತ್ತಾರೆ. ಅವರು ಲಂಚ ನೀಡಿರುವುದು ಮೇಲಧಿಕಾರಿಗೆ. ಆ ಮೇಲಧಿಕಾರಿಗೊಬ್ಬ ಗಾಡ್ ಫಾದರ್. ಅವನೇ ಜನಪ್ರತಿನಿಧಿ! ಭ್ರಷ್ಟಾಧಿಕಾರಿಗಳು ಭ್ರಷ್ಟಾಚಾರದ ಹಣವನ್ನು ತಾವೊಬ್ಬರೇ ಅನುಭವಿಸದೆ ಆ ಮೊತ್ತದಲ್ಲಿ ಮೇಲಧಿಕಾರಿಗಳಿಗೂ ಪಾಲು ನೀಡುತ್ತಾರೆ. ಇದರಲ್ಲಿ ಮಂತ್ರಿಗಳಿಗೂ ಸಮಪಾಲು. ರಾಜಕೀಯ ಪಕ್ಷಗಳು ಚುನಾವಣೆಗೆಂದು ವೆಚ್ಚಮಾಡುವ ಹಣ ಎಲ್ಲಿಯದು? ಅವರೇನು ತಮ್ಮ ಮನೆ-ಮಠ ಮಾರಿ ಚುನಾವಣೆಯಲ್ಲಿ ಗೆಲ್ಲುವುದಿಲ್ಲ. ಚುನಾವಣೆಗೆಂದು ಭ್ರಷ್ಟರಿಗೆ ಫಂಡ್ ನೀಡುವುದು ಇದೇ ಭ್ರಷ್ಟರು. ಹಾವನ್ನು ಸಾಯಿಸಿ ಹದ್ದಿಗೆ ಅರ್ಪಿಸಿದಂತೆ ಈ ಭ್ರಷ್ಟರು ಶ್ರೀಸಾಮಾನ್ಯನಿಂದ ದೋಚಿದ ಹಣದಲ್ಲಿ ಒಂದು ಭಾಗವನ್ನು ಮಂತ್ರಿಗಳಿಗೆ ನೀಡುವುದರಿಂದ ಈ ಮಂತ್ರಿಗಳು ಭ್ರಷ್ಟರನ್ನು ರಕ್ಷಿಸಿಯೇ ತೀರುತ್ತಾರೆ. ಲಂಚ ನೀಡಿ ಅಧಿಕಾರಕ್ಕೆ ಬಂದವರು ಲಂಚ ಸ್ವೀಕರಿಸದೆ ಕೆಲಸ ಮಾಡಲು ಸಾಧ್ಯವೇ?

ತಂತ್ರಜ್ಞಾನ ಮುಂದುವರಿದಿದೆ. ಎಲ್ಲೆಲ್ಲೋ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಂಚಾರಿ ನಿಯಮಗಳನ್ನು ಉಲ್ಲಂಘಿಸುವ ವಾಹನ ಸವಾರರಿಂದ ಹಣ ವಸೂಲು ಮಾಡಲು ಈ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಸಾರ್ವಜನಿಕರಿಂದ ಹಣ ದೋಚಲು ಬಳಸುವ ಇದೇ ತಂತ್ರಜ್ಞಾನದಿಂದ ಭ್ರಷ್ಟಾಚಾರಿಗಳನ್ನು ಹಿಡಿಯಲು ಸಾಧ್ಯವಿಲ್ಲವೇ? ಇಂತಹ ರಹಸ್ಯ ಕ್ಯಾಮರಾಗಳನ್ನು ಅಳವಡಿಸಬೇಕಾಗಿರುವುದು ಪೊಲೀಸ್ ಠಾಣೆಗಳಲ್ಲಿ, ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ, ತಾಲ್ಲೂಕು ಕಛೇರಿಗಳಲ್ಲಿ, ಪಾಲಿಕೆ, ಡಿ.ಸಿ. ಕಛೇರಿ, ಶಾಸಕರ ಭವನ, ವಿಧಾನ ಸೌಧ, ಇಂತಹ ಸ್ಥಳಗಳಲ್ಲಿ. ಭ್ರಷ್ಟರು ಇರುವೆಡೆ ರಹಸ್ಯ ಕ್ಯಾಮರಾ ಅಳವಡಿಸಿದರೆ ಭ್ರಷ್ಟಾಚಾರ ತುಸು ಕಡಿಮೆಯಾಗಬಹುದು. ಪೊಲೀಸ್ ಠಾಣೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿದರೆ ಠಾಣೆಗೆ ಯಾರ್‍ಯಾರು ಬರುತ್ತಾರೆ? ದೂರು ಹೇಗೆ ದಾಖಲಾಗುತ್ತದೆ? ಠಾಣಾಧಿಕಾರಿ ಏನೇನು ಮಾಡುತ್ತಾರೆ? ಇವೆಲ್ಲಾ ಕ್ಯಾಮರಾದಲ್ಲಿ ದಾಖಲಾದರೆ ಭ್ರಷ್ಟಾಚಾರದ ಜೊತೆಗೆ ಲಾಕಪ್ ಡೆತ್‌ಗಳೂ ಕಡಿಮೆಯಾಗಬಹುದು. ಅಲ್ಲದೆ ಠಾಣೆಗಳಲ್ಲಿ ಪೊಲೀಸರು ನಡೆಸುವ ತನಿಖೆ-ವಿಚಾರಣೆಗಳೆಲ್ಲವೂ ವೀಡಿಯೋ ಚಿತ್ರೀಕರಣವಾದರೆ ಮುಂದೊಮ್ಮೆ ಈ ಸಾಕ್ಷೀದಾರರು ನ್ಯಾಯಾಲಯದಲ್ಲಿ ಬಣ್ಣ ಬದಲಾಯಿಸಲು ಸಾಧ್ಯವಾಗದು. ಪೊಲೀಸ್ ದೌರ್ಜನ್ಯವೂ ಕಡಿಮೆಯಾಗಬಹುದು.

ಪಿ. ಜೆ. ರಾಘವೇಂದ್ರ, ಎಂ-೮೫೮, ಸಿ.ಐ.ಟಿ.ಬಿ. ೨ನೇ ಹಂತ
ಕುವೆಂಪುನಗರ, ಮೈಸೂರು - ೫೭೦ ೦೨೩

* * *

"ಭ್ರಷ್ಟಾಚಾರ"ವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಸರಳಾರ್ಥದಲ್ಲಿ ಹೇಳುವುದಾದರೆ, ಭ್ರಷ್ಟಾಚಾರವೆಂದರೆ ಸಾರ್ವಜನಿಕ ಅಧಿಕಾರವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು. ಹೀಗೆ

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

೧೯೯೭ರಲ್ಲಿ ವಿಶ್ವಸಂಸ್ಥೆ ಒಂದು ಅಮೂರ್ತ ವ್ಯಾಖ್ಯಾನವನ್ನು ನೀಡಿತು. ಭ್ರಷ್ಟಾಚಾರಕ್ಕೆ ಪಕ್ಷ ಭೇದ ಎಂಬುದಿಲ್ಲ. ತತ್ವ, ಸಿದ್ಧಾಂತ, ದೇಶ, ಸಂಸ್ಕೃತಿ ಎಂದು ಬೊಬ್ಬೆ ಹೊಡೆಯುತ್ತಿದ್ದವರೂ ಭ್ರಷ್ಟರ ಜೊತೆ ಕೈಜೋಡಿಸಿ ಅಧಿಕಾರಕ್ಕೆ ಬರಲು, ಅಧಿಕಾರದಲ್ಲಿ ಉಳಿಯಲು ದೇಶದ ಹಾಗೂ ಜನರ ಹಿತವನ್ನು ಗಾಳಿಗೆ ತೂರುತ್ತಿದ್ದಾರೆ.

ಇಲ್ಲಿ ಭ್ರಷ್ಟರು ಯಾರು ಎನ್ನುವುದೇ ಪ್ರಶ್ನೆ. ಕೇವಲ ರಾಜಕಾರಣಿಗಳು ಭ್ರಷ್ಟರೆ? ಅಧಿಕಾರಿಗಳು ಭ್ರಷ್ಟರೆ? ಅಥವಾ ಇವರೆಲ್ಲರನ್ನೊಳಗೊಂಡ ಇಡೀ ವ್ಯವಸ್ಥೆ ಭ್ರಷ್ಟತೆಯನ್ನು ಆಚರಿಸುತ್ತಿದೆಯೆ? ಬೇನಾಮಿ ಆಸ್ತಿ ತಡೆಗಟ್ಟಲು, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಒಂದು ಸಮಗ್ರ ಕಾಯ್ದೆ ರಚಿಸಬೇಕು. ಸರಳವಾದ ಆದಾಯ ತೆರಿಗೆ ಕಾನೂನು, ಪಾರದರ್ಶಕತೆ ಇದ್ದು, ಕಟ್ಟುನಿಟ್ಟಿನ ಶಿಕ್ಷೆ ವಿಧಿಸಿದರೆ ಕಡಿವಾಣ ಬಿದ್ದೀತು. ಇಲ್ಲವಾದರೆ ಕಪ್ಪು ಹಣದ ಮೇಲೆ ಇನ್ನಷ್ಟು ಮಸಿ ಬಿದ್ದು ದೇಶಕ್ಕೆ ಕಪ್ಪುಮೋಡ ಆವರಿಸಿಬಿಟ್ಟೀತು. ಅದಕ್ಷ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿ ಮಾಡುವುದು. ಭ್ರಷ್ಟಾಚಾರ ಆರೋಪಿಗಳನ್ನು ಸೇವೆಯಿಂದ ವಜಾ ಮಾಡಬೇಕು. ಆರೋಪಿ ಅಧಿಕಾರಿಗಳಿಗೆ ತೀವ್ರ ಶಿಕ್ಷೆ ವಿಧಿಸುವಂತಹ ದಿಟ್ಟ ಕ್ರಮ ಕೈಕೊಳ್ಳಬೇಕು. ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ರೂಪಿಸುವಂತಹ ಕಾನೂನು ರಚಿಸಬೇಕೆಂಬುದು ನಿರ್ವಿವಾದ. ಭ್ರಷ್ಟಾಚಾರ ನಡೆಸಿ ಸಿಕ್ಕಿಬೀಳುವ ಅಧಿಕಾರಿಗಳನ್ನು ಪೂರ್ವಾನುಮತಿ ಇಲ್ಲದೆ ವಿಚಾರಣೆಗೊಳಪಡಿಸಲು ಅಡ್ಡಿಯಾಗಿರುವ ಸಂವಿಧಾನದ ೩೧೧ನೇ ಪರಿಚ್ಛೇದವನ್ನೆ ರದ್ದುಪಡಿಸಬೇಕು, ಅಥವಾ ಪರಿಷ್ಕರಿಸಬೇಕು. ೩೧೧ನೇ ಪರಿಚ್ಛೇದದಡಿ ಸರಕಾರಿ ಅಧಿಕಾರಿಗಳನ್ನು ಸುಖಾ ಸುಮ್ಮನೆ ವಜಾ, ಅಮಾನತು ಮಾಡುವಂತಿಲ್ಲ, ಹಿಂಬಡ್ತಿ ನೀಡುವಂತಿಲ್ಲ. ಅದಕ್ಕೂ ಮುನ್ನ ತನಿಖಾ ಸಮಿತಿ ರಚಿಸಿ, ಈ ರೀತಿ ಮಾಡುವುದಕ್ಕೆ ಕಾರಣಗಳೇನು ಎಂಬುದನ್ನು ನೀಡಬೇಕು. ಭ್ರಷ್ಟಾಚಾರದಲ್ಲಿ ಸಿಲುಕಿದ ಅಧಿಕಾರಿಗೂ ಇದು ಅನ್ವಯ. ಇದರಿಂದ ನ್ಯಾಯಾಂಗ ವಿಚಾರಣೆಗೆ ಅಡ್ಡಿ.

ರಾಜಕಾರಣಿಗಳ ಕೈಯಲ್ಲಿ ವರ್ಗಾವಣೆಯ ಅಧಿಕಾರ ಇದ್ದರೆ ಅದರಿಂದಾಗುವ ಅನಾಹುತ ಅಪಾರ ಪ್ರಮಾಣದ್ದು. ಆದುದರಿಂದ ರಾಜಕಾರಣಿಗಳ ಕೈಯಲ್ಲಿ ಅಧಿಕಾರಿಗಳ ವರ್ಗಾವಣೆಯ ಅಧಿಕಾರ ಮತ್ತು ಶಿಫಾರಸ್ಸು ರದ್ದುಪಡಿಸಬೇಕು. ಚುನಾವಣಾ ಸುಧಾರಣೆ ಆಗಬೇಕು. ಚುನಾವಣೆಯಲ್ಲಿ ಗೆದ್ದು ಅವಧಿಗೆ ಮುನ್ನ ಸ್ವಾರ್ಥಕ್ಕಾಗಿ ರಾಜಿನಾಮೆ ನೀಡುವ, ಪಕ್ಷಾಂತರ ನಿಷೇಧ ಕಾಯ್ದೆಯಿಂದ ತಪ್ಪಿಸಿಕೊಳ್ಳುವವರಿಗೆ ಮುಂದಿನ ೫ ವರ್ಷಗಳ ಕಾಲ ಚುನಾವಣೆ ನಿಷೇಧ ಹೇರಬೇಕು. ಪ್ರತಿಯೊಬ್ಬ ಮತದಾರ ಕಡ್ಡಾಯ ಮತದಾನ ಮಾಡಬೇಕು. ಶೇ. ೫೧ರಷ್ಟು ಮತ ಪಡೆಯುವ ಅಭ್ಯರ್ಥಿ ಆಯ್ಕೆ ಎಂದು ಘೋಷಿಸಬೇಕು. ಅಭ್ಯರ್ಥಿಯು ಸ್ವಂತ ಹಣ ಖರ್ಚು ಮಾಡಬಾರದು. ಚುನಾವಣೆ ವೆಚ್ಚಕ್ಕೆ ಸರ್ಕಾರದಿಂದಲೇ ಪ್ರತ್ಯೇಕ ನಿಧಿ ಸ್ಥಾಪಿಸಬೇಕು. ಆಯ್ಕೆಯಾದ ಜನಪ್ರತಿನಿಧಿಯ ಸಾಧನೆಯನ್ನು ವರ್ಷದ ಬಳಿಕ ಪರಾಮರ್ಶೆ ಮಾಡಬೇಕು.

ಎಲ್ಲ ಹಣಕಾಸಿನ ವ್ಯವಹಾರಗಳನ್ನು ಬ್ಯಾಂಕಿನ ಮುಖಾಂತರ ನಡೆಯುವಂತೆ ಮಾಡಬೇಕು. ಆಗ ಭ್ರಷ್ಟಾಚಾರ ಮುಕ್ತ ದೇಶ ನಿರ್ಮಿಸಲು ಸಾಧ್ಯ. ಬೇನಾಮಿ ಆಸ್ತಿ ಬೆಳಕಿಗೆ ತಂದು ಸರಕಾರ ವಶಕ್ಕೆ ತೆಗೆದುಕೊಳ್ಳಬೇಕು.

ವಾಮನರಾವ್, ೧೧ನೇ ಅಡ್ಡರಸ್ತೆ
ಜಯನಗರ ಪೂರ್ವ, ತುಮಕೂರು - ೫೭೨ ೧೦೨

* * *

ಭ್ರಷ್ಟಾಚಾರದ ಕುರಿತು ನಮ್ಮ ಶಬ್ದಬ್ರಹ್ಮ 'ಜಿವಿ' ನಾಮದ ನಮ್ಮ ಸಾಮಾಜಿಕ ನಿಘಂಟು - ಎರಡನೇ ಸಂಪುಟ 'ಇಗೋ ಕನ್ನಡ'ದಲ್ಲಿ ಸಮೂದಿಸಿರುವ ವಿವರಣೆಯು ೨೬೦ನೇ ಪುಟದಲ್ಲಿ ಕಂಗೊಳಿಸಿದೆ. "ಸರ್ವಂ ಭ್ರಷ್ಟಮಯಂ ಜಗತ್'. 'ಸರ್ವೇಭ್ರಷ್ಟಾಃ ಸುಖಿನೋ ಭವಂತು' ಎಂದು ದೇವರಿಗೆ ಪ್ರಾರ್ಥನೆಯನ್ನು ಅರ್ಪಿಸಿ ಕಚೇರಿಗೆ ಹೋಗಬೇಕು. ದೇವರಿಗೆ, ನನ್ನ ಕೆಲಸವಾಗಲಿ ಎಂದು ಪೂಜೆಯ ಕಾಣಿಕೆಯನ್ನು ಕೊಡುವ ವೃತ್ತಿ ಎಂದು ಬಂದಿತೋ ಅಂದೇ ಮಾನವ ಭ್ರಷ್ಟನಾದ."

ಕಾಮ, ಕ್ರೋಧ, ಮೋಹ, ಮದ, ಮತ್ಸರ, ಲೋಭಾದಿ ಷಡ್ರಿಪುಗಳೇ ಷಡ್ರಸಾನ್ನವಾಗಿ ಸ್ವತಂತ್ರ ಭಾರತದಲ್ಲಿ ಶಾಸನಾಂಗ, ಕಾರ್ಯಾಂಗ, ನ್ಯಾಯಾಂಗಗಳೆಂಬ ತ್ರಿಸ್ತಂಭಗಳಲ್ಲಿ ನಳನಳಿಸಿ ಬೆಳೆಯುತ್ತಿರುವಾಗ ಸರಿ ಜೋಡಿಯಾಗಿ ನಾಲ್ಕನೇ ಸ್ತಂಭವೆಂದೆನಿಸುವ ಮಾಧ್ಯಮವೂ ಮತ್ತಷ್ಟು ಇಂಬು ನೀಡುತ್ತಿರುವ ಸಂದರ್ಭದಲ್ಲಿ ಭ್ರಷ್ಟಾಚಾರದ ಹು(ಹೊ)ಲಸು ಬೆಳೆಯಲ್ಲದೇ ಮತ್ತೇನು ಬೆಳೆದೀತು? ಭ್ರಷ್ಟಾಚಾರದ ನಿರ್ಮೂಲನೆಗಾಗಿ ಎಂದು ನಿರೂಪಿತಗೊಂಡ ಶಾಸನಗಳ ಕಾರ್ಯಾಸ್ತವು ಕೇವಲ ಡಂಭಾಚಾರದ ನಾಟಕವಾಗುತ್ತಿರುವಾಗ ಎಲ್ಲ ಅಂಗಗಳ ಕರ್ತವ್ಯಗಳೆಂಬುವವು ಕೇವಲ ಪ್ರದರ್ಶನದ ಬೂಟಾಟಿಕೆಯಾಗಿ ಪ್ರದರ್ಶನೀಯ ಕರ್ಮಕಾಂಡಗಳಾಗಿ ಉಳಿಯುತ್ತವೆ; ಭ್ರಷ್ಟಾಚಾರದ ಬ್ರಹ್ಮರಾಕ್ಷಸನ ಕೂದಲೂ ಕೊಂಕದಂತೆ ಪರ್ಯಾಯವಾಗಿ ಪೋಷಕವಾಗಿ ಬೆಳೆಸುತ್ತವೆ, ಬೆಳಗಿಸುತ್ತಿವೆ. ಲೆಕ್ಕ ಚುಕ್ತಾಗೊಳಿಸುವ ಚೊಕ್ಕ ನಡಾವಳಿಗೆ ರಾಷ್ಟ್ರಧರ್ಮದ ಕುರಿತು ಭಯ-ಭಕ್ತಿ ಅದೇ ಬಗೆಯ ಕ್ರಮದಲ್ಲಿ ಆದ್ಯತೆಯಲ್ಲಿ ಅತ್ಯಗತ್ಯ. 'ಅಕೌಂಟಬಿಲಿಟಿ' ಅಂತಂದರೆ ಉತ್ತರದಾಯಿತ್ವದ, ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಅವಕಾಶವನ್ನು ಮೇಲ್ಕಂಡ ಚದುರಂಗಗಳೂ ಚೆನ್ನಾಗಿ ಅಳವಡಿಸಿಕೊಳ್ಳುವಂತಾದಾಗ ಹದಗೆಡುವುದೇ ಸಾಮಾನ್ಯ ಹೊರತು ಹಸನಾಗುವ ಪರಿ ಎಂತು?

ಭ್ರಷ್ಟರನ್ನು ಕಟಕಟೆಗೆ ತಂದು ನಿಲ್ಲಿಸಬೇಕೆಂದರೆ ಸರಕಾರದ ಪೂರ್ವಾನುಮತಿ ಅಗತ್ಯ – ನ್ಯಾಯ ನಿರ್ಣಯನ ಪ್ರಕ್ರಿಯೆಗಳಲ್ಲಿಯಂತೂ ನುಸುಳಿಕೊಳ್ಳಲು ನೂರಾರು ಎಡೆಗಳು, ದೀರ್ಘಸೂತ್ರತನದಿಂದಾಗಿ ಸುಸೂತ್ರವಾಗಿ ಎಂದಾದರೂ (ಒಂದಾದರೂ) ಪ್ರಕರಣವು ಸೂಕ್ತದಂಡನೆಗೆ ಪಕ್ಕಾಗುವ ಸಂದರ್ಭವಿದೆಯೇ? ೧೯೮೮ರ ಲಂಚ ನಿರ್ಮೂಲನ ಅಧಿನಿಯಮವಾಗಲಿ, ಅದೇ ವರ್ಷದಲ್ಲಿ ಶಾಸನಗೊಂಡ ಬೇನಾಮಿ ಅಧಿನಿಯಮವಾಗಲಿ ಎಷ್ಟು ಭ್ರಷ್ಟಾಚಾರಿಗಳನ್ನು ಶಾಸನೋಕ್ತ ದಂಡನೆಗೆ ಗುರಿಗೊಳಿಸುವಲ್ಲಿ ಯಶಸ್ಸು ಕಂಡಿವೆ? ಇವೆಲ್ಲ ಕೇವಲ ಬೆದರುಬೆಚ್ಚುಗಳಾಗಿ ಅಷ್ಟೇ ಅಲಂಕಾರಿಕ ಅಸ್ತಿತ್ವ ಹೊಂದಿವೆಯಲ್ಲ. ಕಾರಣವೇನೆಂದರೆ 'ಬೇವು ಬಿತ್ತಿ ಮಾವು ಬೆಳೆದವು' ಎಂಬ ಹುಚ್ಚು ಹುಮ್ಮಸ್ಸಿನ ಡಂಭಾಚಾರದ ಕರ್ಮಕಾಂಡದ ಆಡಂಬರವೇ! ಚುನಾವಣೆಯ ಕಾಲಕ್ಕೆ ಕೋಟ್ಯಾನುಕೋಟಿ ಹಣ ಹರಿಸುತ್ತಾರೆ. ಆಯ್ಕೆಗೊಳ್ಳಲು; ಹೆಸರಿಗೆ ಮಾತ್ರ ಇರುವ 'ಇಂತಿಷ್ಟೇ ಪರಮಾವಧಿ ವೆಚ್ಚ' ಧರ್ಮಸಿಂಧು; 'ಮಿಕ್ಕದ್ದು ದಂಡನಾರ್ಹ' ಎಂಬ ಶಾಸನವನ್ನು ಬಲಹೀನಗೊಳಿಸುವ ವಿಧವಿಧ ವಿಧಾನಗಳಿಂದ ನಮ್ಮ ಭಾವೀ ವಿಧಿ ನಿರ್ಮಾಪಕರು. ಐದೇ ವರುಷಗಳಲ್ಲಿ ಅವರ ಆಸ್ತಿಯು ಅಜಗಜಾಂತರವಾಗಿ ಭೂತಾಕಾರ ತಳೆದರೂ 'ಹೇಗೆ? ಎತ್ತ?' ಎಂದು ಕೇಳುವ ಧಾರ್ಷ್ಟ್ಯ ತೋರಿದ್ದಿದೆಯೇ? ಕಣ್ಣೆದುರೇ ಇಂದ್ರಾದಿಗಳಂತೆ ಭವ್ಯವೈಭೋಗ ನಡೆಸುತ್ತಿರುವ ಭ್ರಷ್ಟರನ್ನು ಮುಟ್ಟುವ ಧೈರ್ಯ, ಸ್ಥೈರ್ಯ ತೋರಿದ ಉದಾಹರಣೆಗಳಿವೆಯೇ? ಹೇಗಿರಬೇಕು 'ಸಹನಾವವತು ಸಹ ನೌ ಭುನಕ್ತು' ಎಂಬ ದಿವ್ಯ ಸಹಕಾರ ಮಂತ್ರ, ತಂತ್ರ, ಇರುವಾಗ! ವಿಶ್ವವ್ಯಾಪಾರವನ್ನು ಹರಡಿ ಕುಳಿತಿರುವ 'ವಿಶ್ವನಾಥ' ಶೆಟ್ಟಿಯು 'ಒಂದು ಕಾಣಿಯ ಸೋಲ, ಒಂದು ಕಾಣಿಯ ಗೆಲ್ಲ' ಎಂದು ಶರಣರು ವಚನ ಒಂದರಲ್ಲಿ ಹೇಳಿದ್ದುಂಟು ಆದರೆ ಪ್ರತ್ಯಕ್ಷದಲ್ಲಿ ಹರಡಿರುವ ನಮ್ಮ ರಾಜಕೀಯ ಧರ್ಮದಲ್ಲಿ ಕಾಣಸಿಗುವ ಜನತಾ ಜನಾರ್ದನನ ಕಾಣ್ಕೆ ತದ್ವಿರುದ್ಧ.

ಭೋಗ ಸಂಸ್ಕೃತಿಯನ್ನು ಅಂತರ್ಬಾಹ್ಯವಾಗಿ ಆಲಿಂಗಿಸಿಕೊಂಡಿರುವುದರಿಂದ ಭ್ರಷ್ಟಾಚಾರದ ಮಾರೀಚನ ಕಾಂಚನ ಮಿಂಚಿಗೆ, ಸಂಚಿಗೆ, ವಂಚನೆಗೆ ಈಡಾಗುವುದೇ ಪಾಡಾಗಿದೆ; ಅದು ಬೇಡಾಗಿದ್ದರೆ ಚುನಾವಣೆಗೆ [illegible]

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

ಕಾಂಚಾಣ ಕುಣಿತಕ್ಕೆ ತಡೆ; ಭ್ರಷ್ಟಾಚಾರ ನಿರ್ಮೂಲನೆಗಾಗಿ ನಿರೂಪಿತವಾಗಿರುವ ಕಾನೂನುಗಳು ಯಾರದೇ ಅಧಿಕಾರ, ಅಪ್ಪಣೆ, ಮಂಜೂರಾತಿಗಾಗಿ ಕಾಯದೆ ನಿಷ್ಠುರವಾಗಿ ಕಾಯದೇಶೀರವಾಗಿ ಕಟ್ಟಳೆಯಾಗಬೇಕು; ಉಪ್ಪು ತಿಂದವ ನೀರು ಕುಡಿಯಲೇ ಬೇಕು ಎಂಬ ನಿಯಮಕ್ಕೆ ಇನಿತೂ ಚ್ಯುತಿ ಬರತಕ್ಕದ್ದಲ್ಲ. ಯಾವುದೇ ರಾಜಕೀಯ ಅಧಿಕಾರಸ್ಥರು ಎರಡು ಅವಧಿಗಳಿಗಿಂತ ಮಿಗಿಲಾಗಿ ಅಧಿಕಾರ ಪದಗಳಲ್ಲಿ ಇರತಕ್ಕದ್ದಲ್ಲ ಅಂತಾದರೆ 'ಪಟ್ಟಭದ್ರ' ಹಿತಾಸಕ್ತಿಗೆ ತಡೆಬಿದ್ದೀತು.

ಪಾಕಿಸ್ತಾನೀ ಭ್ರಷ್ಟ ಕ್ರಿಕೆಟ್ಟಿಗರಿಗೆ ಬ್ರಿಟನ್ನಿನಲ್ಲಿ ದಂಡನೆಯಾಗಿದ್ದು ತಾಜಾ ಸುದ್ದಿ; ನಮ್ಮಲ್ಲಿ ಅಂಥ ಪ್ರಸಂಗದಲ್ಲಿ ಸಿಕ್ಕಿ ಹಾಕಿಕೊಂಡವನು ಸದ್ಯ ಸಾಂಸದನಾಗಿದ್ದಾನೆ. ಈ ಪ್ರತ್ಯಕ್ಷ ಉದಾಹರಣೆಯಿಂದಾಗಿ ಸಂಕೇತಗೊಳ್ಳುವ ಸತ್ಯವೇನೆಂದರೆ ನಮ್ಮಲ್ಲಿಯ ಶಾಸನಕರ್ತರು ತಾವೇ ಕಲುಷಿತರಾಗಿರುವಾಗ ನಿರ್ದುಷ್ಟವಾದ ನಿಯಮಾವಳಿಗಳನ್ನು ನೀಡಿ ಹದಗೆಟ್ಟ ಗಬ್ಬೆದ್ದ ಸ್ಥಿತಿಯನ್ನು ತೀಡಿಯಾರೇ ಎಂಬ ಅನುಮಾನ. ನಿರ್ದಾಕ್ಷಿಣ್ಯವಾಗಿ ನ್ಯಾಯ ನಿರ್ಣಯನ, ಕಾರ್ಯಾನ್ವಯನ, ದಂಡನೆಗಳಿಂದಾಗಿ ಮಾತ್ರ ಮನಸ್ಸಿನಲ್ಲಿಯ ಮಂಡಿಗೆಯ ಕನಸು ನನಸಾಗಿ ಮಂಡಿತವಾಗುವ ನೆಮ್ಮದಿಯ ನಾಳೆ ಬಂದೀತು.

ಭ್ರಷ್ಟತನದ ಪಾಚಿಯನ್ನು ನಷ್ಟಗೊಳಿಸಬೇಕೆಂದಲ್ಲಿ, ಎಲ್ಲ ರಂಗಗಳಲ್ಲೂ ಉತ್ತರದಾಯಿತ್ವದ ನಿಷ್ಠುರ ಕಾರ್ಯಾನ್ವಯನವನ್ನು ರೂಢಿಸುವ ನಿಷ್ಠೆ ನೆಲೆಗೊಳ್ಳಬೇಕು, ಅದನ್ನು ನೆಲೆಗೊಳ್ಳುವಂತೆ ಮಾಡುವ ಇಚ್ಛಾಶಕ್ತಿಯು ಸಶಕ್ತವಾಗಿ, ಸಮರ್ಥವಾಗಿ, ಸಕ್ಷಮವಾಗಿ ಹೊಮ್ಮಬೇಕು. ಆದಾಯಕ್ಕಿಂತಲೂ ಮಿಗಿಲಾಗಿ ಗಳಿಕೆ ಹೊಂದಿದವರ ಅಂತಂದರೆ ಭ್ರಷ್ಟತನದಿಂದ ಹಣಗಳಿಸಿದವರ ವೈಭೋಗಯುತ ಬದುಕು, ಸಂಪತ್ತು ಪ್ರತ್ಯಕ್ಷವಾಗಿ ಕಣ್‌ಕೋರೈಸುವಂತಿದ್ದರೂ ಬೇನಾಮಿ ವ್ಯವಹಾರಾದಿ ವಂಚನೆಗಳಿಂದಾಗಿ ರಾಜಾರೋಷವಾಗಿ ಮೆರೆಯುತ್ತಿರುವವರು – ಎಷ್ಟೇ ದೊಡ್ಡ ಕುಳಗಳಾಗಿದ್ದರೂ ಸೂಕ್ತ ಲೆಕ್ಕ ತೋರಿಸಲಾಗದಿದ್ದಲ್ಲಿ ಹೆಚ್ಚಿನ ಆಸ್ತಿ, ಪಾಸ್ತಿಗಳನ್ನು ಸರಕಾರಕ್ಕೆ ಸೇರುವಂತೆ ಜಪ್ತುಗೊಳಿಸುವ ಪ್ರಕ್ರಿಯೆ ಶೀಘ್ರಗೊಳ್ಳಬೇಕು. ಪ್ರಕ್ರಿಯೆಗಳ ದೀರ್ಘಸೂತ್ರತ್ವದಿಂದಾಗಿ ಅಪರಾಧಿಗಳಿಗೆ ವರದಾನವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅಷ್ಟೇ ಅಲ್ಲ; ನ್ಯಾಯನಿರ್ಣಯನ ಪ್ರಕ್ರಿಯೆಯ ಪ್ರದೀರ್ಘ ಕಾಲಾವಧಿಯಲ್ಲಿ ಈ ಭ್ರಷ್ಟರೆಲ್ಲ ನ್ಯಾಯಾಲಯದ ಕೊಠಡಿಯಲ್ಲೋ ಅಥವಾ ಹೇಗೋ ಪಡೆದುಕೊಂಡ ಜಾಮೀನಿನಿಂದಾಗಿಯೋ ಕಾನೂನಿನ ಆಶಯಕ್ಕೆ ಎಳ್ಳಷ್ಟೂ ಒಗ್ಗದೆ ಸೊಕ್ಕಿನಿಂದ ಮೆರೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಅವರ ವೈಭೋಗ, ವಿಲಾಸಗಳಿಗೆ ಇನಿತೂ ಚ್ಯುತಿ ಒದಗುವುದಿಲ್ಲ. ಇದರರ್ಥವೇನೆಂದರೆ ಉತ್ತರದಾಯಿತ್ವಕ್ಕೆ ಉತ್ತರಕ್ರಿಯೆ ಮಾಡಿ ಸಮಾರಾಧನೆಯ ವಿಲಾಸದಲ್ಲಿಯೇ ತಲ್ಲೀನರಾಗಿರುವ ಭ್ರಷ್ಟರಿಗೆ ಕಾನೂನು, ಕಟ್ಟಳೆಗಳೆಂಬುವವು ಬರಿ ಬೆದರು ಬೆಚ್ಚುಗಳಂತಾಗಿವೆ. ಭ್ರಷ್ಟಾಚಾರದ ವಿರುದ್ಧ ಬಾಯ್ಬಡಿಕೊಳ್ಳುವವರನ್ನೇ ಬಡಿದೋ, ಕಡಿದೋ ಬಾಯ್ಮುಚ್ಚಿಸುವ ಹಂಚಿಕೆ, ಸಂಚುಗಳಿಗೂ ಚದುರಂಗವು ಪುಟ ನೀಡುವಂತಿರುವ ಸ್ಥಿತಿಯಲ್ಲಿ ನಿಷ್ಠುರದ ಕಾರ್ಯಾನ್ವಯನಕ್ಕಾಗಿ ಬೇಕಾಗಿರುವ ಇಚ್ಛಾಶಕ್ತಿಯನ್ನು ಹೇಗೆ ಸಂಚಯಗೊಳಿಸುವುದು ? ಸಮಷ್ಟಿಯಲ್ಲಿಯೇ ತೀವ್ರ ಇಚ್ಛಾಶಕ್ತಿ ಪುಟಿದೇಳಬೇಕಾಗಿದೆ, ಅದರ ಸೆಲೆಯು ಚುನಾವಣೆಯ ಕಾಲದಲ್ಲಿಯೇ ಸ್ಫುಟವಾಗಿ ಮೊಳಕೆಯೊಡೆಯಬೇಕಾಗಿದೆ.

ಅನಂತ ಕಲ್ಲೋಳ, 'ರಮಾರಮಣ', ನಂ. ೫೦೬
ಕುಲಕರ್ಣಿ ವೀದಿ, ಬೆಳಗಾವಿ - ೫೯೦ ೦೦೨

* * *

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

ಪ್ರಾಣಿಗಳು ತಮ್ಮ ಹೊಟ್ಟೆ ತುಂಬಿದ ನಂತರ ಯಾರ ತಂಟೆಗೂ ಹೋಗುವುದಿಲ್ಲ. ಆದರೆ ಮನುಷ್ಯನೆಂಬ ಪ್ರಾಣಿ ತಾನು ಸಾಕಷ್ಟು ತಿಂದಿದ್ದರೂ ಮುಂದಿನ ದಿನಕ್ಕೆ ಎಂದು ಕೂಡಿಡಲು ಹೋಗುವುದರಿಂದ ಇಷ್ಟೆಲ್ಲಾ ಅನಾಹುತಗಳಾಗುತ್ತಿವೆ.

ರಾಜ್ಯದ ಬೊಕ್ಕಸಕ್ಕೆ ಕನ್ನ ಹಾಕುವ ಗಣ ದಣಿಗಳನ್ನು ಓಲೈಸಲು ಅವರಿಂದ ಎಂಜಲು ಲಂಚ ಪಡೆದು ಹೊಟ್ಟೆ ಹೊರೆದುಕೊಳ್ಳುವ ಮಂದಿ ಹಲವರಾದರೆ, ಯಾರ ಗಂಟೇನು ಹೋಗುತ್ತದೆ ನಿಸರ್ಗದ ಸಂಪತ್ತನ್ನು ಲೂಟಿ ಮಾಡಿದರೆ ಎನ್ನುವ ಧೋರಣೆಯಿಂದಾಗಿ ಇಂದು ಅತ್ಯಂತ ಸಂಪದ್ಭರಿತವಾದ ದೇಶವಾದರೂ ನಾವು ಮುಂದುವರೆಯಲು ಆಗುತ್ತಿಲ್ಲ.

ಐಟಿ, ಬಿಟಿ, ತಂತ್ರಜ್ಞಾನಗಳ ಕ್ಷೇತ್ರದಲ್ಲೂ ನಾವು ಪರವಾಗಿಲ್ಲ ಎಂಬ ಸಾಧನೆ ಮಾಡಿದ್ದರೂ ಆ ಕ್ಷೇತ್ರಗಳಲ್ಲೂ ನಡೆಯುತ್ತಿರುವ ಭ್ರಷ್ಟಾಚಾರಗಳು ಹೊರಜಗತ್ತಿಗೆ ಅಷ್ಟಾಗಿ ಪರಿಚಯವಾಗಿಲ್ಲ!!

ತನ್ನ ವರಮಾನಕ್ಕೆ ಮಿಗಿಲಾಗಿ ಆಸ್ತಿಯ ಕ್ರೋಢೀಕರಣ ಮಾಡುವ ಪ್ರವೃತ್ತಿಗೆ ಕಡಿವಾಣ ಹಾಕಲು ನಮಗೆ ಸಾಧ್ಯವಾದರೆ, ಆಗ ಭ್ರಷ್ಟಾಚಾರ ಸ್ವಲ್ಪಮಟ್ಟಿಗೆ ಕಡಿಮೆ ಯಾಗುತ್ತದೆ. ಆದರೆ ಈಗಿರುವ ಯಾವುದೇ ಸರಕಾರದಿಂದ ಈ ಕ್ರಮವನ್ನು ನಾವು ನಿರೀಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಸರ್ಕಾರ ನಡೆಸುತ್ತಿರುವ ರಾಜಕಾರಣಿಗಳು ತಮ್ಮ ವರ್ತನೆಯಿಂದ ಜನರ ನಂಬಿಕೆ ಕಳೆದುಕೊಂಡಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಪ್ರಾಮಾಣಿಕರನ್ನು ಆಯ್ಕೆಮಾಡಿ, ಮುಂದಿನ ಸರ್ಕಾರ ಒಳ್ಳೆಯದಾಗಿರಲು ಪ್ರಯತ್ನಿಸಬಹುದು.

ಕೊ. ಸು. ನರಸಿಂಹಮೂರ್ತಿ
೧೦೫೯/೨, ವಿಷ್ಣುವರ್ಧನ ರಸ್ತೆ, ಚಾಮರಾಜಪುರಂ ಮೈಸೂರು - ೫೭೦ ೦೨೩

* * *


ಭ್ರಷ್ಟಾಚಾರವನ್ನು ಮೇಲಿನಿಂದ ಕೆಳಕ್ಕೆ ಅಥವಾ ಕೆಳಗಿನಿಂದ ಮೇಲಕ್ಕೆ ನಿವಾರಿಸಬೇಕೊ ಯಾರಿಗೂ ತಿಳಿಯದ ಸಂಗತಿಯಾಗಿದೆ. ಇದನ್ನು ತೃಣಮೂಲದಿಂದ ಸರಿಪಡಿಸಿಕೊಂಡು ಬಂದರೆ ಹೇಗೆ? ಏಕೆಂದರೆ ಯಾವುದೇ ವೃಕ್ಷ ಎಷ್ಟೇ ಸೊಂಪಾಗಿ ಬೆಳೆದಿದ್ದರೂ ಅದರ ಬೇರಿಗೆ ಬೆಂಕಿ ಹತ್ತಿಸಿದರೆ ಸುಳಿಯವರೆಗೂ ಸುಡುತ್ತದೆ. ಬರಿಯ ರೆಂಬೆಕೊಂಬೆಗಳನ್ನಷ್ಟೇ ಕಡಿದರೆ ಮತ್ತೆ ಹೊಸ ಚಿಗುರುಗಳೂ ಬರಬಹುದು. ಆದ್ದರಿಂದ ಬೇರಿನಿಂದಲೇ ಅದನ್ನು ಕಿತ್ತೊಗೆಯುವ ಕೆಲಸ ಮಾಡಬೇಕು.

ಭ್ರಷ್ಟ ವ್ಯವಸ್ಥೆಗೆ ರೋಸಿದ ಜನ ನಕ್ಸಲೈಟ್‌ಗಳಾಗುವುದು, ಇಲ್ಲವೆ ತಮಗೆ ಯಾರಿಂದ ಅನ್ಯಾಯವಾಗಿದೆಯೊ ಅವರನ್ನು ಕೊಂದು ತಮ್ಮ ಸಿಟ್ಟನ್ನು ತೀರಿಸಿಕೊಳ್ಳುವುದು ಇವೆಲ್ಲವೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರೋಧವಾದವು. ಪ್ರಜಾಪ್ರಭುತ್ವಕ್ಕೆ ಪೂರಕವಾಗಿ ಚಿಂತಿಸುವುದಾದರೆ, ಮೊದಲಿಗೆ ಹದಗೆಟ್ಟಿರುವ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಬೇಕು. ದೇಶಪ್ರೇಮ, ಭಾಷಾಪ್ರೇಮ, ಸ್ವಾಭಿಮಾನ, ಜೀವನಪ್ರೀತಿ ಇದಾವುದನ್ನೂ ಕಲಿಸದ, ಕೇವಲ ಹಣದ ಮೋಹಕ್ಕಾಗಿ ಇಂಗ್ಲಿಷ್ ಮೋಹವನ್ನು ಹುಟ್ಟುಹಾಕಿರುವ ಶಿಕ್ಷಣ ನೀತಿ ಆಮೂಲಾಗ್ರವಾಗಿ ಬದಲಾಗಬೇಕಿದೆ. ನರ್ಸರಿಯಿಂದ ವೃತ್ತಿಶಿಕ್ಷಣಗಳವರೆಗೆ ನಡೆಯುವ ಬಹುತೇಕ ಶಿಕ್ಷಣ ಸಂಸ್ಥೆಗಳು ಐಸಿಎಸ್‌ಇ, ಸಿಬಿಎಸ್‌ಇ ಪಠ್ಯಕ್ರಮಗಳ ಆಧಾರದ ಪ್ರಕಾರದೊಂದಿಗೆ ಇವನ್ನು ರಾಜಕಾರಣಿಗಳೇ ನಡೆಸುತ್ತಿದ್ದಾರೆ. ಇವರಾರೂ ಶಿಕ್ಷಣ ತಜ್ಞರಲ್ಲ. ಮಕ್ಕಳ ಮನೋವಿಕಾಸಕ್ಕೆ ಯಾವ ಭಾಷೆಯಲ್ಲಿ ಏನನ್ನು ಕಲಿಸಬೇಕು ಎಂದು ವೈಜ್ಞಾನಿಕವಾಗಿ ಚಿಂತನೆ ನಡೆಸಿದವರಲ್ಲಿ, ಪೋಷಕರಲ್ಲಿ ಶಿಕ್ಷಣದ ಬಗೆಗೆ ತುಂಬಿರುವ ಗೊಂದಲವನ್ನು ಹಣಮಾಡಿಕೊಳ್ಳುವ ಧಂಧೆಯಾಗಿ ರೂಪಾಂತರ ಮಾಡಿಕೊಳ್ಳಲಾಗಿದೆ. ಇದೇ ಜನರು ಸರ್ಕಾರದಲ್ಲಿರುವುದರಿಂದ, ಸರ್ಕಾರಿ ಶಾಲೆಗಳನ್ನು ಮುಚ್ಚಿ ಅಲ್ಲಿನ ಮಕ್ಕಳನ್ನು ತಮ್ಮೆಡೆಗೆ ಸೆಳೆಯುವ ಹುನ್ನಾರ, ಇದಕ್ಕೆ ತಕ್ಕ ಪಾಠವೆಂದರೆ ಜನಸಾಮಾನ್ಯರು ಹೊಸ ಚಿಂತನೆಗಳನ್ನು ನಡೆಸಿ – ಇಂಥ ಖಾಸಗಿ ಶಿಕ್ಷಣ ಪೋಷಿಸದೆ – ಸರ್ಕಾರಿ ಶಾಲೆಗಳ ಕಡೆ ಮುಖ ತಿರುಗಿಸಿದರೆ, ಸರ್ಕಾರಿ ಶಾಲೆಗಳು ಬಡವ, ಶ್ರೀಮಂತರೆನ್ನದೆ ಎಲ್ಲರನ್ನೂ ಆಕರ್ಷಿಸಿದರೆ ಸಮಾನತೆಯ ಶಿಕ್ಷಣ ದೊರೆತೀತು.

ಎರಡನೆಯದಾಗಿ ಚುನಾವಣೆಗಳು : ಇಂದು ಚುನಾವಣೆಗೆ ದುಡ್ಡಿದ್ದವರು ಮಾತ್ರ ನಿಲ್ಲುವುದು ಸಾಧ್ಯ ಎಂಬಂತಾಗಿದೆ. ಮೊದಲು ನಿಜವಾದ ಸಮಾಜ ಸೇವಕರು, ಊರಿಗೆ, ಹಳ್ಳಿಗೆ, ಜನರಿಗೆ ಏನಾಗಬೇಕೆಂದು ಯೋಚಿಸುವ ನಾಯಕರು, ಚುನಾವಣೆಗೆ ನಿಲ್ಲುತ್ತಿದ್ದರು. ಈಗ ಹಣ, ಕುತಂತ್ರ ಇದ್ದವರು (ಇದಕ್ಕೆ ರಣತಂತ್ರವೆಂದು ಹೆಸರು ಕೊಟ್ಟಿದ್ದಾರೆ) ಚುನಾವಣೆಗೆ ನಿಲ್ಲಬೇಕಾಗಿದೆ. ಈ ವ್ಯವಸ್ಥೆಯನ್ನು ಸದೆಬಡಿಯುವುದು ಜನಸಾಮಾನ್ಯ ಮತದಾರರಿಗೆ ಕಷ್ಟವೇನಲ್ಲ. ಆದರೆ ಆಮಿಷಗಳಿಗೆ ಒಳಗಾಗುವ, ಪ್ರಲೋಭನೆಗಳಿಗೆ ಬಲಿ ಬೀಳುವ ಮತದಾರರ ದೌರ್ಬಲ್ಯ ಅಧಿಕಾರದಾಹಿ, ಹಣದಾಹಿ ರಾಜಕಾರಣಕ್ಕೆ ನಾಂದಿಯಾಗಿದೆ. ಒಂದು ವೋಟಿಗೆ ೧೦ ರೂಪಾಯಿನಿಂದ ಒಂದು ಸಾವಿರದವರೆಗೆ ಪಡೆಯುವ ಮತದಾರ, ಕೆಲವೊಮ್ಮೆ ಒಂದು ಸೀರೆ, ಪಂಚೆ, ಇಲ್ಲವೆ ಒಂದೇ ಮನೆಯಲ್ಲಿ ಹತ್ತಾರು ಮತಗಳಿದ್ದಲ್ಲಿ ಒಂದು ಟಿ.ವಿ., ಅಂದಿನ ದಾಹ ತಣಿಸುವ ಹೆಂಡ, ಹಣಕ್ಕೆ ಸೋಲುವ ಮತದಾರನ ಮನಸ್ಥಿತಿಯನ್ನು ಅರ್ಥಮಾಡಿಕೊಂಡ ರಾಜಕಾರಣಿಗಳು 'ಜನಸೇವಕ' ಎಂದು ಹೇಳಿಕೊಂಡು ಜನರನ್ನೇ ಸೇವಕರನ್ನಾಗಿ ಮಾಡಿಕೊಳ್ಳುತ್ತಾರೆ. ಮಹಿಳೆಯರೂ ಇದಕ್ಕೆ ಹೊರತಾಗಿಲ್ಲ. ಒಂದು ಸೀರೆಗೋ, ನೂರಿನ್ನೂರು ರೂಪಾಯಿಗಳಿಗೋ ಮಣಿಯುತ್ತಾರೆ. ಸಂಘಗಳು ಒಂದು ಸಾವಿರದಿಂದ ಹತ್ತಿಪ್ಪತ್ತು ಸಾವಿರಗಳಿಗೆ ತಮ್ಮ ಮತಗಳನ್ನು ಮಾರಿಕೊಳ್ಳುತ್ತಿವೆ. ಇದೆಲ್ಲ ತಪ್ಪಿ ಸ್ವಾಭಿಮಾನದ ಮತದಾರರು ಸೃಷ್ಟಿಯಾದರೆ ಮಾನವಂತರು ಚುನಾಯಿತರಾಗಿ ಭ್ರಷ್ಟಾಚಾರ ತಡೆಯಬಹುದೇನೊ.

ಮೂರನೆಯದಾಗಿ ಉದ್ಯೋಗ ನೇಮಕಾತಿಯಲ್ಲಿ ನಡೆಯುವ ಭ್ರಷ್ಟಾಚಾರ : ಇದರಲ್ಲಿ ಹುದ್ದೆಗಳು ಏರಿದಂತೆ ಲಕ್ಷಗಳೂ ಏರುತ್ತವೆ. ಇದೆಲ್ಲ ಅವರಿಗೆ ಐಷಾರಾಮಿ ಜೀವನಕ್ಕೊ, ಚುನಾವಣೆ ವೆಚ್ಚಕ್ಕೊ ಪಕ್ಷ ಸಂಘಟನೆಗೊ ಬೇಕಾಗುತ್ತದೆ. ಹೀಗೆ ಲಂಚ ತೆತ್ತು ಉದ್ಯೋಗ ಪಡೆದವರದು ಅದರ ಹತ್ತಿಪ್ಪತ್ತು ಪಟ್ಟು ಅಕ್ರಮವಾಗಿ ದುಡಿಯುವ ಕಡೆಗೆ ಗಮನ. ಲಂಚ ಪಡೆದವರು ಅದನ್ನು ತಡೆಯುವ ತಂಟೆಗೆ ಹೋಗುವುದಿಲ್ಲ. ಒಬ್ಬ ಪೊಲೀಸ್ ಅಧಿಕಾರಿ ಒಂದು ಜಾಗದಿಂದ ಆಯಕಟ್ಟಿನ ಜಾಗಕ್ಕೆ ವರ್ಗಾವಣೆಯಾಗಬೇಕಾದರೆ ಹತ್ತಾರು ಲಕ್ಷ ಲಂಚ ತೆತ್ತಿರುತ್ತಾನೆ. ಮುಂದಿನ ವರ್ಗಾವಣೆಯ ಹೊತ್ತಿಗೆ ಇನ್ನಷ್ಟು ಲಕ್ಷಗಳನ್ನು ಸಂಪಾದಿಸಬೇಕು. ಇಂಥವರಿಂದ ಸಮಾಜದಲ್ಲಿ ನ್ಯಾಯವೆಲ್ಲಿ ಸಿಗುತ್ತದೆ? ಹಾಗಾಗಿ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿಯೂ ಸೇರಿದಂತೆ ಅರ್ಹತೆಯ ಆಧಾರದಲ್ಲಿ ಪಾರದರ್ಶಕವಾಗಿ ನಡೆದರೆ – ಲಂಚ, ಜಾತಿ, ಸ್ವಜನ ಇವೆಲ್ಲ ಬಿಟ್ಟು – ಭ್ರಷ್ಟಾಚಾರವನ್ನು ನಿಗ್ರಹಿಸಬಹುದು.

ಇದರ ಜೊತೆಗೆ ಅಕ್ರಮ ಆಸ್ತಿ ಸಂಪಾದನೆ ಇವುಗಳ ಬಗ್ಗೆಯೂ ಕಾನೂನು ಬಿಗಿಯಾದರೆ ಭ್ರಷ್ಟಾಚಾರ ನಿಗ್ರಹಿಸಬಹುದೇನೊ.



ಕೆ. ಎಸ್. ಪ್ರಭಾ, [illegible]

• • •

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

'ಸಾರ್ವಜನಿಕ ವ್ಯಕ್ತಿಗಳು' ಎಂದು ಕರೆಯಬಹುದಾದ ರಾಜಕಾರಣಿಗಳು, ಮಠಾಧೀಶರು, ನ್ಯಾಯಾಧೀಶರುಗಳು, ಅಧಿಕಾರಶಾಹಿ ವರ್ಗ ಹಾಗೂ ಮಾಧ್ಯಮಗಳು – ತಮ್ಮ ನೈಜ ಕಾರ್ಯನಿಷ್ಠೆ ಮತ್ತು ಸೇವಾ ಪರ ಮೌಲ್ಯಗಳಿಗೆ ಅಪಚಾರವೆಸಗದೆಯೇ ಸರಿದಾರಿಯಲ್ಲಿ ಆದರ್ಶನೀಯ, ಸಮತೋಲಿತ ಹಾಗೂ ನೈತಿಕ ಪರಿಶುದ್ಧತೆಯ ಅನುಕರಣೀಯತೆಯೊಂದಿಗೆ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುವುದರಿಂದ ಭ್ರಷ್ಟಾಚಾರಕ್ಕೆ ಆಸ್ಪದವಾಗಲಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಮೊಳಕೆ ಚಿಗುರೊಡೆಯುವುದು ಚುನಾವಣೆಗಳಲ್ಲಿ. ಹಣ-ಹೆಂಡ ಮುಂತಾದ ಆಮಿಷಗಳನ್ನೊಡ್ಡಿ ಮತದಾರರನ್ನು ಖರೀದಿಸುವ ಕೆಟ್ಟ ಪರಂಪರೆ ಮುಂದುವರಿಯದಂತೆ ಎಚ್ಚರ ವಹಿಸಬೇಕು. ನ್ಯಾಯ, ನಿಷ್ಪಕ್ಷಪಾತ ಹಾಗೂ ಕಳಂಕ ರಹಿತ ರೀತಿಯಲ್ಲಿ ಚುನಾವಣೆಗಳು ನಡೆದು ಯೋಗ್ಯ ಪ್ರಜಾಪ್ರತಿನಿಧಿಯ ಆಯ್ಕೆ ಸುಸೂತ್ರವಾಗಿ ನಡೆಯಲು ಚುನಾವಣಾ ಪದ್ಧತಿಯಲ್ಲಿ ಅವಶ್ಯಕವಾದ ಮಾರ್ಪಾಡುಗಳನ್ನು ಚುನಾವಣಾ ಆಯೋಗ ತರುವುದು ಉಚಿತವಾದುದಾಗಿದೆ.

ಆದಾಯ ಗಳಿಕೆಗೆ ಮೀರಿ ಸಂಗ್ರಹಿಸಲಾದ ಕಾನೂನುಬಾಹಿರ ಹಣ, ಆಸ್ತಿ ಮತ್ತಿತರ ಸಂಪನ್ಮೂಲಗಳನ್ನು 'ರಾಷ್ಟ್ರೀಯ ಸಂಪನ್ಮೂಲ'ವನ್ನಾಗಿ ಮುಟ್ಟುಗೋಲು ಹಾಕುವಂತಿರಬೇಕು. ಭ್ರಷ್ಟಾಚಾರ ಸಂಬಂಧಿ ಕೇಸುಗಳ ವಿಚಾರಣೆ, ತನಿಖೆ ಹಾಗೂ ಕ್ರಮಕೈಗೊಳ್ಳುವ ಅಧಿಕಾರವನ್ನು ನೀಡಿ ಲೋಕಾಯುಕ್ತ ಸಂಸ್ಥೆಯನ್ನು ಸಶಕ್ತಗೊಳಿಸಬೇಕು.

ಇತ್ತೀಚೆಗೆ ಕಂಡುಬರುತ್ತಿರುವ 'ವೃತ್ತಿ ರಾಜಕಾರಣ' ಅತ್ಯಂತ ನೇರ ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿ: ಬಂಡವಾಳವನ್ನು ತೊಡಗಿಸಿ ಲಾಭ ಮಾಡುವ ಉದ್ಯಮಶೀಲತೆಯಂತಹ ರಾಜಕಾರಣ ನೇರವಾಗಿ ಸಾಮಾಜಿಕ ನ್ಯಾಯವನ್ನು ಶಿಥಿಲಗೊಳಿಸಿ 'ಪ್ರಜಾಪ್ರಭುತ್ವ' ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಆತಂಕವಿದೆ. ಉಳ್ಳವರು-ಉಳ್ಳದೇ ಇರುವವರ ನಡುವಿನ ಕಂದಕ ಮತ್ತಷ್ಟು ಹಿಗ್ಗಿಸುತ್ತದೆ. ಅದರಿಂದಾಗಿ ಅಭ್ಯರ್ಥಿಗಳ ಚುನಾವಣಾ ವೆಚ್ಚ, ಸಾಮಗ್ರಿ ಮತ್ತಿತರ ಖರ್ಚುಗಳನ್ನು ಸರಳವಾಗಿ ವಿನಿಯೋಗಿಸಿ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸುವ ಮೂಲಕ ಭ್ರಷ್ಟಾಚಾರವನ್ನು ಚಿವುಟಿಹಾಕಬಹುದು.

ಮತದಾನವನ್ನು ಬಹಿಷ್ಕರಿಸುವುದು, ಅದೊಂದು ರಜಾ ದಿನವಾಗಿ ಆಚರಿಸುತ್ತಾ ಸಾರ್ವತ್ರಿಕ ಚುನಾವಣೆಗಳಿಂದ ವಿದ್ಯಾವಂತ ಯುವಜನಾಂಗ ದೂರವಿರುವ ಅಪಾಯಕಾರಿ ಫ್ಯಾಶನ್ ಇತ್ತೀಚೆಗೆ ಹೆಚ್ಚಾಗುತ್ತಿದೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದರೆ ಅದರ ಎಲ್ಲಾ ಅರ್ಹ ಪ್ರಜೆಗಳು ತನ್ನ ಪ್ರತಿನಿಧಿಯ ಆಯ್ಕೆಯಲ್ಲಿ ನೇರವಾಗಿ ಪಾಲ್ಗೊಳ್ಳುವಂತಾಗಬೇಕು. ಸಾರ್ವಜನಿಕ ರಜೆ, ಸಾರ್ವಜನಿಕ ಸೇವಾ ಸೌಲಭ್ಯಗಳ ನಿರಂತರ ಉಪಯೋಗಕ್ಕೆ ಮಾತ್ರ ಸೀಮಿತವಾಗದೆ 'ಮತದಾನ'ವನ್ನು ಕೂಡ ಒಂದು ಕಡ್ಡಾಯ ಮತ್ತು ಗುರುತರ ಕಾರ್ಯವಾಗಿ ಪರಿಗಣಿಸುವ ಅಗತ್ಯವಿದೆ. ಇದರಿಂದಾಗಿ ಆಮಿಷ ಒಡ್ಡುವ ಪ್ರವೃತ್ತಿ ಕಡಿಮೆಯಾಗುತ್ತದೆ. ಪ್ರಜಾಪ್ರತಿನಿಧಿ – 'ಸೇವಕನೇ ಹೊರತು ನಾಯಕನಲ್ಲ' ಎಂಬುದು ಪ್ರಜೆಗಳ ಅವಗಾಹನೆಗೆ ಬರಬೇಕು.

ಭ್ರಷ್ಟಾಚಾರದಿಂದಲೇ ಆಯ್ಕೆಯಾದ ರಾಜಕಾರಣಿ ಭ್ರಷ್ಟಾಚಾರವನ್ನಲ್ಲದೆ ಇನ್ನೇನು ಮಾಡಲು ಸಾಧ್ಯ. ಅದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತಾಗಲು ಜನಪ್ರತಿನಿಧಿಯನ್ನು ಆರಿಸಿದ ಪ್ರಜೆಗಳು ಪುನಃ ಹಿಂಪಡೆಯುವ ಅಥವಾ ವಾಪಸ್ ಕರೆಸಿಕೊಳ್ಳುವ ಅಧಿಕಾರವೂ ಇರಬೇಕು. ಜನತಾ ಉತ್ತರದಾಯಿತ್ವ ಭ್ರಷ್ಟಾಚಾರ ನಿರ್ಮೂಲನಕ್ಕೆ ಸಹಕಾರಿ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಅಥವಾ ಈಗ ಇರುವ ಯಾವುದೇ ಕಾಯ್ದೆ-ಕಾನೂನುಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಇವುಗಳನ್ನು ಸಮರ್ಥವಾಗಿ ಮೇಲ್ವಿಚಾರಣೆ ಮಾಡಬಲ್ಲ ಯಾವುದೇ ಸರ್ವಸಮ್ಮತ, ಕಾನೂನುಬದ್ಧ ಸಂಸ್ಥೆಯೊಂದರ ಅಗತ್ಯವಿದ್ದು, ಅದು ತಳಮಟ್ಟದ ನೌಕರ ವರ್ಗದಿಂದ ಹಿಡಿದು ಸಮಾಜದ ಎಲ್ಲಾ ಹಂತಗಳಲ್ಲಿನ ಭ್ರಷ್ಟಾಚಾರವನ್ನು ಕುರಿತ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು. ಸಾರ್ವಜನಿಕ ಸೇವೆಯಲ್ಲಿರುವ ಯಾವುದೇ ಅಧಿಕಾರಿ ಅಥವಾ ನೌಕರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ ಲಂಚಬಾಕತನಕ್ಕೆ ಒಳಗಾದಲ್ಲಿ ಆತನನ್ನು ಕಠಿಣ ಶಿಕ್ಷೆಗೊಳಪಡಿಸುವ ಯೋಗ್ಯ ಕಾನೂನು, ಸಂಸ್ಥೆ ಅವಶ್ಯ.

ಹೊಸಕೊಪ್ಪ ಶ್ರೀಧರ, ದೇಮ್ಲಾಪುರ ಅಂಚೆ, ತೀರ್ಥಹಳ್ಳಿ ತಾಲೂಕು - ೫೭೭ ೪೩೨, ಶಿವಮೊಗ್ಗ ಜಿಲ್ಲೆ

* * *

ಅಧಿಕಾರಶಾಹಿ ಪ್ರಭುತ್ವ, ಪ್ರತಿನಿಧಿಗಳ ಪ್ರಭುತ್ವ, ಜಾಗತೀಕರಣದ ಪ್ರಭಾವ, ಧಾರ್ಮಿಕ ವಿಭಜನೆ, ರಾಜಕೀಯ ವ್ಯಕ್ತಿಗಳ ನಾನಾ ಹಗರಣಗಳು, ಧರ್ಮಗಳಲ್ಲಿ ಆಂತರಿಕ ಒಳಮುಸುಕಿನ ಗುದ್ದಾಟ ಇವೆಲ್ಲ ಈಗ ಸಾಮಾನ್ಯ. ಇವುಗಳಲ್ಲಿ ನೈತಿಕತೆಯನ್ನು ಹುಡುಕಬೇಕಾಗಿದೆ!

ಈಗಿನ ಸಂದರ್ಭಗಳಲ್ಲಿ ನಿರ್ಣಯ ತೆಗೆದುಕೊಳ್ಳುವುದರಲ್ಲಿ ಹಲವು ನಾಯಕರನ್ನು ಗುರುತಿಸಬಹುದು. ಕೆಲವರು 'ಭಯ'ದಿಂದ ಕಠಿಣ ನಿರ್ಣಯ ತೆಗೆದುಕೊಳ್ಳುವುದಿಲ್ಲ, ಕೆಲವರು 'ದಾಕ್ಷಿಣ್ಯ'ದಿಂದ ತಾವು ತೆಗೆದುಕೊಳ್ಳುವ ನಿರ್ಧಾರದಿಂದ ಬೇಸರ ಆಗುವುದೆಂದು ಭಾವಿಸುವರು. ಕೆಲವರು ಬೇರೆಯವರನ್ನು 'ಮೆಚ್ಚಿಸಲು' ನಿರ್ಣಯ ತೆಗೆದುಕೊಳ್ಳುವರು. ಏಕೆಂದರೆ, ಬೇರೆಯವರನ್ನು ಎದುರುಹಾಕಿಕೊಳ್ಳುವ 'ಎದೆಗಾರಿಕೆ' ಅವರಲ್ಲಿ ಇರುವುದಿಲ್ಲ, ಕೆಲವರು ನಿರ್ಧಾರ ತೆಗೆದುಕೊಂಡರೆ 'ತಮಗೆ ಎಲ್ಲಿ ಆ ನಿರ್ಣಯ ತಿರುಗಿಬೀಳುವುದೋ' ಎಂಬ ಭಯದಲ್ಲಿರುತ್ತಾರೆ.

ಕೆಲವರು ದಿಟ್ಟತನದಿಂದ ನಿರ್ಧಾರ ತೆಗೆದುಕೊಳ್ಳುವರು. ತಮಗನಿಸಿದ್ದನ್ನು ಯಾರ ಮುಲಾಜೂ ಇಲ್ಲದೆ ಯಾರೇ ಹಳಿಯಲಿ, ಹೊಗಳಲಿ ನಿರ್ಣಯ ತೆಗೆದುಕೊಳ್ಳುವವನೇ ನಿಜವಾದ ನಾಯಕ. ಇಂಥವನು ತನ್ನ ಅಧಿಕಾರದ ಅಳಿವು-ಉಳಿವು ಬಗ್ಗೆ ಚಿಂತಿಸಲಾರ. ಅಷ್ಟೇ ಏಕೆ, ತನ್ನ ಅಸ್ತಿತ್ವದ ಬಗ್ಗೆ ಸಹ ಯೋಚಿಸಲಾರ. ಅಮೃತಸರದ ಸ್ವರ್ಣಮಂದಿರದ ಸುತ್ತುವರಿದ ಭಿಂದ್ರನ್‌ವಾಲೆ ಗುಂಪಿನ ವಿರುದ್ಧ ಇಂದಿರಾ ಗಾಂಧಿ ಸ್ಪಷ್ಟ ನಿರ್ಣಯ ತೆಗೆದುಕೊಂಡು ಅವರಿಂದಲೇ ಹತ್ಯೆಯಾದದ್ದು ಇತಿಹಾಸ.

ಅನೈತಿಕ ಸಂಪತ್ತನ್ನು ಹೊಂದುವುದೇ ಲಂಚ. ಲಂಚಕ್ಕೆ ಒಳಗಾಗದ ಅಧಿಕಾರಿವರ್ಗ, ರಾಜಕಾರಣಿ, ಪ್ರತಿನಿಧಿ ಇಲ್ಲವೇ ಇಲ್ಲವೆನ್ನಬಹುದು. ಲಂಚ ನೈತಿಕ ಹಕ್ಕು ಈಗಿನ ಯುಗದಲ್ಲಿ "ಈಗ ದುಡ್ಡು ಇದ್ದರೆ ಸಾಕು, ಆ ದುಡ್ಡು ಹೇಗೆ ಬಂದುದು ಎಂಬುದು ಮುಖ್ಯವಲ್ಲ" ಎನ್ನುವ ಮನೋಭಾವ ಈಗ ಬೆಳೆದುಬಂದಿದೆ. ಲಂಚದ ವ್ಯಾಪಕರೂಪ 'ಭ್ರಷ್ಟಾಚಾರ.' ಇದರಲ್ಲಿ ಸ್ವಾರ್ಥ ಇದೆ. ಜೀವನದಲ್ಲಿ ಭ್ರೂಣದಿಂದ ಸ್ಮಶಾನದವರೆಗೆ ಭ್ರಷ್ಟಾಚಾರ ವ್ಯಾಪಿಸಿದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ "ನೀರಿನಲ್ಲಿರುವ ಮೀನು ಎಷ್ಟು ನೀರು ಕುಡಿದಿದೆ ಎಂದು ಹೇಳುವುದು ಹೇಗೆ ಕಷ್ಟಸಾಧ್ಯವೋ ಅಷ್ಟೇ ಕಷ್ಟಸಾಧ್ಯ ಭ್ರಷ್ಟಾಚಾರದ ಅಳತೆ" ಎಂದಿದ್ದಾನೆ. ಆಗಿನ ೩೦೦೦ ಕೋಟಿಯ ಹರ್ಷದ್ ಮೆಹ್ತಾ ಹಗರಣದಿಂದ ಈಗ ೧ ಲಕ್ಷದ ೭೬ ಸಾವಿರ ಕೋಟಿಯ ತರಂಗಾಂತರ ಹಗರಣಕ್ಕೆ ತಲುಪಿದೆ. ಜಗತ್ತಿನ ೧೭೮ ಅತಿಭ್ರಷ್ಟ ರಾಷ್ಟ್ರಗಳಲ್ಲಿ ನಮ್ಮ ದೇಶದ ಸ್ಥಾನ ೮೭. ವಿಶ್ವದಲ್ಲಿ ಭಾರತದ ಸ್ಥಾನ ೫೪. ೨೦೦೯ರಲ್ಲಿ ಪ್ರಾಮಾಣಿಕತೆ ಮಟ್ಟ ೧೦೦ಕ್ಕೆ ೩೫ ಇದ್ದರೆ ಈಗ ೩ ಪ್ರತಿಶತ ಆಗಿದೆ.

ಲಂಚ ಎಂಬುದು ಇಂದು ನಿನ್ನೆಯದಲ್ಲ. ೧೨ನೇ ಶತಮಾನದಲ್ಲಿ ಹರಿಹರ ತನ್ನ 'ರಗಳೆ'ಯಲ್ಲಿ ಅಕ್ಕಮಹಾದೇವಿ ಪ್ರಸಂಗದಲ್ಲಿ

"ಕಲುಮಠದ ರಾಜಗುರುಗಳಿಗೆ ಹೊನ್ನು ಈವುತಂ
ಹುಲುಮಠದ ಮುಖ್ಯರ್ಗೆ ಲಂಚಮಂ ಈವುತಂ
ಸಾರ್ದ ಶರಣರ್ಗಿತ್ತು ಕುಟಿಲವಂ ಮಾಡುತಂ
ಭಿನ್ನೈಸಿದಂ ಕೌಶಿಕಂ ನಿಂದು ಮೈಯಿಕ್ಕಿ" ಎಂದಿದ್ದಾನೆ.

ಭ್ರಷ್ಟಾಚಾರದ ನಿರ್ಮೂಲನಕ್ಕೆ ನಿರ್ದಿಷ್ಟ ಸೂಚನೆಗಳು

ಅಕ್ಕಮಹಾದೇವಿ ಶ್ರೀಶೈಲಕ್ಕೆ ಬಂದಾಗ ಕೌಶಿಕನು ಅಲ್ಲಿಗೆ ಬರುತ್ತಾನೆ. ಅಲ್ಲಿರುವ ಮಠದ ಗುರುಗಳಿಗೆ ''ನಾನು ಭವಿ ಎಂದು ಅಕ್ಕನು ನನ್ನನ್ನು ತ್ಯಜಿಸಿದಳು. ಈಗ ಭಕ್ತನಾಗಿರುವೆ. ನಮ್ಮನ್ನು ಒಂದುಗೂಡಿಸಿ'' ಎಂದು ಕಲುಮಠದ ರಾಜಗುರುಗಳಿಗೆ ಹೊನ್ನನ್ನೂ, ಇನ್ನೊಂದು ಮಠದ ಗುರುಗಳಿಗೆ ಲಂಚದ ರೂಪದಲ್ಲಿ ಹೊನ್ನನ್ನೂ ಕೊಟ್ಟನು. ಆಗ ಅವರು 'ಇದು ನಿನ್ನವಳಲ್ಲ' ಎನ್ನುತ್ತಾರೆ.

ಕ್ರಿ. ಶ. ೧೪೩೦ರಲ್ಲಿದ್ದ ಕುಮಾರವ್ಯಾಸ ತನ್ನ ಕರ್ನಾಟ ಭಾರತ ಕಥಾಮಂಜರಿಯಲ್ಲಿ ಕೌರವನ ಆಸ್ಥಾನದಲ್ಲಿಯ ಲಂಚದ ರೂಪವನ್ನು

ಬರೆದ ಬಳಿಕದು ವಿಧಿಯ ಸೀಮೆಯ
ಬರಹ ನಿಜಕಾರ್ಯಾರ್ಥ ಲಾಭವು
ದೊರಕಿದೊಡೆ ಪತಿಯರ್ಥ ನೀರಲಿ ಬರೆದ ಲಿಪಿಯಂತೆ।
ಕರಗುಪಿತ ಲೋಲುಪರು ಲಂಚದ
ಪರಮ ಜೀವನ ಜಾಣರಾ ಸಿರಿ
ಕರಣದವರೊಪ್ಪಿದರು ಭೂಪಾಲಕನ ಸಭೆಯೊಳಗೆ ॥

ಆ ಆಸ್ಥಾನದಲ್ಲಿರುವ ಕರಣಿಕರು ಬರೆದ ಬಳಿಕ ಅದು ವಿಧಿ ಬರಹದಂತೆ ಅಳಿಸಲಾರದ್ದು. ಆದರೆ, ನಿಜಕಾರ್ಯ ಲಾಭ ಎಂದರೆ ಕೆಲಸವಾಗಬೇಕಾದಲ್ಲಿ ದುಡ್ಡಿನ ಲಾಭ ದೊರಕೀತು ಎಂದಾದರೆ, ಆಗ ವಿಧಿಲಿಖಿತ ಎಂದದ್ದು ನೀರಿನಲ್ಲಿ ಬರೆದ ಅಕ್ಷರದಂತೆ ಕಾಣದ ಹಾಗೆ ಮಾಯ ಮಾಡಬಲ್ಲರು. ಲಂಚದಿಂದ ಹೇಗೆ ಬೇಕಾದರೂ ತಿರುಗಿಸಬಲ್ಲರು. 'ಕರಗುಪಿತ ಲೋಲುಪರು' ಎಂದರೆ ಅಧಿಕಾರ ಚಲಾವಣೆಯಲ್ಲಿ ಕಠಿಣದಂತೆ ಕಾಣುವ ಅವರು ಲಂಚ ಸಿಕ್ಕಿದ ಕೂಡಲೆ ಕರಗುತ್ತಾರೆ. ಅವರು ನೈತಿಕ ನಿಯಮದವರಲ್ಲ, ಅವರು ಲೋಲುಪರು.

ನಾಲ್ಕು ದಶಕಗಳಿಂದ ನಿದ್ರಾವಸ್ಥೆಯಲ್ಲಿರುವ ಲೋಕಪಾಲ ಮಸೂದೆ ಇನ್ನೂ ಅಂಗೀಕಾರ ಪಡೆಯುವ ಭಾಗ್ಯ ಹೊಂದಿಲ್ಲ. ''ಪ್ರಾಮಾಣಿಕ ಹೃದಯದ, ಸರ್ವಸಂಗ ಪರಿತ್ಯಾಗದ, ಆತ್ಮಾರ್ಪಣೆಯ, ಮನೋದಾರ್ಢ್ಯದ ಹನ್ನೆರಡು ಜನ ಸಿಕ್ಕರೆ ಈ ಪ್ರಪಂಚ ಬದಲಿಸುವೆ'' ಎಂಬ ವಿವೇಕಾನಂದರ ಮಾತು ಅಣ್ಣಾ ಹಜಾರೆಯವರ ಚಳುವಳಿಗೆ ಸ್ಫೂರ್ತಿ ಎನ್ನಬಹುದು. ಆತ್ಮಾಭಿಮಾನದ, ಆತ್ಮಸ್ಥೈರ್ಯದ ಯುವಶಕ್ತಿ ಜಾಗೃತವಾಗುವುದು ಅವಶ್ಯಕವಾಗಿದೆ.

ಯು. ಎನ್. ಸಂಗನಾಳಮಠ, 'ಜ್ಯೋತಿರ್ಲಿಂಗ', ೧ನೇ ತಿರುವು
ಹೈಸ್ಕೂಲ್ ಬಡಾವಣೆ, ಹೊನ್ನಾಳಿ - ೫೭೭ ೨೧೭, ದಾವಣಗೆರೆ ಜಿಲ್ಲೆ

* * *

ಸಾರ್ವಜನಿಕ ಕಛೇರಿಯಲ್ಲಿನ ಭ್ರಷ್ಟಾಚಾರವು ಜನರಿಗೆ ಸೌಲಭ್ಯಗಳನ್ನು ಪಡೆಯುವಲ್ಲಿ ತೊಂದರೆಯಾಗಿ, ಇದರಿಂದ ಹತಾಶೆಯ ಮನೋಭಾವ ತಾಳುವಂತಹ ಸ್ಥಿತಿಯು ನಿರ್ಮಾಣವಾಗಿದೆ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಕೆಳಹಂತದ ನೌಕರರ ಅತಿ ಆಸೆ ಮತ್ತು ಕಡಿಮೆ ವೇತನಗಳು, ಹಾಗೆಯೇ ತಮಗಿಂತ ಹಿರಿಯ ಅಧಿಕಾರಿಗಳ ಜೀವನ ಶೈಲಿಯಿಂದ ಪ್ರಭಾವಕ್ಕೊಳಗಾಗಿ ಭ್ರಷ್ಟಾಚಾರದಲ್ಲಿ ತೊಡಗುವವರ ಪ್ರಮಾಣವೇ ಹೆಚ್ಚು. ಆದ್ದರಿಂದ ಭ್ರಷ್ಟಾಚಾರ ತಡೆಯುವಲ್ಲಿ ವೇತನವೂ ಖಾಸಗಿ ವಲಯಗಳಲ್ಲಿನ ವೇತನಕ್ಕೆ ಸರಿಸಮನಾಗಿದ್ದರೆ, ತನ್ಮೂಲಕ ಸರ್ಕಾರಿ ನೌಕರರಿಗೆ ಇತರ ವಲಯಗಳಲ್ಲಿನ ಉದ್ಯೋಗಕ್ಕಿಂತ ಸರ್ಕಾರಿ ಉದ್ಯೋಗವು ಕಡಿಮೆಯಿಲ್ಲ ಎಂಬ ಅರಿವು ಮೂಡಿಸಬೇಕು. ಅಷ್ಟೇ ಅಲ್ಲದೆ ಸಾರ್ವಜನಿಕ ಸೇವೆಯ ಮಹತ್ವವನ್ನು ತಿಳಿಸಿ, ಅಧಿಕಾರಿಗಳಲ್ಲಿ ನೈತಿಕತೆಯನ್ನು ಬೆಳೆಸಬೇಕು.

ಅಭಿವೃದ್ಧಿ ಯೋಜನೆಗಳಲ್ಲಿನ ಭ್ರಷ್ಟಾಚಾರವು ಒಂದು ಮಹಾಸಾಗರದಂತೆ ಆದಿ-ಅಂತ್ಯವೇ ಇಲ್ಲದಂತೆ ಆಗಿದೆ. ದೇಶದಲ್ಲಿ ಜಾರಿಗೆ ಬರುವ ಎಲ್ಲ ಯೋಜನೆಗಳೂ ಇದಕ್ಕೆ ಹೊರತಾಗಿಲ್ಲ. ನಾನಾಯೋಜನೆಗಳ ಹೆಸರಿನಲ್ಲಿ ನೀರಿನಂತೆ ಹರಿದುಬರುವ ದೇಶದ ಜನರ ತೆರಿಗೆ ಮತ್ತು ಸಾಲದ ಹಣವು ಅಧಿಕಾರಿಗಳ ಮತ್ತು ರಾಜಕಾರಣಿಗಳ ಮನೆ ಮತ್ತು ಸ್ವಿಸ್ ಬ್ಯಾಂಕಿನ ಖಾತೆಗಳಲ್ಲಿ ಜಮೆ ಆಗುತ್ತಿರುವುದು ದುರದೃಷ್ಟಕರ.

ಭ್ರಷ್ಟಾಚಾರ ಸಂಬಂಧ ದಾಖಲಾದ ದೂರುಗಳ ಶೀಘ್ರ ವಿಲೇವಾರಿ ನಡೆಸಿ ತಪ್ಪಿತಸ್ಥರಿಗೆ ಕಠಿಣ ಸಜೆಯನ್ನು ನೀಡಿ, ಭ್ರಷ್ಟಾಚಾರ ನಡೆಸಿ ಸಂಪಾದನೆ ಮಾಡಿದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು. ಇಂತಹ ಆಸ್ತಿ ಪಾಸ್ತಿಗಳನ್ನು ಆಸ್ಪತ್ರೆ, ಶಾಲೆಗಳಂತಹ ಸಾರ್ವಜನಿಕವಾದ ಕಾರ್ಯಗಳಿಗೆ ನೀಡಬೇಕು. ಹೀಗೆ ಮಾಡಿದ್ದೇ ಆದಲ್ಲಿ ದೇಶದಲ್ಲಿ ಅಪಾರವಾದ ಸಂಪನ್ಮೂಲ ಕ್ರೋಡೀಕರಣವಾಗುತ್ತದಲ್ಲದೆ, ಸಾರ್ವಜನಿಕ ಸೇವೆ ಒದಗಿಸಲು ಸರ್ಕಾರಗಳು ಶಕ್ತವಾಗುತ್ತವೆ.

ಸಂಪತ್ ಕುಮಾರ್ ಎನ್., ಮ. ನಂ. ಇ. ೨-೧೦, ಕುಮುದ್ವತಿ ವಸತಿಗೃಹ, ಡಿ.ಎ.ಆರ್.
ವಸತಿಗೃಹಗಳ ಸಮುಚ್ಚಯ, ಸಾಗರ ರಸ್ತೆ, ಶಿವಮೊಗ್ಗ - ೫೭೭ ೨೦೧

* * *

ಇವತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡುವವರ ವಿರುದ್ಧವೇ ಭ್ರಷ್ಟಾಚಾರದ ಆರೋಪಗಳು ಕಾಡುತ್ತಿರುವ ಹಿನ್ನಲೆಯಲ್ಲಿ ಗಾಂಧೀಜಿಯವರಿಗೆ ಭ್ರಷ್ಟಾಚಾರ ಕಾಡಲಿಲ್ಲವೇ. ಗಾಂಧೀಜಿ ಸಹ ಪಕ್ಷ ಕಟ್ಟಿದವರು, ಸಂಘಟನೆ ಮಾಡಿದವರು, ಸಮಾಜಸೇವೆ ಮಾಡಿದವರು, ಅದಕ್ಕಾಗಿ ಹಣ ಸಂಗ್ರಹಿಸಿದವರು, ಖರ್ಚು ಮಾಡಿದವರು. ಅದರೂ ಅವರಿಗೆ ಭ್ರಷ್ಟಾಚಾರದ ಆರೋಪ ಬಂದಿಲ್ಲ. ಅಲ್ಲದೆ ಅವರ ಭಾಷಣಗಳಲ್ಲಾಗಲಿ, ಬರಹಗಳಲ್ಲಾಗಲಿ, ಎಲ್ಲೂ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿದ್ದು ಕಂಡುಬರುವುದಿಲ್ಲ. ಕಾರಣ ಸ್ಪಷ್ಟ. ಗಾಂಧೀಜಿ ವ್ಯವಹಾರ ಮತ್ತು ನೈತಿಕತೆ ಇವೆರಡನ್ನೂ ಒಂದೇ ದೃಷ್ಟಿಯಲ್ಲಿ ನೋಡಿದ್ದರು. ಎಲ್ಲಿಯವರೆಗೆ ನಾವೂ ವ್ಯವಹಾರದಲ್ಲಿ ನೈತಿಕತೆ ಕಾಣಲು ಸಾಧ್ಯವಿಲ್ಲವೋ, ಅಲ್ಲಿ ಭ್ರಷ್ಟಾಚಾರವಲ್ಲದೆ ಮತ್ತೇನು ಕಾಣಲು ಸಾಧ್ಯ !

ಭ್ರಷ್ಟಾಚಾರವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ, ಬಿಗಿಯಾದ ಕಟ್ಟುನಿಟ್ಟಿನ ಕಾನೂನುಗಳ ಅವಶ್ಯಕತೆ ಇದೆ. ಮುಖ್ಯವಾಗಿ ಪ್ರತಿಯೊಬ್ಬ ಪ್ರಜೆಗೆ ಆದಾಯ ಮಿತಿಯನ್ನು ಹೇರಬೇಕು. ಅದನ್ನು ಮೀರಿದಾಗ ಆ ಆದಾಯವನ್ನು ಸರಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಇದರಿಂದ ತಮ್ಮ ಮುಂದಿನ ಸಂತತಿಯವರೆಗೂ ಸಾಕಾಗುವಷ್ಟು ಆಸ್ತಿ ಸಂಪಾದಿಸಬೇಕೆಂಬ ಹಪಾಹಪಿತನ, ಅದಕ್ಕಾಗಿ ಭ್ರಷ್ಟಾಚಾರಕ್ಕೆ ತೊಡಗುವುದನ್ನು ನಿಲ್ಲಿಸಬಹುದು. ಭ್ರಷ್ಟಾಚಾರಿಗಳಿಗೆ ಸಾಮಾಜಿಕ ಮಾನ್ಯತೆ ಸಿಗದ ಹಾಗೆ ನೋಡಿಕೊಳ್ಳಬೇಕು. ಸಾಮಾಜಿಕ ಬಹಿಷ್ಕಾರದಂತಹ ಕಠಿಣ ನಿಲುವು ತೆಗೆದುಕೊಳ್ಳಬೇಕು. ಭ್ರಷ್ಟಾಚಾರಿಗಳಿಗೆ ಶಿಕ್ಷೆ ವಿಧಿಸುವಾಗ ಅವರು ಮಾಡಿದ ಅಕ್ರಮ ಆಸ್ತಿ ಗಳಿಕೆಯ ಐದು ಪಟ್ಟು ಜಾಸ್ತಿ ದಂಡ ವಸೂಲಿ ಮಾಡುವಂತಾಗಬೇಕು. ಅದರ ಜೊತೆಗೆ ಜೀವಾವಧಿ ಶಿಕ್ಷೆಯಂತಹ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಮನ ಮನೆಗಳಲ್ಲಿ ಭ್ರಷ್ಟತೆ ಸುಳಿಯದಂತೆ ನೋಡಿಕೊಳ್ಳಬೇಕು. ಹೇಳೋದು ವೇದಾಂತ ತಿನ್ನೋದು ಬದನೆಕಾಯಿ ಆಗಬಾರದು. ಆ ಕೆಲಸವೇನಿದ್ದರೂ ನಮ್ಮ ಜನಪ್ರತಿನಿಧಿಗಳೂ ಮಾಡುತ್ತಿದ್ದಾರೆ, ಮಾಡುತ್ತಿದ್ದರು. ಮುಂದೆಯೂ ಮಾಡುತ್ತಾರೆ. ಅವರಂತೆ ನಾವೂ ಆದರೆ, ನಮಗೂ ಅವರಿಗೂ ಏನು ವ್ಯತ್ಯಾಸ ಹೇಳಿ. ಮೊದಲು ನಾವು ಬದಲಾಗೋಣ. ನಂತರ ಭ್ರಷ್ಟರಹಿತ ಮನಸ್ಥಿತಿಯವರನ್ನು ಚುನಾಯಿಸಿ ಕಳುಹಿಸುವುದರ ಮೂಲಕ ವ್ಯವಸ್ಥೆಯನ್ನು ಸರಿಮಾಡಲು ಪ್ರಯತ್ನಿಸೋಣ.



ವಿನಾಯಕ ಎಲ್. ಪಟಗಾರ
ಬೆಟ್ಕುಳಿ ಅಂಚೆ, ಕುಮಟಾ ತಾಲೂಕು
ಉತ್ತರ ಕನ್ನಡ - ೫೮೧ ೩೩೩

OUR ADVERTISERS

A MESSAGE FROM



DR. THUPPIL VENKATESH
Professor Emeritus
St John's Medical College
Bengaluru.

Principal Advisor
Quality Council of India
New Delhi.

Phone: 09341242430
email: venkatesh.thuppil@gmail.com

Every Institution, whether public or private, especially so with Public Institutions , must structure itself to a quality standard. Quality standards are developed and prescribed by autonomous, empowered institutions such as Quality Council of India. Producing quality products and offering quality services are fundamental right of Consumers. Adherence to these standards enhances turn over to business and ultimately it is profitable to the community as a whole. Hence investment in achieving quality is an investment in development . For industries it makes sense to acquire quality certificates, as it increases their business and for exporters, the importers abroad demand it. The cost of setting up quality infrastructure should be built into the over all investment cost. It is cheaper to start with a quality infrastructure than going to do it under legal compulsion later.

Our Schools, Hospitals, Research and Testing Institutions, Panchayat and other grass root level Administrative Institutions, all institutions serving the public at large, industries dealing with products which are prone to cause environmental issues, such as Battery manufacturing, Paints etc all have been brought under quality concept and standards have been worked out and prescribed. As a person involved seriously in this field, I urge upon all concerned to work in a mission mode to achieve these prescribed standards in their activities. To begin with I urge all public schools, hospitals and Panchayats to come forward to get quality accreditation from concerned institutions. I offer to advise free and help them to proceed further in this regard.

working towards leadsafe society in India

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore - 560 058 and Published by him for Navakarnataka Publications (P) Ltd., Embassy Centre, Crescent Road, P. B. 5159, Bangalore - 560 001, Editor : Dr. G. Ramakrishna

HOSATHU Kannada Monthly / JANUARY 2012 / Rs. 35
RNI Regd. KARKAN / 1999 / 614. Karnataka Regd. KRNA/BGE/7/2012-14
Licenced to post without prepayment. WPP No.14.
Posted at MBC, Bangalore GPO-560001 on the 28th of every month. (No. of Pages 256)